# STUDIES
## IN THE
# SCRIPTURES
## ಸತ್ಯವೇದ ಗ್ರಂಥದಲ್ಲಿನ ಅಧ್ಯಯನಗಳು

ನೀತಿವಂತರ ಮಾರ್ಗವು ಹೊಳೆಯುವ ಬೆಳಕಿನಂತೆ
ಆ ಪರಿಪೂರ್ಣ ದಿನದವರೆಗೆ
ಹೆಚ್ಚು ಹೆಚ್ಚಾಗಿ ಪ್ರಜ್ವಲಿಸುತ್ತಾ ಬರುವುದು
"The Path of the Just is as the Shining Light,
Which Shineth More and More
Unto the Perfect Day"

**ಸಂಪುಟ 1** SERIES I

# ಯುಗಾಂತರಗಳ ದೈವೀಕ ಯೋಜನೆ
# The Divine Plan of the Ages
(Kannada)

"ಆದದರಿಂದ ದೇವರು ನಿಮ್ಮ ಪಾಪಗಳನ್ನು ಅಳಿಸಿಬಿಡುವ ಹಾಗೆ ನೀವು ಪಶ್ಚಾತ್ತಾಪಪಟ್ಟು
ಆತನ ಕಡೆಗೆ ತಿರುಗಿಕೊಳ್ಳಿರಿ. ತಿರುಗಿದರೆ ದೇವರ ಸನ್ನಿಧಾನದಿಂದ ವಿಶ್ರಾಂತಿಕಾಲಗಳು ಒದಗಿ
ಆತನು ನಿಮಗೆ ನೇಮಕವಾಗಿರುವ ಕ್ರಿಸ್ತನಾದ ಯೇಸುವನ್ನು ಕಳುಹಿಸಿಕೊಡುವನು.
ಆದರೆ ಸಮಸ್ತವನ್ನು ಸರಿಮಾಡುವ ಕಾಲ ಬರುವ ತನಕ ಪರಲೋಕವೇ ಆ ಕ್ರಿಸ್ತನ
ಸ್ಥಾನವಾಗಿರುಬೇಕು. ಆ ಕಾಲದ ವಿಷಯವಾಗಿ ದೇವರು ಪೂರ್ವದಲ್ಲಿದ್ದ
ತನ್ನ ಪರಿಶುದ್ಧ ಪ್ರವಾದಿಗಳ ಬಾಯಿಂದ ಹೇಳಿಸಿದ್ದಾನೆ" – ಅ.ಕೃ. 3:19–21

# ರಾಜಾಧಿರಾಜನಿಗೂ ಮತ್ತು ಕರ್ತರ ಕರ್ತನಿಗೂ

ಸ್ವೀಕೃತರಾಗಲು ಕಾಯುತ್ತಿರುವ
ಆತನ ಪ್ರತಿಷ್ಠಿತ ದೈವಪ್ರೇಷಿತರ ಹಿತಾಸಕ್ತಿಯಲ್ಲಿ

– ಹಾಗೂ –

ಪ್ರತಿಯೊಂದು ಸ್ಥಳದಲ್ಲಿ ಕರ್ತನ ಕರೆಯುವಿಕೆಯ ಮೇಲಿನ ಎಲ್ಲಾ
"ನಂಬಿಗಸ್ತ ಮನೆವಾರ್ತೆಯವರಿಗೂ"

– ಹಾಗೂ –

ದೇವ ಪುತ್ರರ ಆವಿಷ್ಕರಣಕ್ಕಾಗಿ ಕಾಯುತ್ತಿರುವವರಿಗೂ ಮತ್ತು
ನರಳಾಡುತ್ತಾ ಪ್ರಸವವೇದನೆ ಪಡುತ್ತಿರುವ ಜಗತ್ತಿಗೂ

**ಈ ಕಾರ್ಯವು ಸಮರ್ಪಿತವಾಗಿದೆ**

---

"ಅದನ್ನು ಕುರಿತು ನಾನು ಹಿಂದೆ ಸಂಕ್ಷೇಪವಾಗಿ ಬರೆದಿದ್ದೇನೆ; ಬರೆದಿದ್ದನ್ನು ನೀವು ಓದಿ ನೋಡಿದರೆ ಕ್ರಿಸ್ತನ ವಿಷಯವಾದ ಮರ್ಮವನ್ನು
ಕುರಿತು ನನಗಿರುವ ಗ್ರಹಿಕೆಯನ್ನು ನೀವು ತಿಳಿದುಕೊಳ್ಳಬಹುದು. ಆ ಮರ್ಮವು ಈ ಕಾಲದಲ್ಲಿ ದೇವರ ಪರಿಶುದ್ಧ ಅಪೋಸ್ತಲರಿಗೂ
ಪ್ರವಾದಿಗಳಿಗೂ ಪವಿತ್ರಾತ್ಮನಿಂದ ತಿಳಿಸಲ್ಪಟ್ಟಂತೆ ಬೇರೆ ಕಾಲಗಳಲ್ಲಿದ್ದ ಜನರಿಗೆ ತಿಳಿಸಲ್ಪಡಲಿಲ್ಲ... ದೇವರು ನಮ್ಮ ಕರ್ತನಾದ
ಯೇಸುವಿನಲ್ಲಿ ಅನಾದಿಕಾಲದಿಂದ ಮಾಡಿದ ಸಂಕಲ್ಪದ ಮೇರೆಗೆ ತನ್ನ ನಾನಾ ವಿಧವಾದ ಜ್ಞಾನವು ಪರಲೋಕದಲ್ಲಿ
ರಾಜತ್ವಗಳಿಗೂ ಅಧಿಕಾರಗಳಿಗೂ ಈಗ ಕ್ರೈಸ್ತ ಸಭೆಯ ಮೂಲಕ ಗೊತ್ತಾಗಬೇಕೆಂಬುದನ್ನು ಉದ್ದೇಶಿಸಿದ್ದನು"
"ಆತನು ರಹಸ್ಯವಾದ ತನ್ನ ಸಂಕಲ್ಪವನ್ನು ನಮಗೆ ತಿಳಿಯಪಡಿಸುವದರ ಮೂಲಕ ವಿಶೇಷವಾದ
ಜ್ಞಾನವನ್ನೂ ಬುದ್ಧಿಯನ್ನೂ ಕೊಟ್ಟು ಆ ಕೃಪೆಯನ್ನು ಇನ್ನೂ ಹೆಚ್ಚಾಗಿ ನಮಗೆ ತೋರಿಸಿದ್ದಾನೆ.
ತಾನು ಕಾಲವು ಪರಿಪೂರ್ಣವಾದಾಗ ನಿರ್ವಹಿಸಬೇಕಾದ ಒಂದು ಕೃಪೆಯುಳ್ಳ ಸಂಕಲ್ಪವನ್ನು
ಆತನು ಕ್ರಿಸ್ತನಲ್ಲಿ ಮೊಲೇ ನಿಷ್ಕರ್ಷೆ ಮಾಡಿಕೊಂಡಿದ್ದನು. ಅದೇನೆಂದರೆ
ಭೂಪರಲೋಕಗಳಲ್ಲಿರುವ ಸಮಸ್ತವನ್ನೂ ಕ್ರಿಸ್ತನಲ್ಲಿ ಒಂದಾಗಿ
ಕೂಡಿಸಬೇಕೆಂಬುದೇ.ಕ್ರಿಸ್ತನಲ್ಲಿಯೇ
ಸಮಸ್ತವು ಒಂದಾಗುವುದು"
ಎಫೆ. 3:4,5,9;1:8–10

---

1886ರಲ್ಲಿ ಪಾಸ್ಟರ್ ರಸ್ಸೆಲ್‌ರವರಿಂದ ರಚಿಲ್ಪಟ್ಟಿತು

# ಯುಗಯುಗಾಂತರಗಳ ದೈವೀಕ ಯೋಜನೆ
# The Divine Plan of the Ages

## ಲೇಖಕನ ಮುನ್ನುಡಿ
## THE AUTHOR'S FOREWARD

ಈ ಸಂಪುಟದ ಲೇಖಕ ಮತ್ತು ಪ್ರಕಾಶಕರು ಸಾರ್ವಜನಿಕವಾಗಿ ಒಪ್ಪಿಕೊಳ್ಳವದೇನೆಂದರೆ, ದೇವರ ಅನುಗ್ರಹವು ಈ ಸಂಪುಟದ ಪ್ರಸರಣೆಯೊಂದಿಗೆ ನಿಕಟವಾಗಿ ಸಂಪರ್ಕ ಹೊಂದಿದೆಯೆಂದು ಪರಿಗಣಿಸಿ, ಕೃತಜ್ಞತೆಯಿಂದ ಸ್ಮರಿಸಲು ಆಶಿಸುತ್ತಾರೆ– ಸತ್ಯಕ್ಕಾಗಿ ಹಸಿದ, ದಾಹಪಟ್ಟ, ದಿಗ್ಭ್ರಮೆಗೊಂಡಿರುವ ಅನೇಕ ಜೀವಿಗಳಿಗೆ ಬೆಳಕು, ಹರ್ಷ, ಶಾಂತಿ, ಮತ್ತು ದೇವರೊಡನೆ ಸಾಂಗತ್ಯ ಕೊಡುವ ಪರಿಣಾಮವನ್ನು ಬೀರಿದೆ. ಮೊದಲನೆಯ ಆವೃತಿಯು 1886ರಲ್ಲಿ ಈಗಿರುವ ಬಗೆಯಲ್ಲಿಯೆ ವಿತರಿಸಲಾಗಿದೆ. ಅಂದಿನಿಂದ, ಒಂದರ ನಂತರ ಮತ್ತೊಂದು ಆವೃತಿಗಳು 20 ವಿವಿಧ ಭಾಷೆಗಳಲ್ಲಿ ಕ್ಷಿಪ್ರ ಅನುಕ್ರಮದಲ್ಲಿ ಅನುಸರಿಸಿವೆ. ಇದುವರೆಗೂ ಸುಮಾರು 5 ಮಿಲಿಯನ್ ಪ್ರತಿಗಳು ಲೋಕಾದಾದ್ಯಂತ ಜನರ ಕೈಗೆ ತಲುಪಿವೆ.

ಈ ಪುಸ್ತಕವನ್ನು ಎಲ್ಲರೂ ಓದಿದ್ದಾರೆಂದು ನಾವು ನಿರೀಕ್ಷಿಸಲು ಸಾಧ್ಯವಿಲ್ಲ; ಆದರೆ ಎಲ್ಲೆಡೆಯಲ್ಲಿರುವ ಜನಗಳ ಹೃದಯ ಮತ್ತು ಮನಸ್ಸಿನ ಮೇಲೆ ಶಕ್ತಿಯುತ ಕಾರ್ಯವೆಸಗುತ್ತಿದೆಯೆಂದು ತಿಳಿಸುವ ಪತ್ರಗಳು ನಿರಂತರವಾಗಿ ನಮ್ಮ ಕೈ ಸೇರುತ್ತಿವೆ. ಸಾವಿರಾರು ಮಂದಿ – ಸತ್ಯವೇದವು ಮನುಕುಲಕ್ಕೆ ದೈವಿಕ ಪ್ರಕಟನೆ ಎಂದು ಸಂಪೂರ್ಣವಾಗಿ ನಂಬದವರೂ ಸಹ ಇದರಿಂದ ತಾವು ಪ್ರಭಾವಿತರಾಗಿದ್ದೇವೆಂದು ನಮಗೆ ಬರೆಯುತ್ತಾರೆ. ಬೇರೆ ಕೆಲವರು ತಾವು ದೇವರನ್ನು ನಂಬದವರಾಗಿದ್ದರು ಅಥವಾ ಆ ರೀತಿಯಲ್ಲಿದ್ದರೂ, ಏಕೆಂದರೆ ಮುಂಚೆ ನಿಜವಾದ ದೇವರ ಬಗ್ಗೆ ಮತ್ತು ಆತನ ಯುಗಗಳ ಯೋಜನೆಯ ಬಗ್ಗೆ ತಿಳಿಯದಿರುವದರಿಂದ, ಸಾಮಾನ್ಯವಾಗಿ ಪಂಥ–ಪಂಗಡಗಳ ಪ್ರಭಾವದಿಂದಾಗಿ, ಅವರು ಮುಂದೆ ಇದರ ಗುಣಗಳನ್ನು ಅಂಗೀಕರಿಸಲು, ಮೆಚ್ಚಿಕೊಳ್ಳಲು ಅಥವಾ ಆರಾದಿಸಲು ಸಾಧ್ಯವಿರಲಿಲ್ಲ.

ಈ ಸಂಪುಟದ ಮೊದಲ ಪ್ರಕಾಶನದ ಐದು ವರ್ಷಗಳ ನಂತರ, ಗಣನೀಯವಾಗಿ, ನಾವು ಅದೇ ವಿಷಯವನ್ನು ಬೇರೆ ಹೆಸರಿನಲ್ಲಿ ಮುದ್ರಿಸಿ ವಿಭಿನ್ನವಾಗಿ ಪ್ರಸ್ತುತಿಪಡಿಸಿದ್ದೇವೆ. ಆ ಪುಸ್ತಕವನ್ನು "ಆಲೋಚನಾಪರ ಕ್ರೈಸ್ತರಿಗೆ ಆಹಾರ" (Food for Thinking Christians) ಎಂಬುದು ಅದರ ಶಿರೋನಾಮೆಯಾಗಿತ್ತು. ಅದರ ಶೈಲಿಯು ವಿಭಿನ್ನವಾಗಿದ್ದು, ಅದರಲ್ಲಿ ಮೊದಲನೆಯದಾಗಿ ತಪ್ಪು ಬೋಧನೆಗಳನ್ನು ಹೊಡೆದುಹಾಕುವದು – ಅದನ್ನು ನೆಲಸಮ ಮಾಡುವದು. ನಂತರ, ಅದರ ಸ್ಥಳದಲ್ಲಿ, ಸತ್ಯದ ಚೌಕಟ್ಟನ್ನು ನೇಯ್ದು ನೆಟ್ಟಗೆ ನಿಲ್ಲಿಸುವದಾಗಿತ್ತು. ನಾವು ಕಡೆಗೆ ಇದು ಉತ್ತಮವಾದ ದಾರಿಯಲ್ಲ ಎಂದು ಕಲಿತೆವು – ಏಕೆಂದರೆ ಕೆಲವರು ತಮ್ಮ ತಪ್ಪು ಬೋಧನೆಗಳು ಬಿದ್ದುಹೋಗುತ್ತಿರುವದನ್ನು ಕಂಡು ತಳಮಳಗೊಂಡರು, ತಪ್ಪುಗಳನ್ನು ನೆಲಸಮ ಮಾಡುತ್ತಿರುವ ಈ ಸತ್ಯದ ಸುಂದರ ಕಟ್ಟಡದ ಮಿನುಗು ನೋಟವನ್ನು ಕಾಣುವದರಿಂದ ದೂರವಾಗಿ ಅದನ್ನು ವಿಚಾರಿಸುವದರಲ್ಲಿ ವಿಫಲರಾಗಿಹೋದರು.

ಪ್ರಸ್ತುತದ ಸಂಪುಟವನ್ನು ವ್ಯತಿರಿಕ್ತವಾದ ದೃಷ್ಟಿಕೋನದಿಂದ ಬರೆಯಲಾಯಿತು. ಅದು ಸತ್ಯವನ್ನು ಪ್ರಸ್ತುತಿಪಡಿಸುತ್ತದೆ, ಅದರ ಬಲವನ್ನು ಮತ್ತು ಸೌಂದರ್ಯವನ್ನು ತೋರುತ್ತದೆ, ನಂತರ ತಪ್ಪುಗಳನ್ನು ತೆಗೆದುಹಾಕಲು ಸಲಹೆ ನೀಡುತ್ತದೆ. ತಪ್ಪುಗಳು ಅನಾವಶ್ಯವೆಂದು ಹೇಳುವದಲ್ಲದೇ, ಅದು ಸಂಪೂರ್ಣವಾಗಿ ಪ್ರಯೋಜನವಿಲ್ಲದ್ದು ಮತ್ತು ಬಹಳ ಹಾನಿಕರವೆಂದು ತಿಳಿಸುತ್ತದೆ. ಹಾಗಾಗಿ, ಯುಗಗಳ ದೈವಿಕ ಯೋಜನೆಯ ಓದುಗನು ಪ್ರತಿ ಹೆಜ್ಜೆಯಲ್ಲಿಯೂ, ನಂಬಿಕೆಯನ್ನು ಬಲಗೊಳಿಸುವದನ್ನು ಮತ್ತು ಕರ್ತನೊಡನೆ ಹೆಚ್ಚಿನ ಸಾಮೀಪ್ಯವನ್ನು ಕಂಡುಕೊಳ್ಳುತ್ತಾನೆ, ಹಾಗಾಗಿ, ತಾನು ಸರಿಯಾದ ಮಾರ್ಗದಲ್ಲಿದ್ದೇನೆಂಬ ಭರವಸೆಯುಂಟಾಗುತ್ತದೆ. ಸತ್ಯವನ್ನು ಕಂಡ ಮೇಲೆ, ತಪ್ಪುಗಳು ಹೆಚ್ಚುಹೆಚ್ಚಾಗಿ ಅಸಂಬದ್ಧವಾದವು ಬೆಲೆಯಿಲ್ಲದವುಗಳು, ಹಾನಿಕಾರಕವಾದವುಗಳು ಎಂದು ತಿಳಿದು ಸಂತೋಷದಿಂದ ಅವನ್ನು ತೊರೆದುಬಿಡುವರು.

ಮಹಾ ವಿರೋಧಿಯು, ಖಂಡಿತವಾಗಿ, ದೇವರ ಮಕ್ಕಳ ಕಣ್ಣು ತೆರೆಯುವ, ದೇವರ ಪುಸ್ತಕವು ಭಕ್ತಿಯನ್ನು ಹೆಚ್ಚಿಸುವದನ್ನು, ಮತ್ತು ಮನುಷ್ಯರ ಸಿದ್ಧಾಂತಗಳ ಮೇಲೆ ಅವಲಂಬಿಸುವದನ್ನು ಮುರಿಯುವ ಯಾವುದನ್ನೂ,

ಪ್ರೀತಿಸಲಾರ. ಆದ್ದರಿಂದ, ಮಹಾ ವಿರೋಧಿಯು, ನಾವು ನಿರೀಕ್ಷಿಸಿದಂತೆ, ಈ ಸಂಪುಟವನ್ನು ವಿರೋಧಿಸುವವನಾಗಿದ್ದಾನೆ. ಕೆಲವರು ಮಾತ್ರ ಸೈತಾನನ ಶಕ್ತಿಯನ್ನು ಕುತಂತ್ರವನ್ನು ಬಲ್ಲವರಾಗಿದ್ದಾರೆ; ಕೆಲವರು ಮಾತ್ರ ಅಪೋಸ್ತಲನ ವಾಕ್ಯಗಳಾದ 'ಅಂಧಕಾರದ ಅಧಿಪತಿ ತನ್ನನ್ನು ಬೆಳಕಿನ ದೂತನಂತೆ ಬದಲಿಸಿಕೊಂಡು ಸತ್ಯದೊಡನೆ ಹೋರಾಡಿ ಅದರ ಪ್ರಭಾವವನ್ನು ನಾಶಪಡಿಸುವನು' ಎಂದು ತಿಳಿದಿದ್ದಾರೆ. ಆದರೆ ಕೆಲವರನ್ನು ಮಾತ್ರ ಕೆಡುಕನಾದ ವಿರೋಧಿಯು ಉತ್ತಮರೂ, ಅತ್ಯಂತ ಬಲಶಾಲಿಗಳೂ ಮತ್ತು ದೇವರ ಮಕ್ಕಳಲ್ಲಿ ಇರುವ ಹೆಚ್ಚು ಪ್ರಭಾವಶಾಲಿಗಳನ್ನು ಉಪಯೋಗಿಸಿಕೊಂಡು ಬೆಳಕನ್ನು ತಡೆಯುವಂತೆ ಮಾಡಿ ಮತ್ತು ಯುಗಗಳ ಮಹೋನ್ನತ ಯೋಜನೆಯು ಜನರಿಂದ ದೂರವಿರುವಂತೆ ಪ್ರಯತ್ನಿಸುತ್ತಾನೆ.

ಸಿದ್ಧಾಂತಗಳ ನಿರ್ಮಾಣವು ಕ್ರಿ.ಶ.325ರಲ್ಲಿ ಪ್ರಾರಂಭವಾಯಿತೆಂದು , 1260 ವರ್ಷಗಳ ತನಕ ಸತ್ಯವೇದ ಅಭ್ಯಾಸವು ಕಾರ್ಯತಃ ಇರಲಿಲ್ಲ ಎಂಬದನ್ನು ಕೆಲವರು ಮಾತ್ರವೇ ತಿಳಿದಿದ್ದಾರೆ. ಹಲವರು ಮಾತ್ರ ಆ ಕಾಲಗಳಲ್ಲಿ ಸಿದ್ಧಾಂತಗಳನ್ನು ಮಿಲಿಯಾಂತರದ ಜನರ ಮನಸ್ಸುಗಳಲ್ಲಿ ಮೊಳೆಹೊಡೆದು ಭದ್ರಪಡಿಸಲಾಯಿತು ಎಂದು ಕಂಡುಕೊಳ್ಳುತ್ತಾರೆ. ಅವರನ್ನು ಭಯಂಕರ ತಪ್ಪುಗಳ ಸಂಕೋಲೆಯಲ್ಲಿ ಬಂದಿಸಿ ಮತ್ತು ದೇವರ ಸದ್ಗುಣಗಳಾದ ಜ್ಞಾನ, ನ್ಯಾಯ, ಪ್ರೀತಿ ಮತ್ತು ಶಕ್ತಿಯ ಬಗ್ಗೆ ಕುರುಡಾಗಿಸಿದರು ಎಂದು ತಿಳಿದಿದ್ದಾರೆ. ಸುಧಾರಣಾ ಕಾಲದಿಂದ – ಸತ್ಯವೇದವು ಜನರ ಕೈಗಳಿಗೆ ಹಿಂತಿರುಗಲು ಶುರುವಾದ ನಂತರ – ಸದಭಿಪ್ರಾಯದವರಾದ ಮರುಳುಗೊಂಡ ಸುಧಾರಕರೂ ಹಿಂದಿನ ತಪ್ಪುಗಳಿಂದ ಕುರುಡಾಗಿದ್ದಾರೆ ಮತ್ತು ಅಡಚಣೆಗೊಂಡಿದ್ದಾರೆ, ಹಾಗಾಗಿ, ಜನರನ್ನು ಕತ್ತಲಿನಲ್ಲಿಟ್ಟಿದ್ದಾರೆ ಎಂದು ಹಲವಾರು ಜನ ಮಾತ್ರ ತಿಳಿದಿದ್ದಾರೆ. ಸತ್ಯವೇದ ಅಧ್ಯಯನವು, ಅಪೋಸ್ತಲರ ಕಾಲದ ಆದಿ–ಸಭೆಯಲ್ಲಿದ್ದಂತೆ ಅಭ್ಯಾಸಿಸುವದು ಸತ್ಯವೇದ ವಿದ್ಯಾರ್ಥಿಗಳಿಂದ ಮತ್ತೆ ಪ್ರಾರಂಭವಾಗಿದೆ ಎಂದು ಕೆಲವರು ತಿಳಿದಿದ್ದಾರೆ.

ಈ ಸಂಪುಟದ ಮೊಟ್ಟಮೊದಲ ಆವೃತಿಯು, "ಸಹಸ್ರವರ್ಷಕಾಲದ ಉದಯ" "Millennial Dawn" ಎಂಬ ಶಿರೋನಾಮೆಯನ್ನು ಉಪಯೋಗಿಸಲಾಗಿತ್ತು; ಆದರೆ ಅದನ್ನು ಒಂದು ಕಾದಂಬರಿ ಎಂದು ಯೋಚಿಸಿ ಕೆಲವರು ವಂಚನೆಗೊಳಗಾದರು ಎಂದು ಕಂಡುಕೊಂಡೆವು. ಈ ಕಾರಣ ಯಾರೂ ಅಂತಹ ಯೋಚನೆಯಿಂದ ಈ ಸಂಪುಟವನ್ನು ಖರೀದಿಸದಿರಲಿ ಎಂದು ನಾವು ನಂತರ ಪ್ರಸ್ತುತವಿರುವ ಶ್ರೇಣಿಯ ಶಿರೋನಾಮೆಯನ್ನು 'ಸತ್ಯವೇದದ ಅಧ್ಯಯನಗಳು' "Studies in the Scriptures" ಎಂಬುದಾಗಿ ಅಳವಡಿಸಿಕೊಂಡೆವು ಇದನ್ನು ಯಾರೂ ಅಪಾರ್ಥಮಾಡಿಕೊಳ್ಳಲಾರರು.

ಪುಸ್ತಕದಂಗಡಿಗಳಲ್ಲಿ ಈ ಪುಸ್ತಕಗಳು ಏಕೆ ಕಾಣಬರುವದಿಲ್ಲ ಎಂಬ ಪ್ರಶ್ನೆಗಳು ಹಲವರಿಂದ ನಮಗೆ ಬಂದಿವೆ. ನಮ್ಮ ಉತ್ತರವೆಂದರೆ, ಪುಸ್ತಕ ಪ್ರಕಾಶಕರು ಈ ಪುಸ್ತಕಗಳನ್ನು ಹೊಂದಲು ಸಂತೋಷವುಳ್ಳವರಾದರೂ, ಕೆಲವು ಧಾರ್ಮಿಕ ಉತ್ಸಾಹಿಗಳು ಇದರ ಮಾರಾಟವನ್ನು ಅನುಮತಿಸುವದಿಲ್ಲ – ಭಹಿಷ್ಕಾರದ ಬೆದರಿಕೆಯನ್ನು ಒಡ್ಡುತ್ತಾರೆ. ಮೊದಲು ಇದು ದೊಡ್ಡ ದುರಂತದಂತೆ ಕಂಡುಬಂದಿತು– ವಿರೋಧಿಯ ಶಕ್ತಿಯು ಸತ್ಯದ ಪ್ರಸರಣಕ್ಕೆ ಅಡ್ಡಿಯಾಗಲು ಅನುಮತಿಸಲ್ಪಟ್ಟಿದ್ದಾನೆಯೋ ಎಂಬಂತಿತ್ತು. ಆದರೆ ದೇವರು ತನ್ನ ಕೃಪೆಯಿಂದ ಈ ವಿಷಯವನ್ನು ತಳ್ಳಿಹಾಕಿದನು, ಪರಂತು, ಈ ಸಂಪುಟವು ಬಹುಶಃ ಬೇರೆ ಯಾವುದೇ ಪುಸ್ತಕಕ್ಕಿಂತ ಅತ್ಯಂತ ಬೃಹತ್ತಾಗಿ ಸ್ಥಿರವಾಗಿ ಚಲಾವಣೆಯಲ್ಲಿರುವದಾಗಿದೆ. ಪೂರ್ವಾಗ್ರಹದಿಂದ, ಈ ಪುಸ್ತಕವನ್ನು ಓದಲು ನಿರಾಕರಿಸಿದವರು ಮತ್ತು ಅದರ ವಿರುದ್ಧವಾಗಿ ಹೋರಾಡಿದವರು, ಹಾಗೆ ಮಾಡಲು ಕಾರಣವೆಂದರೆ ಅವರು ಸುಳ್ಳುಗಾರಿಕೆಯನ್ನು, ಮಿಥ್ಯಾರೂಪಣೆಯನ್ನು ನಂಬಿದವರಾಗಿದ್ದರು.

ಇದನ್ನು ಎಂದಿಗೂ ಓದದವರು, ಆದರೆ ಮಿಥ್ಯಾರೂಪಣೆಗೆ ಒಳಗಾದವರು, ಇವುಗಳಲ್ಲಿ ಅನೇಕ ಪುಸ್ತಕಗಳನ್ನು ಬೆಂಕಿಯಲ್ಲಿ ಸುಟ್ಟಿದ್ದಾರೆ. ಕತ್ತಲಿನ ಯುಗದಲ್ಲಿದ್ದಂತೆ, ಯೇಸುವಿನ ಅನುಯಾಯಿಗಳು, ಚಿತ್ರಹಿಂಸೆಯನ್ನು ಅನುಭವಿಸಿ ಹುತಾತ್ಮರಾದರು ಅದರಂತೆಯೇ ಇದೆ. ಹೌದು, ಯೇಸುವು ಸಹ ಆತನನ್ನು ಮತ್ತು ಆತನ ಬೋಧನೆಗಳನ್ನು ಅರ್ಥಮಾಡಿಕೊಳ್ಳದವರಿಂದ ಹಿಂಸೆಯನ್ನುಭವಿಸಿದನು. ಸಂತ ಪೇತ್ರನು ಆಗ್ರಹಪೂರ್ವಕವಾಗಿ ಸ್ಪಷ್ಟಪಡಿಸುತ್ತಾನೆ: "ಸಹೋದರರೆ, ಅದಿರಲಿ, ನೀವು ಈ ಕಾರ್ಯವನ್ನು ತಿಳಿಯದೆ ಮಾಡಿದಿರೆಂದು ಬಲ್ಲೆನು; ನಿಮ್ಮ ಅಧಿಕಾರಿಗಳೂ ತಿಳಿಯದೆ ಮಾಡಿದರು" (ಅ.ಕೃ 3:17) "ಅರಿತಿದ್ದರೆ ಅವರು ಮಹಿಮೆಯುಳ್ಳ ಕರ್ತನನ್ನು ಶಿಲುಬೆಗೆ ಹಾಕಿಸುತ್ತಿರಲಿಲ್ಲ" 1 ಕೊರಿಂಥ 2:8.

ಈ ಪುಸ್ತಕದ ಶತ್ರುಗಳು ಕಟುನಿಷ್ಠೂರರು, ಅನ್ಯಾಯಗಾರೂ, ಅಪ್ರಾಮಾಣಿಕರೂ ಆಗಿದ್ದರೆ, ಅದರ ಸ್ನೇಹಿತರು ಅದೇ ಪ್ರಮಾಣದಲ್ಲಿ ವಿಶ್ವಾಸಪೂರ್ವರು, ಉತ್ಸಾಹಿಗಳು ಆಗಿದ್ದಾರೆ. ಜನರ ಕೈ ಸೇರಿರುವ ಹತ್ತಾರು ಲಕ್ಷಾಂತರ ಪ್ರತಿಗಳು ಈ ಪುಸ್ತಕದ ಮಿತ್ರರಿಂದಲೇ ಸಾಗಿ ಹೋಗಿವೆ. ಅವರು ಸತ್ಯದ ಮೇಲೆ ಪ್ರೀತಿ ಇರುವ ಪ್ರಯುಕ್ತ, ತಮ್ಮ ಸಮಯವನ್ನು ಚೈತನ್ಯವನ್ನು ಇದರ ಪ್ರಸರಣಕ್ಕೆ ಇತ್ತಿದ್ದಾರೆ. ನಾವು ಈ ಸಾಲುಗಳನ್ನು ಬರೆಯುವಾಗ, ಜೀವನದ ಅನೇಕ ಹಾದಿಗಳಲ್ಲಿರುವ ಸುಮಾರು 600 ಕ್ರೈಸ್ತ ಜನರು ಭೂಮಿಯ ವ್ಯವಹಾರಗಳನ್ನು, ಅದರ ಕರೆ ಮತ್ತು ಆಕಾಂಕ್ಷೆಗಳನ್ನು "ಎಲ್ಲವನ್ನೂ ಬಿಟ್ಟು" ಕರ್ತನನ್ನು ಮಹಿಮೆಪಡಿಸಲು ಮತ್ತು ಆತನ ಹಸಿದ ಭಕ್ತರಿಗೆ ಈ ಚಿಕ್ಕ ಸಂಪುಟವನ್ನು ಅವರ ಕೈಗಳಲ್ಲಿಡಲು ಶ್ರಮಿಸುತ್ತಿದ್ದಾರೆ ಎಂಬ ವಾಸ್ತವಾಂಶವನ್ನು ಅರಿತಿದ್ದೇವೆ. ಇದರಲ್ಲಿ ಅನೇಕ ಡಾಕ್ಟರ್, ಶಾಲಾಶಿಕ್ಷಕರು, ನರ್ಸ್‌ಗಳು, ಧರ್ಮದ ಸೇವಕರು, ಕ್ಷೌರಿಕರು, ಮೆಕ್ಯಾನಿಕರು – ಜೀವನದ ಎಲ್ಲಾ ಹಾದಿಗಳಲ್ಲಿರುವವರೆಲ್ಲರೂ, ತಾವೇ ದೇವರ ಪ್ರೀತಿಯಿಂದ ಹೃದಯಮಿಡಿದವರಾಗಿ, ಆಶೀರ್ವಾದವನ್ನು ಇತರರ ಹೃದಯ ಮತ್ತು ತಲೆಗಳಿಗೆ ವರ್ಗಾಯಿಸಲು ತವಕವುಳ್ಳವರಾಗಿದ್ದಾರೆ.

ಈ ಪುಸ್ತಕವನ್ನು ಅಲ್ಪ ಬೆಲೆಯಲ್ಲಿ ಮಾರಲಾಗುವದು, ಈ ಮಾರಾಟಗಾರರು ಸಾರ್ವಜನಿಕರಲ್ಲಿಗೆ ಹೊತ್ತೊಯ್ಯುವಾಗ ತಮ್ಮ ಸ್ವಂತ ಖರ್ಚುಗಳನ್ನು ಸಹ ಹೊಂದಿಸಲಾರರು. ಹಾಗಿದ್ದರೂ, ಅವರು ಹರ್ಷಿಸುವವರಾಗಿದ್ದಾರೆ, ಇನ್ನೂ ಹೆಚ್ಚಾಗಿ ಕೆಲವು ಸಾರಿ ಬಡತನದಲ್ಲಿದ್ದರೂ ಅನಾನುಕೂಲತೆಯುಂಟಾದರೂ ಮತ್ತು ಅಭಾವವುಂಟಾದರೂ ಕರ್ತನಿಗಾಗಿ, ಸತ್ಯ ಮತ್ತು ಸಹೋದರರಿಗಾಗಿ ಅರ್ಹರೆಂದು ಪರಿಗಣಿಸಲಾಗುವದು. ಸತ್ಕಾರ್ಯವು ಮುಂದುವರೆಯುವದು, ಕ್ರಿಸ್ತನಲ್ಲಿ ಜೀವ ಎಂಬ ಸಂದೇಶವು ಕೈಯಿಂದ ಕೈಗೆ ವರ್ಗವಾಗುವದು. ಈ ಸಂಪುಟದ ಉತ್ಪಾದನೆಯು ಅಗಾಧವಾಗಿದೆ. ಮುಂದಿನ ದಿನಗಳಲ್ಲಿ ಅದರ ಆಶೀರ್ವಾದವು ಹಿಂದಿನದವುಗಳಂತೆ ಸೂಕ್ತ ಪ್ರಮಾಣದಲ್ಲಿ ಹೆಚ್ಚುತ್ತಾ ಹೋಗಲಿ. ಲೇಖಕನು ಮತ್ತು ಪ್ರಕಾಶಕರು ಇದಕ್ಕಿಂತಲೂ ಹೆಚ್ಚಿನದೇನನ್ನು ಕೇಳಲಾರರು.

ಓದುಗರೆಲ್ಲರಿಗೂ ಶುಭಾಶಯಗಳು

ಕರ್ತನಲ್ಲಿ ನಿಮ್ಮ ಸಹೋದರ
ಚಾರ್ಲ್ಸ್ ಟಿ. ರಸಲ್
CHARLES T. RUSSEL

ಬ್ರೂಕ್ಲಿನ್, ನ್ಯೂಯಾರ್ಕ್, ಅಕ್ಟೋಬರ್ 1, 1916
Brooklyn, N.Y., October 1, 1916

## ಕೃತಜ್ಞತೆಗಳು

ಸತ್ಯವೇದದಲ್ಲಿರುವ ಪ್ರವಾದನೆ ಮತ್ತು ಸತ್ಯಾಂಶಗಳನ್ನು ಅನೇಕ ವಿಮರ್ಶೆ ಮತ್ತು ವ್ಯಾಖ್ಯಾನಗಳೊಂದಿಗೆ ಭಾಷಾಂತರಿಸಲು ಪ್ರೇರೇಪಣೆಯನ್ನು ದಯಪಾಲಿಸಿದ ಮಹೋನ್ನತವಾದ ಯೆಹೋವ ದೇವರಿಗೂ ಮತ್ತು ನಮ್ಮೆಲ್ಲರ ಕರ್ತನೂ, ರಕ್ಷಕನೂ ಆದ ಯೇಸು ಕ್ರಿಸ್ತನಿಗೂ ಕೃತಜ್ಞತಾ ಸ್ತೋತ್ರಗಳು.

ಈ ಪುಸ್ತಕವು ಮೂಲತಃ ಆಂಗ್ಲ ಭಾಷೆಯಲ್ಲಿ ಬರೆಯಲ್ಪಟ್ಟಿದ್ದು, ಸಹೋದರರಾದ ಪಾಸ್ಟರ್: ಚಾರ್ಲ್ಸ್ ಟಿ. ರಸಲ್‌ರವರು (Pastor Charles T. Russel) ಸತ್ಯವೇದ ಆಧಾರಿತ, ಪವಿತ್ರಾತ್ಮಪ್ರೇರಿತರಾಗಿ ಬರೆಯಲ್ಪಟ್ಟಿರುವ ಗ್ರಂಥಶ್ರೇಣಿಯ ಆರು ಸಂಪುಟಗಳಲ್ಲೊಂದಾದ "**ಯುಗಾಂತರಗಳ ದೈವೀಕ ಯೋಜನೆ**" ಎಂಬ ಒಂದನೇ ಸಂಪುಟದಿಂದ ಭಾಷಾಂತರಿಸಲಾಗಿದೆ. ಇದನ್ನು ಕನ್ನಡಕ್ಕೆ ಭಾಷಾಂತರಿಸಿದ ಸಹೋದರರಾದ ಅಸ್ವಾಲ್ಡ್ ಎಗ್ಬರ್ಟ್ ಅಮಣ್ಣನವರಿಗೆ ಸತ್ಯವೇದ ವಿದ್ಯಾರ್ಥಿಗಳ ಪರವಾಗಿ ಹೃದಯಪೂರ್ವಕ ಕೃತಜ್ಞತೆಗಳು. ಈ ಭಾಷಾಂತರವು ಕನ್ನಡವನ್ನು ಬಲ್ಲ ಎಲ್ಲಾ ಸಹೋದರ ಸಹೋದರಿಯರಿಗೆ ಒಂದು ವಿಶೇಷವಾದ ಕೊಡುಗೆಯಾಗಿದೆ. ದೇವರ ನಾಮಕ್ಕೆ ಅನಂತ ಅನಂತ ಸ್ತೋತ್ರವಾಗಲಿ.

ಕಡೆಯದಾಗಿ ಇದರ ಮುದ್ರಣಕ್ಕೆ ಮುಂಚೆ ಈ ಭಾಷಾಂತರವನ್ನು ಪರಿಷ್ಕರಿಸಿದ ಹಿರಿಯ ಸಹೋದರರಿಗೂ, ಇದಕ್ಕಾಗಿ ಸಹಕರಿಸಿದ ಅನೇಕ ಸಹೋದರ-ಸಹೋದರಿಯರಿಗೂ ಮತ್ತು ಈ ಪುಸ್ತಕವನ್ನು ತಮ್ಮ ಕೆಲಸವೆಂದೇ ಪರಿಗಣಿಸಿ, ಶ್ರಮಿಸಿ ಅಂದವಾಗಿ ಮುದ್ರಿಸಿಕೊಟ್ಟ ಡಾನ್ ಪ್ರಿಂಟಿಂಗ್ ಸರ್ವೀಸ್‌ರವರಿಗೂ (Dawn Printing Service) ನಮ್ಮ ಹೃದಯಪೂರ್ವಕ ವಂದನೆಗಳು.

ಸರ್ವಶಕ್ತನಾದ ಯೆಹೋವ ದೇವರ ಆಶೀರ್ವಾದ
ಮತ್ತು
ನಮ್ಮ ರಕ್ಷಕನಾದ ಯೇಸುಕ್ರಿಸ್ತನ ಕೃಪೆಯು ಈ ಪುಸ್ತಕವನ್ನು ಓದುವವರೆಲ್ಲಗೊಂದಿಗಿದ್ದು ಆ ದೈವಜ್ಞಾನವನ್ನು ಪಡೆದು ಆತ್ಮೀಕ ಅಭಿವೃದ್ಧಿ ಹೊಂದಿಕೊಳ್ಳಲಿ ಎಂದು ಹಾರೈಸುತ್ತೇವೆ.

## ಅಧ್ಯಯನ – 1

## ಭೂಲೋಕದ ಪಾಪಮಯ ರಾತ್ರಿಯು ಸಂತೋಷದ ಮುಂಜಾನೆಯಾಗಿ ಕೊನೆಗಾಣುವುದು

### "Earth's Night of Sin to Terminate in a Morning of Joy"

ಸಂಜೆಗಳ ದುಃಖ ಮತ್ತು ಹರ್ಷದ ಮುಂಜಾನೆ – ಸತ್ಯವನ್ನು ಅನ್ವೇಷಿಸುವ ಎರಡು ವಿಧಾನಗಳು – ಈ ವಿಷಯದಲ್ಲಿ ಪಾಲಿಸುವ ವಿಧಾನ – ಕಾರ್ಯದ ವ್ಯಾಪ್ತಿ – ಪರಿಶುದ್ಧ ಗ್ರಂಥಗಳ ಗೌರವಾನ್ವಿತ ಅಧ್ಯಯನ ಮತ್ತು ಊಹಾಪೋಹಗಳ ಅಪಾಯಕಾರಿ ಅಭ್ಯಾಸದ ನಡುವಣ ವ್ಯತ್ಯಾಸ – ಪ್ರವಾದನೆಯ ಉದ್ದೇಶ – ಎರಡು ದೃಷ್ಟಿಕೋನಗಳಿಂದ ನೋಡಬಹುದಾದ ಈ ಲೋಕದ ಪ್ರಸ್ತುತ ಧಾರ್ಮಿಕ ಪರಿಸ್ಥಿತಿ – ಐಗುಪ್ತದ ಅಂಧಕಾರ – ವಾಗ್ದಾನದ ನಮನ – ನ್ಯಾಯವಂತರ ಅಭಿವೃದ್ಧಿಯ ಪಥ – ಮಹಾ ಧರ್ಮಭ್ರಷ್ಟತೆಯ ಕಾರಣ – ಸುಧಾರಣೆ – ಅದೇ ಕಾರಣವು ಪುನಃ ನಿಜವಾದ ಪ್ರಗತಿಗೆ ಅಡಚಣೆಯನ್ನುಂಟು ಮಾಡುತ್ತದೆ – ಜ್ಞಾನದ ಪರಿಪೂರ್ಣತೆಯು ಗತ ಕಾಲದ ಸಂಗತಿಯಲ್ಲ, ಭವಿಷ್ಯದಲ್ಲಿನ ಸಂಗತಿಯಾಗಿದೆ. . . . . . . . . 1

## ಅಧ್ಯಯನ – 2

## ಸರ್ವೋಚ್ಛ ಜ್ಞಾನಿಯಾದ ಸೃಷ್ಟಿಕರ್ತನ ಅಸ್ತಿತ್ವವು ಸ್ಥಾಪಿಸಲ್ಪಟ್ಟಿತು

### "The Existence of Supreme Intelligent Creator Established"

ಸತ್ಯವೇದ ಹೊರತಾದ ಸಾಕ್ಷ್ಯವು – ವಿವೇಚನೆಯ ಬೆಳಕಿನಲ್ಲಿ ಪರೀಕ್ಷೆ ಮಾಡಲಾಗಿದೆ – ಅಸಮಂಜಸವಾದ ವಿಚಾರ ಸರಣಿ – ಸಮಂಜಸವಾದ ವಿಚಾರ ಸರಣಿ – ದೇವರ ಗುಣಲಕ್ಷಣಗಳು ಪ್ರಕಟಿಸಲ್ಪಟ್ಟವು – ಸಮಂಜಸವಾದ ವ್ಯವಕಲನಗಳು ಕಳೆಯುವಿಕೆಗಳು . . . . . . . . . . . . . . . . . . 15

## ಅಧ್ಯಯನ – 3

## ಸತ್ಯವೇದವು ಒಂದು ದೈವಿಕ ಪ್ರಕಟನೆಯಾಗಿ ವಿವೇಚನೆಯ ಬೆಳಕಿನಲ್ಲಿ ದೃಷ್ಟಿಸಲಾಗಿದೆ

### The Bible as a Divine Revealation Viewed in the Light of Reason

ಸತ್ಯವೇದದ ಹಕ್ಕೇಳಿಕೆಗಳು ಮತ್ತು ಅದರ ವಿಶ್ವಾಸಾರ್ಹತೆಯ ಮೇಲ್ಮೈ ಸಾಕ್ಷ್ಯಗಳು – ಅದರ ಪ್ರಾಚೀನತೆ ಮತ್ತು ಸಂರಕ್ಷಣೆ – ಅದರ ನೈತಿಕ ಪ್ರಭಾವ – ಲೇಖಕರುಗಳ ಉದ್ದೇಶಗಳು – ಬರಹಗಳ ಸಾಮಾನ್ಯ ಗುಣಲಕ್ಷಣಗಳು – ಮೋಶೆಯ ಪುಸ್ತಕಗಳು – ಮೋಶೆಯ ನಿಬಂಧನೆಗಳು – ಮೋಶೆಯು ಪ್ರತಿಷ್ಠಾಪಿಸಿದ ಸರ್ಕಾರದ ವೈಶಿಷ್ಟತೆಗಳು – ಅದು ಪೌರೋಹಿತ್ಯ ಧೋರಣೆಯಾಗಿರಲಿಲ್ಲ – ನಾಗರೀಕ ಆಡಳಿತಗಾರರಿಗೆ ಸೂಚನೆಗಳು – ಕಾನೂನಿನ ಮುಂದೆ ಶ್ರೀಮಂತ ಮತ್ತು ಬಡವರು ಸಮಾನ ಮಟ್ಟದಲ್ಲಿ – ಜನರ ಹಕ್ಕುಗಳ ಗೋಜಿಗೆ ಹೋಗದಂತೆ ರಕ್ಷಣೋಪಾಯ – ಪೌರೋಹಿತ ವರ್ಗವು ಕೃಪಾಪೋಷಿತವಲ್ಲ, ಅದು ಹೇಗೆ ಬೆಂಬಲಿಸಲ್ಪಡುತ್ತೆ ಮುಂತಾದವುಗಳು – ಪರಕೀಯರ, ವಿಧವೆಯರ, ಅನಾಥರ ಮತ್ತು ಸೇವಕರ ಮೇಲಿನ ದಬ್ಬಾಳಿಕೆಯ ವಿರುದ್ಧ ರಕ್ಷಣೆ ಒದಗಿಸಲಾಗಿದೆ. – ಸತ್ಯವೇದದ ಪ್ರವಾದಿಗಳು – ಧರ್ಮಶಾಸ್ತ್ರ, ಪ್ರವಾದಿಗಳು ಮತ್ತು ಹೊಸ ಒಡಂಬಡಿಕೆಯ ಬರಹಗಾರರು ಇವುಗಳ ಮಧ್ಯೆ ಸಾಮಾನ್ಯವಾದ ಬಂಧನವಿದೆಯೇ? – ಅದ್ಭುತ ಕಾರ್ಯಗಳು ಅಸಮಂಜಸವಾದವುಗಳಲ್ಲ – ಸಮಂಜಸವಾದ ತೀರ್ಮಾನ. . . . . . . . . . . . . . . . 20

## ಅಧ್ಯಯನ – 4

## ದೇವರ ಯೋಜನೆಯ ಅಭಿವೃದ್ಧಿಯಲ್ಲಿ ಯುಗಗಳು ಮತ್ತು ದೈವೀಕ ಹಂಚಿಕೆಗಳು ಗುರುತಿಸಲ್ಪಟ್ಟಿವೆ

### The Epochs and Dispensations Marked in the Development of the Divine Plan

ದೇವರ ಯೋಜನೆಯು ನಿಶ್ಚಿತವಾದುದು ಮತ್ತು ವ್ಯವಸ್ಥಿತವಾದುದು – ವಿಶ್ವ ಇತಿಹಾಸದ ಮೂರು ಮಹಾಯುಗಗಳು – ಅವುಗಳ ವೈಶಿಷ್ಟ್ಯಪೂರ್ಣ ಲಕ್ಷಣಗಳು – "ಭೂಮಿಯು ಶಾಶ್ವತವಾಗಿ ನಿಲ್ಲುವುದು" – ಬರಲಿರುವ ನೂತನ ಆಕಾಶ ಮಂಡಲ, ನೂತನ ಭೂಮಂಡಲ – ಈ ಮಹಾ ಯುಗಗಳ ಉಪವಿಭಾಗಗಳು – ಪ್ರಾಮುಖ್ಯವಾದ ದೇವರ ಯೋಜನೆಯ ವೈಶಿಷ್ಟ್ಯಗಳನ್ನು ಅವಲೋಕಿಸಲು ತರಲಾಗಿದೆ – ಮಾನ್ಯ ಮಾಡಲ್ಪಟ್ಟ ಕ್ರಮವು ಸಾಮರಸ್ಯವನ್ನು ಬಹಿರಂಗಪಡಿಸುತ್ತದೆ – "ಸತ್ಯವಾಕ್ಯವನ್ನು ಸರಿಯಾಗಿ ಉಪದೇಶಿಸುವುದು" . . . . . . . . . . . . . . . . . . 39

## ಅಧ್ಯಯನ – 5

### “ಈ ವಾಕ್ಯವು ಹಿಂದಿನ ಯುಗಗಳಿಂದಲೂ ತಲತಲಾಂತರಗಳಿಂದಲೂ ಮರೆಯಾಗಿತ್ತು. ಈಗಿನ ಕಾಲದಲ್ಲಿ ದೇವಜನರಿಗೆ ತಿಳಿಸಲ್ಪಟ್ಟಿದೆ” (ಕೊಲೊಸ್ಸೆ 1:26)

**"The Mystery hid from Ages and from Generations, But Now made manifest to His Saints"** - Col. 1:26

ಮೊದಲನೆಯ ವಾಗ್ದಾನದ ಮಿನುಗುವ ಬೆಳಕು – ಅಬ್ರಹಾಮನಿಗೆ ಮಾಡಿದ ವಾಗ್ದಾನ – ನಿರೀಕ್ಷೆಯು ಮುಂದೂಡಲಾಯಿತು –ರಹಸ್ಯವು ಪಂಚಾಶತ್ತಮದಂದು ಬಹಿರಂಗಗೊಳ್ಳಲು ಪ್ರಾರಂಭವಾಯಿತು – ಈ ಧರ್ಮರಹಸ್ಯವು ಯಾವುದು? ಯಾಕೆ – ಇಷ್ಟು ದೀರ್ಘಕಾಲ ರಹಸ್ಯವಾಗಿ ಇಡಲಾಗಿತ್ತು? – ಈಗಲೂ ಪ್ರಪಂಚದವರಿಗೆ ಧರ್ಮರಹಸ್ಯವಾಗಿಯೇ ಅದೆ – ಸೂಕ್ತ ಸಮಯದಲ್ಲಿ ಎಲ್ಲರಿಗೂ ಪ್ರಕಟವಾಗುವಂತೆ ಮಾಡಲಾಗುವುದು – ಯಾವಾಗ ಈ ಧರ್ಮರಹಸ್ಯವು ಕೊನೆಗೊಳ್ಳುತ್ತದೆ. ..................48

## ಅಧ್ಯಯನ – 6

### ನಮ್ಮ ಕರ್ತನ ಹಿಂದಿರುಗುವಿಕೆ – ಅದರ ಉದ್ದೇಶ, ಸಮಸ್ತವನ್ನೂ ಪುನರ್‌ವಶಪಡಿಸುವಿಕೆ

**Our Lord's Return - It's Object, The Restitution of all Things**

ನಮ್ಮ ಕರ್ತನ ದ್ವಿತೀಯಾಗಮನ ವೈಯುಕ್ತಿಕ ಮತ್ತು ಸಹಸ್ರಮಾನ ಪೂರ್ವ. ಪ್ರಥಮಾಗಮನದೊಂದಿಗಿನ ಅದರ ಸಂಬಂಧ – ಸಭೆಯ ಆಯ್ಕೆ ಮತ್ತು ಲೋಕದ ಪರಿವರ್ತನೆ – ಆಯ್ಕೆ ಮತ್ತು ಉಚಿತ ಕೃಪೆ – ನಿರೀಕ್ಷೆಯ ಬಂಧಿಗಳು – ಪುನರ್‌ವಶದ ಬಗ್ಗೆ ಪ್ರವಾದನೀಯ ಸಾಕ್ಷ್ಯಗಳು – ನಮ್ಮ ಕರ್ತನ ಹಿಂದಿರುಗುವಿಕೆಯು ಸ್ಪಷ್ಟವಾಗಿ ಸಭೆಯ ಮತ್ತು ಪ್ರಪಂಚದ ಭರವಸೆಯಾಗಿದೆ. .................. 56

## ಅಧ್ಯಯನ – 7

### ದುಷ್ಕೃತ್ಯದ ಅನುಮತಿ ಮತ್ತು ದೇವರ ಯೋಜನೆಗೆ ಅದರ ಸಂಬಂಧ

**The Permission of Evil and it's Relation to God's Plan**

ದುಷ್ಟತನಕ್ಕೆ ಏಕೆ ಅನುಮತಿ ದೊರೆತಿದೆ? – ಒಂದು ಮೂಲತತ್ವಗಳಾಗಿ ಸರಿ ಮತ್ತು ತಪ್ಪು – ನೈತಿಕ ಪ್ರಜ್ಞೆ – ದೇವರು ಕೆಟ್ಟದ್ದನ್ನು ಅನುಮತಿಸಿದ್ದಾನೆ, ಮತ್ತು ಒಳ್ಳೇದಕ್ಕಾಗಿ ಅದನ್ನು ರದ್ದು ಮಾಡುತ್ತಾನೆ – ದೇವರು ಪಾಪದ ಕರ್ತೃವಲ್ಲ – ಆದಾಮನ ಪರೀಕ್ಷೆಯು ಒಂದು ಅವಾಸ್ತವ ನಾಟಕವಲ್ಲ – ಆತನ ಪ್ರಲೋಭನೆಗಳು ಕಠೋರವಾದವಗಳು – ಆತನು ಇಚ್ಛಾಪೂರ್ವಕವಾಗಿ ಪಾಪಮಾಡಿದನು – ಪಾಪದ ದಂಡನೆಯು ಅನ್ಯಾಯವಾದುದಲ್ಲ ಇಲ್ಲವೆ ತೀವ್ರವಾದುದೂ ಅಲ್ಲ – ವಿವೇಕ, ಪ್ರೀತಿ ಮತ್ತು ನ್ಯಾಯ ಇವುಗಳು ಎಲ್ಲರನ್ನೂ ಆದಾಮನಲ್ಲಿ ದಂಡಿಸಿದ್ದರಲ್ಲಿ ಪ್ರದರ್ಶಿಸಲ್ಪಟ್ಟಿದೆ – ದೇವರ ಕಾನೂನು ಸಾರ್ವತ್ರಿಕವಾದುದು. .................. 76

## ಅಧ್ಯಯನ – 8

### ನ್ಯಾಯ ತೀರ್ಪಿನ ದಿನ

**Day of Judgement**

ನ್ಯಾಯ ತೀರ್ಪಿನ ದಿನದ ಸಾಮಾನ್ಯ ನೋಟ – ಅದು ಧರ್ಮಗ್ರಂಥಾನುಸಾರವಾಗಿದೆಯೋ? ಅವಧಿ, ನ್ಯಾಯ ತೀರ್ಪು ಮತ್ತು ದಿನ ಈ ಪದಗಳನ್ನು ಅರ್ಥೈಸಲಾಗಿದೆ – ಧರ್ಮಗ್ರಂಥದಲ್ಲಿ ಉಲ್ಲೇಖಿಸಲಾದ ಅನೇಕ ನ್ಯಾಯತೀರ್ಪಿನ ದಿನಗಳು – ಮೊದಲನೆಯ ನ್ಯಾಯತೀರ್ಪಿನ ದಿನ ಮತ್ತು ಅದರ ಫಲಿತಾಂಶಗಳು – ಮತ್ತೊಂದು ನೇಮಕ – ನ್ಯಾಯಾಧಿಪತಿ – ಬರಲಿರುವ ನ್ಯಾಯತೀರ್ಪಿನ ಪಾತ್ರಗಳು – ಮೊದಲನೆಯ ಮತ್ತು ಎರಡನೆಯ ನ್ಯಾಯತೀರ್ಪುಗಳ ಸಮಾನರೂಪತೆ ಮತ್ತು ಅಸಮಾನತೆ – ಈ ಲೋಕದ ಪ್ರಸ್ತುತ ಹೊಣೆಗಾರಿಕೆ – ಎರಡು ಮಧ್ಯಸ್ಥಿಕೆಯ ನ್ಯಾಯತೀರ್ಪುಗಳು ಮತ್ತು ಅವುಗಳ ಉದ್ದೇಶಗಳು – ಬರಲಿರುವ ನ್ಯಾಯತೀರ್ಪಿನ ವ್ಯಾಪಕವಾದ ವಿಭಿನ್ನ ದೃಷಿಕೋನಗಳು – ಅವನ್ನು ಪ್ರವಾದಿಗಳು ಮತ್ತು ಅಪೋಸ್ತಲರುಗಳು ಹೇಗೆ ಪರಿದರ್ಶನ ಮಾಡಿದರು. .................. 90

## ಅಧ್ಯಯನ – 9

## ಈಡುಬಲಿ ಮತ್ತು ಪುನರ್‌ವಶಪಡಿಸುವಿಕೆ

### Ransom and Restitution

ಈಡುಬಲಿಯಿಂದ ಪುನರ್‌ವಶವು ಖಚಿತಗೊಂಡಿದೆ – ನಿರಂತರವಾದ ಜೀವ ಅಲ್ಲ. ಅದರೆ ಅದಕ್ಕಾಗಿ ಒಂದು ಪ್ರಯೋಗ, ಈಡುಬಲಿಯ ಮೌಲ್ಯದಿಂದ ಪಡಕೊಂಡದ್ದು – ವಿಚಾರಣೆಯ ಷರತ್ತುಗಳು ಮತ್ತು ಸೌಲಭ್ಯಗಳು – ಕ್ರಿಸ್ತನ ತ್ಯಾಗ ಅವಶ್ಯ – ಜನಾಂಗವು ಯಾವರೀತಿಯಲ್ಲಿ ಒಬ್ಬನ ಮರಣದಿಂದ ವಿಮೋಚನೆಗೊಳ್ಳಬಹುದು ಮತ್ತು ವಿಮೋಚನೆಗೊಂಡಿದೆ – ನಂಬಿಕೆ ಮತ್ತು ಕ್ರಿಯೆಗಳು ಇನ್ನೂ ಅಗತ್ಯವಾಗಿದೆ – ಉದ್ದೇಶಪೂರ್ವಕವಾದ ಪಾಪದ ಸಂಬಳವು ನಿಶ್ಚಿತವಾಗಿದೆ – ಪುನರುತ್ಥಾನಗೊಳ್ಳುವ ಮಿಲಿಯಾಂತರ ಜನರಿಗೆ ಭೂಲೋಕದ ಮೇಲೆ ಸ್ಥಳವಿದೆಯೇ? ಪುನರ್‌ವಶದ ವಿರುದ್ಧವಾಗಿ ವಿಕಸನ ಸಿದ್ಧಾಂತ. .................. 99

## ಅಧ್ಯಯನ – 10

## ಆತ್ಮೀಕ ಮತ್ತು ಮಾನವ ಸ್ವಭಾವಗಳು ಪ್ರತ್ಯೇಕವಾದವುಗಳು ಮತ್ತು ವಿಶಿಷ್ಟವಾದವುಗಳು

### "Spiritual and Human Natures Separate and Distinct"

ಸಾಮಾನ್ಯವಾದ ತಪ್ಪು ಗ್ರಹಿಕೆಗಳು – ಲೌಕಿಕ ಅಥವಾ ಮಾನವ ಸ್ವಭಾವಗಳು ಮತ್ತು ಪರಲೋಕದ ಅಥವಾ ಆತ್ಮೀಕ ಸ್ವಭಾವಗಳು – ಲೌಕಿಕ ಮಹಿಮೆ ಮತ್ತು ಪರಲೋಕದ ಮಹಿಮೆ – ಆತ್ಮೀಕ ಜೀವಿಗಳ ಬಗ್ಗೆ ಸತ್ಯವೇದದ ಸಾಕ್ಷ್ಯಗಳು – ಮರ್ತ್ಯತೆ ಮತ್ತು ಅಮರತ್ವ – ಮರ್ತ್ಯ ಜೀವಿಗಳು ನಿತ್ಯಜೀವವನ್ನು ಹೊಂದಲು ಸಾಧ್ಯವೋ? – ಅನುಗ್ರಹ ದಯಪಾಲಿಸುವಲ್ಲಿ ನ್ಯಾಯಪರತೆ – ಕಲ್ಪಿತ ಸಿದ್ಧಾಂತಗಳು ಪರೀಕ್ಷಿಸಲ್ಪಟ್ಟಿವೆ – ಪರಿಪೂರ್ಣತೆಯಲ್ಲಿ ವೈವಿಧ್ಯತೆ – ದೇವರ ಸಾರ್ವಭೌಮತ್ವ ಹಕ್ಕುಗಳು – ದೇವರ ಮುನ್ನೇರ್ಪಾಡು ಮಾನವರಿಗೆ ಒಂದು ತೃಪ್ತಿದಾಯಕ ಭಾಗವಾಗಿದೆ – ಕ್ರಿಸ್ತನ ದೇಹದ ಆಯ್ಕೆ – ಅವರ ಸ್ವರೂಪ ಬದಲಾವಣೆಯು ಹೇಗೆ ಪರಿಣಾಮಕಾರಿಯಾಗಿರುತ್ತದೆ. .................. 116

## ಅಧ್ಯಯನ – 11

## ಮೂರು ಮಾರ್ಗಗಳು – ಅಗಲವಾದ ಮಾರ್ಗ, ಇಕ್ಕಟ್ಟಾದ ಮಾರ್ಗ ಮತ್ತು ರಾಜಮಾರ್ಗ

### The Three Ways - The Broad Way, The Narrow Way & The High Way

ನಾಶನಕ್ಕೆ ಹೋಗುವ ಅಗಲವಾದ ಮಾರ್ಗ – ಜೀವಕ್ಕೆ ಹೋಗುವ ಇಕ್ಕಟ್ಟಾದ ಮಾರ್ಗ – ಜೀವವೆಂದರೇನು? – ದೈವಿಕ ಸ್ವಭಾವ – ದೈವಿಕ ಸ್ವಭಾವಕ್ಕೂ ಮಾನವ ಸ್ವಭಾವಕ್ಕೂ ಇರುವ ಸಂಬಂಧ – ಇಕ್ಕಟ್ಟಾದ ಮಾರ್ಗದ ಕೊನೆಯಲ್ಲಿ ದೊರೆಯುವ ಪ್ರತಿಫಲ – ಮಹಾ ಕರೆಯು ಸುವಾರ್ತಾಯುಗಕ್ಕೆ ಸೀಮಿತವಾಗಿದೆ – ಇಕ್ಕಟ್ಟಾದ ಮಾರ್ಗದಲ್ಲಿರುವ ಕಷ್ಟಗಳು ಮತ್ತು ಗಂಡಾಂತರಗಳು – ಪರಿಶುದ್ಧ ಮಾರ್ಗ .................... 138

## ಅಧ್ಯಯನ – 12

## ಯುಗಗಳ ಯೋಜನೆಯನ್ನೇ ಪ್ರತಿನಿಧಿಸುವ ನಕ್ಷೆಯ ವಿವರಣೆ

### Explanation of Chart Representing the Plan of the Ages

ಯುಗಗಳು – ಸುಗ್ಗಿಗಳು – ನಿಜವಾದ ಮತ್ತು ಲೆಕ್ಕಿಸಲ್ಪಟ್ಟ ಸ್ಥಿರತೆಯ ಸಮಕ್ಷೇತ್ರಗಳು – ನಮ್ಮ ಕರ್ತನಾದ ಯೇಸುವಿನ ಓಟದ ಕ್ರಮ – ಆತನ ಅನುಯಾಯಿಗಳ ಓಟದ ಕ್ರಮ, ಹೆಸರು ಮಾತ್ರ ಸಭೆಯ ಮೂರು ವರ್ಗಗಳು – ಸುಗ್ಗಿಯಲ್ಲಿ ಪ್ರತ್ಯೇಕತೆ – ಅಭಿಷೇಕಿಸಲ್ಪಟ್ಟ ವರ್ಗವು ಮಹಿಮೆಹೊಂದಿಕೊಂಡಿದೆ – ಮಹಾಯಾತನೆಯ ವರ್ಗ – ಹಣಜಿಯನ್ನು ಸುಟ್ಟುಹಾಕಲಾಗಿದೆ – ಲೋಕವು ಆಶೀರ್ವದಿಸಲ್ಪಟ್ಟಿದೆ – ಪರಿಣಾಮ ಮಹಿಮೆಯುಳ್ಳದ್ದಾಗಿದೆ. .................. 148

## ಅಧ್ಯಯನ – 13

## ಈ ಲೋಕದ ಸಾಮ್ರಾಜ್ಯಗಳು

## The Kingdoms of this World

ಮೊದಲ ಸಾಮ್ರಾಜ್ಯ – ಅದರ ಮುಟ್ಟುಗೋಲು – ಅದರ ಉದ್ಧಾರ ಮತ್ತು ಅದರ ಪುನರ್‌ಸ್ಥಾಪನೆ – ದೇವರ ಸಾಂಕೇತಿಕ ರಾಜ್ಯ – ಅಪಹರಣಕಾರ – ಪ್ರಸ್ತುತ ರಾಜ್ಯದ ಎರಡು ಹಂತಗಳು – ದೇವರಿಂದ ನೇಮಿಸಲ್ಪಟ್ಟ ಅಧಿಕಾರಗಳು – ಅವುಗಳ ಬಗ್ಗೆ ನೆಬೂಕದ್ನೇಚರನ ದೃಷ್ಟಿಕೋನ – ದಾನಿಯೇಲನ ದೃಷ್ಟಿಕೋನ ಮತ್ತು ಅರ್ಥವಿವರಣೆ – ಮತ್ತೊಂದು ದೃಷ್ಟಿಕೋನದಿಂದ ಈ ಲೋಕದ ರಾಜ್ಯಗಳು – ಪ್ರಸ್ತುತ ಸರ್ಕಾರಗಳೊಂದಿಗೆ ಸಭೆಯ ಯುಕ್ತವಾದ ಸಂಬಂಧ – ರಾಜರ ದೈವದತ್ತವಾದ ಹಕ್ಕನ್ನು ಸಂಕ್ಷಿಪ್ತವಾಗಿ ಪರೀಕ್ಷಿಸಲಾಗಿದೆ – ಕ್ರೈಸ್ತ ಪ್ರಪಂಚದ ಹಕ್ಕೇಳಿಕೆಯು ತಪ್ಪಾದುದು – ಐದನೆಯ ವಿಶ್ವ ಸಾಮ್ರಾಜ್ಯದಲ್ಲಿ ಉತ್ತಮವಾದ ನಿರೀಕ್ಷೆ.ಆಶೀರ್ವದಿಸಲ್ಪಟ್ಟಿದೆ – ಪರಿಣಾಮ ಮಹಿಮೆಯುಳ್ಳದ್ದಾಗಿದೆ. .................. 166

## ಅಧ್ಯಯನ – 14

## ದೇವರ ರಾಜ್ಯ

## The Kingdom of God

ಪ್ರಸ್ತಾಪದ ಪ್ರಧಾನ್ಯತೆ – ರಾಜ್ಯದ ಗುಣಲಕ್ಷಣಗಳು – ಸುವಾರ್ತಾ ಯುಗದಲ್ಲಿ ರಾಜ್ಯ – ತಪ್ಪು ದೃಷ್ಟಿಕೋನವನ್ನು ಸರಿಪಡಿಸಿದ ಪೌಲನು – ರಾಜ್ಯದ ತಪ್ಪು ಭಾವನೆಗಳ ಫಲಿತಾಂಶ – ದೇವರ ರಾಜ್ಯದ ಎರಡು ಹಂತಗಳು – ಆತ್ಮೀಕ ಹಂತ ಮತ್ತು ಅದರ ಕಾರ್ಯ – ಭೂಲೋಕದ ಹಂತ ಮತ್ತು ಅದರ ಕಾರ್ಯ – ಅವುಗಳ ಸಾಮರಸ್ಯ ಕಾರ್ಯವು – ಭೂಲೋಕದ ಹಂತದ ಮಹಿಮೆ – ಪರಲೋಕದ ಹಂತದ ಮಹಿಮೆ – ಒಡಂಬಡಿಕೆಯ ಬೇರಿನಿಂದ ಬೆಳೆಯುವ ಕೊಂಬೆಗಳು – ರಾಜ್ಯದ ಭೂಲೋಕದ ಹಂತಗಳು – ಇಸ್ರಾಯೇಲ್ಯತನ – ಕಳೆದು ಹೋದ ಗೋತ್ರಗಳು – ಪರಲೋಕದ ಯೆರೂಸಲೇಮ್– ಇಸ್ರಾಯೇಲ್ಯರು ಒಂದು ಸಾಂಕೇತಿಕ ಜನರು – ಇಸ್ರಾಯೇಲಿನ ನಷ್ಟ ಮತ್ತು ಪುನರುದ್ಧಾರ – ಆಯ್ದ ವರ್ಗಗಳು – ರಾಜ್ಯದ ಬಾಧ್ಯಸ್ಥರು – ಕಬ್ಬಿಣದ ಆಡಳಿತ – ಸಹಸ್ರಮಾನದ ಆಡಳಿತ ಉದ್ದೇಶದ ನಿದರ್ಶನ – ತಂದೆಯಾದ ದೇವರಿಗೆ ರಾಜ್ಯವನ್ನು ಒಪ್ಪಿಸಿಕೊಡುವದು – ದೇವರ ಮೂಲ ಸಂಕಲ್ಪವು ಸಂಪೂರ್ಣವಾಗಿ ಈಡೇರಿತು. .................. 185

## ಅಧ್ಯಯನ – 15

## ಯೆಹೋವನ ದಿನ

## The Day of Jehovah

"ಯೆಹೋವನ ದಿನ", "ಮುಯ್ಯಿ ತೀರಿಸುವ ದಿನ", "ರೌದ್ರದ ದಿನ" – ಮಹಾ ಸಂಕಟದ ಕಾಲ – ಅದರ ಕಾರಣಗಳು – ಅದರ ಬಗ್ಗೆ ಸತ್ಯವೇದದ ಸಾಕ್ಷ್ಯಗಳು – ಅದರ ಬೆಂಕಿ ಮತ್ತು ಬಿರುಗಾಳಿ, ಅದರ ನಡುಗುವಿಕೆ ಮತ್ತು ಕರಗುವಿಕೆ, ಸಾಂಕೇತಿಕವಾಗಿ ತೋರಿಸಲ್ಪಟ್ಟಿದೆ – ದಾವೀದನ ಸಾಕ್ಷ್ಯ – ಪ್ರಕಟನೆಗಾರನ ಸಾಕ್ಷ್ಯ – ಎದುರಾಳಿ ಪಂಗಡಗಳ, ಬಂಡವಾಳಶಾಹಿಗಳ ಹಾಗೂ ಕೂಲಿಕಾರ್ಮಿಕರ ದೃಷ್ಟಿಯಲ್ಲಿ ವೀಕ್ಷಿಸಲ್ಪಟ್ಟ ಪ್ರಸ್ತುತ ಪರಿಸ್ಥಿತಿ ಮತ್ತು ಭವಿಷ್ಯದ ಹೊರನೋಟ – ಯಶಸ್ವಿಯಾಗದ ಪರಿಹಾರ – ತಕ್ಕಸಮಯದಲ್ಲಿ ಪರದೆಯು ಎತ್ತಲ್ಪಟ್ಟು ಬೆಳಕಿನ ಪ್ರವೇಶವಾಗಿದೆ – ಇದರ ರುಜುವಾತು – ಸಂಕಟದ ಸಮಯದಲ್ಲಿ ಸಂತರುಗಳ ಪರಿಸ್ಥಿತಿ ಮತ್ತು ಅದರ ಬಗ್ಗೆ ಅವರ ಯುಕ್ತವಾದ ಮನೋವೃತ್ತಿ. .................. 207

## ಅಧ್ಯಯನ – 16

## ಮುಕ್ತಾಯದ ಆಲೋಚನೆಗಳು

## Concluding Thoughts

ಸತ್ಯದ ಬಗ್ಗೆ ನಮ್ಮ ಕರ್ತವ್ಯ – ಅದರ ವೆಚ್ಚ, ಮೌಲ್ಯ ಮತ್ತು ಅದರ ಲಾಭ. .................. 231

# ಅಧ್ಯಯನ – 1 Study I

# ಭೂಲೋಕದ ಪಾಪಮಯ ರಾತ್ರಿಯು ಸಂತೋಷದ ಮುಂಜಾನೆಯಾಗಿ ಕೊನೆಗಾಣುವುದು

## "EARTH'S NIGHT OF SIN TO TERMINATE IN A MORNING OF JOY"

**ಸಂಜೆಗಳ ದುಃಖ ಮತ್ತು ಹರ್ಷದ ಮುಂಜಾನೆ – ಸತ್ಯವನ್ನು ಅನ್ವೇಷಿಸುವ ಎರಡು ವಿಧಾನಗಳು – ಈ ವಿಷಯದಲ್ಲಿ ಪಾಲಿಸುವ ವಿಧಾನ – ಕಾರ್ಯದ ವ್ಯಾಪ್ತಿ – ಪರಿಶುದ್ಧ ಗ್ರಂಥಗಳ ಗೌರವಾನ್ವಿತ ಅಧ್ಯಯನ ಮತ್ತು ಊಹಾಪೋಹಗಳ ಅಪಾಯಕಾರಿ ಅಭ್ಯಾಸದ ನಡುವಣ ವ್ಯತ್ಯಾಸ – ಪ್ರವಾದನೆಯ ಉದ್ದೇಶ – ಎರಡು ದೃಷ್ಟಿಕೋನಗಳಿಂದ ನೋಡಬಹುದಾದ ಈ ಲೋಕದ ಪ್ರಸ್ತುತ ಧಾರ್ಮಿಕ ಪರಿಸ್ಥಿತಿ – ಐಗುಪ್ತದ ಅಂಧಕಾರ – ವಾಗ್ದಾನದ ನಮನ – ನ್ಯಾಯವಂತರ ಅಭಿವೃದ್ಧಿಯ ಪಥ – ಮಹಾ ಧರ್ಮಭ್ರಷ್ಟತೆಯ ಕಾರಣ – ಸುಧಾರಣೆ – ಅದೇ ಕಾರಣವು ಪುನಃ ನಿಜವಾದ ಪ್ರಗತಿಗೆ ಅಡಚಣೆಯನ್ನುಂಟು ಮಾಡುತ್ತದೆ – ಜ್ಞಾನದ ಪರಿಪೂರ್ಣತೆಯು ಗತ ಕಾಲದ ಸಂಗತಿಯಲ್ಲ, ಭವಿಷ್ಯದಲ್ಲಿನ ಸಂಗತಿಯಾಗಿದೆ.**

ಯುಗಾಂತರಗಳ ದೈವಿಕ ಯೋಜನೆ **(THE DIVINE PLAN OF AGES)** ಎಂಬ ಈ ಸರಣಿ ಅಧ್ಯಯನದ ಶಿರೋನಾಮೆಯು ನಮ್ಮ ದೇವರಿಗೆ ಮುಂತಿಳಿದ ದೈವಿಕ ವ್ಯವಸ್ಥೆಯ ಪ್ರಗತಿಯ ಬಗ್ಗೆ ಕ್ರಮಬದ್ಧವಾಗಿ ಪ್ರಸ್ತಾಪಿಸುವುದಾಗಿದೆ. ದೈವಿಕ ಪ್ರಕಟನೆಯ ಬೋಧನೆಗಳು ಬೇರೆಯವುಗಳಿಗಿಂತ ಈ ದೃಷ್ಟಿಕೋನದಿಂದ ನೋಡುವಾಗ ಸುಂದರವಾಗಿಯೂ ಮತ್ತು ಸಾಮರಸ್ಯಕರವಾಗಿಯೂ ಕಂಡುಬರುತ್ತವೆ. ಪಾಪವು ಅನುಮತಿಸಲ್ಪಟ್ಟ ಅವಧಿಯು ಮಾನವೀಯತೆಗೆ ಕರಾಳ ರಾತ್ರಿಯಾಗಿದ್ದು, ಇದನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ; ಆದರೆ ನೀತಿವಂತಿಕೆಯ ಮಹಿಮೆಯುಳ್ಳ ಮತ್ತು ಕೃಪಾಭರಿತ ದಿನಕ್ಕೆ ಮೆಸ್ಸೀಯನಿಂದ ಮಾರ್ಗ ತೋರಿಸಲ್ಪಡುತ್ತದೆ. ಆತನು ನೀತಿಸೂರ್ಯನಾಗಿ ಉದಯಿಸಿ, ಎಲ್ಲರ ಮೇಲೆ ಪೂರ್ಣವಾಗಿ ಮತ್ತು ಸ್ಪಷ್ಟವಾಗಿ ಪ್ರಕಾಶಿಸುತ್ತಾನೆ, ಗುಣಪಡಿಸುವಿಕೆ ಮತ್ತಿತರ ಆಶೀರ್ವಾದಗಳನ್ನು ಬರಮಾಡುತ್ತಾನೆ, ಇದುವರೆಗೆ ನರಳುತ್ತಿರುವ ಸೃಷ್ಟಿಯ ರೋಧನಾಮಯವಾದ, ನಿಟ್ಟುಸಿರು ತುಂಬಿದ, ವೇದನೆಯುಳ್ಳ, ರೋಗಗ್ರಸ್ಥವಾದ ಮತ್ತು ಮರಣಕರವಾದ ರಾತ್ರಿಯನ್ನು ಸಮದೂಗಿಸುತ್ತಾನೆ. "ಸಂಜೆಗೆ ದುಃಖವೆಂಬುದು ಬಂದು ನಮ್ಮ ಬಳಿಯುಲ್ಲಿ ಇಳಿದುಕೊಂಡರೂ ಮುಂಜಾನೆ ಹರ್ಷಧ್ವನಿಯು ಕೇಳಿಸುವುದು" (ಕೀರ್ತನೆ 30:5).

ಸಹಜ ಪ್ರವೃತ್ತಿಯೋ ಎಂಬಂತೆ, ಸಮಸ್ತ ಸೃಷ್ಟಿಯು, ನೋವಿನಲ್ಲಿ ವೇದನೆಪಡುತ್ತಾ ಗೋಳಾಡುತ್ತಿರುವಾಗಲೂ ಆ ದಿನಕ್ಕಾಗಿ ಹಂಬಲಿಸುತ್ತಾ, ನಿರೀಕ್ಷಿಸುತ್ತಾ ಕಾಯುತ್ತಿರುವುದು ಸುವರ್ಣಯುಗ; ಆದಾಗ್ಯೂ ಮನುಷ್ಯರು ಕುರುಡರಂತೆ ತಡಕಾಡುತ್ತಿರುವರು, ಯಾಕೆಂದರೆ, ಅವರಿಗೆ ಯೆಹೋವನ ಕೃಪಾಪೂರಿತವಾದ ಉದ್ದೇಶಗಳ ಬಗ್ಗೆ ತಿಳುವಳಿಕೆ ಇಲ್ಲವಾದುದರಿಂದ. ಅಂಥಾಃ ಯುಗಗಳ ಬಗ್ಗೆ ಅವರ ಅತ್ಯಂತ ಹೆಚ್ಚಿನ ಕಲ್ಪನೆಯು ಅದು ನಿಜವಾಗಿ ಇರುವುದಕ್ಕಿಂತಲೂ ಕಡಿಮೆಯದಾಗಿದೆ. ಮಹಾ ಸೃಷ್ಟಿಕರ್ತನು "ಸಾರವತ್ತಾದ ಮೃಷ್ಟಾನ್ನ"ದ ಔತಣಕ್ಕೆ ಸಿದ್ಧತೆ ಮಾಡುತ್ತಾ ಇದ್ದಾನೆ. ಅದು ಆತನ ಸೃಷ್ಟಿಗಳನ್ನು ದಿಗ್ಭ್ರಮೆಗೊಳಿಸುವುದಾಗಿದೆ. ಮತ್ತು ಅವು ಅವರು ಸಮಂಜಸವಾಗಿ ಕೇಳಿಕೊಳ್ಳುವ ಅಥವಾ ನಿರೀಕ್ಷಿಸುವುದಕ್ಕಿಂತ ಅತ್ಯಂತ, ಹೇರಳವಾಗಿ ಹೊಂದುತ್ತಾರೆ ಮತ್ತು ಆತನ ದೇವರ ಪ್ರೀತಿಯ ಉದ್ದ, ಅಗಲ, ಎತ್ತರ ಮತ್ತು ಆಳವನ್ನು ನೋಡಿ. ಎಲ್ಲಾ ನಿರೀಕ್ಷೆಗಳನ್ನೂ ಮೀರಿ ಆಶ್ಚರ್ಯಗೊಂಡಿರುವ ತನ್ನ ಸೃಷ್ಟಿಗಳಿಗೆ ಆತನು ವಿವರಿಸುವುದೇನೆಂದರೆ – "ನನ್ನ ಆಲೋಚನೆಗಳು ನಿಮ್ಮ ಆಲೋಚನೆಗಳಲ್ಲ, ನಿಮ್ಮ ಮಾರ್ಗಗಳು ನನ್ನ ಮಾರ್ಗಗಳಲ್ಲ. ಭೂಮಿಯ ಮೇಲೆ ಆಕಾಶವು ಎಷ್ಟು ಉನ್ನತವೋ ನಿಮ್ಮ ಮಾರ್ಗಗಳಿಗಿಂತ ನನ್ನ ಮಾರ್ಗಗಳೂ, ನಿಮ್ಮ ಆಲೋಚನೆಗಳಿಗಿಂತ ನನ್ನ ಆಲೋಚನೆಗಳೂ ಅಷ್ಟು ಉನ್ನತವಾಗಿವೆ" (ಯೆಶಾಯ 55 :8,9).

ದೇವರ ಯೋಜನೆಯನ್ನು ಗತಿಸಿಹೋದ ಹಿಂದಿನವುಗಳಿಗೆ, ವರ್ತಮಾನಗಳಿಗೆ ಮತ್ತು ಭವಿಷ್ಯದವುಗಳಿಗೆ ಸಂಬಂಧಿಸಿದರೆ ಹೆಚ್ಚು ಸಾಮರಸ್ಯವುಳ್ಳದ್ದೂ ಮತ್ತು ಸಾಮಾನ್ಯ ಅರ್ಥ ಮಾಡಿಕೊಳ್ಳುವುದಕ್ಕಿಂತ ಹೆಚ್ಚು ಸುಂದರವೂ ಮತ್ತು ಸಮಂಜಸವೂ ಉಳ್ಳ ವ್ಯವಹಾರಗಳಾಗಿವೆ ಮತ್ತು ಅವುಗಳನ್ನು ವಿವರಿಸುವಲ್ಲಿ ಅವುಗಳು ಹೆಚ್ಚು ಕುತೂಹಲಕಾರಿಯೂ ಮತ್ತು ನಿಷ್ಪಕ್ಷಪಾತದ್ದಾಗಿಯೂ ಅವೆ ಎಂದು ಅರಿತುಕೊಳ್ಳುವ ಈ ಕಾರ್ಯದಲ್ಲಿ ನಾವು

ಸಾಹಸಪಡುವವರಾದರೂ, ಜಯದೊಡನೆ ಅದನ್ನು ನಂಬುವವರಾದರೂ, ಅದು ಬರಹಗಾರನ ಅಸಾಮಾನ್ಯ ವಿವೇಕದ ಅಥವಾ ಸಾಮರ್ಥ್ಯದ ಫಲವಾಗಿದೆ ಎಂಬುದು ಸಕಾರಾತ್ಮಕವಾಗಿ ನಿರಾಕರಿಸಲ್ಪಟ್ಟಿದೆ. ಸಹಸ್ರಮಾನ ದಿನದ ಈ ಉದಯದಲ್ಲಿ ನೀತಿಸೂರ್ಯನಿಂದ ಬಂದ ಬೆಳಕು ಈ ಸಂಗತಿಗಳನ್ನು "ಪ್ರಸ್ತುತಸತ್ಯ"ವೆಂಬುದನ್ನು ಬಹಿರಂಗಪಡಿಸುತ್ತದೆ ಮತ್ತು ಇದನ್ನು ನಿಷ್ಕಪಟವಾದ ಶುದ್ಧ ಹೃದಯವಂತರು ಮೆಚ್ಚಿಕೊಳ್ಳುವುದು ಉಚಿತವಾಗಿದೆ.

ಸಂದೇಹ ಮನೋವೃತ್ತಿಯು ತುಂಬಿರುವುದರಿಂದ, ನಿಜ ಧರ್ಮದ ಬುನಾದಿಯ ಮತ್ತು ಸತ್ಯದ ಅಡಿಪಾಯದ ಬಗ್ಗೆ ನಿಷ್ಠಾವಂತರಿಂದಲೂ ಪ್ರಶ್ನಿಸಲಾಗುತ್ತಿದೆ. ಎಲ್ಲಾ ನಂಬಿಕೆಗಳೂ ಕಟ್ಟಲ್ಪಡಬೇಕಾದ ಈ ಬುನಾದಿಯನ್ನು ನಾವು ಸಾಕಷ್ಟುಮಟ್ಟಿಗೆ ಬಹಿರಂಗಪಡಿಸಲು – ದೇವರ ವಾಕ್ಯವು – ಅದರ ಸಾಕ್ಷ್ಯದಲ್ಲಿ ವಿಶ್ವಾಸವನ್ನೂ ಮತ್ತು ಭರವಸೆಯನ್ನೂ ನಂಬಿಕೆಯಿಲ್ಲದವರಿಗೂ ನೀಡಲು ನಾವು ಪ್ರಯತ್ನಿಸುತ್ತಿದ್ದೇವೆ. ಅದು ಕಾರಣಾತ್ಮಕವಾಗಿ ಬುನಾದಿಯಾಗಿದೆ ಎಂದು ಕಂಡುಬಂದು ಅನ್ವಯಗೊಳ್ಳುವ, ಅಂಗೀಕಾರ ಪಡಕೊಳ್ಳುವ ರೀತಿಯಲ್ಲಿ ಆ ಅಡಿಪಾಯದ ಮೇಲೆ ಧರ್ಮಗ್ರಂಥಗಳ ಬೋಧನೆಗಳನ್ನು ನಿರ್ಮಿಸಲು ನಾವು ಪ್ರಯತ್ನಿಸಿದ್ದೇವೆ, ಈ ರೀತಿಯಾಗಿ, ಸಾಧ್ಯವಾದಷ್ಟು ಮಾನವ ತೀರ್ಪು ಅದರ ಚೌಕಗಳನ್ನು ಮತ್ತು ಕೋನಗಳನ್ನು ನ್ಯಾಯದ ಅತ್ಯಂತ ನಿಖರವಾದ ನಿಯಮಗಳಿಂದ ಪ್ರಯತ್ನಿಸಬಹುದು.

ಪರಿಶುದ್ಧ ಗ್ರಂಥಗಳು ಸ್ಥಿರವಾದ ಮತ್ತು ಸಾಮರಸ್ಯಕರ ಯೋಜನೆಯನ್ನು ಬಹಿರಂಗಗೊಳಿಸುತ್ತವೆ ಎಂದು ನಂಬಲಾಗಿದೆ, ಇದನ್ನು ನೋಡುವಾಗ, ಅದು ತನ್ನನ್ನು ಪ್ರತಿಯೊಂದು ಪವಿತ್ರ ಮನಸಾಕ್ಷಿಯನ್ನು ಶ್ಲಾಘಿಸಬೇಕು. ಈ ಕಾರ್ಯವನ್ನು ಅದು ದೇವರ ವಾಕ್ಯದ ವಿದ್ಯಾರ್ಥಿಗಳಿಗೆ ಒಂದಕ್ಕೊಂದು ಮತ್ತು ಸ್ಫೂರ್ತಿದಾಯಕ ವಚನಗಳೊಂದಿಗೆ ಸಾಮರಸ್ಯಗೊಳ್ಳುವ ಆಲೋಚನಾ ಲಹರಿಯನ್ನು ನೀಡಲು ಸಹಾಯಮಾಡಬಹುದೆಂಬ ನಿರೀಕ್ಷೆಯಿಂದ ಪ್ರಕಾಶಿಸಲ್ಪಟ್ಟಿದೆ. ಸತ್ಯವೇದವು ದೇವರ ಯೋಜನೆಯನ್ನು ಬಹಿರಂಗಗೊಳಿಸುತ್ತದೆ ಎಂದು ಯಾರು ಒಪ್ಪಿಕೊಳ್ಳುತ್ತಾರೋ ಅಂಥವರಿಗೆ ನಾವು ವಿಶೇಷವಾಗಿ ಸಂಬೋಧಿಸುವವರಾಗಿದ್ದೇವೆ – ಮತ್ತು ಅಂಥವರು ದೇವರಿಂದ ಪ್ರೇರೇಪಿಸಲ್ಪಟ್ಟರೆ, ಖಂಡಿತವಾಗಿಯೂ ಒಪ್ಪಿಕೊಳ್ಳುತ್ತಾರೆ. ಅದರ ಬೋಧನೆಗಳನ್ನೂ ಒಟ್ಟಾರೆಯಾಗಿ ತೆಗೆದುಕೊಳ್ಳುವಾಗ ಅದರಲ್ಲೇ ಸಾಮರಸ್ಯವಾಗಿರುವ, ಸ್ಥಿರವಾದ ಯೋಜನೆಯು ಅದರ ದೈವಿಕ ರಚನಕಾರನ ಗುಣಲಕ್ಷಣಗಳೊಂದಿಗೆ ಬಹಿರಂಗಗೊಳ್ಳುತ್ತದೆ. ಸತ್ಯಾನ್ವೇಷಕರಾಗಿ ನಮ್ಮ ಉದ್ದೇಶವು ಬಹಿರಂಗ ಗೊಂಡಿರುವ ಸಂಪೂರ್ಣವೂ, ಸಾಮರಸ್ಯವೂ ಉಳ್ಳ ದೇವರ ಯೋಜನೆಯನ್ನು ಪಡಕೊಳ್ಳುವುದು ಮತ್ತು ಇದನ್ನು, ದೇವರ ಮಕ್ಕಳಾಗಿ, ನಿರೀಕ್ಷಿಸುವ ಕಾರಣ ನಮಗಿದೆ. ಯಾಕೆಂದರೆ "ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡಿಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು" (ಯೋಹಾನ 16:13) ಎಂಬ ವಾಗ್ದಾನವೊಂದು ನಮಗೆ ನೀಡಲ್ಪಟ್ಟಿದೆ.

ವಿಚಾರ ಮಾಡುವವರಾದ ನಮಗೆ ಎರಡು ವಿಧಾನಗಳು ತೆರೆದಿವೆ. ಮೊದಲನೆಯದು ಸಭೆಯ ವಿವಿಧ ಪಂಗಡಗಳು ಸಲಹೆ ಮಾಡುವ ದೃಷ್ಟಿಕೋನವನ್ನು ಹುಡುಕುವುದು ಮತ್ತು ಪ್ರತಿಯೊಂದರಿಂದಲೂ ನಾವು ಸತ್ಯವೆಂದು ಪರಿಗಣಿಸುವ ಅಂಶವನ್ನು ತೆಗೆದುಕೊಳ್ಳುವದು – ಇದು ಮುಗಿಯದ ಕಾರ್ಯವಾಗಿದೆ. ಈ ಪದ್ಧತಿಯಲ್ಲಿ ನಾವು ಎದುರಿಸುವ ಕಷ್ಟಕರ ಸಂಗತಿಯೆಂದರೆ, ತಮ್ಮ ತೀರ್ಮಾನವನ್ನು ತಪ್ಪುದಾರಿಗೆ ಎಳೆದು ತಿರುಚುವುದಾದರೆ, ಅಥವಾ ನಮ್ಮ ಪೂರ್ವಕಲ್ಪಿತ ಅಭಿಪ್ರಾಯಗಳು ಯಾವ ದಿಕ್ಕಿಗಾದರೂ ಒಲವು ತೋರಿಸಿದರೆ – ಯಾರದಲ್ಲ? – ಈ ತೊಂದರೆಗಳು ನಮ್ಮ ಸರಿಯಾದ ಆಯ್ಕೆಯನ್ನು ಮಾಡಲು ಅಡ್ಡಿಪಡಿಸುತ್ತವೆ ಮತ್ತು ನಾವು ತಪ್ಪನ್ನು ಆಯ್ಕೆ ಮಾಡಿಕೊಂಡು ಸತ್ಯವನ್ನು ನಿರಾಕರಿಸಬಹುದು. ಪುನಃ, ನಾವು ಇದನ್ನು ನಮ್ಮ ಪದ್ಧತಿಯೆಂದು ಅಳವಡಿಸಿಕೊಳ್ಳುವುದಾದರೆ, ನಾವು ಬಹಳವಾಗಿ ಕಳಕೊಳ್ಳಬೇಕಾಗುತ್ತದೆ, ಯಾಕೆಂದರೆ ಸತ್ಯವು ಪ್ರಗತಿಯಲ್ಲಿದೆ, ಪರಿಪೂರ್ಣ ದಿನದೆಡೆಗೆ ಅದನ್ನು ಹುಡುಕುವವರಿಗೆ, ಅದರ ಬೆಳಕಿನಲ್ಲಿ ನಡೆಯುವವರಿಗೆ ಹೆಚ್ಚು ಹೆಚ್ಚಾಗಿ ಪ್ರಕಾಶಿಸುತ್ತದೆ, ಅದೇ ಸಮಯದಲ್ಲಿ ವಿವಿಧ ಪಂಗಡಗಳ ವಿವಿಧ ಮತಾಭಿಪ್ರಾಯಗಳು ನಿಗದಿತವಾಗಿವೆ ಮತ್ತು ಅಚಲವಾಗಿವೆ ಮತ್ತು ಶತಮಾನಗಳ ಹಿಂದೆಯೇ ಹಾಗೆ ಮಾಡಲ್ಪಟ್ಟಿವೆ. ಅವುಗಳಲ್ಲಿ ಪ್ರತಿಯೊಂದೂ ದೊಡ್ಡ ಪ್ರಮಾಣದಲ್ಲಿ ತಪ್ಪಾದವುಗಳನ್ನು ಹೊಂದಿವೆ. ಹೀಗಾಗಿ ಕೆಲವೊಂದು ಮುಖ್ಯವಾದ ಅಂಶದಲ್ಲಿ ಒಂದಕ್ಕೊಂದು ವಿರೋಧವಾಗಿವೆ. ಈ ಪದ್ಧತಿಯು ದಿಗ್ಭ್ರಮೆಗೂ, ಗೊಂದಲಗಳ ಚಕ್ರವ್ಯೂಹಕ್ಕೆ ನಡೆಸುತ್ತದೆ. ಮತ್ತೊಂದು ಪದ್ಧತಿಯೆಂದರೆ, ನಮ್ಮ ಮನಸ್ಸಿನ ಎಲ್ಲಾ ಪೂರ್ವಕಲ್ಪಿತ

ಅಭಿಪ್ರಾಯಗಳನ್ನು ಕಳಚಿಹಾಕುವುದು ಮತ್ತು ದೇವರು ತನ್ನ ವಾಕ್ಯದಲ್ಲಿ ಪ್ರಕಟಿಸಿರುವುದಕ್ಕಿಂದ ಹೆಚ್ಚಾಗಿ ಯಾರೂ ದೇವರ ಯೋಜನೆಗಳನ್ನು ಅರಿತುಕೊಳ್ಳಲು ಸಾಧ್ಯವಿಲ್ಲ ಎಂಬುದನ್ನು ನೆನಪುಮಾಡುವುದು. ಇದನ್ನು ದೀನ ಹೃದಯವುಳ್ಳವರಿಗೆ ಮತ್ತು ಅಂಥಾಃ ನಿಷ್ಠಾವಂತರಿಗೆ ಮತ್ತು ಅದರ ಮಾರ್ಗದರ್ಶನ ಮತ್ತು ಸೂಚನೆಗಳನ್ನು ನಿಷ್ಕಪಟವಾಗಿ ಬಯಸುವವರಿಗೆ ಮಾತ್ರವೇ ನೀಡಲ್ಪಟ್ಟಿದೆ. ನಾವು ಅದು ಅರ್ಥಮಾಡಿಕೊಳ್ಳಲು ಉಚಿತ ಸಮಯ ಬಂದಾಗ ದೈವಿಕವಾಗಿ ನೀಡಲ್ಪಟ್ಟಿರುವ ವಿವಿಧ ಸಹಾಯಗಳನ್ನು ಉಪಯೋಗಿಸುವುದರ ಮೂಲಕ ಆತನ ಮಹಾ ಕರ್ತೃವಿನಿಂದ ಅದರ ತಿಳುವಳಿಕೆಗೆ ನಡೆಸಲ್ಪಡುತ್ತೇವೆ (ಎಫೆಸ 4:11–16 ನೋಡಿರಿ).

ಈ ವಿದ್ಯಾರ್ಥಿಗಳ ಸಹಾಯಾರ್ಥವಾಗಿ, ಈ ಕಾರ್ಯವನ್ನು ವಿಶೇಷವಾಗಿ ವಿನ್ಯಾಸಗೊಳಿಸಲಾಗಿದೆ. ಜಾತ್ಯಾತೀತ ಇತಿಹಾಸವನ್ನು ಪರಿಶುದ್ಧ ಗ್ರಂಥಗಳ ಹೇಳಿಕೆಗಳನ್ನು ಸಾಬೀತುಪಡಿಸಬೇಕಾದ ಸಂದರ್ಭ ಗಳನ್ನು ಹೊರತುಪಡಿಸಿ ಮಿಕ್ಕ ಅದರ ಎಲ್ಲಾ ಉಲ್ಲೇಖಗಳು ದೇವರ ವಾಕ್ಯಗಳೇ ಆಗಿವೆ ಎಂಬುದನ್ನು ಗಮನಿಸಬೇಕಾಗುತ್ತದೆ. ಆಧುನಿಕ ದೈವಜ್ಞಾನ ಪಂಡಿತರುಗಳ ಸಾಕ್ಷ್ಯಕ್ಕೆ ಯಾವುದೇ ಬೆಲೆಯನ್ನು ನೀಡಿಲ್ಲ ಮತ್ತು ಮುಂಚಿನ ಪಿತೃಗಳೆಂದು ಕರೆಯಲ್ಪಡುವವರ ಸಾಕ್ಷ್ಯಗಳನ್ನು ಕೈಬಿಡಲಾಗಿದೆ. ಅವರಲ್ಲಿ ಅನೇಕರು ಇಲ್ಲಿ ಹೇಳಿರುವ ಆಲೋಚನೆಗಳಿಗೆ ಸಾಮರಸ್ಯವಾಗಿ ಸಾಕ್ಷಿ ಹೇಳಿದ್ದಾರೆ, ಆದರೆ ಅವುಗಳು ಪ್ರಸ್ತುತದ ಮತ್ತು ಎಲ್ಲಾ ಸಮಯಗಳಲ್ಲಿ ಕೆಲವೊಂದು ಸಿದ್ಧಾಂತಗಳ ಮೇಲೆ ವಿಶ್ವಾಸವಿಡುವುದರಲ್ಲಿ ಕಂಡುಬರುವ ಸಾಮಾನ್ಯ ವಿಫಲತೆಯಾಗಿದೆ ಎಂಬುದಾಗಿ ನಾವು ನಂಬುತ್ತೇವೆ. ಯಾಕೆಂದರೆ, ಅವರು ವಿಶ್ವಾಸವಿಟ್ಟಿದ್ದ ಇತರರು ಹಾಗೆಯೇ ಮಾಡಿದ್ದಾರೆ. ಇದು ಸ್ಪಷ್ಟವಾಗಿ ದೋಷದ ಫಲಪ್ರದ ಕಾರಣವಾಗಿದೆ. ಅನೇಕ ಒಳ್ಳೆಯ ಜನರು ಎಲ್ಲಾ ಒಳ್ಳೆಯ ಮನಸಾಕ್ಷಿಯಲ್ಲೂ ದೋಷವನ್ನು ನಂಬಿದ್ದಾರೆ ಮತ್ತು ಕಲಿಸಿದ್ದಾರೆ (ಅ.ಕೃ. 26:9 ನೋಡಿರಿ). ಸತ್ಯಾನ್ವೇಷಿಗಳು ಸಂಪ್ರದಾಯವೆಂಬ ಕೆಸರು ತುಂಬಿದ ತಮ್ಮ ಪಾತ್ರೆಗಳನ್ನು ಖಾಲಿ ಮಾಡಿ ಅದನ್ನು ದೇವರ ವಾಕ್ಯವೆಂಬ ಸತ್ಯದ ಕಾರಂಜಿಯಲ್ಲಿ ತುಂಬಿಸಿ ಕೊಳ್ಳಬೇಕಾಗಿದೆ. ಮತ್ತು ಸತ್ಯಾನ್ವೇಷಿಗಳನ್ನು ಆ ಕಾರಂಜಿಗೆ ನಡೆಸುವವರನ್ನು ಹೊರತುಪಡಿಸಿ ಬೇರೆ ಯಾವುದೇ ಧಾರ್ಮಿಕ ಬೋಧನೆಗಳಿಗೂ ಬೆಲೆ ಕೊಡಬಾರದು.

ಯಾಕೆಂದರೆ, ಇಡೀ ಸತ್ಯವೇದದ ಮತ್ತು ಅದರ ಬೋಧನೆಗಳ ಸಾಮಾನ್ಯವಾದ ಮತ್ತು ಆತುರದ ಪರೀಕ್ಷೆಗೆ ಸಹಾ ಈ ಕಾರ್ಯವು ತುಂಬಾ ಚಿಕ್ಕದಾಗಿದೆ; ಆದರೆ ನಮ್ಮ ದಿನಗಳ ಅವಸರವನ್ನು ಗುರುತಿಸಿ ವಸ್ತು ವಿಷಯಗಳ ಪ್ರಾಮುಖ್ಯತೆಯು ಅನುಮತಿಸಲು ಕಂಡುಬರುವಷ್ಟು ಸಂಕ್ಷಿಪ್ತವಾಗಿರಲು ನಾವು ಶ್ರಮಿಸಿದ್ದೇವೆ.

ಆಸಕ್ತ ವಿದ್ಯಾರ್ಥಿಗೆ ನಾವು ಈ ಕಾರ್ಯದ ಬಗ್ಗೆ ಆತನು ಕೇವಲ ಹುರುಳಿಲ್ಲದೆ ಮೇಲ್ನೋಟಕ್ಕೆ ಓದಿದರೆ ಅದು ಅವನಿಗೆ ನಿಷ್ಪ್ರಯೋಜಕ ಎಂದು ಸಲಹೆ ನೀಡುತ್ತೇವೆ ಮತ್ತು ಸಲಹೆ ಮಾಡಿದ ಯೋಜನೆಯ ಬಗ್ಗೆ ಅದರ ಪ್ರಭಾವ ಮತ್ತು ಸಾಮರಸ್ಯವನ್ನು ನಿರೀಕ್ಷಿಸುವದು ಮತ್ತು ಪರಿಶುದ್ಧ ಗ್ರಂಥಗಳ ಸಾಕ್ಷ್ಯಗಳನ್ನು ಇಲ್ಲಿ ಪ್ರಸ್ತುತಿಪಡಿಸಿರುವದು ವ್ಯರ್ಥವಾಗುತ್ತದೆ. ನಾವು ಸತ್ಯದ ವಿವಿಧ ತುಣುಕುಗಳನ್ನು ಪ್ರಸ್ತುತಿಪಡಿಸಲು ಸಾಧ್ಯಂತವಾಗಿ ಪ್ರಯಾಸಪಡುತ್ತಿದ್ದೇವೆ. ಇದು ಅಂಥಾಃ ಭಾಷೆಯಲ್ಲಿ ಮಾತ್ರವಲ್ಲ, ಎಲ್ಲಾ ವರ್ಗಗಳ ಓದುಗರು ವಿಷಯವನ್ನು ಮತ್ತು ಸಾಮಾನ್ಯ ಯೋಜನೆಯನ್ನು ಸ್ಪಷ್ಟವಾಗಿ ಗ್ರಹಿಸುವಂತೆ ಅನುವು ಮಾಡಿಕೊಡುತ್ತದೆ. ಯಾವುದೇ ವೈಜ್ಞಾನಿಕ ಸಂಗತಿಯ ಸಾಧ್ಯಂತ ಮತ್ತು ಕ್ರಮಬದ್ಧವಾದ ಅಧ್ಯಯನದ ಅಗತ್ಯವಿರುವಂತೆ ಮುಖ್ಯವಾಗಿ ದೈವಿಕ ಪ್ರಕಟನೆಯ ವಿಜ್ಞಾದಲ್ಲಿಯೂ ಇರಬೇಕಾಗುತ್ತದೆ ಮತ್ತು ಈ ಕಾರ್ಯದಲ್ಲಿ ಅದು ಎರಡರಷ್ಟು ಅವಶ್ಯವಾಗಿದೆ. ವಾಸ್ತವವಾಗಿ ಈ ಕಾರ್ಯದಲ್ಲಿ, ಅದು ದೈವಿಕವಾಗಿ ಪ್ರಕಟಗೊಂಡ ಗ್ರಂಥಗಳ ಸತ್ಯದಲ್ಲಿ ಅಗತ್ಯವಾಗಿರುವಂತೆ ಅದು ವಸ್ತು ವಿಷಯದ ಪರೀಕ್ಷೆಯಾಗಿದೆ, ನಾವು ತಿಳಿದಿರುವಂತೆ, ಇದು ಯಾವುದೇ ಕಾರ್ಯಕ್ಕಿಂತ ಬೇರೆಯಾದ ದೃಷ್ಟಿಕೋನವನ್ನು ಹೊಂದಿದೆ. ಕ್ರೈಸ್ತರಿಂದ ಸಾವಾನ್ಯವಾಗಿ ನಿರ್ಲಕ್ಷಿಸಲ್ಪಟ್ಟಿರುವ ಅನೇಕ ಸಂಗತಿಗಳನ್ನು ಆದರಿಸುವ ಪ್ರಸ್ತಾಪ ಮಾಡಲು ನಾವು ಕ್ಷಮೆ ಬೇಡಬೇಕಾಗಿಲ್ಲ – ಇತರೆ ಸಂಗತಿಗಳಲ್ಲಿ, ಕರ್ತನ ಬರೋಣ, ಹಳೆಯ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆಯ ಪ್ರವಾದನೆಗಳು ಮತ್ತು ಸಂಕೇತಗಳು. ಪರಿಶುದ್ಧ ಗ್ರಂಥದ ಅತ್ಯಂತ ಪ್ರಾಮುಖ್ಯವಾದ ಬೋಧನೆಗಳನ್ನು ಕಡೆಗಣಿಸುವ ಅಥವಾ ಬಿಟ್ಟುಬಿಡುವ ವೇದಾಂತ ಶಾಸ್ತ್ರದ ಯಾವುದೇ ಪದ್ಧತಿಯನ್ನು ಪ್ರಸ್ತುತಿಪಡಿಸಲಾಗದು, ಅಥವಾ ಒಪ್ಪಿಕೊಳ್ಳಲಾಗದು. ಆದಾಗ್ಯೂ, ಪ್ರವಾದನೆ ಮತ್ತು ಇತರ ಧರ್ಮಗ್ರಂಥಗಳನ್ನು ಶ್ರದ್ಧೆ, ನಿಷ್ಠಾವಂತಿಕೆ ಮತ್ತು ಪೂಜ್ಯಭಾವದ ಅಧ್ಯಯನದ ನಡುವೆ ವ್ಯಾಪಕವಾದ ವ್ಯತ್ಯಾಸವನ್ನು ಗುರುತಿಸಲಾಗಿದೆ ಎಂದು ನಾವು ನಂಬುತ್ತೇವೆ. ನೆರವೇರಿ ಕೊನೆಗೊಂಡ ಐತಿಹಾಸಿಕ ಸಂಗತಿಗಳ ಬೆಳಕಿನಲ್ಲಿ ಅಧ್ಯಯನ ಮಾಡಿ, ಶುದ್ಧವಾದ ಸಾಮಾನ್ಯಜ್ಞಾನ ಅನುಮೋದಿಸುವ

ತೀರ್ಮಾನಗಳನ್ನು, ಸಾಮಾನ್ಯ ಊಹಾಪೋಹಗಳನ್ನು ದೈವೀಕ ಪ್ರವಾದನೆಗೆ ಅನ್ವಯಿಸುವುದಾದರೆ – ಅದು ಬಹಳಮಟ್ಟಿಗೆ ಸಡಿಲ ನಿಯಂತ್ರಣದ ಒರಟು ಸಿದ್ಧಾಂತವನ್ನು ಮತ್ತು ಅಸ್ಪಷ್ಟವಾದ ಭ್ರಾಂತಿಯನ್ನು ಕೊಡುತ್ತದೆ ಎಂಬ ವ್ಯಾಪಕವಾದ ವ್ಯತ್ಯಾಸವನ್ನು ಗುರುತಿಸಬಹುದಾಗಿದೆ. ಈ ಅಪಾಯಕಾರಿ ಅಭ್ಯಾಸಕ್ಕೆ ಬೀಳುವವರು ಸಾಮಾನ್ಯವಾಗಿ ಪ್ರವಾದನೆಯ ವಿದ್ಯಾರ್ಥಿಗಳಾಗುವ ಬದಲು ಪ್ರವಾದಿಗಳಾಗಿ (?) ಬೆಳೆಯುತ್ತಾರೆ.

ದೇವರು ಬಹಿರಂಗಪಡಿಸಿದ ಆತನ ಉದ್ದೇಶಗಳ ಅಧ್ಯಯನಕ್ಕಿಂತ ಶ್ರೇಷ್ಟವಾದ ಮತ್ತು ಉದಾತ್ತವಾದ ಕಾರ್ಯ ಮತ್ತೊಂದಿಲ್ಲ – “ದೇವದೂತರಿಗೂ ಈ ಸಂಗತಿಗಳನ್ನು ಲಕ್ಷ್ಯವಿಟ್ಟು ನೋಡಬೇಕೆಂಬ ಅಪೇಕ್ಷೆಯುಂಟು” (1 ಪೇತ್ರ 1:12). ದೇವರ ಜ್ಞಾನವು ಮುಂದಣ ಪ್ರವಾದನೆಗಳನ್ನು, ಪ್ರಸ್ತುತ ಮತ್ತು ಹಿಂದಣ ಹೇಳಿಕೆಗಳನ್ನು ಒದಗಿಸುತ್ತವೆ ಎಂಬ ಸತ್ಯವು ತಾನೇ ಯೆಹೋವನಿಂದ ತನ್ನ ಕೆಲವು ಮಕ್ಕಳ ಮೂರ್ಖತನವನ್ನು ಆಕ್ಷೇಪಿಸಲಾಗಿದೆ. ಅವರುಗಳು ತಮ್ಮ ತಿಳಿಗೇಡಿತನವನ್ನು ಮತ್ತು ಆತನ ವಾಕ್ಯದ ಅಧ್ಯಯನವನ್ನು ಮಾಡುವಲ್ಲಿ ನಿರ್ಲಕ್ಷತೆಯನ್ನು ತೋರಿ “ಮತ್ತಾಯನ ಐದನೆಯ ಅಧ್ಯಾಯದಲ್ಲಿ ಯಾವ ಮನುಷ್ಯನನ್ನೂ ರಕ್ಷಿಸುವ ಅನೇಕ ಸಂಗತಿಗಳುಂಟು” ಎಂದು ಹೇಳುವವರನ್ನು ಆಕ್ಷೇಪಿಸುತ್ತಾನೆ. ಪ್ರವಾದನೆಯು ಮುಂದಣವುಗಳ ಬಗ್ಗೆ ನಮ್ಮ ಕುತೂಹಲವನ್ನು ತಣಿಸುವಂತೆ ಮಾತ್ರ ನೀಡಲಾಗಿದೆ ಎಂದು ನಾವು ಭಾವಿಸಕೂಡದು, ದೇವರ ಪ್ರತಿಷ್ಠೆಹೊಂದಿದ ಮಗುವು ಆತನ ಯೋಜನೆಗಳ ಬಗ್ಗೆ ಸುಸ್ಪಷ್ಟವಾದ ಪರಿಚಯ ಹೊಂದಿಕೊಳ್ಳಬೇಕು, ಹೀಗೆ ಆತನನ್ನು ಅದೇ ಯೋಜನೆಯಲ್ಲಿ ತನ್ನ ಆಸಕ್ತಿಯನ್ನು, ಅನುಕಂಪವನ್ನೂ ಹುದುಗಿಸಿಕೊಂಡು ದೇವರ ದೃಷ್ಟಿಯಲ್ಲಿನ ಪ್ರಸ್ತುತ ಮತ್ತು ಭವಿಷ್ಯದ ಸಂಗತಿಗಳ ಬಗ್ಗೆ ಆದರವುಳ್ಳವನನ್ನಾಗಿ ಮಾಡಬೇಕೆಂಬುದೇ ಅದರ ಉದ್ದೇಶವಾಗಿದೆ. ಈ ರೀತಿಯಲ್ಲಿ ದೇವರ ಕಾರ್ಯದಲ್ಲಿ ಆಸಕ್ತಿ ಹೊಂದಿಕೊಳ್ಳುವಾಗ, ಆತನು ಆತ್ಮನಿಂದಲೂ. ತಿಳುವಳಿಕೆಯಿಂದಲೂ ಕೇವಲ ಸೇವಕನಾಗಿ ಅಲ್ಲ, ಆದರೆ ಆತನ ಮಗುವಾಗಿ, ಬಾಧ್ಯಸ್ಥನಾಗಿ ಸಹಾ ಸೇವೆ ಮಾಡಬಹುದಾಗಿದೆ. ಅಂತಹದ್ದನ್ನು ಬಹಿರಂಗ ಪಡಿಸುವುದು, ಈಗ ಇರುವ ಪ್ರಭಾವವನ್ನು ಪ್ರತಿರೋಧಿಸುತ್ತದೆ. ಜಾಗರೂಕ ಅಧ್ಯಯನದ ಪರಿಣಾಮವು ನಂಬಿಕೆಯನ್ನು ಬಲಪಡಿಸಿ ಪವಿತ್ರತೆಗೆ ನಡೆಸುವುದಲ್ಲದೆ ಬೇರೆನೂ ಅಲ್ಲ.

ಪಾಪ ಮತ್ತು ಅದರ ಪರಿಣಾಮಗಳಿಂದ ಲೋಕವನ್ನು ಪುನರುದ್ಧಾರಗೊಳಿಸುವ ದೇವರ ಯೋಜನೆಯನ್ನು ತಿಳಿಯದೆ, ಹೆಸರು ಮಾತ್ರದ ಸಭೆಯವರು ತಮ್ಮ ತಪ್ಪು ಕಲ್ಪನೆಯಿಂದಾಗಿ ಅದರ ಪ್ರಸ್ತುತ ಸ್ಥಿತಿಯನ್ನು, ಅದನ್ನು ಸಾಧಿಸುವದರಲ್ಲಿ ಏಕೈಕ ಪಾರುಪತ್ಯಗಾರರಾಗಿದ್ದಾರೆ, ಸುವಾರ್ತೆಯು ಸುಮಾರು ಹತ್ತೊಂಬತ್ತು ಶತಮಾನಗಳಿಂದ ಬೋಧಿಸಲ್ಪಟ್ಟ ನಂತರದಲ್ಲಿ ಪ್ರಪಂಚದ ಇಂದಿನ ಪರಿಸ್ಥಿತಿಯು ಪ್ರತಿಯೊಂದು ಆಲೋಚನಾಪರರ ಮನದಲ್ಲಿ ಈ ತಪ್ಪು ತಿಳುವಳಿಕೆಯ ಬಗ್ಗೆ ಗಂಭೀರವಾದ ಅನುಮಾನಗಳನ್ನು ಹುಟ್ಟಿಸುವುದಾಗಿದೆ. ಮತ್ತು ಅಂಥಾಃ ಅನುಮಾನಗಳು ಸತ್ಯಕ್ಕಿಂತ ಕಡಿಮೆಯಾದ ಯಾವುದರಿಂದಲೂ ನಿವಾರಿಸುವುದು ಸಾಧ್ಯವಿಲ್ಲ. ನಿಜವಾಗಿಯೂ, ಪ್ರತಿಯೊಬ್ಬ ಚಿಂತನಾಶೀಲ ವೀಕ್ಷಕರಿಗೆ ಎರಡು ಸಂಗತಿಗಳಲ್ಲಿ ಒಂದು ಸುವ್ಯಕ್ತವಾಗಬೇಕಾಗಿವೆ. ಒಂದೋ ಕ್ರೈಸ್ತ ಸಭೆಯು ಪ್ರಸ್ತುತ ಯುಗದಲ್ಲಿ ಮತ್ತು ಅದರ ಪ್ರಸ್ತುತ ಪರಿಸ್ಥಿತಿಯಲ್ಲಿ ಅದರ ಅಧಿಕಾರ ಸ್ಥಾನವು ಲೋಕವನ್ನು ಮಾರ್ಪಡಿಸುವುದಾಗಿದೆ ಎಂದು ಊಹಿಸಿ ಮಹಾತಪ್ಪು ಮಾಡಿದೆ ಅಥವಾ ದೇವರ ಯೋಜನೆಯು ಶೋಚನೀಯವಾಗಿ ಸೋತುಹೋಗಿದೆ ಎಂಬುದು. ಈ ಸಂದಿಗ್ಧತೆಯ ಯಾವ ಧ್ವನಿಯನ್ನು ನಾವು ಒಪ್ಪಿಕೊಳ್ಳಬೇಕು? ಅನೇಕರು ಎರಡನೆಯದನ್ನು ಒಪ್ಪಿಕೊಂಡಿದ್ದಾರೆ, ನಿಸ್ಸಂದೇಹವಾಗಿ ಇನ್ನೂ ಹೆಚ್ಚಿನವರು ಅದನ್ನೇ ಒಪ್ಪಿಕೊಳ್ಳುತ್ತಾರೆ ಮತ್ತು ಧರ್ಮನಿಂದಕ ವರ್ಗವನ್ನು ಗುಪ್ತವಾಗಿ ಇಲ್ಲವೇ ಬಹಿರಂಗವಾಗಿ ಉಬ್ಬಿಸುತ್ತಾರೆ. ಪ್ರಾಮಾಣಿಕವಾಗಿ ಬಿದ್ದುಹೋಗುತ್ತಿರುವ ಅಂಥವರಿಗೆ ಸಹಾಯ ಮಾಡುವುದು ಈ ಸಂಪುಟದ ಅನೇಕ ಉದ್ದೇಶಗಳಲ್ಲಿ ಒಂದಾಗಿದೆ.

ಪುಟ ಐದರಲ್ಲಿ ನಾವು ಲಂಡನ್ ಮಿಷನರಿ ಸೊಸೈಟಿಯವರು, "London Missionary Society" ನಂತರದಲ್ಲಿ ಸಂಯುಕ್ತ ಸಂಸ್ಥಾನದ “ಮಹಿಳಾ ಪ್ರೆಸ್ಬಿಟೇರಿಯನ್ ಧರ್ಮಪ್ರಚಾರಕ ಸಮಿತಿ” (Women Presbyterian Board of Missions) ಇವರು ಪ್ರಕಟಿಸಿದ ಒಂದು ರೇಖಾಚಿತ್ರವನ್ನು ನೀಡಿದ್ದೇವೆ. ಇದಕ್ಕೆ “ವಿದೇಶಿ ಧರ್ಮಪ್ರಚಾರಕ ಮಂಡಲಿ ಪರವಾಗಿ ಒಂದು ಮೌನ ಮನವಿ” (Mute appeal on Behalf of Foreign Missions) ಎಂದು ಕರೆಯಲಾಗಿದೆ. ನಾವು ರಕ್ಷಣೆ ಹೊಂದಬೇಕಾಗಿರುವ ಆಕಾಶದ ಕೆಳಗೆ ಅಥವಾ ಮನುಷ್ಯರೊಳಗೆ ಕೊಡಲ್ಪಟ್ಟಿರುವ ಏಕೈಕ ಹೆಸರಿನ – ಅಂಧಕಾರದ ಮತ್ತು ಅಜ್ಞಾನದ ಒಂದು ದುಃಖದ ಕಥೆಯನ್ನು ಅದು ತಿಳಿಸುತ್ತದೆ.

"ದಿ ವಾಚ್‌ಮನ್" (THE WATCHMAN) ಎಂಬ ಚಿಕಾಗೋದ Y.M.C.A. ಸಂಚಿಕೆಯು ಈ ರೇಖಾಚಿತ್ರವನ್ನು ಪ್ರಕಟಿಸಿ ಅದರ ಬಗ್ಗೆ ಹೀಗೆ ವ್ಯಾಖ್ಯಾನಿಸಿದೆ:–

ಕೆಲವರ ಕಲ್ಪನೆಗಳು ಬಹಳ ಅಸ್ಪಷ್ಟವಾಗಿವೆ ಮತ್ತು ಲೋಕದ ಆತ್ಮೀಕ ಪರಿಸ್ಥಿತಿಗೆ ಅನಿಶ್ಚಿತವಾಗಿವೆ. ನಾವು ಈ ದೇಶದಲ್ಲಿಯೂ ಲೋಕದೆಲ್ಲೆಡೆಗಳಲ್ಲಿಯೂ ನಡೆಯುತ್ತಿರುವ ಮಹಿಮಾ ಭಕ್ತಿ ಸಂಜೀವನಾ ಕಾರ್ಯಗಳ ಬಗ್ಗೆ, ವಿವಿಧ ದಿಕ್ಕಿನಲ್ಲಿ ನಡೆಯುತ್ತಿರುವ ನೂತನ ಸೇವಾ ಪ್ರಯತ್ನಗಳ ಬಗ್ಗೆ ಕೇಳಿದ್ದೇವೆ. ಒಂದು ದೇಶದ ನಂತರ ಮತ್ತೊಂದು ದೇಶವು ಸುವಾರ್ತೆಗಾಗಿ ತೆರೆಯಲ್ಪಡುತ್ತಿದೆ. ಇದರ ಹರಡುವಿಕೆಗಾಗಿ ದೊಡ್ಡ ಮೊತ್ತವು ಸಮರ್ಪಿಸಲ್ಪಡುತ್ತಿದೆ: ಈ ಲೋಕದ ರಾಷ್ಟ್ರಗಳಲ್ಲಿ ಕ್ರೈಸ್ತಧರ್ಮ ಬೋಧನೆಗಾಗಿ ಯಥೋಚಿತವಾದ ಪ್ರಯತ್ನಗಳು ನಡೆಯುತ್ತಿವೆ ಎಂಬ ಕಲ್ಪನೆಯು ನಮಗುಂಟಾಗುತ್ತಿದೆ. ಇಂದು ಈ ಲೋಕದ ಜನಸಂಖ್ಯೆಯು ಸುಮಾರು 1,424,000,000 ಮಿಲಿಯನ್ ಎಂದು ಅಂದಾಜಿಸಲಾಗಿದೆ. ಈ ರೇಖಾಚಿತ್ರವನ್ನು ಅಧ್ಯಯನ ಮಾಡುವುದರಿಂದ ಅರ್ಧಕ್ಕಿಂತಲೂ ಹೆಚ್ಚು, ಹೆಚ್ಚು ಕಡಿಮೆ ಮೂರನೆಯ ಎರಡರಷ್ಟು ಅನ್ಯಜನರು ಇದ್ದಾರೆಂಬುದು ನಮಗೆ ಕಂಡು ಬರುತ್ತದೆ. ಉಳಿದವರು ಹೆಚ್ಚಾಗಿ ಮಹಮದೀಯರೋ ಅಥವಾ ಈ ಮಹಾಸ್ವಧರ್ಮಭ್ರಷ್ಟ ಕ್ರೈಸ್ತಸಭೆಯವರೋ ಆಗಿದ್ದಾರೆ. ಅವರ ಧರ್ಮವು ಪ್ರಾಯೋಗಾತ್ಮಕವಾಗಿ ಕ್ರೈಸ್ತೀಕರಿಸಿದ ವಿಗ್ರಹಾರಾಧನೆಯಾಗಿದೆ. ಅವರು ಕ್ರಿಸ್ತನ ಸುವಾರ್ತೆಯನ್ನು ಅಗಣನೀಯವಾಗಿ ಹಿಡಿದಿದ್ದಾರೆ ಅಥವಾ ಬೋಧಿಸುತ್ತಿದ್ದಾರೆ ಎಂದು ಹೇಳಬಹುದು. 116 ಮಿಲಿಯನ್ ಹೆಸರುಮಾತ್ರದ ಪ್ರೊಟೆಸ್ಟೆಂಟ್‌ಗಳಿಗೆ ಸಂಬಂಧಿಸಿದಂತೆ ಜರ್ಮನಿಯಲ್ಲಿ, ಇಂಗ್ಲೇಂಡ್ ಮತ್ತು ಈ ದೇಶವು ಹೆಚ್ಚಿನ ಧರ್ಮನಿಂದನೆಯು ಅನುಪಾತವಿದೆ. ಧರ್ಮನಿಂದನೆಗೆ – ಆಳವಾಗಿ ಅಂಧಕಾರಕ್ಕೆ, ಸಾಧ್ಯವಾದರೆ ಅನ್ಯಜನರಿಗಿಂತ ಹೆಚ್ಚಾಗಿ ಜಾರಿ ಹೋಗಿದ್ದಾರೆ – ಎಷ್ಟೋ ಜನರು ಮೂಢನಂಬಿಕೆಗಳಿಂದ ಕುರುಡರಾಗಿದ್ದಾರೆ ಅಥವಾ ವಿಪರೀತವಾದ ಮೌಢ್ಯದಲ್ಲಿ ಹೂತು ಹೋಗಿದ್ದಾರೆ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕಾಗಿದೆ; ಆದುದರಿಂದ, ಎಂಟು ಮಿಲಿಯನ್ ಜನರು ಇನ್ನೂ ನಜರೇತಿನ ಯೇಸುವನ್ನು ತಿರಸ್ಕರಿಸುತ್ತಿದ್ದು, ಆತನ ಹೆಸರನ್ನು ಹೊತ್ತಿರುವ 300 ಮಿಲಿಯನ್‌ಗೂ ಹೆಚ್ಚು ಜನರು ಆತನ ಸ್ವವಿಶ್ವಾಸವನ್ನು ತ್ಯಾಗವಮಾಡಿ ಧರ್ಮಭ್ರಷ್ಟರಾಗಿರುವಾಗ, 170 ಮಿಲಿಯನ್‌ಗೂ ಹೆಚ್ಚು ಮಂದಿ ಮಹಮದ್‌ನ ಅಲ್ಲಾನ ಮುಂದೆ ಬಾಗುವಾಗ, 170 ಮಿಲಿಯನ್‌ಗೂ ಹೆಚ್ಚು ಜನರು ಈ ದಿನದವರೆಗೂ ತಮ್ಮ ಸ್ವಂತ ಪೂರ್ವಿಕರ, ಸತ್ತ ಮಹಾಪುರುಷರುಗಳ, ಅಥವಾ ಸ್ವತಃ ಸೈತಾನನ

**ರೇಖಾಚಿತ್ರ**

ಇದು ಮಾನವ ಕುಲವನ್ನು ಧರ್ಮದ ಆಧಾರದಲ್ಲಿ ವಿಂಗಡಿಸಿದ ಸರಿಯಾದ ಮತ್ತು ಸಂಬಂಧಿತ ಸಂಖ್ಯೆಯನ್ನು ಪ್ರದರ್ಶಿಸುತ್ತದೆ*

*Exhibiting the Actual and Relative Numbers of Mankind Classified According to Religion*



| ಅನ್ಯ ಜನಾಂಗಗಳು | ಮಹಮ–ದೀಯರು | ಯೆಹೂದ್ಯರು | ರೋಮನ್ ಕ್ಯಾಥೋಲಿಕ್ಸ್ | ಗ್ರೀಕ್ ಕ್ಯಾಥೋಲಿಕ್ಸ್ | ಪ್ರೊಟೆಸ್ಟೆಂಟ್ಸ್ |
|---|---|---|---|---|---|
| 856 ಮಿಲಿಯನ್ | 170 ಮಿಲಿಯನ್ | 8 ಮಿಲಿಯನ್ | 190 ಮಿಲಿಯನ್ | 84 ಮಿಲಿಯನ್ | 116 ಮಿಲಿಯನ್ |

* ಈ ಮೇಲ್ಕಂಡ ಅಂಕಿಅಂಶವು ಸುಮಾರು ಕ್ರಿ.ಶ. 1885–86ನೇ ಇಸವಿ ಪ್ರಕಾರ ಎಂದು ಭಾವಿಸಬಹುದಾಗಿದೆ (Editor).

ಸರಕುಗಳನ್ನೂ, ಕಲ್ಲುಗಳನ್ನೂ ಪೂಜಿಸುತ್ತಿದ್ದಾರೆ. ಎಲ್ಲರೂ ಒಂದಲ್ಲಾ ಒಂದು ರೀತಿಯಲ್ಲಿ ಸದಾಕಾಲಕ್ಕೂ ಆಶೀರ್ವಾದದಾಯಕನಾಗಿರುವ ಒಬ್ಬನೇ ದೇವರಾದ ನಮ್ಮ ಸೃಷ್ಟಿಕರ್ತನನ್ನು ಬಿಟ್ಟು ಆತನ ಸೃಷ್ಟಿಯನ್ನೇ ಪೂಜಿಸುವವರೂ, ಅದರ ಸೇವೆ ಮಾಡುವವರೂ ಆಗಿದ್ದಾರೆ. ಇದರಲ್ಲಿ ಆಲೋಚನಾಪರರಾದ ಕ್ರೈಸ್ತರ ಹೃದಯವನ್ನು ದುಃಖಿತವನ್ನಾಗಿ ಮಾಡುವ ಸಾಕಷ್ಟು ಸಂಗತಿಗಳು ಇದೆಯಲ್ಲವೇ?

ನಿಜವಾಗಿಯೂ ಇದೊಂದು ದುಃಖದಾಯಕ ಚಿತ್ರಣವಾಗಿದೆ. ಈ ರೇಖಾಚಿತ್ರವು ಅನ್ಯಜನರ, ಮಹಮದೀಯರ ಮತ್ತು ಯೆಹೂದ್ಯರ ನಡುವಿನ ವಿವಿಧ ಛಾಯೆಗಳನ್ನು ತೋರಿಸುವುದಾದಾಗ್ಯೂ ಕ್ರಿಸ್ತನ ಬಗ್ಗೆ ಇರುವ ಒಟ್ಟಾರೆ ಅಜ್ಞಾನದಲ್ಲಿ ಎಲ್ಲವೂ ಒಂದೇ ರೀತಿಯದಾಗಿದೆ. ಕೆಲವರು ಈ ದೃಷ್ಟಿಕೋನದಲ್ಲಿ ಕ್ರೈಸ್ತರ ಅನುಪಾತದ ಉಲ್ಲೇಖವು ಬಹಳಷ್ಟು ಕಪ್ಪಾಗಿದೆ ಎಂದು ಊಹಿಸುವುದಾದರೆ, ಮತ್ತು ನಿಜವಾಗಿಯೂ ಸ್ವಲ್ಪ ಹೆಚ್ಚಾಗಿಯೇ ಚಿತ್ರಿಸಲಾಗಿದೆ ಎಂದು ಮೊದಲಿಗೆ ಭಾವಿಸಬಹುದು. ಆದರೆ, ನಾವು ಇದಕ್ಕೆ ವಿರೋಧವಾಗಿ ಆಲೋಚಿಸುತ್ತೇವೆ. ಇದು ಹೆಸರು ಮಾತ್ರದ ಕ್ರೈಸ್ತತ್ವವನ್ನು ಸಾಧ್ಯವಾದಷ್ಟು ಹೆಚ್ಚು ಪ್ರಕಾಶಮಾನವಾಗಿಯೇ ಚಿತ್ರಿಸಿದೆ. ಉದಾಹರಣೆಯಾಗಿ, 116,000,000 ಜನರನ್ನು ಪ್ರೊತಸ್ತಾಂತರನ್ನಾಗಿ ಹಾಕಿರುವುದು ನಿಜವಾದ ಸಂಖ್ಯೆಗಿಂತ ಬಹಳಷ್ಟು ಜಾಸ್ತಿಯಾಗಿದೆ. ಹದಿನಾರು ಮಿಲಿಯನ್ ನಾವು ನಂಬುವಂತೆ ಹೇಳಿಕೊಳ್ಳುವ ವರ್ಷಗಳು ಹಿರಿಯ ಸಭಾ ಸದಸ್ಯರುಗಳ ಸಂಖ್ಯೆಯ ಬಗ್ಗೆಯಷ್ಟೇ ವ್ಯಕ್ತಪಡಿಸುತ್ತದೆ ಮತ್ತು ಒಂದು ಮಿಲಿಯನ್ "ಕ್ರಿಸ್ತ ಯೇಸುವಿನಲ್ಲಿ ಪರಿಶುದ್ಧರಾಗಿರುವ ಚಿಕ್ಕ ಹಿಂಡಿನ" ಉದಾರವಾದ ಅಂದಾಜಾಗಿದೆ ಎಂದು ನಾವು ಭಯಪಡುತ್ತೇವೆ. ಅವರುಗಳು "ಶರೀರಭಾವಕ್ಕೆ ಅನುಸಾರವಾಗಿ ನಡೆಯದೆ ಪವಿತ್ರಾತ್ಮನನುಸಾರವಾಗಿ ನಡೆಯುವವರು". ಸಭಾಸದಸ್ಯರ ಹೆಚ್ಚಿನ ಸಂಖ್ಯೆಯ ಅನುಪಾತದಲ್ಲಿ ಯಾವಾಗಲೂ ಚಿಕ್ಕ ಮಕ್ಕಳು ಮತ್ತು ಶಿಶುಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದೆಂಬುದನ್ನು ನೆನಪಿನಲ್ಲಿಡಬೇಕಾಗುತ್ತದೆ. ವಿಶೇಷವಾಗಿ ಇದು ಯೂರೋಪಿನ ದೇಶಗಳ ಪ್ರಕರಣಗಳಾಗಿವೆ. ಇವುಗಳು ಅನೇಕ ಕಡೆಗಳಲ್ಲಿ ಮಕ್ಕಳನ್ನು ಮೊದಲ ಬಾಲ್ಯಾವಸ್ಥೆಯಿಂದಲೇ ಸಭೆಯ ಸದಸ್ಯರೆಂದು ಪರಿಗಣಿಸಲಾಗುವುದು.

ಆದರೆ ಈ ಚಿತ್ರವು ಕಪ್ಪಾಗಿ ಕಾಣುವಂತೆ ಪತನಗೊಂಡ ಮಾನವ ಜಾತಿಯನ್ನು ಪ್ರಸ್ತುತಿಪಡಿಸುವ ಅತ್ಯಂತ ಕಪ್ಪಾದ ಚಿತ್ರವಾಗಿರುವುದಿಲ್ಲ. ಮೇಲಣ ಕಡಿತವು ಪ್ರಸ್ತುತದಲ್ಲಿ ಜೀವಿಸುತ್ತಿರುವ ಪೀಳಿಗೆಯನ್ನು ಮಾತ್ರವೇ ಪ್ರತಿನಿಧಿಸುವುದಾಗಿದೆ. ಹಿಂದಿನ ಕಳೆದುಹೋದ ಆರು ಸಹಸ್ರವರ್ಷಗಳ ಶತಮಾನದ ನಂತರ ಶತಮಾನಗಳನ್ನು ನಾವು ಪರಿಗಣಿಸುವಾಗ ಅದು ಮತ್ತೊಂದು ವಿಶಾಲವಾದ ಜನಸಮೂಹವನ್ನು ಅಳಿಸಿಹಾಕಿದೆ. ಸುಮಾರಾಗಿ ಅವರೆಲ್ಲರೂ ಅದೇ ತಿಳಿಗೇಡಿತನದಲ್ಲಿ ಮತ್ತು ಪಾಪದಲ್ಲಿ ಸುತ್ತಲ್ಪಟ್ಟಿದ್ದರು. ಈ ದೃಶ್ಯವು ಎಷ್ಟೋ ಅಂಧಕಾರವುಳ್ಳದ್ದಾಗಿದೆ! ಜನಪ್ರಿಯ ದೃಷ್ಟಿಕೋನದಲ್ಲಿ ಇದನ್ನು ಅವಲೋಕಿಸುವಾಗ, ಇದು ನಿಜವಾಗಿಯೂ ಭಯಂಕರವಾದ ಚಿತ್ರವಾಗಿದೆ.

ಇಂದಿನ ವಿವಿಧ ಮತಾಭಿಪ್ರಾಯಗಳು ಈ ಎಲ್ಲಾ ಬಿಲಿಯಾಂತರ ಮಾನವ ಕುಲವು ತಾವು ರಕ್ಷಣೆಹೊಂದಲೇ ಬೇಕಾದ ಪರಲೋಕದ ಕೆಳಗಣ ಒಂದೇ ಹೆಸರಿನ ಬಗ್ಗೆ ತಿಳುವಳಿಕೆ ಇಲ್ಲದವರಾಗಿದ್ದಾರೆ ಮತ್ತು ಅವರುಗಳು ನಿತ್ಯಯಾತನೆಯ ನೆಟ್ಟನೆಯ ರಸ್ತೆಯಲ್ಲಿದ್ದಾರೆ ಎಂಬುದನ್ನು ನಮಗೆ ಕಲಿಸಿಕೊಡುತ್ತದೆ. ಅದು ಮಾತ್ರವಲ್ಲ, ಬಹಳ ಅಲ್ಪ ಭಕ್ತಜನರನ್ನು ಹೊರತುಪಡಿಸಿ, ಈ ಎಲ್ಲಾ 116,000,000 ಪ್ರೊತಸ್ತಾಂತರದ್ದು ಅದೇ ಹಣೆ ಬರಹವಾಗಿದೆ ಎಂಬುದು ಖಚಿತ. ಹಾಗಾದರೆ, ಯೆಹೋವನ ಯೋಜನೆಗಳ ಮತ್ತು ಉದ್ದೇಶಗಳ ಅಂಥಾಃ ಘೋರ ಸಂಗತಿಗಳನ್ನು ನಂಬುವವರು ಸುವಾರ್ತಾಸೇವೆಯ ಸಾಹಸವನ್ನು ಮುಂದುವರಿಸುವಲ್ಲಿ ಶ್ರದ್ಧೆಯುಳ್ಳವರಾಗಿರುತ್ತಾರೆಂಬುದು ಆಶ್ಚರ್ಯಕರವಲ್ಲ – ವಿಸ್ಮಯವೆಂದರೆ, ಅವರುಗಳು ಅದರಿಂದ ಬುದ್ಧಿಭ್ರಮೆಗೊಳ್ಳುವುದಿಲ್ಲ. ಈ ರೀತಿಯಾಗಿ ನಂಬುವುದು, ಮತ್ತು ಅಂಥಾಃ ನಿರ್ಧಾರಗಳನ್ನು ಮೆಚ್ಚಿಕೊಳ್ಳುವುದು, ನಿಜವಾಗಿಯೂ ಜೀವನದ ಎಲ್ಲಾ ಸಂತೋಷವನ್ನು ಕೊಳ್ಳೆಹೊಡೆಯುತ್ತದೆ ಮತ್ತು ಪಕ್ರತಿಯ ಪ್ರಕಾಶಮಯ ಪ್ರತೀಕ್ಷೆಯನ್ನು ಮಂಕಾಗಿಸಿ ಮರೆಮಾಚುತ್ತದೆ.

ಅನ್ಯಜನರ ವಿಧಿಯ ಪ್ರಸ್ತಾಪದ ಬಗೆಗಿನ "ಸಂಪ್ರದಾಯ ಬದ್ಧತೆ"ಯನ್ನು ನಾವು ತಪ್ಪಾಗಿ ಹೇಳಿಲ್ಲವೆಂದು ತೋರಿಸಲು ನಾವು "A Mute Appeal on Behalf of Foreign Missions" ಎಂಬ ಕರಪತ್ರದಲ್ಲಿ ಪ್ರಕಟವಾದ ರೇಖಾ ಚಿತ್ರವನ್ನು ಉಲ್ಲೇಖಿಸುತ್ತೇವೆ. ಅದರ ಮುಕ್ತಾಯದ ವಾಕ್ಯವು ಈ ರೀತಿಯಲ್ಲಿದೆ – ಪರದೇಶದಲ್ಲಿರುವ ಬೃಹತ್ ಸಂತತಿಯವರಿಗೆ ಕ್ರೈಸ್ತ ಮತ ಬೋಧನೆಯನ್ನು ಮಾಡಿರಿ – ಅಲ್ಲಿ ಸುಮಾರು ಒಂದು ಸಾವಿರ ಮಿಲಿಯನ್ ಆತ್ಮಗಳು ಕ್ರಿಸ್ತನಿಲ್ಲದ ಹತಾಶೆಯಲ್ಲಿ ದಿನವೊಂದಕ್ಕೆ 1,00,000 ಜನರ ಲೆಕ್ಕದಲ್ಲಿ ಮರಣವಪ್ಪುತ್ತಿದ್ದಾರೆ.

ಆದರೆ, ಮಾನವ ಮತಾಭಿಪ್ರಾಯದ ದೃಷ್ಟಿಯಲ್ಲಿ ಇದೊಂದು ಮಂಕಾದ ಮನೋಭಾವವಾಗಿದ್ದರೂ, ಪರಿಶುದ್ಧ ಗ್ರಂಥವು ಪ್ರಕಾಶಮಯ ದೃಷ್ಟಿಕೋನವನ್ನು ಪ್ರಸ್ತುತಿಪಡಿಸುತ್ತದೆ, ಮತ್ತು ಅವುಗಳನ್ನು ಬೊಟ್ಟುಮಾಡಿ ತೋರಿಸುವುದು ಈ ಪುಟಗಳ ಉದ್ದೇಶವಾಗಿದೆ. ವಾಕ್ಯವು ಆದೇಶಿಸುವಂತೆ, ದೇವರ ಮಹಾರಕ್ಷಣಾ ಯೋಜನೆಯು ಎಂದಾದರೂ, ಮುಂದೆಯಾದರೂ ಅಂಥಾಃ ಸೋಲನ್ನನುಭವಿಸುತ್ತದೆ ಎಂದು ನಾವು ನಂಬುವುದಿಲ್ಲ. ಕಳವಳಗೊಂಡಿರುವ ದೇವರ ಮಗುವಿಗೆ ಇದು ಪ್ರವಾದಿಯಾದ ಯೆಶಾಯನು ಈ ಪರಿಸ್ಥಿತಿಯ ಬಗ್ಗೆ ಹೇಳಿರುವುದು ನೆಮ್ಮದಿಯನ್ನು ನೀಡುವುದಾಗಿದೆ. ಅದರಲ್ಲಿನ ಪರಿಹಾರವು ಇಂತಿದೆ – "ಇಗೋ ಕತ್ತಲು, ಭೂಮಿಯನ್ನು ಆವರಿಸಿದೆ, ಕಾರ್ಗತ್ತಲು ಜನಾಂಗಗಳನ್ನು ಮುಚ್ಚಿದೆ; ನಿನ್ನ ಮೇಲಾದರೋ ಯೆಹೋವನು ಉದಯಿಸುವನು, ಆತನ ತೇಜಸ್ಸು ನಿನ್ನಲ್ಲಿ ಕಾಣಿಸುವುದು. ಜನಾಂಗಗಳು ನಿನ್ನ ಬೆಳಕಿಗೆ ನೆರೆಯುವುವು, ಅರಸರು ನಿನ್ನಲ್ಲಿನ ಉದಯಪ್ರಕಾಶಕ್ಕೆ ಬರುವರು" (ಯೆಶಾಯ 60:2–3). ಈ ಪ್ರವಾದನೆಯಲ್ಲಿ ಗಾಢವಾದ ಅಂಧಕಾರವು ವಾಗ್ದಾನದ ಬಿಲ್ಲಿನಿಂದ ಪ್ರಕಾಶಗೊಳ್ಳುವುದು "ಅನ್ಯಜನರು (ಯೆಹೂದ್ಯೇತರ ದೇಶಗಳು) ನಿನ್ನ ಬೆಳಕಿಗೆ ಬರುವರು" (ಯೆಶಾಯ 60:3).

ಮುಂದುವರೆದ ದುಃಖ ಮತ್ತು ಲೋಕದ ಅಂಧಕಾರವು ಹಾಗೂ ಸತ್ಯದ ಮಂದಗತಿಯ ಪ್ರಗತಿಯು ಕ್ರೈಸ್ತ ಸಭೆಗೆ ರಹಸ್ಯವಾಗಿದೆ, ಮಾತ್ರವಲ್ಲದೆ ಲೋಕವು ತಾನೇ ಅದರ ಸ್ಥಿತಿಯನ್ನು ತಿಳಿದಿದೆ ಮತ್ತು ಅನುಭವಿಸಿದೆ. ಅಂಧಕಾರವು ಐಗುಪ್ತವನ್ನು ಮುಚ್ಚಿಕೊಂಡಂತೆ, ಈ ಅಂಧಕಾರವು ಆ ರೀತಿಯ ಅನುಭವವನ್ನು ಅರಿತುಕೊಳ್ಳುವುದಾಗಿದೆ. ಇದಕ್ಕೆ ಸಾಕ್ಷಿಯಾಗಿ, ಈ ಕೆಳಗಣ ಸಾಲುಗಳ ಸ್ಫೂರ್ತಿಯನ್ನು ಗಮನಿಸಿರಿ. ಇದನ್ನು ಫಿಲಿಡೆಲ್ಫಿಯಾ ಪತ್ರಿಕೆಯೊಂದರಿಂದ ಆರಿಸಿಕೊಳ್ಳಲಾಗಿದೆ. ಅನುಮಾನ ಮತ್ತು ಅಂಧಕಾರ ಒಂದಕ್ಕೊಂದು ಸಂಘರ್ಷಗೊಳ್ಳುವ ವಿವಿಧ ಶಾಲೆಗಳ ಮತಾಭಿಪ್ರಾಯಗಳಿಂದ ತೀವ್ರಗೊಂಡಿದ್ದು ದೇವರ ವಾಕ್ಯದ ಮೂಲಕವಾಗಿ ಹೊರಡುವ ಸತ್ಯದ ಕಿರಣಗಳಿಂದ ಇನ್ನೂ ಲೇಖಕನ ಮನಸ್ಸಿನಿಂದ ದೂರವಾಗಿಲ್ಲ:–

"ಜೀವನ ! ಒಂದು ದೊಡ್ಡ ರಹಸ್ಯ
ಯಾರು ಹೇಳಬಲ್ಲರು ಈ ನಿಸ್ಸಾರವಾದ ಮಣ್ಣು ದೇವರಿಗೇನು ಅಗತ್ಯ?
ಆತನ ಪ್ರಬಲ ಕೌಶಲ್ಯ ಕೈಗಳಿಂದ ರೂಪುಗೊಂಡಿದೆ
ಮನಸ್ಸು, ವಿಚಾರ, ಜೀವಾತ್ಮ ಮತ್ತು ಹಠಮಾರಿ ಚಿತ್ತ;
ಸಾಯಲೆಂದೇ ಹುಟ್ಟಿರುವ ಖಚಿತವಾದ ವಿಧಿ – ಮರಣ.
ನಂತರ ಎಲ್ಲಿ, ಓಹ್! ಈ ಕ್ಷಣಿಕ ಉಸಿರು ಎಲ್ಲಿ?
ಎಣಿಸಲಾಗದ ಜನಸಂದಣಿಯಲ್ಲಿ ಬದುಕಿದವರೂ,
ಸತ್ತವರೂ, ದೀರ್ಘಕಾಲ ನರಳಿದವರೂ ಅವರಲ್ಲಿ ಒಬ್ಬರಾದರೂ
ಹಿಂತಿರುಗಿ ಆ ಮಹಾಸಂಕಲ್ಪಕ್ಕೆ ಹೇಳಬಲ್ಲರು –
ಆ ಭವಿಷ್ಯ, ನಿಮ್ಮ ಮತ್ತು ನಮ್ಮದು,
ನಾವು ಪ್ರಾರ್ಥಿಸುತ್ತೇವೆ. ಓ ದೇವರೇ! ಒಂದಷ್ಟು ಹೊಸ ಕಿರಣಗಳಿಗೆ
ನಮ್ಮ ದಾರಿಯಲ್ಲಿ ಮಾರ್ಗದರ್ಶನ ಬೆಳಗು,
ನಂಬಿಕೆಯ ಆಧಾರದಿಂದಲ್ಲ, ಆದರೆ ಸ್ಪಷ್ಟ ದೃಷ್ಟಿಗೆ,
ಈ ಕತ್ತಲಿನ ಕರಿಮೋಡಗಳನ್ನು ಚದುರಿಸಿ;
ಈ ಅನುಮಾನ, ಈ ಭೀತಿ, ಈ ನಡುಗಿಸುವ ಭಯ;
ಈ ಆಲೋಚನೆಗಳು ನಮ್ಮ ಆಶೀರ್ವಾದವನ್ನು ಹಾಳುಗೆಡವುತ್ತವೆ.
ಅವಿಶ್ರಾಂತ ಮನಸ್ಸು, ದಿಟ್ಟತನದಿಂದ ತೂಗಿ
ದಿನದ ಸಿದ್ಧಾಂತಗಳನ್ನು ತಿರಸ್ಕರಿಸುತ್ತದೆ.
ಕಲಹದ ಪಂಥಗಳು ಮತ್ತು ಸಂಸ್ಥೆಗಳು
ಅವರ ನಿಯಮಗಳೊಂದಿಗೆ ವೈಚಾರಿಕತೆ ಪಡೆಯಲು
ಸಂಕೋಲೆಗಳನ್ನು ಸಕಾರಣವಾಗಿ ತೊರೆದು
ದಿನದ ಸಿದ್ಧಾಂತಗಳನ್ನು ತಿರಸ್ಕರಿಸುತ್ತದೆ.
ತಂದೆಯೇ ನೀನಿರುವಂತೆ ನಿನ್ನನ್ನು ನಾವು ತಿಳಿಯಬಯಸುತ್ತೇವೆ
ನಿನ್ನೊಂದಿಗೇ ನಮ್ಮ ಸ್ಥಳ – ನಂತರ ಈ ಅದ್ಭುತ ಯೋಜನೆಯಲ್ಲಿ ನಾವು ವಹಿಸುವ ಪಾತ್ರ,
ಅನಂತವಾದ ಸೃಷ್ಟಿಕರ್ತನು, ಮತ್ತು ಮನುಷ್ಯನು.
ದೃಷ್ಟಿಯನ್ನು ಮರೆಮಾಡುವ ಈ ಪರದೆಯನ್ನೆತ್ತು
ಮತ್ತೊಮ್ಮೆ ಆಜ್ಞಾಪಿಸು "ಬೆಳಕಾಗಲಿ" ಎಂದು
ನಿನ್ನ ಸಿಂಹಾಸನ ರಹಸ್ಯವನ್ನು ಯುಗಗಳಿಂದಲೂ
ಮರೆಯಾಗಿರುವದು ಈಗ ಬಹಿರಂಗವಾಗುತಿವೆ"

Life! great Mystery! who shall say
What need hath God of this poor clay?
Formed by his hands with potent skill –
Mind, matter, soul and stubbornwill;
Born but to die; sure destiny – death.
Then where, oh! where this fleeting breath?
Not one of all the countless throng
Who lived and died and suffered long,

Returns to tell the great design –
That future, which is yours and mine.
We plead O God! for some new ray
Of light of guidance on our way:
Based not on faith, but clearer sight.
Dispelling these dark cluds of night;
This doubt, this dread, this trembling fear;
This thought that mars our blessings here.
This restless mind, with bolder sway
Rejects the dogmas of the day
Taught by jarring sects and schools
To fetter reason with their rules,
We seek to know thee – and then the part
We play in this stupendous plan,
Creator infinite and man.
Lift up this veil obscuring sight;
Command again; 'Lwet there be Light!"
Reveal this secret of Thy throne;
We search in darkness the unknown"

ಇದಕ್ಕೆ ನಾವು ಉತ್ತರಿಸುತ್ತೇವೆ;
ಮುದ್ರೆ ಹಾಕದ ಜೀವನದ ರಹಸ್ಯವು ಶೀಘ್ರದಲ್ಲೇ ಬೇಗ ಹೇಳುವದು
ದೇವರಿಗೆ ಈ ಕ್ಷುದ್ರ ಮಣ್ಣಿನಲ್ಲಿ ಎಂತಹ ಆನಂದವಿದೆಯೆಂದು,
ರೂಪಿಸುವವನು ತನ್ನ ಸಮರ್ಥ ಕೌಶಲ್ಯದಿಂದ,
ತನ್ನ ಸ್ವರೂಪವನ್ನು ಅದರಲ್ಲಿ ಮುದ್ರೆ ಹಾಕಲಾಗಿದೆ – ಮನಸ್ಸು ಮತ್ತು ಇಚ್ಛೆಯನ್ನು
ಮರಣಿಸಲೆಂದು ಹುಟ್ಟಿಸಿಲ್ಲ – ಇಲ್ಲ ಎರಡನೆಯ ಹುಟ್ಟು
"ಭೂಮಿಯಿಂದ ಭೂಮಿಗೆ" ಎಂಬ ವಾಕ್ಯವನ್ನು ಯಶಸ್ವಿಗೊಳಿಸುತ್ತೆ.
ಸೇನೆಯ ಎಲ್ಲಾ ಪರಾಕ್ರಮಗಳಲ್ಲಿ ಒಬ್ಬಾತನು,
ಜೀವಿಸಿ, ಮರಣಿಸಿ, ಅತ್ಯಧಿಕವಾಗಿ ಕಷ್ಟಗಳನ್ನು ತಾಳಿ
ಜೀವದಿಂದೆದ್ದು, ದೇವರ ಮಹೋನ್ನತ ಯೋಜನೆಯನ್ನು
ಸಿದ್ಧಾಂತಪಡಿಸಿದನು – ಹಾಗಾಗಿ ಆ ಭವಿಷ್ಯವು ನಿನ್ನದೂ ಮತ್ತು ನನ್ನದೂ.
ಆತನ ವಾಕ್ಯವು ಹೊಸ ಕಿರಣವನ್ನು ಪ್ರಕಟಪಡಿಸುವ
ಬೆಳಕು, ನಮ್ಮ ದಾರಿಯನ್ನು ಮಾರ್ಗದರ್ಶಿಸುತ್ತದೆ.
ಈಗ ನಂಬಿಕೆಯ ಆಧಾರದ ಮೇಲೆ ದೃಷ್ಠಿ
ಖಚಿತವು, ರಾತ್ರಿಯ ಅಂಧಕಾರವನ್ನು ಓಡಿಸುತ್ತದೆ.

ಸಂಶಯ, ಭೀತಿ, ನಡುಗಿಸುವ ಭಯ
ಇಲ್ಲಿನ ನಮ್ಮ ಆಶೀರ್ವಾದವನ್ನು ಮರೆ ಮಾಡಿದ ಆಲೋಚನೆಗಳು.
ಅವಿಶ್ರಾಂತ ಮನಸ್ಸು, ದಿಟ್ಟತನದಿಂದ ತೂಗಿ,
ಈ ದಿನದ ಸಿದ್ಧಾಂತಗಳನ್ನು ತಿರಸ್ಕರಿಸುತ್ತದೆ.
ಕಲಹದ ಪಂಥಗಳು ಮತ್ತು ಸಂಸ್ಥೆಗಳು ಕಲಿಸುವವರು,
ಅವರ ನಿಯಮಗಳೊಂದಿಗೆ ವೈಚಾರಿಕತೆ ಪಡೆಯಲು
ಸಂಕೋಲೆಗಳನ್ನು ಸಕಾರಣವಾಗಿ ತೊರೆದು
ಈ ದಿನದ ಸಿದ್ಧಾಂತಗಳನ್ನು ತಿರಸ್ಕರಿಸುತ್ತದೆ.
ತಂದೆಯೇ ನೀನಿರುವಂತೆ ನಿನ್ನನ್ನು ನಾವು ತಿಳಿಯಬಯಸುತ್ತೇವೆ
ನಿನ್ನೊಂದಿಗೇ ನಮ್ಮ ಸ್ಥಳ – ನಂತರ
ಈ ಅದ್ಭುತ ಯೋಜನೆಯಲ್ಲಿ ನಾವು ವಹಿಸುವ ಪಾತ್ರ,
ಅನಂತವಾದ ಸೃಷ್ಠಿಕರ್ತನು, ಮತ್ತು ಮನುಷ್ಯನು.
ದೃಷ್ಠಿಯನ್ನು ಮರೆಮಾಡುವ ಈ ಪರದೆಯನ್ನೆತ್ತು
ಮತ್ತೊಮ್ಮೆ ಆಜ್ಞಾಪಿಸು "ಬೆಳಕಾಗಲಿ" ಎಂದು
ನಿನ್ನ ಸಿಂಹಾಸನ ರಹಸ್ಯವನ್ನು ಯುಗಗಳಿಂದಲೂ ಮರೆಯಾಗಿರುವದು ಈ ಬಹಿರಂಗವಾಗುತಿವೆ"

To this we reply :-
Life's unsealed mystery soon shall say
What joy hath God in this poor clay,
Formed by his hand with potent skill,
Stamped with his image -mind and will
Born not to die – no, a second birth
Succeeds the sentence – "earth to earth"
For one of all the mighty host,
Who lived and died and suffered most,
Arose, and proved God's great design-
That future therefore, yours and mine.
His Word discloses this new way;
Based now on faith, but sure as sight,
Dispelling these dark clouds of night:
The doubt, the dread, the trembling fear,
The thoughts that marred our blessings here.
Now, Lord these minds, whose bolder sway
Rejects the dogmas ofto-day,
Taught by jarrings sects and schools
fettering reason with their rules,
May seek and know Thee as Though art,
Our place with Thee, and then the part

We play in this stupendous plan,
Creator infinite, and man
Uplifts the veil, revealing quite
To those who walk heaven's light
The glorious mystery of His throne
Hidden from ages, now made known

ಅಂಥಾಃ ಆಶೀರ್ವಾದಗಳು ಈಗ ದೈವಿಕ ಉದ್ದೇಶವನ್ನು ಅನಾವರಣಗೊಳಿಸಿ ಮತ್ತು ದೇವರ ವಾಕ್ಯವನ್ನು ತೆರೆಯುವುದರ ಮೂಲಕ ಈ ಜಗತ್ತಿಗೆ ಬರುವುದಾಗಿವೆ. ಅದರಲ್ಲಿ ಆಶೀರ್ವದಿಸುವದು ಮತ್ತು ಬಹಿರಂಗಪಡಿಸುವದು ಈ ಸಂಪುಟದಲ್ಲಿ ಒಂದು ಭಾಗವಾಗಿದೆ ಎಂದು ನಾವು ನಂಬುತ್ತೇವೆ.

ಕೇವಲ ಮಾನವರ ಊಹಾಪೋಹಗಳನ್ನು ತೊಡೆದು ಹಾಕಿ ಮತ್ತು ದೇವರು ನಮ್ಮನ್ನು ಉಪಯೋಗಿಸಲು ಆಹ್ವಾನಿಸಿರುವ ತರ್ಕಮಾಡುವ (ಯೆಶಾಯ 1:18) ವಿಮೋಚನಾ ಶಕ್ತಿಯನ್ನು ಬಿಟ್ಟು ಬಿಡದೆ ಆ ಸಮಯವನ್ನು ಪರಿಶುದ್ಧ ಗ್ರಂಥಗಳಲ್ಲಿ ಹುಡುಕುವುದಕ್ಕೆ ಮೀಸಲಿಡುತ್ತಾರೋ ಅದನ್ನು ಪರಲೋಕವನ್ನು ವ್ಯಾಪಿಸುವ ದೇವರ ಆಶೀರ್ವಾದದ ಬಿಲ್ಲು ಎಂಬುದಾಗಿ ಕಂಡುಕೊಳ್ಳುತ್ತಾರೆ. ನಂಬಿಕೆ ಯಿಲ್ಲದವರು, ಮತ್ತು ಅದರ ಪರಿಣಾಮವಾದ ನೀತಿನಿರ್ಣಯವನ್ನು ತಿಳಿಯದವರು ಸತ್ಯವನ್ನು ಸ್ಪಷ್ಟವಾಗಿ ಗ್ರಹಿಸಿಕೊಳ್ಳಬೇಕು ಎಂದು ಭಾವಿಸುವುದು ತಪ್ಪಾಗುತ್ತದೆ. ಕೀರ್ತನೆಗಾರನು "ನೀತಿವಂತರಿಗೋಸ್ಕರ ಪ್ರಕಾಶವೂ (ಸತ್ಯ), ಯಥಾರ್ಥ ಹೃದಯವುಳ್ಳವರಿಗೆ ಸಂತೋಷವೂ ಬಿತ್ತಲ್ಪಟ್ಟಿವೆ" (ಕೀರ್ತನೆ 97:11) ಎಂದಿದ್ದಾನೆ. ದೇವರ ಮಗುವಿಗೆ ದೀಪವನ್ನು ಒದಗಿಸಲಾಗಿದೆ ಮತ್ತು ಅದರ ಬೆಳಕು ಆತನ ಮಾರ್ಗದಲ್ಲಿರುವ ಹೆಚ್ಚಿನ ಕತ್ತಲೆಯನ್ನು ಹೊರಹಾಕುತ್ತದೆ. "ನಿನ್ನ ವಾಕ್ಯವು ನನ್ನ ಕಾಲಿಗೆ ದೀಪವೂ, ನನ್ನ ದಾರಿಗೆ ಬೆಳಕೂ ಆಗಿದೆ" (ಕೀರ್ತನೆ 119:105). ಆದರೆ ಅದು "ನೀತಿವಂತರ ಮಾರ್ಗ" ಮಾತ್ರವೇ ಆಗಿದೆ. "ನೀತಿವಂತರ ಮಾರ್ಗವು ಮಧ್ಯಾಹ್ನದವರೆಗೂ ಹೆಚ್ಚುತ್ತಾ ಬರುವ ಬೆಳಗಿನ ಬೆಳಕಿನಂತಿದೆ" (ಜ್ಞಾನೋಕ್ತಿ 4:18). ನಿಜವಾಗಿಯೂ, ಯಾರೂ ನೀತಿವಂತರಲ್ಲ. "ನೀತಿವಂತನು ಇಲ್ಲ, ಒಬ್ಬನಾದರೂ ಇಲ್ಲ" (ರೋಮಾ. 3:10). ಇಲ್ಲಿ ಉಲ್ಲೇಖಿಸುವ ವರ್ಗವು "ನಂಬಿಕೆಯ ಮೂಲಕ ನೀತಿವಂತರಾದವರು". ಈ ವರ್ಗದವರಿಗೆ ಮಾತ್ರವೇ ಹೆಚ್ಚು ಹೆಚ್ಚುತ್ತಾ ಬೆಳಗುವ ಮಾರ್ಗದಲ್ಲಿ ನಡೆಯುವ ಭಾಗ್ಯವನ್ನು ಕೊಡಲ್ಪಟ್ಟಿದೆ – ಇದು ದೇವರ ಪ್ರಸ್ತುತವಾಗಿ ಪ್ರಕಟಗೊಳ್ಳುತ್ತಿರುವ ಯೋಜನೆಗಳನ್ನು ನೋಡುವುದಕ್ಕೆ ಮಾತ್ರವಲ್ಲ, ಆದರೆ ಬರಲಿರುವ ಸಂಗತಿಗಳನ್ನು ಸಹಾ. ಪ್ರತಿಯೊಬ್ಬ ವಿಶ್ವಾಸಿಯ ಮಾರ್ಗವು ಪ್ರಕಾಶವುಳ್ಳದ್ದಾಗಿದೆ ಎಂಬುದು ಸತ್ಯವಾಗಿರುವಾಗಲೂ, ಈ ಹೇಳಿಕೆಯ ವಿಶೇಷ ಅನ್ವಯವು ನೀತಿವಂತರಿಗೆ ಮಾತ್ರ (ನೀತಿವಂತರಾದವರ ವರ್ಗದವರಿಗೆ). ಪಿತೃಗಳು, ಪ್ರವಾದಿಗಳು, ಅಪೋಸ್ತಲರು ಮತ್ತು ಹಿಂದಿನ ಮತ್ತು ಇಂದಿನ ಭಕ್ತರುಗಳು ಅದರ ಹೆಚ್ಚುತ್ತಿರುವ ಬೆಳಕಿನಲ್ಲಿ ನಡೆದಿದ್ದಾರೆ; ಈ ಬೆಳಕು ಪ್ರಸ್ತುತಕ್ಕಿಂತ ಹೆಚ್ಚಾಗಿ – ಪರಿಪೂರ್ಣ ದಿನದವರೆಗೆ ಹೆಚ್ಚುತ್ತಾ ಹೋಗುತ್ತದೆ. ಇದೊಂದು ನಿರಂತರವಾದ ಹಾದಿಯಾಗಿದೆ ಮತ್ತು ನಿರಂತರವಾಗಿ ಹೆಚ್ಚುತ್ತಿರುವ ಬೆಳಕು ದೇವರ ದಾಖಲೆಯಾಗಿ, ಸೂಕ್ತ ಸಮಯದಲ್ಲಿ ಬೆಳಗುವುದಾಗಿದೆ.

ಆದುದರಿಂದ "ನೀತಿವಂತರೇ, ಈ ವಾಗ್ದಾನದ ನೆರವೇರಿಕೆಯನ್ನು ಹಾರೈಸುತ್ತಾ ಯೆಹೋವನಲ್ಲಿ ಸಂತೋಷಿಸುತ್ತಾ ಉಲ್ಲಾಸವಾಗಿರ್ರಿ". ಅನೇಕರಿಗೆ ತುಂಬಾ ಕಡಿಮೆ ನಂಬಿಕೆಯಿದ್ದು ಅಂಥವರು ಹೆಚ್ಚಿನ ಬೆಳಕನ್ನು ನೋಡುವುದಿಲ್ಲ. ಮತ್ತು ಅವರ ಅಪನಂಬಿಕೆ ಮತ್ತು ಕಾಳಜಿ ಇಲ್ಲದ ಕಾರಣದಿಂದಾಗಿ ಅವರು ಹೆಚ್ಚುತ್ತಿರುವ ಬೆಳಕಿನಲ್ಲಿ ನಡೆಯಬಹುದಾದರೂ, ಅವರಿಗೆ ಈಗ ಕತ್ತಲೆಯಲ್ಲಿ ಕೂತುಕೊಳ್ಳುವ ಅನುಮತಿ ಇದೆ.

ದೇವರ ಆತ್ಮವು, ಸಭೆಯನ್ನು ಸತ್ಯದ ಮಾರ್ಗದರ್ಶನದಲ್ಲಿ ನಡೆಸುವದಕ್ಕಾಗಿ ಕೊಡಲ್ಪಟ್ಟಿದೆ. ಅದು ನಮಗೆ ಈ ಬಗ್ಗೆ ಬರೆದಿರುವ ಮಾತುಗಳನ್ನು ತೋರ್ಪಡಿಸುತ್ತದೆ; ಇದಕ್ಕಿಂತ ಹೆಚ್ಚಾಗಿ ಬರೆದಿರುವುದರಲ್ಲಿ ನಮಗೆ ಏನೂ ಬೇಕಾಗಿಲ್ಲ. ಯಾಕೆಂದರೆ, ಪರಿಶುದ್ಧ ಗ್ರಂಥಗಳು ರಕ್ಷಣೆಯ ಪರ್ಯಂತ ಕ್ರಿಸ್ತನಲ್ಲಿಟ್ಟಿರುವ ನಂಬಿಕೆಯ ಮೂಲಕ ನಮ್ಮನ್ನು ವಿವೇಕಿಗಳನ್ನಾಗಿ ಮಾಡಲು ಶಕ್ತವಾಗಿವೆ – "ಆ ಗ್ರಂಥಗಳು ಕ್ರಿಸ್ತ ಯೇಸುವಿನಲ್ಲಿರುವ ನಂಬಿಕೆಯ ಮೂಲಕ ರಕ್ಷಣೆ ಹೊಂದಿಸುವ ಜ್ಞಾನವನ್ನು ಕೊಡುವುದಕ್ಕೆ ಶಕ್ತವಾಗಿವೆ" (2 ತಿಮೋ. 3:15).

ಕತ್ತಲೆಯು ಭೂಮಿಯನ್ನು ಆವರಿಸಿ ಕಾರ್ಗತ್ತಲು ಜನಾಂಗವನ್ನು ಮುಚ್ಚಿದೆ ಎಂಬುದು ಇನ್ನೂ ಸತ್ಯವಾಗಿದ್ದರೂ ಜಗತ್ತು ಯಾವಾಗಲೂ ಇದೇ ಸ್ಥಿತಿಯಲ್ಲಿ ಉಳಿಯುವುದಿಲ್ಲ ಎಂಬುದು ಸತ್ಯವಾಗಿದೆ. "ಉದಯವು ಬರುತ್ತದೆ" (ಯೆಶಾಯ 21:12) ಎಂಬುದಾಗಿ ನಾವು ಭರವಸೆ ನೀಡುತ್ತೇವೆ. ಈಗ ದೇವರು ಪ್ರಾಕೃತಿಕ ಸೂರ್ಯನನ್ನು ನೀತಿವಂತರ ಮೇಲೆಯೂ, ಅನೀತಿವಂತರ ಮೇಲೆಯೂ ಪ್ರಕಾಶಿಸುವಂತೆ ಮಾಡುತ್ತಿರುವಾಗ, ನೀತಿ ಸೂರ್ಯನು ಸಹಸ್ರಮಾನದ

ದಿನದಲ್ಲಿ ಸಮಸ್ತ ಲೋಕದ ಒಳತಿಗಾಗಿ ಬೆಳಗುತ್ತಾನೆ. ಮತ್ತು ಕತ್ತಲೆಯಲ್ಲಿರುವ ಗುಪ್ತಕಾರ್ಯಗಳನ್ನು "ಬೆಳಕಿಗೆ ತರುತ್ತಾನೆ" (1 ಕೊರಿಂಥ 4:5). ಅದು ಕೆಡುಕನ ಅಹಿತಕಾರಕ ಆವಿಯನ್ನು ತೊಡೆದುಹಾಕುತ್ತದೆ ಮತ್ತು ಜೀವ, ಆರೋಗ್ಯ, ಶಾಂತಿ ಮತ್ತು ಸಂತೋಷವನ್ನು ತರುತ್ತದೆ.

ಹಿಂದಿನವುಗಳನ್ನು ಆಗ ನೋಡುವಾಗ, ಪ್ರಕಾಶಿಸಿದ ಬೆಳಕು ಮಂದವಾಗಿತ್ತು ಎಂದು ಕಂಡುಕೊಳ್ಳುತ್ತೇವೆ. ಹಿಂದಿನ ಕಾಲದ ವಾಗ್ದಾನಗಳು ಮಸುಕಾದವಗಳೂ, ಅಸ್ಪಷ್ಟವಾದವುಗಳೂ ಆಗಿತ್ತು. ಅಬ್ರಹಾಮ ಮತ್ತು ಇತರರಿಗೆ ಮಾಡಿದ ವಾಗ್ದಾನಗಳು, ಸಾಂಕೇತಿಕವಾಗಿ ಐಹಿಕ ಇಸ್ರಾಯೇಲ್ಯರ ಆಜ್ಞೆ ಮತ್ತು ಆಚರಣೆಗಳಲ್ಲಿ ಪ್ರತಿನಿಧಿತವಾಗಿದ್ದು, ಅವುಗಳು ಕೇವಲ ಛಾಯೆಗಳಾಗಿದ್ದು ದೇವರ ಅದ್ಭುತವಾದ ಮತ್ತು ಕೃಪಾಪೂರಿತ ವಿನ್ಯಾಸಗಳ ಬಗ್ಗೆ ಅಸ್ಪಷ್ಟ ಕಲ್ಪನೆಯನ್ನು ನೀಡುವವುಗಳಾಗಿದ್ದವು. ನಾವು ಯೇಸುವಿನ ಕಾಲವನ್ನು ಮುಟ್ಟುವಾಗ ಈ ಬೆಳಕು ಹೆಚ್ಚಾಯಿತು. ದೇವರು ತನ್ನ ಜನರಾದ ಇಸ್ರಾಯೇಲ್ಯರನ್ನು ಅವರ ಶತ್ರುಗಳಿಂದ ರಕ್ಷಿಸುವ, ಮತ್ತು ಅವರನ್ನು ಈ ಲೋಕದ ಮುಖ್ಯ ಜನಾಂಗವನ್ನಾಗಿ ಮಾಡುವ ಸಲುವಾಗಿ ಒಬ್ಬ ವಿಮೋಚಕನನ್ನು ಬರಮಾಡುತ್ತಾನೆ ಮತ್ತು ಈ ಅಧಿಕಾರದ ಸ್ಥಾನದಲ್ಲಿ ಮತ್ತು ಪ್ರಭಾವದಲ್ಲಿ ದೇವರು ಅವರನ್ನು ಈ ಲೋಕದ ಎಲ್ಲಾ ಕುಟುಂಬಗಳನ್ನೂ ಆಶೀರ್ವದಿಸುವುದಕ್ಕಾಗಿ ತನ್ನ ಪಾರುಪತ್ಯವನ್ನಾಗಿ ಉಪಯೋಗಿಸುತ್ತಾನೆ ಎಂಬ ನಿರೀಕ್ಷೆಯು ಉಚ್ಚ ಮಟ್ಟದಲ್ಲಿತ್ತು. ದೇವರ ರಾಜ್ಯದಲ್ಲಿ ಬಾಧ್ಯಸ್ತರಾಗುವಂತೆ ಅವರಿಗೆ ನೀಡಿದ ಕೊಡುಗೆ ಹಕ್ಕಿನಿಂದ ಕೇಳಿದ ಸಂಗತಿಗಳ ಸ್ಥಿತಿಯು, ಅವರು ನಿರೀಕ್ಷಿಸಿದಕ್ಕಿಂತಲೂ ಎಷ್ಟೋ ಭಿನ್ನವಾಗಿತ್ತು ಮತ್ತು ಆಯ್ಕೆಯಾದ ವರ್ಗದ ನಿರೀಕ್ಷೆಯು ಮತ್ತು ವಾಗ್ದಾನವನ್ನು ಹೊಂದುವ ಶ್ರೇಷ್ಠತೆಯು, ಮೇಲ್ನೋಟಕ್ಕೂ ಮತ್ತು ಮಾನವನ ದೃಷ್ಟಿ ಕೋನದಿಂದ ಅಸಂಭವವೆಂದು ಪರಿಗಣಿಸಲಾಗಿತ್ತು. ಕೆಲವರನ್ನು ಹೊರತುಪಡಿಸಿ ಎಲ್ಲರೂ ಈ ಸಂದೇಶಕ್ಕೆ ಕುರುಡಾಗಿದ್ದಾರೆ. ಅವರ ಈ ಕುರುಡುತನ ಮತ್ತು ಆ ಬಗ್ಗೆ ಹಗೆತನವು ದೇವರ ಯೋಜನೆಯ ಪ್ರಗತಿಯು ಪ್ರಕ್ರಿಯೆಯಲ್ಲಿರುವಾಗ ಸ್ವಾಭಾವಿಕವಾಗಿ ಹೆಚ್ಚಾಗುತ್ತದೆ. ಸಂದೇಶವನ್ನು ವಿಸ್ತರಿಸುವ ಸೂಕ್ತ ಸಮಯ ಬಂದಿದೆ ಮತ್ತು ವಾಗ್ದಾನಪಡಿಸಿದ ರಾಜ್ಯದಲ್ಲಿ ಪಾಲುದಾರರಾಗ ಬೇಕೆಂಬ ಆಹ್ವಾನವು ಆಕಾಶದ ಕೆಳಗೆ ಇರುವ ಎಲ್ಲರಿಗೂ ಅನ್ವಯವಾಗುತ್ತದೆ, ಅವರುಗಳು ವಿಶ್ವಾಸವನ್ನು ಅಭ್ಯಾಸ ಮಾಡುವುದರ ಮೂಲಕ ನಂಬಿಗಸ್ತನಾದ ಅಬ್ರಹಾಮನ ಮಕ್ಕಳು ಮತ್ತು ಆತನಿಗೆ ಮಾಡಲ್ಪಟ್ಟ ವಾಗ್ದಾನಕ್ಕೆ ಬಾಧ್ಯಸ್ತರು ಎಂದು ಎಣಿಸಲ್ಪಡುತ್ತಾರೆ.

ಆದರೆ, ಪಂಚಾಶತ್ತಮದ ನಂತರ ಯೇಸು ಬೋಧಿಸಿದ ಸುವಾರ್ತೆಯು ಅರ್ಥವಾಗತೊಡಗಿದಾಗ, ಲೋಕಕ್ಕೆ ದೊರೆಯುವ ಆಶೀರ್ವಾದಗಳು ಶಾಶ್ವತವಾದ ಪಾತ್ರವನ್ನು ಹೊಂದಿರುತ್ತವೆ ಮತ್ತು ಈ ಉದ್ದೇಶಕ್ಕಾಗಿಯೇ ಹಾಗೂ ಈ ಉದ್ದೇಶವನ್ನು ನೆರವೇರಿಸಿದಂತ ಸಾಮ್ರಾಜ್ಯವು ನಿಜವಾದ ಇಸ್ರಾಯೇಲ್ಯರಿಂದ ಕೂಡಿರುವದು. ಅಂದರೆ ಯೆಹೂದ್ಯರಿಂದಲೂ, ಅನ್ಯಜನಾಂಗದಿಂದಲೂ ಆಯ್ಕೆಯಾದ "ಚಿಕ್ಕಹಿಂಡು" ಇವರನ್ನು ಆತ್ಮೀಕ ಸ್ವಭಾವಕ್ಕೆ ಹಾಗೂ ಬಲಕ್ಕೆ ಏರಿಸಲ್ಪಡುವವರು ಎಂಬುದನ್ನು ಸಭೆಯು ಕಂಡುಕೊಂಡಿತು. ಆದುದರಿಂದ, ನಾವು ಕ್ರಿಸ್ತನು ಜೀವ ಮತ್ತು ಅಮರತ್ವವನ್ನು ಸುವಾರ್ತೆಯ ಮೂಲಕ ಬೆಳಕಿಗೆ ತಂದನು ಎಂದು ಓದುತ್ತೇವೆ – "ಈತನು (ಯೇಸುವು) ಮರಣವನ್ನು ನಿವೃತ್ತಿ ಮಾಡಿ ಸುವಾರ್ತೆಯ ಮೂಲಕ ಜೀವವನ್ನೂ ನಿರ್ಲಯತ್ವವನ್ನೂ ಪ್ರಕಾಶಗೊಳಿಸಿದನು" (2 ತಿಮೋಥೆ 1:10) ಮತ್ತು ಯೇಸುವಿನ ದಿನದಿಂದ ಆತನು ಮುಂತಿಳಿಸಿದಂತೆಯೇ ಇನ್ನೂ ಹೆಚ್ಚಾದ ಬೆಳಕು ಪ್ರಕಾಶಿಸಲ್ಪಡುತ್ತಿದೆ – "ನಾನು ನಿಮಗೆ ಹೇಳಬೇಕಾದುದು ಇನ್ನೂ ಬಹಳ ಉಂಟು; ಆದರೆ ಸಧ್ಯಕ್ಕೆ ಅದನ್ನು ಹೊರಲಾರಿರಿ. ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡಿಸಿಕೊಂಡು ಹೋಗಿ ಸಕಲ ವಿಷಯಗಳಲ್ಲಿಯೂ ಸತ್ಯಕ್ಕೆ ಸೇರಿಸುವನು ... ಮತ್ತು ಮುಂದಾಗುವ ಸಂಗತಿಗಳನ್ನು ನಿಮಗೆ ತಿಳಿಸುವನು" (ಯೋಹಾನ 16: 12–13) ಎಂದು ಬರೆದದೆ.

ಆದಾಗ್ಯೂ, ಅಪೋಸ್ತಲರುಗಳು ನಿದ್ರೆ ಹೋದ ಮೇಲೆ ಹೇಗೂ ಒಂದು ಸಮಯವು ಬಂತು, ಬಹುಪಾಲು ಸಭೆಯವರು ಆ ದೀಪವನ್ನು ಅಲಕ್ಷ್ಯ ಮಾಡಿದರು, ಮತ್ತು ತಮ್ಮನ್ನು ಮುನ್ನಡೆಸಲು ಮಾನವ ನಾಯಕರುಗಳ ಮತ್ತು ಬೋಧಕರುಗಳ ಕಡೆಗೆ ನೋಡಿದರು. ಮತ್ತು ಆ ಬೋಧಕರು ಅಹಂಕಾರದಿಂದ ಉಬ್ಬಿದರು, ಅನೇಕ ಬಿರುದುಗಳನ್ನೂ, ಅಧಿಕಾರ ಸ್ಥಾನಗಳನ್ನೂ ಹೊಂದಿಕೊಂಡರು ಮತ್ತು ದೇವರ ಬಾಧ್ಯಸ್ತಿಕೆಯ ಮೇಲೆ ಪ್ರಭುತ್ವವನ್ನು ಸಾಧಿಸಲು ಪ್ರಾರಂಭಿಸಿದರು. ಈ ಪದವಿಗಳ ಮೂಲಕ ಒಂದು ವಿಶೇಷವಾದ 'ಪುರೋಹಿತ ವರ್ಗ'ವು ಅಸ್ತಿತ್ವಕ್ಕೆ ಬಂದಿತು, ಅವರು ತಮ್ಮನ್ನು, ಮತ್ತು ಇತರರಿಂದ ನಂಬಿಕೆ ಮತ್ತು ರೂಢಿಗೆ ತಾವೇ ಸರಿಯಾದ ಮಾರ್ಗದರ್ಶಿಗಳು ಎಂದು ಪರಿಗಣಿಸಿಕೊಂಡು ದೇವರ ವಾಕ್ಯವನ್ನು ಬದಿಗಿಟ್ಟರು.

ಆದ್ದರಿಂದ ಕಾಲಾನಂತರದಲ್ಲಿ, ಪೋಪನ ಅಧಿಕಾರದ ಮಹಾನ್ ವ್ಯವಸ್ಥೆಯು ಅಭಿವೃದ್ಧಿ ಹೊಂದಿ ದೋಷಪೂರಿತ ಮಾನವರ ಬೋಧನೆಗಳಿಗೆ ಅನಗತ್ಯ ಗೌರವವನ್ನು ಕೊಟ್ಟು ಮತ್ತು ದೋಷರಹಿತ ದೇವರ ಮಾತಿನ ಬಗ್ಗೆ ನಿರ್ಲಕ್ಷತೆ ಅಭಿವೃದ್ಧಿಯಾಗತೊಡಗಿತು.

ಸತ್ಯವನ್ನು ಕಡೆಗಣಿಸಿದ್ದರ ಫಲವಾಗಿ ಉಂಟಾದ ಕೆಟ್ಟದಾದ ಫಲಿತಾಂಶಗಳು ನಿಜವಾಗಿಯೂ ಗಂಭೀರವಾದವುಗಳಾಗಿದ್ದವು. ಎಲ್ಲರಿಗೂ ತಿಳಿದಿರುವಂತೆ, ಕ್ರೈಸ್ತ ಸಭೆ ಮತ್ತು ನಾಗರೀಕ ಪ್ರಪಂಚವು ಬಹುಮಟ್ಟಿಗೆ ಆ ಪದ್ಧತಿಯ ಸಂಪೂರ್ಣ ಅಡಿಯಾಳಾಗಿಬಿಟ್ಟಿದೆ, ಮತ್ತು ಮಾನವರ ಸಂಪ್ರದಾಯಗಳನ್ನೂ ತತ್ವಗಳನ್ನೂ ಅನುಸರಿಸುವಂತೆ ನಡೆಸಲ್ಪಟ್ಟಿದೆ. ಈ ದಾಸತ್ವದಿಂದ, ಬಿಡುಗಡೆಗಾಗಿ ಮತ್ತು ಸತ್ಯವೇದಕ್ಕೆ ದಿಟ್ಟವಾದ ಮತ್ತು ಆಶೀರ್ವಾದಕರ ಹರತಾಳ (ಮುಷ್ಕರ) ಉಂಟಾಯಿತು. ಅದನ್ನು ಸುಧಾರಣೆ ಎಂದು ಕರೆಯಲಾಯಿತು. ದೇವರು ತನ್ನ ವಾಕ್ಯಕ್ಕಾಗಿ ದಿಟ್ಟವೀರಾಗ್ರೇಸರುಗಳನ್ನು ಎಬ್ಬಿಸಿದನು. ಅವರುಗಳೆಂದರೆ ಲೂಥರ್, ಜ್ವಿಂಗ್ಲಿ, ಮೆಲನ್‌ಂಚನ್, ವೈಕ್ಲಿಫ್, ನಾಕ್ಸ್ (Luther, Zwingli, Melanchton. Wycliffe, Knox) ಮುಂತಾದವರು. ಇವರುಗಳು ಪೋಪನ ಅಧಿಕಾರವು ಸತ್ಯವೇದವನ್ನು ಬದಿಗೊತ್ತಿ ಅದರ ಸ್ಥಳದಲ್ಲಿ ಪೋಪ್ ಕಟ್ಟಳೆಗಳನ್ನೂ, ಮತ ಸಿದ್ಧಾಂತಗಳನ್ನು ಇಟ್ಟಿದೆ ಎಂಬುದರ ಬಗ್ಗೆ ಗಮನ ಸೆಳೆದರು. ಮತ್ತು ಸತ್ಯಕ್ಕೆ ವಿರುದ್ಧವಾದ ಮತ್ತು ದೇವರ ವಾಕ್ಯಕ್ಕೆ ವಿರೋಧಾತ್ಮಕವಾದ ಅದರ ತಪ್ಪಾದ ಬೋಧನೆಗಳನ್ನೂ ಎತ್ತಿ ತೋರಿಸಿದರು. ಈ ಸುಧಾರಕರು ಮತ್ತು ಅವರ ಅನುಯಾಯಿಗಳನ್ನು ಪ್ರೊತಸ್ತಾಂತರೆಂದು ಕರೆಯಲಾಯಿತು. ಯಾಕೆಂದರೆ ಅವರು ಪೋಪನನ್ನು ವಿರೋಧಿಸಿದರು ಮತ್ತು ದೇವರ ವಾಕ್ಯವು ಮಾತ್ರವೇ ವಿಶ್ವಾಸದ ಮತ್ತು ಅಭ್ಯಾಸದ ಸರಿಯಾದ ನಿಯಮವಾಗಿದೆ ಎಂದು ಹಕ್ಕಿನಿಂದ ಹೇಳಿದರು. ಸುಧಾರಣಾ ಕಾಲದಲ್ಲಿ ಅನೇಕ ನಿಷ್ಠಾವಂತ ಆತ್ಮಗಳು ಆಗ ಬೆಳಕು ಪ್ರಕಾಶಿಸುತ್ತಿರುವವರೆಗೆ ಆ ಬೆಳಕಿನಲ್ಲಿ ನಡೆದರು. ಆದರೆ ಆ ದಿನದಿಂದ ಪ್ರೊಟೆಸ್ಟೆಂಟ್‌ಗಳು ಸ್ವಲ್ಪ ಪ್ರಗತಿಯನ್ನಷ್ಟೇ ಸಾಧಿಸಿದ್ದಾರೆ. ಯಾಕೆಂದರೆ ಅವರು ಬೆಳಕಿನಲ್ಲಿ ನಡೆಯುವ ಬದಲು, ತಮ್ಮ ಅಚ್ಚುಮೆಚ್ಚಿನ ನಾಯಕರ ಪರ ಸುತ್ತ ತಂಗಿದರು, ಆ ನಾಯಕರು ಕಂಡಿರುವಷ್ಟನ್ನೇ ಕಂಡು ಅದಕ್ಕಿಂತ ಹೆಚ್ಚಿನದೇನನ್ನೂ ಕಾಣದೇ ಹೋದರು. ಅವರಲ್ಲಿದ್ದ ಸ್ವಲ್ಪ ಸತ್ಯದ ಪ್ರಗತಿಯ ಮಾರ್ಗದ ಸುತ್ತ ಮೇರೆಯನ್ನು ನಿರ್ಮಿಸಿಕೊಂಡರು. "ತಾಯಿ ಸಭೆ"ಯಿಂದ ಬಹಳಷ್ಟು ತಪ್ಪು ವಹಿವಾಟಗಳುಂಟಾದವು. ಈ ರೀತಿಯಲ್ಲಿ ಅನೇಕ ವರ್ಷಗಳ ಹಿಂದೆ ಸೂತ್ರರೂಪದಲ್ಲಿ ಉಂಟಾದ ಪಂಥಗಳ ಬಗ್ಗೆ ಹೆಚ್ಚಿನ ಕ್ರೈಸ್ತರು ಮೂಢನಂಬಿಕೆಯಿಂದೊಡಗೂಡಿದ ಪೂಜ್ಯಭಾವವನ್ನು ಬೆಳೆಸಿಕೊಂಡರು. ದೇವರ ಯೋಜನೆಗಳ ಬಗ್ಗೆ ಸುಧಾರಕರುಗಳಿಂದ ತಿಳಿಯಲ್ಪಟ್ಟದಕ್ಕಿಂತ ಹೆಚ್ಚಾಗಿ ಮತ್ತೇನನ್ನೂ ಅರಿಯಲು ಸಾಧ್ಯವಿಲ್ಲವೆಂದು ಭಾವಿಸಿದರು.

ಈ ತಪ್ಪು ದುಬಾರಿಯಾದುದು. ಕೆಲವು ಸತ್ಯದ ಮಹಾ ವಿಚಾರಸರಣಿಗಳನ್ನು ದೋಷದ ಕಸದಿಂದ ಅಧೀನಕ್ಕೆ ಪಡೆಯಲಾಯಿತು ಎಂಬ ಸತ್ಯದ ಹೊರತಾಗಿಯೂ ಸತ್ಯದ ಹಲವಾರು ವಿಶೇಷ ಲಕ್ಷಣಗಳು ನಿರಂತರವಾಗಿ ಯುಕ್ತವಾಗಿ ತಿಳಿಯಬೇಕಾಗಿದೆ. ಮತ್ತು ಇವುಗಳನ್ನು ತಮ್ಮ ಮತಾಭಿಪ್ರಾಯದ ಬೇಲಿಯ ಕಾರಣ ಕ್ರೈಸ್ತರು ವಂಚಿತರಾಗಿದ್ದಾರೆ. ಉದಾಹರಣೆಗೆ: ಆದಾಮ ಮತ್ತು ಇತರರಿಗೆ ಪ್ರವಾಹವು ಬರುತ್ತದೆ ಎಂಬುದು ತಿಳಿದಿರಲ್ಲಿಲ್ಲ. ಆದರೆ ನೋಹನ ದಿನದಲ್ಲಿ ಇದು ಸತ್ಯವಾಗಿತ್ತು, ಮತ್ತು ಬೆಳಕಿನಲ್ಲಿ ನಡೆಯುವವರಿಗೆ ನಂಬಿಕೆಯ ಅಗತ್ಯವಿತ್ತು, ಬರಲಿರುವ ಪ್ರವಾಹದ ಬಗ್ಗೆ ಈಗ ಪ್ರಸಂಗಿಸುವುದು ಪ್ರಸಂಗವೆನಿಸದು. ಆದರೆ ಇನ್ನೂ ಹಂಚಿಕೆಯ ಅನೇಕ ದೈವೇಚ್ಛೆಯ ಸತ್ಯಗಳು ನಿರಂತರವಾಗಿ ಸಕಾಲಕ್ಕೆ ಸಲ್ಲಿಸಲು ಯುಕ್ತವಾಗಿವೆ. ಅವುಗಳ ಬಗ್ಗೆ ದೀಪದ ಬೆಳಕಿನಲ್ಲಿ ನಡೆಯುವುದಾದರೆ, ಅವು ನಮಗೆ ತಿಳಿದುಬರುತ್ತವೆ. ಅನೇಕ ನೂರು ವರ್ಷಗಳ ಹಿಂದೆ ನೀಡಬೇಕಾಗಿದ್ದ ಎಲ್ಲಾ ಬೆಳಕು ಈಗ ಹೊಂದಿದ್ದರೆ, ಆಗ ನಾವು ಗಣನೀಯವಾಗಿ ಕತ್ತಲೆಯಲ್ಲಿಯೇ ಇದ್ದೇವೆ.

ದೇವರ ವಾಕ್ಯವು ಹೊಳೆಯುವ ಹಾದಿಯಲ್ಲಿ ಹಸಿದ ಯಾತ್ರಿಕರಿಗೆ ಮಹಾ ಆಹಾರದ ಭಂಡಾರವಾಗಿದೆ. ಚಿಕ್ಕ ಮಕ್ಕಳಿಗೆ ಶುದ್ಧವಾದ ಹಾಲಾಗಿದೆ. ಅಭಿವೃದ್ಧಿಯಾದವರಿಗೆ ಗಟ್ಟಿಯಾದ ಆಹಾರವಾಗಿದೆ (1 ಪೇತ್ರ 2:2 ಮತ್ತು ಇಬ್ರಿಯ 5:14 ನೋಡಿರಿ). ಅಷ್ಟು ಮಾತ್ರವಲ್ಲ, ಮತ್ತು ಅದು ವಿವಿಧ ಕಾಲಗಳಿಗೆ ಮತ್ತು ಪರಿಸ್ಥಿತಿಗೆ ತಕ್ಕ ಆಹಾರಗಳನ್ನೂ ಹೊಂದಿದೆ. ಯೇಸು ಕ್ರಿಸ್ತನು ಪ್ರಾಮಾಣಿಕನಾದ ಸೇವಕನು ನಂಬಿಗಸ್ತ ಮನೆವಾರ್ತೆಯವರಿಗೆ ಉಚಿತವಾದ ಸಮಯದಲ್ಲಿ ಆಹಾರವನ್ನು ತರುತ್ತಾನೆ. ಬೊಕ್ಕಸದಿಂದ ಹೊಸ ವಸ್ತುಗಳನ್ನು ಹಳೇ ವಸ್ತುಗಳನ್ನು ತರುತ್ತಾನೆ (ಲೂಕ 12:42 ಮತ್ತು ಮತ್ತಾಯ 13:52 ನೋಡಿರಿ). ಅಂಥಾಃ "ನೂತನ ಮತ್ತು ಹಳೆಯ ಸಂಗತಿ"ಗಳನ್ನು ಯಾವುದೇ ಪಂಥೀಯ ಮತಾಭಿಪ್ರಾಯದಿಂದಾಗಲೀ,

ಭಂಡಾರದಿಂದಾಗಲೀ ತರಲು ಸಾಧ್ಯವಿಲ್ಲ. ನಾವು ಇವೆರಡರಿಂದಲೂ ಹಳೆಯದೂ ಮತ್ತು ಒಳ್ಳೆಯವೂ ಆದ ಕೆಲವು ಸಂಗತಿಗಳನ್ನು ತರಬಹುದು. ಆದರೆ ಯಾವುದೇ ಹೊಸದನ್ನಲ್ಲ. ವಿವಿಧ ಪಂಥಗಳ ಮತಾಭಿಪ್ರಾಯಗಳಲ್ಲಿರುವ ಸತ್ಯವು ತಪ್ಪುಗಳಿಂದ ಬೆರೆತು ಮುಚ್ಚಿಹೋಗಿದ್ದು ಅದರ ಅಂತರ್ಗತವಾದ ಸೌಂದರ್ಯವು ಮತ್ತು ನಿಜವಾದ ಬೆಲೆಯನ್ನು ತಿಳುಕೊಳ್ಳಲು ಅಸಾಧ್ಯವಾಗಿದೆ. ವಿವಿಧ ಮತಾಭಿ ಪ್ರಾಯಗಳು ನಿರಂತರವಾಗಿ ತಿಕ್ಕಾಟ ಹಾಗೂ ಘರ್ಷಣೆಗೊಳ್ಳುತ್ತವೆ. ಪ್ರತಿಯೊಂದೂ ಸತ್ಯವೇದದ ಆಧಾರವಾಗಿದೆಯೆಂದು ಪ್ರತಿಪಾದಿಸುವಾಗ, ಚಿಂತನೆಯ ಗೊಂದಲ, ಮತ್ತು ಸ್ಪಷ್ಟ ಭಿನ್ನಾಭಿಪ್ರಾಯ, ಇವುಗಳು ದೇವರ ವಾಕ್ಯಕ್ಕೆ ಆಪಾದಿಸುತ್ತವೆ. ಇದು "ಸತ್ಯವೇದವು ಹಳೆಯ ಪೀಟೀಲಾಗಿದೆ, ಅದರ ಮೂಲಕ ಯಾವುದೇ ಸಂಗೀತವನ್ನಾದರೂ ನುಡಿಸಬಹುದು" ಎಂಬ ಸಾಮಾನ್ಯ ಗಾದೆಗೆ ಎಡೆಮಾಡಿಕೊಟ್ಟಿದೆ.

ನಮ್ಮ ಕಾಲದ ಧರ್ಮನಿಂದನೆಗೆ ಇದು ಎಷ್ಟೋ ಅಭಿವ್ಯಕ್ತಾತ್ಮಕವಾಗಿದೆ, ದೇವರ ವ್ಯಾಕ್ಯದ ಮತ್ತು ಆತನ ಗುಣಲಕ್ಷಣಗಳನ್ನು ಮಾನವನ ಸಂಪ್ರದಾಯಗಳು ತಪ್ಪಾಗಿ ಪ್ರತಿನಿಧಿಸುವ ಸಂದರ್ಭವುಂಟಾಗಿದೆ. ಬುದ್ದಿವಂತಿಕೆಯ ಬೆಳವಣಿಗೆಯೊಂದಿಗೆ ಅದು ಇನ್ನು ಮುಂದೆ ಜೊತೆಗಾರರ ಅಭಿಪ್ರಾಯಗಳ ಬಗ್ಗೆ ಕುರುಡಾದ ಮತ್ತು ಮೂಢನಂಬಿಕೆಯುಳ್ಳ ಅದರದೊಂದಿಗೆ ಬಾಗುವುದಿಲ್ಲ. ಆದರೆ ನಮ್ಮಲ್ಲಿರುವ ನಿರೀಕ್ಷೆಯ ಒಂದು ಕಾರಣವನ್ನು ಬಯಸುತ್ತದೆ. ದೇವರ ವಾಕ್ಯದ ಪ್ರಾಮಾಣಿಕ ವಿದ್ಯಾರ್ಥಿಯು ತನ್ನ ನಿರೀಕ್ಷೆಗೆ ತನ್ನಲ್ಲಿರುವ ಕಾರಣವನ್ನು ನೀಡಲು ಯಾವಾಗಲೂ ಶಕ್ತನಾಗಿರಬೇಕು. ದೇವರ ವಾಕ್ಯವು ಮಾತ್ರವೇ ವಿವೇಕವನ್ನುಂಟು ಮಾಡುತ್ತದೆ ಮತ್ತು "ಖಂಡನೆಗೂ ತಿದ್ದುಪಾಟಿಗೂ ನೀತಿಶಿಕ್ಷೆಗೂ ಉಪಯುಕ್ತವಾಗಿದೆ". "ದೇವರ ಮನುಷ್ಯನು ಪ್ರವೀಣನಾಗಿ ಸಕಲ ಸತ್ಕಾರ್ಯಕ್ಕೆ ಸನ್ನಧನಾಗುವನು" (2 ತಿಮೋಥೆ 3:17). ಈ ಭಂಡಾರವು ಮಾತ್ರವೇ ಎಂದೂ ಮುಗಿಯದ ಹೊಸ ಮತ್ತು ಹಳೆಯ ಸಂಗತಿಗಳನ್ನು, ಸೂಕ್ತ ಸಮಯದಲ್ಲಿ ಮನೆವಾರ್ತೆವರಿಗೆ ಆಹಾರವನ್ನು ಒದಗಿಸುತ್ತದೆ. "ನೀತಿವಂತರ ಮಾರ್ಗವು ಮಧ್ಯಾಹ್ನದವರೆಗೂ ಹೆಚ್ಚುತ್ತಾ ಬರುವ ಬೆಳಗಿನ ಬೆಳಕಿನಂತಿದೆ" (ಜ್ಞಾನೋಕ್ತಿ. 4:18) ಎಂಬ ಪರಿಶುದ್ಧ ಗ್ರಂಥದ ಮಾತನ್ನು ನಂಬದವರು ಯಾರೊಬ್ಬರೂ ಲೂಥರನ ಕಾಲದಲ್ಲಿ ಸಮರ್ಪಕವಾದ ದಿನವು ಬಂದಿತೆಂದು ಹೇಳುವುದಿಲ್ಲ. ಮತ್ತು ಇಲ್ಲದಿದ್ದರೆ, ಅದನ್ನು ಕತ್ತಲೆಯಾದ ಸ್ಥಳದಲ್ಲಿ "ನಿಮ್ಮ ಹೃದಯದೊಳಗೆ ಬೆಳ್ಳಿಯು ಮೂಡಿ ಅರುಣೋದಯುವಾಗುವ ಪರ್ಯಂತರ ಪ್ರಕಾಶಿಸುವ ದೀಪವೆಂದೆಣಿಸಿ ಅದಕ್ಕೆ ಲಕ್ಷ್ಯಕೊಡುವುದೇ ಒಳ್ಳೇದು" (2 ಪೇತ್ರ 1:19) ಎಂಬಂತೆ ನಾವು ನಮ್ಮ ದೀಪಕ್ಕೆ ಲಕ್ಷ್ಯಕೊಡುವುದೇ ಒಳ್ಳೇದು.

ಈಗ ಬೆಳಕಿನ ಮಾರ್ಗದಲ್ಲಿ ನಮ್ಮನ್ನು ನಾವು ಕಂಡುಕೊಂಡರಷ್ಟೇ ಇರುವುದು ಸಾಲದು; ನಾವು ಬೆಳಕಿನಲ್ಲಿ ನಡೆಯಬೇಕು, ಪ್ರಗತಿಯನ್ನು ಹೊಂದಲು ಮುಂದುವರೆಯಬೇಕು, ಇಲ್ಲವಾದಲ್ಲಿ ನಿಲ್ಲದ ಆ ಬೆಳಕು ದಾಟಿಹೋಗಿ ನಮ್ಮನ್ನು ಕತ್ತಲೆಯಲ್ಲಿ ಬಿಡುವುದು. ಅನೇಕರಿಗೆ ಕಷ್ಟವಾಗಿರುವುದೇನೆಂದರೆ ಅವರು ಕುಳಿತುಕೊಳ್ಳುವರು, ಬೆಳಕಿನ ವಾರ್ಗವನ್ನು ಅನುಸರಿಸುವುದಿಲ್ಲ. ಅನುಕ್ರಮಣಿಕೆ (Concordence) ತೆಗೆದುಕೊಂಡು Sit ಮತ್ತು Stand ಎಂಬ ಪದಗಳನ್ನು ಹುಡುಕಿರಿ ಮತ್ತು ಇದನ್ನು walk ಮತ್ತು run ಈ ಪದಗಳೊಂದಿಗೆ ಹೋಲಿಸಿರಿ ಬಹಳಷ್ಟು ವ್ಯತ್ಯಾಸಗಳನ್ನು ನೀವು ಕಾಣುವಿರಿ. ಮಾನವರು ಕತ್ತಲೆಯಲ್ಲಿ "ನಿಂದಾತ್ಮಕರೊಡನೆ" ಕುಳಿತುಕೊಳ್ಳುವರು ಮತ್ತು ದೈವಭಕ್ತಿಹೀನರೊಂದಿಗೆ ನಿಂತುಕೊಳ್ಳುವರು, ಆದರೆ ಬೆಳಕಿನಲ್ಲಿ ನಡೆಯುವವರು ಮತ್ತು ಬಹುಮಾನಕ್ಕಾಗಿ ಓಡುವರು (ಕೀರ್ತನೆ 1:1, ಯೆಶಾಯ 42:7, ಇಬ್ರಿಯ 12:1).

ಜ್ಞಾನದಲ್ಲಿ ಪರಿಪಕ್ವತೆಯು ಗತಕಾಲದ ಸಂಗತಿಯಲ್ಲ – ಭವಿಷ್ಯದ್ದು – ಹತ್ತಿರದಲ್ಲಿಯೇ ಇರುವ ಭವಿಷ್ಯದ್ದು; ಮತ್ತು ನಾವು ಈ ಸತ್ಯಾಂಶವನ್ನು ಗುರುತಿಸಲು ಹೋದರೆ ನಾವು ನಮ್ಮ ತಂದೆಯ ಹೊಸ ಯೋಜನೆಗಳ ತೆರೆದಿರುವಿಕೆಯನ್ನು ಮೆಚ್ಚಿಕೊಳ್ಳಲು, ಮತ್ತು ಎದುರು ನೋಡಲು ಸಿದ್ಧರಾಗಿಲ್ಲ ಎಂದು ನಾವು ನಂಬುತ್ತೇವೆ. ಹೌದು, ಪ್ರಸ್ತುತ ಮತ್ತು ಭವಿಷ್ಯದ ಎಲ್ಲಾ ಜ್ಞಾನದ ಬಗ್ಗೆ ನಾವು ಇನ್ನೂ ಪ್ರವಾದಿಗಳ ಮತ್ತು ಅಪೋಸ್ತಲರುಗಳ ಮಾತುಗಳಿಗೆ ಹಿಂದಕ್ಕೆ ಹೋಗುತ್ತೇವೆ; ಹೇಗಾದರೂ ಯಾವಾಗಲೂ ಅವರು ದೇವರ ಯೋಜನೆ ಮತ್ತು ಉದ್ಧೇಶಗಳನ್ನು ನಮಗಿಂತ ಚೆನ್ನಾಗಿ ತಿಳಿದಿರುತ್ತಾರೆ ಎಂಬುದಕ್ಕಾಗಿ ಅಲ್ಲ. ಬದಲಿಗೆ ದೇವರು ಅವರನ್ನು ತನ್ನ ಮುಖವಾಣಿಯಾಗಿ ಉಪಯೋಗಿಸಿ ನಮ್ಮೊಡನೆ ಸಂಪರ್ಕ ಮಾಡಲು, ಮತ್ತೂ ಕ್ರೈಸ್ತ ಯುಗದುದ್ದಕ್ಕೂ ಎಲ್ಲಾ ಸಭೆಗಳಿಗೆ, ಆತನ ಯೋಜನೆಗಳ ಸತ್ಯವನ್ನು, ಕ್ಲುಪ್ತಕಾಲದಲ್ಲಿ ದೊರೆಯುವಂತೆ ವಾಡಲು ಉಪಯೋಗಿಸಿಕೊಂಡಿದ್ದಾನೆ ಎಂಬ ಕಾರಣಗಳಿಗಾಗಿ. ಈ ಅಂಶವು ಅಪೋಸ್ತಲರಿಂದ ಹೇರಳವಾಗಿ ಸಾಬೀತಾಗಿರುತ್ತದೆ. ದೇವರು ತನ್ನ ಉದ್ದೇಶಿಸಿರುವ ಮತ್ತು ಇದುವರೆಗೆ ಬಹಿರಂಗಪಡಿಸದಿದ್ದ ತನ್ನ ಚಿತ್ತದ

ಧರ್ಮರಹಸ್ಯಗಳನ್ನು, ಆತನು ಅವುಗಳನ್ನು ಅಂಧಕಾರದ ಹೇಳಿಕೆಗಳಲ್ಲಿ ದಾಖಲೆಪಡಿಸಿದ್ದು, ಉಚಿತ ಸಮಯ ಬರುವವರೆಗೆ ಅದನ್ನು ಅರ್ಥಮಾಡಿಕೊಳ್ಳಲಾಗದಿದ್ದರೂ, ನಮ್ಮ ತಿಳುವಳಿಕೆಯ ಕಣ್ಣುಗಳು ತೆರೆದು ಕ್ರಿಸ್ತಯುಗದ ವಿಶ್ವಾಸಿಗಳಿಗೆ ಮಾತ್ರವೇ ಮಹಾಕರೆಯನ್ನು ಪ್ರಶಂಸಿಸುವಂತೆ ವಿನ್ಯಾಸಗೊಳಿಸಿದ್ದಾನೆ (ಎಫೆಸ 1:9,10,17,18; 3:4–6). ಹೇಳಲ್ಪಟ್ಟಿರುವ ಪ್ರವಾದನೆಗಳ ಅರ್ಥವನ್ನು ಪ್ರವಾದಿಗಳಾಗಲೀ, ದೇವದೂತರುಗಳಾಗಲೀ ಅರ್ಥಮಾಡಿಕೊಂಡಿರಲಿಲ್ಲ ಎಂದು ನಮಗೆ ಸ್ಪಷ್ಟವಾಗಿ ತೋರಿಸುತ್ತದೆ. ಅವರುಗಳು ಅದರ ಅರ್ಥವನ್ನು ಬಯಸಿ ತವಕದಿಂದ ತಿಳುಕೊಳ್ಳಲು ಮುಂದಾದಾಗ, ದೇವರು ಅವರಿಗೆ ಪ್ರವಾದನೆಗಳಲ್ಲಿ ಹುದುಗಿರುವ ಸತ್ಯವು ಅವರಿಗಾಗಿ ಅಲ್ಲ, ಆದರೆ ಅದು ಕ್ರೈಸ್ತಯುಗದಲ್ಲಿರುವ ನಮಗಾಗಿ ಎಂಬುದಾಗಿ ಪೇತ್ರನು ತಿಳಿಸಿದ್ದಾನೆ. ಆತನು ಕ್ರೈಸ್ತ ಸಭೆಗೆ ಈ ದೆಸೆಯಲ್ಲಿ ಇನ್ನೂ ಹೆಚ್ಚಿನ ಕೃಪೆಯನ್ನು (ದಯೆ, ಆಶೀರ್ವಾದಗಳನ್ನು). ದೇವರ ಯೋಜನೆಯ ಬಗ್ಗೆ ಇನ್ನೂ ಹೆಚ್ಚಿನ ಜ್ಞಾನವನ್ನು ನಿರೀಕ್ಷಿಸುವಂತೆ ಬೋಧಿಸುತ್ತಾನೆ (1 ಪೇತ್ರ 1:10–13).

ಕ್ರೈಸ್ತ ಸಭೆಯು ಎಲ್ಲಾ ಸತ್ಯಗಳಿಂದ ಮಾರ್ಗದರ್ಶನ ಹೊಂದಿಕೊಳ್ಳಬೇಕೆಂಬ ಯೇಸುವಿನ ವಾಗ್ದಾನವು ಸ್ಪಷ್ಟವಾಗಿದ್ದರೂ ಅದು ಕ್ರಮೇಣವಾಗಿ ಬಿಚ್ಚಿಕೊಳ್ಳಬೇಕಾಗಿದೆ. ಅಪೋಸ್ತಲರ ದಿನಗಳಲ್ಲಿ, ಕ್ರೈಸ್ತ ಸಭೆಯು ಪೋಪನ ಅಧಿಕಾರದಿಂದ ಹೊರಹೊಮ್ಮಿದ ಅನೇಕ ತಪ್ಪುಗಳಿಂದ ಮುಕ್ತವಾಗಿದ್ದರೂ, ದೇವರ ಯೋಜನೆಯನ್ನು ಈಗ ನೋಡಲು ಸಾಧ್ಯವಾದಷ್ಟು ಮಟ್ಟಿಗೆ ಆಳವಾಗಿ ಮತ್ತು ಸ್ಪಷ್ಟವಾಗಿ ಆದಿ ಸಭೆಯು ನೋಡಲು ಸಾಧ್ಯವಾಯಿತೆಂದು ನಾವು ಭಾವಿಸಬಾರದು. ದೇವರ ಯೋಜನೆಯ ಬಗ್ಗೆ ಬೇರೆ ಬೇರೆ ಅಪೋಸ್ತಲರ ಬರಹಗಳೆಲ್ಲವೂ ಪ್ರವಾದನೆಯ ವಾಕ್ಯಗಳಲ್ಲಿ ಸತ್ಯವಾಗಿರುವಂತೆ ದೇವರಿಂದ ಮಾರ್ಗದರ್ಶನ ಮತ್ತು ಸ್ಫೂರ್ತಿಯನ್ನು ಹೊಂದಿದ್ದರೂ ಅವರುಗಳು ವಿವಿಧ ಮಟ್ಟದಲ್ಲಿ ತಮ್ಮದೇ ಆದ ಒಳನೋಟಗಳನ್ನು ಹೊಂದಿದ್ದರೆಂಬುದು ಸಹ ಸ್ಪಷ್ಟವಾಗಿದೆ. ಜ್ಞಾನದ ವ್ಯತ್ಯಾಸಗಳನ್ನು ಉದಹರಿಸುವಂತೆ, ನಾವುಗಳು ಕೆಲ ಸಮಯಕ್ಕೆ ಸುವಾರ್ತೆಯು ಅನ್ಯಜನರಿಗೆ ಹೋಗುವ ಸಮಯದಲ್ಲಿ, ಪೌಲನನ್ನು ಹೊರತುಪಡಿಸಿ ಪೇತ್ರನ ಮತ್ತು ಉಳಿದ ಅಪೋಸ್ತಲರುಗಳ ಅನಿಶ್ಚಿತ ಕ್ರಮಗಳನ್ನು ನೆನಪುಮಾಡಿಕೊಳ್ಳಬೇಕು. (ಅ.ಕೃ. 10:28; 11:1–3; ಗಲಾತ್ಯ 2:11–14) ಪ್ರವಾದನೆಗಳಿಂದ, ದೇವರ ಹಿಂದಿನ ವ್ಯವಹಾರಗಳಿಂದ ಮತ್ತು ತನಗೆ ಪ್ರಕಟವಾದ ನೇರವಾದ ಸಂಗತಿಗಳಿಂದ ಸ್ಫೂರ್ತಿ ಹೊಂದಿ ನೀಡಿದ ಪೌಲನ ಭರವಸೆಗೂ, ಪೇತ್ರನ ಅನಿಶ್ಚಿತತೆಗೂ ಇರುವ ವ್ಯತ್ಯಾಸಗಳಲ್ಲಿ ಇದನ್ನು ಗುರುತಿಸಬಹುದಾಗಿದೆ.

ಪೌಲನು ಇತರೆ ಅಪೋಸ್ತಲರುಗಳಿಗಿಂತ ಹೆಚ್ಚಿನ ಪ್ರಕಟನೆಗಳನ್ನು ಹೊಂದಿಕೊಂಡಿದ್ದನು ಎಂಬದು ಸ್ಪಷ್ಟವಾಗಿದೆ. ಆದರೆ, ಈ ಪ್ರಕಟನೆಗಳನ್ನು ಸಂಪೂರ್ಣವಾಗಿ ಅಥವಾ ಸರಳವಾಗಿ ಆತನು ಸಭೆಗಾಗಲೀ, ಇತರೆ ಅಪೋಸ್ತಲರಿಗಾಗಲೀ ತಿಳಿಸುವಂತಿರಲಿಲ್ಲ. (2 ಕೊರಿಂಥ 12:4; ಗಲಾತ್ಯ 2:2). ಹೀಗಿದ್ದರೂ ಪೌಲನಿಗುಂಟಾದ ಆ ದರ್ಶನಗಳಲ್ಲಿ ಮತ್ತು ಪ್ರಕಟನೆಗಳಲ್ಲಿ ನಾವು ಸಮಗ್ರ ಸಭೆಯ ಮೌಲ್ಯವನ್ನು ನೋಡಬಹುದು. ತನಗೆ ಕಂಡದ್ದನೆಲ್ಲಾ ಹೇಳುವ, ಇಲ್ಲವೇ ಬರಲಿರುವ ಯುಗದ ಸಂಬಂಧದಲ್ಲಿ ದೇವರು ತನಗೆ ತಿಳಿಸಿರುವ ಎಲ್ಲಾ ಧರ್ಮರಹಸ್ಯಗಳು ವಿವರವಾಗಿ ತಿಳಿಸುವ ಅನುಮತಿ ಅವನಿಗಿದ್ದಿಲ್ಲವಾದರೂ ಆತನು ನೋಡಿದವುಗಳಿಗೆ ಬಲವನ್ನು, ಆತನ ಮಾತುಗಳಿಗೆ ಛಾಯೆ ಮತ್ತು ಆಳದ ಅರ್ಥವನ್ನು ನೀಡಿದವು. ತರುವಾಯದ ಸತ್ಯಗಳು, ಪ್ರವಾದನೆಗಳ ನೆರವೇರಿಕೆಗಳು ಮತ್ತು ಆತ್ಮನ ಮಾರ್ಗದರ್ಶನದ ಬೆಳಕಿನಲ್ಲಿ ನಾವು ಇದನ್ನು ಆದಿಸಭೆಗಳಿಗಂತ ಹೆಚ್ಚಾಗಿ ಪ್ರಶಂಸಿಸಬಹುದಾಗಿದೆ.

ಹಿಂದಿನ ಹೇಳಿಕೆಗೆ ಸಮರ್ಥನೀಯವಾಗಿ ನಾವು ಸುಮಾರು ಕ್ರಿ.ಶ. 96ರಲ್ಲಿ ಬರೆದ ಸತ್ಯವೇದದ ಕಡೆಯ ಪುಸ್ತಕವಾದ ಪ್ರಕಟನೆಯನ್ನು ನಮ್ಮ ಮನಸ್ಸಿಗೆ ತಂದುಕೊಳ್ಳುತ್ತೇವೆ. ಅದರ ಮುನ್ನುಡಿಗಳೇ ಅದನ್ನು ಈ ಹಿಂದೆ ಅರ್ಥಮಾಡಿಕೊಳ್ಳಲಾಗದ ಸಂಗತಿಗಳ ಪ್ರಕಟನೆ ಎಂಬುದಾಗಿ ತಿಳಿಸುತ್ತವೆ ಮತ್ತು ಕನಿಷ್ಟ ಪಕ್ಷ, ಆ ಸಮಯದವರೆಗೆ ದೇವರ ಯೋಜನೆಯು ಸಂಪೂರ್ಣವಾಗಿ ಬಹಿರಂಗಪಟ್ಟಿರಲಿಲ್ಲ ಎಂಬುದನ್ನು ರುಜುವಾತುಪಡಿಸುತ್ತದೆ. ಆ ಪುಸ್ತಕವು ಎಂದೂ, ಇಂದಿನವರೆಗೂ, ಅದರ ಹೆಸರೇ ಅರ್ಥೈಸುವಂತೆ – ತೆರೆದುಕೊಳ್ಳುವ ಪ್ರಕಟನೆಯಾಗಿದೆ. ಆದಿಸಭೆಗಳನ್ನು ಕುರಿತು ಹೇಳುವುದಾದರೆ ಬಹುಶಃ ಯಾರೂ ಈ ಪುಸ್ತಕದ ಯಾವುದೇ ಭಾಗವನ್ನು ಅರ್ಥಮಾಡಿಕೊಳ್ಳಲಾಗಲಿಲ್ಲ. ದರ್ಶನವನ್ನು ಕಂಡ ಯೋಹಾನನು ಸಹಾ ಆತನು ಕಂಡ ಮಹತ್ವಗಳ ಬಗ್ಗೆ ತಿಳಿಯದವನಾಗಿದ್ದನು. ಆತನು ಒಬ್ಬ ಪ್ರವಾದಿ ಮತ್ತು ಅಪೋಸ್ತಲ ಎರಡೂ ಆಗಿದ್ದವನು. ಆತನು ಅಪೋಸ್ತಲನಾಗಿರುವಾಗ ಆತನು ಆಗ 'ಸೂಕ್ತ ಸಮಯದಲ್ಲಿ ಆಹಾರ'ವಾಗಿದ್ದನ್ನು ಅರ್ಥ ಮಾಡಿಕೊಂಡಿದ್ದಾನೆ ಮತ್ತು ಕಲಿಸಿದನು, ಒಬ್ಬ ಪ್ರವಾದಿಯಾಗಿ ಆತನು ಮನೆವಾರ್ತೆಯವರಿಗೆ

ಮುಂದಿನ ಕಾಲದಲ್ಲಿ ಆಹಾರವನ್ನು ಒದಗಿಸಲಿರುವ ಸಂಗತಿಗಳ ಬಗ್ಗೆ ತಿಳಿಸಿದನು.

ಕ್ರೈಸ್ತ ಯುಗದಲ್ಲಿ, ಕೆಲವೊಂದು ಭಕ್ತರುಗಳು ಈ ಸಾಂಕೇತಿಕ ಪುಸ್ತಕವನ್ನು ಅವಲೋಕಿಸಿ ಸಭೆಯ ಭವಿಷ್ಯದ ಬಗ್ಗೆ ತಿಳಿಯಬಯಸಿದರು. ಮತ್ತು ಈ ಪುಸ್ತಕವನ್ನು ಓದಿ ಅದರ ಒಂದು ಭಾಗವನ್ನಾದರೂ ಅರ್ಥ ಮಾಡಿಕೊಂಡವರೆಲ್ಲರೂ ನೀಡಿರುವ ವಾಗ್ದಾನಕ್ಕನುಸಾರವಾಗಿ ಆಶೀರ್ವಾದ ಹೊಂದಿ ಕೊಂಡರು (ಪ್ರಕಟನೆ 1:3). ಈ ಪುಸ್ತಕವು ಸುಧಾರಣಾ ದಿನದಲ್ಲಿದ್ದವರಿಗೆ ತೆರೆದಿದ್ದು ಪೋಪನ ಅಧಿಕಾರದಲ್ಲಿ, ಧರ್ಮಶೀಲ ಸೇವಕನಾಗಿದ್ದ ಲೂಥರನಿಗೆ – ಅಪೋಸ್ತಲನು ಹೇಳಿರುವಂತೆ ಪೋಪನೇ ಆ 'ಕ್ರಿಸ್ತವಿರೋಧಿ'ಯೆಂದು ನಿರ್ಧರಿಸುವಲ್ಲಿ ಮುಖ್ಯವಾದ ಸಹಾಯಕವಾಗಿತ್ತು. ಇದರ ಚರಿತ್ರೆಯು ಈಗ ಆ ಪ್ರವಾದನೆಯನ್ನು ಬಹಳವಾಗಿ ಆವರಿಸುತ್ತದೆ.

ಹೀಗೆ ಕಾಲಕ್ರಮದಲ್ಲಿ ದೇವರು ತನ್ನ ಸತ್ಯವನ್ನು ಬಿಚ್ಚಿಡುತ್ತಾನೆ ಮತ್ತು ತನ್ನ ಕೃಪೆಯ ಅಧಿಕವಾದ ಶ್ರೀಮಂತಿಕೆಯನ್ನು ಪ್ರಕಟಿಸುತ್ತಾನೆ. ಇದರ ಪರಿಣಾಮವಾಗಿ ಸಭಾ ಚರಿತ್ರೆಯಲ್ಲಿ ಹಿಂದೆಂದೂ ಇಲ್ಲದಂತೆ ಇನ್ನೂ ಹೆಚ್ಚಿನ ಬೆಳಕು ಈಗ ಬರಲಿದೆ.

"And still new beauties shall we see
And still increasing light":

ನಾವು ಮತ್ತೂ ನೂತನ ಸೌಂದರ್ಯವನ್ನು ಮತ್ತು
ಇನ್ನೂ ಹೆಚ್ಚಾದ ಬೆಳಕನ್ನು ಕಾಣುವೆವು.

* * * * * *

# ಅಧ್ಯಯನ – 2 Study II

# ಸರ್ವೋಚ್ಛ ಜ್ಞಾನಿಯಾದ ಸೃಷ್ಟಿಕರ್ತನ ಅಸ್ತಿತ್ವವು ಸ್ಥಾಪಿಸಲ್ಪಟ್ಟಿತು

## "THE EXISTENCE OF SUPREME INTELLIGENT CREATOR ESTABLISHED"

**ಸತ್ಯವೇದ ಹೊರತಾದ ಸಾಕ್ಷ್ಯವು – ವಿವೇಚನೆಯ ಬೆಳಕಿನಲ್ಲಿ ಪರೀಕ್ಷೆ ಮಾಡಲಾಗಿದೆ – ಅಸಮಂಜಸವಾದ ವಿಚಾರ ಸರಣಿ – ಸಮಂಜಸವಾದ ವಿಚಾರ ಸರಣಿ – ದೇವರ ಗುಣಲಕ್ಷಣಗಳು ಪ್ರಕಟಿಸಲ್ಪಟ್ಟವು – ಸಮಂಜಸವಾದ ವ್ಯವಕಲನಗಳು ಕಳೆಯುವಿಕೆಗಳು**

ಸಂದೇಹಕಾತ್ಮಕ ದೃಷ್ಟಿಕೋನದಿಂದಲೂ, ತಿಳಿದಿರುವುದರ ಬೆಳಕಿನಲ್ಲಿ ತಿಳಿಯದಿರುವುದರ ಅಜ್ಞಾತದ ಬಗ್ಗೆ ಸಮಂಜಸವಾದ ಮತ್ತು ಪ್ರಾಮಾಣಿಕ ಹುಡುಕಾಟವು ನಿಷ್ಪಕ್ಷಪಾತಿಗಳನ್ನು, ಬುದ್ಧಿವಂತ ತಾರ್ಕಿಕರಿಗೆ ಸತ್ಯದ ದಿಕ್ಕಿನತ್ತ ಮಾರ್ಗದರ್ಶನ ನೀಡುತ್ತದೆ. ಆದರೂ ದೇವರ ಯೋಜನೆ ಮತ್ತು ಉದ್ದೇಶಗಳ ನೇರವಾದ ಪ್ರಕಟನೆ ಇಲ್ಲದೆ ಜನರು ಸತ್ಯವನ್ನು ಅಂದಾಜಿಸಬಹುದು ಮತ್ತು ಅನಿರ್ದಿಷ್ಟ ತೀರ್ಮಾನಗಳಿಗೆ ಬರುತ್ತಾರೆ ಎಂಬುದು ಸ್ಪಷ್ಟವಾಗಿದೆ. ಆದರೆ, ನಾವು ಸ್ವಲ್ಪ ಹೊತ್ತು ಸತ್ಯವೇದವನ್ನು ಬದಿಗಿರಿಸೋಣ, ಮತ್ತು ವಿಷಯಗಳನ್ನು ವಿವೇಚನಾ ದೃಷ್ಟಿಕೋನದಲ್ಲಿ ಮಾತ್ರವೇ ನೋಡೋಣ.

ಆಕಾಶದತ್ತ ದೂರದರ್ಶಕದಿಂದ ಅಥವಾ ತನ್ನ ಸ್ವಾಭಾವಿಕ ಕಣ್ಣುಗಳಿಂದ ಮಾತ್ರವೇ ನೋಡುವಾತನು, ಸೃಷ್ಟಿಯ ಅಗಾಧತೆಯನ್ನೂ, ಅದರ ಸಮರೂಪತೆಯನ್ನೂ, ಸೌಂದರ್ಯವನ್ನೂ, ಕ್ರಮಬದ್ಧತೆಯನ್ನೂ, ಸಾಮರಸ್ಯ ಮತ್ತು ವೈವಿಧ್ಯತೆಗಳನ್ನೂ ನೋಡುತ್ತಾನೆ ಮತ್ತು ಆದಾಗ್ಯೂ ಇವುಗಳನ್ನು ಸೃಷ್ಟಿಸಿದಾತನು ಬುದ್ಧಿವಂತಿಕೆಯಲ್ಲಿಯೂ ಮತ್ತು ಶಕ್ತಿಯಲ್ಲಿಯೂ ತನಗಿಂತ ಶ್ರೇಷ್ಠನು ಎಂದು ಅನುಮಾನಿಸುತ್ತಾನೆ ಮತ್ತು ಒಂದು ಕ್ಷಣ ಇಂಥಾಃ ಕ್ರಮವು ಯಾವ ಸೃಷ್ಟಿಕರ್ತನಿಲ್ಲದೆ ಆಕಸ್ಮಿಕವಾಗಿ ಬಂದಿರಬಹುದೆಂದೂ ಊಹಿಸುತ್ತಾನೆ. ಇದನ್ನು ಇದುವರೆಗೆ ವಿವೇಚನೆಯ ಸಹಜಶಕ್ತಿಯು ಅಲಕ್ಷಿಸಿದೆ ಮತ್ತು ಸತ್ಯವೇದವು ಆತನನ್ನು ಮೂರ್ಖನೆಂದು (ನಿರ್ಲಕ್ಷಿಸುವವನು ಮತ್ತು ವಿವೇಚನೆ ಇಲ್ಲದವನೆಂದು) ಕರೆಯುತ್ತದೆ – "ದುರ್ಮತಿಗಳು– ದೇವರಿಲ್ಲವೆಂದು ಮನಸ್ಸಿನಲ್ಲಿ ಅಂದುಕೊಳ್ಳುತ್ತಾರೆ" (ಕೀರ್ತನೆ 14:1;53:1). ಆದಾಗ್ಯೂ, ಪ್ರತಿಯೊರ್ವ ವಿವೇಚನಾಶಾಲಿಯ ಮನಸ್ಸನ್ನು ಸತ್ಯವೇದದ ಸಂಗತಿಗಳು ಸಮರ್ಥ ಕಾರಣಗಳಿಂದ ಸತ್ಯವಾಗಿವೆ ಎಂಬ ತೀರ್ಮಾನಕ್ಕೆ ತರುತ್ತದೆ. ಯಾಕೆಂದರೆ ಇದು ಸ್ವಯಂ–ಸ್ಪಷ್ಟವಾದ ಸತ್ಯವಾಗಿದ್ದು ಅದರ ಪರಿಣಾಮಗಳು ದಕ್ಷ ಕಾರಣಗಳಿಂದ ಉತ್ಪತ್ತಿಯಾಗುತ್ತವೆ, ಪ್ರತಿಯೊಂದು ಗಿಡವೂ, ಪ್ರತಿಯೊಂದು ಹೂವೂ ಈ ಪ್ರಸ್ತಾಪದ ಬಗ್ಗೆ ವಿಸ್ತಾರವಾದ ಸಾಕ್ಷ್ಯಗಳ ಬಗ್ಗೆ ಮಾತನಾಡುತ್ತವೆ. ನಿರ್ಮಾಣದಲ್ಲಿ ಗಹನವಾಗಿದ್ದು, ರೂಪದಲ್ಲಿ ಉತ್ಕೃಷ್ಟವಾಗಿ ಪ್ರತಿಯೊಂದೂ ಮನೋಹರವಾಗಿದ್ದು ಮಾನವರಿಗೆ ಮೀರಿದ ವಿವೇಕ ಮತ್ತು ಕೌಶಲ್ಯಗಳ ಬಗ್ಗೆ ಮಾತನಾಡುತ್ತವೆ. ಮಾನವ ಕಾರ್ಯಕೌಶಲ್ಯದ ಬಗ್ಗೆ, ದಕ್ಷತೆಯ ಬಗ್ಗೆ ಕೊಚ್ಚಿಕೊಳ್ಳುವುದು ಎಷ್ಟೋ ಮಂದದೃಷ್ಟಿಯುಳ್ಳ ಅಸಂಬದ್ಧತೆಯಾಗಿದೆ ಮತ್ತು ಇದು ಕ್ರಮಬದ್ಧತೆಯನ್ನು, ಏಕರೂಪತೆಯನ್ನು ಮತ್ತು ಪ್ರಕೃತಿಯೊಡನೆ ಸಾಮರಸ್ಯವನ್ನು ಕೇವಲ ಅನಿರೀಕ್ಷಿತ ಘಟನೆಯನ್ನಾಗಿ ಪರಿಗಣಿಸುತ್ತದೆ ಮತ್ತು ಪ್ರಕೃತಿಯು ಒಬ್ಬ ಜ್ಞಾನಿಯಾದ ನ್ಯಾಯವಿಧಾಯಕನನ್ನು ಹೊಂದಿದೆ ಎಂಬುದನ್ನು ನಿರಾಕರಿಸಿ ಕೇವಲ ಪ್ರಕೃತಿಯ ನಿಯಮಗಳನ್ನು ಒಪ್ಪಿಕೊಳ್ಳುತ್ತದೆ.

ಜ್ಞಾನಿಯಾದ ಸೃಷ್ಟಿಕರ್ತನ ಅಸ್ತಿತ್ವವನ್ನು ಒಪ್ಪದಿರುವ ಕೆಲವರು ಪ್ರಕೃತಿ ಮಾತ್ರವೇ ದೇವರು, ಮತ್ತು ಈ ಪ್ರಕೃತಿಯಿಂದ ಎಲ್ಲಾ ರೀತಿಯ ಪ್ರಾಣಿಗಳ, ಸಸ್ಯಾದಿಗಳ ಅಭಿವೃದ್ಧಿಗಳು ಯಾವುದೇ ಜ್ಞಾನದ ಅಪ್ಪಣೆಯಿಲ್ಲದೆ ಮುಂದುವರೆಯುತ್ತದೆ ಮತ್ತು "ಅತ್ಯಂತ ಅರ್ಹವಾದದ್ದು ಬದುಕುಳಿಯುತ್ತದೆ ಎಂಬ ಸಿದ್ಧಾಂತ" (The survival of the fittest) ಎಂಬ ನಿಯಮಕ್ಕೆ ಒಳಗಾಗಿದ್ದು ವಿಕಾಸದ ಪ್ರಕ್ರಿಯೆಯಲ್ಲಿ ಪಾಲಿಸಲ್ಪಡುತ್ತಿದೆ ಎಂಬ ಹಕ್ಕೇಳಿಕೆ ನೀಡುತ್ತಾರೆ.

ಈ ವಿಚಾರಸರಣಿಗೆ ಸಾಕ್ಷ್ಯದ ಕೊರತೆ ಇದೆ. ನಮ್ಮ ಎಲ್ಲವುಗಳ ಬಗ್ಗೆ ನಾವು ನೋಡುವುದೇನೆಂದರೆ ವಿವಿಧ ಜೀವಿಗಳು ಸ್ಥಿರವಾದ ಸ್ವಭಾವಗಳುಳ್ಳವುಗಳಾಗಿದ್ದು ಅವುಗಳು ಉನ್ನತ ಸ್ವಭಾವಕ್ಕೆ ವಿಕಾಸಗೊಳ್ಳುತ್ತಿಲ್ಲ; ಈ ವಿಚಾರ ಸರಣಿಯನ್ನು (ಸಿದ್ಧಾಂತ) ಹಿಡುಕೊಂಡಿರುವವರು ಅನೇಕ ಪ್ರಯತ್ನಗಳನ್ನು ಪುನರ್ವರ್ತಿಸುವವರಾದರೂ, ಅವರಿಗೆ ವಿವಿಧ ಜಾತಿಯ

ಜೀವಿಗಳನ್ನು ಬೆರಕೆ ಮಾಡುವುದಾಗಲೀ ಅಥವಾ ನೂತನ ನಿಗದಿತ ತಳಿಯೊಂದನ್ನು ಉತ್ಪತ್ತಿ ಮಾಡುವುದರಲ್ಲಿ ಯಶಸ್ವಿಯಾಗಲಿಲ್ಲ. ಒಂದು ಬಗೆಯು ಮತ್ತೊಂದು ಬಗೆಯಾದ ಯಾವ ಘಟನೆಯೂ ಇದುವರೆಗೆ ನಡೆದಿಲ್ಲ*. ಮೀನುಗಳು ತಮ್ಮ ಈಜು ರೆಕ್ಕೆಗಳನ್ನು (Fins) ರೆಕ್ಕೆಗಳನ್ನಾಗಿ ಕೆಲವೊಮ್ಮೆ ಉಪಯೋಗಿಸಿ ನೀರಿನ ಮೇಲೆ ಕೆಲವು ಕ್ಷಣ ಹಾರುವುದಾದರೂ, ಕಪ್ಪೆಗಳು ಗಾಯನ ಮಾಡುವುದಾದರೂ, ಅವುಗಳು ಎಂದಿಗೂ ಹಕ್ಕಿಗಳಾಗಿ ಮಾರ್ಪಡಲಿಲ್ಲ. ಕ್ರೂರ (brutes) ಪ್ರಾಣಿಗಳಲ್ಲಿ ಕೆಲವು ಸ್ವಲ್ಪ ಮಟ್ಟಿಗೆ ಮಾನವನ ರೂಪವನ್ನು ಹೋಲುವುದಾದರೂ ಮಾನವನು ಅಂಥಾಃ ಪ್ರಾಣಿಗಳಿಂದ ವಿಕಾಸಗೊಂಡನು ಎಂಬುದಕ್ಕೆ ಸಂಪೂರ್ಣವಾದ ಸಾಕ್ಷ್ಯದ ಕೊರತೆ ಇದೆ. ಇದಕ್ಕೆ ವ್ಯತಿರಿಕ್ತವಾಗಿ, ಒಂದೇ ಜೀವಿಯ ವಿವಿಧ ಜಾತಿಗಳು ಉತ್ಪತ್ತಿಗೊಂಡರೂ, ಈ ವಿವಿಧ ಜಾತಿಯವುಗಳನ್ನು ಮಿಶ್ರಣ ಮಾಡಲು ಅಥವಾ ಒಂದು ಮತ್ತೊಂದಾಗಿ ವಿಕಾಸಗೊಳ್ಳಲು ಸಾಧ್ಯವಿಲ್ಲ. ಅದೇ ಕಾರಣದಿಂದ ಕತ್ತೆ ಮತ್ತು ಕುದುರೆಯು ಒಂದಕ್ಕೊಂದು ಹೋಲುವುದಾದರೂ ಅವುಗಳು ಸಂಬಂಧಿಗಳೆಂದು ಹೇಳಬರುವಂತಿಲ್ಲ. ಯಾಕೆಂದರೆ ಅವುಗಳ ಸಂತತಿಯು ಅಸಮರ್ಪಕವಾಗಿದೆ ಮತ್ತು ಯಾವುದಾದರೊಂದು ಪ್ರಾಣಿಯನ್ನು ಹುಟ್ಟಿಸಲು ಸಾಧ್ಯವಿಲ್ಲ.

ಖಂಡಿತವಾಗಿ ಬುದ್ಧಿಶಕ್ತಿಯಿಲ್ಲದ ಪ್ರಕೃತಿಯೇ ಸೃಷ್ಟಿಕರ್ತನೋ ಅಥವಾ ವಿಕಾಸಗೊಳಿಸುವವನೋ ಆಗಿದ್ದಲ್ಲಿ ಅದು ತನ್ನ ಈ ಪ್ರಕ್ರಿಯೆಯನ್ನು ಮುಂದುವರಿಸುತ್ತಿತ್ತು ಮತ್ತು ನಿಗದಿತವಾದ ಯಾವ ತಳಿಯೂ ಇರುತ್ತಿದ್ದಿಲ್ಲ, ಬುದ್ಧಿವಂತಿಕೆ ಇಲ್ಲದೆ ಯಾವುದೂ ನಿಶ್ಚಿತ ಸ್ಥಿತಿಗಳಿಗೆ ಬರುವುದಿಲ್ಲ. ವಿಕಾಸವು ಇಂದು ನಿಜವಾಗುತ್ತಿದ್ದರೆ, ನಾವು ಮೀನು ಹಕ್ಕಿಯಾಗುವುದನ್ನು ನೋಡುತ್ತಿದ್ದೆವು, ಮಂಗಗಳು ಮಾನವರಾಗುವುದನ್ನು ನೋಡುತ್ತಿದ್ದೆವು. ಈ ವಿಚಾರಸರಣಿಯು ಮಾನವ ವಿವೇಚನೆಗೂ ಮತ್ತು ಸತ್ಯವೇದಕ್ಕೂ ವ್ಯತಿರಿಕ್ತವಾಗಿದೆ ಎಂಬ ತೀರ್ಮಾನಕ್ಕೆ ನಾವು ಬರುತ್ತೇವೆ. ಯಾಕೆಂದರೆ, ಅದು ಬುದ್ಧಿವಂತ ಜೀವಿಗಳನ್ನು ಬುದ್ಧಿವಂತಿಕೆಯ ಶಕ್ತಿಯ ಕೊರತೆ ಇರುವವುಗಳಿಂದ ಸೃಷ್ಟಿಸಲ್ಪಟ್ಟವು ಎಂದು ಹೇಳುತ್ತದೆ.

ವಿಕಾಸದ ಪ್ರಕ್ರಿಯೆಯಿಂದುಂಟಾಗುವ (ಮಾನವನನ್ನು ಹೊರತುಪಡಿಸಿ) ಸೃಷ್ಟಿಯ ಪ್ರಕ್ರಿಯೆಯ ಒಂದು ಸಿದ್ಧಾಂತಕ್ಕೆ ನಾವು ಯಾವುದೇ ಗಂಭೀರವಾದ ವಿರೋಧವಿಲ್ಲ, ನಾವು ಸಂಕ್ಷಿಪ್ತವಾಗಿ ಈ ರೀತಿಯಾಗಿ ಹೇಳುತ್ತೇವೆ: ಪ್ರಸ್ತುತದಲ್ಲಿರುವ ವಿವಿಧ ಜೀವಿವರ್ಗಗಳು ಪಕೃತಿ ಅಥವಾ ಜಾತಿಯ ಪರಿಗಣನೆಯಲ್ಲಿ ನಿಗದಿತಗೊಂಡಿವೆ ಎಂದು ಭಾವಿಸಲಾಗಿದೆ; ಪ್ರಸ್ತುತ ಸ್ವಭಾವಗಳು ಬಹಳ ಹೆಚ್ಚಿನ ಮಟ್ಟಕ್ಕೆ, ಪರಿಪಕ್ವತೆಗೆ ಅಭಿವೃದ್ಧಿ ಹೊಂದಿಕೊಳ್ಳ ಬಹುದಾದರೂ ಆ ಜೀವಿಗಳೂ, ಸ್ವಭಾವಗಳೂ ಸದಾಕಾಲಕ್ಕೂ ಒಂದೇ ಆಗಿರುವುವು. ಈ ವಿಚಾರ ಸರಣಿಯು ಇವುಗಳಲ್ಲಿ ಯಾವುದೇ ನಿಗದಿತ ಜೀವಿಗಳು ಮೂಲದಲ್ಲಿ ಹಾಗೆ ಸೃಷ್ಟಿಸಲ್ಪಟ್ಟಿರಲಿಲ್ಲ, ಆದರೆ ಬಹಳ ಹಿಂದೆ ಅವುಗಳು ಭೂಮಿಯಿಂದ ಮತ್ತು ಕ್ರಮೇಣವಾದ ವಿಕಾಸ ಕ್ರಿಯೆಯಿಂದ ಒಂದು ರೂಪದಿಂದ ಮತ್ತೊಂದು ರೂಪಕ್ಕೆ ಅಬಿವೃದ್ಧಿಗೊಂಡವು ಎಂದು ಊಹಿಸುತ್ತದೆ. ದೈವಿಕವಾಗಿ ಸ್ಥಾಪಿತವಾದ ನಿಯಮಗಳ ಅಡಿಯಲ್ಲಿ ಈ ವಿಕಸನಗಳಲ್ಲಿ (evolutions) ಆಹಾರ ಮತ್ತು ಹವಾಮಾನದ ಬದಲಾವಣೆಗಳು ಪ್ರಮುಖ ಪಾತ್ರವಹಿಸಿವೆ, ಪ್ರಸ್ತುತದಲ್ಲಿ ಕಂಡುಬರುವಂತೆ ಸ್ಥಿರ ಜಾತಿಗಳು ಸ್ಥಾಪನೆಯಾಗು ವವರೆಗೂ ಮುಂದುವರೆದಿರಬಹುದು, ಅದನ್ನು ಮೀರಿ ಬದಲಾವಣೆ ಅಸಾಧ್ಯ, ಎಲ್ಲಾ ದೃಷ್ಠಿಕೋನದಿಂದ ಈ ವಿಷಯದಲ್ಲಿ ಸೃಷ್ಟಿಕರ್ತನ ಅಂತಿಮ ಉದ್ದೇಶವನ್ನು ತಲುಪಿದೆ. ಗಿಡಗಳ ಮತ್ತು ಪ್ರಾಣಿಗಳ ವಿವಿಧ ಸಂತಾನಗಳ ಪ್ರತಿಯೊಂದು ಕುಟುಂಬವೂ ಅಭಿವೃದ್ಧಿ ಹೊಂದಿಕೊಳ್ಳಲು ಅಥವಾ ಅವನತಿ ಹೊಂದಲು ಶಕ್ತವಾಗಿವೆಯಾದರೂ ಅವುಗಳಲ್ಲಿ ಯಾವುದೂ ಬದಲಾವಣೆ ಹೊಂದಲು ಅಥವಾ ಬೇರೆ ಕುಟುಂಬದಿಂದ ಅಥವಾ ಜಾತಿಯಿಂದ ಉತ್ಪತ್ತಿ ಹೊಂದಿಕೊಳ್ಳುವಷ್ಟು ಪರಿಣಾಮಕಾರಕವಾಗಿರುವುದಿಲ್ಲ. ಇವುಗಳಲ್ಲಿ ಪ್ರತಿಯೊಂದೂ ತನ್ನ ನಿಗದಿತ ರೂಪದ ಪರಿಪೂರ್ಣತೆಯನ್ನು ತಲುಪಬಹುದಾದರೂ, ಪ್ರಕೃತಿಗೆ ತಕ್ಕ ಸೃಷ್ಟಿಕರ್ತನ ವಿನ್ಯಾಸವು ತಲುಪಿದ ಮೇಲೆ, ಈ ಸಂಬಂಧದಲ್ಲಿ ಹೆಚ್ಚಿನ ಬದಲಾವಣೆ ಸಾಧ್ಯವಿಲ್ಲ.

ಪ್ರಸ್ತುತ ನಿಗದಿತ ಬಗೆಬಗೆಯಾದವುಗಳು ಬಂದ ಮೂಲ ಸಸ್ಯಗಳು ಮತ್ತು ಪ್ರಾಣಿಗಳು ಮಾನವ ಸೃಷ್ಟಿಯ ಮೊದಲೇ ಅಳಿದುಹೋದವು. ಈಗ ಅಸ್ಥಿತ್ವದಲ್ಲಿ ಇಲ್ಲದ ಸಸ್ಯಗಳ ಮತ್ತು ಪ್ರಾಣಿಗಳ ಅವಶೇಷಗಳು, ಅಸ್ಥಿಪಂಜರಗಳು, ಭೂಮಿಯ ಮೇಲ್ಮೈಯಿಂದ ಬಹು ತಳದಲ್ಲಿ ಕಂಡುಬಂದಿವೆ ಎಂಬುದು ಈ ವಿಚಾರಣಾ ಸರಣಿಯನ್ನು ಬೆಂಬಲಿಸುತ್ತದೆ. ಈ ದೃಷ್ಟಿಕೋನವು

* ಕೆಲವು ಓದುಗರ ಉಪಯೋಗಕ್ಕಾಗಿ ನಾವು ಹೇಳುವುದೇನೆಂದರೆ ಕಂಬಳಿ ಹುಳುಗಳು ಚಿಟ್ಟೆಯಾಗಿ ಮಾರ್ಪಡುವುದು ಸ್ವಾಭಾವಿಕ ಬದಲಾವಣೆಯಲ್ಲ. ಯಾಕೆಂದರೆ ಕಂಬಳಿ ಹುಳುಗಳು ಚಿಟ್ಟೆಗಳ ಮೊಟ್ಟೆಗಳಿಂದ ಉತ್ಪತ್ತಿಯಾಗುವ ಮರಿಹುಳುಗಳು (Catterpillars) ಅಷ್ಟೇ ಆಗಿದೆ

ಮನುಷ್ಯನು ದೇವರ ಪರಿಪೂರ್ಣವಾದ ಮತ್ತು ನೇರವಾದ ಸೃಷ್ಟಿಯಾಗಿದ್ದಾನೆ ಮತ್ತು ಆತನ ಸ್ವರೂಪದಲ್ಲಿ ಮಾಡಲ್ಪಟ್ಟಿದ್ದಾನೆ, ಆತನು ವಿಕಾಸ ಪ್ರಕ್ರಿಯೆಯಿಂದ ವರ್ಧಿಸಿದ್ದಲ್ಲ ಎಂಬ ಸತ್ಯವೇದದ ಬೋಧನೆಯನ್ನು ನಿರ್ಲಕ್ಷಿಸುವುದೂ ಇಲ್ಲ ಅಥವಾ ತಿರಸ್ಕರಿಸುವುದೂ ಇಲ್ಲ. ಇದು ಬಹುಶಃ ಉಳಿದ ಸೃಷ್ಟಿಗೂ ಸಾಮಾನ್ಯವಾಗಿ ಅನ್ವಯಿಸುತ್ತದೆ.. ಈ ದೃಷ್ಟಿಕೋನವೂ ಯಾವುದೇ ಅರ್ಥದಲ್ಲಿ ನಿರರ್ಥಕವಾಗದು, ಆದರೆ ಪ್ರಕೃತಿಯು ಇಂದು ಇರುವಂತೆ ಒಬ್ಬ ಬುದ್ಧಿಯುಳ್ಳ ಜೀವಿಯು ಅದಕ್ಕೆ ಅಪ್ಪಣೆಕೊಟ್ಟಿದ್ದಾನೆ, ಮತ್ತು ಇದರ ಮೊದಲ ಕಾರಣವಾಗಿದ್ದಾನೆ ಎಂಬ ಸತ್ಯವೇದದ ದೃಷ್ಟಿಕೋನವನ್ನು ಬೆಂಬಲಿಸುತ್ತದೆ. ಮಾನವ ವಿವೇಚನೆಯು ಸಮಂಜಸವಾದ ಮತ್ತು ದಕ್ಷ ಕಾರಣಗಳಿಗೆ ಬೇಕಾದ ತಿಳಿದ ಸತ್ಯಗಳನ್ನು ಪತ್ತೆಹಚ್ಚುವ ಉತ್ತಮ ಪ್ರಯತ್ನಗಳನ್ನು ಮಾಡಲಿ, ಪ್ರತಿಯೊಂದು ಪ್ರಕರಣದಲ್ಲಿಯೂ ಪ್ರಕೃತಿಯ ನಿಯಮಗಳಿಗೆ ಉಚಿತವಾದ ಗಣ್ಯತೆಯನ್ನು ನೀಡಲಿ; ಆದರೆ ಪ್ರಕೃತಿಯ ಎಲ್ಲಾ ಗಹನವಾದ ವ್ಯವಸ್ಥೆಯ ಹಿಂದೆ ಅದರ ಕರ್ತೃವೂ, ಜ್ಞಾನಿಯೂ, ಸರ್ವಶಕ್ತನೂ ಆದ ದೇವರ ಕೈವಾಡವಿದೆ.

ಆಗ ನಮ್ಮ ಹಕ್ಕೇಳಿಕೆ ಏನೆಂದರೆ, ಜ್ಞಾನಿಯಾದ ಸೃಷ್ಟಿಕರ್ತನ ಅಸ್ಥಿತ್ವವು ಸ್ಪಷ್ಟವಾಗಿ ನಿರೂಪಿಸಿದ ಒಂದು ಸತ್ಯವಾಗಿದೆ, ಅದರ ಸಾಕ್ಷ್ಯವು ನಮ್ಮ ಸುತ್ತಲೂ ಇದೆ. ಹೌದು, ನಮ್ಮೊಳಗೇ ಇದೆ. ಯಾಕೆಂದರೆ ನಾವು ಆತನ ನಿರ್ಮಾಣವು, ಆತನ ಪ್ರತಿಯೊಂದು ಮನಸ್ಸಿನ ಮತ್ತು ದೇಹದ ಶಕ್ತಿಯೂ ನಮ್ಮ ಗ್ರಹಿಕೆಗೆ ಮೀರಿದ ಅತ್ಯಂತ ಕೌಶಲ್ಯದ ಬಗ್ಗೆ ಮಾತನಾಡುತ್ತದೆ. ನಾವು ಪ್ರಕೃತಿ ಎಂದು ಕರೆಯುವುದರ ವಿನ್ಯಾಸಕಾರನು ಮತ್ತು ಸೃಷ್ಟಿಕರ್ತನು ಆತನೇ ಆಗಿದ್ದಾನೆ. ಆತನು ಪಕೃತಿಯ ನಿಯಮಗಳನ್ನು ಆಜ್ಞಾಪಿಸಿ ಸ್ಥಾಪಿಸಿದ್ದಾನೆ ಎಂದು ನಾವು ಹೇಳುತ್ತೇವೆ, ಆತನ ಕ್ರಿಯೆಯ ಸೌಂದರ್ಯ ಮತ್ತು ಸಾಮರಸ್ಯವನ್ನು ನಾವು ನೋಡಿ ಮೆಚ್ಚಿಕೊಳ್ಳುತ್ತೇವೆ. ಯಾವಾತನ ಜ್ಞಾನವು ಯೋಜಿಸಿ. ಆತನ ಶಕ್ತಿಯು ವಿಶ್ವವನ್ನು ಎತ್ತಿಹಿಡಿದು ಮಾರ್ಗದರ್ಶನ ನೀಡುತ್ತದೆಯೋ, ಆತನ ಜ್ಞಾನ ಮತ್ತು ಶಕ್ತಿಯು ಅಳತೆಯಿಲ್ಲದ ಅಗಾಧವಾಗಿದೆ. ನಮ್ಮ ಸ್ವಂತದ್ದನ್ನು ಅತಿಶಯಗೊಳಿಸುತ್ತದೆ. ಸಹಜವಾಗಿಯೇ ನಾವು ಆತನನ್ನು ಪೂಜಿಸುತ್ತೇವೆ ಮತ್ತು ಆರಾಧಿಸುತ್ತೇವೆ.

ಈ ಸರ್ವಶಕ್ತ ದೇವರ ಇರುವಿಕೆಯನ್ನು ಗ್ರಹಿಸಿಕೊಳ್ಳುವುದಕ್ಕಾಗಿ ಆತನು ಪರೋಪಕಾರ ಮತ್ತು ತನ್ನ ಶಕ್ತಿಗೆ ಅನುಗುಣವಾದ ಒಳ್ಳೆತನವನ್ನು ಹೊಂದಿರುವುದನ್ನು ನೋಡುವ ತನಕ ಆತನ ಸರ್ವಶಕ್ತಿಗೆ ಭಯಭೀತರಾಗಬೇಕಾಗುತ್ತದೆ. ಈ ಸತ್ಯಸಂಗತಿಗೆ ನಾವು ಆತನ ಇರುವಿಕೆಯನ್ನು, ಶಕ್ತಿ ಮತ್ತು ಜ್ಞಾನವನ್ನು ಸಾಬೀತುಪಡಿಸುವ ಅದೇ ಸಾಕ್ಷ್ಯದಿಂದ ಭರವಸೆ ಹೊಂದಿದ್ದೇವೆ. ನಾವು ದೇವರಿದ್ದಾನೆ ಎಂಬ ಈ ತೀರ್ಮಾನಕ್ಕೆ ಒತ್ತಾಯಪಡುವುದು ಮಾತ್ರವಲ್ಲ, ಆತನ ಶಕ್ತಿ ಮತ್ತು ಜ್ಞಾನವನ್ನು ಅಳತೆಮಾಡುವುದು ನಮಗೆ ಮೀರಿದ್ದಾಗಿದೆ. ಆದರೆ ಸೃಷ್ಟಿಸಲ್ಪಟ್ಟ ಭವ್ಯವಾದ ಸಂಗತಿಗಳು ಸೃಷ್ಟಿಕರ್ತನಿಗಿಂತ ಶ್ರೇಷ್ಠವಾದುದಲ್ಲ ಎಂಬ ನಮ್ಮ ತೀರ್ಮಾನದ ಕಾರಣಕ್ಕೆ ನಾವು ಒತ್ತಾಯಿಸಲ್ಪಡುತ್ತೇವೆ, ಆದುದರಿಂದ ನಾವು ಮನುಷ್ಯರಲ್ಲಿನ ಪರೋಪಕಾರ ಮತ್ತು ನ್ಯಾಯದ ಅತಿ ಶ್ರೇಷ್ಠ ಪ್ರಕಟನೆಯು ಆ ಸೃಷ್ಟಿಕರ್ತನ ವ್ಯಾಪ್ತಿಯ ಮುಂದೆ ಕೆಳಮಟ್ಟದ್ದಾಗಿವೆ ಎಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ. ಈ ರೀತಿಯಲ್ಲಿ ನಮ್ಮ ಮಾನಸಿಕ ದರ್ಶನದ ಮುಂದೆ ಮಹಾಸೃಷ್ಟಿಕರ್ತನ ಗುಣಲಕ್ಷಣಗಳೂ, ಗುಣಧರ್ಮವೂ ಇವೆ. ಆತನು ಜ್ಞಾನವಂತನೂ, ನ್ಯಾಯವಂತನೂ, ಪ್ರೀತಿಸ್ವರೂಪನೂ, ಶಕ್ತಿಶಾಲಿಯೂ ಆಗಿದ್ದಾನೆ. ಮತ್ತು ಆತನ ಗುಣಧರ್ಮದ ವ್ಯಾಪ್ತಿಯು ಅವಶ್ಯವಾಗಿ ಆತನ ಭವ್ಯವಾದ ಸೃಷ್ಟಿಗಳಿಗಿಂತ ಅಳೆಯಲಾಗದಷ್ಟು ವಿಶಾಲವಾದುದು.

ಆದರೆ, ಮುಂದುವರೆದು, ನಮ್ಮ ಸೃಷ್ಟಿಕರ್ತನ ಇರುವಿಕೆ ಮತ್ತು ಗುಣಲಕ್ಷಣಗಳಿಗೆ ಸಂಬಂಧಿಸಿದ ಸಂಗತಿಗಳ ಬಗ್ಗೆ ಈ ವಿವೇಚನಾಪೂರಿತವಾದ ತೀರ್ಮಾನಕ್ಕೆ ಬಂದ ನಂತರ, ನಾವು ಅಂಥಾಃ ಜೀವಿಯಿಂದ ಏನನ್ನು ಬಯಸಬಹುದು ಎಂಬುದನ್ನು ವಿಚಾರಿಸೋಣ. ಬರುವ ಉತ್ತರವೆಂದರೆ, ಅಂಥಾಃ ಗುಣಧರ್ಮವನ್ನು ಹೊಂದಿರುವುದು ಅದರ ಪ್ರಯೋಗದ, ಅದರ ಉಪಯೋಗದ ಬಗ್ಗೆ ವಿವೇಚನಾ ಪೂರ್ವಕವಾಗಿ ವಾದಮಾಡುತ್ತದೆ. ದೇವರ ಶಕ್ತಿಯನ್ನು ಉಪಯೋಗಿಸಲೇಬೇಕು, ಮತ್ತು ಅವುಗಳನ್ನು ಆತನ ಸ್ವಭಾವಕ್ಕೆ ಅನುಗುಣವಾಗಿ – ಬುದ್ಧಿವಂತಿಕೆಯಿಂದ, ನ್ಯಾಯದಿಂದ ಮತ್ತು ಪರೋಪಕಾರತೆಯಿಂದ ಬಳಸಬೇಕು. ಆ ನಿಟ್ಟಿನಲ್ಲಿ ಸಾಧನಗಳೇನೇ ಇರಲಿ, ದೇವರ ಶಕ್ತಿಯ ಕಾರ್ಯಾಚರಣೆ ಎಂತೇ ಇರಲಿ, ಅಂತಿಮ ಫಲಿತಾಂಶವು ಆತನ ಸ್ವಭಾವಕ್ಕೆ ಮತ್ತು ಗುಣಲಕ್ಷಣಗಳಿಗೆ ಅನುಗುಣವಾಗಿರಬೇಕು ಮತ್ತು ಪ್ರತಿ ಹೆಜ್ಜೆಯೂ ಆತನ ಅಂತ್ಯವಿಲ್ಲದ (ಅನಂತ) ವಿವೇಕಕ್ಕೆ ಒಪ್ಪಿಗೆಯಾಗಬೇಕು.

ನಮ್ಮ ಸುತ್ತಮುತ್ತಲು ಅಸಂಖ್ಯಾತ ಪ್ರಪಂಚಗಳ ಸೃಷ್ಟಿಯಲ್ಲಿ ಮತ್ತು ಅದ್ಭುತವಾದ ವೈವಿಧ್ಯಮಯ ಭೂಮಿಯಲ್ಲಿ ನಾವು ಸ್ಪಷ್ಟವಾಗಿ ಕಾಣುವಂತಹ ಶಕ್ತಿಯ ಪ್ರಯೋಗಕ್ಕಿಂತ ಹೆಚ್ಚು ಸಮಂಜಸವಾದದ್ದು ಯಾವುದು?

ಮನುಷ್ಯನನ್ನು ಸೃಷ್ಟಿಸಿ, ಆತನಲ್ಲಿ ವಿಮೋಚನೆ ಮತ್ತು ನ್ಯಾಯವಂತಿಕೆಯನ್ನು ನೀಡಿ ಅವನು ಸೃಷ್ಟಿಕರ್ತನ ಕೃತಿಗಳನ್ನು ಮೆಚ್ಚುವ ಸಾಮರ್ಥ್ಯ ಮತ್ತು ಆತನ ಕೌಶಲ್ಯಗಳನ್ನು ವಿಮರ್ಶಿಸುವ ಆತನ ಬುದ್ಧಿವಂತಿಕೆ, ನ್ಯಾಯ, ಶಕ್ತಿ ಮತ್ತು ಪ್ರೀತಿಯನ್ನು ಮೆಚ್ಚುವ ಸಾಮರ್ಥ್ಯವನ್ನು ನೀಡಿರುವುದಕ್ಕಿಂತಲೂ ಹೆಚ್ಚು ಸಮಂಜಸವಾದದ್ದು ಯಾವುದು?. ಎಲ್ಲವೂ ಸಮಂಜಸವಾಗಿದೆ, ಎಲ್ಲವೂ ಕೂಡ ನಮಗೆ ತಿಳಿದಿರುವ ಸತ್ಯಸಂಗತಿಗಳ ಪ್ರಕಾರವಾಗಿ ಸಮರ್ಪಕವಾಗಿ ಒಪ್ಪುವಂತಿದೆ.

ಈಗ ನಮ್ಮ ಅಂತಿಮ ಪ್ರಸ್ತಾಪ ಬರುತ್ತದೆ. ಅಂಥಾಃ ಅನಂತ ಜ್ಞಾನಿಯು ಮತ್ತು ಒಳ್ಳೆಯ ಅಸ್ಥಿತ್ವವಿರುವವನು ತನ್ನನ್ನು ಮತ್ತು ತನ್ನ ಯೋಜನೆಯನ್ನು ಶ್ಲಾಘಿಸುವ ಸಾಮರ್ಥ್ಯ ಹೊಂದಿರುವ ಜೀವಿಯನ್ನು ಉಂಟು ಮಾಡಿದ ನಂತರ ಅವನಿಗೆ ಕೆಲವು ಪ್ರಕಟನೆಯನ್ನು ನೀಡುವ ಮೂಲಕ ಆ ಜೀವಿಯ ಸ್ವಭಾವದ ಅಗತ್ಯಗಳನ್ನು ಪೂರೈಸಲು ತನ್ನ ಪ್ರೀತಿ ಮತ್ತು ನ್ಯಾಯದಿಂದ ಪ್ರೇರೇಪಿಸಲ್ಪಡುತ್ತಾನೆ ಎಂದು ಭಾವಿಸುವುದು ಸಮಂಜಸವಲ್ಲವೆ? ದೇವರು ತನ್ನ ಅಸ್ಥಿತ್ವದ ಬಗ್ಗೆ ಮತ್ತು ಭವಿಷ್ಯದ ಯೋಜನೆಗಳ ಬಗ್ಗೆ ಮಾನವನಿಗೆ ಬೇಕಾದ ಮಾಹಿತಿಯನ್ನು ಒದಗಿಸುತ್ತಾನೆಂಬುದೂ ಸಮಂಜಸವಾದ ಊಹನೆ ಯಲ್ಲವೆ? ಇದಕ್ಕೆ ವ್ಯತಿರಿಕ್ತವಾಗಿ, ಅಂಥಾಃ ಸೃಷ್ಟಿಕರ್ತನು ಅಂಥಾಃ ಮನುಷ್ಯನಂತಹ ಸೃಷ್ಟಿಯನ್ನು ಉಂಟುಮಾಡಿ ಆತನಿಗೆ ಭವಿಷ್ಯವನ್ನು ತಲುಪುವ ವಿವೇಚನೆಯ ಶಕ್ತಿಯನ್ನು ಹೊಂದಿಕೊಳ್ಳ ಯೋಗ್ಯನನ್ನಾಗಿ ಮಾಡಿದಾಗ್ಯೂ ಅಂಥಾಃ ಬಯಕೆಗಳನ್ನು ಎದುರುಗೊಳ್ಳುವಂತೆ ತನ್ನ ಯೋಜನೆಗಳನ್ನು ಪ್ರಕಟಿಸದಿರುವುದು ಅಸಂಜಸವಾಗಿದೆ ಯಲ್ಲವೇ? ಎಂದು ನಾವು ಕೇಳುತ್ತೇವೆ. ಅಂಥಾಃ ಕ್ರಮವು ಅಸಮಂಜಸವಾಗುತ್ತದೆ. ಯಾಕೆಂದರೆ, ನಾವು ದೇವರಿಗೆ ಸಮಂಜಸವಾಗಿ ಹೊರಿಸುವ ಗುಣಲಕ್ಷಣಗಳಿಗೆ ಇದು ವ್ಯತಿರಿಕ್ತವಾಗಿದೆ. ನ್ಯಾಯ ಮತ್ತು ಪ್ರೀತಿಯಿಂದ ನಿಯಂತ್ರಿಸುವ ಕ್ರಮಕ್ಕೂ ವ್ಯತಿರಿಕ್ತವಾಗಿದೆ.

ಮಾನವನನ್ನು ಸೃಷ್ಟಿಸುವಲ್ಲಿ ದೈವೀಕ ಜ್ಞಾನವು ಮನುಷ್ಯನು ತನ್ನ ಭವಿಷ್ಯದ ವಿಧಿಯ ಬಗ್ಗೆ ಮತ್ತು ದೇವರ ಯೋಜನೆಯಲ್ಲಿ ತನ್ನ ಪಾಲು ಏನೆಂಬುದರ ಬಗ್ಗೆ ತಿಳುವಳಿಕೆ ಹೊಂದಿಕೊಳ್ಳಲು ಯಥೋಚಿತವನ್ನಾಗಿ ಮಾಡಿದಿಯೋ ಎಂದು ನಾವು ಆಲೋಚಿಸಬಹುದು. ಹಾಗಿದ್ದರೆ ಖಂಡಿತವಾಗಿಯೂ ದೈವಿಕ ನ್ಯಾಯ ಮಾತ್ರವಲ್ಲದೆ ದೈವಿಕ ಪ್ರೀತಿ ಇವುಗಳು ಮನುಷ್ಯನನ್ನು ಎಷ್ಟರವಟ್ಟಿಗೆ ತನ್ನ ಸಾಮರ್ಥ್ಯದಲ್ಲಿ ಸೀಮಿತವಾಗಿರಬೇಕು ಎಂದು ಒತ್ತಾಯಿಸುತ್ತಿತ್ತು ಎಂದರೆ ಅವನು ಅನುಮಾನುಗಳು, ಭಯಗಳು ಮತ್ತು ಅಜ್ಞಾನದಿಂದ ನಿರಂತರವಾಗಿ ಹಿಂಸೆಗೆ ಒಳಗಾಗುವದಿಲ್ಲ ಮತ್ತು ಗೊಂದಲಕ್ಕೊಳಗಾಗುವದಿಲ್ಲ. ಪರಿಣಾಮವಾಗಿ, ದೈವೀಕ ಶಕ್ತಿಯು ಆ ಮಿತಿಯೊಳಗೆ ಉಪಯೋಗವಾಗಿದ್ದಿರಬಹುದು. ವಾಸ್ತವವೆಂದರೆ. ಮಾನವನಿಗೆ ದೇವರು ಪ್ರಕಟಿಸಿರುವ ಯೋಜನೆಯನ್ನು ಮೆಚ್ಚಿಕೊಳ್ಳುವ ಸಾಮರ್ಥ್ಯವಿದೆ ಎಂಬುದನ್ನು ತನ್ನ ಸೃಷ್ಟಿಕರ್ತನಾದ ದೇವರ ಗುಣಲಕ್ಷಣಗಳನ್ನು ಒಪ್ಪಿಕೊಳ್ಳುವುದರಲ್ಲಿ ಸಂಬಂಧಪಟ್ಟಿದೆ ಎಂಬುದು, ದೇವರು ಅಂಥಾಃ ಪ್ರಕಟನೆಯನ್ನು ಆತನ ವಿವೇಕವು ಒಪ್ಪಿಕೊಳ್ಳುವ ಸಮಯದಲ್ಲಿ ಮತ್ತು ರೀತಿಯಲ್ಲಿ ದಯಪಾಲಿಸುತ್ತಾನೆ ಎಂಬ ನಿರೀಕ್ಷೆಗೆ ಬಲವಾದ ಕಾರಣವಾಗಿರುತ್ತದೆ. ಹಾಗಾದರೆ, ಈ ಪರಿಗಣನೆಗಳ ದೃಷ್ಟಿಯಲ್ಲಿ ನಮಗೆ ಸತ್ಯವೇದದಬಗ್ಗೆ ತಿಳುವಳಿಕೆ ಇಲ್ಲದಿದ್ದರೂ, ವಿಮೋಚನೆಯು ನಮ್ಮನ್ನು ಸತ್ಯವೇದವು ಹೇಳುವಂಥಾಃ ಯಾವುದಾದರೂ ಪ್ರಕಟನೆಯನ್ನು ದಕ್ಷತೆಯಿಂದ ನೋಡುವಂತೆ ಮಾಡುತ್ತವೆ. ಮತ್ತು ಇನ್ನೂ ಹೆಚ್ಚಾಗಿ, ಸಾಮಾನ್ಯ ಸೃಷ್ಟಿಯ ಕ್ರಮ ಮತ್ತು ಸಾಮರಸ್ಯತೆಯನ್ನು ಗಮನಿಸುವಾಗ, ಭವ್ಯವಾದ ಮೆರವಣಿಗೆಯಲ್ಲಿದ್ದಂತೆ ಗೋಲಮಂಡಲಗಳು ಮತ್ತು ವ್ಯವಸ್ಥೆಗಳು ಸಮಯ ಮತ್ತು ಅಂತರವನ್ನು ಕಾಪಾಡಿಕೊಳ್ಳುವುದು ಕಂಡುಬರುತ್ತದೆ. ಚಂಡ ಮಾರುತಗಳು, ಭೂಕಂಪಗಳಂಥಾಃ ಅಲ್ಪ ಅವ್ಯವಸ್ಥೆಗಳು ಈ ಲೋಕದಲ್ಲಿನ ವಿವಿಧ ಮೂಲವಸ್ತುಗಳಲ್ಲಿ ಒಟ್ಟಾಗಿ ಕಾರ್ಯವೆಸಗುತ್ತಿರುವುದು ಪ್ರಸ್ತುತದಲ್ಲಿ ಸಮರ್ಪಕವಾಗಿಲ್ಲ ಎಂಬುದರ ಸೂಚನೆಯಾಗಿದೆ ಎಂಬ ತೀರ್ಮಾನಕ್ಕೆ ನಾವು ಬರಬಹುದು, ಪರಲೋಕದಲ್ಲಿರುವಂತೆ ಭೂಮಿಯ ಮೇಲೆಯೂ ಎಲ್ಲರೂ ಪರಿಪೂರ್ಣ ಮತ್ತು ಸಾಮರಸ್ಯವನ್ನು ಹೊಂದಿರುತ್ತಾರೆ ಎಂಬ ಆಶ್ವಾಸನೆ ಇದ್ದರೂ ಪ್ರಸ್ತುತ ನಾವು ಏಕೆ ಹಾಗೆ ಇಲ್ಲ ಎಂದು ಕೆಲವು ವಿವರಣೆಯೊಂದಿಗೆ, ವಿವೇಚನೆಯುಳ್ಳವರು ಕೇಳುವುದು ತಾರ್ಕಿಕವಲ್ಲ ಎನ್ನಲಾಗದು ಅಥವಾ ಸೃಷ್ಟಿಕರ್ತನಿಗೆ, ಆತನ ಬುದ್ಧಿವಂತಿಕೆ, ಶಕ್ತಿ ಮತ್ತು, ಪರೋಪಕಾರ ಇವುಗಳು ಆತನ ಉತ್ತರ ನೀಡುವಲ್ಲಿ ಪ್ರದರ್ಶಿತ ವಾಗುತ್ತವೆ. ಹಾಗಾಗಿ ಅಂತಹ ಆಶ್ವಾಸನೆಯನ್ನು ಮತ್ತು ಅಂತಹ ವಿವರಣೆಯ ಪ್ರಕಟನೆಯನ್ನು ಎದುರು ನೋಡಬಹುದು.

ನಮ್ಮ ಸಂತತಿಯ ಬಗ್ಗೆ ದೇವರ ಚಿತ್ತದ ಮತ್ತು ಯೋಜನೆಯ ಪ್ರಕಟನೆಯನ್ನು ನಿರೀಕ್ಷಿಸುತ್ತಾ ಸಮಂಜಸತೆಯನ್ನು ಸ್ಥಾಪಿಸುತ್ತಾ ನಾವು ಮುಂದಿನ ಅಧ್ಯಾಯದಲ್ಲಿ ಕೇವಲ ಪ್ರಕಟನೆಯೆಂದು ಹೇಳಿಕೊಳ್ಳುವ ಸತ್ಯವೇದದ ಸಾಮಾನ್ಯ ಗುಣಲಕ್ಷಣವನ್ನು ಪರೀಕ್ಷಿಸುವವರಾಗಿದ್ದೇವೆ. ಅದು ಮೇಲೆ ಪರಿಗಣಿಸಿ ದೇವರ ಗುಣಲಕ್ಷಣಗಳನ್ನು ಸಮರ್ಪಕವಾದ ಸಾಮರಸ್ಯದೊಡನೆ ಆದೇಶಿಸುವುದಾದರೆ, ನಾವು ಇದು ಅಗತ್ಯವಾದ ಮತ್ತು ಸಮಂಜಸವಾಗಿ ನಿರೀಕ್ಷಿಸಿದ ದೇವರ ಪ್ರಕಟನೆಯೆಂದು ರುಜುವಾತುಪಡಿಸುತ್ತದೆ ಎಂಬ ತೀರ್ಮಾನಕ್ಕೆ ಬರಬಹುದು ಮತ್ತು ಅದರ ಸಾಕ್ಷ್ಯವನ್ನು ಆ ರೀತಿಯಲ್ಲಿ ಸ್ವೀಕರಿಸಬಹುದು. ದೇವರದ್ದಾಗಿದ್ದರೆ, ಅದರ ಬೋಧನೆಗಳನ್ನು ಸಂಪೂರ್ಣವಾಗಿ ಮೆಚ್ಚಿಕೊಳ್ಳುವಾಗ. ಆತನ ಗುಣಲಕ್ಷಣಗಳಿಗೆ ತಕ್ಕಂತೆ ಇರುತ್ತದೆ ಮತ್ತು ಈ ಕಾರಣವು ಜ್ಞಾನದಲ್ಲಿ, ಪ್ರೀತಿ, ನ್ಯಾಯ ಮತ್ತು ಶಕ್ತಿಯಲ್ಲಿ ನಮ್ಮನ್ನು ಭರವಸಪಡಿಸುತ್ತದೆ.

Ye curious minds, who roam abroad,
And trace creator's wonders o'er
Confess the footsteps of your God,
And bow before him, and adore"

" The heavens declare thy glory,Lord;
In every stary thy wisdom shines;
But when our eyes brholdthy Word,
We read thy name in fairer lines"`

ಪರಸ್ಥಳಗಳಲ್ಲಿ ಅಲೆದಾಡುವ ಕುತೂಹಲದ
ಮನಸ್ಸುಗಳೇ,
ಸೃಷ್ಟಿಯ ಅದ್ಭುತಗಳನ್ನು ಪತ್ತೆ ಹಚ್ಚಿರಿ,
ನಿನ್ನ ದೇವರ ಹೆಜ್ಜೆಗಳನ್ನು ಒಪ್ಪಿಕೊಳ್ಳಿರಿ,
ಆತನಿಗೆ ತಲೆಬಾಗಿಸಿ ಆರಾಧಿಸಿರಿ.
ದೇವರೇ, ಆಕಾಶವು ನಿನ್ನ ಪ್ರಭಾವವನ್ನು
ಪ್ರಚುರಪಡಿಸುತ್ತದೆ
ಪ್ರತೀ ನಕ್ಷತ್ರದಲ್ಲೂ ನಿನ್ನ ಜ್ಞಾನವು ಬೆಳಗುತ್ತದೆ;
ನಮ್ಮ ಕಣ್ಣುಗಳು ನಿನ್ನ ವಾಕ್ಯವನ್ನು ನೋಡುವಾಗ,
ನಿನ್ನ ನಾಮವನ್ನು ಅಂದದ ಸಾಲುಗಳಲ್ಲಿ ಓದುತ್ತೇವೆ.

## SUNSHINE OVER ALL

"What folly, then" the faithless critic cries,
With sneering lip and wise, world knowing eyes,
"While fort to fort and post to post repeat
The ceaseless challenge of the war-drum's beat,
And round the green earth, to the church-bell's chime,
The morning drum roll of the camp keeps time,
To dream of peace, amidst a world in arms;
Of shores to plowshares changed by Scriptural charms;
Of nations, drunken with wine of blood,
Staggeringto take the pledge of brotherhood
Like tipplers answering Father Mathew's call.

* * *

Check Bau or Kaiser with a barricade
Of 'Olive leaves' and resolutions made;
Spike guns with pointed Scripture texts, and hope
To capsize navies with a windly trope;
Still shall the glory and the pomp of war
Along their train the shouting millions draw;
Still dusky labor to the the parting brave
His cap shall doff and beauty's kerchief wave;
Still shall the bard to valor tune his song;
Still hero-worship kneel before the strong;
Rosy and sleek, the sable-gowned divine,
O'er his third bottle of suggestive wine,
To plumed and sworded auditors shall prove
Their trade accordant with the law of love;
And Church for state, and State for Church shall fight,
And both agree that might alone is right"

Despite the sneers like these, O faithful few,
Who dare to hold God's word and witness true,
Whose clear-eyeddaith transcends our evil time,
And o'er the present wilderness of crime
Sees the calm future with its robes of green,
It's fleece -flecked mountains, and soft streams between,
Still keep the track which duty bids ye tread,
Though worldly wisdom shakes the cautious head.
No truth from heaven descends upon our sphere:
Without the getting of the skeptic's sneer:
Denied, and mocked at, till its blessings fall
Common as dew and sunshine over all.

\- Whitter

* * * * * *

# ಅಧ್ಯಯನ – 3 Study III

# ಸತ್ಯವೇದವು ಒಂದು ದೈವಿಕ ಪ್ರಕಟನೆಯಾಗಿ ವಿವೇಚನೆಯ ಬೆಳಕಿನಲ್ಲಿ ದೃಷ್ಟಿಸಲಾಗಿದೆ

## THE BIBLE AS A DIVINE REVEALATION VIEWED IN THE LIGHT OF REASON

**ಸತ್ಯವೇದದ ಹಕ್ಕೇಳಿಕೆಗಳು ಮತ್ತು ಅದರ ವಿಶ್ವಾಸಾರ್ಹತೆಯ ಮೇಲ್ಮೈ ಸಾಕ್ಷ್ಯಗಳು – ಅದರ ಪ್ರಾಚೀನತೆ ಮತ್ತು ಸಂರಕ್ಷಣೆ – ಅದರ ನೈತಿಕ ಪ್ರಭಾವ – ಲೇಖಕರುಗಳ ಉದ್ದೇಶಗಳು – ಬರಹಗಳ ಸಾಮಾನ್ಯ ಗುಣಲಕ್ಷಣಗಳು – ಮೋಶೆಯ ಪುಸ್ತಕಗಳು – ಮೋಶೆಯ ನಿಬಂಧನೆಗಳು – ಮೋಶೆಯು ಪ್ರತಿಷ್ಠಾಪಿಸಿದ ಸರ್ಕಾರದ ವೈಶಿಷ್ಟತೆಗಳು – ಅದು ಪೌರೋಹಿತ್ಯ ಧೋರಣೆಯಾಗಿರಲಿಲ್ಲ – ನಾಗರೀಕ ಆಡಳಿತಗಾರರಿಗೆ ಸೂಚನೆಗಳು – ಕಾನೂನಿನ ಮುಂದೆ ಶ್ರೀಮಂತ ಮತ್ತು ಬಡವರು ಸಮಾನ ಮಟ್ಟದಲ್ಲಿ – ಜನರ ಹಕ್ಕುಗಳ ಗೋಜಿಗೆ ಹೋಗದಂತೆ ರಕ್ಷಣೋಪಾಯ – ಪೌರೋಹಿತ ವರ್ಗವು ಕೃಪಾಪೋಷಿತವಲ್ಲ, ಅದು ಹೇಗೆ ಬೆಂಬಲಿಸಲ್ಪಡುತ್ತೆ ಮುಂತಾದವುಗಳು – ಪರಕೀಯರ, ವಿಧವೆಯರ, ಅನಾಥರ ಮತ್ತು ಸೇವಕರ ಮೇಲಿನ ದಬ್ಬಾಳಿಕೆಯ ವಿರುದ್ಧ ರಕ್ಷಣೆ ಒದಗಿಸಲಾಗಿದೆ. – ಸತ್ಯವೇದದ ಪ್ರವಾದಿಗಳು – ಧರ್ಮಶಾಸ್ತ್ರ, ಪ್ರವಾದಿಗಳು ಮತ್ತು ಹೊಸ ಒಡಂಬಡಿಕೆಯ ಬರಹಗಾರರು ಇವುಗಳ ಮಧ್ಯೆ ಸಾಮಾನ್ಯವಾದ ಬಂಧನವಿದೆಯೇ? – ಅದ್ಭುತ ಕಾರ್ಯಗಳು ಅಸಮಂಜಸವಾದವುಗಳಲ್ಲ – ಸಮಂಜಸವಾದ ತೀರ್ಮಾನ.**

ಸತ್ಯವೇದವು ನಾಗರೀಕತೆ ಮತ್ತು ಸ್ವಾತಂತ್ರ್ಯದ ದೀವಟಿಗೆಯಾಗಿದೆ. ಸಮಾಜದಲ್ಲಿ ಒಳಿತಿಗಾಗಿ ಅದರ ಪ್ರಭಾವವನ್ನು ಮಹಾನ್ ರಾಜನೀತಿ ಮುತ್ಸದ್ದಿಗಳು ಗುರುತಿಸಿದ್ದಾರೆ. ಅವರು ಬಹುಪಾಲು ಸಂಘರ್ಷದ ಮತಾಭಿಪ್ರಾಯಗಳ ವಿವಿಧ ದರ್ಪಣಗಳ ಮೂಲಕ ನೋಡಿದ್ದರೂ, ಸತ್ಯವೇದವನ್ನು ಎತ್ತಿ ಹಿಡಿಯುವಾಗ, ಅವುಗಳ ಬೋಧನೆಗಳನ್ನು ಘೋರವಾದ ತಪ್ಪಾಗಿ ಪ್ರತಿನಿಧಿಸಿದ್ದಾರೆ. ಭವ್ಯವಾದ ಈ ಹಳೇ ಗ್ರಂಥವು ಉದ್ದೇಶಪೂರ್ವಕವಾಗಿಯಲ್ಲದಿದ್ದರೂ, ಆದರೆ ಶೋಚನೀಯವಾಗಿ ಅದರ ಸ್ನೇಹಿತರಿಂದಲೇ ತಪ್ಪಾಗಿ ನಿರೂಪಿಸಲ್ಪಟ್ಟಿದೆ. ಅವರುಗಳಲ್ಲಿ ಅನೇಕರು ಅದಕ್ಕಾಗಿ ತಮ್ಮ ಜೀವವನ್ನೇ ತ್ಯಾಗಮಾಡಲು ಸಿದ್ಧರಿದ್ದಾರೆ; ಆದಾಗ್ಯೂ ಅವರು ತಮ್ಮ ಹಿರಿಯರ ಸಂಪ್ರದಾಯಗಳಿಂದ ಬಂದಿದ್ದು ಅದನ್ನೇ ದೀರ್ಘಕಾಲದಿಂದ ಪೂಜ್ಯವೆಂದು ಭಾವಿಸಿರುವ ವಿಚಾರಗಳಿಗೆ ಬೆಂಬಲವನ್ನು ಸಾಧಿಸುವ ಮೂಲಕ ಅದಕ್ಕೆ (ಸತ್ಯವೇದಕ್ಕೆ) ಅದರ ಶತ್ರುಗಳಿಗಿಂತ ಹೆಚ್ಚಾದ ಮಹತ್ತರವಾದ ಹಾನಿಯನ್ನುಂಟುಮಾಡುತ್ತಿದ್ದಾರೆ. ಅಂಥವರು ಎಚ್ಚತ್ತುಕೊಂಡು ತಮ್ಮ ಬುದ್ಧಿವಂತಿಕೆಯನ್ನು ಪುನರ್‌ಪರಿಶೀಲಿಸಿದವರಾಗಿ ಮತ್ತು ಅವರ ಆಯುಧಗಳನ್ನು ನಿಶ್ಯಸ್ತ್ರಗೊಳಿಸುವುದರ ಮೂಲಕ ಅದರ ಶತೃಗಳನ್ನು ಗೊಂದಲಗೊಳಿಸುತ್ತಾರೆಯೇ !

ಪ್ರಕೃತಿಯ ಬೆಳಕು ನಿಸರ್ಗವು ಒದಗಿಸುವುಕ್ಕಿಂತ ಹೆಚ್ಚಾದ ದೇವರ ಪೂರ್ಣ ಪ್ರಕಟನೆಯನ್ನು ಬಯಸುವಂತೆ ನಮ್ಮನ್ನು ನಡೆಸುತ್ತದೆಯಾದ್ದರಿಂದ ವಿವೇಚನಾಪೂರ್ವಕವಾಗಿ ಆಲೋಚಿಸುವ ಮನಸ್ಸು ದೈವಿಕ ಪ್ರಕಟನೆಯೆಂದು ಅಭಿಪ್ರಾಯಪಡುವ ಯಾವ ಹಕ್ಕನ್ನಾದರೂ ಪರೀಕ್ಷಿಸಲು ಸಿದ್ಧವಾಗುತ್ತದೆ, ಹಾಗೂ ಅಂತಹ ಹಕ್ಕು ಸಾಧನೆಗಳ ಸಮಂಜಸವಾದ ಮೇಲ್ನೋಟದ ಸಾಕ್ಷ್ಯವನ್ನು ಹೊಂದಿರುತ್ತದೆ. ಸತ್ಯವೇದವು ಆ ರೀತಿಯ ದೇವರ ಪ್ರಕಟನೆಯೆಂದು ರುಜುವಾತುಪಡಿಸುತ್ತದೆ. ಅಲ್ಲದೇ ಮೇಲ್ನೋಟದ ಸಾಕ್ಷ್ಯದೊಂದಿಗೆ ತನ್ನ ಸಂಭವನೀಯ ಸತ್ಯಕ್ಕನು ಗುಣವಾಗಿ ನಮಗೆ ಬಂದಿರುತ್ತದೆ. ಹಾಗಾಗಿ, ಅದರ ಹಕ್ಕೇಳಿಕೆಯಲ್ಲಿ, ನಮಗೆ ಸಮರ್ಥನೀಯ ನಿರೀಕ್ಷೆಯನ್ನೀಯುತ್ತದೆ. ಸಮೀಪದ ತನಿಖೆಯು ಹೆಚ್ಚು ಸಂಪೂರ್ಣವಾದ ಮತ್ತು ನಿಶ್ಚಿತ ಪುರಾವೆ ತಿಳಿಯಪಡಿಸುತ್ತದೆ, ಅದು ಖಂಡಿತವಾಗಿ ದೇವರ ವಾಕ್ಯವಾಗಿದೆ.

ಸತ್ಯವೇದವು ಅಸ್ತಿತ್ವದಲ್ಲಿರುವ ಬಹಳ ಪುರಾತನ ಪುಸ್ತಕವಾಗಿದೆ. ಅದು 30 ಶತಮಾನಗಳ ಚಂಡಮಾರುತಗಳನ್ನು ದಾಟಿ ದೀರ್ಘಕಾಲ ಉಳಿದಿದೆ. ಮನುಷ್ಯರು ಎಲ್ಲಾ ಬಗೆಯಲ್ಲಿಯೂ ಅದನ್ನು ಭೂಮಿಯ ಮೇಲಿಂದ ಅಳಿಸಿಬಿಡಬೇಕೆಂದು ಸರ್ವಪ್ರಯತ್ನ ಮಾಡಿದ್ದಾರೆ. ಅದನ್ನು ಬಚ್ಚಿಟ್ಟಿದ್ದಾರೆ, ಸುಟ್ಟು ಹಾಕಿದ್ದಾರೆ, ಅದನ್ನು ಹೊಂದಿರುವವರನ್ನು ಮರಣ ಶಿಕ್ಷೆಗೆ ಅರ್ಹವಾದ ಅಪರಾಧಿಗಳೆಂದಿದ್ದಾರೆ, ಅದರಲ್ಲಿ ನಂಬಿಕೆಯಿಟ್ಟಿರುವವರ ಮೇಲೆ ಅತ್ಯಂತ ಘೋರ ಮತ್ತು

ಮರುಕವಿಲ್ಲದ ಕಿರುಕುಳಗಳನ್ನು ನಡೆಸಿ ಹೋರಾಟ ಮಾಡಿದ್ದಾರೆ. ಹಾಗಿದ್ದರೂ ಸತ್ಯವೇದವು ಬದುಕುಳಿದಿದೆ. ಇಂದಿನ ದಿನ, ಅದರ ಅನೇಕ ಶತ್ರುಗಳು ಮಡಿದಿದ್ದರೂ, ಸಾವಿರಾರು ಸಂಪುಟಗಳು ಅದನ್ನು ಅಪಖ್ಯಾತಿ ಗೊಳಿಸಲು ಮತ್ತು ಅದರ ಪ್ರಭಾವವನ್ನು ಉರುಳಿಸಲು ಬರೆಯಲ್ಪಟ್ಟಿದ್ದರೂ, ಅದು ಎಂದೋ ಮರೆತುಹೋಗಿದೆ. ಸತ್ಯವೇದವು ಭೂಮಿಯಲ್ಲಿ ತನ್ನ ಹಾದಿಯನ್ನು ಪ್ರತಿಯೊಂದು ದೇಶ ಭಾಷೆಗಳನ್ನೂ ಕಂಡುಕೊಂಡಿದೆ. ಸುಮಾರು 200ಕ್ಕೂ ಮೇಲು ವಿವಿಧ ಭಾಷಾಂತರ ಗಳಾಗಿವೆ. ಅದನ್ನು ನಾಶಪಡಿಸುವ ಮತ್ತು ಬಹಿಷ್ಕರಿಸುವ ಸಾಟಿಯಿಲ್ಲದ ಪ್ರಯತ್ನಗಳಲ್ಲೂ ಈ ಪುಸ್ತಕವು ಹಲವಾರು ಶತಮಾನಗಳಿಂದ ಪಾರಾಗಿ ಉಳಿದಿದೆಯೆಂಬುದೇ ಬಲಶಾಲಿಯಾದ ಒಂದು ಸಾಂದರ್ಭಿಕ ಪುರಾವೆ. ಮಹಾಮಹಿಮನು ಅದರ ಕತೃವು ಅಲ್ಲದೇ ಅದನ್ನು ಕಾಪಾಡುವಾತನು ಎಂದು ಸಾಧಿಸುತ್ತದೆ.

ಮತ್ತೊಂದು ವಾಸ್ತವಾಂಶವೆಂದರೆ ಸತ್ಯವೇದದ ನೈತಿಕ ಪ್ರಭಾವವೂ ಕೂಡ ಏಕಪ್ರಕಾರವಾಗಿ ಒಳ್ಳೆಯದಾಗಿದೆ. ಇದರ ಪುಟಗಳನ್ನು ಎಚ್ಚರಿಕೆಯಿಂದ ಓದುವವರು ತಪ್ಪದೇ ಶುದ್ಧ ಜೀವನದ ಉಚ್ಚಮಟ್ಟಕ್ಕೇರುತ್ತಾರೆ. ಮತಗಳ ಮತ್ತು ಅನೇಕ ವಿಜ್ಞಾನಗಳ ಇತರ ಲೇಖನಗಳು ಒಳ್ಳೆಯದನ್ನು ಮಾಡಿವೆ ಮತ್ತು ಅಲ್ಪಮಟ್ಟಿಗೆ ಮನುಕುಲವನ್ನು ಮೇಲೆತ್ತಿ ಆಶೀರ್ವದಿಸಿದೆ; ಆದರೆ ನರಳುತ್ತಿರುವ ಸೃಷ್ಟಿಗೆ ಸತ್ಯವೇದವು ಐಶ್ವರ್ಯವಂತರಿಗೂ, ಬಡವರಿಗೂ, ಕಲಿತವರಿಗೂ ಮತ್ತು ಕಲಿಯದವರಿಗೂ ತಂದಿರುವ ಸಂತೋಷ, ಶಾಂತಿ ಮತ್ತು ಆಶೀರ್ವಾದವನ್ನು ಬೇರೆಲ್ಲಾ ಪುಸ್ತಕಗಳನ್ನು ಒಟ್ಟು ಸೇರಿಸಿದರೂ ತರಲು ಅವು ವಿಫಲವಾಗಿವೆ. ಸತ್ಯವೇದವು ಕೇವಲ ಓದುವ ಪುಸ್ತಕವಲ್ಲ. ಎಚ್ಚರಿಕೆಯಿಂದ ಮತ್ತು ಆಲೋಚನೆಯಿಂದ ಅಧ್ಯಯನ ಮಾಡಬೇಕಾದ ಪುಸ್ತಕವಾಗಿದೆ; ಏಕೆಂದರೆ ದೇವರ ಆಲೋಚನೆಗಳು ನಮ್ಮ ಆಲೋಚನೆಗಿಂತ ಉನ್ನತವಾಗಿದೆ, ಆತನ ಮಾರ್ಗಗಳು ನಮ್ಮ ಮಾರ್ಗಗಳಿಗಿಂತ ಉನ್ನತವಾಗಿದೆ. ನಾವು ಊಹಾತೀತವಾದ ದೇವರ ಆಲೋಚನೆಗಳನ್ನು ಮತ್ತು ಆತನ ಯೋಜನೆಯನ್ನು ಅರಿತುಕೊಳ್ಳಬೇಕಾದರೆ, ನಾವು ನಮ್ಮ ಎಲ್ಲಾ ಶಕ್ತಿಗಳನ್ನೂ ಆ ಮುಖ್ಯವಾದ ಕಾರ್ಯಕ್ಕೆ ಸರಿದೂಗಿಸಬೇಕು. ಸತ್ಯದ ಅಮೂಲ್ಯ ಭಂಡಾರವು ಯಾವಾಗಲೂ ಹೊರನೋಟದಲ್ಲಿರುವದಿಲ್ಲ.

ಈ ಪುಸ್ತಕದುದ್ದಕ್ಕೂ ನಿರಂತರವಾಗಿ ಒಂದು ಪ್ರಮುಖ ಪಾತ್ರದೆಡೆಗೆ ಗಮನ ಸೆಳೆಯುತ್ತದೆ, ಉಲ್ಲೇಖಿಸುತ್ತದೆ, ನಜರೇತಿನ ಯೇಸು, ಅದು ದೇವರ ಮಗನೆಂದು ಸಮರ್ಥಿಸುತ್ತದೆ. ಮೊದಲಿನಿಂದ ಕೊನೆಯವರೆಗೂ ಆತನ ಹೆಸರು, ಆತನ ಕಾರ್ಯ, ಆತನ ಸ್ಥಾನ, ಇವುಗಳನ್ನು ಪ್ರಾಧಾನ್ಯಪಡಿಸಿದೆ. ಮನುಷ್ಯನಾದ ನಜರೇತಿನ ಯೇಸು ಜೀವಿಸಿದ್ದನು. ಬಹಳಮಟ್ಟಿಗೆ ಪ್ರಸಿದ್ಧನಾಗಿದ್ದನು, ಲೇಖಕರು ಸತ್ಯವೇದದಲ್ಲಿ ನಮೂದಿಸಿದ ಕಾಲದಲ್ಲಿ ಜೀವಿಸಿದ್ದನು, ಸತ್ಯವೇದವನ್ನು ಹೊರತುಪಡಿಸಿ ಹೊರಗಿನ ಚರಿತ್ರೆಯಲ್ಲಿಯೂ, ಅನೇಕ ರೀತಿಗಳಲ್ಲಿ ಮತ್ತು ಪೂರ್ತಿಯಾಗಿ ದೃಢೀಕರಿಸುತ್ತದೆ. ಈ ಯೇಸುವನ್ನೇ ಶಿಲುಬೆಗೇರಿಸಿದರು, ಏಕೆಂದರೆ ಆತನು ತನ್ನನ್ನು ಯೆಹೂದ್ಯರಿಗೆ ಮತ್ತು ಅವರ ಯಾಜಕೋದ್ಯೋಗಕ್ಕೆ ಕೆಣಕುವವನಂತೆ ನಿರೂಪಿಸಿದನು. ಈ ಅಂಶವನ್ನು ಚರಿತ್ರೆಯೂ ಕೂಡ ಹೊಸ ಒಡಂಬಡಿಕೆಯ ಲೇಖಕರೊಡನೆ ರುಜುವಾತುಪಡಿಸಿ ನಿರೂಪಿಸುತ್ತದೆ. ಹೊಸ ಒಡಂಬಡಿಕೆಯ ಲೇಖಕರು (ಪೌಲನು ಮತ್ತು ಲೂಕನ್ನು ಹೊರತುಪಡಿಸಿ) ವೈಯಕ್ತಿಕವಾಗಿ ಪರಿಚಯವುಳ್ಳವರಾಗಿದ್ದರು ಮತ್ತು ನಜರೇತಿನ ಯೇಸುವಿನ ಶಿಷ್ಯರಾಗಿದ್ದರು, ಅವರ ತತ್ವಗಳು ಅವರ ಬರವಣಿಗೆಯಲ್ಲಿ ವ್ಯಕ್ತವಾಗಿದೆ.

ಯಾವುದೇ ಪುಸ್ತಕದ ಅಸ್ಥಿತ್ವವು ಬರಹಗಾರನ ಉದ್ದೇಶವನ್ನು ಸೂಚಿಸುತ್ತದೆ. ಆದ್ದರಿಂದ ನಾವು ಕೇಳವದು, ಈ ಮನುಷ್ಯರಿಗೆ ಯಾವ ಕಾರಣವು ಈ ವ್ಯಕ್ತಿಯನ್ನು ಸಮರ್ಥಿಸಲು ಪ್ರೇರೇಪಿಸಿತು ? ಆತನು ಮರಣಕ್ಕೆ ಖಂಡಿಸಲ್ಪಟ್ಟು, ಯೆಹೂದ್ಯರಿಂದ ದುಷ್ಕರ್ಮಿಯಂತೆ ಕ್ರೂಜೆಗೇರಿಸಲ್ಪಟ್ಟನು, ಅವರಲ್ಲಿ ಅತ್ಯಂತ ಹೆಚ್ಚಿನ ಧಾರ್ಮಿಕರು ಆತನು ಜೀವಿಸಲು ಅನರ್ಹನೆಂದು ಮರಣವನ್ನು ಕೋರಿಕೊಂಡರು ಮತ್ತು ಒತ್ತಾಯಿಸಿದರು. ಆತನನ್ನು ಸಮರ್ಥಿಸಿ ಮತ್ತು ಆತನ ಧ್ಯೇಯವನ್ನು ಸಮರ್ಥಿಸಿ, ಆತನ ತತ್ವಗಳನ್ನು ಪ್ರಸಾರಮಾಡಿ, ಈ ಜನರು ಕೆಚ್ಚೆದೆಯಿಂದ ತಿರಸ್ಕಾರವನ್ನು, ಪದಚ್ಯುತಿಯನ್ನು ಮತ್ತು ನಿರ್ದಯವಾದ ಹಿಂಸೆಯನ್ನು, ತಮ್ಮ ಜೀವವನ್ನು ಅಪಾಯಕ್ಕೊಡ್ಡಿ, ಹಲವು ಬಾರಿಯಂತೂ ತಮ್ಮ ಪ್ರಾಣವನ್ನು ಅರ್ಪಿಸಿಕೊಂಡಿದ್ದಾರೆ. ಯೇಸುವು ಜೀವಿಸುತ್ತಿರುವಾಗ ಒಬ್ಬ ಗಮನಾರ್ಹನಾದ ವ್ಯಕ್ತಿಯೆಂದು ಒಪ್ಪಿ ಕೊಂಡವರಾಗಿ, ಆತನು ಜೀವನ ಗತಿಯಲ್ಲಿಯೂ ಮತ್ತು ಆತನ ಬೋಧನೆಯಲ್ಲಿಯೂ, ಮತ್ತು ಆತನ ಮರಣವು ಅವಮಾನಕರವಾಗಿರುವಾಗ ಆ ವ್ಯಕ್ತಿಯನ್ನು ಸಮರ್ಥಿಸಲು ಯಾವ ಉದ್ದೇಶವಿರಬಹುದು ? ಈ ಬರಹಗಾರರು ತಮ್ಮ ನಿರೂಪಣೆಯನ್ನು ಕಲ್ಪಿಸಿರುವರೆಂದು ನಾವು ಊಹಿಸುವುದಾದರೆ, ಮತ್ತು

ಯೇಸುವು ಅವರ ಕಾಲ್ಪನಿಕ ಅಥವಾ ಆದರ್ಶ ನಾಯಕನಾಗಿದ್ದಿದ್ದರೆ, ಎಷ್ಟು ಸ್ವಸ್ಥ ಬುದ್ದಿಯ ಮನುಷ್ಯರು ಆತನು ದೇವಕುಮಾರನೆಂದು ಸಮರ್ಥಿಸಿ, ಹಾಗೂ ಆತನು ಒಂದು ಮಹತ್ವವಾದ ಅಸ್ವಾಭಾವಿಕ ರೀತಿಯಲ್ಲಿ ಜನಿಸಿದವರು, ಅಸ್ವಭಾವಿಕ ಶಕ್ತಿಹೊಂದಿದವರು ಅದರಿಂದಾಗಿ ಕುಷ್ಠರೋಗದವರನ್ನು ಗುಣಪಡಿಸಿದನು, ಹುಟ್ಟು ಕುರುಡರಿಗೆ ದೃಷ್ಠಿ ಕೊಟ್ಟವನು, ಕಿವುಡರಿಂದ ಕೇಳುವಂತೆ ಮಾಡಿದನು. ಅಲ್ಲದೇ ಸತ್ತವನನ್ನು ಎಬ್ಬಿಸಿದನು – ಇಂತಹ ಒಂದು ವ್ಯಕ್ತಿಯು ಒಂದು ಸಣ್ಣ ಗುಂಪಿನ ವಿರೋಧಿಗಳು ಆತನನ್ನು ಒಬ್ಬ ಅಪರಾಧಿಯಂತೆ ಕೊಂದರು ಎಂಬ ಕತೆಯನ್ನು ಬರೆಯುವದನ್ನು ಯಾರು ಊಹಿಸಬಲ್ಲರು ? ಮತ್ತು ಆತನ ಮಿತ್ರರು ಮತ್ತು ಶಿಷ್ಯರು, ಅದರಲ್ಲಿ ಮೊದಲಿಗೆ ಬರಹಗಾರರು ತಾವೇ ತೊಡಕಿನ ಆ ಸಮಯದಲ್ಲಿ ತೊರೆದು ಓಡಿಹೋದರು ಎಂದು ಊಹಿಸುವುದು ಎಷ್ಟು ಅಸಮಂಜಸ ?

ಅಪವಿತ್ರ ಇತಿಹಾಸವು ಕೆಲವು ವಿಷಯಗಳಲ್ಲಿ ಈ ಲೇಖಕರೊಂದಿಗೆ ಒಪ್ಪಿಗೆಯಾಗುವುದಿಲ್ಲ ಎಂಬ ಸತ್ಯದ ಕಾರಣ ಅವರ ದಾಖಲೆ ಅಸತ್ಯವಾಗಿದೆ ಎಂಬ ತೀರ್ಮಾನಕ್ಕೆ ಬರಲಾಗದು. ಆ ರೀತಿಯ ತೀರ್ಮಾನಕ್ಕೆ ಬರುವವರು ಅದನ್ನು ವಹಿಸಿಕೊಂಡು ಈ ಲೇಖಕರುಗಳು ತಪ್ಪು ಹೇಳಿಕೆ ಕೊಟ್ಟಿದ್ದಾರೆಂಬುದನ್ನು ರುಜುವಾತುಪಡಿಸಬೇಕು. ಈ ರೀತಿಯಲ್ಲಿ ಮಾಡುವಂತೆ ಯಾವ ಉದ್ದೇಶವು ಅವರನ್ನು ಪ್ರೇರೇಪಿಸಿತು?; ಅವರು ಇದರಿಂದ ಐಶ್ವರ್ಯವನ್ನಾಗಲೀ, ಪ್ರಸಿದ್ಧಿಯನ್ನಾಗಲೀ ಅಥವಾ ಅಧಿಕಾರವನ್ನಾಗಲೀ ಅಥವಾ ಬೇರೆ ಯಾವುದೇ ಈ ಲೋಕದ ಅನುಕೂಲತೆಯನ್ನಾಗಲೀ ಸಕಾರಣವಾಗಿ ನಿರೀಕ್ಷಿಸಿದ್ದರೇ? ಯೇಸುವಿನ ಸ್ನೇಹಿತರ ಬಡತನವು ಮತ್ತು ಯೂದಾಯದ ಮಹಾಧಾರ್ಮಿಕರೊಂದಿಗೆ ಅವರ ವೀರನಾಯಕನ ಜನಪ್ರಿಯತೆ ಇಲ್ಲದಿರುವಿಕೆ ಅಂಥಾಃ ಆಲೋಚನೆಗಳಿಗೆ ವ್ಯತಿರಿಕ್ತವಾಗಿದೆ; ಅಲ್ಲದೇ ಆತನು ಒಬ್ಬ ದುಷ್ಕರ್ಮಿಯಂತೆ, ಶಾಂತಿಯನ್ನು ಭಂಗಪಡಿಸಿದವನಂತೆ ಮರಣ ಹೊಂದಿದನು ಮತ್ತು ಆತನು ಯಾವ ರೀತಿಯಲ್ಲಿಯೂ ಪ್ರಖ್ಯಾತನನ್ನಾಗಿ ಮಾಡಲ್ಪಡಲಿಲ್ಲ, ಯಾವುದೇ ಅಸೂಯೆ ಹುಟ್ಟಿಸುವ ಪ್ರಸಿದ್ಧಿಯನ್ನು ಹೊಂದಿರಲಿಲ್ಲ, ಆತನ ವಿಚಾರ ಸರಣಿಯನ್ನು ಪುನರ್‌ಸ್ಥಾಪಿಸಲು ಪ್ರಯತ್ನಿಸುವವರಿಗೆ ಯಾವುದೇ ಲೌಕಿಕ ಲಾಭವೂ ಇರಲಿಲ್ಲ. ಅದಕ್ಕೆ ವ್ಯತಿರಿಕ್ತವಾಗಿ, ಯೇಸುವಿನ ಬಗ್ಗೆ ಬೋಧಿಸಿದವರ ಉದ್ದೇಶ ಇದಾಗುತ್ತಿದ್ದರೆ, ಅದು ತಮಗೆ ಅವಮಾನವನ್ನು, ಉಪದ್ರವವನ್ನು, ಸೆರೆವಾಸವನ್ನು ಉಂಟುಮಾಡುತ್ತದೆ, ಥಡಿಯೇಟು, ಮತ್ತು ಮರಣವನ್ನು ಸಹಾ ತರಬಹುದು ಎಂದು ಕಂಡುಕೊಂಡ ಕೂಡಲೇ ಅದನ್ನು ಬಿಟ್ಟು ಬಿಟ್ಟಿರುತ್ತಿದ್ದರಲ್ಲವೆ?. ವಿಮೋಚನೆಯು ನಮಗೆ ಸ್ಪಷ್ಟವಾಗಿ ಬೋಧಿಸುವುದೇನೆಂದರೆ ಯಾರ್‍ಯಾರು ತಮ್ಮ ಮನೆಯನ್ನು, ಪ್ರತಿಷ್ಠೆಯನ್ನು, ಗೌರವವನ್ನು ಮತ್ತು ಜೀವನವನ್ನು ತ್ಯಾಗ ಮಾಡಿದವರೋ, ಪ್ರಸ್ತುತ ತೃಪ್ತಿಗಷ್ಟೇ ಜೀವಿಸದೇ ಹೋದರೋ, ಬದಲಾಗಿ ಅವರ ಕೇಂದ್ರೀಯ ಗುರಿಯು ತಮ್ಮ ಸಂಗಡಿಗರನ್ನು ಉನ್ನತ ಸ್ಥಿತಿಗೇರಿಸುವುದಾಗಿತ್ತು ಮತ್ತು ಅವರುಗಳು ಉನ್ನತಮಟ್ಟದ ಮಾದರಿಯನ್ನು ಮನಸ್ಸಿಗೆ ನಾಟಿಸಿದರು, ಅವರು ಒಂದು ಪ್ರೇರಣೆಯನ್ನು ಹೊಂದಿದ್ದರು ಮಾತ್ರವಲ್ಲ ಮುಂದಕ್ಕೆ ಆ ಪ್ರೇರಣೆಯು ಪರಿಶುದ್ಧವಾಗಿರಬೇಕು ಮತ್ತು ಅವರ ಉದ್ದೇಶವು ಭವ್ಯವಾಗಿ ಉದಾತ್ತವಾಗಿರಬೇಕು ಎಂದು ಬಯಸಿದ್ದರು. ವಿಮೋಚನೆಯು ಮುಂದಕ್ಕೆ ಅಂಥವರ ಸಾಕ್ಷ್ಯವು ಪರಿಶುದ್ಧ ಮತ್ತು ಒಳ್ಳೆಯ ಉದ್ದೇಶಗಳಿಂದಲೇ ಪ್ರೇರೇಪಿಸಲ್ಪಡುತ್ತಿತ್ತು ಎಂದು ಪ್ರಕಟಿಸುತ್ತದೆ. ಅದು ಸಾಧಾರಣ ಬರಹಗಾರರ ಹತ್ತುಪಟ್ಟು ಗೌರವ ಮತ್ತು ಪರಿಗಣನೆಗೆ ಅರ್ಹವಾಗಿದೆ. ಈ ಜನರು ಧರ್ಮಾಂಧರಾಗಿರಲೂ ಇಲ್ಲ. ಅವರು ದೃಢವಾದ ಮತ್ತು ವಿವೇಚನೆಯುಳ್ಳ ಮನಸ್ಸನ್ನು ಹೊಂದಿದ್ದರು ಮತ್ತು ಪ್ರತಿಯೊಂದು ಪ್ರಕರಣದಲ್ಲಿಯೂ ತಮ್ಮ ನಂಬಿಕೆಗೆ, ನಿರೀಕ್ಷೆಗೆ ಕಾರಣವನ್ನು ಒದಗಿಸುತ್ತಿದ್ದರು ಮತ್ತು ಅವರುಗಳು ಸಮಂಜಸವಾದ ನಿಶ್ಚಿತಾಭಿಪ್ರಾಯಗಳಿಗೆ ಸತತವಾಗಿ ನಿಷ್ಠೆಯುಳ್ಳವರಾಗಿದ್ದರು.

ನಾವು ಇಲ್ಲಿ ಗಮನಿಸಿರುವುದೇನೆಂದರೆ ಸತ್ಯವೇದದ ಹಳೆಒಡಂಬಡಿಕೆಯ ವಿವಿಧ ಲೇಖಕರಿಗೂ ಇದು ಅನ್ವಯವಾಗುತ್ತದೆ. ಅವರುಗಳು, ಮುಖ್ಯವಾಗಿ, ಕರ್ತನಿಗೆ ನಿಷ್ಠೆಯುಳ್ಳವರಾಗಿರುವಲ್ಲಿ ಗಮನಾರ್ಹ ವಾಗಿದ್ದರು; ಈ ಇತಿಹಾಸವು ನಿಷ್ಪಕ್ಷಪಾತವಾಗಿ ಅವರ ದೌರ್ಬಲ್ಯಗಳನ್ನು ಮತ್ತು ನ್ಯೂನತೆಗಳನ್ನು ದಾಖಲಿಸುತ್ತದೆ ಮತ್ತು ಖಂಡಿಸುತ್ತದೆ, ಅಂತೆಯೇ ಅದು ಅವರ ಸದ್ಗುಣಗಳು ಹಾಗೂ ನಿಷ್ಠೆಯನ್ನು ಶ್ಲಾಘಿಸುತ್ತದೆ. ಸತ್ಯವೇದವು ಮನುಷ್ಯರನ್ನು ಒಂದು ಧಾರ್ಮಿಕ ಪದ್ಧತಿಗೆ ಆದರದ ಭಯ ಹುಟ್ಟಿಸಿ ತಯಾರಿಸಿದ ಇತಿಹಾಸವಾಗಿದೆ ಎಂದು ಭಾವಿಸುವವರಿಗೆ ಇದು ಆಶ್ಚರ್ಯವನ್ನುಂಟು ಮಾಡಲೇಬೇಕು. ಸತ್ಯವೇದದ ಬಗ್ಗೆ ಮುಚ್ಚುಮರೆಯಿಲ್ಲದೆ ಪ್ರಾಮಾಣಿಕವಾಗಿದ್ದು ಅದನ್ನು ಸತ್ಯವೆಂಬುದಾಗಿ ಮುದ್ರೆ ಒತ್ತುವುದಾಗಿದೆ. ಅಪ್ರಮಾಣಿಕರು (knaves) ಮಾನವರನ್ನು ಶ್ರೇಷ್ಠನನ್ನಾಗಿ ಪ್ರತಿನಿಧಿಸಬಯಸುವ ಮತ್ತು ವಿಶೇಷವಾಗಿ ಆತನ ಕೆಲವು ಬರಹಗಳನ್ನು

ದೇವರಿಂದ ಪ್ರೇರಣೆಗೊಂಡವುಗಳೆಂದು ಪ್ರಸ್ತುತಿಗೊಳಿಸಲು ಬಯಸಿದರೆ, ನಿಸ್ಸಂದೇಹವಾಗಿ ಅಂಥಹ ವ್ಯಕ್ತಿಯು ಪಾತ್ರವನ್ನು ನಿರ್ದೋಷಿ ಮತ್ತು ಉದಾತ್ತವಾದವುಗಳು ಎಂದು ಕೊನೆಯ ಹಂತದವರೆಗೂ ಬಣ್ಣ ಬಳೆಯುತ್ತಾರೆ. ಅಂಥಾಃ ಕ್ರಮವು ಸತ್ಯವೇದದಲ್ಲಿ ಅನುಸರಿಸಿಲ್ಲವೆಂಬ ವಾಸ್ತವಾಂಶವು ಅಂಥವುಗಳು ವಂಚನಾಪೂರ್ವಕವಾದ ಕುತಂತ್ರ ವೆಂಬುದನ್ನು ಸಮಂಜಸಗೊಳಿಸುವ ರುಜುವಾತುಗಳಾಗಿವೆ.

ಹಾಗಾದರೆ, ದೇವರ ಚಿತ್ತವನ್ನು ಮತ್ತು ಯೋಜನೆಯ ಪ್ರಕಟಪಡಿಸುವಿಕೆಯನ್ನು ನಿರೀಕ್ಷಿಸುವ ಕಾರಣವಿದ್ದು, ಮತ್ತು ಸತ್ಯವೇದವು ಆ ಪ್ರಕಟನೆ ಎಂಬುದಾಗಿ ಹೇಳಲಾಗಿದ್ದು ಯಾವುದೇ ಮಾತಿನಿಂದ ಪ್ರತಿಭಟಿಸುವ ಉದ್ದೇಶವಿಲ್ಲದ ಜನರಿಂದ ಬರೆಯಲ್ಪಟ್ಟಿದ್ದು, ಅದಕ್ಕೆ ವ್ಯತಿರಿಕ್ತವಾಗಿ, ನಮಗೆ ಒಪ್ಪಿಕೊಳ್ಳುವ ಕಾರಣ ಕಂಡು ಬರುತ್ತದೆ. ನಾವು ಸ್ಫೂರ್ತಿಗೊಂಡವುಗಳು ಎಂದು ಹೇಳುವ ಬರಹಗಳ ಗುಣಲಕ್ಷಣಗಳನ್ನು ಅವುಗಳ ಬೋಧನೆಗಳು ಸಕಾರಣವಾಗಿ ದೇವರಿಗೆ ವಹಿಸಿರುವ ಗುಣಲಕ್ಷಣಗಳಿಗೆ ಅನುಗುಣವಾಗಿವೆಯೋ, ಮತ್ತು ಅವುಗಳು ಅದರ ಸತ್ಯತೆಯ ಆಂತರಿಕ ಪುರಾವೆಗಳನ್ನು ಹೊಂದಿವೆಯೋ ಎಂದು ನಾವು ಪರೀಕ್ಷಿಸೋಣ.

ಹೊಸಒಡಂಬಡಿಕೆಯ ಮೊದಲ ಐದು ಪುಸ್ತಕಗಳು ಮತ್ತು ಹಳೆ ಒಡಂಬಡಿಕೆಯ ಹಲವಾರು ಪುಸ್ತಕಗಳ ನಿರೂಪಣೆಗಳು ಅಥವಾ ಬರಹಗಾರರಿಗೆ ತಿಳಿದಿದ್ದ ಚರಿತ್ರೆಯ ಸತ್ಯಘಟನೆಗಳು ಮತ್ತು ಅವುಗಳ ಗುಣಲಕ್ಷಣಗಳಿಂದ ಸಮರ್ಥಿಸಲ್ಪಟ್ಟವುಗಳಾಗಿವೆ. ಅವುಗಳು ನಿಕಟವಾದವುಗಳೂ ಮತ್ತು ಪೂರ್ಣವಾಗಿ ಪರಿಚಯವಾಗಿರುವ ಸಂಗತಿಗಳ ಬಗ್ಗೆ ಸತ್ಯವನ್ನು ಹೇಳಲು ಯಾವುದೇ ವಿಶೇಷ ಪ್ರಕಟನೆಯ ಅಗತ್ಯವಿಲ್ಲವೆಂಬುದು ಎಲ್ಲರಿಗೂ ಗೊತ್ತಿದೆ. ಹೀಗಿರುವುದರಿಂದ, ದೇವರು ಮನುಷ್ಯರಿಗೆ ಒಂದು ಪ್ರಕಟನೆ ಮಾಡಲು ಬಯಸಿರುವುದರಿಂದ, ಗತಿಸಿ ಹೋದ ಘಟನೆಗಳ ಈಇತಿಹಾಸಗಳು ಪ್ರಕಟನೆಯ ಮೇಲೆ ಆತುಕೊಂಡಿವೆ ಎಂಬ ತೀರ್ಮಾನಕ್ಕೆ ಬರುವುದು ಸಮಂಜಸವಾಗಿವೆ ಎಂಬುದಕ್ಕೆ ಸಾಕಷ್ಟು ಆಧಾರವನ್ನು ಒದಗಿಸಿವೆ. ದೇವರು ಇದರ ಮೇಲ್ವಿಚಾರಕನಾಗಿ, ಆತನು ಈ ಕಾರ್ಯಕ್ಕೆ ಆರಿಸಿಕೊಂಡ ಪ್ರಾಮಾಣಿಕ ಬರಹಗಾರನು ಅಗತ್ಯವಾದ ಸತ್ಯಸಂಗತಿಗಳ ಸಂಪರ್ಕಕ್ಕೆ ಬರುವಂತೆ ಮಾಡುತ್ತಾನೆ. ಸತ್ಯವೇದದ ಈ ಐತಿಹಾಸಿಕ ಭಾಗಗಳ ವಿಶ್ವಾಸಾರ್ಹತೆಯು ಬಹುಮಟ್ಟಿಗೆ ಅದರ ಬರಹಗಾರರ ಪಾತ್ರ ಮತ್ತು ಉದ್ದೇಶಗಳ ಮೇಲೆ ಆತುಕೊಂಡಿದೆ. ಒಳ್ಳೆಯ ಮನುಷ್ಯರು ಅಸತ್ಯವನ್ನೆಂದಿಗೂ ಹೇಳುವುದಿಲ್ಲ. ಶುದ್ಧವಾದ ಕಾರಂಜಿಯು ಕಹಿಯಾದ ನೀರನ್ನು ಚಿಮ್ಮುವುದಿಲ್ಲ ಮತ್ತು ಈ ಬರಹಗಳ ಏಕೀಕೃತ ಸಾಕ್ಷಿಯು ಅದರ ಗ್ರಂಥಕರ್ತನು ಹೇಳುವ ಯಾವುದೇ ಅನುಮಾನವನ್ನು ಅಥವಾ ಅದು ಮಾಡುವ ಕೇಡನ್ನು ಸದ್ದಿಲ್ಲದಂತೆ ಅಡಗಿಸಿ ಒಳ್ಳೇದನ್ನು ಅನುಸರಿಸುವಂತೆ ಮಾಡಿಬಿಡುತ್ತದೆ.

ಸತ್ಯವೇದದ ಕೆಲವು ಪುಸ್ತಕಗಳಾದ ಅರಸರುಗಳು, ಪೂರ್ವಕಾಲ ವೃತ್ತಾಂತಗಳು, ನ್ಯಾಯಸ್ಥಾಪಕರು ಇತ್ಯಾದಿಗಳ ಸತ್ಯತೆಯನ್ನು ಅಮಾನ್ಯಗೊಳಿಸಲು ಯಾವುದೇ ರೀತಿಯಲ್ಲೂ ಸಾಧ್ಯವಿಲ್ಲ. ಅವುಗಳು ಕೇವಲ ಸತ್ಯಪೂರ್ಣವಾದವುಗಳಾಗಿ ಅವರ ಕಾಲದ ಪ್ರಮುಖ ಘಟನೆಗಳನ್ನು ಹಾಗೂ ವ್ಯಕ್ತಿಗಳ ಇತಿಹಾಸವನ್ನೂ ಜಾಗರೂಕತೆಯಿಂದ ಕಾಪಾಡಿದ್ದೇವೆ ಎಂದು ನಾವು ಹೇಳುವವರಾಗಿದ್ದೇವೆ. ಇಬ್ರಿಯ ಪರಿಶುದ್ಧ ಗ್ರಂಥಗಳು ಚರಿತ್ರೆಯನ್ನೂ, ಮತ್ತು ಪ್ರವಾದನೆಗಳನ್ನೂ ಮತ್ತು ಅವುಗಳ ಇತಿಹಾಸಗಳನ್ನೂ, ವಂಶಾವಳಿಗಳನ್ನೂ ಹೊಂದಿವೆ ಎಂಬುದನ್ನು ನಾವು ನೆನಪು ಮಾಡುವಾಗ, ಅವುಗಳು ವಿವರವಾದ ಪರಿಸ್ಥಿತಿಗಳಲ್ಲಿ ಬಹಳಷ್ಟು ವಿವರವಾಗಿರುವ ಕಾರಣವೇನೆಂದರೆ ವಾಗ್ದತ್ತ ಮೆಸ್ಸೀಯನು ಅಬ್ರಹಾಮನ ಒಂದು ನಿರ್ದಿಷ್ಟವಾದ ಸಂತತಿಯೊಂದರಲ್ಲಿ ಬರುತ್ತಾನೆಂಬ ನಿರೀಕ್ಷೆ, ನಾವು ಈ ಇಪ್ಪತ್ತನೆಯ ಶತಮಾನದ ಬೆಳಕಿನಲ್ಲಿ ಇತಿಹಾಸದ ಕೆಲವು ಸಂಗತಿಗಳನ್ನು ಅಷ್ಟೊಂದು ನಾಜೂಕಾದವುಗಳಲ್ಲವೆಂದು ಪರಿಗಣಿಸುವ ಕಾರಣವನ್ನು ಕಂಡುಕೊಳ್ಳುತ್ತೇವೆ. ಉದಾಹರಣೆಗೆ, ಮೋವಾಬ್ಯರು ಮತ್ತು ಅಮ್ಮೋನಿಯರ ರಾಷ್ಟ್ರಗಳ ಮೂಲದ ಸ್ಪಷ್ಟವಾದ ದಾಖಲೆಗಳು ಮತ್ತು ಅಬ್ರಹಾಮ ಮತ್ತು ಇಸ್ರಾಯೇಲ್ಯರೊಡನೆ ಅವರ ಸಂಬಂಧಗಳು ಅವರ ಹುಟ್ಟಿನ ಸಂಪೂರ್ಣ ಚರಿತ್ರೆಯನ್ನು ತಿಳಿದುಕೊಳ್ಳಲು ಇತಿಹಾಸಕಾರರಿಗೆ ಬಹುಶಃ ಅಗತ್ಯವಾಗಿದ್ದಿರಬಹುದು (ಆದಿ. 19:36–38). ಅದರಂತೆಯೇ, ಯೆಹೂದನ ಮಕ್ಕಳ ಬಗ್ಗೆ ಸ್ಪಷ್ಟ ವಿವರಣೆಯು ಕೊಡಲ್ಪಟ್ಟಿದೆ, ಆ ಯೆಹೂದ ಕುಲದಿಂದ ಅರಸನಾದ ದಾವೀದನು ಹುಟ್ಟಿದನು. ಅಲ್ಲದೇ, ಆತನ ಮೂಲಕವಾಗಿ ಯೇಸುವಿನ ತಾಯಿಯಾದ ಮರಿಯಳು, ಮತ್ತು ಆಕೆಯ ಗಂಡನಾದ ಯೋಸೇಫನ ವಂಶಾವಳಿಯನ್ನು ಅಬ್ರಹಾಮನವರೆಗೆ ಪತ್ತೆ ಹಚ್ಚಲಾಗಿದೆ. (ಲೂಕ 3:23, 31,33,34; ಮತ್ತಾಯ 1:2–16). ನಿಸ್ಸಂದೇಹವಾಗಿ ಈ ಕುಲದ ಕಾರಣದಿಂದ ವಂಶಾವಳಿಯನ್ನು ಸಾಧ್ಯಂತವಾಗಿ ಸ್ಥಿರಪಡಿಸುವ

ಅಗತ್ಯವು ಬಹುಮುಖ್ಯವಾಯಿತು. ಯಾಕೆಂದರೆ, ಈ ಕುಲದಿಂದ ಇಸ್ರಾಯೇಲ್ಯರನ್ನು ಆಳುವ ಅರಸನು ಮತ್ತು ವಾಗ್ದಾನಪಡಿಸಿರುವ ಮೆಸ್ಸೀಯನು ಬರುವವನಾಗಿದ್ದನು. ಹಾಗಾಗಿ ಇತರೆ ಸಂದರ್ಭಗಳಲ್ಲಿ ನಿಖರವಾದ ವಿವರಗಳಲ್ಲಿ ನೀಡಲಾಗಿಲ್ಲ (ಆದಿ. 49:10).

ಸತ್ಯವೇದದಲ್ಲಿ ದಾಖಲುಪಡಿಸಿದ ಇತರೆ ಐತಿಹಾಸಿಕ ಸತ್ಯಸಂಗತಿಗಳಿಗೆ ವಿವಿಧ ಕಾರಣ ಗಳಿದ್ದಿರಬಹುದು. ಅವುಗಳಲ್ಲಿ ಆಗಿಂದಾಗ್ಗೆ ನಾವು ಉಪಯುಕ್ತತೆಯನ್ನು ಕಾಣಬಹುದು. ಅವುಗಳು ಚರಿತ್ರೆಯಲ್ಲದಿದ್ದರೂ ನೀತಿಯ ಬಗ್ಗೆ ಪ್ರಬಂಧಗಳಾಗಿವೆ, ಯಾವುದೇ ಹಾನಿ ಇಲ್ಲದೆ ಬಿಟ್ಟುಹೋಗಿದ್ದಿರಬಹುದು. ಸತ್ಯವೇದವು ಎಲ್ಲಿಯೂ ಅಶುದ್ಧತೆಗೆ ನೈತಿಕ ಬೆಂಬಲವನ್ನು ನೀಡುತ್ತದೆ ಎಂದು ಯಾರೂ ಸಮಜಂಸವಾಗಿ ಹೇಳಲು ಸಾಧ್ಯವಿಲ್ಲ. ಹಾಗಿದ್ದರೆ, ಇನ್ನೂ ಹೆಚ್ಚಾಗಿ ಅದೇ ಸತ್ಯಸಂಗತಿಗಳನ್ನು ಹೆಚ್ಚುಕಡಿಮೆ ಯಾವುದೇ ಭಾಷೆಯಲ್ಲಿ ಸೂಕ್ಷ್ಮವಾಗಿ ತಿಳಿಸಿರಬಹುದು, ಮತ್ತೂ ಸತ್ಯವೇದದ ಭಾಷಾಂತರಕಾರರು ಯಾವುದೇ ದಾಖಲೆಗಳನ್ನು ಬಿಟ್ಟುಬಿಡದಷ್ಟು ಅತ್ಯಂತ ಸರಿಯಾಗಿ ಆತ್ಮಸಾಕ್ಷಿಯುಳ್ಳವರಾಗಿದ್ದರು. ಆದಾಗ್ಯೂ ಅವರುಗಳು ನಮಗಿಂತ ಕಡಿಮೆ ನಿರ್ದಿಷ್ಟವಾಗಿ ಪರಿಷ್ಕರಿಸಿದ ಶಬ್ದಪ್ರಯೋಗ ಆಯ್ಕೆ ಮಾಡುವ ದಿನಗಳಲ್ಲಿ ಜೀವಿಸುತ್ತಿದ್ದರು. ಇದನ್ನೇ ಅದಿ ಸತ್ಯವೇದ ಸಮಯಕ್ಕೆ ಮತ್ತು ಶಬ್ದಪ್ರಯೋಗದ ಸ್ವಭಾವಕ್ಕೆ ಊಹಿಸಬಹುದು. ನಿಶ್ಚಯವಾಗಿ, ಅತ್ಯಂತ ಸೂಕ್ಷ್ಮ ಅಭಿರುಚಿಯವರು ಹೊಸಒಡಂಬಡಿಕೆಯ ಯಾವುದೇ ಶಬ್ದಪ್ರಯೋಗಕ್ಕೆ ಈ ಲೆಕ್ಕದ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಾಣುವುದಿಲ್ಲ.

## ಮೋಶೆಯ ಪುಸ್ತಕಗಳು ಮತ್ತು ಅದರಲ್ಲಿ ಘೋಷಿಸಿರುವ ನಿಬಂಧನೆಗಳು

## The Books of Moses and The Laws Therein Promulgated

ಸತ್ಯವೇದದ ಮೊದಲನೆಯ ಐದು ಪುಸ್ತಕಗಳನ್ನು ಮೋಶೆಯೇ ಬರೆದನೆಂದು ಎಲ್ಲಿಯೂ ಹೇಳಿಲ್ಲವಾದರೂ ಅವುಗಳನ್ನು ಮೋಶೆಯ 'ಪಂಚಗ್ರಂಥ'ಗಳು (Five Books of Moses) ಎಂದು ಕರೆಯುತ್ತಾರೆ. ಅವುಗಳು ಮೋಶೆಯಿಂದ ಇಲ್ಲವೇ ಆತನ ಮೇಲ್ವಿಚಾರಣೆಯಲ್ಲಿ ಬರೆಯಲ್ಪಟ್ಟವು ಎಂಬುದು ಸಮಂಜಸವಾದ ನಿರ್ಣಯವಾಗಿದೆ; ಆತನ ಮರಣ ಮತ್ತು ಸಮಾಧಿ ಮಾಡಿದ ಬಗ್ಗೆ ಆತನ ಕಾರ್ಯದರ್ಶಿಯಿಂದ ಸೂಕ್ಷ್ಮರೀತಿಯಲ್ಲಿ ಸೇರಿಸಲಾಗಿದೆ. ಈ ಪುಸ್ತಕಗಳು ಮೋಶೆಯಿಂದಲೇ ಬರೆಲ್ಪಟ್ಟವು ಎಂಬ ಸಕಾರಾತ್ಮಕ ಹೇಳಿಕೆಯನ್ನು ಬಿಟ್ಟುಬಿಡುವುದು ಆ ಆಲೋಚನೆಗೆ ವಿರೋಧವಾದುದೆಂದು ಯಾವುದೇ ಪುರಾವೆ ಇಲ್ಲ; ಯಾಕೆಂದರೆ ಬೇರೆ ಯಾರಾದರೂ ಅದನ್ನು ಮೋಸಗೊಳಿಸಲು ಬರೆದು ವಂಚನೆ ಮಾಡುತ್ತಿದ್ದರೆ ಆತನು ಆ ಆರೋಪಣೆಯನ್ನು ತಪ್ಪಿಸಿಕೊಳ್ಳಲು ನಿಶ್ಚಯವಾಗಿಯೂ ಅದು ಇಸ್ರಾಯೇಲಿನ ಮಹಾನಾಯಕನಿಂದ ಮತ್ತು ರಾಜಕೀಯ ಮುತ್ಸದ್ದಿಯಿಂದ ಬರೆಯಲ್ಪಟ್ಟಿತೆಂದು ಹೇಳಿಕೊಳ್ಳುತ್ತಿದ್ದನು (ಧರ್ಮೋ. 31:9–27). ಮೋಶೆಯು ಇಸ್ರಾಯೇಲ್ಯರನ್ನು ಐಗುಪ್ತದಿಂದ ಹೊರತರುವ ನಾಯಕತ್ವವನ್ನು ವಹಿಸಿಕೊಂಡಿದ್ದನೆಂಬ ಒಂದು ಸಂಗತಿಯು ನಮಗೆ ನಿಶ್ಚಯವಾಗಿದೆ. ಆತನು ಅವರನ್ನು ಈ ಪುಸ್ತಕಗಳಲ್ಲಿರುವ ನಿಬಂಧನೆಗಳ ಅಡಿಯಲ್ಲಿ ಒಂದು ರಾಷ್ಟ್ರದವರನ್ನಾಗಿ ಸಂಘಟಿಸಿದನು ಮತ್ತು ಇಬ್ರಿಯ ರಾಷ್ಟ್ರವು, ಸಾಮಾನ್ಯ ಒಪ್ಪಿಗೆಯೊಂದಿಗೆ ಮೂರು ಸಾವಿರ ವರ್ಷಗಳವರೆಗೆ ಈ ಗ್ರಂಥಗಳನ್ನು ಮೋಶೆಯಿಂದ ಬಂದ ವರದಾನವೆಂದು ಹಕ್ಕಿನಿಂದ ಹೇಳಿಕೊಂಡರು ಮತ್ತು ಅದರಲ್ಲಿ ಒಂದು ಚುಕ್ಕೆಯಾಗಲೀ, ಒಂದು ಸಣ್ಣ ಗೀಟಾನ್ನಾಗಲೀ ಬದಲಾವಣೆ ಮಾಡದ ರೀತಿಯಲ್ಲಿ ಪವಿತ್ರವಾಗಿ ಕಾಪಾಡಿಕೊಂಡರು. ಮತ್ತು ಈ ರೀತಿಯಲ್ಲಿ ಅದರ ವಾಕ್ಯಗಳ ಪರಿಶುದ್ಧತೆಗೆ ಭರವಸೆಯನ್ನು ನೀಡಿದರು.

ಮೋಶೆಯ ಈ ಬರಹಗಳು ಹಾದುಹೋದ ಯುಗದ ನಂಬಲರ್ಹ ಏಕೈಕ ಇತಿಹಾಸವನ್ನು ಒಳಗೊಂಡಿವೆ. ಚೀನಾ ಇತಿಹಾಸವು ಸೃಷ್ಟಿಯಲ್ಲಿ ಆರಂಭಗೊಳ್ಳುವುದರ ಮೇಲೆ ಪರಿಣಾಮ ಬೀರುತ್ತದೆ. ದೇವರು ಹೇಗೆ ತನ್ನ ಕೈಯಲ್ಲಿ ಭೂಮಿಯ ದೀಪ ಹಿಡಿದು, ಮತ್ತೊಂದು ಕೈಯಲ್ಲಿ ಹಿಡಿಮಣ್ಣನ್ನು ಹಿಡಿದು ಒಂದು ಲಘು ನೌಕೆಯಲ್ಲಿ ನೀರಿನ ಮೇಲೆ ತೇಲುತ್ತಾ ಹೋದನು, ಆ ಹಿಡಿಮಣ್ಣಿನ ಉಂಡೆಯನ್ನು ಆತನು ನೀರಿನಲ್ಲಿ ಬಿಸಾಡಲು ಅದು ಭೂಲೋಕ ಉಂಟಾಯಿತು ಎಂದು ಇತ್ಯಾದಿ ತಿಳಿಸುತ್ತದೆ. ಆದರೆ ಈ ಇಡೀ ಕಥೆಯು ಎಷ್ಟೊಂದು ಅರ್ಥಹೀನವಾಗಿದೆಯೆಂದರೆ ಒಂದು ಬುದ್ಧಿವಂತ ಚಿಕ್ಕಮಗುವೂ ಸಹ ಇದರಿಂದ ಮೋಸ ಹೋಗಲಾರದು. ಇದಕ್ಕೆ ವ್ಯತಿರಿಕ್ತವಾಗಿ, ಆದಿಕಾಂಡದಲ್ಲಿನ ಪರಿಗಣನೆಯು ಸಮಂಜಸವಾದ ಊಹನೆಗಳೊಡನೆ ಪ್ರಾರಂಭವಾಗಿ, ದೇವರು, ಸೃಷ್ಟಿಕರ್ತನು, ಜ್ಞಾನಿಯಾದ ಮೂಲಕಾರಣರು, ಮೊದಲೇ ಅಸ್ಥಿತ್ವದಲ್ಲಿದ್ದರು. ಅದು ದೇವರು ಆರಂಭವನ್ನು ಹೊಂದಿದ್ದಾನೆ ಎಂದು ಪ್ರತಿಪಾದಿಸದೆ, ಆತನ ಸೃಷ್ಟಿಕಾರ್ಯದ ಬಗ್ಗೆ, – "ಆದಿಯಲ್ಲಿ ದೇವರು ಆಕಾಶವನ್ನೂ ಭೂಮಿಯನ್ನೂ ಉಂಟುಮಾಡಿದನು"

(ಆದಿ. 1:1) ಎಂಬ ವಾಕ್ಯದೊಡನೆ ಪ್ರಾರಂಭವಾಗಿ ಅದರ ಆರಂಭ ಮತ್ತು ಕ್ರಮಬದ್ಧವಾದ ಮುಂದುವರಿಕೆಯ ಬಗ್ಗೆ ತಿಳಿಸುತ್ತಾ ಹೋಗುತ್ತದೆ. ನಂತರ ಭೂಮಿಯ ಮೂಲದ ಮೇಲೆ ಯಾವುದೇ ವಿವರಣೆ ಅಥವಾ ಸಮಜಾಯಿಷಿ ಇಲ್ಲದೆ ನಿಂತು ಅದನ್ನು ಮಾನವನಿಗಾಗಿ ಆರು ದಿನಗಳ(ಯುಗಗಳ)ವರೆಗೆ ಸಿದ್ಧಪಡಿಸಿರುವ ನಿರೂಪಣೆ ಮುಂದುವರೆಯುತ್ತದೆ. ಆ ವಿವರಣೆಯು ನಾಲ್ಕು ಸಹಸ್ರ ವರ್ಷಗಳ ವಿಜ್ಞಾನದ ಬೆಳಕಿನಲ್ಲಿ ಗಣನೀಯವಾಗಿ ಸಮರ್ಥಿಸಲ್ಪಟ್ಟಿದೆ. ಹೀಗಾಗಿ ಆ ಗ್ರಂಥಕರ್ತನಾದ ಮೋಶೆಯು ಹೇಳಿದ್ದನ್ನು ಒಪ್ಪಿಕೊಳ್ಳುವುದು ಬಹಳಷ್ಟು ಮಟ್ಟಿಗೆ ವಿವೇಚನಾತ್ಮಕವಾಗಿದೆ. ಆಧುನಿಕ ಉಪಕರಣಗಳು ಮತ್ತು ಮಿಲಿಯಾಂತರ ಹಣದ ನೆರವಿನಿಂದ ಮೂರು ಸಾವಿರ ವರ್ಷಗಳಲ್ಲಿ ಒಬ್ಬ ವ್ಯಕ್ತಿಯ ಬುದ್ಧಿವಂತಿಕೆಯು ಉಳಿದ ಜನಾಂಗದ ಸಂಯೋಜಿತ ಬುದ್ಧಿವಂತಿಕೆ ಮತ್ತು ಸಂಶೋಧನೆಗಳಿಗಿಂತ ಶ್ರೇಷ್ಠವಾಗಿದೆ ಎಂದು ಊಹಿಸುವುದಕ್ಕಿಂತಲೂ ಹೆಚ್ಚಾಗಿ ಮೋಶೆಯು ದೈವಿಕವಾಗಿ ಪ್ರೇರಿತನಾಗಿದ್ದನು ಎಂಬುದು ಸಮಂಜಸವಾಗಿದೆ.

ಮುಂದೆ ಈ ಬರಹಗಳಲ್ಲಿ ಹಾಕಿರುವ ಕಾನೂನುಗಳ ವ್ಯವಸ್ಥೆಯನ್ನು ನೋಡಿರಿ. ನಿಶ್ಚಿತವಾಗಿಯೂ ಅವುಗಳಿಗೆ ಸಮಾನವಾದವುಗಳು ಆ ದಿನಗಳಲ್ಲಿಯಾಗಲೀ, ಈ ಇಪ್ಪತನೆಯ ಶತಮಾನದವರೆಗೆಯಾಗಲೀ ಇಲ್ಲ: ಈ ಶತಮಾನದ ನ್ಯಾಯ ನಿಬಂಧನೆಗಳು ಮೋಶೆಯ ನ್ಯಾಯ ನಿಬಂಧನೆಗಳಲ್ಲಿ ಇರಿಸಲಾಗಿರುವ ತತ್ವಗಳನ್ನು ಆಧರಿಸಿವೆ ಮತ್ತು ಮುಖ್ಯವಾಗಿ ಮೋಶೆಯ ನಿಬಂಧನೆಗಳನ್ನು ದೈವಿಕ ಮೂಲವಾದವುಗಳು ಎಂದು ಸ್ವೀಕರಿಸಿರುವ ಪುರುಷರಿಂದ ರಚಿಸಲ್ಪಟ್ಟಿವೆ.

ಈ ದಶಾಜ್ಞೆಗಳು ಸಮಗ್ರ ನ್ಯಾಯ ನಿಬಂಧನೆಗಳ ಸಂಕ್ಷಿಪ್ತವಾದ ಸಾರಾಂಶಗಳಾಗಿವೆ ಮತ್ತು ದಶಾಜ್ಞೆಗಳು ಆರಾಧನೆಯ ನಿಯಮಗಳನ್ನು ಮತ್ತು ನೀತಿಗಳನ್ನು ಆಜ್ಞಾಪಿಸುತ್ತವೆ. ಅವುಗಳು ಈ ಹಿಂದೆ ಎಂದೂ ತಿಳಿಯದೇ ಇದ್ದರೂ ಈಗ ಗ್ರೀಸ್ ಅಥವಾ ರೋಮಿನ ಅಥವಾ ಬಾಬೇಲಿನ (ಈ ದೇಶಗಳು ಈ ನಿಯಮಗಳನ್ನು ನೀಡಿದಾಗಿನಿಂದ ಬಹಳ ಪ್ರಬಲಹೊಂದಿ ಎಬ್ಬಿಸಲ್ಪಟ್ಟು ಪುನಃ ನಾಶಗೊಂಡಿವೆ) ನಾಶನ ಮತ್ತು ಭಗ್ನಾವಶೇಷಗಳಲ್ಲಿ ಕಂಡುಬಂದಿವೆ ಎಂದು ಪ್ರತಿಯೊಬ್ಬ ವಿದ್ಯಾರ್ಥಿಗೂ ಹೊಳೆಯಬೇಕಾಗಿದೆ. ಅವುಗಳನ್ನು ಅಲೌಕಿಕವಲ್ಲವಾದರೂ ಅದ್ಭುತವಾದವುಗಳೆಂದು ಪರಿಗಣಿಸಲಾಗಿದೆ. ಆದರೆ ಅದರೊಂದಿಗಿನ ಮತ್ತು ಅದರ ಹಕ್ಕೇಳಿಕೆಗಳ ಚಿರಪರಿಚಯುವು ಸಾಕಷ್ಟು ಉದಾಸೀನತೆಯನ್ನುಂಟು ಮಾಡಿವೆ. ಹೀಗಾಗಿ ಅದರ ನಿಜವಾದ ಶ್ರೇಷ್ಟತೆಯು ಕೆಲವರನ್ನು ಹೊರತುಪಡಿಸಿ ಯಾರಿಗೂ ತಿಳಿಯದಾಗಿದೆ. ಆ ಆಜ್ಞೆಗಳು ಕ್ರಿಸ್ತನ ಬಗ್ಗೆ ಬೋಧಿಸುವುದಿಲ್ಲ ಎಂಬದು ನಿಜ. ಆದರೆ ಅವುಗಳು ಕ್ರೈಸ್ತರಿಗೆ ನೀಡಿದವುಗಳಲ್ಲ, ಇಬ್ರಿಯರಿಗೆ ನೀಡಿದವುಗಳು; ಈಡುಬಲಿಯು ಬಗ್ಗೆ ನಂಬಿಕೆಯುನ್ನುಂಟು ಮಾಡುವುದಕ್ಕಾಗಿ ಅಲ್ಲ, ಆದರೆ ಆ ಜನರ ಪಾಪಮಯ ಸ್ಥಿತಿಯನ್ನು ಮನದಟ್ಟುಪಡಿಸುವುದಕ್ಕಾಗಿ ಮತ್ತು ಈಡುಬಲಿಯ ಅಗತ್ಯವನ್ನು ತಿಳಿಸುವುದಕ್ಕಾಗಿ. ಆ ಆಜ್ಞೆಗಳ ಸಾರಾಂಶವು ಕ್ರೈಸ್ತಧರ್ಮದ ಪ್ರಖ್ಯಾತಸ್ಥಾಪಕರುಗಳಿಂದ ಭವ್ಯವಾಗಿ ಈ ಮಾತುಗಳಲ್ಲಿ ಸಂಗ್ರಹಿಸಿ ಬರೆಯಲಾಗಿದೆ – "ನಮ್ಮ ದೇವರಾದ ಕರ್ತನು ಒಬ್ಬನೇ ದೇವರು; ನಿನ್ನ ದೇವರಾದ ಕರ್ತನನ್ನು ಪೂರ್ಣ ಹೃದಯದಿಂದಲೂ, ಪೂರ್ಣ ಪ್ರಾಣದಿಂದಲೂ, ಪೂರ್ಣ ಬುದ್ಧಿಯಿಂದಲೂ, ಪೂರ್ಣ ಶಕ್ತಿಯಿಂದಲೂ ಪ್ರೀತಿಸಬೇಕು ಎಂಬುದೇ ಮೊದಲನೆಯ ಆಜ್ಞೆ; ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂಬುದೇ ಎರಡನೆಯ ಆಜ್ಞೆ" (ಮಾರ್ಕ 12:30–31).

ಮೋಶೆಯು ಸ್ಥಾಪನೆ ಮಾಡಿದ ಸರ್ಕಾರವು ಪುರಾತನ ಹಾಗೂ ಆಧುನಿಕವಾದ ಬೇರೆ ಎಲ್ಲವುಗಳಿಗಿಂತ ಭಿನ್ನವಾದುದು, ಅದರಲ್ಲಿ ಅದು ಸೃಷ್ಟಿಕರ್ತನದೇ ಎಂದು ಸಾಧಿಸುತ್ತದೆ ಮತ್ತು ಜನರು ಆತನಿಗೆ ಹೊಣೆಗಾರಿಕೆಯನ್ನು ಕೊಡಬೇಕಾಗುತ್ತದೆ ಎಂಬ ಹಕ್ಕೇಳಿಕೆ ಇದೆ; ಅವರ ಕಾನೂನುಗಳು ನಾಗರೀಕ ಮತ್ತು ಧಾರ್ಮಿಕ ಸಂಸ್ಥೆಗಳು ದೇವರಿಂದಲೇ ಉದ್ಭವಿಸಿದವುಗಳು ಎಂದು ಹೇಳಲಾಗಿದೆ. ನಾವು ಪ್ರಸ್ತುತದಲ್ಲಿ ಅವುಗಳು ಆ ದೇವರ ಗುಣಲಕ್ಷಣಗಳು ಎಂದು ಬೋಧಿಸುವ ಕಾರಣದೊಂದಿಗೆ ಸಂಪೂರ್ಣ ಸಾಮರಸ್ಯವಾಗಿತ್ತು ಎಂದು ನೋಡುತ್ತೇವೆ. ಪಾಳೆಯದ ಮಧ್ಯದಲ್ಲಿದ್ದ ದೇವದರ್ಶನ ಗುಡಾರದ 'ಮಹಾಪರಿಶುದ್ಧ' ಕೊಠಡಿಯೊಳಗಿಂದ ಅವರ ಅರಸನಾದ ದೇವರ ಪ್ರಸನ್ನತೆಯು ಪ್ರಕಟಗೊಳ್ಳುತ್ತಿತ್ತು. ಅಲ್ಲಿಂದ ಅವರು ಅಲೌಕಿಕವಾದ ರೀತಿಯಲ್ಲಿ (ಪ್ರಕೃತಿಯ ಶಕ್ತಿಗೆ ಮೀರಿದ ದೈವೀಕ ಪ್ರಭಾವದಲ್ಲಿ) ಒಂದು ರಾಷ್ಟ್ರವಾಗಿ ಅದರ ಆಳ್ವಿಕೆಯ ಬಗ್ಗೆ ಸೂಕ್ತವಾದ ಸೂಚನೆಗಳನ್ನು ಪಡೆಯುತ್ತಿದ್ದರು. ಯಾಜಕರುಗಳ ಕ್ರಮವೊಂದನ್ನು ಸ್ಥಾಪಿಸಲಾಗಿದ್ದು, ಅವರಿಗೆ ದೇವದರ್ಶನ ಗುಡಾರದ ಪೂರ್ಣ ಜವಾಬ್ದಾರಿಯನ್ನು ವಹಿಸಲಾಗಿತ್ತು ಮತ್ತು ಅವರ ಮೂಲಕ ಮಾತ್ರವೇ ಯೆಹೋವನೊಡನೆ ಪ್ರವೇಶಾಧಿಕಾರ ಮತ್ತು ಸಹಭೋಗಕ್ಕೆ ಅನುಮತಿಸಲ್ಪಡುತ್ತಿತ್ತು. ಈ ಬಂಧದಲ್ಲಿ ಬರುವ ಮೊದಲನೆಯ ಆಲೋಚನೆಯು ಬಹುಶಃ

"ಆಹಾ! ನಾವಿಲ್ಲಿ ಅವರ ಸಂಘಟನೆಯ ಉದ್ದೇಶ: ಅವರೊಡನೆ ಇರುವುದನ್ನು ಅನುಭವಿಸಿದ್ದೇವೆ. ಬೇರೆ ದೇಶಗಳೊಂದಿಗೆ ಇದ್ದಂತೆ ಪುರೋಹಿತರು (ಯಾಜಕರುಗಳು) ಜನರನ್ನು ಆಳಿದರು. ಜನರು ಅವರನ್ನು ಸುಲಭವಾಗಿ ನಂಬುವಂತೆ ತಮ್ಮ ವಿಶ್ವಾಸಾರ್ಹತೆಯನ್ನು ಅವರ ಮೇಲೆ ಹೇರುತ್ತಿದ್ದರು ಮತ್ತು ತಮ್ಮ ಗೌರವ ಮತ್ತು ಲಾಭಕ್ಕಾಗಿ ಜನರಿಗೆ ಭಯವನ್ನು ಪ್ರಚೋದಿಸುತ್ತಿದ್ದರು. ಆದರೆ! ಸ್ನೇಹಿತನೇ ಸ್ವಲ್ಪ ತಡೆಹಿಡಿ; ನಾವು ತುಂಬಾ ಅವಸರದಲ್ಲಿ ಏನನ್ನೂ ಊಹಿಸಕೂಡದು. ಈ ಸಂಗತಿಗಳನ್ನು ಸತ್ಯತೆಗಳೊಂದಿಗೆ ಪರೀಕ್ಷೆ ಮಾಡುವ ಒಳ್ಳೆಯ ಅವಕಾಶಗಳು ಇರುವಾಗ, ಈ ಸತ್ಯಸಂಗತಿಗಳಿಲ್ಲದೆ ಯಾವುದೇ ತೀರ್ಮಾನಕ್ಕೆ ಬರುವುದು ಸಮಂಜಸವಲ್ಲ. ಉತ್ತರಿಸಲಾಗದ ಸಾಕ್ಷ್ಯಗಳು ಅಂಥಾಃ ಊಹನೆಗಳಿಗೆ ವಿರುದ್ಧವಾಗಿವೆ. ಯಾಜಕರುಗಳು ಹಕ್ಕು ಮತ್ತು ಸವಲತ್ತುಗಳು ಮಿತಿಯುಳ್ಳವುಗಳಾಗಿದ್ದವು. ಅವರಿಗೆ ಯಾವುದೇ ರೀತಿಯ ನಾಗರೀಕ ಅಧಿಕಾರವನ್ನು ಕೊಟ್ಟಿರಲಿಲ್ಲ ಮತ್ತು ಅವರಿಗೆ ತಮ್ಮ ಅಧಿಕಾರ ಸ್ಥಾನವನ್ನು ಆ ಜನರ ಹಕ್ಕುಗಳ ಅಥವಾ ಆತ್ಮಸಾಕ್ಷಿಯ ಮೇಲೆ ಹೇರುವ ಅವಕಾಶದ ಕೊರತೆ ಇತ್ತು ಈ ವ್ಯವಸ್ಥೆಯನ್ನು ಯಾಜಕರ ಸಂತತಿ ಸದಸ್ಯನಾದ ಮೋಶೆಯೇ ಮಾಡಿದ್ದನು.

ಐಗುಪ್ತದ ದಾಸತ್ವದಿಂದ ಇಸ್ರಾಯೇಲ್ಯರನ್ನು ಹೊರತರುವಲ್ಲಿ ದೇವರ ಪ್ರತಿನಿಧಿಯಾಗಿದ್ದ ಮೋಶೆಗೆ, ಪರಿಸ್ಥಿತಿಯ ಒತ್ತಡ ಸರ್ಕಾರದ ಕೇಂದ್ರೀಕರಣವು ಆತನ ಕೈಸೇರುವಂತೆ ಮತ್ತು ಸಾಧುಸ್ವಭಾವದ ಮೋಶೆಯನ್ನು ಶಕ್ತಿ ಮತ್ತು ಅಧಿಕಾರದಲ್ಲಿ ನಿರಂಕುಶ ಪ್ರಭುವನ್ನಾಗಿ ಮಾಡಿತು. ಆತನ ಸಾಧುಸ್ವಭಾವದ ಪ್ರಯುಕ್ತ ಆತನನ್ನು ನಿಜವಾಗಿಯೂ ಮಿತಿಮೀರಿ ದುಡಿಯುವ ಜನ ಸೇವಕನನ್ನಾಗಿ ಮಾಡಿತು. ಆತನ ಜೀವನವನ್ನೇ ಆತನ ಹೊರೆಯಾದ ಸ್ಥಾನದಿಂದ ಆತನನ್ನು ದಣಿಸಿತು. ಈ ಹಂತದ ಸಮಯದಲ್ಲಿ ಒಂದು ನಾಗರೀಕ ಸರ್ಕಾರದ ಸ್ಥಾಪನೆಯಾಯಿತು. ಅದು ವಾಸ್ತವಿಕವಾಗಿ ಪ್ರಜಾ ಪ್ರಭುತ್ವವಾಗಿತ್ತು. ನಾವು ತಪ್ಪಾಗಿ ಭಾವಿಸುವುದು ಬೇಡ: ಅವಿಶ್ವಾಸಿಗಳು ಇದನ್ನು ಗೌರವಿಸುತ್ತಾರೆ ಎಂದು ಪರಿಗಣಿಸಿದರೆ, ಇಸ್ರಾಯೆಲ್ ಸರ್ಕಾರವು ಪ್ರಜಾಪ್ರಭುತ್ವವಾಗಿತ್ತು. ಆದರೆ ತನ್ನದೇ ಆದ ಹಕ್ಕುಗಳ ಬೆಳಕಿನಲ್ಲಿ ಅದು ದೈವಾಧಿಪತ್ಯವಾಗಿತ್ತು. ಅಂದರೆ ದೇವರಿಂದಲೇ ಆಳಲ್ಪಡುವುದು; ಕಾನೂನುಗಳು ದೇವರಿಂದ ಮೋಶೆಯ ಮೂಲಕ ನೀಡಲ್ಪಡುತ್ತಿತ್ತು. ಯಾವುದೇ ತಿದ್ದುಪಡಿಗೂ ಅನುಮತಿ ಇದ್ದಿಲ್ಲ. ಅವರು ಕಾನೂನು ನಿಯಮಗಳಿಂದ ಯಾವುದನ್ನೂ ತೆಗೆಯುವಂತಿರಲಿಲ್ಲ ಮತ್ತು ಯಾವುದನ್ನೂ ಸೇರಿಸುವಂತಿರಲಿಲ್ಲ. ಈ ರೀತಿಯಲ್ಲಿ ಇಸ್ರಾಯೆಲ್‌ನ ಸರ್ಕಾರವು ಬೇರೆ ಯಾವುದೇ ನಾಗರೀಕ ಸರ್ಕಾರಗಳಿಗಿಂತ ಹಿಂದೆ ಅಥವಾ ಈಗಲೂ ಇಲ್ಲದಂತೆ ಭಿನ್ನವಾಗಿತ್ತೆಂದು ಕಂಡುಕೊಳ್ಳಬಹುದು. "ಯೆಹೋವನು ಮೋಶೆಗೆ ಹೇಳಿದ್ದೇನೆಂದರೆ, ಇಸ್ರಾಯೇಲ್ಯರಲ್ಲಿ ಹಿರಿಯರೆಂದೂ, ಅಧಿಪತಿಗಳೆಂದೂ ನೀನು ತಿಳಿದುಕೊಂಡಿರುವ ಎಪ್ಪತ್ತು ಮಂದಿಯನ್ನು ಕೂಡ ಕರೆಸಿ ದೇವದರ್ಶನದ ಗುಡಾರದ ಬಾಗಲಿಗೆ ಕರೆತಂದು ಅಲ್ಲೇ ನಿನ್ನೊಡನೆ ನಿಲ್ಲಿಸಿಕೋ. ನಾನು ಅಲ್ಲಿಗೆ ಇಳಿದು ಬಂದು ನಿನ್ನ ಸಂಗಡ ಮಾತಾಡುವೆನು. ಅದಲ್ಲದೆ ನಾನು ನಿನಗೆ ಅನುಗ್ರಹಿಸಿರುವ ಆತ್ಮೀಯ ವರಗಳಲ್ಲಿ ಕೆಲವನ್ನು ಅವರಿಗೂ ಪಾಲು ಕೊಡುವೆನು; ಆಗ ನೀನೊಬ್ಬನೇ ಈ ಜನರ ಭಾರವನ್ನು ವಹಿಸಬೇಕಾಗಿರುವುದಿಲ್ಲ; ನಿನ್ನ ಜೊತೆಯಲ್ಲಿ ಇವರೂ ವಹಿಸುವರು" (ಅರಣ್ಯ 11:16,17, ಸತ್ಯವಾದ ಮತ್ತು ವಂಚನೆಯಿಲ್ಲದ ವ್ಯವಹಾರ ನಿಪುಣತೆ ಮತ್ತು ಸಾಧುತ್ವಕ್ಕೆ ಉದಾಹರಣೆಯಾಗಿ 24ರಿಂದ 30ನೇ ವಚನದವರೆಗೂ ನೋಡಿರಿ). ಮೋಶೆಯು ಈ ಸಂಗತಿಯ ಬಗ್ಗೆ ಪೂರ್ವಾಭ್ಯಾಸ ಮಾಡುತ್ತಾ – "ಆಗ ನಾನು ನಿಮ್ಮಲ್ಲಿ ಪ್ರಸಿದ್ಧರಾದ ಬುದ್ಧಿವಂತರನ್ನು ಕರೆಯಿಸಿ ಒಂದೊಂದು ಕುಲದಲ್ಲಿ ಸಾವಿರ ಮಂದಿಯ ಮೇಲೆಯೂ, ನೂರು ಮಂದಿಯ ಮೇಲೆಯೂ, ಐವತ್ತು ಮಂದಿಯ ಮೇಲೆಯೂ, ಹತ್ತು ಮಂದಿಯ ಮೇಲೆಯೂ ಅಧಿಕಾರಿಗಳನ್ನಾಗಿಯೂ, ಉಪಾಧಿಕಾರಿ ಗಳನ್ನಾಗಿಯೂ ನೇಮಿಸಿದೆನು" (ಧರ್ಮೋ. 1:15; ವಿಮೋ. 18:13 – 26) ಎಂದು ಹೇಳಿದ್ದಾನೆ.

ಹೀಗಾಗಿ ಈ ವಿಶಿಷ್ಟ ಕಾನೂನು ವಿತರಕನು, ಇದುವರೆಗೆ ಅಧಿಕಾರವನ್ನು ಯಾಜಕ ಕುಲಕ್ಕೆ ಸೇರಿದ್ದ ತನ್ನ ಸಂಬಂಧಿಗಳ ನೇರ ನಿಯಂತ್ರಣದಲ್ಲಿರಿಸಿ ಮತ್ತು ಅವರ ಧಾರ್ಮಿಕ ಅಧಿಕಾರವನ್ನು ಜನರ ಹಕ್ಕುಗಳು ಮತ್ತು ಸ್ವಾತಂತ್ರ್ಯವನ್ನು ನಿರ್ಬಂಧಿಸುವುದಕ್ಕೆ ತನ್ನ ಸ್ವಂತ ಅಧಿಕಾರವನ್ನು ಶಾಶ್ವತಗೊಳಿಸಲು ಅಥವಾ ಅಧಿಕಗೊಳಿಸಲು ಬಯಸದೆ, ವ್ಯತಿರಿಕ್ತವಾಗಿ ಜನರು ಸ್ವಾತಂತ್ರ್ಯದ ಚೈತನ್ಯವನ್ನು ಬೆಳೆಸಿಕೊಳ್ಳುವ ಲೆಕ್ಕಾಚಾರ ಹಾಕುವಂತಹ ಸರ್ಕಾರವೊಂದನ್ನು ಪರಿಚಯಪಡಿಸಿದನು. ಇತರೆ ದೇಶಗಳ ಮತ್ತು ಅದರ ಅರಸರುಗಳ ಇತಿಹಾಸವು ಇದಕ್ಕೆ ಯಾವುದೇ ಸಮಾನತೆಯನ್ನು ತೋರುವುದಿಲ್ಲ. ಪ್ರತಿಯೊಂದು ಪ್ರಕರಣದಲ್ಲಿಯೂ ಆಳುವವರು ಸಾಮಾನ್ಯವಾಗಿ ತಮ್ಮ ಸ್ವಂತ ಉನ್ನತಿ ಮತ್ತು ಹೆಚ್ಚಿನ ಅಧಿಕಾರವನ್ನು

ಬಯಸುತ್ತಾರೆ. ಪ್ರಜಾಪ್ರಭುತ್ವವನ್ನು ಸ್ಥಾಪಿಸಲು ಸಹಾಯ ಮಾಡಿದ ಪ್ರಕರಣಗಳಲ್ಲಿಯೂ, ನಂತರದ ಘಟನೆಗಳಲ್ಲಿ ಅವರು ಅದನ್ನು ಜನರಿಂದ ಉಪಕಾರ ಹೊಂದುಕೊಳ್ಳುವಂತೆ ಮತು ್ತತಮ್ಮ ಸ್ವಂತ ಅಧಿಕಾರವನ್ನು ಶಾಶ್ವತಪಡಿಸಿಕೊಳ್ಳುವಂತೆ ರಾಜನೀತಿಯನ್ನು (policy) ಮಾಡಿದ್ದಾರೆ ಎಂಬದು ಗೋಚರವಾಗುತ್ತದೆ. ಮೋಶೆಯ ಸ್ಥಾನದಲ್ಲಿರುವ ಯಾವುದೇ ಮಹತ್ವಾಕಾಂಕ್ಷೆಯುಳ್ಳ ವ್ಯಕ್ತಿಯು, ರಾಜನೀತಿಯಿಂದ ಆಳಲ್ಪಟ್ಟು, ಜನರ ಮೇಲೆ ವಂಚನೆಯನ್ನು ಶಾಶ್ವತಗೊಳಿಸುವ ಪ್ರಯತ್ನ ಮಾಡಿ ತನ್ನಲ್ಲೇ, ತನ್ನ ಕುಟುಂಬದವರಲ್ಲೇ ಹೆಚ್ಚಿನ ಅಧಿಕಾರದ ಕೇಂದ್ರೀಕರಣಕ್ಕೆ ಕಾರ್ಯವೆಸಗುತ್ತಾನೆ. ವಿಶೇಷವಾಗಿ ಈಗಾಗಲೇ ಆ ಕುಲದಲ್ಲಿರುವ ಧಾರ್ಮಿಕ ಅಧಿಕಾರಿಗಳಿಗೆ ಮತ್ತು ದೇವರಿಂದ, ದೇವದರ್ಶನ ಗುಡಾರದಿಂದ ಆಳಲ್ಪಡುತ್ತದೆಂಬ ಹಕ್ಕೇಳಿಕೆಯ ಕಾರಣ. ಇದು ಸುಲಭದ ಕಾರ್ಯವಾಗಿ ಕಂಡುಬರುತ್ತದೆ. ಅಂತಹ ಕಾನೂನುಗಳನ್ನು ರಚಿಸಬಲ್ಲವನು, ಆ ಜನರನ್ನು ಆಳುವ ಸಾಮರ್ಥ್ಯವುಳ್ಳ ವ್ಯಕ್ತಿಯು ತನ್ನ ಕ್ರಮದ ಧೋರಣೆಯು ಏನಾಗಿದೆಯೆಂದು ಅರ್ಥಮಾಡಿಕೊಳ್ಳದಿರುವಷ್ಟು ಮಂಕಾಗಿದ್ದಾನೆಂದು ಊಹಿಸಲಾಗದು. ಹೀಗೆ ಸಂಪೂರ್ಣವಾಗಿ ಜನರ ಸರ್ಕಾರವು ಅವರ ಸ್ವಂತ ಕೈಗಳಲ್ಲಿದ್ದು, ಅದು ಆ ಆಡಳಿತಗಾರರು ನಿರ್ಧರಿಸಲಾಗದ ಗಂಭೀರ ಪ್ರಕರಣಗಳನ್ನು ಮೋಶೆಯ ಬಳಿಗೆ ತರಬೇಕೆಂಬ ಕರಾರು ಇದ್ದಾಗ್ಯೂ, ಯಾವ ಪ್ರಕರಣಗಳು ಮೋಶೆಯ ಬಳಿಗೆ ಹೋಗಬೇಕೆಂಬುದಕ್ಕೆ ಅವರುಗಳೇ ನ್ಯಾಯಾಧಿಪತಿಗಳಾಗಿದ್ದರು – "ನೀವು ತೀರಿಸಲಾಗದ ವ್ಯಾಜ್ಯಗಳನ್ನು ನನ್ನ ಬಳಿಗೆ ತರಬೇಕು, ನಾನೇ ಅವುಗಳನ್ನು ತೀರಿಸುವೆನು" (ಧರ್ಮೋ. 1 :17) ಎಂದು ಮೋಶೆ ಹೇಳಿದ್ದನು.

ಈ ರೀತಿಯಲ್ಲಿ ಇಸ್ರೇಲ್ ಒಂದು ಪ್ರಜಾಪ್ರಭುತ್ವ ರಾಷ್ಟ್ರವಾಗಿತ್ತು ಮತ್ತು ಅದರ ಅಧಿಕಾರಿಗಳು ದೈವಿಕ ಆದೇಶಕ್ಕನುಸಾರವಾಗಿ ಕಾರ್ಯವೆಸಗುತ್ತಿದ್ದರು. ಕೆಲವರು ತಮ್ಮ ಅಜ್ಞಾನದ ದೆಸೆಯಿಂದ "ಜನರಿಂದ ಜನರ ಸರ್ಕಾರ" ಎಂದು ಹೇಳುವ ಬದಲು ಸತ್ಯವೇದವು ಜನರ ಮೇಲೆ ಒಂದು ಸಾಮ್ರಾಜ್ಯ ಆಳ್ವಿಕೆಯನ್ನು ಅನುಮೋದಿಸುತ್ತದೆ ಎಂದು ಅಜ್ಞಾನದಿಂದ ಪ್ರತಿಪಾದಿಸುವವರ ಗೊಂದಲಕ್ಕೆ ಈ ಪ್ರಜಾಪ್ರಭುತ್ವ ಮಾದರಿಯ ನಾಗರೀಕ ಸರ್ಕಾರವು ನಾನೂರು ವರ್ಷಗಳ ಕಾಲ ಮುಂದುವರೆಯಿತು ಎಂಬುದನ್ನು ಗಮನಿಸಬೇಕು. ನಂತರದಲ್ಲಿ ಅದು, ದೇವರ ಅನುಮತಿ ಇಲ್ಲದೆ, "ಹಿರಿಯರ" ಕೋರಿಕೆಯ ಮೇರೆಗೆ ಒಂದು ಸಾಮ್ರಾಜ್ಯಕ್ಕೆ ಬದಲಾಯಿತು. ಆಗ ಒಂದು ರೀತಿ ವಿಧಿವತ್ತಾಗಿಲ್ಲದ ಅಧ್ಯಕ್ಷನಾಗಿದ್ದ ಸಮುವೇಲನಿಗೆ ದೇವರು – "ಅವರು ಹೇಳಿದಂತೆಯೇ ಮಾಡು; ಅವರು ನಿನ್ನನ್ನಲ್ಲ, ನನ್ನನ್ನು ತಿರಸ್ಕರಿಸಿದ್ದಾರೆ, ನನ್ನ ಆಳಿಕೆಗೆ ಬೇಡವೆನ್ನುತ್ತಾರೆ" (1 ಸಮು. 8:7) ಎಂದು ಹೇಳಿದನು. ದೇವರ ಮಾತಿಗನುಸಾರವಾಗಿ ಸಮುವೇಲನು ಆ ಜನರಿಗೆ ಹೇಗೆ ಅವರ ಹಕ್ಕುಗಳು, ಸ್ವಾತಂತ್ರ್ಯವೂ ಕಿತ್ತುಕೊಳ್ಳಲ್ಪಡುತ್ತವೆ, ಅಂಥಾಃ ಬದಲಾವಣೆಯಿಂದ ಅವರು ಹೇಗೆ ದಾಸರಾಗುತ್ತಾರೆ ಎಂಬುದನ್ನು ವಿವರಿಸಿದನು. ಆದಾಗ್ಯೂ ಅವರು ತಮ್ಮ ಸುತ್ತಲಿನ ಲೋಕದ ಇತರ ದೇಶಗಳಲ್ಲಿರುವ ಜನಪ್ರಿಯ ಕಲ್ಪನೆಗೆ ಮರುಳಾಗಿದ್ದರು (1 ಸಮು. 8:6–22). ತಮಗೊಬ್ಬ ಅರಸನು ಬೇಕೆಂಬ ಅವರ ಬಯಕೆಯ ವಿವರವನ್ನು ಪರಿಗಣಿಸುವಾಗ, ಮೋಶೆಯು ಯಾವುದೇ ಅಡಚಣೆಯಿಲ್ಲದೆ ಒಂದು ಮಹಾ ಸಾಮ್ರಾಜ್ಯದ ಮುಖ್ಯಸ್ಥನಾಗಿ ತನ್ನನ್ನೇ ಸ್ಥಾಪಿಸಿ ಕೊಳ್ಳಬಹುದಿತ್ತೆಂಬ ಆಲೋಚನೆಯಿಂದ ಯಾರು ಪ್ರಭಾವಿತರಾಗುವುದಿಲ್ಲ?

ಒಟ್ಟಾರೆಯಾಗಿ ಇಸ್ರೇಲ್ ಒಂದು ರಾಷ್ಟ್ರವನ್ನು ರಚಿಸಲ್ಪಟ್ಟಾಗ್ಯೂ, ಯಾಕೋಬನ ಮರಣದ ನಂತರವಷ್ಟೇ ಗೋತ್ರಗಳ ವಿಭಾಗವನ್ನು ಗುರುತಿಸಲಾಯಿತು. ಪ್ರತಿಯೊಂದು ಕುಟುಂಬವೂ, ಅಥವಾ ಕುಲವೂ ಸಾಮಾನ್ಯ ಒಪ್ಪಿಗೆಯೊಡನೆ ಕೆಲವರನ್ನು ತಮ್ಮ ಪ್ರತಿನಿಧಿಗಳನ್ನಾಗಿ, ಅಥವಾ ಮುಖ್ಯಸ್ಥರನ್ನಾಗಿ ಆಯ್ಕೆ ಮಾಡಿದರು ಅಥವಾ ಗುರುತಿಸಿದರು, ಈ ಪದ್ಧತಿಯು ಐಗುಪ್ತದಲ್ಲಿ ಅವರ ದೀರ್ಘಕಾಲದ ದಾಸತ್ವದಲ್ಲಿಯೂ ಮುಂದುವರೆಯಿತು. ಅವರುಗಳನ್ನು ಮುಖ್ಯಸ್ಥರು ಅಥವಾ ಹಿರಿಯರು ಎಂಬುದಾಗಿ ಕರೆಯಲಾಗುತ್ತಿತ್ತು. ಮತ್ತು ಮೋಶೆಯು ಅವರಿಗೆ ನಾಗರೀಕ ಸರ್ಕಾರದ ಗೌರವ ಮತ್ತು ಅಧಿಕಾರವನ್ನು ನೀಡಿದನು. ಆ ಕಾರಣದಿಂದ, ಆತನು ಅಧಿಕಾರವನ್ನು ತನ್ನಲ್ಲಿಯೇ, ಮತ್ತು ತನ್ನ ಸ್ವಂತ ಕುಟುಂಬದಲ್ಲಿಯೇ ಕೇಂದ್ರೀಕರಿಸಿಕೊಳ್ಳಲು ಬಯಸಿದ್ದರೆ ಅವರುಗಳು ಅಧಿಕಾರ ಮತ್ತು ಕಾರ್ಯಭಾರಿಯ ಸ್ಥಾನಕ್ಕೆ ಕೊನೆಯ ವ್ಯಕ್ತಿಗಳಾಗಿರುತ್ತಿದ್ದರು.

ದೇವರಿಂದ ನಾಗರೀಕ ಆಡಳಿತಕ್ಕೆ ನಿಯೋಜಿಸ ಲ್ಪಟ್ಟವರಿಗೆ ನೀಡಿದ ಸೂಚನೆಗಳು ಸರಳತೆ ಮತ್ತು ಪರಿಶುದ್ಧತೆಯ ಮಾದರಿಗಳಾಗಿವೆ. ಈ ನ್ಯಾಯಾಧಿಪತಿಗಳ ವಿಚಾರಣೆಯ ಬಗ್ಗೆ (hearing) ಮೋಶೆಯು ಜನರಿಗೆ – "ನ್ಯಾಯಾಧಿಪತಿಗಳಿಗೆ ನಾನು ಆ ಕಾಲದಲ್ಲಿ ಅಪ್ಪಣೆಮಾಡಿ – ನೀವು ಸ್ವಕುಲದವರ ವ್ಯಾಜ್ಯಗಳನ್ನು ವಿಚಾರಿಸಬೇಕು. ಅವರು

ಇಸ್ರಾಯೇಲ್ಯರೊಡನೆ ವ್ಯಾಜ್ಯ ಮಾಡಿದರೂ, ಅನ್ಯರೊಡನೆ ವ್ಯಾಜ್ಯ ಮಾಡಿದರೂ ನೀವು ನ್ಯಾಯದ ಪ್ರಕಾರವೇ ತೀರ್ಪು ಮಾಡಬೇಕು. ನ್ಯಾಯ ವಿಚಾರಿಸುವಾಗ ಮುಖ ದಾಕ್ಷಿಣ್ಯಮಾಡದೆ ಅಧಿಕರನ್ನೂ, ಅಲ್ಪರನ್ನೂ ಸಮನಾಗಿ ತಿಳಿಯಬೇಕು. ನೀವು ದೇವರ ಹೆಸರಿನಲ್ಲಿ ನ್ಯಾಯ ತೀರಿಸುವವರಾದ ಕಾರಣ ಮನುಷ್ಯರ ಮುಖವನ್ನು ನೋಡಿ ಹೆದರಬೇಡಿರಿ. ನೀವು ತೀರಿಸಲಿಕ್ಕಾಗದ ವ್ಯಾಜ್ಯಗಳನ್ನು ನನ್ನ ಬಳಿಗೆ ತರಬೇಕು; ನಾನೇ ಅವುಗಳನ್ನು ತೀರಿಸುವೆನು ಎಂದು ಹೇಳಿದೆನು" (ಧರ್ಮೋ. 1: 16–18) ಎಂದು ತಿಳಿಸಿದನು. ಅಂಥಾಃ ಕಠಿಣ ಪ್ರಕರಣಗಳನ್ನು ಮೋಶೆಯ ಮರಣಾನಂತರ ಮಹಾಯಾಜಕನ ಮೂಲಕವಾಗಿ ದೇವರ ಬಳಿಗೆ ನೇರವಾಗಿ ತರಲಾಯಿತು, ಉತ್ತರವು ದೈವ ನಿರ್ಣಯವನ್ನು ತಿಳಿಸುವ ಊರೀಮ್ ಮತ್ತು ತುಮ್ಮೀಮ್ (ವಿಮೋ. 28:30) ನಿಂದ ಹೌದು ಅಥವಾ ಇಲ್ಲ ಎಂಬುದಾಗಿರುತ್ತಿತ್ತು.

ಈ ಸತ್ಯಸಂಗತಿಗಳ ದೃಷ್ಟಿಯಲ್ಲಿ, ಜನರ ಮೇಲೆ ಪ್ರಭಾವ ಮತ್ತು ಅಧಿಕಾರವನ್ನು ಪಡಕೊಳ್ಳುವಂತೆ ಈ ಗ್ರಂಥಗಳು ಅಪ್ರಾಮಾಣಿಕ ಯಾಜಕರುಗಳಿಂದ ಬರೆಯಲ್ಪಟ್ಟವೇ? ಎಂದು ನಾವು ಕೇಳುತ್ತೇವೆ. ಅಂಥಾಃ ವ್ಯಕ್ತಿಗಳು ಅಂಥಾಃ ಉದ್ದೇಶಗಳಿಗಾಗಿ ಅವರು ಮುಂದುವರೆಯಬಯಸಿದ ಗುರಿಗಳಿಗೆ ವಿನಾಶಕಾರಿ ದಾಖಲೆಗಳನ್ನು ತಯಾರಿಸಿದರೇ? ಅವುಗಳು ಇಸ್ರಾಯೇಲ್ಯರ ಮಹಾಮುಖ್ಯಸ್ಥನು, ಅವರ ಸ್ವಂತ ಕುಲಕ್ಕೆ ಸೇರಿದವರಲ್ಲಿ ಒಬ್ಬಾತನು, ದೇವರ ಸೂಚನೆಯ ಮೇರೆಗೆ ಯಾಜಕವರ್ಗದಿಂದ ನಾಗರೀಕ ಹಕ್ಕನ್ನು ಕಡಿತಗೊಳಿಸಿ, ಅಧಿಕಾರವನ್ನು ಜನರ ಕೈಗೆ ನೀಡಿದರು ಎಂದು ನಿರ್ಧಾರಾತ್ಮಕವಾಗಿ ರುಜುವಾತುಪಡಿಸುತ್ತದಲ್ಲವೇ? ಇಂಥಾಃ ತೀರ್ಮಾನವು ಸಮಂಜಸವಾಗಿದೆಯೆಂದು ಯಾರಾದರೂ ಪರಿಗಣಿಸುವರೇ? ಎಂದು ನಾವು ಕೇಳುತ್ತೇವೆ.

ಪುನಃ ಗಮನಿಸಬೇಕಾದ ಸಂಗತಿಯೆಂದರೆ, ಈ ಇಪ್ಪತ್ತನೆಯ ಶತಮಾನದಲ್ಲಿ ಅತ್ಯಂತ ಮುಂದುವರೆದ ನಾಗರೀಕತೆಯ ಕಾನೂನುಗಳು ಶ್ರೀಮಂತರು ಮತ್ತು ಬಡವರಿಗೆ ಒಂದು ಸಾಮಾನ್ಯ ಮಟ್ಟದ ನಿಲುವನ್ನು ಎಚ್ಚರಿಕೆಯಿಂದ ಒದಗಿಸುವ ಹೊಣೆಗಾರಿಕೆಯನ್ನು ಹೊಂದಿಲ್ಲ ಎಂಬುದು ಗಮನಾರ್ಹವಾಗಿದೆ. ಮೋಶೆಯ ನಿಬಂಧನೆಗಳಿಂದ ನಿಚ್ಚಳವಾಗಿ ಯಾವುದೇ ವ್ಯತ್ಯಾಸಗಳನ್ನು ಮಾಡಿರಲಿಲ್ಲ. ಕೆಲವರು ಬಹಳ ಬಡವರಾಗುವ, ಮತ್ತೆ ಕೆಲವರು ಬಹಳ ಶ್ರೀಮಂತರು ಬಲಾಢ್ಯರಾಗುವ ಅಪಾಯಕಾರಿ ಘಟನೆಗಳಿಂದ ಜನರನ್ನು ಕಾಪಾಡುವಂತೆ ಈ ವಿಷಯದಲ್ಲಿ ಬೇರೆ ಯಾವುದೇ ರಾಷ್ಟ್ರೀಯ ಕಾನೂನು ಜಾರಿಯಲ್ಲಿಲ್ಲ. ಮೋಶೆಯ ನಿಬಂಧನಗಳು ಅವರ ಜೂಬಿಲಿ ವರ್ಷವಾದ ಪ್ರತಿ ಐವತ್ತು ವರ್ಷಗಳಿಗೊಮ್ಮೆ ಪುನರ್‌ವಶಪಡಿಸುವಂತೆ ಒದಗಿಸಲಾಗಿತ್ತು. ಈ ಕಾನೂನು ಆಸ್ತಿಯ ಸಂಪೂರ್ಣ ಪರಾಧೀನಗೊಳಿಸುವಿಕೆಯನ್ನು ತಡೆಗಟ್ಟುತ್ತದೆ, ಆ ಮೂಲಕ ಅದು ಕೆಲವರ ಕೈಯಲ್ಲಿ ಸಂಗ್ರಹವಾಗುವುದನ್ನು ತಪ್ಪಿಸುತ್ತದೆ (ಯಾಜಕ 25:9, 13–23, 27–30). ವಾಸ್ತವವಾಗಿ ಅವರುಗಳಿಗೆ ತಮ್ಮನ್ನು ತಾವು ಸಹೋದರರುಗಳನ್ನಾಗಿ ಪರಿಗಣಿಸುವಂತೆ, ಹಾಗೆಯೇ ನಡೆದುಕೊಳ್ಳುವಂತೆ, ಒಬ್ಬರಿಗೊಬ್ಬರು ಯಾವುದೇ ನಷ್ಟ ಪರಿಹಾರವಿಲ್ಲದೆ, ಬಡ್ಡಿ ತೆಗೆದುಕೊಳ್ಳದೆ, ಸಹಾಯ ಮಾಡುವಂತೆ ಕಲಿಸಿಕೊಡಲಾಗಿದೆ (ವಿಮೋ. 22:25; ಯಾಜಕ 25:36,37; ಅರಣ್ಯ 26:52–56).

ಎಲ್ಲಾ ಕಾನೂನುಗಳನ್ನು ಸಾರ್ವಜನಿಕ ಗೊಳಿಸಲಾಗಿದೆ. ಹೀಗಾಗಿ ಜನರ ಹಕ್ಕುಗಳನ್ನು ಯಶಸ್ವಿಯಾಗಿ ಅಕ್ರಮದಿಂದ ತಿದ್ದಲು/ ಹಸ್ತಕ್ಷೇಪ ಮಾಡಲು ಸಂಚು ಮಾಡುವ ವ್ಯಕ್ತಿಗಳನ್ನು ತಡೆಯಲಾಗಿದೆ. ಕಾನೂನುಗಳನ್ನು ಎಷ್ಟರಮಟ್ಟಿಗೆ ಪ್ರಕಟಪಡಿಸಲಾಯಿತು ಎಂದರೆ ಯಾರು ಬೇಕಾದರೂ ಅದನ್ನು ನಕಲು ಮಾಡುವ ಆಯ್ಕೆ ಮಾಡಬಹುದಿತ್ತು ಮತ್ತು ಅವುಗಳ ಬಗ್ಗೆ ತಿಳುವಳಿಕೆ ಇಲ್ಲದಿರುವ ಅತ್ಯಂತ ಬಡವರು, ತೀವ್ರ ಅಶಿಕ್ಷಿತರು ಇವರುಗಳ ಸಲುವಾಗಿ ಯಾಜಕರು ಅವರುಗಳನ್ನು ಏಳನೆಯ ವರ್ಷದ ಹಬ್ಬದಲ್ಲಿ ತಮ್ಮ ಜನರಿಗೆ ಓದುವುದನ್ನು ಅವರ ಕರ್ತವ್ಯವನ್ನಾಗಿ ಮಾಡಲಾಗಿದೆ (ಧರ್ಮೋ. 31:10–13). ಅಂಥಾಃ ಕಾನೂನುಗಳು ಮತ್ತು ಏರ್ಪಾಡುಗಳು ಕೆಟ್ಟ ಮನುಷ್ಯರಿಂದ ಅಥವಾ ಜನರನ್ನು ಅವರ ಸ್ವಾತಂತ್ರ್ಯ ಮತ್ತು ಸಂತೋಷ ಇವುಗಳಿಂದ ವಂಚಿಸಲು ಒಳಸಂಚು ಮಾಡುವ ವ್ಯಕ್ತಿಗಳಿಂದ ವಿನ್ಯಾಸಗೊಂಡಿದೆ ಎಂದು ಭಾವಿಸುವುದು ಸಮಂಜಸವಾದೀತೇ? ಅಂಥಾಃ ಊಹೆಗಳು ಅಸಮಂಜಸವಾಗಿವೆ.

ಪರದೇಶಸ್ಥರ ಮತ್ತು ಶತ್ರುಗಳ ಹಕ್ಕುಗಳು ಮತ್ತು ಹಿತಾಸಕ್ತಿಗೆ ಸಂಬಂಧಿಸಿದಂತೆ ಮೋಶೆಯ ನಿಬಂಧನೆಗಳು ಅದರ ಸಮಯಕ್ಕಿಂತ ಮೂವತ್ತೆರಡು ಶತಮಾನಗಳಷ್ಟು ಮುಂದಾಗಿಯೇ ಇದೆ – ನಿಜವಾಗಿಯೂ ಬಹಳಷ್ಟು ಇಂದಿನ ಅತ್ಯಂತ ನಾಗರೀಕ ಕಾನೂನುಗಳು ಸೊಗಸಾಗಿ, ನ್ಯಾಯಸಮ್ಮತೆ ಮತ್ತು ಪರೋಪಕಾರಗಳಲ್ಲಿ ಅವುಗಳಿಗೆ ಸರಿಸಮವಾಗಿವೆ. ನಾವು

ಈ ರೀತಿಯಾಗಿ ಓದುತ್ತೇವೆ. – "ಅನ್ಯರಿಗಾಗಲೀ ಸ್ವದೇಶದವರಿಗಾಗಲೀ ಪಕ್ಷಪಾತವಿಲ್ಲದೆ ಒಂದೇ ವಿಧಿ ಇರಬೇಕು. ನಾನು ನಿಮ್ಮ ದೇವರಾದ ಯೆಹೋವನು" (ವಿಮೋಚನಾಕಾಂಡ 12:49, ಯಾಜಕ 24:22).

"ನಿಮ್ಮ ದೇಶದಲ್ಲಿ ಇಳುಕೊಂಡಿರುವ ಪರದೇಶದವರಿಗೆ ಅನ್ಯಾಯವೇನೂ ಮಾಡಬಾರದು. ಅವರು ನಿಮಗೆ ಸ್ವದೇಶದವರಂತೆಯೇ ಇರಬೇಕು; ಅವರನ್ನು ನಿಮ್ಮಂತೆಯೇ ಪ್ರೀತಿಸಬೇಕು. ಐಗುಪ್ತದಲ್ಲಿದ್ದಾಗ ನೀವೂ ಅನ್ಯರಾಗಿದ್ದೀರಲ್ಲವೇ. ನಾನು ನಿಮ್ಮ ದೇವರಾದ ಯೆಹೋವನು" (ಯಾಜಕ 19: 33,34).

"ನಿನ್ನ ವೈರಿಯ ಎತ್ತಾಗಲೀ ಕತ್ತೆಯಾಗಲೀ ತಪ್ಪಿಸಿಕೊಂಡು ಹೋಗಿರಲಾಗಿ ಅದು ನಿನಗೆ ಸಿಕ್ಕಿದರೆ ಅದನ್ನು ಅವನ ಬಳಿಗೆ ಹೊಡಕೊಂಡು ಹೋಗಿ ಒಪ್ಪಿಸಬೇಕು. ನಿನ್ನ ಹಗೆಯವನ ಕತ್ತೆ ಹೊರೆಯ ಕೆಳಗೆ ಬಿದ್ದಿರುವುದನ್ನು ಕಂಡರೆ ಅದನ್ನು ಎಬ್ಬಿಸುವುದಕ್ಕೆ ಮನಸ್ಸಿಲ್ಲದೆ ಹೋದಾಗ್ಯೂ ಅವನಿಗೆ ಸಹಾಯ ಮಾಡಿ ಎಬ್ಬಿಸಲೇ ಬೇಕು" (ವಿಮೋ. 23: 4–5 ಮತ್ತು ಅಂಚಿನ ಬರಹಗಳು).

ಮೂಕ ಪ್ರಾಣಿಗಳನ್ನು ಸಹಾ ಮರೆತುಬಿಡಲಿಲ್ಲ. ಪ್ರಾಣಿಗಳಿಗೆ ಮತ್ತು ಮಾನವರಿಗೆ ಕ್ರೂರತ್ವ ತೋರಿಸುವುದನ್ನು ಕಠಿಣವಾಗಿ ನಿಷೇಧಿಸಲಾಗಿತ್ತು. "ಕಣ ತುಳಿಯುವ ಎತ್ತಿನ ಬಾಯಿಯನ್ನು ಕಟ್ಟಬಾರದು" (ಧರ್ಮೋ. 25:4) (ಯಾಕೆಂದರೆ ಯಾವುದೇ ಕೂಲಿಯಾಳು ಆತನ ಅಹಾರಕ್ಕೆ ಅರ್ಹನಾಗಿದ್ದಾನೆ) "ಎತ್ತನ್ನೂ, ಕತ್ತೆಯನ್ನೂ ಜೋಡಿಯಾಗಿ ನೇಗಿಲಿಗೆ ಕಟ್ಟಬಾರದು" (ಧರ್ಮೋ. 22:10) (ಯಾಕೆಂದರೆ ಅವುಗಳು ಶಕ್ತಿಯಲ್ಲಿಯೂ, ಹೆಜ್ಜೆ ಇಡುವುದರಲ್ಲಿಯೂ ಅಸಮಾನವಾಗಿವೆ). ಅದು ಕ್ರೂರತ್ವವೆನಿಸಿಕೊಳ್ಳುವುದು. "ಆರು ದಿವಸಗಳು ನಿಮ್ಮ ಕೆಲಸವನ್ನು ನಡಿಸಿ ಏಳನೆಯ ದಿನದಲ್ಲಿ ಯಾವ ಕೆಲಸವನ್ನೂ ಮಾಡದೆ ಇರಬೇಕು. ಆ ಹೊತ್ತು ನಿಮ್ಮ ಎತ್ತುಗಳೂ, ಕತ್ತೆಗಳೂ, ದಾಸದಾಸಿಯರೂ, ಪರದೇಶಸ್ಥರೂ ವಿಶ್ರಮಿಸಿಕೊಳ್ಳಲಿ" (ವಿಮೋ. 23:12). (ಅವರುಗಳಿಗೂ ಸಹ ವಿಶ್ರಾಂತಿಯನ್ನೂ ಒದಗಿಸಲಾಗಿದೆ).

ಯಾಜಕತ್ವವನ್ನು ಕೆಲವರು ಸ್ವಾರ್ಥಪರ ಸಂಸ್ಥೆ ಎಂದು ಸಾಧಿಸಬಹುದು. ಯಾಕೆಂದರೆ, ಲೇವಿ ಕುಲದವರಿಗೆ ಇತರೆ ಕುಲಗಳ ಸಹೋದರರ ವೈಯುಕ್ತಿಕ ಉತ್ಪತ್ತಿಯ ವಾರ್ಷಿಕ ಆದಾಯದ ಹತ್ತರಲ್ಲಿ ಒಂದು ಭಾಗ ಅಥವಾ ದಶಮಾಂಶದಿಂದ ಸಹಾಯ ದೊರೆಯುತ್ತದೆ. ಈ ವಾಸ್ತವಾಂಶವನ್ನು ಪಕ್ಷಪಾತದ ಕೊಡುಗೆ ಎಂಬುದಾಗಿ ಸಂದೇಹವಾದಿಗಳು ಹೇಳುವುದು ಸರ್ವೇಸಾಮಾನ್ಯ ಸಂಗತಿ. ಯಾಜಕರ ವ್ಯವಸ್ಥೆಯನ್ನು ರೂಪಿಸಿ ಸ್ಥಾಪಿಸಿದ ದೇವರ ಭಾಗದ ಅತ್ಯಂತ ಗಮನಾರ್ಹವಾದ ಈ ವ್ಯವಸ್ಥೆಯನ್ನು ಅವರು ಬಹುಶಃ ತಮ್ಮ ತಿಳಿಗೇಡಿತನದಿಂದ ತಪ್ಪಾಗಿ ತಿಳಿದಿದ್ದಾರೆ. ಅದು ಸ್ವಾರ್ಥದಿಂದೊಡಗೂಡಿದ ಯಾಜಕತ್ವದ ಒಳಸಂಚಿನ ಕಾರ್ಯವಲ್ಲ. ನಿಶ್ಚಯವಾಗಿಯೂ, ಇದನ್ನು ಆಧುನಿಕ ಯಾಜಕತ್ವವು ಪುನಃ ಪುನಃ ತಪ್ಪಾಗಿ ಬೆಂಬಲಿಸುವುದಿಲ್ಲ. ಅದು ಈಗಲೂ ಅದನ್ನು ಹಿಂದಿನ ಉದಾಹರಣೆ ಯನ್ನಾಗಿ ಇಟ್ಟುಕೊಂಡು ಅದು ಯಾವ ಸ್ಥಿತಿಯಲ್ಲಿ ಸ್ಥಾಪಿಸಲಾಗಿತ್ತು ಎಂಬುದನ್ನು ಹೇಳದೇ, ಸಂದಾಯದ ಪದ್ಧತಿಯನ್ನು ತಿಳಿಸದೇ ಅದೇ ವಿಧಾನವನ್ನು ಒತ್ತಾಯಿಸುತ್ತದೆ.

ಅದು ವಾಸ್ತವವಾಗಿ, ಅತ್ಯಂತ ಕಟ್ಟುನಿಟ್ಟಾದ ನೀತಿಧರ್ಮದ ಮೇಲೆ ಸ್ಥಾಪಿಸಲ್ಪಟ್ಟಿತ್ತು. ಇಸ್ರಾಯೇಲ್ಯರು ಕಾನಾನ್ ದೇಶವನ್ನು ವಶಪಡಿಸಿಕೊಂಡಾಗ, ಲೇವಿ ಕುಲದವರಿಗೆ ಸಹ ಇತರೆ ಕುಲಗಳಂತೆ ಆ ದೇಶದ ಪಾಲು ತೆಗೆದುಕೊಳ್ಳುವ ಹಕ್ಕು ಇತ್ತು; ಆದಾಗ್ಯೂ ದೇವರು ವ್ಯಕ್ತಪಡಿಸಿದ ಆಜ್ಞೆಗನುಸಾರವಾಗಿ ಅವರಿಗೆ ಮನೆ ಕಟ್ಟಿಕೊಳ್ಳಲು ಅವರು ಧಾರ್ಮಿಕ ವಿಚಾರಗಳಲ್ಲಿ ಸೇವೆ ಮಾಡಬೇಕಾದ ವಿವಿಧ ಕುಲಗಳೊಂದಿಗೆ ಚೆದುರಿಹೋಗಿರುವ ಕೆಲವೊಂದು ನಗರಗಳು ಮತ್ತು ಹಳ್ಳಿಗಳ ಹೊರತಾಗಿ ಹೆಚ್ಚೇನೂ ದೊರೆಯಲಿಲ್ಲ. ದೇಶವು ವಿಭಜನೆಯಾಗುವ ಮುನ್ನ ಈ ನಿಷೇದವು ಒಂಬತ್ತು ಸಾರಿ ಕೊಡಲಾಗಿತ್ತು. ಭೂಮಿಯ ಬದಲಾಗಿ, ಅದಕ್ಕೆ ಸಮಾನವಾದುದ್ದೇನಾದರೂ ಅವರಿಗೆ ಖಂಡಿತವಾಗಿಯೂ ನೀಡಬೇಕಾಗಿತ್ತು. ಹೀಗಾಗಿ ದಶಮಾಂಶವು ಸಮಂಜಸವೂ, ನ್ಯಾಯವೂ ಆದ ಹಂಚಿಕೆ ಆಯಿತು. ಇದುವೇ ಎಲ್ಲವೂ ಆಗಿರಲಿಲ್ಲ: ಈ ದಶಮಾಂಶವು ನಾವು ಕಂಡುಕೊಂಡಂತೆ ಕೇವಲ ಋಣವೇ ಹೊರತು ತೆರಿಗೆಯಾಗಿ ಜಾರಿಯಾಗಿರಲಿಲ್ಲ. ಆ ಕೊಡುಗೆಯನ್ನು ನೀಡುವಂತೆ ಅವರಿಗೆ ಯಾವುದೇ ಬೆದರಿಕೆ ಹಾಕುವಂತಿರಲಿಲ್ಲ. ಎಲ್ಲವೂ ಅವರ ಮನಸಾಕ್ಷಿಯ ಮೇಲೆ ಅವಲಂಬಿಸಿತ್ತು. ಈ ಬಗ್ಗೆ ಜನರಿಗೆ ನೀಡಿರುವ ಎಚ್ಚರಿಕೆಯ ಮಾತುಗಳೆಂದರೆ – "ನೀವು ನಿಮ್ಮ ದೇಶದಲ್ಲಿ ಇರುವ ತನಕ ಲೇವಿಯರನ್ನು ಕೈಬಿಡಬಾರದು. ಜ್ಞಾಪಕವಿರಲಿ" (ಧರ್ಮೋ. 12:19). "ಲೇವಿಯರಿಗೆ ನಿಮ್ಮೊಡನೆ ಯಾವ ಸ್ವಾಸ್ಥ್ಯವೂ ಇಲ್ಲವಾದದರಿಂದ ಅವರನ್ನು ಕೈಬಿಡಬಾರದು" (ಧರ್ಮೋ. 14 :27).

ಹೌದೇ? ಎಂದು ನಾವು ಕೇಳುತ್ತೇವೆ. ಈ ವ್ಯವಸ್ಥೆಗಳನ್ನು ಯಾಜಕರು ಸ್ವಾರ್ಥದಿಂದ ಮತ್ತು ಆಕಾಂಕ್ಷೆಯಿಂದ ವ್ಯವಸ್ಥೆ ಮಾಡಿದ್ದಿರಬಹುದು ಎಂದು ಊಹಿಸುವುದು ಯುಕ್ತವಾಗಿದೆಯೇ ? ಮತ್ತು ಇದು ಅವರು ತಮ್ಮನ್ನು ಅನುವಂಶಿಕ ಹಕ್ಕು ಬಾಧ್ಯತೆಯಿಂದ ಕತ್ತರಿಸಿಹಾಕುವಂತೆ ಮತ್ತು ಅವರ ಸಹೋದರರ ಮೇಲೆ ಅವಲಂಬಿತರಾಗಿ ಆತುಕೊಳ್ಳುವಂತೆ ಮಾಡಿದ ವ್ಯವಸ್ಥೆಯಾಗಿದೆ ಅಲ್ಲವೇ? ಎಂದು ಪ್ರಶ್ನಿಸುತ್ತೇವೆ. ಆದರೆ ವಿವೇಚನೆಯು ನಮಗೆ ಇದಕ್ಕೆ ವ್ಯತಿರಿಕ್ತವಾದುದನ್ನು ಬೋಧಿಸುತ್ತದೆ ಅಲ್ಲವೇ?

ಇದಕ್ಕೆ ಸಾಮರಸ್ಯಕರವಾಗಿ, ಹಕ್ಕೇಳಿಕೆ ನೀಡಿದ ಸಮಾನವಾದ ವಿವರಿಸಲಾಗದ ಬೇರೆ ಯಾವುದೇ ನೆಲೆಯ ಮೇಲೆ ದೇವರು ಆ ನಿಬಂಧನೆಗಳ ಕರ್ತೃವಾಗಿದ್ದಾನೆ ಎಂಬುದು ವಾಸ್ತವವಾಗಿದೆ ಮತ್ತು ಯಾಜಕತ್ವವನ್ನು ಗೌರವಿಸಲು ಯಾವುದೇ ವಿಶೇಷ ಪೂರ್ವಸಿದ್ಧತೆ ಇರುವುದಿಲ್ಲ. ಏನಲ್ಲದಿದ್ದರೂ ವಂಚಕರು ತಮ್ಮ ಬಗ್ಗೆ ಮಾನ್ಯತೆ ಹಾಗೂ ಗೌರವವನ್ನು ಸಲ್ಲಬೇಕಾದಲ್ಲಿ ಹೆಚ್ಚು ಎಚ್ಚರಿಕೆಯುಳ್ಳವರಾಗಿರುತ್ತಾರೆ ಮತ್ತು ಯಾರಾದರೂ ತಮ್ಮನ್ನು ದುರುಪಯೋಗ ಪಡಿಸಿದರೆ ಕಠಿಣ ದಂಡನೆ ಮತ್ತು ಶಾಪವನ್ನು ನೀಡುತ್ತಾರೆ. ಆದರೆ ಇಲ್ಲಿ, ಈ ರೀತಿಯಾಗಿ ಕಂಡುಬರುತ್ತಿಲ್ಲ. ಯಾವುದೇ ವಿಶೇಷ ಗೌರವ ಅಥವಾ ಪೂಜ್ಯ ಭಾವನೆಗಳಿಲ್ಲ ಅಥವಾ ಹಿಂಸೆಗಳಿಂದ, ಅಪಮಾನಗಳಿಂದ ವಿನಾಯಿತಿ ನೀಡಲಾಗುವುದಿಲ್ಲ. ವರ್ಗಗಳ ನಡುವೆ ಯಾವುದೇ ತಾರತಮ್ಯ ತೋರಿಸದ, ವ್ಯಕ್ತಿಗಳ ಅಂತಸ್ತು ಮುಂತಾದವುಗಳ ಮೇಲೆ ಗೌರವ ತೋರಿಸದೆ, ಸರ್ವಸಾಮಾನ್ಯವಾದ ಕಾನೂನು ಮಾತ್ರವೇ ಅವರ ಏಕೈಕ ರಕ್ಷಣೆಯಾಗಿತ್ತು. ಇದು ಹೆಚ್ಚು ಗಮನೀಯವಾದುದು, ಯಾಕೆಂದರೆ ಸೇವಕರುಗಳನ್ನು, ಅಪರಿಚಿತರನ್ನು, ವಯಸ್ಸಾದವರನ್ನು ಗೌರವಿಸುವುದು ವಿಶೇಷ ಶಾಸನದ ವಿಷಯವಾಗಿತ್ತು. ಉದಾಹರಣೆಗೆ: “ನೀವು ಪರದೇಶಸ್ಥನಗಾಗಲೀ, ವಿಧವೆಯರನ್ನಾಗಲೀ, ಅಥವಾ ದಿಕ್ಕಿಲ್ಲದ ಮಕ್ಕಳನ್ನಾಗಲೀ ಬಾಧಿಸಬಾರದು. ನೀವು ಇಂಥವರನ್ನು ಬಾಧಿಸಿದರೆ ಅವರು ನನಗೆ (ದೇವರಿಗೆ) ಮೊರೆಯಿಡುವರು; ಆ ಮೊರೆಗೆ ನಾನು ಕಿವಿಗೊಡುವೆನೆಂದು ತಿಳಿದುಕೊಳ್ಳಿರಿ. ನಾನು ಕೋಪಿಸಿಕೊಂಡು ನಿಮ್ಮನ್ನು ಶತ್ರುಗಳ ಕತ್ತಿಯಿಂದ ಸಂಹಾರ ಮಾಡಿಸುವೆನು; ನಿಮ್ಮ ಹೆಂಡತಿಯರು ವಿಧವೆಗಳಾಗುವರು, ನಿಮ್ಮ ಮಕ್ಕಳು ದಿಕ್ಕಿಲ್ಲದವರಾಗುವರು" (ವಿಮೋ. 22, 21–24. 23:9 ಮತ್ತು ಯಾಜಕ. 19:33,34). “ಕೂಲಿಯವನ ಕೂಲಿಯನ್ನು ಮರುದಿನದವರೆಗೆ ನಿನ್ನ ಬಳಿಯಲ್ಲಿ ಇಟ್ಟುಕೊಳ್ಳಬಾರದು” (ಯಾಜಕ 19:13). “ನೀವು ಸ್ವದೇಶದವರಲ್ಲಿಯಾಗಲೀ, ನಿಮ್ಮಲ್ಲಿರುವ ಅನ್ಯದೇಶದವರಲ್ಲಿಯಾಗಲೀ, ಗತಿಯಿಲ್ಲದ ಬಡಕೂಲಿಯವನಿಗೆ ಏನೂ ಅನ್ಯಾಯವಮಾಡದೆ ದಿನದ ಕೂಲಿಯನ್ನು ಆ ದಿನದಲ್ಲಿಯೇ ಕೊಟ್ಟು ಹೊತ್ತು ಮುಣುಗುವುದಕ್ಕೆ ಮುಂಚಿತವಾಗಿ ಅವನಿಗೆ ಕೊಡಬೇಕು. ಅವನಿಗೆ ಬೇರೆ ಗತಿಯಿಲ್ಲದ್ದರಿಂದ ಅದನ್ನೇ ಎದುರು ನೋಡುತ್ತಾನಲ್ಲಾ. ನೀವು ಕೊಡದಿದ್ದರೆ ಅವನು ಯೆಹೋವನಿಗೆ ಮೊರೆಯಿಟ್ಟಾನು; ಆಗ ನೀವು ದೋಷಿಗಳಾಗಿ ಕಂಡು ಬಂದೀರಿ” (ಧರ್ಮೋ. 24: 14–15, ವಿಮೋ. 21:26,27). “ತಲೆನರೆತ ವೃದ್ಧರ ಮುಂದೆ ಎದ್ದು ನಿಂತು ಅವರನ್ನು ಸನ್ಮಾನಿಸಬೇಕು. ನಿಮ್ಮ ದೇವರಲ್ಲಿ ಭಯಭಕ್ತಿಯುಳ್ಳವರಾಗಿರಬೇಕು. ನಾನು ಯೆಹೋವನು” (ಯಾಜಕ 19:32, ಯಾಜಕ 19:14 ಸಹ ನೋಡಿರಿ). ಇವೆಲ್ಲವೂ, ಇನ್ನೂ ಯಾಜಕರಿಗಾಗಲೀ, ಲೇವಿಯರಿಗಾಗಲೀ ಅವರ ದಶಮಾಂಶಗಳಿಗಾಗಲೀ ಇನ್ನೂ ಯಾವುದೇ ವಿಶೇಷತೆ ಇರುವುದಿಲ್ಲ.

ಬಡವರಿಗೆ ಮತ್ತು ದೀರ್ಘಕಾಲದಿಂದ ಪೀಡಿತಕ್ಕೊಳಗಾದ ಜನರಿಗೆ ಕಾನೂನಿನ ನೈರ್ಮಲ್ಯದ ವ್ಯವಸ್ಥೆಗಳು ಬಹಳ ಅಗತ್ಯವಾಗಿವೆ ಮತ್ತು ಅದರೊಡನೆ ತಿನ್ನಬಹುದಾದ ಇಲ್ಲವೇ ತಿನ್ನಬಾರದ ಪ್ರಾಣಿಗಳ ಶುಚಿತ್ವ ಮತ್ತು ಅಶುಚಿತ್ವದ ಬಗ್ಗೆ ಕಟ್ಟಳೆಯಲ್ಲಿನ ಸ್ವಾಸ್ಥ್ಯ ಸಂಬಂಧವಾದ ವ್ಯವಸ್ಥೆಗಳು ಗಮನೀಯವಾಗಿವೆ ಮತ್ತು ಸ್ಥಳಾವಕಾಶವು ಅವುಗಳ ಪರೀಕ್ಷೆಗೆ ಅನುಮತಿಸಿದರೆ ಇತರೆ ಲಕ್ಷಣಗಳೊಂದಿಗೆ ಬಹಳ ಕುತೂಹಲಕಾರಿಯಾಗಿರುತ್ತಿತ್ತು. ಕಾನೂನು ಆ ಸಂಬಂಧವಾದ ವೈದಕೀಯ ವಿಜ್ಞಾನದ ಇತ್ತೀಚಿನ ತೀರ್ಮಾನಗಳಿಗಿಂತ ಮುಂದುವರೆದಿಲ್ಲವಾದರೂ ಅವಕ್ಕೆ ಸರಿಸಮವಾಗಿವೆಯೆಂದು ತೋರುತ್ತದೆ. ಮೋಶೆಯ ಕಾನೂನಿನಲ್ಲಿಯೂ ಸಾಂಕೇತಿಕ ಗುಣಲಕ್ಷಣವಿದೆ, ಇದನ್ನು ನಾವು ಮುಂದಿನ ಪರಿಗಣನೆಗೆ ಬಿಟ್ಟುಬಿಡಬೇಕಾಗುತ್ತದೆ; ಆದರೆ ನಮ್ಮ ಅವಸರದ ಕ್ಷಣನೋಟವು ಈ ಕಾನೂನು ಪ್ರಕಟಗೊಂಡ ಧರ್ಮದ ಸಮಗ್ರ ರಚನೆಯ ಬಗ್ಗೆ ಅಗಾಧವಾದ ಕುರುಹುಗಳನ್ನು ಒದಗಿಸುತ್ತದೆ ಮತ್ತು ಉಳಿದದ್ದನ್ನು ಸತ್ಯವೇದವು ವಿಸ್ತಾರವಾಗಿ ತಿಳಿಸುತ್ತದೆ ಎಂಬುದು ಅದರ ದಿನಾಂಕವನ್ನು ಪರಿಗಣನೆಗೆ ತೆಗೆದುಕೊಂಡಾಗ ನಿಜವಾಗಿಯೂ ಜ್ಞಾನದ ಮತ್ತು ನ್ಯಾಯದ ಒಂದು ಅದ್ಭುತವಾದ ಪ್ರದರ್ಶನವಾಗಿದೆ.

ವಿಮೋಚನೆಯ ಬೆಳಕಿನಲ್ಲಿ, ಅದು ನೀಚ ಸಂಕಲ್ಪವುಳ್ಳ ಜನರ ಕಾರ್ಯವೆಂಬುದಕ್ಕೆ ಯಾವುದೇ ಪುರಾವೆಗಳಿಲ್ಲ ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳಬೇಕು. ಆದರೆ ಅದು ಪ್ರಕೃತಿಯು ನಮಗೆ ದೇವರ ಲಕ್ಷಣವೆಂಬ ಬೋಧನೆಗಳಿಗೆ ನಿಖರವಾಗಿ ತಾಳೆಹೊಂದುತ್ತದೆ. ಅದು ಆತನ ಜ್ಞಾನದ, ನ್ಯಾಯದ ಮತ್ತು ಪ್ರೀತಿಯ ಬಗ್ಗೆ ಕುರುಹುನೀಡುತ್ತದೆ. ಮುಂದುವರೆದು, ಸ್ಪಷ್ಟವಾಗಿ ದೈವಭಕ್ತಿಯುಳ್ಳ ಕಾನೂನುದಾತನಾದ ಮೋಶೆಯು ಆ ಕಾನೂನುಗಳು ತನ್ನದೆ ಆದವುಗಳೆಂಬುದನ್ನು ನಿರಾಕರಿಸುತ್ತಾನೆ ಮತ್ತು ಅವನ್ನು ದೇವರಿಗೆ ನಿಯೋಜಿಸುತ್ತಾನೆ (ವಿಮೋ. 24:12; ಧರ್ಮೋ. 9:9–11; ವಿಮೋ. 26:30 ಮತ್ತು ಯಾಜಕ 1:1). ಆತನ (ಮೋಶೆಯ) ಸರ್ವಸಾಮಾನ್ಯವಾದ ಗುಣಲಕ್ಷಣಗಳ ದೃಷ್ಟಿಯಲ್ಲಿ, ಮತ್ತು ಸುಳ್ಳು ಸಾಕ್ಷಿ ಹೇಳಬಾರದು ಎಂಬ ಆತನ ಕಟ್ಟಳೆಯ ದೃಷ್ಟಿಯಲ್ಲಿ ಹಾಗೂ ಮಿಥ್ಯಾಚರಣೆ ಮತ್ತು ಸುಳ್ಳು ಹೇಳುವಿಕೆ ಇವುಗಳನ್ನು ನಿವಾರಿಸುವಲ್ಲಿ ಅಂಥಾಃ ವ್ಯಕ್ತಿಯು ಸುಳ್ಳು ಸಾಕ್ಷ್ಯಗಳನ್ನು ಹೊಂದಿದ್ದು ತನ್ನ ಸ್ವಂತ ದೃಷ್ಟಿಯಿಂದ ರಚಿಸಿದ ಕಾನೂನುಗಳನ್ನು ದೇವರದ್ದೆಂದು ಹೇಳಿದನೆಂಬುದು ಸಮಂಜಸವೆನಿಸೀತೋ? ನಾವು ಪ್ರಸ್ತುತದಲ್ಲಿ ಜಾರಿಯಲ್ಲಿರುವ ಸತ್ಯವೇದದ ಪ್ರತಿಗಳನ್ನು ಪರೀಕ್ಷಿಸುತ್ತಿದ್ದೇವೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಹೀಗಾಗಿ ಅದು ಅಕ್ಷರಮಟ್ಟಿಗೆ ಗುರುತಿಸಿರುವ ಪ್ರಾಮಾಣಿಕತೆಯು ಮೋಶೆಯ ಉತ್ತರಾಧಿಕಾರಿಗಳಿಗೂ ಅನ್ವಯವಾಗುತ್ತದೆ. ಅವರಲ್ಲಿ ಕೆಲವರು ಕೆಟ್ಟವರು ಇದ್ದರೂ ಜನರ ಹಿತವನ್ನಲ್ಲ, ತಮ್ಮ ಸ್ವಂತ ಹಿತವನ್ನು ಬಯಸುವವರಾಗಿದ್ದಿರಬಹುದು, ಆದರೆ ಅವರು ಪರಿಶುದ್ಧ ಬರಹಗಳನ್ನು ಕೆಡಿಸುವ ಗೋಜಿಗೆ ಹೋಗಲಿಲ್ಲ ಮತ್ತು ಅವು ಇಂದಿಗೂ ಪರಿಶುದ್ಧವಾಗಿದೆ ಎಂಬುದು ಸುಸ್ಪಷ್ಟವಾಗಿದೆ.

## ಸತ್ಯವೇದದ ಪ್ರವಾದಿಗಳು
## The Prophets of the Bible

ಈಗ ನಮ್ಮ ಕ್ಷಣದರ್ಶನವು ಸತ್ಯವೇದದ ಪ್ರವಾದಿಗಳು ಮತ್ತು ಅವರ ಸಾಕ್ಷ್ಯಗಳ ಮೇಲಿದೆ. ನಿಜವಾಗಿ ಹೇಳಬೇಕಾದರೆ ಗಮನಾರ್ಹವಾದ ಸತ್ಯವೆಂದರೆ, ಈ ಪ್ರವಾದಿಗಳು ಕೆಲವರನ್ನು ಹೊರತುಪಡಿಸಿ, ಹಲವರು ಯಾಜಕರ ವರ್ಗಕ್ಕೆ ಸೇರಿದವರಲ್ಲ ಮತ್ತು ಅವರ ದಿನಗಳಲ್ಲಿ ಅವರ ಪ್ರವಾದನೆಗಳು ಸಾಮಾನ್ಯವಾಗಿ ಕ್ಷೀಣಿಸುತ್ತಾ ಇತ್ತು ಹಾಗೂ ಸ್ವಾರ್ಥಪರ ಯಾಜಕ ಸೇವೆಗೆ ಹೊಂದಾಣಿಕೆಯಾಗುತ್ತಿರಲಿಲ್ಲ. ಮಾತ್ರವಲ್ಲದೆ, ವಿಗ್ರಹಾರಾಧನೆಯತ್ತ ವಾಲಿರುವ ಜನರಿಗೆ ಪ್ರತಿಕೂಲಕರ ವಾಗಿತ್ತು. ದೇವರಿಂದ ಬರುವ ಅವರ ಸಂದೇಶಗಳ ಹೊರೆಯು ಪಾಪವನ್ನು ತೆಗೆಳುವುದೂ, ಬರಲಿರುವ ಶಿಕ್ಷೆಗಳ ಬಗ್ಗೆ ಎಚ್ಚರಿಕೆಗಳನ್ನು ಜೋಡಿಸಿದವುಗಳೂ ಆಗಿದ್ದವು. ಅವುಗಳೊಂದಿಗೆ ನಾವು ಭವಿಷ್ಯದಲ್ಲಿನ ಆಶೀರ್ವಾದಗಳೂ ಸಾಂದರ್ಭಿಕವಾಗಿ ಹಣಿದು ಕೊಂಡಿರುವುದನ್ನು ಮತ್ತು ನಂತರದಲ್ಲಿ ಅವರುಗಳು ಪಾಪದಿಂದ ಶುದ್ಧಿ ಹೊಂದಿಕೊಂಡು ದೇವರ ಕೃಪೆಗೆ ಹಿಂತಿರುಗಬೇಕೆಂಬುದನ್ನೂ ನೋಡಬಹುದು. ಹೆಚ್ಚಿನ ಭಾಗಗಳಲ್ಲಿ ಅವರ ಅನುಭವಗಳು ಅಪೇಕ್ಷಿಸುವಂಥವುಗಳಿಗೆ ಬಲು ದೂರವಾಗಿವೆ. ಅವರುಗಳು ಸಾಮಾನ್ಯವಾಗಿ ನಿಂದಿಸಲ್ಪಟ್ಟವರು. ಅವರಲ್ಲಿ ಅನೇಕರು ಸೆರೆವಾಸ ಅನುಭವಿಸಿದರು, ಮತ್ತೆ ಕೆಲವರು ಭಯಂಕರವಾಗಿ ಕೊಲ್ಲಲ್ಪಟ್ಟರು. (1 ಅರಸು 18:4, 10, 17, 18; 19:10; ಯೆರೆಮೀಯ 38:6; ಇಬ್ರಿಯ 11:32–38). ಕೆಲವು ಸಂದರ್ಭಗಳಲ್ಲಿ ಅವರುಗಳು ಮರಣ ಹೊಂದಿದ ಅನೇಕ ವರ್ಷಗಳ ನಂತರದಲ್ಲಿ ದೇವರ ಪ್ರವಾದಿಗಳ ನಿಜವಾದ ಗುಣಲಕ್ಷಣಗಳು ಗ್ರಹಿಸಲ್ಪಟ್ಟವು. ಆದರೆ, ನಾವು ಈ ರೀತಿ ತಮ್ಮ ಹೇಳಿಕೆಗಳು ಯೆಹೋವನಿಂದ ನೇರವಾಗಿ ಪ್ರೇರಿತವಾದವುಗಳು ಎಂದು ಹೇಳಿಕೊಳ್ಳುವ ಪ್ರವಾದನಾ ಬರಹಗಾರರ ಬಗ್ಗೆ ಮಾತನಾಡುತ್ತೇವೆ. ಈ ಸಂಬಂಧದಲ್ಲಿ ಇಸ್ರಾಯೇಲ್ಯರಿಗೆ ನಿಬಂಧನೆಗಳನ್ನು ನೀಡುವಲ್ಲಿ ಯಾವುದೇ ಯಾಜಕರ ಮಧ್ಯ ಪ್ರವೇಶವಿರಲಿಲ್ಲ ಎಂಬುದು ನಿಜ: ಅವು ಮೋಶೆಯ ಕೈಯ ಮೂಲಕ ದೇವರಿಂದ ಕೊಡಲ್ಪಟ್ಟವು. (ವಿಮೋ. 19:17–25; ಧರ್ಮೋ. 5:1–5). ಇದಕ್ಕೂ ಹೆಚ್ಚಾಗಿ, ದೇವರ ನಿಯಮಗಳ ಉಲ್ಲಂಘನೆಯನ್ನು ನೋಡುವ ಪ್ರತಿಯೊಬ್ಬರಿಗೂ ಪಾಪಿಗಳನ್ನು ಖಂಡಿಸುವುದು ಕರ್ತವ್ಯವಾಗಿತ್ತು (ಯಾಜಕ 19:17). ಹೀಗಾಗಿ, ಎಲ್ಲರಿಗೂ ಕಲಿಸಿಕೊಡುವ ಮತ್ತು ಗದರಿಸುವ ಅಧಿಕಾರವಿತ್ತು; ಆದರೆ, ನಮ್ಮ ಸ್ವಂತ ದಿನಗಳಲ್ಲಿರುವಂತೆ, ಹೆಚ್ಚಿನವರು ವ್ಯಾಪಾರದಲ್ಲಿ ನಿರತರಾಗಿದ್ದು ಉದಾಸೀನವುಳ್ಳವರೂ, ಧರ್ಮವಿಲ್ಲದವರೂ ಆಗಿದ್ದಾರೆ, ಕೆಲವರು ತುಲನಾತ್ಮಕವಾಗಿ ಪಾಪವನ್ನು ನಿಂದಿಸುವವರಾಗಿ ದೈವಭಕ್ತಿಯ ಬಗ್ಗೆ ಎಚ್ಚರಿಸುವವರಾಗಿ ಈ ಅವಶ್ಯಕತೆಗಳನ್ನು ಪೂರೈಸುವವರಾಗಿದ್ದಾರೆ. ಈ ಬೋಧಕರುಗಳನ್ನು ಹೊಸ ಮತ್ತು ಹಳೆ ಒಡಂಬಡಿಕೆಗಳೆರಡರಲ್ಲೂ 'ಪ್ರವಾದಿ'ಗಳೆಂಬುದಾಗಿ ಕರೆಯುತ್ತಾರೆ. 'ಪ್ರವಾದಿ' ಎಂದು ಸಾಮಾನ್ಯವಾಗಿ

ಉಪಯೋಗಿಸುವ ಈ ಪದವು 'ಸಾರ್ವಜನಿಕ ವ್ಯಾಖ್ಯಾನಕಾರರು' ಎಂಬುದನ್ನು ಸಂಕೇತಿಸುತ್ತದೆ. ವಿಗ್ರಹಾರಾಧನೆಯ ಸಾರ್ವಜನಿಕ ಬೋಧಕರುಗಳನ್ನು ಸಹಾ ಹಾಗೆಯೇ ಕರೆಯುವುದುಂಟು; ಉದಾಹರಣೆಗೆ "ಬಾಳನ ಪ್ರವಾದಿಗಳು" (1 ಕೊರಿಂಥ 14:1–6; 2 ಪೇತ್ರ 2:1; ಮತ್ತಾಯ 7:15; 14:5; ನೆಹಮೀಯ6:7, 1 ಅರಸು 18:40; ತೀತ 1:12).

ಬೋಧಿಸುವುದು ಎಂಬ ಸಾಧಾರಣ ಅರ್ಥದಲ್ಲಿ ಪ್ರವಾದಿಸುವುದು ಎಂಬುದು ನಂತರದಲ್ಲಿ ಕೆಲವು ವರ್ಗಗಳಲ್ಲಿ ಜನಪ್ರಿಯವಾಯಿತು ಮತ್ತು ಪರಿಸಾಯತ್ವದ ಬೋಧನೆಯೊಳಗೆ ಅವನತಿ ಹೊಂದಿತು – ಬೋಧನೆ, ದೇವರ ಆಜ್ಞೆಗ್ಗಳಿಗೆ ಬದಲಾಗಿ ಪುರಾತನ ಸಂಪ್ರದಾಯಗಳನ್ನು ಬೋಧಿಸಿದರು. ಮತ್ತು ಹೀಗಾಗಿ ಅಂಥವರು ಸತ್ಯವನ್ನು ವಿರೋಧಿಸುವ ಸುಳ್ಳು ಪ್ರವಾದಿಗಳು ಅಥವಾ ಸುಳ್ಳು ಬೋಧಕರು ಆದರು (ಮತ್ತಾಯ 15:2–9).

ಪ್ರವಾದಿಗಳೆಂದು ಕರೆಯಲ್ಪಡುವ ದೊಡ್ಡ ವರ್ಗದಲ್ಲಿ, ಯೆಹೋವನು ವಿವಿಧ ಸಮಯಗಳಲ್ಲಿ ಕೆಲವರನ್ನು ಆಯ್ದುಕೊಂಡು ವಿಶೇಷವಾಗಿ ಅವರಿಗೆ ಆಗ ಇರುವ ಸಂಗತಿಗಳ ಸಂಬಂಧವಾಗಿ ಮತ್ತು ಇತರ ಕಾಲಗಳಲ್ಲಿ ಭವಿಷ್ಯದ ಘಟನೆಗಳ ಬಗ್ಗೆ ಸಂದೇಶಗಳನ್ನು ನೀಡುವ ಅಧಿಕಾರವನ್ನು ದಯಪಾಲಿಸಿದನು. ಅವರು ಪವಿತ್ರಾತ್ಮ ಪ್ರೇರಿತರಾಗಿ ಮಾತನಾಡಿದ ಮತ್ತು ಬರೆದವುಗಳ ಬಗ್ಗೆ ಈಗ ನಾವು ಗಮನ ಹರಿಸುವವರಾಗಿದ್ದೇವೆ. ಅವರುಗಳು ಯುಕ್ತವಾಗಿ ಗೊತ್ತುಪಡಿಸಿರಬಹುದು.

## ದೈವಿಕವಾಗಿ ನಿಯೋಜಿಸಲಾದ ಅಥವಾ ದಾರ್ಶನಿಕರು

## Divinely Commissioned Prophets or Seers

ಈ ಪ್ರವಾದಿಗಳು ಮುಖ್ಯವಾಗಿ ಸಾಮಾನ್ಯ ಮನುಷ್ಯರು ಮತ್ತು ಯಾಜಕವರ್ಗದವರಿಂದ ಯಾವುದೇ ದಶಮಾಂಶ ಬೆಂಬಲವನ್ನು ಪಡೆಯದವರು ಎಂಬುದನ್ನು ನೆನಪಿಸಿಕೊಳ್ಳುವಾಗ, ಮತ್ತು ಇದರೊಡನೆ ಅವರುಗಳು ಹಲವೊಮ್ಮೆ ಅರಸರುಗಳನ್ನೂ, ನ್ಯಾಯಸ್ಥಾಪಕರುಗಳನ್ನೂ ಖಂಡಿಸುವವರು ಮಾತ್ರವಲ್ಲದೆ ಯಾಜಕರನ್ನೂ (ಅವರ ಅಧಿಕಾರ ಸ್ಥಾನವನ್ನಲ್ಲ, ಆದರೆ ಅದರಲ್ಲಿ ತುಂಬಿಕೊಂಡಿರುವವರ ವ್ಯಕ್ತಿಗಳ ಪಾಪಗಳನ್ನು) ಖಂಡಿಸುವವರು ಎಂಬ ಸತ್ಯವನ್ನು ನೋಡುವಾಗ, ಈ ಪ್ರವಾದಿಗಳು ಯಾವುದೇ ಯಾಜಕರುಗಳ ಸಂಘಟನೆಗಳಿಗೆ ಸೇರಿದವರು ಅಥವಾ ದೇವರ ನಾಮದಲ್ಲಿ ಕೃತ್ರಿಮತೆ ಸೃಷ್ಟಿಮಾಡುವವರು ಎಂಬುದನ್ನು ವಿವೇಚನಾ ಪೂರ್ವಕವಾಗಿ ನಿರ್ಧರಿಸಲಾಗದು. ಸತ್ಯದ ಬೆಳಕಿನಲ್ಲಿ ವಿವೇಚನೆಯು ಅಂಥಾಃ ಅನುಮಾನಗಳನ್ನು ವಿರೋಧಿಸುತ್ತವೆ.

ಹಾಗಾದಲ್ಲಿ, ನಾವು ಸತ್ಯವೇದದ ವಿವಿಧ ಬರಹಗಾರರ ಉದ್ದೇಶಗಳ ಶಂಕಿಸುವ ಕಾರಣವಿಲ್ಲ. ಆದರೆ, ಅದರ ವಿವಿಧಭಾಗಗಳ ಸ್ಪೂರ್ತಿಯು ನೀತಿವಂತಿಕೆ ಮತ್ತು ಸತ್ಯದಿಂದ ತುಂಬಿದ್ದಾಗಿದೆ ಎಂದು ಕಂಡುಕೊಂಡು, ಮೋಶೆಯ ಮತ್ತು ಇತರೆ ಪ್ರವಾದಿಗಳ ಮತ್ತು ನೂತನ ಒಡಂಬಡಿಕೆಯ ಬರಹಗಾರರ ದಾಖಲೆಗಳೊಂದಿಗೆ ಇದಕ್ಕೆ ಯಾವುದಾದರೂ ಸಂಬಂಧ ಅಥವಾ ಐಕ್ಯದ ಬಂಧನವಿದೆಯೋ ಎಂಬುದನ್ನು ವಿಚಾರಿಸುವವರಾಗಿ ಮುಂದುವರೆಯೋಣ. ಹದಿನೈದು ನೂರು ವರ್ಷಗಳ ಅವಧಿಯನ್ನು ಒಳಗೊಂಡಿರುವ ನಿಬಂಧಗಳಲ್ಲಿ, ಪ್ರವಾದಿಗಳು ಮತ್ತು ನೂತನ ಒಡಂಬಡಿಕೆಯ ಲೇಖಕರ ಪಾತ್ರಕ್ಕೆ ಸಂಬಂಧಿಸಿದಂತೆ ಒಂದೇ ರೀತಿಯ ಆಲೋಚನೆಗಳು ಸಾಧ್ಯಂತವಾಗಿ ಹಣಿದುಕೊಂಡಿರುವುದು ಕಂಡುಬಂದಲ್ಲಿ, ಅವರುಗಳು ದೈವಪ್ರೇರಿತರು ಎಂಬ ಅವರ ಹಕ್ಕೇಳಿಕೆಗಳನ್ನು ಒಪ್ಪಿಕೊಳ್ಳಲು ಒಳ್ಳೆಯ ಕಾರಣವಾಗುತ್ತದೆ – ವಿಶಿಷ್ಟವಾಗಿ, ಅವರೆಲ್ಲರಿಗೂ ಸಾಮಾನ್ಯವಾದ ವಿಷಯವು ಭವ್ಯವಾದದ್ದೂ ಮತ್ತು ಉದಾತ್ತವಾದದ್ದೂ ಆಗಿದ್ದರೆ, ದೇವರ ಗುಣಲಕ್ಷಣ ಮತ್ತು ವಿಶಿಷ್ಟತೆಗಳ ಬಗ್ಗೆ ಪವಿತ್ರವಾದ ಸಾಮಾನ್ಯ ಜ್ಞಾನವು ಏನು ಕಲಿಸುತ್ತದೆ ಎಂಬುದನ್ನು ಚೆನ್ನಾಗಿ ಸಂಯೋಜಿಸುತ್ತದೆ.

ಇದನ್ನು ನಾವು ಕಂಡುಕೊಳ್ಳುತ್ತೇವೆ: ಒಂದು ಯೋಜನೆ, ಉತ್ಸಾಹ, ಗುರಿ ಮತ್ತು ಉದ್ದೇಶವು ಸಮಗ್ರ ಪುಸ್ತಕವನ್ನು ವ್ಯಾಪಿಸುತ್ತದೆ. ಅದರ ಆರಂಭದ ಪುಟಗಳು ಮಾನವನ ಸೃಷ್ಠಿ ಮತ್ತು ಪತನವನ್ನು ದಾಖಲಿಸುತ್ತವೆ. ಅದರ ಮುಕ್ತಾಯದ ಪುಟಗಳು ಆ ಪತನದಿಂದ ಮಾನವನ ಚೇತರಿಕೆಯ ಬಗ್ಗೆ ತಿಳಿಸುತ್ತದೆ; ಅದರ ಮಧ್ಯಂತರ ಪುಟಗಳು ಈ ಉದ್ದೇಶದ ನೆರವೇರಿಕೆಯ ವಿಷಯದಲ್ಲಿ ದೇವರ ಯೋಜನೆಯ ಕ್ರಮಾಗತ ಹಂತಗಳ ಬಗ್ಗೆ ತಿಳಿಸುವವುಗಳಾಗಿವೆ. ಸತ್ಯವೇದದ ಮೊದಲ ಮೂರು ಮತ್ತು ಕಡೆಯ ಮೂರು ಅಧ್ಯಾಯಗಳಲ್ಲಿ ಎದ್ದು ಕಾಣುವಂತೆ ಸಾಮರಸ್ಯವು ಇನ್ನೂ ಭಿನ್ನ ಭಿನ್ನವಾಗಿದೆ. ಒಂದು ಮೊದಲ ಸೃಷ್ಟಿಯನ್ನು ವಿವರಿಸುತ್ತದೆ, ಮತ್ತೊಂದು ನವೀಕೃತ ಅಥವಾ ಪುನರ್‌ವಶಪಡಿಸಿದ ಸೃಷ್ಟಿಯ ಬಗ್ಗೆ, ಪಾಪ ಮತ್ತು ಅದರ ದಂಡವಾದ ಶಾಪವನ್ನು ತೆಗೆದುಹಾಕಲ್ಪಟ್ಟ

ಬಗ್ಗೆ ತಿಳಿಸುತ್ತದೆ. ಒಂದು ಸೈತಾನನೂ, ಕೆಡುಕೂ, ಮೋಸಗೊಳಿಸಲು ಲೋಕವನ್ನು ಪ್ರವೇಶಿಸಿದ ಬಗ್ಗೆ ತಿಳಿಸಿದರೆ, ಮತ್ತೊಂದು ಆತನ ಕಾರ್ಯ ನಾಶವಾದ ಬಗ್ಗೆ, ಒಮ್ಮೆ ನಾಶವಾದದ್ದು ಪುನಃವಶವಾದ ಬಗ್ಗೆ, ಕೆಡಕು ನಿರ್ಮೂಲವಾದ ಬಗ್ಗೆ, ಸೈತಾನನು ನಾಶವಾದ ಬಗ್ಗೆ ತಿಳಿಸುತ್ತವೆ. ಒಂದು ಆದಾಮನಿಂದ ಕಳೆದುಕೊಂಡ ಸಾಮ್ರಾಜ್ಯದ ಬಗ್ಗೆ ತಿಳಿಸಿದರೆ, ಮತ್ತೊಂದು ಅದು ಪುನರ್‌ವಶಗೊಂಡು ಸದಾ ಕಾಲಕ್ಕೂ ಕ್ರಿಸ್ತನಿಂದ ಸ್ಥಾಪನೆಗೊಂಡ ಬಗ್ಗೆ ಮತ್ತು ದೇವರ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ, ಭೂಲೋಕದಲ್ಲಿಯೂ ನೆರವೇರುವ ಬಗ್ಗೆ ತಿಳಿಸುತ್ತದೆ. ಒಂದು ಪಾಪವು ಅವನತಿ, ಅವಮಾನ ಮತ್ತು ಮರಣ ಇವುಗಳ ಉತ್ಪತ್ತಿಗೆ ಕಾರಣವಾದರೆ, ಮತ್ತೊಂದು ನೀತಿವಂತಿಕೆಯ ಪ್ರತಿಫಲಗಳಾದ ಮಹಿಮೆ, ಗೌರವ ಮತ್ತು ನಿತ್ಯಜೀವ ಇವುಗಳನ್ನು ತೋರಿಸುತ್ತದೆ.

ಅನೇಕ ಲೇಖಣಿಗಳ ಮೂಲಕ ವಿವಿಧ ಸಮಯಗಳಲ್ಲಿ, ವಿಭಿನ್ನ ಪರಿಸ್ಥಿತಿಗಳಲ್ಲಿ ಇದನ್ನು ಬರೆದಿರುವುದಾದರೂ, ಸತ್ಯವೇದವು ಕೇವಲ ನೀತಿ ಸಂವೇದನೆಗಳ, ವಿವೇಕ ಸೂತ್ರಗಳ ಮತ್ತು ಸಮಾಧಾನ ವಚನಗಳ ಸಂಗ್ರಹವಲ್ಲ. ಅದು ಅದಕ್ಕೂ ಹೆಚ್ಚಿನದಾಗಿದೆ; ಅದು ಈ ಲೋಕದಲ್ಲಿನ ಪ್ರಸ್ತುತ ಕೆಡುಕುಗಳ ಕಾರಣಗಳ ಬಗ್ಗೆ ವಿವೇಚನಾಪೂರ್ವಕವಾದ, ತತ್ವಶಾಸ್ತ್ರ ಸಂಬಂಧಿತವಾದ ಮತ್ತು ಸಾಮರಸ್ಯಕರವಾದ ಹೇಳಿಕೆಯಾಗಿದೆ. ಅದರ ಒಂದೇ ನಿವಾರಣೋಪಾಯ ಮತ್ತು ಅದರ ಪ್ರಾರಂಭಕ್ಕೆ ಮುಂಚೆಯೇ ದೈವಿಕ ಜ್ಞಾನದಲ್ಲಿ ಕಂಡು ಬರುವ ಅಂತಿಮ ಫಲಿತಾಂಶವನ್ನು, ಮಾತ್ರವಲ್ಲದೆ ದೇವಜನರ ಮಾರ್ಗವನ್ನು ಗುರುತಿಸುತ್ತದೆ ಮತ್ತು ಅವರನ್ನು ಎತ್ತಿಹಿಡಿದು, ಸೂಕ್ತ ಕಾಲದಲ್ಲಿ ಅರಿತುಕೊಳ್ಳಲು ಅತ್ಯಂತ ಮಹತ್ತರವಾದ ಮತ್ತು ಅಮೂಲ್ಯವಾದ ವಾಗ್ದಾನಗಳಿಂದ ಅವರನ್ನು ಬಲಗೊಳಿಸುತ್ತದೆ.

ಆದಿಕಾಂಡದ ಬೋಧನೆಯು ಮೂಲತಃ ಮಾನವನನ್ನು ಒಬ್ಬ ಪ್ರತಿನಿಧಿಯಾಗಿ ಪರಿಪೂರ್ಣತೆಯ ಸ್ಥಿತಿಯಲ್ಲಿಯೇ ಪರೀಕ್ಷೆಗೊಳಪಡಿಸಲಾಯಿತು ಮತ್ತು ಆತನು ವಿಫಲನಾದನು. ಅದರ ಫಲವಾಗಿ ಪ್ರಸ್ತುತ ಅಸಮರ್ಪಕತೆ, ಕಾಯಿಲೆ ಮತ್ತು ಮರಣಗಳು ಉಂಟಾದವು ಎಂಬುದೇ. ಆದರೆ, ದೇವರು ಆತನನ್ನು ಕೈಬಿಡದೆ ಸ್ತ್ರೀಯಿಂದ ಹುಟ್ಟಿದ ಒಬ್ಬ ವಿಮೋಚಕನ ಮೂಲಕ ಆತನನ್ನು ರಕ್ಷಿಸುತ್ತಾನೆ ಎಂಬುದು ವಿಸ್ತಾರವಾಗಿ ವಿವರಿಸಲ್ಪಟ್ಟಿದೆ (ಆದಿ. 3:15). ನಮ್ಮ ಪಾಪಗಳ ನಿವಾರಣಾರ್ಥವಾಗಿ ವಿಮೋಚಕನ ಮರಣವು ಅಗತ್ಯವಾಯಿತು ಮತ್ತು ಆತನ ನೀತಿವಂತಿಕೆಯು ನಮ್ಮ ಪಾಪಗಳನ್ನು ಮುಚ್ಚಿಹಾಕಿತು ಎಂಬುದನ್ನು ದೇವರು ಆದಾಮ ಹವ್ವರಿಗೆ ಚರ್ಮದ ಅಂಗಿಗಳನ್ನು ನೀಡಿದ್ದರಲ್ಲಿ, ಹೇಬೆಲನ ಕಾಣಿಕೆಗಳನ್ನು ಅಂಗೀಕರಿಸಿದ್ದರಲ್ಲಿ, ಅಬ್ರಹಾಮನು ಇಸಾಕನನ್ನು ಅರ್ಪಿಸಲು ಬಲಿಪೀಠದ ಮೇಲೆ ಇಟ್ಟಿದ್ದರಲ್ಲಿ, ನಮ್ಮ ಪಿತೃಗಳು ದೇವರಿಗೆ ಅರ್ಪಿಸಿದ ಅನೇಕ ಬಲಿಗಳಲ್ಲಿ ಮತ್ತು ಯೆಹೂದ್ಯರ ಕಾಲದಲ್ಲಿನ ನಿಯಮಗಳಿಗನುಸಾರವಾಗಿ ಅರ್ಪಿಸಿದ ವಿವಿಧ ಯಜ್ಞಗಳಲ್ಲಿ ಸೂಚಿತವಾಗುತ್ತದೆ; ಪ್ರವಾದಿಗಳು ತಮ್ಮ ತಿಳುವಳಿಕೆಗಳಿಂದ ಪ್ರಖ್ಯಾತಿ ಹೊಂದಿದವರಾಗಿದ್ದರೂ ಅವರ ಕೆಲವೊಂದು ಹೇಳಿಕೆಗಳ (1 ಪೇತ್ರ 1:12) ಭಾವಗಳು ತುಸುಮಟ್ಟಿಗೆ ಪಾಪವನ್ನು ಮೂಕ ಪ್ರಾಣಿಯ ಮೇಲೆ ಹಾಕುವುದರ ಬದಲಾಗಿ ಮನುಷ್ಯರ ಮೇಲೆ ಹಾಕುವುದರ ಬಗ್ಗೆ ಹೇಳುತ್ತವೆ. ಪ್ರವಾದನೀಯ ದೃಷ್ಟಿಯಲ್ಲಿ ಅವರು ಜನಾಂಗವನ್ನು ವಿಮೋಚಿಸುವ ಮತ್ತು ಬಿಡುಗಡೆಗೊಳಿಸುವಾತನಲ್ಲಿ "ಯಜ್ಞವನ್ನಾಗಿ ಅರ್ಪಿತವಾಗಬೇಕಾಗಿರುವ ದೇವರ ಕುರಿಮರಿಯನ್ನು ಕಾಣುತ್ತಾರೆ" ಪಾಪದ ದಂಡನೆಯು ಆತನ ಮೇಲಿದೆ ಮತ್ತು "ಆತನ ಬಾಸುಂಡೆಗಳಿಂದ ನಮಗೆ ಗುಣವಾಯಿತು" (ಯೆಶಾಯ 53:5) ಎಂದು ತಿಳಿಯುತ್ತಾರೆ. ಅವರು ಆತನನ್ನು ಹೀನೈಸಲ್ಪಟ್ಟ ಮತ್ತು ತಿರಸ್ಕರಿಸಲ್ಪಟ್ಟ ವ್ಯಕ್ತಿ, ದುಃಖಭರಿತನೂ, ಸಂಕಷ್ಟಕ್ಕೊಳಗಾದವನೂ ಎಂಬುದಾಗಿ ಚಿತ್ರಿಸುತ್ತಾರೆ ಮತ್ತು "ನಮ್ಮೆಲ್ಲರ ದೋಷಫಲವನ್ನು ಯೆಹೋವನು ಅವನ ಮೇಲೆ ಹಾಕಿದನು" (ಯೆಶಾಯ 53:6) ಎಂದು ಪ್ರಕಟಿಸುತ್ತಾರೆ. ಈ ವಿಮೋಚಕನು ಎಲ್ಲಿ ಹುಟ್ಟುವನೆಂದೂ (ಮೀಕ 5:2) ರಲ್ಲಿ ಮತ್ತು ಯಾವಾಗ ಆತನು ಮರಣ ಹೊಂದುತ್ತಾನೆಂದೂ, ಅದು ತನಗಾಗಿ ಅಲ್ಲ ಎಂಬುದನ್ನು (ದಾನಿ. 9:26) ರಲ್ಲಿ ಅವರು ಹೇಳಿದ್ದಾರೆ. ಅವರು ಆತನ ಬಗ್ಗೆ – ಆತನು ನೀತಿವಂತನೂ, ವಂಚನೆ, ಹಿಂಸೆ ಮತ್ತು ಮರಣಕ್ಕೆ ಕಾರಣವಾದ ಯಾವುದರಿಂದಲೂ ಆತನು ಮುಕ್ತನಾಗಿರುತ್ತಾನೆ (ಯೆಶಾಯ 53:8,9,11) "ಕೇವಲ ಮೂವತ್ತು ತೊಲ ಬೆಳ್ಳಿಗಾಗಿ ಆತನಿಗೆ ದ್ರೋಹವೆಸಗಲಾಯಿತು" (ಜೆಕರ್ಯ 11:12), "ದ್ರೋಹಿಗಳೊಡನೆ ತನ್ನನ್ನು ಎಣಿಸಿಕೊಂಡನು" (ಯೆಶಾಯ 53:12) "ಅವನ ಎಲುಬುಗಳೆಲ್ಲಾ ಕಾಪಾಡಲ್ಪಡುತ್ತವೆ, ಅವುಗಳಲ್ಲಿ ಒಂದಾದರೂ ಮುರಿದುಹೋಗುವುದಿಲ್ಲ" (ಕೀರ್ತನೆ 34:20; ಯೋಹಾನ 19:36), "ಆತನು ಸತ್ತರೂ, ಹೂಣಲ್ಪಟ್ಟರೂ ಆತನ ದೇಹವು ಕೆಡುವುದಿಲ್ಲ, ಅಧೋಲೋಕದಲ್ಲಿ (ಸಮಾಧಿಯಲ್ಲಿ) ಉಳಿಯುವುದಿಲ್ಲ"

(ಕೀರ್ತನೆ 16:10, ಅ.ಕೃ 2:31) ಎಂಬಿತ್ಯಾದಿ ಅನೇಕ ವಿಶಿಷ್ಟ ಸಂಗತಿಗಳನ್ನೂ ಹೇಳಿದ್ದಾರೆ.

ಹೊಸ ಒಡಂಬಡಿಕೆಯ ಬರಹಗಾರರು ಸ್ಪಷ್ಟವಾಗಿ, ಪ್ರಬಲವಾಗಿ, ಆದಾಗ್ಯೂ ಸರಳವಾಗಿ ಈ ಎಲ್ಲಾ ಭವಿಷ್ಯವಾಣಿಗಳು ನಜರೇತಿನ ಯೇಸುವಿನಲ್ಲಿ ನೆರವೇರಿರುವುದನ್ನು ದಾಖಲಿಸಿದ್ದಾರೆ ಮತ್ತು ತಾರ್ಕಿಕ ವಿವೇಚನೆಗಳಿಂದ ಆತನು ನೀಡಿದ ಅಂಥಾಃ ಈಡುಬಲಿಯ ಮೌಲ್ಯವು ಲೋಕದ ಪಾಪವನ್ನು ತೊಡೆದು ಹಾಕಲ್ಪಡುವದು ಮೊದಲು ಅಗತ್ಯವಾಗಿತ್ತು ಎಂದು ಇದಾಗಲೇ ಧರ್ಮಶಾಸ್ತ್ರಗಳಲ್ಲಿ ಪ್ರವಾದಿಗಳಿಂದ ಮುಂತಿಳಿಸಲ್ಪಟ್ಟಿವೆ ಎಂಬುದನ್ನು ತೋರಿಸಿಕೊಟ್ಟಿದ್ದಾರೆ (ಯೆಶಾಯ 1:18). ಅವರು ಈ ಸಮಗ್ರ ಯೋಜನೆಯನ್ನು ಅದರ ಕೇಳುಗರ ಪೂರ್ವಕಲ್ಪಿತ ಅಭಿಪ್ರಾಯಗಳಿಗೆ ಅಥವಾ ಅವರ ಭಾವೋದ್ರೇಕಗಳಿಗೆ ಧಕ್ಕೆಯಾಗದಂತೆ, ಆದರೆ ಅವರ ಜ್ಞಾನೋದಯ ವಿವೇಚನೆಗೆ ಅನ್ವಯವಾಗುವಂತೆ ಅತ್ಯಂತ ತಾರ್ಕಿಕವಾದ ಮತ್ತು ಪ್ರಬಲವಾದ ರೀತಿಯಲ್ಲಿ ಪತ್ತೆಹಚ್ಚಿ ಯಾವುದೇ ವಿಷಯದ ಬಗ್ಗೆ ಎಲ್ಲಿಯಾದರೂ ಕಂಡುಬರುವ ಕೆಲವೊಂದು ಗಮನಾರ್ಹವಾದ ನಿಕಟವಾಗಿ, ಖಾತ್ರಿಪಡಿಸುವ ಸಮಂಜಸವಾದ ಕಾರಣಗಳನ್ನು ನೀಡಿದ್ದಾರೆ (ರೋಮಾ. 5:17–19 ಮತ್ತು 12ನೇ ಅಧ್ಯಾಯದವರೆಗೆ ಮುಂದುವರಿದಿದೆ).

ಮೋಶೆಯು ತನ್ನ ನಿಬಂಧನೆಯಲ್ಲಿ ಯಜ್ಞವರ್ಪಿಸುವುದಕ್ಕೆ ಮಾತ್ರ ಸೂಚಿಸದೆ ಈ ಮಹಾನ್ ವಿಮೋಚಕನ ಅಡಿಯಲ್ಲಿ ಪಾಪವನ್ನು ತೊಡೆದುಹಾಕುವುದಕ್ಕೂ ಮತ್ತು ಜನರನ್ನು ಆಶೀರ್ವದಿಸುವುದಕ್ಕೂ ಅವನು ಸೂಚಿಸುವ ಅವನ ಶಕ್ತಿ ಮತ್ತು ಅಧಿಕಾರವು ತನ್ನ ಸ್ವಂತ ಅಧಿಕಾರವನ್ನು ಮೀರಿರುತ್ತದೆ ಎಂದು ಘೋಷಿಸುತ್ತದೆ. ಆದರೂ ಅದು 'ನನ್ನಂಥ ಹಾಗೆ' ಇರಬೇಕೆಂದು ಆತನು ಪ್ರಕಟಿಸಿದ್ದಾನೆ (ಧರ್ಮೋ. 18:15,19). ವಾಗ್ದಾನಪಡಿಸಿರುವ ಮೇಲಾದ ವಿಮೋಚಕನು ಇಸ್ರಾಯೇಲ್ಯರನ್ನು ಮಾತ್ರವಲ್ಲ, ಆದರೆ ಇಸ್ರಾಯೇಲ್ಯರ ಮೂಲಕವಾಗಿ ಲೋಕದ ಎಲ್ಲಾ ಕುಟುಂಬಗಳನ್ನು ಆಶೀರ್ವದಿಸುತ್ತಾನೆ (ಆದಿ. 12:3;18:18;22:18;26:4). ಯೆಹೂದ್ಯ ಜನರ ಪೂರ್ವಕಲ್ಪಿತ ಅಭಿಪ್ರಾಯಗಳ ಹೊರತಾಗಿಯೂ ಅದಕ್ಕೆ ವ್ಯತಿರಿಕ್ತವಾಗಿ ಪ್ರವಾದಿಗಳು ಅದೇ ಪ್ರಯಾಸವನ್ನು ಮುಂದುವರೆಸುತ್ತಾರೆ ಮತ್ತು ಮೆಸ್ಸೀಯನು ಅನ್ಯಜನರು ಲೋಕದ ಕಟ್ಟಕಡೆಯಿಂದ ಆತನ ಬಳಿಗೆ ಬರುವಂತೆ (ಯೆರೆಮೀಯ 16:19) ತನ್ನ ಬೆಳಕನ್ನು ಅನ್ಯ ಜನಾಂಗಗಳಲ್ಲಿಯೂ ಬೆಳಗಿಸುತ್ತಾನೆ ಎಂದು ಘೋಷಿಸುತ್ತಾರೆ (ಯೆಶಾಯ 49:6; ಲೂಕ 2:32) ಮತ್ತು ಆತನ ನಾಮವು ಅನ್ಯಜನಾಂಗಗಳಲ್ಲಿಯೂ ಪ್ರಸಿದ್ಧವಾಗಿದೆ (ಮಲಾಕಿ 1:11) ಮತ್ತು "ಆತನ ಮಹಿಮೆಯು ಗೋಚರವಾಗುವುದು, ಎಲ್ಲಾ ಮನುಷ್ಯರೂ ಒಟ್ಟಿಗೆ ಅದನ್ನು ಕಾಣುವರು" (ಯೆಶಾಯ 40:5. ಯೆಶಾಯ 42:1–7 ಸಹಾ ನೋಡಿರಿ).

ಹೊಸ ಒಡಂಬಡಿಕೆಯ ಬರಹಗಾರರು ದೈವಿಕ ಪ್ರತಿಷ್ಠೆಪಡಿಸುವಿಕೆಯು ಕ್ರಿಸ್ತನ ಸಮರ್ಪಣೆಯಲ್ಲಿ ಪ್ರವಾದನೆಗಳ ನೆರವೇರಿಕೆಯನ್ನು ಗ್ರಹಿಸಿಕೊಳ್ಳುವಂತೆ ಮಾಡಿತು ಎಂದು ಹಕ್ಕೇಳಿಕೆ ನೀಡುತ್ತಾರೆ. ಅವರು ಯೆಹೂದ್ಯರಂತೆಯೇ ಎಲ್ಲಾ ಆಶೀರ್ವಾದಗಳು ತಮ್ಮ ಸ್ವಂತ ಜನರಿಗೆ ಮಿತಿಯಾಗಿವೆ ಎಂಬ ಪೂರ್ವಕಲ್ಪಿತ ಅಭಿಪ್ರಾಯವನ್ನು ಹೊಂದಿದ್ದರೂ, (ಅ.ಕೃ. 11:1–18) ಅವರ ದೇಶವು ಆಶೀರ್ವದಿಸಲ್ಪಡುವಾಗ, ಲೋಕದ ಎಲ್ಲಾ ಕುಟುಂಬಗಳೂ ಅವರೊಂದಿಗೆ ಮತ್ತು ಅವರ ಮೂಲಕ ಆಶೀರ್ವದಿಸಲ್ಪಡುತ್ತದೆ ಎಂಬ ಸತ್ಯವನ್ನು ಕಂಡುಕೊಂಡರು. ಮತ್ತು ಇಸ್ರಾಯೇಲ್ಯರ ಅಥವಾ ಲೋಕದವರ ಆಶೀರ್ವಾದಕ್ಕೂ ಮುನ್ನ ಇಸ್ರಾಯೇಲ್ಯರಿಂದಲೂ, ಅನ್ಯಜನರಿಂದಲೂ ಒಂದು "ಚಿಕ್ಕ ಹಿಂಡಿನ" ಆಯ್ಕೆ ಮಾಡಲಾಗುತ್ತದೆ ಎಂಬುದನ್ನು ಕಂಡರು. ಅವರನ್ನು ಪರೀಕ್ಷಿಸಲಾಗುವುದು ಮತ್ತು ಮಹಾ ವಿಮೋಚಕನ ಮಹಿಮೆ ಹಾಗೂ ಗೌರವಗಳ ಜೊತೆ ಬಾಧ್ಯಸ್ಥರಾಗಲು ಮತ್ತು ಇಸ್ರಾಯೇಲ್ಯರ ಮತ್ತು ಆತನೊಡನೆ ಇತರೆ ಎಲ್ಲಾ ಜನಾಂಗಗಳ ಆಶೀರ್ವಾದದಲ್ಲಿ ಪಾಲುದಾರರಾಗಲು ಅರ್ಹರು ಎಂಬುದನ್ನು ಕಂಡುಕೊಳ್ಳುವರು (ರೋಮಾ. 8:17).

ಈ ಬರಹಗಾರರು ಧರ್ಮಶಾಸ್ತ್ರ ಮತ್ತು ಪ್ರವಾದನೆಗಳಲ್ಲಿ ಬರೆಯಲ್ಪಟ್ಟಿರುವ ಈ ದೃಷ್ಟಿಕೋನದ ಸಾಮರಸ್ಯವನ್ನು ಸೂಚಿಸಿದರು. ಮತ್ತು ಅವರು ಮೊದಲೇ ನಿಗದಿಪಡಿಸಿದ ಯೋಜನೆಯ ಭವ್ಯತೆ ಮತ್ತು ಅಗಲವು ಅದು ಏನಾಗಿರಬೇಕೆಂಬುದರ ಅತ್ಯಂತ ಉತ್ಕೃಷ್ಟವಾದ ಪರಿಕಲ್ಪನೆಯನ್ನು ಪೂರೈಸುವುದಕ್ಕಿಂತ ಹೆಚ್ಚಾಗಿ, "ಜನರಿಗೆಲ್ಲಾ ಮಹಾಸಂತೋಷವನ್ನುಂಟು ಮಾಡುವ ಶುಭ ಸಮಾಚಾರದ" ಉತ್ತಮ ಹರ್ಷದ ಅಲೆಗಳ ಬಗ್ಗೆ ಗಮನಸೆಳೆದರು.

ಮೆಸ್ಸೀಯನು ಇಸ್ರಾಯೇಲ್ಯರ ಅರಸನು ಮಾತ್ರವಲ್ಲ, ಆತನು ಸಮಸ್ತ ಲೋಕದ ಅರಸನು ಎಂಬ ಆಲೋಚನೆಯು ಮೋಶೆಯ ಪುಸ್ತಕಗಳಲ್ಲಿ ಪ್ರಸ್ತಾಪಿಸಲಾಗಿದ್ದು, ಇದು ಎಲ್ಲಾ ಪ್ರವಾದಿಗಳ ವಸ್ತು ವಿಷಯವಾಗಿದೆ. ಅಪೋಸ್ತಲರ ಬೋಧನೆಗಳಲ್ಲಿಯೂ ದೇವರ ರಾಜ್ಯದ ಆಲೋಚನೆಯು ಅತ್ಯಂತ

ಉತ್ತುಂಗದಲ್ಲಿದೆ ಮತ್ತು ನಾವು "ನಿನ್ನ ರಾಜ್ಯವು ಬರಲಿ" ಎಂದು ಪ್ರಾರ್ಥಿಸಲು ಯೇಸುಕ್ರಿಸ್ತನು ಕಲಿಸಿಕೊಟ್ಟಿದ್ದಾನೆ. ಮಾತ್ರವಲ್ಲದೆ ಸತ್ಯಕ್ಕಾಗಿ ಶ್ರಮೆ ತಾಳುವವರಿಗೆ ಅದರಲ್ಲಿ ಪಾಲನ್ನು ನೀಡುವುದಾಗಿ ವಾಗ್ದಾನ ಮಾಡಿದ್ದಾನೆ ಮತ್ತು ತಮ್ಮನ್ನು ತಾವು ಅರ್ಹರು ಎಂದು ಸಾಬೀತುಪಡಿಸಬೇಕೆಂದಿದ್ದಾನೆ.

ಮುಂಬರಲಿರುವ ಮಹಿಮಾನ್ವಿತ ರಾಜ್ಯದ ಈ ನಿರೀಕ್ಷೆಯು ಎಲ್ಲಾ ನಂಬಿಗಸ್ಥರಿಗೆ ಹಿಂಸೆಗಳನ್ನು ಸಹಿಸಿಕೊಳ್ಳುವ ಮತ್ತು ಮರಣ ಪರ್ಯಂತ ಖಂಡನೆ, ಕಷ್ಟಾನುಭವ ಮತ್ತಿತರ ಎಲ್ಲಾ ನಷ್ಟಗಳನ್ನು ಅನುಭವಿಸಲು ಧೈರ್ಯವನ್ನು ನೀಡುವುದಾಗಿದೆ. ಮತ್ತು ಹೊಸ ಒಡಂಬಡಿಕೆಯುನ್ನು ಮುಗಿಸುವ ಭವ್ಯವಾದ ಗೂಢಾರ್ಥವುಳ್ಳ ಪ್ರವಾದನೆಯಲ್ಲಿ ಅರ್ಹನಾದ "ವಧಿತನಾದ ಕುರಿಯಾದಾತನು" (ಪ್ರಕಟನೆ 5:12) ಅರ್ಹರಾದ "ಜಯಶಾಲಿಗಳನ್ನು" ತನ್ನ ರಾಜ್ಯದಲ್ಲಿ ಅರಸರುಗಳನ್ನಾಗಿಯೂ, ಯಾಜಕರುಗಳನ್ನಾಗಿಯೂ ಮಾಡುತ್ತಾನೆ ಮತ್ತು ಅವರು ಜಯಿಸಿ ಬಂದ ಶೋಧನೆಗಳು ಮತ್ತು ಅಡೆತಡೆಗಳು ಆ ರಾಜ್ಯದಲ್ಲಿ ಪಾಲುಗಾರರಾಗಲು ಅವರನ್ನು ಅರ್ಹರನ್ನಾಗಿ ಮಾಡಿಯದೆ ಎಂಬುದನ್ನೆಲ್ಲಾ ನಿಷ್ಠಾಪೂರ್ವಕವಾಗಿ ಚಿತ್ರಿಸಲಾಗಿದೆ. ನಂತರದಲ್ಲಿ ಆ ಸಹಸ್ರಮಾನ ಯುಗದ ಆಳ್ವಿಕೆಯಡಿಯಲ್ಲಿ ಹೆಚ್ಚಾಗಿ ಫಲಿಸುವ ಆಶೀರ್ವಾದಗಳ ಸಾಂಕೇತಿಕ ಪ್ರಾತಿನಿಧಿತ್ವವನ್ನು ಜಗತ್ತಿಗೆ ಪರಿಚಯಿಸಲಾಗಿದೆ. ಆಗ ಸೈತಾನನ್ನು ಬಂಧಿಸಲಾಗುವುದು, ಆದಾಮನಿಂದುಂಟಾದ ಮರಣ ಮತ್ತು ದುಃಖವು ತೊಡೆದುಹಾಕಲ್ಪಡುವುದು, ಆಗ ಭೂಲೋಕದ ಎಲ್ಲಾ ರಾಷ್ಟ್ರಗಳೂ ಹೊಸ ಯೆರೂಸಲೇಮಾದ ಪರಲೋಕ ರಾಜ್ಯದ ಬೆಳಕಿನಲ್ಲಿ ನಡೆಯುವುವು.

ಸತ್ಯವೇದವು, ಮೊದಲಿನಿಂದ ಕೊನೆಯವರೆಗೆ, ಬೇರೆಲ್ಲಿಯೂ ಇಲ್ಲದ ಸಿದ್ಧಾಂತಸರಣಿಯುನ್ನು ಹೊಂದಿದೆ, ಮತ್ತು ಅನ್ಯಧರ್ಮಗಳ ಸಿದ್ಧಾಂತಗಳಿಗೆ ವ್ಯತಿರಿಕ್ತವಾಗಿ – ಸತ್ತವರು ಪುನರುತ್ಥಾನದ ಮೂಲಕವಾಗಿ ಜೀವಂತರಾಗಿ ಎದ್ದು ಬರುವರು ಎಂಬ ಸಿದ್ಧಾಂತವನ್ನು ಹೊಂದಿದೆ. ಸ್ಫೂರ್ತಿಯ ಪ್ರೇರಣೆ ಹೊಂದಿದ ಎಲ್ಲಾ ಬರಹಗಾರರೂ ವಿಮೋಚಕನ ಬಗ್ಗೆ ತಮ್ಮ ಭರವಸೆಯುನ್ನು ವ್ಯಕ್ತಪಡಿಸಿದ್ದಾರೆ. ಒಬ್ಬಾತನು "ಮುಂಜಾನೆಯಲ್ಲಿ" ದೇವರು ಅವರನ್ನು ಸಮಾಧಿಯಿಂದ ಕರೆಯುವಾಗ, ಅವರು ಎದ್ದು ಬರುವರು, ದುಷ್ಟರು ಇನ್ನು ಮುಂದೆ ಈ ಭೂಲೋಕದ ಅರಸುತನವನ್ನು ಹೊಂದಿರುವುದಿಲ್ಲ ಎಂದು ಪ್ರಕಟಿಸಿದ್ದಾನೆ – "ಉದಯಕಾಲದಲ್ಲಿ ಯಥಾರ್ಥರು ಅವರ ಮೇಲೆ ದೊರೆತನ ನಡಿಸುವರು" (ಕೀರ್ತನೆ 49:14). ಸತ್ತವರ ಪುನರುತ್ಥಾನದ ಬಗ್ಗೆ ಪ್ರವಾದಿಗಳು ಕಲಿಸಿಕೊಟ್ಟಿದ್ದಾರೆ. ಮತ್ತು ಹೊಸ ಒಡಂಬಡಿಕೆ ಲೇಖಕರು ಭವಿಷ್ಯ ಜೀವಿತದ ಎಲ್ಲಾ ಆಶೀರ್ವಾದಗಳನ್ನು ಈ ತಳಹದಿಯ ಮೇಲೆ ಹಾಕಿದ್ದಾರೆ. ಪೌಲನು ಈ ಬಗ್ಗೆ – "ಸತ್ತವರಿಗೆ ಪುನರುತ್ಥಾನವಿಲ್ಲವೆಂಬುದು ನಿಜವಾಗಿದ್ದರೆ ಕ್ರಿಸ್ತನಾದರೂ ಎದ್ದು ಬರಲಿಲ್ಲ; ಕ್ರಿಸ್ತನು ಎದ್ದು ಬರಲಿಲ್ಲವಾದರೆ, ನಮ್ಮ ಪ್ರಸಂಗವು ಹುರುಳಿಲ್ಲದ್ದು ಮತ್ತು ನಿಮ್ಮ ನಂಬಿಕೆಯೂ ಹುರುಳಿಲ್ಲದ್ದು... ಇದು ಮಾತ್ರವಲ್ಲದೆ ಕ್ರಿಸ್ತನವರಾಗಿ ನಿದ್ರೆ ಹೋದವರು ನಾಶವಾದರು. ಆದರೆ, ಕ್ರಿಸ್ತನು ಸತ್ತವರೊಳಗಿಂದ ಎದ್ದು ಬಂದೇ ಇದ್ದಾನೆ, ನಿದ್ರೆಹೋದವರಲ್ಲಿ ಪ್ರಥಮ ಫಲವಾದನು... ಯಾವ ಪ್ರಕಾರ ಆದಾಮನ ಸಂಬಂಧದಿಂದ ಎಲ್ಲರೂ ಸಾಯುವವರಾದರೋ, ಅದೇ ಪ್ರಕಾರ ಕ್ರಿಸ್ತನ ಸಂಬಂಧದಿಂದ ಎಲ್ಲರೂ ಜೀವಿತರಾಗುವರು" (1 ಕೊರಿಂಥ 15:13–22) ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾನೆ.

ಒಂದು ಕೈಗಡಿಯಾರದಂತೆ ಅದರ ಅನೇಕ ಚಕ್ರಗಳು ಬೇಕಾದುದ್ದಕ್ಕಿಂತ ಅತಿಯಾಗಿದೆ ಎಂದು ಕಂಡು ಬರಬಹುದು, ಆದರೆ ಅದರ ಅತ್ಯಂತ ನಿಧಾನಗತಿಯ ಚಕ್ರಗಳು ಅವಶ್ಯಕವಾಗಿವೆ. ಹಾಗೆಯೇ ಸತ್ಯವೇದವೂ ಸಹ, ಅನೇಕ ಭಾಗಗಳಿಂದ ಕೂಡಿದೆ ಮತ್ತು ಅನೇಕ ಲೇಖನಿಗಳಿಂದ ಸಿದ್ಧಗೊಂಡಿದೆಯಾದರೂ ಅದು ಸಂಪೂರ್ಣವೂ ಒಟ್ಟಾರೆಯಾಗಿ ಸಾಮರಸ್ಯವುಳ್ಳ ಒಂದೇ ಸಮಗ್ರತೆ ಆಗಿದೆ. ಅದರ ಯಾವುದೇ ಒಂದು ಭಾಗವಾದರೂ ಅವಶ್ಯಕತೆಗಿಂತ ಹೆಚ್ಚಾದುದಲ್ಲ, ಕೆಲವೊಂದು ಭಾಗಗಳು ಹೆಚ್ಚು ಆಸಕ್ತವುಳ್ಳದ್ದಾಗಿ ಬೇರೆಯವುಗಳಿಗಿಂತ ಹೆಚ್ಚು ಪ್ರಧಾನ ಸ್ಥಾನದಲ್ಲಿರುವಂತೆ ಕಂಡುಬಂದರೂ, ಎಲ್ಲವೂ ಪ್ರಯೋಜನಕರವೂ, ಅವಶ್ಯಕವೂ ಆಗಿವೆ. ಇಂದಿನ "ಪ್ರಗತಿಪರ ಚಿಂತಕರೂ" ಮತ್ತು "ಮಹಾ ದೈವ ಶಾಸ್ತ್ರಜ್ಞರುಗಳೂ" ಇದನ್ನು ಹಗುರವಾಗಿ ತೆಗೆದುಕೊಳ್ಳುವುದು ಅಥವಾ ಹಳೆ ಒಡಂಬಡಿಕೆಯ ಕೆಲವೊಂದು ಅದ್ಭುತ ಕಾರ್ಯಗಳನ್ನು ಅಲ್ಲಗಳೆಯುವುದಿಲ್ಲವಾದರೂ ಅವಗಣನೆ ಮಾಡಿ ಅವುಗಳನ್ನು "ಅಡಗೂಲಜ್ಜಿ ಕಥೆಗಳು" ಎಂಬುದಾಗಿ ಕರೆಯುವುದು ಇಂದು ಜನಪ್ರಿಯವಾಗುತ್ತಿದೆ. ಇವುಗಳಲ್ಲಿ ಯೋನ ಮತ್ತು ದೊಡ್ಡ ಮೀನು, ನೋಹ ಮತ್ತು ಆತನ ನಾವೆ, ಹವ್ವ ಮತ್ತು ಸರ್ಪ, ಯೆಹೋಶುವನ ಆಜ್ಞೆಯಂತೆ ಸೂರ್ಯನು ಚಲಿಸದೆ ನಿಂತುಹೋದದ್ದು, ಹಾಗೂ ಬಿಳಾಮನ

ಮಾತನಾಡುವ ಕತ್ತೆ ಇವುಗಳನ್ನೊಳಗೊಂಡಿವೆ, ಮೇಲ್ನೋಟಕ್ಕೆ ಈ ಬುದ್ಧಿವಂತ ವ್ಯಕ್ತಿಗಳು ಬಹುಶಃ ಸತ್ಯವೇದವು ಅದರ ವಿವಿಧ ಭಾಗಗಳಲ್ಲಿ ಎಷ್ಟರ ಮಟ್ಟಿಗೆ ಹಣೆದುಕೊಂಡಿದೆ ಮತ್ತು ಐಕ್ಯವಾಗಿದೆ ಎಂಬುದನ್ನು ಕಡೆಗಣಿಸುತ್ತಾರೆ. ಇದರಿಂದ ಅದರಲ್ಲಿನ ಅದ್ಭುತ ಕಾರ್ಯಗಳನ್ನು ಬೇರ್ಪಡಿಸುವುದಾಗಲೀ ಅಥವಾ ಅವುಗಳಲ್ಲಿ ಅವಿಶ್ವಾಸ ವ್ಯಕ್ತಪಡಿಸುವುದಾಗಲೀ ಮಾಡುವುದು ಅದನ್ನು ಸಂಪೂರ್ಣವಾಗಿ ಅಪಖ್ಯಾತಿಪಡಿಸುವುದು ಅಥವಾ ನಾಶಪಡಿಸುವುದೇ ಆಗಿದೆ ಎಂದು ತೋರಿಬರುತ್ತದೆ. ಯಾಕೆಂದರೆ ಮೂಲದಲ್ಲಿನ ಸಾಕ್ಷ್ಯಗಳು ತಪ್ಪಾದವುಗಳಾದರೆ ಅದನ್ನು ಪುನರುಚ್ಚರಿಸಿದವರು ಸುಳ್ಳನ್ನು ಸಾಧಿಸುವವರೂ ಅಥವಾ ಮರುಳುಗೊಳಿಸುವವರೂ ಆಗುತ್ತಾರೆ ಮತ್ತು ಎರಡೂ ಪ್ರಕರಣಗಳಲ್ಲಿಯೂ ಅವರ ಸಾಕ್ಷ್ಯಗಳನ್ನು ದೈವಿಕ ಪ್ರೇರಣೆಯುಳ್ಳದ್ದೆಂದು ಒಪ್ಪಿಕೊಳ್ಳಲು ನಮಗೆ ಸಾಧ್ಯವಾಗುವುದಿಲ್ಲ. ಮೇಲೆ ಉಲ್ಲೇಖಿಸಲ್ಪಟ್ಟ ಅದ್ಭುತ ಕಾರ್ಯಗಳನ್ನು ಸತ್ಯವೇದದಿಂದ ತೆಗೆದುಹಾಕುವುದು, ಆ ಪ್ರಮುಖ ಬರಹಗಾರರ ಸಾಕ್ಷ್ಯವನ್ನು, ಜೊತೆಗೆ ನಮ್ಮ ಕರ್ತನಾದ ಯೇಸುವಿನ ಸಾಕ್ಷ್ಯಗಳನ್ನು ಅಪಮೌಲ್ಯಗೊಳಿಸಿದಂತಾಗುತ್ತದೆ. ಮಾನವನ ಪತನದ ಕಥೆಯನ್ನು ಪೌಲನು ದೃಢಪಡಿಸಿದ್ದಾನೆ (ರೋಮಾ. 5:17); ಹವ್ವಳನ್ನು ಸರ್ಪವು ವಂಚಿಸಿದ್ದನ್ನು ಸಹಾ ತಿಳಿಸಲಾಗಿದೆ (2 ಕೊರಿಂಥ 11:3; 1 ತಿಮೋ. 2:14). ನಮ್ಮ ಕರ್ತನು ಎರಡನೆಯದರ ಬಗ್ಗೆ ಉಲ್ಲೇಖಿಸಿರುವುದನ್ನು ಪ್ರಕಟನೆ 12:9 ಮತ್ತು 20:2ರಲ್ಲಿ ನೋಡಬಹುದು. ಅಮೋರ್ಯರನ್ನು ಪರಾಭವಗೊಳಿಸುವಾಗ ಸೂರ್ಯನು ನಿಂತುಹೋದದ್ದು ಕರ್ತನ ಶಕ್ತಿಯ ಒಂದು ಸಾಕ್ಷ್ಯವಾಗಿದ್ದು, ಮುಂದೆ ವಿಶದವಾಗಿ ಕರ್ತನ ದಿನದಲ್ಲಿ ಶಕ್ತಿಯ ಸಂಕೇತವಾಗಿ ಯೆಹೋಶುವನು ಸಾಂಕೇತಿಸಿದ ಆತನ ಕೈಯಲ್ಲಿ ಬಹಿರಂಗಗೊಳ್ಳುತ್ತದೆ. ಇದನ್ನು ಮೂರು ಪ್ರವಾದಿಗಳು ದೃಢಪಡಿಸಿದ್ದಾರೆ (ಯೆಶಾಯ 28:21; ಹಬಕ್ಕೂಕ 2:1–3,13,14 ಮತ್ತು 3: 2–11; ಜೆಕರ್ಯ 14:1,6,7). ಯೂದ 11ನೇ ವಚನ ಮತ್ತು 2 ಪೇತ್ರ 2:16ರಲ್ಲಿ ಬಿಳಾಮನ ಕತ್ತೆಯು ಮಾತನಾಡಿದ್ದನ್ನು ದೃಢಪಡಿಸಲಾಗಿದೆ. ಮಹಾ ಬೋಧಕನಾದ ಯೇಸುವು ಯೋನನ ಬಗೆಗಿನ ಹೇಳಿಕೆಗಳನ್ನು ಅಂದರೆ ಬೃಹತ್ ಮೀನು, ಹಾಗೂ ನೋಹ ಮತ್ತು ಜಲಪ್ರಳಯ ಇವುಗಳನ್ನು ದೃಢಪಡಿಸುತ್ತಾನೆ (ಮತ್ತಾಯ 12;40; 24:38,39; ಲೂಕ 17:26; 1 ಪೇತ್ರ 3:20ನ್ನೂ ನೋಡಿರಿ). ವಾಸ್ತವವಾಗಿ ಯೇಸು ಮತ್ತು ಅಪೋಸ್ತಲರು ಮಾಡಿದ ಅದ್ಭುತ ಕಾರ್ಯಗಳು ಯಾವುದೆಂದರೆ, ನೀರನ್ನು ದ್ರಾಕ್ಷಾರಸವನ್ನಾಗಿ ಮಾಡಿದ್ದು, ಅನೇಕ ಅನೇಕ ರೋಗಿಗಳನ್ನು ಸ್ವಸ್ಥಪಡಿಸಿದ್ದು, ಮತ್ತು ಸತ್ತವರನ್ನು ಜೀವಿತಗೊಳಿಸಿದ್ದು ಎಲ್ಲದಕ್ಕಿಂತ ಅದ್ಭುತವಾಗಿದೆ.

ಈ ಅದ್ಭುತಗಳು ನಮ್ಮ ಅನುಭವಗಳಿಗೆ ಸರ್ವಸಾಮಾನ್ಯವಲ್ಲದವುಗಳಾಗಿ ಪ್ರತಿದಿನವೂ ನಮ್ಮ ಬಗ್ಗೆ ಸಮಾನಾಂತರಗಳಾಗಿ ಕಂಡುಬರುತ್ತವೆ ಮತ್ತು ಇವುಗಳು ಹೆಚ್ಚು ರೂಢಿಯಲ್ಲಿದ್ದು ಗಮನಕ್ಕೆ ಬಾರದೇ ಹಾದುಹೋಗುತ್ತವೆ. ಜೀವವುಳ್ಳ ಪ್ರಾಣಿಗಳು ಅಥವಾ ಸಸ್ಯಗಳು ಇವುಗಳ ಉತ್ಪತ್ತಿಯು ನಮ್ಮ ಊಹೆಗೆ ನಿಲುಕದ್ದು, ಮಾತ್ರವಲ್ಲದೆ ನಮ್ಮ ಶಕ್ತಿಗೆ ಮೀರಿದ್ದೂ ಆಗಿದೆ. ಆದುದರಿಂದ ಇವುಗಳು ಅದ್ಭುತಕರವಾಗಿವೆ. ನಾವು ಜೀವ ಸಿದ್ಧಾಂತದ ಅನುಷ್ಠಾನವನ್ನು ನೋಡಬಹುದು, ಆದರೆ ಅದನ್ನು ಅರ್ಥ ಮಾಡಿಕೊಳ್ಳಲೂ, ಉತ್ಪತ್ತಿ ಮಾಡಲೂ ಸಾಧ್ಯವಿಲ್ಲ. ನಾವು ಎರಡು ಬೀಜಗಳನ್ನು ಒಂದರ ಪಕ್ಕದಲ್ಲೊಂದು ಬಿತ್ತುತ್ತೇವೆ; ಗಾಳಿಯ, ನೀರಿನ, ಮಣ್ಣಿನ ಸ್ಥಿತಿಗಳು ಎಲ್ಲವೂ ಒಂದೇ ರೀತಿಯಾಗಿರುತ್ತವೆ. ಅವುಗಳು ಬೆಳೆಯುತ್ತವೆ, ಅದು ಹೇಗೆಂದು ನಾವು ಹೇಳಲಾರೆವು, ಈ ಅದ್ಭುತವನ್ನು ಬುದ್ಧಿವಂತ ತತ್ವಜ್ಞಾನಿಯೂ ವಿವರಿಸಲಾರನು. ಈ ಬೀಜಗಳು ವಿರೋಧ ಧೋರಣೆಯ ಶರೀರ ರಚನೆಯುಳ್ಳವುಗಳಾಗಿ ಬೆಳೆಯುತ್ತವೆ. ಒಂದು ಬಳ್ಳಿಯಂತೆ ಹಬ್ಬಿದರೆ ಮತ್ತೊಂದು ನೆಟ್ಟಗೆ ನಿಂತುಕೊಳ್ಳುತ್ತದೆ; ಪರಿಸ್ಥಿತಿ ಒಂದೇ ಇದ್ದರೂ, ಅದರ ರೂಪ, ಹೂವು, ಬಣ್ಣ ಎಲ್ಲವೂ ವ್ಯತ್ಯಾಸವುಳ್ಳವುಗಳಾಗಿರುತ್ತವೆ, ಅಂಥಾಃ ಅದ್ಭುತ ಬೆಳವಣಿಗೆ ನಮಗೆ ಸರ್ವ ಸಾಮಾನ್ಯವಾಗಿ ಹೋಗಿದೆ, ಮತ್ತು ಹೀಗೆ ನಾವು ಬಾಲ್ಯದ ವಿಸ್ಮಯವನ್ನು ಬಿಟ್ಟುಬಿಡುವಂತೆ ಅವುಗಳನ್ನೂ ನೆನಪಿನಲ್ಲಿಟ್ಟುಕೊಳ್ಳುವುದನ್ನು ನಿಲ್ಲಿಸುತ್ತೇವೆ. ಆದಾಗ್ಯೂ ನಮ್ಮ ಸ್ವಂತ ಮತ್ತು ಸೀಮಿತ ಬುದ್ಧಿವಂತಿಕೆಯ ಮೀರಿದ ಶಕ್ತಿಯನ್ನು ಅವು ವ್ಯಕ್ತಪಡಿಸುತ್ತವೆ. ವಿಶೇಷ ಉದ್ದೇಶಗಳಿಗಾಗಿ ಸತ್ಯವೇದದಲ್ಲಿ ದಾಖಲಾದ ಕೆಲವು ಅದ್ಭುತ ಪವಾಡಗಳು, ಮತ್ತು ಸರ್ವಶಕ್ತಿಯ ಉದ್ದೇಶಿತ ದೃಷ್ಟಾಂತಗಳು ಮತ್ತು ಪ್ರತಿಯೊಂದು ಅಡೆತಡೆಗಳನ್ನು ಜಯಿಸಲು, ಮಹಾನ್ ಸೃಷ್ಟಿಕರ್ತನ ಸಾಮರ್ಥ್ಯ ಮತ್ತು ತನ್ನ ಎಲ್ಲಾ ಚಿತ್ತವನ್ನು ನೆರವೇರಿಸುವ ಸಾಮರ್ಥ್ಯ ಅಲ್ಲದೇ ಆತನು ನಮಗೆ ವಾಗ್ದಾನ ಮಾಡಿರುವ ಸತ್ತವರೊಳಗಿಂದ ಪುನರ್ಜೀವಗೊಳಿಸುವ, ದುಷ್ಟರ ನಿರ್ಮೂಲನೆ ಮತ್ತು ಶಾಶ್ವತವಾದ ನೀತಿವಂತಿಕೆಯ ಅಂತಿಮ ಆಳ್ವಿಕೆಗೆ ಉದಾಹರಣೆಗಳಾಗಿವೆ.

ಇಲ್ಲಿ ನಾವು ಪ್ರಕರಣವನ್ನು ನಿಶ್ಚಲಗೊಳಿಸುತ್ತೇವೆ. ಪ್ರತಿಯೊಂದು ಹಂತವನ್ನೂ ವಿವೇಚನೆಯಿಂದ ಪರೀಕ್ಷಿಸಲಾಗಿದೆ. ನಾವು ಒಬ್ಬ ದೇವರಿದ್ದಾನೆ, ಆತನು ಒಬ್ಬ ಸರ್ವೋಚ್ಛ ಜ್ಞಾನಿಯಾದ ಸೃಷ್ಟಿಕರ್ತನಾಗಿದ್ದಾನೆ ಎಂಬುದನ್ನು ಕಂಡುಕೊಂಡಿದ್ದೇವೆ ಮತ್ತು ಆತನ ವಿವೇಕ, ನ್ಯಾಯ, ಪ್ರೀತಿ ಮತ್ತು ಶಕ್ತಿ ಇವುಗಳು ಸಮರ್ಪಕವಾದ ಸಾಮರಸ್ಯದೊಡನೆ ಅಸ್ಥಿತ್ವದಲ್ಲಿವೆ. ಸೃಷ್ಟಿಯ ಬಗೆಗಿನ ಆತನ ಯೋಜನೆಗಳ ಪ್ರಕಟನೆಯನ್ನು ನಿರೀಕ್ಷಿಸುವುದು, ಅವುಗಳನ್ನು ಮೆಚ್ಚಿಕೊಳ್ಳಲು ಸಮರ್ಥರಾಗುವುದು ಮತ್ತು ಅವುಗಳಲ್ಲಿ ಆಸಕ್ತಿ ತೋರುವುದು ಸಮಂಜಸವಾಗಿದೆ ಎಂದು ನಾವು ಕಂಡುಕೊಂಡಿದ್ದೇವೆ. ಸತ್ಯವೇದವು ಆ ಪ್ರಕಟನೆಯಾಗಿದೆ ಎಂದು ಹೇಳಿಕೊಳ್ಳುವುದನ್ನು ಮತ್ತು ಅದು ಪರಿಗಣನೆಗೆ ಯೋಗ್ಯವಾಗಿದೆ ಎಂಬುದನ್ನು ನಾವು ನೋಡಿದ್ದೇವೆ. ನಾವು ಅದರ ಬರಹಗಾರರನ್ನು ಮತ್ತು ಅವರು ಬೋಧಿಸಿರುವ ಬೆಳಕಿನಲ್ಲಿ ಅವುಗಳ ಸಂಭವನೀಯ ಉದ್ದೇಶಗಳನ್ನು ಪರೀಕ್ಷಿಸಿದ್ದೇವೆ. ನಮಗೆ ಆಶ್ಚರ್ಯವಾಗಿದೆ; ಮತ್ತು ನಮ್ಮ ವಿವೇಚನಾ ಶಕ್ತಿಯು ಪವಿತ್ರ ಉದ್ದೇಶದಿಂದ ಕೂಡಿದ ಅಂಥಾಃ ಜ್ಞಾನವು ಸ್ವಾರ್ಥ ಸಾಧನೆಗಾಗಿ ಕಪಟಿಗಳು ಉಪಯೋಗಿಸಿರುವ ಮೋಸಕರವಾದ ತಂತ್ರಗಾರಿಕೆಯಲ್ಲ ಎಂದು ನಮಗೆ ಅರಿವನ್ನುಂಟುಮಾಡುತ್ತದೆ. ಅಂಥಾಃ ನೀತಿಯುತ ಮತ್ತು ಪರೋಪಕಾರಿ ಮನೋಭಾವಗಳು ಮತ್ತು ಕಾನೂನುಗಳು ದೇವರದ್ದೇ ಹೊರತು ಮನುಷ್ಯರದಲ್ಲ ಎಂದು ವಿವೇಚನೆಯು ಒತ್ತಾಯಿಸುತ್ತದೆ ಮತ್ತು ಅವು ಅಪ್ರಾಮಾಣಿಕ ಯಾಜಕರ ಕಾರ್ಯವಲ್ಲವೆಂದು ಆಗ್ರಹಪಡಿಸುತ್ತದೆ. ಯೇಸುವಿನ ವಿಷಯವಾದ ಸಾಕ್ಷ್ಯಗಳ, ಆತನ ಈಡುಬಲಿ ಮತ್ತು ಪುನರುತ್ಥಾನ ಮತ್ತು ಅದರ ಫಲವಾದ ನಾವೆಲ್ಲರೂ ಬರಲಿರುವ ಆತನ ಮಹಿಮೆಯುಳ್ಳ ರಾಜ್ಯಕ್ಕೆ ಬಾಧ್ಯರಾಗುವವರು ಎಂಬುದರ ಸಾಮರಸ್ಯವನ್ನು ನಾವು ನೋಡಿದ್ದೇವೆ. ಇಷ್ಟು ಭವ್ಯವಾದ ಮತ್ತು ಸಮಗ್ರವಾದ ಯೋಜನೆಯು ನಾವು ನಿರೀಕ್ಷಿಸಲು ಕಾರಣವನ್ನು ಹೊಂದಿರಬಹುದಾದ ಎಲ್ಲವನ್ನೂ ಮೀರಿ, ಆದರೆ ಅಂತಹ ಸಮಂಜಸವಾದ ನಿರ್ಣಯಗಳ ಮೇಲೆ ನಿರ್ಮಿಸಲಾಗಿರುವುದು. ನಾವು ಅನ್ವೇಷಿಸುವ ದೇವರ ಯೋಜನೆಯಾಗಿರಬೇಕು. ಪ್ರಕಟಗೊಂಡ ಮೇಲೆಯೂ ಅದು ಕೇವಲ ಮಾನವರ ಯುಕ್ತಿಯಲ್ಲ, ಅದು ಮಾನವರದು ಎಂದು ನಂಬಲು ಬಹಳಷ್ಟು ಭವ್ಯವಾಗಿದೆ.

ಕೊಲಂಬಸ್ಸನು ಓರಿನೊಕೋ ನದಿಯನ್ನು ಕಂಡುಹಿಡಿದಾಗ ಯಾರೋ ಒಬ್ಬರು ಆತನು ಒಂದು ದ್ವೀಪವನ್ನು ಕಂಡುಹಿಡಿದ್ದಾನೆ ಎಂದು ಹೇಳಿದರು. ಆದರೆ ಆತನು ಅದಕ್ಕೆ ಉತ್ತರಿಸಿ "ಅಂಥಾಃ ನದಿಯು ಒಂದು ದ್ವೀಪದಿಂದ ಹರಿದುಬರಲಾರದು. ಆ ಬಲಿಷ್ಟವಾದ ನೀರಿನ ಸೆಳವು ಆ ಖಂಡವನ್ನು ಬರಿದು ಮಾಡುವುದಾಗಿದೆ" ಎಂದನು. ಅದರಂತೆ, ಸತ್ಯವೇದದ ಸಾಕ್ಷ್ಯಗಳ ಆಳ, ಶಕ್ತಿ, ಜ್ಞಾನ ಮತ್ತು ವ್ಯಾಪ್ತಿಯು ಮನುಷ್ಯನಲ್ಲ, ಸರ್ವಶಕ್ತನಾದ ದೇವರು ತಾನೇ ಅದರ ಯೋಜನೆಗಳ, ಪ್ರಕಟನೆಗಳ ಕರ್ತೃವಾಗಿದ್ದಾನೆಂದು ನಮಗೆ ಮನದಟ್ಟುಪಡಿಸುತ್ತದೆ. ನಾವು ಪರಿಶುದ್ಧ ಗ್ರಂಥಗಳು ದೇವರ ಮೂಲದ್ದು ಎಂಬುದರ ಮೇಲ್ಮೈ ಹೇಳಿಕೆಗಳ ಕ್ಷಣದರ್ಶನವನ್ನು ಮಾತ್ರವೇ ಆತುರತೆಯಿಂದ ಮಾಡಿದ್ದೇವೆ ಮತ್ತು ಅದು ಸಮಂಜಸವಾಗಿದೆ ಎಂದು ಕಂಡುಕೊಂಡಿದ್ದೇವೆ. ಮುಂದಿನ ಅಧ್ಯಾಯಗಳು ದೇವರ ಯೋಜನೆಯ ವಿವಿಧ ಭಾಗಗಳನ್ನು ಬಹಿರಂಗಗೊಳಿಸುತ್ತವೆ. ಮತ್ತು ನಿಜವಾಗಿಯೂ ಅವುಗಳು ದೈವ ಪ್ರೇರಿತವಾದವುಗಳು ಎಂಬುದನ್ನು ಎಲ್ಲಾ ಸರಳ ಹೃದಯಿಗಳೂ ನಂಬುವಂತೆ ಸಾಕಷ್ಟು ಸಾಕ್ಷ್ಯಗಳನ್ನು ಒದಗಿಸುತ್ತವೆ ಎಂಬ ವಿಶ್ವಾಸ ನಮಗಿದೆ ಯೋಜನೆಯ ಉದ್ದ, ಅಗಲ. ಎತ್ತರ ಮತ್ತು ಆಳವು ದೈವಿಕ ಗುಣಲಕ್ಷಣಗಳನ್ನು ಇದುವರೆಗೆ ಭವ್ಯವಾಗಿ ಪ್ರತಿಫಲಿಸುತ್ತವೆ. ಆದರೆ ಅದನ್ನು ಮಂದವಾಗಿ ಗ್ರಹಿಸಿಕೊಂಡಿದ್ದೇವೆ. ಆದರೆ ಈಗ ನಾವು ಅದನ್ನು ಸಹಸ್ರಮಾನದ ಯುಗದ ಉದಯದಲ್ಲಿ ಸ್ಪಷ್ಟವಾಗಿ ನೋಡುವವರಾಗಿದ್ದೇವೆ.

## TRUTH MOST PRECIOUS

Great truths are dearly bought, Ther common truth,
Such as men give and take from day to day,
Comes in the common walk of easy life,
Blown by the careless wind across our way.

Great truths are dearly won; not found by chance,
Not wafted on the breath of summer dream ;
But gasped in the great struggle of the soul,
Hard buffeting with adverse wind and stream.

Sometimes, 'mid confict, turmoil, fear and grief,
When the strong hand of God, put forth in might,
Ploughs up the subusoil of the stagnant heart,
It brings some buried truth-seeds to the light.

Not in the general mart. 'mid corn and wine;
Not in the merchandise of gold and gems;
Not in the world's gay hall of midnight mirth,
Nor 'mid the blaze of regal diadems;

Not in the general clash of human creeds,
Not in a merchandise 'twixt church and the world,
Is truth's fair treasure found, 'mongst trees and weeds;
Is truth's fair banner in their midst infurled

Truth springs like harvest from the well-ploughed fields,
Rewarding patient toil, and faith and zeal.
To those thus seeking her, she ever yields
Her richest treasures for their lasting weal

## ಸತ್ಯವು ಅತ್ಯಂತ ಅಮೂಲ್ಯವಾದದು

ಮಹತ್ವವುಳ್ಳ ಸತ್ಯಗಳನ್ನು ಮಮತೆಯಿಂದ ಕೊಂಡುಕೊಳ್ಳಲಾಗುತ್ತದೆ,
ಸಾಮಾನ್ಯ ಜ್ಞಾನವನ್ನಾದರೂ ಮನುಷ್ಯನು ಪ್ರತಿ ದಿನ ಕೊಂಡುಕೊಳ್ಳುತ್ತಾರೆ,
ಅದು ದಿನನಿತ್ಯದ ಆಗುಹೋಗಿನಲ್ಲಿ ಬಂದು,
ಅನಿಶ್ಚಿತವಾದ ಗಾಳಿಯಂತೆ ನಮ್ಮನ್ನು ಹಾದು ಹೋಗುತ್ತದೆ.

ಮಹತ್ವವಾದ ಸತ್ಯಗಳು ಪ್ರೀತಿಯಿಂದ ಗೆಲ್ಲುತ್ತದೆ,
ಆಕಸ್ಮಿಕವಾಗಿ ಸಿಕ್ಕುವುದಿಲ್ಲ,
ಜೀವನದ ಪ್ರೌಢಾವಸ್ಥೆಯ ಉಸಿರಿನಲ್ಲೂ ತೇಲಿಹೋಗುವುದಿಲ್ಲ,
ಜೀವನದ ಭರ್ಜರಿ ಹೊಡೆತದಲ್ಲಿ ಸ್ವಾಧೀನಪಡಿಸಿಕೊಳ್ಳಬೇಕು,
ವಿರುದ್ಧ ದಿಕ್ಕಿನಿಂದ ಬಡಿಯುವ ಗಾಳಿ ಮತ್ತು ಪ್ರವಾಹ ಜರ್ಜರಿತಪಡಿಸುತ್ತದೆ.

ಕೆಲವು ಸಲ ಹೋರಾಟ, ಗಲಭೆ, ದುಃಖ, ಭೀತಿಗಳ ನಡುವೆ,
ದೇವರ ಬಲವಾದ ಹಸ್ತವು ಪೂರ್ಣ ಸಾಮರ್ಥ್ಯದಿಂದ,
ಜಡವಾದ ಹೃದಯದ ಕೆಳಮಣ್ಣನ್ನು ಉಳುತ್ತದೆ,
ಹುದುಗಿದ ಸತ್ಯದ ಬೀಜಗಳನ್ನು ಬೆಳಕಿಗೆ ತರುತ್ತದೆ.

ಸಾಮಾನ್ಯ ಮಾರುಕಟ್ಟೆಯಲ್ಲಾಗಲೀ ಅಲ್ಲ, ಧವಸ, ದ್ರಾಕ್ಷಾರಸ ಅಥವಾ,
ಚಿನ್ನರತ್ನಗಳ ವ್ಯಾಪಾರಿಗಳಲ್ಲಾಗಲೀ ಅಲ್ಲ, ಅಥವಾ
ನಡುರಾತ್ರಿಯ ಪ್ರಪಂಚದ ಮೋಜುಗಳಲ್ಲಾಗಲೀ ಅಲ್ಲ ಅಥವಾ,
ವೈಭವದ ಘೋಷಣೆಗಳು, ಕಿರೀಟ, ಕಲಶಗಳಲ್ಲಿ ಸಿಗಲಾರದು.

ಮನುಷ್ಯರ ತತ್ವ ಸಿದ್ಧಾಂತಗಳ ಸಂಘರ್ಷದಲ್ಲಿ ಅಲ್ಲ,
ಚರ್ಚು ಮತ್ತು ಪ್ರಪಂಚದ ವ್ಯಾಪಾರದಲ್ಲೋ ಸಿಗಲಾರದು,
ಸುಂದರವಾದ ಸತ್ಯದ ಸಂಪತ್ತು, ಹಣಜಿ, ಮುಳ್ಳುಗಳ ನಡುವೆ,
ಅದರ ಪತಾಕೆ ಮಡಚಿಕೊಳ್ಳದೆ ಇರುತ್ತದೆ.

ಸತ್ಯವು ಚೆನ್ನಾಗಿ ಉತ್ತ ಭೂಮಿಯ ಫಸಲಿನಂತೆ ಬುಗ್ಗೆಯುಕ್ಕುತ್ತದೆ,
ತಾಳ್ಮೆಯ ದುಡಿತ, ನಂಬಿಕೆ, ಶ್ರದ್ಧೆಗೆ ಪ್ರತಿಫಲ ಕೊಡುತ್ತದೆ,
ಸತ್ಯವನ್ನು ಅನುಸರಿಸುವವರಿಗೆ ಅದು ಎಂದೂ ಫಲಪ್ರದವು,
ತನ್ನ ಸಂಪದ್ಭರಿತ ನಿಧಿಯನ್ನು ನಿರಂತರ ಅಭಿವೃದ್ಧಿ ಹೊಂದಲು ಕೊಡುತ್ತದೆ.

* * * * * * *

# ಅಧ್ಯಯನ – 4 Study IV

# ದೇವರ ಯೋಜನೆಯ ಅಭಿವೃದ್ಧಿಯಲ್ಲಿ ಯುಗಗಳು ಮತ್ತು ದೈವೀಕ ಹಂಚಿಕೆಗಳು ಗುರುತಿಸಲ್ಪಟ್ಟಿವೆ

## THE EPOCHS AND DISPENSATIONS MARKED IN THE DEVELOPMENT OF THE DIVINE PLAN

**ದೇವರ ಯೋಜನೆಯು ನಿಶ್ಚಿತವಾದುದು ಮತ್ತು ವ್ಯವಸ್ಥಿತವಾದುದು – ವಿಶ್ವ ಇತಿಹಾಸದ ಮೂರು ಮಹಾಯುಗಗಳು – ಅವುಗಳ ವೈಶಿಷ್ಟ್ಯಪೂರ್ಣ ಲಕ್ಷಣಗಳು – "ಭೂಮಿಯು ಶಾಶ್ವತವಾಗಿ ನಿಲ್ಲುವುದು" – ಬರಲಿರುವ ನೂತನ ಆಕಾಶ ಮಂಡಲ, ನೂತನ ಭೂಮಂಡಲ – ಈ ಮಹಾ ಯುಗಗಳ ಉಪವಿಭಾಗಗಳು – ಪ್ರಾಮುಖ್ಯವಾದ ದೇವರ ಯೋಜನೆಯ ವೈಶಿಷ್ಟ್ಯಗಳನ್ನು ಅವಲೋಕಿಸಲು ತರಲಾಗಿದೆ – ಮಾನ್ಯ ಮಾಡಲ್ಪಟ್ಟ ಕ್ರಮವು ಸಾಮರಸ್ಯವನ್ನು ಬಹಿರಂಗಪಡಿಸುತ್ತದೆ – "ಸತ್ಯವಾಕ್ಯವನ್ನು ಸರಿಯಾಗಿ ಉಪದೇಶಿಸುವುದು".**

ಮಹಾವಾಸ್ತುಶಿಲ್ಪಿಯ ಮತ್ತು ನಿರ್ಮಾಣಿಕನ ಕೌಶಲ್ಯ ಮತ್ತು ಜ್ಞಾನವನ್ನು ಆತನ ಇನ್ನೂ ಪೂರ್ಣಗೊಳ್ಳದ ಕಾರ್ಯದ ನಿಮಿತ್ತ ಕೆಲವರು ತಮ್ಮ ತಿಳಿಗೇಡಿತನದ ದೆಸೆಯಿಂದ ತಪ್ಪಾಗಿ ತೀರ್ಮಾನಿಸಿದ್ದಾರೆ. ಅವರಂತೆಯೇ ಅನೇಕರು ತಮ್ಮ ಅಜ್ಞಾನದ ದೆಸೆಯಿಂದಾಗಿ ದೇವರ ಪೂರ್ಣಗೊಂಡಿರದ ಕಾರ್ಯಗಳ ಬಗ್ಗೆ ತಪ್ಪಾಗಿ ತೀರ್ಮಾನಿಸುತ್ತಾರೆ. ಪ್ರಾಸಂಗಿಕವಾಗಿ, ಮಾನವರ ಶಿಸ್ತಿನ ಸಲುವಾಗಿ ಅನುಮತಿಸಲ್ಪಟ್ಟಿರುವ, ಆದರೆ, ಅವುಗಳು ಅಂತಿಮವಾಗಿ ಆತನ ಒಳ್ಳೇತನದಿಂದ ರದ್ದುಮಾಡಲ್ಪಟ್ಟ ಕೆಡುಕಿನ ಒರಟು ಸಿದ್ಧಾಂತಗಳ ಹಂದರಗಳನ್ನು ತೆಗೆದುಹಾಕಲಾಗುವುದು ಮತ್ತು ಹೊಲಸನ್ನು ತೆರವುಗೊಳಿಸಲಾಗುವುದು, ದೇವರ ಪೂರ್ಣಗೊಂಡ ಕಾರ್ಯಗಳು ವಿಶ್ವದಾದ್ಯಂತ ಆತನ ಅಂತ್ಯವಿಲ್ಲದ ಜ್ಞಾನವನ್ನು ಮತ್ತು ಶಕ್ತಿಯನ್ನು ಪ್ರಕಟಿಸುತ್ತದೆ; ಮತ್ತು ಆತನ ಯೋಜನೆಗಳು ಆತನ ಭವ್ಯವಾದ ಗುಣನಡತೆಗೆ ತಕ್ಕಂತೆ ಸಾಮರಸ್ಯವಾಗಿ ಕಂಡುಬರುವವು.

ದೇವರು ತನಗೆ ಒಂದು ನಿಶ್ಚಿತವಾದ ಉದ್ದೇಶವಿದೆ ಎಂದು ಹೇಳುವುದರಿಂದ, ಆತನ ಎಲ್ಲಾ ಉದ್ದೇಶಗಳೂ ನೆರವೇರುವವು, ಅದು ಆತನ ಮಕ್ಕಳಾದ ನಮ್ಮನ್ನು ಮಾಡಿ ಆ ಯೋಜನೆಗಳು ಏನೆಂದು ಶ್ರದ್ಧೆಯಿಂದ ವಿಚಾರಿಸಲು ಯೋಗ್ಯಗೊಳಿಸಿ ನಾವು ಅವುಗಳೊಂದಿಗೆ ಸಾಮರಸ್ಯವನ್ನು ಕಂಡುಕೊಳ್ಳುವಂತೆ ಮಾಡುತ್ತದೆ. ತನ್ನ ಉದ್ದೇಶಗಳು ಹೇಗೆ ಸ್ಥಿರಗೊಂಡಿವೆ ಎಂಬುದನ್ನು ಯೆಹೋವನು ಯಾವ ರೀತಿಯಲ್ಲಿ ದೃಢಪಡಿಸುತ್ತಾನೆ ಎಂಬುದನ್ನು ಗಮನಿಸಿರಿ – "ಸೇನಾಧೀಶ್ವರನಾದ ಯೆಹೋವನು ಆಣೆಯಿಟ್ಟು ಹೇಳುವುದೇನೆಂದರೆ – ನಾನು ಸಂಕಲ್ಪಿಸಿದ್ದೇ ನೆರವೇರುವುದು, ಉದ್ದೇಶಿಸಿದ್ದೇ ನಿಲ್ಲುವುದು, ಖಂಡಿತ. ಅಶ್ಶೂರ್ಯರನ್ನು ನನ್ನ ದೇಶದಲ್ಲಿ ಮುರಿದು ನನ್ನ ಬೆಟ್ಟಗಳ ಮೇಲೆ ತುಳಿದು ಬಿಡುವೆನು; ಆಗ ಅವರು ಹೂಡಿದ ನೊಗವು ನನ್ನ ಜನರಿಂದ ತೊಲಗಿ ಹೊರಿಸಿದ ಹೊರೆಯು ನನ್ನ ಜನರ ಹೆಗಲಿಗೆ ದೂರವಾಗುವುದು. ಇದೇ ಲೋಕದಲ್ಲೆಲ್ಲಾ ನೆರವೇರಬೇಕಾದ ನನ್ನ ಉದ್ದೇಶ, ಇದೇ ಜನಾಂಗಗಳ ಮೇಲೆಲ್ಲಾ ಚಾಚಿದ ನನ್ನ ಕೈ. ಸೇನಾಧೀಶ್ವರನಾದ ಯೆಹೋವನು ಉದ್ದೇಶ ಮಾಡಿದ್ದಾನೆ. ಅದನ್ನು ಯಾರು ವ್ಯರ್ಥಪಡಿಸುವರು? ಆತನ ಕೈ ಚಾಚಿದೆ, ಹಿಂದಕ್ಕೆ ತಳ್ಳುವವರು ಯಾರು?" ಎಂಬುದೇ (ಯೆಶಾಯ 14:24–27) "ಮನುಷ್ಯರಿಗೆ ತಕ್ಕಂತೆ ನಡೆಯಿರಿ! ಪುರಾತನದ ಹಳೇಸಂಗತಿಗಳನ್ನು ಜ್ಞಾಪಿಸಿಕೊಳ್ಳಿರಿ; ನಾನೇ ದೇವರು, ಇನ್ನು ಯಾರೂ ಅಲ್ಲ; ನಾನೇ ಪರಮದೇವರು ನನಗೆ ಸರಿಸಮಾನರಿಲ್ಲ. ಆರಂಭದಲ್ಲಿಯೇ ಅಂತ್ಯವನ್ನು ತಿಳಿಸಿದ್ದೇನೆ; ನನ್ನ ಸಂಕಲ್ಪವು ನಿಲ್ಲುವುದು, ನನ್ನ ಇಷ್ಟಾರ್ಥವನ್ನೆಲ್ಲಾ ನೆರವೇರಿಸುವೆನು ಎಂದು ಹೇಳಿ ಇನ್ನೂ ನಡೆದಿರುವ ಕಾರ್ಯಗಳನ್ನು ಪುರಾತನ ಕಾರ್ಯದಲ್ಲಿಯೇ ಅರುಹಿದ್ದೇನೆ. ಮೂಡಲಿಂದ ಹದ್ದು ಎರಗಿಲಿ ಎಂದು, ಅಂದರೆ ನನ್ನ ಸಂಕಲ್ಪವನ್ನು ನೆರವೇರಿಸತಕ್ಕವನು ದೂರದೇಶದಿಂದ ಬರಲಿ ಎಂದು ಕೂಗಿದ್ದೇನೆ; ನಾನು ನುಡಿದಿದ್ದೇನೆ; ಈಡೇರಿಸುವೆನು; ಆಲೋಚಿಸಿದ್ದೇನೆ, ಸಾಧಿಸುವೆನು" (ಯೆಶಾಯ 46: 9–11). ಆದುದರಿಂದ, ಮಾನವರೊಡನೆ ದೇವರ ವ್ಯವಹಾರ ಎಷ್ಟೇ ಅವ್ಯವಸ್ಥೆಯಾಗಿ ಅಥವಾ ರಹಸ್ಯಕರವಾಗಿ ಕಂಡುಬರುವುದಾದರೂ, ಆತನ ವಾಕ್ಯದಲ್ಲಿನ ಸಾಕ್ಷ್ಯಗಳನ್ನು ನಂಬುವವರು ಆತನ ಮೂಲದ ಮತ್ತು ಬದಲಿಸಲಾಗದ ಯೋಜನೆಯು ಪೂರ್ಣಗೊಳ್ಳುವಿಕೆಯತ್ತ ವ್ಯವಸ್ಥಿತವಾಗಿ ಸಾಗಿದೆ, ಮತ್ತು ಈಗಲೂ ಸಾಗುತ್ತಿದೆ ಎಂಬುದನ್ನು ಒಪ್ಪಿಕೊಳ್ಳಬೇಕು.

ಮಾನವ ಕುಲವು ಅಜ್ಞಾನದ ಅಂಧಕಾರದಲ್ಲಿ ತಡಕಾಡುತ್ತಿರುವಾಗ, ದೈವಿಕ ಶಿಲ್ಪಿಯಾದ ದೇವರ ಭವ್ಯವಾದ ಗುಣಲಕ್ಷಣಗಳನ್ನು ಅರಿತುಕೊಳ್ಳುವ ಮುನ್ನ ಆತನ ಯೋಜನೆಯ ನಿಜವಾದ ಪ್ರಗತಿಗಾಗಿ ಕಾಯಬೇಕು. ದೇವರ ಮಗುವಿನ ಭಾಗ್ಯವೆಂದರೆ ಮುಂತಿಳಿಸಿರುವ ಭವಿಷ್ಯದಲ್ಲಿನ ವೈಭವವನ್ನು ನಂಬಿಕೆ ಮತ್ತು ಆತನ ದೀಪದ ಬೆಳಕಿನಲ್ಲಿ ಗ್ರಹಿಸುವುದು ಮತ್ತು ಅದರಿಂದ ಹಿಂದಿನ ಮತ್ತು ಪ್ರಸ್ತುತದ ರಹಸ್ಯಕರ ವ್ಯವಹಾರಗಳನ್ನು ಮೆಚ್ಚಿಕೊಳ್ಳುವುದು. ಆದುದರಿಂದ, ದೇವರ ಆಸಕ್ತಿಯುಳ್ಳ ಪುತ್ರರಾಗಿ, ವಾಗ್ದಾನಪಡಿಸಿದ ಪರಂಪರೆಯ ಬಾಧ್ಯಸ್ಥರಾಗಿ, ನಾವು ಆತನ ಯೋಜನೆಗಳಿಂದ ಮತ್ತು ಕೊಟ್ಟಿರುವ ನಿಶ್ಚಿತಾಭಿಪ್ರಾಯಗಳಿಂದ ಆತನ ಉದ್ದೇಶಗಳನ್ನು ಅರ್ಥಮಾಡಿಕೊಳ್ಳುವಂತೆ ನಮ್ಮ ತಂದೆಯ ಮಾತಿಗೆ ಭಿನ್ನವಿಸುತ್ತೇವೆ. ಅಲ್ಲಿ ಮಾನವರನ್ನು ಉದ್ದೇಶಿಸಿ ದೇವರ ಯೋಜನೆಯು ಮೂರು ಮಹಾ ಕಾಲಾವಧಿಯನ್ನು ವ್ಯಾಪಿಸಿದೆ ಎಂಬುದನ್ನು ನಾವು ತಿಳಿದುಕೊಳ್ಳುತ್ತೇವೆ. ಇದು ಮಾನವನ ಸೃಷ್ಟಿಯಲ್ಲಿ ಪ್ರಾರಂಭಗೊಂಡು ಅನಂತತೆಯ ಭವಿಷ್ಯದೊಳಗೆ ಚಾಚುವುದಾಗಿದೆ. ಪೇತ್ರ ಪೌಲರು ಈ ಅವಧಿಗಳನ್ನು "ಮೂರು ಪ್ರಪಂಚಗಳು" ಎಂಬುದಾಗಿ ಗೊತ್ತುಪಡಿಸುತ್ತಾರೆ. ಇದನ್ನು ನಾವು ಕೆಳಗಣ ರೇಖಾಚಿತ್ರದಲ್ಲಿ ಪ್ರತಿನಿಧಿಸುತ್ತೇವೆ :–

## "ಲೋಕಗಳು" ಎಂದು ಕರೆಯಲ್ಪಡುವ ಮಹಾಯುಗಗಳು

**Great Epochs Called "Worlds"**




ಈ ಮೂರು ಮಹಾಯುಗಗಳು ಹಂಚಿಕೆಗಳ ಮೂರು ವಿಶಿಷ್ಟ ಪ್ರಕಟನೆಗಳನ್ನು ಪ್ರತಿನಿಧಿಸುತ್ತವೆ. ಮೊದಲನೆಯದು ಸೃಷ್ಟಿಯಿಂದ ಜಲಪ್ರಳಯದವರೆಗೆ. ಅದು ದೇವದೂತರುಗಳ ನಿರ್ವಹಣೆಗೆ ಒಳಗಾಗಿತ್ತು ಮತ್ತು ಇದನ್ನು ಪೇತ್ರನು "ಆ ಕಾಲದಲ್ಲಿದ್ದ ಲೋಕವು..." (2 ಪೇತ್ರ 3:6) ಎಂದು ಕರೆದಿದ್ದಾನೆ.

ಎರಡನೆಯ ಮಹಾಯುಗವು ಜಲಪ್ರಳಯದಿಂದ ದೇವರರಾಜ್ಯದ ಸ್ಥಾಪನೆಯವರೆಗೆ. ಇದು ಸೈತಾನನ "ಇಹಲೋಕಾಧಿಪತಿ"ಯ ಮಿತಿಯುಳ್ಳ ನಿಯಂತ್ರಣದಲ್ಲಿದೆ. ಆದುದರಿಂದ, ಇದನ್ನು "ಕೆಟ್ಟದ್ದಾಗಿರುವ ಈಗಿನ ದುಷ್ಟಯುಗ" ಎಂದು ಕರೆಯಲಾಗಿದೆ (ಗಲಾತ್ಯ 1:4; 2 ಪೇತ್ರ 3:7).

ಮೂರನೆಯದು "ಯುಗಯುಗಾಂತರಕ್ಕೂ ಇರುವ ಯುಗ" ಇಲ್ಲವೆ "ಅಂತ್ಯವಿಲ್ಲದ ಯುಗ" (ಯೆಶಾಯ 45:17). ಈ ಯುಗವು ದೇವರ ಆಳ್ವಿಕೆಯಲ್ಲಿರುತ್ತದೆ ಮತ್ತು ಇದನ್ನು "ಮುಂದಣ ಸಾಮ್ರಾಜ್ಯ", "ನೂತನ ಭೂಮಂಡಲ" ಎಂದು ಕರೆಯಲಾಗುವುದು ಮತ್ತು ಅದರಲ್ಲಿ ನೀತಿವಂತಿಕೆಯು ವಾಸವಾಡುತ್ತದೆ (ಇಬ್ರಿಯ 2:5; ಪೇತ್ರ 3:13).

ಈ ಅವಧಿಗಳಲ್ಲಿ ಅಥವಾ "ಲೋಕಗಳಲ್ಲಿ" ಮೊದಲನೆಯದು ದೇವದೂತರಗಳ ನಿರ್ವಹಣೆಯ ಅಡಿಯಲ್ಲಿದ್ದು ವಿಫಲಗೊಂಡಿತು; ಎರಡನೆಯದು ದುರಾಕ್ರಮಿಯಾದ ಸೈತಾನನ ಆಳ್ವಿಕೆಯಡಿಯಲ್ಲಿ ನಿಜವಾಗಿಯೂ 'ದುಷ್ಟ ಪ್ರಪಂಚ'ವಾಗಿದೆ. ಆದರೆ ಮೂರನೆಯದು ನೀತಿವಂತಿಕೆಯ ಯುಗವೂ, ಲೋಕದ ಎಲ್ಲಾ ಕುಟುಂಬಗಳಿಗೂ ಆಶೀರ್ವಾದದಾಯಕ ಯುಗವಾಗಲಿದೆ.

ಈ ಮೂರು ಲೋಕಗಳಲ್ಲಿ ಕಡೆಯ ಎರಡರ ಬಗ್ಗೆ ಬಹಳ ವಿಶಿಷ್ಟವಾಗಿ ಹೇಳಲಾಗಿದೆ. ಅವುಗಳ ಸಂಬಂಧದ ಹೇಳಿಕೆಗಳು ಪ್ರಬಲವಾದ ಭಿನ್ನತೆಯುಳ್ಳವುಗಳಾಗಿವೆ. ಪ್ರಸ್ತುತ ಅಥವಾ ಎರಡನೆಯ ಅವಧಿಯನ್ನು 'ಪ್ರಸ್ತುತ ದುಷ್ಟ ಪ್ರಪಂಚ' ಎಂದು ಕರೆಯಲಾಗುತ್ತದೆ. ಅದರಲ್ಲಿ ಯಾವುದೇ ಒಳ್ಳೆಯವುಗಳಿಲ್ಲ ಎಂಬ ಕಾರಣದಿಂದಲ್ಲ, ಆದರೆ ಅದರಲ್ಲಿ ಕೆಟ್ಟತನವು ಪ್ರಬಲವಾಗುವಂತೆ

ಅನುಮತಿಸಲಾಗಿದೆ. "ಈಗ ಅಹಂಕಾರಿಗಳನ್ನು ಧನ್ಯರೆಂದು ಕೊಂಡಾಡಬೇಕಾಗಿ ಬಂತು; ಹೌದು, ದುಷ್ಕರ್ಮಿಗಳು ಏಳಿಗೆಗೆ ಬಂದಿದ್ದಾರೆ. ದೇವರನ್ನು ಪರೀಕ್ಷಿಸಿದರೂ ಸುರಕ್ಷಿತರಾಗಿದ್ದಾರೆ" (ಮಲಾಕಿ 3:15). ಮೂರನೆಯ ಲೋಕ ಅಥವಾ ಯುಗವನ್ನು "ಬರಲಿರುವ ಪ್ರಪಂಚ" ಎಂದು ಕರೆಯಲಾಗುತ್ತದೆ. ಅದರಲ್ಲಿ ನೀತಿವಂತಿಕೆಯು ವಾಸಮಾಡುತ್ತದೆ. ಅದರಲ್ಲಿ ಯಾವುದೇ ಕೆಟ್ಟತನ ಇರುವುದಿಲ್ಲವೆಂದಲ್ಲ, ಆದರೆ ಈ ಕೆಟ್ಟತನವು ಪ್ರಬಲಗೊಳ್ಳುವುದಿಲ್ಲ. ಕೆಡುಕುತನವು ಕ್ರಮೇಣವಾಗಿ ಅಳಿಸಿ ಹಾಕಲ್ಪಡುವುದು, ಇದಕ್ಕೆ ಸಾವಿರ ವರ್ಷಗಳು ಪೂರ್ತಿಯಾಗಿ ಬೇಕಾಗುತ್ತದೆ. ಆಗ ಕೆಟ್ಟತನವು ಆಳುವುದಿಲ್ಲ; ಅದು ಅಭಿವೃದ್ಧಿ ಹೊಂದಿಕೊಳ್ಳುವುದಿಲ್ಲ; ಕೆಡುಕರು ಇನ್ನು ಮುಂದೆ ಪ್ರವರ್ಧಮಾನಕ್ಕೆ ಬರುವುದಿಲ್ಲ. ಆದರೆ ನೀತಿವಂತಿಕೆಯು ವೃದ್ಧಿ ಹೊಂದುವುದು (ಕೀರ್ತನೆ 72:7). "ವಿಧೇಯರು ದೇಶದ ಮೇಲನ್ನು ಅನುಭವಿಸುವರು" (ಯೆಶಾಯ 1:19) ಮತ್ತು "ದುಷ್ಟನು ಕಾಣಿಸದೇ ಹೋಗುವನು" (ಕೀರ್ತನೆ 37:9).

ಈ ರೀತಿಯಲ್ಲಿ, ಮುಂದಿನ ಹಂಚಿಕೆಯು ಪ್ರಸ್ತುತಕ್ಕಿಂತ ಎಲ್ಲಾ ವಿಧದಲ್ಲಿಯೂ ವಿರುದ್ಧವಾಗಿ ರುವುದೆಂದು ತೋರಿಬರುತ್ತದೆ. ಯಾಕೆ ಪ್ರಸ್ತುತ ಮತ್ತು ಭವಿಷ್ಯದಲ್ಲಿನ ದೈವೇಚ್ಛೆಗಳಲ್ಲಿ ಈ ರೀತಿಯ ವ್ಯತ್ಯಾಸವಿರುತ್ತದೆಂಬುದನ್ನು ನಮ್ಮ ಕರ್ತನ ಮಾತುಗಳು ನಮಗೆ ತೋರಿಸುತ್ತವೆ– ಯಾಕೆಂದರೆ ಬರಲಿರುವ ಪ್ರಪಂಚಕ್ಕೆ ಆತನೇ ಅರಸನೂ ಆಳುವಾತನೂ ಆಗಿರುವನು, ಮತ್ತು ಅದರಲ್ಲಿ ನೀತಿವಂತಿಕೆಯೂ, ಸತ್ಯವೂ ಪ್ರವರ್ಧಮಾನಕ್ಕೆ ಬರುತ್ತವೆ; ಈ ಸಮಯದಲ್ಲಿ ಸೈತಾನನು ಪ್ರಸ್ತುತ ಕೆಟ್ಟಲೋಕದ ಅರಸನೂ, ಆಳುವಾತನೂ ಆಗಿದ್ದಾನೆ, ಆದ್ದರಿಂದ ಕೆಟ್ಟತನವು ಪ್ರವರ್ಧಿಸುತ್ತಿದೆ ಮತ್ತು ಕೆಡುಕರು ಮೆರೆಯುತಿದ್ದಾರೆ. ಯಾಕೆಂದರೆ, ಯೇಸುವು ಹೇಳಿದಂತೆ – "ಇಹಲೋಕಾಧಿಪತಿಯು ಬರುತ್ತಾನೆ, ಅವನಿಗೆ ಸಂಬಧಪಟ್ಟದ್ದು ಯಾವುದೊಂದೂ ನನ್ನಲ್ಲಿಲ್ಲ" (ಯೋಹಾನ 14:30, 2 ಕೊರಿಂಥ 12:7). ಇದರ ಪರಿಣಾಮವಾಗಿ ಆತನನ್ನು ಅನುಸರಿಸುವವರ ಬಗ್ಗೆ ಅವರನ್ನು ವಿರೋಧಿಸುವುದು, ಪ್ರಲೋಭಿಸುವುದು, ಕೆರಳಿಸುವುದು ಮತ್ತು ಅವರಿಗೆ ಪೆಟ್ಟುಕೊಡುವದು ಇವುಗಳ ಹೊರತಾಗಿ ಬೇರೆ ಯಾವ ಆಸಕ್ತಿಯೂ ಇರುವುದಿಲ್ಲ. ಈ ಪ್ರಸ್ತುತವಾದ ಕೆಟ್ಟಲೋಕದಲ್ಲಿ ಅಥವಾ ಯುಗದಲ್ಲಿ ದೈವೀಕವಾಗಿ ಯಾರು ಜೀವಿಸುತ್ತಾರೋ ಅಂಥವರು ಹಿಂಸೆಯನ್ನು ಅನುಭವಿಸುವರು, ಆದರೆ ಕೆಡುಕರಾದರೋ ಸ್ವಸ್ಥಳದಲ್ಲಿ ಬೆಳೆದು ಹಸಿರು ಮರಗಳಂತೆ ಅಭಿವೃದ್ಧಿ ಹೊಂದುವರು (2 ತಿಮೋ. 3:12; ಕೀರ್ತನೆ 37:35).

ಯೇಸು "ನನ್ನ ರಾಜ್ಯವು ಈ ಲೋಕದ್ದಲ್ಲ" ಎಂದಿದ್ದಾನೆ. ಬರಲಿರುವ ಲೋಕ ಅಥವಾ ಯುಗವು ಬರುವವರೆಗೂ ಕ್ರಿಸ್ತನ ರಾಜ್ಯವು ಈ ಲೋಕವನ್ನು ನಿಯಂತ್ರಿಸುವುದಿಲ್ಲ. ಇದಕ್ಕಾಗಿ ನಿನ್ನ ರಾಜ್ಯವು ಬರಲಿ, ನಿನ್ನ ಚಿತ್ತವು ಭೂಲೋಕದಲ್ಲಿ ನೆರವೇರಲಿ" ಎಂದು ನಾವು ನಿರೀಕ್ಷಿಸುವಂತೆಯೂ, ಪ್ರಾರ್ಥಿಸುವಂತೆಯೂ ಕಲಿಸಿಕೊಡಲಾಗಿದೆ. ಸೈತಾನನು ಈ ಲೋಕದ ಅಂಧಕಾರದ ಅಧಿಪತಿಯಾಗಿದ್ದಾನೆ, ಹೀಗಾಗಿ ಕತ್ತಲು ಭೂಮಿಯನ್ನು ಆವರಿಸಿದೆ, ಕಾರ್ಗತ್ತಲು ಜನಾಂಗಗಳನ್ನು ಮುಚ್ಚಿದೆ. ಆತನು ಈಗ ಅವಿಧೇಯ ಮಕ್ಕಳ ಹೃದಯಗಳಲ್ಲಿ ಆಳುತ್ತಾನೆ ಮತ್ತು ಅವರ ಹೃದಯಗಳಲ್ಲಿ ಕಾರ್ಯವೆಸಗುತ್ತಾನೆ (ಎಫೆಸ 2:12; 6:12, ಯೆಶಾಯ 6:2).

ಮಹಾಶಿಲ್ಪಿಯ ಯೋಜನೆಯಲ್ಲಿ ಮಾನವನ ರಕ್ಷಣೆಗಾಗಿ ಕೆಲವು ಪ್ರಮುಖ ಭಾಗವು ಇನ್ನೂ ಸಂಪೂರ್ಣವಾಗಿ ಅಭಿವೃದ್ಧಿಗೊಂಡಿಲ್ಲ – ಇಲ್ಲದಿದ್ದರೆ ನೂತನ ಅರಸನು ಮತ್ತು ನೂತನ ಹಂಚಿಕೆಯನ್ನು ಬಹಳ ಹಿಂದೆಯೇ ಪರಿಚಯಿಸಲಾಗುತ್ತಿತ್ತು. ಅದು ನಿಗದಿತ ಕಾಲಕ್ಕೆ ಯಾಕೆ ಮುಂದೂಡಲಾಯಿತು ಮತ್ತು ಪ್ರಸ್ತುತ ಸೈತಾನನ ಅಧೀನದಲ್ಲಿರುವ ಕೇಡಿನ ಆಳ್ವಿಕೆಯಿಂದ ಕ್ರಿಸ್ತನ ನೀತಿವಂತಿಕೆ ರಾಜ್ಯಕ್ಕೆ ಬದಲಾಗುವ ವಿಧಾನವು ಕುತೂಹಲಕಾರಿ ಅಂಶಗಳಾಗಿದ್ದು ಇವುಗಳನ್ನು ಇನ್ನು ಮುಂದೆ ಇನ್ನೂ ಪೂರ್ಣವಾಗಿ ತೋರಿಸಲಾಗುವುದು. ಪ್ರಸ್ತುತ ಸೈತಾನನ ವಶದಲ್ಲಿರುವ ದುಷ್ಟ ರಾಜ್ಯಗಳು ಸೂಕ್ತ ಸಮಯದಲ್ಲಿ ನಮ್ಮ ಕರ್ತನಾದ ಯೇಸುವಿನ ರಾಜ್ಯವಾಗುವುದು ಎಂದಷ್ಟೇ ಈಗ ಹೇಳಿದರೆ ಸಾಕು (ಪ್ರಕಟನೆ 11:5). ಸಾಮಾನ್ಯವಾಗಿ ಸಂಕಟದ ಸಮಯದಲ್ಲಿ ಈ ವರ್ಗಾವಣೆಯು ನೆರವೇರುವುದು ಎಂದು ಸನ್ನಿವೇಶವು ತೋರಿಸುತ್ತದೆ. ಇದಕ್ಕೆ ಸಂಬಂಧಿಸಿದಂತೆ ಯೇಸು – "ಒಬ್ಬನು ಬಲಿಷ್ಠನನ್ನು ಮೊದಲು ಕಟ್ಟಿಹಾಕದೆ ಆ ಬಲಿಷ್ಠನ ಮನೆಯನ್ನು ಹೊಕ್ಕು ಅವನ ಸೊತ್ತನ್ನು ಸುಲುಕೊಳ್ಳುವುದಕ್ಕಾಗುವುದಿಲ್ಲ" (ಮಾರ್ಕ 3:22–27) ಎಂದಿದ್ದಾನೆ. ಈ ರೀತಿಯಲ್ಲಿ ಕ್ರಿಸ್ತನ ನೀತಿಯುಳ್ಳ ಶಾಂತಿಯ ರಾಜ್ಯವನ್ನು ಸ್ಥಾಪಿಸುವ ಮೊದಲು, ಸೈತಾನನನ್ನು ಮೊದಲು ಬಂಧಿಸಬೇಕು, ಹತೋಟಿ

ಯಲ್ಲಿಟ್ಟುಕೊಳ್ಳಬೇಕು ಮತ್ತು ಪದಚ್ಯುತಿಗೊಳಿಸಬೇಕೆಂದು ನಮಗೆ ಕಲಿಸಿಕೊಡಲಾಗಿದೆ. ಈ ರೀತಿಯಲ್ಲಿ ಸೈತಾನನ್ನು ಬಂಧಿಸುವ ಈ ಕಾರ್ಯವು ನೂತನ ಹಂಚಿಕೆಯ ಪ್ರಥಮ ಕರ್ತವ್ಯವಾಗಿದೆ ಎಂದು ತೋರಿಸಲಾಗಿದೆ (ಪ್ರಕಟನೆ 20:2).

ಈ ಎಲ್ಲಾ ಲೋಕಗಳಿಗೂ ಮತ್ತು ಹಂಚಿಕೆಗಳಿಗೂ ಭೂಮಿಯೇ ತಳಹದಿಯಾಗಿದೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಯುಗಗಳು ದಾಟಿ ಹೋದರೂ ಮತ್ತು ಹಂಚಿಕೆಗಳು ಬದಲಾದರೂ "ಭೂಮಿಯಾದರೋ ಶಾಶ್ವತವಾಗಿ ನಿಲ್ಲುವುದು" (ಪ್ರಸಂಗಿ 1:4). ಅದೇ ಚಿತ್ರಣವನ್ನು ಮುಂದುವರಿಸುತ್ತಾ, ಪೇತ್ರನು ಈ ಪ್ರತಿಯೊಂದು ಕಾಲಾವಧಿಯನ್ನೂ ಪ್ರತ್ಯೇಕವಾದ ಪರಲೋಕಗಳು ಭೂಲೋಕಗಳೆಂದು ಕರೆದಿದ್ದಾನೆ. ಇಲ್ಲಿ ಪರಲೋಕಗಳು ಎಂಬ ಪದವು ಹೆಚ್ಚಾಗಿ ಆತ್ಮೀಕ ನಿಯಂತ್ರಣಾ ಶಕ್ತಿಯನ್ನು ಸಂಕೇತಿಸುತ್ತದೆ ಮತ್ತು ಭೂಮಿಯು ಮಾನವ ಆಡಳಿತ ಮತ್ತು ಸಾಮಾಜಿಕ ವ್ಯವಸ್ಥೆಗಳನ್ನು ಸಂಕೇತಿಸುತ್ತದೆ. ಈ ರೀತಿಯಾಗಿ, ಮೊದಲನೆಯ ಪರಲೋಕಗಳು ಮತ್ತು ಭೂಲೋಕಗಳು, ಅಥವಾ ಆಗ ಇದ್ದ ಕ್ರಮ ಮತ್ತು ವ್ಯವಸ್ಥೆಗಳು ತಮ್ಮ ಉದ್ದೇಶವನ್ನು ನೆರವೇರಿಸಿ, ಪ್ರಳಯದಲ್ಲಿ ಅಂತ್ಯವಾಯಿತು. ಆದರೆ ಭೌತಿಕ ಪರಲೋಕಗಳು (ಆಕಾಶ ಮತ್ತು ವಾತಾವರಣವು), ಭೌತಿಕ ಭೂಮಿಯು ಅಳಿದು ಹೋಗಲಿಲ್ಲ; ಅವುಗಳು ಉಳಿದವು. ಅದರಂತೆ ಪ್ರಸ್ತುತ ಲೋಕವು (ಪರಲೋಕಗಳು ಮತ್ತು ಭೂಮಿ) ದೊಡ್ಡ ಶಬ್ದದೊಡನೆ, ಬೆಂಕಿ ಮತ್ತು ಕರಗುವಿಕೆಯೊಡನೆ – ಗೊಂದಲ, ತೊಂದರೆ ಮತ್ತು ವಿಸರ್ಜನೆಯೊಡನೆ ಅಳಿದು ಹೋಗುವುವು. ಬಲಿಷ್ಟನಾದ ವ್ಯಕ್ತಿಯು (ಸೈತಾನನು) ಬಂಧಿಸಲ್ಪಟ್ಟಿದ್ದು, ತನ್ನ ಅಧಿಕಾರವನ್ನು ಉಳಿಸಿ ಕೊಳ್ಳುವುದಕ್ಕಾಗಿ ಹೋರಾಡುವನು. ಸರ್ಕಾರದ ಮತ್ತು ಸಮಾಜದ ಪ್ರಸ್ತುತ ಕ್ರಮವು ಅಥವಾ ವ್ಯವಸ್ಥೆಯು ಅಳಿದು ಹೋಗುವುವು, ಹೊರತು ಭೌತಿಕ ಆಕಾಶ, ಭೂಮಿಗಳಲ್ಲ. ಪ್ರಸ್ತುತ ಪರಲೋಕಗಳು (ಆತ್ಮೀಕ ಶಕ್ತಿಯ ನಿಯಂತ್ರಣ) ನೂತನ ಆಕಾಶ ಮಂಡಲಗಳಿಗೆ ಸ್ಥಳ ನೀಡಬೇಕು – ಕ್ರಿಸ್ತನ ಆತ್ಮೀಕ ನಿಯಂತ್ರಣ, ಪ್ರಸ್ತುತ ಭೂಲೋಕವು (ಸೈತಾನನ ನಿಯಂತ್ರಣದಲ್ಲಿ ಈಗ ಆಯೋಜನೆಗೊಂಡ ಮಾನವ ಸಮಾಜವು) ಸಾಂಕೇತಿಕವಾಗಿ ಕರಗಿ ಹೋಗುತ್ತದೆ ಮತ್ತು ಕರ್ತನ ದಿನದ ಆರಂಭದಲ್ಲಿ ವಿಸರ್ಜಿಸಲ್ಪಡುತ್ತದೆ ಮತ್ತು ಇದು ಭಟ್ಟಿಯಂತೆ ಉರಿದುಹೋಗುತ್ತದೆ (ಮಲಾಕಿ 4:1). ಅದು ನೂತನ ಭೂಮಿಯಾಗಿ ಮರುಸ್ಥಾಪನೆಯಾಗುತ್ತದೆ. ಅಂದರೆ, ಭೂಲೋಕದ ನೂತನ ಅರಸನಾದ ಕ್ರಿಸ್ತನ ಸಾಮರಸ್ಯದೊಂದಿಗೆ ಗುರುತಿಸಲ್ಪಟ್ಟ ಸಮಾಜ ನೀತಿವಂತಿಕೆ, ಶಾಂತಿ ಮತ್ತು ಪ್ರೀತಿ ಇವುಗಳು ಪ್ರಸ್ತುತ ವ್ಯವಸ್ಥೆಗಳಿಗೆ, ಹೊಸದಕ್ಕೆ, ಉತ್ತಮವಾದ ರಾಜ್ಯಕ್ಕೆ ಸ್ಥಳ ನೀಡುವಾಗ ಅದರ ಆಧಾರವು ಅತ್ಯಂತ ಕಟ್ಟುನಿಟ್ಟಾದ ನ್ಯಾಯವಾಗಿರುತ್ತದೆ.

ಪೌಲನಿಗೆ ಮುಂದಣ ಹಂಚಿಕೆಯ ಅಥವಾ ಅವನು ಕರೆಯುವಂತೆ "ಬರಲಿರುವ ಲೋಕ"ದ ಕ್ಷಣ ದರ್ಶನವನ್ನು ನೀಡಲಾಯಿತು. ಆತನು, ತನ್ನನ್ನು ಕಾಲದ ಪ್ರವಾಹದಡಿಯಲ್ಲಿ ನೂತನ ಪರಿಸ್ಥಿತಿಗೆ, ನೂತನ ಆಕಾಶಕ್ಕೆ, ಮೂರನೆಯ ಆಕಾಶದವರೆಗೆ ಎತ್ತಿಕೊಂಡು ಹೋಗಲಾಯಿತು (ದೈಹಿಕವಾಗಿ ಅಥವಾ ಮಾನಸಿಕವಾಗಿ ಅಥವಾ ಎರಡೂ ಎಂಬುದು ತಿಳಿಯದು, ಆತನ ವೀಕ್ಷಣೆಗೆ ಬಹು ಸಹಜವಾಗಿತ್ತು) ಎಂದು ಹೇಳುತ್ತಾನೆ. ಹೀಗೆ ಆತನು ಈ ಸಂಗತಿಗಳನ್ನು ಕ್ರಿಸ್ತನ ಆತ್ಮಿಕ ನಿಯಂತ್ರದಲ್ಲಿರುವಂತೆ ಕಾಣುತ್ತಾನೆ, ಮತ್ತು ಆತನು ಆ ಸಂಗತಿಗಳನ್ನು ಬಹಿರಂಗಪಡಿಸುವಂತಿರಲಿಲ್ಲ. (2 ಕೊರಿಂಥ 12: 2–4). ನಿಸ್ಸಂದೇಹವಾಗಿ ಇದೇ ಸಂಗತಿಗಳನ್ನು ನಂತರದಲ್ಲಿ ಯೋಹಾನನು ಸಹಾ ಕಂಡನು. ಆದರೆ ಅವುಗಳನ್ನು ಕ್ರೈಸ್ತ ಸಭೆಗೆ ಸಾಂಕೇತಿಕ ರೂಪದಲ್ಲಿ ತಿಳಿಸುವ ಅನುಮತಿ ಪಡೆದನು. ಅವುಗಳನ್ನು ಅದರ ಉಚಿತ ಸಮಯದಲ್ಲಿ ಮಾತ್ರವೇ ಅರ್ಥಮಾಡಿಕೊಳ್ಳಬಹುದಾಗಿತ್ತು. ಯೋಹಾನನಿಗೆ ನಮ್ಮ ಕರ್ತನು ಪತ್ಮೋಸ್ ದ್ವೀಪದಲ್ಲಿ ಪ್ರಕಟನೆಯನ್ನು ನೀಡಿದಾಗ ಆತನ ದರ್ಶನದಲ್ಲಿ ಈ ಕ್ರೈಸ್ತ ಯುಗದಲ್ಲಿ, ಸಭೆಯ ಮತ್ತು ರಾಜ್ಯದ ಬದಲಾಗುತ್ತಿರುವ ದೃಶ್ಯದಲ್ಲಿ, ಪ್ರಸ್ತುತ ದುಷ್ಟಲೋಕದ ಅಥವಾ ಯುಗದ ಅಂತ್ಯದವರೆಗೆ ಸಾಗಿಸಲ್ಪಟ್ಟನು. ಮತ್ತು ಅಲ್ಲಿ ಪ್ರವಾದನೀಯ ದರ್ಶನದಲ್ಲಿ ಆತನು ಸೈತಾನನು ಬಂಧಿಸಲ್ಪಟ್ಟಿರುವುದನ್ನು, ಕ್ರಿಸ್ತನು ಆಳುವುದನ್ನು, ನೂತನ ಆಕಾಶಮಂಡಲ ಮತ್ತು ನೂತನ ಭೂಮಂಡಲಗಳು ಸ್ಥಾಪಿತವಾಗಿರುವುದನ್ನು ಕಂಡನು. ಮೊದಲಿದ್ದ ಆಕಾಶ ಮಂಡಲವೂ ಮೊದಲಿದ್ದ ಭೂಮಂಡಲವೂ ಇಲ್ಲದೇ ಹೋದವು (ಪ್ರಕಟನೆ 21:1).

## ಯುಗಗಳು ಅಥವಾ ಹಂಚಿಕೆಗಳು

## Ages or Dispensations

ನಾವೀಗ ಈ ಮಹಾ ಯುಗಗಳು ಉಪ ವಿಭಾಗಗಳನ್ನು ಹೊಂದಿರುವ ಕಾಲವನ್ನು ಈ ಕೆಳಗೆ ಕೊಟ್ಟಿರುವ ರೇಖಾಚಿತ್ರಕ್ಕನುಸಾರವಾಗಿ ಗಮನಿಸುತ್ತೇವೆ –

ಈ ಮಹಾ ಯುಗಗಳಲ್ಲಿ (ಪ್ರಪಂಚಗಳು) ಮೊದಲನೆಯದು ಉಪವಿಭಾಗವಾಗಿರಲಿಲ್ಲ. ಆ




ದಿವಸಗಳಲ್ಲಿ ಆದಾಮನಿಂದ ಪ್ರಳಯಕಾಲದವರೆಗೆ ಮನುಷ್ಯರೊಂದಿಗಿನ ದೇವರ ವ್ಯವಹಾರದ ಪದ್ಧತಿಯಲ್ಲಿ ಯಾವುದೇ ಬದಲಾವಣೆಗಳೂ ಇರಲಿಲ್ಲ. ದೇವರು ಮಾನವರಿಗೆ ತನ್ನ ನಿಯಮಗಳನ್ನು ಕೊಟ್ಟಿದ್ದನು, ಅವು ಮಾನವನ ಸ್ವಭಾವದಲ್ಲಿ ಬರೆಯಲ್ಪಟ್ಟಿದ್ದವು. ಆದರೆ ಆತನು ಪಾಪ ಮಾಡಿದ ಮೇಲೆ, ಆತನನ್ನು ಸಾಕಷ್ಟು ಮಟ್ಟಿಗೆ ತನ್ನ ಸ್ವಂತ ಕ್ರಮಕ್ಕೆ ಒಪ್ಪಿಸಿಕೊಟ್ಟನು. ಅದು ಕೆಳಮುಖದ್ದಾಗಿದ್ದು, ನಿರಂತರವಾಗಿ ಕೆಟ್ಟದ್ದಾಗಿತ್ತು. ಈ ರೀತಿಯಲ್ಲಿ ಮಾನವನು ತಾನೇ ತನ್ನ ಅವಿವೇಕತನವನ್ನು ಅರಿತುಕೊಳ್ಳಬೇಕಿತ್ತು, ದೇವರ ಜ್ಞಾನವು ಸಂಪೂರ್ಣ ವಿಧೇಯತೆಯನ್ನು ಆಜ್ಞಾಪಿಸುತ್ತದೆ ಎಂಬುದು ಪ್ರಕಟವಾಗಬೇಕು. ಆ ಅವಧಿಯು ಒಂದು ಮಹಾಪ್ರಳಯದೊಂದಿಗೆ ಮುಕ್ತಾಯವಾಯಿತು. ಅದು ನೋಹ ಮತ್ತು ಆತನ ಕುಟುಂಬದವರನ್ನು ಹೊರತುಪಡಿಸಿ ಎಲ್ಲರನ್ನೂ ನಾಶಗೊಳಿಸಿತು. ಈ ರೀತಿಯಲ್ಲಿ ಪ್ರಥಮ ಹಂಚಿಕೆಯು ಪಾಪದ ದುರದೃಷ್ಟಕರವಾದ ಪರಿಣಾಮಗಳನ್ನು ಪ್ರಕಟಗೊಳಿಸಿದ್ದು ಮಾತ್ರವಲ್ಲದೆ, ಪಾಪದ ಧೋರಣೆಯು ಬಲುದೊಡ್ಡ ಅವನತಿಗೆ ಮತ್ತು ಕಷ್ಟ ಸಂಕಟಗಳಿಗೆ ಕಾರಣವಾಗುತ್ತದೆ ಮತ್ತು ಮಾನವನು ಕಳಕೊಂಡ ತನ್ನ ಮೊದಲ ಸ್ಥಿತಿಗತಿಯು ಪುನಃವಶಪಡಿಸಿಕೊಳ್ಳುವಿಕೆಯು ಎಂದಾದರೂ ನೆರವೇರಲು ಯೆಹೋವನ ಮಧ್ಯಸ್ಥಿಕೆಯ ಅವಶ್ಯಕತೆ ಉಂಟೆಂಬುದನ್ನು ತೋರಿಸಿಕೊಟ್ಟಿತು.

**ಎರಡನೆಯ ಯುಗ** ಅಥವಾ 'ಈಗಿರುವ ಪ್ರಪಂಚ'ವು ಮೂರು ಯುಗಗಳನ್ನೊಳಗೊಂಡಿದೆ. ದೇವರ ಯೋಜನೆಯಲ್ಲಿ ಪ್ರತಿಯೊಂದು ಹೆಜ್ಜೆಯೂ ಕೇಡನ್ನು ತೊಡೆದುಹಾಕುವುದಾಗಿದೆ. ಪ್ರತಿಯೊಂದು ಹಂತವೂ ಹಿಂದಿನದಕ್ಕಿಂತ ದೊಡ್ಡದಾಗಿದ್ದು, ಯೋಜನೆಯನ್ನು ಪೂರ್ಣಗೊಳ್ಳಲು ಹತ್ತಿರವಾಗುವಂತೆ ಮುಂದುವರಿಸುತ್ತದೆ.

**ಮೂರನೆಯ ಯುಗವು–** "ಬರಲಿರುವ ಲೋಕವು" ಕರ್ತನ ದ್ವಿತೀಯಾಗಮನದಿಂದ ಭವಿಷ್ಯದಲ್ಲಿ ಸಹಸ್ರಮಾನವನ್ನು ಅಥವಾ "ಪುನರ್‌ವಶದ ಕಾಲವನ್ನು" ಒಳಗೊಂಡಿದೆ ಮತ್ತು ಅದನ್ನನುಸರಿಸಿ ಇತರ "ಬರಲಿರುವ ಕಾಲಗಳು" ಅವೆ ಮತ್ತು ಅವುಗಳ ವಿವರಗಳು ಇನ್ನೂ ಬಹಿರಂಗಗೊಂಡಿರುವುದಿಲ್ಲ. ಪ್ರಸ್ತುತ ಪ್ರಕಟಪಡಿಸುವಿಕೆಗಳು ಪಾಪದಿಂದ ಮಾನವನ ಚೇತರಿಕೆಯನ್ನು ಪ್ರತಿಪಾದಿಸುತ್ತದೆಯೇ ಹೊರತು ಅದನ್ನು ಅನುಸರಿಸುವ ಶಾಶ್ವತವಾದ ಮಹಿಮೆಯನ್ನಲ್ಲ.

"ಈಗಿರುವ ಜಗತ್ತಿನಲ್ಲಿ" ಮೊದಲನೆಯ ಅವಧಿಯನ್ನು ನಾವು 'ಪಿತೃಗಳ ಕಾಲ' ಅಥವಾ ಹಂಚಿಕೆ ಎಂಬುದಾಗಿ ಕರೆಯುತ್ತೇವೆ. ಯಾಕೆಂದರೆ, ಈ ಅವಧಿಯಲ್ಲಿ ದೇವರ ನಿರ್ವಹಣೆ ಮತ್ತು ಕೃಪೆಗಳು ಕೆಲವೇ ಜನರೊಂದಿಗಿತ್ತು. ಉಳಿದ ಮಾನವ ಜಾತಿಯನ್ನು ಬಹುಮಟ್ಟಿಗೆ ನಿರ್ಲಕ್ಷಿಸಲಾಗಿದೆ. ಈ ರೀತಿಯಲ್ಲಿ ಕೃಪೆ ಹೊಂದಿದವರು ಮೂಲ ಪಿತೃಗಳಾದ ನೋಹ, ಅಬ್ರಹಾಮ, ಇಸಾಕ ಮತ್ತು ಯಾಕೋಬ ಇವರುಗಳು. ಇವರಲ್ಲಿ ಪ್ರತಿಯೊಬ್ಬರೂ ತಮ್ಮ ಕಾಲದಲ್ಲಿ ದೇವರ ದಯೆಗೆ ಪಾತ್ರರಾಗಿದ್ದವರು ಎಂದು ಕಂಡುಬರುತ್ತದೆ. ಯಾಕೋಬನ ಮರಣಾನಂತರ ಆ ಕಾಲಾವಧಿಯು ಅಥವಾ ವ್ಯವಹಾರ ಕ್ರಮು ಮುಕ್ತಾಯಗೊಂಡಿತು. ಯಾಕೋಬನ ಮರಣದಲ್ಲಿ ಆತನ ವಂಶಸ್ಥರನ್ನು ಮೊದಲಿಗೆ "ಇಸ್ರಾಯೇಲ್ಯಯರ ಹನ್ನೆರಡು ಕುಲಗಳವರು" ಎಂದು ಕರೆಯಲಾಯಿತು. ಅವರೆಲ್ಲರನ್ನೂ ಒಟ್ಟಾಗಿ ದೇವರು ತನ್ನ "ಸ್ವಕೀಯ ಜನರು" ಎಂದು ಗುರುತಿಸಿದನು; ಮತ್ತು ಸಾಂಕೇತಿಕ ಯಜ್ಞಗಳ ಮೂಲಕ ಅವರುಗಳು ಒಂದು ನಿರ್ದಿಷ್ಟವಾದ ಉದ್ದೇಶಕ್ಕಾಗಿ ಇತರ ದೇಶಗಳಿಂದ ಪ್ರತ್ಯೇಕಿಸಲ್ಪಟ್ಟ "ಪವಿತ್ರರಾಷ್ಟ್ರ"ದವರಾದರು. ಹಾಗಾಗಿ ಕೆಲವೊಂದು ವಿಶೇಷ ಸವಲತ್ತುಗಳನ್ನು ಅನುಭವಿಸಿದರು. ಈ ಲಕ್ಷಣವುಳ್ಳ ದೇವರ ಯೋಜನೆಗೆ ನಿಗದಿಪಡಿಸಿದ ಸಮಯವು ಅಲ್ಲಿ ಪ್ರಾರಂಭಗೊಂಡು ಕ್ರಿಸ್ತನ ಮರಣದಲ್ಲಿ ಮುಕ್ತಾಯವಾಯಿತು. ಇದನ್ನು ನಾವು 'ಯೆಹೂದ್ಯರ ಕಾಲ'ವೆಂದು ಅಥವಾ "ಧರ್ಮಶಾಸ್ತ್ರ ಹಂಚಿಕೆಯ ಕಾಲ"ವೆಂದು ನಿಶ್ಚಯಿಸುತ್ತೇವೆ. ಆ ಯುಗದಲ್ಲಿ ದೇವರು ಆ ಜನಾಂಗದವರನ್ನು ವಿಶೇಷವಾಗಿ ಆಶೀರ್ವದಿಸಿದನು. ಆತನು ಅವರಿಗೆ ತನ್ನ ನಿಬಂಧನೆಗಳನ್ನು ದಯಪಾಲಿಸಿದನು. ಆತನು ಅವರೊಡನೆ ಒಂದು ವಿಶೇಷ ಒಡಂಬಡಿಕೆಯನ್ನು ಮಾಡಿಕೊಂಡನು. ಆತನು ಅವರಿಗೆ "ದೇವದರ್ಶನ ಗುಡಾರ"ವನ್ನು ನೀಡಿದನು. ಅದರಲ್ಲಿ ಮಾತ್ರವೇ ಪ್ರಕಟವಾಗುವ ದೇವರ ವಿಶೇಷ ಮಹಿಮೆಯು (ಯೆಹೋವನ ತೇಜಸ್ಸು, Shekinah

Glory) ಅವರೊಂದಿಗೆ ಅವರ ನಾಯಕನೂ, ಅರಸನೂ ಆಗಿರುವ ಅತ್ಯಂತ ಪವಿತ್ರನಾದ ಯೆಹೋವನ ಪ್ರಸನ್ನತೆಯನ್ನು ಪ್ರತಿನಿಧಿಸುವುದಾಗಿದೆ. ಅವರಿಗಾಗಿ ಆತನು ತನ್ನ ಪ್ರವಾದಿಗಳನ್ನು ಕಳುಹಿಸಿಕೊಟ್ಟನು. ಕಟ್ಟಕಡೆಗೆ ತನ್ನ ಮಗನಾದ ಯೇಸುವನ್ನೇ ಕಳುಹಿಸಿದನು. ಯೇಸು ತನ್ನ ಅದ್ಭುತ ಕಾರ್ಯಗಳನ್ನು ಮಾಡಿದನು ಮತ್ತು ಅವರ ಮಧ್ಯದಲ್ಲಿ ಬೋಧಿಸಿದನು. ಆತನು ಅನ್ಯರ ಬಳಿಗೆ ತಾನಾಗಿಯೇ ಹೋಗಲಿಲ್ಲ ಅಥವಾ ಆತನ ಶಿಷ್ಯರಿಗೆ ಸುತ್ತಮುತ್ತಣ ರಾಷ್ಟ್ರಗಳಿಗೆ ಹೋಗಲು ಅನುಮತಿಸಲಿಲ್ಲ. ಆತನು ಅವರಿಗೆ "ಅನ್ಯಜನಗಳ ಕಡೆಗೆ ಹೋಗಬೇಡಿರಿ, ಸಮಾರ್ಯರ ಊರೊಳಗೆ ಕಾಲಿಡಬೇಡಿರಿ; ಇವರನ್ನು ಬಿಟ್ಟು ತಪ್ಪಿಸಿಕೊಂಡಿರುವ ಕುರಿಗಳಂತಿರುವ ಇಸ್ರಾಯೇಲನ ಮನೆತನದವರ ಬಳಿಗೆ ಹೋಗಿರಿ, ಪರಲೋಕ ರಾಜ್ಯವು ಸಮೀಪವಾಯಿತೆಂದು ಸಾರುತ್ತಾ ಹೋಗಿರಿ" (ಮತ್ತಾಯ 10: 5–6). ಮತ್ತೂ ಆತನು ಹೇಳಿದ್ದೇನೆಂದರೆ, "ತಪ್ಪಿಸಿಕೊಂಡ ಕುರಿಗಳಂತಿರುವ ಇಸ್ರಾಯೇಲನ ಮನೆತನದವರ ಬಳಿಗೇ ಹೊರತು ಮತ್ತಾರ ಬಳಿಗೂ ನಾನು ಕಳುಹಿಸಿ ಕೊಟ್ಟವನಲ್ಲ" (ಮತ್ತಾಯ 15:24) ಎಂಬುದು. ಈ ರಾಷ್ಟ್ರೀಯ ಕೃಪೆಯು ಅವರು ಆತನನ್ನು ತಿರಸ್ಕರಿಸಿ ಶಿಲುಬೆಗೆ ಹಾಕಿದಾಗ ಮುಕ್ತಾಯಗೊಂಡಿತು. ಆತನ ಶಿಲುಬೆಯ ಮರಣದ ಐದು ದಿನಗಳ ಮೊದಲು ಆತನು "ನಿಮ್ಮ ಆಲಯವು ನಿಮಗೆ ಬರಿದಾಗಿ ಬಿಟ್ಟಿದೆ" (ಮತ್ತಾಯ 23:38) ಎಂದು ಸ್ಪಷ್ಟವಾಗಿ ಪ್ರಕಟಿಸಿದ್ದಾನೆ.

ಯೇಸುವಿನ ಮರಣದಲ್ಲಿ ಕ್ರೈಸ್ತ ಯುಗ ಅಥವಾ ಸುವಾರ್ತಾ ಹಂಚಿಕೆ ಎಂಬ ನೂತನ ಯುಗವು ಪ್ರಾರಂಭವಾಯಿತು. ಅದರಲ್ಲಿ ನೀತಿನಿರ್ಣಯದ ಸುವರ್ತಮಾನವನ್ನು ಯೆಹೂದ್ಯರಿಗೆ ಮಾತ್ರವಲ್ಲ, ಎಲ್ಲಾ ಜನಾಂಗಗಳಿಗೂ ಘೋಷಿಸಬೇಕಾಗಿದೆ. ಯಾಕೆಂದರೆ, ಯೇಸುಕ್ರಿಸ್ತನು, ದೇವರ ಕೃಪೆಯಿಂದ ಎಲ್ಲಾ ಮಾನವರಿಗಾಗಿ ಮರಣವನ್ನು ಅನುಭವಿಸಿದನು. ಈ ಸುವಾರ್ತಾಯುಗದಲ್ಲಿ ಸಹಾ ವಿಶೇಷ ಕೃಪೆಗೊಳಗಾಗುವ ಒಂದು ವರ್ಗವಿದೆ ಮತ್ತು ಅವರಿಗೆ ವಿಶೇಷ ವಾಗ್ದಾನಗಳನ್ನು ಮಾಡಲಾಗಿದೆ; ಅವರುಗಳು ಯಾರೆಂದರೆ, ಯಾರು ಯೇಸುವನ್ನು ತಮ್ಮ ವಿಮೋಚಕನೂ, ರಕ್ಷಕನೂ ಎಂದು ಅಂಗೀಕರಿಸು ತ್ತಾರೋ, ಆತನ ಹೆಜ್ಜೆಜಾಡನ್ನು ಅನುಸರಿಸುತ್ತಾರೋ ಅವರುಗಳೇ. ಸುವಾರ್ತಾ ಘೋಷಣೆಯು ಅಲ್ಲಿಂದ ಇಲ್ಲಿಯವರೆಗೆ ಕಳೆದ ಹತ್ತೊಂಬತ್ತು ಶತಮಾನಗಳಿಂದಲೂ ಜಗತ್ತಿನಾದ್ಯಂತ ಸಾರಲ್ಪಡುತ್ತಿದೆ. ಹೀಗಾಗಿ ಅದು ಹೆಚ್ಚು ಕಡಿಮೆ ಪ್ರಪಂಚದ ಪ್ರತಿಯೊಂದು ರಾಷ್ಟ್ರಗಳಲ್ಲಿಯೂ ಬೋಧಿಸಲ್ಪಡುತ್ತಿದೆ ಎಂದು ಹೇಳಬಹುದು. ಅದು ರಾಷ್ಟ್ರಗಳನ್ನು ಮತಾಂತರಗೊಳಿಸಿಲ್ಲ (ಪರಿವರ್ತಿಸಿಲ್ಲ) – ಈ ಯುಗದಲ್ಲಿ ಆ ರೀತಿಯಾಗಿ ಮಾಡಲು ಉದ್ದೇಶಿಸಲ್ಪಟ್ಟಿಲ್ಲ; ಆದರೆ ಯೇಸು ಮುಂತಿಳಿಸಿದಂತೆ ಅದು ಇಲ್ಲಿ ಸ್ವಲ್ಪ, ಅಲ್ಲಿ ಸ್ವಲ್ಪ, ಈ ಎಲ್ಲದರಿಂದ 'ಚಿಕ್ಕ ಹಿಂಡನ್ನು' ಆಯ್ಕೆ ಮಾಡಲಾಗಿದೆ (ಲೂಕ 12:32). ಅವರಿಗೆ ತಂದೆ ದೇವರು ಮುಂದೆ ಬರುವ ಯುಗದಲ್ಲಿ ತನ್ನ ರಾಜ್ಯವನ್ನು ನೀಡಲು ಸಂತೋಷಿಸುವವನಾಗಿದ್ದಾನೆ.

ಕೆಟ್ಟದ್ದಾಗಿರುವ ಈಗಿನ ದುಷ್ಟ ಪ್ರಪಂಚವು ಈ ಯುಗದೊಂದಿಗೆ ಮುಕ್ತಾಯಗೊಳ್ಳುತ್ತದೆ. ದೇವರು ಹೀಗೆ ದುಷ್ಟತನದ ಪ್ರಾಬಲ್ಯ ಮತ್ತು ಆಳ್ವಿಕೆಯನ್ನು ತನ್ನ ಉದ್ದೇಶವು ತೋರಿಕೆಯಲ್ಲಿ ಹಾನಿಯಾಗುವಂತೆ ಅನುಮತಿಸುತ್ತಿದ್ದಾನೆ, ಆದಾಗ್ಯೂ, ಆತನ ಆಳವಾದ ಸಂಕಲ್ಪಗಳು ಸ್ಥಿರ ಮತ್ತು ನಿರ್ಣಾಯಕ ಯೋಜನೆಯ ಪ್ರಕಾರ ಮತ್ತು ಆತನು ನೇಮಿಸಿದ ಋತು ಸಮಯ ನಿಖರವಾದ ಕ್ರಮದಲ್ಲಿ ಅಚಲವಾಗಿ ಪ್ರಗತಿಯಲ್ಲಿವೆ. ಈ ಯುಗದ ಅಂತ್ಯದಲ್ಲಿ, ಮತ್ತು ಅದರ ಕ್ರಮಾಗತವಾದ ಸಹಸ್ರಮಾನದ ಉದಯದಲ್ಲಿ ಅದರ ಉತ್ತರಾಧಿಕಾರಿ ಯಾದ ಕ್ರಿಸ್ತನ ರಾಜ್ಯದ ಸ್ಥಾಪನೆಯ ಸಿದ್ಧತೆಯಲ್ಲಿ ಮತ್ತು ನೀತಿವಂತಿಕೆಯು ನೆಲೆಸಲಿರುವ ಬರಲಿರುವ ಲೋಕದ ಸ್ಥಾಪನೆಯ ಆರಂಭದಲ್ಲಿ ಸೈತಾನನನ್ನು ಬಂಧಿಸಲಾಗುವುದು ಮತ್ತು ಆತನ ಅಧಿಕಾರವನ್ನು ಕಿತ್ತೊಗೆಯಲಾಗುವುದು.

ಸಹಸ್ರಮಾನವು, ಸಹಸ್ರ ವರ್ಷವನ್ನು ಸಂಕೇತಿಸುವುದಾಗಿದ್ದು, ಸಾಮಾನ್ಯ ಒಪ್ಪಿಗೆಯಿಂದ ಇದು ಪ್ರಕಟನೆ 20:4 ರಲ್ಲಿ ಉಲ್ಲೇಖಿಸಿರುವ ಅವಧಿಯು ಕ್ರಿಸ್ತನ ಆಳ್ವಿಕೆಯ ಮೊದಲ ಸಾವಿರ ವರ್ಷಗಳಾಗಿವೆ. ಮುಂದಣ ಲೋಕದಲ್ಲಿ ಇದುವೇ ಮೊದಲ ಯುಗ. ಮಿಲಿಯಾಂತರದ ಯುಗದಲ್ಲಿ ಆದಾಮನ ಪತನದಿಂದ ಕಳೆದುಕೊಂಡದ್ದೆಲ್ಲವೂ ಪುನರ್‌ಸ್ಥಾಪಿತವಾಗುವುದು (ಅ.ಕೃ. 3:19–21) ಮತ್ತು ಅದು ಮುಕ್ತಾಯವಾಗುವುದರ ಮೊದಲು ಎಲ್ಲರ ಕಣ್ಣೀರುಗಳೂ ಒರೆಸಲ್ಪಡುತ್ತವೆ. ಅದರ ಎಲ್ಲೆ ಮೀರಿ, ಬರಲಿರುವ ಈ ಆಶೀರ್ವಾದದ ಯುಗದಲ್ಲಿ – ಇನ್ನು ಮರಣವಿರುವುದಿಲ್ಲ. ಇನ್ನು ದುಃಖವಾಗಲೀ, ಗೋಳಾಟವಾಗಲೀ, ಕಷ್ಟವಾಗಲೀ ಇರುವುದಿಲ್ಲ, ಮೊದಲಿದ್ದದ್ದೆಲ್ಲಾ ಇಲ್ಲದೇ ಹೋಗುವುದು" (ಪ್ರಕಟನೆ 21:4). ದೇವರ ಪ್ರಕಟನೆಗಳು ಇನ್ನು ಅದರ ಮುಂದಿನ ಭವಿಷ್ಯವನ್ನು ನಿರ್ದಿಷ್ಟವಾಗಿ ತಿಳಿಸಿಲ್ಲ ಮತ್ತು ಅಲ್ಲಿಯೇ ನಾವು ನಿಲ್ಲುತ್ತೇವೆ.

ನಾವಿಲ್ಲಿ ಕೇವಲ ಯುಗಗಳ ಯೋಜನೆಯ ಮುಖ್ಯ ಅಂಶಗಳ ಬಗ್ಗೆ ರೂಪರೇಖೆಯನ್ನಷ್ಟೇ (outline) ನೋಡಿದ್ದೇವೆ. ಅದನ್ನೂ ನಾವು ಎಷ್ಟು ಹೆಚ್ಚಾಗಿ ಪರೀಕ್ಷಿಸುತ್ತೇವೆಯೋ, ಅಷ್ಟೇ ಹೆಚ್ಚಾಗಿ ನಾವು ಅದರಲ್ಲಿ ಸಮರ್ಪಕವಾದ ಸಾಮರಸ್ಯವನ್ನು, ಸೌಂದರ್ಯ ಮತ್ತು ಕ್ರಮವನ್ನು ಕಂಡುಕೊಳ್ಳುತ್ತೇವೆ. ಪ್ರತಿಯೊಂದು ಯುಗಕ್ಕೂ ತನ್ನದೇ ಆದ ಭಾಗವನ್ನು ನೆರವೇರಿಸಬೇಕಾಗಿದ್ದು, ಇದು ಒಟ್ಟಾರೆಯಾಗಿ ದೇವರ ಯೋಜನೆಯ ಸಂಪೂರ್ಣ ಪ್ರಗತಿಗೆ ಅಗತ್ಯವಾಗಿದೆ. ಯೋಜನೆಯು ಪ್ರಗತಿ ಪಥದಲ್ಲಿರುತ್ತದೆ, ಯುಗದಿಂದ ಯುಗಕ್ಕೆ ದೈವಿಕ ಶಿಲ್ಪಿಯ ಮೂಲ ವಿನ್ಯಾಸದ ಭವ್ಯ ನೆರವೇರಿಕೆಗೆ ತಕ್ಕಂತೆ ಮೇಲಕ್ಕೂ, ಮುಂದಕ್ಕೂ ಕ್ರಮೇಣವಾಗಿ ಬಹಿರಂಗಗೊಳ್ಳುತ್ತಾ ಹೋಗುತ್ತದೆ. ಆತನು "ತನ್ನ ಮಹಿಮೆಯನ್ನು ಪ್ರಖ್ಯಾತಪಡಿಸಬೇಕೆಂದು ತನ್ನ ಇಷ್ಟದಂತೆ ನಡೆಸುವ ದೇವರಾಗಿದ್ದಾನೆ" (ಎಫೆಸ 1:11), ಈ ಮಹತ್ತರ ಯುಗಗಳಲ್ಲಿ ಒಂದಾದರೂ ಅದರ ಉದ್ದೇಶವನ್ನು ನೆರವೇರಿಸುವಲ್ಲಿ ಒಂದು ಘಂಟೆ ಹೆಚ್ಚಾಗಿಯೂ ಅಥವಾ ಕಡಿಮೆಯಾಗಿಯೂ ಇರುವುದಿಲ್ಲ. ದೇವರ ಸಂಪನ್ಮೂಲಗಳು ಅಪರಿಮಿತವಾದದ್ದಾದರೂ ಆತನು ಸಮಯ ಮತ್ತು ಸಾಧನಗಳೆಲ್ಲದರಲ್ಲೂ ಮಹಾ ಮಿತವ್ಯಯಿಯಾಗಿದ್ದಾನೆ ಮತ್ತು ಯಾವುದೇ ಶಕ್ತಿಯು, ಎಷ್ಟೇ ದುರುದ್ದೇಶ ಪೂರ್ವಕವಾಗಿದ್ದರೂ ಒಂದು ಕ್ಷಣಕ್ಕಾದರೂ ಆತನ ಉದ್ದೇಶವನ್ನು ವಿಳಂಬಿಸಲು ಅಥವಾ ನಿಷ್ಫಲಗೊಳಿಸಲು ಸಾಧ್ಯವಿಲ್ಲ. ಎಲ್ಲಾ ಸಂಗತಿಗಳೂ ಒಳ್ಳೇದಾಗಿರಲೀ, ಕೆಟ್ಟದ್ದಾಗಿರಲಿ ದೇವರ ನಿರ್ವಹಣೆಯಲ್ಲಿ ಮತ್ತು ಅತಿಕ್ರಮಣದಲ್ಲಿ ಆತನ ಚಿತ್ತವನ್ನು ನೆರವೇರುವ ದೆಸೆಯಲ್ಲಿ ಒಟ್ಟಾಗಿ ಕಾರ್ಯವೆಸಗುತ್ತವೆ.

ದೇವರ ಯೋಜನೆಯು ಗಹನವಾದ ಯಂತ್ರಕಾರ್ಯದ ಬಗ್ಗೆ ಸರಿಯಾದ ಶಿಕ್ಷಣವಿಲ್ಲದ ಮತ್ತು ಶಿಸ್ತಿಲ್ಲದ ಮನಸ್ಸಿಗೆ ಅದು ಅರಾಜಕತೆ ಗೊಂದಲ ಮತ್ತು ವೈಫಲ್ಯ ಎಂಬಂತೆ ತೋರುತ್ತದೆ, ಹೇಗೆ ಒಂದು ಮಗುವಿಗೆ ಗಹನವಾದ ಯಂತ್ರವು ಪೂರ್ಣವಾಗಿ ಇಲ್ಲವೇ ಭಾಗಶಃವಾಗಿ ಕಂಡುಬರುವಂತೆ ಇರುತ್ತದೆ. ಅದರಂತೆ ಪರಿಪಕ್ವವಲ್ಲದ ಹಾಗೂ ಅಶಿಕ್ಷಿತ ಮನಸ್ಸು ಅದನ್ನು ಗ್ರಹಿಸಲಾಗದು ಮತ್ತು ಅದರ ಚಕ್ರಗಳ ಮತ್ತು ಪಟ್ಟಿಯ (Belt) ವಿರುದ್ಧ ದಿಕ್ಕಿನ ಚಲನೆಗಳು ಗೊಂದಲಮಯವಾಗಿರುತ್ತವೆ. ಆದರೆ ಪರಿಪಕ್ವತೆ ಮತ್ತು ತನಿಖೆಗಳು ತೋರಿಬರುವ ಗೊಂದಲಗಳು ಸುಂದರವಾದ ಸಾಮರಸ್ಯವುಳ್ಳದ್ದಾಗಿದ್ದು, ಉತ್ತಮ ಫಲಿತಾಂಶದತ್ತ ಕಾರ್ಯವೆಸಗುತ್ತವೆ. ಆದಾಗ್ಯೂ, ಮಗುವು ನಂತರದಲ್ಲಿ ಅದರ ಕಾರ್ಯಾಚರಣೆಯನ್ನು ಅರ್ಥಮಾಡಿಕೊಳ್ಳುವ ಮೊದಲು ಯಂತ್ರವು ನಿಜವಾಗಿಯೂ ಯಶಸ್ವಿಯಾಗಿದೆ. ಹೀಗೆ ದೇವರ ಯೋಜನೆಯು ಈಗಲೂ, ಕಾಲಾಂತರಗಳಿಂದಲೂ ಯಶಸ್ವೀ ಕಾರ್ಯಾಚರಣೆಯಲ್ಲಿದೆ, ಮಾನವರು ಅದರ ಗಹನವಾದ ಕಾರ್ಯವನ್ನು ಅರ್ಥ ಮಾಡಿಕೊಳ್ಳುವಂತೆ ಮಾತ್ರವಲ್ಲ ಅದರ ಆಶೀರ್ವದಿತ ಫಲಿತಾಂಶಗಳನ್ನು ಅನುಭವಿಸುವಂತೆ ಅಗತ್ಯವಾದ ಶಿಸ್ತನ್ನು ಪಡಕೊಳ್ಳುತ್ತಿದ್ದಾರೆ.

ನಾವು ದೈವಿಕ ಯೋಜನೆಯ ಬಗ್ಗೆ ನಮ್ಮ ಅಧ್ಯಯನವನ್ನು ಮುಂದುವರಿಸುವಾಗ, ನಾವು ಈ ಯುಗಗಳನ್ನು ಮತ್ತು ಅದರ ಅನುಕ್ರಮವಾದ ವಿಶೇಷತೆಗಳನ್ನು ಮತ್ತು ಉದ್ದೇಶಗಳನ್ನು ನೆನಪಿನಲ್ಲಿಟ್ಟುಕೊಳ್ಳುವುದು ಅತ್ಯಗತ್ಯ; ಯಾಕೆಂದರೆ ಅವುಗಳ ಯಾವುದಾದರೂ ಒಂದರಲ್ಲಿ ಯೋಜನೆಯನ್ನು ಕಾಣಲಾಗದು, ಆದರೆ ಅವುಗಳೆಲ್ಲವೂ ಜೋಡಣೆಯುಳ್ಳದ್ದಾಗಿದ್ದರೂ ಸರಪಣಿಯಲ್ಲ, ಅನೇಕ ಜೋಡಣೆಗಳು (Links) ಒಟ್ಟಾಗಿ ಸರಪಣಿಯನ್ನುಂಟು ಮಾಡುತ್ತದೆ. ಪ್ರತಿಯೊಂದು ಭಾಗದ ವಿಶಿಷ್ಟ ಲಕ್ಷಣಗಳನ್ನು ಗಮನಿಸುವುದರ ಮೂಲಕ ನಾವು ಸಂಪೂರ್ಣ ಯೋಜನೆಯ ಸರಿಯಾದ ವಿಚಾರಗಳನ್ನು ಪಡೆದುಕೊಳ್ಳುತ್ತೇವೆ. ಹೀಗೆ ಸತ್ಯದ ವಾಕ್ಯಗಳನ್ನು ಸರಿಯಾಗಿ ಉಪದೇಶಿಸುವುದಕ್ಕೆ ನಾವು ಶಕ್ತರಾಗುತ್ತೇವೆ.

ಒಂದು ಯುಗಕ್ಕೆ ಸೇರಿದ ಅಥವಾ ಹಂಚಿಕೆಯ ಅವಧಿಗೆ ಸೇರಿದ ವಾಕ್ಯದ ಬಗ್ಗೆ ಹೇಳಿಕೆ ನೀಡುವ ವಾಕ್ಯವನ್ನು ಇನ್ನೊಂದಕ್ಕೆ ಅನ್ವಯಿಸಬಾರದು, ಯಾಕೆಂದರೆ ಒಂದು ಯುಗದ ಬಗ್ಗೆ ಹೇಳಿದ ಸಂಗತಿಗಳು ಯಾವಾಗಲೂ ಮತ್ತೊಂದಕ್ಕೆ ಸತ್ಯವಾಗದು. ಉದಾಹರಣೆಗೆ, "ಪ್ರಸ್ತುತ ಸಮಯದ ಬಗ್ಗೆ ದೇವರ ಜ್ಞಾನವು ಸಮಗ್ರ ಭೂಲೋಕವನ್ನೆಲ್ಲಾ ತುಂಬುವುದು" ಅಥವಾ "ನಿಮ್ಮ ನೆರೆಯವರಿಗೆ ಕರ್ತನನ್ನು ತಿಳಿಯಿರಿ ಎಂದು ಹೇಳುವುದು ಅಗತ್ಯವಿಲ್ಲ" ಎಂದು ಹೇಳುವುದು ಅಸತ್ಯವಾಗಿದೆ (ಯೆಶಾಯ 11:9, ಯರೇಮಿಯ 31:34)). ಈ ಯುಗದಲ್ಲಿ ಇದು ಸತ್ಯವಲ್ಲ, ಕರ್ತನು ಪುನಃ ಬರುವವರೆಗೆ ಬಂದ ಮೇಲೆ ತನ್ನ ರಾಜ್ಯವನ್ನು ಸ್ಥಾಪಿಸುವವರೆಗೆ ಇದು ಸತ್ಯವಾಗದು; ಯಾಕೆಂದರೆ ಈ ಯುಗದಲ್ಲೆಲ್ಲಾ, ಹಲವಾರು ಭ್ರಷ್ಟಗೊಳಿಸುವ ತಂತ್ರಗಾರಿಕೆಗಳಿದ್ದವು. ಯುಗದ ಅಂತ್ಯದಲ್ಲಿಯೂ ನಮಗೆ ಹೇಳಲಾಗುತ್ತದೆ. "ಕಡೇ ದಿವಸಗಳಲ್ಲಿ ಕಠಿಣ ದಿನಗಳು ಬರುವವೆಂಬುದನ್ನು ತಿಳಿದುಕೋ... ದುಷ್ಟರೂ ವಂಚಕರೂ ಇತರರನ್ನು ಮೋಸಮಾಡುತ್ತಾ ತಾವೇ

ಮೋಸಹೋಗುತ್ತಾ ಹೆಚ್ಚಾದ ಕೆಟ್ಟತನಕ್ಕೆ ಹೋಗುವರು" (2 ತಿಮೋ. 3:1,13). ಸಹಸ್ರಮಾನ ಯಗದಲ್ಲಿ ಮೆಸ್ಸೀಯನ ಆಡಳಿತದ ಫಲವಾಗಿ ನೀರು ಸಮುದ್ರವನ್ನು ತುಂಬಿಕೊಳ್ಳುವಂತೆ ಜ್ಞಾನ ಮತ್ತು ನೀತಿವಂತಿಕೆಯು ಭೂಮಿಯನ್ನು ತುಂಬಿಕೊಳ್ಳುವುದು.

ಈಗ ದೇವರ ರಾಜ್ಯವು ಸ್ಥಾಪಿತವಾಗಿದೆ ಮತ್ತು ಭೂಮಿಯ ಮೇಲೆ ಆಳ್ವಿಕೆ ನಡೆಸುತ್ತಿದೆ ಮತ್ತು ಆತನ ಚಿತ್ತವು ರಾಷ್ಟ್ರಗಳಲ್ಲಿ ನೆರವೇರುತ್ತಿದೆ ಎಂದು ಭಾವಿಸುವುದು. ಇದೇ ರೀತಿಯ, ತುಂಬಾ ಸಾಮಾನ್ಯವಾಗಿರುವ ಇದು ಸತ್ಯಕ್ಕಿಂತ ದೂರವಾದುದು. ಸರ್ವಸಾಧಾರಣವಾದುದು, ಯಾಕೆಂದರೆ, ಈ ಲೋಕದ ರಾಜ್ಯಗಳು ದಬ್ಬಾಳಿಕೆಯಿಂದ, ಅನ್ಯಾಯದಿಂದ ಮತ್ತು ವಂಚನೆಗಳಿಂದ ಬೆಂಬಲಗೊಂಡು, ಜನರ ಹೆಚ್ಚುತ್ತಿರುವ ಬುದ್ಧಿವಂತಿಕೆಯು ಅನುಮತಿಸುವವರೆಗೂ ಬಹಳ ಮಟ್ಟಿಗೆ ಪ್ರಬಲವಾಗಿವೆ. ಈ ಲೋಕದ ಪ್ರಸ್ತುತ ಅಧಿಪತಿಯಿಂದ ಸೈತಾನನು ಇನ್ನೂ ಸ್ಥಳಾಂತರವಾಗ ಬೇಕಾಗಿದೆ, ಆತನ ನಿಯಂತ್ರಣದಲ್ಲಿರುವ ಈ ರಾಜ್ಯಗಳು ನಮ್ಮ ಕರ್ತನ ಮತ್ತು ಆತನ ಅಭಿಷಕ್ತರ ರಾಜ್ಯಗಳಾಗಬೇಕು, ಆಗ ಆತನು ತಾನೇ ಮಹಾ ಅಧಿಕಾರವನ್ನು ಆಳ್ವಿಕೆಯನ್ನೂ ವಹಿಸಿಕೊಳ್ಳುತ್ತಾನೆ.

ನಂಬಿಗಸ್ತ ಮನೆಯವರಿಗೆ ಈಗ ಯುಕ್ತವಾಗಿರುವ ಬೆಳಕಿನಿಂದ, ಹಿಂದಿನ ಯುಗಗಳಿಂದಲೂ ನಮ್ಮ ದೇವರ ಕರ್ತನ ಭವ್ಯವಾದ ಹಂತಗಳನ್ನು, ಪದ್ಧತಿ ಮತ್ತು ಕ್ರಮವನ್ನು ನಾವು ಗ್ರಹಿಸಿಕೊಳ್ಳುತ್ತೇವೆ ಮತ್ತು ನಾವು ಒತ್ತಾಯಪೂರ್ವಕವಾಗಿ ಕೌಪರನ ಕೆಳಗಿನ ಸಾಲುಗಳನ್ನು ನೆನಪು ಮಾಡಿಕೊಳ್ಳುತ್ತೇವೆ. ಇದು ಜೀವಂತ ನಂಬಿಕೆಯಿಂದ ಪ್ರೇರಿತವಾಗಿವೆ ಮತ್ತು ಇದು ಸರ್ವಶಕ್ತ ಯೆಹೋವನ ಕುರುಹು (ಅಥವಾ ಜಾಡನ್ನು) ಪತ್ತೆಹಚ್ಚಲು ಸಾಧ್ಯವಾಗಲಿಲ್ಲ.

### He Will Make It Plain

"God moves in a mysterious way,
His wonders to perform :
He plants his footsteps in the sea,
And rides upon the storm.

Deep in the unfathomable mines
Of never-failing skill,
He treasures up his bright designs,
and works his sovereign will

"Ye fearful saints, fresh courage take;
The clouds ye so much dread
Are big with mercy, and shall break
In blessings on your head.

Judge not the Lord by feeble sense,
But trust him for his grace
Behind a frowning providence
He hides a smiling face

" His purpose will ripen fast.
Unfolding every hour
The bud may have the bitter taste,
But sweet will be flower.

"Blind unbelief is sure to err,
And scan his work in vain.
God is his own interpreter
And he will make it plain"

ದೇವರು ನಿಗೂಢವಾದ ರೀತಿಯಲ್ಲಿ ಸಾಗುತ್ತಾನೆ,
ತನ್ನ ಅದ್ಭುತಗಳನ್ನು ನಿರ್ವಹಿಸಲೋಸುಗ:
ಆತನು ತನ್ನ ಹೆಜ್ಜೆಗಳನ್ನು ಸಮುದ್ರದಲ್ಲಿ ನೆಡುತ್ತಾನೆ,
ಬಿರುಗಾಳಿಯ ಮೇಲೆ ಏರಿ ಹೋಗುತ್ತಾನೆ.

ಗ್ರಹಿಸಲಸಾಧ್ಯವಾದ ಗಣಿಗಳ ಆಳದಷ್ಟು
ಎಂದಿಗೂ ವಿಫಲವಾಗದ ಕೌಶಲ್ಯದಲ್ಲಿ,
ಆತನ ತನ್ನ ಉಜ್ವಲ ಸಂಕಲ್ಪಗಳನ್ನು ನಿಧಿ ಸಂಗ್ರಹಿಸುತ್ತಾನೆ,
ಮತ್ತು ಆತನ ಪರಮಾಧಿಕಾರ ಕಾರ್ಯವೆಸಗುತ್ತದೆ.

ಭಯಗ್ರಸ್ತ ಭಕ್ತರೇ, ಹೊಸದಾದ ಧೈರ್ಯವನ್ನು ತೆಗೆದುಕೊಳ್ಳಿ;
ನೀವು ಬಹು ಬೆದರುವ ಮೋಡಗಳು
ಕರುಣೆಯಿಂದ ದೊಡ್ಡದಾಗಿದೆ,
ನಿಮ್ಮ ಶಿರದ ಮೇಲೆ ಆಶೀರ್ವಾದವಾಗಿ ಒಡೆಯುತ್ತದೆ.

ದುರ್ಬಲ ಅರಿವಿನಿಂದ ಕರ್ತನನ್ನು ನಿರ್ಣಯಿಸದಿರಿ,
ಆತನ ಕೃಪೆಯಲ್ಲಿ ಭರವಸವಿಡಿ.
ಆತನ ಹುಬ್ಬುಗಂಟಿನ ಕೃಪೆಯ ಹಿಂದೆ
ತನ್ನ ಮಂದಹಾಸದ ಮುಖವನ್ನು ಮರೆ ಮಾಡಿಕೊಂಡಿದ್ದಾನೆ.

ಆತನ ಉದ್ದೇಶಗಳು ಶೀಘ್ರದಲ್ಲಿಯೇ ಫಲಿಸುವುದು,
ಪ್ರತಿ ಘಳಿಗೆ ಪ್ರಕಟಗೊಳ್ಳುವುದು.
ಮೊಗ್ಗು ಕಹಿ ರುಚಿ ಹೊಂದಿರಬಹುದು,
ಆದರೆ ಹೂವು ಸಿಹಿಯಾಗಿರುತ್ತದೆ.

ಕುರುಡು ನಂಬಿಕೆಯು ತಪ್ಪಾಗುವುದು ಖಚಿತ,
ಮತ್ತು ಆತನ ಕಾರ್ಯವನ್ನು ವ್ಯರ್ಥವಾಗಿ ಪರೀಕ್ಷಿಸುತ್ತದೆ,
ದೇವರು ತಾನೇ ತನ್ನ ನಿರೂಪಣಕಾರ
ಮತ್ತು ಆತನು ಅದನ್ನು. ಸರಳವಾಗಿಸುವನು.

"I know not the way that's before me,
Thde joys or the griefs it may bring;
What clouds are o'erchanging the future,
What flowers by the way side may spring.
But there's One who will journey beside me,
Nor in weal nor in woe will forsake:
And this is my solace and comfort.,
'He knoweth the way that I take"

ನನ್ನ ಮುಂದಿರುವ ದಾರಿ ನನಗೆ ತಿಳಿಯದು,
ಅದು ತರಬಹುದಾದ ಸಂತೋಷವನ್ನು ದುಃಖವನ್ನು;
ಯಾವ ಮೋಡಗಳು ಭವಿಷ್ಯವನ್ನು ಆವರಿಸುತ್ತಿವೆಯೋ,
ಯಾವ ಹೂಗಳು ದಾರಿ ಬದಿಯಲ್ಲಿ ಅರಳುವುದೊ,
ಆದರೆ ನನ್ನ ಪಕ್ಕದಲ್ಲಿ ಪ್ರಯಾಣಿಸವವನೊಬ್ಬನಿದ್ದಾನೆ,
ಯಾವ ಸುಖದಲ್ಲೂ ಅಥವಾ ದುಃಖದಲ್ಲೂ ನನ್ನನ್ನು ತೊರೆಯನು;
ಇದುವೇ ನನ್ನ ಸಮಾಧಾನ ಮತ್ತು ಸಾಂತ್ವನ
''ನಾನು ಹೋಗುವ ದಾರಿ ಆತನಿಗೆ ಗೊತ್ತಿದೆ''

* * * * * * *

# ಅಧ್ಯಯನ – 5 Study V

## “ಈ ವಾಕ್ಯವು ಹಿಂದಿನ ಯುಗಗಳಿಂದಲೂ ತಲತಲಾಂತರಗಳಿಂದಲೂ ಮರೆಯಾಗಿತ್ತು; ಈಗಿನ ಕಾಲದಲ್ಲಿ ದೇವಜನರಿಗೆ ತಿಳಿಸಲ್ಪಟ್ಟಿದೆ” (ಕೊಲೊಸ್ಸೆ 1:26)

## "The Mystery hid from Ages and from Generations, But Now made manifest to His Saints" - Col. 1:26

**ಮೊದಲನೆಯ ವಾಗ್ದಾನದ ಮಿನುಗುವ ಬೆಳಕು – ಅಬ್ರಹಾಮನಿಗೆ ಮಾಡಿದ ವಾಗ್ದಾನ – ನಿರೀಕ್ಷೆಯು ಮುಂದೂಡಲಾಯಿತು –ರಹಸ್ಯವು ಪಂಚಾಶತ್ತಮದಂದು ಬಹಿರಂಗಗೊಳ್ಳಲು ಪ್ರಾರಂಭವಾಯಿತು – ಈ ಧರ್ಮರಹಸ್ಯವು ಯಾವುದು? ಯಾಕೆ – ಇಷ್ಟು ದೀರ್ಘಕಾಲ ರಹಸ್ಯವಾಗಿ ಇಡಲಾಗಿತ್ತು? – ಈಗಲೂ ಪ್ರಪಂಚದವರಿಗೆ ಧರ್ಮರಹಸ್ಯವಾಗಿಯೇ ಅದೆ – ಸೂಕ್ತ ಸಮಯದಲ್ಲಿ ಎಲ್ಲರಿಗೂ ಪ್ರಕಟವಾಗುವಂತೆ ಮಾಡಲಾಗುವುದು – ಯಾವಾಗ ಈ ಧರ್ಮರಹಸ್ಯವು ಕೊನೆಗೊಳ್ಳುತ್ತದೆ.**

ಮಾನವ ಕುಲವು ಕೆಡುಕನ ಶಿಸ್ತಿಗೆ ಅಧೀನವಾಗಿರುವಾಗ, ಅದರ ಅಗತ್ಯತೆಯನ್ನು ಅರ್ಥಮಾಡಿಕೊಳ್ಳಲು ಅಸಮರ್ಥವಾಗಿರುವಾಗ, ದೇವರು ಅವರನ್ನು ಬರಲಿರುವ ವಿಮೋಚಕನ ಮೂಲಕವಾಗಿ ಪುನರ್ವಶಪಡಿಸಿಕೊಂಡು ಆಶೀರ್ವದಿಸುವ ತನ್ನ ಉದ್ದೇಶವನ್ನು ಪದೇ ಪದೇ ವ್ಯಕ್ತಪಡಿಸುತ್ತಾನೆ. ಆದರೆ, ಆ ವಿಮೋಚಕನು ಯಾರು ಎಂಬುದು ನಾಲ್ಕು ಸಾವಿರ ವರ್ಷದವರೆಗೆ ರಹಸ್ಯವಾಗಿತ್ತು, ಅದು ಕ್ರೈಸ್ತ ಯುಗ ಅಥವಾ ಸುವಾರ್ತಾಯುಗದ ಪ್ರಾರಂಭದಲ್ಲಿ ಕರ್ತನಾದ ಯೇಸುವಿನ ಪುನರುತ್ಥಾನದ ನಂತರವೇ ಬಯಲಾಯಿತು.

ನಮ್ಮ ಮೂಲ ತಂದೆತಾಯಿಗಳಿಂದ ನಿತ್ಯಜೀವನ ಮತ್ತು ಏದೇನಿನ ಸಂತೋಷವನ್ನು ಮುಟ್ಟುಗೋಲು ಹಾಕಿಕೊಂಡ ಸಮಯಕ್ಕೆ ಹಿಂದಿರುಗಿ ನೋಡುವಾಗ, ನಾವು ಅವರನ್ನು “ಸ್ತ್ರೀಯ ಸಂತಾನವು ಸರ್ಪದ ತಲೆಯನ್ನು ಜಜ್ಜುವುದು” ಎಂಬ ಅಸ್ಪಷ್ಟ ಹೇಳಿಕೆಯನ್ನು ಹೊರತುಪಡಿಸಿ ಬೇರೆ ಯಾವುದೇ ನಿರೀಕ್ಷೆ ಇಲ್ಲದೆ ಕೇವಲ ದುಃಖ ತುಂಬಿದ ಪಾಪದ ದಂಡನೆಯಲ್ಲಿರುವುದನ್ನು ಕಾಣುತ್ತೇವೆ. ನಂತರದ ಬೆಳವಣಿಗೆಗಳ ಬೆಳಕಿನಲ್ಲಿ ಇದು ನಮಗೆ ಬಹಳ ಮಹತ್ವವುಳ್ಳದ್ದಾಗಿದ್ದರೂ, ಅವರಿಗೆ ಅದು ಮಂಕಾಗಿ ಮಿನುಗುವ ಬೆಳಕಾಗಿತ್ತು. ಸುಮಾರು ಎರಡು ಸಾವಿರ ವರ್ಷಗಳು ಯಾವುದೇ ನೆರವೇರಿಕೆಯ ಸೂಚನೆಯಿಲ್ಲದೆ ಉರುಳಿ ಹೋಯಿತು.

ಸುಮಾರು ಎರಡು ಸಾವಿರ ವರ್ಷಗಳ ನಂತರ, ದೇವರು ಅಬ್ರಹಾಮನನ್ನು ಕರೆದನು ಮತ್ತು ಆತನ ಸಂತಾನವು ಭೂಲೋಕದ ಎಲ್ಲಾ ಕುಟುಂಬಗಳನ್ನೂ ಆಶೀರ್ವದಿಸುವುದು ಎಂದು ವಾಗ್ದಾನ ಮಾಡಿದನು. ಇದರಿಂದ ದೇವರು ತಾನು ಹಿಂದೆ ವ್ಯಕ್ತಪಡಿಸಿದ ವಾಗ್ದಾನಕ್ಕೆ ಅಂಟಿಕೊಂಡಿದ್ದಿರಬಹುದೆಂದು, ಈಗ ಅದನ್ನು ನೆರವೇರಿಸಲಿದ್ದಾನೆ ಎಂಬುದು ತೋರುತ್ತದೆ. ಸಮಯವು ವೇಗವಾಗಿ ಕಳೆಯಿತು; ವಾಗ್ದಾನ ಮಾಡಿದ ಕಾನಾನ್ ದೇಶವು ಇನ್ನೂ ಆತನ ವಶದಲ್ಲಿರಲಿಲ್ಲ; ಅವರಿಗೆ ಇನ್ನೂ ಸಂತಾನವಿರಲಿಲ್ಲ, ಅಬ್ರಹಾಮ ಮತ್ತು ಸಾರಯಳು ವೃದ್ಧರಾಗುತ್ತಿದ್ದರು. ಅಬ್ರಹಾಮನು ತಾನು ದೇವರಿಗೆ ಆತನ ವಾಗ್ದಾನವನ್ನು ನೆರವೇರಿಸುವುದಕ್ಕೆ ಸಹಾಯ ಮಾಡಬೇಕೆಂದು ಆಲೋಚಿಸಿದನು. ಹೀಗೆ ದಾಸಿಯಾದ ಹಾಗರಳ ಮೂಲಕ ಇಷ್ಮಾಯೇಲನನ್ನು ಪಡೆದನು. ಆದರೆ, ಆತನ ಈ ಸಹಾಯದ ಅಗತ್ಯತೆ ಇರಲಿಲ್ಲ. ಯಾಕೆಂದರೆ, ಸೂಕ್ತ ಸಮಯದಲ್ಲಿ ನಿರೀಕ್ಷೆಯ ಮತ್ತು ವಾಗ್ದಾನದ ಶಿಶುವಾದ ಇಸಾಕನು ಆತನ ಧರ್ಮಪತ್ನಿಯಾದ ಸಾರಳಲ್ಲಿ ಜನಿಸಿದನು. ಆಗ ವಾಗ್ದಾನ ಮಾಡಿದ ಆಡಳಿತಗಾರ ಮತ್ತು ರಾಷ್ಟ್ರಗಳನ್ನು ಆಶೀರ್ವದಿಸುವಾತನು ಬಂದಿದ್ದಾನೆಂದು ತೋರಿಬಂತು. ಆದರೆ, ಹಾಗಾಗಲಿಲ್ಲ; ವರ್ಷಗಳು ಉರುಳಿದವು, ದೇವರ ವಾಗ್ದಾನವು ವಿಫಲವಾದಂತೆ ಕಂಡುಬಂತು; ಇಸಾಕನು ತೀರಿಕೊಂಡನು ಮತ್ತು ಆತನ ಸಂತತಿಯಾದ ಯಾಕೋಬನೂ ತೀರಿಕೊಂಡನು. ಆದರೆ ಕೆಲವರು ಆ ವಾಗ್ದಾನದ ಮೇಲೆ ಇನ್ನೂ ದೃಢನಂಬಿಕೆಯನ್ನಿಟ್ಟಿದ್ದರು ಮತ್ತು ಇದು ದೇವರಿಂದ ಎತ್ತಿಹಿಡಿಯಲ್ಪಟ್ಟಿತು. ದೇವರು ಅಬ್ರಹಾಮನೊಡನೆ ಮಾಡಿಕೊಂಡ ಒಡಂಬಡಿಕೆಯು ಇಸಾಕನಿಗೆ ಪ್ರಮಾಣವಾಗಿಯೂ ಮತ್ತು ಯಾಕೋಬನಿಗೆ ದೃಢವಾಗಿಯೂ ಭರವಸೆಯನ್ನು ನೀಡುವುದಾಯಿತು – “ಆತನು ಅಬ್ರಹಾಮನ ಸಂಗಡ ಮಾಡಿಕೊಂಡ ಒಡಂಬಡಿಕೆಯು ದೇವರು ಪ್ರಮಾಣ ಮಾಡಿದ್ದು; ಅದು ರಾಜಶಾಸನದಂತಿರುವುದೆಂದು ಯಾಕೋಬನಿಗೂ, ಶಾಶ್ವತವಾದ ಒಡಂಬಡಿಕೆಯಾಗಿರುವುದೆಂದು

ಇಸ್ರಾಯೇಲನಿಗೂ ಮಾತುಕೊಟ್ಟನು" (1 ಪೂರ್ವ. 16:16–17).

ಯಾಕೋಬನ ಮರಣದ ಸಮಯದಲ್ಲಿ ಆತನ ಸಂತತಿಯವರನ್ನು ಮೊದಲಿಗೆ "ಇಸ್ರಾಯೇಲಿನ ಹನ್ನೆರಡು ಕುಲಗಳು" ಎಂದು ಕರೆಯಲಾಯಿತು. ಮತ್ತು ಇದು "ಆಯ್ಕೆಗೊಂಡ ಜನಾಂಗ"ವೆಂದು ದೇವರಿಂದ ಮಾನ್ಯತೆ ಹೊಂದಿತು (ಆದಿ. 49:28; ಧರ್ಮೋ. 26:5). ಈ ಜನಾಂಗದವರು ಒಟ್ಟಾಗಿ, ದೇವರು ವಾಗ್ದಾನಪಡಿಸಿದ ಅಬ್ರಹಾಮನ ಸಂತಿಯುವರಾಗಿ ಕಾನಾನನ್ನು ಹೊಂದಿಕೊಳ್ಳಬೇಕು, ಮತ್ತು ಅದನ್ನು ಆಳುತ್ತಾ ಲೋಕವನ್ನೆಲ್ಲಾ ಆಶೀರ್ವದಿಸಬೇಕೆಂಬ ಹಾರೈಕೆಯು ನಿಜವಾಗುವ ಕಾಲವು ಸನ್ನಿಹಿತವಾಗಿದೆ ಎಂದು ತೋರಿಬಂತು. ಅವರುಗಳು ಐಗುಪ್ತದ ಆಶ್ರಯದಲ್ಲಿ ಬಲಗೊಳ್ಳತೊಡಗಿದರು. ಆದರೆ ಐಗುಪ್ತರ ನಿಯಂತ್ರಣಕ್ಕೆ ಅವರು ಒಳಗಾಗಿ ದೀರ್ಘಕಾಲದ ದಾಸತ್ವಕ್ಕೆ ತಳ್ಳಲ್ಪಟ್ಟಾಗ ಅವರ ನಿರೀಕ್ಷೆಯು ಬಹುತೇಕ ಸ್ಫೋಟಗೊಂಡಿತು, ವಾಗ್ದಾನವು ಬಹುತೇಕ ಮರೆತುಹೋಯಿತು.

ನಿಜವಾಗಿಯೂ ದೇವರ ವಾಗ್ದಾನಗಳು ರಹಸ್ಯಗಳಿಂದ ಮರೆಮಾಡಲ್ಪಟ್ಟಿದೆ ಮತ್ತು ಆತನ ಮಾರ್ಗಗಳು ಕಂಡುಹಿಡಿಯುವುದು ಎಷ್ಟೋ ಅಶಕ್ಯವಾಗಿವೆ. ಹೇಗೂ, ಸೂಕ್ತ ಸಮಯದಲ್ಲಿ ಮಹಾ ವಿಮೋಚಕನಾದ ಮೋಶೆಯು ಬಂದನು. ಆತನ ಮೂಲಕವಾಗಿ ದೇವರು ಅವರ ಪರವಾಗಿ ಅದ್ಭುತ ಕಾರ್ಯಗಳನ್ನು ಮಾಡುತ್ತಾ ಅವರನ್ನು ದಾಸತ್ವದಿಂದ ಹೊರಗೆ ಕರೆದೊಯ್ದನು. ಕಾನಾನನ್ನು ಪ್ರವೇಶಿಸುವ ಮೊದಲೇ ಈ ಮಹಾನ್ ವಿಮೋಚಕನು ತೀರಿಕೊಂಡನು. ಆದರೆ ದೇವರ ಮುಖವಾಣಿಯಾಗಿ ಆತನು – "ದೇವರಾಗಿರುವ ಕರ್ತನು ನನ್ನನ್ನು ಏರ್ಪಡಿಸಿದಂತೆಯೇ ನಿಮ್ಮ ಸಹೋದರರಲ್ಲಿ ಮತ್ತೊಬ್ಬ ಪ್ರವಾದಿಯನ್ನು ನಿಮಗೆ ಏರ್ಪಡಿಸಿಕೊಡುವನು" (ಅ.ಕೃ. 3:22, ಧರ್ಮೋ. 18:15) ಎಂದು ಪ್ರಕಟಿಸಿದನು. ಇದು ದೇವರ ಯೋಜನೆಯ ಇನ್ನಷ್ಟು ಒಳನೋಟವನ್ನು ನೀಡುತ್ತಾ ಅವರ ದೇಶವು ಒಟ್ಟಾಗಿ ಒಂದು ವಿಧವಾಗಿ ಆಡಳಿತದ, ಆಶೀರ್ವದಿಸುವ ಭವಿಷ್ಯದ ಕಾರ್ಯವನ್ನು ಮಾಡುವುದು ಮಾತ್ರವಲ್ಲದೆ, ಅವರಿಂದ ಆರಿಸಿಕೊಂಡ ಒಬ್ಬಾತನು ವಿಜಯಕ್ಕೂ ಮತ್ತು ವಾಗ್ದಾನದ ನೆರವೇರಿಕೆಗೂ ನಡೆಸುವವನಾಗಿದ್ದಾನೆ ಎಂದು ತಿಳಿಸುವುದಾಗಿದೆ. ನಂತರದಲ್ಲಿ ಬಿಡಿಸುವಾತನು ಅಥವಾ ರಕ್ಷಕನು ಎಂದು ಸೂಚಿಸುವ ಹೆಸರುಳ್ಳ ಯೆಹೋಶುವನು ಅವರ ನಾಯಕನಾದನು. ಆತನ ನಾಯಕತ್ವದಲ್ಲಿ ಅವರು ಮಹಾವಿಜಯಗಳನ್ನು ಗೆದ್ದರು ಮತ್ತು ವಾಸ್ತವವಾಗಿ ಒಡಂಬಡಿಕೆಯಲ್ಲಿ ವಾಗ್ದಾನಪಡಿಸಿದ ದೇಶವನ್ನು ಪ್ರವೇಶಿಸಿದರು. ನಿಶ್ಚಯವಾಗಿಯೂ ಆಗ ನಿಜವಾದ ನಾಯಕನು ಬಂದಿದ್ದಾನೆಂದು ತೋರಿಬಂತು. ಮತ್ತು ವಾಗ್ದಾನವು ಪೂರ್ಣವಾಗಿ ನೆರವೇರುವುದು ಸಮೀಪವಾಯಿತು.

ಆದರೆ, ಯೆಹೋಶುವನೂ ತೀರಿಕೊಂಡನು ಮತ್ತು ಅವರು ದಾವೀದನನ್ನು, ನಂತರ ಸೊಲೊಮೋನನ್ನು ಅವರ ಅರಸನನ್ನಾಗಿ ನೀಡುವವರೆಗೆ ಒಂದು ರಾಷ್ಟ್ರವಾಗಿ ಮುಂದುವರೆಯಲಿಲ್ಲ. ಅಲ್ಲಿ ಅವರು ಮಹಿಮೆಯ ಉತ್ತುಂಗಕ್ಕೇರಿದರು. ಆದರೆ ಬಲು ಬೇಗ, ವಾಗ್ದಾನವು ನೆರವೇರುವ ಮೊದಲೇ ಅವರ ಅಧಿಕಾರವು ಕತ್ತರಿಸಲ್ಪಟ್ಟಿತು. ಮತ್ತು ಅವರು ಇತರ ರಾಷ್ಟ್ರಗಳ ಅಧೀನಕ್ಕೆ ಒಳಪಟ್ಟರು. ಕೆಲವರು ದೇವರ ವಾಗ್ದಾನವನ್ನು ಗಟ್ಟಿಯಾಗಿ ಹಿಡುಕೊಂಡರು. ಹೇಗೂ ಮತ್ತು ಇನ್ನೂ ಅವರು ಮಹಾ ವಿಮೋಚಕನಿಗಾಗಿ ಎದುರು ನೋಡುವವರಾಗಿದ್ದರು. ಅವರುಗಳಲ್ಲಿ ಮೋಶೆ, ಯೆಹೋಶುವ, ದಾವೀದ, ಸೊಲೋಮೋನ ಇವರುಗಳು ಕೇವಲ ನಮೂನೆಯಾಗಿದ್ದರು.

ಯೇಸುವಿನ ಜನನ ಸಮಯದಲ್ಲಿ ಎಲ್ಲಾ ಜನರು ಮೆಸ್ಸೀಯನ ನಿರೀಕ್ಷೆಯಲ್ಲಿದ್ದರು, ಬರಲಿರುವ ಇಸ್ರೇಲಿನ ರಾಜನು ಇಸ್ರಾಯೇಲ್ಯರ ಮೂಲಕ ಪ್ರಪಂಚದ ಅರಸನಾಗುವನೆಂಬ ನಿರೀಕ್ಷೆಯಲ್ಲಿದ್ದರು. ಆದರೆ ಇಸ್ರಾಯೇಲ್ಯರಿಗೆ ಬರಲಿರುವ ಅರಸನು ಮಹಿಮೆಯಿಂದಲೂ ಘನತೆಯೊಡನೆಯೂ ಬರುವ ನೆಂಬ ನಿರೀಕ್ಷೆ ಇತ್ತು. ಸಂಕೇತಗಳಿಂದ ಮತ್ತು ಪ್ರವಾದನೆಗಳಿಂದ ಅರಸನ ಶ್ರೇಷ್ಠತೆ ಮತ್ತು ಶಕ್ತಿಯ ಬಗ್ಗೆ ಪ್ರೇರಿತ್ತನಾಗಿದ್ದ ಕಾರಣ ಅವರಿಗೆ ಮತ್ತೊಂದು ಸಾಲಿನ ಸಂಕೇತಗಳು ಮತ್ತು ಪ್ರವಾದನೆಯನ್ನು ಕಡೆಗಣಿಸಲು ಕಾರಣವಾಯಿತು, ಇದು ಶ್ರಮೆಯ ಕಾರ್ಯವನ್ನು ಮತ್ತು ಮರಣ ಅಂದರೆ, ಆಶೀರ್ವಾದ ಬರುವ ಮೊದಲು ಪಾಪಿಗಳಿಗೆ ಈಡುಬಲಿಯ ಅಗತ್ಯವಿದೆ ಎಂಬದನ್ನು ಸೂಚಿಸುತ್ತದೆ. ಇದು ಅವರು ಐಗುಪ್ತದಿಂದ ಬಿಡುಗಡೆ ಹೊಂದುವ ಮೊದಲಿನ ಪಸ್ಕದಲ್ಲಿ ನಿಬಂಧನಾ ಒಡಂಬಡಿಕೆಯನ್ನು ನೀಡುವಾಗ ಪ್ರಾಣಿಗಳನ್ನು ಬಲಿಕೊಡುವುದರಲ್ಲಿ (ಇಬ್ರಿಯ 9:11–20; 10:8–18) ಮತ್ತು ಯಾಜಕವರ್ಗದವರು ಪ್ರತಿವರ್ಷ ಆಚರಿಸುತ್ತಿದ್ದ ಪಾಪಪರಿಹಾರಾರ್ಥವಾದ ಯಜ್ಞಗಳಲ್ಲಿ ಪೂರ್ವಭಾವಿಯಾಗಿ ಚಿತ್ರಿತವಾಗಿದೆ. ಅವರು "ಕ್ರಿಸ್ತನಿಗೆ ಬರಬೇಕಾಗಿದ್ದ ಬಾಧೆಗಳನ್ನೂ ಅವುಗಳ ತರುವಾಯ ಉಂಟಾಗುವ ಪ್ರಭಾವವನ್ನೂ ಮುಂದಾಗಿ ತಿಳಿಸಿದಾಗ ಆತನು ಯಾವ ಕಾಲವನ್ನು ಇಲ್ಲವೆ ಎಂಥಃ ಕಾಲವನ್ನು

ಸೂಚಿಸುವನೆಂಬುದನ್ನು ಅವರು ಪರಿಶೋಧನೆ ಮಾಡಿದರು" (1 ಪೇತ್ರ 1:11) ಎಂಬ ಪ್ರವಾದನೆಯ ಮಾತುಗಳನ್ನೂ ಕಡೆಗಣಸಿದರು. ಆದುದರಿಂದ ಕ್ರಿಸ್ತನು ತಾನೇ ಬಲಿಯಾಗಿ ಬಂದಾಗ, ಅವರು ಆತನನ್ನು ಅರಿಯಲಿಲ್ಲ; ಆತನ ದರ್ಶನದ ಸಮಯದ ಬಗ್ಗೆ ಅವರಿಗೆ ತಿಳಿದು ಬರಲಿಲ್ಲ (ಲೂಕ 19:44). ಆತನ ನಿಕಟ ಅನುಯಾಯಿಗಳು ಸಹಾ ಯೇಸು ತೀರಿಕೊಂಡಾಗ ದಾರುಣವಾದ ದಿಗ್ಭ್ರಾಂತಿಗೊಳಗಾಗಿ "ನಾವಾದರೋ ಇಸ್ರಾಯೇಲ್ ಜನರನ್ನು ಬಿಡಿಸತಕ್ಕವನು ಆತನೇ ಎಂದು ನಿರೀಕ್ಷಿಸಿಕೊಂಡಿದ್ದೆವು" (ಲೂಕ 24:21) ಎಂದು ದುಃಖದಿಂದ ಹೇಳಿದರು. ಸ್ಪಷ್ಟವಾಗಿ ಆತನ ಮೇಲಿನ ಅವರ ಭರವಸೆಯು ಬದಲಾಯಿತು. ತಮ್ಮ ನಾಯಕನ ಮರಣವು ಹೊಸ ಒಡಂಬಡಿಕೆಯ ನಿಶ್ಚಯತ್ವಕ್ಕೆ ಮತ್ತು ಅದರಡಿಯಲ್ಲಿ ಆಶೀರ್ವಾದಗಳು ಬರುವವೆಂದು, ವಾಗ್ದಾನದ ಒಡಂಬಡಿಕೆಯು ಭಾಗಶಃ ನೆರವೇರಿಕೆಯಾಗಿತ್ತೆಂಬುದನ್ನು ಅವರು ಅರ್ಥ ಮಾಡಿಕೊಳ್ಳದಾದರು. ಹೇಗೂ, ಆತನು ಸತ್ತವರೊಳಗಿಂದ ಜೀವಿತನಾಗಿ ಸಮಾಧಿಯಿಂದ ಎದ್ದು ಬಂದಾಗ, ಅವರ ಕಳೆಗುಂದಿದ್ದ ನಿರೀಕ್ಷೆಯು ಪುನರುಜ್ಜೀವಗೊಂಡಿತು (1 ಪೇತ್ರ 1:3) ಮತ್ತು ಆತನು ಅವರನ್ನು ಬಿಟ್ಟು ಹೋಗಲಿರುವಾಗ, ಅವರು ಆತನನ್ನು ತಮ್ಮ ದೀರ್ಘಕಾಲದಿಂದ ಹೃದಯಲ್ಲಿಟ್ಟು ಕಾಪಾಡಿಕೊಂಡು ಬಂದಿದ್ದ ಮತ್ತು ಹಲವು ಸಾರಿ ಮುಂದೂಡಲ್ಪಟ್ಟಿದ್ದ ನಿರೀಕ್ಷೆಯ ಬಗ್ಗೆ "ಸ್ವಾಮೀ, ನೀನು ಇದೇ ಕಾಲದಲ್ಲಿ ಇಸ್ರಾಯೇಲ್ಯರಿಗೆ ರಾಜ್ಯವನ್ನು ಪುನಃ ಸ್ಥಾಪಿಸಿಕೊಡುವಿಯೋ? (ಅ,ಕೃ. 1:6) ಎಂದು ಪ್ರಶ್ನಿಸಿದರು. ಅವರ ನಿರೀಕ್ಷೆಯು ಯಾವಾಗ ನೆರವೇರುವುದೆಂಬುದು ಅವರಿಗೆ ತಿಳಿದಿಲ್ಲವಾದರೂ ಆ ನಿರೀಕ್ಷೆಯು ಮುಖ್ಯವಾಗಿ ಸರಿಯಾಗಿಯೇ ಇತ್ತು ಎಂಬುದು" ತಂದೆಯು ಸ್ವಂತ ಅಧಿಕಾರದಲ್ಲಿಟ್ಟು ಕೊಂಡಿರುವ ಕಾಲಗಳನ್ನೂ ಸಮಯಗಳನ್ನೂ ತಿಳುಕೊಳ್ಳುವುದು ನಿಮ್ಮ ಕೆಲಸವಲ್ಲ" (ಅ.ಕೃ. 1:7) ಎಂಬ ಕರ್ತನ ಉತ್ತರದಿಂದ ವಿಶದವಾಗುತ್ತದೆ.

ಯೇಸುವಿನ ಆರೋಹಣದ ನಂತರ, ದೇವರ ಯೋಜನೆಯು ಯಾವ ತಿರುವನ್ನು ತೆಗೆದುಕೊಳ್ಳುತ್ತದೆ ಎಂಬದು ಶಿಷ್ಯರ ಪ್ರಶ್ನೆಯಾಗಿದ್ದಿರಬಹುದು. ನಾವು ಜ್ಞಾಪಕದಲ್ಲಿ ಇಟ್ಟುಕೊಳ್ಳಬೇಕಾಗಿರುವುದು ಏನೆಂದರೆ ರಾಜ್ಯವನ್ನು ಕುರಿತು ನಮ್ಮ ಕರ್ತನ ಬೋಧನೆಗಳು ಸಾಮ್ಯರೂಪದಲ್ಲಿಯೂ ಗೂಢಾರ್ಥದಲ್ಲಿಯೂ ಇರುತ್ತಿತ್ತು. ಆತನು ಅವರಿಗೆ "ನಾನು ನಿಮಗೆ ಹೇಳಬೇಕಾದದ್ದು ಇನ್ನೂ ಬಹಳ ಉಂಟು; ಆದರೆ ಸಧ್ಯಕ್ಕೆ ಅವನ್ನು ಹೊರಲಾರಿರಿ. ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡೆಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು. ಆತನು ತನ್ನಷ್ಟಕ್ಕೆ ತಾನೇ ಮಾತಾಡದೆ ಕೇಳಿದ ಮಾತುಗಳನ್ನೇ ಆಡುವನು; ಮತ್ತು ಮುಂದಾಗುವ ಸಂಗತಿಗಳನ್ನು ನಿಮಗೆ ತಿಳಿಸುವನು". "ಆದರೆ ಆ ಸಹಾಯಕನು ಅಂದರೆ ನನ್ನ ಹೆಸರಿನಲ್ಲಿ ತಂದೆಯು ಕಳುಹಿಸಿಕೊಡುವ ಪವಿತ್ರಾತ್ಮನೇ ನಿಮಗೆ ಎಲ್ಲವನ್ನು ಉಪದೇಶಿಸಿ ನಾನು ಹೇಳಿದ್ದನ್ನೆಲ್ಲಾ ನಿಮ್ಮ ನೆನಪಿಗೆ ತರುವನು" (ಯೋಹಾನ 16:12,13;14:26). ಹಾಗಾಗಿ, ಪಂಚಾಶತ್ತಮದ ಆಶೀರ್ವಾದವು ಬರುವವರೆಗೆ ಅವರಿಗೆ ಅರ್ಥವಾಗಲಿಲ್ಲ.

ಆದಾಗ್ಯೂ, ಅವರು ಮಾಡುತ್ತಿರುವ ಕೆಲಸದ ಬಗ್ಗೆ ಸ್ಪಷ್ಟವಾದ, ಪೂರ್ಣ ತಿಳುವಳಿಕೆ ಮತ್ತು ಮೂಲ ಒಡಂಬಡಿಕೆಯೊಂದಿಗಿನ ಸಂಬಂಧವನ್ನು ಪಡೆಯುವ ಮೊದಲು ಸ್ವಲ್ಪ ಸಮಯ ಹಿಡಿಯಿತು (ಅ.ಕೃ. 11:9; ಗಲಾತ್ಯ 2:2, 12,14). ಹೇಗಾದರೂ, ಅವರು ಸಂಪೂರ್ಣವಾಗಿ ಮತ್ತು ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳುವ ಮೊದಲು, ಅವರು ದೇವರ ಮುಖವಾಣಿಗಳನ್ನಾಗಿ ಉಪಯೋಗಿಸಲ್ಪಟ್ಟಿದ್ದನ್ನು ಕಾಣಬಹುದು. ಅವರ ಸ್ಫೂರ್ತಿದಾಯಕ ಮಾತುಗಳು ಬಹುಶಃ ಅವರು ತಾವೇ ಸ್ವತಃ ಇನ್ನೂ ಪೂರ್ಣವಾಗಿ ಗ್ರಹಿಸಿಕೊಳ್ಳದ ಸತ್ಯದ ಸ್ಪಷ್ಟವಾದ ಮತ್ತು ಆಳವಾದ ಹೇಳಿಕೆಗಳಾಗಿತ್ತು. ಉದಾಹರಣೆಗೆ, ಯಾಕೋಬನು ತನ್ನ ಪ್ರವಚನದಲ್ಲಿ "ದೇವರು ಮೊದಲಲ್ಲಿ ಅನ್ಯಜನರನ್ನು ಕಟಾಕ್ಷಿಸಿ ನೋಡಿ ತನ್ನ ಹೆಸರಿಗಾಗಿ (ಮದಲಗಿತ್ತಿ) ಅವರೊಳಗಿಂದ ಒಂದು ಪ್ರಜೆಯನ್ನು ಆರಿಸಿಕೊಂಡ ವಿಧವನ್ನು ಸಿಮಿಯೋನನು ವಿವರಿಸಿದನಷ್ಟೆ, ಅದಕ್ಕೆ ಪ್ರವಾದಿಗಳ ಮಾತುಗಳೂ ಒಪ್ಪುತ್ತವೆ. ಬರೆದಿರುವಂತೆ – ಇದಾದ ಮೇಲೆ ಅನ್ಯಜನಾಂಗದಿಂದ ಈ ಜನಗಳನ್ನು ಆಯ್ದು ನಂತರ ನಾನು ಹಿಂತಿರುಗಿ ಬಂದು ಬಿದ್ದುಹೋಗಿರುವ ದಾವೀದನ ಗುಡಾರವನ್ನು ಎತ್ತುವೆನು, ಭೂಮಿಯ ಪ್ರಭುತ್ವ ಅದರಲ್ಲಿ ಹಾಳಾದದ್ದನ್ನು ನಾನು ಸರಿಮಾಡಿಸಿ ಅದನ್ನು ನೆಟ್ಟಗೆ ನಿಲ್ಲಿಸುವೆನು" (ಅ.ಕೃ. 15: 14–16). ಎಂದು ಹೇಳಿದ್ದಾನೆ.

ದೇವರು ತನ್ನ ಅನುಗ್ರಹದ ಮೇರೆಗೆ ಹೇಗೆ ಪೇತ್ರನನ್ನು ಸುವಾರ್ತೆ ಸಾರಲು ಮೊದಲನೆಯ ಅನ್ಯಜನಾಂಗದ ಪರಿವರ್ತನೆಗೆ ಮತ್ತು ಪೌಲನನ್ನು ಸಾರ್ವಜನಿಕವಾಗಿ ಅನ್ಯಜನಾಂಗದವರಿಗೆ ಸುವಾರ್ತೆ ಸಾರಲು ಕಳುಹಿಸಿದ್ದನ್ನು ಯಾಕೋಬನು ಒದತೊಡಗಿದನು. ಈ ಕಾಲದಲ್ಲಿ ಯೆಹೂದ್ಯರೂ, ಅನ್ಯಜನರೂ ಸಮಾನವಾಗಿ ದಂಪೆ

ಹೊಂದುವವರಾದರು. ಅನಂತರದಲ್ಲಿ ಆತನು ಪ್ರವಾದನೆಗಳಲ್ಲಿಯೂ ಹಾಗೆ ಬರೆದಿರುವುದನ್ನು ಕಂಡುಕೊಂಡನು. ಮತ್ತು ಈ ಸುವಾರ್ತಾ ಯುಗದ ಕಾರ್ಯವು ಮುಗಿದ ಮೇಲೆ, ಶಾರೀರಿಕ ಇಸ್ರಾಯೇಲ್ಯರಿಗೆ ನೀಡಿದ ವಾಗ್ದಾನಗಳು ನೆರವೇರುವುವು. ಕ್ರಮೇಣವಾಗಿ, ಬಹುಹಿಂದಿನಿಂದ ಇದುವರೆಗೆ ಮುಚ್ಚಲ್ಪಟ್ಟಿದ್ದ ಮಹಾ ಧರ್ಮರಹಸ್ಯವು ದೇವರ ವಿಶೇಷ ಸ್ನೇಹಿತರಾದ ಕೆಲವು ಭಕ್ತರುಗಳಿಗೆ ಮಾತ್ರವೇ ಅರ್ಥವಾಗತೊಡಗಿತು. "ಅನ್ಯಜನಗಳ ವಿಷಯವಾದ ಈ ಮರ್ಮದ ಮಹಿಮಾತಿಶಯವು ಎಷ್ಟೆಂಬುದನ್ನು ದೇವರು ತನ್ನ ಜನರಿಗೆ ತಿಳಿಸಲಿಕ್ಕೆ ಮನಸ್ಸುಮಾಡಿದನು" (ಕೊಲೊಸ್ಸೆ 1:27) ಎಂದು ಪೌಲನು ಪ್ರಕಟಿಸಿದ್ದಾನೆ. ಮರ್ಮವು ಏನೆಂದರೆ :

## ಕ್ರಿಸ್ತನು ನಿಮ್ಮಲ್ಲಿದ್ದು ಪ್ರಭಾವದ ನಿರೀಕ್ಷೆಗೆ ಆಧಾರಭೂತವಾಗಿರುವುದೇ

## "Christ in You, The Hope of Glory"

ಇದು ಹಿಂದಿನ ಎಲ್ಲಾ ಯುಗಗಳಲ್ಲಿ ಮರೆಯಾಗಿದ್ದ ದೇವರ ಮಹಾ ರಹಸ್ಯವಾಗಿದೆ, ಈಗಲೂ ವಿಶೇಷ ವರ್ಗದವರನ್ನು ಅಥವಾ ಪ್ರತಿಷ್ಠೆ ಹೊಂದಿದ ವಿಶ್ವಾಸಿಗಳನ್ನು ಹೊರತುಪಡಿಸಿ ಬೇರೆಲ್ಲರಿಂದ ಅಡಗಿಸಲ್ಪಟ್ಟಿದೆ. ಆದರೆ "ಕ್ರಿಸ್ತನು ನಿನ್ನೊಳಗಿದ್ದಾನೆ?" ಅಂದರೆ ಏನು? "ದೇವರು ನಜರೇತಿನ ಯೇಸುವನ್ನು ಪವಿತ್ರಾತ್ಮದಿಂದಲೂ ಬಲದಿಂದಲೂ ಅಭಿಷೇಕಿಸಿದನು" (ಅ.ಕೃ. 10:38) ಎಂದು ನಾವು ತಿಳಿದುಕೊಂಡಿದ್ದೇವೆ, ಮತ್ತು ಈ ರೀತಿಯಲ್ಲಿ ನಾವು ಆತನನ್ನು ಅಭಿಷಕ್ತನಾದ ಕ್ರಿಸ್ತನು ಎಂದು ಕಂಡುಕೊಳ್ಳುತ್ತೇವೆ – ಕ್ರಿಸ್ತನು ಎಂಬ ಶಬ್ದವೇ 'ಅಭಿಷಕ್ತನು' ಎಂದು ಸೂಚಿಸುತ್ತದೆ. ಅಪೋಸ್ತಲನಾದ ಪೌಲನು "(ಪ್ರತಿಷ್ಠಿತ ವಿಶ್ವಾಸಿಗಳು) ನೀವು ಹೊಂದಿರುವ ಅಭಿಷೇಕವು ನಿಮ್ಮಲ್ಲಿ ನೆಲೆಗೊಂಡಿದೆ" (1 ಯೋಹಾನ 2:27). ಎಂದಿದ್ದಾನೆ. ಈ ರೀತಿಯಲ್ಲಿ ಈ ಸುವಾರ್ತಾ ಯುಗದ ಭಕ್ತರು ಅಭಿಷೇಕ ಹೊಂದಿದ ಸಮೂಹವಾಗಿದ್ದಾರೆ – ಈ ಲೋಕದ ಅರಸರುಗಳನ್ನಾಗಿ ಮತ್ತು ಯಾಜಕರುಗಳನ್ನಾಗಿ ದೇವರಿಗೋಸ್ಕರ ಅಭಿಷೇಕಿಸಿ ಸಲ್ಪಟ್ಟಿದ್ದಾರೆ. "ಆತನು ನಮ್ಮನ್ನು ಅಭೀಷೇಕಿಸಿ ಕ್ರಿಸ್ತನ ಅನ್ಯೋನ್ಯತೆಯಲ್ಲಿ ಸೇರಿಸಿದ್ದಾನೆ" (2 ಕೊರಿಂಥ 1:21), ತಮ್ಮ ಮುಖ್ಯ ಕರ್ತನಾದ ಯೇಸುವಿನೊಂದಿಗೆ ಅವರು ಯೆಹೋವನ ಅಭಿಷಕ್ತರಾಗಿದ್ದಾರೆ – "The Christ" (ಕ್ರಿಸ್ತನು ತಲೆ ಮತ್ತು ಶರೀರ).

ಯೋಹಾನನ ಈ ಬೋಧನೆಯೊಂದಿಗೆ ಸಾಮರಸ್ಯವುಳ್ಳವರಾಗಿ, ನಾವು ಸಹ ಅಭಿಷೇಕ ಹೊಂದಿದವರಾಗಿದ್ದೇವೆ. ಕಳೆದ ಹಲವು ಯುಗಗಳಿಂದ ಗುಪ್ತವಾಗಿ ಇಡಲ್ಪಟ್ಟಿದ್ದ ಈ ರಹಸ್ಯವು ಈಗ ಭಕ್ತರಿಗೆ ತಿಳಿಸಲ್ಪಟ್ಟಿದೆ. ಕ್ರಿಸ್ತನು ಅಂದರೆ ಅಭಿಷಕ್ತನು "ಒಬ್ಬನು ಮಾತ್ರವಲ್ಲ ಅನೇಕರಿಂದ ಕೂಡಿದ್ದಾನೆ. ಹೇಗೆ ದೇಹವು ಒಂದಾಗಿದ್ದರೂ ಅದಕ್ಕಿರುವ ಅಂಗಗಳು ಅನೇಕವಾಗಿದೆಯೋ, ಹೇಗೆ ದೇಹದ ಅಂಗಗಳೆಲ್ಲವೂ ಅನೇಕವಾಗಿದ್ದು ಒಂದೇ ದೇಹವಾಗಿರುವುದೋ, ಅದರಂತೆಯೇ ಅಭಿಷಿಕ್ತನು – The Christ (1 ಕೊರಿಂಥ 12:28 ಓದಿರಿ). ಯೇಸು ದೇಹದ ಶಿರಸ್ಸಾಗಿರುವಂತೆ ಅಥವಾ ಸಭೆಯ ಕರ್ತನಾಗಿರುವಂತೆ ಅಭಿಷೇಕ ಹೊಂದಿದ್ದಾನೆ. ಸಭೆಯು ಆತನ ದೇಹವಾಗಿದೆ ಅಥವಾ ಆತನ ಮದಲಗಿತ್ತಿಯಾಗಿದೆ ಎಂದು (ಎಫೆಸ 5:25–30) ರಲ್ಲಿ ವಿವರಿಸಿದೆ. ಅವರೆಲ್ಲರೂ ಒಟ್ಟಾಗಿ ಸೇರಿ ವಾಗ್ದತ್ತ "ಸಂತತಿ" – ಮಹಾ ವಿಮೋಚಕರಾಗುತ್ತಾರೆ. "ನೀವು ಕ್ರಿಸ್ತನವರಾಗಿದ್ದರೆ, ಅಬ್ರಹಾಮನ ಸಂತತಿಯವರೂ, ವಾಗ್ದಾನಕ್ಕನುಸಾರವಾಗಿ ಬಾಧ್ಯರೂ ಆಗಿದ್ದೀರಿ" (ಗಲಾತ್ಯ 3:29).

ಅಪೊಸ್ತಲನು ಕ್ರೈಸ್ತ ಸಭೆಯನ್ನು ಯಾವುದೇ ಊಹಾತ್ಮಕ ಹಕ್ಕೇಳಿಕೆಗಳ ವಿರುದ್ಧ ಎಚ್ಚರಿಕೆಯಿಂದ ಕಾಪಾಡುತ್ತಾನೆ – "ಆತನು ಸಮಸ್ತವನ್ನು ಕ್ರಿಸ್ತನ ಪಾದದ ಕೆಳಗೆ ಹಾಕಿದನು, ಇದಲ್ಲದೆ ಆತನನ್ನು ಎಲ್ಲಾದರ ಮೇಲೆ ಇರಿಸಿ ಸಭೆಗೆ ಶಿರಸ್ಸಾಗಿ ನೇಮಿಸಿದನು. ಸಭೆಯು ಆತನ ದೇಹವಾಗಿದೆ" (ಎಫೆಸ 1:22; ಕೊಲೊಸ್ಸೆ 1:18). ಆದಾಗ್ಯೂ, ಮಾನವ ದೇಹದ ಚಿತ್ರದಡಿಯಲ್ಲಿ ಆತನು ಸುಂದರವಾಗಿ, ಒತ್ತಾಯಪೂರ್ವಕವಾಗಿ ನಮ್ಮ ನಿಕಟ ಸಂಬಂಧವನ್ನು ತೋರಿಸುವವನಾಗಿದ್ದಾನೆ. ಇದೇ ಏಕತನವನ್ನು ಕ್ರಿಸ್ತನು ಸಹಾ ಕಲಿಸಿಕೊಟ್ಟು "ನಾನು ದ್ರಾಕ್ಷೆ ಬಳ್ಳಿ, ನೀವು ಕೊಂಬೆಗಳೂ" (ಯೋಹಾನ 15:5) ಎಂದಿದ್ದಾನೆ.

ಕ್ರಿಸ್ತನ ದೇಹದ ಅಂಗಗಳಾಗಿ ಕರ್ತನಾದ ಯೇಸುವಿನೊಂದಿಗೆ ನಮ್ಮ ಏಕತೆಯು, ಅಭಿಷಕ್ತಗೊಂಡ ಸಮೂಹವು ಪಿರಮಿಡ್ಡಿನ ಚಿತ್ರದಲ್ಲಿ ಉತ್ತಮವಾಗಿ ಉದಹರಿಸಲ್ಪಟ್ಟಿದೆ:–



ಮೇಲಿನ ಕಲ್ಲು (Top Stone) ತಾನೇ ಒಂದು ಸಮರ್ಪಕವಾದ ಪಿರಮಿಡ್ಡಾಗಿದೆ. ಅದರ ಕೆಳಗಡೆ ಇತರೆ ಕಲ್ಲುಗಳಿಂದ ನಿರ್ಮಿಸಿರಬಹುದು (ಮೇಲಿನ ಕಲ್ಲಿನ ಎಲ್ಲಾ ವಿಶಿಷ್ಟವಾದ ರೇಖೆಗಳ ಸಾಮರಸ್ಯದೊಂದಿಗೆ) ಇಡೀ ಸಮೂಹವು ಒಂದು ಸಮರ್ಪಕವಾದ ಪಿರಮಿಡ್ ಆಗುತ್ತದೆ. ಇದು ನಮ್ಮನ್ನು ಕ್ರಿಸ್ತನ ಅಂಗದ ಸದಸ್ಯರ ಸ್ಥಾನ "ಸಂತತಿ – "The Christ" ಎಂಬುದಾಗಿ ಬಹಳ ಸುಂದರವಾಗಿ ವಿವರಿಸಲಾಗಿದೆ. ನಮ್ಮ ಶಿರಸ್ಸಿನೊಡನೆ ಸಮರ್ಪಕವಾದ ಸಾಮರಸ್ಯದಲ್ಲಿ ಕೂಡಿಕೊಂಡು, ನಾವು ಜೀವವುಳ್ಳ ಕಲ್ಲುಗಳಾಗಿ ಪರಿಪೂರ್ಣವಾಗಿದ್ದೇವೆ; ಆತನಿಂದ ಪ್ರತ್ಯೇಕವಾದರೆ, ನಾವು ಏನೂ ಅಲ್ಲ.

ಪರಿಪೂರ್ಣನಾದ ಯೇಸುವು, ಬಹಳ ಉನ್ನತಕ್ಕೇರಿಸಲ್ಪಟ್ಟಿದ್ದಾನೆ. ಈಗ ನಾವು ಆತನ ಮಾದರಿಯನ್ನು ರೂಪಗೊಂಡವರಾಗಿರುವಂತೆ, ದೇವರ ಒಂದು ಕಟ್ಟಡವಾಗುವಂತೆ ನಮ್ಮನ್ನು ಆತನಿಗೆ ಪ್ರಸ್ತುತಿಗೊಳಿಸುತ್ತೇವೆ. ಸಾಧಾರಣವಾದ ಕಟ್ಟಡಕ್ಕೆ ಮುಖ್ಯವಾದ ಮೂಲೆಗಲ್ಲು ಇರುವುದಿಲ್ಲ. ಆದರೆ ನಮ್ಮ ಕಟ್ಟಡದಲ್ಲಿ ಅಂದು ಬಹುಮುಖ್ಯವಾದ ಮೂಲೆಗಲ್ಲಿದೆ. ಅದು ತುದಿಯ ಕಲ್ಲಾಗಿದೆ, ಬರೆದಿರುವಂತೆ: ನೀವು ಸಹ ಜೀವವುಳ್ಳ ಕಲ್ಲುಗಳಾಗಿದ್ದು ಆತ್ಮಸಂಬಂಧವಾದ ಮಂದಿರವಾಗಲಿಕ್ಕೆ ಕಟ್ಟಲ್ಪಡುತ್ತಾ ಇದ್ದೀರಿ. ಮತ್ತು ಯೇಸುಕ್ರಿಸ್ತನ ಮೂಲಕ ದೇವರಿಗೆ ಸಮರ್ಪಕವಾದ ಆತ್ಮೀಯ ಯಜ್ಞಗಳನ್ನು ಸಮರ್ಪಿಸುವುದಕ್ಕೆ* ಪವಿತ್ರ ಯಾಜಕವರ್ಗದವರಾಗಿದ್ದೀರಿ. ಇಗೋ, ಚಿಯೋನಿನಲ್ಲಿ ಮೂಲೆಗಲ್ಲನ್ನು ಇಡುತ್ತೇನೆ; ಅದು ಆಯಲ್ಪಟ್ಟದ್ದು, ಮಾನ್ಯವಾದದ್ದು" (1 ಪೇತ್ರ 2: 4–6). ಶಿರಸ್ಸಾಗಿರುವ ಯೇಸು ಮತ್ತು ಆತನ ದೇಹವಾಗಿರುವ ಸಭೆಯ ಅನ್ಯೋನ್ಯತೆಯು ಬಲುಬೇಗ ಪೂರ್ತಿಯಾಗುವುದು ನೆರವೇರುವುದೆಂಬುದನ್ನು ನಾವು ನಂಬುತ್ತೇವೆ.

ಮತ್ತು ಪ್ರಿಯರಾದವರೇ, ನಾವು ಅನೇಕ ಹೊಡೆತಗಳನ್ನೂ, ಹೆಚ್ಚಾದ ಹೊಳಪಿಸುವಿಕೆಗಳನ್ನೂ ತಾಳಿ ಕೊಳ್ಳಬೇಕಾಗುತ್ತದೆ – ಬಹಳಷ್ಟು ಪರಿವರ್ತನೆಗಳನ್ನು ನಾವು ಹೊಂದಬೇಕಾಗುತ್ತದೆ ಮತ್ತು ಆತನ ಮಾದರಿಗೆ ಹೆಚ್ಚು ಅನುವರ್ತಿಸಿಕೊಂಡು ಮಹಾಪ್ರವೀಣನಾದ ನಿರ್ಮಾಣಿಕನ ನಿರ್ದೇಶನದಲ್ಲಿ ಮುಂದುವರೆಯಬೇಕಾಗುತ್ತದೆ. ಮತ್ತು ನಮ್ಮಲ್ಲಿ ಪ್ರದರ್ಶಿಸಲ್ಪಟ್ಟ ನಮ್ಮ ನಿರ್ಮಾಣಿಕನ ಸಾಮರ್ಥ್ಯವನ್ನು ಮತ್ತು ಆದರ್ಶಗುಣಗಳನ್ನು ಹೊಂದುವದಕ್ಕಾಗಿ ಅದನ್ನು ವಿರೋಧಿಸುವ, ಆತನ ಇಚ್ಛೆಯು ನಮ್ಮಲ್ಲಿ ನೆರವೇರದಂತೆ ವಿಘ್ನಪಡಿಸುವ, ಯಾವುದೇ ವಿರೋಧಾತ್ಮಕ ಇಚ್ಛೆಗಳು ಇರದಂತೆ ನೋಡಿ ಕೊಳ್ಳಬೇಕಾಗುತ್ತದೆ. ನಾವು ಚಿಕ್ಕಮಕ್ಕಳಂತೆಯೂ, ನಮ್ರತೆಯುಳ್ಳವರಾಗಿಯೂ ಇರಬೇಕು, ನಮ್ರತೆಯನ್ನು ಧರಿಸಿಕೊಳ್ಳಬೇಕು – "ದೇವರು ಅಹಂಕಾರಿಗಳನ್ನು ಎದುರಿಸುತ್ತಾನೆ. ದೀನರಿಗಾದರೋ ಕೃಪೆಯನ್ನು ಅನುಗ್ರಹಿಸುತ್ತಾನೆ" (ಯೋಕೋಬ 4:6) – "ಹೀಗಿರುವುದರಿಂದ ದೇವರ ತ್ರಾಣವುಳ್ಳ ಹಸ್ತದ ಕೆಳಗೆ ನಮ್ಮನ್ನು ತಗ್ಗಿಸಿಕೊಳ್ಳುವುದಾದರೆ, ದೇವರು ಆತನನ್ನು ಸೂಕ್ತಕಾಲದಲ್ಲಿ ಉನ್ನತ ಸ್ಥಿತಿಗೆ ತಂದಂತೆ, ಆತನು ತಕ್ಕ ಕಾಲದಲ್ಲಿ ನಮ್ಮನ್ನೂ ಮೇಲಕ್ಕೆ ತರುವನು (ಫಿಲಿಪ್ಪಿ 2:8,9; 1 ಪೇತ್ರ 5:5).

ಇದು ನಿಜವಾಗಿಯೂ ಒಂದು ಅದ್ಭುತವಾದ ಸಂದೇಶವಾಗಿದೆ. ಮತ್ತು ನಾವು ನಮ್ಮ ಮಹಾ ಕರೆಯನ್ನು ವಿಚಾರಿಸಲು ದೇವರ ವಾಕ್ಯಕ್ಕೆ ಬರುವಾಗ, ಪ್ರವಾದಿಗಳೆಲ್ಲರೂ ನಮಗೆ ಬರಲಿರುವ ಕೃಪೆಯನ್ನು (ದಯೆ ಅಥವಾ ಆಶೀರ್ವಾದವನ್ನು) ಘೋಷಿಸುವಲ್ಲಿ ವಾಕ್ಚಾತುರ್ಯವುಳ್ಳವರಾಗಿದ್ದಾರೆಂದು ಕಂಡುಕೊಳ್ಳುತ್ತೇವೆ (1 ಪೇತ್ರ 1:10); ಸಂಕೇತಗಳು, ಸಾಮ್ಯಗಳು ಮತ್ತು ಇದುವರೆಗೆ ಗೂಢಾರ್ಥಗಳಾಗಿದ್ದು ಈಗ ಪ್ರಕಾಶಿಸುವಂತದ್ದಾಗಿ "ಇಕ್ಕಟ್ಟಾದ ಮಾರ್ಗ"ದ ಮೇಲೆ ತನ್ನ ಬೆಳಕನ್ನು ಚೆಲ್ಲುವದಾಗಿದೆ; ಅದರಲ್ಲಿ ಅಭಿಷಕ್ತನಾದ ಕ್ರಿಸ್ತನ ಜೊತೆಗಾರರು ಬಹಿರಂಗವಾಗಿ ಗೋಚರಿಸುವ ಬಹುಮಾನಕ್ಕಾಗಿ ಓಡಲು ಕರೆಯುತ್ತವೆ. ದೇವರು ಒಬ್ಬ ವಿಮೋಚಕನನ್ನು ಮಾತ್ರವೇ ಎಬ್ಬಿಸಲು ಉದ್ದೇಶಿಸಿರಲಿಲ್ಲ. ಆದರೆ ಅನೇಕ ಸದಸ್ಯರುಗಳುಳ್ಳ ಒಬ್ಬ ವಿಮೋಚಕನನ್ನು ಎಬ್ಬಿಸಲು ಉದ್ದೇಶಿಸಿದನೆಂಬುದು ಈ ಹಿಂದೆ ಎಂದೂ ಆಲೋಚಿಸದ ಮರ್ಮವಾಗಿದೆ. ಇದೊಂದು "ಮಹಾ ಕರೆ"ಯಾಗಿದ್ದು ಸುವಾರ್ತಯುಗದ ಪ್ರತಿಷ್ಠಿತ ವಿಶ್ವಾಸಿಗಳು ಮಾತ್ರವೇ ಇದನ್ನು ಹೊಂದಿಕೊಳ್ಳುವ ಭಾಗ್ಯಶಾಲಿಗಳು. ಯೇಸು ಇದನ್ನು ತನ್ನ ಶಿಷ್ಯರಿಗೆ ಅವರು ಸ್ವಾಭಾವಿಕ ವ್ಯಕ್ತಿಗಳಾಗಿದ್ದಾಗ ಬಿಚ್ಚಿ ಹೇಳಲು ಪ್ರಯತ್ನಿಸಲಿಲ್ಲ. ಆದರೆ ಅವರು ಪಂಚಾಶತ್ತಮ ದಿನದಂದು ಪವಿತ್ರಾತ್ಮ ಅಭಿಷೇಕ ಹೊಂದಿಕೊಂಡು ನೂತನ ಸ್ವಭಾವದಲ್ಲಿ ಜನ್ಮತಾಳುವವರೆಗೂ ಕಾದನು. ಪೌಲನ ವಿವರಣೆಯಿಂದ ನಮಗೆ ನೂತನ ಸೃಷ್ಟಿಗಳಲ್ಲದೆ ಬೇರೆ ಯಾರೂ ಈ ಮಹಾಕರೆಯನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲವೆಂದು ನಾವು ತಿಳುಕೊಳ್ಳುತ್ತೇವೆ. ಆತನು ಹೇಳುವುದೇನೆಂದರೆ –

* Sinaitic MS omits spiritual before sacrifices

"ಇದುವರೆಗೆ ಗುಪ್ತವಾಗಿದ್ದ ಸತ್ಯಾರ್ಥವನ್ನು ತಿಳಿಸುವಲ್ಲಿ ದೇವರ ಜ್ಞಾನವನ್ನೇ ಹೇಳುತ್ತೇವೆ. ಅದು ಯಾವದೆಂದರೆ ದೇವರು ತನ್ನ ಮಹಿಮೆಗಾಗಿ ಲೋಕೋತ್ಪತ್ತಿಗಿಂತ ಮೊದಲೇ ನೇಮಿಸಿ ಇದುವರೆಗೆ ಮರೆಮಾಡಿದ ಜ್ಞಾನವೇ (ಯೋಜನೆ). ಇದನ್ನು ಇಹಲೋಕಾಧಿಕಾರಿಗಳಲ್ಲಿ ಯಾರೂ ಅರಿಯಲಿಲ್ಲ (ಮುಖ್ಯರು) .... ಆದರೆ ಬರೆದಿರುವ ಪ್ರಕಾರ – ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ಧಮಾಡಿರುವಂಥದೆಲ್ಲವನ್ನು ಕಣ್ಣು ಕಾಣಲಿಲ್ಲ, ಕಿವಿ ಕೇಳಲಿಲ್ಲ. ಅದರ ಭಾವನೆಯು ಮನುಷ್ಯರ ಹೃದಯದಲ್ಲಿ ಹುಟ್ಟಲಿಲ್ಲ. ನಮಗಾದರೋ ದೇವರು ತನ್ನ ಆತ್ಮನ ಮೂಲಕ ಅದನ್ನು ಪ್ರಕಟಿಸಿದನು" (1 ಕೊರಿಂಥ 2:6–14).

ಪೌಲನು ಗಲಾತ್ಯದವರಿಗೆ ಬರೆದ ಪತ್ರಿಕೆಯಲ್ಲಿ ಈ ಸಮಸ್ತ ಮರ್ಮವನ್ನು ಬಿಚ್ಚಿ ಹೇಳುತ್ತಾನೆ ಮತ್ತು ಅಬ್ರಹಾಮನ ಒಡಂಬಡಿಕೆಯು ಯಾವ ರೀತಿಯಲ್ಲಿ ನೆರವೇರಬೇಕಾಗಿದೆ ಎಂಬುದನ್ನು ತೋರಿಸಿಕೊಡುತ್ತಾನೆ. ಇಸ್ರಾಯೇಲ್ಯರಿಗೆ ನೀಡಲ್ಪಟ್ಟ ನಿಬಂಧನೆಯು ಮೂಲ ಒಡಂಬಡಿಕೆಯ ಮಧ್ಯಪ್ರವೇಶ ಮಾಡುವುದಿಲ್ಲ ಎಂಬುದನ್ನು ಗಲಾತ್ಯ 3:15–18ರಲ್ಲಿ ತೋರಿಸಿದ್ದಾನೆ. ಅದರ 16ನೇ ವಚನದಲ್ಲಿ "ಆತನು ನಿನ್ನ ಸಂತತಿಗೆ ಎಂದು ಹೇಳಿ ಅನೇಕರನ್ನು ಸೂಚಿಸದೆ, ನಿನ್ನ ಸಂತತಿಗೆ ಎಂದು ಹೇಳಿ ಒಬ್ಬನನ್ನೇ ಸೂಚಿಸುತ್ತಾನೆ. ಆ ಒಬ್ಬನು ಕ್ರಿಸ್ತನೇ'' ಎಂದು ಬರೆಯಲ್ಪಟ್ಟಿದೆ. ಮತ್ತು ಅಭಿಪ್ರಾಯವನ್ನು ಮುಂದುವರೆಸುವುದನ್ನು ಈಗಾಗಲೇ ಪ್ರಸ್ತಾಪಿಸಲಾಗಿದೆ. ಕ್ರಿಸ್ತನು ಪವಿತ್ರಾತ್ಮನಿಂದ ಅಭಿಷಕ್ತರಾದವರೆಲ್ಲರನ್ನೂ ಸೇರಿಸಿಕೊಳ್ಳುತ್ತಾನೆ. ಆತನು ಕ್ರಿಸ್ತನಲ್ಲಿ ಸೇರುವುದಕ್ಕೆ ದೀಕ್ಷಾಸ್ನಾನ ಮಾಡಿಕೊಂಡಿರುವ ನೀವೆಲ್ಲರೂ ಕ್ರಿಸ್ತನನ್ನು ಧರಿಸಿಕೊಂಡಿರಿ.... ನೀವು ಕ್ರಿಸ್ತನವನಾಗಿದ್ದರೆ (ಯೇಸುವಿನೊಡನೆ) ಅಬ್ರಹಾಮನ ಸಂತತಿಯವರೂ ವಾಗ್ದಾನಕ್ಕನುಸಾರವಾಗಿ ಬಾಧ್ಯರೂ ಆಗಿದ್ದೀರಿ'' (ಗಲಾತ್ಯ 3:28–29) ಎಂದು ಹೇಳುವವನಾಗಿದ್ದಾನೆ. ಅದೇ ರೀತಿಯು ಆಲೋಚನೆಯನ್ನು ಅನುಸರಿಸಿ ಗಲಾತ್ಯ 4 ರಲ್ಲಿ ಅಬ್ರಹಾಮನು ಯೆಹೋವನ ನಮೂನೆಯಾಗಿದ್ದಾನೆ, ಸಾರಳು ವಾಗ್ದಾನದ ಅಥವಾ ಒಡಂಬಡಿಕೆಯ ನಮೂನೆಯಾಗಿದ್ದಾಳೆ, ಇಸಾಕನು ಕ್ರಿಸ್ತನ ನಮೂನೆ ಯಾಗಿದ್ದಾನೆ (ಶಿರಸ್ಸು ಮತ್ತು ಶರೀರ) ಎಂಬುದನ್ನು ತೋರಿಸಿಕೊಡುತ್ತಾನೆ, ನಂತರ 28ನೇ ವಚನದಲ್ಲಿ "ನಾವು ಇಸಾಕನಂತೆ ವಾಗ್ದಾನದ ಫಲವಾಗಿ ಹುಟ್ಟಿದ ಮಕ್ಕಳಾಗಿದ್ದೇವೆ" ಎಂದು ಬರೆದದೆ. ಈ ರೀತಿಯಲ್ಲಿ ಸುವಾರ್ತಾಯುಗದಲ್ಲಿ ಕ್ರಿಸ್ತನ ಅಭಿವೃದ್ಧಿಯಾಗುವವರೆಗೆ ದೇವರ ಯೋಜನೆಯು ನಮೂನೆಗಳಲ್ಲಿ ಅಡಗಿತ್ತು.

ಗೂಢಾರ್ಥಗಳನ್ನು ರಹಸ್ಯವಾಗಿಡುವ ಅವಶ್ಯಕತೆ ಇತ್ತು, ಇಲ್ಲದಿದ್ದರೆ ಅದನ್ನು ಹಾಗಿಡುವ ಅಗತ್ಯವಿರಲಿಲ್ಲ. ಯಾಕೆಂದರೆ ಮನುಕುಲಕ್ಕೆ ಯೋಜನೆಯನ್ನು ಪೂರ್ಣವಾಗಿ ತಿಳಿಯಪಡಿಸುವುದು ಅವರನ್ನು ಆಶಾಭಂಗ ಪಡಿಸುವದಾಗಿತ್ತು ಎಂಬ ಕಾರಣಕ್ಕಾಗಿ ಗುಪ್ತವಾಗಿಡುವುದು ಅವಶ್ಯವಾಗಿತ್ತು. ಜನರು ಅರಿತಿದ್ದರೆ, ಮಹಿಮೆಯುಳ್ಳ ಕರ್ತನನ್ನು ಅಥವಾ ಆತನ ಶರೀರವಾದ ಸಭೆಯನ್ನು ಶಿಲುಬೆಗೆ ಹಾಕಿಸುತ್ತಿರಲಿಲ್ಲ (1 ಕೊರಿಂಥ 2:8). ಯೋಜನೆಯನ್ನು ಲೋಕಕ್ಕೆ ಮರ್ಮವಾಗಿ ಇಡದೇ ಹೋಗಿದ್ದರೆ, ಕ್ರಿಸ್ತನ ಮರಣವು, ಮನುಷ್ಯ ವಿಮೋಚನೆಯ ಬೆಲೆಯಾಗಲು ಅಡ್ಡಿ ಬಂದಿರುತ್ತಿತ್ತು. ಮಾತ್ರವಲ್ಲದೆ ಸಭೆಯ ನಂಬಿಕಯು ಶೋಧನೆ, ಕ್ರಿಸ್ತನೊಡನೆ ಶ್ರಮದಲ್ಲಿ ಪಾಲು ಹೊಂದುವದೆಲ್ಲವೂ ಕೂಡ ತಡೆಯಲಾಗುತ್ತಿತ್ತು; ಏಕೆಂದರೆ "ಈ ಕಾರಣದಿಂದಾಗಿ ಲೋಕವು ನಮ್ಮನ್ನು (ಸಹಭಾಗಿಗಳು) ತಿಳಿದುಕೊಳ್ಳುವದಿಲ್ಲ, ಅದು (ಅದೇ ಕಾರಣಕ್ಕಾಗಿ) ಆತನನ್ನು ತಿಳಿದುಕೊಳ್ಳಲಿಲ್ಲವಲ್ಲಾ" (1 ಯೋಹಾನ 3:1).

ಈ ದೇವರ ಯೋಜನೆಯು ಮತ್ತು ಆ ಯೋಜನೆಯ ಮೂರ್ತರೂಪವಾಗಿರುವ ಕ್ರಿಸ್ತನು ಈ ಲೋಕಕ್ಕೆ ದೊಡ್ಡ ನಿಗೂಢವಾಗಿದ್ದರೂ, ಈ ಚಿಕ್ಕಹಿಂಡು ಒಂದು ನಿರ್ದಿಷ್ಟವಾದ ಕ್ರಮದಲ್ಲಿ ನಡೆಯಲು ಕರೆಯಲ್ಪಟ್ಟಿದ್ದು ಅದರ ಸದಸ್ಯರನ್ನು "ಸ್ವಕೀಯ ಜನರು" ಎಂದು ಗುರುತಿಸುತ್ತದೆ. ಬಹಳಷ್ಟು ಸಾಮರ್ಥ್ಯವುಳ್ಳ ನಜರೇತಿನ ಯೇಸುವಿನಂಥಾಃ ವ್ಯಕ್ತಿಯು ತನ್ನ ತಲಾಂತು ಮತ್ತು ಸಮಯವನ್ನು ಆತನು ಮಾಡಿದ ರೀತಿಯಾಗಿ ವ್ಯಯಮಾಡಬೇಕಾಗಿದ್ದು ಇಡೀ ಲೋಕಕ್ಕೆ ಒಂದು ಧರ್ಮರಹಸ್ಯವಾಗಿದೆ. ಪರಂತು, ಆತನು ತನ್ನ ಗಮನವನ್ನು ರಾಜಕೀಯ, ಕಾನೂನು, ವ್ಯಾಪಾರ ಅಥವಾ ಜನಪ್ರಿಯ ಧರ್ಮದ ಕಡೆಗೆ ತಿರುಗಿಸುತ್ತಿದ್ದರೆ, ಆತನು ಮಹಾ ಶ್ರೇಷ್ಠನೂ, ಮಾನ್ಯನೂ ಆಗಬಹುದಾಗಿತ್ತು. ಜನರ ಅಭಿಪ್ರಾಯದಲ್ಲಿ ಆತನು ಮೂರ್ಖತನದಿಂದ ತನ್ನ ಜೀವನವನ್ನು ವ್ಯರ್ಥವಾಗಿ ಕಳೆದನು ಮತ್ತು ಅವರು ಆತನಿಗೆ ಹಿಡಿದದೆ, ಹುಚ್ಚು ಹಿಡಿದದೆ ಎಂದು ಹೇಳಿದರು. ಆತನ ಜೀವನ ಮತ್ತು ಬೋಧನೆಗಳು ಅವರಿಗೆ ದೊಡ್ಡ ಮರ್ಮವಾಗಿತ್ತು. ಅವರಿಗೆ ಆತನನ್ನು ಅರ್ಥಮಾಡಿಕೊಳ್ಳಲಾಗಲೇ ಇಲ್ಲ.

ಅದೇ ರೀತಿಯಾಗಿ, ಅಪೋಸ್ತಲರುಗಳು ಮತ್ತು ಅವರ ಸಂಗಡಿಗರು ಸಹಾ ಅವರ ವ್ಯಾಪಾರದ ಪ್ರತೀಕ್ಷೆ (ದೂರದೃಷ್ಟಿ) ಮುಂತಾದವುಗಳನ್ನು ಬಿಟ್ಟು, ಹೀನೈಸಲ್ಪಟ್ಟು ಶಿಲುಬೆಯ ಮರಣಕ್ಕೆ ತುತ್ತಾದ ಯೇಸುಕ್ರಿಸ್ತನ ಮೂಲಕ ಪಾಪದ ಕ್ಷಮಾಪಣೆಯ ಬಗ್ಗೆ

ಬೋಧಿಸುತ್ತಿದ್ದುದರ ಕಾರಣ ಈ ಲೋಕದವರಿಗೆ ದೊಡ್ಡ ಮರ್ಮವಾಗಿದ್ದರು. ಪೌಲನು ತನ್ನ ಕೈಗಳಿಂದ ದುಡಿಯಲು ಮತ್ತು ಕ್ರಿಸ್ತನನ್ನು ಹಾಗೂ ಆತನ ಹೆಜ್ಜೆಜಾಡಿನಲ್ಲಿ ನಡೆಯಬೇಕಾದ ಎಲ್ಲ ನಂಬಿಗಸ್ತರಿಗೆ ಅದೃಶ್ಯ ಕಿರೀಟವನ್ನು ಬೋಧಿಸಲು ಉನ್ನತ ಸ್ಥಾನ ಮತ್ತು ಸಾಮಾಜಿಕ ಪ್ರಭಾವವನ್ನು ಬಿಟ್ಟುಕೊಟ್ಟನು. ಇದು ಎಷ್ಟರಮಟ್ಟಿಗೆ ಮರ್ಮವಾಗಿತ್ತೆಂದರೆ ಯಾರೋ ಒಬ್ಬರು – "ಪೌಲನೇ, ನೀನು ಮರುಳಾಗಿದ್ದೀ; ನೀನು ಬಹಳವಾಗಿ ಮಾಡುವ ಶಾಸ್ತ್ರ ವಿಚಾರಗಳೂ ನಿನ್ನನ್ನು ಮರುಳುಗೊಳಿಸುತ್ತದೆ" ಎಂದು ಹೇಳಿದರು (ಅ.ಕೃ. 26:2). ಅದೇ ರೀತಿಯಲ್ಲಿ ಯಾರು ಯಾರು ಈ ರೀತಿಯಲ್ಲಿ ಪೌಲನಂತೆ ಪ್ರಭುವಿನ ಹೆಜ್ಜೆಜಾಡನ್ನು ಅನುಸರಿಸಿದರೋ ಕ್ರಿಸ್ತನ ನಿಮಿತ್ತ ಮೂರ್ಖರೆಂದು ಎಣಿಸಲ್ಪಟ್ಟರು.

ಆದರೆ, ದೇವರ ಯೋಜನೆಯು ಸದಾ ಮರ್ಮವಾಗಿಯೇ ಮರೆಮಾಡಲ್ಪಟ್ಟಿರುವುದಿಲ್ಲ; ಸಹಸ್ರಮಾನದ ಉದಯವು ಮಾನವರಿಗೆ ದೇವರ ಪೂರ್ಣವಾದ ಬೆಳಕನ್ನು ತರುವುದಾಗಿದೆ. ಮತ್ತು "ಭೂಮಿಯಲ್ಲಿ ಯೆಹೋವನ ಮಹಿಮೆಯ ಜ್ಞಾನವು ತುಂಬಿಕೊಂಡಿರುವುದು" (ಹಬಕ್ಕೂಕ 2: 14). ತನ್ನ ರೆಕ್ಕೆಗಳಲ್ಲಿ ಗುಣಪಡಿಸುವಿಕೆಯೊಂದಿಗೆ ಉದ್ಭವಿಸುವ ನೀತಿ ಸೂರ್ಯನು, ಅಜ್ಞಾನದ ಕತ್ತಲೆಯನ್ನು ಹೋಗಲಾಡಿಸುವವನು, ಸಹಸ್ರಮಾನದ ಮಹಿಮೆ ಯಲ್ಲಿನ ಕ್ರಿಸ್ತನಾಗಿದ್ದಾನೆ – ಶಿರಸ್ಸು ಮಾತ್ರವಲ್ಲ, ಆತನ ದೇಹದ ಅಂಗಗಳೂ ಸಹಾ. ಬರೆದಿರುವಂತೆ, "ನಾವು ಆತನೊಂದಿಗೆ ಶ್ರಮೆಪಡುವವರಾದರೆ, ನಾವು ಸಹಾ ಆತನೊಂದಿಗೆ ಮಹಿಮೆ ಹೊಂದಿಕೊಳ್ಳುವೆವು – ಕ್ರಿಸ್ತನಿಗೆ ಸಂಬಂಧಿಸಿದ ಬಾಧೆಗಳಲ್ಲಿ ನಾವು ಪಾಲುಗಾರ ರಾಗುವುದಾದರೆ, ಆತನ ಮಹಿಮೆಯಲ್ಲಿಯೂ ಪಾಲುಗಾರರಾಗುವೆವು" ಮತ್ತು "ಆಗ ನೀತಿವಂತರು ತಮ್ಮ ತಂದೆಯ ರಾಜ್ಯದಲ್ಲಿ ಸೂರ್ಯನಂತೆ ಪ್ರಕಾಶಿಸುವರು" (ರೋಮಾ. 8:17; 2 ತಿಮೋ. 2:12; ಕೊಲೊಸ್ಸೆ 3:4; ಮತ್ತಾಯ 13:43).

ಈಗ, ಎಲ್ಲರಿಗೂ, ನೂತನ ಮನಸ್ಸಿಗೆ ಹುಟ್ಟಿದವರನ್ನು ಹೊರತುಪಡಿಸಿ "ಕ್ರಿಸ್ತನ ಮನಸ್ಸು" ಸ್ವೀಕರಿಸುವ ಮೂಲಕ, ನಾವು ನಂಬಿರುವ ವಾಗ್ದಾನಗಳು ಮತ್ತು ನಾವು ನೆನಪಿನಲ್ಲಿಟ್ಟುಕೊಂಡು ಪಾಲಿಸಿದ ನಿರೀಕ್ಷೆಗಳು, ದರ್ಶನಗಳೆಂಬಂತೆ ಕಂಡು ಬಂದು ಸ್ವೀಕರಿಸುವುದಕ್ಕೂ ಕಾರ್ಯವೆಸಗಲೂ ಅಸಾಧ್ಯವಾಗಿವೆ. ಬರಲಿರುವ ಯುಗದಲ್ಲಿ, ದೇವರು 'ಎಲ್ಲಾ ಮನುಷ್ಯರ ಮೇಲೆ ತನ್ನ ಆತ್ಮನನ್ನು ಸುರಿಸುವಂತೆ', ಪ್ರಸ್ತುತ ಯುಗದಲ್ಲಿಯೂ ಆತನು ತನ್ನ 'ದಾಸದಾಸಿಯರ ಮೇಲೂ ಸುರಿಸುವನು'. ಆಗ ನಿಜವಾಗಿಯೂ ಈಗ 'ಚಿಕ್ಕಹಿಂಡು' ಮಾತ್ರವೇ ಗ್ರಹಿಸುವ ವಾಗ್ದಾನಗಳನ್ನು ಎಲ್ಲರೂ ಅರ್ಥ ಮಾಡಿಕೊಳ್ಳುವರು ಮತ್ತು ಮೆಚ್ಚಿಕೊಳ್ಳುವರು. ವಿಧೇಯತೆಯೊಂದಿಗೆ ಮತ್ತು ಸಭೆಯ ಉನ್ನತಿ ಯೊಂದಿಗೆ "ಯಜ್ಞದ ಕುರಿಯಾದಾತನ ವಿವಾಹ ಕಾಲವು ಬಂತು. ಆತನಿಗೆ ವಿವಾಹವಾಗುವ ಕನ್ಯೆಯು ತನ್ನನ್ನು ಸಿದ್ಧಮಾಡಿಕೊಂಡಿದ್ದಾಳೆ. ಸಂತೋಷ ಪಡೋಣ, ಹರ್ಷಗೊಳ್ಳೋಣ, ಆತನನ್ನು ಘನಪಡಿಸೋಣ" (ಪ್ರಕಟನೆ 19:7) ಎಂದು ಹೇಳುತ್ತಾ ಹರ್ಷಿಸುವರು. ಅವರು ಸಭೆಯ ಮಹಿಮೆಯಲ್ಲಿ ಸಂತೋಷಿಸುವರು. ಅದರ ಮೂಲಕ ಆಶೀರ್ವಾದಗಳು ಆಗ ಅವರೆಡೆಗೆ ಹರಿದು ಬರುವವು. ಮತ್ತು ಅಭಿಷಕ್ತರಿಂದ (ಶಿರಸ್ಸು ಮತ್ತು ದೇಹ) ಬಾಧ್ಯವಾಗಿ ಪಡೆದ ಶ್ರೇಷ್ಟವಾಗಿಯೂ ಮತ್ತು ಅಮೂಲ್ಯವಾಗಿಯೂ, ಉತ್ಕೃಷ್ಟವಾಗಿಯೂ ಇರುವ ವಾಗ್ದಾನಗಳು ತಮ್ಮದಲ್ಲ, ಆದರೆ ನಮ್ಮ ಮೇಲೆ ನೆರವೇರಿದೆ, ಮತ್ತೆ ಸಭೆಯಲ್ಲಿ ವಿಶದಗೊಳಿಸಿರುವ ಪಾಠಗಳಿಂದ ಅವರುಗಳು ಆಶೀರ್ವಾದ ಪಡಕೊಳ್ಳುವರೆಂದು ಗ್ರಹಿಸಿಕೊಳ್ಳುತ್ತಾರೆ. ಆಗ ಅವರು ತಮಗಾಗಿ ಹಿಡಿಯಲ್ಪಟ್ಟಿರುವ ಆಶೀರ್ವಾದಗಳಿಗಾಗಿ ಓಡುವಾಗ, ಅವರು ಸಭೆಯ ಉದಾಹರಣೆಯಿಂದ ಲಾಭ ಪಡೆದುಕೊಳ್ಳುತ್ತಾರೆ. ಮತ್ತು ಆಕೆಯ ಪರವಾಗಿ ದೇವರನ್ನು ಮಹಿಮೆಪಡಿಸುತ್ತಾರೆ. ಆದರೆ ಈ ಜ್ಞಾನವು ದುರಾಶೆಯುನ್ನುಂಟು ಮಾಡುವುದಿಲ್ಲ. ಯಾಕೆಂದರೆ ವಿಷಯಗಳ ನೂತನ ಕ್ರಮದಡಿಯಲ್ಲಿ ಸರ್ವಸಂಪೂರ್ಣವಾದ ಮಾನವ ಸ್ವಭಾವಕ್ಕೆ ಅವರ ಕರೆಯು ಅವರಿಗೆ ಸಂಪೂರ್ಣವಾದ ತೃಪ್ತಿಯನ್ನೀಯುತ್ತದೆ ಮತ್ತು ಅದು ಸ್ವಭಾವದ ಬದಲಾವಣೆಗಿಂತ ಹೆಚ್ಚು ಅಪೇಕ್ಷಣೀಯವಾಗಿ ತೋರಿಬರುತ್ತದೆ.

ಆಗ ಈ 'ಧರ್ಮ ರಹಸ್ಯ'ವು ಮುಕ್ತಾಯ ಗೊಳ್ಳುತ್ತದೆ. ಯಾಕೆಂದರೆ, ಅದು ಕ್ರಿಸ್ತನಲ್ಲಿರುವ ದೇವರ ಆತ್ಮವಾಗಿದೆ ಮತ್ತು ನಮ್ಮಲ್ಲಿರುವ ಕ್ರಿಸ್ತನ ಆತ್ಮವಾಗಿದೆ ಎಂದು ಜಗತ್ತು ನೋಡುತ್ತದೆ – "ದೇವರು ಶರೀರಧಾರಿಯಾಗಿ ಪ್ರತ್ಯಕ್ಷನಾದನು, ಅದನ್ನು ಅವರು ಇದುವರೆಗೆ ತಪ್ಪಾಗಿ ಗ್ರಹಿಸಿದ್ದರು ಎಂಬುದನ್ನು ಲೋಕವು ಆಗ ಕಂಡುಕೊಂಡಿರುತ್ತದೆ. ಆಗ ಅವರು ನಾವು ಹುಚ್ಚರಲ್ಲ, ಮೂರ್ಖರಲ್ಲ, ಆದರೆ ನಾವು ಅವರಿಗೆ ಕಾಣಲಾಗದ, ಆದರೆ ನಿತ್ಯನಿರಂತರವಾದ ಶ್ರೀಮಂತಿಕೆಗಾಗಿ, ಗೌರವ ಮತ್ತು ಕಿರೀಟಕ್ಕಾಗಿ ಓಡುವ

ಉತ್ತಮವಾದ ಭಾಗವನ್ನು ಅಯ್ದುಕೊಂಡವರು ಎಂಬುದನ್ನು ಅವರುಗಳು ಕಾಣುತ್ತಾರೆ.

ನಿರ್ದಿಷ್ಟ ಸಮಯದಲ್ಲಿ, ದೇವರ ಈ ಧರ್ಮರಹಸ್ಯವು ಏಳನೆಯ (ಸಾಂಕೇತಿಕ) ತುತೂರಿಯು ಮೊಳಗುವ ಸಮಯದಲ್ಲಿ ಮುಗಿಯುತ್ತದೆ (ಪ್ರಕಟನೆ 10:7). ಇದು ಉಪಯೋಗಿಸಲ್ಪಡುವ ಎರಡೂ ಅರ್ಥದಲ್ಲಿನ ರಹಸ್ಯಗಳಿಗೂ ಅನ್ವಯವಾಗುತ್ತದೆ; ದೇವರ ಯೋಜನೆಯ ಮರ್ಮ ಅಥವಾ ರಹಸ್ಯ ಲಕ್ಷಣಗಳು ಆಗ ತಿಳಿಸಲ್ಪಡುತ್ತದೆ ಮತ್ತು ಸ್ಪಷ್ಟವಾಗಿ ಕಾಣುತ್ತದೆ. ಅಲ್ಲದೇ 'ದೇವರ ಮರ್ಮ'ವಾದ ಸಭೆಯು ಸಹಾ ಆ ಯೋಜನೆಗೆ ಸಾಕಾರಗೊಂಡಿದೆ. ಆಗ ಎರಡು ಸಹಾ ಮುಕ್ತಾಯ ಗೊಳ್ಳುತ್ತದೆ. ರಹಸ್ಯವಾಗಿದ್ದ ಗುಪ್ತ ಯೋಜನೆಯು ಕ್ರಿಸ್ತನ ದೇಹದ ಸದಸ್ಯರ ಸಂಖ್ಯೆಯು, ಸಂಪೂರ್ಣವಾಗಿ ಹವಣಿಸಿದ ನಂತರ ಪೂರ್ತಿಯಾಗಿದೆ. ಕ್ರಿಸ್ತನ ದೇಹವು ಮುಕ್ತಾಯಗೊಳ್ಳುತ್ತದೆ. ಈ ಯೋಜನೆಯು ರಹಸ್ಯವಾಗಿರುವುದು ನಿಂತುಹೋಗುತ್ತದೆ, ಯಾಕೆಂದರೆ, ಇನ್ನು ಮುಂದೆ ರಹಸ್ಯವನ್ನು ಶಾಶ್ವತವಾಗಿರಿಸುವ ಯಾವ ಉದ್ದೇಶವು ಇರುವದಿಲ್ಲ. ಇದುವರೆಗೆ ಗುಪ್ತವಾಗಿರಿಸಿದ್ದ, ವಾಗ್ದಾನಗಳಲ್ಲಿ, ನಮೂನೆಗಳಲ್ಲಿ, ಅಂಕಿಗಳಲ್ಲಿ ಅಡಗಿಸಿಟ್ಟಿದ್ದ ರಹಸ್ಯಗಳ ಶ್ರೇಷ್ಟತೆಯು ಮತ್ತು ಈ ರಹಸ್ಯದಲಿ ಸಹಭಾಗಿತ್ವಕ್ಕಾಗಿ ಕರೆಯಲ್ಪಟ್ಟ ಅದ್ಭುತವಾದ ಕೃಪೆಯು, ನಮಗೆ ತಿಳಿಯಪಡಿಸುವುದೇನೆಂದರೆ ಅದರ ಮುಕ್ತಾಯವು ಅನುಸರಿಸುತ್ತಿದೆ (ಎಫೆಸ 3:9), ಈ ಕಾರ್ಯಕ್ಕೆ ಯೆಹೋವನು ಆರು ಸಾವಿರ ವರ್ಷಗಳ ಕಾಲ ಮಾನವ ಜಾತಿಯವರನ್ನು ಎದುರು ನೋಡುತ್ತಾ ನಿರೀಕ್ಷೆಯಲ್ಲಿರುವಂತೆ ಮಾಡಿದ್ದನು. ಇದೊಂದು ಅಂಥಾಃ ಶ್ರೇಷ್ಟ ಸಿದ್ಧತೆಗೆ ಅಗಾಧವಾದ ಮಹಾ ಭವ್ಯವಾದ ಕಾರ್ಯವಾಗಿದೆ. ರಹಸ್ಯದ ಮುಸುಕನ್ನು ಹಿಂತೆಗೆದುಕೊಂಡಾಗ ಮತ್ತು ಆಶೀರ್ವಾದದ ಮಳೆ ಇಳಿಯುವಾಗ ನಾವು ಪ್ರಪಂಚದ ಮೇಲೆ ಆಶೀರ್ವಾದದಲ್ಲಿ ಏನನ್ನೂ ತಾನೇ ನಾವು ನಿರೀಕ್ಷಿಸಲಾಗದು! ಇದಕ್ಕಾಗಿ ಸಮಸ್ತ ಸೃಷ್ಟಿಯು ಇಂದಿನವರೆಗೂ ಪ್ರಸವವೇದನೆಪಡುತ್ತಾ ನರಳುತ್ತಾ ಇರುತ್ತದೆ. ನೋವಿನಲ್ಲಿ ವೇದನೆಯೊಂದಿಗೆ ಒಟ್ಟಾಗಿ ಇದುವರೆಗೆ ಈ ಮರ್ಮವು ಯಾವಾಗ ಮುಕ್ತಾಯ ಗೊಳ್ಳುತ್ತದೆಂದು ಕಾಯುತ್ತಿದೆ. ವಾಗ್ದಾನಗೊಂಡ ಸಂತಾನದ ಮೂಲಕವಾಗಿ ಅವರೆಲ್ಲರೂ ಆಶೀರ್ವದಿಸಲ್ಪಡುವುದಕ್ಕಾಗಿ ದೇವಪುತ್ರರ ಮಹಿಮೆಯು ಯಾವಾಗ ಪ್ರತ್ಯಕ್ಷವಾದೀತೆಂದು ಜಗತ್ತು ಬಹು ಲವಲವಿಕೆಯಿಂದ ಎದುರುನೋಡುತ್ತಿರುತ್ತದೆ (ರೋಮಾ. 8:19, 21,22)

## A LORD'S DAY OFFERING

I offer thee :
Every herat's throb, they are thine;
Every human tie of mine;
Every joy and every pain ;
Every act of mind or brain –
my blessed God !
Every hope and every fear;
Every smile and every tear
Every song and hymn
'Laudamus Te'
" Take them all , my blessed Lord,
Bind them with your Secret cord;
Glorify thyself in me.
Adored one !
Multiplied them by thy word;
Strenghten, bless, increase, my Lord
of perfect love !
Thou First and Last !"

## ಕರ್ತನ ದಿನದ ಕಾಣಿಕೆ

ನನ್ನ ಹೃದಯದ ಪ್ರತಿ ಮಿಡಿತವೂ; ನಿನಗರ್ಪಿಸುವೆ
ನನ್ನ ಎಲ್ಲಾ ಮಾನವ ಸಂಬಂಧಗಳು;
ಪ್ರತಿ ಸಂತೋಷ, ಹಾಗೂ ಪ್ರತಿ ನೋವು;
ಮನಸ್ಸಿನ ಅಥವಾ ಬುದ್ಧಿಯ ಪ್ರತಿಕ್ರಿಯೆಯೂ
ನಿನ್ನವೇ–
ನನ್ನ ದಿವ್ಯ ಕರ್ತನೇ !

ಪ್ರತಿ ನಿರೀಕ್ಷೆ! ಮತ್ತು ಪ್ರತಿ ಆತಂಕ,
ಪ್ರತಿಯೊಂದು ನಗೆ! ಮತ್ತು ಪ್ರತಿಯೊಂದು ಕಣ್ಣೀರು,
ಪ್ರತಿ ಹಾಡೂ! ಹಾಗೂ ಸಂಗೀತ,
ಸ್ತುತಿ ಸ್ತೋತ್ರಗಳ ಸ್ವರಗಳೆಲ್ಲವೂ,
'ಶ್ಲಾಘ್ಯ' ಸ್ತುತಿ ಪಾತ್ರನೇ
'Laudamus Te'

ಎಲ್ಲವನ್ನೂ ತೆಗೆದುಕೊ, ದಿವ್ಯ ಕರ್ತನೇ,
ಅವೆಲ್ಲವನ್ನು ನಿನ್ನ ರಹಸ್ಯ ಹಗ್ಗದಿಂದ ಬಿಗಿದು,
ನನ್ನಲ್ಲಿ ನಿನ್ನನ್ನು ಮಹಿಮೆಪಡಿಸಿಕೊ,
ಪರಮಪೂಜ್ಯನೇ ?

ನಿನ್ನ ವಾಕ್ಯದಿಂದ ಅದನ್ನು ಹೆಚ್ಚಿಸು,
ಬಲಗೊಳಿಸು, ಆಶೀರ್ವದಿಸು, ವೃದ್ಧಿಪಡಿಸು, ನನ್ನ
ಕರ್ತನೇ, ಪ್ರೀತಿಯಲ್ಲಿ ಪರಿಪೂರ್ಣಗೊಳಿಸು!
ನೀನೇ ಆದಿಯೂ, ಅಂತ್ಯವೂ !

* * * * * * *

# ಅಧ್ಯಯನ – 6 Study VI

# ನಮ್ಮ ಕರ್ತನ ಹಿಂದಿರುಗುವಿಕೆ – ಅದರ ಉದ್ದೇಶ, ಸಮಸ್ತವನ್ನೂ ಪುನರ್‌ವಶಪಡಿಸುವಿಕೆ

# OUR LORD'S RETURN - IT'S OBJECT, THE RESTITUTION OF ALL THINGS

**ನಮ್ಮ ಕರ್ತನ ದ್ವಿತೀಯಾಗಮನ ವೈಯುಕ್ತಿಕ ಮತ್ತು ಸಹಸ್ರಮಾನ ಪೂರ್ವ. ಪ್ರಥಮಾಗಮನದೊಂದಿಗಿನ ಅದರ ಸಂಬಂಧ – ಸಭೆಯ ಆಯ್ಕೆ ಮತ್ತು ಲೋಕದ ಪರಿವರ್ತನೆ – ಆಯ್ಕೆ ಮತ್ತು ಉಚಿತ ಕೃಪೆ – ನಿರೀಕ್ಷೆಯ ಬಂಧಿಗಳು – ಪುನರ್‌ವಶದ ಬಗ್ಗೆ ಪ್ರವಾದನೀಯ ಸಾಕ್ಷ್ಯಗಳು – ನಮ್ಮ ಕರ್ತನ ಹಿಂದಿರುಗುವಿಕೆಯು ಸ್ಪಷ್ಟವಾಗಿ ಸಭೆಯ ಮತ್ತು ಪ್ರಪಂಚದ ಭರವಸೆಯಾಗಿದೆ.**

"ಆತನು ನಿಮಗೆ ನೇಮಕವಾಗಿರುವ ಕ್ರಿಸ್ತನಾದ ಯೇಸುವನ್ನು ಕಳುಹಿಸಿಕೊಡುವನು. ಆದರೆ, ಸಮಸ್ತವನ್ನು ಸರಿ ಮಾಡುವ ಕಾಲವು ಬರುವ ತನಕ ಪರಲೋಕವೇ ಆ ಕ್ರಿಸ್ತನ ಸ್ಥಾನವಾಗಿರಬೇಕು. ಆ ಕಾಲದ ವಿಷಯವಾಗಿ ದೇವರು ಪೂರ್ವದಲ್ಲಿದ್ದ ತನ್ನ ಪರಿಶುದ್ಧ ಪ್ರವಾದಿಗಳ ಬಾಯಿಂದ ಹೇಳಿಸಿದ್ದಾನೆ" (ಅ.ಕೃ. 3:20–21).

ನಮ್ಮ ಕರ್ತನು ಯಾವುದಾದರೂ ಉದ್ದೇಶಕ್ಕಾಗಲೀ, ಯಾವುದಾದರೂ ರೀತಿಯಲ್ಲಿ ಯಾವುದಾದರೂ ಸಮಯದಲ್ಲಿ ತಾನು ಪುನಃ ಬರುತ್ತೇನೆಂಬುದನ್ನು ತನ್ನ ಶಿಷ್ಯರು ಅರ್ಥಮಾಡಿಕೊಳ್ಳಬೇಕೆಂದು ಉದ್ದೇಶಿಸಿದ್ದನು ಎಂಬುದಾಗಿ ನಾವು ಭಾವಿಸುತ್ತೇವೆ, ಮತ್ತು ಎಲ್ಲಾ ಪರಿಶುದ್ಧ ಗ್ರಂಥಗಳ ಪರಿಚಯವುಳ್ಳವರೂ ಸಹ ಇದನ್ನು ಒಪ್ಪಿಕೊಳ್ಳುತ್ತಾರೆ ಮತ್ತು ನಂಬುತ್ತಾರೆ. ನಿಜವಾಗಿ, ಯೇಸು "ಇಗೋ, ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ ಎಂದು ಹೇಳಿದನು" (ಮತ್ತಾಯ 28:20) ಮತ್ತು ಆತನು ತನ್ನ ಆತ್ಮನಿಂದ ಮತ್ತು ಆತನ ವಾಕ್ಯದ ಮೂಲಕ ನಿರಂತರವಾಗಿ ತನ್ನ ಸಭೆಯ ಸಂಗಡ ಇದ್ದಾನೆ, ಮಾರ್ಗದರ್ಶನ ಮತ್ತು ನಿರ್ದೇಶನಗಳನ್ನು ನೀಡುತ್ತಾ ಅದನ್ನು ಸಮಾಧಾನಗೊಳಿಸುತ್ತಾನೆ ಮತ್ತು ಆತನ ಭಕ್ತರುಗಳನ್ನು ಪೋಷಿಸುತ್ತಾನೆ ಮತ್ತು ಅವರ ಎಲ್ಲಾ ಬಾಧೆಗಳ ಮಧ್ಯದಲ್ಲಿಯೂ ಅವರನ್ನು ಉಲ್ಲಾಸಗೊಳಿಸುತ್ತಾನೆ. ಸಭೆಯು ತನ್ನ ಎಲ್ಲಾ ಮಾರ್ಗಗಳ ಬಗ್ಗೆ ಇರುವ ಕರ್ತನ ಜ್ಞಾನದ ವಿಷಯದಲ್ಲಿ, ಆತನ ಪಾಲನೆ ಮತ್ತು ಪ್ರೀತಿಯ ಬಗ್ಗೆ ಆಶೀರ್ವಾದದಾಯಕವಾದ ಪ್ರಜ್ಞೆಯುಳ್ಳದ್ದಾಗಿದ್ದರೂ, ಆತನು ವಾಗ್ದಾನ ಮಾಡಿರುವ ವ್ಯಕ್ತಿಗತ ಹಿಂದಿರುಗುವಿಕೆಯನ್ನು ಸದಾ ಹಂಬಲಿಸುತ್ತಾ ಇರುತ್ತದೆ. ಏಕೆಂದರೆ ಆತನು "ನಾನು ಹೋದರೆ, ಪುನಃ ಬರುವೆನು" (ಯೋಹಾನ 14:3) ಎಂದು ಹೇಳಿರುವುದು, ಖಂಡಿತವಾಗಿಯೂ ಆತನ ವ್ಯಕ್ತಿಗತವಾದ ಎರಡನೇ ಬರುವಿಕೆಯನ್ನು ಉಲ್ಲೇಖಿಸಿದ್ದಾನೆ.

ಕೆಲವರು ಆತನು ಪಂಚಾಶತ್ತಮದಲ್ಲಿ ಪವಿತ್ರಾತ್ಮನು ಇಳಿದು ಬರುವುದನ್ನು ಸೂಚಿಸಿದನು ಎಂತಲೂ, ಮತ್ತೆ ಕೆಲವರು, ಯೆರೂಸಲೇಮಿನ ನಾಶನ ಮುಂತಾದವುಗಳ ಕುರಿತಾಗಿಯೂ ಎಂಬು ಆಲೋಚಿಸುತ್ತಾರೆ. ಆದರೆ ಅವರು ಕಡೆಯ ಪುಸ್ತಕದಲ್ಲಿರುವ ಸುವ್ಯಕ್ತವಾದ ಸತ್ಯವನ್ನು ಕಡೆಗಣಿಸಿದ್ದಾರೆ. ಇವುಗಳು ಸ್ಪಷ್ಟವಾಗಿ, ಪಂಚಾಶತ್ತಮದ ಸುಮಾರು ಅರವತ್ತು ವರ್ಷಗಳ ನಂತರ, ಯೆರೂಸಲೇಮಿನ ನಾಶನದ ಇಪ್ಪತ್ತಾರು ವರ್ಷಗಳ ನಂತರ ಬರೆಯಲ್ಪಟ್ಟ ಸತ್ಯವೇದದ ಕಡೆಯ ಪುಸ್ತಕವಾದ ಪ್ರಕಟನೆಯಲ್ಲಿ, ಮತ್ತು ಸತ್ತವನಾಗಿದ್ದು ಈಗ ಜೀವಂತನಾಗಿ ಎದ್ದು ಬಂದಿರುವಾತನು ಮುಂದೆ ಇನ್ನೂ ಆಗಬೇಕಾಗಿರುವ ಸಂಗತಿಗಳ ಬಗ್ಗೆ "ಇಗೋ, ಬೇಗ ಬರುತ್ತೇನೆ, ನಾನು ಪ್ರತಿಯೊಬ್ಬನಿಗೆ ಅವನವನ ನಡತೆಯ ಪ್ರಕಾರ ಕೊಡತಕ್ಕ ಪ್ರತಿಫಲವು ನನ್ನ ಕೈಯಲ್ಲಿ ಅದೆ" (ಪ್ರಕಟನೆ 22: 12). "ನಿಜವಾಗಿ ಬೇಗ ಬರುತ್ತೇನೆ ಎಂದು ಹೇಳುತ್ತಾನೆ" ಮತ್ತು ಪ್ರೇರಿತನಾದ ಯೋಹಾನನು ಉತ್ತರಿಸುತ್ತಾ "ಹಾಗೆಯೇ ಆಗಲಿ; ಕರ್ತನಾದ ಯೇಸುವೇ ಬಾ" (ಪ್ರಕಟನೆ 22:12,20).

ಪಾಪಿಗಳು ಪರಿವರ್ತನೆಗೊಳ್ಳುವಾಗ ಅದು ಕ್ರಿಸ್ತನ ಬರೋಣದ ಒಂದು ಭಾಗವಾಗಿದೆ ಎಂದು ಹೆಚ್ಚಿನ ಸಂಖ್ಯೆಯವರು ಭಾವಿಸುತ್ತಾರೆ. ಹೀಗಾಗಿ ಆತನು ಸಮಗ್ರ ಪ್ರಪಂಚವು ಪರಿವರ್ತನೆಗೊಳ್ಳುವ ತನಕ ತನ್ನ ಬರುವಿಕೆಯನ್ನು ಮುಂದುವರಿಸುತ್ತಲೇ ಇರುತ್ತಾನೆ ಎಂದು ಭಾವಿಸುತ್ತಾರೆ. ಆಗ ಅವರು "ಆತನು

ಸಂಪೂರ್ಣವಾಗಿ ಬರುತ್ತಾನೆ" ಎಂದು ಅವರು ಹೇಳುತ್ತಾರೆ.

ಇವರುಗಳು ಸ್ಪಷ್ಟವಾಗಿ ಈ ಪ್ರಸ್ತಾಪದ ಬಗ್ಗೆ ದೇವರ ವಾಕ್ಯಗಳಲ್ಲಿರುವ ಸಾಕ್ಷ್ಯಗಳನ್ನು ಮರೆತುಬಿಟ್ಟಿದ್ದಾರೆ. ಅವುಗಳು ಅವರ ನಿರೀಕ್ಷೆಗಳಿಗೆ ವ್ಯತಿರಿಕ್ತವಾಗಿವೆ; ಅದು ಕರ್ತನ ಎರಡನೆಯ ಆಗಮನದಲ್ಲಿ ಈ ಲೋಕವು ದೇವರಿಗೆ ಪರಿವರ್ತನೆಗೊಳ್ಳುವುದರಿಂದ ಬಹಳ ದೂರವಾಗಿರುತ್ತದೆ. "ಕಡೇ ದಿವಸಗಳಲ್ಲಿ ಕಠಿಣ ಕಾಲಗಳು ಬರುವವೆಂಬುದನ್ನು ತಿಳಿದುಕೊ. ಜನರು ದೇವರನ್ನು ಪ್ರೀತಿಸದೆ ಲೋಕದ ಭೋಗಗಳನ್ನೇ ಪ್ರೀತಿಸುವವರಾಗಿರುತ್ತಾರೆ" (2 ತಿಮೋ. 3: 1–4). "ದುಷ್ಟರೂ, ವಂಚಕರೂ ಇತರರನ್ನು ಮೋಸಮಾಡುತ್ತಾ, ತಾವೇ ಮೋಸಹೋಗುತ್ತಾ ಹೆಚ್ಚಾದ ಕೆಟ್ಟತನಕ್ಕೆ ಹೋಗುವರು" (2 ತಿಮೋ. 3:13). ಅವರು, ದೇವರು ಚಿಕ್ಕಹಿಂಡಿಗೆ ನೀಡಿದ "ನಿಮ್ಮ ವಿಷಯದಲ್ಲಿ ಜಾಗರೂಕರಾಗಿರ್ರಿ, ಆ ದಿವಸವು ಉರ್ಲಿನಂತೆ ಫಕ್ಕನೇ ಬಂದೀತು. ಆ ದಿವಸವು ಭೂನಿವಾಸಿಗಳೆಲ್ಲರ (ಜಾಗರೂಕರಲ್ಲದವರ) ಮೇಲೆ ಬರುವದು" (ಲೂಕ 21: 34–35) ಎಂಬಿತ್ಯಾದಿ ಎಚ್ಚರಿಕೆ ಮಾತುಗಳನ್ನು ಮರೆತುಹೋಗುತ್ತಾರೆ. ಪುನಃ ನಮಗೆ ಖಚಿತವಾದ ಭರವಸೆಯೆಂದರೆ, ಆತನು ಬರುವದನ್ನು ಕಾಣುವಾಗ, "ಭೂಮಿಯಲ್ಲಿರುವ ಎಲ್ಲಾ ಕುಲಗಳವರು ಆತನನ್ನು ನೋಡಿ ಎದೆ ಬಡಕೊಳ್ಳುವರು" (ಪ್ರಕಟನೆ 1:7) ಎಂದು ಹೇಳುವಾಗ ಪಾಪಿಗಳ ಪರಿವರ್ತನೆಯ ಬಗ್ಗೆ ಏನನ್ನೂ ಉಲ್ಲೇಖಿಸಿರುವುದಿಲ್ಲ. ಎಲ್ಲಾ ಜನರು ಪಾಪಿಗಳು ಪರಿವರ್ತನೆಯನ್ನು ಹೊಂದಿರುವುದನ್ನು ನೋಡಿ ಗೋಳಾಡುತ್ತಾರೆಯೋ? ಇದಕ್ಕೆ ವ್ಯತಿರಿಕ್ತವಾಗಿ, ಈ ಪರಿಚ್ಛೇದವು, ಬಹುಮಟ್ಟಿಗೆ ಎಲ್ಲರೂ ಒಪ್ಪಿಕೊಳ್ಳುವಂತೆ, ಲೋಕದ ಮೇಲೆ ಕ್ರಿಸ್ತನ ಪ್ರತ್ಯಕ್ಷತೆಯಾಗಿದೆ. ಲೋಕದಲ್ಲಿರುವವರೆಲ್ಲರೂ ಆತನ ಪ್ರತ್ಯಕ್ಷತೆಯನ್ನು ಪ್ರೀತಿಸುವುದಿಲ್ಲ, ಎಲ್ಲರೂ ಪರಿವರ್ತನೆ ಹೊಂದಿದ್ದರೆ ನಿಶ್ಚಯವಾಗಿ ಅವರು ಹಾಗೆ ಮಾಡುತ್ತಿದ್ದರು ಎಂಬುದನ್ನು ನಮಗೆ ಕಲಿಸಿಕೊಡುತ್ತದೆ.

ಕೆಲವರು ಕರ್ತನ ನಿಜವಾದ ಪ್ರತ್ಯಕ್ಷತೆಯನ್ನು ನಿರೀಕ್ಷಿಸುತ್ತಾರೆ, ಆದರೆ ಈ ಘಟನೆಯ ಸಮಯವನ್ನು ಬಹಳ ದೂರಕ್ಕೆ ನಿಶ್ಚಯಿಸುತ್ತಾರೆ ಮತ್ತು ಪ್ರಸ್ತುತ ಪರಿಸ್ಥಿತಿಯಲ್ಲಿ ಸಭೆಯ ಪ್ರಯತ್ನಗಳ ಮೂಲಕ ಈ ಪ್ರಪಂಚವು ಪರಿವರ್ತನೆಹೊಂದಿಕೊಳ್ಳಬೇಕು, ಆ ರೀತಿಯಲ್ಲಿ ಸಹಸ್ರಮಾನ ಯುಗವು ಪರಿಚಯ ಗೊಳ್ಳಬೇಕು ಎಂದು ಹಕ್ಕೇಳಿಕೆ ನೀಡುತ್ತಾರೆ. ಪ್ರಪಂಚವು ಪರಿವರ್ತನೆಗೊಳ್ಳುವಾಗ, ಸೈತಾನನು ಬಂಧಿತನಾದಾಗ, ಕರ್ತನ ಜ್ಞಾನವು ಲೋಕವೆಲ್ಲಾ ತುಂಬಿಕೊಳ್ಳುತ್ತದೆ, ದೇಶಗಳವರು ಇನ್ನು ಮೇಲೆ ಯುದ್ಧಾಭ್ಯಾಸವು ನಡೆಯದಿದ್ದಾಗ, ಸಭೆಯ ಕಾರ್ಯವು ಅದರ ಪ್ರಸ್ತುತ ಸ್ಥಿತಿಯಲ್ಲಿ ಮುಕ್ತಾಯಗೊಳ್ಳುತ್ತದೆ; ಆಕೆಯು ಈ ದೊಡ್ಡ ಮತ್ತು ಕಷ್ಟಕರ ಕಾರ್ಯವನ್ನು ನೆರವೇರಿಸಿದಾಗ, ಕರ್ತನು ಲೌಕಿಕ ವ್ಯವಹಾರಗಳನ್ನು ಮುಗಿಸಲು, ವಿಶ್ವಾಸಿಗಳಿಗೆ ಪ್ರತಿಫಲ ಕೊಡಲು ಮತ್ತು ಪಾಪಿಗಳನ್ನು ಖಂಡಿಸಲು ಬರುತ್ತಾನೆ ಎಂದು ಹೇಳುತ್ತಾರೆ.

ಕೆಲವು ಪರಿಶುದ್ಧಗ್ರಂಥಗಳನ್ನು, ಬೇರ್ಪಡಿಸಿ ತೆಗೆದು ಕೊಂಡಾಗ, ಈ ದೃಷ್ಟಿಕೋನವು ಸರಿಯಾಗಿರ ಬಹುದೆಂದು ತೋರಿಬರುತ್ತದೆ. ಆದರೆ, ದೇವರ ವಾಕ್ಯಗಳನ್ನು ಮತ್ತು ಯೋಜನೆಯನ್ನು ಪೂರ್ಣವಾಗಿ ನೋಡುವಾಗ, ಇವೆಲ್ಲವೂ ವಿರುದ್ಧ ದೃಷ್ಟಿಕೋನಕ್ಕೆ ಒಲವು ತೋರುತ್ತವೆ. ಅಂದರೆ, ಕ್ರಿಸ್ತನು ಲೋಕವು ಪರಿವರ್ತನೆಗೊಳ್ಳುವ ಮೊದಲೇ ಬರುತ್ತಾನೆ ಮತ್ತು ಲೋಕವನ್ನು ಪರಿವರ್ತನೆ ಮಾಡುವ ಉದ್ದೇಶದಿಂದಲೇ ಅದನ್ನು ಆಳುತ್ತಾನೆ; ಸಭೆಯು ಈಗ ಪರೀಕ್ಷೆಗೊಳಗಾಗಿದೆ, ಜಯಗಳಿಸಿದವರಿಗೆ ವಾಗ್ದಾನಪಡಿಸಿದ ಬಹುಮಾನ ವೆಂದರೆ, ಅವರು ಮಹಿಮೆ ಹೊಂದುಕೊಂಡ ನಂತರ ಆಳ್ವಿಕೆಯನ್ನು ತಮ್ಮ ಕರ್ತನಾದ ಯೇಸುವಿನೊಂದಿಗೆ ಹಂಚಿಕೊಳ್ಳುವರು, ಇದು ದೇವರು ತಾನೇ ನೇಮಿಸಿದ ಲೋಕವನ್ನು ಆಶೀರ್ವಾದಿಸುವ ರೀತಿಯಾಗಿದೆ ಮತ್ತು ಎಲ್ಲಾ ಜೀವಿಗಳಿಗೆ ಕರ್ತನ ಜ್ಞಾನವನ್ನು ಬರಮಾಡುವುದಾಗಿದೆ. ಅಂಥವುಗಳೇ ದೇವರ ವಾಗ್ದಾನಗಳು – "ನಾನು ಜಯಹೊಂದಿ ನನ್ನ ತಂದೆಯೊಡನೆ ಸಿಂಹಾಸನದಲ್ಲಿ ಕೂತುಕೊಂಡೆನು; ಹಾಗೆಯೇ ಜಯಹೊಂದಿದವನನ್ನು ನನ್ನೊಡನೆ ಸಿಂಹಾಸನದಲ್ಲಿ ಕುಳಿತುಕೊಳ್ಳುವಂತೆ ಮಾಡುವೆನು" "ಅವರು ಜೀವಿತರಾಗಿ ಎದ್ದು ಸಾವಿರ ವರುಷ ಕ್ರಿಸ್ತನೊಂದಿಗೆ ಆಳಿದರು" (ಪ್ರಕಟನೆ 3:21 :20:4).

ಕರ್ತನು ಸಹಸ್ರಮಾನದವರೆಗೆ ಬರುವುದಿಲ್ಲ ಎಂಬುದರ ವಿಷಯದಲ್ಲಿ ಸಾಧಿಸುವವರ ಬಗ್ಗೆ ಅವರು ಮುಖ್ಯವಾಗಿ ಎರಡು ವಾಕ್ಯಗಳ ಬಗ್ಗೆ ಆತುಕೊಂಡಿರುವವರ ಬಗ್ಗೆ ನಾವಿಲ್ಲಿ ನಿಮ್ಮ ಗಮನವನ್ನು ಸೆಳೆಯುವವರಾಗಿದ್ದೇವೆ. ಮೊದಲನೆಯದು "ಪರಲೋಕ ರಾಜ್ಯದ ಈ ಸುವಾರ್ತೆಯು ಎಲ್ಲಾ ಜನಾಂಗಗಳಿಗೆ ಸಾಕ್ಷಿಗಾಗಿ ಸಾರಲಾಗುವುದು; ಆಗ ಅಂತ್ಯವು ಬರುವುದು" (ಮತ್ತಾಯ 24:14). ಇದು ಸುವಾರ್ತಾ ಯುಗದ ಅಂತ್ಯಕ್ಕೆ ಮೊದಲು ಲೋಕದ ಪರಿವರ್ತನೆಯನ್ನು ಉಲ್ಲೇಖಿಸುತ್ತದೆ ಎಂದು ಅವರು ಪ್ರತಿಪಾದಿಸುತ್ತಾರೆ. ಆದರೆ, ಈ ಲೋಕಕ್ಕೆ

ಸಾಕ್ಷಿಹೇಳುವುದು ಲೋಕದ ಪರಿವರ್ತನೆ ಎಂಬ ಅರ್ಥವನ್ನು ನೀಡುವುದಿಲ್ಲ. ಆ ಸಾಕ್ಷಿಯನ್ನು ಯಾವ ರೀತಿಯಲ್ಲಿ ಸ್ವೀಕರಿಸಲಾಗುವುದು ಎಂಬುದರ ಬಗ್ಗೆಯೂ ಈ ವಾಕ್ಯಭಾಗವು ಏನನ್ನೂ ಹೇಳುವುದಿಲ್ಲ. ಈ ಸಾಕ್ಷವನ್ನು ಆಗಲೇ ನೀಡಲಾಗಿದೆ. 1861ರಲ್ಲಿ ಸತ್ಯವೇದ ಸಂಘಗಳ ವರದಿಯು ಸತ್ಯವೇದವು ಪ್ರಪಂಚದ ಎಲ್ಲಾ ಭಾಷೆಗಳಲ್ಲಿಯೂ ಮುದ್ರಿಸಲಾಗಿದೆ ಎಂದು ತೋರಿಸುತ್ತದೆ. ಆದಾಗ್ಯೂ ಈ ಲೋಕದ ಮಿಲಿಯಾಂತರ ಜನರು ಅದನ್ನು ಸ್ವೀಕರಿಸಲಿಲ್ಲ. ಇಲ್ಲ, ಜೀವಿಸುವ ಹದಿನಾರು ಮಿಲಿಯನ್ ಜನರ ಅರ್ಧಭಾಗವೂ ಯೇಸುವಿನ ಹೆಸರನ್ನು ಎಂದೂ ಕೇಳಿಸಿಕೊಂಡಿದ್ದಿಲ್ಲ. ಆದಾಗ್ಯೂ, ವಾಕ್ಯಭಾಗದ ಷರತ್ತು ಈಗ ಪೂರೈಸಿದೆ; ಸುವಾರ್ತೆಯು ಲೋಕದಲ್ಲೆಲ್ಲಾ ಪ್ರತಿಯೊಂದು ರಾಷ್ಟ್ರಕ್ಕೂ ಸಾಕ್ಷಿಯಾಗಿ ಬೋಧಿಸಲ್ಪಟ್ಟಿದೆ.

ಅ.ಕೃ. 15:14ರಲ್ಲಿ ಅಪೋಸ್ತಲನು ಪ್ರಸ್ತುತ ಯುಗದಲ್ಲಿ ಸುವಾರ್ತೆಯ ಮುಖ್ಯ ಉದ್ದೇಶವು ಕ್ರಿಸ್ತನ ಹೆಸರಿಗಾಗಿ "ಅವರುಗಳಿಂದ ಒಂದು ಪ್ರಜೆಯನ್ನು ಆರಿಸಿಕೊಳ್ಳುವುದು – ಜಯಹೊಂದುವ ಸಭೆಯು, ಆತನ ಎರಡನೆಯ ಬರೋಣದಲ್ಲಿ ಆತನಲ್ಲಿ ಅನ್ಯೋನ್ಯಗೊಂಡು ಆತನ ಹೆಸರನ್ನು ಸ್ವೀಕರಿಸುವುದು" ಎಂದು ಹೇಳುತ್ತಾನೆ. ಈ ಯುಗದಲ್ಲಿ ಲೋಕಕ್ಕೆ ಸಾಕ್ಷಿ ಕೊಡುವದು ಎರಡನೆಯ ಉದ್ದೇಶವಾಗಿದೆ.

ಮತ್ತೊಂದು ವಚನವೆಂದರೆ – "ನಾನು ನಿನ್ನ ವಿರೋಧಿಗಳನ್ನು ನಿನಗೆ ಪಾದಪೀಠವಾಗಿ ಮಾಡುವ ತನಕ ನನ್ನ ಬಲಗಡೆಯಲ್ಲಿ ಕೂತುಕೊಂಡಿರು" (ಕೀರ್ತನೆ 110:1) ಎಂಬುದೇ. ಈ ವಚನದ ಬಗ್ಗೆ ಅಸ್ಪಷ್ಟವಾದ, ಅನಿರ್ದಿಷ್ಟವಾದ ಆಲೋಚನೆ ಏನೆಂದರೆ, ಕ್ರಿಸ್ತನು ಸಭೆಯ ಮೂಲಕ ಎಲ್ಲಾ ಸಂಗತಿಗಳೂ ನಿಗ್ರಹಿಸಲ್ಪಡುವ ತನಕ ಪರಲೋಕದ ಯಾವುದೋ ಭಾಗದಲ್ಲಿ ಭೌತಿಕ ಸಿಂಹಾಸನದ ಮೇಲೆ ಕುಳಿತುಕೊಂಡಿರುತ್ತಾನೆ, ನಂತರ ಆತನು ಆಳಲು ಬರುತ್ತಾನೆ ಎಂಬುದು. ಇದೊಂದು ತಪ್ಪಾದ ತಿಳುವಳಿಕೆಯಾಗಿದೆ. ಇಲ್ಲಿ ಉಲ್ಲೇಖಿಸಿರುವ ಕರ್ತನ ಸಿಂಹಾಸನವು ವಸ್ತುರೂಪದ್ದಲ್ಲ. ಆದರೆ ಅದು ಆತನ ಪರಮೋಚ್ಛ ಅಧಿಕಾರವನ್ನು, ಪ್ರಭುತ್ವವನ್ನು ಸೂಚಿಸುತ್ತದೆ. ಆ ಪ್ರಭುತ್ವದ ಪಾಲುದಾರ ನಾಗುವುದಕ್ಕಾಗಿಯೇ ಅತ್ಯುನ್ನತೆಗೆ ಕರ್ತನಾದ ಯೇಸು ಏರಿಸಲ್ಪಟ್ಟನು. ಪೌಲನು – "ದೇವರು ಆತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿ ಎಲ್ಲಾ ಹೆಸರುಗಳಿಗಿಂತ ಶ್ರೇಷ್ಠವಾದ ಹೆಸರನ್ನು ಆತನಿಗೆ ದಯಪಾಲಿಸಿದ್ದಾನೆ" (ಫಿಲಿಪ್ಪಿ 2:9) ಎಂದು ಪ್ರಕಟಿಸಿದ್ದಾನೆ. ಆತನಿಗೆ ಎಲ್ಲಾದುದರ ಮೇಲೆ ತಂದೆಯ ನಂತರದ ಅಧಿಕಾರವನ್ನು ನೀಡಿದ್ದಾನೆ. ಕ್ರಿಸ್ತನು ಆತನ ಶತ್ರುಗಳು (ನಿಗ್ರಹಿಸಲ್ಪಟ್ಟು) ಆತನ ಪಾದಪೀಠವಾಗುವ ತನಕ ಒಂದು ವಸ್ತುರೂಪದ ಸಿಂಹಾಸನದ ಮೇಲೆ ಕುಳಿತಿರುತ್ತಿದ್ದರೆ, ಆತನು ಎಲ್ಲಾ ಸಂಗತಿಗಳು ನಿಗ್ರಹಿಸಲ್ಪಡುವವರೆಗೆ ಆತನು ಬರಲು ಖಂಡಿತ ಸಾಧ್ಯವಿಲ್ಲ. ಆದರೆ, ಈ ವಚನದಲ್ಲಿಯ "ಬಲಗಡೆಯಲ್ಲಿ" ಎಂಬ ಪದವು ಅದು ಒಂದು ನಿರ್ದಿಷ್ಟವಾದ ಸ್ಥಳ ಮತ್ತು ಪೀಠವಲ್ಲವೆಂಬುದನ್ನು ಸೂಚಿಸುತ್ತದೆ. ಆದರೆ, ನಾವು ಶಕ್ತಿ ಮತ್ತು ಅಧಿಕಾರ, ಪ್ರಭುತ್ವ ಇವುಗಳ ಬಗ್ಗೆ ಹಕ್ಕೇಳಿಕೆ ನೀಡುವಾಗ, ಪರಿಗಣನೆಯಲ್ಲಿರುವ ವಾಕ್ಯಭಾಗವು "ಆತನು ಎಲ್ಲವನ್ನೂ ತನಗೆ ಅಧೀನಮಾಡಿಕೊಳ್ಳಲಾಗುವ ಪರಾಕ್ರಮವನ್ನು ಸಾಧಿಸಿ ದೀನಾವಸ್ಥೆಯುಳ್ಳ ನಮ್ಮ ದೇಹವನ್ನು ರೂಪಾಂತರಪಡಿಸಿ ಪ್ರಭಾವವುಳ್ಳ ತನ್ನ ದೇಹದ ಸ್ವಾರೂಪ್ಯವಾಗುವಂತೆ ಮಾಡುವನು" (ಫಿಲಿಪ್ಪಿ 3:21) ಎಂಬಿತ್ಯಾದಿ ಇತರೆ ವಾಕ್ಯಭಾಗದೊಂದಿಗೆ ಯಾವುದೇ ವಿವೇಕಯುತವಾದ ಘರ್ಷಣೆಯನ್ನು ಹೊಂದಿಲ್ಲ ಎಂಬುದನ್ನು ವೇದವು ನಮಗೆ ಕಲಿಸಿಕೊಡುತ್ತದೆ. ಉದಾಹರಣೆಗಾಗಿ: ಚಕ್ರವರ್ತಿಯಾದ ವಿಲಿಯಂ ಎಂಬಾತನು ಜರ್ಮನಿಯ ಸಿಂಹಾಸನ ದಲ್ಲಿದ್ದಾನೆ. ಆದಾಗ್ಯೂ ನಾವು 'ರಾಜ ನ್ಯಾಯಪೀಠ' (Royal bench)ವನ್ನು ಉಲ್ಲೇಖಿಸುವುದಿಲ್ಲ ಮತ್ತು ನಿಜವಾಗಿ ಹೇಳುವುದಾದರೆ, ಆತನು ಅದನ್ನು ಬಹಳ ವಿರಳವಾಗಿ ಉಪಯೋಗಿಸಿರುತ್ತಾನೆ. ಆತನು ಸಿಂಹಾಸನಾರೂಢನಾಗಿದ್ದಾನೆ ಎಂದು ನಾವು ಹೇಳುವಾಗ, ಆತನು ಜರ್ಮನಿಯನ್ನು ಆಳುತ್ತಾನೆ ಎಂಬುದು ನಮ್ಮ ಅರ್ಥವಾಗಿದೆ. ಬಲಗಡೆ ಎಂಬುದು ಮುಖ್ಯ ಸ್ಥಳವನ್ನು, ಮುಖ್ಯ ಅರಸನ ನಂತರದ ಉತ್ಕೃಷ್ಟ ಸ್ಥಾನವನ್ನು ಸೂಚಿಸುತ್ತದೆ. ಅದೇ ರೀತಿ ರಾಜಕುಮಾರನಾದ ಬಿಸ್ ಮಾರ್ಕ್ ಎಂಬಾತನು ಉನ್ನತ ಪದವಿಗೇರಿಸಲ್ಪಟ್ಟು ಜರ್ಮನಿಯ ಚಕ್ರವರ್ತಿಯ ಬಲಪಾರ್ಶ್ವದಲ್ಲಿ ಕುಳಿತುಕೊಳ್ಳುವವನಾದನು. ಯೋಸೇಫನು ಐಗುಪ್ತ ರಾಜ್ಯದಲ್ಲಿ ಫರೋಹನ ಬಲಭಾಗದಲ್ಲಿದ್ದನು – ಅಕ್ಷರಶಃವಾಗಿ ಅಲ್ಲ. ಆದರೆ, ಸಾಂಪ್ರದಾಯಿಕವಾದ ಅಲಂಕಾರಿಕ ಭಾಷೆಯಲ್ಲಿ (Figure of speech) ಇರುತ್ತದೆ. ನಂತರ, ಯೇಸು ಕಾಯಫನಿಗೆ ಹೇಳಿದ ಮಾತುಗಳು ಈ ಆಲೋಚನೆಗೆ ಹೊಂದುತ್ತದೆ – "ಇದಲ್ಲದೆ ಇನ್ನು ಮೇಲೆ ಮನುಷ್ಯಕುಮಾರನು ಸರ್ವಶಕ್ತನ ಬಲಗಡೆಯಲ್ಲಿ ಆಸೀನನಾಗಿರುವುದನ್ನೂ, ಆಕಾಶದ ಮೇಘಗಳ ಮೇಲೆ ಕುಳಿತು ಬರುವುದನ್ನೂ ಕಾಣುವಿರಿ" (ಮತ್ತಾಯ 26; 64) ಎಂದು ಹೇಳಿದನು. ಆತನು ಬರುವಾಗ,

ಬಲಪಾರ್ಶ್ವದಲ್ಲಿರುತ್ತಾನೆ ಮತ್ತು ಮಿಲಿಯಾಂತರ ಯುಗದಲ್ಲಿ ಬಲಭಾಗದಲ್ಲಿಯೇ ಉಳುಕೊಳ್ಳುವನು ಎಂದೆಂದಿಗೂ.

ದೇವರು ಬಹಿರಂಗಪಡಿಸಿದ ಯೋಜನೆಗಳ ಮುಂದಣ ಪರೀಕ್ಷೆಯು ಪ್ರಥಮ ಮತ್ತು ದ್ವಿತೀಯ ಆಗಮನಗಳ ಉದ್ದೇಶದ ವಿಶಾಲವಾದ ದೃಷ್ಟಿಕೋನವನ್ನು ನೀಡುತ್ತದೆ; ಮತ್ತು ಎರಡೂ ಘಟನೆಗಳೂ ಒಂದೇ ಯೋಜನೆಗೆ ಸಂಬಂಧಿಸಿದ್ದಾಗಿ ಉಳುಕೊಳ್ಳುತ್ತದೆ ಎಂಬುದನ್ನು ನಾವು ನೆನಪಿನಲ್ಲಿಟ್ಟು ಕೊಳ್ಳಬೇಕಾಗಿದೆ. ಮೊದಲನೆಯ ಆಗಮನದ ನಿರ್ದಿಷ್ಟವಾದ ಕಾರ್ಯವು ಜನರನ್ನು ವಿಮೋಚಿ ಸುವುದು; ಎರಡನೆಯದು ವಿಮೋಚಿತರನ್ನು ಪುನರ್‌ಸ್ಥಾಪಿತಗೊಳಿಸುವುದು, ಆಶೀರ್ವದಿಸುವುದು ಮತ್ತು ಬಿಡುಗಡೆಗೊಳಿಸುವುದು. ಎಲ್ಲರಿಗಾಗಿ ತನ್ನ ಜೀವವನ್ನೇ ಈಡುಬಲಿಯಾಗಿ ಅರ್ಪಿಸಿದ ನಂತರದಲ್ಲಿ, ನಮ್ಮ ರಕ್ಷಕನು ತನ್ನ ಬಲಿದಾನವನ್ನು ತಂದೆಗೆ ಕಾಣಿಕೆಯಾಗಿ ನೀಡುವಂತೆ, ಮಾನವನ ಪಾಪಗಳಿಗಾಗಿ ಮೈತ್ರೀ ಸಂಧಾನವನ್ನು ಮಾಡಿಕೊಳ್ಳುವಂತೆ ಪರಲೋಕಕ್ಕೆ ಆರೋಹಣಗೊಂಡನು. ಆತನು ಮದಲಗಿತ್ತಿಯನ್ನು, ಕುರಿಮರಿಯ ವಧುವನ್ನು ಆಯ್ಕೆಮಾಡುವವರೆಗೆ 'ಇಹಲೋಕಾಧಿಪತಿ'ಗೆ ಕೆಡುಕಿನ ಆಡಳಿತವನ್ನು ಮುಂದುವರಿಸಲು ಅನುಮತಿ ನೀಡಿದನು. ಆಕೆಯು ಅಂಥಾಃ ಗೌರವಕ್ಕೆ ಅರ್ಹಳು ಎಂಬುದಾಗಿ ಎಣಿಕೆಯಾಗಬೇಕು ಮತ್ತು ಪ್ರಸ್ತುತ ಕೆಟ್ಟ ಪ್ರಪಂಚದ ಪ್ರಭಾವಗಳನ್ನು ಗೆದ್ದುಕೊಳ್ಳಬೇಕು. ನಂತರದಲ್ಲಿ ಲೋಕದ ಮನುಕುಲಕ್ಕೆ ಆತನ ತ್ಯಾಗದಿಂದ ಪಡಕೊಂಡ ಮಹಾ ಆಶೀರ್ವಾದಗಳನ್ನು ಕೊಡುವ ಕಾರ್ಯವು ಪ್ರಾರಂಭವಾಗುವ ಉಚಿತ ಸಮಯವಾಗಿದೆ ಮತ್ತು ಆತನು ಭೂಲೋಕದ ಎಲ್ಲಾ ಕುಟುಂಬಗಳನ್ನು ಆಶೀರ್ವದಿಸಲು ಮುಂದೆ ಬರುವನು.

ವಿಮೋಚಕನು ಈಡುಬಲಿಯನ್ನು ಅರ್ಪಿಸುವಾಗ ಪುನಃವಶಗೊಳಿಸುವಿಕೆ ಮತ್ತು ಆಶೀರ್ವಾದ ಇವುಗಳನ್ನು ಒಮ್ಮೆಲೇ ಪ್ರಾರಂಭಿಸಬಹುದಾಗಿತ್ತು ಎಂಬುದು ಸತ್ಯ. ನಂತರದಲ್ಲಿ ಮೆಸ್ಸೀಯನ ಆಗಮನವು ಒಂದು ಘಟನೆಯಾಗುತ್ತಿತ್ತು, ಆಳ್ವಿಕೆ ಮತ್ತು ಆಶೀರ್ವಾದ ಇವುಗಳು ಅಪೋಸ್ತಲರು ಮೊದಲು ನಿರೀಕ್ಷಿಸಿದಂತೆ (ಅ.ಕೃ. 1:6) ಒಮ್ಮೆಲೇ ಪ್ರಾರಂಭವಾಗುತ್ತಿತ್ತು. ಆದರೆ, ದೇವರು ನಮಗೋಸ್ಕರ ಶ್ರೇಷ್ಠವಾದ ಭಾಗವನ್ನು ಏರ್ಪಡಿಸಿದ್ದಾನೆ – ಕ್ರೈಸ್ತ ಸಭೆಗೆ (ಇಬ್ರಿಯ 11:40). ಹೀಗಾಗಿ ನಮ್ಮ ಹಿತಕ್ಕಾಗಿ ಕ್ರಿಸ್ತನ ಆಳ್ವಿಕೆಯು ಈ ಹತ್ತೊಂಬತ್ತು ಶತಮಾನಗಳಲ್ಲಿನ ಶಿರಸ್ಸಿನ ಬಾಧೆಗಳಿಂದ ಪ್ರತ್ಯೇಕಿಸಲಾಗಿದೆ.

ಪ್ರಥಮ ಹಾಗೂ ದ್ವಿತೀಯಾಗಮನದ ನಡುವಣ ಅವಧಿಯು ಅಂದರೆ ಎಲ್ಲರಿಗಾಗಿ ಈಡುಬಲಿ ಮತ್ತು ಎಲ್ಲರಿಗಾಗಿ ಆಶೀರ್ವಾದ ಇವುಗಳ ಮಧ್ಯದ ಅವಧಿಯು ಕ್ರಿಸ್ತನ ದೇಹವಾದ ಸಭೆಯ ಪರೀಕ್ಷೆಯ ಹಾಗೂ ಆಯ್ಕೆಯ ಕಾಲವಾಗಿದೆ. ಇಲ್ಲವಾದಲ್ಲಿ ಕೇವಲ ಒಂದು ಆಗಮನವಾಗುತ್ತಿತ್ತು ಮತ್ತು ಆತನ ಎರಡನೆಯ ಪ್ರತ್ಯಕ್ಷತೆಯಲ್ಲಿ, ಸಹಸ್ರಮಾನದಲ್ಲಿ ಮಾಡಲಾಗುವ ಕಾರ್ಯಗಳು ಯೇಸುವಿನ ಪುನರುತ್ಥಾನವನ್ನು ಅನುಸರಿಸುತ್ತಿತ್ತು. ಅಥವಾ, ಎರಡನೆಯ ಆಗಮನದಲ್ಲಿನ ಕಾರ್ಯಗಳು ಮೊದಲನೆಯ ಆಗಮನದ ಕಾರ್ಯವು ಮುಗಿದ ಕೂಡಲೇ ಪ್ರಾರಂಭವಾಗುತ್ತಿತ್ತು ಎಂದು ಹೇಳುವದರ ಬದಲಿಗೆ ನಾವು ಯೆಹೋವನು ಕ್ರಿಸ್ತನ ದೇಹವಾದ "ಚಿಕ್ಕಹಿಂಡಿನ" ಆಯ್ಕೆಯನ್ನು ಉದ್ದೇಶಿಸುತ್ತಿರಲಿಲ್ಲವಾದಲ್ಲಿ ಮೊದಲನೆಯ ಆಗಮನ ಕಾರ್ಯವು ಅದು ನೆರವೇರಿದ ಸಮಯದಲ್ಲಿ ನಡೆಯುತ್ತಿರಲಿಲ್ಲ, ಆದರೆ ಅದು ಎರಡನೆಯ ಆಗಮನ ಕಾಲದಲ್ಲಿ ಸಂಭವಿಸುತ್ತಿತ್ತು. ಮತ್ತು ಆಗಮನವು ಒಂದೇ ಆಗಿರುತ್ತಿತ್ತು. ದೇವರು ಆರು ಸಾವಿರ ವರ್ಷಗಳವರೆಗೆ ಕೇಡಿಗೆ, ಮಾತ್ರವಲ್ಲದೆ ಎಲ್ಲರ ಶುದ್ಧೀಕರಣ ಮತ್ತು ಪುನರ್‌ಸ್ಥಾಪನಾ ಕಾರ್ಯಗಳು ಏಳನೆಯ ಸಹಸ್ರವರ್ಷ ಕಾಲದಲ್ಲಿ ನೆರವೇರುವಂತೆ ಅನುಮತಿಸಿದ್ದಾನೆ.

ಈ ರೀತಿಯಲ್ಲಿ ಕ್ರಿಸ್ತನು ಯಜ್ಞವಾಗಿಯೂ, ಪಾಪಿಗಳ ಈಡುಬಲಿಯಾಗಿಯೂ ಬರಲಿರುವುದು ಆತನ 'ಚಿಕ್ಕ ಹಿಂಡು' ಅಥವಾ 'ಸಹ ಬಾಧ್ಯಸ್ಥರ' ಆಶೀರ್ವಾದ ಮತ್ತು ಪುನರ್‌ವಶಕ್ಕೆ ಅವಕಾಶ ಕೊಡುವ ಸಮಯಕ್ಕಿಂತ ಸಾಕಷ್ಟು ಮುಂದಾಗಿರುವುದು ಕಂಡುಬರುತ್ತದೆ. ಇದನ್ನು ಕೆಲವರಿಗೆ ದೇವರ ಕಡೆಯಿಂದ ವಾಗ್ದಾನ ಮಾಡಿದ ಮತ್ತು ಈಡುಬಲಿಯಲ್ಲಿ ಒದಗಿಸಿದ ಆಶೀರ್ವಾದಗಳು ಸಹಜವಾಗಿ ನಿಧಾನವಾಗುತ್ತಿರುವುದೆಂದು ಎಣಿಸಬಹುದು. ಆಶೀರ್ವಾದಗಳು ಮೊದಲು ಯೋಜಿಸಿದಂತೆ ಸೂಕ್ತ ಸಮಯದಲ್ಲಿ ಬರುತ್ತವೆ. ಒಂದು ಭವ್ಯವಾದ ಉದ್ದೇಶಕ್ಕಾದರೂ, ಬೆಲೆಯು ಮಾನವನು ನಿರೀಕ್ಷಿಸಿದಕ್ಕಿಂತ ಬಹಳ ಮುಂಚಿತವಾಗಿ ಒದಗಿಸಲ್ಪಟ್ಟಿದೆ.

ಯೇಸುವು ತನ್ನ ಆರೋಹಣದಿಂದ ಪುನರ್‌ವಶದ ಸಮಯ ಅಥವಾ ಸಹಸ್ರಮಾನ ಯುಗದ ಆರಂಭದವರೆಗಿನ ಎಲ್ಲಾ ಮಧ್ಯಂತರ ಕಾಲದಲ್ಲಿ ಭೂಮಿಯಿಂದ ಅನುಪಸ್ಥಿತನಾಗಿದ್ದು ಪರಲೋಕದಲ್ಲಿ

ಇರುತ್ತಿದ್ದನು ಎಂಬುದಾಗಿ ಅಪೊಸ್ತಲನು ತಿಳಿಸುತ್ತಾನೆ – "ಸಮಸ್ತವನ್ನು ಸರಿ ಮಾಡುವ ಕಾಲವು ಬರುವ ತನಕ ಪರಲೋಕವೇ ಆ ಕ್ರಿಸ್ತನ ಸ್ಥಾನವಾಗಿರಬೇಕು" (ಅ.ಕೃ. 3:21). ಈ ರೀತಿಯಲ್ಲಿ ನಮ್ಮ ಕರ್ತನ ಎರಡನೆಯ ಆಗಮನದ ಉದ್ದೇಶವು ಎಲ್ಲವನ್ನೂ ಪುನಃ ವಶಗೊಳಿಸುವದಾಗಿರುವಾಗ, ಮತ್ತು ಆತನ ಪ್ರತ್ಯಕ್ಷತೆಯ ಸಮಯದಲ್ಲಿ ಜನಾಂಗಗಳು ಕೋಪಿಸಿಕೊಂಡು ಪರಿವರ್ತನೆಗೊಳ್ಳುವುದಕ್ಕೆ ಬಹಳ ದೂರವಾಗಿರುತ್ತಾರೆ (ಪ್ರಕಟನೆ 11:18) ಎಂದು ಪರಿಶುದ್ಧ ಗ್ರಂಥವು ಕಲಿಸಿಕೊಡುವಾಗ, ಅದಕ್ಕೆ ವಿರೋಧವಾಗಿ, ಸಭೆಯು ತನ್ನ ಧರ್ಮಪ್ರಚಾರದ ಕಾರ್ಯವನ್ನು ಸಾಧಿಸಲು ನಿಷ್ಫಲವಾಗಿದೆ, ಹಾಗಾಗಿ, ಅದರಿಂದ ನಮ್ಮ ಕರ್ತನ ಯೋಜನೆಯು ಬಹಳಷ್ಟು ನಿರಾಶೆಗೊಳಿಸುವದಾಗಿದೆ ಎಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಇಲ್ಲವಾದಲ್ಲಿ, ಪ್ರಸ್ತುತಯುಗದಲ್ಲಿ ಸಭೆಯಿಂದ ಲೋಕದ ಪರಿವರ್ತನೆಯನ್ನು ನಿರೀಕ್ಷಿಸಲಾಗಿಲ್ಲ ಎಂದು ನಾವು ಹೇಳುತ್ತೇವೆ ಮತ್ತು ತೋರಿಸುತ್ತೇವೆ. ಆದರೆ ಆಕೆಯ ನಿಯೋಗವು ಸುವಾರ್ತೆಯನ್ನು ಲೋಕದೆಲ್ಲೆಡೆ ಸಾಕ್ಷಿಯಾಗಿ ಬೋಧಿಸುವುದು ಮತ್ತು ತನ್ನನ್ನು ದೈವಿಕ ನಿರ್ದೇಶನದಲ್ಲಿ ಭವಿಷ್ಯದ ಮಹಾಕಾರ್ಯಕ್ಕಾಗಿ ಸಿದ್ಧಪಡಿಸಿಕೊಳ್ಳುವುದು. ದೇವರು ಯಾವುದೇ ರೀತಿಯಲ್ಲಿ ಲೋಕದ ಪರಿವರ್ತನೆಗಾಗಿ ತನ್ನ ಶಕ್ತಿಯನ್ನು ಬರಿದುಮಾಡಿಕೊಂಡಿಲ್ಲ. ಅಷ್ಟೇಕೆ, ಇನ್ನೂ ಹೆಚ್ಚಾಗಿ, ಆತನು ಇನ್ನೂ ಪ್ರಪಂಚದ ಪರಿವರ್ತನೆಗೆ ಪ್ರಯತ್ನಿಸಿರುವುದಿಲ್ಲ.

ಇದು ಕೆಲವರಿಗೆ ವಿಚಿತ್ರವಾದ ಹೇಳಿಕೆಯಾಗಿ ತೋರಬಹುದು; ದೇವರು ಅಂಥಾಃ ಕಾರ್ಯಕ್ಕೆ ಪ್ರಯತ್ನಿಸುತ್ತಿದ್ದರೆ, ಆತನು ಗಮನಾರ್ಹವಾಗಿ ಸೋತು ಹೋಗಿದ್ದಾನೆ ಎಂದು ಸೂಚಿತವಾಗುತ್ತಿತ್ತು. ಯಾಕೆಂದರೆ, ನಾವು ನೋಡಿರುವಂತೆ ಭೂಮಿಯ ಶತಕೋಟಿಗಳ ಒಂದು ಸಣ್ಣ ಭಾಗ ಮಾತ್ರ ತಾವು ರಕ್ಷಣೆ ಹೊಂದಬೇಕಾದ ಆ ಒಂದೇ ಹೆಸರನ್ನು ಬುದ್ಧಿವಂತಿಕೆಯಿಂದ ಕೇಳಿಸಿಕೊಂಡಿರುತ್ತಾರೆ. ನಾವು ಕೆಲವು ಪ್ರಮುಖ ಪಂಗಡದ ದೃಷ್ಟಿಕೋನಗಳು ಮತ್ತು ಬೋಧನೆಗಳನ್ನು ಮಾತ್ರ ಒತ್ತಾಯಪೂರ್ವಕವಾಗಿ ಹೇಳಿದ್ದೇವೆ. ಅಂದರೆ ಬ್ಯಾಪ್ಟಿಸ್ಟ್, ಪ್ರೆಸ್ಬಿಟೇರಿಯನ್ ಮತ್ತು ಇತರರ – "ದೇವರು ಈ ಲೋಕದಿಂದ ಜಯಹೊಂದಿದ ಒಂದು 'ಚಿಕ್ಕ ಹಿಂಡನ್ನು' ಮಾತ್ರವೇ ತನ್ನ ಸಭೆಯಾಗಿ ಆಯ್ದುಕೊಂಡಿದ್ದಾನೆ" ಎಂಬ ಅವರ ಬೋಧನೆಗಳ ದೃಷ್ಟಿಕೋನವನ್ನು ಮಾತ್ರವೇ ಒತ್ತಾಯಪೂರ್ವಕವಾಗಿ ಹೇಳಿದ್ದೇವೆ. ದೇವರು ಈ ಸಭೆಯನ್ನು ಆಯ್ಕೆ ಮಾಡುವುದಕ್ಕಿಂತ ಹೆಚ್ಚಾಗಿ ಏನೂ ಮಾಡುವವನಲ್ಲ ಎಂಬುದನ್ನು ಅವರು ನಂಬಿದ್ದಾರೆ, ಆದರೆ ಪರಿಶುದ್ಧ ಗ್ರಂಥಗಳ ಬೋಧನೆಯಲ್ಲಿ ನಾವು ದೇವರ ಯೋಜನೆಯ ಮುಂದಿನ ಹೆಜ್ಜೆಯನ್ನು – ಲೋಕದ ಸಭೆಯು ಪೂರ್ಣಗೊಂಡು ಮಹಿಮೆ ಹೊಂದಿಕೊಳ್ಳುವಾಗ ಪುನರ್ವಶವು ಆ ಆಯ್ದುಕೊಂಡ ಸಭೆಯ ಮೂಲಕ ಉಂಟಾಗುತ್ತದೆ ಎಂದು ನಾವು ಕಂಡುಕೊಳ್ಳುತ್ತೇವೆ. ಜಯಶಾಲಿಗಳನ್ನೊಳಗೊಂಡ ಸುವಾರ್ತಾಯುಗದ "ಚಿಕ್ಕಹಿಂಡು" ಸಂತಾನದ ದೇಹ ಮಾತ್ರವೇ ಆಗಿದ್ದು ಆ ಸಂತಾನದಲ್ಲಿ ಮತ್ತು ಅದರ ಮೂಲಕವಾಗಿ ಭೂಲೋಕದ ಎಲ್ಲಾ ಕುಟುಂಬಗಳೂ ಆಶೀರ್ವಾದ ಹೊಂದಿಕೊಳ್ಳುತ್ತವೆ.

ಯೆಹೋವನು ಈ ಲೋಕವನ್ನು ಪರಿವರ್ತಿಸಲು ಆರು ಸಾವಿರ ವರ್ಷಗಳಿಂದಲೂ ಪ್ರಯತ್ನಿಸುತ್ತಾ ಇದ್ದಾನೆ, ಆದರೆ ಎಲ್ಲಾ ಸಮಯಗಳಲ್ಲಿ ಸೋತು ಹೋಗಿದ್ದಾನೆ ಎಂದು ಹೇಳುವವರು ಅಂಥಾಃ ದೃಷಿಕೋನವನ್ನು ಸತ್ಯವೇದದ ಭರವಸೆಯಾದ ದೇವರ ಎಲ್ಲಾ ಉದ್ದೇಶಗಳೂ ನೆರವೇರುತ್ತವೆ ಮತ್ತು "ಆತನ ಬಾಯಿಂದ ಹೊರಟ ಮಾತು ಆತನ ಇಷ್ಟಾರ್ಥವನ್ನು ನೆರವೇರಿಸಿ ಆತನು ಉದ್ದೇಶಿಸಿದ್ದನ್ನು ಕೈಗೂಡಿಸದ ಹೊರತು ಆತನ ಕಡೆಗೆ ವ್ಯರ್ಥವಾಗಿ ಹಿಂದಿರುಗುವುದಿಲ್ಲ," (ಯೆಶಾಯ 55:11) ಎಂಬ ಸತ್ಯವೇದದ ಹೇಳಿಕೆಗಳೊಂದಿಗೆ ಸರಿಹೊಂದಿಸಲು ಕಷ್ಟವೆಂದು ಕಂಡುಕೊಂಡಿರುತ್ತಾರೆ. ಲೋಕವು ಇನ್ನೂ ಪರಿವರ್ತನೆಗೊಂಡಿಲ್ಲ, ದೇವರ ಜ್ಞಾನವು ಭೂಮಿಯನ್ನೆಲ್ಲಾ ಆವರಿಸಿಕೊಂಡಿಲ್ಲ ಎಂಬ ಸತ್ಯವು ಅದನ್ನು ಧರ್ಮಪ್ರಚಾರದ ನಿಯೋಗದೊಂದಿಗೆ ಕಳುಹಿಸಲ್ಪಟ್ಟಿಲ್ಲ ಎಂಬುದನ್ನು ಸಾಬೀತುಪಡಿಸುತ್ತದೆ.

ಇದು ಅನೇಕ ಶತಮಾನಗಳಿಂದ ಕ್ರೈಸ್ತರನ್ನು ವಿಭಜಿಸಿರುವ ಬಗ್ಗೆ ನಮಗೆ ಎರಡು ಸಂಗತಿಗಳ ಚಿಂತನೆಯನ್ನು ತರುತ್ತದೆ. ಅವುಗಳೆಂದರೆ ಆಯ್ಕೆ ಮತ್ತು ಉಚಿತವಾದ ಕೃಪೆ. ಈ ಎರಡೂ ಸಿದ್ಧಾಂತಗಳು ಅವುಗಳ ಸುವ್ಯಕ್ತವಾದ ವಿರೋಧದ ಹೊರತಾಗಿಯೂ, ದೇವರ ವಾಕ್ಯಗಳ ಬೆಂಬಲಪಡಿದಿದೆ ಎಂಬುದನ್ನು ಯಾವ ಸತ್ಯವೇದ ವಿದ್ಯಾರ್ಥಿಯೂ ಅಲ್ಲಗಳೆಯುವುದಿಲ್ಲ. ಈ ವಾಸ್ತವಿಕೆಯು ನಮ್ಮನ್ನು ಒಮ್ಮೆಲೇ ಯಾವುದೋ ಒಂದು ರೀತಿಯಲ್ಲಿ ಎರಡೂ ಸತ್ಯವಾಗಿರಬೇಕೆಂಬ ಶಂಕೆಗೆ ಒಳಪಡಿಸುತ್ತದೆ. ಆದರೆ, ಸತ್ಯವಾಕ್ಯವನ್ನು ಸರಿಯಾಗಿ ಉಪದೇಶಿಸುವ ಪರಲೋಕದ ನಿಯಮವನ್ನು, ಅಪ್ಪಣೆಯನ್ನು ಗಮನಿಸುವುದನ್ನು ಹೊರತುಪಡಿಸಿ ಅವುಗಳೊಂದಿಗೆ ಯಾವುದೇ ರೀತಿಯಲ್ಲಿ ರಾಜಿ

ಮಾಡಿಕೊಳ್ಳಲು ಸಾಧ್ಯವಿಲ್ಲ. ಈ ಆದೇಶವು, ಯುಗಗಳ ಯೋಜನೆಯಲ್ಲಿ ಪ್ರತಿನಿಧಿಸಲ್ಪಟಂತೆ ಗಮನಿಸಿದರೆ, ಆಯ್ಕೆಯು ಪ್ರಸ್ತುತ ಮತ್ತು ಹಿಂದಿನ ಯುಗಗಳಲ್ಲಿ ಆಯ್ಕೆಯು ಪ್ರಗತಿಯಲ್ಲಿರುವಾಗ ವಿಶಿಷ್ಟವಾಗಿ ಈ ಲೋಕಕ್ಕೆ ದೇವರ ಉಚಿತ ಕೃಪೆಯ ಒದಗಿಸುವಿಕೆಯೆಂದು ಸಾಮಾನ್ಯವಾಗಿ ಸಹಸ್ರಮಾನದಲ್ಲಿ ನಿರ್ದೇಶಿಸಲ್ಪಟ್ಟಿದೆ ಎಂದು ಸ್ಪಷ್ಟವಾಗಿ ತೋರಿಸುತ್ತದೆ. ಹಿಂದಿನ ಅಧ್ಯಾಯಗಳಲ್ಲಿ ಕೊಟ್ಟಿರುವ ಕೆಲವು ಮುಖ್ಯ ಅಂಶಗಳ ಪ್ರಕಾರ ಯುಗಗಳ ಮತ್ತು ಹಂಚಿಕೆಗಳ ನಿರ್ದಿಷ್ಟವಾದ ಲಕ್ಷಣಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳುವಾಗ, ಮತ್ತು ಆಯ್ಕೆ ಮತ್ತು ಉಚಿತ ಕೃಪೆಗೆ ಸಂಬಂಧಿಸಿದ ಎಲ್ಲಾ ಪರಿಚ್ಛೇಧಗಳನ್ನು ಪರೀಕ್ಷಿಸಿ ಕಂಡುಕೊಳ್ಳುವಾಗ, ಆಯ್ಕೆಯನ್ನು ವ್ಯವಹರಿಸುವ ಎಲ್ಲ ಪರಿಚ್ಛೇದಗಳು ಪ್ರಸ್ತುತ ಮತ್ತು ಹಿಂದಿನ ಕಾಲಗಳಿಗೆ ಅನ್ವಯವಾಗುತ್ತವೆ ಮತ್ತು ಅದೇ ಸಮಯದಲ್ಲಿ ಉಚಿತ ಕೃಪೆಯ ಬಗ್ಗೆ ಬೋಧಿಸುವವುಗಳು ಸಂಪೂರ್ಣವಾಗಿ ಮುಂದಿನ ಯುಗಕ್ಕೆ ಅನ್ವಯವಾಗುತ್ತದೆಂದು ಕಂಡುಬರುತ್ತದೆ.

ಆದಾಗ್ಯೂ, ಆಯ್ಕೆಯು (Election) ಸತ್ಯವೇದದಲ್ಲಿ ಕಲಿಸಿಕೊಡುವಂತೆ, ಅದರ ಪ್ರತಿಪಾದಕರು ಸಾಮಾನ್ಯವಾಗಿ ನಂಬಿರುವಂತೆ ಮತ್ತು ಬೋಧಿಸುವಂತೆ ಹೇಳುವಂತೆ ಇಚ್ಛಾನುಸಾರವಾದ ಬಲಪ್ರಯೋಗವೂ ಅಲ್ಲ ಅಥವಾ ಅದೃಷ್ಟವೂ ಅಲ್ಲ. ಆದರೆ, ದೇವರು ತನ್ನ ದೃಷ್ಟಿಯಲ್ಲೆ ಕಡೆಯವರೆಗೂ ಉಳಿಸಿಕೊಳ್ಳುವಂತಹ ಯೋಗ್ಯತೆ ಮತ್ತು ಹೊಂದಿಕೊಳ್ಳುವಿಕೆಗೆ ತಕ್ಕಂತೆ ಇರುವವರನ್ನು ಆಯ್ಕೆ ಮಾಡುತ್ತಾನೆ. ಈ ಉದ್ದೇಶಕ್ಕಾಗಿ ಒಂದು ಅವಧಿಯನ್ನು ನಿಷ್ಕರ್ಷೆ ಮಾಡಿರುವನು.

ಅರ್ಮಿನ್ನೀಯರು ಪ್ರತಿಪಾದಿಸಿದ ಉಚಿತ ಕೃಪೆಯ ಸಿದ್ಧಾಂತವು ಅದರ ಪ್ರತಿಪಾದಕರು ಎಂದೂ ಆಲೋಚಿಸಿದಕ್ಕಿಂತ ಹೆಚ್ಚಾದ ದೇವರ ಸಮೃದ್ಧವಾದ ಕೃಪೆಯ ಭವ್ಯವಾದ ಪ್ರದರ್ಶನವಾಗಿದೆ. ಕ್ರಿಸ್ತನ ಕೃಪೆ ಅಥವಾ ದೇವರಲ್ಲಿನ ದಯೆಯು ಅಥವಾ ಕೃಪೆಯು ಅಂದರೆ ಅನರ್ಹರಾಗಿದ್ದರೂ ಸಹಾ ಎಂಬ ಅರ್ಥದಲ್ಲಿ ಸದಾ ಉಚಿತವಾದದ್ದು; ಆದರೆ ಮಾನವರು ಪಾಪದಲ್ಲಿ ಬಿದ್ದುಹೋದಂದಿನಿಂದ ಈ ಸಮಯದವರೆಗೆ, ದೇವರ ಕೆಲವೊಂದು ದಯೆಗಳು ವಿಶೇಷ ವ್ಯಕ್ತಿಗಳಿಗೆ, ಜನಾಂಗಗಳಿಗೆ ಮತ್ತು ವರ್ಗದವರಿಗೆ ಮಾತ್ರವೇ ಸೀಮಿತವಾಗಿವೆ. ಅದೇ ವೇಳೆ ಮುಂದಿನ ಯುಗದಲ್ಲಿ ಆಗ ನೀಡಲ್ಪಟ್ಟ ಅನುಕೂಲತೆಗಳಲ್ಲಿ ಪಾಲುದಾರರಾಗುವಂತೆ ಷರತ್ತುಗಳ ಮೇಲೆ ಲೋಕದವರನ್ನೆಲ್ಲಾ ಆಹ್ವಾನಿಸಲಾಗುವುದು. ಅದರ ಷರತ್ತುಗಳನ್ನು ಆಗ ಎಲ್ಲರಿಗೂ ತಿಳಿಸಲಾಗುವುದು – "ಇಷ್ಟವುಳ್ಳವರು ಜೀವಜಲವನ್ನು ಉಚಿತವಾಗಿ ಪಡಕೊಳ್ಳಬಹುದಾಗಿದೆ" (ಪ್ರಕಟನೆ 22:17).

ಹಿಂದಕ್ಕೆ ಕಣ್ಣಾಡಿಸುವಾಗ, ನಮಗೆ ಅಬ್ರಹಾಮನ ಮತ್ತು ಆತನ ಸಂತಾನದವರಲ್ಲಿ ಕೆಲವರ ಆಯ್ಕೆ ಅಥವಾ ಆರಿಸಿಕೊಳ್ಳುವಿಕೆ ಗಮನಕ್ಕೆ ಬರುತ್ತದೆ. ಅವರ ಸಂತತಿಯವರ ವಾಹಿನಿಯ ಮೂಲಕ ವಾಗ್ದಾನಪಡಿಸಿದ ಬೀಜವು (ಸಂತಾನವು), ಲೋಕದ ಎಲ್ಲಾ ಕುಟುಂಬಗಳನ್ನೂ ಆಶೀರ್ವದಿಸುವಾದಾತನು ಬರಬೇಕಾಗಿತ್ತು (ಗಲಾತ್ಯ 3:29). ಎಲ್ಲಾ ದೇಶದವರಲ್ಲಿ ನಾವು ಇಸ್ರಾಯೇಲ್ಯರ ಆಯ್ಕೆಯನ್ನು ಮತ್ತು ಆ ನಮೂನೆಯ ಮೂಲಕ ದೇವರು ಈ ಲೋಕಕ್ಕೆ ತನ್ನ ಮಹಾ ಕಾರ್ಯವನ್ನು ಹೇಗೆ ನೆರವೇರಿಸುವನೆಂದು ನಿರೂಪಿಸಿದನು – ಐಗುಪ್ತದಿಂದ ಅವರ ಬಿಡುಗಡೆ, ಅವರ ಕಾನಾನ್, ಅವರ ಒಡಂಬಡಿಕೆಗಳು, ಅವರ ನಿಬಂಧನೆಗಳು, ಪಾಪಗಳನ್ನು ತೊಡೆದು ಹಾಕಲು ಮಾಡಬೇಕಾದ ನಿವಾರಣಾರ್ಥ ಯಜ್ಞಗಳು ಹೇಗೆ ನೆರವೇರಿಸಬೇಕು, ಅದರ ರಕ್ತವನ್ನು ಆ ಜನರ ಮೇಲೆ ಹೇಗೆ ಸಿಂಪಡಿಸಬೇಕು ಎಂಬುದನ್ನು ಮತ್ತು ಇವುಗಳನ್ನೆಲ್ಲಾ ನಿರ್ವಹಿಸುವಂತೆ ಒಂದು ಕಿರುಚಿತ್ರ ಮತ್ತು ಸಾಂಕೇತಿಕ ಪ್ರತಿನಿಧಿತ್ಯವಾಗಿ ಹೇಗೆ ನಿಜವಾದ ಯಾಜಕತ್ವ ಮತ್ತು ಬಲಿದಾನಗಳು ಲೋಕದ ಮನುಕುಲವನ್ನು ಪರಿಶುದ್ಧಗೊಳಿಸುತ್ತಿದೆ ಎಂಬದಾಗಿತ್ತು. ದೇವರು ತನ್ನ ಜನರೊಡನೆ ಮಾತನಾಡುತ್ತಾ – "ಭೂಮಿಯ ಸಕಲ ಕುಲಗಳೊಳಗೆ ನಿಮ್ಮನ್ನು ಮಾತ್ರ ನನ್ನವರೆಂದು ಅರಿತುಕೊಂಡಿದ್ದೇನೆ" (ಆಮೋಸ 3:2) ಎಂದಿದ್ದಾನೆ. ಕ್ರಿಸ್ತನು ಬರುವವರೆಗೆ ಈ ಜನರನ್ನು ಮಾತ್ರವೇ ಮಾನ್ಯ ಮಾಡಲಾಗಿತ್ತು. ಹೌದು, ಅನಂತರ, ಆತನ ಸೇವೆಯನ್ನು ಅವರಿಗೆ ನಿರ್ಬಂಧಗೊಳಿಸಲಾಯಿತು. ಆತನು ತನ್ನ ಶಿಷ್ಯರನ್ನು ಬೇರೆಯವರ ಬಳಿಗೆ ಹೋಗಲು ಅನುಮತಿಸಲಿಲ್ಲ– "ಅನ್ಯಜನಗಳ ಕಡೆಗೆ ಹೋಗಬೇಡಿರಿ, ಸಮಾರ್ಯರ ಊರೊಳಗೆ ಕಾಲಿಡ ಬೇಡಿರಿ" (ಮತ್ತಾಯ 10:5,6) ಎಂದು ಹೇಳಿದನು. ಹೀಗ್ಯಾಕೆ ಸ್ವಾಮೀ ಎಂದು ಕೇಳಲು "ತಪ್ಪಿಸಿಕೊಂಡಿರುವ ಇಸ್ರಾಯೇಲನ ಮನೆತನದವರ ಬಳಿಗೇ ಹೊರತು ಮತ್ತಾರ ಬಳಿಗೂ ನಾನು ಕಳುಹಿಸಲ್ಪಟ್ಟವನಲ್ಲ" ಅಂದನು (ಮತ್ತಾಯ 15:24). ಆತನ ಮರಣದವರೆಗೆ ಆತನ ಎಲ್ಲಾ ಸಮಯವೂ ಅವರಿಗೇ ಮೀಸಲಾಗಿತ್ತು ಮತ್ತು ಆತನು ಸಮಸ್ತಲೋಕಕ್ಕೆ ಮಾಡಿದ ಮೊಟ್ಟಮೊದಲ ಮಹಾಕಾರ್ಯವೆಂದರೆ ಆತನ ಉಚಿತ ಮತ್ತು ಸರ್ವಸಮೃದ್ಧವಾದ ಕೃಪೆಯ ಪ್ರದರ್ಶನ. ಅದು

"ತಕ್ಕ ಸಮಯ"ದಲ್ಲಿ ಖಂಡಿತವಾಗಿಯೂ ಸಮಸ್ತರಿಗೂ ಆಶೀರ್ವಾದಕರವಾಗಿರುತ್ತದೆ.

ದೇವರ ಈ ಮಹಾ ಕೊಡುಗೆಯು ಒಂದು ಜನಾಂಗ ಅಥವಾ ಯಾವುದೇ ವರ್ಗಕ್ಕೂ ಸೀಮಿತವಾಗಿಲ್ಲ. ಅದು ಇಸ್ರಾಯೇಲ್ಯರಿಗೆ ಮಾತ್ರವಲ್ಲ, ಆದರೆ ಸಮಸ್ತ ಲೋಕದವರಿಗೆ ಸಹಾ. ಯಾಕೆಂದರೆ, ದೇವರ ಕೃಪೆಯಿಂದ ಯೇಸುಕ್ರಿಸ್ತನು ಪ್ರತಿಯೊಬ್ಬ ಮನುಷ್ಯನಿಗಾಗಿ ಮರಣದ ರುಚಿಯನ್ನು ಅನುಭವಿಸಿದನು (ಇಬ್ರಿಯ 2:9).

ಈಗಲೂ ಸಹಾ, ಸುವಾರ್ತಾಯುದಲ್ಲಿ, ಒಂದು ವಿಧವಾದ ಆಯ್ಕೆಯನ್ನು ಪಡಕೊಳ್ಳಲಾಗುತ್ತದೆ. ಭೂಲೋಕದ ಕೆಲವು ಭಾಗಗಳು ಹೆಚ್ಚಾಗಿ ಸುವಾರ್ತೆಯ ದಯೆಯನ್ನು ಹೊಂದಿಕೊಂಡಿವೆ – ಇತರರಿಗಿಂತ (ಅದನ್ನು ಕೇಳಿಸಿಕೊಳ್ಳುವವರಿಗೆಲ್ಲಾ ಅದು ಉಚಿತವಾಗಿದೆ). ಪ್ರಪಂಚದ ನಕ್ಷೆಯ ಕ್ಷಣದರ್ಶನವನ್ನು ಒಮ್ಮೆ ಮಾಡಿರಿ ಮತ್ತು ಯಾವುದೇ ಮೆಚ್ಚಿಕೊಳ್ಳ ಬಹುದಾದ ಮಟ್ಟದಲ್ಲಿ ಕ್ರಿಸ್ತನ ಸುವಾರ್ತೆಯಿಂದ ಜ್ಞಾನೋದಯ ಹೊಂದಿದ ಅಥವಾ ಆಶೀರ್ವಾದ ಪಡೆದವರ ಸಂಖ್ಯೆಯು ಎಷ್ಟು ಅಲ್ಪ ಭಾಗವಾಗಿದೆಯೆಂದು ನೋಡುವಿರಿ. ನಿಮಗಿರುವ ಸವಲತ್ತುಗಳು ಮತ್ತು ಜ್ಞಾನದೊಂದಿಗೆ, ಇಂದು ಅಂಧಕಾರದಲ್ಲಿರುವ ಮತ್ತು ಎಂದೂ ಕರೆಯನ್ನು ಕೇಳದ ಮತ್ತು ಅದರ ಫಲವಾಗಿ ಕರೆಯಲ್ಪಡದ ಮಿಲಿಯಾಂತರ ಅನ್ಯಜನರೊಡನೆ ನಿಮ್ಮನ್ನು ತಾರತಮ್ಯಗೊಳಿಸಿಕೊಳ್ಳಿರಿ. ಕರೆಯಲ್ಪಟ್ಟ ಸಮೂಹದವರು (ದೇವರ ಮಕ್ಕಳಾಗುವುದಕ್ಕೆ ಕರೆಯಲ್ಪಟ್ಟವರು, ದೇವರ ಬಾಧ್ಯಸ್ಥರು, ಅವರ ಕರೆಯನ್ನು ಮತ್ತು ಆಯ್ಕೆಯನ್ನು ಖಾತರಿಪಡಿಸಿದ ನಮ್ಮ ಕರ್ತನಾದ ಯೇಸುವಿನೊಂದಿಗೆ ಜೊತೆಬಾಧ್ಯಸ್ಥರು, ತಮ್ಮ ಕರೆ ಮತ್ತು ಆಯ್ಕೆಯನ್ನು ಖಚಿತಪಡಿಸಿದವರು). ಅದು ಸಂಪೂರ್ಣವಾದಾಗ, ಲೋಕದ ರಕ್ಷಣೆಗೆ ದೇವರ ಯೋಜನೆಯು ಆಗ ಮಾತ್ರವೇ ಪ್ರಾರಂಭಗೊಳ್ಳುವುದು.

ಅದನ್ನು ಆಯ್ಕೆಮಾಡಿ, ಅಭಿವೃದ್ಧಿಪಡಿಸಿ ಮತ್ತು ಅಧಿಕಾರಕ್ಕೆ ಏರಿಸುವವರೆಗೂ ಸಂತಾನವು ಸರ್ಪದ ತಲೆಯನ್ನು ಜಜ್ಜುವುದಿಲ್ಲ. "ಶಾಂತಿದಾಯಕನಾದ ದೇವರು ಶೀಘ್ರವಾಗಿ ಸೈತಾನನನ್ನು ನಿಮ್ಮ ಕಾಲುಗಳ ಕೆಳಗೆ ಹಾಕಿ ತುಳಿಸಿಬಿಡುವನು" (ರೋಮಾ. 16:20, ಆದಿಕಾಂಡ 3:15). ಸುವಾರ್ತಾಯುಗವು ಪರಿಶುದ್ಧಳಾದ ಕನ್ಯೆಯನ್ನು, ನಿಷ್ಠಾವಂತ ಸಭೆಯನ್ನು, ಮದಲಿಂಗನಾಗಿ ಸಿದ್ಧಪಡಿಸುವುದು. ಮತ್ತು ಯುಗದ ಅಂತ್ಯದಲ್ಲಿ, ಆಕೆಯು ಸಿದ್ಧಳಾದಾಗ (ಪ್ರಕಟನೆ 19:7), ಮದಲಿಂಗನು ಬರುತ್ತಾನೆ, ಮತ್ತು ಸಿದ್ಧರಾಗಿರುವವರು ಆತನ ಸಂಗಡ ವಿವಾಹಕ್ಕೆ ಹೋಗುವರು – ಎರಡನೆಯ ಆದಾಮನು ಮತ್ತು ಎರಡನೆಯ ಹವ್ವಳು ಒಂದಾಗುವರು, ನಂತರದಲ್ಲಿ ಪುನರ್ಸ್ಥಾಪನೆಯ ಭವ್ಯ ಕಾರ್ಯವು ಆರಂಭ ಗೊಳ್ಳುವುದು. ಮುಂದಿನ ಹಂಚಿಕೆಯಲ್ಲಿ (ಅವಧಿಯಲ್ಲಿ), ನೂತನ ಆಕಾಶವು ಮತ್ತು ನೂತನ ಮಂಡಲದಲ್ಲಿ, ಸಭೆಯು ಪರಿಗ್ರಹಿಸಲ್ಪಟ್ಟ ಕನ್ಯೆಯಾಗಿರದೆ, ಮದಲಗಿತ್ತಿಯಾಗಿರುತ್ತದೆ. "ಆತ್ಮನೂ, ಮದಲಗಿತ್ತಿಯೂ – ಬಾ ಅನ್ನುತ್ತಾರೆ, ಕೇಳುವವನು ಬಾ ಅನ್ನಲಿ, ಬಾಯಾರಿದವನು ಬರಲಿ. ಇಷ್ಟವುಳ್ಳವನು ಜೀವಜಲವನ್ನು ಕ್ರಯವಿಲ್ಲದೆ ತೆಗೆದುಕೊಳ್ಳಲಿ" (ಪ್ರಕಟನೆ 22:17).

ಸುವಾರ್ತಾ ಯುಗವು, ಸಭೆಯ ಧರ್ಮಪ್ರಚಾರಕ ನಿಯೋಗವನ್ನು ಮುಕ್ತಾಯಗೊಳಿಸುವುದರಿಂದ ದೂರವಿದ್ದು, ಮುಂದಿನ ಮಹಾಕಾರ್ಯಕ್ಕೆ ಅಗತ್ಯವಾದ ಸಿದ್ಧತೆ ಮಾತ್ರವಾಗಿದೆ. ಈ ವಾಗ್ದಾನಪಡಿಸಿದ ಮತ್ತು ಬರಲಿರುವ ಆಶೀರ್ವಾದಕ್ಕೆ, "ಜಗತ್ತೆಲ್ಲಾ ಇಂದಿನವರೆಗೂ ನರಳುತ್ತಾ ಪ್ರಸವವೇದನೆಪಡುತ್ತಾ ಇರುತ್ತದೆಂದು ಬಲ್ಲೆವು", "ದೇವಪುತ್ರರ ಮಹಿಮೆಯು ಯಾವಾಗ ಪ್ರತ್ಯಕ್ಷವಾದೀತೆಂದು ಬಹು ಲವಲವಿಕೆಯಿಂದ ಎದುರು ನೋಡುತ್ತಿರುವದು" (ರೋಮಾ. 8:22,19). ಉಚಿತಾರ್ಥವಾದ ಕೃಪೆಯು ಜೀವಿಸುವವರಿಗೆ ಮಾತ್ರವಲ್ಲದೆ, ಸತ್ತವರಿಗೂ ಸಹಾ ಪೂರ್ಣಪ್ರಮಾಣದ ಆಶೀರ್ವಾದಕರ ಸತ್ಯವಾಗಿದೆ ಮತ್ತು ಅದು ಮುಂಬರುವ ಯುಗಗಳ ಆಶೀರ್ವಾದದ ಅವಕಾಶವಾಗಿ ನಮ್ಮ ತಂದೆಯ ಯೋಜನೆಯಲ್ಲಿ ಒದಗಿಸಲ್ಪಟ್ಟಿದೆ.

ಎರಡನೆಯ ಆಗಮನದಲ್ಲಿ ಸಿಗಬೇಕಾದ ಆಶೀರ್ವಾದಗಳನ್ನು ನೋಡಬಲ್ಲ ಕೆಲವರು ಮತ್ತು ಆತನ ಮರಣದಿಂದ ಖರೀದಿಸಿದ ಭವ್ಯವಾದ ಆಶೀರ್ವಾದವನ್ನು ನೀಡಲು ಕರ್ತನು ಬರುತ್ತಿದ್ದಾನೆ ಎಂಬ ಸತ್ಯವನ್ನು ಕೆಲಮಟ್ಟಿಗೆ ಪ್ರಶಂಸಿಸುವರು. ಆದರೆ ಈ ಕಡೆಯ ಪ್ರಸ್ತಾಪವನ್ನು ನೋಡುವಲ್ಲಿ ವಿಫಲರಾಗುತ್ತಾರೆ. ಅದೇನೆಂದರೆ: ಇತರರು ನಾಶದ ವಶದಿಂದ – ಮರಣದಿಂದ ಬಿಡುಗಡೆ ಹೊಂದಲು ಆಸಕ್ತರಾಗಿರುವಂತೆ, ಸಮಾಧಿಯಲ್ಲಿರುವವರು ಆ ಸಮಯದಲ್ಲಿ – ಮರಣದ ದಾಸತ್ವದಲ್ಲಿರುವವರು ಮೆಸ್ಸೀಯನ ಆ ಮಹಿಮೆಯಾದ ಆಡಳಿತದ ಬಗ್ಗೆ ಆಸಕ್ತರಾಗಿದ್ದರು. ಆದರೆ ಯೇಸು ಎಲ್ಲರಿಗೋಸ್ಕರ ಮರಣಹೊಂದಿದ ಸತ್ಯದಂತೆಯೇ, ಅವರೆಲ್ಲರಿಗೂ ಆತನು ತನ್ನ ಅಮೂಲ್ಯವಾದ ರಕ್ತದ ಮೂಲಕ ಕೊಂಡುಕೊಂಡ ಆಶೀರ್ವಾದಗಳ ಅವಕಾಶಗಳು

ಇರಬೇಕು. ಹೀಗಾಗಿ ನಾವು ಸಹಸ್ರಮಾನಯುಗದಲ್ಲಿ ಸಮಾಧಿಯಲ್ಲಿರುವವರಿಗೆ ಮಾತ್ರವಲ್ಲ, ಅದರಲ್ಲಿಲ್ಲದವರಿಗೂ ಆಶೀರ್ವಾದಗಳನ್ನು ನಿರೀಕ್ಷಿಸಬಹುದಾಗಿದೆ. ಈ ಬಗ್ಗೆ ನಾವು ಕರ್ತನ ಮುಂದಿನ ಸಾಕ್ಷ್ಯಗಳನ್ನು ನೋಡುವಾಗ ನಮಗೆ ಸಾಕಷ್ಟು ಪುರಾವೆಗಳು ದೊರೆಯುತ್ತವೆ, ಅವರ ಬಿಡುಗಡೆಯ ಬಗ್ಗೆ ದೇವರ ಯೋಜನೆಯ ಕಾರಣದಿಂದ ಸಮಾಧಿಯಲ್ಲಿರುವವರನ್ನು "ನಿರೀಕ್ಷೆಯುಳ್ಳ ಕೈದಿಗಳು" ಎಂದು ಕರೆಯಲಾಗಿದೆ.

ಆದಾಮನ ಸೃಷ್ಟಿಯಿಂದ ಆರು ಸಾವಿರ ವರ್ಷಗಳಲ್ಲಿ ಸುಮಾರು ನಾಲ್ವತ್ಮೂರು ಬಿಲಿಯನ್ ಜನರು ಈ ಭೂಮಿಯ ಮೇಲೆ ಜೀವಿಸುತ್ತಿದ್ದರೆಂದು ಅಂದಾಜಿಸಲಾಗಿದೆ. ಅವರುಗಳಲ್ಲಿ, ಒಂದು ಬಿಲಿಯನ್‌ಗೂ ಕಡಿಮೆ ಜನರು ದೈವಭಕ್ತರಾಗಿದ್ದರು ಎಂದು ವಿಶಾಲವಾಗಿ ನಾವು ವಿವೇಚನೆಯಿಂದ ಅಂದಾಜಿಸಬಹುದಾಗಿದೆ. ಈ ವಿಶಾಲವಾದ ಅಂದಾಜು ಅಂದರೆ, ಸರಾಸರಿ ನೂರಾ ನಾಲ್ವತ್ತೆರಡು ಬಿಲಿಯನ್ (142,000000000) ಜನರು ಆಕಾಶದ ಕೆಳಗೆ ಅಥವಾ ಮನುಷ್ಯರೊಳಗೆ ರಕ್ಷಣೆ ಹೊಂದಿಕೊಳ್ಳುವಂತೆ ನೀಡಲ್ಪಟ್ಟಿರುವ ಒಂದೇ ಹೆಸರಿನಲ್ಲಿ ನಂಬಿಕೆಯಿಡದೆ, ನಿರೀಕ್ಷೆಯಿಲ್ಲದೆ ಮರಣವನ್ನಪ್ಪಿರುವರೆಂದು ನಾವು ಅಂದಾಜಿಸಬಹುದು. ವಾಸ್ತವವಾಗಿ, ಇದರಲ್ಲಿ ಬಹಳ ಹೆಚ್ಚಿನವರಿಗೆ ಯೇಸುವಿನ ಬಗ್ಗೆ ಪರಿಚಯವಿದ್ದಿಲ್ಲದಿರಬಹುದು, ಆ ಹೆಸರನ್ನು ಎಂದಿಗೂ ಕೇಳಿದ್ದಿಲ್ಲದಿರಬಹುದು. ಹೀಗಾಗಿ ಅವರು ಕೇಳದೇ ಇದ್ದ ಕಾರಣ ನಂಬದೇ ಇರಬಹುದು.

ಯಾವ ಅಂಕೆ ಸಂಖ್ಯೆಗಳು ನಮಗೆ ಸಮಗ್ರವಾದ ಅಸಮರ್ಪಕ ಕಲ್ಪನೆಗಳನ್ನು ನೀಡುತ್ತವೆಯೋ, ಆ ಬೃಹತ್ ಜನಸಮೂಹದವರಿಗೆ ಏನಾಗಬಹುದೆಂದು ನಾವು ಕೇಳುತ್ತೇವೆ. ಅವರ ಸ್ಥಿತಿ ಏನಾಗಿದೆ? ಏನಾಗಬಹುದು? ದೇವರು ಇವರಿಗಾಗಿ ಯಾವುದಾದರೂ ಏರ್ಪಾಡುಗಳನ್ನು ಮಾಡದಿರುವನೋ? ಅವರ ಪರಿಸ್ಥಿತಿ ಮತ್ತು ಸನ್ನಿವೇಶಗಳನ್ನು ಆತನು ಮೊದಲೇ ನೋಡಿರುವನಲ್ಲವೋ? ಅಥವಾ ಆತನ ಲೋಕದ ಸ್ಥಾಪನೆಯ ಮೂಲದಿಂದಲೇ ಅನಿಷ್ಟವಾದ ನಿಷ್ಕರುಣಾ ಹಂಚಿಕೆಯೊಂದನ್ನು ಹೂಡಿ ಆತನ ಅನೇಕ ಮಕ್ಕಳು ಹೇಳುವಂತೆ ಅವರಿಗೆ ನಿರಂತರವಾದ ಯಾತನೆಯನ್ನುಂಟು ಮಾಡುವನೋ? ಅಥವಾ ಆತನ ಯೋಜನೆಯಲ್ಲಿನ ಎತ್ತರ, ಆಳ, ಉದ್ದ, ಅಗಲದಲ್ಲಿ ಎಲ್ಲರೂ ಆ ಒಂದೇ ಹೆಸರಿನ ಜ್ಞಾನಕ್ಕೆ ಬರುವಂತೆ, ಷರತ್ತುಗಳನ್ನು ಒಪ್ಪಿಕೊಂಡು ಅದಕ್ಕೆ ವಿಧೇಯರಾಗಿ ನಿತ್ಯಜೀವವನ್ನು ಹೊಂದಿಕೊಳ್ಳುವ ಅವಕಾಶವೇನಾದರೂ ಆತನು ಇನ್ನೂ ಸಂಗ್ರಹಿಸಿಟ್ಟಿದ್ದಾನೆಯೇ?

ಪ್ರತಿಯೊಬ್ಬ ಆಲೋಚನಾ ಕ್ರೈಸ್ತನು ತನಗೆ ತಾನೇ ಹಾಕಿಕೊಳ್ಳುವ ಈ ಪ್ರಶ್ನೆಗಳಿಗೆ ಮತ್ತು ಅವುಗಳಿಗೆ ಯೆಹೋವನ ಗುಣಲಕ್ಷಣಗಳೊಂದಿಗೆ ಸಾಮರಸ್ಯವುಳ್ಳ ಸತ್ಯಪೂರ್ವಕವಾದ ಉತ್ತರಗಳನ್ನು ಕಂಡುಕೊಳ್ಳಲು ಹಾತೊರೆಯುವವರಿಗೆ, ವಿವಿಧ ರೀತಿಯ ಉತ್ತರಗಳು ಕೆಳಕಂಡಂತೆ ದೊರೆಯಲಿವೆ :–

**ನಾಸ್ತಿಕವಾದಿಗಳ ಉತ್ತರ :** ಅವರುಗಳು ಶಾಶ್ವತವಾಗಿ ತೀರಿಕೊಂಡಿದ್ದಾರೆ; ಇನ್ನು ಮುಂದೆ ಇಲ್ಲ, ಅವರು ಪುನಃ ಬದುಕುವುದಿಲ್ಲ.

**ಕಾಲ್ವಿನಿಸಂನವರ ಉತ್ತರ :** ಅವರುಗಳು ರಕ್ಷಣೆ ಹೊಂದಲು ಆಯ್ಕೆಗೊಂಡಿಲ್ಲ. ದೇವರು ಅವರನ್ನು ಕಳೆದುಹೋಗುವಂತೆ – ನರಕಕ್ಕೆ ಹೋಗುವಂತೆ ಮೊದಲೇ ನಿರ್ಧರಿಸಿ ಪೂರ್ವನಿಶ್ಚಯಪಡಿಸಿದ್ದಾನೆ – ಅವರು ಈಗ ಅಲ್ಲಿದ್ದಾರೆ, ಮರಣಯಾತನೆಯಲ್ಲಿ ನರಳುತ್ತಿದ್ದಾರೆ, ಅವರು ಅಲ್ಲಿ ಯಾವುದೇ ನಿರೀಕ್ಷೆಯಿಲ್ಲದೆ ಸದಾ ಉಳುಕೊಳ್ಳುತ್ತಾರೆ.

**'ಆರ್ಮಿನಿಯೇನಿಸಂ'ರವರ ಉತ್ತರ :** ಅಜ್ಞಾನದ ಕಾರಣದಿಂದಾಗಿ ದೇವರು ಅವರಲ್ಲಿ ಅನೇಕರನ್ನು ಕ್ಷಮಿಸುತ್ತಾನೆಂದು ನಾವು ನಂಬುತ್ತೇವೆ. ಅವರಿಗೆ ತಿಳಿದಿರುವ ಅತ್ಯುತ್ತಮವಾದುದನ್ನು ಮಾಡಿದವರಿಗೆ ಅವರು ಯೇಸುವಿನ ಬಗ್ಗೆ ಎಂದೂ ಕೇಳದೇ ಹೋದಾಗ್ಯೂ ಸಹ ಹೇಗೆ 'ಚೊಚ್ಚಲ ಸಭೆಯ' ಭಾಗವಾಗುವುದೆಂದು ಖಚಿತವಾಗಿರುತ್ತಾರೆ.

ಈ ಕೊನೆಯ ದೃಷ್ಟಿಕೋನಕ್ಕೆ ಎಲ್ಲಾ ಪಂಗಡಗಳ ಬಹುಪಾಲು ಕ್ರೈಸ್ತರು (ಅದು ಅವರ ಕೆಲವು ಮತಾಭಿಪ್ರಾಯಗಳಿಗೆ ವಿರೋಧವಾಗಿ ಕಂಡುಬಂದರೂ) ಬೇರೆ ಯಾವ ದೃಷ್ಟಿಕೋನವೂ ದೇವರ ಭಾಗದ ನ್ಯಾಯದೊಂದಿಗೆ ಸರಿಪಡಿಸಲಾಗದು ಎಂಬ ಕಾರಣಕ್ಕೆ ಸಮ್ಮತಿಸುತ್ತಾರೆ. ಆದರೆ ಪರಿಶುದ್ಧ ಗ್ರಂಥವು ಈ ಕೊನೆಯ ದೃಷ್ಟಿಕೋನವನ್ನು ಬೆಂಬಲಿಸುವುದೋ? ಅಜ್ಞಾನವು ರಕ್ಷಣೆಗೆ ನೆಲೆಯಾಗಿದೆ ಎಂದು ಅವು ಬೋಧಿಸುತ್ತವೆಯೋ? ಇಲ್ಲ; ದೇವರ ವಾಕ್ಯಗಳಲ್ಲಿ ಹೇಳಿರುವ ರಕ್ಷಣೆಯ ಏಕೈಕ ಆಧಾರವೆಂದರೆ, ಕ್ರಿಸ್ತನನ್ನು ನಮ್ಮ ವಿಮೋಚಕನು ಮತ್ತು ಕರ್ತನು ಎಂದು ನಂಬುವುದು – "ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆ ಹೊಂದವರಾಗಿದ್ದೀರಿ" (ಎಫೆಸ 2:8). ನಂಬಿಕೆಯ ಮೂಲಕ ನೀತಿನಿರ್ಣಯ ಎಂಬುದು ಕ್ರೈಸ್ತತ್ವದ ಇಡೀ

ವ್ಯವಸ್ಥೆಯ ಆಧಾರಕವಾದ ಮೂಲ ತತ್ವವಾಗಿದೆ. "ನಾನು ರಕ್ಷಣೆ ಹೊಂದುವುದಕ್ಕೆ ಏನು ಮಾಡಬೇಕೆಂದು ಕೇಳಲು ಅವರು "ಕರ್ತನಾದ ಯೇಸುಕ್ರಿಸ್ತನ ಮೇಲೆ ನಂಬಿಕೆ ಇಡು, ಆಗ ನೀನು ರಕ್ಷಣೆ ಹೊಂದುವಿ. ನಿನ್ನ ಮನೆಯವರೂ ರಕ್ಷಣೆ ಹೊಂದುವರು (ಅ.ಕೃ. 16: 30–31) ಎಂದು ಹೇಳಿದರು. "ಬರಬೇಕಾದ ರಕ್ಷಣೆಯು ಇನ್ನಾರಲ್ಲಿಯೂ ಸಿಕ್ಕುವುದಿಲ್ಲ; ಆ ಹೆಸರಿನಿಂದಲೇ ಹೊರತು ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟಿರುವ ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುವುದಿಲ್ಲ" (ಅ.ಕೃ. 4:12). "ಕರ್ತನ ನಾಮವನ್ನು ಹೇಳಿಕೊಳ್ಳುವವರೆಲ್ಲರಿಗೂ ರಕ್ಷಣೆ ಯಾಗುವುದೆಂದು ಬರೆದದೆ" (ರೋಮಾ. 10:13).

ಆದರೆ ಒಬ್ಬ ವ್ಯಕ್ತಿಯು ತಾನು ನಂಬುವ ಮೊದಲು ಸುವಾರ್ತೆಯನ್ನು ಕೇಳಬೇಕು ಎಂದು ಪೌಲನು ವಾದಿಸುತ್ತಾನೆ. "ಹಾಗಾದರೆ ತಾವು ಯಾವನನ್ನು ನಂಬಲಿಲ್ಲವೋ ಆತನ ನಾಮವನ್ನು ಹೇಳಿಕೊಳ್ಳುವುದು ಹೇಗೆ? ಮತ್ತು ಆತನ ಸುದ್ದಿ ಕೇಳದಿರುವಲ್ಲಿ ಆತನನ್ನು ನಂಬುವುದು ಹೇಗೆ?" (ರೋಮಾ. 10:14) ಎಂದು ಪ್ರಶ್ನಿಸುತ್ತಾನೆ.

"ಧರ್ಮಶಾಸ್ತ್ರವಿಲ್ಲದ ಅನ್ಯಜನರು ಸ್ವಾಭಾವಿಕವಾಗಿ ಧರ್ಮಶಾಸ್ತ್ರದಲ್ಲಿ ಹೇಳಿದಂತೆ ನಡೆದರೆ ಅವರು ಧರ್ಮಶಾಸ್ತ್ರವಿಲ್ಲದವರಾಗಿದ್ದರೂ ತಾವೇ ತಮಗೆ ಧರ್ಮಪ್ರಮಾಣವಾಗಿದ್ದಾರೆ" (ರೋಮಾ. 2:14) ಎಂದು ಪೌಲನು ಹೇಳಿರುವುದರಿಂದ ಕೆಲವರು ಅಜ್ಞಾನವು ಮನುಷ್ಯರನ್ನು ರಕ್ಷಿಸುತ್ತದೆ ಎಂಬುದಾಗಿ ಪೌಲನ ಬೋಧಿಸುತ್ತಾನೆಂದು ಕೆಲವರು ಹೇಳಿಕೊಳ್ಳುತ್ತಾರೆ. ಇದರಿಂದ ಅವರು ಅವರ ಮನಸ್ಸಾಕ್ಷಿಯು ಒದಗಿಸುವ ನಿಯಮವು ತಮ್ಮನ್ನು ಸಮರ್ಥಿಸಿಕೊಳ್ಳಲು ಸಾಕಾಗುತ್ತದೆ ಎಂದು ಅವರು ಭಾವಿಸುತ್ತಾರೆ. ಆದರೆ, ಅಂಥವರು ಪೌಲನನ್ನು ತಪ್ಪಾಗಿ ತಿಳಿದಿದ್ದಾರೆ. ಆತನ ವಾದ ಏನೆಂದರೆ "ಲೋಕವೆಲ್ಲಾ ದೇವರ ಮುಂದೆ ಅಪರಾಧಿಯಾಗಿ ನಿಲ್ಲುವುದು" (ರೋಮಾ. 3:19); ಹೀಗಾಗಿ ಯಾವುದೇ ಲಿಖಿತವಾದ ನಿಬಂಧನೆಗಳಿಲ್ಲದ ಅನ್ಯಜನರನ್ನು ಖಂಡಿಸಲಾಗುವುದೇ ಹೊರತು ಅವರನ್ನು ಮನಸ್ಸಾಕ್ಷಿಯ ಬೆಳಕಿನಲ್ಲಿ ಸಮರ್ಥಿಸುವುದಿಲ್ಲ, ಅದು ಅವರನ್ನು ಕ್ಷಮಿಸುತ್ತದೆಯೋ, ದೂಷಿಸುತ್ತದೆಯೋ ಎಂಬುದು ಅವರ ಸಮರ್ಪಕತೆಗೆ, ಕಡಿಮೆಯಾಗಿದ್ದಾರೆಂದೂ, ಜೀವಿಸಲು ಅನರ್ಹರಾಗಿದ್ದಾರೆಂದು ರುಜುವಾತು ಪಡಿಸುತ್ತದೆ. ಲಿಖಿತ ನಿಯಮಗಳುಳ್ಳ ಯೆಹೂದ್ಯರು ಸಹ ಇದರಿಂದ ಖಂಡಿಸಲ್ಪಟ್ಟಿದ್ದಾರೆ. "ಧರ್ಮಶಾಸ್ತ್ರದಿಂದ ಪಾಪದ ಅರಹು ಉಂಟಾಗುತ್ತದಷ್ಟೆ" (ರೋಮಾ. 3:20). ಯೆಹೂದ್ಯನಿಗೆ ನೀಡಲ್ಪಟ್ಟ ಧರ್ಮಶಾಸ್ತ್ರವು ಆತನ ಬಲಹೀನತೆಯನ್ನು ಬಹಿರಂಗಪಡಿಸುತ್ತದೆ ಮತ್ತು ಆತನು ತನ್ನನ್ನು ದೇವರ ಮುಂದೆ ಸಮರ್ಥಿಸಿಕೊಳ್ಳಲಾರನು ಎಂದು ತೋರಿಸುವ ಉದ್ದೇಶವುಳ್ಳದ್ದಾಗಿದೆ – "ಯಾಕೆಂದರೆ ಯಾವನಾದರೂ ನೇಮನಿಷ್ಠೆಗಳನ್ನನುಸರಿಸಿ ದೇವರ ಸನ್ನಿಧಿಯಲ್ಲಿ ನೀತಿವಂತನೆಂದು ನಿರ್ಣಯಿಸಲ್ಪಡುವುದಿಲ್ಲ" (ರೋಮಾ. 3:20). ಲಿಖಿತ ನಿಯಮವು ಯೆಹೂದ್ಯರನ್ನು ಖಂಡಿಸುತ್ತದೆ ಮತ್ತು ಅನ್ಯಜನರು ಮನಸ್ಸಾಕ್ಷಿಯ ಸಾಕಷ್ಟು ಬೆಳಕುಳ್ಳವರಾಗಿದ್ದು ಅದರಿಂದ ಖಂಡಿಸಲ್ಪಡುತ್ತಾರೆ. ಆದುದರಿಂದ ಪ್ರತಿಯೊಂದು ಜೀವನದ ಹಕ್ಕನ್ನು ಕೇಳುವ ಬಾಯಿಗಳು ಕಟ್ಟಿಹೋಗಿವೆ ಮತ್ತು ಲೋಕವೆಲ್ಲವೂ ದೇವರ ಮುಂದೆ ಅಪರಾಧಿಯಾಗಿ ನಿಲ್ಲುವುದು (ರೋಮಾ. 3:19).

"ಯಾವನಾದರೂ ಧರ್ಮಶಾಸ್ತ್ರವನ್ನೆಲ್ಲಾ ಕೈಕೊಂಡು ನಡೆದು ಒಂದೇ ಒಂದರಲ್ಲಿ ತಪ್ಪಿದರೆ ಅವನು ಎಲ್ಲಾ ವಿಷಯದಲ್ಲಿಯೂ ಅಪರಾಧಿಯಾಗುತ್ತಾನೆ" (ಯಾಕೋಬ 2:10) ಮತ್ತು ಆತನು ಒಡಂಬಡಿಕೆಯ ನಿಯಮದಲ್ಲಿನ ಆಶೀರ್ವಾದಗಳನ್ನು ಪಡಕೊಳ್ಳಲಾರನು ಯಾಕೋಬನ ಹೇಳಿಕೆಯನ್ನು ನೆನಪುಮಾಡಿಕೊಳ್ಳುವಾಗ, ನಾವು "ನೀತಿವಂತನು ಇಲ್ಲ, ಒಬ್ಬನಾದರೂ ಇಲ್ಲ" (ರೋಮಾ. 3:10) ಎಂಬ ವಚನವನ್ನು ನಿಜವಾಗಿಯೂ ಗ್ರಹಿಸಿಕೊಳ್ಳುತ್ತೇವೆ. ಈ ರೀತಿಯಲ್ಲಿ ದೇವರ ಪರಿಶುದ್ಧ ಗ್ರಂಥವು ಒಂದನ್ನು ಹೊರತುಪಡಿಸಿ ರಕ್ಷಿಸುವ ಭರವಸೆಯ ಪ್ರತಿಯೊಂದು ಬಾಗಿಲನ್ನೂ ಮುಚ್ಚಿಬಿಟ್ಟಿದೆ, ಮತ್ತು ಖಂಡಿಸಲ್ಪಟ್ಟ ಯಾವೊಬ್ಬನೂ ತನ್ನ ಪ್ರಶಂಸನಾರ್ಹ ಕಾರ್ಯಗಳಿಂದ ನಿತ್ಯಜೀವವನ್ನು ಪಡಕೊಳ್ಳಲಾರನು ಮತ್ತು ಅಜ್ಞಾನವು ರಕ್ಷಣೆಯ ಅಸ್ಥಿವಾರವಾಗುತ್ತದೆಂದು ವಾದಿಸುವುದು ವ್ಯರ್ಥಎಂಬ ಸತ್ಯವನ್ನು ತೋರಿಸುತ್ತದೆ. ರಕ್ಷಣೆಯ ನೆಲೆಯಾಗಿ ಅಜ್ಞಾನವು ನಂಬಿಕೆ ಮತ್ತು ವಿಧೇಯತೆಯ ಪ್ರತಿಫಲಕ್ಕೆ ಯಾರಿಗೂ ಅರ್ಹತೆ ನೀಡುವುದಿಲ್ಲ.

ಇಷ್ಟೊಂದು ಮಿಲಿಯಾಂತರ ಮಂದಿ ತಿಳುವಳಿಯಿಲ್ಲದ ಅನ್ಯರು ಮತ್ತು ಶಿಶುಗಳು ನಿತ್ಯವಾಗಿ ನಾಶವಾಗುವರು ಎಂಬುದನ್ನು ನಂಬಲು ಅನೇಕ ಕ್ರೈಸ್ತರು ಸಿದ್ಧರಿಲ್ಲ (ಅವರನ್ನು ನಿತ್ಯವಾದ ಮತ್ತು ನಿರೀಕ್ಷೆಯಿಲ್ಲದ ಯಾತನೆಯ ಸ್ಥಳಕ್ಕೆ ಕಳುಹಿಸಲಾಗುತ್ತದೆ ಎಂದು ಕಲಿಸಿರುತ್ತಾರೆ), ಈ ಸತ್ಯವೇದದ ಹೇಳಿಕೆಗಳನ್ನು ಎದುರಿಸಲು ಮನಸ್ಸಿಲ್ಲದೆ ದೇವರು ಅಜ್ಞಾನವನ್ನು ಖಂಡಿಸುವುದಿಲ್ಲವೆಂದು ಆಗ್ರಹಪಡಿಸುತ್ತಾರೆ. ನಾವು ಅವರ ಹೃದಯ ಉದಾರತ್ವವನ್ನು, ದೇವರ ಒಳ್ಳೇತನವನ್ನು ಮೆಚ್ಚಿಕೊಳ್ಳುವದನ್ನು ಪ್ರಶಂಶಿಸುತ್ತೇವೆ,

ಆದರೆ, ಸತ್ಯವೇದ ಹೇಳಿಕೆಗಳನ್ನು ತಳ್ಳಿಬಿಡಲು ಅಥವಾ ಅವುಗಳನ್ನು ನಿರ್ಲಕ್ಷಿಸಲು ಅವಸರಪಡುವುದು ಬೇಡವೆಂದು ಅವರನ್ನು ಒತ್ತಾಯಿಸುತ್ತೇವೆ. ದೇವರು ಎಲ್ಲರಿಗೂ ಆಶೀರ್ವಾದಗಳನ್ನು ಅಜ್ಞಾನದ ಮೂಲಕವಲ್ಲ ಇನ್ನೂ ಅದಕ್ಕಿಂತಲೂ ಅನೇಕ ಅದ್ಭುತ ಉತ್ತಮ ಮಾರ್ಗಗಳ ಮೂಲಕ ನೀಡುವವನಾಗಿದ್ದಾನೆ.

ಆದರೆ ಈ ಕಾರ್ಯಗಳು ಅವರು ಹೇಳುವ ನಂಬಿಕೆಗೆ ಅನುಸಾರವಾಗಿದೆಯೋ? ಇಲ್ಲ; ಅವರು ಅಜ್ಞಾನಿಗಳು, ಮತ್ತು ತಮ್ಮ ಅಜ್ಞಾನದ ಕಾರಣದಿಂದ ತಿಳಿಗೇಡಿಗಳು ರಕ್ಷಣೆ ಹೊಂದಿಕೊಳ್ಳುವರು ಎಂದು ನಂಬುತ್ತಾನೆಯಾದರೂ, ಅವರು ಸಹಸ್ರಾರು ಅಮೂಲ್ಯ ಜೀವಿಗಳನ್ನೂ ಮತ್ತು ಮಿಲಿಯಾಂತರ ಹಣವನ್ನು ಖರ್ಚುಮಾಡಿ ಮಿಷನರಿಗಳನ್ನು ಅನ್ಯಜನರ ಬಳಿಗೆ ಕಳುಹಿಸುವವರಾಗಿದ್ದಾರೆ. ಅವರೆಲ್ಲರೂ, ಅಥವಾ ಅವರಲ್ಲಿ ಅರ್ಧದಷ್ಟು ಜನರು ಅಜ್ಞಾನದ ಮೂಲಕ ರಕ್ಷಿಸಲ್ಪಡುವುದಾದರೆ, ಸಾವಿರದಲ್ಲಿ ಒಬ್ಬರು ಮಾತ್ರವೇ ನಂಬುವದರಿಂದ ಕ್ರಿಸ್ತನ ಬಗ್ಗೆ ಬೋಧಿಸಲು ಕಳುಹಿಸುವುದು ಸಕರಾತ್ಮಕವಾದ ಹಾನಿಯನ್ನುಂಟು ಮಾಡುತ್ತದೆ, ಈ ಆಲೋಚನೆಯು ಸರಿಯಾಗಿದ್ದರೆ, ಅವರು ಆಜ್ಞಾನದಲ್ಲಿರುವುದೇ ತುಂಬಾ ಉತ್ತಮ; ಆಗ, ಹೆಚ್ಚುಪಾಲು ಜನರು ರಕ್ಷಿಸಲ್ಪಡುವರು. ಇದೇ ರೀತಿಯ ವಾದವನ್ನು ಮುಂದುವರೆಸುತ್ತಾ, ದೇವರು ಎಲ್ಲ ಮನುಷ್ಯರನ್ನು ಅಜ್ಞಾನದಲ್ಲಿಯೇ ಬಿಟ್ಟಿರುತ್ತಿದ್ದರೆ, ಎಲ್ಲರೂ ರಕ್ಷಿಸಲ್ಪಡುತ್ತಿದ್ದರೆಂದು ನಾವು ಆಲೋಚಿಸಬಹುದಲ್ಲವೆ? ಹಾಗಾದರೆ, ಕ್ರಿಸ್ತನ ಆಗಮನ ಮತ್ತು ಮರಣ ಇವು ನಿಷ್ಪ್ರಯೋಜಕವಾಗಿವೆ, ಅಪೋಸ್ತಲರ ಮತ್ತು ಇತರೆ ಎಲ್ಲಾ ಭಕ್ತರುಗಳ ಬೋಧನೆ ಮತ್ತು ಪ್ರಯಾಸ ವ್ಯರ್ಥ ಮತ್ತು ಸುವಾರ್ತೆ ಎಂದು ಕರೆಸಿಕೊಳ್ಳುವಂಥಾದ್ದು ಒಳ್ಳೆಯ ವಾರ್ತೆಯ ಬದಲಾಗಿ ಬಹಳ ಕೆಟ್ಟವಾರ್ತೆಯಾಗಿರುತ್ತಿತ್ತು. ಪ್ರತಿಯೊಬ್ಬ ವ್ಯಕ್ತಿಯ ಶಾಶ್ವತ ಭವಿಷ್ಯವು/ಅದೃಷ್ಟವು ಅವನು ಅಸ್ತಿತ್ವದಲ್ಲಿರುವುದಕ್ಕಿಂತ ಮುಂಚೆಯೇ ಬದಲಾಯಿಸಲಾಗದಂತೆ ನಿರ್ಧರಿತವಾಗಿರುವಾಗ ಕಲ್ವಾನಿಸ್ಟಿಕ್ ಅಥವಾ ಅದೃಷ್ಟವಾದಿ (ಫೆತಾಲಿಸ್ಟಿಕ್) ಇವರುಗಳ ಆಯ್ಕೆಯ ದೃಷ್ಟಿಕೋನಗಳನ್ನು ನಂಬುವವರು ಅನ್ಯಜನಗಳ ಬಳಿಗೆ ಮಿಷನರಿಗಳನ್ನು ಕಳುಹಿಸುವುದು ಇನ್ನಷ್ಟು ಅಸಂಬದ್ಧವೂ, ವಿವೇಚನಾ ರಹಿತವಾದುದೂ ಆಗುತ್ತದೆ.

ಆದರೆ, ಮಿಷನರಿ ಸ್ಫೂರ್ತಿಯಿಂದ ತುಂಬಿದ ಸತ್ಯವೇದವು ರಕ್ಷಣೆಗೆ ವಿವಿಧ ಮಾರ್ಗಗಳುಂಟೆಂದು – ಒಂದು ಮಾರ್ಗ ನಂಬಿಕೆ, ಮತ್ತೊಂದು ಕರ್ಮ ಮಾರ್ಗ, ಇನ್ನೊಂದು ಅಜ್ಞಾನ ಅಥವಾ ತಿಳಿಗೇಡಿತನ ಎಂದು ಬೋಧಿಸುವುದಿಲ್ಲ. ಅದು ದೇವರನ್ನು ಅಗೌರವಪಡಿಸುವ ಫೆತಾಲಿಸಂ (ಅದೃಷ್ಟವಾದಿ) ಅನ್ನೂ ಬೋಧಿಸುವುದಿಲ್ಲ. ಅದು ಎಲ್ಲಾ ಸಂತತಿಗೆ ನಿರೀಕ್ಷೆಯ ಬಾಗಿಲು ಮುಚ್ಚಿದೆ ಎಂದು ತೋರಿಸುವಾಗ, ಅದು ಒಂದನ್ನು, ಏಕೈಕ ಬಾಗಿಲನ್ನು ವಿಶಾಲವಾಗಿ ತೆರೆಯುತ್ತದೆ ಮತ್ತು ಇಚ್ಛೆ ಇರುವ ಯಾರೇ ಆಗಲಿ ಜೀವಕ್ಕೆ ಪ್ರವೇಶಿಸಬಹುದು ಎಂದು ಅದು ಸಾರುತ್ತದೆ. ಪ್ರವೇಶಿಸುವ ಆಶೀರ್ವಾದದ ಸವಲತ್ತನ್ನು ಈಗ ನೋಡದ ಪ್ರಶಂಸಿಸದ ಎಲ್ಲರಿಗೂ ತಕ್ಕ ಸಮಯದಲ್ಲಿ ಅಥವಾ ಸೂಕ್ತಸಮಯದಲ್ಲಿ ಪೂರ್ಣ ಜ್ಞಾನಕ್ಕೂ ಮೆಚ್ಚಿಗೆಗೂ ತರಲಾಗುವುದು ಎಂದು ಅದು ತೋರಿಸುತ್ತದೆ. ಇದು ಖಂಡಿಸಲ್ಪಟ್ಟ ಯಾವುದೇ ಜನಾಂಗವು ದೇವರ ಬಳಿಗೆ ಬರುವ ಏಕೈಕ ಮಾರ್ಗವಾಗಿದ್ದು ಅದು ಪ್ರಶಂಸಾರ್ಹ ಕಾರ್ಯಗಳಿಂದಲ್ಲ, ಅಥವಾ ಅಜ್ಞಾನದಿಂದಲ್ಲ, ಆದರೆ, ಲೋಕದ ಪಾಪವನ್ನು ಹೊತ್ತೊಯ್ಯುವ ಕ್ರಿಸ್ತನ ಅಮೂಲ್ಯವಾದ ರಕ್ತದ ಮೇಲೆ ನಂಬಿಕೆಯನ್ನಿಡುವುದರಿಂದಲೇ ಆಗಿದೆ (1 ಪೇತ್ರ 1:19; ಯೋಹಾನ 1:29). ಇದು ಎಲ್ಲಾ ಜನರಿಗೂ ಒಳ್ಳೆಯ ಮಹಾ ಸಂತೋಷವನ್ನುಂಟುಮಾಡುವ ಶುಭ ಸಮಾಚಾರವಾಗಿದೆ.

ದೇವರು ಅವುಗಳ ಬಗ್ಗೆ ನಮಗೆ ಹೇಳುವಂತೆ – ನಾವು ಈ ಸಂಗತಿಗಳನ್ನು ಈಗ ನೋಡುತ್ತಿದ್ದೇವೆ ಮತ್ತು ಆತನ ಗುಣಲಕ್ಷಣಗಳನ್ನು ಸ್ಪಷ್ಟಗೊಳಿಸುವುದನ್ನು ಆತನಿಗೇ ಬಿಡುತ್ತೇವೆ ಎಂದಾದರೆ ಒಂದು ನೂರಾ ನಾಲ್ವತ್ತೆರಡು ಬಿಲಿಯನ್ ಜನರ ಬಗ್ಗೆ ಏನಾಯಿತೆಂದು ನಾವು ವಿಚಾರಿಸುತ್ತೇವೆ ?

ಅವರ ಬಗ್ಗೆ ಏನೇ ಆಗಿದ್ದಿರಬಹುದು, ಅವರುಗಳು ಈಗೆ ಬಳಲುತ್ತಿರುವ ಸ್ಥಿತಿಯಲ್ಲಿಲ್ಲ ಎಂಬ ಬಗ್ಗೆ ನಮಗೆ ಖಚಿತತೆಯುಂಟು. ಯಾಕೆಂದರೆ, ಕ್ರಿಸ್ತನು ಬರುವವರೆಗೆ ಕ್ರೈಸ್ತ ಸಭೆಗೆ ಸಂಪೂರ್ಣವಾದ ಪ್ರತಿಫಲವನ್ನು ನೀಡಲಾಗುವುದಿಲ್ಲ ಎಂದು ಪವಿತ್ರ ಗ್ರಂಥವು ಬೋಧಿಸುವುದು ಮಾತ್ರವಲ್ಲ, ಕ್ರಿಸ್ತನು ಬಂದಾಗ ಪ್ರತಿಯೊಬ್ಬನಿಗೂ ಆಗಲೂ ಪ್ರತಿಫಲವು ನೀಡಲ್ಪಡುತ್ತದೆ ಎಂದೂ ಬೋಧಿಸುತ್ತವೆ – "ಮನುಷ್ಯಕುಮಾರನು ತನ್ನ ತಂದೆಯ ಪ್ರಭಾವದೊಡನೆ ಬರುವನು; ಆವಾಗ ಆತನು ಒಬ್ಬೊಬ್ಬನಿಗೆ ಅವನವನ ನಡತೆಗೆ ತಕ್ಕ ಪ್ರತಿಫಲವನ್ನು ನೀಡುವನು" (ಮತ್ತಾಯ 16:27); ಅಲ್ಲದೇ, ದುಷ್ಟರು ಅವರಿಗಾಗುವ ಶಿಕ್ಷೆಯನ್ನು ಅನುಭವಿಸುವರು. ಈಗಿನ ಅವರ ಪರಿಸ್ಥಿತಿ ಏನೇ ಇದ್ದರೂ, ಅವರಿಗೆ ಪೂರ್ಣ ಪ್ರತಿಫಲವಾಗಲಾರದು. ಏಕೆಂದರೆ ಪೇತ್ರನು ಹೇಳುತ್ತಾನೆ "ಕರ್ತನು ದುರ್ಮಾರ್ಗಿಗಳನ್ನು ನ್ಯಾಯ ತೀರಿಸುವ

ದಿನದತನಕ ಶಿಕ್ಷಾನುಭವದಲ್ಲಿ ಇಡುವಷ್ಟು ಬಲ್ಲವನಾಗಿದ್ದಾನೆ" (2 ಪೇತ್ರ 2:9). ಆತನು ಹಾಗೆಯೇ ಮಾಡುತ್ತಾನೆ.

ನಮ್ಮ ಅನೇಕ ಸಹಜೀವಿಗಳು ಯಾವುದೇ ಸಮಯದಲ್ಲಿ ರಕ್ಷಣೆಗೆ ಅಗತ್ಯವಾದ ಜ್ಞಾನದ ಕೊರತೆಯಿಂದಾಗಿ ಕಳೆದುಹೋಗಬಹುದೆಂಬ ಆಲೋಚನೆ ನಿಜವಾಗಿಯೂ ಪ್ರೀತಿಯ ಅಥವಾ ಕರುಣೆಯ ಕಿಡಿ ಹೊಂದಿರುವ ಯಾರಿಗಾದರೂ ದುಃಖಕರವಾಗಿರುತ್ತದೆ. ನಂತರದಲ್ಲಿಯೂ ಸಹಾ ವೇದವಚನಗಳು ಇವೆಲ್ಲವುಗಳೊಂದಿಗೆ ಸಾಮರಸ್ಯ ಗೊಳಿಸಿಕೊಳ್ಳುವುದು ಅಸಾಧ್ಯವೆಂದು ತೋರಿಸುವ ಹಲವಾರು ಶಾಸ್ತ್ರಗಳಿವೆ. ನಾವು ನೋಡೋಣ: ಹಿಂದಿನ ಮತ್ತು ಇಂದಿನ ಬೆಳಕು ಒಂದೇ ಅವಕಾಶಗಳಾಗಿದ್ದು, ಮುಂಬರುವ ಯುಗದಲ್ಲಿನ ಪುನರ್‌ವಶದ ಮೂಲಕ ಎಲ್ಲಾ ನಿರೀಕ್ಷೆಗಳನ್ನು ಬದಿಗಿಟ್ಟು, ನಾವು "ದೇವರು ಪ್ರೀತಿ ಸ್ವರೂಪಿ" (1 ಯೋಹಾನ 4:8) ಮತ್ತು "ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು; ಆತನನ್ನು ನಂಬುವ ಒಬ್ಬನಾದರೂ ನಾಶವಾಗ ಬಾರದು" (ಯೋಹಾನ 3:16) ಎಂಬ ಹೇಳಿಕೆಗಳನ್ನು ಅರ್ಥಮಾಡಿಕೊಳ್ಳಲು ಹೇಗೆ ಸಾಧ್ಯ? ದೇವರು ಲೋಕವನ್ನು ಇಷ್ಟೊಂದು ಮಟ್ಟಿಗೆ ಪ್ರೀತಿಸುವವನಾದರೆ, ಆತನು ಎಲ್ಲಾ ನಂಬಿಗಸ್ತರು ರಕ್ಷಣೆ ಹೊಂದಿಕೊಳ್ಳಬಹುದೆಂದು ಮಾತ್ರವಲ್ಲದೆ, ಎಲ್ಲರೂ ನಂಬಿಕೆಹೊಂದುವಂತೆ ಕೇಳಿಸಿಕೊಳ್ಳಬೇಕು ಎಂಬ ಪೂರ್ವ ಸಿದ್ಧತೆಗಳನ್ನು ಮಾಡಿರಬಹುದಲ್ಲವೆ?

ಪುನಃ, ನಾವು "ನಿಜವಾದ ಬೆಳಕು ಲೋಕಕ್ಕೆ ಬರುವದಾಗಿತ್ತು. ಆ ಬೆಳಕೇ ಪ್ರತಿ ಮನುಷ್ಯನಿಗೂ ಬೆಳಕನ್ನು ಕೊಡುವಂಥಾದ್ದು" (ಯೋಹಾನ 1:9) ಎಂಬುದನ್ನು ಓದುವಾಗ, ನಮ್ಮ ಗಮನಿಸುವಿಕೆಯು ಆ ರೀತಿಯಾಗಿ ಅಲ್ಲ ಎಂದು ಹೇಳುತ್ತದೆ; ಎಲ್ಲಾ ಮನುಷ್ಯರೂ ಜ್ಞಾನೋದಯ ಹೊಂದಿಕೊಂಡಿರುವುದಿಲ್ಲ; ನಮ್ಮ ಕರ್ತನು ಈ ಲೋಕದ ಕೆಲವು ಬಿಲಿಯನ್‌ಗಿಂತ ಹೆಚ್ಚಿನವರಿಗೆ ತನ್ನ ಬೆಳಕನ್ನು ಬೀರಿರುವದನ್ನು ನಾವು ನೋಡಲಾಗುವುದಿಲ್ಲ. ಇಂದಿನ ತುಲನಾತ್ಮಕವಾದ ಜ್ಞಾನೋದಯದ ದಿನದಲ್ಲಿಯೂ ಸಹ ಮಿಲಿಯಾಂತರ ಅನ್ಯಜನರು ಅಂಥಾಃ ಜ್ಞಾನೋದಯಕ್ಕೆ ಅಂತಹ ಸಾಕ್ಷ್ಯ ನೀಡಿಲ್ಲ. ಅಂತೆಯೇ, ಸೊದೋಮ್ಯರಾಗಲಿ ಅಥವಾ ಹಿಂದಿನ ಕಾಲದ ಯಾವ ಸಮೂಹದವರಾಗಲೀ ಯಾವುದೇ ಸಾಕ್ಷ್ಯವನ್ನು ನೀಡಿಲ್ಲ.

ಯೇಸು ಕ್ರಿಸ್ತನು "ಮೃತಪಟ್ಟಿದ್ದರಿಂದಲೇ, ಮಾನ ಪ್ರಭಾವಗಳನ್ನು ಹೊಂದಿದನು, ಆತನು ದೇವರ ಕೃಪೆಯಿಂದ ಎಲ್ಲಾ ಮನುಷ್ಯರಿಗೋಸ್ಕರ ಮರಣವನ್ನು ಅನುಭವಿಸಲೇ ಬೇಕಾಗಿತ್ತು'' (ಇಬ್ರಿಂಯ 2:9) ಎಂಬುದಾಗಿ ನಾವು ಓದುತ್ತೇವೆ. ಆದರೆ, ಆತನು ಒಂದುನೂರಾ ನಾಲ್ವತ್ತಮೂರು ಬಿಲಿಯನ್ನರಿಗಾಗಿ ಮರಣವನ್ನನುಭವಿಸಿದ್ದರೆ, ಆ ಸಮರ್ಪಣೆಯು ಯಾವುದೇ ಕಾರಣದಿಂದ ಒಂದು ಬಿಲಿಯನ್ನರಿಗೆ ಮಾತ್ರವೇ ಫಲೋತ್ಪಾದಕವಾದರೆ ಆ ವಿಮೋಚನೆಯು ತುಲನಾತ್ಮಕವಾಗಿ ವಿಫಲಗೊಂಡಂತಲ್ಲವೆ? ಹಾಗಾದಲ್ಲಿ, ಅಪೋಸ್ತಲರ ಹೇಳಿಕೆಯು ಬಹಳ ವ್ಯತ್ಯಾಸವಾಗಿದೆ (broad) ಅಲ್ಲವೇ? ಪುನಃ ನಾವು – "ಹೆದರಬೇಡಿರಿ, ಕೇಳಿರಿ, ಜನರಿಗೆಲ್ಲಾ ಮಹಾ ಸಂತೋಷವನ್ನುಂಟು ಮಾಡುವ ಶುಭಸಮಾಚಾರವನ್ನು ನಾನು ನಿಮಗೆ ತಿಳಿಸುತ್ತೇನೆ" (ಲೂಕ 2:10). ಎಂಬ ಮಾತನ್ನು ನೋಡುವಾಗ, ಅದೊಂದು ಚಿಕ್ಕಹಿಂಡಿಗಷ್ಟೇ ಶುಭ ಸಮಾಚಾರವಾಗಿದೆ, ಎಲ್ಲಾ ಜನರಿಗೆ ಅಲ್ಲ ಎಂದು ತೋರಿಬರುತ್ತದೆ. ಹೀಗಾಗಿ ಆ ದೂತರುಗಳು ಅವರ ಸಂದೇಶದ ಒಳ್ಳೇತನವನ್ನು ವಿಶಾಲತೆಯನ್ನು ಅಧಿಕವಾಗಿ ಹೇಳಲಿಲ್ಲವೇ, ಈ ರೀತಿಯಲ್ಲಿ ಅವರು ಘೋಷಿಸಿದ ಮೆಸ್ಸೀಯನಿಂದ ನೆರವೇರಬೇಕಾದ ಕಾರ್ಯಗಳ ಬಗ್ಗೆ ಅತಿಶಯವಾದ ಪುರಸ್ಕಾರ ನೀಡಿದರೇನೋ ಎಂದು ಆಶ್ಚರ್ಯಪಡುತ್ತೇವೆ.

ಮತ್ತೊಂದು ಹೇಳಿಕೆಯೆಂದರೆ, "ದೇವರು ಒಬ್ಬನೇ, ದೇವರಿಗೂ ಮನುಷ್ಯರಿಗೂ ಮಧ್ಯಸ್ತನು ಒಬ್ಬನೇ. ಆತನು ಮನುಷ್ಯನಾಗಿರುವ ಕ್ರಿಸ್ತ ಯೇಸುವೇ. ಆತನು ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು ಒಪ್ಪಿಸಿಕೊಟ್ಟನು" (1 ತಿಮೋ 2:5,6). ಎಲ್ಲರಿಗಾಗಿ ಈಡುಬಲಿ? ಹಾಗಾದರೆ, ಒಳಗಾದವರೆಲ್ಲರೂ ಕೂಡ ಕ್ರಿಸ್ತನ ಮರಣದಿಂದ ಲಾಭವನ್ನು ಪಡಕೊಳ್ಳಬಾರದೇಕೆ? ಅವರು ನಂಬುವಂತೆ ಸತ್ಯದ ಜ್ಞಾನಕ್ಕೆ ಎಲ್ಲರೂ ಬರಬಾರದೇಕೆ?

ಕೀಲಿಕೈ ಇಲ್ಲದೆ, ಈ ಹೇಳಿಕೆಯು ಎಷ್ಟೋ ಗೂಢವಾಗಿಯೂ, ಅಸಂಬದ್ಧವಾಗಿಯೂ ಕಂಡು ಬರುತ್ತದೆ. ಆದರೆ, ನಾವು ದೇವರ ಯೋಜನೆಗೆ ಕೀಲಿಯನ್ನು ಕಂಡುಕೊಳ್ಳುವಾಗ, ಈ ವಚನಗಳೂ ಒಂದೇ ಸ್ವರದಲ್ಲಿ "ದೇವರು ಪ್ರೀತಿಸ್ವರೂಪಿ" ಎಂದು ಪ್ರಕಟಿಸುತ್ತವೆ. ಈ ಕೀಲಿಯನ್ನು ಕಡೆಯಲ್ಲಿ ಉಲ್ಲೇಖಿಸಿದ ವಚನದ ಅಂತಿಮ ಭಾಗದಲ್ಲಿ – ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು ಈಡುಬಲಿಯಾಗಿ ಒಪ್ಪಿಸಿಕೊಟ್ಟನು, ಇದೇ ತಕ್ಕ ಸಮಯದಲ್ಲಿ ಹೇಳಬೇಕಾದ ಸಾಕ್ಷಿಯು" ಎಂಬ ವಚನದಲ್ಲಿ ಕಾಣಬಹುದಾಗಿದೆ. ಎಲ್ಲವುಗಳಿಗೂ ಒಂದು ಉಚಿತವಾದ ಸಮಯ ದೇವರಿಗೆ

ಇದೆ. ಆತನು ಅವುಗಳನ್ನು ಸಾಕ್ಷಿಯಾಗಿ ಅವರ ಹಿಂದಿನ ಜೀವಿತ ಸಮಯದಲ್ಲಿಯೇ ಹೇಳಬಹುದಿತ್ತು, ಆದರೆ ಆತನು ಹಾಗೆ ಮಾಡದೆ ಇರುವುದು, ಅವರ ಉಚಿತ ಸಮಯವು ಭವಿಷ್ಯದಲ್ಲಿರಬೇಕು ಎಂಬುದನ್ನು ತೋರಿಸುತ್ತದೆ. ಕ್ರಿಸ್ತನ ಸಭೆಯವರಾಗಿ, ಆತನ ವಧುವಾಗಿ ಇರುವವರು, ಆತನ ರಾಜ್ಯದ ಗೌರವಗಳಲ್ಲಿ ಪಾಲುಹೊಂದಿಕೊಳ್ಳುವವರಿಗೆ ಪ್ರಸ್ತುತ ಸಮಯವೇ ಕೇಳಲು "ಉಚಿತವಾದ ಕಾಲ"ವಾಗಿದೆ. ಯಾರು ಈಗ ಕೇಳಿಸಿಕೊಳ್ಳುವ ಕಿವಿಯುಳ್ಳವರಾಗಿದ್ದಾರೋ, ಅವರು ಕೇಳಿಸಿಕೊಳ್ಳಲಿ ಮತ್ತು ಅದನ್ನು ಲಕ್ಷ್ಯವಿಡಲಿ. ಆತನು ಅದೇ ಪ್ರಕಾರವಾಗಿ ಆಶೀರ್ವಾದಹೊಂದಿಕೊಳ್ಳುವನು. ನಾವು ಹುಟ್ಟುವುದಕ್ಕಿಂತ ಮುಂಚೆಯೇ ಯೇಸು ನಮಗೆ ಈಡುಬಲಿಯನ್ನು ಸಮರ್ಪಿಸಿದ್ದರೂ, ಅದಕ್ಕಿಂತ ಬಹಳ ಸಮಯದ ನಂತರ ಕೇಳಿಸಿಕೊಳ್ಳುವಂತೆ ಅದು ನಮ್ಮ ಉಚಿತ ಸಮಯವಾಗಿರಲಿಲ್ಲ. ಅದರ ಮೆಚ್ಚುಗೆ ಮಾತ್ರವೇ ನಮಗೆ ಜವಾಬ್ದಾರಿಯನ್ನು ತಂದಿತು. ಇದು ನಮ್ಮ ಸಾಮರ್ಥ್ಯದ ಮತ್ತು ಮೆಚ್ಚುಗೆಯ ಮಟ್ಟಕ್ಕೆ ಮಾತ್ರವೇ. ಇದೇ ತತ್ವವು ಎಲ್ಲರಿಗೂ ಅನ್ವಯವಾಗುತ್ತದೆ: ದೇವರ ಉಚಿತ ಸಮಯದಲ್ಲಿ ಅದು ಎಲ್ಲರಿಗೂ ಸಾಕ್ಷ್ಯವಾಗುವುದು. ಆಗ ಎಲ್ಲರಿಗೂ ಅದನ್ನು ನಂಬುವ ಮತ್ತು ಆಶೀರ್ವಾದಹೊಂದಿಕೊಳ್ಳುವ ಅವಕಾಶ ದೊರೆಯುತ್ತದೆ.

ಪ್ರಚಲಿತದಲ್ಲಿರುವ ಅಭಿಪ್ರಾಯವೇನೆಂದರೆ, ಮರಣವು ಎಲ್ಲಾ ಅರ್ಹತಾ ಪರೀಕ್ಷಣೆಯನ್ನು ಮುಕ್ತಾಯಗೊಳಿಸುತ್ತದೆ; ಆದರೆ ಯಾವುದೇ ವೇದವಾಕ್ಯವು ಹೀಗೆಂದು ಬೋಧಿಸುವುದಿಲ್ಲ, ಮತ್ತು ಮರಣವು ಈ ಲೋಕದಲ್ಲಿರುವ ಅಜ್ಞಾನ ಸಮೂಹದವರಿಗೆ ನಿರೀಕ್ಷೆಗಳನ್ನು ಅಂತ್ಯಗೊಳಿಸುವುದಾದರೆ, ಮೇಲಿನವುಗಳೆಲ್ಲಾ ಮತ್ತು ಇನ್ನೂ ಅನೇಕ ವೇದವಚನಗಳು ಅರ್ಥಹೀನವೂ, ಬಹಳ ಕೆಟ್ಟವುಗಳೂ ಆಗಿ ಬಿಡುತ್ತವೆ. ಇದನ್ನು ರುಜುವಾತುಪಡಿಸುವಂತೆ ಉಲ್ಲೇಖಿಸುವ ಒಂದು ವೇದವಚನವು "ಮರವು ತೆಂಕಣಕ್ಕಾಗಲೀ, ಬಡಗಣಕ್ಕಾಗಲೀ ಬಿದ್ದರೆ ಬಿದ್ದಹಾಗೆಯೇ ಇರುವುದು" (ಪ್ರಸಂಗಿ 11:3). ಇದು ಮಾನವನ ಭವಿಷ್ಯಕ್ಕೆ ಯಾವುದೇ ಸಂಬಂಧ ಹೊಂದಿದ್ದರೆ, ಅದು ಆತನು ಸಮಾಧಿಯನ್ನು ಪ್ರವೇಶಿಸುವಾಗ ಆತನ ಸ್ಥಿತಿ ಏನೇ ಇದ್ದರೂ ಆತನು ಎದ್ದು ಹೊರಬರುವವರೆಗೂ ಯಾವುದೇ ಬದಲಾವಣೆಗಳು ಉಂಟಾಗುವುದಿಲ್ಲ ಎಂಬುದನ್ನು ಸೂಚಿಸುತ್ತದೆ. ಇದು ಮುಂದಿನ ಪರಿಚ್ಛೇಧಗಳಲ್ಲಿ ಕಂಡುಬರುವಂತೆ ಈ ಪ್ರಸ್ತಾಪದ ಬಗ್ಗೆ ಎಲ್ಲಾ ವೇದವಚನಗಳ ಬೋಧನೆ ಒಂದೇ ರೀತಿಯಾಗಿದೆ. ಅಜ್ಞಾನದ ಕಾರಣದಿಂದ ಜನರನ್ನು ರಕ್ಷಿಸುವ ಯಾವುದೇ ಪ್ರಸ್ತಾಪವು ದೇವರಿಗೆ ಇಲ್ಲದಿರುವುದಿಲ್ಲ. ಆದರೆ ಎಲ್ಲಾ ಮನುಷ್ಯರೂ ರಕ್ಷಣೆಯನ್ನು ಹೊಂದಿ ಸತ್ಯದ ಜ್ಞಾನಕ್ಕೆ ಸೇರಬೇಕೆಬುದು ಆತನ ಉದ್ದೇಶವಾಗಿದೆ (1 ತಿಮೋ. 2:4). ಮಾನವ ಸಮೂಹವು ಅಜ್ಞಾನದಲ್ಲಿ ಮರಣಹೊಂದಿರುವ ನಿಮಿತ್ತ, ಮತ್ತು ಪಾತಾಳದಲ್ಲಿ ಯಾವ ಕೆಲಸವೂ, ಯುಕ್ತಿಯೂ, ತಿಳುವಳಿಕೆಯೂ, ಜ್ಞಾನವು ಇರುವುದಿಲ್ಲವಾದ ಕಾರಣ (ಪ್ರಸಂಗಿ 9:10) ದೇವರು ಸತ್ತರು ಎದ್ದು ಬರುವಂತೆ ಹಾಗೂ ಜ್ಞಾನ, ನಂಬಿಕೆ ರಕ್ಷಣೆಯನ್ನು ಹೊಂದಿಕೊಳ್ಳಲು ಸಿದ್ಧಪಡಿಸಿದ್ದಾನೆ. ಆದುದರಿಂದ ಆತನ ಯೋಜನೆ ಏನೆಂದರೆ "ಯಾವ ಪ್ರಕಾರ ಆದಾಮನ ಸಂಬಂಧದಿಂದ ಎಲ್ಲರೂ ಸಾಯುವವರಾದರೋ, ಅದೇ ಪ್ರಕಾರ ಕ್ರಿಸ್ತನ ಸಂಬಂಧದಿಂದ ಎಲ್ಲರೂ ಜೀವಿತರಾಗುವರು. ಆದರೆ, ಪ್ರತಿಯೊಬ್ಬನೂ ತನ್ನ ತನ್ನ ತರಗತಿಯಲ್ಲಿರುವನು" (1 ಕೊರಿಂಥ 15:22) – ಕ್ರಿಸ್ತನ ದೇಹವೂ, ಮದಲಗಿತ್ತಿಯೂ ಆದ ಸುವಾರ್ತಾಸಭೆ ಮೊದಲು, ನಂತರ ಸಹಸ್ರಮಾನ ಯುಗದಲ್ಲಿ, ಯಾರಾರು ಆತನ ಪ್ರತ್ಯಕ್ಷತೆಯ (ಬರೋಣ ಎಂದು ತಪ್ಪಾಗಿ ಅನುವಾದಿಸಲಾಗಿದೆ) ಸಹಸ್ರ ವರ್ಷಗಳಲ್ಲಿ ಆತನರಾಗುವರೋ ಅಥ ಚಿಕ್ಕವರು ಮೊದಲುಗೊಂಡು ದೊಡ್ಡವರ ಪರ್ಯಂತ ಆತನನ್ನು ಅರಿತುಕೊಳ್ಳುವ ಎಲ್ಲರಿಗೂ ಉಚಿತ ಸಮಯವಾಗಿರುತ್ತದೆ.

ಮೊದಲನೆಯ ಆದಾಮನ ಮೂಲಕ ಮರಣವು ಪ್ರವೇಶಿದಂತೆಯೇ, ಎರಡನೆಯ ಆದಾಮನಾದ ಯೇಸುಕ್ರಿಸ್ತನ ಮೂಲಕ ಜೀವವು ಪ್ರವೇಶಿಸುತ್ತದೆ. ಮೊದಲನೆಯ ಆದಾಮನಲ್ಲಿ ಕಳೆದುಕೊಂಡದ್ದೆಲ್ಲವನ್ನೂ ಎರಡನೆಯ ಆದಾಮನನ್ನು ನಂಬುವವರು ಪುನಃವಶಪಡಿಸಿಕೊಳ್ಳುವರು. ದೇವರ ಉಡುಗೊರೆ ಯಾದ ವಿಮೋಚನೆಯನ್ನು ಕೃತಜ್ಞತೆಯಿಂದ ಸ್ವೀಕರಿಸುವವರು, ಮರಣಿಸಿದವರು ಎಚ್ಚರಗೊಂಡಾಗ ಆದಾಮನಿಗೆ ಇದ್ದ ಕೆಟ್ಟ ಅನುಭವದ ಕೊರತೆಯಲ್ಲಿ ಅನುಕೂಲಹೊಂದಿ, ವಿಧೇಯತೆಯ ಮೂಲ ಸ್ಥಿತಿಯ ಮೇಲೆ ಶಾಶ್ವತವಾಗಿ ಜೀವಿಸಬಹುದು. ಪರಿಪೂರ್ಣ ವಿಧೇಯತೆಯು ಬೇಕಾಗುತ್ತದೆ ಮತ್ತು ಸಮಾಧಾನ ಪ್ರಭುವಿನ ನೀತಿಯುತ ಆಳ್ವಿಕೆಯಲ್ಲಿ ವಿಧೇಯರಾಗಲು ಸಮರ್ಪಕವಾದ ಸಾಮರ್ಥ್ಯವನ್ನು ನೀಡಲಾಗುವುದು. ಇಲ್ಲಿ ರಕ್ಷಣೆಯು ಲೋಕಕ್ಕೆ ಸಮರ್ಪಿತವಾಗಿದೆ.

ನಾವೀಗ ಮತ್ತೊಂದು ಪಥ್ಯವನ್ನು ಪರಿಗಣಿಸೋಣ. ಇದನ್ನು ಸರ್ವಮೋಕ್ಷವಾದಿ (universalists*) ಹೊರತುಪಡಿಸಿ ಸಾಮಾನ್ಯವಾಗಿ ಎಲ್ಲರಿಂದಲೂ ನಿರ್ಲಕ್ಷಿಸಲಾಗಿದೆ. ನಾವು ಸರ್ವಮುಕ್ತಿವಾದಿಗಳಲ್ಲವಾದರೂ, ಅದನ್ನು ಉಪಯೋಗಿಸುವ ಹಕ್ಕನ್ನು ಕೇಳುತ್ತೇವೆ ಮತ್ತು ನಂಬುತ್ತೇವೆ ಮತ್ತು ದೇವರ ವಾಕ್ಯದ ಪ್ರತಿಯೊಂದು ಸಾಕ್ಷ್ಯದಲ್ಲಿಯೂ ಆನಂದಿಸುತ್ತೇವೆ. ಅದು ಹೀಗಿದೆ – "ಎಲ್ಲಾ ಮನುಷ್ಯರಿಗೂ ವಿಶೇಷವಾಗಿ ನಂಬುವವರಿಗೆ, ರಕ್ಷಕನಾಗಿರುವ ಜೀವವುಳ್ಳ ದೇವರ ಮೇಲೆ ನಾವು ನಿರೀಕ್ಷೆಯನ್ನಿಟ್ಟುಕೊಂಡಿದ್ದೇವೆ" (1 ತಿಮೋಥೆ 4:10). ದೇವರು ಎಲ್ಲಾ ಮನುಷ್ಯರನ್ನೂ ರಕ್ಷಿಸುತ್ತಾನೆ, ಆದರೆ ಕ್ರಿಸ್ತನ ಮೂಲಕ ಆತನ ಬಳಿಗೆ ಬರುವವರನ್ನು ಹೊರತುಪಡಿಸಿ ವಿಶೇಷವಾಗಿ (ಕಟ್ಟಕಡೆಯದಾಗಿ) ಬೇರೆ ಯಾರನ್ನೂ ರಕ್ಷಿಸುವುದಿಲ್ಲ. ದೇವರ ಇಚ್ಛಾನುಸಾರವಾದ ಎಲ್ಲರ ರಕ್ಷಣೆಯು ಅವರಿಗೆ ಅವರ ಇಚ್ಛೆಗೆ ವಿರೋಧವಾಗಿ ಜೀವನೀಡುವುದರಲ್ಲಿ ಅವರ ಇಚ್ಛಾ ಸ್ವಾತಂತ್ರ್ಯ ಮತ್ತು ಆಯ್ಕೆಯ ಸ್ವಾತಂತ್ರ್ಯದೊಂದಿಗೆ ಘರ್ಷಣೆಗೊಳ್ಳುವಂಥಾದಲ್ಲ. "ನಾನು ಜೀವಮರಣಗಳನ್ನೂ ಆಶೀರ್ವಾದ – ಶಾಪಗಳನ್ನೂ ಈಗ ನಿಮ್ಮ ಮುಂದೆ ಇಟ್ಟಿದ್ದೇನೆ. ಇದಕ್ಕೆ ಭೂಮ್ಯಾಕಾಶಗಳು ಸಾಕ್ಷಿಯಾಗಿರಲಿ. ಆದದರಿಂದ ನೀವು ನಿಮ್ಮ ಸಂತತಿಯವರೂ ಬದುಕಿಕೊಳ್ಳುವಂತೆ ಜೀವವನ್ನೇ ಆಯ್ದುಕೊಳ್ಳಿರಿ" (ಧರ್ಮೋ. 30:19).

ಸಿಮೆಯೋನನು ಈ ಎರಡು ರಕ್ಷಣೆಯ ವ್ಯತ್ಯಾಸವನ್ನು ಹೋಲಿಸಿ ಎತ್ತಿತೋರುವಂತೆ ಹೇಳುವುದೇನೆಂದರೆ "ನೀನು ನೇಮಿಸಿರುವ ರಕ್ಷಕನನ್ನು ನಾನು ಕಣ್ಣಾರೆ ಕಂಡೆನು. ಎಲ್ಲಾ ಜನಾಂಗಗಳಿಗೆ ಪ್ರತ್ಯಕ್ಷನಾಗಲಿ ಎಂದು ಆತನನ್ನು ಒದಗಿಸಿಕೊಟ್ಟಿದ್ದೀ. ಆತನು ಅನ್ಯದೇಶದವರಿಗೆ ಜ್ಞಾನೋದಯದ ಬೆಳಕು, ನಿನ್ನ ಪ್ರಜೆಯಾದ ಇಸ್ರಾಯೇಲ್ಯರಿಗೆ ಕೀರ್ತಿ" (ಲೂಕ 2:20–32). ಎಂದಿದ್ದಾನೆ. ಇದು ಅಪೋಸ್ತಲನ ಪ್ರಕಟನೆಯೊಂದಿಗೆ ಸಾಮರಸ್ಯವುಳ್ಳದ್ದಾಗಿದೆ. ಮಧ್ಯಸ್ಥನಾದ ಯೇಸು ಕ್ರಿಸ್ತನು ತನ್ನನ್ನು ಎಲ್ಲರಿಗೂ ಈಡುಬಲಿಯನ್ನಾಗಿ ಅರ್ಪಿಸಿದನು ಎಂಬ ಸತ್ಯವು ಸೂಕ್ತಸಮಯದಲ್ಲಿ ಎಲ್ಲರಿಗೂ ಸಾಕ್ಷಿಯಾಗಬೇಕು. ನಂಬಿಕೆ ಅಥವಾ ಇಚ್ಛೆಯನ್ನು ಲೆಕ್ಕಿಸದೆ ಇದು ಎಲ್ಲಾ ಜನರಿಗೂ ಬರುತ್ತದೆ, ಇದು ಜನರಿಗೆಲ್ಲಾ ಸಂತೋಷವನ್ನುಂಟು ಮಾಡುವ ರಕ್ಷಕನ ಶುಭಸಮಾಚಾರ (ಲೂಕ 2: 10,11). ಆದರೆ ಪಾಪ ಮತ್ತು ಮರಣದಿಂದ ವಿಶೇಷ ರಕ್ಷಣೆಯು ಆತನ ಜನರಿಗಷ್ಟೇ ಉಂಟಾಗುವುದು (ಮತ್ತಾಯ 1:21) – ಆತನ ಮಗನನ್ನು ನಂಬುವವರಿಗೆ ನಿತ್ಯಜೀವವುಂಟು; ಮಗನಿಗೆ ಒಳಗಾಗದವನು ಜೀವವನ್ನು ಕಾಣುವುದೇ ಇಲ್ಲ; ದೇವರ ಕೋಪವು ಅವನ ಮೇಲೆ ನೆಲೆಗೊಂಡಿರುವುದು" (ಯೋಹಾನ 3:36) ಎಂದು ಓದುತ್ತೇವೆ.

ಹಾಗಾದರೆ ನಾವು ನೋಡುವಂತೆ, ಪ್ರತಿಯೊಬ್ಬರಿಗೂ ಒದಗುವ ಸಾಮಾನ್ಯವಾದ ರಕ್ಷಣೆಯು ಸತ್ಯದ ಬೆಳಕಿನಿಂದ ಬರುವ ಬೆಳಕನ್ನು ಒಳಗೊಂಡಿದ್ದು, ಮತ್ತು ಜೀವವನ್ನು ಆರಿಸಿಕೊಳ್ಳುವ ಒಂದು ಅವಕಾಶವೂ ಆಗಿದೆ; ಮನುಕುಲದ ಬಹುಸಂಖ್ಯಾತರು ಸಮಾಧಿ ಸೇರಿರುವುದರಿಂದ, ವಿಮೋಚಕನ ಶುಭಸಮಾಚಾರದ ಸಾಕ್ಷ್ಯವನ್ನು ಅವರಿಗೆ ನೀಡುವಂತೆ ಅವರನ್ನು ಸಮಾಧಿಯಿಂದ ಹೊರತರುವುದು ಅಗತ್ಯವಾಗಿದೆ; ಮಾತ್ರವಲ್ಲದೆ ನಂಬಿಗಸ್ಥರು ಈಗ ನಿರೀಕ್ಷೆಯಲ್ಲಿ ಅನುಭವಿಸುತ್ತಿರುವ ವಿಶೇಷ ರಕ್ಷಣೆಯ ಬಗ್ಗೆ ಅವರಿಗೆ ತಿಳಿಸಬೇಕಾಗಿದೆ (ರೋಮಾ. 8:24), ಸಹಸ್ರಮಾನದ ಯುಗದಲ್ಲಿ ಇದರ ವಾಸ್ತವಿಕತೆಯು ಬಹಿರಂಗಗೊಳ್ಳಲಿದೆ ಮತ್ತು "ಆ ದಿನದಲ್ಲಿ ನಂಬುವವರಿಗೆ" ಮತ್ತು ನಾಶದ ವಶದಿಂದ, ಪಾಪದ ದಾಸ್ಯತೆಯಿಂದ ದೇವರ ಮಕ್ಕಳಿಗೆ ದೊರೆಯುವ ಭವ್ಯವಾದ ಬಿಡುಗಡೆಗೆ ಸಂಪೂರ್ಣವಾದ ವಿಮೋಚನೆ ದೊರಕುತ್ತದೆ. ಆದರೆ, ಈ ಎಲ್ಲಾ ಆಶೀರ್ವಾದಗಳ ಪ್ರಾಪ್ತಿಯು ಕ್ರಿಸ್ತನ ರಾಜ್ಯದ ನಿಯಮಗಳ ಹೃತ್ಪೂರ್ವಕ ಅನುಸರಣೆಯ – ಸಮರ್ಪಕತೆಯನ್ನು ಹೊಂದಿಕೊಳ್ಳುವ ಕ್ಷಿಪ್ರತೆಯು ಅರಸನ ಮೇಲಿನ ಪ್ರೀತಿ ಮತ್ತು ಆತನ ವಿಧಿನಿಬಂಧನೆ ಮೇಲಿನ ಪ್ರೀತಿ ಇವುಗಳ ಮೇಲೆ ಆತುಕೊಂಡಿದೆ. ಯಾರಾದರೂ ಸತ್ಯದ ಮೂಲಕವಾಗಿ ಜ್ಞಾನೋದಯ ಪಡಕೊಂಡರೆ, ದೇವರ ಪ್ರೀತಿಯ ಜ್ಞಾನಕ್ಕೆ ಬರುವುದಾದರೆ, ಮತ್ತು ಮಾನವ ಪರಿಪೂರ್ಣತೆಗೆ ಪುನರ್‌ವಶಗೊಂಡು (ನಿಜವಾಗಿಯೋ ಅಥವಾ ಪರಿಗಣಿಸಲ್ಪಟ್ಟದ್ದಾದರೆ), ನಂತರ ಹೇಡಿಗಳೂ ಮತ್ತು ಹಿಂತೆಗೆಯುವವರು ಆದರೆ, (ಇಬ್ರಿಯ 10:38,39) ಅವರು ನಂಬಿಕೆಯಿಲ್ಲದವರೊಂದಿಗೆ ನಮ್ಮ ಜನರೊಳಗಿಂದ ಸಂಪೂರ್ಣವಾಗಿ ನಾಶವಾಗುವನು (ಪ್ರಕಟನೆ 21:8). ಇದು ಎರಡನೆಯ ಮರಣವು.

ಈ ರೀತಿಯಲ್ಲಿ ನಾವು ಇದುವರೆಗೂ ಕಠಿಣವಾಗಿದ್ದ ವಾಕ್ಯಭಾಗಗಳನ್ನು ವಿವರಿಸಿದ 'ಸೂಕ್ತ ಸಮಯ'ದಲ್ಲಿ ಸಾಕ್ಷ್ಯ ನೀಡುವವುಗಳಾಗಿವೆ ಎಂಬುದನ್ನು ನೋಡುತ್ತೇವೆ.

*Universalists - ಅಂದರೆ ಸರ್ವಮೋಕ್ಷವಾದಿಗಳು, ಎಲ್ಲಾ ಮಾನವರೂ ಕೊನೆಗೆ ಮೋಕ್ಷ ಪಡೆಯುತ್ತಾರೆ ಎಂಬ ಅಭಿಪ್ರಾಯವುಳ್ಳ ಕ್ರೈಸ್ತಪಂಗಡಕ್ಕೆ ಸೇರಿದ ವ್ಯಕ್ತಿಗಳು.

ಸೂಕ್ತಸಮಯದಲ್ಲಿ ಆ ನಿಜವಾದ ಬೆಳಕು ಈ ಲೋಕಕ್ಕೆ ಬರುವ ಎಲ್ಲಾ ಜನರ ಮೇಲೆ ಬೆಳಗುವುದು. ಮಹಾ ಸಂತೋಷದ ಶುಭಸಮಾಚಾರವು ಸೂಕ್ತ ಸಮಯದಲ್ಲಿ ಎಲ್ಲರಿಗೂ ತಲುಪುವುದು. ಈ ವಾಕ್ಯಭಾಗವನ್ನು ತಿರುಚದೆ ಬೇರೆ ರೀತಿಯಲ್ಲಿ ಉಪಯೋಗಿಸಲಾಗದು. ಪೌಲನು ಈ ವಾದದ ಅಂಶವನ್ನು ರೋಮಾ. 5:18,19ರಲ್ಲಿ ಒತ್ತುಕೊಟ್ಟು ವಾದಿಸುತ್ತಾನೆ. ಆತನು ಆದಾಮನ ಉಲ್ಲಂಘನೆಯಿಂದಾಗಿ ಎಲ್ಲಾ ಮನುಷ್ಯರೂ ಮರಣದ ದಂಡನೆಗೊಳಗಾದರು ಎಂದು ತಿಳಿಸುತ್ತಾನೆ. ಅದರಂತೆಯೇ ಕ್ರಿಸ್ತನ ನೀತಿವಂತಿಕೆ, ಮತ್ತು ಮರಣದ ಪರ್ಯಂತದವರೆಗೆ ಆತನ ವಿಧೇಯತೆಯು, ನೀತಿನಿರ್ಣಯಕ್ಕೆ ಒಂದು ಬುನಾದಿಯಾಗಿದೆ; ಎಲ್ಲರೂ ಮೊದಲನೆಯ ಆದಾಮನಿಂದ, ಹಾಗೂ ತಮ್ಮ ವೈಯುಕ್ತಿಕ ಅವಗುಣಗಳೊಂದಿಗೆ ಹೇಗೆ ಜೀವವನ್ನು ಕಳಕೊಂಡರೋ, ಹಾಗೆಯೇ ಎರಡನೆಯ ಆದಾಮನಾದ ಯೇಸುವನ್ನು ಅಂಗೀಕರಿಸುವದರಿಂದ ಜೀವವನ್ನು ಹೊಂದಿಕೊಳ್ಳಬಹುದು ಎಂಬ ಕಾರಣ ನೀಡುತ್ತಾನೆ – ಹೀಗೆ ಪಾಪವು ಮರಣವನ್ನುಂಟು ಮಾಡುತ್ತಾ ಅಧಿಕಾರವನ್ನು ನಡೆಸಿದ ಹಾಗೆಯೇ ದೇವರ ಕೃಪೆಯು ನಮ್ಮ ಕರ್ತನಾದ ಯೇಸುಕ್ರಿಸ್ತನ ಮೂಲಕ ನೀತಿಯನ್ನು ಕೊಟ್ಟು ನಿತ್ಯಜೀವವನ್ನುಂಟುಮಾಡುತ್ತಾ ಅಧಿಕಾರವನ್ನು ನಡಿಸುವುದು" (ರೋಮಾ. 5:21) ಎಂದಿದ್ದಾನೆ.

ಪೇತ್ರನು ಈ ಪುನರ್‌ವಶದ ಬಗ್ಗೆ ದೇವರು ತನ್ನ ಎಲ್ಲಾ ಪರಿಶುದ್ಧ ಪ್ರವಾದಿಗಳ ಬಾಯಿಯಿಂದ ಹೇಳಿಸಿದ್ದಾನೆ ಎಂದು ಹೇಳುತ್ತಾನೆ (ಅ.ಕೃ. 3: 19–21). ಅವರೆಲ್ಲರೂ ಆ ಬಗ್ಗೆ ಬೋಧಿಸಿದರು. ಯೆಹೆಜ್ಕೇಲನು ಒಣ ಎಲಬುಗಳ ತಗ್ಗಿನ ಬಗ್ಗೆ ಬರೆಯುತ್ತಾ – ಯೆಹೋವನು "ಈ ಎಲುಬುಗಳು ಇಸ್ರಾಯೇಲ್ಯನ ಪೂರ್ಣ ವಂಶವು; ಇಗೋ ಆ ವಂಶೀಯರು ಅಯ್ಯೋ ನಮ್ಮ ಎಲುಬುಗಳು ಒಣಗಿಹೋದವು, ನಮ್ಮ ನಿರೀಕ್ಷೆಯು ಹಾಳಾಯಿತು. ನಾವು ಬುಡನಾಶವಾದೆವು ಅಂದುಕೊಳ್ಳುತ್ತಿದ್ದಾರೆ. ಆದಕಾರಣ ನೀನು ಈ ದೈವೋಕ್ತಿಯನ್ನು – ಕರ್ತನಾದ ಯೆಹೋವನು ಇಂತೆನ್ನುತ್ತಾನೆ – ನನ್ನ ಜನರೇ ನೋಡಿರಿ, ನಾನು ನಿಮ್ಮ ಗೋರಿಗಳನ್ನು ತೆರೆದು ಅವುಗಳೊಳಗಿಂದ ನಿಮ್ಮನ್ನು ಎಬ್ಬಿಸಿ ಇಸ್ರಾಯೇಲ್ ದೇಶಕ್ಕೆ ಸೇರಮಾಡುವೆನು, ನನ್ನ ಜನರೇ ನಾನು ನಿಮ್ಮ ಗೋರಿಗಳನ್ನು ತೆರೆದು ಅವುಗಳೊಳಗಿಂದ ನಿಮ್ಮನ್ನು ಎಬ್ಬಿಸಿದಾಗ ನಾನೇ ಯೆಹೋವನು ಎಂಬುದು ನಿಮಗೆ ದೃಢವಾಗುವುದು. ನಾನು ನನ್ನ ಶ್ವಾಸವನ್ನು ನಿಮ್ಮಲ್ಲಿ ಹೊಗಿಸಿ ನಿಮ್ಮನ್ನು ಬದುಕಿಸಿ ನಿಮ್ಮ ದೇಶದಲ್ಲಿ ನೆಲೆಗೊಳಿಸುವೆನು; ಆಗ ಯೆಹೋವನಾದ ನಾನೇ ಇದನ್ನು ನಡಿಸಿದ್ದೇನೆ ಎಂದು ತಿಳಿದುಕೊಳ್ಳುವಿರಿ; ಇದು ಯೆಹೋವನ ಸಂಕಲ್ಪ" (ಯೆಹೆಜ್ಕೇಲ 37: 11–14).

ಇವುಗಳಿಗೆ ಪೌಲನ ವಚನವಾದ 'ಇಸ್ರಾಯೇಲ್ಯರಲ್ಲಿ ಒಂದು ಪಾಲು ಜನರಿಗೆ ಉಂಟಾದ ಮೊಂಡತನವು ಯಾವಾಗಲೂ ಇರದೆ ಅನ್ಯಜನಗಳ ಸಮುದಾಯವು ದೇವರ ರಾಜ್ಯದಲ್ಲಿ ಸೇರುವ ತನಕ ಮಾತ್ರ ಇರುವುದು (ಆಯ್ಕೆಯಾದ ತಂಡ, ಕ್ರಿಸ್ತನ ಮದಲಗಿತ್ತಿ) ಆ ಮೇಲೆ ಇಸ್ರಾಯೇಲ್ ಜನರೆಲ್ಲಾ ರಕ್ಷಣೆಹೊಂದುವರು' (ರೋಮಾ. 11: 25–26). ಯಾಕೆಂದರೆ "ದೇವರು ತಾನು ಮುಂದಾಗಿ ತನ್ನ ಜನರಾಗುವುದಕ್ಕೆ ಗೊತ್ತುಮಾಡಿಕೊಂಡಿದ್ದ ಪ್ರಜೆಯನ್ನು ತಳ್ಳಿ ಬಿಡಲಿಲ್ಲ" (ವಚನ 2). ಕ್ರಿಸ್ತನ ಮದಲಗಿತ್ತಿಯನ್ನು ಆಯ್ಕೆಮಾಡಿಕೊಳ್ಳವಾಗ ಅವರನ್ನು ತಳ್ಳಿಹಾಕಲಾಯಿತು, ಆದರೆ ಆ ಕಾರ್ಯವು ನೆರವೇರಿದ ನಂತರ, ಅವರನ್ನು ಪುನಃಪ್ರತಿಷ್ಠಾಪನೆ ಮಾಡಲಾಗುವದು (ವಚನಗಳು 28–33). ದೇವರು ಅವರನ್ನು ಪುನಃ ಹೇಗೆ ನೆಡುತ್ತಾನೆ ಮತ್ತು ಅವರನ್ನು ಮತ್ತೊಮ್ಮೆ ಕಿತ್ತುಹಾಕುವುದಿಲ್ಲ ಎಂಬುದರ ಬಗ್ಗೆ ಪ್ರವಾದಿಗಳು ಬಹಳಷ್ಟು ಹೇಳಿಕೆ ನೀಡಿದ್ದಾರೆ. ಇಸ್ರಾಯೇಲ್ಯರ ದೇವರಾದ ಯೆಹೋವನು ಇಂತೆನ್ನುತ್ತಾನೆ – "ನಾನು ಈ ಸ್ಥಳದಿಂದ ಕಸ್ದೀಯರ ದೇಶಕ್ಕೆ ಕಳುಹಿಸಿಬಿಟ್ಟ ಸೆರೆಯವರಾದ ಯೆಹೂದ್ಯರನ್ನು ಈ ಉತ್ತಮವಾದ ಅಂಜೂರದ ಮರಗಳಂತೆ ಲಕ್ಷಿಸಿ ಅವರಿಗೆ ಮೇಲನ್ನುಂಟುಮಾಡುವೆನು. ಅವರನ್ನು ಕಟಾಕ್ಷಿಸಿ ಈ ದೇಶಕ್ಕೆ ತಿರುಗಿ ಬರುವಂತೆ ಮಾಡುವೆನು; ಅವರನ್ನು ಕಟ್ಟುವೆನು ಕೆಡುವುವದಿಲ್ಲ. ನೆಡುವೆನು, ಕೀಳುವುದಿಲ್ಲ". ಅವರು ನನ್ನನ್ನು ಯೆಹೋವನೆಂದು ಗ್ರಹಿಸತಕ್ಕ ಹೃದಯವನ್ನು ಅವರಿಗೆ ಅನುಗ್ರಹಿಸುವೆನು; ಅವರು ನನ್ನ ಜನರಾಗಿರುವರು. ನಾನು ಅವರ ದೇವರಾಗಿರುವೆನು. ಅವರು ನನ್ನ ಕಡೆಗೆ ಮನಃಪೂರ್ವಕವಾಗಿ ಹಿಂದಿರುಗಿ ಬರುವರು" (ಯೆರೆಮೀಯ 24: 5–7; 31:28; 32:40–42; 33:6–16). ಇದು ಕೇವಲ ಬಾಬೇಲ್, ಸಿರಿಯಾ ಮುಂತಾದೆಡೆಯಲ್ಲಿ ನಡೆದ ಹಿಂದಿನ ಸೆರೆಹಿಡಿಯುವಿಕೆಯನ್ನು ಉಲ್ಲೇಖಿಸುವುದಿಲ್ಲ. ಯಾಕೆಂದರೆ ಅವರಗಳು ಅಂದಿನಿಂದ ಕೀಳಲ್ಪಟ್ಟಿದ್ದಾರೆ.

ಇದಕ್ಕೂ ಹೆಚ್ಚಾಗಿ, "ಇದು ಯೆಹೋವನ ನುಡಿ. ತಂದೆಗಳು ಹುಳಿ ದ್ರಾಕ್ಷೆಯನ್ನು ತಿಂದರು. ಮಕ್ಕಳ ಹಲ್ಲುಗಳು ಜಳಿತುಹೋಗಿವೆ ಎಂದು ಆ ಕಾಲದಲ್ಲಿ ಜನರು ಮತ್ತೆ ಅನ್ನರು. ಸಾಯತಕ್ಕವನು ತನ್ನ ದೋಷದಿಂದ ಸಾಯುವನು. ಹುಳಿದ್ರಾಕ್ಷೆಯನ್ನು

ತಿನ್ನುವವನ ಹಲ್ಲುಗಳೇ ಚಳಿತುಹೋಗುವುವು" (ಯೆರೆಮೀಯ 31:29,30). ಈ ಪ್ರಕರಣವು ಇಂದಿಗೆ ಅನ್ವಯಿಸುವುದಿಲ್ಲ. ಪ್ರತಿಯೊಬ್ಬನೂ ಈಗ ತನ್ನ ಸ್ವಂತ ಪಾಪಗಳಿಗಾಗಿ ಸಾಯುವುದಿಲ್ಲ, ಆದರೆ ಆದಾಮನ ಪಾಪಕ್ಕಾಗಿ ಸಾಯುತ್ತಾನೆ – "ಆದಾಮನ ಸಂಬಂಧದಲ್ಲಿ ಎಲ್ಲರೂ ಸಾಯುವರು" (1 ಕೊರಿಂಥ 15:22). ಆತನು ಪಾಪವೆಂಬ ಹುಳಿ ದ್ರಾಕ್ಷೆಯನ್ನು ತಿಂದನು. ನಮ್ಮ ಪಿತೃಗಳು ಅದನ್ನು ತಿನ್ನುವುದನ್ನು ಮುಂದುವರೆಸಿ ಅವರ ಮಕ್ಕಳ ಮೇಲೆ ರೋಗ ಮತ್ತಿತರ ಉಪದ್ರವಗಳನ್ನು ಪರಂಪರೆಯಾಗಿ ಬರಮಾಡಿದರು. ಈ ರೀತಿಯಲ್ಲಿ ದಂಡನೆಯಾದ ಮರಣವನ್ನು ತ್ವರಿತಗೊಳಿಸಿದರು. ಪ್ರತಿಯೊಬ್ಬ ವ್ಯಕ್ತಿಯೂ (ಮರಣಿಸುವವರು) ತನ್ನ ಸ್ವಂತ ಪಾಪಗಳಿಗಾಗಿ ಮಾತ್ರವೇ ಸಾಯುವ ದಿನ ಯಾವದೆಂದರೆ ಅದು ಸಹಸ್ರಮಾನದ ದಿನವಾಗಿದೆ.

ಅನೇಕ ಪ್ರವಾದನೆಗಳೂ, ಮುಂಬರುವ ಆಶೀರ್ವಾದಗಳ ವಾಗ್ದಾನಗಳೂ ಇಸ್ರಾಯೇಲ್ಯರಿಗೆ ಮಾತ್ರವೇ ಅನ್ವಯವಾಗುವಂತೆ ತೋರುವುದಾದರೂ, ಅವರುಗಳು ಸಾಂಕೇತಿಕ ಜನರಾಗಿದ್ದರು, ಆದುದರಿಂದ ವಾಗ್ದಾನಗಳನ್ನು ಅವರಿಗೆ ಮಾಡಲಾಯಿತು ಎಂಬುದನ್ನು ನೆನಪಿನಟ್ಟುಕೊಳ್ಳಬೇಕು. ಕೆಲವೊಮ್ಮೆ ಅವುಗಳು ಅವರಿಗೆ ವಿಶೇಷವಾಗಿ ಅನ್ವಯವಾಗುವುದಾದರೂ, ಸಾಮಾನ್ಯವಾಗಿ ಅದು ಆ ಜನಾಂಗವು ಸಾಂಕೇತಿಸುವ ಇಡೀ ಪ್ರಪಂಚಕ್ಕೆ ಅನ್ವಯವಾಗಲಿದೆ. ಇಸ್ರಾಯೇಲ್ ಒಂದು ಜನಾಂಗವಾಗಿ ಇಡೀ ಲೋಕವನ್ನು ಸಾಂಕೇತಿಸುವಾಗ, ಅದರ ಯಾಜಕತ್ವವು ಆಯ್ಕೆಗೊಂಡ ಚಿಕ್ಕಹಿಂಡಿನ, ಕ್ರಿಸ್ತನ ಶಿರಸ್ಸು ಮತ್ತು ದೇಹಕ್ಕೆ, ರಾಜವಂಶಸ್ಥ ಯಾಜಕತ್ವಕ್ಕೆ ಸಂಕೇತವಾಗಿದೆ. ಮತ್ತು ಇಸ್ರಾಯೇಲ್ಯರಿಗಾಗಿ ಮಾಡಲ್ಪಟ್ಟ ಯಜ್ಞಗಳು, ಶುದ್ಧೀಕರಣ ಮತ್ತು ಪ್ರಾಯಶ್ಚಿತ್ತ ಯಜ್ಞಗಳು "ಉತ್ತಮವಾದ ಯಜ್ಞ"ಗಳನ್ನು, ಸಂಪೂರ್ಣ ಶುದ್ಧೀಕರಣವನ್ನು ಸಮಸ್ತ ಲೋಕದ ಪಾಪಕ್ಕಾಗಿ ನಿಜವಾದ ಪ್ರಾಯಶ್ಚಿತ್ತ ಯಜ್ಞವಾಗಿಯೂ ಸಾಂಕೇತಿಸಲ್ಪಟ್ಟಿದೆ ಮತ್ತು ಅವರು ಪಾತ್ರವಾಗಿರುವರು..

ಅಷ್ಟೇ ಅಲ್ಲದೆ, ದೇವರು ಅನ್ಯ ಜನಾಂಗಗಳವರ ಹೆಸರುಗಳನ್ನು ಪ್ರಸ್ತಾಪಿಸುವ ಮೂಲಕ ಮತ್ತು ಅವರ ಪುನರ್‌ಸ್ಥಾಪನೆಯನ್ನು ವಾಗ್ದಾನಪಡಿಸುತ್ತಾನೆ. ಒತ್ತಾಯಪೂರ್ವಕವಾದ ಉದಾಹರಣೆಯಾಗಿ ಸೋದೋಮ್ಯರ ಬಗ್ಗೆ ಹೇಳುತ್ತೇವೆ. ನಿಶ್ಚಯವಾಗಿಯೂ, ನಾವು ಸೋದೋಮ್ಯರ ಪುನರ್‌ವಶವನ್ನು ಸ್ಪಷ್ಟವಾದ ಆಲೋಚನೆಯೊಂದಿಗೆ ನೋಡುವುದಾದರೆ, ನಮಗೆ ಎಲ್ಲಾ ಪರಿಶುದ್ಧ ಪ್ರವಾದಿಗಳ ಬಾಯಿಯಿಂದ ಹೊರಟು ಬಂದ ಎಲ್ಲಾ ಮಾನವಜಾತಿಯವರ ಈ ಭವ್ಯವಾದ ಪುನರ್‌ಸ್ಥಾಪನಾ ವಿಚಾರಣಾ ಸರಣಿಯ ಮಾತುಗಳ ಸತ್ಯದ ಬಗ್ಗೆ ನಮಗೆ ತೃಪ್ತಿಯಾಗಬಹುದು. ಮತ್ತು ಸೊದೋಮ್ಯರು ಯಾಕೆ ಇಸ್ರಾಯೇಲ್ಯರಂತೆ, ಅಥವಾ ನಮ್ಮಂತೆ ಸರ್ವಸಂಪೂರ್ಣತೆಯನ್ನು ಮತ್ತು ನಿತ್ಯಜೀವವನ್ನು ತಲಪುವ ಅವಕಾಶಗಳನ್ನು ಪಡೆದುಕೊಳ್ಳಬಾರದು? ಎನಿಸುತ್ತದೆ. ಅವರು ನೀತಿವಂತರಾಗಿರಲಿಲ್ಲ ಎಂಬುದು ಸತ್ಯ, ಆದರೆ ಇಸ್ರಾಯೇಲ್ಯರೂ ನೀತಿವಂತರಾಗಿರಲಿಲ್ಲ, ಅಥವಾ ಈಗ ಸುವಾರ್ತೆಯನ್ನು ಕೇಳಿಸಿಕೊಳ್ಳುತ್ತಿರುವ ನಾವು ಸಹಾ ನೀತಿವಂತರಾಗಿರುವುದಿಲ್ಲ. ನಮಗಾಗಿ ಮರಣಪಟ್ಟು, ನೀತಿವಂತನೆಂದು ಎಣಿಸಲ್ಪಟ್ಟಿರುವ ಕ್ರಿಸ್ತನನ್ನು ಬಿಟ್ಟು ಬೇರೆ "ನೀತಿವಂತನು ಇಲ್ಲ, ಒಬ್ಬನಾದರೂ ಇಲ್ಲ" (ರೋಮಾ. 3:10). ನಮ್ಮ ಕರ್ತನ ಸ್ವಂತ ಮಾತುಗಳು ನಮಗೆ ಹೇಳುವುದೇನೆಂದರೆ – ದೇವರು ಬೆಂಕಿಯನ್ನು ಸೊದೋಮ್ಯರ ಕೆಡುಕುತನದ ಸಲುವಾಗಿ ಪರಲೋಕದಿಂದ ಅವರ ಮೇಲೆ ಅಗ್ನಿ ಗಂಧಕಗಳ ಮಳೆಯನ್ನು ಸುರಿಸಿದರೂ (ಆದಿ. 19:24; ಲೂಕ 17:29) ಆತನ ದೃಷ್ಟಿಯಲ್ಲಿ ಅವರು ಹೆಚ್ಚು ಜ್ಞಾನವುಳ್ಳ ಯೆಹೂದ್ಯರಷ್ಟು ಪಾಪಿಗಳಾಗಿರಲಿಲ್ಲ. ಕಪೆರ್ನೌಮಿನ ಯೆಹೂದ್ಯರ ಬಗ್ಗೆ ಆತನು "ನೀನು ಪರಲೋಕಕ್ಕೆ ಏರಿಸಲ್ಪಡುವೆಯೋ? ಪಾತಾಳಕ್ಕೇ ಇಳಿಯುವಿ. ನಿನ್ನಲ್ಲಿ ನಡೆದ ಮಹತ್ಕಾರ್ಯಗಳು ಸೊದೋಮಿನಲ್ಲಿ ನಡೆದಿದ್ದರೆ ಅದು ಇಂದಿನವರೆಗೂ ಉಳಿಯುತ್ತಿತ್ತು" (ಮತ್ತಾಯ 11 :23) ಎಂದು ಹೇಳಿದ್ದಾನೆ.

ಈ ರೀತಿಯಲ್ಲಿ ನಮ್ಮ ಕರ್ತನು ಸೊದೋಮ್ಯರಿಗೆ ಪೂರ್ಣಾವಕಾಶವಿದ್ದಿರಲಿಲ್ಲವೆಂದು ಬೋಧಿಸುತ್ತಾನೆ. ಆತನು "ಆದರೆ ನ್ಯಾಯವಿಚಾರಣೆಯ ದಿನದಲ್ಲಿ ನಿನ್ನ ಗತಿಗಿಂತಲೂ ಸೋದೋಮ್ ಸೀಮೆಯ ಗತಿಯು ಮೇಲಾಗಿರುವುದು" (ವ. 24) ಎಂದು ಸೇರಿಸುವುದರ ಮೂಲಕ ಅಂಥಾಃ ಅವಕಾಶವನ್ನು ಅವರಿಗೆ ಖಾತ್ರಿಪಡಿಸುತ್ತಾನೆ. ನ್ಯಾಯತೀರ್ವಿಕೆಯ ದಿನದ ಗುಣಲಕ್ಷಣಗಳು ಮತ್ತು ಅದರ ಕಾರ್ಯಗಳನ್ನು ಮುಂದಿನ ಪುಟಗಳಲ್ಲಿ ತೋರಿಸಲಾಗುವುದು. ಇಲ್ಲಿ ನಾವು ಕೇವಲ ಇದು ಕಪೆರ್ನೌಮಿಗೆ ಸಹನಾ ಸಮಯವಾಗಿದೆ, ಆದರೆ ಸೋದೋಮಿಗೆ ಇನ್ನೂ ಹೆಚ್ಚಿನ ಸಹನಾ ಸಮಯವಾಗಿದೆ ಎಂಬುದರ ಬಗ್ಗೆ ಗಮನ ಸೆಳೆಯುವವರಾಗಿದ್ದೇವೆ. ಯಾಕೆಂದರೆ ಅವರಲ್ಲಿ ಒಬ್ಬರಿಗಾದರೂ ಎಲ್ಲಾ ಆಶೀರ್ವಾದಗಳೂ 'ಸಂತತಿ'ಯ ಮೂಲಕ ಬರುವಂತೆ ವಿನ್ಯಾಸಗೊಂಡಿದೆ ಎಂಬ

ಸಂಪೂರ್ಣ ತಿಳುವಳಿಕೆ ಇಲ್ಲದೇ ಇದ್ದರೂ, ಕೆಪರ್ನೌಮ್ ಹೆಚ್ಚಿನ ಬೆಳಕಿನ ವಿರುದ್ಧವಾಗಿ ಪಾಪಮಾಡಿತ್ತು.

ಕಪೆರ್ನೌಮ್ ಮತ್ತು ಎಲ್ಲಾ ಇಸ್ರಾಯೇಲ್ಯರೂ ಕ್ರಿಸ್ತನ ರಕ್ತದಿಂದ ಮುದ್ರಿತವಾದ "ನೂತನ ಒಡಂಬಡಿಕೆ"ಯ ಅಡಿಯಲ್ಲಿ ನೆನಪು ಮಾಡಿಕೊಂಡು ಆಶೀರ್ವದಿಸಲ್ಪಡಬೇಕಾದರೆ, ಸೊದೋಮ್ಯರು ಕೂಡಾ ಯಾಕೆ ಲೋಕದ ಎಲ್ಲಾ ಜನರೊಂದಿಗೆ ಆಶೀರ್ವಾದ ಹೊಂದಿಕೊಳ್ಳಬಾರದು? ಅವರು ಹಾಗೆ ಹೊಂದಿಕೊಳ್ಳುವರೆಂದು ದೃಢಪಟ್ಟಿದ್ದಾರೆ. ದೇವರು ಕ್ರಿಸ್ತನ ದಿನಗಳಿಗಿಂತ ಎಷ್ಟೋ ಶತಮಾನಗಳ ಹಿಂದೆ ಪರಲೋಕದಿಂದ ಬೆಂಕಿಯನ್ನು ಸುರಿಸಿ ಅವರನ್ನೆಲ್ಲಾ ನಾಶಪಡಿಸಿರುವುದರಿಂದ, ಅವರ ಪುನಃಸ್ಥಾಪನೆಯ ಬಗ್ಗೆ ಮಾತನಾಡುವಾಗ, ಅದು ಅವರುಗಳು ಸಮಾಧಿಯಿಂದ ಜೀವಿತರಾಗಿ ಎದ್ದುಬರುವುದರ ಬಗ್ಗೆ ಮಾತನಾಡುತ್ತದೆ ಎಂಬ ಅರ್ಥವನ್ನು ನೀಡುತ್ತದೆ.

ನಾವೀಗ ಯೆಹೆಜ್ಕೇಲ 16:48–63ರಲ್ಲಿರುವ ಪ್ರವಾದನೆಯುನ್ನು ಪರೀಕ್ಷಿಸೋಣ. ಅದನ್ನು ಜಾಗರೂಕತೆಯಿಂದ ಓದಿಕೊಳ್ಳಿ. ದೇವರು ಇಲ್ಲಿ ಇಸ್ರಾಯೇಲ್ಯರ ಬಗ್ಗೆ ಮಾತನಾಡುತ್ತಾನೆ ಮತ್ತು ಅವರನ್ನು ನೆರೆಯವರಾದ ಸಮಾರ್ಯದವರೊಡನೆಯೂ ಮತ್ತು ಸೊದೋಮ್ಯರೊಡನೆಯೂ ಹೋಲಿಸುತ್ತಾನೆ. ಅವರ ಬಗ್ಗೆ ಆತನು "ನಾನು ಅದನ್ನು ನೋಡಿ ಅವರನ್ನು ನಿರ್ಮೂಲ ಮಾಡಿದೆನು (ಹಾಗೆ ಮಾಡುವುದು ಒಳ್ಳೆದೆಂದು ನನಗೆ ತೋಚಿತು)" ಎನ್ನುತ್ತಾನೆ. ಯೇಸುವಾಗಲೀ, ಪ್ರವಾದಿಯಾಗಲೀ ದೇವರು ಸೋದೋಮನ್ನು ನಾಶಪಡಿಸಿರುವನು ಮತ್ತು ಸೊದೇಮಿಗಿಂತ ಇನ್ನೂ ಹೆಚ್ಚು ತಪ್ಪುಮಾಡಿದವರಿಗೆ ಶಿಕ್ಷೆ ಇಲ್ಲದಿರುವಂತೆ ಅನುಮತಿಸಿರುವ ವಿಷಯದಲ್ಲಿ ಎದ್ದುಕಾಣುವ ತಾರತಮ್ಯದ ಬಗ್ಗೆ ಯಾವುದೇ ವಿವರಣೆ ನೀಡುವುದಿಲ್ಲ. ಅವೆಲ್ಲವೂ ಆತನ ಮಹಾ ಯೋಜನೆಗಳು ತಕ್ಕಸಮಯದಲ್ಲಿ ಪ್ರಕಟಗೊಳ್ಳುವಾಗ ಸ್ಪಷ್ಟವಾಗಲಿದೆ. ಪ್ರವಾದಿಯು "ಹಾಗೆ ಮಾಡುವುದು ಒಳ್ಳೇದೆಂದು ದೇವರಿಗೆ ತೋಚಿತು" ಎಂದು ಸರಳವಾಗಿ ಹೇಳುತ್ತಾನೆ. ಮತ್ತು ಯೇಸುವು ಅದು ಅವರಿಗೆ ನ್ಯಾಯತೀರ್ವಿಕೆ ದಿನದಲ್ಲಿ ಇನ್ನೂ ಹೆಚ್ಚು ಅಪರಾಧಗಳನ್ನು ಮಾಡಿದವರಿಗಿಂತ ಹೆಚ್ಚು ಮೇಲಾಗಿರುವುದು ಎಂಬ ಅರ್ಥ ಬರುವ ಮಾತುಗಳನ್ನು ಸೇರಿಸಿದ್ದಾನೆ. ಆದರೆ ಮರಣವು ಎಲ್ಲಾ ಪರೀಕ್ಷಣೆಗಳನ್ನು ಕೊನೆಗಾಣಿಸುತ್ತದೆ ಮತ್ತು ಆ ನಂತರ ಸತ್ಯದ ಜ್ಞಾನಕ್ಕೆ ಬರಲು ಮತ್ತು ಅದಕ್ಕೆ ವಿಧೇಯರಾಗಿ ಪಾಲಿಸಲು ಯಾರಿಗೂ ಅವಕಾಶವಿರುವುದಿಲ್ಲ ಎಂಬ ಕಲ್ಪನೆಯಿಂದ ಭಾವಿಸುವವರಿಗೆ, ನಾವು ಏಕೈಕ ಹೆಸರಿನ (ಯೇಸುವಿನ) ಜ್ಞಾನದ ಮೂಲಕ ದೊರೆಯುವ ರಕ್ಷಣೆಯ ಅವಕಾಶವನ್ನು ದೇವರು ಇವರುಗಳಿಗೆ ನೀಡದೆ ಇವರನ್ನು ನಿರ್ಮೂಲ ಏಕೆ ಮಾಡಿದನು ಎಂದು ಒಳ್ಳೇ ರೀತಿಯಲ್ಲಿ ವಿಚಾರಿಸುತ್ತೇವೆ. ಅದು ಅವರ ಯುಕ್ತ ಸಮಯವಾಗಿರಲಿಲ್ಲ ಎಂಬುದೇ ಇದಕ್ಕೆ ಉತ್ತರ. ತಕ್ಕ ಸಮಯದಲ್ಲಿ ಅವರು ಮರಣದಿಂದ ಜೀವಿತರಾಗಿ ಎಬ್ಬಿಸಲ್ಪಡುವರು ಮತ್ತು ಸತ್ಯದ ಜ್ಞಾನಕ್ಕೆ ತರಲ್ಪಡುವರು. ಮತ್ತು ಈ ರೀತಿಯಲ್ಲಿ ಅವರು ವಾಗ್ದಾನಪಡಿಸಿದ 'ಸಂತಾನ'ದಿಂದ ಲೋಕದ ಎಲ್ಲಾ ಕುಟುಂಬಗಳೊಂದಿಗೆ ಆಶೀರ್ವಾದಗಳನ್ನು ಹೊಂದಿಕೊಳ್ಳುವರು. ನಂತರದಲ್ಲಿ ಅವರು ನಿತ್ಯಜೀವಕ್ಕಾಗಿ ಪರೀಕ್ಷೆಗೊಳಗಾಗುವರು.

ಈ ಆಲೋಚನೆಯೊಂದಿಗೆ, ಹಾಗೂ ಬೇರೆ ಯಾವ ಆಲೋಚನೆಗಳಿಲ್ಲದೆ, ನಾವು ಅಮಾಲೇಕ್ಯರು ಮತ್ತಿತರ ದೇಶಗಳೊಡನೆ ಪ್ರೀತಿಯ ದೇವರ ವ್ಯವಹಾರವನ್ನು ಅರ್ಥಮಾಡಿಕೊಳ್ಳಬಹುದು. ಆತನು ಅವರಿಗೆ ಅವರನ್ನು ನಾಶಪಡಿಸುವಂತೆ ಅನುಮತಿಸಿದ್ದು ಮಾತ್ರವಲ್ಲ, ಇಸ್ರಾಯೇಲ್ಯರ ಅರಸನಾದ ಸೌಲನಿಗೆ – ನೀನು ಹೋಗಿ ಅವರನ್ನು (ಅಮಾಲೇಕ್ಯರನ್ನು) ಸೋಲಿಸಿ ಅವರಿಗಿರುವುದನ್ನೆಲ್ಲಾ ಸಂಪೂರ್ಣವಾಗಿ ಹಾಳುಮಾಡು. ಗಂಡಸರನ್ನೂ, ಹೆಂಗಸರನ್ನೂ, ಮಕ್ಕಳನ್ನೂ, ಶಿಶುಗಳನ್ನೂ, ಎತ್ತು, ಕುರಿ, ಕತ್ತೆ, ಒಂಟೆ ಇವುಗಳನ್ನೂ ಕನಿಕರವಿಲ್ಲದೆ ಕೊಂದು ಹಾಕು" (1 ಸಮು. 15:3) ಎಂಬುದಾಗಿ ಸಮುವೇಲನ ಮೂಲಕ ಅಪ್ಪಣೆಕೊಟ್ಟನು. ಇದು ಸ್ಪಷ್ಟವಾಗಿ ಸಂಧಾನರಹಿತವಾದ ಅಜಾಗರೂಕ ಜೀವನಾಶವಾಗಿದ್ದು (ದೇವರು ಪ್ರೀತಿಸ್ವರೂಪನೂ ಎನ್ನುವ ಆತನ ಗುಣಲಕ್ಷಣಗಳಿಗೆ ಹೊಂದಾಣಿಕೆಯಿಲ್ಲದ ವಿಚಾರವಾಗಿದ್ದು) ದೇವರು ಹೊಂದಿರುವ (ಆರೋಪಿಸಲ್ಪಟ್ಟಿರುವ – attributed) ಪ್ರೀತಿಯ ಗುಣಲಕ್ಷಣಗಳಿಗೆ – "ಮತ್ತು ನಿಮ್ಮ ಶತೃಗಳನ್ನು ಪ್ರೀತಿಸು" ಇತ್ಯಾದಿ ಯೇಸುಕ್ರಿಸ್ತನ ಬೋಧನೆಗಳಿಗೆ ಹೊಂದಾಣಿಕೆಯಾಗುವುದಿಲ್ಲ ಎಂದು ತೋರುತ್ತದೆ. ಮತ್ತು ದೇವರ ವ್ಯವಸ್ಥಿತ ಯೋಜನೆಯನ್ನು ಗ್ರಹಿಸುವವರಗೆ ಅದರ ಪ್ರತಿಯೊಂದು ಲಕ್ಷಣಗಳು ನೆರವೇರಿ ಸಿದ್ಧಿಸುವ "ತಕ್ಕ ಸಮಯದ ಬಗ್ಗೆ ಹಾಗೂ ಮಾನವ ಕುಲದ ಪ್ರತಿಯೊಬ್ಬನಿಗೂ ಅದರಲ್ಲಿ ಸ್ಥಾನವುಂಟು ಎಂಬದನ್ನು ಅರಿತುಕೊಳ್ಳುವವರೆಗೆ ಅರ್ಥವಾಗುವದಿಲ್ಲ.

ಈ ಅಮಾಲೇಕ್ಯರೂ, ಸೊದೋಮ್ಯರೂ ಮತ್ತಿತರರನ್ನು ಮತ್ತು ಕೇಡನ್ನು ಮಾಡುವವರನ್ನು ದೇವರ ನ್ಯಾಯೋಚಿತ ಕ್ರೋಧಕ್ಕೆ ಉದಾಹರಣೆಯಾಗಿ

ಮುಂದಿಟ್ಟಿದೆ. ಮತ್ತು ಆತನು ಅಂತಿಮವಾಗಿ ಮತ್ತು ಸಂಪೂರ್ಣವಾಗಿ ಕೆಡುಕರನ್ನು ನಾಶಪಡಿಸುವ ಆತನ ನಿರ್ಣಯವನ್ನು ತೋರಿಸುತ್ತದೆ ಮತ್ತು ನ್ಯಾಯತೀರ್ಪಿನ ಮತ್ತು ಶೋಧನೆಯ ದಿನಗಳು ಬರುವಾಗ ಇತರರಿಗೆ ಮಾತ್ರವಲ್ಲ ತಮಗೂ ಪ್ರಯೋಜನವಾಗುವ ಉದಾಹರಣೆಗಳಾಗಿವೆ. ಆ ಜನರು ಯಾವುದಾದರೂ ಮಹಾಪಿಡುಗಿನಿಂದ ಅಥವಾ ಕಾಯಿಲೆಯಿಂದ ಸಾಯುವವರಂತೆ ಮರಣವನ್ನಪ್ಪುತ್ತಾರೆ. ಅದು ಅವರಿಗೆ ಅಲ್ಪ ವಿಷಯವಾಗಿತ್ತು, ಯಾಕೆಂದರೆ ಅವರು ಕೇವಲ ಕೆಡುಕನ್ನು ತಿಳುಕೊಳ್ಳಲು ಕಲಿತುಕೊಳ್ಳುವವರಾಗಿದ್ದರು, ಶೋಧನೆಗೊಳಗಾದಾಗ, ಸೂಕ್ತ ಸಮಯದಲ್ಲಿ ಅವರು ನೀತಿವಂತಿಕೆಯನ್ನು ಕಲಿತುಕೊಳ್ಳಬಹುದು ಮತ್ತು ವ್ಯತ್ಯಾಸವನ್ನು ಕಂಡುಕೊಂಡು, ಒಳ್ಳೆಯದನ್ನು ಆರಿಸಿಕೊಂಡು ಜೀವವನ್ನು ಪಡಕೊಳ್ಳಬಹುದು ಎಂಬುದು ಅವರಿಗೆ ಸ್ವಲ್ಪ ಪ್ರಾಮುಖ್ಯವಾಗಿತ್ತು.

ಆದರೆ, ನಾವು ಪ್ರವಾದನೆಯನ್ನು ಮತ್ತಷ್ಟು ಪರಿಶೀಲಿಸೋಣ. ಇಸ್ರಾಯೇಲ್ಯರನ್ನು ಸೊದೋಮ್ಯ ಮತ್ತು ಸಮಾರ್ಯರೊಂದಿಗೆ ಹೋಲಿಸಿದ ನಂತರ, ಮತ್ತು ಇಸ್ರಾಯೇಲ್ಯರು ಹೆಚ್ಚು ನಿಂದನಾರ್ಹರು ಎಂದು ಘೋಷಿಸಿದ ನಂತರ (ಯೆಹೆಜ್ಕೇಲ 16:48–54) ಕರ್ತನು ಹೇಳುವುದೇನೆಂದರೆ "ಸೋದೋಮ್ ಆಕೆಯ ಕುಮಾರ್ತೆಯರು, ಸಮಾರ್ಯ ಆಕೆಯ ಕುಮಾರ್ತೆಯರು ಇವರ ದುರವಸ್ಥೆಯನ್ನು ನಾನು ತಪ್ಪಿಸುವೆನು". ಇಲ್ಲಿ ಪ್ರಸ್ತಾಪಿಸುವ ದುರವಸ್ಥೆಯು ಮರಣವಲ್ಲದೇ ಬೇರೇನೂ ಅಲ್ಲ; ಅಲ್ಲಿ ತಿಳಿಸಿರುವವರು ಆಗ ಮರಣಿಸಿದರು. ಮರಣದಲ್ಲಿ ಅವರು ಬಂಧಿಗಳು. ಕ್ರಿಸ್ತನು ಸಮಾಧಿಯ ಬಾಗಿಲುಗಳನ್ನು ತೆರೆಯಲು ಬರುತ್ತಾನೆ, ಮತ್ತು ಸೆರೆಯವರನ್ನು ಬಿಡುಗಡೆಗೊಳಿಸುತ್ತಾನೆ. ಹೀಗಿರಲು ನೀನು ಲೆಕ್ಕವಿಲ್ಲದ ದುಷ್ಕೃತ್ಯಗಳ ಮೂಲಕ ಅವರನ್ನು ಸಂತೈಸಿದ್ದರಿಂದ ಲಜ್ಜೆಪಡುವಿ, ನಾಚಿಕೆಗೊಳ್ಳುವಿ. ಆಗ ಸಮಾರ್ಯ, ಸೊದೋಮ್ ಎಂಬ ನಿನ್ನ ಅಕ್ಕ ತಂಗಿಯರೂ ಅವರ ಕುಮಾರ್ತೆಯರೂ ತಮ್ಮ ಪೂರ್ವಸ್ಥಿತಿಗೆ ಸೇರುವರು, ನೀನೂ ನಿನ್ನ ಕುಮಾರ್ತೆಯರೂ ನಿಮ್ಮ ಪೂರ್ವಸ್ಥಿತಿಗೆ ಸೇರುವಿರಿ" (ಯೆಹೆಜ್ಕೇಲ 16:53–55); "ನನ್ನ ಜನವೇ, ನೀನು ಒಡಂಬಡಿಕೆ ಮಾಡಿಕೊಂಡಾಗ ಸುರಿಸಿದ ರಕ್ತವನ್ನು ನಾನು ಸ್ಮರಿಸಿ ಸೆರೆಯಾಗಿರುವ ನಿನ್ನವರನ್ನು ನೀರಿಲ್ಲದ ಆ ಬಾವಿಯೊಳಗಿಂದ ಬರಮಾಡುವೆನು" (ಜೆಕರ್ಯ 9:11), 55ನೇ ವಚನದಲ್ಲಿ ಇದು ಪೂರ್ವಸ್ಥಿತಿಗೆ ಹಿಂತಿರುಗುವುದು – ಪುನಃಸ್ಥಾಪನೆ ಎಂಬುದಾಗಿ ನೋಡುತ್ತೇವೆ (ಯೆಶಾಯ 61:11, ಜೆಕರ್ಯ 9:11).

ಕೆಲವರು ಕ್ರಿಸ್ತನ ಮೂಲಕ ದೇವರ ಕರುಣೆಯನ್ನು ಹೆಚ್ಚಾದ ಬೆಳಕು ಮತ್ತು ಜ್ಞಾನದ ಅಡಿಯಲ್ಲಿ ತಮ್ಮ ಸ್ವಂತ ಅಪರಾಧಗಳು ಮತ್ತು ಬಲಹೀನತೆಗಳು ಕ್ಷಮಿಸಲ್ಪಡುವವು ಎಂದು ಸಾಕಷ್ಟು ಒಪ್ಪಿಕೊಳ್ಳುವರಾದರೂ, ಯೇಸುಕ್ರಿಸ್ತನು ದೇವರ ಕೃಪೆಯಿಂದ ಎಲ್ಲಾ ಜನರಿಗಾಗಿ ಮರಣವನ್ನು ಅನುಭವಿಸಿದನು ಎಂಬ ಅಪೋಸ್ತಲರ ಹೇಳಿಕೆಯನ್ನು ಒಪ್ಪಿಕೊಳ್ಳುವುದಾಗಿ ಕಂಡುಬಂದರೂ ಅದೇ ಕೃಪೆಯು ಹೊಸಒಡಂಬಡಿಕೆಯು ಅಡಿಯಲ್ಲಿ ಇತರರಿಗೆ ಅನ್ವಯವಾಗುವುದನ್ನು ತಮ್ಮ ಮನಸ್ಸಿನಲ್ಲಿ ನೆನೆಸುವುದಿಲ್ಲ; ಇವರಲ್ಲಿ ಕೆಲವರು ದೇವರು ಈ ಪ್ರವಾದನೆಯಲ್ಲಿ ಕೇವಲ ಸೊದೋಮ್ಯರನ್ನು ಅವರಂತೆಯೇ ಹಿಂದಕ್ಕೆ ತರುವ ಅರ್ಥದಲ್ಲಿ ಯೆಹೂದ್ಯರೊಂದಿಗೆ ವ್ಯಂಗವಾಗಿ ಮಾತನಾಡಿದ ನಾದರೂ ಆತನಿಗೆ ಪುನರ್‌ಸ್ಥಾಪಿಸುವ ಆಸಕ್ತಿ ಇಬ್ಬರಲ್ಲಿಯೂ ಇದ್ದಿಲ್ಲ ಎಂದು ಸಲಹೆ ಮಾಡುತ್ತಾರೆ. ಆದರೆ ಮುಂದಿನ ವಾಕ್ಯಗಳು ಹೇಗೆ ಈ ಆಲೋಚನೆಯನ್ನು ಒಪ್ಪಿಕೊಳ್ಳುತ್ತವೆ ಎಂಬುದನ್ನು ನಾವು ನೋಡೋಣ. "ಹೀಗಾದರೂ ನಾನು ನಿನ್ನ ಯೌವ್ವನ ಕಾಲದಲ್ಲಿ ನಿನ್ನೊಂದಿಗೆ ಮಾಡಿಕೊಂಡ ಒಡಂಬಡಿಕೆಯನ್ನು ಜ್ಞಾಪಕಕ್ಕೆ ತಂದುಕೊಂಡು ನಿನ್ನ ಸಂಗಡ ಎಂದಿಗೂ ತಪ್ಪದ ಒಡಂಬಡಿಕೆಯನ್ನು ಮಾಡಿಕೊಂಡು ದೃಢಪಡಿಸುವೆನು .... ಕುಮಾರ್ತೆಯರೋ ಎಂಬಂತೆ ನಿನ್ನ ಅಕ್ಕಂದಿರೂ, ತಂಗಿಯರೂ ನಿನ್ನಲ್ಲಿ ಸೇರಿಕೊಳ್ಳುವಾಗ ನೀನು ನಿನ್ನ ದುರ್ಮಾರ್ಗಗಳನ್ನು ನೆನೆಸಿಕೊಂಡು ನಾಚಿಕೆಪಡುವಿ .... ನಾನು ಈ ಒಡಂಬಡಿಕೆಯನ್ನು ನಿನ್ನೊಂದಿಗೆ ಮಾಡಿಕೊಳ್ಳಲು ನಾನೇ ಯೆಹೋವನು ಎಂದು ನಿನಗೆ ಗೊತ್ತಾಗುವುದು. ನಾನು ನಿನ್ನ ದುಷ್ಕೃತ್ಯಗಳನ್ನೆಲ್ಲಾ ಕ್ಷಮಿಸಿಬಿಟ್ಟ ಮೇಲೆ ನೀನು ಅವುಗಳನ್ನು ಜ್ಞಾಪಕಕ್ಕೆ ತಂದು ನಾಚಿಕೆಪಟ್ಟು ನಿನ್ನ ಅವಮಾನದ ನಿಮಿತ್ತ ಇನ್ನು ಬಾಯಿ ತೆರೆಯದಿರುವಿ. ಇದು ಕರ್ತನಾದ ಯೆಹೋವನ ನುಡಿ" (ಯೆಹೆಜ್ಕೇಲ 16: 60–63). ಈ ರೀತಿಯಲ್ಲಿ ವಾಗ್ದಾನವು ಮಹೋನ್ನತನಾದ ಯೆಹೋವನಿಂದ ರುಜು ಹೊಂದಿಕೊಂಡ ಮೇಲೆ ಯಾರಾರು ದೇವರು ಸತ್ಯವಂತನು ಎಂಬ ಮುದ್ರೆಗೆ ಹೊಂದಿಕೊಂಡಿರುವವರೋ ಅವರೆಲ್ಲರೂ; ವಿಶೇಷವಾಗಿ ಈ ಹೊಸ ಒಡಂಬಡಿಕೆಯ ಆಶೀರ್ವಾದಗಳು ದೇವರಿಂದ ಕ್ರಿಸ್ತನಲ್ಲಿ ದೃಢೀಕರಿಸಲ್ಪಟ್ಟಿದೆ ಮತ್ತು ಆತನ ಪರಿಶುದ್ಧ ರಕ್ತವು ಒಡಂಬಡಿಕೆಯನ್ನು ಮುದ್ರಿಸುತ್ತದೆ ಎಂಬ ನಿಶ್ಚಿತತೆಯ ಭರವಸೆಯೊಂದಿಗೆ ಸಂತೋಷಿಸಬಹುದು.

ಇದಕ್ಕೆ ಪೌಲನು ತನ್ನ ಸಾಕ್ಷ್ಯವನ್ನು ಕೂಡಿಸುತ್ತಾ – "ಆಮೇಲೆ ಇಸ್ರಾಯೇಲ್ ಜನವೆಲ್ಲಾ (ಜೀವಂತರೂ ಮತ್ತು ಸತ್ತವರು) ರಕ್ಷಣೆ ಹೊಂದಿಕೊಳ್ಳುವುದು (ಕುರುಡುತನದಿಂದ ಗುಣಹೊಂದುವರು), ಇದಕ್ಕೆ ಆಧಾರವಾಗಿ ಶಾಸ್ತ್ರದಲ್ಲಿ – ಬಿಡಿಸುವವನು ಚಿಯೋನಿನೊಳಗಿಂದ ಹೊರಟು ಬಂದು ಯಾಕೋಬನಲ್ಲಿರುವ ಭಕ್ತಿಹೀನತೆಯನ್ನು ನಿವಾರಣೆ ಮಾಡುವನು. ನಾನು ಅವರ ಸಂಗಡ ಮಾಡಿಕೊಂಡ ಈ ಒಡಂಬಡಿಕೆಯು ನಾನು ಅವರ ಪಾಪಗಳನ್ನು ಪರಿಹರಿಸುವಾಗ ನೆರವೇರುವುದು ಎಂದು ಬರೆದದೆ ... ಅವರು ಪಿತೃಗಳ ವಂಶಸ್ತರಾಗಿರುವುದರಿಂದ ಅವರನ್ನು ಪ್ರಿಯರೆಂದೆಣಿಸಿದ್ದಾನೆ. ದೇವರು ವರಗಳನ್ನು ಅನುಗ್ರಹಿಸಿದ್ದಕ್ಕೂ ಜನರನ್ನು ಕರೆದದ್ದಕ್ಕೂ ಪಶ್ಚಾತ್ತಾಪಪಡುವವನಲ್ಲ" (ರೋಮಾ. 11:26–29) ಎಂದು ಹೇಳುತ್ತಾನೆ.

ದೇವರು ತನ್ನ ಸ್ವಂತವಾದ 'ಸೂಕ್ತ ಸಮಯ'ದಲ್ಲಿ ತನ್ನ ಕೃಪೆಯ ಶ್ರೀಮಂತಿಕೆಗಳನ್ನು ತೋರಿಸುವಾಗ ಯೆಹೂದ್ಯರೂ. ಸೊದೋಮ್ಯರೂ, ಸಮಾರ್ಯರೂ ಮತ್ತು ಮಾನವ ಜಾತಿಯವರೆಲ್ಲರೂ ನಾಚಿಕೆ ಪಟ್ಟುಕೊಳ್ಳುವರು ಮತ್ತು ದಿಗ್ಭ್ರಮೆಗೊಳ್ಳುವರು ಎಂಬದಕ್ಕೆ ನಾವು ಆಶ್ಚರ್ಯಪಡಬೇಕಿಲ್ಲ. ದೇವರು ತನ್ನ ಕೃಪಾತಿಶಯವನ್ನು ತೋರ್ಪಡಿಸುವನು. ಹೌದು, ಈಗ ದೇವರ ಮಕ್ಕಳಾಗಿರುವ ಅನೇಕರು ದೇವರು ಲೋಕದ ಮೇಲೆ ಹೇಗೆ ಎಷ್ಟೋ ಪ್ರೀತಿಯನ್ನಿಟ್ಟನು ಮತ್ತು ದೇವರ ಆಲೋಚನೆಗಳೂ, ಯೋಜನೆಗಳೂ ತಮ್ಮ ಸ್ವಂತದವುಗಳಿಗಿಂತ ಎಷ್ಟೋ ಮೇಲ್ಮಟ್ಟದ್ದಾಗಿದೆ ಎಂದು ನೋಡುವಾಗ ದಿಗ್ಭ್ರಮೆಗೊಳ್ಳುವರು ಮತ್ತು ಆಶ್ಚರ್ಯಪಡುವರು.

ಕ್ರೈಸ್ತ ಜನರು ಸಾಮಾನ್ಯವಾಗಿ ದೇವರ ಆಶೀರ್ವಾದಗಳೆಲ್ಲವೂ ಆಯ್ಕೆಗೊಂಡ ಸಭೆಗೆ ಮಾತ್ರವೇ ಎಂದು ನಂಬುತ್ತಾರೆ, ಆದರೆ, ನಾವೀಗ ದೇವರ ಯೋಜನೆಗಳು ನಾವು ಊಹಿಸಿದಕ್ಕಿಂತಲೂ ವಿಶಾಲವಾಗಿದೆ ಎಂದು ನೋಡಲು ಪ್ರಾರಂಭಿಸುತ್ತೇವೆ. ಆತನು ತನ್ನ ಸಭೆಗೆ ಮಿಗಿಲಾದ ಮಹಾ ಹಾಗೂ ಅಮೂಲ್ಯವಾದ ವಾಗ್ದಾನಗಳನ್ನು ನೀಡಿರುವನಾದರೂ, ಆತನು ತಾನು ವಿಮೋಚಿಸುವಂತೆ ಬಹಳವಾಗಿ ಪ್ರೀತಿಸಿದ ಈ ಲೋಕಕ್ಕೆ ಔದಾರ್ಯಪೂರಿತವಾದ ಸುಂದರ ಮುನ್ನೇರ್ಪಾಡುಗಳನ್ನು ಮಾಡಿದ್ದಾನೆ. ಯೆಹೂದ್ಯರು ಸಹಾ ದೇವರ ಎಲ್ಲಾ ವಾಗ್ದಾನಗಳೂ ಮತ್ತು ಆಶೀರ್ವಾದಗಳೂ ತಮಗೆ ಮಾತ್ರವೇ ಎಂದು ಊಹಿಸುವ ಅದೇ ರೀತಿಯ ತಪ್ಪನ್ನು ಮಾಡಿದರು. ಆದರೆ "ತಕ್ಕ ಸಮಯ"ವು ಬಂದಾಗ, ಅನ್ಯಜನರಿಗೂ ಕೃಪೆ ದೊರೆತಾಗ, ಇಸ್ರಾಯೇಲ್ಯರಲ್ಲಿ ಶೇಷಭಾಗದವರ ಹೃದಯಗಳು ದೇವರ ಕೃಪೆಯ ಈ ವಿಶಾಲವಾದ ನಿದರ್ಶನಗಳನ್ನು ಕಂಡು ಉಲ್ಲಾಸಿಸಿದವು ಮತ್ತು ಆ ಕೃಪೆಯಲ್ಲಿ ಭಾಗಿಗಳಾದರು. ಆದರೆ ಉಳಿದವರು ಪೂರ್ವಾಗ್ರಹ ಮತ್ತು ಮಾನವ ಸಂಪ್ರದಾಯಗಳಿಂದ ಕುರುಡಾಗಿದ್ದರು. ಈಗ ಸಹಸ್ರಮಾನ ಯುಗದ ಉದಯೋನ್ಮುಖ ಬೆಳಕನ್ನು ಸಮಸ್ತ ಲೋಕದವರಿಗೆ ಅದರ ಕೃಪಾಪೂರ್ಣ ಅನುಕೂಲತೆಗಳನ್ನು ನೋಡುವ ಸಭೆಯವರು ಲಕ್ಷ್ಯವಿಡಲಿ, ಇಲ್ಲವಾದರೆ, ಅವರುಗಳು ಹೆಚ್ಚುತ್ತಿರುವ ಬೆಳಕಿನ ವಿರುದ್ಧ ದಿಕ್ಕಿನಲ್ಲಿ ಕಾಣಿಸಿಕೊಂಡು ಅದರ ಮಹಿಮೆ ಮತ್ತು ಆಶೀರ್ವಾದಗಳಿಗೆ ಕುರುಡರಾಗದಂತೆ ಎಚ್ಚರಿಕೆಯಾಗಿರಲಿ.

ಈಗ ಕೆಲವರನ್ನು ಆಯ್ದುಕೊಂಡು, ನಂತರದಲ್ಲಿ ಅವರುಗಳು ಅನೇಕರನ್ನು ಆಶೀರ್ವದಿಸುವ ದೇವರ ಮಹೋನ್ನತವಾದ ಯೋಜನೆಯು ಈ ಸತ್ಯವನ್ನು ವಿರೂಪಗೊಳಿಸುವ ಎರಡು ವಿರುದ್ಧವಾದ ದೃಷ್ಟಿಕೋನವುಳ್ಳ ಕ್ಯಾಲ್ವಿನಿಸಮ್ ಮತ್ತು ಅರ್ಮಿನಿಯಾನಿಸಂನಿಂದ ಎಷ್ಟೋ ವಿಭಿನ್ನವಾಗಿದೆ. ಮೊದಲನೆಯದು ಉಚಿತಾರ್ಥವಾದ ಕೃಪೆಯ ಸತ್ಯವೇದದ ಸಿದ್ಧಾಂತವನ್ನು ನಿರಾಕರಿಸುತ್ತದೆ, ಮತ್ತು ಮಹೋನ್ನತವಾದ ಎರಡನೆಯ ಆಯ್ಕೆಯ ಸಿದ್ಧಾಂತವನ್ನು ನಿರಾಕರಿಸುತ್ತದೆ ಮತ್ತು ಎರಡನೆಯದು ಆಯ್ಕೆಯ ಸಿದ್ಧಾಂತವನ್ನು ನಿರಾಕರಿಸುತ್ತದೆ ಹಾಗೂ ದೇವರ ಉಚಿತಾರ್ಥವಾದ ಕೃಪೆಯ ಪೂರ್ಣವಾದ ಆಶೀರ್ವಾದಗಳನ್ನು ಗ್ರಹಿಸಲು ಸೋತುಹೋಗುತ್ತದೆ.

ಕ್ಯಾಲ್ವಿಲಿಸಂ ಹೇಳುವುದೇನೆಂದರೆ – ದೇವರು ಸರ್ವಜ್ಞಾನಿಯಾಗಿದ್ದಾನೆ; ಆತನಿಗೆ ಅಂತ್ಯವು ಆದಿಯಿಂದಲೇ ತಿಳಿದಿದೆ; ಆತನ ಉದ್ದೇಶಗಳೆಲ್ಲವೂ ನೆರವೇರುವಾಗ, ಆತನು ಕೆಲವರನ್ನು ಅಂದರೆ ಸಭೆಯನ್ನು ಹೊರತುಪಡಿಸಿ ಎಂದೂ ಅನೇಕರನ್ನು ರಕ್ಷಿಸಲು ಉದ್ದೇಶಿಸಲಿಲ್ಲ. ಇವರನ್ನು ಆತನು ಆಯ್ಕೆ ಮಾಡಿಕೊಂಡು ನಿತ್ಯರಕ್ಷಣೆಗಾಗಿ ಪೂರ್ವನಿರ್ಧಾರ ಮಾಡಿದ್ದಾನೆ. ಉಳಿದವರೆಲ್ಲರೂ ಅದೇ ರೀತಿಯಾಗಿ ಪೂರ್ವನಿರ್ಧರಿತರಾಗಿ ನಿತ್ಯ ಯಾತನೆಗೆ ಹೋಗಲು ಆಯ್ಕೆಗೊಂಡಿದ್ದಾರೆ. ಯಾಕೆಂದರೆ "ಆದಿಯಿಂದಲೇ ಈ ಕಾರ್ಯಗಳು ಕರ್ತನಿಗೆ ತಿಳಿದದೆ" ಎಂಬದಾಗಿ ಹೇಳುತ್ತಾರೆ.

ಈ ದೃಷ್ಟಿಕೋನವು ಅದರದೇ ಆದ ಉತ್ತಮ ಲಕ್ಷಣಗಳನ್ನು ಹೊಂದಿದೆ. ಅದು ಕರ್ತನು ಸರ್ವಜ್ಞಾನಿಯೆಂಬುದನ್ನು ಗುರುತಿಸುತ್ತದೆ. ಇದು ನಮ್ಮ

ಮಹಾಶ್ರೇಷ್ಠ ದೇವರ ಬಗ್ಗೆ ನಮಗಿರುವ ಆದರ್ಶ ಮಾದರಿಯಾಗಿದೆ. ಎರಡು ಅಗತ್ಯ ಗುಣಗಳಾದ ಪ್ರೀತಿ ಮತ್ತು ನ್ಯಾಯದ ಕೊರತೆಯಿಲ್ಲದೇ ಹೋಗಿದ್ದರೆ, ಈ ಎರಡೂ ಗುಣಗಳು ನೂರ ನಲವತ್ತೆರಡು ಶತಕೋಟಿ ಜೀವಿಗಳು ಜನಿಸುವ ಮೊದಲೇ ಶಾಶ್ವತ ಚಿತ್ರಹಿಂಸೆಗೊಳಗಾಗಿ ಜಗತ್ತಿಗೆ ತರುವ ನಿದರ್ಶನ / ಉದಾಹರಣೆಯನ್ನು ತೋರುತ್ತಿರಲಿಲ್ಲ, ಮತ್ತು ದೇವರು ಪ್ರೀತಿಮಯನು ಎಂಬ ದೃಢವಾದ ಹೇಳಿಕೆಗೆ ಅಪಹಾಸ್ಯವಾಗುತ್ತಿತ್ತು. ದೇವರು ಪ್ರೀತಿಸ್ವರೂಪಿ ಆಗಿರುವುದರಿಂದ, ನ್ಯಾಯವು ಆತನ ಸಿಂಹಾಸನದ ಬುನಾದಿಯಾಗಿರುವುದರಿಂದ ಅಂಥವುಗಳು ಆತನ ಗುಣಲಕ್ಷಣವಾಗಲಾರವು.

ಆರ್ಮಿನಿಯಾನಿಸಂ ಹೇಳುವುದೇನೆಂದರೆ – ಹೌದು, ದೇವರು ಪ್ರೀತಿಸ್ವರೂಪಿಯಾಗಿದ್ದಾನೆ, ಮಾನವ ಜಾತಿಯನ್ನು ಈ ಲೋಕಕ್ಕೆ ತರುವಲ್ಲಿ ಅವರಿಗೆ ಯಾವ ಹಾನಿಯನ್ನೂ ಉಂಟುಮಾಡುವ ಉದ್ದೇಶ ಆತನಿಗಿರಲಿಲ್ಲ – ಒಳ್ಳೇದನ್ನು ಮಾತ್ರವೇ. ಆದರೆ ಸೈತಾನನು ಮೊದಲ ಜೋಡಿಯನ್ನು ಪ್ರಲೋಭನೆ ಗೊಳಿಸುವಲ್ಲಿ ಯಶಸ್ವಿಯಾದನು. ಈ ರೀತಿಯಲ್ಲಿ ಪಾಪವು ಲೋಕದೊಳಕ್ಕೆ ಪ್ರವೇಶಿಸಿತು. ಮತ್ತು ಪಾಪದ ಮರಣ ಅಂದಿನಿಂದ, ದೇವರು ಮಾನವರನ್ನು ಅವರ ವೈರಿಯಿಂದ ಬಿಡಿಸುವ ಎಲ್ಲಾ ಕಾರ್ಯಗಳನ್ನೂ ಮಾಡುತ್ತಾ ಇದ್ದಾನೆ, ಇದಕ್ಕಾಗಿ ತನ್ನ ಮಗನನ್ನೇ ಕಳುಹಿಸಿಕೊಟ್ಟನು. ಈಗ ಆರು ಸಾವಿರ ವರ್ಷಗಳ ನಂತರವೂ ಸುವಾರ್ತೆಯು ಕೇವಲ ಕೆಲವೇ ಪ್ರಮಾಣದ ಜನರಿಗಷ್ಟೇ ಮುಟ್ಟಿಯದೆ, ಆದಾಗ್ಯೂ ನಾವು ಮುಂದಿನ ಆರು ಸಹಸ್ರವರ್ಷಗಳಲ್ಲಿ ಸಭೆಯ ಸಾಮರ್ಥ್ಯ ಮತ್ತು ಉದಾರತೆಯು ಕಾರಣ, ದೇವರು ಇದುವರೆಗೆ ಸೈತಾನನಿಂದ ಪರಿಚಯವಾದ ಕೇಡನ್ನು ಪರಿಹರಿಸಿದ್ದಾನೆ, ಅನಂತರದಲ್ಲಿ ಜೀವಿಸುವವರೆಲ್ಲರೂ ಕನಿಷ್ಟ ಆತನ ಪ್ರೀತಿಯನ್ನು ಅರಿತುಕೊಳ್ಳುವರು ಮತ್ತು ಆತನನ್ನು ನಂಬಿ ರಕ್ಷಣೆಹೊಂದಿಕೊಳ್ಳುವ ಅವಕಾಶವನ್ನು ಹೊಂದಿಕೊಳ್ಳುವರು.

ಈ ದೃಷ್ಟಿಕೋನವು ದೇವರನ್ನು ಆತನ ಸೃಷ್ಟಿಗಳಿಗೆ ಪ್ರೀತಿಯ ಮತ್ತು ಕರುಣೆಯ ವಿನ್ಯಾಸಗಳಿಂದ ತುಂಬಿರುವಂತೆ ಪ್ರಸ್ತುತಿಪಡಿಸುತ್ತದೆ, ಇದರಿಂದ ಆತನು ತನ್ನ ಪರೋಪಕಾರಿ ವಿನ್ಯಾಸಗಳನ್ನು ನೆರವೇರಿಸಲು ಬೇಕಾದ ಸಾಕಷ್ಟು ಜ್ಞಾನ ಮತ್ತು ಸಾಮರ್ಥ್ಯವನ್ನು ಹೊಂದಿಲ್ಲವೇನೋ, ಆತನು ವಿವೇಕದ ಮತ್ತು ಶಕ್ತಿಯ ಕೊರತೆಯುಳ್ಳವನಾಗಿದ್ದಾನೋ ಎಂಬ ಅಭಿಪ್ರಾಯವುಂಟಾಗುತ್ತದೆ, ಈ ದೃಷ್ಟಿಕೋನದಿಂದ ದೇವರು ತಾನು ನೂತನವಾಗಿ ಸೃಷ್ಟಿಸಿದ ಮಕ್ಕಳಿಗೆ ಒಳ್ಳೇದನ್ನು ಮಾಡಲು ಯೋಜನೆ ಮಾಡುತ್ತಿರುವಾಗ ಸೈತಾನನು ನುಸುಳಿ ಬಂದು ತನ್ನ ಒಂದೇ ಒಂದು ಚಾತುರ್ಯದ ಹೊಡೆತದಿಂದ ತನ್ನೆಲ್ಲಾ ಶಕ್ತಿಯನ್ನು ವ್ಯಯಿಸಿ ದೇವರ ಯೋಜನೆಗಳನ್ನು ಎಷ್ಟರ ಮಟ್ಟಿಗೆ ಬುಡಮೇಲು ಮಾಡಿದನೆಂದರೆ, ದೇವರಿಗೆ ನೀತಿವಂತಿಕೆಯನ್ನು ಪುನರ್ಸ್ಥಾಪಿಸಲು ಹನ್ನೆರಡು ಸಾವಿರ ವರ್ಷಗಳು ಬೇಕಾಗುತ್ತದೆ, ಎಷ್ಟರಮಟ್ಟಿಗೆಂದರೆ, ಇನ್ನೂ ಜೀವಿಸುವ ಜನಾಂಗದ ಉಳಿಕೆಯವರಿಗೆ ಕೆಟ್ಟದ್ದನ್ನು ಒಳ್ಳೆಯದರಂತೆ ಸುಲಭವಾಗಿ ಆಯ್ದುಕೊಳ್ಳುವ ಅವಕಾಶವಿರುತ್ತದೆ. ಆದರೆ ಹಿಂದಿನ ಆರು ಸಾವಿರ ವರ್ಷಗಳ ಒಂದು ನೂರಾನಾಲ್ವತ್ತ ಎರಡು ಬಿಲಿಯನ್ ಜನರು, ಮತ್ತು ಮುಂದೆ ಬರುವ ಹಲವರು ಈ ದೃಷ್ಟಿಕೋನದ ಪ್ರಕಾರವಾಗಿ, ಅವರ ಬಗ್ಗೆ ದೇವರಿಗೆ ಪ್ರೀತಿಯ ಹೊರತಾಗಿಯೂ, ಎಲ್ಲರೂ ನಿತ್ಯತೆಯನ್ನೂ ಕಳಕೊಂಡಿರುತ್ತಾರೆ, ಯಾಕೆಂದರೆ ಸೈತಾನನು ಈ ಯೋಜನೆಯ ಮಧ್ಯಪ್ರವೇಶಮಾಡಿದ್ದಾನೆ. ದೇವರು ಒಬ್ಬರನ್ನು ಮಹಿಮೆಗೆ ಉಳಿಸಿಕೊಳ್ಳುವಾಗ ಸೈತಾನನು ಸಾವಿರಾರು ಮಂದಿಯನ್ನು ನಿತ್ಯಯಾತನೆಗೆ ತಳ್ಳುತ್ತಾನೆ.

ಈ ದೃಷ್ಟಿಕೋನವು ಸೈತಾನನ ಬುದ್ಧಿವಂತಿಕೆ ಮತ್ತು ಶಕ್ತಿಯ ಬಗ್ಗೆ ಮಾನವನ ಕಲ್ಪನೆಗಳನ್ನು ಅತಿಯಾಗಿ ಪ್ರಶಂಸಿಸುತ್ತದೆ ಮತ್ತು ದೇವರ ಗುಣಲಕ್ಷಣಗಳ ಬಗ್ಗೆ ಇರುವ ಅಭಿಪ್ರಾಯವನ್ನು ಕುಗ್ಗಿಸಬಹುದು. ಇದಕ್ಕೆ ವ್ಯತಿರಿಕ್ತವಾಗಿ ದೇವರಾದ ಯೆಹೋವನ ಬಗ್ಗೆ ಕೀರ್ತನೆಗಾರನು “ಆತನು ನುಡಿದ ಮಾತ್ರಕ್ಕೆ ಸಮಸ್ತವೂ ಉಂಟಾಯಿತು. ಆತನು ಆಜ್ಞಾಪಿಸುತ್ತಲೇ ಸರ್ವವೂ ಸ್ಥಾಪನೆಯಾಯಿತು” (ಕೀರ್ತನೆ 33:09) ಎಂದಿದ್ದಾನೆ. ದೇವರು ವಿರೋಧಿಯಿಂದ ಆಶ್ಚರ್ಯಪಡಲಿಲ್ಲ ಅಥವಾ ಹಿಮ್ಮೆಟ್ಟಲಿಲ್ಲ, ಅಥವಾ ಸೈತಾನನು ಯಾವುದೇ ಮಟ್ಟದಲ್ಲಿ ದೇವರ ಯೋಜನೆಗಳನ್ನು ನಿಷ್ಫಲಗೊಳಿಸಲಿಲ್ಲ. ಆದರೆ, ಇಲ್ಲ; ದೇವರು ಇಂದೂ ಮತ್ತು ಎಂದೆಂದೂ ಪರಿಸ್ಥಿತಿಯ ಸರ್ವಸಂಪೂರ್ಣನಾದ ಪ್ರಭುವಾಗಿದ್ದಾನೆ ಮತ್ತು ಅಂತ್ಯದಲ್ಲಿ ಎಲ್ಲವೂ ಆತನ ಉದ್ದೇಶವನ್ನು ನೆರವೇರಿಸುವುದಕ್ಕಾಗಿಯೇ ಒಟ್ಟಾಗಿ ಕೆಲಸ ಮಾಡಿವೆ ಎಂಬುದು ಕಂಡುಬರುತ್ತದೆ.

ಕ್ಯಾಲ್ವಿಲಿಸಂ ಮತ್ತು ಅರ್ಮಿನಿಯಾನಿಸಂ ಬೋಧಿಸಲ್ಪಟ್ಟ ಆಯ್ಕೆ ಮತ್ತು ಉಚಿತ ಕೃಪೆಯ ತತ್ವವು ಎಂದಿಗೂ ಪರಸ್ಪರ ವಿವೇಚನೆಯೊಂದಿಗೆ ಅಥವಾ ಸತ್ಯವೇದದೊಂದಿಗೆ ಸಾಮರಸ್ಯಗೊಳ್ಳದಿರುವಾಗಲೂ, ಈ ಎರಡೂ ಸಿದ್ಧಾಂತಗಳು, ಯುಗಗಳ ಯೋಜನೆಯ

ದೃಷ್ಟಿಯಲ್ಲಿ ನೋಡುವಾಗ ಸರ್ವಸಂಪೂರ್ಣವಾಗಿ ಸಾಮರಸ್ಯವುಳ್ಳದ್ದೂ, ಸುಂದರವೂ ಆಗಿವೆ.

ನಾವು ನೋಡುವಾಗ, ಪಾಪದಿಂದ ಮತ್ತು ಮರಣದಿಂದ ರಕ್ಷಣೆಹೊಂದಿಕೊಳ್ಳಲು ದೇವರ ಯೋಜನೆಯ ಬಹಳಷ್ಟು ಭವ್ಯವಾದ ಅದ್ಭುತ ವೈಶಿಷ್ಟ್ಯಗಳ ಭವಿಷ್ಯದಲ್ಲಿ ಇರುತ್ತವೆ. ನಮ್ಮ ಕರ್ತನ ದ್ವಿತೀಯಾಗಮನವು ಬಹಳ ಹಿಂದೆಯೇ ವಾಗ್ದಾನಪಡಿಸಿದ ಮತ್ತು ಬಹಳವಾಗಿ ನಿರೀಕ್ಷಿಸುತ್ತಿದ್ದ ನೆರವೇರಿಕೆಯಲ್ಲಿ ವಿನ್ಯಾಸಗೊಂಡ ಮೊದಲನೆಯ ಹೆಜ್ಜೆಯಾಗಿರುವಾಗ, ಕಡಿಮೆ ತಿಳುವಳಿಕೆಯುಳ್ಳ ಯೆಹೂದ್ಯನು ಎದುರುನೋಡುತ್ತಿರುವ ಮತ್ತು ಬಯಸುತ್ತಿರುವ ಮೊದಲನೆಯ ಆಗಮನಕ್ಕಿಂತ ಹೆಚ್ಚಾಗಿ ನಾವು ಇನ್ನೂ ಹೆಚ್ಚು ನಿಷ್ಠೆಯಿಂದ ಆತನ ದ್ವಿತೀಯಾಗಮನದ ಸಮಯವನ್ನು ಹಂಬಲಿಸಬಹುದಲ್ಲವೆ? ಕೇಡಿನ, ಅನ್ಯಾಯ ಮತ್ತು ಮರಣದ ಕಾಲವನ್ನು ಆತನು ಆಗ ಕಾರ್ಯಗತ ಗೊಳಿಸುವ ಅಧಿಕಾರದ ಅಧಿಪತ್ಯದಿಂದ ಕೊನೆಗಾಣಿಸಿ, ನೀತಿವಂತಿಕೆ, ಸತ್ಯ ಮತ್ತು ಶಾಂತಿಯು ಸಾರ್ವತ್ರಿಕ ವಾಗಿರುವ, ಆತನ ದಿನವನ್ನು ನೋಡಲು ಯಾರು ತಾನೇ ಸಂತೋಷಿಸದೇ ಇರುವರು? ಈಗ ಕ್ರಿಸ್ತನೊಂದಿಗೆ ಶ್ರಮೆಪಡುವವರಾದರೆ 'ನಾವು ಸಹಿಸಿಕೊಳ್ಳುವವರಾದರೆ ಆತನೊಂದಿಗೆ ಆಳುವೆವು' ಎಂಬ ವಿಶೇಷ ವಾಗ್ದಾನದಿಂದ ಯಾರು ತಾನೇ ಸ್ಫೂರ್ತಿಗೊಳ್ಳದೇ ಇರುವರು, ತಮ್ಮ ತಲೆಯನ್ನು ಎತ್ತದೇ, ಪ್ರಭುವಿನ ಸಮೀಪಿಸುವಿಕೆಗೆ ಯಾವುದೇ ನಿದರ್ಶನದಿಂದ ಉಲ್ಲಾಸಗೊಳ್ಳದೇ ಇರುವರೇ? ಆ ಮೂಲಕ ತಮ್ಮ ಬಿಡುಗಡೆ ಮತ್ತು ಮಹಿಮೆಗೊಳ್ಳುವಿಕೆ ಹತ್ತಿರವಾಗಿದೆ ಎಂದು ತಿಳಿಯದೇ ಇರುವವರು ಯಾರು? ನಿಶ್ಚಯವಾಗಿಯೂ, ಆಶೀರ್ವಾದದ ಆತನ ನಿಯೋಗದೊಂದಿಗಿನ ಅನುಕಂಪದಿಂದ ಮತ್ತು ಪ್ರೀತಿಯ ಸ್ಫೂರ್ತಿಯಿಂದ, ಆತನ ಬರೋಣದ ಪ್ರತಿಯೊಂದು ಆಧಾರವನ್ನೂ "ಎಲ್ಲಾ ಜನರಿಗೆ ಮಹಾ ಸಂತೋಷವನ್ನುಂಟು ಮಾಡುವ ಪ್ರವೇಶದ್ವಾರ" ಎಂಬುದಾಗಿ ಸ್ವಾಗತಿಸುವರು.

* * * * * * *

# ಅಧ್ಯಯನ – 7 Study VII

# ದುಷ್ಕೃತ್ಯದ ಅನುಮತಿ ಮತ್ತು ದೇವರ ಯೋಜನೆಗೆ ಅದರ ಸಂಬಂಧ

## THE PERMISSION OF EVIL AND IT'S RELATION TO GOD'S PLAN

**ದುಷ್ಟತನಕ್ಕೆ ಏಕೆ ಅನುಮತಿ ದೊರೆತಿದೆ? – ಒಂದು ಮೂಲತತ್ವಗಳಾಗಿ ಸರಿ ಮತ್ತು ತಪ್ಪು – ನೈತಿಕ ಪ್ರಜ್ಞೆ– ದೇವರು ಕೆಟ್ಟದ್ದನ್ನು ಅನುಮತಿಸಿದ್ದಾನೆ, ಮತ್ತು ಒಳ್ಳೇದಕ್ಕಾಗಿ ಅದನ್ನು ರದ್ದು ಮಾಡುತ್ತಾನೆ – ದೇವರು ಪಾಪದ ಕರ್ತೃವಲ್ಲ – ಆದಾಮನ ಪರೀಕ್ಷೆಯು ಒಂದು ಅವಾಸ್ತವ ನಾಟಕವಲ್ಲ – ಆತನ ಪ್ರಲೋಭನೆಗಳು ಕಠೋರವಾದವುಗಳು – ಆತನು ಇಚ್ಛಾಪೂರ್ವಕವಾಗಿ ಪಾಪಮಾಡಿದನು – ಪಾಪದ ದಂಡನೆಯು ಅನ್ಯಾಯವಾದುದಲ್ಲ ಇಲ್ಲವೆ ತೀವ್ರವಾದುದೂ ಅಲ್ಲ – ವಿವೇಕ, ಪ್ರೀತಿ ಮತ್ತು ನ್ಯಾಯ ಇವುಗಳು ಎಲ್ಲರನ್ನೂ ಆದಾಮನಲ್ಲಿ ದಂಡಿಸಿದ್ದರಲ್ಲಿ ಪ್ರದರ್ಶಿಸಲ್ಪಟ್ಟಿದೆ – ದೇವರ ಕಾನೂನು ಸಾರ್ವತ್ರಿಕವಾದುದು.**

ಕೇಡು ಎಂಬುದು ಅಸಂತೋಷವನ್ನು ಉಂಟುಮಾಡುವುದಾಗಿದೆ; ಯಾವುದಾದರೂ ರೀತಿಯಲ್ಲಿ ನೇರವಾಗಿಯಾಗಲೀ ಅಥವಾ ಪರೋಕ್ಷವಾಗಿಯಾಗಲೀ ಯಾವುದೇ ರೀತಿಯ ನೋವನ್ನುಂಟುಮಾಡುವ ಅದೊಂದು ಜಾಲವಾಗಿದೆ. ಆದುದರಿಂದ, ಈ ಪ್ರಸ್ತಾಪವು ಮಾನವರ ಅಸ್ವಸ್ಥತೆಯ ಬಗ್ಗೆ, ದುಃಖ, ಬೇನೆಗಳ ಬಗ್ಗೆ, ಬಲಹೀನತೆಗಳು ಮತ್ತು ಮರಣದ ಬಗ್ಗೆ ವಿಚಾರಿಸುವುದು ಮಾತ್ರವಲ್ಲ, ಅದು ಇವೆಲ್ಲವುಗಳ ಹಿಂದೆ ಇರುವ ಅದರ ಮೂಲ ಕಾರಣವಾದ ಪಾಪವನ್ನು, ಮತ್ತು ಅದರ ಪರಿಹಾರವನ್ನು ಹುಡುಕುತ್ತದೆ. ಪಾಪವೇ ಕೇಡಿಗೆ ಕಾರಣವಾಗಿರುವುದರಿಂದ, ಅದನ್ನು ತೆಗೆದುಹಾಕುವುದೇ ವ್ಯಾಧಿಯನ್ನು ಶಾಶ್ವತವಾಗಿ ಗುಣಪಡಿಸುವ ಏಕೈಕ ವಿಧಾನವಾಗಿದೆ.

ಬಹುಶಃ ಯಾವುದೇ ತೊಂದರೆ ಇಲ್ಲದೆ, ಕೇಳುವ ಪ್ರಶ್ನೆಗಳಿಗಿಂತ ಹೆಚ್ಚಾಗಿ ಮನಸ್ಸಿನಲ್ಲಿ ಪದೇ ಪದೇ ಕಾಣಿಸಿಕೊಳ್ಳುತ್ತದೆ. ಅದೇನೆಂದರೆ, ದೇವರು ಯಾಕೆ ಕೇಡಿನ ಪ್ರಸ್ತುತ ಆಳ್ವಿಕೆಯನ್ನು ಅನುಮತಿಸಿದನು?. ದೇವರು ನಮ್ಮ ಪ್ರಥಮ ತಂದೆ ತಾಯಿಗಳನ್ನು ಸರ್ವ ಸಂಪೂರ್ಣವಾಗಿಯೂ, ಪ್ರಾಮಾಣಿಕರನ್ನಾಗಿಯೂ ಸೃಷ್ಟಿಸಿದ ಮೇಲೆ ಅವರನ್ನು ಪ್ರಲೋಭಿಸುವಂತೆ ಸೈತಾನನಿಗೆ ಯಾಕೆ ಅನುಮತಿಸಿದನು? ಅಥವಾ ದೇವರು ಆ ನಿಷೇಧಿತ ಮರಕ್ಕೆ ಒಳ್ಳೇಯವುಗಳ ಮಧ್ಯೆ ಇರುವಂತೆ ಯಾಕೆ ಸ್ಥಳಕೊಟ್ಟನು? ಈ ಪ್ರಶ್ನೆಯನ್ನು ಬದಿಸರಿಸುವ ಎಲ್ಲಾ ಪ್ರಯತ್ನಗಳ ಹೊರತಾಗಿಯೂ – ದೇವರು ಮಾನವನ ಅವನತಿಯ ಎಲ್ಲಾ ಸಾಧ್ಯತೆಗಳನ್ನು ಯಾಕೆ ತಡೆಹಿಡಿಯಲಿಲ್ಲ? ಎಂಬ ಆ ಪ್ರಶ್ನೆಯು ತನ್ನಷ್ಟಕ್ಕೇ ಒಳನುಗ್ಗುತ್ತದೆ.

ದೇವರ ಯೋಜನೆಯನ್ನು ಗ್ರಹಿಸಲು ವಿಫಲವಾಗುವುದರಿಂದ ನಿಸ್ಸಂದೇಹವಾಗಿ ಇಂಥಾಃ ತೊಡಕುಗಳು ಉಂಟಾಗುತ್ತವೆ. ದೇವರು ಪಾಪದ ಪ್ರವೇಶವನ್ನು ತಡೆಹಿಡಿಯಬಹುದಿತ್ತು. ಆದರೆ ಹಾಗೆ ಮಾಡಲಿಲ್ಲ ಎಂಬ ಸತ್ಯವು ಅದರ ಪ್ರಸ್ತುತ ಅನುಮತಿಯು ಅಂತಿಮವಾಗಿ, ಕೆಲವು ಹೆಚ್ಚಿನ ಒಳ್ಳೇದನ್ನು ಮಾಡುವಂತೆ ವಿನ್ಯಾಸಗೊಂಡಿದೆ ಎಂಬುದಕ್ಕೆ ಸಾಕಷ್ಟು ಪುರಾವೆಯಾಗಿದೆ. ದೇವರ ಯೋಜನೆಗಳು, ಅದರ ಸರ್ವಪೂರ್ಣತೆಯಲ್ಲಿ ಕಂಡುಬರುತ್ತವೆ ಮತ್ತು ಅದನ್ನು ಹಿಂಬಾಲಿಸಿದ ಕ್ರಮದ ಬುದ್ಧಿವಂತಿಕೆಯನ್ನು ಸಾಬೀತು ಪಡಿಸುತ್ತದೆ. ಎಲ್ಲವೂ ಸಾಧ್ಯವಾಗುವ ದೇವರು ಸೈತಾನನ ಉದ್ದೇಶದ ಪೂರ್ಣ ನೆರವೇರಿಕೆಯನ್ನು ತಡೆಹಿಡಿಯುವಂತೆ ಕಾಲಕ್ಕೆ ಸರಿಯಾಗಿ ಪ್ರವೇಶಿಸ ಬಹುದಿತ್ತಲ್ಲವೇ? ಎಂದು ಕೆಲವರು ಪ್ರಶ್ನಿಸುತ್ತಾರೆ. ನಿಸ್ಸಂದೇಹವಾಗಿ ಆತನು ಹಾಗೆ ಮಾಡಬಹುದಿತ್ತು; ಆದರೆ ಅಂಥಾಃ ಮಧ್ಯಪ್ರವೇಶವು ಆತನ ಸ್ವಂತ ಉದ್ದೇಶಗಳ ನೆರವೇರಿಕೆಗೆ ತಡೆಯುಂಟು ಮಾಡುತ್ತಿತ್ತು. ಆತನ ಉದ್ದೇಶವು ಸರ್ವಸಂಪೂರ್ಣತೆಯನ್ನು, ಆತನ ನಿಯಮಗಳ ಗಂಭೀರತೆಯನ್ನು ಮತ್ತು ನೈತಿಕ ಅಧಿಕಾರವನ್ನು ಪ್ರಕಟಿಸುವುದು ಮತ್ತು ಈ ರೀತಿಯಾಗಿ ಅದರ ಉಲ್ಲಂಘನೆಯಿಂದುಂಟಾಗುವ ದುಷ್ಪರಿಣಾಮಗಳನ್ನು ಮಾನವರಿಗೂ, ದೇವದೂತರು ಗಳಿಗೂ ಸಾಬೀತುಪಡಿಸವುದಾಗಿತ್ತು. ಇದಲ್ಲದೆ, ಅವರುಗಳ ಸ್ವಭಾವದಲ್ಲಿ, ದೇವರು ವಾಕ್ಯವು ಹೇಳುವಂತೆ ಕೆಲವು ಸಂಗತಿಗಳು ದೇವರಿಂದಲೂ ಅಸಾಧ್ಯವಾಗಿವೆ. ಅವುಗಳೆಂದರೆ – "ದೇವರು ಸುಳ್ಳಾಡಲಾರನು" (ಇಬ್ರಿಯ 6:19), "ಆತನು ನಂಬಿಗಸ್ಥನಾಗಿಯೇ ಇರುವನು, ತನ್ನ ಸ್ವಭಾವಕ್ಕೆ ವಿರುದ್ಧವಾಗಿ ಏನೂ ಮಾಡಲಾರನು" (2 ತಿಮೋ. 2:13). ಆತನು ತಪ್ಪು ಮಾಡಲಾರನು, ಆದುದುದರಿಂದ ಆತನು ತನ್ನ ಸೃಷ್ಟಿಗಳನ್ನು ಜೀವಕ್ಕೆ ಪರಿಚಯಿಸುವಂತೆ ತನ್ನ ಅತ್ಯಂತ ವಿವೇಕವುಳ್ಳ ಹಾಗೂ ಅತ್ಯಂತ ಶ್ರೇಷ್ಠವಾದ

ಯೋಜನೆಯನ್ನಲ್ಲದೆ ಮತ್ತೇನನ್ನೂ ಆಯ್ದುಕೊಳ್ಳಲಿಲ್ಲ. ನಮ್ಮ ಮಂದದೃಷ್ಟಿಗೆ ಕೆಲವೊಮ್ಮೆ ಅಂತ್ಯವಿಲ್ಲದ ಜ್ಞಾನದಲ್ಲಿ ಅಡಗಿಸಲ್ಪಟ್ಟ ಬುಗ್ಗೆಗಳನ್ನು ಅರಿತುಕೊಳ್ಳಲು ಸಾಧ್ಯವಿಲ್ಲವಾಗುತ್ತದೆ.

ಎಲ್ಲಾ ಸಂಗತಿಗಳೂ ದೇವರ ಸಂತೋಷಕ್ಕಾಗಿಯೇ ನಿರ್ಮಿತವಾದವು ಎಂದು ಸತ್ಯವೇದ ಹೇಳುತ್ತದೆ (ಪ್ರಕಟನೆ 4:11) – ಅದು ಸಂಶಯಾತೀತವಾಗಿ ಆತನ ಆಶೀರ್ವಾದಗಳನ್ನು ಹಂಚುವುದಕ್ಕಾಗಿ ಆತನ ಮಹಿಮೆಯ ಗುಣಲಕ್ಷಣಗಳನ್ನು ಚಲಾಯಿಸುವುದಕ್ಕಾಗಿ ಉಂಟಾಗಿದೆ. ಆದಾಗ್ಯೂ ತನ್ನ ಪರೋಪಕಾರಿ ವಿನ್ಯಾಸಗಳನ್ನು ಕಾರ್ಯಗತಗೊಳಿಸುವಾಗ, ಆತನು ಸ್ವಲ್ಪ ಸಮಯದವರೆಗೆ ಕೆಡುಕನ್ನು ಮತ್ತು ಕೆಡುಕರಿಗೆ ಚಟುವಟಿಕೆಯಿಂದ ಕಾರ್ಯವೆಸಗಲು ಅನುಮತಿಸುವನಾದರೂ, ಅದು ಕೆಟ್ಟದ್ದಕ್ಕಾಗಿ ಅಲ್ಲ ಅಥವಾ ಆತನು ಪಾಪದೊಂದಿಗೆ ಒಪ್ಪಂದ ಹೊಂದಿದ್ದಾನೆಂದಲ್ಲ. ಯಾಕೆಂದರೆ "ಆತನು ದುಷ್ಟತ್ವದಲ್ಲಿ ಸಂತೋಷಿಸುವ ದೇವರಲ್ಲ" (ಕೀರ್ತನೆ 5:4) ಎಂದು ತಿಳಿಸಿದ್ದಾನೆ. ಎಲ್ಲಾ ರೀತಿಯಲ್ಲಿಯೂ ಆತನು ಪಾಪವನ್ನು ವಿರೋಧಿಸುವವನಾದರೂ, ದೇವರು ಕೆಲವು ಸಮಯಕ್ಕೆ ಅದನ್ನು ಅನುಮತಿಸುತ್ತಾನೆ (ಅಂದರೆ ಅಡ್ಡಿಪಡಿಸುವುದಿಲ್ಲ). ಯಾಕೆಂದರೆ, ಅದು ಆತನ ಸೃಷ್ಟಿಗಳಿಗೆ ಶಾಶ್ವತವಾದ ಮತ್ತು ಅಮೂಲ್ಯವಾದ ಪಾಠವಾಗುತ್ತದೆ ಎಂದು ಆತನ ವಿವೇಕವು ನೋಡುತ್ತದೆ.

ಪ್ರತಿಯೊಂದು ಸರಿಯಾದ ತತ್ವಕ್ಕೂ ಅನುಗುಣವಾದ ಒಂದು ತಪ್ಪಾದ ತತ್ವವಿದೆ ಎಂಬದು ಶತಃಸಿದ್ಧ. ಉದಾಹರಣೆಗೆ ಸತ್ಯ ಮತ್ತು ಅಸತ್ಯ, ಪ್ರೀತಿ ಮತ್ತು ದ್ವೇಷ, ನ್ಯಾಯ ಮತ್ತು ಅನ್ಯಾಯ. ನಾವು ಈ ವಿರುದ್ಧ ವಿಚಾರಸರಣಿಯನ್ನು ಅದು ಕಾರ್ಯಾಚರಣೆಯಲ್ಲಿರುವ ಅದರ ಪರಿಣಾಮಕ್ಕನುಸಾರವಾಗಿ ಸರಿ ಮತ್ತು ತಪ್ಪು ಎಂದು ಬೇರ್ಪಡಿಸುತ್ತೇವೆ. ಸಕ್ರಿಯವಾಗಿದ್ದಾಗ ಇದರ ಮೂಲ, ಫಲಿತಾಂಶವು ಕಡೆಗೆ ಕ್ರಮ, ಸಾಮರಸ್ಯ ಮತು ಸಂತೋಷ ಕೊಡುವಲ್ಲಿ ಪರಿಣಾಮಕಾರಿ ಮತ್ತು ಫಲದಾಯಕವಾಗಿರುತ್ತದೆ. ನಾವು ಅದನ್ನು ಸರಿಯಾದ ತತ್ವ ಎಂದು ಕರೆಯುತ್ತೇವೆ; ಇದಕ್ಕೆ ವಿರೋಧವಾಗಿ ಹೊಂದಿಕೆ ಇಲ್ಲದ್ದನ್ನು ಉತ್ಪಾದಿಸುವುದನ್ನು, ಅಸಂತೋಷ ಮತ್ತು ನಾಶನ ಉಂಟುಮಾಡುವುದನ್ನು ನಾವು ತಪ್ಪಾದ ವಿಚಾರಸರಣಿ ಅಥವ ತಪ್ಪಾದ ತತ್ವ ಎಂದು ಕರೆಯುತ್ತೇವೆ. ಕಾರ್ಯಾಚರಣೆಯಲ್ಲಿ ಈ ತತ್ವಗಳ ಫಲಿತಾಂಶವು ಒಳ್ಳೇದು ಮತ್ತು ಕೆಟ್ಟದ್ದು ಎಂದು ಕರೆಯುತ್ತೇವೆ. ಮತ್ತು ತಪ್ಪಾದ ತತ್ವಗಳಿಂದ ಸರಿಯಾದದನ್ನು ಗ್ರಹಿಸುವ ಒಬ್ಬ ಬುದ್ಧಿವಂತ ವ್ಯಕ್ತಿಯು ಒಂದು ಅಥವಾ ಮತ್ತೊಂದರಿಂದ ಸ್ವಯಂಪ್ರೇರಿತವಾಗಿ ಆಳಲ್ಪಡುವುದಾದರೆ ನಾವು ಆತನನ್ನು ಪುಣ್ಯವಂತನು ಅಥವಾ ಪಾಪಭರಿತನು ಎಂದು ಕರೆಯುತ್ತೇವೆ.

ಸರಿಯಾದ ಮತ್ತು ತಪ್ಪಾದ ತತ್ವಗಳನ್ನು ವಿವೇಚಿಸುವ ಈ ಧೀಶಕ್ತಿಯನ್ನು ನೈತಿಕ ಪ್ರಜ್ಞೆ ಅಥವಾ ಮನಸ್ಸಾಕ್ಷಿ ಎಂಬುದಾಗಿ ಕರೆಯಲಾಗುತ್ತದೆ. ದೇವರು ಮಾನವರಿಗೆ ದಯಪಾಲಿಸಿರುವ ಈ ನೈತಿಕ ವ್ಯವಹಾರ ಜ್ಞಾನದಿಂದಾಗಿ ನಾವು ದೇವರ ಬಗ್ಗೆ ಆತನು ಒಳ್ಳೆಯವನು ಎಂದು ತೀರ್ಮಾನಿಸುತ್ತೇವೆ. ಈ ನೈತಿಕ ವ್ಯವಹಾರ ಜ್ಞಾನವನ್ನು ದೇವರು ಸದಾ ಆತನ ನೀತಿವಂತಿಕೆಯನ್ನು ಮತ್ತು ನ್ಯಾಯವನ್ನು ಸಾಬೀತುಪಡಿಸುವಂತೆ ಅರಿಕೆಮಾಡುತ್ತಾನೆ. ಅದೇ ನೈತಿಕ ವ್ಯವಹಾರ ಜ್ಞಾನದಿಂದ ಆದಾಮನು ಪಾಪ ಅಥವಾ ಅನೀತಿವಂತಿಕೆಯು, ಕೆಟ್ಟವಗಳು ಎಂಬದನ್ನು ಅದರ ಎಲ್ಲಾ ಪರಿಣಾಮಗಳನ್ನು ತಿಳಿಯುವ ಮೊದಲೇ ಗ್ರಹಿಸಿದನು. ದೇವರ ಸೃಷ್ಟಿಯ ಕೆಳವರ್ಗದ ಜೀವಿಗಳು ಈ ನೈತಿಕ ವ್ಯವಹಾರ ಜ್ಞಾನದ ಯುಕ್ತಸಂಪನ್ನತೆಯನ್ನು ಮಾಡಿಕೊಂಡಿಲ್ಲ. ಒಂದು ನಾಯಿಗೆ ಸ್ವಲ್ಪ ಮಟ್ಟಿನ ಬುದ್ಧಿವಂತಿಕೆ ಇದೆ, ಆದರೆ ಈ ಮಟ್ಟಕ್ಕೆ ಅಲ್ಲ. ಅದು ತಾನು ಮಾಡುವ ಕೆಲವು ಚಟುವಟಿಕೆಗಳಿಂದ ತನ್ನ ಯಜಮಾನನ ಮೆಚ್ಚುಗೆಯನ್ನು ಪಡೆಯುತ್ತದೆ, ಮತ್ತು ಕೆಲವೊಂದು ಆತನಿಗೆ ಒಪ್ಪಿಗೆಯಾಗುವುದಿಲ್ಲ ಎಂದು ಅರಿತುಕೊಳ್ಳುತ್ತದೆ. ಅದು ಜೀವವನ್ನು ಕದಿಯಬಹುದು ಅಥವಾ ತೆಗೆಯಬಹುದು, ಆದರೆ ಅದು ಪಾಪವೆಂದೆಣಿಸುವುದಿಲ್ಲ, ಅಥವಾ ಅದು ಆಸ್ತಿಯನ್ನೂ, ಜೀವವನ್ನೂ ಸಂರಕ್ಷಿಸಬಹುದು. ಆದರೆ ಅದು ನೈತಿಕತೆ ಎನಿಸಿಕೊಳ್ಳಲಾರದು. ಯಾಕೆಂದರೆ, ಅದಕ್ಕೆ ತನ್ನ ನೈತಿಕ ಗುಣದ ಬಗ್ಗೆ ತಿಳುವಳಿಕೆಯಿಲ್ಲ.

ದೇವರು ಮಾನವರ ತಪ್ಪು ಮತ್ತು ಸರಿಯನ್ನು ಗ್ರಹಿಸುವ ಶಕ್ತಿಯು ಇಲ್ಲದಂತೆ ಮಾಡಬಹುದು ಅಥವಾ ಒಳ್ಳೇದನ್ನು ಮಾತ್ರವೇ ಗ್ರಹಿಸುವಂತೆ ಹಾಗೂ ಮಾಡುವಂತೆ ಮಾಡಬಹುದಿತ್ತು; ಆದರೆ ಹಾಗೆ ಮಾಡಿದರೆ ಅದು ಆತನನ್ನು ಕೇವಲ ಜೀವಂತ ಯಂತ್ರವನ್ನಾಗಿ ಮಾಡಿದಂತಾಗುತ್ತದೆಯೇ ಹೊರತು ನಿಜವಾಗಿಯೂ ಆತನನ್ನು ದೇವರ ಮಾನಸಿಕ ಸ್ವರೂಪದಲ್ಲಿ ಉಂಟುಮಾಡಿದಂತೆ ಆಗುವುದಿಲ್ಲ ಅಥವಾ ಆತನನ್ನು ಸರ್ವಸಂಪೂರ್ಣನಾಗಿ ಮತ್ತು ಮುಕ್ತ ಕಾರ್ಯಕರ್ತನನ್ನಾಗಿ ಮಾಡಿ ಆತನನ್ನು ಸೈತಾನನ ಪ್ರಲೋಭನೆಯಿಂದ ಕಾಪಾಡಬಹುದಿತ್ತು. ಹಾಗಾಗಿದ್ದಲ್ಲಿ, ಮಾನವನ ಅನುಭವವು ಒಳ್ಳೇದಕ್ಕೆ ಮಾತ್ರವೇ

ಸೀಮಿತವಾಗುತ್ತಿತ್ತು. ಹಾಗಾಗಿದ್ದಲ್ಲಿ ಆತನು ಹೊರಗಿನ ಅಥವಾ ಕೆಟ್ಟದ್ದರ ಸಲಹೆಗಳಿಗೆ ನಿರಂತರವಾಗಿ ಗುರಿಯಾಗುತ್ತಿದ್ದನು, ಅಥವಾ ಒಳಗೆ ಹಂಬಲಿಸುತ್ತಿರುತ್ತಿದ್ದನು, ಅದು ನಿತ್ಯಜೀವದ ಭವಿಷ್ಯವು ಅನಿಶ್ಚಿತವಾಗಿರುತ್ತಿತ್ತು ಮತ್ತು ಅವಿಧೇಯತೆ ಮತ್ತು ಅಕ್ರಮದ ತಲೆದೋರುವಿಕೆಯು ಯಾವಾಗಲಾದರೂ ಸಾಧ್ಯತೆಯಾಗಬಹುದಿತ್ತು; ಇದಲ್ಲದೆ, ಇದರೊಂದಿಗೆ ಒಳ್ಳೇತನವು ಕೆಟ್ಟತನದೊಂದಿಗೆ ಹೋಲಿಸದ ಬೇಧದ ಹೊರತು ಒಳ್ಳೆಯದು ಹೆಚ್ಚಾಗಿ ಮೆಚ್ಚುಗೆಯಾಗುತ್ತಿದ್ದಿಲ್ಲ .

ದೇವರು ಮೊದಲಿಗೆ ತನ್ನ ಸೃಷ್ಟಿಗಳಿಗೆ ಒಳ್ಳೆಯವುಗಳನ್ನು ಪರಿಚಿತಗೊಳ್ಳುವಂತೆ ಮಾಡಿದನು. ಅವುಗಳು ಏದೇನಿನಲ್ಲಿ ಅವರನ್ನು ಸುತ್ತುಗಟ್ಟಿದ್ದವು. ನಂತರದಲ್ಲಿ, ಅವಿಧೇಯತೆಯ ದಂಡವಾಗಿ ಆತನು ಅವರಿಗೆ ಕೆಟ್ಟದ್ದರ ತೀವ್ರತರ ತಿಳುವಳಿಕೆಯನ್ನು ಕೊಟ್ಟನು. ಅವರನ್ನು ಏದೇನಿನಿಂದ ಹೊರಹಾಕಿ ಮತ್ತು ತನ್ನ ಸಹವಾಸದಿಂದ ದೂರಮಾಡಿದನು. ದೇವರು ಅವರಿಗೆ ಅಸ್ವಸ್ಥತೆ, ವೇದನೆ ಮತ್ತು ಮರಣವನ್ನು ಅನುಭವಿಸುವಂತೆ ಮಾಡಿದನು. ಈ ರೀತಿಯಲ್ಲಿ ಅವರು ಕೆಡುಕನ್ನೂ ಮತ್ತು ಪಾಪದ ಅನುಕೂಲಕರವಲ್ಲದ ಮತ್ತು ಮಿತಿಮೀರಿದ ಪಾಪಪ್ರಜ್ಞೆಯನ್ನು ಸದಾಕಾಲ ಅರಿತುಕೊಳ್ಳುವಂತೆ ಮಾಡಿದನು.

ಇದರ ಫಲಿತಾಂಶಗಳ ಹೋಲಿಕೆಯಿಂದ ಅವರು ಎರಡೂ ಸಂಗತಿಗಳ ಮೆಚ್ಚುಗೆ ಮತ್ತು ಸರಿಯಾದ ಅಂದಾಜಿಗೆ ಬಂದರು. "ಈ ಮನುಷ್ಯನು ಒಳ್ಳೇದರ ಕೆಟ್ಟದರ ಬೇಧವನ್ನರಿತು ನಮ್ಮಲ್ಲಿ ಒಬ್ಬನಂತಾದನಲ್ಲಾ" (ಆದಿ. 3:22) ಎಂದು ದೇವರು ಹೇಳಿದನು. ಇದರಲ್ಲಿ ಅವರ ಮುಂದಿನ ಪೀಳಿಗೆಯ ಪಾಲು, ಅವರು ಮೊದಲಿಗೆ ಕೆಟ್ಟದರ ಜ್ಞಾನವನ್ನು ಹೊಂದಿಕೊಂಡಿದ್ದನ್ನು ಹೊರತುಪಡಿಸಿ, ಒಳ್ಳೆಯವರ ಬಗ್ಗೆ ಪೂರ್ಣವಾದ ತಿಳುವಳಿಕೆಯನ್ನು ಮಿಲಿಯಾಂತರವು ಬರುವವರೆಗೂ ಗುರುತಿಸಲಾರರು. ಅವರು ಅದನ್ನು ಅವರ ನ್ಯಾಯಾಧಿಪತಿಯೂ ಅರಸನೂ ಆದಾತನಿಂದ ವಿಮೋಚನೆ ಹೊಂದಿಕೊಳ್ಳುವುದರ ಫಲವಾಗಿ ತಿಳಿದುಕೊಳ್ಳುವರು.

ನೈತಿಕ ಪ್ರಜ್ಞೆ ಅಥವಾ ಒಳ್ಳೇದು ಕೆಟ್ಟದ್ದು ಎಂದು ನಿರ್ಣಯಿಸುವುದು ಮತ್ತು ಆದಾಮನು ಹೊಂದಿಕೊಂಡಿದ್ದ ಅದನ್ನು ಉಪಯೋಗಿಸುವ ಸ್ವಾತಂತ್ರ್ಯ ಇವುಗಳು ಆತನು ದೇವರ ಹೋಲಿಕೆ ಎಂಬುದರ ಲಕ್ಷಣಗಳಾಗಿವೆ. ಒಳ್ಳೇದರ ಮತ್ತು ಕೆಟ್ಟದರ ನಿಯಮವು ಆತನ ಸ್ವಾಭಾವಿಕ ದೇಹ ಪ್ರಕೃತಿಯಲ್ಲಿ ಬರೆಯಲ್ಪಟ್ಟಿದೆ. ಅದು ದೈವೀಕ ಸ್ವಭಾವದ ಭಾಗವಾಗಿರುವಂತೆ ಆತನ ಸ್ವಭಾವದ ಭಾಗವೂ ಆಗಿದೆ. ಆದರೆ ಈ ಸ್ವರೂಪವು ಅಥವಾ ಹೋಲಿಕೆ, ಮತ್ತು ಮೂಲತಃ ಮಾನವನ ನಿಯಮ ಲಿಖಿತವಾದ ಸ್ವಭಾವವು ಅದರ ಸ್ಪಷ್ಟವಾದ ರೂಪರೇಖೆಗಳನ್ನು ಪಾಪದ ಅಧಃಪತನದ ಪ್ರಭಾವದಿಂದ ಅಳಿಸಿಕೊಂಡಿದೆ ಎಂಬುದನ್ನು ನಾವು ಮರೆಯದೇ ಇರೋಣ; ಆದುದರಿಂದ ಮೊದಲ ಮನುಷ್ಯನಲ್ಲಿದ್ದುದು ಈಗ ಇಲ್ಲವಾಗಿದೆ. ಪ್ರೀತಿಸುವ ಸಾಮರ್ಥ್ಯವು ದ್ವೇಷಿಸಲು ಸಾಧ್ಯ ಎಂಬುದನ್ನು ಸೂಚಿಸುತ್ತದೆ. ಆದ್ದರಿಂದ ಸೃಷ್ಟಿಕರ್ತನು ದ್ವೇಷಿಸುವ ಮತ್ತು ತಪ್ಪು ಮಾಡುವ ಅನುಗುಣವಾದ ಚಾತುರ್ಯವಿಲ್ಲದೆ ಪ್ರೀತಿಸುವ ಮತ್ತು ಸರಿ ಮಾಡುವ ಶಕ್ತಿಯೊಂದಿಗೆ ಮನುಷ್ಯನನ್ನು ತನ್ನ ಸ್ವಂತ ಹೋಲಿಕೆಯಲ್ಲಿ ಮಾಡಲು ಸಾಧ್ಯವಿಲ್ಲ ಎಂದು ನಾವು ತರ್ಕಿಸಬಹುದು. ಇಚ್ಛೆಯಿಂದ ಆಯ್ಕೆ ಮಾಡಿಕೊಳ್ಳುವ ಈ ಸ್ವಾತಂತ್ರ್ಯ ಇವುಗಳು ಮಾನವನ ಮೂಲದ ಸಹಜ ಗುಣಗಳಾಗಿವೆ. ಇದು ಮತ್ತು ಇದರೊಂದಿಗೆ ಆತನ ಪೂರ್ಣಮಟ್ಟದ ಮಾನಸಿಕ ಮತ್ತು ನೈತಿಕ ಧೀಶಕ್ತಿಗಳೂ ಸೇರಿ ಆತನನ್ನು ಆತನ ಸೃಷ್ಟಿಕರ್ತನ ಸ್ವಭಾವದಲ್ಲಿ ರೂಪಿಸಿತು. ಇಂದು, ಆರು ಸಾವಿರ ವರ್ಷಗಳ ಅವನತಿಯ ನಂತರ, ಬಹಳ ಮಟ್ಟಿನ ಮೂಲ ಸ್ವಾರೂಪ್ಯವು ಪಾಪದಿಂದ ಅಳಿಸಿಹೋಗಿದೆ, ನಾವೂ ಮುಕ್ತರಾಗಿಲ್ಲ, ಹೆಚ್ಚುಕಡಿಮೆ ಪಾಪದಿಂದ ಮತ್ತು ಅದರ ಒಳಗೊಳ್ಳುವಿಕೆಗಳಿಂದ ಬಂಧಿಸಲ್ಪಟ್ಟಿದ್ದೇವೆ. ಹೀಗಾಗಿ ಪಾಪವು ಈಗ ಹೆಚ್ಚು ಸುಲಭವಾಗಿದೆ ಮತ್ತು ಪತನಗೊಂಡ ಮಾನವನಿಗೆ ನೀತಿವಂತಿಕೆಗಿಂತ ಹೆಚ್ಚಾಗಿ ಒಪ್ಪಿಗೆಯಾಗಿದೆ.

ದೇವರು ಆದಾಮನಿಗೆ ಪಾಪದ ಅನೇಕ ದುಷ್ಟ ಫಲಿತಾಂಶಗಳ ಬಗ್ಗೆ ಸ್ಪಷ್ಟವಾದ ಅಭಿಪ್ರಾಯಗಳನ್ನು ನೀಡಬಹುದಿತ್ತು ಎಂದು ನಾವು ಪ್ರಶ್ನಿಸುವ ಅಗತ್ಯವಿಲ್ಲ, ಆದರೆ ಕೆಟ್ಟದ್ದರ ವಾಸ್ತವವಾದ ಅನುಭವವು ಅತ್ಯಂತ ಖಚಿತವಾದುದು ಮತ್ತು ಶಾಶ್ವತವಾದದು ಎಂದು ದೇವರು ಮುಂತಿಳಿದಿದ್ದನು ಎಂದು ನಾವು ನಂಬುತ್ತೇವೆ. ಮನುಷ್ಯನಿಗೆ ಶಾಶ್ವತ ಸಹಾಯ ಮಾಡುವ ಪಾಠವಾಗಿದೆ. ಈ ಕಾರಣದಿಂದಾಗಿ, ದೇವರು (ಇದನ್ನು ಮುಂದಾಗಿ ನೋಡಿ), ಮಾನವನನ್ನು ತಡೆಹಿಡಿಯದೆ ಆತನು ತನ್ನ ಸ್ವಂತ ಆಯ್ಕೆಯನ್ನು ತೆಗೆದುಕೊಳ್ಳುವಂತೆ ಮತ್ತು ಕೇಡಿನ ಪರಿಣಾಮಗಳನ್ನು ಅನುಭವಿಸುವಂತೆ ಅನುಮತಿಸಿದನು. ಪಾಪ ಮಾಡುವ ಅವಕಾಶವನ್ನು ಎಂದಿಗೂ ಅನುಮತಿಸದೇ ಇದ್ದಿದ್ದರೆ, ಮನುಷ್ಯನು ಅದನ್ನು ವಿರೋಧಿಸಲು ಸಾಧ್ಯವಾಗುತ್ತಿರಲಿಲ್ಲ. ಇದರ ಪರಿಣಾಮವಾಗಿ ಆತನ ಸರಿಯಾದ ಕಾರ್ಯಗಳಲ್ಲಿ

ಪುಣ್ಯವಾಗಲೀ, ಮೌಲ್ಯವಾಗಲೀ ಇರುತ್ತಿದ್ದಿಲ್ಲ. ದೇವರು ತನ್ನನ್ನು ಆರಾಧಿಸುವವರು ಆತ್ಮೀಕ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸಬೇಕೆಂದು ಬಯಸುತ್ತಾನೆ. ಆತನು ಅಜ್ಞಾನದ, ಯಾಂತ್ರಿಕ ಸೇವೆಯ ಬದಲಾಗಿ, ಬುದ್ಧಿವಂತಿಕೆಯುಳ್ಳ, ಇಚ್ಛಾಪೂರ್ವಕವಾದ ವಿಧೇಯತೆಯನ್ನು ಬಯಸುತ್ತಾನೆ. ಅವನು ಈಗಾಗಲೇ ತನ್ನ ಇಚ್ಛೆಯನ್ನು ಸಾಧಿಸುವ ನಿರ್ಜೀವ ಯಾಂತ್ರಿಕ ನಿಯೋಗಗಳನ್ನು ಹೊಂದಿದ್ದಾನೆ. ಆದರೆ ಆತನ ವಿನ್ಯಾಸವು ಇನ್ನೂ ಉದಾತ್ತವಾದ ಸಂಗತಿಗಳನ್ನು ಮಾಡುವುದೂ, ತನ್ನ ಸ್ವರೂಪಕ್ಕೆ ತಕ್ಕಂಥಾ ಬುದ್ಧಿವಂತ ಸೃಷ್ಟಿಗಳನ್ನು ಮಾಡುವುದೂ ಆಗಿದೆ. ಆತನು ಭೂಲೋಕದ ಕರ್ತನೂ ಆಗಿದ್ದು ಆತನ ನಿಷ್ಠೆ ಮತ್ತು ನೀತಿವಂತಿಕೆಗಳು ಸರಿಯಾದವುಗಳನ್ನು ತಪ್ಪಾದವುಗಳನ್ನು ಮತ್ತು ಒಳ್ಳೆಯವುಗಳನ್ನು ಮತ್ತು ಕೆಟ್ಟವುಗಳನ್ನು ಮೆಚ್ಚಿಕೊಳ್ಳುವುದರ ಮೇಲೆ ನಿರ್ಭರಗೊಂಡಿದೆ.

ಸರಿ ಮತ್ತು ತಪ್ಪುಗಳ ಸಿದ್ಧಾಂತವು ಸದಾ ಇರುವಂತವುಗಳಾಗಿವೆ ಮತ್ತು ಅವು ಸದಾ ಇರಲೇಬೇಕು. ಮತ್ತು ದೇವರ ಸ್ವರೂಪದಲ್ಲಿರುವ ಸರ್ವ ಸಂಪೂರ್ಣವಾದ ಬುದ್ಧಿವಂತ ಸೃಷ್ಟಿಗಳು, ಆಯ್ಕೆಮಾಡಲು ಸರಿಯಾದ ಸಿದ್ಧಾಂತಗಳು ಮಾತ್ರವೇ ಯಾವಾಗಲೂ ಕ್ರಿಯಾತ್ಮಕವಾಗಿದೆ ಎಂದಿದ್ದರೂ, ಎರಡರಲ್ಲಿ ಒಂದನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯ ಹೊಂದಿರಲೇಬೇಕು. ದೇವರ ಉದ್ದೇಶವನ್ನು ನೆರವೇರಿಸುವುದಕ್ಕಾಗಿ ಕೆಟ್ಟದಾದ ತತ್ವಗಳನ್ನು ಸಾಕಷ್ಟು ಸಮಯ ಅನುಮತಿಸಿರುವಾಗ, ಅವು ಶಾಶ್ವತವಾಗಿ ನಿಷ್ಕ್ರಿಯೆಗೊಳ್ಳುತ್ತವೆ ಮತ್ತು ಯಾರಾರು ಅದರ ನಿಯಂತ್ರಣಕ್ಕೆ ತಮ್ಮನ್ನು ಒಪ್ಪಿಸಿಕೊಟ್ಟಿದ್ದಾರೋ ಅವರುಗಳು ನಿಷ್ಕ್ರಿಯೆಯುಳ್ಳವರಾಗುತ್ತಾರೆ (1 ಕೊರಿಂಥ 15:25, 26; ಇಬ್ರಿಯ 2:14). ಸರಿಯಾದ ಕಾರ್ಯಗಳು ಮತ್ತು ಸರಿಯಾದ ಕಾರ್ಯಗಳನ್ನು ಮಾಡುವವರು ಮಾತ್ರವೇ ಸದಾ ಮುಂದುವರೆಯುತ್ತಾರೆ.

ಆದರೆ ಈ ಪ್ರಶ್ನೆಯು ಮತ್ತೊಂದು ರೀತಿಯಲ್ಲಿ ಪುನಃ ಕಾಣಿಸಿಕೊಳ್ಳುತ್ತದೆ: ಮಾನವನನ್ನು ಅನುಭವಕ್ಕಿಂತ ಬೇರೆ ರೀತಿಯಲ್ಲಿ ಕೆಡುಕಿನ ಪರಿಚಯವುಳ್ಳವನನ್ನಾಗಿ ಮಾಡಬಹುದಿತ್ತಲ್ಲವೆ? ಎಂಬುದು. ಸಂಗತಿಗಳನ್ನು ತಿಳುಕೊಳ್ಳಲು ನಾಲ್ಕು ಮಾರ್ಗಗಳಿವೆ. ಅವುಗಳೆಂದರೆ, ಅಂತರ್ದೃಷ್ಟಿಯಿಂದ, ಗಮನಿಸುವುದರಿಂದ, ಅನುಭವ ದಿಂದ ಮತ್ತು ವಿವಿಧ ಮೂಲಗಳಿಂದ ಬಂದ ಮತ್ತು ಸಕಾರಾತ್ಮಕವಾಗಿ ಸತ್ಯವೆಂದು ಅಂಗೀಕರಿಸಲ್ಪಟ್ಟ ಮಾಹಿತಿಗಳಿಂದ ತಿಳಿದುಕೊಳ್ಳಬಹುದು. ಅಂತದೃಷ್ಟಿಯ ಜ್ಞಾನವು ವಿವೇಚನಾ ಪ್ರಕ್ರಿಯೆ ಇಲ್ಲದ ಅಥವಾ ಯಾವುದೇ ರುಜುವಾತಿನ ಅವಶ್ಯಕತೆಯಿಲ್ಲದ ನೇರವಾದ ಗ್ರಹಣಶಕ್ತಿಯಾಗಿದೆ. ಅಂಥಾ ಎಲ್ಲಾ ಜ್ಞಾನವು ಜ್ಞಾನಕ್ಕೂ, ಸತ್ಯಕ್ಕೂ ನಿತ್ಯವಾದ ಕಾರಂಜಿಯಂತಿರುವ ದೈವಿಕನಾದ ಯೆಹೋವನಿಗೆ ಮಾತ್ರವೇ ಉಂಟು. ಆತನು ಎಲ್ಲಾ ಅಗತ್ಯತೆಗಳಲ್ಲಿಯೂ, ಸಂಗತಿಗಳ ಸ್ವಭಾವದಲ್ಲಿಯೂ ಆತನ ಎಲ್ಲಾ ಸೃಷ್ಟಿಗಿಂತಲೂ ಬಹಳ ಶ್ರೇಷ್ಠನಾಗಿದ್ದಾನೆ. ಆದುದರಿಂದ ಒಳ್ಳೆಯವುಗಳು ಮತ್ತು ಕೆಟ್ಟವುಗಳ ಬಗ್ಗೆ ಮಾನವನ ಜ್ಞಾನವು ಅಂತರ್ದೃಷ್ಟಿಯದಲ್ಲ. ಮಾನವನ ಜ್ಞಾನವು ಗಮನಿಸುವ/ವೀಕ್ಷಣೆಯ ಶಕ್ತಿಯಿಂದ ಬಂದಿದ್ದಿರಬಹುದು. ಹಾಗಿದ್ದ ಪಕ್ಷದಲ್ಲಿ ಕೇಡು ಎಂಬುದು ಹೇಗಿರುತ್ತದೆ ಎಂಬದರ ಪ್ರದರ್ಶನವಾಗಲೇ ಬೇಕು ಹಾಗೂ ಅದರ ಪರಿಣಾಮ ಏನೆಂದು ಮನುಷ್ಯನು ಗಮನಿಸಿ ತಿಳಿದುಕೊಳ್ಳಬೇಕು. ಇದು ಎಲ್ಲಿಯಾದರೂ, ಕೆಲವು ಜೀವಿಗಳಲ್ಲಿ ಕೇಡಿನ ಅನುಮತಿಯು ಸೂಚಿತವಾಗುತ್ತದೆ. ಮತ್ತು ಮನುಷ್ಯರಲ್ಲಿ, ಭೂಮಿಯ ಮೇಲೆ ಅಥವಾ ಎಲ್ಲಿಯಾದರೂ ಇರುವ ಇತರ ಜೀವಿಗಳಲ್ಲಿ ಏಕೆ ಇರಬಾರದು?

ಮಾನವನು ಏಕೆ ದೃಷ್ಟಾಂತದ ನಿದರ್ಶನ ವಾಗಬಾರದು ಮತ್ತು ಆತನು ಜ್ಞಾನವನ್ನು ಪ್ರಾಯೋಗಿಕ ಅನುಭವಗಳಿಂದ ಪಡೆಯಬಾರದೇಕೆ? ಅದು ಹೀಗಿದೆ; ಮಾನವನು ಪ್ರಾಯೋಗಿಕ ಅನುಭವಗಳನ್ನು ಪಡಕೊಳ್ಳುತ್ತಿದ್ದಾನೆ ಅಲ್ಲದೇ ಇತರರಿಗೆ ನಿದರ್ಶನವನ್ನು ಒದಗಿಸುತ್ತಿದ್ದಾನೆ ಮತ್ತು ದೇವದೂತರುಗಳಿಗೆ ನೋಟವಾಗುವಂತೆ ಮಾಡಲ್ಪಟ್ಟಿದ್ದಾನೆ.

ಆದಾಮನು ಈಗಾಗಲೇ ಕೇಡಿನ ಜ್ಞಾನವನ್ನು ಮಾಹಿತಿಯಿಂದ ಹೊಂದಿದ್ದಾನೆ. ಆದರೆ ಅದು ಪ್ರಯೋಗವನ್ನು ಪ್ರಯತ್ನಿಸುವುದನ್ನು ನಿಗ್ರಹಿಸಲು ಅದು ಸಾಕಾಗಲಿಲ್ಲ. ಆದಾಮ ಮತ್ತು ಹವ್ವರಿಗೆ ದೇವರು ತಮ್ಮ ಸೃಷ್ಟಿಕರ್ತನು ಎಂಬುದು ಗೊತ್ತಿತ್ತು. ಆದುದರಿಂದ, ಒಬ್ಬ ನಿಯಂತ್ರಿಸುವ ಅಧಿಕಾರವುಳ್ಳವನಾಗಿ ದೇವರು ಅವರಿಗೆ ನಿಷಿದ್ದವಾದ ಆ ಮರದ ಬಗ್ಗೆ ತಿಳಿಸುತ್ತಾ – "ಅದರ ಫಲವನ್ನು ತಿಂದ ದಿನ ಸತ್ತೇ ಹೋಗುವಿ" ಎಂದು ಹೇಳಿದನು. ಹೀಗಾಗಿ ಅವರು ಎಂದೂ ಅದರ ಪರಿಣಾಮಗಳನ್ನು ಗಮನಿಸದೇ ಹೋದರೂ, ಅನುಭವಿಸದೇ ಹೋದರೂ ಅವರಿಗೆ ಕೇಡಿನ ಬಗ್ಗೆ ತಾತ್ವಿಕವಾದ ತಿಳುವಳಿಕೆ ಇತ್ತು. ತತ್ಪರಿಣಾಮವಾಗಿ ಅವರು ತಮ್ಮ ಸೃಷ್ಟಿಕರ್ತನ ಪ್ರೀತಿಯ ಅಧಿಕಾರವನ್ನು ಮತ್ತು ಆತನ ಉಪಕಾರಿಯಾದ ನಿಯಮವನ್ನಾಗಲೀ, ಆತನು ಅವರನ್ನು ರಕ್ಷಿಸಲು ಪ್ರಸ್ತಾಪಿಸಿದ ಗಂಡಾಂತರಗಳನ್ನಾಗಲೀ ಮೆಚ್ಚಿಕೊಳ್ಳಲಿಲ್ಲ. ಹೀಗಾಗಿ

ಅವರು ಪ್ರಲೋಭನೆಗೆ ತುತ್ತಾದರು ಮತ್ತು ದೇವರು ಇದನ್ನು ಬುದ್ಧಿವಂತಿಕೆಯಿಂದ ಅನುಮತಿಸಿದನು ಮತ್ತು ಅವರ ಬುದ್ಧಿವಂತಿಕೆಯ ಅಂತಿಮ ಉಪಯುಕ್ತತೆಯನ್ನು ಪತ್ತೆಹಚ್ಚಲಾಯಿತು.

ಕೆಲವರು ಮಾತ್ರವೇ ನಮ್ಮ ಆದಿ ತಂದೆತಾಯಿಗಳು ಬಿದ್ದುಹೋದ ಪ್ರಲೋಭನೆಯ ತೀವ್ರತೆಯನ್ನು ಸರಿಯಾದ ರೀತಿಯಲ್ಲಿ ಬೆಲೆಕೊಟ್ಟು ಒಪ್ಪಿಕೊಳ್ಳುತ್ತಾರೆ, ಅದು ಅಲ್ಪ ಪ್ರಮಾಣದ ಅಪರಾಧವೆಂದು ತೋರುವುದಾಗಿದ್ದು ಅದಕ್ಕೆ ಇಷ್ಟೊಂದು ಕಠಿಣವಾದ ದಂಡವನ್ನು ವಿಧಿಸುವಲ್ಲಿ ದೇವರ ನ್ಯಾಯ ಇಲ್ಲವೆಂದು ಭಾವಿಸುತ್ತಾರೆ. ಆದರೆ ಸ್ವಲ್ಪವಾದ ಚಿಂತನಾ ಶಕ್ತಿಯೂ ಎಲ್ಲವನ್ನೂ ಸ್ಪಷ್ಟಪಡಿಸುತ್ತದೆ. ಪರಿಶುದ್ಧ ಗ್ರಂಥವು ಬಲಹೀನಳಾಗಿದ್ದ ಸ್ತ್ರೀಯನ್ನು ಹೇಗೆ ಮೋಸಗೊಳಿಸಲಾಯಿತು ಮತ್ತು ಆಕೆ ಹೇಗೆ ಅಪರಾಧಿಯಾದಳು ಎಂಬ ಸರಳವಾದ ಕಥೆಯೊಂದನ್ನು ಹೇಳುತ್ತದೆ. ದೇವರೊಂದಿಗೆ ಆಕೆಯ ಅನುಭವಗಳು ಮತ್ತು ಪರಿಚಯವು ಆದಾಮನಿಗಿಂತ ಸೀಮಿತವಾಗಿತ್ತು. ಯಾಕೆಂದರೆ, ಆತನು ಮೊದಲಿಗೆ ಸೃಷ್ಟಿಸಲ್ಪಟ್ಟವನು, ಮತ್ತು ದೇವರು ಆಕೆಯ ಸೃಷ್ಟಿಯ ಮೊದಲೇ ಆತನೊಂದಿಗೆ ನೇರವಾಗಿ ಹೆಚ್ಚು ಸಂಪರ್ಕದಲ್ಲಿದ್ದು ಪಾಪದ ಸಂಬಳ ಮರಣವೆಂದು ಜ್ಞಾನವನ್ನು ಪಡೆದಿದ್ದನು. ಬಹುಶಃ ಪಾಪದ ದಂಡನೆಯ ಮಾಹಿತಿಯನ್ನು ಬಹುಶಃ ಹವ್ವಳು ಆದಾಮನಿಂದ ಪಡೆದಿದ್ದಳು. ಆಕೆಯು ಸೈತಾನನ ಮೋಸದ ನಿರೂಪಣೆಗಳ ಮೇಲೆ ಭರವಸವಿಟ್ಟಿದ್ದರಿಂದ, ಆಕೆಯು ಆ ಹಣ್ಣಲ್ಲಿ ಭಾಗಿಯಾದ ಮೇಲೆ, ಆಕೆಗೆ ಎಲ್ಲವೂ ಒಳ್ಳೆಯದಾಗಿಲ್ಲ ಎಂಬ ಕೆಲವೊಂದು ಸಂಶಯಗಳು ಮತ್ತು ಶಂಕೆಗಳು ಇತ್ತಾದರೂ, ವಿಶದವಾಗಿ ಆಕೆ ಅಪರಾಧದ ವಿಸ್ತಾರತೆಯನ್ನು ಗ್ರಹಿಸಲಿಲ್ಲ. ಆದರೆ, ಮೋಸಹೋಗಿದ್ದರೂ, ಪೌಲನು ಹೇಳುವಂತೆ ಆಕೆ ಒಬ್ಬ ಅಪರಾಧಿಯಾಗಿದ್ದರೂ ಹೆಚ್ಚಿನ ಬೆಳಕಿನ ವಿರುದ್ಧವಾಗಿ ಉಲ್ಲಂಘನೆ ಮಾಡಿದಷ್ಟು ದೋಷಾಸ್ಪದವಾಗಿರಲಿಲ್ಲ.

ಆದರೆ, ಹವ್ವಳಂತೆ “ಆದಾಮನು ವಂಚನೆಗೆ ಒಳಬೀಳಲಿಲ್ಲ” (1 ತಿಮೋ. 2:14) ಎಂದು ನಮಗೆ ಹೇಳಲಾಗಿದೆ. ಆದುದರಿಂದ ಆತನು ಪಾಪದ ಪೂರ್ಣ ಗ್ರಹಿಕೆಯುಳ್ಳವನಾಗಿದ್ದರೂ ಅಪರಾಧವೆಸಗಿದನು. ಮತ್ತು ದಂಡನೆಯ ದೃಷ್ಟಿಯಿಂದ ನಿಶ್ಚಯವಾಗಿ ಸಾಯಬೇಕಾಗಿದೆ ಎಂದು ತಿಳಿದಿದ್ದನು. ನಿಶ್ಚಯವಾಗಿ ಉಚ್ಚರಿಸಿದ ದಂಡನೆಯನ್ನು ಅಜಾಗರೂಕತೆಯಿಂದ ಅನುಭವಿಸಲು ಅವನನ್ನು ಪ್ರೇರೇಪಿಸಿದ ಪ್ರಲೋಭನೆ ಏನು ಎಂದು ನಾವು ಸುಲಭವಾಗಿ ನೋಡಬಹುದು. ತಮ್ಮನ್ನು ಸೃಷ್ಟಿಸಿದಾತನ ಮಾನಸಿಕ ಮತ್ತು ನೈತಿಕ ಹೋಲಿಕೆಯಲ್ಲಿ ಉಂಟು ಮಾಡಲ್ಪಟ್ಟ ತಾವುಗಳು ಪರಿಪೂರ್ಣ ವ್ಯಕ್ತಿಗಳು ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು, ದೈವೀಕ ಪ್ರೀತಿಯ ಅಂಶವು ಪರಿಪೂರ್ಣನಾದ ಮನುಷ್ಯನಲ್ಲಿ ತನ್ನ ಪ್ರೀತಿಯ ಸಹಕಾರಿಯಾದ ಪರಿಪೂರ್ಣ ಸ್ತ್ರೀಯ ಕಡೆಗೆ ಪ್ರದರ್ಶಿಸಲ್ಪಟ್ಟಿತು. ಪಾಪವನ್ನು ಅರಿತುಕೊಂಡು ಮತ್ತು ಹವ್ವಳ ಮರಣದ ಬಗ್ಗೆ, ಹೆದರಿ, ಆ ಮೂಲಕ ತನ್ನ ನಷ್ಟದ ಬಗ್ಗೆ ಗ್ರಹಿಸಿಕೊಂಡು, (ಪುನರ್‌ಚೇತನದ ನಿರೀಕ್ಷೆ ಇಲ್ಲದೆ, ಯಾಕೆಂದರೆ, ಅಂಥಾಃ ಭರವಸೆಯನ್ನು ಇನ್ನೂ ನೀಡಿರಲಿಲ್ಲ). ಆದಾಮನು ಹತಾಶನಾಗಿ, ಅಜಾಗರೂಕನಾಗಿ ಆಕೆಯಿಲ್ಲದೆ ಬದುಕಬಾರದೆಂದು ತೀರ್ಮಾನಿಸಿದನು. ತನ್ನ ಸ್ವಂತ ಜೀವನವು ಆಕೆಯ ಸಹವಾಸವಿಲ್ಲದೆ ಅಸಂತೋಷವುಳ್ಳದ್ದೂ, ನಿಷ್ಪ್ರಯೋಜಕವೂ ಎಂದು ಪರಿಗಣಿಸಿ ಆತನು ಇಚ್ಛಾಪೂರ್ವಕವಾಗಿ ಆಕೆಯ ಕಾರ್ಯದೊಂದಿಗೆ ಕೈಗೂಡಿಸಿದನು. ಮರಣ ದಂಡನೆಯು ಆಕೆಯ ಮೇಲಿದೆ ಎಂದು ಬಹುಶಃ ಭಾವಿಸಿ ಅದರಲ್ಲಿ ಪಾಲುದಾರನಾಗ ಬಯಸಿದನು. ಅಪೋಸ್ತಲನು ತೋರಿಸಿಕೊಡುವಂತೆ ಅವರಿಬ್ಬರೂ ಅಪರಾಧಿಗಳು (ರೋಮಾ. 5:14, 1 ತಿಮೋಥೆ 2:14). ಆದರೆ, ಆದಾಮ ಹವ್ವರು ಒಬ್ಬರೇ, ಇಬ್ಬರು ವ್ಯಕ್ತಿಗಳಲ್ಲ; ಆದ್ದರಿಂದ ಹವ್ವಳು ತನ್ನ ನಡವಳಿಕೆಯು ಆದಾಮನ ಮೇಲೆ ಹೊರಿಸಲು ಸಹಾಯ ಮಾಡಿದ ದಂಡನೆಯನ್ನು ಹಂಚಿಕೊಂಡಳು (ರೋಮಾ. 5:12, 17–19).

ಮನುಷ್ಯನಿಗೆ ಆಯ್ಕೆಯ ಸ್ವಾತಂತ್ರ್ಯವನ್ನು ನೀಡಿದ ನಂತರ, ಅವನು ಪಾಪ ಮತ್ತು ಅದರ ಫಲಿತಾಂಶಗಳ ಬಗ್ಗೆ ಸಂಪೂರ್ಣ ನಿರ್ಧಾರದ ಕೊರತೆಯನ್ನು ಹೊಂದಿರುತ್ತಾನೆ ಎಂದು ದೇವರು ಮುಂದಾಗಿ ತಿಳಿದಿದ್ದನಲ್ಲದೇ, ಮನುಷ್ಯನು ಅದರೊಂದಿಗೆ ಪರಿಚಿತನಾದಾಗ ಆತನು ಅದನ್ನು ಇನ್ನೂ ಆಯ್ಕೆಮಾಡಿಕೊಳ್ಳುತ್ತಾನೆ, ಯಾಕೆಂದರೆ ಆ ಪರಿಚಯವು ಆತನಿಗೆ ನೈತಿಕ ಸ್ವಭಾವವನ್ನು ಎಷ್ಟು ದುರ್ಬಲಗೊಳಿಸುತ್ತದೆ ಎಂದರೆ ಕೆಟ್ಟದ್ದು ಕ್ರಮೇಣವಾಗಿ ಒಳ್ಳೇದಕ್ಕಿಂತ ಹೆಚ್ಚಾಗಿ ಒಪ್ಪುವ ಮತ್ತು ಹೆಚ್ಚು ಬಯಸುವಂತಾದ್ದು ಆಗುತ್ತದೆಂಬುದನ್ನು ಆತನು ಮುಂಗಾಣುವವನಾದನು. ಆದಾಗ್ಯೂ, ದೇವರು ಕೇಡನ್ನು ಅನುಮತಿಸುವ ವಿನ್ಯಾಸ ಮಾಡಿದ್ದನು. ಯಾಕೆಂದರೆ, ಅದರ ಪರಿಣಾಮಗಳಿಂದ ಮಾನವನನ್ನು ಬಿಡುಗಡೆ ಮಾಡುವ ನಿವಾರಣೆಯನ್ನು ಒದಗಿಸುವವನಾಗಿದ್ದು – ಅದರ ಫಲಿತಾಂಶಗಳು ಅವನನ್ನು ಅನುಭವದ

ಮೂಲಕ, ಪಾಪದ ಮಿತಿಮೀರಿದ ಪಾಪಪ್ರಜ್ಞೆಯ ಬಗ್ಗೆ ಮತ್ತು ಅದರ ವಿರುದ್ಧವಾಗಿ ಸದ್ಗುಣದ ಸಾಟಿಯಿಲ್ಲದ ತೇಜಸ್ಸಿನ ಬಗ್ಗೆ ಸಂಪೂರ್ಣ ಮೆಚ್ಚುಗೆಗೆ ಕಾರಣವಾಗುತ್ತವೆ ಎಂದು ಅವನು ಕಂಡುಕೊಂಡನು – ಈ ರೀತಿಯಲ್ಲಿ ಎಲ್ಲಾ ಒಳ್ಳೇತನದ ಮೂಲನೂ ಮತ್ತು ಕಾರಂಜಿಯೂ ಆಗಿರುವ ಅತನ ಸೃಷ್ಟಿಕರ್ತನನ್ನು ಹೆಚ್ಚು ಹೆಚ್ಚು ಪ್ರೀತಿಸಿ ಗೌರವಿಸುವಂತೆಯೂ ಮತ್ತು ಸದಾಕಾಲಕ್ಕೂ ತುಂಬಾ ದುಃಖ ಮತ್ತು ಅತೀವ ಕಷ್ಟಗಳನ್ನು ತಂದವುಗಳಿಂದ ದೂರವಿರಲು ಅವನಿಗೆ ಕಲಿಸಿಕೊಡುತ್ತದೆ. ಹೀಗೆ ಅಂತಿಮ ಫಲಿತಾಂಶವು ದೇವರ ಬಗ್ಗೆ ಅಪರಿಮಿತವಾದ ಪ್ರೀತಿ ಮತ್ತು ಆತನ ಚಿತ್ತವನ್ನು ವಿರೋಧಮಾಡುವ ಎಲ್ಲದರ ಬಗ್ಗೆ ಹೆಚ್ಚಿನ ದ್ವೇಷವನ್ನುಂಟುಮಾಡುತ್ತದೆ. ಇದರ ಪರಿಣಾಮವಾಗಿ ಎಲ್ಲರಿಗೂ ಸದಾಕಾಲವಿರುವ ನೀತಿವಂತಿಕೆಯ ದೃಢವಾದ ಸ್ಥಾಪನೆಯನ್ನು ದೇವರು ಈಗ ಪಾಪವನ್ನು ಅನುಮತಿಸುವುದರ ಮೂಲಕ ಮತ್ತು ಪರಸ್ಪರ ಸಂಬಂಧಿತವಾದ ಕೇಡುಗಳ ಬಗ್ಗೆ ಕಲಿಸಿಕೊಡುವುದರಿಂದ ಲಾಭವುಂಟಾಗುತ್ತದೆ. ಆದಾಗ್ಯೂ, ದೇವರು ಪಾಪವನ್ನು ಅನುಮತಿಸಿದ್ದಾನೆ ಎಂಬ ನಿರ್ವಿವಾದದ ಸಂಗತಿ ಮತ್ತು ದೇವರು ಪಾಪದ ಕರ್ತೃ ಮತ್ತು ಪ್ರಚೋದಕನೆಂದು ಆತನನ್ನು ಆರೋಪಿಸುವ ಕೆಲವರ ಗಂಭೀರ ದೋಷದ ನಡುವೆ ವ್ಯಾಪಕ ವ್ಯತ್ಯಾಸವನ್ನು ಗಮನಿಸಬೇಕು. ಈ ನಂತರದ ದೃಷ್ಟಿಕೋನವು ದೇವದೂಷಣೆಯುಳ್ಳದ್ದೂ ಮತ್ತು ಪರಿಶುದ್ಧ ಗ್ರಂಥದಲ್ಲಿರುವ ಸತ್ಯಗಳಿಗೆ ವಿರುದ್ಧವಾದುದೂ ಆಗಿದೆ. ಈ ತಪ್ಪುಗಳಲ್ಲಿ ಬೀಳುವವರು, ದೇವರು ತನ್ನ ಸ್ವಂತ ಮಗನನ್ನು ನಮ್ಮ ಪಾಪಗಳ ನಿವಾರಣಾರ್ಥವಾಗಿ ಈಡುಬಲಿಯಾಗಿ ಅರ್ಪಿಸಿರುವ ರಕ್ಷಣೆಯ ಬದಲಾಗಿ ಮತ್ತೊಂದು ಯೋಜನೆಯನ್ನು ಕಂಡುಕೊಳ್ಳುವ ಪ್ರಯತ್ನದಲ್ಲಿ ಹಾಗೆ ಮಾಡುತ್ತಾರೆ. ಅವರು ದೇವರು ಎಲ್ಲಾ ಪಾಪ ಕೆಡಕುತನಕ್ಕೂ ಮತ್ತು ಅಪರಾಧಗಳಿಗೂ* ದೇವರು ತಾನೇ ಜವಾಬ್ದಾರನು ಮತ್ತು ಮಾನವನು ಆತನ ಕೈಯಲ್ಲಿ ಕೇವಲ ಒಂದು ಮುಗ್ಧ ಸಾಧನವಾಗಿದ್ದು ಪಾಪ ಮಾಡಲು ಒತ್ತಾಯಿಸಲ್ಪಟ್ಟಿದ್ದಾನೆಂಬುದನ್ನು ತಮಗೂ ಮತ್ತಿತರರಿಗೂ ಸಾಬೀತುಪಡಿಸುವಲ್ಲಿ ಜಯಶಾಲಿಗಳಾದರೆ, ಆಗ ಅವರು ನಮ್ಮ ಪಾಪಗಳ ನಿವಾರಣೆಗೆ ಯಾವುದೇ ಸಮರ್ಪಣೆಯಾಗಲೀ, ಯಾವುದೇ ರೀತಿಯ ಕರುಣೆಯಾಗಲೀ ಅಗತ್ಯವಿಲ್ಲ, ಕೇವಲ ಸುಲಭವಾಗಿ ನ್ಯಾಯಮಾತ್ರವೇ ಎಂಬ ವಾದಸರಣಿಯ ಮಾರ್ಗವನ್ನು ಸ್ಪಷ್ಟಗೊಳಿಸುವ ವರಾಗುತ್ತಾರೆ. ಈ ರೀತಿಯಲ್ಲಿಯೂ ಸಹ, ಅವರು ತಮ್ಮ ಸುಳ್ಳು ಸಿದ್ಧಾಂತದ ಮತ್ತೊಂದು ಭಾಗದ ಅಡಿಪಾಯ ಹಾಕಬಯಸುತ್ತಾರೆ. 'Universalism' (ಸಾರ್ವತ್ರಿಕತೆ), ಅವರ ವಿಚಾರಣಾ ಸರಣಿ ಅಥವಾ ತತ್ವವೇನೆಂದರೆ ದೇವರು ಎಲ್ಲಾ ಪಾಪ, ಕೇಡು ಮತ್ತು ಅಪರಾಧಗಳನ್ನು ಎಲ್ಲರಲ್ಲಿ ಉಂಟುಮಾಡಿದಂತೆಯೇ, ಆತನೇ ಎಲ್ಲಾ ಮಾನವರನ್ನು ಪಾಪ ಮತ್ತು ಮರಣದಿಂದ ಬಿಡುಗಡೆಗೊಳಿಸುತ್ತಾನೆ ಎಂಬ ಹಕ್ಕೇಳಿಕೆ ನೀಡುತ್ತಾರೆ. ಮತ್ತು ದೇವರು ಉದ್ದೇಶಪೂರ್ವಕವಾಗಿ ಪಾಪವನ್ನು ಉಂಟು ಮಾಡಿದನು ಮತ್ತು ಯಾರೂ ಅವನನ್ನು ವಿರೋಧಿಸಲು ಸಾಧ್ಯವಿಲ್ಲ ಎಂದು ವಾದಿಸುತ್ತಾರೆ, ಆದ್ದರಿಂದ ದೇವರು ನೀತಿವಂತಿಕೆಯನ್ನು ಇಚ್ಛಿಸಿದಾಗ ಎಲ್ಲರೂ ಅದರಂತೆಯೇ ಅವನನ್ನು ವಿರೋಧಿಸಲು ಶಕ್ತಿಹೀನರಾಗುತ್ತಾರೆ ಎಂದು ಅವರು ಹೇಳುತ್ತಾರೆ. ಆದರೆ ಇಂಥಾಃ ಎಲ್ಲಾ ವಿಚಾರಸರಣಿಯಲ್ಲಿ ಮಾನವನ ಅತ್ಯಂತ ಉದಾತ್ತ ಗುಣ, ಇಚ್ಛಾಸ್ವಾತಂತ್ರ್ಯ, ಅಥವಾ ಆಯ್ಕೆಯ ಸ್ವಾತಂತ್ರ್ಯ ಆತನ ಸೃಷ್ಟಿಕರ್ತನ ಸಾರೂಪ್ಯದಲ್ಲಿರುವು

*ಪರಿಶುದ್ಧ ಗ್ರಂಥದ ಎರಡು ವಾಕ್ಯಭಾಗಗಳನ್ನು (ಯೆಶಾಯ 45:7 ಮತ್ತು ಆಮೋಸ 3:6) ಈ ವಿಚಾರಸರಣಿಯನ್ನು ಬೆಂಬಲಿಸುವಂತೆ ಉಪಯೋಗಿಸಲಾಗುತ್ತಿದೆ. ಆದರೆ ಕೇಡು ಎಂಬ ಪದವನ್ನು ಎರಡೂ ವಾಕ್ಯಭಾಗಗಳಲ್ಲಿ ತಪ್ಪಾಗಿ ಅರ್ಥೈಸಲಾಗಿದೆ. ಪಾಪವು ಯಾವಾಗಲೂ ಕೆಡುಕಾಗಿದೆ, ಆದರೆ ಕೆಡಕು ಯಾವಾಗಲೂ ಪಾಪವಲ್ಲ. ಭೂಕಂಪ, ಅಗ್ನಿಪ್ರಳಯ, ಜಲಪ್ರಳಯ, ಜಾಡ್ಯ ಇವುಗಳು ವಿಪತ್ತು, ಕೇಡುಗಳು; ಆದರೆ ಇವುಗಳಲ್ಲಿ ಯಾವುದೊಂದೂ ಪಾಪವಲ್ಲ. ಮೇಲಿನ ವಾಕ್ಯಭಾಗಗಳಲ್ಲಿರುವ ಕೆಡುಕು ಎಂಬ ಪದವು ವಿಪತ್ತನ್ನು ಸೂಚಿಸುವುದಾಗಿದೆ. ಇದೇ ಇಬ್ರಿಯ ಪದವನ್ನು ಕ್ಲೇಶ (Affliction) ಎಂಬದಾಗಿ ಕೀರ್ತನೆ 34:19; 107:39; ಯೆರೆ. 48:16; ಜೆಕ. 1:15ರಲ್ಲಿ ಭಾಷಾಂತರಿಸಲಾಗಿದೆ. ಅದನ್ನು ತೊಂದರೆ (Trouble) ಎಂಬುದಾಗಿ ಕೀರ್ತನೆ 27:5; 41:1; 88:3;107:26; ಯೆರೆ 51:2; ಪ್ರಲಾಪ 1:21 ಇತ್ಯಾದಿ ವಚನಗಳಲ್ಲಿ ಭಾಷಾಂತರಿಸಲಾಗಿದೆ. ಅದನ್ನು ವಿಪತ್ತು (Calamities, Adversity and distress) ಎಂಬುದಾಗಿ 1 ಸಮು. 10:19; ಕೀರ್ತನೆ 10:6; 94:13; 141:5; ಪ್ರಸಂಗಿ 7:14; ನೆಹೆ. 2:17 ರಲ್ಲಿ ಭಾಷಾಂತರಿಸಲಾಗಿದೆ, ಅದೇ ಪದವು ಅನೇಕ ಕಡೆಗಳಲ್ಲಿ ಹಾನಿ, ಕುಚೋದ್ಯ, ದುಃಖದಾಯಕ, ನೋಯಿಸುವುದು, ಅತೀವ ಕಷ್ಟ, ಕೊರಗು ಮತ್ತು ಶೋಕ (harm, mischief, sore, hurt, misery, grief and sorrow) ಮುಂತಾಗಿ ಅರ್ಥೈಸಲಾಗಿದೆ.

ಯೆಶಾಯ 45:7 ಮತ್ತು ಆಮೋಸ 3:6ರಲ್ಲಿ ದೇವರು ಇಸ್ರಾಯೇಲ್ಯರಿಗೆ ಅವರು ಆತನ ನಿಬಂಧನೆಗಳಿಗೆ ವಿಧೇಯರಾಗುವುದಾದರೆ ಅವರನ್ನು ಆಶೀರ್ವದಿಸಿ ಒಂದು ಜನಾಂಗವನ್ನಾಗಿ ಮಾಡುತ್ತೇನೆ ಮತ್ತು ಲೋಕಕ್ಕೆ ಸಾಮಾನ್ಯವಾಗಿ ಬರುವ ಎಲ್ಲಾ ಆಪತ್ತು ವಿಪತ್ತುಗಳಿಂದ ಕಾದು ಕಾಪಾಡುತ್ತೇನೆ ಎಂಬತನ್ನ ಒಡಂಬಡಿಕೆಯನ್ನು ನೆನಪುಮಾಡುವವನಾಗಿದ್ದಾನೆ. ಆದರೆ ಅವರು ಆತನನ್ನು ಕೈಬಿಡುವವರಾದರೆ, ಆತನು ಅವರ ಮೇಲೆ ವಿಪತ್ತನ್ನು (ಕೇಡನ್ನು) ದಂಡನೆಯನ್ನಾಗಿ ಬರಮಾಡುವವನು. (ಧರ್ಮೋ. 28:1–14, 15–32; ಯಾಜಕ 26:14–16; ಯೆಹೋಶುವ 23:6–11, 12:16).

ವಿಪ್ಲವಗಳು ಅವರ ಮೇಲೆ ಬಂದಾಗ, ಹೇಗೂ ಅವರುಗಳು ಅದನ್ನು ಆಕಸ್ಮಿಕಗಳೆಂದು, ಅವು ದಂಡನೆಗಳಲ್ಲ ಎಂದು ಪರಿಗಣಿಸುವ ಪ್ರವೃತ್ತಿ ತೋರುತ್ತಾರೆ. ಆದುದರಿಂದ ದೇವರು ತನ್ನ ಮಾತುಗಳನ್ನು ಪ್ರವಾದಿಗಳ ಮೂಲಕ ಅವರಿಗೆ ಕಳುಹಿಸಿಕೊಡುತ್ತಾನೆ, ಅವರ ಒಡಂಬಡಿಕೆಗಳನ್ನು ನೆನಪಿಸುತ್ತಾನೆ ಮತ್ತು ಅವರ ಎಲ್ಲಾ ವಿಪತ್ತುಗಳೂ ಆತನಿಂದಲೇ ಮತ್ತು ಅವರನ್ನು ಸರಿಪಡಿಸುವ ಆತನ ಇಚ್ಛೆಯಿಂದಲೇ ಎಂದು ಹೇಳುತ್ತಾನೆ. ಆದುದರಿಂದ ಈ ವಾಕ್ಯಭಾಗಗಳನ್ನು ದೇವರು ಕೆಡುಕಿನ ಕರ್ತೃವಾಗಿದ್ದಾನೆ ಎಂದು ಉಪಯೋಗಿಸುವುದು ಅಸಂಬದ್ಧವಾಗಿದೆ. ಯಾಕೆಂದರೆ, ಅವು ಎಂದಿಗೂ ಪಾಪವನ್ನು ಸೂಚಿಸುವವುಗಳಲ್ಲ.

ದಾದರೆ ಗಮನಾರ್ಹ ಲಕ್ಷಣವನ್ನು ಸಂಪೂರ್ಣವಾಗಿ ಬದಿಗಿರಿಸಲಾಗಿದೆ. ಮತ್ತು ಮಾನವನು ತಾತ್ವಿಕವಾಗಿ ಕೇವಲ ಒಂದು ಯಂತ್ರದಂತೆ ಹೀನೈಸಲ್ಪಟ್ಟಿದ್ದಾನೆ. ಅದು ನಡಿಸಿದಂತೆ ಮಾತ್ರವೇ ನಡೆಯುವುದಾಗಿದೆ. ಹೀಗಾಗಿದ್ದರೆ, ಮಾನವನು ಈ ಭೂಲೋಕದ ಒಡೆಯನಾಗುವ ಬದಲು ಕೀಟಗಳಿಗಿಂತ ಕಡೆಯವಾಗುತ್ತಾನೆ; ಯಾಕೆಂದರೆ ಅವುಗಳಿಗೆ ನಿಸ್ಸಂದೇಹವಾಗಿ ಒಂದು ಇಚ್ಛೆ ಅಥವಾ ಆಯ್ಕೆ ಎಂಬುದಿದೆ. ಒಂದು ಸಣ್ಣ ಇರುವೆಗಾದರೂ ಇಚ್ಛಾ ಶಕ್ತಿಯನ್ನು ನೀಡಲಾಗಿದೆ, ಇದನ್ನು ಮಾನವನು ತನ್ನ ಹೆಚ್ಚಿನ ಶಕ್ತಿಯಿಂದ ವಿರೋಧಿಸಬಹುದು ಅಥವಾ ವಿಘ್ನಪಡಿಸಬಹುದು ಆದರೆ ನಾಶಪಡಿಸಲು ಸಾಧ್ಯವಿಲ್ಲ.

ನಿಜ, ನಿಶ್ಚಯವಾಗಿ ಮಾನವನನ್ನು ಪಾಪ ಅಥವಾ ನೀತಿಗೆ ಒತ್ತಾಯಿಸಲು ದೇವರಿಗೆ ಅಧಿಕಾರವುಂಟು. ಆದರೆ, ಆತನಿಗೆ ಅಂಥಾಃ ಉದ್ಧೇಶವಿಲ್ಲ ಎಂಬುದನ್ನು ಆತನ ವಾಕ್ಯಗಳು ಪ್ರಕಟಿಸುತ್ತವೆ. ಆತನು ತನ್ನನ್ನು ತಾನೇ ನಿರಾಕರಿಸುವುದಿಲ್ಲ ಎಂಬ ಒಂದೇ ಕಾರಣದಿಂದ ದೇವರು ಸತತವಾಗಿ ಮಾನವರನ್ನು ಪಾಪಕ್ಕೆ ಒತ್ತಾಯಿಸಲಾರನು. ಅಂಥಾಃ ಕ್ರಮವು ಆತನ ನೈತಿಕ ಗುಣಧರ್ಮಕ್ಕೆ ಅಸಂಬದ್ಧವೆನಿಸುತ್ತದೆ. ಆದುದರಿಂದ ಅದು ಅಸಾಧ್ಯವಾಗಿದೆ. ಆತನು ಆರಾಧನೆ ಮತ್ತು ಪ್ರೀತಿಯನ್ನು ತನ್ನನ್ನು ಆತ್ಮೀಕ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸುವವರಿಂದ ಮಾತ್ರವೇ ಬಯಸುತ್ತಾನೆ. ಈ ನಿಟ್ಟಿನಲ್ಲಿ ದೇವರು ಮಾನವನಿಗೆ ತನ್ನ ಇಚ್ಛಾ ಸ್ವಾತಂತ್ರ್ಯವನ್ನು ನೀಡಿದ್ದಾನೆ ಮತ್ತು ಮನುಷ್ಯನು ನೀತಿವಂತಿಕೆಯನ್ನು ಆರಿಸಿಕೊಳ್ಳಬೇಕೆಂದು ಬಯಸುತ್ತಾನೆ. ಮಾನವನು ತಾನೇ ಆರಿಸಿಕೊಳ್ಳಲು ಅನುಮತಿ ನೀಡುದುದು ಆತನಿಗೆ ದೈವೀಕ ಸಾಂಗತ್ಯದಿಂದ, ಕೃಪೆ ಮತ್ತು ಆಶೀರ್ವಾದಗಳಿಂದ ಪತನಹೊಂದಿ ಮರಣಕ್ಕೆ ಕಾರಣವಾಯಿತು. ದೇವರು ಮನುಷ್ಯನಿಗೆ ತಾತ್ವಿಕವಾಗಿ ಪಾಪ ಮತ್ತು ಅದರ ಫಲಿತಾಂಶಗಳನ್ನು ಅನುಭವಿಸದೆ ಕಲಿಯಲಿ ಎಂದು ಬಯಸಿದ್ದನ್ನು ಮಾನವನು ಪಾಪ ಮತ್ತು ಮರಣದ ಅನುಭವದಿಂದ ಕಲಿಯುತ್ತಾನೆ. ಮಾನವನು ಏನು ಮಾಡಲಿದ್ದಾನೆ ಎಂದು ದೇವರು ಮುಂತಿಳಿದವನಾಗಿದ್ದು ಅದನ್ನು ಆತನಿಗೆ ಆತನ ವಿರುದ್ಧವಾಗಿ ಆತನನ್ನು ಕೇವಲ ಒಂದು ಯಂತ್ರ ಜೀವಿಯಾಗಿ ಕೀಳುಮಟ್ಟಕ್ಕೆ ದುರುಪಯೋಗ ಪಡಿಸಿಕೊಳ್ಳುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ಅದನ್ನು ಮಾನವರ ಒಳಿತಿಗಾಗಿ ಉಪಯೋಗಿಸಲ್ಪಡುವುದು.

ಮಾನವರನ್ನು ತಾವೇ ತಾವಾಗಿ ಆಯ್ಕೆಮಾಡಿ ಕೊಳ್ಳಲು ಬಿಟ್ಟರೆ ಆತನು ತೆಗೆದುಕೊಳ್ಳುವ ಕ್ರಮವನ್ನು ದೇವರು ಮುಂಚೆಯೇ ತಿಳಿದಿರುವುದರಿಂದ ಆತನು ಪಾಪದ ರುಚಿ ನೋಡುವುದನ್ನು ಮತ್ತು ಅದರ ಕಹಿಯಾದ ಫಲಿತಾಂಶಗಳನ್ನು ಪ್ರಯೋಗಾತ್ಮಕವಾಗಿ ಅನುಭವಿಸುವುದನ್ನು ಆತನು ಅಡ್ಡಿಪಡಿಸುವುದಿಲ್ಲ. ಆದರೆ ಆತನು ಕೂಡಲೇ ಆತನ ಮೊದಲ ಅಪರಾಧದಿಂದ ಹೊರಬರುವ ಮಾರ್ಗವನ್ನು ಒಬ್ಬ ವಿಮೋಚಕನನ್ನು, ಮಹಾ ರಕ್ಷಕನನ್ನು ಕಳುಹಿಸಿಕೊಡುವ ಮೂಲಕ ಸಿದ್ಧಪಡಿಸುತ್ತಾನೆ. ಆತನ ಮೂಲಕವಾಗಿ ದೇವರ ಬಳಿಗೆ ಕಟ್ಟಕಡೆಯವರೆಗೆ ಬರುವವರನ್ನೆಲ್ಲಾ ಆತನು ರಕ್ಷಿಸುತ್ತಾನೆ. ಈ ಉದ್ದೇಶಕ್ಕಾಗಿ – ಮಾನವರು ಮುಕ್ತ ಇಚ್ಛಾಶಕ್ತಿಯನ್ನು ಹೊಂದಿರಬಹುದು, ಮತ್ತು ದೇವರ ಮಾತನ್ನು ತಪ್ಪಾಗಿ ದುರುಪಯೋಗಪಡಿಸಿಕೊಂಡು ಅದಕ್ಕೆ ಅವಿಧೇಯನಾದ ಆತನ ಮೊದಲ ವೈಫಲ್ಯದಿಂದ ಲಾಭಪಡಕೊಳ್ಳಲಿ ಎಂಬ ಕಾರಣಕ್ಕಾಗಿ ದೇವರು ಎಲ್ಲರಿಗಾಗಿ ಈಡುಬಲಿಯೊಂದನ್ನು ಒದಗಿಸಿದ್ದಾನೆ. ಈ ರೀತಿಯಾಗಿ ಆತನೊಂದಿಗೆ ಸಂಧಾನದ ಅವಕಾಶದ ಜ್ಞಾನವು ಸೂಕ್ತ ಸಮಯದಲ್ಲಿ ಸಾಕ್ಷಿ ಹೇಳುವುದಾಗಿದೆ (1 ತಿಮೋ. 2:3–6).

ದಂಡದ ತೀವ್ರತೆಯು ದೇವರ ಕಡೆಯಿಂದ ದ್ವೇಷ ಅಥವಾ ದುರುದ್ದೇಶದ ಸೂಚನೆಯ ಪ್ರದರ್ಶನವಲ್ಲ. ಆದರೆ ಅದು ಕೇಡಿನ ಅಗತ್ಯವಾದ ಮತ್ತು ಅನಿವಾರ್ಯವಾದ ಅಂತಿಮ ಫಲಿತಾಂಶವಾಗಿದೆ ಮತ್ತು ಈ ರೀತಿಯಾಗಿ ಇದನ್ನು ಮಾನವರು ನೋಡಿ ಅನುಭವಿಸುವಂತೆ ದೇವರು ಅನುಮತಿಸಿದ್ದಾನೆ. ಮಾನವನು ತನ್ನ ಜೀವವನ್ನು ಯೋಗ್ಯ ರೀತಿಯಲ್ಲಿ ಇಟ್ಟುಕೊಳ್ಳುವವರೆಗೆ, ದೇವರು ನಿಜವಾದ ಕೆಟ್ಟತನದ ವಿನಾಶಕಾರಿ ಶಕ್ತಿಯ ವಿರುದ್ಧವಾಗಿಯೂ ಮನುಷ್ಯನ ಜೀವವನ್ನು ಉಳಿಸಬಹುದು; ಆದರೆ, ದೇವರಿಗೆ ಜೀವವನ್ನು ಶಾಶ್ವತವಾಗಿ ಉಳಿಸಲು ಸಾಧ್ಯವಾಗದು. ಹಾಗೆ ಮಾಡಿದರೆ ದೇವರು ಸುಳ್ಳು ಹೇಳಿದಂತಾಗುವುದು ಅಂದರೆ ನೈತಿಕವಾಗಿ ಇದು ಅಸಾಧ್ಯವಾದ ಕಾರ್ಯವಾಗಿದೆ. ಅಂಥಾಃ ಜೀವಿತವು ಹೆಚ್ಚು ಹೆಚ್ಚಾಗಿ ಆತನಿಗೂ ಮತ್ತು ಇತರರಿಗೂ ಅಸಂತೋಷವನ್ನುಂಟು ಮಾಡುವುದಾಗಿದೆ. ಅಸ್ತಿತ್ವದಲ್ಲಿರುವ ಜೀವಿಗಳು ತನಗೂ ಇತರರಿಗೂ ಹಾನಿಕಾರಕ ಮತ್ತು ನಿಷ್ಪ್ರಯೋಜಕವಾದದನ್ನು ಜೀವಂತವಾಗಿರಿಸಲು ದೇವರು ಬಹಳ ಒಳ್ಳೆಯವನಾಗಿದ್ದಾನೆ ಮತ್ತು ಆತನ ಪೋಷಕಶಕ್ತಿಯನ್ನು ಹಿಂತೆಗೆದು ಕೊಳ್ಳಲಾಗುತ್ತದೆ, ಆಗ ಕೇಡಿನ ಸ್ವಾಭಾವಿಕ ಫಲಿತಾಂಶವಾದ ನಾಶನವು

ಸಂಭವಿಸುತ್ತದೆ. ಜೀವನವು ದೇವರು ಕೊಟ್ಟ ಭಾಗ್ಯ ಮತ್ತು ಕೊಡುಗೆಯಾಗಿದೆ ಮತ್ತು ಅದು ವಿಧೇಯರಿಗೆ ಮಾತ್ರವೇ ಸದಾಕಾಲವೂ ಮುಂದುವರೆಯುವುದು.

ಆದಾಮನ ಸಂತತಿಯವರಿಗೆ ಪ್ರತಿಯೊಬ್ಬರಿಗೂ ವ್ಯಕ್ತಿಗತವಾದ ಶೋಧನೆಯನ್ನು ಕೊಡದಿರುವಲ್ಲಿ ದೇವರು ಯಾವುದೇ ಅನ್ಯಾಯವನ್ನು ಮಾಡಲಾಗಿಲ್ಲ. ಯೆಹೋವನು ನಮ್ಮನ್ನು ಅಸ್ತಿತ್ವಕ್ಕೆ ತರಲು ಯಾವುದೇ ಅರ್ಥದಲ್ಲಿ ಬದ್ಧನಾಗಿರಲಿಲ್ಲ, ಮತ್ತು ನಮ್ಮನ್ನು ಜೀವಿಗಳನ್ನಾಗಿ ತಂದ ನಂತರ, ನಮ್ಮ ಇರುವಿಕೆಯು ಚಿರಸ್ಥಾಯಿಯಾಗಿರುವಂತೆ ಯಾವುದೇ ವಿಧವಾದ ಸಮಾನತೆ ಅಥವಾ ನ್ಯಾಯದ ಕಾನೂನು ನಮ್ಮ ಅಸ್ತಿತ್ವವನ್ನು ಶಾಶ್ವತವಾಗಿ ಉಳಿಸಲು ಆತನನ್ನು ಬಂಧಿಸಲಿಲ್ಲ, ಅಥವಾ ವಿಧೇಯರಾಗಿದ್ದರೆ ನಿತ್ಯ ಜೀವದ ಭರವಸೆಯ ಅಡಿಯಲ್ಲಿ ಪ್ರಯೋಗವನ್ನು ನೀಡುವುದಿಲ್ಲ. ಈ ಅಂಶವನ್ನು ಚೆನ್ನಾಗಿ ಗುರುತಿಸಿರಿ. ಪ್ರಸ್ತುತ ಜೀವನವು, ತೊಟ್ಟಿಲಿನಿಂದ ಸಮಾಧಿಯವರೆಗೆ ಒಂದು ಸಾಯುವ ಪ್ರಕ್ರಿಯೆಯಾಗಿದ್ದು, ಅದು ಅದರ ಎಲ್ಲಾ ಕೆಡುಕುಗಳ ಮತ್ತು ನಿರಾಶೆಗಳ ನಡುವೆ ಅದು ಒಂದು ಅನುಗ್ರಹ ಅಥವಾ ದಯೆಯಾಗಿದೆ. ಇಲ್ಲಿಂದ ಮುಂದೆ ಅವುಗಳು ಇಲ್ಲವಾದರೂ ಸಹ. ಹೆಚ್ಚಿನವರು ಅದನ್ನು ಹಾಗೆ ಪರಿಗಣಿಸುತ್ತಾರೆ. ಇದಕ್ಕೆ ವಿನಾಯಿತಿಗಳು (ಆತ್ಮಹತ್ಯೆಗಳು) ತುಲನಾತ್ಮಕವಾಗಿ ಬಹಳ ಕಡಿಮೆ. ಇವುಗಳನ್ನು ನಮ್ಮ ನ್ಯಾಯಾಲಯಗಳು ಮಾನಸಿಕವಾಗಿ ಸಮತೋಲನವಿಲ್ಲದಿರುವುದು ಎಂಬದಾಗಿ ಬಾರಿ ಬಾರಿ ನಿರ್ಧರಿಸಿವೆ. ಇಲ್ಲವಾದಲ್ಲಿ ಅವರು ತಮ್ಮನ್ನು ಈ ರೀತಿಯಾಗಿ ಪ್ರಸ್ತುತ ಆಶೀರ್ವಾದಗಳಿಂದ ಕಡಿತಗೊಳಿಸಿಕೊಳ್ಳುತ್ತಿರಲಿಲ್ಲ. ಅಲ್ಲದೇ, ಸರ್ವ ಸಂಪೂರ್ಣವಾದ ಮಾನವನಾದ ಆದಾಮನ ನಡತೆ, ಆತನ ಮಕ್ಕಳ ನಡತೆ ಅಂತಹುದೇ ಆದ ಪರಿಸ್ಥಿತಿಯಲ್ಲಿ ಹೇಗಿರಬಹುದೆಂದು ತೋರಿಸಿದ್ದಾನೆ.

ಅನೇಕರು ದೇವರು ನಮ್ಮ ಸಂತತಿಯನ್ನು ಜೀವಕ್ಕಾಗಿ ಶೋಧನೆಯಲ್ಲಿರಿಸಿ ನಿತ್ಯಯಾತನೆ ಎಂಬ ಪರ್ಯಾಯದೊಂದಿಗೆ ಇಟ್ಟಿದ್ದಾನೆಂಬ ತಪ್ಪಾದ ಅಭಿಪ್ರಾಯವನ್ನು ಅಳವಡಿಸಿಕೊಂಡಿದ್ದಾರೆ. ಆದರೆ, ಈ ರೀತಿಯ ಯಾವುದೇ ವಿಷಯವು ದಂಡನೆಯಲ್ಲಿ ಸೂಚಿಸಲಾಗಿಲ್ಲ. ತನ್ನ ವಿಧೇಯ ಮಕ್ಕಳಿಗೆ ದೇವರು ನೀಡುವ ದಯೆ ಅಥವಾ ಆಶೀರ್ವಾದವು ಜೀವ – ನಿತ್ಯವಾದ ಜೀವವಾಗಿದೆ – ಅದು ವೇದನೆಗಳಿಂದ, ರೋಗಗಳಿಂದ, ಕೊಳೆಯುವ ಅವಸ್ಥೆಯಿಂದ ಮತ್ತು ಮರಣದಿಂದ ಮುಕ್ತವಾಗಿದೆ. ಆದಾಮನಿಗೆ ಈ ಆಶೀರ್ವಾದವನ್ನು ಪೂರ್ಣಪ್ರಮಾಣದಲ್ಲಿ ನೀಡಲಾಗಿತ್ತು. ಆದರೆ ಆತನು ದೇವರಿಗೆ ಅವಿಧೇಯನಾದರೆ ಈ ಅನುಗ್ರಹವನ್ನು ಕಸಕೊಳ್ಳಲಾಗುವುದೆಂದು ಆತನಿಗೆ ಎಚ್ಚರಿಸಲಾಗಿತ್ತು – "ಒಳ್ಳೇದರ ಕೆಟ್ಟದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ಮಾತ್ರ ತಿನ್ನಬಾರದು; ತಿಂದ ದಿನ ಸತ್ತೇ ಹೋಗುವಿ" (ಆದಿ. 2:17) ಎಂದು ದೇವರು ಆಜ್ಞಾಪಿಸಿದ್ದನು. ಆತನಿಗೆ ಪಾಪದ ದಂಡನೆಯಾದ ಯಾತನೆಯ ಜೀವನ ಹೇಗಿರುತ್ತೆಂಬುದರ ಬಗ್ಗೆ ಏನೂ ಗೊತ್ತಿರಲಿಲ್ಲ. ನಿತ್ಯಜೀವವು ವಿಧೇಯರಿಗಲ್ಲದೆ ಬೇರೆ ಯಾರಿಗೂ ಎಲ್ಲಿಯೂ ವಾಗ್ದಾನ ಮಾಡಲ್ಪಟ್ಟಿಲ್ಲ. ಜೀವವು ದೇವರ ಕೊಡುಗೆಯಾಗಿದೆ ಮತ್ತು ಮರಣವು ಜೀವದ ವಿರುದ್ಧವಾದುದು, ಈ ದಂಡನೆಯನ್ನು ಆತನೇ ವಿಧಿಸಿದ್ದಾನೆ.

ನಿತ್ಯ ಯಾತನೆಯನ್ನು ಹಳೆಒಡಂಬಡಿಕೆಯ ವೇದಭಾಗಗಳಲ್ಲಿ ಎಲ್ಲಿಯೂ ಸಲಹೆ ಮಾಡಿರುವುದಿಲ್ಲ. ಮತ್ತು ಹೊಸ ಒಡಂಬಡಿಕೆಯ ಕೇವಲ ಕೆಲವು ಹೇಳಿಕೆಗಳನ್ನು ಆ ರೀತಿಯಾಗಿ ತಪ್ಪಾಗಿ ಅರ್ಥೈಸಿ ಅದನ್ನು ಬೋಧಿಸುವಂತೆ ಕಂಡುಬರುತ್ತವೆ. ಇವುಗಳು ಪ್ರಕಟನೆಯ ಪುಸ್ತಕದ ಸಾಂಕೇತಿಕತೆಗಳಲ್ಲಿ ಮತ್ತು ಕರ್ತನ ಸಾಮ್ಯಗಳಲ್ಲಿ ಮತ್ತು ಕರ್ತನ ಗೂಢಾರ್ಥಗಳಲ್ಲಿ ಅಪಾರ್ಥವಾಗಿ ಕಂಡುಬರುತ್ತವೆ. ಅದನ್ನು ಕೇಳಿಸಿಕೊಂಡ ಜನರಿಗೆ ಆಗ ಅರ್ಥವಾಗಲಿಲ್ಲ (ಲೂಕ 8:10). ಆದರೆ ಅದನ್ನು ಈಗ ಸ್ವಲ್ಪಮಟ್ಟಿಗೆ ಅರ್ಥಮಾಡಿಕೊಳ್ಳಬಹುದೆಂದು ತೋರುತ್ತದೆ. "ಪಾಪದ ಸಂಬಳ ಮರಣ" (ರೋಮಾ. 6 :23). "ಪಾಪ ಮಾಡುವ ಪ್ರಾಣಿಯೇ ಸಾಯುವುದು" (ಯೆಹೆಜ್ಕೇಲ 18:4).

ಆದಾಮನ ದಂಡನೆಯಲ್ಲಿ ಆತನ ಸಂತಾನದವರು ಪಾಲುದಾರರಾಗುವಂತೆ ಮಾಡಿರುವುದು ಅನ್ಯಾಯ. ಇದಕ್ಕೆ ಬದಲಾಗಿ ಪ್ರತಿಯೊಬ್ಬರಿಗೂ ಆದಾಮನು ಅನುಭವಿಸಿದ್ದ ನಿತ್ಯಜೀವವನ್ನು ಹೊಂದಿಕೊಳ್ಳುವಂತೆ ಒಂದು ಪರೀಕ್ಷೆ ಅಥವಾ ಅವಕಾಶವನ್ನು ನೀಡಬಹುದಿತ್ತೆಂದು ಹಲವರು ಭಾವಿಸುತ್ತಾರೆ. ಆದರೆ ಲೋಕಕ್ಕೆ ಈಗ ಜೀವಕ್ಕಾಗಿ ಶೋಧನೆಗಳು ಅವಕಾಶಗಳು ಮತ್ತು ಆದಾಮನ ಕಾಲಕ್ಕಿಂತ ಹೆಚ್ಚು ಅನುಕೂಲಕರವಾಗಿದೆ ಎಂದು ಅಂಥವರಿಗೆ ತೋರಿಸಿಕೊಟ್ಟರೆ ಮತ್ತೂ ಅದಲ್ಲದೇ, ದೇವರು ಆದಾಮನ ಸಂತತಿಯವರಿಗೆ ಈ ದಂಡನೆಯನ್ನು ಸ್ವಾಭಾವಿಕವಾಗಿ ಹಂಚಿಕೊಳ್ಳುವಂತೆ ಅನುಮತಿಸುವ ಯೋಜನೆಯುನ್ನು ಅಳವಡಿಸಿದ್ದಾನೆ ಎಂದು ತೋರಿಸಿಕೊಟ್ಟರೆ ಏನನ್ನುತ್ತಾರೆ? ಇದೇ ಆಗಿದೆಯೆಂದು

ನಾವು ನಂಬುತ್ತೇವೆ ಮತ್ತು ಅದನ್ನು ಸರಳಗೊಳಿಸಲು ಪ್ರಯತ್ನಿಸುತ್ತೇವೆ.

ಆದಾಮನಲ್ಲಿರುವವರೆಲ್ಲರಿಗೂ ಈ ದಂಡನೆಯು ಜಾರಿಯಾಯಿತು, ಹಾಗಾಗಿ, ದೇವರು ಆತನ ಸಂತಾನದವರಿಗೆ ನೂತನ ಶಿರಸ್ಸನ್ನು, ತಂದೆ ಅಥವಾ ಜೀವದಾಯಕನನ್ನು ವ್ಯವಸ್ಥೆ ಮಾಡಿದ್ದಾನೆ. ಆದಾಮನಲ್ಲಿರುವವರೆಲ್ಲರೂ ಪಾಪದಲ್ಲಿ ಪಾಲುದಾರರಾದಂತೆ, ಕ್ರಿಸ್ತನಲ್ಲಿ ಎಲ್ಲರೂ ನಂಬಿಕೆ ಮತ್ತು ವಿಧೇಯತೆಯ ಮೂಲಕವಾಗಿ ವರ್ಗಾವಣೆಯಾಗಬಹುದು. ಹೀಗಾಗಿ ಕ್ರಿಸ್ತನಲ್ಲಿರುವ ವರೆಲ್ಲರೂ ಪುನರ್‌ವಶದ ಆಶೀರ್ವಾದಗಳಲ್ಲಿ ಪಾಲುದಾರರಾಗುವರು; ಸಭೆಯು ಇದಕ್ಕೆ ಹೊರತಾಗಿದೆ (ರೋಮಾ. 5:12, 18,19). ಹೀಗೆ ನಿಷ್ಕಳಂಕನೂ, ಪಾಪರಹಿತನೂ ಆದ ಯೇಸುವಿನ ಮರಣವು ಆದಾಮನ ಪಾಪಕ್ಕೆ ದೇವರಿಗೆ ಒದಗಿಸಿದ ಸಂಪೂರ್ಣವಾದ ಪರಿಹಾರವಾಗಿ ತೋರಿಬಂತು. ಒಬ್ಬನು ಪಾಪಮಾಡಿ, ಆತನಲ್ಲಿ ಎಲ್ಲರೂ ಆ ಶಾಪದಲ್ಲಿ, ದಂಡನೆಯಲ್ಲಿ ಪಾಲುದಾರರಾದಂತೆ, ಯೇಸು, ಒಬ್ಬ ಪಾಪಿಗೆ ದಂಡವನ್ನು ಪಾವತಿಸಿದ್ದರಿಂದ ಆದಾಮನಿಗೆ ಮಾತ್ರವಲ್ಲದೇ ಆತನ ಸಂತತಿಯವರೆಲ್ಲರಿಗೂ ಈಡುಬಲಿಯನ್ನು ಒದಗಿಸಿಕೊಟ್ಟಿದ್ದಾನೆ. ಎಲ್ಲಾ ಜನರು ವಂಶಪಾರಂಪರ್ಯವಾಗಿ ಆತನ ಬಲಹೀನತೆಗಳಲ್ಲಿಯೂ, ಪಾಪದಲ್ಲಿಯೂ, ಅದರ ದಂಡನೆಯಾದ ಮರಣದಲ್ಲಿಯೂ ಪಾಲುದಾರರಾಗಿದ್ದಾರೆ. ನಮ್ಮ ಕರ್ತನಾದ "ಮನುಷ್ಯನಾದ ಕ್ರಿಸ್ತ ಯೇಸು"ವು ತಾನೇ ನಿಷ್ಕಳಂಕನಾಗಿದ್ದು, ಅನುಮೋದಿತನಾಗಿದ್ದು ಮತ್ತು ಆತನಲ್ಲಿ ಸರ್ವಸಂಪೂರ್ಣವಾದ ಸಂತತಿಯನ್ನು ಹೊಂದಿದ್ದು, ಪಾಪದಲ್ಲಿ ಹುಟ್ಟದೆ, ಪಾಪ ಕಳಂಕವಿಲ್ಲದೆ ಇದ್ದ ಆತನ ಮಾನವತ್ವವೆಲ್ಲವನ್ನೂ ಮತ್ತು ಈಡುಬಲಿಯ ಪೂರ್ಣಬೆಲೆ ಎಂಬ ಬಿರುದನ್ನು ಆದಾಮ ಮತ್ತು ಆತನಲ್ಲಿರುವ ಸಂತತಿಯವರು ದಂಡನೆಯಲ್ಲಿರುವಾಗ ಒಪ್ಪಿಸಿಕೊಟ್ಟನು.

ಆದಾಮನ ಮತ್ತು ಆತನ ಸಂತತಿಯವರ ಜೀವಗಳನ್ನು ಪೂರ್ಣವಾಗಿ ಕೊಂಡುಕೊಂಡ ನಂತರ, ಕ್ರಿಸ್ತನು ಆತನ (ಆದಾಮನ) ಮಕ್ಕಳನ್ನು ತನ್ನ ಸಂತತಿಯವರನ್ನಾಗಿ ಅಂಗೀಕರಿಸುತ್ತಾನೆ ಮತ್ತು ಯಾರ್‍ಯಾರು ಆತನ ನೂತನ ಒಡಂಬಡಿಕೆಯ ಷರತ್ತುಗಳನ್ನು ಒಪ್ಪಿಕೊಳ್ಳುತ್ತಾರೋ ಅವರು ಈ ರೀತಿಯಾಗಿ ನಂಬಿಕೆ ಮತ್ತು ವಿಧೇಯತೆಯ ಮೂಲಕ ದೇವರ ಕುಟುಂಬಕ್ಕೆ ಬರುತ್ತಾರೆ. ಮಾತ್ರವಲ್ಲದೆ ನಿತ್ಯಜೀವವನ್ನು ಹೊಂದಿಕೊಳ್ಳುತ್ತಾರೆ. ಈ ರೀತಿಯಾಗಿ ವಿಮೋಚಕನು "ತನ್ನ ಸಂತಾನವನ್ನು ಕಾಣುತ್ತಾನೆ" (ಆದಾಮನ ಸಂತತಿಯ ಅನೇಕರು ದತ್ತುಪುತ್ರರ ಪದವಿಯನ್ನು ಆತನ ಷರತ್ತಿನ ಮೇಲೆ ಅಂಗೀಕರಿಸುತ್ತಾರೆ) ಮತ್ತು ಚಿರಂಜೀವಿಯಾಗುವನು (ಪುನರುತ್ಥಾನವು ಮಾನವ ಸಮತಲಕ್ಕಿಂತ ಎತ್ತರವಾಗಿ ಆತನ ವಿಧೇಯತೆಯ ನಿಮಿತ್ತ ತಂದೆಯಿಂದ ದಯಪಾಲಿಸಲ್ಪಡುತ್ತದೆ) – ಜೀವ ಮತ್ತು ಸಂತತಿಯನ್ನು ತ್ಯಾಗ ಮಾಡುವ ಅಸಂಭವನೀಯ ರೀತಿಯ ಮಾರ್ಗವಾಗಿದೆ. ಆದುದರಿಂದ – "ಯಾವ ಪ್ರಕಾರ ಆದಾಮನ ಸಂಬಂಧದಿಂದ ಎಲ್ಲರೂ ಸಾಯುವವರಾದರೋ ಅದೇ ಪ್ರಕಾರ ಕ್ರಿಸ್ತನ ಸಂಬಂಧದಿಂದ ಎಲ್ಲರೂ ಜೀವಿತರಾಗುವರು" (1 ಕೊರಿಂಥ 15:22) ಎಂದು ಬರೆದದೆ.

ಆದಾಮನ ಪತನದಿಂದ ನಾವು ಪಡೆದ ಹಾನಿಯು (ನಾವು ಯಾವುದೇ ಅನ್ಯಾಯವನ್ನು ಅನುಭವಿಸಲಿಲ್ಲ) ದೇವರ ಅನುಗ್ರಹದಿಂದ ಕ್ರಿಸ್ತನ ದಯೆಯ ಮೂಲಕವಾಗಿ ಸರಿದೂಗಿಸುವದಕ್ಕಿಂತಲೂ ಹಿತ ಮಿಗಿಲಾದುದು ಮತ್ತು ಎಲ್ಲರೂ ಬೇಗನೇ ಅಥವಾ ತಡವಾಗಿ (ದೇವರ ತಕ್ಕ ಸಮಯದಲ್ಲಿ) ಆದಾಮನು ಪಾಪಮಾಡುವ ಮೊದಲು ಅನುಭವಿಸುತ್ತಿದ್ದ ಅದೇ ಸ್ಥಾನಕ್ಕೆ ಮರುಸ್ಥಾಪಿಸಲು ಸಂಪೂರ್ಣ ಅವಕಾಶವನ್ನು ಹೊಂದಿರುತ್ತಾರೆ. ಯಾರು ಪೂರ್ಣ ಜ್ಞಾನವನ್ನು ಮತ್ತು ಪ್ರಸ್ತುತ ಸಮಯದಲ್ಲಿ ನಂಬಿಕೆಯ ಮೂಲಕ ದೇವರ ಈ ಕೃಪೆಯನ್ನು ಪಡೆಯದೇ ಇರುವರೋ (ಅಂಥವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ, ಮಕ್ಕಳೂ, ಅನ್ಯಜನರೂ ಇದರಲ್ಲಿ ಸೇರಿದ್ದಾರೆ) ಪ್ರಸ್ತುತ ಸಮಯವನ್ನು ಅನುಸರಿಸಿ ಬರಲಿರುವ ಯುಗದಲ್ಲಿ ಈ ಸವಲತ್ತುಗಳನ್ನು ಖಚಿತವಾಗಿ ಪಡೆದುಕೊಳ್ಳುತ್ತಾರೆ. ಈ ಅಂತ್ಯಕ್ಕೆ ಸಮಾಧಿಯಲ್ಲಿರುವವರೆಲ್ಲರೂ.... ಎದ್ದು ಬರುವರು). ಪ್ರತಿಯೊಬ್ಬರೂ (ಇಂದಿನ ಅಥವಾ ಮುಂದಿನ ಯುಗದಲ್ಲಿ) ಯೇಸುಕ್ರಿಸ್ತನು ಸಮರ್ಪಿಸಿರುವ ಈಡು ಬಲಿಯ ಬಗ್ಗೆ, ನಂತರ ದೊರೆತ ಸವಲತ್ತುಗಳ ಬಗ್ಗೆ ಪೂರ್ಣ ಅರಿವುಳ್ಳವರಾಗಿರುತ್ತಾರೆ, ಮತ್ತು ಆದಾಮನಂತೆ ಪರೀಕ್ಷೆಗೆ ಒಳಪಡಿಸಿದ ತರುವಾಯ. ವಿಧೇಯತೆಯು ಶಾಶ್ವತವಾದ ಜೀವಿತವನ್ನು ತರುತ್ತದೆ, ಮತ್ತು ಅವಿಧೇಯತೆಯು ಮರಣವನ್ನು ಅಂದರೆ ಎರಡನೆಯ ಮರಣವನ್ನು ತರುತ್ತದೆ. ಆದಾಗ್ಯೂ, ಅಪರಿಪೂರ್ಣವಾದ ಮನುಷ್ಯರಿಗೆ ತನ್ನಲ್ಲಿ ಪರಿಪೂರ್ಣವಾದ ಸಾಮರ್ಥ್ಯವಿರದ ಕಾರಣ ಪರಿಪೂರ್ಣವಾದ

* ನರಕ ಎಂದು ಕಂಡು ಬರುವ ಕರಪತ್ರವನ್ನು ನಾವು ನಿಮಗೆ 10 ಸೆಂಟುಗಳಿಗೆ ಒದಗಿಸುತ್ತೇವೆ.

ವಿಧೇಯತ್ವವನ್ನು ನಿರೂಪಿಸಲು ಸಾಧ್ಯವಿಲ್ಲ – (ಸಮರ್ಪಕ ಸಾಮರ್ಥ್ಯವಿಲ್ಲದೇ ಯಾರೊಬ್ಬನೂ ಅಪೇಕ್ಷಿಸುವಂತಿಲ್ಲ). ಕೃಪಾ ಒಡಂಬಡಿಕೆಯ ಅಡಿಯಲ್ಲಿ, ಸುವಾರ್ತಾ ಯುಗದಲ್ಲಿ ಸಭೆಯ ಸದಸ್ಯರಿಗೆ, ಅವರ ನಂಬಿಕೆಯ ಮೂಲಕ ಕ್ರಿಸ್ತನ ನೀತಿವಂತಿಕೆಯು ಅವರ ಅನಿವಾರ್ಯವಾದ ದೈಹಿಕ ಕೊರತೆಗಳನ್ನು ಭರಿಸುವಂತೆ ಹೊರಿಸಲ್ಪಡುತ್ತದೆ. ದೈವಿಕ ಕೃಪೆಯು ಸಹಾ ಸಹಸ್ರಮಾನದಲ್ಲಿ ಲೋಕದ ''ಇಷ್ಟವುಳ್ಳ ಯಾರಿಗಾದರೂ'' ಕಾರ್ಯವೆಸಗುತ್ತದೆ. ಶಾರೀರಿಕ ಪರಿಪೂರ್ಣತೆಯನ್ನು ತಲುಪುವತನಕ (ಅದು ಸಹಸ್ರಮಾನದ ಅಂತ್ಯದೊಳಗಾಗಿ ಎಲ್ಲರಿಗೂ ತಲುಪುವ ಸೌಲಭ್ಯವಾಗಿದೆ) ಪೂರ್ಣ ಪ್ರಮಾಣದ ನೈತಿಕ ಪರಿಪೂರ್ಣತೆಯನ್ನು ನಿರೀಕ್ಷಿಸಲಾಗುವುದು. ಈಡುಬಲಿಯ ಮತ್ತು ನೂತನ ಒಡಂಬಡಿಕೆಯ ಫಲವಾದ ನೂತನ ಪರೀಕ್ಷೆಯು ಏದೇನಿನ ಪರೀಕ್ಷೆಗಿಂತ ಭಿನ್ನವಾಗಿರುತ್ತದೆ. ಅದರಲ್ಲಿ ಪ್ರತಿಯೊಬ್ಬರ ಕಾರ್ಯವೂ ಆತನ ಸ್ವಂತ ಭವಿಷ್ಯದ ಮೇಲೆ ಮಾತ್ರವೇ ಪರಿಣಾಮವನ್ನುಂಟುಮಾಡುತ್ತದೆ.

ಹಾಗಾದರೆ ಇದು ಸಂತತಿಯ ಅನೇಕರಿಗೆ ನಿತ್ಯಜೀವವನ್ನು ಪಡಕೊಳ್ಳುವಂತೆ ಎರಡನೆಯ ಅವಕಾಶವನ್ನು ನೀಡುವುದಲ್ಲವೇ? ಇದಕ್ಕೆ ನಮ್ಮ ಉತ್ತರ – ನಿತ್ಯಜೀವದ ಮೊದಲನೆಯ ಅವಕಾಶ ತಂದೆಯಾದ ಆದಾಮ ಮತ್ತು ಇನ್ನೂ ಆತನ ಟೊಂಕದಲ್ಲಿರುವ ಆತನ ಸಂತತಿಯವರಿಗೆ ಆತನ ಅವಿಧೇಯತೆಯ ದೆಸೆಯಿಂದ ತಪ್ಪಿಹೋಯಿತು. ಆ ಮೂಲ ಪರೀಕ್ಷೆಯ ಅಡಿಯಲ್ಲಿ ಎಲ್ಲಾ ಮನುಷ್ಯರ ಮೇಲೆ ದಂಡನೆಯು ಹಾದುಬಂತು; ಮತ್ತು ದೇವರ ಯೋಜನೆಯೇನೆಂದರೆ ಕ್ರಿಸ್ತನ ವಿಮೋಚನಾ ಸಮರ್ಪಣೆಯ ಮೂಲಕ, ಆದಾಮನ ಮತ್ತು ಆತನ ವಿಫಲತೆಯ ಕಾರಣ ಜೀವ ಕಳಕೊಂಡವರೆಲ್ಲರೂ ಅತ್ಯಧಿಕವಾದ ಪಾಪದ ಸ್ವರೂಪವನ್ನು ಅನುಭವಿಸಿದವರು ಮತ್ತು ಪಾಪದ ದಂಡನೆಯ ಭಾರವನ್ನು ತಿಳಿದವರಿಗೆ ವಿಮೋಚಕನನ್ನು ನಂಬುವುದರ ಮೂಲಕ ದೇವರ ಕಡೆಗೆ ಹಿಂದುರಿಗಿ ಬರುವ ಅವಕಾಶವನ್ನು ನೀಡಲಾಗುವುದು. ಯಾರಾದರೂ ಇದನ್ನು 'ಎರಡನೆಯ ಅವಕಾಶ' ಎಂದು ಕರೆಯಲು ಆರಿಸಿಕೊಳ್ಳುವುದಾದರೆ, ಆತನು ಹಾಗೆಯೇ ಮಾಡಲಿ; ಅದು ನಿಜವಾಗಿಯೂ ಆದಾಮನ ಎರಡನೆಯ ಅವಕಾಶವಾಗಿದೆ, ಮತ್ತು ಒಂದು ಅರ್ಥದಲ್ಲಿ ಅದು ಕನಿಷ್ಟಪಕ್ಷ ವಿಮೋಚನೆಗೊಂಡ ಜನಾಂಗದವರಿಗೆಲ್ಲಾ ಒಂದೇ ಆಗಿರುತ್ತದೆ. ಆದರೆ ಅದು ಆತನ ವಂಶಸ್ಥರಿಗೆ ಮೊದಲನೆಯ ವೈಯುಕ್ತಿಕ ಅವಕಾಶವಾಗಿದೆ. ಅವರು ಹುಟ್ಟಿದಾಗಲೇ ಮರಣದ ದಂಡನೆಗೆ ಒಳಗಾಗಿದ್ದರು. ಅದನ್ನು ನಿಮಗೆ ಸರಿ ಎಣಿಸಿದಂತೆ ಕರೆಯಿರಿ, ವಾಸ್ತವಗಳು ಅದೇ ಆಗಿರುತ್ತವೆ. ಯಾವುದೆಂದರೆ: ಆದಾಮನ ಅವಿಧೇಯತೆಯ ದೆಸೆಯಿಂದ ಎಲ್ಲರೂ ಮರಣದ ದಂಡನೆಯನ್ನು ಹೊಂದಿಕೊಂಡರು. ಆದರೆ ಎಲ್ಲರೂ ಸಹಸ್ರಮಾನ ಯುಗದಲ್ಲಿ ನೂತನ ಒಡಂಬಡಿಕೆಯಡಿ ಅನುಕೂಲಕರ ಷರತ್ತಿನ ಮೇರೆಗೆ ನಿತ್ಯಜೀವವನ್ನು ಪಡಕೊಳ್ಳುವ ಪೂರ್ಣ ಅವಕಾಶವನ್ನು ಹೊಂದುವರು. ಇದು, ದೇವದೂತರುಗಳು ಪ್ರಕಟಿಸುವಂತೆ, "ಎಲ್ಲರಿಗೂ, ಮಹಾ ಸಂತೋಷದ ಶುಭಸಮಾಚಾರವಾಗಿದೆ'' ಮತ್ತು ಅಪೋಸ್ತಲನು ಹೇಳುವಂತೆ ಇದು ದೇವರ ಕೃಪೆಯೇ – ಯೇಸು ತನ್ನನ್ನು ಎಲ್ಲರಿಗಾಗಿ ಈಡುಬಲಿಯನ್ನಾಗಿ ಅರ್ಪಿಸಿದ ಈ ಕೃಪೆಯನ್ನು ತಕ್ಕಸಮಯದಲ್ಲಿ ಸಾಕ್ಷಿಹೇಳಬೇಕಾಗಿರುವುದು (ರೋಮಾ. 5:17–19; 1 ತಿಮೊ. 2:4–6) ಮನುಷ್ಯರು ದೇವರಲ್ಲ, ಮನುಷ್ಯರು ಜೀವವನ್ನು ಹೊಂದಿಕೊಳ್ಳುವ ಈ ಅವಕಾಶವನ್ನು ಸುವಾರ್ತಾಯುಗಕ್ಕೆ ಸೀಮಿತಗೊಳಿಸಿದ್ದಾರೆ. ಆದರೆ ದೇವರು, ಇದಕ್ಕೆ ವ್ಯತಿರಿಕ್ತವಾಗಿ, ನಮಗೆ ಹೇಳುವುದೇನೆಂದರೆ, ಸುವಾರ್ತಾ ಯುಗವು ಕೇವಲ ಸಭೆಯನ್ನು, ರಾಜವಂಶ ಯಾಜಕತ್ವವನ್ನು ಆಯ್ದು ಕೊಳ್ಳುವುದಕ್ಕೆ ಮಾತ್ರ, ಅವರ ಮೂಲಕ ಮುಂಬರುವ ಯುಗದಲ್ಲಿ, ಉಳಿದವರೆಲ್ಲರೂ ಕರಾರುವಾಕ್ಕಾದ ಜ್ಞಾನಕ್ಕೆ ಬರುತ್ತಾರೆ ಮತ್ತು ಅವರಿಗೆ ನೂತನ ಒಡಂಬಡಿಕೆಯ ಅಡಿಯಲ್ಲಿ ನಿತ್ಯಜೀವವನ್ನು ಪಡಕೊಳ್ಳುವ ಪೂರ್ಣಾವಕಾಶವನ್ನು ನೀಡಲಾಗುವುದು.

ಆದರೆ, ಈ ಪದ್ಧತಿಯನ್ನು ಅನುಸರಿಸುವ ವಿಧಾನದಲ್ಲಿ ಯಾವ ಲಾಭವಿದೆ? ಎಲ್ಲಾ ಮಾನವರಿಗೂ ಆದಾಮನ ಪರೀಕ್ಷೆ ಮತ್ತು ದಂಡನೆಯ ದೀರ್ಘ ಪ್ರಕ್ರಿಯೆಯಿಲ್ಲದೆ ಮತ್ತು ಆತನ ಸಂತತಿಯವರಿಗೆ ಆ ದಂಡನೆಯಲ್ಲಿ ಪಾಲು ಇವುಗಳಿಲ್ಲದೆ, ಕ್ರಿಸ್ತನ ವಿಮೋಚನೆಯಿಂದ ಎಲ್ಲರಿಗೆ ರಕ್ಷಣೆ ಮತ್ತು ನೂತನ ಒಡಂಬಡಿಕೆ ಷರತ್ತುಗಳ ಮೂಲಕ ಎಲ್ಲರಿಗೂ ನಿತ್ಯಜೀವದ ಅವಕಾಶವನ್ನು ಎಲ್ಲರಿಗೂ ಅವಕಾಶವನ್ನು ಈ ಕೂಡಲೇ ಯಾಕೆ ಕೊಡಬಾರದು? ಮಾನವನ ಮುಕ್ತ ನೀತಿಯ ಪಾರುಪತ್ಯದ ಕಾರಣ ಕೇಡನ್ನು ಅನುಮತಿಸಲೇ ಬೇಕಾದರೆ, ಅದರ ನಿರ್ನಾಮವನ್ನು ಅಂಥಾಃ ವಿಚಿತ್ರವಾದ ಮತ್ತು ಬಳಸಾಗಿ (circuitous) ಸುತ್ತುಕೊಂಡು ಹೋಗುವ ರೀತಿಯಲ್ಲಿ ಯಾಕೆ ಮಾಡಬೇಕು? ಅಷ್ಟೊಂದು – ದುಃಸ್ಥಿತಿಗಳು ಮಧ್ಯ ಪ್ರವೇಶಿಸಲು ಮತ್ತು ಅಂತ್ಯದಲ್ಲಿ ವಿಧೇಯ ಮಕ್ಕಳಾಗುವ ಮೂಲಕ ಜೀವವೆಂಬ ದೇವರ ಬಹುಮಾನವನ್ನು

ಹೊಂದಲಿರುವ ಅನೇಕರ ಮೇಲೆ ಬರಲು ಯಾಕೆ ಬಿಡಬೇಕು?

ಆಹಾ! ಈ ಅಂಶದ ಮೇಲೆಯೆ ಈ ವಿಷಯದ ಬಗ್ಗೆಯೇ ಕುತೂಹಲವು ಕೇಂದ್ರೀಕೃತವಾಗಿರುವ ಅಂಶವಾಗಿದೆ. ನಮ್ಮ ಜಾತಿಗಳ/ವರ್ಗಗಳ ಪ್ರಸರಣದ ಬಗ್ಗೆ ಮಕ್ಕಳು ತಮ್ಮ ತಂದೆತಾಯಿಗಳ ಪಾಪದಲ್ಲಿ – ಮಾನಸಿಕ, ನೈತಿಕ ಮತ್ತು ಭೌತಿಕವಾದ ಬಲಹೀನತೆಗಳ ಬಗ್ಗೆ ಪಾಲುತೆಗೆದುಕೊಳ್ಳದಂತೆ ದೇವರು ವಿಭಿನ್ನ ರೀತಿಯಲ್ಲಿ ಆಜ್ಞಾಪಿಸಿದ್ದರೆ, ಮತ್ತು ಸೃಷ್ಟಿಕರ್ತನು ಎಲ್ಲರನ್ನು ಪರೀಕ್ಷಿಸಲು ಅನುಕೂಲಕರವಾದ ಪರಿಸ್ಥಿತಿಯನ್ನು ಏದೇನ್‌ನಲ್ಲಿ ಒದಗಿಸಿಕೊಟ್ಟಿದ್ದರೆ, ಮತ್ತು ಅಪರಾಧಿಗಳು ಮಾತ್ರವೇ ಶಿಕ್ಷೆಗೊಳಗಾಗುವಂತಿದ್ದರೆ, ತೆಗೆದುಹಾಕಲ್ಪಡುವಂತಿದ್ದರೆ, ನಮ್ಮಲ್ಲಿ ಎಷ್ಟು ಜನರು ಈ ಅನುಕೂಲಕರ ಪರಿಸ್ಥಿತಿಯಲ್ಲಿ ಯೋಗ್ಯರಾಗಿ ಕಂಡುಬರುತ್ತಿದ್ದರು?, ಮತ್ತು ಎಷ್ಟು ಜನರು ಜೀವಕ್ಕೆ ಅನರ್ಹರಾಗುತ್ತಿದ್ದರು? ಎಂದು ಊಹಿಸಬಹುದು.

ಆದಾಮನ ಒಂದು ನಿರ್ದಿಷ್ಟ ಸಂದರ್ಭವನ್ನು ಮಾತ್ರವೇ ಮಾನದಂಡವಾಗಿ ತೆಗೆದುಕೊಳ್ಳುವುದಾದರೆ (ಆತನು ನಿಶ್ಚಯವಾಗಿಯೂ ಎಲ್ಲಾ ವಿಧದಲ್ಲಿ ಒಂದು ಪರಿಪೂರ್ಣ ವ್ಯಕ್ತಿಯ ಮಾದರಿಯಾಗಿದ್ದನು), ಅದರ ತೀರ್ಮಾನವೆಂದರೆ, ಬೇರೆ ಯಾರೂ ಕೂಡಾ ಸರ್ವಸಂಪೂರ್ಣವಾಗಿ ವಿಧೇಯರಾಗಿ ಮತ್ತು ಯೋಗ್ಯರಾಗಿ ಕಂಡು ಬರುತ್ತಿರಲಿಲ್ಲ. ಬೇರೆ ಯಾರಿಗೂ ಕೂಡಾ ದೇವರ ಬಗ್ಗೆ ಅಂಥಃ ಸ್ಪಷ್ಟವಾದ ಜ್ಞಾನ ಮತ್ತು ಅನುಭವಗಳಿರುತ್ತಿರಲಿಲ್ಲ, ಆತನ ನಿಬಂಧನೆಗಳ ಬಗ್ಗೆ ತಮ್ಮ ವೈಯುಕ್ತಿಕ ತೀರ್ಮಾನಕ್ಕೂ ಮೀರಿದ ದೃಢವಿಶ್ವಾಸವನ್ನು ಬೆಳೆಸಿಕೊಂಡಿರುತ್ತಿರಲಿಲ್ಲ. ತಂದೆ ದೇವರ ಬಗ್ಗೆ ಕ್ರಿಸ್ತನಿಗಿದ್ದ ಜ್ಞಾನವು ಆತನನ್ನು ನಿಸ್ಸಂದೇಹವಾಗಿ ನಂಬಿ ವಿಧೇಯನಾಗುವಂತೆ ಅನುವು ಮಾಡಿತೆಂಬ ಭರವಸೆ ನಮಗಿದೆ (ಯೆಶಾಯ 53:11). ಆದರೆ ನಾವೀಗ ಕಾಲುಭಾಗವಾದರೂ, ಅದಕ್ಕೂ ಹೆಚ್ಚು ಜೀವವನ್ನು ಪಡಕೊಳ್ಳುತ್ತಾರೆ ಎಂದು ಭಾವಿಸೋಣ. ಬಹುಶಃ ಅರ್ಧ ಮಂದಿ ಅರ್ಹರಾಗಿಯೂ, ಮತ್ತುಳಿದ ಅರ್ಧ ಮಂದಿ ಪಾಪದ ಸಂಬಳವಾದ ಮರಣವನ್ನು ಅನುಭವಿಸುತ್ತಾರೆಂದು ನಾವು ಊಹಿಸಬಹುದು. ಹಾಗಾದರೆ ನಂತರ ಏನು? ಉಳಿದ ಅರ್ಧ ಮಂದಿ, ವಿಧೇಯರು, ಪಾಪವನ್ನು ಕಂಡಿಲ್ಲ ಮತ್ತು ಅನುಭವಿಸಿಲ್ಲವೆಂದು ನಾವು ಊಹಿಸೋಣ; ಅವರಿಗೆ ಎಂದಿಗೂ ನಿಷಿದ್ಧವಾದ ಸಂಗತಿಗಳ ಬಗ್ಗೆ ಕುತೂಹಲವುಂಟಾಗುವುದಿಲ್ಲವೋ? ದೇವರ ಭಯದ ಮತ್ತು ದಂಡನೆಯ ಕಾರಣದಿಂದ ಮಾತ್ರವೇ ಅವರು ತಮ್ಮನ್ನು ನಿಗ್ರಹಿಸಿಕೊಂಡಿದ್ದಾರೋ? ಅವರಿಗೆ ಒಳ್ಳೇದರ ಮತ್ತು ಕೆಟ್ಟದರ ಬಗ್ಗೆ ತಿಳಿದಿರುವುದಾದರೂ ಅವರ ನಿರ್ವಹಣೆಯು ಅಷ್ಟೊಂದು ಹೃತ್ಪೂರ್ವಕವಾಗಿರಲು ಸಾಧ್ಯವಿಲ್ಲ; ಆದ್ದರಿಂದ ಸೃಷ್ಟಿಕರ್ತನು ತನ್ನ ನಿಯಮವನ್ನು ಮಾಡುವಾಗ ಹಿತಚಿಂತಕ ವಿನ್ಯಾಸಗಳ ಬಗ್ಗೆ ಸಂಪೂರ್ಣವಾದ ನಿರ್ಧಾರವನ್ನು ಹೊಂದಿದ್ದನು, ಹಾಗಾಗಿ, ಅದು ಆತನ ಸ್ವಂತ ಕ್ರಮವನ್ನು, ಮಾತ್ರವಲ್ಲದೆ ಆತನ ಸೃಷ್ಟಿಗಳ ಕ್ರಮವನ್ನೂ ಆಳುತ್ತದೆ.

ನಂತರದಲ್ಲಿ, ಈ ರೀತಿಯಲ್ಲಿ ತಮ್ಮ ಸ್ವಂತ ಇಚ್ಛೆಯ ಪಾಪದ ಫಲವಾಗಿ ಮರಣಕ್ಕೆ ಹೋಗಲಿರುವ ಅರ್ಧ ಜನರನ್ನು ಪರಿಗಣಿಸೋಣ. ಅವರುಗಳು ಶಾಶ್ವತವಾಗಿ ಜೀವದಿಂದ ಕಡಿದುಕೊಳ್ಳಲ್ಪಡುವರು ಮತ್ತು ಅವರ ಒಂದೇ ನಿರೀಕ್ಷೆಯೆಂದರೆ, ದೇವರು ತನ್ನ ಪ್ರೀತಿಯಲ್ಲಿ ಅವರನ್ನು ತನ್ನ ಸೃಷ್ಟಿಗಳೆಂದು, ತನ್ನ ಕೈಕೆಲಸವೆಂದು ನೆನಪುಮಾಡಿಕೊಂಡು ಅವರಿಗೆ ಮತ್ತೊಂದು ಪರೀಕ್ಷೆಯನ್ನು ಒದಗಿಸುತ್ತಾನೆ. ಆದರೆ, ಹಾಗೆ ಏಕೆ ಮಾಡಬೇಕು? ಒಂದೇ ಒಂದು ಕಾರಣವೇನೆಂದರೆ ಅವರೇನಾದರೂ ಎಚ್ಚತ್ತುಕೊಂಡು ಮತ್ತೆ ಪ್ರಯತ್ನಿಸಿದರೆ, ಅವರಲ್ಲಿ ಕೆಲವರು ತಮ್ಮ ಹೆಚ್ಚಿನ ಅನುಭವದ ಕಾರಣದಿಂದಾಗಿ ವಿಧೇಯತೆಯನ್ನು ಆರಿಸಿಕೊಂಡು ಜೀವಿಸಬಹುದೇನೋ ಎಂಬ ನಿರೀಕ್ಷೆ.

ಆದರೆ ಅಂಥಾಃ ಯೋಜನೆಯು ದೇವರು ಅಳವಡಿಸಿದ್ದಂತಹ ಯೋಜನೆಯಂತೆ ಫಲಕಾರಿ ಯಾಗಿದ್ದರೂ ಸಹ ಆ ಬಗ್ಗೆ ಗಂಭೀರವಾದ ಆಕ್ಷೇಪಣೆಗಳಿರುತ್ತವೆ.

ಪಾಪವನ್ನು ಕೆಲವು ಮಿತಿಗಳಿಗೆ ಸೀಮಿತಗೊಳಿಸುವ ದೇವರ ಜ್ಞಾನವು ಆತನ ಯೋಜನೆಯಂತೆಯೇ ಎಷ್ಟೋ ಹೆಚ್ಚಿನದಾಗಿದೆ. ಉದ್ದೇಶಪೂರ್ವಕವಾದ ಪಾಪದ ವೇತನವನ್ನು ಸಾವು–ವಿನಾಶ–ಜೀವನದಿಂದ ಕತ್ತರಿಸುವುದು ಎಂದು ಘೋಷಿಸುವ ಒಂದು ಪರಿಪೂರ್ಣ ಮತ್ತು ನಿಷ್ಪಕ್ಷಪಾತ ಕಾನೂನು ಇರುವುದನ್ನು ನಮ್ಮ ಸೀಮಿತ ಮನಸ್ಸುಗಳು ಗ್ರಹಿಸುವುದು ಎಷ್ಟೋ ಉತ್ತಮವಲ್ಲವೇ. ಹೀಗಾಗಿ ದೇವರು ಕೆಡುಕರನ್ನು ಸೀಮಿತಗೊಳಿಸುತ್ತಾನೆ ಹಾಗೂ ಕ್ರಿಸ್ತನ ಸಹಸ್ರಮಾನದ ಆಳ್ವಿಕೆಯು ದುಷ್ಟ ಮತ್ತು ಉದ್ದೇಶಪೂರ್ವಕ ದುಷ್ಕರ್ಮಿಗಳ ಸಂಪೂರ್ಣ ಅಳಿವನ್ನು ಸಾಧಿಸುವಂತೆ ಮತ್ತು ಆ ಪರಿಪೂರ್ಣ ಜೀವಿಗಳಿಂದ ಪೂರ್ಣ ಜ್ಞಾನ ಮತ್ತು ಪರಿಪೂರ್ಣ ಇಚ್ಛಾ ಸ್ವತಂತ್ರವುಳ್ಳ ವಿಧೇಯತೆಯ ಆಧಾರದ ಮೇಲೆ ನೀತಿವಂತಿಕೆಯ ನಿತ್ಯತೆಯನ್ನು ತರುವದನ್ನು ಸಾಧಿಸುತ್ತಾನೆ.

ಆದರೆ, ಸೂಚಿಸಲಾದ ಯೋಜನೆಗೆ ಎರಡು ಇತರೆ ಅಭ್ಯಂತರಗಳಿವೆ. ಮೊದಲಿಗೆ ಪ್ರತಿಯೊಬ್ಬ ವ್ಯಕ್ತಿಯನ್ನು ಪ್ರತ್ಯೇಕವಾಗಿ ವ್ಯಕ್ತಿಗತವಾಗಿ ವಿಚಾರಣೆಗೊಳಪಡಿಸುವುದು. ದೇವರು ಅಳವಡಿಸಿರುವ ಯೋಜನೆಯಲ್ಲಿ ಒಬ್ಬ ವಿಮೋಚಕನು ಮಾತ್ರವೇ ಸಾಕಷ್ಟು ಅರ್ಹನು. ಯಾಕೆಂದರೆ ಒಬ್ಬನು ಮಾತ್ರವೇ ಪಾಪ ಮಾಡಿದ್ದಾನೆ ಮತ್ತು ಒಬ್ಬನು ಮಾತ್ರವೇ ಖಂಡಿಸಲ್ಪಟ್ಟು ದಂಡನೆಗೆ ಒಳಗಾಗಿದ್ದಾನೆ (ಇತರರು ಈ ದಂಡನೆಯಲ್ಲಿ ಪಾಲುದಾರರಾಗಿದ್ದಾರೆ). ಆದರೆ ಮೊದಲನೆಯ ವಿಚಾರಣೆಯು ವ್ಯಕ್ತಿಗತ ವಿಚಾರಣೆಯಾಗುವುದಾದರೆ ಮತ್ತು ಒಂದರ್ಧ ಜನಾಂಗದವರು ಪಾಪಮಾಡಿದ್ದು ಅವರನ್ನು ವ್ಯಕ್ತಿಗತವಾಗಿ ಖಂಡಿಸುವುದಾದರೆ, ಪ್ರತಿಯೊಬ್ಬ ವ್ಯಕ್ತಿಗೆ ಒಬ್ಬ ವಿಮೋಚಕನ ಸಮರ್ಪಣೆಯ ಅಗತ್ಯವಿರುತ್ತದೆ. ಒಂದು ಮುಟ್ಟುಗೋಲು ಹಾಕಲ್ಪಡದ ಜೀವವು ಒಂದು ಕಳೆದುಕೊಂಡ ಜೀವವನ್ನು ವಿಮೋಚಿಸಬಹುದು, ಹೆಚ್ಚಿನದನ್ನಲ್ಲ. ಒಬ್ಬ ಸರ್ವಸಂಪೂರ್ಣ ಮನುಷ್ಯನು, 'ಮನುಷ್ಯನಾದ ಕ್ರಿಸ್ತನಲ್ಲಿ' ಪತನಗೊಂಡ ಆದಾಮನನ್ನು (ಮತ್ತು ಆತನ ಮೂಲಕ ನಮ್ಮ ನಷ್ಟಗಳನ್ನು) ವಿಮೋಚಿಸಬಹುದು. ಇದು ದೇವರು ಆಯ್ಕೆ ಮಾಡಿದ ಯೋಜನೆಯಲ್ಲದೆ ಯಾವುದೇ ಬೇರೆ ಸಂದರ್ಭಗಳಲ್ಲಿಯೂ ಎಲ್ಲರಿಗೂ ಸಲ್ಲಿಸುವ ಈಡುಬಲಿ (ಅನುಗುಣವಾದ ಬೆಲೆ) ಯಾಗುವುದಿಲ್ಲ.

ಆದಾಮನಿಂದೀಚೆಗೆ ಮಾನವ ಜಾತಿಯವರು ಒಟ್ಟು ಒಂದು ನೂರು ಮಿಲಿಯನ್‌ನಷ್ಟು ಇದ್ದಿರಬಹುದೆಂದು ನಾವು ಊಹಿಸುವವರಾದರೆ, ಇದರಲ್ಲಿ ಅರ್ಧದಷ್ಟು ಅಂದರೆ ಸುಮಾರು ಐವತ್ತು ಮಿಲಿಯನ್ ಜನರು ಪಾಪ ಮಾಡಿರುವುದಾದರೆ, ಉಳಿದ ಐವತ್ತು ಬಿಲಿಯನ್ ಮಂದಿ ವಿಧೇಯರಾದ ಪರಿಪೂರ್ಣ ಪುರುಷರು ಐವತ್ತು ಬಿಲಿಯನ್ ಪಾಪಿಗಳ ಸಲುವಾಗಿ ಈಡುಬಲಿ (ಅನುಗುಣವಾದ ಬೆಲೆಯನ್ನು) ಅರ್ಪಿಸುವಂತೆ ಸಾಯಬೇಕಾಗುತ್ತದೆ. ಮತ್ತು ಹೀಗೆ ಈ ಯೋಜನೆಯಿಂದಲೂ ಮರಣವು ಎಲ್ಲರ ಮೇಲೂ ಹಾದುಹೋಗುತ್ತದೆ. ಮತ್ತು ಅಂಥಾ ಯೋಜನೆಯು ಪ್ರಸ್ತುತದಲ್ಲಿ ಅನುಭವಿಸುತ್ತಿರುವ ವೇದನೆಗಳಿಗಿಂದ ಕಡಿಮೆಯಾದುದಲ್ಲ.

ಅಂಥಾಃ ಯೋಜನೆಗೆ ಮತ್ತೊಂದು ಆಕ್ಷೇಪಣೆಯೇನೆಂದರೆ, ಅದು ಕ್ರಿಸ್ತನ ದೇಹವಾದ 'ಚಿಕ್ಕಹಿಂಡನ್ನು' ಆಯ್ದು ದೈವಿಕ ಸ್ವಭಾವಕ್ಕೆ ಏರಿಸುವ ದೇವರ ಯೋಜನೆಯನ್ನು ಗಂಭೀರವಾಗಿ ಅಸ್ತವ್ಯಸ್ತಗೊಳಿಸುದಾಗಿದೆ ಮತ್ತು ಈ ಚಿಕ್ಕಹಿಂಡಿಗೆ ಕ್ರಿಸ್ತನೇ ಒಡೆಯನೂ ಶಿರಸ್ಸೂ ಆಗಿದ್ದಾನೆ. ದೇವರು ನ್ಯಾಯಯುತವಾಗಿ ಐವತ್ತು ಬಿಲಿಯನ್ ವಿಧೇಯ ಮಕ್ಕಳಿಗೆ ಅವರ ಹಕ್ಕನ್ನು, ಸವಲತ್ತುಗಳನ್ನು ಮತ್ತು ಜೀವಗಳನ್ನು ಪಾಪಿಗಾಗಿ ಈಡುಬಲಿಯಾಗಿ ನೀಡುವಂತೆ ಕೇಳಲಾರನು. ಯಾಕೆಂದರೆ, ಆತನ ಸ್ವಂತ ನಿಯಮದಲ್ಲಿ ಅವರು ನಿತ್ಯನಿರಂತರ ಜೀವದ ಹಕ್ಕನ್ನು ಹೊಂದಿದ್ದಾರೆ. ಹೀಗಾಗಿ ಅಂಥಾಃ ಪರಿಪೂರ್ಣ ಮನುಷ್ಯರು ಪತನಗೊಂಡವರಿಗಾಗಿ ಸಮರ್ಪಿತ (ಈಡುಬಲಿ) ರಾಗುವಂತೆ ಕೇಳುವುದಾದರೆ, ಅದು ನಮ್ಮ ಕರ್ತನಾದ ಯೇಸುವಿನೊಂದಿಗಿದ್ದಂತೆ ದೇವರ ಯೋಜನೆಯಾಗಿ ಅವರ ಮುಂದೆ ವಿಶೇಷ ಕೊಡುಗೆಯನ್ನಿಡಬೇಕಾಗುತ್ತದೆ. ಅದರಿಂದ ಅವರು ಅವರ ಮುಂದಿಟ್ಟಿರುವುದರ ಸಂತೋಷದ ನಿಮಿತ್ತ ತಮ್ಮ ಸಹೋದರರಿಗಾಗಿ ದಂಡನೆಯನ್ನು ಅನುಭವಿಸಬಹುದು. ನಮ್ಮ ಕರ್ತನಿಗೆ ನೀಡಿದ ಕೊಡುಗೆಯನ್ನೇ ಅವರಿಗೂ ಕೊಡಬೇಕಾಗುತ್ತದೆ. ಅಂದರೆ ನೂತನ ಸ್ವಭಾವದಲ್ಲಿ, ದೈವಿಕ ಸ್ವಭಾವದಲ್ಲಿ ಪಾಲುತೆಗೆದುಕೊಳ್ಳುವುದು ಮತ್ತು ದೇವದೂತರುಗಳಿಗಿಂತಲೂ, ಅಧಿಕಾರಗಳಿಗಿಂತಲೂ, ಮಹತ್ವಗಳಿಗಿಂತಲೂ, ಎಲ್ಲಾ ಹೆಸರುಗಳಿಂತಲೂ ಮಿಗಿಲಾದ ಯೆಹೋವನ ನಂತರದ ಉನ್ನತವಾದ ಸ್ಥಾನಕ್ಕೆ ಏರಿಸಲ್ಪಡುವುದು (ಎಫೆಸ 1:20,21). ಆಗ ದೈವಿಕ ನೆಲೆಯಲ್ಲಿ ಅಸಂಖ್ಯಾತರಿರುತ್ತಾರೆ. ಇದನ್ನು ದೈವಿಕ ಜ್ಞಾನವು ಸ್ಪಷ್ಟವಾಗಿ ಒಪ್ಪಿಕೊಳ್ಳುವುದಿಲ್ಲ. ಇದಕ್ಕೂ ಹೆಚ್ಚಾಗಿ, ಈ ಐವತ್ತು ಬಿಲಿಯನ್ ಜನರು, ಅಂಥಾಃ ಪರಿಸ್ಥಿತಿಯಲ್ಲಿ ಎಲ್ಲರೂ ಸಮಾನರಾಗಿರುತ್ತಾರೆ, ಅವರಲ್ಲಿ ಮುಖ್ಯರೂ, ಶಿರಸ್ಸೂ ಎಂಬುದಿರುವುದಿಲ್ಲ. ಆದರೆ ದೇವರು ಅಳವಡಿಸಿರುವ ಯೋಜನೆಯು ಒಬ್ಬ ವಿಮೋಚಕನನ್ನು, ಆತನು ದೈವ ಸ್ವಭಾವಕ್ಕೆ ಏರುವಂತೆ ಮತ್ತು ಆತನು ವಿಮೋಚಿಸುವ "ಚಿಕ್ಕಹಿಂಡನ್ನು" ಶ್ರಮೆಯೊಂದಿಗೆ, ಸ್ವಾರ್ಥತ್ಯಾಗ ಇವುಗಳೊಡನೆ ಆತನ ಹೆಸರು, ಗೌರವ, ಮಹಿಮೆ ಮತ್ತು ಸ್ವಭಾವ ಇವುಗಳಲ್ಲಿ ಹೆಂಡತಿಯು ತನ್ನ ಪತಿಯೊಂದಿಗೆ ಪಾಲುದಾರರಾಗುವಂತೆ ಆತನ ಹೆಜ್ಜೆಜಾಡಿನಲ್ಲಿ ನಡೆಯುವ "ಚಿಕ್ಕ ಹಿಂಡನ್ನು" ಮಾತ್ರವೇ ಕರೆಯುವುದಾಗಿದೆ.

ಒಬ್ಬ ಪ್ರತಿನಿಧಿಯಲ್ಲಿ ಎಲ್ಲರನ್ನೂ ಖಂಡಿಸುವ ಮೂಲಕ ಮತ್ತು ಒಬ್ಬ ವಿಮೋಚಕನಿಂದ ಎಲ್ಲರ ವಿಮೋಚನೆ ಮತ್ತು ಎಲ್ಲರ ಪುನರ್‌ವಶಕ್ಕೆ ಮಾರ್ಗವನ್ನು ತೆರೆಯುವುದಾಗಿರುವ ದೇವರ ಯೋಜನೆಯ ಈ ವೈಶಿಷ್ಟ್ಯಗಳನ್ನು ಮೆಚ್ಚಿಕೊಳ್ಳುವುದು ಅದು ತನ್ನಲ್ಲಿನ ಆನೇಕ ಗೊಂದಲಗಳಿಗೆ ಪರಿಹಾರವನ್ನು ಕಂಡು

ಕೊಳ್ಳುವುದಾಗಿದೆ. ಎಲ್ಲರ ಖಂಡನೆಯೂ ಒಬ್ಬರಲ್ಲಿ ನೆರವೇರಿಸುವದು ಎಲ್ಲರಿಗಾಗುವ ಹಾನಿ/ಅನ್ಯಾಯವನ್ನು ರದ್ದುಗೊಳಿಸುವದು ಎಂಬುದನ್ನು ಅವರು ಕಂಡು ಕೊಳ್ಳುತ್ತಾರೆ: ಮತ್ತೊಬ್ಬನ ಬಲಿದಾನದ ಮೂಲಕ ಎಲ್ಲರಿಗೂ ನೀತಿನಿರ್ಣಯವನ್ನು ಒದಗಿಸುವ ಸಂಬಂಧದಲ್ಲಿ ದೇವರ ಯೋಜನೆಯು ಎಲ್ಲರಿಗೂ ಒಂದು ಮಹಾ ಅನುಗ್ರಹವಾಗಿದೆ. ಕೇಡನ್ನು ಅನುಮತಿಸಿರುವ ದೇವರ ಉದ್ದೇಶವು ನೆರವೇರಿದ ನಂತರ ಮತ್ತು ಈಡುಬಲಿಯ ಲಾಭಗಳು ಪಾಪದ ದಂಡನೆಯೊಂದಿಗೆ ಸಮಾನಾವಕಾಶವುಳ್ಳದ್ದಾಗಿ ಮಾಡುವಾಗ ಕೇಡು ಸದಾಕಾಲಕ್ಕೂ ನಿರ್ಮೂಲ ವಾಗುವುದು. ಪಾಪದ ಪಾಪತ್ವವನ್ನು, ಅದರ ದಂಡನೆಯಾದ ಮರಣದ ಸ್ವರೂಪವನ್ನು, ನಮ್ಮ ಕರ್ತನು ಸಮರ್ಪಿಸಿದ ಈಡುಬಲಿಯ ಮಹತ್ವ ಮತ್ತು ಮೌಲ್ಯವು ಒಬ್ಬ ವ್ಯಕ್ತಿಯ ಪೂರ್ಣ ಭರವಸೆ (positive) ಮತ್ತು ಅನುಕೂಲಕರ ಸ್ಥಿತಿಗೆ ಸಂಪೂರ್ಣವಾಗಿ ಪುನರ್‌ವಶಗೊಳ್ಳುವುದು, ನಿತ್ಯಜೀವಕ್ಕೆ ಅರ್ಹನೆನಿಸಿಕೊಳ್ಳುವ ಅಥವಾ ನಿತ್ಯ ಮರಣದ ದಂಡನೆಯ ಶಿಕ್ಷೆಗೊಳಗಾಗುವ ಮುನ್ನ ಆತನು ಪೂರ್ಣವಾದ ಮತ್ತು ವಿಪುಲವಾದ ವಿಚಾರಣೆಯನ್ನು ಹೊಂದುವುದು ಇವೇ ಮುಂತಾದ ಅನೇಕ ಮುಖ್ಯವಾದ ಸಂಗತಿಗಳನ್ನು ಪೂರ್ಣವಾಗಿ ಗ್ರಹಿಸಿಕೊಳ್ಳದೆ ದೇವರ ಈ ಯೋಜನೆಯ ಲಕ್ಷಣವನ್ನು ಸಮಗ್ರವಾಗಿ ಅರಿತುಕೊಳ್ಳುವುದು ಸಾಧ್ಯವಿಲ್ಲ.

ವಿಮೋಚನೆಯ ಮಹತ್ತರವಾದ ಯೋಜನೆಯ ಮತ್ತು ಅದರ ಪರಿಣಾಮವಾದ ಕ್ರಿಸ್ತನ ಮೂಲಕ "ಸಮಸ್ತವನ್ನೂ ಸರಿಪಡಿಸುವಿಕೆ"ಯ ದೃಷ್ಟಿಯಿಂದ ಕೇಡಿಗೆ ಅನುಮತಿ ನೀಡಿದ್ದರ ಮೂಲಕ ಉಂಟಾದ ಆಶೀರ್ವಾದಗಳನ್ನು ನಾವು ನೋಡಬಹುದು. ಬಹುಶಃ ಅದು ಇನ್ನಾವ ರೀತಿಯಲ್ಲಿಯೂ ಸಂಪೂರ್ಣವಾಗಿ ಅರಿತುಕೊಳ್ಳಲು ಸಾಧ್ಯವಿಲ್ಲ.

ಮನುಷ್ಯರು ಅನುಭವದಿಂದ ಶಾಶ್ವತವಾಗಿ ಪ್ರಯೋಜನ ಪಡೆಯುವುದು ಮಾತ್ರವಲ್ಲ ದೇವದೂತರುಗಳು ಮಾನವನ ಅನುಭವಗಳ ವೀಕ್ಷಣೆಯಿಂದ ಪ್ರಯೋಜನ ಪಡೆಯುತ್ತಾರೆ. ಆದರೆ ಪ್ರಕಟಗೊಂಡಿರುವ ದೇವರ ಗುಣಧರ್ಮಗಳ ಸಂಪೂರ್ಣ ಪರಿಚಯದೊಂದಿಗೆ ಆತನ ಯೋಜನೆಯಲ್ಲಿ ಎಲ್ಲರೂ ಮತ್ತಷ್ಟು ಪ್ರಯೋಜನ ಪಡೆಯುತ್ತಾರೆ. ಆತನ ಯೋಜನೆಯು ಸಂಪೂರ್ಣವಾಗಿ ನೆರವೇರುವಾಗ, ಎಲ್ಲರೂ ಆತನ ವಿವೇಕವನ್ನು, ನ್ಯಾಯವನ್ನು, ಪ್ರೀತಿ ಮತ್ತು ಅಧಿಕಾರವನ್ನು ಸ್ಪಷ್ಟವಾಗಿ ಓದಿಕೊಳ್ಳುವರು. ದೈವಿಕ ಸುಗ್ರೀವಾಜ್ಞೆಯನ್ನು ಉಲ್ಲಂಘಿಸಲು ಅಥವಾ ನ್ಯಾಯಯುತವಾಗಿ ಖಂಡಿಸಲ್ಪಟ್ಟ ಜನಾಂಗವನ್ನು ಪಾಪ ಪರಿಹಾರವಿಲ್ಲದೇ ಉಳಿಸಲು ಸಾಧ್ಯವಾಗದ ನ್ಯಾಯವನ್ನು ಹಾಗೂ ಅದನ್ನು ಸ್ವಸಂತೋಷದಿಂದ ಒದಗಿಸಿದ ವಿಮೋಚಕನನ್ನು ಅವರು ನೋಡುತ್ತಾರೆ. ಈ ಉದಾತ್ತ ತ್ಯಾಗವನ್ನು ಒದಗಿಸಿಕೊಟ್ಟ ಪ್ರೀತಿಯು ವಿಮೋಚಕನನ್ನು ದೇವರ ಬಲಪಾರ್ಶ್ವದ ಅತ್ಯುನ್ನತ ಸ್ಥಾನಕ್ಕೆ ಏರಿಸಿದ್ದನ್ನು, ಮತ್ತು ಆತನಿಗೆ ತನ್ನ ಅಮೂಲ್ಯ ರಕ್ತದಿಂದ ಕೊಂಡುಕೊಂಡವರಿಗೆ ಜೀವವನ್ನು ಪುನರ್‌ವಶ ಮಾಡುವಂತೆ ಕೊಡಲ್ಪಟ್ಟಿರುವ ಶಕ್ತಿ ಮತ್ತು ಅಧಿಕಾರವನ್ನು ನೋಡುತ್ತಾರೆ. ಅವರು ಆತನ ಸೃಷ್ಟಿಗಳಿಗೆ ಭವ್ಯವಾದ ಅದೃಷ್ಟವನ್ನು ಒದಗಿಸುವ ಕಾರ್ಯವೆಸಗಿದ ಅಧಿಕಾರ ಮತ್ತು ಜ್ಞಾನವನ್ನು ಸಹ ನೋಡುತ್ತಾರೆ. ಈ ರೀತಿಯಲ್ಲಿ ಆತನು ಎಲ್ಲಾ ವಿರೋಧಿ ಪ್ರಭಾವವನ್ನು ತಳ್ಳಿಹಾಕಿ, ಆತನ ಭವ್ಯವಾದ ವಿನ್ಯಾಸಗಳನ್ನು ಮುಂದುವರಿಸುವಂತೆ ಅವರನ್ನು ಒಂದೋ ಇಷ್ಟಪಡುವ ಇಲ್ಲವೇ ಇಷ್ಟಪಡದ ನಿಯೋಗಿಗಳನ್ನಾಗಿ ಮಾಡುತ್ತಾನೆ. ಕೆಡುಕನ್ನು ಅನುಮತಿಸದೇ ಹೋಗಿದ್ದರೆ, ದೇವರ ಹಂಚಿಕೆಯಲ್ಲಿ ಅದು ತಳ್ಳಿಹಾಕಲ್ಪಡದಿದ್ದರೆ, ಈ ಫಲಿತಾಂಶಗಳು ಯಾವ ರೀತಿಯಲ್ಲಿ ಪಡೆಯ ಬಹುದೆಂದು ನಾವು ನೋಡಲಾರೆವು. ಕೆಲವು ಸಮಯದವರೆಗೆ ಮನುಷ್ಯರಿಗೆ ಕೇಡಿಗೆ ಅನುಮತಿ ನೀಡಿರುವುದು ಆ ರೀತಿಯಲ್ಲಿ ದೂರದೃಷ್ಟಿಯ ವಿವೇಕವನ್ನು ಪ್ರದರ್ಶಿಸುತ್ತದೆ. ಅದು ಎಲ್ಲಾ ಹಾಜರಿದ್ದ ಪರಿಸ್ಥಿತಿಗಳನ್ನು ಗ್ರಹಿಸಿ, ನಿವಾರಣೆಯನ್ನು ಯೋಚಿಸಿ, ಆತನ ಅಂತಿಮ ಶಕ್ತಿ ಮತ್ತು ಕೃಪೆಗಳ ಮೂಲಕ ಅಂತಿಮ ಪರಿಣಾಮವನ್ನು ಗುರುತಿಸುತ್ತದೆ.

ಸುವಾರ್ತಾ ವಿತರಣೆಯ ಸಮಯದಲ್ಲಿ ಪಾಪ ಮತ್ತು ಅದರ ಸಹಾಯಕ ದುಷ್ಟತನಗಳನ್ನು ಸಭೆಯ ಶಿಸ್ತು ಮತ್ತು ಸಿದ್ಧತೆಗಾಗಿ ಮತ್ತಷ್ಟು ಬಳಸಿಕೊಳ್ಳಲಾಗಿದೆ. ಪಾಪವನ್ನು ಅನುಮತಿಗೊಳಿಸದೇ ಇದ್ದಲ್ಲಿ, ನಮ್ಮ ಕರ್ತನಾದ ಯೇಸುಕ್ರಿಸ್ತನ ಮತ್ತು ಆತನ ಸಭೆಯ ತ್ಯಾಗವು, ಅದರ ಪ್ರತಿಫಲವಾದ ದೈವಿಕ ಸ್ವಭಾವವು ಅಸಾಧ್ಯವಾಗುತ್ತಿತ್ತು.

ಗಣನೀಯವಾಗಿ, ಈಗ ಮಾನವ ಕುಲದ ಮೇಲಿರುವ ದೇವರ ಅದೇ ನಿಯಮವು, ಅದಕ್ಕೆ ವಿಧೇಯರಾಗಿರುವುದಕ್ಕೆ ಪ್ರತಿಫಲ ಜೀವದ ಬಹುಮಾನ, ಅವಿಧೇಯತೆಗೆ ಮರಣದ ದಂಡನೆಯು ದೊರೆಯುವುದಾಗಿದ್ದು, ಅಂತಿಮವಾಗಿ ಅದು ದೇವರ ಎಲ್ಲಾ ಬುದ್ಧಿವಂತ ಸೃಷ್ಟಿಯನ್ನು ಆಳುವುದಾಗಿದೆ ಎಂದು ಸ್ಪಷ್ಟವಾಗಿ ತೋರುತ್ತದೆ. ಆ ನಿಯಮವು, ನಮ್ಮ ಕರ್ತನು

ನಿರೂಪಿಸುವಂತೆ, ಸಂಕ್ಷಿಪ್ತವಾಗಿ 'ಪ್ರೀತಿ' ಎಂಬ ಪದದಲ್ಲಿ ಗ್ರಹಿಸಬಹುದಾಗಿದೆ – **"ನಿನ್ನ ದೇವರಾಗಿರುವ ಕರ್ತನನ್ನು ನಿನ್ನ ಪೂರ್ಣ ಹೃದಯದಿಂದಲೂ, ನಿನ್ನ ಪೂರ್ಣ ಪ್ರಾಣದಿಂದಲೂ ನಿನ್ನ ಪೂರ್ಣ ಶಕ್ತಿಯಿಂದಲೂ, ನಿನ್ನ ಪೂರ್ಣ ಬುದ್ಧಿಯಿಂದಲೂ ಪ್ರೀತಿಸಬೇಕು ಮತ್ತು ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು"** (ಲೂಕ 10:27). ಅಂತಿಮವಾಗಿ, ದೇವರ ಉದ್ದೇಶವು ನೆರವೇರುವಾಗ, ದೈವಿಕ ಗುಣಲಕ್ಷಣದ ಭವ್ಯತೆಯು ಎಲ್ಲಾ ಬುದ್ಧಿವಂತ ಜೀವಿಗಳಿಗೆ ಪ್ರಕಟವಾಗುತ್ತದೆ ಮತ್ತು ಕೇಡಿನ ತಾತ್ಕಾಲಿಕ ಅನುಮತಿಯು ದೇವರ ವಿಚಾರಣಸರಣಿಯಲ್ಲಿ ಬುದ್ಧಿವಂತ ಲಕ್ಷಣವಾಗಿರುವುದು ಕಂಡುಬರುತ್ತದೆ., ಜಗತ್ತು ಪ್ರಾರಂಭವಾದಾಗಿನಿಂದಲೂ ಎಲ್ಲಾ ಪವಿತ್ರ ಪ್ರವಾದಿಗಳ ಬಾಯಿಂದ ಹೇಳಿಸಿದ ವಿಷಯಗಳ ಬಗ್ಗೆ ದೇವರ ವಾಕ್ಯದ ಮೂಲಕ ನೋಡುತ್ತಾ, ಸಮಸ್ತವನ್ನೂ ಪುನರ್‌ಸ್ಥಾಪಿಸುವ ದಿನವು ಸಮೀಪವಾಯಿತೆಂದು ನಂಬಿಕೆಯ ಕಣ್ಣಿನಿಂದ ಮಾತ್ರ ನೋಡಬಹುದಾಗಿದೆ.

## THE DAY IS AT HAND

" Poor, fainting pilgrim, still hold on thy way – the dawn is near !
True, thou art weary now ; but yon bright ray becomes more clear.
Bear up a little longer ; wait for rest;
yield not to slumber, though with toil oppressed

"The night of life is mournful, but look on – the dawn is near !
Soon will earth's shadowed scenes and forms be gone ; yield not to fear !
The mountain's summit will, ere long, be gained
And the bright world of joy and peace attained.

"'joyful through hope' thy motto still must be – the dawn in near !
What glories will that dawn unfold to thee! be of good cheer !
Gird up thy loins ; bind sandals on thy feet:
The way is dark and long; the end is sweet

## ದಿನವು ಸಮೀಪಿಸುತ್ತಿದೆ

"ಬಡ, ದುರ್ಬಲ ಯಾತ್ರಿಯೇ, ನಿನ್ನ ದಾರಿಯನ್ನು ಹಿಡಿದುಕೋ, – ಉದಯವು ಹತ್ತಿರವಾಯಿತು !
ನಿಜ, ನೀನು ಈಗ ಸೊರಗಿರುವೆ, ಆದರೆ ಪ್ರಕಾಶಮಾನವಾದ ಕಿರಣವು ಹೆಚ್ಚು ಸ್ಪಷ್ಟವಾಗುತ್ತಿದೆ;
ಇನ್ನು ಕೊಂಚ ತಾಳಿಕೊ, ವಿಶ್ರಾಂತಿಗಾಗಿ ಕಾದಿರು;
ಪರಿಶ್ರಮವು ನಿನ್ನನ್ನು ತುಳಿದಿದ್ದರೂ ನಿದ್ರೆಗೆ ಜಾರಬೇಡ

"ಜೀವನದ ರಾತ್ರಿಯು ಶೋಕತಪ್ತವಾಗಿದೆ, ಆದರೆ ನೋಡು" ಉದಯವು ಸಮೀಪಿಸುತ್ತಿದೆ !
ಶೀಘ್ರದಲ್ಲಿಯೇ ಭೂಮಿಯ ನೆರಳಿನ ದೃಶ್ಯಗಳು ಮತ್ತು ರೂಪಗಳು ಕಣ್ಮರೆಯಾಗುತ್ತವೆ, ಭಯಪಡಬೇಡ !
ಪರ್ವತದ ಶಿಖರವು ದೀರ್ಘಾವಧಿಯವರೆಗೂ ಮುಂದುವರೆದರೂ,
ಸಂತೋಷದ ಪ್ರಕಾಶತೆಯ ಲೋಕವು ಶಾಂತಿಯನ್ನು ಸಾಧಿಸಿದೆ.

"ನಿರೀಕ್ಷೆಯ ಮೂಲಕ ಹರುಷ" ನಿನ್ನ ಧ್ಯೇಯ ವಾಕ್ಯವಾಗಿರಲಿ – ಉದಯವು ಹತ್ತಿರದಲ್ಲಿದೆ !
ಆ ಉದಯವು ನಿನಗೆ ಎಂತಹ ಮಹಿಮೆಯನ್ನು ಹೊರಪಡಿಸುತ್ತವೆ, ಸಮರ್ಪಕವಾದ ಉಲ್ಲಾಸದಿಂದಿರು !
ನಿನ್ನ ನಡುವನ್ನು ಕಟ್ಟಿಕೊ, ಪಾದಕ್ಕೆ ಕೆರಗಳನ್ನು ಮೆಟ್ಟಿಕೊ;
ನಿನ್ನ ದಾರಿಯು ಗಾಢವಾಗಿಯೂ ಉದ್ದವಾಗಿಯೂ ಇದ್ದರೂ, ಕೊನೆಯು ಮಧುರವಾಗಿದೆ.

* * * * * * *

# ಅಧ್ಯಯನ – 8 Study VIII

# ನ್ಯಾಯ ತೀರ್ಪಿನ ದಿನ

## DAY OF JUDGEMENT

**ನ್ಯಾಯ ತೀರ್ಪಿನ ದಿನದ ಸಾಮಾನ್ಯ ನೋಟ – ಅದು ಧರ್ಮಗ್ರಂಥಾನುಸಾರವಾಗಿದೆಯೋ? ಅವಧಿ, ನ್ಯಾಯ ತೀರ್ಪು ಮತ್ತು ದಿನ ಈ ಪದಗಳನ್ನು ಅರ್ಥೈಸಲಾಗಿದೆ – ಧರ್ಮಗ್ರಂಥದಲ್ಲಿ ಉಲ್ಲೇಖಿಸಲಾದ ಅನೇಕ ನ್ಯಾಯತೀರ್ಪಿನ ದಿನಗಳು – ಮೊದಲನೆಯ ನ್ಯಾಯತೀರ್ಪಿನ ದಿನ ಮತ್ತು ಅದರ ಫಲಿತಾಂಶಗಳು – ಮತ್ತೊಂದು ನೇಮಕ – ನ್ಯಾಯಾಧಿಪತಿ – ಬರಲಿರುವ ನ್ಯಾಯತೀರ್ಪಿನ ಪಾತ್ರಗಳು – ಮೊದಲನೆಯ ಮತ್ತು ಎರಡನೆಯ ನ್ಯಾಯತೀರ್ಪುಗಳ ಸಮಾನರೂಪತೆ ಮತ್ತು ಅಸಮಾನತೆ – ಈ ಲೋಕದ ಪ್ರಸ್ತುತ ಹೊಣೆಗಾರಿಕೆ – ಎರಡು ಮಧ್ಯಸ್ಥಿಕೆಯ ನ್ಯಾಯತೀರ್ಪುಗಳು ಮತ್ತು ಅವುಗಳ ಉದ್ದೇಶಗಳು – ಬರಲಿರುವ ನ್ಯಾಯತೀರ್ಪಿನ ವ್ಯಾಪಕವಾದ ವಿಭಿನ್ನ ದೃಷಿಕೋನಗಳು – ಅವನ್ನು ಪ್ರವಾದಿಗಳು ಮತ್ತು ಅಪೋಸ್ತಲರುಗಳು ಹೇಗೆ ಪರಿದರ್ಶನ ಮಾಡಿದರು.**

ಆತನು ನಿಷ್ಕರ್ಷೆ ಮಾಡಿದ ಪುರುಷನ ಕೈಯಿಂದ ನೀತಿಗನುಗುಣವಾಗಿ ಭೂಲೋಕದ ನ್ಯಾಯವಿಚಾರಣೆ ಮಾಡುವದಕ್ಕೆ ಒಂದು ದಿನವನ್ನು ಗೊತ್ತುಮಾಡಿದ್ದಾನೆ. ಇದಲ್ಲದೆ ತಂದೆಯು ಯಾರಿಗೂ ತೀರ್ಪು ಮಾಡುವದೂ ಇಲ್ಲ; ತೀರ್ಪು ಮಾಡುವ ಅಧಿಕಾರವನ್ನೆಲ್ಲಾ ಮಗನಿಗೆ ಕೊಟ್ಟಿದ್ದಾನೆ" [(ಅ.ಕೃ.: 17:31); 1 ಯೋಹಾನ 2:1; ಯೋಹಾನ 5:22].

ನ್ಯಾಯತೀರ್ಪಿನ ದಿನದ ಬಗ್ಗೆ ಬಹಳ ಅಸ್ಪಷ್ಟವಾದ ಮತ್ತು ಅನಿರ್ದಿಷ್ಟವಾದ ಕಲ್ಪನೆಗಳು ಮೇಲುಗೈ ಸಾಧಿಸಿವೆ. ಸಾಮಾನ್ಯವಾಗಿ ಮನಸ್ಸಿಗೆ ತಂದುಕೊಳ್ಳುವ ದೃಷ್ಟಿಕೋನವೆಂದರೆ, ಕ್ರಿಸ್ತನು ಭೂಲೋಕಕ್ಕೆ ಬರುತ್ತಾನೆ, ಶ್ವೇತವರ್ಣದ ಮಹಾ ಸಿಂಹಾಸನದ ಮೇಲೆ ಕುಳಿತುಕೊಳ್ಳುತ್ತಾನೆ. ಭೂಕಂಪಗಳು, ಸಮಾಧಿಗಳ ತೆರೆಯುವಿಕೆ, ಬಂಡೆಗಳ ಸೀಳುವಿಕೆ, ಪರ್ವತಗಳ ಕುಸಿಯುವಿಕೆ ಇವೇ ಮುಂತಾದ ಪ್ರಕೃತಿಯ ಮಹಾ ವಿಕೋಪಗಳ ಮಧ್ಯೆ ಭಕ್ತರುಗಳನ್ನೂ ಮತ್ತು ಪಾಪಿಗಳನ್ನು ಅವರವರ ಸ್ಥಾನಕ್ಕನುಸಾರವಾಗಿ ನ್ಯಾಯತೀರ್ಪಿಗಾಗಿ ಕರೆಯುತ್ತಾನೆ. ಭಯದಿಂದ ಕಂಪಿಸುತ್ತಿರುವ ಪಾಪಿಗಳನ್ನು ಅವರ ಪೂರ್ವಾಭ್ಯಾಸವನ್ನು ಪುನಃ ಹೇಳುವಂತೆ, ಮತ್ತು ಅವರನ್ನು ಪುನಃ ಕರುಣೆಯಿಲ್ಲದ ನಿತ್ಯವಾದ ದಂಡನೆಯ ಸ್ಥಿತಿಗೆ ಹಿಂತಿರುಗಿಸುವಂತೆ ನಿರಂತರವಾದ ದುಃಖದ ಆಳದಿಂದ ಕರೆಯಲಾಗುತ್ತದೆ. ಸಂತರುಗಳನ್ನು ದಂಡನೆಗೊಳಗಾದವರ ದುಃಖಾವಸ್ಥೆಯನ್ನೂ, ಹತಾಶೆಯನ್ನೂ ನೋಡುವಂತೆಯೂ, ಅವರ ಸ್ವಂತ ಪ್ರಕರಣಗಳ ಬಗ್ಗೆ ಅಂತಿಮ ನಿರ್ಣಯವನ್ನು ಕೇಳಿಸಿಕೊಂಡು, ಹಿಂತಿರುಗುವಂತೆಯೂ ಪರಲೋಕದಿಂದ ತರಲಾಗುತ್ತದೆ. ಪ್ರಚಲಿತದಲ್ಲಿರುವ ವಿಚಾರಸರಣಿಯ ಪ್ರಕಾರ, ಎಲ್ಲರೂ ತಮ್ಮ ದಂಡನೆ ಇಲ್ಲವೆ ಪ್ರತಿಫಲವನ್ನು ಮರಣದಲ್ಲಿಯೇ ಹೊಂದಿ ಕೊಳ್ಳುತ್ತಾರೆ. ಇದನ್ನು ಭಿನ್ನತೆಯ ದೆಸೆಯಿಂದ ಸಾಮಾನ್ಯವಾದ ತೀರ್ಪು ಎಂದು ಕರೆಯುತ್ತಾರೆ ಮತ್ತು ಮೊದಲ ತೀರ್ಪಿನ ಪುನರಾವರ್ತನೆಯಾಗಿದೆ. ಆದರೆ ಯಾವುದೇ ಊಹಿಸಬಹುದಾದ ಉದ್ದೇಶವಿಲ್ಲದೆ ಅಂತಿಮವಾದ, ಬದಲಾಗಿಸಲಾಗದ ನಿರ್ಣಯವು ಮರಣದಲ್ಲಿ ನೀಡಲಾಗುವುದು ಎಂದು ಅವರು ಹೇಳಿಕೊಳ್ಳುತ್ತಾರೆ.

ಮಿಲಿಯಾಂತರ ಜನರ ತೀರ್ಪನ್ನು ನಡೆಸುವ ಈ ಮಹತ್ವವಾದ ಕಾರ್ಯಕ್ಕೆ ವಹಿಸಿಕೊಟ್ಟಿರುವ ಸಮಗ್ರ ಸಮಯವು ಇಪ್ಪತ್ನಾಲ್ಕು ಘಂಟೆಗಳ ಒಂದು ದಿವಸ ಮಾತ್ರ. ಬ್ರೂಕ್ ಲೈನ್ ಸಭೆಯವರಿಗೆ ಇತ್ತೀಚೆಗೆ ನೀಡಲ್ಪಟ್ಟ ಪ್ರವಚನವೊಂದರಲ್ಲಿ ಈ ಪ್ರಸ್ತಾಪದ ಬಗ್ಗೆ ಸಾಮಾನ್ಯ ದೃಷ್ಟಿಕೋನವನ್ನು ವ್ಯಕ್ತಪಡಿಸಿತು. ನ್ಯಾಯತೀರ್ಪಿನ ದಿನದ ವಿವರವಾದ ಕಾರ್ಯ ವಿವರಣೆಯನ್ನು ನೀಡುವುದರ ಮೇಲೆ ಪರಿಣಾಮ ಬೀರುವುದಾಗಿತ್ತು ಮತ್ತು ಅಕ್ಷರಶಃವಾದ ಒಂದು ದಿನದ ಮಿತಿಯಲ್ಲಿ ಅದು ಪೂರೈಸುವಂತೆ ಅಸ್ವಾಭಾವಿಕವಾಗಿ ಪ್ರತಿನಿಧಿಸಲ್ಪಟ್ಟಿತು.

ಇದೊಂದು ಅಪಕ್ವವಾದ ವಿಚಾರಧಾರೆಯಾಗಿದೆ ಮತ್ತು ಸಂಪೂರ್ಣ ಸ್ಫೂರ್ತಿದಾಯಕ ವಾಕ್ಯದೊಂದಿಗೆ ಯಾವುದೇ ಸಾಮರಸ್ಯವನ್ನು ಹೊಂದಿಲ್ಲ. ಇನ್ನೂ ಹೆಚ್ಚಾಗಿ ನಮ್ಮ ಕರ್ತನ ಕುರಿ ಮತ್ತು ಆಡುಗಳ ಸಾಮ್ಯದ (ಮತ್ತಾಯ 25:31–46) ಅಕ್ಷರಶಃವಾದ ಅರ್ಥ ವಿವರಣೆಯಿಂದ ಚಿತ್ರಿಸಲಾಗಿದೆ. ಒಂದು ರೂಪಕಾತ್ಮಕ ಸಾಂಕೇತಿಕವಾದ ಭಾಷೆಯ ಮೇಲೆ ಅಕ್ಷರಶಃವಾಗಿ ಒತ್ತಾಯಪೂರ್ವಕವಾದ ಅಸಂಬದ್ಧತೆಯನ್ನು ಹೇರುವ ಪ್ರಯತ್ನವನ್ನು ನಿರೂಪಿಸುವುದಾಗಿದೆ. ಒಂದು ಸಾಮ್ಯವು ಯಾವಾಗಲೂ ಕರಾರುವಕ್ಕಾದ ಹೇಳಿಕೆಯಾಗದು.

ಆದರೆ, ಅದು ಕೇವಲ ಸತ್ಯವನ್ನು ಅನೇಕ ವಿಧದಲ್ಲಿ ಅದರಂತೆಯೇ ಇರುವ ಮತ್ತೊಂದರಿಂದ ನಿರೂಪಿಸುವುದಾಗಿದೆ. ಈ ಸಾಮ್ಯಗಳು ನ್ಯಾಯ ತೀರ್ಪನ್ನು ಯಾವ ರೀತಿ ನಡೆಸಲಾಗುತ್ತದೆ ಎಂದು ತಿಳಿಸುವ ಅಕ್ಷರಶಃವಾದ ಹೇಳಿಕೆಯಾಗಿದ್ದರೆ ಅದು ನಾವು ಓದುವಂತೆ ಅಕ್ಷರಶಃವಾಗಿ ಕುರಿ ಆಡುಗಳಿಗೆ ಅನ್ವಯುವಾಗುತ್ತದೆಯೇ ಹೊರತು ಮಾನವ ಜಾತಿಯವರಿಗೆ ಅಲ್ಲವೇ ಅಲ್ಲ. ನಾವೀಗ ದೇವರು ನಿಗದಿಪಡಿಸಿದ ಮಹಾತೀರ್ಪಿನ ದಿನದ ಕಾರ್ಯ ಮತ್ತು ಫಲಿತಾಂಶಗಳ ಬಗ್ಗೆ ಇನ್ನೂ ಹೆಚ್ಚು ಧರ್ಮಗ್ರಂಥ ಆಧಾರಿತವಾದ ಮತ್ತು ಸಮಂಜಸವಾದ ದೃಷ್ಟಿಕೋನದಿಂದ ನೋಡುವವರಾಗೋಣ. ಇದರೊಂದಿಗೆ ಸಮಂಜಸವಾದ ಮತ್ತು ಧರ್ಮಗ್ರಂಥದ ಆಧಾರಿತ ತೀರ್ಮಾನಗಳನ್ನು ಎಲ್ಲಾ ಸಾಮ್ಯಗಳೂ ಮತ್ತು ಚಿತ್ರಣಗಳೂ ಒಪ್ಪಿಕೊಳ್ಳಲೇ ಬೇಕಾಗುತ್ತದೆ.

'ನ್ಯಾಯತೀರ್ಪು' ಎಂಬ ಪದವು ಕೇವಲ ತೀರ್ಪನ್ನು ನೀಡುವುದಕ್ಕಿಂತ ಹೆಚ್ಚಿನದನ್ನು ಸಂಕೇತಿಸುತ್ತದೆ. ಅದು 'ವಿಚಾರಣೆ' ಮತ್ತು ಆ ವಿಚಾರಣೆಯ ಮೇಲೆ ಆಧಾರಗೊಂಡ ತೀರ್ಪುಗಳನ್ನು ಒಳಗೊಂಡಿದೆ. ಇದು ಆಂಗ್ಲ ಭಾಷೆಯ Judgement ಎಂಬ ಪದದಲ್ಲಿ ಮಾತ್ರ ಸತ್ಯವಾಗಿರುವುದಲ್ಲದೆ, ಅದು ಅನುವಾದಗೊಂಡಿರುವ ಗ್ರೀಕ್ ಭಾಷೆಯಲ್ಲೂ ಸಹ ಸತ್ಯವಾಗಿದೆ.

'ದಿನ' ಎಂಬ ಪದವು ಪರಿಶುದ್ಧ ಗ್ರಂಥಗಳಲ್ಲಿಯೂ ಮತ್ತು ಸಾಮಾನ್ಯ ಉಪಯೋಗದಲ್ಲಿಯೂ ಹನ್ನೆರಡು ಅಥವಾ ಇಪ್ಪತ್ತಾಲ್ಕು ಘಂಟೆಗಳ ಅವಧಿಯನ್ನು ಹೆಚ್ಚಾಗಿ ಪ್ರತಿನಿಧಿಸುವುದಾದರೂ ಅದು ನಿಜವಾಗಿಯೂ ಯಾವುದೇ ನಿರ್ದಿಷ್ಟವಾದ ಅಥವಾ ವಿಶೇಷವಾದ ಸಮಯಾವಧಿಯನ್ನು ಸೂಚಿಸುವುದಾಗಿದೆ. ಹೀಗೆ ಉದಾಹರಣೆಗಾಗಿ, ನಾವು 'ನೋಹನ ದಿನ' 'ಲೂಥರನ ದಿನ', 'ವಾಷಿಂಗ್‌ಟನ್ನಿನ ದಿನ' ಎಂಬುದಾಗಿ ಮಾತನಾಡುತ್ತೇವೆ. ಈ ರೀತಿಯಾಗಿ ಸತ್ಯವೇದದಲ್ಲಿ ಸೃಷ್ಟಿಯ ಸಮಗ್ರ ಸಮಯವನ್ನು ಒಂದು ದಿನ ಎಂಬುದಾಗಿ ಕರೆಯಲಾಗಿದೆ. 'ಯೆಹೋವನು ಪರಲೋಕವನ್ನೂ, ಭೂಲೋಕವನ್ನೂ ಉಂಟುಮಾಡಿದ ದಿನ' ಎಂಬುದಾಗಿ ಓದುತ್ತೇವೆ – "The day that Jehovah God made the earth and the heavens (Genesis 2:4 – ಯೆಹೋವ ದೇವರು ಭೂಮ್ಯಾಕಾಶಗಳನ್ನು ಉಂಟುಮಾಡಿದನು) ಎಂದು ಬರೆದದೆ, ಇದೊಂದು ದೀರ್ಘವಾದ ನಿರ್ದಿಷ್ಟ ದಿನವಾಗಿದೆ. ನಂತರದಲ್ಲಿ ನಾವು "ಅರಣ್ಯದಲ್ಲಿ ದೇವರನ್ನು ಪರೀಕ್ಷಿಸಿದ ದಿನ" – 40 ವರ್ಷಗಳು (ಇಬ್ರಿಯ 3:8,9), "ರಕ್ಷಣೆಯ ದಿನ" (2 ಕೊರಿಂಥ 6:2), "ಮುಯ್ಯಿ ತೀರಿಸುವ ದಿನ" (ಯೆಶಾಯ 63:4), "ರೌದ್ರದ ದಿನ", "ಶ್ರಮ ಸಂಕಟಗಳ ದಿನ", "ಹಾಳುಪಾಳು ಮಾಡುವ ದಿನ", "ಕಾರ್ಮುಗಿಲ ಕತ್ತಲಿನ (ಮೊಬ್ಬಿನ) ದಿನ", "ಆರ್ಭಟಿಸಿ ಕೊಂಬೂದುವ ದಿನ" ಎಂಬಿತ್ಯಾದಿ ಯೆಹೋವನ ದಿನಗಳ ವಿವರಣೆಯನ್ನು ಚೆಫನ್ಯ 1:15–16ರಲ್ಲಿ ನೋಡುತ್ತೇವೆ. ಈ ಪದಗಳನ್ನು ಯೆಹೂದ್ಯರ ಕಾಲದ ಅಂತ್ಯದಲ್ಲಿನ 40 ವರ್ಷಗಳಿಗೆ, ಅನ್ವಯಿಸಲಾಗುತ್ತಿತ್ತು ಮತ್ತು ಸುವಾರ್ತಾ ಯುಗದ ಅಂತ್ಯದಲ್ಲಿ ಕಾಣಿಸಿಕೊಳ್ಳುವ ಸಂಕಷ್ಟದ ದಿನಗಳಿಗೂ ಅನ್ವಯಿಸಲಾಗುತ್ತದೆ. ನಂತರದಲ್ಲಿ ಪುನಃ ನಾವು "ಕ್ರಿಸ್ತನ ದಿನ"ದ "ನ್ಯಾಯ ತೀರ್ಪಿನ ದಿನ"ದ ಬಗ್ಗೆ ಓದುತ್ತೇವೆ. ಇವುಗಳು ಸಹಸ್ರಮಾನ ಯುಗಕ್ಕೆ ಅನ್ವಯಿಸುತ್ತವೆ, ಅದರಲ್ಲಿ ಕ್ರಿಸ್ತನು ಲೋಕದ ಮೇಲೆ ಆಳ್ವಿಕೆಮಾಡುತ್ತಾನೆ, ನೀತಿವಂತಿಕೆಯಲ್ಲಿ ಭೂಲೋಕದ ನ್ಯಾಯವಿಚಾರಣೆ ಮಾಡಿ ತೀರ್ಪು ನೀಡುತ್ತಾನೆ, ನ್ಯಾಯವಿಚಾರಣೆಗೆ ಒಳಪಡಿಸುವುದಲ್ಲದೆ, ತೀರ್ಪನ್ನೂ ನೀಡುತ್ತಾನೆ, ಈ ಕಾಲಾವಧಿಯ ಬಗ್ಗೆ "ಆತನು ನಿಷ್ಕರ್ಷೆ ಮಾಡಿದ ಪುರುಷನ ಕೈಯಿಂದ ನೀತಿಗನುಸಾರವಾಗಿ ಭೂಲೋಕದ ನ್ಯಾಯವಿಚಾರಣೆ ಮಾಡುವುದಕ್ಕೆ ಒಂದು ದಿವಸವನ್ನು ಗೊತ್ತು ಮಾಡಿದ್ದಾನೆ" (ಅ.ಕೃ. 17:31). ಭಾಗ್ಯವಂತನಾದ ಏಕಾಧಿಪತಿಯು ತನ್ನ ಕ್ಲುಪ್ತ ಸಮಯದಲ್ಲೇ ಆತನನ್ನು ಪ್ರತ್ಯಕ್ಷಪಡಿಸುವನು. ಆ ಏಕಾಧಿಪತಿಯು ರಾಜಾಧಿರಾಜನೂ, ಕರ್ತರ ಕರ್ತನೂ" (ತಿಮೋ. 6:15) ಎಂದು ಬರೆದದೆ. ಇತರೇ ರೀತಿಯ ಸಂದರ್ಭದ ಪ್ರಕರಣಗಳಲ್ಲಿ "ದಿನ" ಎಂಬ ಪದದ ವಿಶಾಲವಾದ ಅರ್ಥವನ್ನು ಗ್ರಹಿಸುವಾಗ, ಈ ನ್ಯಾಯವಿಚಾರಣೆಯ ದಿನವು ಮಾತ್ರ ಕೇವಲ ಹನ್ನೆರಡು ಅಥವಾ ಇಪ್ಪತ್ನಾಲ್ಕು ಘಂಟೆಗಳ ಅವಧಿಯದೆಂದು, ಅವುಗಳು ಸಂಪ್ರದಾಯದಿಂದ ಪ್ರಭಾವಗೊಂಡಿದೆ ಎಂಬುದನ್ನು ಹೊರತುಪಡಿಸಿ ಯಾವುದೇ ಆಧಾರವಿಲ್ಲದೆ ಅಥವಾ ಪರಿಶೀಲನೆಗಳಿಲ್ಲದೆ ಯಾರಾದರೂ ಯಾಕೆ ಊಹಿಸಬೇಕೆಂದು ಅರ್ಥವಾಗುವುದಿಲ್ಲ.

ನ್ಯಾಯವಿಚಾರಣೆಯ ದಿನವನ್ನು ಕುರಿತು ಉಲ್ಲೇಖವನ್ನು ಸತ್ಯವೇದದ ಸಂಪೂರ್ಣ ಅನುಕ್ರಮಣಿಕೆ ಹೊಂದಾಣಿಕೆಯನ್ನು (Condordance) ಜಾಗರೂಕತೆಯಿಂದ ಯಾರು ವಿಚಾರಿಸುವವರೋ, ಮತ್ತು ಆ ಅವಧಿಯೊಳಗೆ ನೆರವೇರಬೇಕಾದ ಕಾರ್ಯಗಳ ಮೊತ್ತ ಮತ್ತು ರೀತಿಯನ್ನು ಗಮನಿಸುವವರೋ ಅವರು ಸಾಮಾನ್ಯ ದೃಷ್ಟಿಕೋನದಲ್ಲಿರುವ ಅಸಂಬದ್ಧತೆಯನ್ನು ಮತ್ತು ದಿನ

ಎಂಬ ಪದಕ್ಕೆ ಅದರ ವಿಶಾಲವಾದ ಮಹತ್ವವನ್ನ ನೀಡುವ ಅಗತ್ಯತೆಯನ್ನು ಕೂಡಲೇ ಕಂಡುಕೊಳ್ಳುವರು.

ಪರಿಶುದ್ಧ ಗ್ರಂಥಗಳು ಮಹಾ ತೀರ್ಪಿನ ಅಥವಾ ವಿಚಾರಣೆಯ ದಿನದ ಬಗ್ಗೆ ಅದು ಇನ್ನೂ ಮುಂದಿನ ಭವಿಷ್ಯದಲ್ಲಿದೆ ಎಂದು ಮಾತನಾಡುವಾಗ, ಮತ್ತು ಮಾನವಸಂತತಿಯ ಸಮೂಹವು ಆ ದಿನದಲ್ಲಿ ಅವರ ಸಂಪೂರ್ಣವಾದ ವಿಚಾರಣೆಗೊಳಗಾಗ ಬೇಕಾಗಿದೆ ಮತ್ತು ಅಂತಿಮ ಮಹಾದಂಡನೆಯನ್ನು ಹೊಂದಬೇಕಾಗಿದೆ ಎಂಬುದನ್ನು ಅದು ತೋರಿಸುವುದಾಗಿದೆ. ಅಷ್ಟೇ ಅಲ್ಲದೇ ಅವುಗಳು ಇತರೆ ತೀರ್ಪಿನ ದಿನಗಳೂ ಅವೆ, ಆ ದಿನಗಳಲ್ಲಿ ಕೆಲವು ಆಯ್ದ ವರ್ಗಗಳು ವಿಚಾರಣೆಗೊಳಗಾಗುತ್ತವೆ ಎಂಬುದನ್ನೂ ಕಲಿಸಿಕೊಡುತ್ತವೆ.

ಮೊದಲನೆಯ ಮಹಾ ತೀರ್ಪು (ವಿಚಾರಣೆ ಮತ್ತು ದಂಡನೆ) ಪ್ರಾರಂಭದಲ್ಲಿ, ಏದೇನ್ ತೋಟದಲ್ಲಿತ್ತು. ಆಗ ಇಡೀ ಮಾನವ ಜನಾಂಗವು ಅದರ ಶಿರಸ್ಸಾದ ಆದಾಮನಲ್ಲಿ ಪ್ರತಿನಿಧಿತವಾಗಿದ್ದು ದೇವರ ಮುಂದೆ ವಿಚಾರಣೆಗಾಗಿ ನಿಂತುಕೊಂಡಿತು. ಆ ವಿಚಾರಣೆಯ ಫಲಿತಾಂಶವು – ಅಪರಾಧಿ, ಅವಿಧೇಯ, ಜೀವಿಸಲು ಅನರ್ಹ ಎಂಬ ತೀರ್ಪಾಗಿತ್ತು ಮತ್ತು ವಿಧಿಸಲ್ಪಟ್ಟ ಶಿಕ್ಷೆಯು – "ಸತ್ತೇ ಹೋಗುವಿ" ಎಂಬ ಮರಣದ ಶಿಕ್ಷೆಯಾಗಿತ್ತು (ಆದಿ. 2:17). ಹೀಗಾಗಿ, ಆದಾಮನಲ್ಲಿ ಎಲ್ಲರೂ ಸಾಯುವರು. ಏದೇನಿನಲ್ಲಿನ ವಿಚಾರಣಾ ಸಮಯವು ಭೂಲೋಕದ ಪ್ರಪ್ರಥಮ ನ್ಯಾಯತೀರ್ಪಿನ ದಿನವಾಗಿತ್ತು. ನ್ಯಾಯಾಧಿಪತಿಯಾದ ಯೆಹೋವನ ನಿರ್ಣಯವು ಅಂದಿನಿಂದ ಜಾರಿಗೆ ಬಂತು.

"ಎಲ್ಲಾ ಅನೀತಿವಂತಿಕೆಯ ಮೇಲೆ ದೇವರ ಕ್ರೋಧವು ಪರಲೋಕದಿಂದ ಪ್ರಕಟವಾಯಿತು" (ರೋಮಾ. 1:18) ಇದನ್ನು ಎಲ್ಲಾ ಅಂತ್ಯಕ್ರಿಯೆಯ ಶವಯಾತ್ರೆಗಳಲ್ಲಿಯೂ ನೋಡಬಹುದಾಗಿದೆ. ಪ್ರತಿಯೊಂದು ಸಮಾಧಿಯೂ ಇದಕ್ಕೆ ಸಾಕ್ಷಿಯಾಗಿದೆ. ಇದನ್ನು ನಾವು ಪ್ರತಿಯೊಂದು ನೋವಿನಲ್ಲಿಯೂ ವೇದನೆಯಲ್ಲಿಯೂ ಅನುಭವಿಸುತ್ತೇವೆ – ಇದೆಲ್ಲವೂ ಮೊದಲನೆಯ ವಿಚಾರಣೆ ಮತ್ತು ತೀರ್ಪಿನ ಫಲಿತಾಂಶವಾಗಿದೆ – ಇದು ದೇವರ ನೀತಿವಂತಿಕೆಯ ತೀರ್ಪಾಗಿದೆ. ಆದಿಯಲ್ಲಿ ಮಾನವನು, ದೇವರ ಹೋಲಿಕೆಯಲ್ಲಿದ್ದು, ದೇವರಿಗೆ ವಿಧೇಯನಾಗಿದ್ದಾಗ ಮೂಲತಃ ಒದಗಿಸಿಕೊಟ್ಟಂತ ಜೀವ ಮತ್ತು ಆಶೀರ್ವಾದಗಳಿಗೆ ನಾವೀಗ ಅನರ್ಹರಾಗಿದ್ದೇವೆ. ಆದರೆ, ಮಾನವ ಜಾತಿಯು ಮೊದಲನೆಯ ವಿಚಾರಣೆಯ ಈ ತೀರ್ಪಿನಿಂದ ಮಹಾ ವಿಮೋಚಕನು ಎಲ್ಲರಿಗಾಗಿ ಮಾಡಿದ ಒಂದು ಸಮರ್ಪಣೆಯಿಂದ ಮೊದಲಿನ ಸುಸ್ಥಿತಿಗೆ ಹಿಂದಿರುಗಬೇಕಾಗಿದೆ. ಎಲ್ಲರೂ ಸಮಾಧಿಯಿಂದ, ಮರಣದ ದಂಡನೆಯಿಂದ – ನಾಶನದಿಂದ ಪಾರುಮಾಡಲ್ಪಡಬೇಕು. ಇದು ಈ ವಿಮೋಚನೆಯ ದೃಷ್ಟಿಯಲ್ಲಿ, ಶಾಶ್ವತ ಅರ್ಥದಲ್ಲಿ ಮರಣವೆಂಬ ಪದವು ಇನ್ನು ಮುಂದೆ ಪೂರ್ಣ ಮರಣವೆಂದು ಪರಿಗಣಿಸಲ್ಪಡುವುದಿಲ್ಲ. ಅದು ತಾತ್ಕಾಲಿಕವಾದ ನಿದ್ರೆ ಎನಿಸಿಕೊಳ್ಳುತ್ತದೆ. ಯಾಕೆಂದರೆ, ಸಹಸ್ರವಾನದ ಮುಂಜಾನೆಯಲ್ಲಿ ಎಲ್ಲರನ್ನೂ ವಿಮೋಚಿಸಿದ ಜೀವದಾಯಕನ ಮೂಲಕ ಸತ್ತವರೆಲ್ಲರೂ ಜೀವಿತರಾಗಿ ಎದ್ದುಬರುವರು. ಕ್ರಿಸ್ತನಲ್ಲಿ ನಂಬಿಗಸ್ಥರಾದ ಸಭೆಯವರು ಮಾತ್ರವೇ ಇನ್ನೂ ಯಾವುದೇ ಅರ್ಥದಲ್ಲಿ ಈ ಮೂಲ ತೀರ್ಪಿನಿಂದ, ದಂಡನೆಯಿಂದ ಬಿಡುಗಡೆ ಹೊಂದುವರು, ಪಾರಾಗುವರು; ಅವರ ಈ ಪಾರಾಗುವಿಕೆಯು ಇನ್ನೂ ವಾಸ್ತವಿಕತೆಯಲ್ಲ, ಆದರೆ ನಂಬಿಕೆಯಲ್ಲಿ ಹಾಗೆ ಎಣಿಸಲಾಗುವುದು. ನಾವು ನಂಬಿಕೆಯಿಂದಲೇ ರಕ್ಷಿಸಲ್ಪಟ್ಟವರಾಗಿದ್ದೇವೆ. ಈ ಮರಣದ ದಂಡನೆಯಿಂದ ನಮ್ಮ ನಿಜವಾದ ಬಿಡುಗಡೆಯನ್ನು (ಆದಾಮನಲ್ಲಿ ಉಂಟಾಯಿತು, ಮತ್ತು ಕ್ರಿಸ್ತನಲ್ಲಿ ಸೇರುವ ಮೂಲಕ ಪಾರಾಗುವುದು) ಪುನರುತ್ಥಾನದ ಮುಂಜಾನೆಯವರೆಗೆ ಪೂರ್ಣವಾಗಿ ಅನುಭವವಾಗುವುದಿಲ್ಲ, ಆಗ ನಾವು ನಮ್ಮ ವಿಮೋಚಕನಂತೆ ಆತನಲ್ಲಿ ಜೀವದಿಂದೆದ್ದು ಬರುವಲ್ಲಿ ತೃಪ್ತರಾಗುವೆವು. ಆದರೆ ಸತ್ಯಸಂಗತಿಯೆಂದರೆ, ಕ್ರಿಸ್ತನಲ್ಲಿ ದೇವರ ಕೃಪಾಪೂರ್ಣ ಯೋಜನೆಯ ಜ್ಞಾನಕ್ಕೆ ಬಂದವರಾದ ನಾವು "ಈ ಲೋಕದಲ್ಲಿ ದುರಾಶೆಯಿಂದುಂಟಾದ ಕೆಟ್ಟತನಕ್ಕೆ (ಅದು ಭೂಮಿಯಲ್ಲಿ ಈಗಲೂ ಇದೆ) ತಪ್ಪಿಸಿ ಕೊಂಡಿದ್ದೇವೆ." ಇತರರು ಇದುವರೆಗೆ ಭವಿಷ್ಯದಲ್ಲಿ ಪಾರಾಗುವ ನಿರೀಕ್ಷೆ ಇಲ್ಲವೆಂದು ಸಾಬೀತುಪಡಿಸುವದಕ್ಕೆ ವ್ಯತಿರಿಕ್ತವಾದುದನ್ನು ರುಜುವಾತುಗೊಳಿಸುತ್ತದೆ; ಯಾಕೆಂದರೆ ನಾವು ಆತನ ಸೃಷ್ಟಿಯಲ್ಲಿ ದೇವರಿಗೆ ಪ್ರಥಮ ಫಲವಾಗಿದ್ದೇವೆ. ಆದಾಮನಲ್ಲಿನ ಮರಣದಿಂದ ಕ್ರಿಸ್ತನಲ್ಲಿನ ಜೀವನಕ್ಕೆ ನಾವು ಪಾರಾಗುವುದು ನಾಶದ ವಶದಿಂದ ಬಿಡುಗಡೆಯಾಗಿ ದೇವರ ಮಕ್ಕಳ ಮಹಿಮೆಯುಳ್ಳ ವಿಮೋಚನೆಯಲ್ಲಿ ಪಾಲುಹೊಂದುವ ವಿಮೋಚನೆಯ ಮುನ್ಸೂಚನೆಯಾಗಿದೆ, ದೇವರು ತನ್ನ ಪುತ್ರರೆಂದು ಗುರುತಿಸುವ ಎಲ್ಲರಿಗೂ ಸೂಕ್ತವಾದ ಜೀವನ ಸ್ವಾತಂತ್ರ್ಯಕ್ಕೆ ನಡೆಸುವುದಾಗಿದೆ. ಸ್ವಭಾವದ ವ್ಯತ್ಯಾಸಗಳನ್ನು ಲೆಕ್ಕಿಸದೆ ಸಾವಿನಿಂದ ಜೀವಕ್ಕೆ ತಲುಪಿಸಲ್ಪಡುವ ತನ್ನ ಪುತ್ರರಿಗೆಲ್ಲರಿಗೂ ದೇವರು ವಿಭಿನ್ನ ಯೋಜನೆಗಳನ್ನು ಒದಗಿಸಿದ್ದಾನೆ. ಸುವಾರ್ತಾ ಯುಗವು

ದೈವಸ್ವಭಾವಕ್ಕೆ ಕರೆಯಲ್ಪಟ್ಟವರಿಗೆ ಜೀವದ ಅಥವಾ ಮರಣದ ವಿಚಾರಣಾ ದಿನವಾಗಿದೆ.

ಆದರೆ, ದೇವರು ಈ ಲೋಕದ ನ್ಯಾಯತೀರ್ಪನ್ನು ಮಾಡುವ ಒಂದು ದಿನವನ್ನು ನೇಮಿಸಿದ್ದಾನೆ. ಇದು ಹೇಗೆ ಸಾಧ್ಯ? ದೇವರು ತನ್ನ ಮನಸ್ಸನ್ನು ಬದಲಾಯಿಸಿಕೊಂಡಿದ್ದಾನೆಯೇ? ಆತನು ಮೊದಲ ಮಾನವನ ವಿಚಾರಣೆ ಮಾಡಿ ನೀಡಿದ ಸರ್ವ ಸಾಮಾನ್ಯವಾದ ನಿರ್ಧಾರವು ಅನ್ಯಾಯ, ಬಹಳ ಕಠಿಣವಾದುದು, ಎಂದು ತೀರ್ಮಾನಿಸಿ, ಈಗ ಆತನು ಪ್ರತಿಯೊಬ್ಬನನ್ನೂ ವ್ಯಕ್ತಿಗತವಾಗಿ ವಿಚಾರಿಸಲು ನಿರ್ಧರಿಸಿದ್ದಾನೆಯೋ? ಇಲ್ಲ; ಪ್ರಕರಣವು ಹಾಗಿರುತ್ತಿದ್ದರೆ, ನಮಗೆ ಮುಂದಿನ ವಿಚಾರಣೆಯಲ್ಲಿ ಹಿಂದಿನದಿಕ್ಕಿಂತ ಹೆಚ್ಚು ನ್ಯಾಯವಾದ ನಿರ್ಧಾರದ ಖಚಿತತೆ ಇರದು. ದೇವರು ಮೊದಲನೆಯ ವಿಚಾರಣೆಯಲ್ಲಿ ತನ್ನ ತೀರ್ಪು ಅನ್ಯಾಯದ್ದಾಗಿತ್ತೆಂದು ಪರಿಗಣಿಸಿರುವುದಿಲ್ಲ, ಆದರೆ ಆತನು ತನ್ನ ಮೊದಲ ತೀರ್ಪಿಗೆ ದಂಡನೆಯಾಗಿ ಒಂದು ವಿಮೋಚನೆಯನ್ನು ಒದಗಿಸಿದ್ದಾನೆ. ಆತನು ಇನ್ನೂ ಅನುಕೂಲಕರ ಪರಿಸ್ಥಿತಿಯಲ್ಲಿ ಮತ್ತೊಂದು ವಿಚಾರಣೆ (ತೀರ್ಪು) ಮಾಡುವಂತೆ ಎಲ್ಲಾ ಕುಲಗಳಿಗೆ ಒದಗಿಸಿಕೊಟ್ಟಿದ್ದಾನೆ – ಅದುವರೆಗೆ ಎಲ್ಲರೂ ಪಾಪದೊಂದಿಗೆ ಮತ್ತು ಅದರ ಫಲಿತಾಂಶದೊಡನೆ ಅನುಭವವನ್ನು ಹೊಂದಿ ಕೊಂಡಿರುತ್ತಾರೆ. ದೇವರು ತನ್ನ ಮೂಲ ಉದ್ದೇಶವನ್ನು ಕಿಂಚಿತ್ತಾದರೂ ಬದಲಾಯಿಸಿಲ್ಲ. ಆತನು ಅದನ್ನು ಈ ಲೋಕವು ಪ್ರಾರಂಭವಾಗುವ ಮೊದಲೇ ರೂಪಿಸಿದ್ದನು. ಆತನು ಬದಲಾಗುವವನಲ್ಲ. ಯಾವುದೇ ಕಾರಣದಿಂದ ಆತನು ಅಪರಾಧಿಯನ್ನು ಮುಕ್ತಗೊಳಿಸುವುದಿಲ್ಲ ಎಂಬುದನ್ನು ನಮಗೆ ಸುಸ್ಪಷ್ಟವಾಗಿ ತಿಳಿಸುವವ ನಾಗಿದ್ದಾನೆ. ಆತನು ನ್ಯಾಯವಾಗಿ ಉಚ್ಚರಿಸಿದ ಪೂರ್ಣ ದಂಡವನ್ನು ಒತ್ತಾಯಪಡಿಸುತ್ತಾನೆ. ಆ ಪೂರ್ಣ ದಂಡವು ವಿಮೋಚಕನಿಂದ ಅಥವಾ ದೇವರು ತಾನೇ ಕೊಟ್ಟ ಬದಲಿಯವನಿಂದ ಅಂದರೆ ಯೇಸುಕ್ರಿಸ್ತನಿಂದ ಒದಗಿಸಲ್ಪಟ್ಟಿದೆ. ಆತನು ದೇವರ ಕೃಪೆಯಿಂದ ಎಲ್ಲಾ ಮನುಷ್ಯರಿಗಾಗಿ ಮರಣವನ್ನು ಅನುಭವಿಸಿದನು (ಇಬ್ರಿಯ 2:9). ನಮ್ಮ ಕರ್ತನು ಆದಾಮನ ಕುಲದವರಿಗಾಗಿ ತನ್ನ ಸ್ವಪ್ರಾಣವನ್ನು ಈಡುಬಲಿಯಾಗಿ ತೆತ್ತಿದ್ದು ಅವರೆಲ್ಲರಿಗೂ ನೂತನ ಜೀವದ ಕೊಡುಗೆಯನ್ನು ನೀಡಿದ್ದಾನೆ. ಸಭೆಗೆ ಈ ಕೊಡುಗೆಯು ಯಜ್ಞದ ಮೂಲಕ ಒಡಂಬಡಿಕೆಯಾಗಿದ್ದು, ಸಮಸ್ತಲೋಕಕ್ಕೆ ನೂತನ ಒಡಂಬಡಿಕೆಯ ಅಡಿಯಲ್ಲಿದೆ (ಕೀರ್ತನೆ 50:5; ರೋಮಾ. 12:1, 14:9; ಇಬ್ರಿಯ 10:16; ಯೆರೆಮೀಯ 31:31).

ನಾವು ಇನ್ನೂ ತಿಳಿಸಿರುವುದೇನೆಂದರೆ, ದೇವರು ಈ ಲೋಕಕ್ಕೆ ಈ ವ್ಯಕ್ತಿಗತ ವಿಚಾರಣೆಯನ್ನು ನೀಡುವನು, ಅದು ನ್ಯಾಯಾಧಿಪತಿಯಾದ ಕ್ರಿಸ್ತನ ಅಡಿಯಲ್ಲಿರುತ್ತದೆ. ಈ ರೀತಿಯಲ್ಲಿ ನಮ್ಮ ವಿಮೋಚನೆಗಾಗಿ ಆತನು (ಕ್ರಿಸ್ತನು) ಮರಣದ ಪರ್ಯಂತ ವಿಧೇಯನಾದ ಕಾರಣ ಯೆಹೋವನು ಆತನನ್ನು ಗೌರವಪಡಿಸಿದನು. ದೇವರು ಆತನನ್ನು ಮಹಾ ಉನ್ನತ ಸ್ಥಿತಿಗೆ, ದೇವರ ಸ್ವಭಾವಕ್ಕೂ ಏರಿಸಿ ಆತನನ್ನು ಒಬ್ಬ ಅರಸನಾಗಿಯೂ ಮತ್ತು ರಕ್ಷಕನನ್ನಾಗಿಯೂ ಮಾಡಿದ್ದಾನೆ (ಅ.ಕೃ. 5:31), ಆತನು ಮರಣದಿಂದ ಪುನಃ ಸ್ವಾಧೀನಪಡಿಸಿಕೊಳ್ಳಲು ಸಮರ್ಥನಾಗಿ ತನ್ನ ಅಮೂಲ್ಯವಾದ ಸ್ವರಕ್ತದಿಂದ ಸಂಪಾದಿಸಿಕೊಂಡವರೆಲ್ಲರಿಗೂ ನ್ಯಾಯತೀರ್ಪು ದಯಪಾಲಿಸುವಂತೆ ಮಾಡಿದ್ದಾನೆ. ದೇವರು ಎಲ್ಲಾ ತೀರ್ಪನ್ನೂ ತನ್ನ ಮಗನಿಗೆ ಒಪ್ಪಿಸಿಕೊಟ್ಟಿದ್ದಾನೆ ಮತ್ತು ಆತನಿಗೆ ಭೂಪರಲೋಕಗಳಲ್ಲಿ ಎಲ್ಲಾ ಅಧಿಕಾರಗಳನ್ನೂ ನೀಡಿದ್ದಾನೆ (ಯೋಹಾನ 5:22).

ಅನಂತರದಲ್ಲಿ ಈ ರೀತಿಯಾಗಿ ತನ್ನ ಜೀವವನ್ನೇ ಈಡುಬಲಿಯಾಗಿ ಅರ್ಪಿಸುವ ಮಟ್ಟಿಗೆ ಈ ಲೋಕವನ್ನು ಪ್ರೀತಿಸಿದಾತನು ಅತ್ಯುನ್ನತೆಗೇರಿಸಲ್ಪಟ್ಟ, ಮಹಿಮೆಗೊಂಡ ಕ್ರಿಸ್ತನು, ವಾಗ್ದಾನಪಡಿಸಿದ ಭವಿಷ್ಯ ಕಾಲದಲ್ಲಿ ಪರೀಕ್ಷಿಸಲು ಈ ಲೋಕದ ನ್ಯಾಯಾಧಿಪತಿಯಾಗಿ ಬರುವನು ಮತ್ತು ಆ ಉದ್ದೇಶಕ್ಕಾಗಿಯೇ ಆತನನ್ನು ಆ ಹುದ್ದೆಗೆ ನೇಮಿಸಿದಾತನು ಸ್ವತಃ ಯೆಹೋವನೇ. ಅವುಗಳು ಪರಿಶುದ್ಧ ಗ್ರಂಥಗಳ ಸರಳವಾದ ಪ್ರಕಟನೆಗಳಾಗಿರುವುದರಿಂದ, ಭಯಪಡುವ ಕಾರಣವಿಲ್ಲ. ಆದರೆ ಅದಕ್ಕೆ ವ್ಯತಿರಿಕ್ತವಾಗಿ ನ್ಯಾಯವಿಚಾರಣೆಯ ದಿನವನ್ನು ಎದುರುನೋಡುತ್ತಾ ಉಲ್ಲಾಸಿಸಲು ಎಲ್ಲರ ಪಾಲಿಗೆ ಒಂದು ದೊಡ್ಡ ಧ್ಯೇಯವಿದೆ. ಏದೇನಿನಲ್ಲಿ ಕಳೆದುಕೊಂಡ ಮೂಲ ಪರಿಪೂರ್ಣತೆಗೆ ಸಿದ್ಧರಿರುವ ಹಾಗೂ ವಿಧೇಯರನ್ನು ಮರಳಿ ತರುವವರೆಗೆ, ತೀರ್ಪು ನ್ಯಾಯಯುತವೂ ಮತ್ತು ಕರುಣಾಪೂರಿತವಾಗಿಯೂ ಇದ್ದು ಎಲ್ಲರ ದೌರ್ಬಲ್ಯಗಳನ್ನು ಪರಿಗಣಿಸುತ್ತದೆ ಎಂಬುದಕ್ಕೆ ನ್ಯಾಯಾಧಿಪತಿಯ ಪಾತ್ರವು ಸಾಕಷ್ಟು ಖಾತರಿಯಾಗಿದೆ.

ಪುರಾತನ ಕಾಲದಲ್ಲಿ ಒಬ್ಬ ನ್ಯಾಯಾಧಿಪತಿಯು ನ್ಯಾಯವನ್ನು ನಿರ್ವಹಿಸುವವನೂ, ಪೀಡನೆಗೊಳ ಗಾದವನನ್ನು ಬಿಡಿಸುವವನೂ ಆಗಿದ್ದನು. ಗಮನಿಸಿ, ಉದಾಹರಣೆಗೆ, ಕರ್ತನಿಗೆ ವಿರುದ್ಧವಾಗಿ ಉಲ್ಲಂಘನೆಯ

ಕಾರಣದಿಂದಾಗಿ ಶತ್ರುಗಳಿಂದ ಪೀಡನೆಗೊಳಗಾದ ಇಸ್ರಾಯೇಲ್ಯರು ನ್ಯಾಯಸ್ಥಾಪಕರನ್ನು ಎಬ್ಬಿಸಿದರ ಮೂಲಕ ಕಾಲ ಕಾಲಕ್ಕೆ ಬಿಡುಗಡೆ ಹೊಂದಿದರು ಮತ್ತು ಆಶೀರ್ವಾದ ಹೊಂದಿದರು. ಹೀಗಾಗಿ ನಾವು – "ಇಸ್ರಾಯೇಲ್ಯರು ಯೆಹೋವನಿಗೆ ಮೊರೆ ಇಟ್ಟಾಗ ಆತನು ಅವರನ್ನು ಬಿಡಿಸುವುದಕ್ಕೋಸ್ಕರ ರಕ್ಷಕನನ್ನು ಎಬ್ಬಿಸಿದನು. ಒತ್ನಿಯೇಲನೇ ಅವರ ರಕ್ಷಕನು ಮತ್ತು ಯೆಹೋವನ ಆತ್ಮವು ಅವನ ಮೇಲೆ ಬಂದುದರಿಂದ ಅವನು ಇಸ್ರಾಯೇಲ್ಯರ ನ್ಯಾಯಸ್ಥಾಪನೆಗೋಸ್ಕರ ಯುದ್ಧಕ್ಕೆ ಹೊರಟನು... ದೇಶದಲ್ಲಿ ನಾಲ್ವತ್ತು ವರ್ಷಗಳವರೆಗೆ ಸಮಾಧಾನವಿತ್ತು" (ನ್ಯಾಯ 3:9–11) ಎಂದು ಓದುತ್ತೇವೆ. ಹೀಗೆ ಲೋಕವು ದೀರ್ಘಕಾಲ ಕೆಡುಕನಾದ ಸೈತಾನನ ಅಧಿಕಾರ ಮತ್ತು ಪೀಡನೆಗೆ ಒಳಗಾಗಿದ್ದಾಗ್ಯೂ ಶೀಘ್ರದಲ್ಲೇ, ತನ್ನ ಸ್ವಂತ ಅಮೂಲ್ಯ ರಕ್ತದಿಂದ ಎಲ್ಲರ ಪಾಪಗಳ ಕ್ರಯವನ್ನು ನೀಡುವಾತನು ತನ್ನ ಮಹಾ ಅಧಿಕಾರವನ್ನು ತೆಗೆದುಕೊಂಡು ಆಳುವನು. ಆತನು ಯಾರನ್ನು ವಿಮೋಚಿಸುವಂತೆ ಪ್ರೀತಿಸುತ್ತಾನೋ ಅವರನ್ನು ಬಿಡುಗಡೆಗೊಳಿಸಿ ನ್ಯಾಯತೀರಿಸುವನು.

ಈ ತೀರ್ಮಾನದೊಂದಿಗೆ ಎಲ್ಲಾ ಪ್ರವಾದನೀಯ ಪ್ರಕಟನೆಗಳೂ ಒಪ್ಪಿಗೆಯಾಗುತ್ತವೆ. "ಆತನು ಭೂನಿವಾಸಿಗಳಿಗೆ ನ್ಯಾಯ ತೀರಿಸಲಿಕ್ಕೆ ಬರುತ್ತಾನೆ; ಆತನು ಲೋಕಕ್ಕೆ ನೀತಿಗನುಸಾರವಾಗಿಯೂ, ಜನಾಂಗಗಳಿಗೆ ಯಥಾರ್ಥವಾಗಿಯೂ ತೀರ್ಪು ಕೊಡುವನು" (ಕೀರ್ತನೆ 98:9) ಎಂದು ಬರೆದದೆ.

ಬರಲಿರುವ ನ್ಯಾಯ ತೀರ್ಪು ಯಥಾವತ್ತಾಗಿ ಮೊದಲಿನಂತೆಯೇ ಅದೇ ನೀತಿಸೂತ್ರಗಳ ಮೇಲೆ ಇರುವುದು. ಅದೇ ವಿಧೇಯತೆಯ ಕಾನೂನನ್ನು ಪ್ರಸ್ತುತಪಡಿಸಲಾಗುವುದು, ಅದೇ ಜೀವದ ಪ್ರತಿಫಲ ಮತ್ತು ಮರಣವೆಂಬ ಅದೇ ದಂಡನೆಯನ್ನು ಪ್ರಸ್ತುತಿಗೊಳಿಸಲಾಗುವುದು. ಮೊದಲನೆಯ ವಿಚಾರಣೆಗೆ ಒಂದು ಆರಂಭವಿದ್ದು, ಪ್ರಗತಿಯಲ್ಲಿದ್ದು, ಮರಣ ದಂಡನೆಯ ತೀರ್ಪಿನೊಡನೆ ಸಮಾಪ್ತಿಯಾಯಿತು. ಎರಡನೆಯದು ಸಹಾ ಹಾಗೆಯೇ ಆಗುತ್ತದೆ. ತೀರ್ಪು ನೀತಿವಂತರಿಗೆ ನಿತ್ಯಜೀವ ಮತ್ತು ಅನೀತಿವಂತರಿಗೆ ಮರಣವಾಗಿದೆ. ಎರಡನೆಯ ವಿಚಾರಣೆಯು ಮೊದಲನೆಯದರಲ್ಲಿ ಪಡಕೊಂಡ ಅನುಭವದ ಕಾರಣ ಮೊದಲನೆಯದಕ್ಕಿಂತ ಹೆಚ್ಚು ಅನುಕೂಲಕರ ವಾಗಿರುವುದು. ಮೊದಲನೆಯ ವಿಚಾರಣೆಯಲ್ಲಿರದಂತೆ, ಎರಡನೆಯ ವಿಚಾರಣೆಯಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ತನಗೋಸ್ಕರ ಮಾತ್ರವೇ ವಿಚಾರಣೆಯಲ್ಲಿ ನಿಲ್ಲುತ್ತಾನೆಯೇ ಹೊರತು ಮತ್ತೊಬ್ಬರಿಗಾಗಿ ಅಲ್ಲ. ಹೀಗಾಗಿ ಯಾರೂ ಆದಾಮನ ಪಾಪದ ದೆಸೆಯಿಂದ ಅಥವಾ ಹುಟ್ಟಿನಿಂದ ಬಂದ ಅಪರಿಪೂರ್ಣತೆಗಳಿಂದ ಮರಣ ಹೊಂದುವುದಿಲ್ಲ. ಇನ್ನು ಮುಂದೆ "ತಂದೆಗಳು ಹುಳಿದ್ರಾಕ್ಷೆಯನ್ನು ತಿಂದರು, ಮಕ್ಕಳ ಹಲ್ಲುಗಳು ಜಳಿತುಹೋಗಿವೆ" ಅನ್ನರು, "ಸಾಯತಕ್ಕವನು ತನ್ನ ದೋಷದಿಂದ ಸಾಯುವನು, ಹುಳಿದ್ರಾಕ್ಷಿಯನ್ನು ತಿನ್ನುವವನ ಹಲ್ಲುಗಳೇ ಜಳಿತುಹೋಗುವವು" (ಯೆರೆಮೀಯ 31: 29–30) "ಪಾಪಮಾಡುವ ಪ್ರಾಣಿಯೇ ಸಾಯುವುದು" (ಯೆಹೆ. 18:4). ಈಗ ಸಭೆಗಿದ್ದಂತೆ ಆಗ ಲೋಕದಲ್ಲಿ ಮಾನವನು ತಾನು ಮಾಡದಿರುವ ಪಾಪಕ್ಕಾಗಿ ವಿಚಾರಣೆಗೊಳ ಗಾಗುವುದಿಲ್ಲ, ಆತನು ಮಾಡಿದ ಪಾಪಗಳಿಗಾಗಿಯೇ ವಿಚಾರಣೆಗೊಳಪಡುವನು (2 ಕೊರಿಂಥ 8:12). ಕ್ರಿಸ್ತನ ಆಳ್ವಿಕೆಯಲ್ಲಿ, ಮನುಕುಲವು ಕ್ರಮವಾಗಿ ಪರಿಪೂರ್ಣತೆಯನ್ನು ಮುಟ್ಟುವವರೆಗೂ ಶಿಕ್ಷಿತ ಗೊಳ್ಳುವುದು ತರಬೇತಿ ಹೊಂದುವರು ಮತ್ತು ಶಿಸ್ತುಗೊಳ್ಳುವರು. ಅವರು ಪರಿಪೂರ್ಣತೆಯನ್ನು ಹೊಂದಿಕೊಂಡ ಮೇಲೆ, ದೇವರೊಂದಿಗೆ ಪರಿಪೂರ್ಣ ಸಾಮರಸ್ಯವು ಬೇಕಾಗುತ್ತದೆ. ಆಗ ಯಾರಾದರೂ ಪೂರ್ಣ ವಿಧೇಯತೆಯಲ್ಲಿ ಕೊರತೆಯುಳ್ಳವರಾದರೆ ಅವರನ್ನು ತೆಗೆದು ಹಾಕಲಾಗುವುದು, ನಿತ್ಯಜೀವಕ್ಕೆ ಅನರ್ಹರು ಎಂದು ತೀರ್ಮಾನಿಸಲ್ಪಡುವರು. ಆದಾಮನ ಮೂಲಕ ಮನುಕುಲಕ್ಕೆ ಮರಣವನ್ನು ತಂದ ಪಾಪವು ಕೇವಲ ಒಂದು ಅವಿಧೇಯ ಕ್ರಿಯೆಯಾಗಿತ್ತು. ಆದರೆ ಆ ಒಂದು ಕ್ರಿಯೆಯಿಂದ ಆತನು ಪರಿಪೂರ್ಣತೆಯಿಂದ ಬಿದ್ದುಹೋದನು. ಆತನಿಂದ ಸರ್ವಸಂಪೂರ್ಣವಾದ ಪರಿಪೂರ್ಣತೆಯನ್ನು ಬಯಸುವುದಕ್ಕೆ ದೇವರಿಗೆ ಅಧಿಕಾರವಿತ್ತು. ಯಾಕೆಂದರೆ, ಆತನನ್ನು ಸರ್ವಸಂಪೂಣವಾಗಿ ಸೃಷ್ಟಿಸಲಾಗಿತ್ತು. ಆದುದರಿಂದ ದೇವರು ಪುನರ್ವಶಪಡಿಸುವ ಕಾರ್ಯವು ಮುಗಿದಕೂಡಲೇ ಎಲ್ಲಾ ಮನುಷ್ಯರಿಂದ ಅದನ್ನೇ ಹಕ್ಕಿನಿಂದ ಕೇಳುತ್ತಾನೆ. ಸ್ವಲ್ಪಮಟ್ಟದಲ್ಲಿಯಾದರೂ ಪರಿಪೂರ್ಣತೆಯ ಕೊರತೆಯುಳ್ಳ ಯಾರೊಬ್ಬರೂ ನಿತ್ಯಜೀವವನ್ನು ಪಡಕೊಳ್ಳಲು ಅನುಮತಿ ಹೊಂದುವುದಿಲ್ಲ. ಪರಿಪೂರ್ಣತೆಯ ಸ್ವಲ್ಪ ಕೊರತೆಯೂ ಸಹ ಪೂರ್ಣವಾದ ಬೆಳಕು ಮತ್ತು ಪರಿಪೂರ್ಣವಾದ ಸಾಮರ್ಥ್ಯ ಇವುಗಳ ವಿರುದ್ಧ ಮಾಡುವ ಇಚ್ಛಾಪೂರ್ವಕವಾದ ಪಾಪವೆನಿಸುತ್ತದೆ.

ಯಾರು ಪೂರ್ಣ ಬೆಳಕು ಮತ್ತು ಸಾಮರ್ಥ್ಯದ ವಿರೋಧವಾಗಿ ಇಚ್ಛಾಪೂರ್ವಕವಾಗಿ ಪಾಪ ಮಾಡುತ್ತಾರೋ ಅಂಥವರು ಎರಡನೆಯ ಮರಣದಲ್ಲಿ

ನಾಶವಾಗುವರು ಮತ್ತು ಯಾರೇ ಆಗಲಿ ಆ ವಿಚಾರಣೆಯ ಕಾಲದಲ್ಲಿ ಅದರ ಪೂರ್ಣವಾದ ಪ್ರಜ್ವಲಿಸುವ ಬೆಳಕಿನ ಅಡಿಯಲ್ಲಿ ನೀಡಲಾದ ಸವಲತ್ತುಗಳನ್ನು ತಿರಸ್ಕಾರ ಮಾಡುವವರಾದರೆ, ಪರಿಪೂರ್ಣತೆಯ ಕಡೆಗೆ ಒಂದು ನೂರು ವರ್ಷಗಳವರೆಗೆ ಯಾವುದೇ ಪ್ರಗತಿ ತೋರಿಸದೇ ಹೋದಲ್ಲಿ, ಆತನನ್ನು ನಿತ್ಯಜೀವಕ್ಕೆ ಅನರ್ಹನೆಂದು ಪರಿಗಣಿಸಿ, ಆತನು ಆ ನೂರು ವರ್ಷಗಳಲ್ಲಿ ತುಲನಾತ್ಮಕವಾಗಿ ಬಾಲ್ಯಾವಸ್ಥೆಯಲ್ಲಿಯೇ ಇರುವುದಾದರೆ, ಆತನನ್ನು ತೆಗೆದುಹಾಕಲಾಗುವುದು, ಹೀಗಾಗಿ ಆ ದಿನದ ಬಗ್ಗೆ – "ಕೆಲವು ದಿವಸ ಮಾತ್ರ ಬದುಕತಕ್ಕ ಕೂಸಾಗಲಿ, ವಯಸ್ಸಾಗದೆ ಮುದುಕನಾದವನಾಗಲೀ ಅಲ್ಲಿ ಇರುವುದಿಲ್ಲ. ಯುವಕನು ನೂರುವರ್ಷದೊಳಗೆ ಸಾಯನು, ಪಾಪಿಷ್ಟನಿಗೂ ನೂರು ವರ್ಷದೊಳಗೆ ಶಾಪ ತಗಲದು" (ಯೆಶಾಯ 65:20 – Leeser) ಎಂದು ಬರೆದದೆ. ಹೀಗಾಗಿ ಎಲ್ಲರಿಗೂ ಒಂದು ನೂರು ವರ್ಷಕಾಲದ ಪರೀಕ್ಷೆ ಬೇಕಾಗುವುದು. ಪ್ರಗತಿ ತೋರುವುದನ್ನು ತಿರಸ್ಕರಿಸಲು ಅಷ್ಟೇನು ಹಠ ಮಾಡದೇ ಇದ್ದಲ್ಲಿ ಅವರ ಪ್ರಯೋಗವು ಕ್ರಿಸ್ತನ ಸಂಪೂರ್ಣ ದಿನದಾದ್ಯಂತ ಮುಂದುವರೆಯುವುದು ಮತ್ತು ಅಂತ್ಯದಲ್ಲಿ ಮಾತ್ರವೇ ಅದು ಪರಾಕಾಷ್ಠೆಯನ್ನು ತಲಪುತ್ತದೆ.

ಈ ಲೋಕದ ಬರಲಿರುವ ನ್ಯಾಯವಿಚಾರಣೆಯ ಅಂತ್ಯವನ್ನು ಕುರಿ ಮತ್ತು ಆಡುಗಳ ಸಾಮ್ಯದಲ್ಲಿ ಸ್ಪಷ್ಟವಾಗಿ ತೋರಿಸಲಾಗಿದೆ (ಮತ್ತಾಯ 23:31–46; ಪ್ರಕಟನೆ 20:15;21:8 ಮತ್ತು 1 ಕೊರಿಂಥ 15:25) ಈ ವಾಕ್ಯಗಳು ಮತ್ತು ಧರ್ಮಗ್ರಂಥದ ಇತರ ವಾಕ್ಯಗಳು ಅದರ ಪರಿಸಮಾಪ್ತಿಯಲ್ಲಿ ವಿಧೇಯರು ಮತ್ತು ಅವಿಧೇಯರ ಎರಡು ವರ್ಗಗಳವರನ್ನು ಸಂಪೂರ್ಣವಾಗಿ ಪ್ರತ್ಯೇಕಿಸಲಾಗಿದೆ ಎಂದು ತೋರಿಸುತ್ತವೆ. ಯಾರು ದೇವರ ನಿಯಮಗಳ ನುಡಿಗೆ ಮತ್ತು ಸ್ಫೂರ್ತಿಗೆ ಹೊಂದಿಕೊಂಡು ಇರುತ್ತಾರೋ ಮತ್ತು ಯಾರು ಅದರ ಸಾಮರಸ್ಯದಿಂದ ಹೊರಗೆ ಇರುತ್ತಾರೋ ಅಂಥವರು ಪೂರ್ಣವಾಗಿ ಪ್ರತ್ಯೇಕಗೊಳಿಸಲಾಗುವದು. ಮೊದಲನೆಯವರು ನಿತ್ಯಜೀವವನ್ನು ಪ್ರವೇಶಿಸುವರು, ಉಳಿದವರು ಮರಣಕ್ಕೆ, ನಿತ್ಯ ನಾಶನಕ್ಕೆ (ಎರಡನೆಯ ಮರಣಕ್ಕೆ) ಒಪ್ಪಿಸಲ್ಪಡುವರು. ಅವರುಗಳು ಕ್ರಿಸ್ತನಿಂದ ಬಿಡಗಡೆ ಹೊಂದಿರುವರೆಂದು ಎಣಿಸಲಾಗಿದ್ದ ಮೊದಲ ತೀರ್ಪಿನಲ್ಲಿರುವ ಅದೇ ನಿರ್ಣಯದಿಂದ ಕ್ರಿಸ್ತನು ಈಡುಬಲಿಯ ತನ್ನ ಮರಣದ ಮೂಲಕವಾಗಿ ಅವರನ್ನು ಬಿಡುಗಡೆಗೊಳಿಸುವ ಹಕ್ಕನ್ನು ಪಡಕೊಂಡವನಾಗಿ ಆತನು ಅವರನ್ನು ಗಣನೀಯವಾಗಿ ಬಿಡುಗಡೆ ಮಾಡಿದನು. ಇದು ಅವರ ಎರಡನೆಯ ಮರಣವು. ಇದಕ್ಕಾಗಿ ಅವರಿಗೆ ಯಾವುದೇ ಈಡುಬಲಿಯನ್ನು ನೀಡಲಾಗುವುದಿಲ್ಲ. ಅವರ ಪಾಪವು ಇಚ್ಛಾಪೂರ್ವಕವಾಗಿರುವುದರಿಂದ, ಅನುಕೂಲಕರವಾದ ವಿಚಾರಣೆಯಲ್ಲಿ ಪೂರ್ಣ ಬೆಳಕು ಮತ್ತು ಅವಕಾಶಗಳ ವಿರುದ್ಧವಾದ ವೈಯುಕ್ತಿಕ ಪಾಪವಾಗಿರುವುದರಿಂದ ಅವರಿಗೆ ಯಾವುದೇ ಬಿಡುಗಡೆಯಾಗಲೀ, ಪುನರುತ್ಥಾನವಾಗಲೀ ಇರುವುದಿಲ್ಲ.

ಪ್ರತಿಯೊಬ್ಬ ಮನುಷ್ಯನು ಅನುಭವಿಸುವ ಬೆಳಕಿನ ಅಳತೆಗೆ ಅನುಗುಣವಾಗಿ, ಅದು ಹೆಚ್ಚು ಅಥವಾ ಕಡಿಮೆ ಇರಲಿ, ಅದು ಪ್ರಕೃತಿಯ ಬೆಳಕು ಅಥವಾ ಬಹಿರಂಗಗೊಂಡದ್ದಾಗಿರಲಿ ಪ್ರಪಂಚದ ಪ್ರಸ್ತುತ ಜವಾಬ್ದಾರಿಯನ್ನು ನಾವು ನಿರ್ಲಕ್ಷಿಸುವಂತೆ ಅರ್ಥಮಾಡಿಕೊಳ್ಳುವುದನ್ನು ಬಯಸುವುದಿಲ್ಲ. "ಯೆಹೋವನ ದೃಷ್ಟಿಯು ಎಲ್ಲೆಲ್ಲಿಯೂ ಇರುವುದು ಆತನು ಕೆಟ್ಟವರನ್ನೂ ಒಳ್ಳೆಯವರನ್ನೂ ನೋಡುತ್ತಲೇ ಇರುವನು" (ಜ್ಞಾನೋಕ್ತಿ 15:3). "ಒಳ್ಳೇದಾಗಲೀ, ಕೆಟ್ಟದಾಗಲೀ ಸಕಲ ರಹಸ್ಯ ಸಂಗತಿಗಳನ್ನು ವಿಮರ್ಶಿಸುವ ನ್ಯಾಯವಿಚಾರಣೆಗೆ ದೇವರು ಪ್ರತಿಯೊಂದು ಕಾರ್ಯವನ್ನೂ ಗುರಿಮಾಡುವನು" (ಪ್ರಸಂಗಿ 12:14). ಪ್ರಸ್ತುತ ಸಮಯದ ಒಳ್ಳೆಯ ಮತ್ತು ಕೆಟ್ಟ ಕಾರ್ಯಗಳು ಈಗಾಗಲೀ ಅಥವಾ ಇನ್ನು ಮುಂದಾಗಲೀ ನ್ಯಾಯವಾದ ಪರಿಹಾರದ ಬಹುಮಾನವನ್ನು ಪಡಕೊಳ್ಳುತ್ತದೆ. "ಕೆಲವರ ಪಾಪಕೃತ್ಯಗಳು ಪ್ರಸಿದ್ಧವಾಗಿದ್ದು ಅವರು ಇಂಥವರೆಂದು ಮೊದಲೇ ತಿಳಿಯಪಡಿಸುತ್ತವೆ. ಬೇರೆ ಕೆಲವರ ಪಾಪಕೃತ್ಯಗಳು ಮರೆಯಾಗಿದ್ದು ತರುವಾಯ ತಿಳಿದು ಬರುತ್ತವೆ" (1 ತಿಮೋ. 5:24). ಕರ್ತನ ಮೆಚ್ಚಿನ "ಚಿಕ್ಕಹಿಂಡು" ಹೊರತುಪಡಿಸಿ ಬೇರೆ ಯಾರೂ ಅಂಥಾಃ ಅಂತಿಮ ದಂಡನೆಗೆ ಅಂದರೆ ಎರಡನೆಯ ಮರಣಕ್ಕೆ ಈಡಾಗುವಷ್ಟು ಸಾಕಷ್ಟು ಬೆಳಕನ್ನು ಹೊಂದಿರುವುದಿಲ್ಲ. ನಾವು ಇಲ್ಲಿ ಕೇವಲ ಪ್ರಪಂಚದ ಪ್ರಸ್ತುತ ಜವಾಬ್ದಾರಿಕೆಯ ವಿಷಯವನ್ನು ಪ್ರಸ್ತಾಪಿಸುತ್ತೇವೆ, ವಿವರಗಳನ್ನು ಅನಂತರದ ಪರಿಗಣನೆಗೆ ಬಿಟ್ಟುಬಿಡುತ್ತೇವೆ.

ಪ್ರಪಂಚದ ಮೊದಲನೆಯ ಮತ್ತು ಎರಡನೆಯ ನ್ಯಾಯವಿಚಾರಣಾ ದಿನಗಳ ಮಧ್ಯೆ ಸುಮಾರು ಆರುಸಾವಿರ ವರ್ಷಗಳ ಅವಧಿಯು ಮಧ್ಯಪ್ರವೇಶಿಸುತ್ತದೆ ಮತ್ತು ಈ ದೀರ್ಘಾವಧಿಯಲ್ಲಿ ದೇವರು ಮನುಷ್ಯರೊಳಗಿಂದ ಎರಡು ವಿಶೇಷ ವರ್ಗದವರನ್ನು ಆಯ್ಕೆಮಾಡಿಕೊಳ್ಳುತ್ತಿದ್ದಾನೆ. ಅವರನ್ನು ವಿಶೇಷವಾಗಿ ಲೋಕದ ನ್ಯಾಯವಿಚಾರಣಾ ದಿನದಲ್ಲಿ

ಅಥವಾ ಅವಧಿಯಲ್ಲಿ ತನ್ನ ಗೌರವಾರ್ಹ ಸಾಧನಗಳಾಗಿರುವಂತೆ ಶಿಸ್ತುಬದ್ಧಗೊಳಿಸಿ, ತರಬೇತು ಗೊಳಿಸುವಂತೆ ಪ್ರಯತ್ನಿಸುತ್ತಾನೆ.

ಈ ಎರಡು ವರ್ಗಗಳನ್ನು ಪೌಲನು, ಪುತ್ರರ ಮನೆಯವರು, ಸೇವಕರ ಮನೆಯವರು ಎಂಬುದಾಗಿ ಅನುಕ್ರಮವಾಗಿ ಗೊತ್ತುಪಡಿಸಿದ್ದಾನೆ (ಇಬ್ರಿಯ 3:5,6). ಮೊದಲನೆಯವರು ಕ್ರೈಸ್ತ ಯುಗದಲ್ಲಿ ಪರೀಕ್ಷಿಸಲ್ಪಟ್ಟು ಗೆದ್ದವರಾಗಿ ಕಂಡು ಬಂದವರು, ಎರಡನೆಯವರು ಕ್ರೈಸ್ತ ಯುಗದ ಹಂಚಿಕೆಗೆ ಮುಂಚಿತವಾಗಿಯೇ ಜಯಶಾಲಿಗಳಾದವರು ಇದ್ದಾರೆ. ಈ ವಿಶೇಷ ಆಯ್ಕೆಯು ಯಾವುದೇ ಅರ್ಥದಲ್ಲಿ ಮಾನವ ಜಾತಿಗೆ ಸುವಾರ್ತಾ ಹಂಚಿಕೆಯ ನಂತರದ ಅವಧಿಯಲ್ಲಿ ವಾಗ್ದಾನ ಮಾಡಿರುವ ನ್ಯಾಯತೀರ್ಪಿನಲ್ಲಾಗಲೀ, ನ್ಯಾಯವಿಚಾರಣೆಯ ಯಾವುದೇ ಅರ್ಥದಲ್ಲಿ ಹಸ್ತಕ್ಷೇಪ ಮಾಡುವದಿಲ್ಲ. ಈ ಎರಡೂ ವಿಶೇಷ ವರ್ಗದವರಲ್ಲಿ ಯಾರೇ ಆಗಲಿ ಶೋಧನೆಯಲ್ಲಿ ಯಶಸ್ವೀ ಜಯಶಾಲಿಗಳಾಗಿ ತೇರ್ಗಡೆಯಾದರೆ ಅಂಥವರು ಪ್ರಪಂಚದೊಂದಿಗೆ ನ್ಯಾಯತೀರ್ಪಿಗೆ ಬರುವುದಿಲ್ಲ. ಆದರೆ ಈ ಲೋಕವು ನ್ಯಾಯತೀರ್ಪಿಗಾಗಿ ಬರುವಾಗ ಅವರು ತಮ್ಮ ತಮ್ಮ ಬಹುಮಾನವನ್ನು ಪ್ರವೇಶಿಸುವರು. ಅವರು ಈ ಲೋಕವನ್ನು ಆಶೀರ್ವದಿಸುವಲ್ಲಿ – ಮಾನವರಿಗೆ ಅವರ ಅಂತಿಮ ಪರೀಕ್ಷೆಗೆ ಮತ್ತು ತೀರ್ಪಿಗೆ ಬೇಕಾದ ಶಿಕ್ಷಣ ಮತ್ತು ತರಬೇತಿಯನ್ನು ನೀಡುವಲ್ಲಿ ದೇವರ ಕಾರ್ಯಭಾರಿಗಳಾಗಿರುತ್ತಾರೆ. "ದೇವಜನರು ಲೋಕಕ್ಕೆ ತೀರ್ಪುಮಾಡುವರೆಂಬುದು ನಿಮಗೆ ತಿಳಿಯದೋ?" (1 ಕೊರಿಂಥ 6:2).

ವಿಶೇಷವಾಗಿ ಆಯ್ಕೆಗೊಂಡ ಈ ವರ್ಗದವರೂ ಸಹ, ಉಳಿದ ಮಾನವ ಜಾತಿಯವರಂತೆ ಒಮ್ಮೆ ಆದಾಮನ ಖಂಡನೆಗೆ ಒಳಗಾಗಿದ್ದವರೇ, ಆದರೆ ಕ್ರಿಸ್ತನ ಮರಣದ ಸಾರ್ಥಕತೆಗಳಲ್ಲಿ ನಂಬಿಕೆಯಿಂದ ಪಾಲುದಾರರಾದರು. ಮೊದಲಿಗೆ ದೇವರ ವಾಗ್ದಾನಗಳ ಮೇಲಣ ನಂಬಿಕೆಯ ಮೂಲಕ ನೀತಿನಿರ್ಣಯ ಹೊಂದಿದ ಮೇಲೆ, ನಂತರದ ಅವರ ಅನುಕ್ರಮವಾದ ಆಯಾ ಕರೆಗಳ ಷರತ್ತುಗಳನ್ನು ಪೂರೈಸಿದ ನಂತರ, ಅವರುಗಳು ಗೌರವ ಮತ್ತು ಅಧಿಕಾರದ ಸ್ಥಾನಗಳ ಉನ್ನತ ಮಟ್ಟಕ್ಕೇರಲು ಅರ್ಹರೆಂದು ಪರಿಗಣಿಸಲ್ಪಟ್ಟರು.

ಈ ಎರಡೂ ವರ್ಗಗಳವರ ವಿಚಾರಣೆ ಮತ್ತು ನ್ಯಾಯತೀರ್ಪು ಈ ಲೋಕದ ನ್ಯಾಯವಿಚಾರಣೆಯ ದಿನದಲ್ಲಾಗುವ ತೀರ್ಪಿಗಿಂತ ಹೆಚ್ಚು ಕಠೋರವಾಗಿದೆ; ಯಾಕೆಂದರೆ ಇವರುಗಳು ಈ ಲೋಕಾಧಿಪತಿಯಾದ ಸೈತಾನನನ್ನು, ಆತನ ಎಲ್ಲಾ ತಂತ್ರೋಪಾಯಗಳನ್ನೂ, ಪಾಶಗಳನ್ನೂ ಎದುರಿಸಬೇಕಾಗಿತ್ತು, ಆದರೆ ಈ ಲೋಕದ ನ್ಯಾಯವಿಚಾರಣಾ ದಿನದಲ್ಲಿ ಕ್ರಿಸ್ತನು ಆಳ್ವಿಕೆ ಮಾಡುವಾಗ, ಸೈತಾನನು ಜನಗಳನ್ನು ಮೋಸಗೊಳಿಸದಂತೆ ಬಂಧಿಸಲ್ಪಟ್ಟಿರುತ್ತಾನೆ (ಪ್ರಕಟನೆ 20:3). ಇವರುಗಳು ನೀತಿವಂತಿಕೆಯ ನಿಮಿತ್ತ ಹಿಂಸೆಗಳನ್ನು ಅನುಭವಿಸಿದ್ದಾರೆ, ಆಗ ಮಾನವರಿಗೆ ನೀತಿವಂತಿಕೆಗಾಗಿ ಪ್ರತಿಫಲವನ್ನು ಪಡೆಯುತ್ತಾರೆ, ಮತ್ತು ಅನೀತಿವಂತಿಕೆಗೆ ಮಾತ್ರವೇ ಶಿಕ್ಷೆಯನ್ನು ಅನುಭವಿಸುತ್ತಾರೆ. ಅವರುಗಳ ಮಾರ್ಗದಲ್ಲಿ ದೊಡ್ಡದಾದ ಮುಗ್ಗರಿಸುವ ಬಂಡೆಗಳೂ, ಕುಣಿಕೆಗಳೂ ಇದ್ದು. ಲೋಕವನ್ನು ನ್ಯಾಯತೀರ್ಪಿಗೆ ಒಳಪಡಿಸುವಾಗ ಅವುಗಳನ್ನು ತೆಗೆದುಹಾಕಲಾಗುತ್ತದೆ. ಆದರೆ ಈ ಎರಡು ವಿಶೇಷವರ್ಗಗಳ ನ್ಯಾಯವಿಚಾರಣೆಯು ಈ ಲೋಕದ ನ್ಯಾಯವಿಚಾರಣೆಗಿಂತ ಹೆಚ್ಚು ತೀವ್ರವಾಗಿರುವದಾದರೂ, ಪ್ರತಿಫಲಗಳು ಅನುಗುಣವಾಗಿ ಹೆಚ್ಚಿನವುಗಳಾಗಿರುತ್ತವೆ.

ಮಹಾ ವಂಚಕನಾದ ಸೈತಾನನ ಕುತಂತ್ರಗಳ ಅಡಿಯಲ್ಲಿ, ಲೋಕ ಮತ್ತು ನಾಮಾಂಕಿತ ಕ್ರೈಸ್ತ ಸಭೆ ಉಭಯರೂ ಬರಲಿರುವ ನೀತಿಯುತವಾದ ನ್ಯಾಯತೀರ್ಪಿನ ದಿನದ ಆಶೀರ್ವಾದದ ಭರವಸೆಗಳನ್ನು ಕಸಿದುಕೊಳ್ಳಲ್ಪಟ್ಟಿವೆ. ಅವರುಗಳಿಗೆ ಸತ್ಯವೇದವು ಬರಲಿರುವ ನ್ಯಾಯತೀರ್ಪಿನ ದಿನದ ಬಗ್ಗೆ ಹೇಳುತ್ತದೆಂಬುದು ತಿಳಿದಿದೆ. ಆದರೆ, ಅವರು ಅದನ್ನು ಭಯಭೀತಿಗಳಿಂದ ಮಾತ್ರವೇ ಪರಿಗಣಿಸುತ್ತಾರೆ. ಈ ಭಯದ ಕಾರಣ, ಅವರಿಗೆ ಕರ್ತನ ದಿನವು ಹತ್ತಿರವಾಗಿದೆ ಎಂಬುದಕ್ಕಿಂತ ಹೆಚ್ಚಿನ ಅನಪೇಕ್ಷಿತ ಸಮಾಚಾರಗಳು ಇರುವುದಿಲ್ಲ. ಅವರು ಅವುಗಳನ್ನು ತಮ್ಮಿಂದ ಬಹಳ ದೂರವಿಡುತ್ತಾರೆ, ಮತ್ತು ಹೇಳಿದರೂ ಅದನ್ನು ಕೇಳಲು ಇಷ್ಟಪಡುವುದಿಲ್ಲ. ಲೋಕದ ನ್ಯಾಯ ವಿಚಾರಣೆಗಾಗಿ ದೇವರು ನೇಮಿಸಿರುವಾತನ ಭವ್ಯವಾದ ನೀತಿವಂತಿಕೆಯ ಆಳ್ವಿಕೆಯಲ್ಲಿ ಆಶೀರ್ವಾದಗಳು ಲೋಕಕ್ಕಾಗಿ ಸಿದ್ಧವಾಗಿದೆ ಎಂಬುದು ಅವರಿಗೆ ತಿಳಿದಿರುವುದಿಲ್ಲ. ತೀರ್ಪಿನ ದಿನಕ್ಕೆ ಸಂಬಂಧಿಸಿದಂತೆ ಮನುಷ್ಯರನ್ನು ಸತ್ಯದ ಅಜ್ಞಾನದಲ್ಲಿರಿಸಿಕೊಳ್ಳಲು ಸೈತಾನನು ರೂಪಿಸಿರುವ ಕುರುಡುತನದ ಪ್ರಭಾವಗಳೆಂದರೆ, ವಿವಿಧ ಪಂಥಗಳ ಮತಾಭಿಪ್ರಾಯ ಮತ್ತು ಸ್ತುತಿಗೀತೆ ಪುಸ್ತಕಗಳಲ್ಲಿ ನುಸುಳಿರುವ ದೋಷಗಳು. ಅನೇಕರು ಈ ದೋಷಗಳನ್ನು ದೇವರ ವಾಕ್ಯಕ್ಕಿಂತಲೂ ಅತ್ಯಂತ ಮಹತ್ವವುಳ್ಳದ್ದಾಗಿ ಗೌರವಿಸಿದ್ದಾರೆ.

ಪ್ರವಾದಿಗಳು ಮತ್ತು ಅಪೋಸ್ತಲರು ಆ ವಾಗ್ದತ್ತ ನ್ಯಾಯತೀರ್ಪಿನ ದಿನದ ಬಗ್ಗೆ ಎಷ್ಟೋ ವಿಭಿನ್ನವಾದ

ರೀತಿಯ ಸದಾಭಿಪ್ರಾಯವುಳ್ಳವರಾಗಿದ್ದರು! ದಾವೀದನ ಈ ಕೆಳಗಣ ಸಂಭ್ರಮದ ಹೇಳಿಕೆಗಳನ್ನು ಗಮನಿಸಿರಿ 1 ಪೂರ್ವ 16:31–34ರಲ್ಲಿ ಆತನು ಹೀಗೆ ಹೇಳುತ್ತಾನೆ :–

"ಗಗನ ಮಂಡಲವು ಹರ್ಷಿಸಲಿ; ಭೂಮಂಡಲವು ಸಂತೋಷಿಸಲಿ ;
ಯೆಹೋವನು ರಾಜ್ಯಾಧಿಕಾರವನ್ನು ವಹಿಸಿ
ಕೊಂಡಿದ್ದಾನೆಂದು ಜನಾಂಗಗಳಲ್ಲಿ ಪ್ರಸಿದ್ಧಿಪಡಿಸಿರಿ
ಭೂಮಂಡಲಕ್ಕೆ ನ್ಯಾಯ ತೀರಿಸಲು ಬರುವ ಯೆಹೋವನ ಮುಂದೆ
ಸಮುದ್ರವೂ ಅದರಲ್ಲಿರುವುದೆಲ್ಲವೂ ಘೋಷಿಸಲಿ
ಹೊಲಗಳೂ ಅವುಗಳ ಪೈರುಗಳೂ ಉಲ್ಲಾಸಿಸಲಿ;
ಮತ್ತು ವನದ ಮರಗಳು ಉತ್ಸಾಹ ಧ್ವನಿ ಮಾಡಲಿ.
ಯೆಹೋವನಿಗೆ ಕೃತಜ್ಞತಾ ಸ್ತುತಿಮಾಡಿರಿ; ಆತನು ಒಳ್ಳೆಯವನು;
ಆತನ ಕೃಪೆಯುೞ ಶಾಶ್ವತವಾಗಿರುವುದು"

ಅದೇ ದಿನಕ್ಕೆ ಅಪೋಸ್ತಲನು ಸೂಚಿಸುವವನಾಗಿದ್ದು, "ಅದೊಂದು ಭವ್ಯವಾದ ಅಪೇಕ್ಷಣೀಯ ದಿನವಾಗಿದೆ ಎಂಬ ಭರವಸೆಯನ್ನು ನಮಗೆ ನೀಡುವವನಾಗಿದ್ದಾನೆ. ಅದಕ್ಕಾಗಿ ಜಗತ್ತೆಲ್ಲಾ ಇಂದಿನವರೆಗೆ ನರಳುತ್ತಾ ಪ್ರಸವವೇದನೆಪಡುತ್ತಾ ಇರುತ್ತದೆಂದು ನಾವು ಬಲ್ಲೆವು" – ಲೋಕವು ಆ ಮಹಾ ನ್ಯಾಯಾಧಿಪತಿಯು ತಮ್ಮನ್ನು ವಿಮೋಚಿಸಿ ಆಶೀರ್ವದಿಸಬೇಕೆಂದು ಕಾಯುತ್ತಿರುವದು (ರೋಮಾ. 8:21–22) ಎಂದಿದ್ದಾನೆ.

ಯೋಹಾನ 5:28,29 ರಲ್ಲಿ ಬರಲಿರುವ ನಿತ್ಯಜೀವದ ಬಗ್ಗೆ ನಡೆಯಲಿರುವ ನ್ಯಾಯ ತೀರ್ಪಿನ – ಶೋಧನೆ ಬಗ್ಗೆ ಜಗತ್ತಿಗೆ ಒಂದು ಅಮೂಲ್ಯವಾದ ವಾಗ್ದಾನವು ತಪ್ಪಾದ ಭಾಷಾಂತರದ ಕಾರಣ ಒಂದು ಭಯಾನಕ ಶಾಪವನ್ನಾಗಿ ಮಾಡಲ್ಪಟ್ಟಿದೆ. ಗ್ರೀಕರ ಪ್ರಕಾರ, ಕೆಟ್ಟದ್ದನ್ನು ಮಾಡಿದವರು – ದೈವೀಕ ಅನುಮೋದನೆ ಪಡೆಯಲು ವಿಫಲರಾಗಿದ್ದು ಪುನರುತ್ಥಾನದಲ್ಲಿ ತೀರ್ಪುಗಳಿಂದ, ಬಾಸುಂಡೆಗಳಿಂದ, ಶಿಸ್ತುಗಳ ಮೂಲಕ (ಪರಿಪೂರ್ಣತೆಗೆ ಏರಲು) ಮುಂದೆ ಬರುವರು.

"ಆಶ್ಚರ್ಯಪಡಬೇಡಿರಿ; ಸಮಾಧಿಗಳಲ್ಲಿರುವವರೆಲ್ಲರೂ ಆತನ ಧ್ವನಿಯನ್ನು ಕೇಳಿ ಎದ್ದು ಹೊರಗೆ ಬರುವ ಕಾಲ ಬರುತ್ತದೆ. ಒಳ್ಳೇದನ್ನು ಮಾಡಿದವರಿಗೆ ಜೀವಕ್ಕಾಗಿ ಪುನರುತ್ಥಾನವಾಗುವುದು; ಕೆಟ್ಟದ್ದನ್ನು ನಡಿಸದವರಗೆ ತೀರ್ಪಿಗಾಗಿ ಪುನರುತ್ಥಾನವಾಗುವುದು" ( See Revised Version).

## AFTERWARD

God's ways are equal: storm or Calm,
Seasons of peril and of rest,
The hurting dart, the healing balm,
Are all apportioned as is best.
In judgements oft misunderstood,
In ways mysterious and obscure,
He brings from evil lasting good,
And makes the final gladness sure.
While justice takes its course with strength,
Love bids our faith and hope increase ;
He'll givethe chastened world at length
His afterward of peace.

"When the dread forces of the gale
His sterner purposes perform,
And human skill can naught avail
Against the fury of the storm,
Let the loving hearts trust in him still,
Through all the dark and devious way;
For who would thwart his blessed will,
Which leads through night to joyous day?
Be still beneath his tender care ;
For he will make the tempest cease,
And bring from out the anguish here
An afterward of peace

" Look up. O Earth ; no storm can last
Beyond the limits God hath set.
When its appointed work is past,
In joy thou shalt thy grief forget.
Where sorrow's plow share hath swept through,
Thy fairest flowers of life shall spring,
And thy wastes shall laugh and sing.
Hope thou in him; his plan for thee
Shall end in triumph and release.
Fear not, for thou shalt surely see
His afterward of peace"

## ಅನಂತರ

ದೇವರ ಮಾರ್ಗಗಳು ಸಮಾನವಾಗಿದೆ;
ಬಿರುಗಾಳಿಯಿರಲಿ, ಪ್ರಶಾಂತತೆಯಿರಲಿ,
ಚುಚ್ಚುವ ಭರ್ಜಿ, ಗುಣಪಡಿಸುವ ಮುಲಾಮು,
ಎಷ್ಟು ಬೇಕೋ ಅಷ್ಟು ವಿಭಾಗಿಸಿ ಕೊಡುವನು.
ಆಗಾಗ್ಗೆ ತಪ್ಪಾದ ಅರ್ಥೈಸುವ ತೀರ್ಪುಗಳಲ್ಲಿ,
ನಿಗೂಢ ಮತ್ತು ಅಸ್ಪಷ್ಟ ರೀತಿಯಲ್ಲಿ,
ಆತನು ಕೆಟ್ಟದ್ದರಿಂದ ಶಾಶ್ವತವಾದ ಒಳ್ಳೆಯದನ್ನು
ತರುತ್ತಾನೆ.
ಮತ್ತು ಅಂತಿಮ ಸಂತೋಷನ್ನು ಖಚಿತ ಮಾಡುವನು.
ನ್ಯಾಯವು ತನ್ನ ಚಲನೆಯನ್ನೇ ಬಲದಿಂದ
ತೆಗೆದುಕೊಳ್ಳುವಾಗ,
ಪ್ರೀತಿಯು ನಮ್ಮ ನಂಬಿಕೆ ಮತ್ತು ನಿರೀಕ್ಷೆಯನ್ನು
ನಿರೂಪಿಸಿ ಹೆಚ್ಚಿಸುತ್ತದೆ;
ಆತನು ಉದ್ದಕ್ಕೂ ಶಿಕ್ಷಿಸಿ ಸುಧಾರಿಸಿರುವ ಜಗತ್ತಿಗೆ
ಆತನ ಅನಂತರದ ಶಾಂತಿಯನ್ನು ದಯಪಾಲಿಸುವನು.

‘‘ಬಿರುಗಾಳಿಯ ರಭಸಗಳು ದಿಗಿಲುಪಡಿಸುವಾಗ
ಆತನ ಕಡುಶಿಸ್ತಿನ ಉದ್ದೇಶಗಳು ಕಾರ್ಯಸಾಧಿಸುತ್ತವೆ,
ಆ ಚಂಡಮಾರುತದ ಆಕ್ರೋಶದ ಮುಂದೆ
ಮನುಷ್ಯನ ಚಾತರ್ಯವು ನಿಷ್ಪ್ರಯೋಜಕ,
ಹಾಗಾಗಿ ಪ್ರೀತಿಯುಳ್ಳ ಹೃದಯಗಳು ಆತನನ್ನು
ನಂಬಲಿ,
ಎಲ್ಲಾ ಕತ್ತಲಿನ ಕುಟಿಲ ಮಾರ್ಗದ ಮೂಲಕ;
ಕತ್ತಲ ರಾತ್ರಿಯಿಂದ ಸಂತೋಷದಾಯಕ ದಿನಕ್ಕೆ
ಕಾರಣವಾಗುವ ಆತನ ಆಶೀರ್ವಾದಕರ ಚಿತ್ತವನ್ನು
ಯಾರು ತಾನೇ ತಡೆಯುವರು ?
ಆತನ ಕೋಮಲವಾದ ರಕ್ಷೆಯಲ್ಲಿ ಅಚಲನಾಗಿರು;
ಆತನು ಬಿರುಗಾಳಿಯನ್ನು ನಿಲ್ಲಿಸುವನು,
ಇಲ್ಲಿರುವ ಸಂಕಟದಿಂದಾಚೆ ಶಾಂತಿಯನ್ನು
ಕೊಡುವನು.

‘‘ಮೇಲೆ ನೋಡು ಓ ಭೂಮಿಯೇ; ದೇವರು
ನಿಗದಿಪಡಿಸಿರುವ ಮಿತಿಗಳನ್ನು ಮೀರಿ ಯಾವುದೇ
ಬಿರುಗಾಳಿ ಬೀಸುವದಿಲ್ಲ.
ಅದರ ನಿರ್ಧರಿತ ಕಾರ್ಯವು ಮುಗಿದಾಗ,
ಸಂತೋಷವು ನಿನ್ನೆಲ್ಲಾ ದುಃಖವನ್ನು ಮರೆಸುವುದು.
ದುಃಖಗಳ ನೇಗಿಲು ಗುಡಿಸಿಕೊಂಡು ಹೋಗಿರಲು,
ನಿನ್ನ ಜೀವನದ ಸೊಗಸಾದ ಪುಷ್ಪಗಳು ಅರಳುವವು,
ದೇವರು ನಿನಗೆ ಹೊಸ ಜೀವನವನ್ನು ಕೊಡುವನು
ನಿನ್ನೆಲ್ಲಾ ನಷ್ಟಗಳು ನಗುತ್ತಾ ಹಾಡುವವು.
ಆತನಲ್ಲಿ ನಿರೀಕ್ಷೆಯಿಡು, ನಿನಗಾಗಿ ಇರುವ ಆತನ
ಯೋಜನೆ ವಿಜಯೋತ್ಸವ ಮತ್ತು ಬಿಡುಗಡೆಯಲ್ಲಿ
ಕೊನೆಗೊಳ್ಳುತ್ತದೆ.
ಹೆದರದಿರು, ನೀನು ಖಂಡಿತವಾಗಿ ನೋಡುವಿ,
ಆತನ ಅನಂತರದ ಶಾಂತಿ’’

* * * * * * *

# ಅಧ್ಯಯನ – 9 Study IX

# ಈಡುಬಲಿ ಮತ್ತು ಪುನರ್‌ವಶಪಡಿಸುವಿಕೆ

## RANSOM AND RESTITUTION

**ಈಡುಬಲಿಯಿಂದ ಪುನರ್‌ವಶವು ಖಚಿತಗೊಂಡಿದೆ – ನಿರಂತರವಾದ ಜೀವ ಅಲ್ಲ. ಅದರೆ ಅದಕ್ಕಾಗಿ ಒಂದು ಪ್ರಯೋಗ, ಈಡುಬಲಿಯ ಮೌಲ್ಯದಿಂದ ಪಡಕೊಂಡದ್ದು – ವಿಚಾರಣೆಯ ಷರತ್ತುಗಳು ಮತ್ತು ಸೌಲಭ್ಯಗಳು – ಕ್ರಿಸ್ತನ ತ್ಯಾಗ ಅವಶ್ಯ – ಜನಾಂಗವು ಯಾವರೀತಿಯಲ್ಲಿ ಒಬ್ಬನ ಮರಣದಿಂದ ವಿಮೋಚನೆಗೊಳ್ಳಬಹುದು ಮತ್ತು ವಿಮೋಚನೆಗೊಂಡಿದೆ – ನಂಬಿಕೆ ಮತ್ತು ಕ್ರಿಯೆಗಳು ಇನ್ನೂ ಅಗತ್ಯವಾಗಿದೆ – ಉದ್ದೇಶಪೂರ್ವಕವಾದ ಪಾಪದ ಸಂಬಳವು ನಿಶ್ಚಿತವಾಗಿದೆ – ಪುನರುತ್ಥಾನಗೊಳ್ಳುವ ಮಿಲಿಯಾಂತರ ಜನರಿಗೆ ಭೂಲೋಕದ ಮೇಲೆ ಸ್ಥಳವಿದೆಯೇ? ಪುನರ್‌ವಶದ ವಿರುದ್ಧವಾಗಿ ವಿಕಸನ ಸಿದ್ಧಾಂತ.**

ಶ್ರುತಪಡಿಸಿರುವ ದೇವರ ಯೋಜನೆಯ ರೂಪರೇಖೆಯಿಂದ ಇದುವರೆಗೆ ದೊರೆತಿರುವ ಸಂಕ್ಷಿಪ್ತ ಮಾಹಿತಿಗಳಿಂದ ವ್ಯಕ್ತವಾಗವದೇನೆಂದರೆ ಮನುಕುಲಕ್ಕಾಗಿ ಆತನ ಸಂಕಲ್ಪವು ಏದೇನಿನಲ್ಲಿ ಕಳಕೊಂಡ ಸರ್ವ ಸಂಪೂರ್ಣತೆಗೆ ಭವ್ಯತೆಗೆ ಪುನಃವಶಪಡಿಸುವುದೂ ಇಲ್ಲವೇ ಪುನಃ ಸ್ಥಾಪನೆಗೊಳಿಸುವುದೂ ಆಗಿದೆ ಎಂಬುದು ಸ್ಪಷ್ಟವಾಗುತ್ತದೆ. ಈ ಪ್ರಸ್ತಾಪದ ಬಗ್ಗೆ ಪ್ರಬಲವಾದ ಮತ್ತು ನಿರ್ಧಾರಾತ್ಮಕವಾದ ಸಾಕ್ಷಿಯು ಈಡುಬಲಿಯ ಸ್ವರೂಪವನ್ನು ಪೂರ್ತಿಯಾಗಿ ಮೆಚ್ಚಿಕೊಳ್ಳುವುದರಿಂದ ಸ್ಪಷ್ಟವಾಗಿ ಕಂಡುಬರುತ್ತದೆ. ಪ್ರವಾದಿಗಳೂ, ಅಪೋಸ್ತಲರುಗಳೂ ಮುಂತಿಳಿಸಿದ ಪುನರ್‌ಸ್ಥಾಪನೆಯು, ಈಡುಬಲಿಯ ಮೌಲ್ಯವನ್ನು ನ್ಯಾಯವಾದ ಮತ್ತು ತರ್ಕಬದ್ಧವಾದ ಕ್ರಮಾನುಗತಿಯಲ್ಲಿ ಅನುಸರಿಸ ಬೇಕಾಗುತ್ತದೆ. ಈಡುಬಲಿಯನ್ನು ಒದಗಿಸುವ ದೇವರ ಏರ್ಪಾಟಿನ ಪ್ರಕಾರ, ಎಲ್ಲಾ ಮಾನವಕುಲವು, ಮಹಾ ವಿಮೋಚಕನ ಕಾಪಾಡುವ ಶಕ್ತಿಯನ್ನು ಪ್ರತಿಭಟಿಸದ ಹೊರತು, ಅವರನ್ನು ಮೂಲ ದಂಡನೆಯಿಂದ, "ಭ್ರಷ್ಟತೆಯ ಬಂಧನ"ವಾದ ಮರಣದಿಂದ ಬಿಡುಗಡೆ ಗೊಳಿಸಬೇಕು. ಇಲ್ಲವಾದಲ್ಲಿ ಈಡುಬಲಿಯು ಎಲ್ಲರಿಗೂ ದೊರಕುವುದಿಲ್ಲ.

ಈ ಪ್ರಸ್ತಾಪದ ಬಗ್ಗೆ ಪೌಲನ ವಿವೇಚನೆಯು ಅತ್ಯಂತ ಸ್ಪಷ್ಟವೂ, ಖಡಾಖಂಡಿತವೂ ಆಗಿದೆ. ಆತನು "ಬದುಕಿದರೂ, ಸತ್ತರೂ ನಾವು ಕರ್ತನವರೇ, ಯಾಕೆಂದರೆ, ಸತ್ತವರಿಗೂ ಜೀವಿಸುವವರಿಗೂ ಒಡೆಯನಾಗಿರಬೇಕೆಂತಲೇ ಕ್ರಿಸ್ತನು (ಆಡಳಿತಗಾರನು, ನಿಯಂತ್ರಕನು) ಸತ್ತು ಜೀವಿತನಾದನು" (ರೋಮಾ. 14:09) ಎಂದಿದ್ದಾನೆ. ಅಂದರೆ, ನಮ್ಮ ಕರ್ತನ ಮರಣ ಮತ್ತು ಪುನರುತ್ಥಾನದ ಉದ್ದೇಶವು ಕೇವಲ ಮಾನವಕುಲದ ಜೀವನವನ್ನು ಆಶೀರ್ವದಿಸುವುದು, ಆಳುವುದು ಮತ್ತು ಮರುಸ್ಥಾಪಿಸುವುದು ಮಾತ್ರವಲ್ಲದೆ, ಆತನಿಗೆ ಸತ್ತವರ ಮೇಲೆ ಮತ್ತು ಜೀವಿಸುವವರ ಮೇಲೆ ಅಧಿಕಾರವನ್ನು ಅಥವಾ ಸಂಪೂರ್ಣ ನಿಯಂತ್ರಣವನ್ನು ನೀಡುವುದು, ಆತನ ಈಡುಬಲಿಯ ಪ್ರಯೋಜನಗಳನ್ನು ಭದ್ರಪಡಿಸುವುದು. ಇವುಗಳು ಒಂದಕ್ಕಿಂತ ಮತ್ತೊಂದಕ್ಕೆ ಹೆಚ್ಚಾಗಿವೆ.* ಆತನು ಎಲ್ಲರನ್ನೂ ಆಶೀರ್ವದಿಸಿ, ಪ್ರತಿಯೊಬ್ಬರಿಗೂ ವ್ಯಕ್ತಿಗತವಾದ ಜೀವನದ ಪರೀಕ್ಷೆಯನ್ನು ನೀಡುವಂತೆ ತನ್ನನ್ನೇ ಎಲ್ಲರಿಗಾಗಿ ಈಡುಬಲಿಯನ್ನಾಗಿ (ಅನುಗುಣವಾದ ಕ್ರಯವನ್ನಾಗಿ) ಅರ್ಪಿಸಿದನು. "ಎಲ್ಲರ ವಿಮೋಚನಾರ್ಥವಾದ ತನ್ನನ್ನು ಒಪ್ಪಿಸಿಕೊಟ್ಟನು" ಎಂದು ಸಮರ್ಥಿಸಿದ್ದಾಗ್ಯೂ ಕೇವಲ ಸ್ವಲ್ಪ ಜನರು ಮಾತ್ರವೇ ಅದರ ಅನುಕೂಲತೆ ಪಡಕೊಳ್ಳುವರು ಎಂಬುದು ಅಸಂಬದ್ಧವಾಗಿದೆ. ಯಾಕೆಂದರೆ, ಅದು ದೇವರು ಈಡುಬಲಿಯ ಕ್ರಯವನ್ನು ಒಪ್ಪಿಕೊಂಡ ನಂತರದಲ್ಲಿ ಅನ್ಯಾಯವಾಗಿ ವಿಮೋಚನೆಗೊಂಡವರನ್ನು ಬಿಡುಗಡೆಮಾಡಲು ನಿರಾಕರಿಸಿದನು ಎಂಬ ಅಭಿಪ್ರಾಯವನ್ನು ಮೂಡಿಸುತ್ತದೆ. ಇಲ್ಲವಾದಲ್ಲಿ ಕರ್ತನು, ಎಲ್ಲರನ್ನೂ ವಿಮೋಚಿಸಿದ ಮೇಲೆ, ತನ್ನ ಮೂಲದ ಪರೋಪಕಾರಿ ಉದ್ದೇಶವನ್ನು ಮುಂದುವರಿಸಲು ಸಾಧ್ಯವಾಗಲಿಲ್ಲ, ಇಲ್ಲವೇ ಇಷ್ಟಪಡಲಿಲ್ಲ ಎಂದು ಸೂಚಿಸುತ್ತದೆ. ದೇವರ ಯೋಜನೆಯ ಬದಲಾಗದಿರುವಿಕೆಯು, ಪರಿಪೂರ್ಣ ದೈವಿಕ ನ್ಯಾಯ ಮತ್ತು ಪ್ರೀತಿಗಿಂತ ಕಡಿಮೆ

* ನಾವು ಅಪೋಸ್ತಲನ ಮಾತುಗಳಲ್ಲಿ ಇನ್ನೂ ಹೆಚ್ಚಾದ ಮತ್ತು ಇನ್ನೂ ವಿಶಾಲವಾದ ಅರ್ಥವನ್ನು ಯುಕ್ತವಾಗಿ ಕಂಡುಕೊಳ್ಳಬಹುದು. ಎಂದರೆ, ಸಮಸ್ತ ಮಾನವ 'ಕುಟುಂಬದವರು'ಸತ್ತವರು' ಎಂಬ ಹೇಳಿಕೆಯಲ್ಲಿ ಸೇರಲ್ಪಟ್ಟಿದ್ದಾರೆ. ದೇವರ ದೃಷ್ಟಿಯಲ್ಲಿ ಇಡೀ ಮಾನವ ಕುಲವು ಮರಣವೆಂಬದಂಡನೆಯಲ್ಲಿದ್ದು ಈಗಾಗಲೇ ಸತ್ತವರೆಂಬಂತೆ ಪರಿಗಣಿಸಲಾಗುತ್ತಿತ್ತು (ಮತ್ತಾಯ 8:22), ಹೀಗಾಗಿ 'ಜೀವಿಸುವವರು'ಎಂಬ ಶಬ್ಧಪ್ರಯೋಗವು ಮಾನವ ಕುಟುಂಬವನ್ನು ಮೀರಿ ಯಾರ ಜೀವವು ಮುಟ್ಟುಗೋಲು ಹಾಕಲ್ಪಟ್ಟಿಲ್ಲವೋ ಅಂಥವರಿಗೆ, ಅಂದರೆ ದೇವದೂತರುಗಳಿಗೆ ಅನ್ವಯವಾಗುತ್ತದೆ.

ಯಸಾದ್ದುದೇನೂ ಅಲ್ಲ. ಅದು ಅಂಥಾಃ ಆಲೋಚನೆಯನ್ನು ಹಿಮ್ಮೆಟ್ಟಿಸುತ್ತದೆ, ವಿರೋಧಿಸುತ್ತದೆ ಮತ್ತು, ಮೂಲ ಹಾಗೂ ಪರೋಪಕಾರಿ ಯೋಜನೆಯು "ಎಲ್ಲರಿಗೂ ವಿಮೋಚನೆ" ಎಂಬುದಕ್ಕೆ ತಳಹದಿ ಯಾಗಿದೆ, ಅದು ಎಲ್ಲರಿಗೂ ದೇವರ ಯುಕ್ತಸಮಯದಲ್ಲಿ ಆಚರಣೆಗೆ ಬರುತ್ತದೆ ಮತ್ತು ಪ್ರಾಮಾಣಿಕ ನಂಬಿಗಸ್ತರಿಗೆ ಆದಾಮನ ದಂಡನೆಯಿಂದ ಬಿಡುಗಡೆಯನ್ನುಂಟು ಮಾಡುತ್ತದೆ ಮತ್ತು ದೇವರ ಮಕ್ಕಳಿಗೆ ಪಾಪ ಮತ್ತು ಶಾಪ ಬರುವ ಮುಂಚೆ ಇದ್ದ ಹಕ್ಕು ಮತ್ತು ಸ್ವಾತಂತ್ರ್ಯಕ್ಕೆ ಹಿಂತಿರುಗುವ ಅವಕಾಶವನ್ನು ಒದಗಿಸಿಕೊಡುತ್ತದೆ.

ಸಾರ್ವತ್ರಿಕವಾಗಿ ಅನ್ವಯವಾಗುವ ಈಡುಬಲಿಯ ಲಾಭಗಳು ಮತ್ತು ಫಲಿತಾಂಶಗಳು ಸ್ಪಷ್ಟವಾಗಿ ತೋರಿಬರಲಿ ಮತ್ತು ಅದರ ಎಲ್ಲಾ ಆಕ್ಷೇಪಣೆಗಳೂ ಕಣ್ಮರೆಯಾಗಲೇ ಬೇಕು. "ಮನುಷ್ಯನಾದ ಕ್ರಿಸ್ತ ಯೇಸು"ವು ಎಲ್ಲರಿಗಾಗಿ ಸಮರ್ಪಿಸಿದ ಈಡುಬಲಿಯು ಯಾವ ವ್ಯಕ್ತಿಗೂ ನಿತ್ಯಜೀವವನ್ನು ಅಥವಾ ಯಾವ ಮಾನವನಾಗಲಿ ಆಶೀರ್ವಾದವನ್ನು ನೀಡುವುದಿಲ್ಲ ಅಥವಾ ಖಾತರಿಪಡಿಸುವುದಿಲ್ಲ; ಆದರೆ ಅದು ಪ್ರತಿಯೊಬ್ಬರಿಗೂ ನಿತ್ಯಜೀವಕ್ಕಾಗಿ ಮತ್ತೊಂದು ಅವಕಾಶವನ್ನು ಅಥವಾ ವಿಚಾರಣೆಯನ್ನು ಒದಗಿಸಿಕೊಡುತ್ತದೆ. ಮಾನವನ ಮೊದಲ ಪರೀಕ್ಷೆಯು ಅದರಲ್ಲಿ ಮೊದಲು ನೀಡಲಾದ ಆಶೀರ್ವಾದಗಳನ್ನು ಕಳೆದುಕೊಳ್ಳುವುದಕ್ಕೆ ಕಾರಣವಾಯಿತು. ಆದರೆ ಇದು ನಿಜವಾಗಿಯೂ ನಿಷ್ಠಾವಂತ ಹೃದಯವುಳ್ಳವರಿಗೆ ದೇವರು ದಯಪಾಲಿಸಿದ ಈಡುಬಲಿಯ ಕಾರಣದಿಂದ ಅನುಭವದ ಆಶೀರ್ವಾದವಾಗಿ ಮಾರ್ಪಟ್ಟಿದೆ. ಆದರೆ ಮಾನವರು ಮೊದಲನೆಯ ದಂಡನೆಯಿಂದ ಬಂಧಮುಕ್ತರಾದರು ಎಂಬ ಸತ್ಯವು ಅವರು ನಿತ್ಯಜೀವಕ್ಕಾಗಿ ನಡೆಯುವ ವ್ಯಕ್ತಿಗತವಾದ ವಿಚಾರಣೆಯಲ್ಲಿ, ವಿಧೇಯತೆಯನ್ನು ಪ್ರದರ್ಶಿಸಲು ವಿಫಲರಾದರೆ ಯಾರಿಗೂ ನಿರಂತರವಾಗಿ ಜೀವಿಸಲು ಅನುಮತಿಯಿಲ್ಲ. ವಿಧೇಯತೆಯಿಲ್ಲದೆ ಯಾರೂ ನಿರಂತರವಾಗಿ ಜೀವಿಸಲಾರರು. ಪಾಪದೊಂದಿಗೆ ಪ್ರಸ್ತುತ ಅನುಭವ ಮತ್ತು ಅದರ ಕಹಿ ದಂಡನೆಗಳ ಕಾರಣ ಮಾನವನು ಸಂಪೂರ್ಣವಾದ ಮುನ್ನೆಚ್ಚರಿಕೆ ಪಡೆದಿರುತ್ತಾನೆ; ಮತ್ತು ಈಡುಬಲಿಯ ಪರಿಣಾಮವಾಗಿ, ಆತನಿಗೆ ಮತ್ತೊಂದು ವ್ಯಕ್ತಿಗತವಾದ ಶೋಧನೆಯು ಕೊಡಲಾಗುವುದು, ಆತನಿಗಾಗಿ ಪ್ರಾಣನೀಡುವಷ್ಟು ಪ್ರೀತಿ ಮಾಡಿದಾತನ, ಯಾರೂ ನಾಶವಾಗದೇ ನಿತ್ಯಜೀವವನ್ನು ಪಡಕೊಳ್ಳಬೇಕೆಂಬುವವನ ದೃಷ್ಟಿ ಮತ್ತು ನಿಯಂತ್ರಣದಲ್ಲಿ ಮತ್ತು ಎಲ್ಲರೂ ದೇವರೆಡೆಗೆ ತಿರುಗಿ ಜೀವಪಡಕೊಳ್ಳಬೇಕೆಂಬುದಾಗಿದೆ. ಕೇವಲ ಇಚ್ಛಾ ಪೂರ್ವಕವಾಗಿ ಪಾಪಮಾಡಿದವರು ಮಾತ್ರವೇ ಎರಡನೆಯ ವಿಚಾರಣೆಗೆ ಒಳಗಾಗುತ್ತಾರೆ ಎಂಬುದು ಖಚಿತವೆಂದು ನಾವು ತಿಳುಕೊಳ್ಳಬೇಕು. ಆದರೆ ದಂಡನೆಯು ಎರಡನೆಯ ಮರಣವಾಗಿರುತ್ತದೆ. ಇದರಿಂದ ಯಾವುದೇ ಬಂಧಮುಕ್ತತೆ ಇರುವುದಿಲ್ಲ, ಬಿಡುಗಡೆ ಇರುವುದಿಲ್ಲ. ಯಾಕೆಂದರೆ ಮತ್ತೊಂದು ಈಡುಬಲಿಯ ಅಥವಾ ಮುಂದಣ ವಿಚಾರಣೆಯ ಉದ್ದೇಶವಿರುವುದಿಲ್ಲ. ಎಲ್ಲರೂ ಒಳ್ಳೆಯದು ಮತ್ತು ಕೆಟ್ಟದ್ದು ಇವೆರಡನ್ನೂ ಪೂರ್ತಿಯಾಗಿ ಸವಿದಿದ್ದಾರೆ. ಎಲ್ಲರೂ ದೇವರ ಒಳ್ಳೇತನ ಮತ್ತು ಪ್ರೀತಿಯನ್ನು ಅನುಭವಿಸಿದ್ದಾರೆ. ಎಲ್ಲರಿಗೂ ಜೀವಕ್ಕಾಗಿ ಪೂರ್ಣವಾದ, ಹಿತವಾದ ವ್ಯಕ್ತಿಗತ ವಿಚಾರಣೆಯನ್ನು ಅನುಕೂಲಕರ ವಾತಾವರಣದಲ್ಲಿ ಹೊಂದಿದ್ದಾರೆ.ಇನ್ನೂ ಹೆಚ್ಚಾದುದನ್ನು ಯಾರೂ ಕೇಳಲಾಗದು, ಮತ್ತು ಹೆಚ್ಚಿಗೆ ಯಾವುದನ್ನೂ ನೀಡಲಾಗದು. ಆ ವಿಚಾರಣೆಯು ಸಹಸ್ರವರುಷಗಳ ಪರೀಕ್ಷೆಯಲ್ಲಿ ಯಾರು ನೀತಿವಂತರಾಗಿದ್ದಾರೆ ಮತ್ತು ಪವಿತ್ರರಾಗಿದ್ದಾರೆ ಮತ್ತು ಯಾರು ಅನ್ಯಾಯಗಾರರು ಮತ್ತು ಅಪವಿತ್ರರು ಎಂಬುದನ್ನು ನಿರ್ಧರಿಸುತ್ತದೆ.

## ಶೋಧನೆಯ ಷರತ್ತುಗಳು ಮತ್ತು ಅನುಕೂಲಗಳು

## The Conditions and Advantages of the Trial

ಅದೇ ಪರಿಸ್ಥಿತಿಗಳಲ್ಲಿ ಜೀವಕ್ಕೆ ಮತ್ತೊಂದು ಪರೀಕ್ಷೆಯನ್ನು ದಯಪಾಲಿಸುವುದು ನಿಷ್ಪ್ರಯೋಜಕ ವಾಗಿದೆ; ಆದರೆ ಒಮ್ಮೆ ಪರೀಕ್ಷಿಸಿದವರ ಸಂದರ್ಭಗಳು ಅದು ವಿಭಿನ್ನವಾಗಿದ್ದರೂ ಹೆಚ್ಚು ಅನುಕೂಲಕರವಾಗಿದ್ದರೂ ಅವರ ವೈಯುಕ್ತಿಕ ವಿಚಾರಣೆಯ ನಿಯಮ ಮತ್ತು ಷರತ್ತುಗಳು ಆದಾಮನ ವಿಚಾರಣೆಯ ಸಂದರ್ಭದಲ್ಲಿದ್ದಂತೆಯೇ ಇರುತ್ತದೆ. ದೇವರ ಆಜ್ಞೆಯು ಒಂದೇ ಸಮವಾಗಿರುತ್ತದೆ – ಅದು ಬದಲಾಗುವುದಿಲ್ಲ ಮತ್ತು "ಪಾಪ ಮಾಡುವವವನೇ ಸಾಯುವನು" (ಯೆಹೆಜ್ಕೇಲ 18:20) ಎಂದು ಇನ್ನೂ ಹೇಳಲಾಗಿದೆ. ಮನುಷ್ಯನ ಪರಿಸ್ಥಿತಿಯು ಸುತ್ತಣವುಗಳನ್ನು ಗಮನಿಸಿದರೆ ಅದು ಏದೇನಿನಲ್ಲಿದ್ದ ಪರಿಸ್ಥಿತಿಗಿಂತ ಇನ್ನೂ ಹೆಚ್ಚು ಅನುಕೂಲಕರ ವಾಗಿರುವುದಿಲ್ಲ. ಆದರೆ ಹೆಚ್ಚಿನ ವ್ಯತ್ಯಾಸವೆಂದರೆ ವೃದ್ಧಿಯಾಗಿರುವ ಜ್ಞಾನವು. ಕೇಡಿನೊಂದಿಗಿನ ಅನುಭವವು, ಒಳ್ಳೆದರೊಂದಿಗಿನ ಅನುಭವಕ್ಕಿಂತ ವ್ಯತಿರಿಕ್ತವಾಗಿರುತ್ತದೆ. ಇದು ಪ್ರತಿಯೊಬ್ಬರಿಗೂ ಬರಲಿರುವ ವಿಚಾರಣಾ ಯುಗದಲ್ಲಿ ಒದಗಿಬರುತ್ತದೆ ಮತ್ತು ಲಾಭದಾಯಕವಾಗಿ ಪರಿಣಮಿಸುವುದು. ಈ

ಕಾರಣದಿಂದ ಎರಡನೆಯ ವಿಚಾರಣೆಯ ಫಲಿತಾಂಶವು ಮೊದಲನೆಯದಕ್ಕಿಂತ ಹೆಚ್ಚು ವ್ಯಾಪಕವಾಗಿ ವ್ಯತ್ಯಾಸವುಳ್ಳದ್ದಾಗಿರುತ್ತದೆ. 'ಎಲ್ಲರಿಗಾಗಿ ಈಡುಬಲಿ'ಯ ದೆಸೆಯಿಂದ ಒದಗಿ ಬಂದ ದೈವೀಕ ಜ್ಞಾನ ಮತ್ತು ಪ್ರೀತಿಯು ಈ ರೀತಿಯಲ್ಲಿ ನೂತನ ವಿಚಾರಣೆಯಲ್ಲಿ ಎಲ್ಲರಿಗೂ ಆಶೀರ್ವಾದವನ್ನು ಖಾತರಿಪಡಿಸುತ್ತದೆ. ಇನ್ನು ಮುಂದೆ ಅನುಕೂಲಕರ ವಿಚಾರಣೆ ಇರುವುದಿಲ್ಲ, ಅನುಕೂಲಕರ ನಿಯಮಗಳಿರುವುದಿಲ್ಲ, ಯಾವುದೇ ಅನುಕೂಲಕರ ಪರಿಸ್ಥಿತಿಗಳಾಗಲೀ, ಸನ್ನಿವೇಶಗಳಾಗಲೀ ಇರುವುದಿಲ್ಲ. ಅವುಗಳು ಯಾವುದೇ ವಿಧದಲ್ಲಿ ಮತ್ತೊಂದು ಈಡುಬಲಿಯನ್ನು ಅಥವಾ ಸಹಸ್ರಮಾನದ ನಂತರದಲ್ಲಿ ಮುಂದಣ ವಿಚಾರಣೆಗೆ ವೈಚಾರಿಕತೆಯ ಅವಕಾಶ ಮಾಡಿಕೊಡುವುದಿಲ್ಲ.

ನೀಡಲ್ಪಟ್ಟ ಈಡುಬಲಿಯು ಯಾರ ಪಾಪವನ್ನೂ ಕ್ಷಮಿಸುವುದಿಲ್ಲ; ಅದು ಪಾಪಿಗಳನ್ನು ಭಕ್ತರೆಂದು ಎಣಿಸಲು ಪ್ರಸ್ತಾಪಿಸುವುದಿಲ್ಲ ಮತ್ತು ಅವರನ್ನು ನಿರಂತರವಾದ ಆನಂದಕ್ಕೆ ನಡೆಸುವುದಿಲ್ಲ. ಅದು ಕೇವಲ ಪಾಪಿಗಳನ್ನು ಅಂಗೀಕರಿಸಿ, ಮೊದಲನೆಯ ದಂಡನೆಯಿಂದ ಮತ್ತು ಅದರ ಫಲಿತಾಂಶಗಳಿಂದ ನೇರವಾಗಿ ಮತ್ತು ಪರೋಕ್ಷವಾಗಿ ಬಿಡುಗಡೆಗೊಳಿಸುತ್ತದೆ ಮತ್ತು ಆತನನ್ನು ಮತ್ತೆ ಜೀವಕ್ಕಾಗಿ ವಿಚಾರಣೆಗೆ ಒಳಪಡಿಸುತ್ತದೆ ಮತ್ತು ಆ ವಿಚಾರಣೆಯಲ್ಲಿ ಆತನ ಸ್ವಂತ ಇಚ್ಛಾಪೂರ್ವಕವಾದ ವಿಧೇಯತೆಯ ಅಥವಾ ಉದ್ದೇಶಪೂರ್ವಕ ಅವಿಧೇಯತೆಯ ಪರೀಕ್ಷೆಯಾಗುತ್ತದೆ ಮತ್ತು ಆತನು ನಿತ್ಯಜೀವವನ್ನು ಹೊಂದಿಕೊಳ್ಳಬಹುದೋ ಇಲ್ಲವೋ ಎಂಬುದು ನಿರ್ಧಾರವಾಗುತ್ತದೆ.

ಅನೇಕರು ಊಹಿಸಿರುವಂತೆ, ನಾಗರೀಕತೆಯ ಸ್ಥಿತಿಯಲ್ಲಿ ಜೀವಿಸುವವರೆಲ್ಲರೂ, ಸತ್ಯವೇದವನ್ನು ನೋಡುವ, ಅಥವಾ ಅದನ್ನು ಹೊಂದಿರುವವರೆಲ್ಲರೂ ಈ ರೀತಿಯಲ್ಲಿ ಜೀವಕ್ಕಾಗಿ ವಿಚಾರಣೆಯನ್ನು ಹೊಂದಿಕೊಳ್ಳುವ ಅಥವಾ ಪೂರ್ಣ ಅವಕಾಶವನ್ನು ಪಡೆದಿದ್ದಾರೆಂದು ನಾವು ಭಾವಿಸಬಾರದು. ಈ ಪತನವು ಆದಾಮನ ಎಲ್ಲಾ ಮಕ್ಕಳನ್ನು ಏಕರೀತಿಯಲ್ಲಿ ಹಾನಿಯನ್ನುಂಟು ಮಾಡಿಲ್ಲವೆಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಕೆಲವರು ಈ ಲೋಕಕ್ಕೆ ಬಹಳ ಬಲಹೀನರಾಗಿ ಬಂದಿರುತ್ತಾರೆ ಮತ್ತು ಈ ಲೋಕದ ತಂದೆಯಾದ ಸೈತಾನನಿಂದ ಬಲು ಬೇಗನೇ ನೀತಿಭ್ರಷ್ಟರೂ, ಕುರುಡರೂ ಆಗಿ ಪಾಪದಿಂದ ಸುತ್ತುವರೆಯುವ ಮೂಲಕ ಬಂಧಿಗಳಾಗಿ ನಡೆಸಲ್ಪಡುತ್ತಾರೆ. ಎಲ್ಲರೂ ಹೆಚ್ಚುಕಡಿಮೆ ಈ ಪ್ರಭಾವಕ್ಕೊಳಗಾಗಿರುತ್ತಾರೆ ಮತ್ತು ಅವರು ಒಳ್ಳೆಯದನ್ನು ಮಾಡಿದರೂ ಕೆಡುಕು ಹಾಜರಿದ್ದು ಸುತ್ತಮುತ್ತಲೂ ಪ್ರಬಲವಾಗುತ್ತದೆ. ಹೀಗಾಗಿ ಅವರು ಒಳ್ಳೇದನ್ನು ಮಾಡಬಯಸಿದರೂ ಅದು ಬಹುತೇಕ ಅಸಾಧ್ಯವಾಗಿದೆ, ಅವರು ಮಾಡಬಾರದೆನ್ನುವ ಕೇಡುಗಳನ್ನು ಮಾಡಲು ಬಹುತೇಕ ಅನಿವಾರ್ಯವಾಗಿದೆ.

ಕ್ರಿಸ್ತನು ತನ್ನ ಈಡುಬಲಿಯನ್ನು ಒಪ್ಪಿಕೊಳ್ಳುವವರಿಗೆ ಬಿಡುಗಡೆಯನ್ನುಂಟು ಮಾಡುವುದನ್ನು ಪ್ರಸ್ತುತ ಸಮಯದಲ್ಲಿ ನಿಜವಾಗಿಯೂ ಮತ್ತು ಪ್ರಾಯೋಗಿಕ ವಾಗಿಯೂ ಅರಿತುಕೊಳ್ಳುವವರ ಮತ್ತು ತಮ್ಮನ್ನು ಮುಂದಣ ಮಾರ್ಗದರ್ಶನಕ್ಕಾಗಿ ಆತನ ನಿಯಂತ್ರಣಕ್ಕೆ ಒಪ್ಪಿಸಿಕೊಡುವವರ ಸಂಖ್ಯೆ ನಿಜವಾಗಿಯೂ ಬಹಳ ಕಡಿಮೆಯಾಗಿದೆ. ಅದಾಗ್ಯೂ ಈ ಕೆಲವರು ಮಾತ್ರ, ಕ್ರಿಸ್ತನ ಸಭೆ ಮಾತ್ರ ಜಗತ್ತನ್ನು ಆಶೀರ್ವದಿಸುವಲ್ಲಿ ದೇವರೊಂದಿಗೆ ಸಹೋದ್ಯೋಗಿಗಳಾಗಿರುವ ವಿಶೇಷ ಉದ್ದೇಶಕ್ಕಾಗಿ ಮೊದಲೇ ಕರೆಯಲ್ಪಟ್ಟು, ಪರೀಕ್ಷಿಸಲ್ಪಟ್ಟಿದ್ದು – ಈಗ ಸಾಕ್ಷಿಯಾಗಿವೆ, ಮತ್ತು ಅದರ ವಿಚಾರಣೆಯ ಯುಗದಲ್ಲಿ ಜಗತ್ತನ್ನು ಆಳುವ, ಆಶೀರ್ವಾದ ಮಾಡುವ ಮತ್ತು ನಿರ್ಣಯಿಸಲು ಕರೆಯಲ್ಪಡುತ್ತಾರೆ – ಆದರೆ ಯಾವುದೇ ಮಟ್ಟಿಗೆ ಈಡುಬಲಿಯ ಮೌಲ್ಯದ ಪ್ರಯೋಜನಗಳಿಗಾಗಿ ಆನಂದಿಸುತ್ತಾರೆ ಅಥವಾ ಜೀವಕ್ಕಾಗಿ ಈಗ ವಿಚಾರಣೆಯಲ್ಲಿವೆ. ಈ ಕೆಲವರನ್ನು ಬರಲಿರುವ ಯುಗದಲ್ಲಿ ಈ ಲೋಕಕ್ಕೆ ಒದಗಿಸಲ್ಪಡುವ ಪುನರ್‌ವಶದ ಎಲ್ಲಾ ಆಶೀರ್ವಾದಗಳನ್ನು ಅವರು ವಿಶ್ವಾಸದ ಮೂಲಕವಾಗಿ ಅಂಗೀಕರಿಸುತ್ತಾರೆ ಎಂದು ಎಣಿಸಲ್ಪಟ್ಟಿದ್ದಾರೆ (ಅವನ್ನು ನಂಬಿಕೆಯಿಂದ ಹೊಂದುವರು). ಇವರು ಪರಿಪೂರ್ಣರಲ್ಲದಿದ್ದರೂ, ವಾಸ್ತವವಾಗಿ ಆದಾಮನ ಸ್ಥಿತಿಗೆ ಪುನರ್‌ಸ್ಥಾಪಿಸದಿದ್ದರೂ ವ್ಯತ್ಯಾಸವನ್ನು ಸರಿದೂಗಿಸುವ ರೀತಿಯಲ್ಲಿ ಅವರನ್ನು ಪರಿಗಣಿಸಲಾಗುತ್ತದೆ, ಕ್ರಿಸ್ತನ ಮೇಲಣ ನಂಬಿಕೆಯ ಮೂಲಕ ಅವರನ್ನು ಪರಿಪೂರ್ಣರೆಂದು ಎಣಿಕೆಹಾಕಲಾಗುತ್ತದೆ. ಹೀಗಾಗಿ ಅವರನ್ನು ಪರಿಪೂರ್ಣತೆಗೆ, ದೇವರ ದಯೆಗೆ ಇನ್ನು ಮುಂದೆ ಪಾಪಿಗಳಲ್ಲವೋ ಎಂಬಂತೆ ಪುನರ್‌ವಶ ಪಡಿಸಲಾಗುತ್ತದೆ. ಅವರ ಅಪರಿಪೂರ್ಣತೆಗಳು ಮತ್ತು ಅನಿವಾರ್ಯವಾದ ಬಲಹೀನತೆಗಳು, ಈಡಬಲಿಯ ಪರಿಹಾರದಿಂದ ಸರಿದೂಗಿಸಲ್ಪಟ್ಟು ಅವುಗಳನ್ನು ಅವರಿಗೆ ಆರೋಪಿಸುತ್ತಿಲ್ಲ. ಆದರೆ ವಿಮೋಚಕನ ಪರಿಪೂರ್ಣತೆಯಿಂದ ಆವರಿಸಲ್ಪಟ್ಟಿದೆ. ಆದ್ದರಿಂದ ಸಭೆಯು ವಿಚಾರಣೆಯು, ಆಕೆ ಕ್ರಿಸ್ತನಲ್ಲಿ ಪರಿಗಣಿಸಲ್ಪಟ್ಟಿರುವ ಕಾರಣದಿಂದ, ಜಗತ್ತು ತನ್ನ ವಿಚಾರಣೆಯ ಸಮಯದಲ್ಲಿ ಹೊಂದುವಷ್ಟು

ನ್ಯಾಯಯುತವಾಗಿದೆ ಎಂದು ಪರಿಗಣಿಸಲಾಗಿದೆ. ಲೋಕವನ್ನೆಲ್ಲಾ ಸತ್ಯದ ಪೂರ್ಣ ತಿಳುವಳಿಕೆಗೆ ತರಲಾಗುವುದು, ಪ್ರತಿಯೊಬ್ಬರೂ ಅದರ ಒದಗಿಸುವಿಕೆಗಳನ್ನೂ, ಪರಿಸ್ಥಿತಿಗಳನ್ನೂ ಒಪ್ಪಿಕೊಳ್ಳುವಾಗ ಇನ್ನು ಮುಂದೆ ಅವರು ಪಾಪಿಗಳಲ್ಲವೆಂದು, ಆದರೆ ಒಬ್ಬ ಮಗನಂತೆ ಪುನರ್‌ವಶದ ಎಲ್ಲಾ ಆಶೀರ್ವಾದಗಳನ್ನೂ ಉದ್ದೇಶಿಸಲಾಗಿದೆ.

ವಿಚಾರಣೆಗೆ ಒಳಗಾದ ಈ ಪ್ರಪಂಚದ ಅನುಭವಗಳು ಮತ್ತು ಸಭೆಯ ವಿಚಾರಣೆಯ ಸಮಯದಲ್ಲಿನ ಅನುಭವಗಳು ಇವುಗಳ ನಡುವಣ ಒಂದು ವ್ಯತ್ಯಾಸವೇನೆಂದರೆ, ಲೋಕದ ವಿಧೇಯರು ತಮ್ಮ ದೈಹಿಕ ಹಾಗೂ ಮಾನಸಿಕ ಬಲಹೀನತೆಗಳನ್ನು ಕ್ರಮೇಣವಾಗಿ ತೆಗೆದುಹಾಕುವಿಕೆಯ ಮೂಲಕ ತಕ್ಷಣದಲ್ಲಿ ಪುನರ್‌ಸ್ಥಾಪನೆಯ ಆಶೀರ್ವಾದಗಳನ್ನು ಪಡೆದುಕೊಳ್ಳಲು ಪ್ರಾರಂಭಿಸುವರು; ಆದರೆ ಸುವಾರ್ತಾ ಸಭೆಯಾದರೋ, ಕರ್ತನ ಸೇವೆಯಲ್ಲಿ ಮರಣದ ಪರ್ಯಂತ ತನ್ನನ್ನು ಪ್ರತಿಷ್ಠಿಸಿಕೊಂಡಿದ್ದು ಮರಣ ಹೊಂದಿ, ಪ್ರಥಮ ಪುನರುತ್ಥಾನದಲ್ಲಿ ತನ್ನ ಪರಿಪೂರ್ಣತೆಯನ್ನು ತತ್‌ಕ್ಷಣವೇ ಹೊಂದಿ ಕೊಳ್ಳುವುದು. ಎರಡು ಪರೀಕ್ಷೆಗಳ ನಡುವಿನ ಮತ್ತೊಂದು ವ್ಯತ್ಯಾಸವೆಂದರೆ, ಮುಂದಿನ ಯುಗದ ಹೆಚ್ಚು ಅನುಕೂಲಕರ ಪರಿಸರದಲ್ಲಿ ಇದರೊಂದಿಗೆ ಹೋಲಿಸಿದರೆ, ಆ ಸಮಯದಲ್ಲಿ ಸಮಾಜ, ಆಡಳಿತ ಇತ್ಯಾದಿಗಳು ನೀತಿವಂತಿಕೆಗೆ ಅನುಕೂಲಕರವಾಗಿರುತ್ತವೆ, ನಂಬಿಕೆ ಮತ್ತು ವಿಧೇಯತೆಗೆ ಪ್ರತಿಫಲ ನೀಡುತ್ತವೆ ಮತ್ತು ಪಾಪವನ್ನು ಶಿಕ್ಷಿಸುತ್ತವೆ. ಆದರೆ ಈಗ, ನಾವು ನೋಡುವಂತೆ, ಈ ಪ್ರಪಂಚದ ಅರಸನ ಅಡಿಯಲ್ಲಿ, ಸಭೆಯ ವಿಚಾರಣೆಯು ನೀತಿ, ನಂಬಿಕೆ ಇತ್ಯಾದಿಗಳಿಗೆ ಪ್ರತಿಕೂಲವಾದ ಸಂದರ್ಭಗಳಿವೆ. ಆದರೆ, ಇದನ್ನು ನಾವು ನೋಡಿದ್ದೇವೆ, ಸಭೆಗೆ ನಿತ್ಯಜೀವದ ಉಡುಗೊರೆ ಜೊತೆಗೆ ನೀಡಲಾಗಿರುವ ದೈವ ಸ್ವಭಾವದ ಮಹಿಮೆಯ ಮತ್ತು ಗೌರವದ ಬಹುಮಾನದಲ್ಲಿ ಸರಿತೂಗಿಸಬೇಕಾಗಿದೆ ಎಂಬುದಾಗಿ ನೋಡುತ್ತೇವೆ.

## ಕ್ರಿಸ್ತನ ಬಲಿದಾನವು ಅಗತ್ಯವಾಗಿದೆ
## Christ's Sacrifice Necessary

ಆದಾಮನ ಮರಣಕ್ಕೆ ಒಂಬೈನೂರ ಮೂವತ್ತು ವರ್ಷಗಳು ತಗುಲಿದರೂ ಅದು ಖಚಿತವಾಗಿತ್ತು. ಆತನು ತಾನೇ ಸಾಯುತ್ತಿದ್ದುದರಿಂದ, ಆತನ ಎಲ್ಲಾ ಮಕ್ಕಳೂ ಅದೇ ಸಾಯುವ ಸ್ಥಿತಿಯಲ್ಲಿ, ಜೀವಿಸಲು ಹಕ್ಕಿಲ್ಲದಂತೆ ಜನಿಸಿದರು ಮತ್ತು ಅವರ ತಂದೆತಾಯಿಗಳಂತೆ ಹೆಚ್ಚು ಕಡಿಮೆ ಎಲ್ಲರೂ ಚಿರಕಾಲದ ಪ್ರಕ್ರಿಯೆಯನ್ನು ಅನುಸರಿಸಿ ಸಾಯುತ್ತಾರೆ. ಆದಾಗ್ಯೂ, ಸಂಕಟ ಮತ್ತು ನೋವುಗಳೇ ಮರಣವಲ್ಲ, ಆದರೆ ಮರಣವು ಜೀವ ನಂದಿಹೋಗುವುದಾಗಿದ್ದು ಅದು ಸಾಯುವಿಕೆಯಲ್ಲಿ ಕೊನೆಗೊಳ್ಳುತ್ತದೆ, ಅದು ಪಾಪದ ದಂಡನೆಯಾಗಿದೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಕಷ್ಟ ಸಂಕಟಗಳು ಕೇವಲ ಅದಕ್ಕೆ ಸಂಭವನೀಯಗಳಾಗಿವೆ ಮತ್ತು ಈ ದಂಡನೆಯು ಸ್ವಲ್ಪ ಅಥವಾ ಯಾವ ಕಷ್ಟನಷ್ಟಗಳಿಲ್ಲದೆ ಅನೇಕರ ಮೇಲೆ ಬೀಳುತ್ತದೆ. ಆದಾಮನಿಂದ ಜೀವವು ಮುಟ್ಟುಗೋಲು ಹಾಕಲ್ಪಟ್ಟಾಗ ಅದು ಆತನಿಂದ ಸದಾಕಾಲಕ್ಕೂ ಮುಟ್ಟುಗೋಲು ಹಾಕಲ್ಪಟ್ಟಿತು ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಆತನ ಸಂತಾನದಲ್ಲಿ ಒಬ್ಬನಾದರೂ ತನ್ನ ಅಪರಾಧಕ್ಕೆ ಪರಿಹಾರ ನೀಡಲಾರರು ಅಥವಾ ಕಳೆದುಹೋದ ಬಾಧ್ಯತೆಯನ್ನು ಪುನಃ ಪಡಕೊಳ್ಳಲಾರರು. ಸಂತತಿಯವರೆಲ್ಲರೂ ಸತ್ತುಹೋಗಿದ್ದಾರೆ, ಇಲ್ಲವೇ ಸಾಯುತ್ತಿದ್ದಾರೆ. ಅವರು ಮರಣಕ್ಕೆ ಮುಂಚೆ ಪಾಪಕ್ಕೆ ಪ್ರಾಯಶ್ಚಿತ್ತ ನೀಡಲಾಗದಿದ್ದರೆ, ಅವರು ನಿಶ್ಚಯವಾಗಿಯೂ ಮರಣ ಹೊಂದಿದ ಮೇಲೆ – ಅಸ್ತಿತ್ವದಲ್ಲಿಲ್ಲದಿದ್ದಾಗ ಅದನ್ನು ಮಾಡಲು ಸಾಧ್ಯವಿಲ್ಲ. ಪಾಪದ ದಂಡನೆಯೆಂದರೆ, ಕೇವಲ ಸಾಯುವುದಲ್ಲ, ನಂತರದಲ್ಲಿ ಜೀವಿಸುವ ಹಕ್ಕನ್ನು ಹೊಂದಿದವರಾಗಿ ಅದರ ನಂತರ ಜೀವಕ್ಕೆ ಮರಳುವುದಾಗಿದೆ. ಉಚ್ಚರಿಸಲ್ಪಟ್ಟ ದಂಡನೆಯಲ್ಲಿ ಬಿಡುಗಡೆಯ ಬಗ್ಗೆ ಮಾಹಿತಿ ಇಲ್ಲ (ಆದಿ. 2:17). ಆದುದರಿಂದ, ಪುನರ್‌ವಶವು ದೇವರ ಪಾಲಿನ ಉಚಿತವಾದ ಕೃಪಾಕಾರ್ಯವಾಗಿದೆ. ದಂಡನೆಗೆ ಗುರಿಯಾದ ಕೂಡಲೇ, ಅದು ಉಚ್ಚರಿಸಲ್ಪಡುತ್ತಿರು ವಾಗಲೂ ದೇವರ ಉಚಿತ ಕೃಪೆಯನ್ನು ತಿಳಿಸಲಾಗಿತ್ತು ಮತ್ತು ಅದು ನಿಜವಾದಾಗ ಆತನ ಪ್ರೀತಿಯನ್ನು ಎಷ್ಟೋ ಸಂಪೂರ್ಣವಾಗಿ ಘೋಷಿಸಲಾಗುವುದು.

## ಒಬ್ಬನ ಮರಣದಿಂದ ಸಂತತಿಯೆಲ್ಲಾ ಹೇಗೆ ವಿಮೋಚನೆಗೊಂಡಿತು
## How the Race Could be and was Redeemed by the Death of One

"ಸ್ತ್ರೀಯ ಸಂತಾನವು ಸರ್ಪದ ತಲೆಯನ್ನು ಜಜ್ಜುವುದು" ಎಂಬ ಹೇಳಿಕೆಯು ನಿರೀಕ್ಷೆಯ ಕಿರಣವಿಲ್ಲದಿದ್ದರೆ, ಮಾನವ ಕುಲವು ಸಂಪೂರ್ಣವಾದ ಹತಾಶೆಗೊಳಗಾಗುತ್ತಿತ್ತು; ಆದರೆ ಈ ವಾಗ್ದಾನವು ದೇವರು ಅವರ ಲಾಭಕ್ಕಾಗಿ ಕೆಲವು ಯೋಜನೆ ಹೊಂದಿದ್ದಾನೆಂದು ಸೂಚಿಸುತ್ತದೆ. ದೇವರು

ಅಬ್ರಹಾಮನಿಗೆ ಆತನ ಸಂತಾನದ ಮೂಲಕ ಭೂಲೋಕದ ಎಲ್ಲಾ ಕುಟುಂಬಗಳೂ ಆಶೀರ್ವಾದ ಹೊಂದಿಕೊಳ್ಳುತ್ತವೆ ಎಂದು ಪ್ರಮಾಣ ಮಾಡಿದಾಗ ಅದು ಎಲ್ಲರ ಪುನರುತ್ಥಾನದ, ಪುನರ್‌ವಶದ ಅಭಿಪ್ರಾಯವನ್ನು ಸೂಚಿಸುವುದಾಗಿದೆ. ಯಾಕೆಂದರೆ ಆಗ ಅನೇಕರು ತೀರಿಕೊಂಡಿದ್ದರು ಹಾಗೂ ಅಂದಿನಿಂದ ಅನೇಕರು ಆಶೀರ್ವಾದವಿಲ್ಲದೆ ಸಾಯುತ್ತಿದ್ದಾರೆ. ಪರಂತು, ಆಶೀರ್ವಾದವು ಇನ್ನೂ ಖಚಿತವಾಗಿದೆ. ಪುನರ್‌ವಶದ ಅಥವಾ ಚೈತನ್ಯದಾಯಕ ಸಮಯವು ಬಂದಾಗ ಎಲ್ಲರೂ ಆಶೀರ್ವಾದ ಹೊಂದಿಕೊಳ್ಳುತ್ತಾರೆ (ಅ.ಕೃ. 3:19). ಮೇಲಾಗಿ, ಆಶೀರ್ವಾದವು ದಯೆಯನ್ನು ಸೂಚಿಸುವುದಾಗಿರುವುದರಿಂದ, ದೇವರ ದಯೆಯು ಹಿಂತೆಗೆಯಲ್ಪಟ್ಟು, ಅದರ ಬದಲಾಗಿ, ಪಾಪದ ದೆಸೆಯಿಂದ ಶಾಪವು ಬಂದಿರುವಾಗ, ಮುಂದೆ ಬರಲಿರುವ ಈ ಆಶೀರ್ವಾದಗಳ ಈ ವಾಗ್ದಾನವು ಶಾಪದ ಹಿಂತೆಗೆದುಕೊಳ್ಳುವಿಕೆಯ ಅಭಿಪ್ರಾಯವನ್ನು ನೀಡುತ್ತದೆ. ಇದರ ಪರಿಣಾಮವಾಗಿ ಆತನ ದಯೆಯು ಹಿಂತಿರುಗುತ್ತದೆ. ಅಂದರೆ ದೇವರು ಮರುಕ ತೋರಿಸುತ್ತಾನೆ, ತನ್ನ ತೀರ್ಪನ್ನು ಬದಲಾಯಿಸುತ್ತಾನೆ, ಮತ್ತು ಅಪರಾಧಿ ಜನಾಂಗವನ್ನು ಮುಕ್ತಗೊಳಿಸುತ್ತಾನೆ ಅಥವಾ ಅವರು ವಿಮೋಚನೆ ಹೊಂದುವಂತೆ ಆತನ ಬಳಿಮಾನವನ ಅಪರಾಧಕ್ಕಾಗಿ ಬೇರೆ ಒಬ್ಬನು ಬೆಲೆ ತೆರುವ ಯಾವುದೋ ಒಂದು ಯೋಜನೆ ಇದೆ ಎಂಬ ಅಭಿಪ್ರಾಯವನ್ನು ಮೂಡಿಸುತ್ತದೆ.

ದೇವರು ಅಬ್ರಹಾಮನನ್ನು ಆತನ ಯೋಜನೆ ಯಾವುದಾಗಿದೆ ಎಂಬುದರ ಬಗ್ಗೆ ಅನುಮಾನದಲ್ಲಿ ಬಿಡಲಿಲ್ಲ. ಆದರೆ, ಆತನನ್ನು ಸಮೀಪಿಸುವವರೆಲ್ಲರೂ ತೆರಬೇಕಾದ ವಿವಿಧ ಸಾಂಕೇತಿಕ ಬಲಿಗಳ ಮೂಲಕ ತೋರಿಸಿದನು, ಹಾಗೂ ಆತನು ಮರುಕ ತೋರಲಾರನು, ತೋರಲಿಲ್ಲ ಅಥವಾ ಅವರ ಪಾಪವನ್ನು ಕ್ಷಮಿಸುವುದಿಲ್ಲ ಎಂಬುದನ್ನು ತೋರಿಸಲಾಗಿದೆ. ಅದರ ದಂಡನೆಯನ್ನು ತೊಡೆದುಹಾಕಲು ಮತ್ತು ರದ್ದುಪಡಿಸಲು ಇರುವ ಒಂದೇ ಮಾರ್ಗವೆಂದರೆ ಆ ದಂಡನೆಗೆ ತಕ್ಕ ಸಮರ್ಪಣೆಗಳನ್ನು ಸಲ್ಲಿಸುವುದು. ಇದನ್ನು ಅಬ್ರಹಾಮನಿಗೆ ಮಹತ್ತರವಾದ ರೀತಿಯಲ್ಲಿ ತೋರಿಸಲಾಯಿತು. ವಾಗ್ದಾನಪಡಿಸಿದ ಆಶೀರ್ವಾದವು ಕೇಂದ್ರೀಕೃತವಾಗಿತ್ತು, ಅಬ್ರಹಾಮನ ಮಗನನ್ನು ಆತನು ಆಶೀರ್ವಾದ ಹೊಂದುವ ಮೊದಲೇ ಸಮರ್ಪಿಸ ಬೇಕಾಯಿತು ಮತ್ತು ಅಬ್ರಹಾಮನು ಆತನನ್ನು ಸತ್ತವರಿಂದ ಚಿತ್ರಣರೂಪದಲ್ಲಿ ಹಿಂದಕ್ಕೆ ಪಡೆದನು (ಇಬ್ರಿಯ 11:19). ಆ ಚಿತ್ರಣದಲ್ಲಿ ಇಸಾಕನು ನಿಜವಾದ ಸಂತಾನವಾದ, ಮಾನವರನ್ನು ವಿಮೋಚಿಸುವ ಸಲುವಾಗಿ ಮರಣಪಟ್ಟ, ಈ ವಿಮೋಚನೆಯ ದೆಸೆಯಿಂದ ವಾಗ್ದಾನಪಡಿಸಿದ ಆಶೀರ್ವಾದ ಹೊಂದಿಕೊಳ್ಳುವಂತೆ ಮಾಡಿದ ಯೇಸುವನ್ನು ಸಂಕೇತಿಸಿದನು. ದೇವರು ಅಪರಾಧಗಳನ್ನು ಕ್ಷಮಿಸುವನು ಮತ್ತು ಅದರಿಂದ ಬಿಡಿಸುವನು ಎಂದು ಅಬ್ರಹಾಮನು ಭಾವಿಸಿದ್ದರೆ, ಆತನು ದೇವರು ಬದಲಾಗಬಲ್ಲನು ಎಂದು ಆತನು ಭಾವಿಸಿ ಆತನ ವಾಗ್ದಾನಗಳ ಮೇಲೆ ಪೂರ್ಣವಾದ ವಿಶ್ವಾಸವನ್ನು ಇಡಲಾಗುತ್ತಿದ್ದಿಲ್ಲ. ದೇವರು ತನ್ನ ಮನಸ್ಸನ್ನು ಒಮ್ಮೆ ಬದಲಾಯಿಸುವುದಾದರೆ, ಮತ್ತೊಮ್ಮೆ ಯಾಕೆ ಆತನು ಅದನ್ನು ಬದಲಾಯಿಸಬಾರದು? ಎಂದು ಆತನು ಆಲೋಚಿಸಬಹುದಿತ್ತು. ಆತನು ಮರಣದ ಶಾಪದ ಬಗ್ಗೆ ಮರುಕಗೊಳ್ಳುವುದಾದಲ್ಲಿ, ಆತನು ಪುನಃ ವಾಗ್ದಾನಪಡಿಸಿದ ದಯೆ ಮತ್ತು ಆಶೀರ್ವಾದಗಳ ಬಗ್ಗೆಯೂ ಪಟ್ಟು ಸಡಲಿಸಬಹುದಲ್ಲವೇ? ಆದರೆ ದೇವರು ನಮ್ಮನ್ನು ಅಂಥಾಃ ಅನಿಶ್ಚಿತತೆಯಲ್ಲಿ ಬಿಡುವವನಲ್ಲ. ಆತನು ತನ್ನ ನ್ಯಾಯ ಮತ್ತು ಬದಲಾಗದಿರುವಿಕೆಯ ಬಗ್ಗೆ ಬಹಳಷ್ಟು ಭರವಸೆಗಳನ್ನು ನೀಡುವವನಾಗಿದ್ದಾನೆ. ಆತನು ಅವರ ಅಪರಾಧಗಳನ್ನು ಮುಕ್ತಿಗೊಳಿಸುವುದಿಲ್ಲ, ಬಹಳ ಮಟ್ಟಿಗೆ ಪ್ರೀತಿಸುವವನಾದರೂ "ಸ್ವಂತ ಮಗನನ್ನು ಉಳಿಸಿಕೊಳ್ಳದೆ ಆತನನ್ನು ನಮ್ಮೆಲ್ಲರಿಗೋಸ್ಕರ (ಮರಣಕ್ಕೆ) ಒಪ್ಪಿಸಿಕೊಟ್ಟನಲ್ಲಾ".

ಆದಾಮನು ದಂಡನೆಗೊಳಗಾದಾಗ ಸಮಸ್ತ ಮಾನವ ಕುಲವು ಆದಾಮನಲ್ಲಿತ್ತು. ಮತ್ತು ಆತನ ಮೂಲಕ ಜೀವವನ್ನು ಕಳಕೊಂಡಂತೆ, ಯೇಸುವು ತನ್ನನ್ನು "ಎಲ್ಲರಿಗಾಗಿ ಈಡುಬಲಿಯಾಗಿ ಅರ್ಪಿಸಿದಾಗ", ಆತನ ಮರಣದಲ್ಲಿ ಇನ್ನೂ ಜನಿಸದ ಆದಾಮನ ಸೊಂಟದಲ್ಲಿನ ಸಂತತಿ ಮರಣದ ಸಾಧ್ಯತೆಯನ್ನು ಒಳಗೊಂಡಿತ್ತು.. ಸಂಪೂರ್ಣ ತೃಪ್ತಿ ಅಥವಾ ಅನುಗುಣವಾದ ಕ್ರಯವು ಎಲ್ಲಾ ಮನುಷ್ಯರಿಗೂ ಅನ್ವಯಿಸಬೇಕಾಗಿರುವುದನ್ನು ಈ ರೀತಿಯಾಗಿ ನ್ಯಾಯದ ಮಡಲಿಗೆ ಹಾಕಲಾಗಿದೆ. "ತಕ್ಕ ಸಮಯದಲ್ಲಿ" ಈ ರೀತಿಯಾಗಿ ಎಲ್ಲರನ್ನೂ ಕೊಂಡುಕೊಳ್ಳುವವನು ತನ್ನ ಮೂಲಕವಾಗಿ ದೇವರ ಬಳಿಗೆ ಬರುವವರನ್ನು ಪುನರ್‌ಸ್ಥಾಪಿಸುವ ಪೂರ್ಣ ಅಧಿಕಾರವುಳ್ಳವನಾಗಿದ್ದಾನೆ.

"ಒಂದೇ ಅಪರಾಧದ ಮೂಲಕ ಎಲ್ಲಾ ಮನುಷ್ಯರಿಗೆ ಸಾಯಬೇಕೆಂಬ ನಿರ್ಣಯವು ಹೇಗೆ ಉಂಟಾಯಿತೋ ಹಾಗೆಯೇ ಒಂದೇ ಸತ್ಕಾರ್ಯದಿಂದ ಎಲ್ಲಾ ಮನುಷ್ಯರಿಗೆ ನೀತಿವಂತರೆಂಬ ನಿರ್ಣಯವು

ಉಂಟಾಗಿ ಜೀವವನ್ನು ಫಲಿಸುತ್ತದೆ, ಒಬ್ಬನ ಅವಿಧೇಯತ್ವದಿಂದ ಎಲ್ಲರೂ ಹೇಗೆ ಪಾಪಿಗಳಾದರೋ ಹಾಗೆಯೇ ಒಬ್ಬನ ವಿಧೇಯತ್ವದಿಂದ ಎಲ್ಲರೂ ನೀತಿವಂತರಾಗುವರು" (ರೋಮಾ. 5: 18–19). ಪ್ರಸ್ತಾಪವು ಸರಳವಾದುದು; ಆದಾಮನ ಪಾಪದ ದೆಸೆಯಿಂದ ಮರಣವನ್ನು ಹಂಚಿಕೊಂಡಿರುವ ವರೆಲ್ಲರಿಗೂ ಯೇಸು ಕ್ರಿಸ್ತನೇ ಅವರಿಗೆ ಜೀವದ ಭಾಗ್ಯವನ್ನು ಅನುಗ್ರಹಿಸಿದ್ದಾನೆ. ಆತನು ಅವರಿಗಾಗಿ ತನ್ನನ್ನೇ ಸಮರ್ಪಿಸಿಕೊಂಡು ಮರಣಿಸಿ ಮುರಿದ ನಿಯಮದ ಮುಂದೆ ಆದಾಮನ ಬದಲಿಯಾಗಿ ಕಂಡು ಬಂದ ನಮ್ಮ ಕರ್ತನು ಈ ರೀತಿಯಲ್ಲಿ ನೀತಿವಂತನಾಗಿದ್ದು ಅನೀತಿವಂತರಿಗೋಸ್ಕರ ಪ್ರಾಣ ಕೊಟ್ಟಿದ್ದಾನೆ ನಮ್ಮನ್ನು ದೇವರ ಬಳಿಗೆ ಸೇರಿಸುವುದಕ್ಕಾಗಿ ಎಲ್ಲರಿಗಾಗಿ ತನ್ನನ್ನೇ ಈಡುಬಲಿಯಾಗಿ, ಅರ್ಪಿಸಿ ಕೊಂಡಿದ್ದಾನೆ (1 ಪೇತ್ರ 3:19). ಹೇಗಾದರೂ, ದೈವಿಕವಾಗಿ ಒದಗಿಸಿರುವ ಅಪಾರ ಅನುಗ್ರಹಗಳನ್ನು ದೊರಕಿಸಿಕೊಳ್ಳಲು ಮನುಷ್ಯನ ಮನಃಸ್ಥಿತಿಯು ಭದ್ರಪಡಿಸುವ ಅಂಶವಾಗಿ ಗುರುತಿಸಲ್ಪಡುತ್ತವೆ ಎಂಬುದನ್ನು ಎಂದಿಗೂ ಕಡೆಗಣಿಸಬಾರದು. ಕೆಲವರು ಈಗ ತಾನೇ ಉಲ್ಲೇಖಿಸಿದ ರೋಮಾಪುರ 5:18.19ನೇ ವಚನಗಳನ್ನು ಪರಿಶೀಲಿಸುವಾಗ ಇದನ್ನು ಕಡೆಗಣಿಸಿದ್ದಾರೆ. ಏನೇ ಆದರೂ, ಅಪೋಸ್ತಲನ ಹೇಳಿಕೆಯು ಏನೆಂದರೆ, ದಂಡನೆಯ ಶಿಕ್ಷೆಯು ಆದಾಮನ ಸಂತತಿಯವರಿಗೆಲ್ಲಾ ಅನ್ವಯವಾಗುವಂತೆ, ನಮ್ಮ ಕರ್ತನಾದ ಯೇಸುಕ್ರಿಸ್ತನು ತಂದೆಯಾದ ದೇವರ ಯೋಜನೆಗೆ ವಿಧೇಯತೆಯ ಮೂಲಕ, ನಮ್ಮ ಪರವಾಗಿ ಆತನು ಅರ್ಪಿಸಿರುವ ಸ್ವಯಂ ಸಮರ್ಪಣೆಯಿಂದ, ಉಚಿತವಾದ ಬಹುಮಾನವು ಎಲ್ಲರಿಗೂ ದೊರೆಯುವುದಾಗಿದೆ – ಕ್ಷಮಾಪಣೆಯ ಬಹುಮಾನ. ಅದನ್ನು ಅಂಗೀಕರಿಸು ವುದಾದರೆ ಒಂದು ನೀತಿನಿರ್ಣಯವನ್ನು ಅಥವಾ ಅದು ನಿತ್ಯಜೀವಕ್ಕೆ ತಳಹದಿಯಾಗಿದೆ. ಮತ್ತು ಒಬ್ಬನ ಅವಿಧೇಯತ್ವದಿಂದ ಎಲ್ಲರೂ ಹೇಗೆ ಪಾಪಿಗಳಾದರೋ ಹಾಗೆಯೇ ಒಬ್ಬನ ವಿಧೇಯತ್ವದಿಂದ ಎಲ್ಲರೂ ನೀತಿವಂತರಾಗುವರು" (ನೀತಿವಂತರಾಗಿದ್ದಾರೆ ಎಂದಲ್ಲ ನೀತಿವಂತರಾಗುವರು ಎಂದಿದೆ). ನಾವು ಅದನ್ನು ಅಂಗೀಕರಿಸದೆ, ಈಡು ಬಲಿಯು ಮಾತ್ರವೇ ನಮ್ಮನ್ನು ನೀತಿವಂತರಾಗಿ ಮಾಡುವುದಾದಲ್ಲಿ ಆಗ "ಒಬ್ಬನ ವಿಧೇಯತ್ವದಿಂದ ಎಲ್ಲರೂ ನೀತಿವಂತರಾದರು'' ಎಂದು ಬರೆಯಲ್ಪಡುತ್ತಿತ್ತು.

ಆದರೆ, ಈಡುಬಲಿಯ ಕ್ರಯವನ್ನು ನಮ್ಮ ಕರ್ತನು ತೆತ್ತದರ ನಿಮಿತ್ತ ಸುವಾರ್ತಾ ಯುಗದಲ್ಲಿ ಕೆಲವರು ಮಾತ್ರವೇ "ಆತನ ರಕ್ತದಲ್ಲಿ ನಂಬಿಕೆಯಿಡುವುದರ ಮೂಲಕ" ನೀತಿವಂತರೆಂದು ನಿರ್ಣಯಿಸಲ್ಪಟ್ಟರು. ಆದರೆ ಕ್ರಿಸ್ತನು ಸಮಸ್ತ ಲೋಕದ ಪಾಪ ನಿವಾರಣೆ ಮಾಡುವವನಾಗಿರುವುದರಿಂದ (propitiation, ಸಮಾಧಾನಪಡಿಸುವಿಕೆ) ಆ ನಿಮಿತ್ತವಾಗಿ, ನೂತನ ಒಡಂಬಡಿಕೆಯ ಕೆಳಗೆ ಎಲ್ಲಾ ಜನರೂ ಪಾಪ ವಿಮುಕ್ತಿ ಹೊಂದಿಕೊಂಡು ಆದಾಮನ ಪಾಪದಿಂದ ಬಿಡುಗಡೆ ಹೊಂದಿಕೊಳ್ಳಬಹುದು.

ದೇವರಲ್ಲಿ ಅನೀತಿ ಅಧರ್ಮ ಎಂಬುದಿರುವುದಿಲ್ಲ; ಆದುದರಿಂದ ನಾವು "ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆ ಮಾಡಿದರೆ, ಆತನು ನಂಬಿಗಸ್ತನೂ, ನೀತಿವಂತನೂ ಆಗಿರುವುದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿಮಾಡುವನು" (1 ಯೋಹಾನ 1:9). ಪ್ರಾಯಶ್ಚಿತ್ತ ನೀಡುವ ಮೊದಲೇ ಉಚ್ಚರಿಸಲಾದ ದಂಡನೆಯಿಂದ ಪಾರಾಗಲು ನಮಗೆ ಅವಕಾಶ ನೀಡಿದ್ದರೆ ಅದು ಸಹಾ ಅನ್ಯಾಯುವಾಗಿರುತ್ತಿತ್ತು, ಅಂತೆಯೇ ನಮ್ಮ ಪುನರ್‌ವಶವನ್ನು ತಡೆದಿದ್ದರೆ, ಅದು ಸಹಾ ಅನ್ಯಾಯವಾಗುತ್ತದೆ. ಏಕೆಂದರೆ ಆತನ ಸ್ವಂತ ವ್ಯವಸ್ಥೆಯಿಂದ ನಮ್ಮ ದಂಡವನ್ನು ಭರಿಸಲಾಯಿತು ಎಂದು ಅರ್ಥಮಾಡಿಕೊಳ್ಳಲು ಆತನು ಇಲ್ಲಿ ನಮಗೆ ಅವಕಾಶ ನೀಡುತ್ತಾನೆ. ಒಂದು ಕಾಲದಲ್ಲಿ ಮನುಷ್ಯನನ್ನು ಮರಣದಂಡನೆಗೆ ಗುರಿಪಡಿಸಿದ ಅದೇ ಅಚಲವಾದ ನ್ಯಾಯವು ಈಗ ತಮ್ಮ ಪಾಪಗಳನ್ನು ಒಪ್ಪಿಕೊಂಡು ಕ್ರಿಸ್ತನ ಮೂಲಕ ಜೀವನಕ್ಕಾಗಿ ಮನವಿ ಸಲ್ಲಿಸುವ ಎಲ್ಲರ ಬಿಡುಗಡೆಯನ್ನು ವಾಗ್ದಾನ ಮಾಡಿದೆ. "ದೇವರೇ ನಮ್ಮನ್ನು ನೀತಿವಂತರೆಂದು ನಿರ್ಣಯಿಸುವವ ನಾಗಿದ್ದಾನೆ, ಅಪರಾಧಿಗಳೆಂದು ನಿರ್ಣಯಿಸುವವರು ಯಾರು? ಕ್ರಿಸ್ತ ಯೇಸು ಮರಣವನ್ನು ಹೊಂದಿದ್ದಲ್ಲದೆ, ಜೀವಿತನಾಗಿ ಎದ್ದು ದೇವರ ಬಲಗಡೆಯಲ್ಲಿದ್ದು ನಮಗೋಸ್ಕರ ಬೇಡುವವನಾಗಿದ್ದಾನೆ" (ರೋಮಾ. 8:33,34).

ಈಡುಬಲಿಯ ಸಂಪೂರ್ಣತೆಯು ಎಲ್ಲಾ ಮಾನವ ಜಾತಿಯವರ ಪುನರ್‌ವಶಕ್ಕೆ ಅತ್ಯಂತ ಪ್ರಬಲ ವಾದವಾಗಿದೆ. ಅವರು ಅದನ್ನು ಮುಂದಾಗಿ ನೀಡಿರುವ ಕರಾರುಗಳ ಮೂಲಕ ಒಪ್ಪಿಕೊಳ್ಳುತ್ತಾರೆ (ಪ್ರಕಟನೆ 22:17). ನ್ಯಾಯ ಮತ್ತು ಗೌರವಗಳಿಗಾಗಿ ದೇವರ ಗುಣಲಕ್ಷಣಗಳು ಅದಕ್ಕಾಗಿ ಹೊಣೆಯಾಗಿವೆ. ಆತನು ಮಾಡಿದ ಪ್ರತಿಯೊಂದು ವಾಗ್ದಾನವೂ ಅದೇ

ಅರ್ಥವನ್ನು ಸೂಚಿಸುತ್ತದೆ. ಮತ್ತು ಪ್ರತಿಯೊಂದು ಸಾಂಕೇತಿಕ ಬಲಿದಾನವು ಮಹಾ ಹಾಗೂ ಸಾಲುವಷ್ಟು ಬಲಿದಾನವನ್ನು ಸೂಚಿಸುತ್ತದೆ – "ಲೋಕದ ಪಾಪವನ್ನು ಹೊತ್ತುಕೊಂಡು ಹೋಗುವ ದೇವರ ಕುರಿಮರಿ"ಯು ನಮ್ಮ (ಸಭೆಯ) ಪಾಪಗಳಿಗೆ ತೃಪ್ತಿನೀಡುವ ಪ್ರಾಯಶ್ಚಿತ್ತವಾಗಿದೆ. ನಮ್ಮದು ಮಾತ್ರವಲ್ಲ, ಸಮಸ್ತ ಲೋಕದ ಪಾಪಗಳ ನಿವಾರಣೆ ಮಾಡುವುದಾಗಿದೆ. (ಯೋಹಾನ 1 :29, 1 ಯೋಹಾನ 2:2). ಮರಣವು ಪಾಪದ ದಂಡನೆ ಅಥವಾ ಸಂಬಳವಾಗಿರುವುದರಿಂದ, ಪಾಪವನ್ನು ರದ್ದುಪಡಿಸಿದಾಗ, ಸಂಬಳವು ಸೂಕ್ತ ಸಮಯದಲ್ಲಿ ನಿಂತುಹೋಗಬೇಕಾಗಿದೆ. ಬೇರೆ ಯಾವುದೇ ಅಭಿಪ್ರಾಯವು ಅಸಮಂಜಸ ಮತ್ತು ಅನ್ಯಾಯವಾಗುತ್ತದೆ. ನಮ್ಮ ಕರ್ತನು ಮರಣಹೊಂದಿ ಸುಮಾರು ಎರಡು ಸಾವಿರ ವರ್ಷಗಳು ಕಳೆದು ಹೋದರೂ, ಆದಾಮನ ನಷ್ಟದಿಂದ ಯಾವುದೇ ಚೇತರಿಕೆ ಸಾಧಿಸಲಾಗಿಲ್ಲ ಎಂಬ ಅಂಶವು, ಮರುಸ್ಥಾಪನೆಯ ವಿರುದ್ಧವಲ್ಲ, ಕರ್ತನ ಸಾವಿಗೆ ನಾಲ್ಕು ಸಾವಿರ ವರ್ಷಗಳ ಮೊದಲು, ಪ್ರಪಂಚದ ಅಡಿಪಾಯದ ಸಮಯದಲ್ಲಿ ದೇವರು ವಿಮೋಚನೆಯ ಬಗ್ಗೆ ಯೋಜಿಸಿರಲಿಲ್ಲ ಎಂಬುದಕ್ಕೆ ಇದು ವಿರುದ್ಧ ವಾದವಲ್ಲ. ಅಂದಿನಿಂದ ಎರಡು ಸಾವಿರ ವರ್ಷಗಳು ಮತ್ತು ನಮ್ಮ ಕ್ರಿಸ್ತನ ಮರಣದ ಮೊದಲು ನಾಲ್ಕು ಸಾವಿರ ವರ್ಷಗಳು, ಇತರೆ ಕಾರ್ಯಗಳಿಗೆ ನಿಗದಿತ ಕಾಲವಾಗಿದೆ, ಪುನರ್ವಶ ಸಮಯದ ಬೇರೆ ವಿಷಯಗಳಿಗಾಗಿ ಮತ್ತು ಸಿದ್ಧತೆಗಳಿಗಾಗಿ ನೇಮಿತವಾದ ಸಮಯವಾಗಿತ್ತು.

## ಆದಾಗ್ಯೂ ನಂಬಿಕೆ ಹಾಗೂ ಕ್ರಿಯೆಗಳು ಅವಶ್ಯ
## Faith and Works Still Necessary

ಈ ದೃಷ್ಟಿಕೋನದಲ್ಲಿ, ದೇವರ ಮೇಲಿನ ನಂಬಿಕೆ, ಪಾಪಗಳಿಗಾಗಿ ಪಶ್ಚಾತ್ತಾಪ ಮತ್ತು ಸ್ವಭಾವ ಇವುಗಳ ಸುಧಾರಣೆ, ರಕ್ಷಣೆಗೆ ಅನಿವಾರ್ಯ ಎಂಬದರ ಬಗ್ಗೆ ಪರಿಶುದ್ಧ ಗ್ರಂಥಗಳಲ್ಲಿರುವ ಬೋಧನೆಯೊಡನೆ ಭಿನ್ನಾಭಿಪ್ರಾಯವುಂಟೆಂದು ಯಾರೂ ಅವಸರದಿಂದ ಭಾವಿಸಬಾರದು. ಈ ವೈಶಿಷ್ಟ್ಯಗಳಿಗೆ ಇನ್ನು ಮುಂದೆ ದೀರ್ಘವಾಗಿ ಗಮನಕೊಡಲಾಗುವುದು, ಆದರೆ, ನಾವೀಗ ಕೆಲವರು ಮಾತ್ರವೇ ವಿಶ್ವಾಸ, ಪಶ್ಚಾತ್ತಾಪ ಮತ್ತು ಸುಧಾರಣೆಗಳನ್ನು ಹಾಜರುಪಡಿಸುವಷ್ಟು ಬೆಳಕನ್ನು ಸದಾ ಹೊಂದಿರುತ್ತಾರೆಂಬ ಸಲಹೆ ನೀಡುತ್ತೇವೆ. ಕೆಲವರು ಭಾಗಶಃ, ಮತ್ತೆ ಕೆಲವರು ಸಂಪೂರ್ಣವಾಗಿ ಈ ಪ್ರಪಂಚದ ದೇವರಿಂದಾಗಿ ಕುರುಡರಾಗಿದ್ದಾರೆ, ಅವರುಗಳು ಕುರುಡುತನ ಮತ್ತು ಮರಣದಿಂದ ಸುಸ್ಥಿತಿಗೆ ಮರಳಿಪಡೆದುಕೊಳ್ಳಬೇಕಾಗಿದೆ. ಪ್ರತಿಯೊಬ್ಬರೂ ಸ್ವತಃ ವಿಧೇಯತೆ ಅಥವಾ ಅವಿಧೇಯತೆಯ ಮೂಲಕ ನಿತ್ಯಜೀವಕ್ಕಾಗಿ ಅವರ ಅರ್ಹತೆ ಮತ್ತು ಅನರ್ಹತೆಗಳನ್ನು ಸಾಬೀತುಪಡಿಸುವ ಪೂರ್ಣ ಅವಕಾಶ ಹೊಂದಿದ್ದಾರೆ. ಯಾರು ನಿತ್ಯಜೀವಕ್ಕೆ ಅನರ್ಹರೆಂದು ಪರಿಗಣಿಸಲ್ಪಡುತ್ತಾರೋ ಅಂಥವರು ಪುನಃ ಮರಣಹೊಂದುವರು – ಅದು ಎರಡನೆಯ ಮರಣವಾಗಿದೆ ಮತ್ತು ಅದರಿಂದ ವಿಮೋಚನೆ ಇಲ್ಲ ಮತ್ತು ಅದರ ಪರಿಣಾಮವಾಗಿ ಪುನರುತ್ಥಾವೂ ಇಲ್ಲ. ಆದಾಮನ ಪಾಪದ ನಿಮಿತ್ತ ಬರುವ ಮರಣವು ಮತ್ತು ಅದರಲ್ಲಿ ಅನುಸರಿಸುವ ಎಲ್ಲಾ ಅಸಮರ್ಪಕತೆಗಳು, ಯೇಸುಕ್ರಿಸ್ತನಲ್ಲಿರುವ ವಿಮೋಚನೆಯ ನಿಮಿತ್ತ ತೆಗೆದುಹಾಕಲ್ಪಡುವುದು. ಆದರೆ, ವ್ಯಕ್ತಿಗತವಾದ, ಇಚ್ಛಾಪೂರ್ವಕವಾದ ಧರ್ಮಭ್ರಷ್ಟತೆಯಿಂದ ಉಂಟಾಗುವ ಮರಣವು ಅಂತಿಮವಾದುದು. ಈ ಪಾಪಕ್ಕೆ ಕ್ಷಮಾಪಣೆಯೇ ಇಲ್ಲ ಮತ್ತು ಅದರ ದಂಡನೆಯಾದ ಎರಡನೆಯ ಮರಣವು ನಿತ್ಯಮರಣವಾಗಿದೆ – ನಿರಂತರವಾಗಿ ಸಾಯುತ್ತಿರುವದಲ್ಲ. ಆದರೆ ಶಾಶ್ವತವಾಗಿ ಸತ್ತು ಹೋಗುವುದು – ಅದು ಪುನರುತ್ಥಾನದಿಂದ ಅಚ್ಛಿದ್ರವಾದ ಮರಣವಾಗಿದೆ.

## ಉದ್ದೇಶಪೂರ್ವಕ ಪಾಪದ ಸಂಬಳ ನಿಶ್ಚಿತ
## The Wages of Wilful Sin Certain

ವಿಮೋಚನಾ ಯೋಜನೆಯ ತತ್ವಜ್ಞಾನದ ಬಗ್ಗೆ ಮುಂದಿನ ಸಂಪುಟದಲ್ಲಿ ನಿರೂಪಿಸಲಾಗುವುದು. ಆದಾಮನ ಪಾಪವು ಅಳಿವನ್ನು ಉಂಟು ಮಾಡುವ ನಾಶಕರ ಪಾಪವಾಗಿದ್ದಂತೆಯೇ, ಕ್ರಿಸ್ತ ಯೇಸುವಿನ ಮೂಲಕ ವಿಮೋಚನೆಯು ಅದರ ಆಶೀರ್ವಾದಕರ ಫಲಿತಾಂಶಗಳು ಮತ್ತು ಅವಕಾಶಗಳು ಬಹು ದೂರದವರೆಗೆ ಪರಿಣಾಮವುಳ್ಳದ್ದಾಗಿದೆ ಎಂಬ ಅಂಶವನ್ನು ನಾವು ಇಲ್ಲಿ ಸ್ಥಾಪಿಸುತ್ತೇವೆ – ಒಬ್ಬನ ಕಾರಣದಿಂದ ಖಂಡಿಸಲ್ಪಟ್ಟ ಮತ್ತು ಬಳಲುತ್ತಿರುವ ವರೆಲ್ಲರೂ ಖಂಡಿತವಾಗಿಯೂ, "ಯುಕ್ತ ಕಾಲದಲ್ಲಿ" ಮತ್ತೊಬ್ಬನ ಎಣಿಕೆಯಲ್ಲಿ ಎಲ್ಲಾ ಕೆಡಕುಗಳಿಂದ ಮುಕ್ತರಾಗುವರು. ಹೇಗಾದರೂ, ಮರಣವು – ಜೀವಿಯ ಅಸ್ತಿತ್ವದ ಅಳಿವು – ಪಾಪದ ಸಂಬಳ ಎಂಬ ಈ ಪರಿಶುದ್ಧ ಗ್ರಂಥದ ಹೇಳಿಕೆಗಳನ್ನು ಒಪ್ಪದ ಯಾರೂ ಅದರ ವಾದಗಳನ್ನು ಪ್ರಶಂಸಿಸಲು ಸಾಧ್ಯವಿಲ್ಲ. ಮರಣವು ಯಾತನೆಯ ಜೀವನವಾಗಿದೆ ಎಂದು ಭಾವಿಸುವವರು ಜೀವ ಮತ್ತು ಮರಣ ಎಂಬ ವಿರೋಧ ಪದಗಳ

ಅರ್ಥವನ್ನು ನಿರ್ಲಕ್ಷಿಸುವುದು, ಮಾತ್ರವಲ್ಲದೆ ತಮ್ಮನ್ನು ಎರಡು ವಿಧವಾದ ಅಸಂಬದ್ಧತೆಗಳಲ್ಲಿ ತೊಡಗಿಸಿ ಕೊಳ್ಳುತ್ತಾರೆ. ದೇವರು ಆದಾಮನ ಅಸ್ತಿತ್ವವನ್ನು ಆತನು ಎಸಗಬಹುದಾದ ಯಾವುದೇ ರೀತಿಯ ಪಾಪಕ್ಕಾಗಿ, ವಿಶೇಷವಾಗಿ ನಿಷಿದ್ಧಪಡಿಸಿದ್ದ ಹಣ್ಣನ್ನು ತಿಂದನೆಂಬ ತುಲನಾತ್ಮಕವಾದ ಸಣ್ಣ ಅಪರಾಧಕ್ಕಾಗಿ ಆತನನ್ನು ನಿತ್ಯಯಾತನೆಗೆ ಶಾಶ್ವತಗೊಳಿಸುತ್ತಾನೆ ಎಂದು ಭಾವಿಸುವದು ಅಸಂಬದ್ಧವಾಗಿದೆ. ಪುನಃ, ನಮ್ಮ ಕರ್ತನಾದ ಯೇಸುಕ್ರಿಸ್ತನು ಮಾನವಕುಲವನ್ನು ವಿಮೋಚಿಸುವ ಸಲುವಾಗಿ ನಮ್ಮ ಬದಲಿಗೆ ಮರಣಹೊಂದಿದರೆ, ನಮ್ಮ ಈಡುಬಲಿಯಾದರೆ, ನಾವು ಮರಣದಿಂದ ಬಿಡುಗಡೆ ಹೊಂದಿಕೊಳ್ಳಲು ಆತನು ಮರಣಪಟ್ಟಿದ್ದರೆ, ಹಾಗಾಗಿ ಆತನು ಅನೀತಿವಂತರಿಗಾಗಿ ಅನುಭವಿಸಿದ ಸಾವು ಎಲ್ಲಾ ಮಾನವಕುಲವನ್ನು ಖಂಡಿಸಿದ ರೀತಿಯದ್ದಾಗಿದೆ ಎಂಬುದು ಸ್ಪಷ್ಟವಾಗಿಲ್ಲವೇ? ಹಾಗಾದರೆ, ಆತನು ನಮ್ಮ ಪಾಪಗಳಿಗಾಗಿ ನಿರಂತರವಾದ ಯಾತನೆಯನ್ನು ಅನಭವಿಸುತ್ತಿದ್ದಾನೆಯೇ? ಇಲ್ಲವಾದರೆ, ಆತನು ನಮ್ಮ ಪಾಪಗಳಿಗಾಗಿ ಮರಣಪಟ್ಟಂತೆ, ನಮ್ಮ ಪಾಪದ ಶಿಕ್ಷೆಯು ನಿಶ್ಚಿತವಾಗಿಯೂ ಮರಣವಾಗಿತ್ತೇ ಹೊರತು ಯಾವುದೇ ಅರ್ಥದಲ್ಲಿ, ಅಥವಾ ಪರಿಸ್ಥಿತಿಯಲ್ಲಿ ಅದು ಜೀವವಾಗಿರಲಿಲ್ಲ.

ಆದರೆ, ಅಪೂರ್ವವಾಗಿ ಹೇಳುವುದಾದರೆ, ನಿತ್ಯ ಯಾತನೆಯ ವಿಚಾರಸರಣಿಯು "ನಮ್ಮೆಲ್ಲರ ದೋಷಫಲವನ್ನೂ ಯೆಹೋವನು ಅವನ ಮೇಲೆ ಹಾಕಿದನು" (ಯೆಶಾಯ 53:6) ಮತ್ತು ಕ್ರಿಸ್ತನು ನಮಗಾಗಿ ಸತ್ತನು ಎಂಬ ಹೇಳಿಕೆಗಳೊಡನೆ ಹೊಂದಾಣಿಕೆಯಿಲ್ಲದ್ದಾಗಿದೆ ಎಂಬುದನ್ನು ಕಂಡು ಕೊಳ್ಳಲು ಆಶ್ಚರ್ಯವಾಗುತ್ತದೆ, ಇದನ್ನು ನೋಡಿದ ನಂತರ ಒಂದಲ್ಲ ಒಂದು ಹೊಂದಾಣಿಕೆ ಇಲ್ಲದ್ದು ಎಂದು ಬಿಟ್ಟುಬಿಡಬೇಕೆನಿಸುತ್ತದೆ. ಕೆಲವರು ನಿತ್ಯಯಾತನೆ ಎಂಬ ಪದಕ್ಕೆ ಕಟ್ಟುಬಿದ್ದಿದ್ದಾರೆ. ಅದನ್ನು ಸಿಹಿ ರೊಟ್ಟಿಯ ತುತ್ತಿನಂತೆ ಗೌರವಿಸುತ್ತಾರೆ. ಅವರು ಅದನ್ನು ಧರ್ಮಗ್ರಂಥಗಳ ಹೊರತಾಗಿಯೂ ಹಿಡಿದಿಟ್ಟು ಕೊಳ್ಳುತ್ತಾರೆ ಮತ್ತು ಯೇಸು ಲೋಕಕ್ಕಾಗಿ ಈಡುಬಲಿಯನ್ನು ಪಾವತಿಸಿದ್ದಾನೆಂದು ಉದ್ದೇಶ ಪೂರ್ವಕವಾಗಿ ನಿರಾಕರಿಸುತ್ತಾರೆ, ಈ ಸತ್ಯವನ್ನು ಸತ್ಯವೇದದ ಪ್ರತಿಯೊಂದು ಪುಟದಲ್ಲಿಯೂ ಕಲಿಸಲಾಗುತ್ತಿದೆಯಾದರೂ ಒಪ್ಪಿಕೊಳ್ಳದವರಾಗಿದ್ದಾರೆ.

## ಪುನರುತ್ಥಾನಗೊಂಡ ಕೋಟ್ಯಾಂತರ ಜನರಿಗೆ ಭೂಮಿಯ ಮೇಲೆ ಸ್ಥಳವಿದೆಯೇ ?
## Will there be Room on the Earth for the Resurrected Millions ?

## ಪುನರ್‌ಸ್ಥಾಪನೆ ಕಾರ್ಯಸಾಧ್ಯವೇ ?
## Is Restitution Practicable ?

ಸತ್ತವರಾದ ಬಿಲಿಯಾಂತರ (ಶತಕೋಟ್ಯಾಂತರ) ಜನರು ಪುನರುಜ್ಜೀವನ ಹೊಂದಿಕೊಂಡಾಗ, ಅವರಿಗೆ ಈ ಭೂಲೋಕದ ಮೇಲೆ ಸ್ಥಳ ದೊರೆಯಲಾರದು ಮತ್ತು ಅವರಿಗೆ ಸ್ಥಳ ಸಿಕ್ಕಬೇಕಾದರೆ ಭೂಮಿಗೆ ಅಷ್ಟೊಂದು ದೊಡ್ಡ ಜನಸಂಖ್ಯೆಯನ್ನು ನಿರ್ವಹಿಸಲು ಸಾಧ್ಯವಾಗದು ಎಂದು ಕೆಲವರು ಭಾವಿಸುತ್ತಾರೆ. ಕೆಲವರು ಈ ಭೂಮಿಯು ಒಂದು ವಿಶಾಲವಾದ ಸ್ಮಶಾನ ಭೂಮಿಯಾಗಿದೆ ಮತ್ತು ಸತ್ತವರೆಲ್ಲರೂ ಜೀವಿತರಾಗಿ ಎದ್ದು ಬಂದರೆ, ಸ್ಥಳವಿಲ್ಲದ ಕಾರಣ ಅವರು ಒಬ್ಬರನ್ನೊಬ್ಬರು ತುಳಿಯಬೇಕಾಗುವುದು ಎಂದು ಸಹಾ ಹೇಳುತ್ತಾರೆ.

ಇದೊಂದು ಪ್ರಮುಖವಾದ ಅಂಶವಾಗಿದೆ. ಸತ್ಯವೇದವು ಎಲ್ಲ ಮನುಷ್ಯರಿಗೆ ಪುನರುತ್ಥಾನವನ್ನು ಘೋಷಿಸಿರುವಾಗ, ನಿಜವಾದ ಅಳತೆಯಿಂದ ಈ ಭೂಮಿಯ ಮೇಲೆ ಅವರೆಲ್ಲರಿಗೆ ಕಾಲಿಡುವುದಕ್ಕೂ ಸ್ಥಳವಿರುವುದಿಲ್ಲ ಎಂಬುದು ಎಷ್ಟು ವಿಚಿತ್ರವಾಗಿದೆ ! ನಾವೀಗ ನೋಡೋಣ; ಇದೊಂದು ಇಲ್ಲಸಲ್ಲದ ಹೆದರಿಕೆಯಾಗಿದೆ ಎಂದು ಕಂಡುಕೊಳ್ಳುತ್ತೇವೆ. ಎಲ್ಲರ ಪುನರುತ್ಥಾನಕ್ಕೆ ಈ ಲೋಕದಲ್ಲಿ ಸಾಕಷ್ಟು ಸ್ಥಳವಿದೆ ಎಂಬುದನ್ನು ದೇವರು ಆತನ ಎಲ್ಲಾ ಪರಿಶುದ್ಧ ಪ್ರವಾದಿಗಳ ಮೂಲಕ ನುಡಿದಿರುವುದನ್ನು ನೀವು ನೋಡುವಿರಿ.

ಮಾನವರ ಸೃಷ್ಟಿಯಾಗಿ ಆರು ಸಾವಿರ ವರ್ಷಗಳಾಗಿವೆ ಮತ್ತು ಈ ಭೂಮಿಯ ಮೇಲೆ ಈಗ ಸುಮಾರು ನಾನೂರು ಮಿಲಿಯ ಜನರು ಜೀವಿಸುತ್ತಿದ್ದಾರೆಂಬುದಾಗಿ ನಾವು ಭಾವಿಸೋಣ*. ನಮ್ಮ ಜನಾಂಗವು ಒಂದು ಜೋಡಿಯಿಂದ ಪ್ರಾರಂಭವಾಯಿತು. ಆದರೆ ನಾವು ಬಹಳ ಉದಾರವಾದ ಅಂದಾಜನ್ನು ಮಾಡೋಣ ಮತ್ತು ಈಗಿರುವುದಕ್ಕೆ ಪ್ರಾರಂಭದಲ್ಲಿ ಎಷ್ಟು ಜನರಿದ್ದರೋ ಈಗಲೂ ಅಷ್ಟೇ ಜನರಿದ್ದಾರೆಂದೂ ಭಾವಿಸೋಣ. ಪ್ರಳಯವು ಜನ ಸಂಖ್ಯೆಯನ್ನು ಎಂಟಕ್ಕೆ ಇಳಿಸಿತ್ತಾದರೂ ಆ ಸಂಖ್ಯೆಗಿಂತ

* ಇದು ಸುಮಾರು ಕ್ರಿ.ಶ. 1886ರ ಗ್ರಂಥಕರ್ತರ ಜನಗಣತಿ ಪ್ರಕಾರ (ಅನುವಾದಕರ ವ್ಯಾಖ್ಯಾನ).

ಎಂದೂ ಕಡಿಮೆ ಇದ್ದಿಲ್ಲ ಎಂಬುದಾಗಿ ನಾವು ಊಹಿಸೋಣ. ಪುನಃ, ನಾವು ಧಾರಾಳವಾಗಿ ಒಂದು ಶತಮಾನಕ್ಕೆ ಮೂರು ಸಂತತಿಗಳು ಅಥವಾ 33½ ವರ್ಷಗಳಿಗೆ ಒಂದು ಸಂತತಿಯಂತೆ ಅಂದಾಜು ಮಾಡಿದರೂ, ಆದಿಕಾಂಡ ಐದನೆಯ ಅಧ್ಯಾಯದ ಪ್ರಕಾರ ಆದಾಮನಿಂದ ಜಲಪ್ರಳಯದವರೆಗೂ ಹನ್ನೊಂದು ತಲೆಮಾರುಗಳಿದ್ದವು. ಒಂದು ಸಾವಿರ ಆರುನೂರ ಐವತ್ತಾರು ವರ್ಷಗಳು ಅಥವಾ ಪ್ರತಿ ಸಂತತಿಯವರಿಗೆ ಒಂದು ನೂರಾ ಐವತ್ತು ವರ್ಷಗಳು. ನಾವು ಈಗ ನೋಡೋಣ: ಆರು ಸಾವಿರ ವರ್ಷಗಳು ಅರವತ್ತು ಶತಮಾನಗಳು; ಪ್ರತಿ ಶತಮಾನಕ್ಕೆ ಮೂರು ತಲೆಮಾರುಗಳು ನಮಗೆ ಅದಾಮನಿಂದೀಚೆಗೆ ಒಂದು ನೂರಾ ಎಂಬತ್ತು ತಲೆಮಾರುಗಳನ್ನು ನೀಡುತ್ತವೆ. ಒಂದು ಪೀಳಿಗೆಗೆ ಹದಿನಾಲ್ಕು ಮಿಲಿಯನ್ ಜನರು ನಮಗೆ ಸೃಷ್ಟಿಯಿಂದ ಪ್ರಸ್ತುತ ಸಮಯದವರೆಗೆ (ಕ್ರಿ.ಶ. 1886ರ ವರೆಗೆ) ಈ ಉದಾರಿ ಅಂದಾಜಿನ ಪ್ರಕಾರ ಇನ್ನೂರಾ ಐವತ್ತೆರಡು ಬಿಲಿಯನ್ (252,000,000,000) ಜನರನ್ನು ನೀಡುತ್ತದೆ. ಬಹುಶಃ ಇದು ಸರಿಯಾದ ಸಂಖ್ಯೆಗಿಂತ ದುಪ್ಪಟ್ಟಾಗಿದೆ.

ಈ ಮಹಾ ಜನಸಮೂಹಕ್ಕೆ ನಾವು ಸ್ಥಳವನ್ನು ಎಲ್ಲಿ ಕಂಡುಕೊಳ್ಳಬಹುದು? ನಾವು ಭೂಮಿಯನ್ನು ಅಳೆದು ನೋಡೋಣ. ಸಂಯುಕ್ತ ಸಂಸ್ಥಾನದ ಟೆಕ್ಸಾಸ್ ರಾಜ್ಯವು ಇನ್ನೂರಾ ಮೂವತ್ತೇಳು ಚದುರಡಿ ಸ್ಥಳವನ್ನೊಳಗೊಂಡಿದೆ. ಒಂದು ಮೈಲಿಯಲ್ಲಿ ಇಪ್ಪತ್ತೇಳು ಮಿಲಿಯನ್ ಎಂಟುನೂರಾ ಎಪ್ಪತ್ತೆಂಟು ಸಾವಿರದ ನಾನೂರು ಚದರಡಿಗಳಿರುತ್ತವೆ. ಹೀಗೆ ಆರು ಟ್ರಿಲಿಯನ್, ಆರುನೂರಾ ಏಳು ಬಿಲಿಯನ್ ಒಂದು ನೂರಾ ಎಂಬತ್ತು ಮಿಲಿಯನ್ ಎಂಟು ನೂರಾ ಸಾವಿರ (6,607,180, 800,000) ಚದರಡಿಗಳು ಟೆಕ್ಸಾಸಿನಲ್ಲಿದೆ. ಪ್ರತಿಯೊಂದು ಮೃತ ಶರೀರವು ಹತ್ತು ಚದರಡಿ ಸ್ಥಳವನ್ನು ಆಕ್ರಮಿಸಿಕೊಳ್ಳುತ್ತದೆ, ಮತ್ತು ಟೆಕ್ಸಾಸನ್ನು ನಾವು ಸಮಾಧಿ ಸ್ಥಳವೆಂಬಂತೆ ನೋಡಬಹುದು ಮತ್ತು ಈ ದರದಲ್ಲಿ ಅದು ಆರೂನೂರ ಅರವತ್ತು ಬಿಲಿಯನ್ ಏಳುನೂರಾ ಹದಿನೆಂಟು ಮಿಲಿಯನ್ ಎಂಬತ್ತು ಸಾವಿರ (660,718,080,000) ಮೃತದೇಹವನ್ನು ಅಥವಾ ಈ ಭೂಮಿಯ ಮೇಲೆ ವಾಸಿಸಿದ ನಮ್ಮ ಸಂತಾನದ ಸಂಖ್ಯೆಯ ಉತ್ಪ್ರೇಕ್ಷಿತ ಅಂದಾಜಿನ ಸುಮಾರು ಮೂರು ಪಟ್ಟು ಜನರನ್ನು ಅದು ಇಟ್ಟುಕೊಳ್ಳಬಹುದಾಗಿದೆ.

ನಿಂತಿರುವ ವ್ಯಕ್ತಿಯು 1⅔ ಚದರಡಿ ಸ್ಥಳವನ್ನು ಆಕ್ರಮಿಸಿಕೊಳ್ಳುತ್ತಾನೆ. ಈ ದರದಲ್ಲಿ ಈ ಲೋಕದ ಪ್ರಸ್ತುತ ಜನಸಂಖ್ಯೆಯು (ಒಂದು ಬಿಲಿಯನ್ ನಾನೂರು ಮಿಲಿಯನ್ ಜನರು) ಎಂಬತ್ತಾರು ಚದರ ಮೈಲಿಗಳ ಸ್ಥಳದಲ್ಲಿ ನಿಂತುಕೊಳ್ಳಬಹುದಾಗಿದೆ – ಈ ಕ್ಷೇತ್ರವು ಲಂಡನ್ ನಗರ ಅಥವಾ ಫಿಲಿಡೆಲ್ಫಿಯಾ ನಗರಕ್ಕಿಂತ ಬಹಳ ಕಡಿಮೆ ಪ್ರದೇಶವಾಗಿದೆ. ಮತ್ತು ಐರ್ಲೆಂಡ್ ದ್ವೀಪವು (ಮೂವತ್ತ ಎರಡು ಸಾವಿರ ಚದರ ಮೈಲಿ ವಿಸ್ತಾರವುಳ್ಳದ್ದು), ನಮ್ಮ ಉತ್ಪ್ರೇಕ್ಷಿತ ಅಂದಾಜಿನಲ್ಲಿಯೂ ಈ ಲೋಕದಲ್ಲಿ ಇದುವರೆಗೆ ಜೀವಿಸಿದ್ದ ಜನಸಂಖ್ಯೆಗಿಂತ ಎರಡರಷ್ಟಕ್ಕೂ ಹೆಚ್ಚು ಜನರಿಗೆ ನಿಲ್ಲುವ ಸ್ಥಳವನ್ನು ಒದಗಿಸಬಹುದಾಗಿದೆ. (Appendix p. 351)

ಹೀಗಿರುವುದರಿಂದ ಈ ಆಕ್ಷೇಪಣೆಯನ್ನು ಇತ್ಯರ್ಥಪಡಿಸುವಲ್ಲಿ ಹೆಚ್ಚಿನ ತೊಂದರೆಯಾಗದು. ನಾವು ಯೆಶಾಯನ ಪ್ರವಾದನೆಯನ್ನು ಮನಸ್ಸಿಗೆ ತಂದುಕೊಳ್ಳುವಾಗ (35:1–6) ಭೂಮಿಯು ಒಳ್ಳೆಯ ಬೆಳೆಯನ್ನು ಉತ್ಪನ್ನಮಾಡುತ್ತದೆ. ಮರುಭೂಮಿಯು ಹರ್ಷಿಸುತ್ತಾ ಗುಲಾಬಿಹೂವಿನಂತೆ ಅರಳುವುದು; ಒಣನೆಲದಲ್ಲಿ ನೀರು ಉಕ್ಕುವುದು, ಮರುಭೂಮಿಯಲ್ಲಿ ನೀರಿನ ಪ್ರವಾಹಗಳುಂಟಾಗುವುವು, ಬೆಂಗಾಡು ಸರೋವರವಾಗುವುದು. ದೇವರು ತನ್ನ ಯೋಜನೆಯ ಎಲ್ಲಾ ಅಗತ್ಯತೆಗಳನ್ನು ಮುಂಚೆಯೇ ನೋಡಿದ್ದಾನೆ ಮತ್ತು ತನ್ನ ಜೀವಿಗಳ ಅವಶ್ಯಕತೆಗಾಗಿ, ನೈಸರ್ಗಿಕ ಮಾರ್ಗದಲ್ಲಿ ಕಂಡುಬರುವುದನ್ನು ಹೇರಳವಾಗಿ ಒದಗಿಸುತ್ತಾನೆ ಎಂಬುದನ್ನು ಇದು ಸೂಚಿಸುತ್ತದೆ

## ಪುನರ್‌ವಶಕ್ಕೆ ಎದುರಾಗಿ ವಿಕಾಸ (ಸಿದ್ಧಾಂತ)
## Restitution Versus Evolution

ಪೂರ್ವ ಸ್ಥಿತಿಗೆ ಹಿಂತಿರುಗುವ ಮಾನವರ ಪುನರ್‌ವಶದ ಬಗ್ಗೆ ಇರುವ ಪರಿಶುದ್ಧ ಗ್ರಂಥದ ಸಾಕ್ಷ್ಯಗಳನ್ನು ಕೆಲವರು ವಿರೋಧಿಸಿ ಅದು ವೈಜ್ಞಾನಿಕ ಮತ್ತು ತತ್ವಶಾಸ್ತ್ರದ ಬೋಧನೆಗಳೊಂದಿಗೆ ಸಾಮರಸ್ಯವಿಲ್ಲವೆಂದು ಹೇಳಬಹುದು. ಇದು ಸಹಜವಾಗಿ ಕಾಣುವ ವೈಚಾರಿಕತೆಯಿಂದ ಈ ಇಪ್ಪತ್ತನೇ ಶತಮಾನದ ಶ್ರೇಷ್ಠ ಬುದ್ಧಿವಂತಿಕೆಯನ್ನು ನಮಗೆ ತೋರಿಸುತ್ತದೆ ಮತ್ತು ಅಭಿವೃದ್ಧಿಯ ಫಲಿತಾಂಶವೆಂದು ಅವರು ಪ್ರತಿಪಾದಿಸುವ ಬುದ್ಧಿವಂತಿಕೆಯ ಕೊರತೆಯುಳ್ಳ ಪ್ರಾಚೀನ ಮನುಷ್ಯರಿಗೆ ಹೋಲಿಕೆಯಾಗಿರಬೇಕು ಎಂಬುದಕ್ಕೆ ನಿರ್ಣಾಯಕ ಸಾಕ್ಷಿಯಾಗಿದೆ ಎಂದು ಹೇಳಿಕೊಳ್ಳುತ್ತಾರೆ. ಈ ದೃಷ್ಟಿಕೋನದಿಂದ ಪೂರ್ವಸ್ಥಿತಿಗೆ ಪನರ್‌ವಶಗೊಳ್ಳುವುದು ಬಯಸಿದಕ್ಕಿಂತ ದೂರವಾಗಿದೆ ಮತ್ತು ಖಂಡಿತವಾಗಿಯೂ ಇದು ಆಶೀರ್ವಾದಕ್ಕೆ ವ್ಯತಿರಿಕ್ತವಾಗಿದೆ.

ಮೊದಲ ನೋಟದಲ್ಲಿ ಅಂಥಾಃ ವಿಚಾರಗಳು ಸಂತೋಷವಾಗಿರುವಂತೆ ಕಂಡುಬರುತ್ತವೆ. ಅನೇಕರು ಅದನ್ನು ಎಚ್ಚರಿಕೆಯಿಂದ ಪರಿಶೀಲಿಸದೆಯೇ ಸತ್ಯವೆಂದು ಒಪ್ಪಿಕೊಳ್ಳುವತ್ತ ಒಲವು ತೋರುತ್ತಾರೆ. ಪ್ರಸಿದ್ಧ ಬ್ರೂಕ್ಲಿನ್ ಬೋಧಕನೊಂದಿಗೆ ಹೇಳುವುದಾದರೆ, ಆದಾಮನು ಬೀಳುವುದಾದರೆ ಅವನ ಪತನ (ಬೀಳುವಿಕೆ) ಮೇಲ್ಮುಖವಾಗಿತ್ತು ಮತ್ತು ನಾವು ಅವನ ಮೂಲ ಸ್ಥಿತಿಯಿಂದ ಹೆಚ್ಚು ವೇಗವಾಗಿ ಬೀಳುವುದು ನಮಗೆ ಮತ್ತು ಸಂಬಂಧಪಟ್ಟ ಎಲ್ಲರಿಗೂ ಉತ್ತಮವಾಗಿದೆ.

ಅಂತೂ ತತ್ವಜ್ಞಾನವು, ಪ್ರಸಂಗ ಪೀಠದಲ್ಲಿಯೂ ಸಹ, ದೇವರ ವಾಕ್ಯವನ್ನು ಪರಿಣಾಮಕಾರಿಯಾಗಿ ಮಾಡುವುದಿಲ್ಲ, ಮತ್ತು ಸಾಧ್ಯವಾದರೆ ಮರಣ ಮತ್ತು ಪ್ರತಿಯೊಂದು ತೊಂದರೆಯು ಮೊದಲ ಮಾನವನ ಅವಿಧೇಯತೆಯಿಂದ ಬಂದಿತೆಂದು ಮತ್ತು ಇವುಗಳನ್ನು ಈಡು ಬಲಿಯ ಮೂಲಕ ಮಾತ್ರದಿಂದಲೇ ದೇವರ ಕೃಪೆಗೂ ಮತ್ತು ನಿತ್ಯಜೀವಕ್ಕೂ ನಮ್ಮನ್ನು ಪುನರ್‌ವಶಪಡಿಸಬಹುದೆಂದು ಹೇಳುವ ಅಪೋಸ್ತಲರುಗಳು ಮೂರ್ಖರೆಂಬುದಾಗಿ ನಮಗೆ ಮನದಟ್ಟುಪಡಿಸುತ್ತದೆ (ರೋಮಾ. 5:10,12,17–19,21; 8:19–22; ಅ.ಕೃ. 3:19–21; ಪ್ರಕಟನೆ 21:3–5). ಆದರೆ, ಈ ತತ್ವಜ್ಞಾನವು ಅಭೇಧ್ಯವಾದುದೆಂದು ನಾವು ಅವಸರದಿಂದ ತೀರ್ಮಾನಿಸಬಾರದು. ಏಕೆಂದರೆ ಪಾಪ ಮತ್ತು ಮರಣದ ಮೂಲಕ್ಕೆ ಸಂಬಂಧಿಸಿದಂತೆ ಅಪೋಸ್ತಲರ ಸಿದ್ಧಾಂತಗಳನ್ನು ತ್ಯಜಿಸಲು ಹಾಗೂ ಮೂಲಪರಿಪೂರ್ಣತೆಗೆ ಪುನರ್‌ಸ್ಥಾಪಿಸಲು ನಾವು ನಿರ್ಬಂಧವನ್ನು ಹೊಂದಿರಬೇಕು, ಅವರ ಸಾಕ್ಷ್ಯವನ್ನು ಸಂಪೂರ್ಣವಾಗಿ ಮತ್ತು ಪ್ರತಿಯೊಂದು ವಿಷಯವೂ ಸ್ಫೂರ್ತಿದಾಯಕವಲ್ಲದ್ದು, ಪರಿಣಾಮವಾಗಿ ವಿಶೇಷ ತೂಕವಿಲ್ಲದ್ದೂ ಅಥವಾ ಅಧಿಕಾರವಿಲ್ಲದೆಂದು ತಿರಸ್ಕರಿಸಲು ನಾವು ಪ್ರಾಮಾಣಿಕವಾಗಿ ನಿರ್ಬಂಧಿಸಲ್ಪಡಬೇಕು, ಹಾಗಿದ್ದರೆ ನಾವು, ಸತ್ಯದ ಬೆಳಕಿನಲ್ಲಿ ಜನಪ್ರಿಯವಾಗಿ ಬೆಳೆಯುತ್ತಿರುವ ಈ ದೃಷ್ಟಿಕೋನವನ್ನು ಸಂಕ್ಷಿಪ್ತವಾಗಿ ಪರೀಕ್ಷಿಸಬೇಕು ಮತ್ತು ಅದರ ತತ್ವಜ್ಞಾನ ಎಷ್ಟು ಆಳವಾಗಿದೆ ಎಂದು ನೋಡಬೇಕು.

ಈ ಸಿದ್ಧಾಂತದ ಪ್ರತಿಪಾದಕನೂ ಮತ್ತು ಪ್ರತಿನಿಧಿಯೂ ಆಗಿರುವ ಒಬ್ಬಾತನು ಹೇಳುವುದೇನೆಂದರೆ – “ಮಾನವನು ಮೊದಲಿಗೆ ಅಸ್ಥಿತ್ವದ ಸ್ಥಿತಿಯಲ್ಲಿದ್ದಾಗ ಆತನ ಮೃಗೀಯ ಸ್ವಭಾವವು ಪ್ರಾಬಲ್ಯವುಳ್ಳದ್ದಾಗಿತ್ತು. ಬಹುತೇಕ ಭೌತಿಕತೆಯು (ದೇಹದ ಪ್ರವೃತ್ತಿ) ಆತನನ್ನು ಆಳುವುದಾಗಿತ್ತು. ನಂತರದಲ್ಲಿ ಆತನು ಒಂದು ಸ್ಥಿತಿಯಿಂದ ಮತ್ತೊಂದು ಸ್ಥಿತಿಗೆ ನಿಧಾನವಾಗಿ ಇದುವರೆಗೆ ಬೆಳೆದನು. ಆಗ ಸರಾಸರಿ ವ್ಯಕ್ತಿಯು ತನ್ನ ಮಿದುಳಿನ ನಿಯದಡಿಗೆ ಬರುತ್ತಿದ್ದಾನೆ ಎಂಬ ಸ್ಥಿತಿಯನ್ನು ಹೊಂದಿಕೊಳ್ಳುತ್ತಾನೆ. ಹೀಗಾಗಿ ಈ ಕಾಲವನ್ನು ‘ಮಿದುಳಿನ ಕಾಲ’ ಎಂಬುದಾಗಿ ಕರೆಯಬಹುದು. ಮಿದುಳು ದಿನನಿತ್ಯದ ಮಹಾ ಸಾಹಸಕಾರ್ಯಗಳನ್ನು ಪ್ರಚೋದಿಸುವುದಾಗಿದೆ. ಮಿದುಳು ಸರ್ಕಾರದ ನಿಯಂತ್ರಣವನ್ನು ವಹಿಸಿಕೊಳ್ಳುತ್ತದೆ ಮತ್ತು ಈ ಲೋಕದ ಮೂಲವಸ್ತುಗಳಾದ ಗಾಳಿ ಮತ್ತು ನೀರು ಇವುಗಳನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳಬಹುದಾಗಿದೆ. ಮಾನವನು ಎಲ್ಲಾ ಭೌತಿಕ ಶಕ್ತಿಗಳ ಮೇಲೆ ತನ್ನ ಕೈಯನ್ನು ಹಾಕುತ್ತಿದ್ದಾನೆ, ಆದರೆ ನಿಧಾನವಾಗಿ ಮತ್ತು ಖಚಿತವಾಗಿ ಪ್ರಕೃತಿಯ ಆಧಿಪತ್ಯದ ಮೇಲೆ ಶಕ್ತಿಪಡೆಯುತ್ತಾನೆ ಎಂದು ಆತನು ಅಂತಿಮವಾಗಿ ಉದ್ಗರಿಸಬಹುದು. ಅಲೆಕ್ಸಾಂಡರ್ ಸೆಲ್ಕಿರ್ಕ್ ಎಂಬುವವನ ಭಾಷೆಯಲ್ಲಿ “ನಾನು ಸರ್ವೇಕ್ಷಿಸುವುದೆಲ್ಲದಕ್ಕೂ ನಾನೇ ಸರ್ವಾಧಿಕಾರಿ ಸಾಮ್ರಾಟ”.

ಮೊದಲ ನೋಟದಲ್ಲಿ ಒಂದು ಸಿದ್ಧಾಂತವು ಸಮಂಜಸವಾಗಿ ಕಂಡುಬರಬಹುದಾದರೂ ಅದನ್ನು ಅವಸರದಲ್ಲಿ ಅಂಗೀಕರಿಸಲು ಮತ್ತು ಸತ್ಯವೇದವನ್ನು ಅದರೊಂದಿಗೆ ಸಾಮರಸ್ಯಗೊಳ್ಳುವಂತೆ ತಿರುಚಲು ನಾವು ಮುಂದುವರೆಯಬಾರದು. ಸಾವಿರಾರು ರೀತಿಯಲ್ಲಿ ನಾವು ಸತ್ಯವೇದವನ್ನು ರುಜುವಾತುಪಡಿಸಿದ್ದೇವೆ ಮತ್ತು ಪ್ರಾಯಶಃಕ್ಕೂ ಮೀರಿ ಅದು ಮನುಷ್ಯಾತೀತ ಜ್ಞಾನವನ್ನೊಳಗೊಂಡಿದ್ದು ಅದು ಅದರ ಹೇಳಿಕೆಗಳನ್ನು ತಪ್ಪಿಲ್ಲದಂತೆ ಮಾಡಿವೆ ಎಂಬುದನ್ನು ನಾವು ತಿಳಿದಿರುತ್ತೇವೆ. ವೈಜ್ಞಾನಿಕ ಅನ್ವೇಷಣೆಗಳನ್ನು ಪ್ರಶಂಸಿಸುವಾಗ ಮತ್ತು ಅದರ ಸಲಹೆಗಳನ್ನು ಪರಿಗಣಿಸುವಾಗಲೂ, ಅದರ ಸಿದ್ಧಾಂತಗಳು ಯಾವುದೇ ರೀತಿಯಲ್ಲಿ ದೋಷಾತೀತವಲ್ಲ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ನಿಜವಾದ ವಿಜ್ಞಾನಿಯು, ಅನೇಕ ಅನಾನುಕೂಲದ ಸಂದರ್ಭಗಳಲ್ಲಿ, ದುಸ್ತರ ತೊಂದರೆಗಳ ವಿರುದ್ಧ ಹೋರಾಡುತ್ತಾ, ಪ್ರಕೃತಿಯ ಮಹಾಪುಸ್ತಕದಿಂದ ಮಾನವನ ಚರಿತ್ರೆಯನ್ನು ಮತ್ತು ಅವನ ವಿಧಿ ಮತ್ತು ಅವನ ನೆಲೆಯ ಬಗ್ಗೆ ಕಲಿಯುತ್ತಿರುವ ಕೇವಲ ಒಬ್ಬ ಯತ್ನಿಸುತ್ತಿರುವ ವಿದ್ಯಾರ್ಥಿಯಾಗಿದ್ದಾನೆ, ಹಾಗಿದ್ದ ಪಕ್ಷದಲ್ಲಿ ಅವನ ಸಿದ್ಧಾಂತಗಳನ್ನು ಸಾವಿರ ಬಾರಿ ಸುಳ್ಳು ಎಂದು ಸಾಬೀತುಪಡಿಸಿದರೆ ಆಶ್ಚರ್ಯವೇನು?.

ಹಾಗಾಗಿ, ನಾವು ವೈಜ್ಞಾನಿಕ ಅನ್ವೇಷಣೆಗಳನ್ನು ವಿರೋಧಿಸುವುದಿಲ್ಲ ಅಥವಾ ಅದಕ್ಕೆ ಅಡ್ಡಿಪಡಿಸುವದಿಲ್ಲ. ಆದರೆ ಪ್ರಕೃತಿಯ ಪುಸ್ತಕದ (The Book of Nature) ವಿದ್ಯಾರ್ಥಿಗಳಿಂದ ಬರುವ ಸಲಹೆಗಳನ್ನು ಕೇಳಿಸಿ

ಕೊಳ್ಳುವಾಗ, ನಾವು ಎಚ್ಚರಿಕೆಯಿಂದ ಅವರ ತೀರ್ಮಾನಗಳನ್ನು ಹೋಲಿಸಿ ನೋಡೋಣ, ದೈವಿಕ ಪ್ರಕಟನೆಯ ಪುಸ್ತಕದೊಡನೆ ಹೋಲಿಸಿದಾಗ ಅದು ಭಾಗಶಃ ಅಥವಾ ಸಂಪೂರ್ಣವಾಗಿ ತಪ್ಪಾಗಿರುವದೆಂದು ರುಜುವಾತಾಗಿದೆ, ಮತ್ತು ವಿಜ್ಞಾನಿಗಳ ಬೋಧನೆಗಳನ್ನು "ಬೋಧನೆಗಳು ಮತ್ತು ಸಾಕ್ಷ್ಯ"ದಿಂದ ಸಾಬೀತು ಪಡಿಸೋಣ ಅಥವಾ ನಿರಾಕರಿಸೋಣ. ಅವರು "ದೇವರ ಉಪದೇಶವನ್ನು ದೇವರ ಬೋಧನೆಯನ್ನು ವಿಚಾರಿಸುವ ಎಂದೂ ಅವರು ಹೇಳದಿದ್ದರೆ ಅವರಿಗೆ ಎಂದಿಗೂ ಬೆಳಗಾಗುವದಿಲ್ಲ" (ಯೆಶಾಯ 8:20). ಎರಡೂ ಪುಸ್ತಕಗಳ ಕರಾರುವಕ್ಕಾದ ಜ್ಞಾನವು ಅವರಿಗೆ ಸಾಮರಸ್ಯವಾಗಿ ಸಾಬೀತಾಗುತ್ತದೆ: ಆದರೆ ಅಂಥಾಃ ಜ್ಞಾನವು ನಮ್ಮಲ್ಲಿರುವವರೆಗೆ, ದೇವರ ಪ್ರಕಟಣೆಗಳು ಆದ್ಯತೆ ಪಡೆದುಕೊಳ್ಳಬೇಕು ಮತ್ತು ದೇವರ ಮಕ್ಕಳಿಗೆ ಅದು ನಿರ್ದಿಷ್ಟಮಾನವಾಗಬೇಕು ಮತ್ತು ಅದರ ಮೂಲಕ ತಪ್ಪಾದ ಸಹವರ್ತಿಗಳ ಅವಿಷ್ಕಾರಗಳನ್ನು ನಿರ್ಣಯಿಸಲಾಗುತ್ತದೆ.

ಆದರೆ, ಈ ವಿಚಾರಣಾ ಸರಣಿಯನ್ನು ಎತ್ತಿಹಿಡಿಯುವಾಗ, ವಿಕಾಸವಾದಕ್ಕೂ ಮಿಗಿಲಾದ ಮಾನವನ ಹೆಚ್ಚಾದ ಜ್ಞಾನದ, ಕಾರ್ಯಕೌಶಲ್ಯದ ಮತ್ತು ಶಕ್ತಿಯ ಬೇರೆ ಯಾವುದೇ ಸಮಂಜಸವಾದ ಪರಿಹಾರವಿಲ್ಲವೇ ಎಂಬುದನ್ನು ನಾವು ನೋಡೋಣ. ಯಾಕೆಂದರೆ, ಆ ವಿಕಾಸವಾದವು ಮೂಲತಃ ಅತ್ಯಂತ ಕೆಳಗಿನ ಮಟ್ಟದ ಜೀವಿಯಿಂದ ವಿಕಸಿಸಲ್ಪಟ್ಟಿದ್ದರೂ ಮಾನವನು ಈಗ ಉನ್ನತ ಅಥವಾ "ಮೆದುಳು ಯುಗ"ವನ್ನು ತಲುಪಿದ್ದಾನೆ. ಆದಾಗ್ಯೂ, ಬಹುಶಃ ನಾವು ಈ ಅನ್ವೇಷಣೆಗಳು ಮತ್ತು ಅನುಕೂಲತೆಗಳು, ಸಾಮಾನ್ಯ ಶಿಕ್ಷಣ ಮತ್ತು ಜ್ಞಾನದ ವಿಶಾಲವಾದ ಹರಡುವಿಕೆಗಳು ಹಾಗೂ ಹೆಚ್ಚಳವು, ಹೆಚ್ಚಾದ ಮೆದುಳು ಸಾಮರ್ಥ್ಯಕ್ಕೆ ಹೊರಿಸುವಂತವುಗಳಲ್ಲ. ಆದರೆ ಮೆದುಳನ್ನು ಉಪಯೋಗಿಸುವ ಇನ್ನೂ ಹೆಚ್ಚಿನ ಪರಿಸ್ಥಿತಿಗೆ ಎಂದು ನಾವು ಬಹುಶಃ ಕಂಡುಕೊಳ್ಳುತ್ತೇವೆ. ಇಂದು ನಮ್ಮ ಮೆದುಳಿನ ಸಾಮರ್ಥ್ಯವು ಹಿಂದಿನ ಕಾಲಕ್ಕಿಂತ ಹೆಚ್ಚಾಗಿದೆ ಎಂಬುದನ್ನು ನಾವು ನಿರಾಕರಿಸುತ್ತೇವೆ; ಅದೇ ಸಮಯದಲ್ಲಿ ನಾವು ಅನುಕೂಲಕರ ಪರಿಸ್ಥಿತಿಗಳ ಕಾರಣ ಇಂದು ಮಾನವರು ಹೊಂದಿರುವ ಮೆದುಳಿನ ಸಾಮರ್ಥ್ಯವು ಹಿಂದಿನ ಕಾಲಕ್ಕಿಂತ ಹೆಚ್ಚು ಸಾಮಾನ್ಯವಾಗಿದೆ ಮತ್ತು ಈ ಕಾರಣದಿಂದ ಹೆಚ್ಚಿನ ತೋರುವಿಕೆ ಉಂಟಾಗಿದೆ ಎಂಬುದನ್ನು ನಾವು ಮುಕ್ತವಾಗಿ ಒಪ್ಪಿಕೊಳ್ಳುತ್ತೇವೆ. ಚಿತ್ರಕಲೆ ಮತ್ತು ಶಿಲ್ಪವಿದ್ಯೆಯಲ್ಲಿ ಈ ಮೆದುಳು ಯುಗದ ವಿದ್ಯಾರ್ಥಿಗಳು ಪೂರ್ವದ ಮಹಾಗುರುಗಳತ್ತ ನೋಡುವುದಿಲ್ಲವೇ? ಹಾಗೆ ಮಾಡುವುದರಿಂದ ಅವರು ಹಿಂದಿನವರ ಮೆದುಳು ಶಕ್ತಿಯನ್ನು ಮತ್ತು ವಿನ್ಯಾಸದ ಮೂಲವನ್ನು, ಮತ್ತು ಅವರ ಕಾರ್ಯಕುಶಲತೆಯನ್ನು ಒಪ್ಪಿಕೊಂಡು ಅದನ್ನು ಅನುಕರಿಸಿದಂತಾಗುವುದಿಲ್ಲವೇ? ಪ್ರಸ್ತುತ ಮೆದುಳು ಯುಗವು ತನ್ನ ವಾಸ್ತುಶಿಲ್ಪಕ್ಕೆ ಹಿಂದಿನ ಕಾಲದ ಮೂಲ ವಿನ್ಯಾಸಗಳನ್ನು ಹೆಚ್ಚಾಗಿ ಸೆಳೆಯುತ್ತಿಲ್ಲವೇ? ಈ ಮೆದುಳು ಯುಗದ ವಾಗ್ಮಿಗಳು, ತರ್ಕಶಾಸ್ತ್ರಜ್ಞರು ಪ್ಲಾಟೋ, ಅರಿಸ್ಟಾಟಲ್, ಡೆಮೊಸ್ತೀನ್ಸ್ ಮುಂತಾದ ಹಿಂದಿನ ಕಾಲದವರನ್ನು ಅಧ್ಯಯನ ಮಾಡಿ ಅವರ ಪದ್ಧತಿಗಳನ್ನು, ತರ್ಕಗಳನ್ನು ನಕಲು ಮಾಡುತ್ತಿಲ್ಲವೇ? ಇಂದಿನ ಸಾರ್ವಜನಿಕ ಭಾಷಣಕಾರಲ್ಲಿ ಅನೇಕರು ಡೆಮೊಸ್ತೀನ್ಸ್ ಅಥವಾ ಅಪೊಲ್ಲೊಸನ ನುಡಿಗಳನ್ನು, ಅದಕ್ಕಿಂತ ಹೆಚ್ಚಾಗಿ ಅಪೋಸ್ತಲನ ಸ್ಪಷ್ಟವಾದ ವಿವೇಚನಾ ಶಕ್ತಿಯನ್ನು ಬಯಸುವುದಿಲ್ಲವೇ?

ಇನ್ನೂ ಹಿಂದಕ್ಕೆ ಹೋಗುವಾಗ, ನಾವು ಹಲವಾರು ಪ್ರವಾದಿಗಳ ವಾಕ್ಚಾತುರ್ಯದ ಶಕ್ತಿಗಳನ್ನು ಮತ್ತು ಕೀರ್ತನೆ ಪುಸ್ತಕದಾದ್ಯಂತ ವಿಂಗಡಿಸಲಾದ ಭವ್ಯವಾದ ಕಾವ್ಯಾತ್ಮಕ ವರ್ಣಚಿತ್ರಗಳನ್ನು ಸಂಪೂರ್ಣವಾಗಿ ಉಲ್ಲೇಖಿಸಬಹುದಾದರೂ, ನಾವು ಈ "ಮೆದುಳಿನ ಯುಗ" ದಾರ್ಶನಿಕರನ್ನು, ಯೋಬ ಮತ್ತು ಅವನ ಸಾಂತ್ವನಕಾರರ ಉತ್ತಮ ನೈತಿಕ ಸಂವೇದನೆಗಳಿಗಿಂತ ಕಡಿಮೆಯಿಲ್ಲದ ಬುದ್ಧಿವಂತಿಕೆ ಮತ್ತು ತರ್ಕಕ್ಕೆ ಉಲ್ಲೇಖಿಸುತ್ತೇವೆ. ಮತ್ತು ನಾವು ಮೋಶೆಯ ಬಗ್ಗೆ ಏನು ಹೇಳಬಹುದು? "ಐಗುಪ್ತರ ಸಕಲ ಜ್ಞಾನದಲ್ಲಿ ಕಲಿತವನೆಂದೋ? ಆತನ ಮೂಲಕ ನೀಡಲ್ಪಟ್ಟ ನಿಬಂಧನೆಗಳು ಎಲ್ಲಾ ನಾಗರೀಕ ದೇಶಗಳ ಅಸ್ತಿವಾರವಾಗಿದೆ ಮತ್ತು ಅದು ಇಂದೂ ಅಮೋಘವಾದ ಜ್ಞಾನದ ಸಾಕಾರತೆ" ಎಂಬುದಾಗಿ ಅಂಗೀಕರಿಸಲ್ಪಟ್ಟಿದೆ.

ಹೂತು ಹೋಗಿರುವ ಪುರಾತನ ನಗರಗಳ ಹೊರ ತೆಗೆಯುವಿಕೆಯು ಹಿಂದಿನ ಕಾಲಗಳ ಕಲೆ ಮತ್ತು ವಿಜ್ಞಾನಗಳ ಅರಿವನ್ನು ಹೊರಪಡಿಸುವುದಾಗಿದ್ದು ಅದು "ಮೆದುಳು ಯುಗ"ದವರು ಎಂದು ಹೇಳಿಕೊಳ್ಳುವ ಕೆಲವು ತತ್ವಜ್ಞಾನಿಗಳಿಗೆ ಆಶ್ಚರ್ಯಕಾರಿಯಾಗಿದೆ. ಸತ್ತವರ ದೇಹಗಳು ಕೆಡದಂತೆ ಅದನ್ನು ಸುಗಂಧ ದ್ರವ್ಯಗಳಿಂದ ಲೇಪಿಸುವ ಪದ್ಧತಿಯು, ತಾಮ್ರವನ್ನು ಹದಮಾಡುವುದು, ಸ್ಥಿತಿಸ್ಥಾಪಕಗೊಳ್ಳುವ ಗಾಜು ಮತ್ತು ದಮಸ್ಕದ ಉಕ್ಕು ತಯಾರಿಕೆ ಇವುಗಳು ಬಹಳ ಹಿಂದಿನ ಕಾಲದ ಸಾಧನೆಗಳು. ಇದನ್ನು ಪ್ರಸ್ತುತ ಯುಗದ ಮೆದುಳಿಗೆ ಅದರ ಎಲ್ಲಾ ಅನುಕೂಲತೆಗಳೊಡನೆಯೂ ಅರ್ಥ

ಮಾಡಿಕೊಳ್ಳುವುದಕ್ಕಾಗಲೀ, ನಕಲು ಮಾಡುವುದಕ್ಕಾಗಲೀ ಸಾಧ್ಯವಾಗುತ್ತಿಲ್ಲ.

ನಾಲ್ಕು ಸಾವಿರ ವರ್ಷಗಳ ಹಿಂದಕ್ಕೆ, ಸುಮಾರು ಅಬ್ರಹಾಮನ ಕಾಲಕ್ಕೆ ಹೋಗುವಾಗ, ನಾವು ಐಗುಪ್ತರ ಮಹಾ ಪಿರಮಿಡ್ಡ್‌ನ್ನು ನೋಡುತ್ತೇವೆ – ಇದು ಇಂದಿನ ಅತ್ಯಂತ ವಿದ್ವಾಂಸ ವಿಜ್ಞಾನಿಗಳಿಗೆ ಆಶ್ಚರ್ಯಕರವೂ ಅದ್ಭುತವೂ ಆದ ಸ್ಮಾರಕವಾಗಿದೆ. ಅದರ ನಿರ್ಮಾಣವು "ಈ ಮಿದುಳು ಯುಗದ" ಸುಧಾರಿತ ಗಣಿತ ಮತ್ತು ಖಗೋಳಶಾಸ್ತ್ರ ವಿಜ್ಞಾನದ ಸಾಧನೆಗಳಿಗೆ ಸರಿಸಮವಾಗಿದೆ. ಇಂದು ಆಧುನಿಕ ಉಪಕರಣಗಳ ಬಳಕೆಯಿಂದ ಅದು ಅಂದಾಜು ಮಾಡಬಹುದಾದ ಸತ್ಯಗಳನ್ನು ಸಕಾರಾತ್ಮಕವಾಗಿ ಕಲಿಸುತ್ತದೆ. ಅದರ ಬೋಧನೆಗಳು ಎಷ್ಟು ಗಮನಾರ್ಹ ಮತ್ತು ಸ್ಪಷ್ಟವಾಗಿದೆಯೆಂದರೆ, ಲೋಕದ ಕೆಲವು ಪ್ರಮುಖ ಖಗೋಳ ಶಾಸ್ತ್ರಜ್ಞರು ಯಾವುದೇ ಹಿಂಜರಿಕೆಯಿಲ್ಲದೆ ಅವು ದೈವಿಕ ಮೂಲದ್ದು ಎಂದು ಉಚ್ಚರಿಸಿದ್ದಾರೆ. ನಮ್ಮ ಮೆದುಳು ಯುಗದ ವಿಕಾಸವಾದಿಗಳು ಸಹಾ ಇದೊಂದು ದೈವಿಕ ವ್ಯವಸ್ಥೆಯಾಗಿದೆ ಮತ್ತು ಅದರ ಜ್ಞಾನವು ಮನುಷ್ಯಾತೀತವಾದುದು ಎಂದು ಒಪ್ಪಿಕೊಳ್ಳಬೇಕಾಗುತ್ತದೆ, ಹಾಗಿದ್ದರೂ ಅವರುಗಳು ಇದು ಮಾನವ ನಿರ್ಮಾಣವಾಗಿದೆ ಎಂದು ಇನ್ನೂ ಒಪ್ಪಿಕೊಳ್ಳಲೇಬೇಕು. ಸತ್ಯವೆಂದರೆ, ಆ ದೂರದ ದಿನದಲ್ಲಿ ಯಾವುದೇ ವರ್ಗದ ಪುರುಷರು ಅಂತಹ ದೈವಿಕ ವ್ಯವಸ್ಥೆಯನ್ನು ರೂಪಿಸುವ ಮಾನಸಿಕ ಸಾಮರ್ಥ್ಯವನ್ನು ಹೊಂದಿದ್ದರು ಎಂಬ ಅಂಶವು ಈ ದಿನದಲ್ಲಿ ಕೆಲವೇ ಪುರುಷರು ತಮ್ಮ ಮುಂದೆ ಒಂದು ಮಾದರಿಯನ್ನಿಟ್ಟುಕೊಂಡು ಮತ್ತು ಎಲ್ಲಾ ಆಧುನಿಕ ವೈಜ್ಞಾನಿಕ ಉಪಕರಣಗಳನ್ನು ಸಿದ್ಧವಾಗಿಟ್ಟುಕೊಂಡು ತಯಾರಿಸಲು ಸಮರ್ಥರಾಗಿದ್ದಾರೆ ಎಂದು ಸಾಬೀತುಪಡಿಸುತ್ತದೆ. ಹಾಗಾಗಿ, ನಮ್ಮ "ಮೆದುಳಿನ ಯುಗ"ವು ಸಂದರ್ಭಗಳು ಮತ್ತು ವಾಸ್ತವಗಳ ದೃಢಪಡಿಸುವಿಕೆಗಿಂತ ಹೆಚ್ಚು ಸ್ವ–ಕಲ್ಪನೆಯನ್ನು ಅಭಿವೃದ್ಧಿ ಪಡಿಸುತ್ತದೆ ಎಂದು ಯುಗವು ರುಜುವಾತುಪಡಿಸುತ್ತದೆ

ಹಾಗಾದರೆ, ಇಂದಿನ ಮಾನಸಿಕ ಸಾಮರ್ಥ್ಯವು ಹಿಂದಿನ ಯುಗಗಳಿಂತ ಹೆಚ್ಚಿನದೇನಲ್ಲ. ಆದರೆ, ಬಹುಶಃ ಕಡಿಮೆಯದು ಎಂದು ಸಾವು ಸಾಬೀತುಪಡಿಸುವ ವರಾದರೆ, ಸಾಮಾನ್ಯ ಜ್ಞಾನ, ಆಧುನಿಕ ಅನ್ವೇಷಣೆ ಮುಂತಾದವುಗಳ ಬಗ್ಗೆ ನಾವು ವಿವರಣೆ ಕೊಡುವುದಾದರೂ ಹೇಗೆ? ನಾವು ಇವುಗಳನ್ನು ಪರಿಶುದ್ಧ ಗ್ರಂಥಗಳೊಡನೆ ಸಮಂಜಸವೂ, ಸಾಮರಸ್ಯವುಳ್ಳವುಗಳೂ ಆಗಿವೆ ಎಂಬುದನ್ನು ತೋರಿಸುವೆವೆಂಬ ನಂಬಿಕೆಯು ನಮಗಿದೆ. ಇಂದು ಬಹು ಮೌಲ್ಯವುಳ್ಳವುಗಳೆಂದು ರುಜುವಾತು ಗೊಂಡಿರುವ ಶೋಧನೆ ಮತ್ತು ಅನ್ವೇಷಣೆಗಳು, ಇದು ಮೆದುಳುಯುಗವಾಗಿದೆ ಎಂದು ಸಾಬೀತಪಡಿಸುವವು ಗಳಾಗಿದ್ದು ಅವುಗಳು ನಿಜವಾಗಿಯೂ ಬಹಳ ಆಧುನಿಕವಾಗಿವೆ – ಬಹುತೇಕ ಇವುಗಳೆಲ್ಲವೂ ಕಳೆದ ಶತಮಾನದಲ್ಲಿ ಬಂದವುಗಳಾಗಿವೆ. ಅವುಗಳಲ್ಲಿ ಅತ್ಯಂತ ಮುಖ್ಯವಾದವುಗಳು ಕಳೆದ ಅರವತ್ತು ವರ್ಷಗಳಲ್ಲಿ ಬಂದಂತವುಗಳಾಗಿವೆ. ಉದಾಹರಣೆಗೆ: ಟೆಲಿಗ್ರಫಿ (ತಂತಿ), ರೈಲ್ ರೋಡಿಂಗ್ (ರೈಲು ಮಾರ್ಗ) ಮತ್ತು ಸ್ಟೀಮ್ ಬೋಟಿಂಗ್ (ಆವಿ ದೋಣಿಗಳು) ಮತ್ತು ವಿವಿಧ ಯಾಂತ್ರಿಕ ಕೈಗಾರಿಕಾ ಸಂಬಂಧಿತ ಯಂತ್ರೋಪಕರಣಗಳು. ಇವುಗಳು ಮೆದುಳು ಶಕ್ತಿ ಹೆಚ್ಚಿರುವುದಕ್ಕೆ ಸಾಕ್ಷ್ಯಗಳಾದರೆ, "ಮೆದುಳು ಯುಗವು" ಕೇವಲ ಪ್ರಾರಂಭವಷ್ಟೆ, ಮತ್ತು ತಾರ್ಕಿಕ ನಿರ್ಣಯಗಳೇನೆಂದರೆ, ಮತ್ತೊಂದು ಶತಮಾನವು ದೈನಂದಿನ ಘಟನೆಯಾಗಿ ಪ್ರತಿಯೊಂದು ರೀತಿಯ ಪವಾಡಗಳಿಗೆ ಸಾಕ್ಷಿಯಾಗುತ್ತದೆ ಮತ್ತು ಅದೇ ಅಭಿವೃದ್ಧಿಯ ಅನುಪಾತದಲ್ಲಿ, ಎಲ್ಲಿಗೆ ಕೊನೆ ಮುಟ್ಟುತ್ತದೇ ?

ಆದರೆ, ನಾವು ಪುನಃ ನೋಡೋಣ: ಎಲ್ಲಾ ಮಾನವರೂ ಸಂಶೋಧಕರೋ? ಆವಿಷ್ಕಾರವನ್ನು ಅವರ ಕೈಗೆ ಹಾಕಿದಾಗ ಅದನ್ನು ಮೆಚ್ಚುವ ಮತ್ತು ಬಳಸುವವರ ಸಂಖ್ಯೆಗೆ ಹೋಲಿಸಿದರೆ ಹೇಗೆ ಕೆಲವರ ಆವಿಷ್ಕಾರಗಳು ಮಾತ್ರವೇ ನಿಜವಾಗಿಯೂ ಉಪಯುಕ್ತವೂ ಮತ್ತು ಪ್ರಾಯೋಗಿಕವಾಗಿಯೂ ಇದೆಯಲ್ಲವೇ! ಅಥವಾ ನಾವು ಸಾರ್ವಜನಿಕ ಸೇವಕರ ಅತ್ಯಂತ ಉಪಯುಕ್ತ ಮತ್ತು ಅತ್ಯಂತ ಗೌರವಾನ್ವಿತ ವರ್ಗದ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡುವುದಿಲ್ಲ, ಆದರೆ ಅವರಲ್ಲಿ ಕಡಿಮೆ ಸಂಖ್ಯೆಯ ಜನರು ಮಹಾನ್ ಮೆದುಳು ಶಕ್ತಿಯ ಪುರುಷರು (ವಿಜ್ಞಾನಿಗಳು) ಎಂದು ಹೇಳುತ್ತೇವೆ. ವಿಶ್ವದ ಅತ್ಯಂತ ಬುದ್ಧಿವಂತ ಪುರುಷರು ಮತ್ತು ಆಳವಾಗಿ ವಿವೇಚಿಸುವ ಕೆಲವರು ಯಾಂತ್ರಿಕ ಸಂಶೋಧಕರಲ್ಲ. ಕೆಲವು ಅನ್ವೇಷಕರು ಬೌದ್ಧಿಕವಾಗಿ ತುಂಬಾ ಜಡ ಆಲಸಿಗಳಾಗಿರುತ್ತಾರೆ ಮತ್ತು ಅವರು ಆ ಸಂಶೋಧನೆಗಳಲ್ಲಿ ಹೇಗೆ ಮುಗ್ಗರಿಸಿದರೆಂದು ಎಲ್ಲರೂ ಆಶ್ಚರ್ಯಪಡುತ್ತಾರೆ. ಮಹಾ ತತ್ವವಿಧಿಗಳು (ವಿದ್ಯುಚ್ಛಕ್ತಿ, ಹಬೆಯ ಶಕ್ತಿ ಮುಂತಾದವುಗಳು) ಇವುಗಳ ಬಗ್ಗೆ ಅನೇಕರು, ಅನೇಕ ವರ್ಷಗಳವರೆಗೆ ಕೆಲಸ ಮಾಡಿದ್ದಾರೆ. ಅದನ್ನು ಅನ್ವಯಿಸುವಂತೆ, ಉದ್ಧಾರ ಮಾಡುವಂತೆ

ಶ್ರಮಿಸಿದ್ದಾರೆ. ಸಾಮಾನ್ಯವಾಗಿ ತಿಳಿದಿರುವಂತೆ ಕೇವಲ ಆಕಸ್ಮಿಕವಾಗಿ ಕಂಡುಹಿಡಿದಿದ್ದಾರೆ. ಅದನ್ನು ಯಾವುದೇ ಅಸಾಮಾನ್ಯ ಮೆದುಳಿನ ಶಕ್ತಿಯನ್ನು ಬಳಸದೆ ಮತ್ತು ತುಲನಾತ್ಮಕವಾಗಿಯೂ ಬಯಸದೆಯೆ ಪತ್ತೆಯಾಗಿವೆ.

ಮಾನವ ದೃಷ್ಟಿಯಿಂದ ನಾವು ಆಧುನಿಕ ಅನ್ವೇಷಣೆಗಳ ಬಗ್ಗೆ ಹೀಗೆ ವರದಿ ಮಾಡಬಹುದು. ಕ್ರಿ.ಶ. 1440ರಲ್ಲಿ ನಡೆದ ಮುದ್ರಣದ ಅನ್ವೇಷಣೆಯನ್ನು ಪ್ರಾರಂಭಿಕ ಹಂತವೆಂದು ಪರಿಗಣಿಸಬಹುದು. ಪುಸ್ತಕಗಳ ಮುದ್ರಣದೊಂದಿಗೆ ಆಲೋಚಿಸುವವರ ಮತ್ತು ಅನ್ವೇಷಕರ, ಚಿಂತಕರ ಮತ್ತು ವೀಕ್ಷಕರ ಆಲೋಚನೆಯ ಅವಿಷ್ಕಾರಗಳು ದಾಖಲಾದವು, ಮುದ್ರಣದ ಅನ್ವೇಷಣೆಯಿಲ್ಲದಿದ್ದರೆ ಮುಂದಿನವರಿಗೆ ಎಂದಿಗೂ ತಿಳಿದು ಬರುತ್ತಿರಲಿಲ್ಲ. ಪುಸ್ತಕಗಳೊಂದಿಗೆ ಹೆಚ್ಚು ಸಾಮಾನ್ಯ ಶಿಕ್ಷಣ ಪ್ರಾರಂಭವಾಯಿತು ಮತ್ತು ಅಂತಿಮವಾಗಿ ಸಾಮಾನ್ಯ ಶಾಲೆಗಳು ಪ್ರಾರಂಭ ಗೊಂಡವು. ಶಾಲೆಗಳು ಮತ್ತು ಕಾಲೇಜುಗಳು ಮಾನವ ಸಾಮರ್ಥ್ಯವನ್ನು ಹೆಚ್ಚಿಸುವುದಿಲ್ಲ, ಆದರೆ ಅವುಗಳು ಮಾನಸಿಕ ವ್ಯಾಯಾಮವನ್ನು ಹೆಚ್ಚು ಸಾಮಾನ್ಯವಾಗಿ ಮಾಡುತ್ತದೆ. ಹೀಗಾಗಿ, ಈಗಾಗಲೇ ಹೊಂದಿರುವ ಗ್ರಹಿಸುವ ಶಕ್ತಿಯನ್ನು ಅಭಿವೃದ್ಧಿಪಡಿಸುತ್ತದೆ. ಜ್ಞಾನವು ಹೆಚ್ಚು ವಾಡಿಕೆಯಾಗಿ ಮತ್ತು ಪುಸ್ತಕಗಳು ಹೆಚ್ಚು ಸಾಮಾನ್ಯವಾಗಿ, ಇದನ್ನು ಹೊಂದಿರುವ ಜನಾಂಗವು ಹಿಂದಿನ ಜನಾಂಗದ ಮೇಲೆ ನಿರ್ಧಾರಿತ ಅನುಕೂಲತೆಯನ್ನು ಹೊಂದಿದೆ; ಅಲ್ಲದೇ ಸಲಹೆಗಳ ಮೂಲಕ ಪರಸ್ಪರ ತೀಕ್ಷ್ಣಗೊಳಿಸಲು ಮತ್ತು ಉತ್ತೇಜಿಸಲು ಹಿಂದೆ ಒಬ್ಬರಿದ್ದಂತೆ ಈಗ ಸಾವಿರ ಚಿಂತಕರು ಇದ್ದರು, ಆದರೆ ನಂತರದ ಪೀಳಿಗೆಗಳ ಆ ಯುಗದಲ್ಲಿ, ಪುಸ್ತಕಗಳ ಮೂಲಕ, ತನ್ನದೇ ಅದ ಸ್ವಂತ ಅನುಭವಗಳ ಜೊತೆಗೆ ಹಿಂದಿನ ಅನುಭವಗಳನ್ನೂ ಹೊಂದಿದೆ. ವಿದ್ಯಾಭ್ಯಾಸ ಮತ್ತು ಅದರೊಂದಿಗಿರುವ ಮೆಚ್ಚಿಕೊಳ್ಳತಕ್ಕ ಆಕಾಂಕ್ಷೆಯು, ಸಾಹಸಕಾರ್ಯ ಮತ್ತು ವಿಶೇಷ ಸ್ಥಾನವನ್ನು ಮತ್ತು ಸಮರ್ಥತೆಯನ್ನು ಹೊಂದಿಕೊಳ್ಳ ಬಯಸುವವರು, ದಾಖಲೆಗಳಿಂದ ಮತ್ತು ಪ್ರತಿನಿತ್ಯದ ಪತ್ರಿಕೆಗಳ ವಿವರಣೆಗಳಿಂದ ಸಹಾಯ ಹೊಂದಿದ್ದು ಮಾನವನ ಗ್ರಹಣಾ ಶಕ್ತಿಯನ್ನು ಉದ್ದೀಪಿಸಿ, ಬೆಳಗಿದೆ ಮತ್ತು ಸಾಧ್ಯವಾದರೆ ಸಮಾಜದ ಒಳಿತಿಗಾಗಿ ಅನುಕೂಲತೆಗಾಗಿ ಪ್ರತಿಯೊಬ್ಬರನ್ನೂ ಅನ್ವೇಷಿಸಲು ಉತ್ತೇಜಿಸುತ್ತದೆ. ಆದುದರಿಂದ ನಾವು ಆಧುನಿಕ ಅನ್ವೇಷಣೆಗಳು ಸಂಪೂರ್ಣವಾಗಿ ಮಾನವ ದೃಷ್ಟಿಕೋನದಲ್ಲಿ ನೋಡಿ, ಬುದ್ಧಿಸಾಮರ್ಥ್ಯವನ್ನು ಹೆಚ್ಚಿಸುವುದನ್ನು ಕಲಿಸುವುದಿಲ್ಲ, ಆದರೆ ನೈಸರ್ಗಿಕ ಕಾರಣಗಳಿಂದ ಹರಿತವಾದ ಗ್ರಹಣ ಶಕ್ತಿಯನ್ನು ಕಲಿಸಿಕೊಡುತ್ತದೆ.

ಈಗ ನಾವು ಈ ಪ್ರಸ್ತಾಪದ ಬಗ್ಗೆ ಏನು ಕಲಿಸುತ್ತವೆ ಎಂದು ತಿಳುಕೊಳ್ಳಲು ಪರಿಶುದ್ಧ ಗ್ರಂಥಗಳ ಬಳಿ ಬರುತ್ತೇವೆ; ಏಕೆಂದರೆ ಮೇಲೆ ಸಲಹೆ ಮಾಡುವಂತೆ ನಾವೀಗ ಮಾನವರಲ್ಲಿರುವ ಶೋಧನೆ ಮತ್ತು ಜ್ಞಾನದ ಹೆಚ್ಚಳ ಮುಂತಾದವುಗಳು ನೈಸರ್ಗಿಕ ಕಾರಣಗಳ ಫಲಗಳಾಗಿವೆ ಎಂದು ನಂಬುತ್ತೇವೆ, ಆದಾಗ್ಯೂ ನಾವು ಈ ನೈಸರ್ಗಿಕ ಕಾರಣಗಳೆಲ್ಲವೂ ಬಹಳ ಹಿಂದೆಯೇ ದೇವರಾದ ಯೆಹೋವನಿಂದ ಮೊದಲೇ ಯೋಜಿಸಲ್ಪಟ್ಟವುಗಳು ಮತ್ತು ಅಪ್ಪಣೆ ಹೊಂದಿದವುಗಳು ಎಂದು ನಂಬುತ್ತೇವೆ. ಆದರೆ ಸರಿಯಾದ ಸಮಯದಲ್ಲಿ ಅವರು ಆತನ ಅಧಿಕಾರ ಬಲದ ಒದಗಿಸುವಿಕೆಗಳ ಮೂಲಕ ಹಾದುಹೋಗಬೇಕು ಎಂದೂ ನಂಬುತ್ತೇವೆ, ಆತನು ತನ್ನ ಸಂಕಲ್ಪದ ಮೇರೆಗೆ "ಆತನು ಸಮಸ್ತ ಕಾರ್ಯಗಳನ್ನು ತನ್ನ ಇಷ್ಟದಂತೆ ನಡೆಸುತ್ತಾನೆ" (ಎಫೆಸ 1:11). ಆತನ ಮಾತುಗಳಲ್ಲಿ ಪ್ರಕಟಣೆಗೊಂಡ ಯೋಜನೆಯ ಪ್ರಕಾರ, ದೇವರು ಪಾಪ ಮತ್ತು ವಿಪತ್ತುಗಳನ್ನು ಅನುಮತಿಸುವಂತೆ ಮತ್ತು ಈ ಲೋಕವನ್ನು ಆರು ಸಾವಿರ ವರ್ಷಗಳ ಕಾಲ ದುರಾಡಳಿತ ಮತ್ತು ತುಳಿತಕ್ಕೆ ಅನುಮತಿಸಿ, ನಂತರ ಏಳನೆಯ ಸಾವಿರ ವರ್ಷದಲ್ಲಿ ಕ್ರಿಸ್ತ ಯೇಸುವಿನ ಮೂಲಕ ಎಲ್ಲವನ್ನೂ ಪೂರ್ವಸ್ಥಿತಿಗೆ ತರುವಂತೆ ಮಾಡಿ ಮತ್ತು ದುಷ್ಕೃತ್ಯವನ್ನು ನಿರ್ನಾಮಮಾಡಿ ಅದರ ಪರಿಣಾಮಗಳನ್ನು ನಾಶಗೊಳಿಸುವಂತೆ ಉದ್ದೇಶಿಸಿದನು, ಆತನನ್ನು ಈ ಕಾರ್ಯ ಮಾಡುವಂತೆ ಮೊದಲೇ ಅಭಿಷೇಕಿಸಿದ್ದನು. ಆದುದರಿಂದ, ಕೇಡಿನ ಆರು ಸಹಸ್ರ ವರ್ಷಗಳು ಅಂತ್ಯವಾಗಲು ಪ್ರಾರಂಭಿಸುವಾಗ, ದೇವರು ಸಂಶೋಧನೆಗಳಿಗೆ ಅನುಕೂಲಕರವಾದ ಪರಿಸ್ಥಿತಿಯನ್ನು ಅನುಮತಿಸಿದನು ಎಂಬುದಾಗಿ ಆತನ ಪ್ರಕಟನೆಯ ಪುಸ್ತಕದಲ್ಲಿಯೂ, ಆತನ ಪ್ರಕೃತಿಯ ಪುಸ್ತಕ ಇವೆರೆಡರಲ್ಲಿಯೂ ಮಿಲೆನಿಯಂ ಯುಗದಲ್ಲಿ ಮಾನವಕುಲದ ಆಶೀರ್ವಾದ ಮತ್ತು ಉನ್ನತಿಗೆ ಉಪಯುಕ್ತವಾದ ಯಾಂತ್ರಿಕ ಮತ್ತು ರಸಾಯನಿಕ ಉಪಕರಣಗಳ ಸಿದ್ಧಪಡಿಸುವಿಕೆಯಲ್ಲಿಯೂ ಈಗ ಪರಿಚಯಿಸಲಾಗುತ್ತದೆ. ಇದು ದೇವರ ಯೋಜನೆ ಯಾಗಿತ್ತು ಎಂಬುದು – ಈ ಪ್ರವಾದನೀಯ ಹೇಳಿಕೆಯಿಂದ ಸ್ಪಷ್ಟವಾಗಿ ಸೂಚಿತವಾಗುತ್ತದೆ – "ದಾನಿಯೇಲನೇ, ನೀನು ಈ ಮಾತುಗಳನ್ನು ಮುಚ್ಚಿಡು, ಅವುಗಳನ್ನು ಬರೆಯುವ ಗ್ರಂಥಕ್ಕೆ ಮುದ್ರೆ ಹಾಕು,

ಅಂತ್ಯಕಾಲದವರೆಗೆ ಮರೆಯಾಗಿರಲಿ. ಬಹುಜನರು ಅತ್ತಿತ್ತ ತಿರುಗುವರು, ತಿಳುವಳಿಕೆಯು ಹೆಚ್ಚುವುದು (ಸಾಮರ್ಥ್ಯವಲ್ಲ)"... "ದುಷ್ಟರು ದುಷ್ಟರಾಗಿಯೇ ನಡೆಯುವರು. ಅವರಲ್ಲಿ ಯಾರಿಗೂ ವಿವೇಕವಿರದು (ದೇವರ ಯೋಜನೆ ಮತ್ತು ಮಾರ್ಗವನ್ನು ಅರ್ಥ ಮಾಡಿಕೊಳ್ಳುವುದಿಲ್ಲ)" (ದಾನಿಯೇಲ 12:4,10), "ಮೊಟ್ಟಮೊದಲು ಜನಾಂಗವು ಉಂಟಾದಂದಿನಿಂದ ಅಂದಿನವರೆಗೆ ಸಂಭವಿಸದಂಥ ಸಂಕಟವು ಸಂಭವಿಸುವುದು" (ದಾನಿಯೇಲ 12:1).

ದೇವರು ಇದುವರೆಗೆ ಪ್ರಸ್ತುತ ಅವಿಷ್ಕಾರಗಳು ಮತ್ತು ಆಶೀರ್ವಾದಗಳು ಶಾಪವನ್ನು ಶಮನಗೊಳಿಸುವಂತೆ ವ್ಯವಸ್ಥೆಯನ್ನು ಮಾಡಲಿಲ್ಲವೇಕೆ ಎಂದು ಕೆಲವರಿಗೆ ಆಶ್ಚರ್ಯವಾಗಿ ಕಂಡು ಬರಬಹುದು. ಆದಾಗ್ಯೂ, ಎಲ್ಲರ ಮೇಲೆ ಆಶೀರ್ವಾದವು ಬರುವಾಗ ಮನುಕುಲದವರೆಲ್ಲರೂ ಎಂದಿಗೂ ಪಾಪದಿಂದ ಯಾವ ಲಾಭವೂ ಇಲ್ಲ ಎಂಬುದನ್ನು ನಿರ್ಧರಿಸುವಂತೆ, ದೇವರ ಯೋಜನೆಯು ಮನುಕುಲಕ್ಕೆ ಶಾಪದ ಬಗ್ಗೆ ಪೂರ್ಣ ಮೆಚ್ಚುಗೆಯನ್ನು ಕೊಡುವುದಾಗಿತ್ತು. ಇದಲ್ಲದೆ, ಜಗತ್ತು ಇನ್ನೂ ಏನನ್ನೂ ಅರಿತುಕೊಳ್ಳದ ಸಂಗತಿಗಳ ಬಗ್ಗೆ ದೇವರು ಮುನ್ಸೂಚನೆ ನೀಡಿದ್ದಾನೆ, ಅವುಗಳೆಂದರೆ, ಅವನ ಅತ್ಯುತ್ತಮ ಆಶೀರ್ವಾದಗಳು ಬ್ರಹ್ಮಾಂಡದ ನೀತಿವಂತ ನಿಯಮಗಳಿಗೆ ಅನುಗುಣವಾಗಿರದ ಹೃದಯಗಳನ್ನು ದಯಪಾಲಿಸಿದರೆ ಹೆಚ್ಚಿನ ದುಷ್ಕೃತ್ಯಗಳಿಗೆ ಕಾರಣವಾಗಬಹುದು ಮತ್ತು ಅದರಿಂದ ಹೆಚ್ಚಿನ ಕೇಡು ಉತ್ಪಾದಿಸಲ್ಪಡುತ್ತವೆ ಎಂಬುದೇ. ಅಂತಿಮವಾಗಿ, ದೇವರ ಹೆಚ್ಚಿನ ಆಶೀರ್ವಾದಗಳ ಇಂದಿನ ಅನುಮತಿಯು ಈ ಪ್ರಸ್ತಾಪದ ಬಗ್ಗೆ ಒಂದು ಪ್ರಾಯೋಗಿಕ ಪಾಠವಾಗಿದೆ ಮತ್ತು ಇದು ಎಲ್ಲಾ ಶಾಶ್ವತತೆಗೆ ಈ ವಿಚಾರಣಸರಣಿಯ ಉದಾಹರಣೆಯಾಗಿ ಕಾರ್ಯನಿರ್ವಹಿಸುತ್ತದೆ. ದೇವದೂತರುಗಳಿಗೆ ಮತ್ತು ಪುನರ್‌ವಶಗೊಂಡ ಮನುಷ್ಯರಿಗೆ ದೃಷ್ಟಾಂತವಾಗಿ ಇರುತ್ತದೆ ಎಂಬುದನ್ನು ನಾವು ನೋಡುತ್ತೇವೆ, ಎಂದು ನಾವು ಕೇವಲ ಸಲಹೆ ಮಾಡುತ್ತೇವೆ :-

ಮೊದಲನೆಯದಾಗಿ, ಮಾನವ ಕುಲವು ಪ್ರಸ್ತುತ ಬಿದ್ದುಹೋದ ಅಥವಾ ಭ್ರಷ್ಟ ಸ್ಥಿತಿಯಲ್ಲಿ ಇದುವರೆಗೆ ಕಠಿಣ ಕಾನೂನುಗಳು ಮತ್ತು ದಂಡಗಳು ಹಾಗೂ ಅವುಗಳನ್ನು ಜಾರಿಗೊಳಿಸಲು ಸಾಕಷ್ಟು ಪ್ರಬಲವಾದ ಸರ್ಕಾರವಿಲ್ಲದೆ, ಸ್ವಾರ್ಥ ಒಲವುಗಳು ಎಲ್ಲರ ಮೇಲೆ ಹೆಚ್ಚುಕಡಿಮೆ ಹಿಡಿತ ಸಾಧಿಸುತ್ತದೆ ಮತ್ತು ಪುರುಷರ ಅಸಮಾನವಾದ ವೈಯಕ್ತಿಕ ಸಾಮರ್ಥ್ಯಗಳನ್ನು ಪರಿಗಣಿಸುವಾಗ, ಶ್ರಮೆ-ಉಳಿಸುವ ಯಂತ್ರೋಪಕರಣಗಳ ಆವಿಷ್ಕಾರದ ಫಲಿತಾಂಶವು ಯಂತ್ರೋಪಕರಣಗಳ ತಯಾರಿಕೆಯಿಂದ ಉಂಟಾದ ಕೋಲಾಹಲ ಮತ್ತು ಪ್ರಚೋದನೆಯು, ಶ್ರೀಮಂತರನ್ನು ಶ್ರೀಮಂತರನ್ನಾಗಿ ಮತ್ತು ಬಡವರನ್ನು ಬಡವರನ್ನಾಗಿ ಮಾಡಿರುವದು ಅವಿಷ್ಕಾರದ ಫಲಿತಾಂಶವಾಗಿರದೇ ಹೋಗಿದ್ದರೆ ಅದು ಸಂಭವಿಸುತ್ತಿರಲಿಲ್ಲ. ಪ್ರಕಟಗೊಂಡ ಧೋರಣೆಯು ಏಕಾಧಿಪತ್ಯ ಮತ್ತು ಸ್ವಯಂ-ಉನ್ನತಿಯತ್ತ, ಅದು ಅನುಕೂಲತೆಗಳನ್ನು ಈಗಾಗಲೇ ಸ್ವಾರ್ಥ ಮತ್ತು ಸ್ವಾಭಾವಿಕ ಸವಲತ್ತುಗಳನ್ನು ಯಾರ ಸಾಮರ್ಥ್ಯ ಮತ್ತು ಸ್ವಾಭಾವಿಕ ಸವಲತ್ತುಗಳು ಈಗಾಗಲೇ ಹೆಚ್ಚು ಅನುಕೂಲಕರ ವಾಗಿದೆಯೋ ಅವರ ಕೈಯಲ್ಲಿಯೇ ನೇರವಾಗಿ ನೀಡುತ್ತದೆ.

ಎರಡನೆಯದಾಗಿ, ಪ್ರಸ್ತುತ ಸಂಪತ್ತನ್ನು ಮತ್ತು ಅದರ ದೈನಂದಿನ ಹೆಚ್ಚಳವನ್ನು ಎಲ್ಲಾ ವರ್ಗಗಳಿಗೂ ಸಮಾನವಾಗಿ ಭಾಗ ಮಾಡಲು ಒಂದು ಶಾಸನವನ್ನು ತರುವುದು ಸಾಧ್ಯವಾದಲ್ಲಿ, (ಮಾನವ ಪರಿಪೂರ್ಣತೆಯಿಲ್ಲದೆ ಅಥವಾ ದೈವೀಕ ಸರ್ಕಾರವಿಲ್ಲದೆ (supernatural) ಮಾನವ ವ್ಯವಹಾರವನ್ನು ವಿಧಿಬದ್ಧವಾಗಿ ಮಾಡಲು ಇನ್ನೂ ಸಾಧ್ಯವಾಗಿಲ್ಲ) ಫಲಿತಾಂಶಗಳು ಪ್ರಸ್ತುತ ಸ್ಥಿತಿಗಿಂತ ಹೆಚ್ಚು ಹಾನಿಕರವಾಗುತ್ತದೆ. ಶ್ರಮ ಉಳಿಸುವ ಯಂತ್ರಗಳ ಸವಲತ್ತುಗಳು ಮತ್ತು ಎಲ್ಲಾ ಆಧುನಿಕ ಸಾಮಗ್ರಿಗಳು ಸರಿಸಮಾನವಾಗಿ ವಿಭಾಗಿಸಲ್ಪಡುತಿದ್ದರೆ, ಇದರ ಫಲಿತಾಂಶವು ಬಹಳ ಮುಂಚೆಯೇ ಗಂಟೆಗಳ ಶ್ರಮದ ದೊಡ್ಡ ಇಳುವರಿ ಮತ್ತು ವಿರಾಮದ ಹೆಚ್ಚಿನ ಹೆಚ್ಚಳ ಇರುತ್ತದೆ, ಪತನಗೊಂಡವರಿಗೆ ಸೋಮಾರಿತನವು ಬಹಳ ಹಾನಿಕರ ಸಂಗತಿಯಾಗಿದೆ. ದುಡಿತದ ಅಗತ್ಯ ಮತ್ತು ಮುಖದಲ್ಲಿ ಬೆವರಿಳಿಕೆಗಳು ಇಲ್ಲವಾದಲ್ಲಿ ನಮ್ಮ ಜನಾಂಗದ ಕ್ಷೀಣತೆಯು ಇರುವುದಕ್ಕಿಂತ ಇನ್ನೂ ತೀವ್ರವಾಗಿರುತ್ತಿತ್ತು. ಸೋಮಾರಿತನವು ದುರ್ಗುಣದ ತಾಯಿಯಾಗಿದೆ. ಅದನ್ನು ಮಾನಸಿಕ, ನೈತಿಕ ಮತ್ತು ಭೌತಿಕ ಅವನತಿಗಳು ಖಂಡಿತವಾಗಿಯೂ ಅನುಸರಿಸುತ್ತವೆ. ಹೀಗಾಗಿ, ದೇವರ ವಿವೇಕ ಮತ್ತು ಒಳ್ಳೇತನಗಳು ಈ ಆಶೀರ್ವಾದಗಳನ್ನು ಅವುಗಳ ಪರಿಚಯದ ಸೂಕ್ತಕಾಲದವರೆಗೆ ಸಹಸ್ರಮಾನದ ಆಶೀರ್ವಾದಕರ ಆಡಳಿತದ ಸಿದ್ಧತೆಯವರೆಗೆ ತಡೆಹಿಡಿದಿದೆ. ದೇವರ ರಾಜ್ಯದ ದೈವಿಕ ಸರ್ಕಾರದ ನಿಯಂತ್ರಣದಲ್ಲಿ ಎಲ್ಲಾ ಆಶೀರ್ವಾದಗಳೂ ಪಕ್ಷಪಾತಗಳಿಲ್ಲದೆ ಜನರಿಗಾಗಿ ವಿಭಜಿಸಲ್ಪಡುವುದಲ್ಲದೆ, ವಿಶ್ರಾಂತಿಯು ಅದೇ ದೈವಿಕ ಸರ್ಕಾರದಿಂದ ಅಪ್ಪಣೆ ಹೊಂದಿ ನಿರ್ದೇಶಿಸಲ್ಪಡುತ್ತದೆ ಮತ್ತು ಅದರ

ಫಲಿತಾಂಶಗಳು ಸದ್ಗುಣಗಳನ್ನು ಉತ್ಪಾದಿಸುತ್ತದೆ ಮತ್ತು ಮಾನಸಿಕ, ನೈತಿಕ ಮತ್ತು ಭೌತಿಕ ಸಮರ್ಪಕತೆಯ ಕಡೆಗೆ ಮೇಲೇರುವ ಒಲವು ತೋರುತ್ತದೆ. ಆವಿಷ್ಕಾರಗಳ ಪ್ರಸ್ತುತ ಹೆಚ್ಚಾಗುವಿಕೆ ಮತ್ತು ಹೆಚ್ಚುತ್ತಿರುವ ಜ್ಞಾನದ ಇತರ ಆಶೀರ್ವಾದಗಳನ್ನು ಈ "ಸಿದ್ಧತೆಯ ದಿನ" ದಲ್ಲಿ ಸ್ವಾಭಾವಿಕವಾಗಿ ಬರಲು ಅನುಮತಿಸಲಾಗಿದೆ, ಮನುಷ್ಯರು ಇದು "ಮೆದುಳಿನ ಯುಗ"ದ ಕಾರಣವೆಂದು ತಮ್ಮನ್ನು ತಾವೇ ಹೊಗಳಿಕೊಳ್ಳುತ್ತಾರೆ, ಆದರೆ, ಇದು ನಿಸ್ಸಂದೇಹವಾಗಿ ಈ ತತ್ವಜ್ಞಾನಿಗಳ ಆಶಾಭಂಗಕ್ಕೆ ಹೆಚ್ಚಾಗಿ ಕಾರ್ಯ ಮಾಡುವಂತೆ ಅನುಮತಿಸಲ್ಪಟ್ಟಿದೆ. ಈ ಆಶೀರ್ವಾದಗಳ ಬಹು ಹೆಚ್ಚುವಿಕೆಯು ಅಂದರೆ ಈಗಾಗಲೇ ಪ್ರಪಂಚದ ಮೇಲೆರಗುವ ವಿಪತ್ತಿನ ಸಮಯದ ಪ್ರಾರಂಭವಾಗಿದೆ. ಒಂದು ರಾಷ್ಟ್ರವುಂಟಾದಂದಿನಿಂದ ಇದುವರೆಗೆ ಹೀಗಾಗಿರಲಿಲ್ಲ.

ಪ್ರವಾದಿಯಾದ ದಾನಿಯೇಲನು ಮೇಲೆ ಉಲ್ಲೇಖಿಸಿರುವಂತೆ, ಜ್ಞಾನದ ಹೆಚ್ಚಳವನ್ನು ಮತ್ತು ಸಂಕಟದ ಸಮಯದೊಂದಿಗೆ ಜೋಡಿಸುತ್ತಾನೆ. ಜ್ಞಾನವು ಜನಾಂಗದ ನೀತಿಭ್ರಷ್ಟತೆಯ ಕಾರಣ ಕಷ್ಟವನ್ನುಂಟು ಮಾಡುತ್ತದೆ. ಜ್ಞಾನದ ಹೆಚ್ಚಳವು ಈ ಲೋಕಕ್ಕೆ ಅದ್ಭುತವಾದ ಕಾರ್ಮಿಕ–ಉಳಿತಾಯ ಯಂತ್ರೋಪ ಕರಣಗಳನ್ನು ಮತ್ತು ಅನುಕೂಲತೆಗಳನ್ನು ನೀಡಿರುವುದು ಮಾತ್ರವಲ್ಲ, ಆದರೆ ಇದು ವೈದ್ಯಕೀಯ ಕೌಶಲ್ಯದ ಹೆಚ್ಚಳಕ್ಕೆ ಕಾರಣವಾಗಿದೆ, ಆ ಮೂಲಕ ಸಾವಿರಾರು ಜೀವಗಳು ದೀರ್ಘ ಕಾಲ ಉಳಿಯುತ್ತಾರೆ ಮತ್ತು ಇದು ಮಾನವಕುಲವನ್ನು ಪ್ರಬುದ್ಧಗೊಳಿಸಿದೆ ಎಂದರೆ ಮಾನವ ಕಸಾಯಿಖಾನೆಯಾದ ಯುದ್ಧವು ಕಡಿಮೆ ಜನಪ್ರಿಯವಾಗುತ್ತಿದೆ. ಆದ್ದರಿಂದ ಇತರ ಸಾವಿರಾರು ಜನರು ತಮ್ಮ ಸಂತತಿಯನ್ನು ಹೆಚ್ಚಾಗಿಸುತ್ತಿದ್ದಾರೆ, ಇದು ಇತಿಹಾಸದ ಯಾವುದೇ ಅವಧಿಗಿಂತ ಹೆಚ್ಚಾಗಿ ದಿನದಿಂದ ದಿನಕ್ಕೆ ವೇಗವಾಗಿ ಹೆಚ್ಚುತ್ತಿದೆ. ಈ ರೀತಿಯಲ್ಲಿ ಮಾನವರು ತೀವ್ರವಾಗಿ ಹೆಚ್ಚುತ್ತಿರುವಾಗ, ಆತನ ಶ್ರಮದ ಅಗತ್ಯತೆಯು ಅದಕ್ಕೆ ಅನುಗುಣವಾಗಿ ಕಡಿಮೆಯಾಗುತ್ತಿದೆ. ಮತ್ತು "ಮೆದುಳು ಯುಗದ" ಈ ದೊಡ್ಡ ಮತ್ತು ತೀವ್ರಗತಿಯಲ್ಲಿ ಹೆಚ್ಚುತ್ತಿರುವ ಈ ಮಹಾ ವರ್ಗದವರಿಗೆ ತತ್ವಜ್ಞಾನಿಗಳು ಕೆಲಸವನ್ನೂ, ಪೋಷಣೆಯನ್ನೂ ಒದಗಿಸುವ ಸಮಸ್ಯೆ ಹೊಂದಿದ್ದಾರೆ. ಯಂತ್ರೋಪಕರಣಗಳಿಂದ ಬದಲಿಸಲ್ಪಟ್ಟ ಅವರ ಸೇವೆಗಳನ್ನು ವಿತರಿಸಬಹುದು, ಆದರೆ ಅವರ (ಜನರ) ಅವಶ್ಯಕತೆಗಳು ಅಪೇಕ್ಷೆಗಳಿಗೆ ಯಾವುದೇ ಮಿತಿಗಳನ್ನು ತಿಳಿದಿಲ್ಲ. ಈ ಸಮಸ್ಯೆಯ ಪರಿಹಾರವು ಅವರ ಮೆದುಳಿನ ಸಾಮರ್ಥ್ಯವನ್ನು ಮೀರಿದ್ದು ಎಂದು ಈ ತತ್ವಜ್ಞಾನಿಗಳು ಅಂತಿಮವಾಗಿ ಒಪ್ಪಿಕೊಳ್ಳ ಬೇಕಾಗುತ್ತದೆ.

ಸ್ವಾರ್ಥತೆಯು ಅಧಿಕಾರ ಮತ್ತು ಅನುಕೂಲತೆ ಗಳನ್ನು ಹೊಂದಿರುವ ಐಶ್ವರ್ಯವಂತರನ್ನು ನಿಯಂತ್ರಿಸುವುದನ್ನು ಮುಂದುವರಿಸುತ್ತದೆ ಮತ್ತು ಅವರನ್ನು ಸಾಮಾನ್ಯ ತಿಳುವಳಿಕೆಗೆ ಹಾಗೂ ನ್ಯಾಯಕ್ಕೆ ಕುರುಡರನ್ನಾಗಿ ಮಾಡಿಬಿಡುತ್ತದೆ; ಅದೇ ಸಮಯದಲ್ಲಿ ಅದೇ ರೀತಿಯ ಸ್ವಾರ್ಥತೆಯು ಸ್ವಯಂ ಸಂರಕ್ಷಣೆಯ ಸಹಜ ಪ್ರವೃತ್ತಿ ಮತ್ತು ಅದರ ಹಕ್ಕುಗಳ ಹೆಚ್ಚಾದ ಜ್ಞಾನದೊಂದಿಗೆ ಕೂಡಿಕೊಂಡು ಕೆಲವರನ್ನು ಉದ್ಧಟತನಕ್ಕೆ ಉದ್ರೇಕಿಸುತ್ತದೆ, ಮತ್ತೆ ಬಡವ ವರ್ಗದ ಕೆಲವರಿಗೆ ಕಿಚ್ಚನ್ನೆಬ್ಬಿಸುತ್ತದೆ ಮತ್ತು ಈ ಆಶೀರ್ವಾದಗಳ ಫಲಿತಾಂಶವು, ಒಂದು ಸಮಯಕ್ಕೆ ಭೀಷಣವಾಗಿ – ಸಂಕಟದ ಸಮಯವಾಗಿ ಕಂಡು ಬರುತ್ತದೆ. ನಿಜವಾಗಿಯೂ ರಾಷ್ಟ್ರವುಂಟಾದಂದಿನಿಂದ ಹೀಗಾಗಿರಲಿಲ್ಲ ಮತ್ತು ಇದು, ಮಾನವನು ನೀತಿಭ್ರಷ್ಟ ಸ್ಥಿತಿಯಲ್ಲಿರುವ ಕಾರಣ ಮಾರ್ಗದರ್ಶನವಿಲ್ಲದೆ, ನಿಯಂತ್ರಣವಿಲ್ಲದೆ ಈ ಆಶೀರ್ವಾದಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಲು ಸಾಧ್ಯವಾಗುತ್ತಿಲ್ಲ. ಸಹಸ್ರಮಾನದ ಆಡಳಿತವು ಪುನರ್ವಶಗೊಂಡ ಮನುಷ್ಯರ ಹೃದಯಗಳಲ್ಲಿ ದೇವರ ನಿಯಮವನ್ನು ಪುನಃ ಬರೆಯುವವರೆಗೆ ಮಾನವರು ಯಾವುದೇ ಹಾನಿ ಅಥವಾ ಆಪತ್ತುಗಳಿಲ್ಲದೆ ಪೂರ್ಣ ಸ್ವಾತಂತ್ರ್ಯವನ್ನು ಉಪಯೋಗಿಸಲು ಸಾಧ್ಯವಿಲ್ಲ.

ಸೂಕ್ತ ಸಮಯದಲ್ಲಿ ಸಂಕಟದ ಕಾಲವು ಮುಕ್ತಾಯಗೊಳ್ಳುತ್ತದೆ, ಉದ್ರೇಕಗೊಂಡ ಗಲಿಲಾಯ ಸಮುದ್ರದೊಡನೆ ಮಾತನಾಡಿದಾತನು ಅದರಂತೆ ಅಧಿಕಾರದಿಂದ ಮಾನವರ ಭಾವೋದ್ರೇಕವೆಂಬ ರೊಚ್ಚಿಗೆದ್ದ ಸಮುದ್ರದೊಡನೆ ಮಾತನಾಡುವಾಗ, "ಸುಮ್ಮನಿರು, ಮೊರೆಯಿಡಬೇಡ" (ಮಾರ್ಕ 4:39) ಎಂದು ಗದರಿಸುವನು. ಸಮಾಧಾನ ಪ್ರಭುವು ಅಧಿಕಾರದಿಂದ ಎದ್ದು ನಿಲ್ಲುವನು. ಮಹಾ ಶಾಂತತೆಯು ಅದರ ಫಲವಾಗುತ್ತದೆ. ಆಗ ಉದ್ರೇಕಿತ ಮತ್ತು ಘರ್ಷಣೆ ಗೊಳ್ಳುವ ಸಂಗತಿಗಳು "ಯೆಹೋವನ ಅಭಿಷಕ್ತ"ನ ಅಧಿಕಾರವನ್ನು ಗ್ರಹಿಸಿಕೊಳ್ಳುತ್ತವೆ, "ಯೆಹೋವನ ಮಹಿಮೆಯು ಗೋಚರವಾಗುವದು, ಎಲ್ಲಾ ಮನುಷ್ಯರೂ ಒಟ್ಟಿಗೆ ಅದನ್ನು ಕಾಣುವರು" (ಯೆಶಾಯ 40:5) ಮತ್ತು ಈ ರೀತಿಯಲ್ಲಿ ಕ್ರಿಸ್ತನ ಆಡಳಿತದಲ್ಲಿ ಭೂಲೋಕದ ಎಲ್ಲಾ ಕುಲದವರು ಆಶೀರ್ವಾದವನ್ನು ಹೊಂದಿಕೊಳ್ಳುವರು.

ಆಗ ಮಾನವರು ತಾವು ವಿಕಸನಕ್ಕೆ ಅಥವಾ ಮೆದುಳು ಯುಗದ ನೈಸರ್ಗಿಕ ಅಭಿವೃದ್ಧಿ ಮತ್ತು

ಚುರುಕುತನಕ್ಕೆ ಹೊರಿಸಿದವುಗಳು ಅದಕ್ಕೆ ಬದಲಾಗಿ ಭೂಮಂಡಲವನ್ನು ಬೆಳಗಿದ ಯೆಹೋವನ ಮಿಂಚುಗಳು ಎಂದು ಮನುಕುಲದ ಆಶೀರ್ವಾದಗಳಿಗಾಗಿರುವ "ಆತನ ದಿನದಲ್ಲಿ" ಕಂಡುಕೊಳ್ಳುತ್ತಾರೆ (ಕೀರ್ತನೆ 77:18). ಆದರೆ, ಇದನ್ನು ಸಂತರು ಮಾತ್ರ ನೋಡುವರು, ಪರಲೋಕದ ಜ್ಞಾನವುಳ್ಳ ವಿವೇಕಿಗಳು ಮಾತ್ರವೇ ಇದನ್ನು ಅರ್ಥಮಾಡಿಕೊಳ್ಳುವರು. "ಯೆಹೋವನು ತನ್ನ ಸದ್ಭಕ್ತರಿಗೆ ಆಪ್ತಮಿತ್ರನಂತಿರುವನು; ಅವರಿಗೇ ತನ್ನ ಒಡಂಬಡಿಕೆಯ ಅನುಭವವನ್ನು ದಯಪಾಲಿಸುವನು" (ಕೀರ್ತನೆ 25:14), ದೇವರಿಗೆ ಸ್ತೋತ್ರವಾಗಲಿ! ತನ್ನ ಮಕ್ಕಳು "ಕರ್ತನಾದ ಯೇಸುಕ್ರಿಸ್ತನ ಸಂಬಂಧವಾದ ಪರಿಜ್ಞಾನವನ್ನು ಹೊಂದುವ ವಿಷಯದಲ್ಲಿ ಆಲಸ್ಯಗಾರರೂ ನಿಷ್ಫಲರೂ ಆಗದಂತೆ" (2 ಪೇತ್ರ 1:8) ಆತನು ವ್ಯವಸ್ಥೆ ಮಾಡಿದ್ದಾನೆ. ಆತನ ಮಾತಿನ ಮತ್ತು ಯೋಜನೆಯ ಈ ಮೆಚ್ಚುಗೆಯಿಂದ ನಾವು ವ್ಯರ್ಥವಾದ ತತ್ವಜ್ಞಾನವನ್ನೂ, ದೇವರ ವಾಕ್ಯಕ್ಕೆ ವಿರುದ್ಧವಾದ ಮಾನವರ ಮೂರ್ಖ ಸಂಪ್ರದಾಯಗಳನ್ನೂ ಎದುರಿಸಿ ನಿಲ್ಲಲು ಶಕ್ತರಾಗಿದ್ದೇವೆ.

ಮಾನವರ ಸೃಷ್ಟಿಯ ಬಗ್ಗೆ ಇರುವ ಸತ್ಯವೇದದ ವಿವರಣೆಗಳು ಆತನು ಅವರನ್ನು ಪರಿಪೂರ್ಣರನ್ನಾಗಿ, ನೀತಿವಂತರನ್ನಾಗಿ, ತನ್ನ ಸ್ವಭಾವಕ್ಕೆ ತಕ್ಕಂತೆ ಭೂಮಿಯ ಸ್ವಭಾವದಲ್ಲಿ ಉಂಟುಮಾಡಿದ್ದಾನೆ ಎಂದು ತಿಳಿಸುತ್ತವೆ; ಮಾನವನು ಅನೇಕ ಅನ್ವೇಷಣೆಗಳನ್ನು ಮಾಡಿ ತನ್ನನ್ನು ಕಲುಷಿತಗೊಳಿಸಿಕೊಂಡನು (ಆದಿ. 1:27; ರೋಮಾ. 5:12; ಪ್ರಸಂಗಿ 7:29) ಹೀಗೆ ಎಲ್ಲರೂ ಪಾಪಿಗಳಾಗಿದ್ದು, ಜನಾಂಗವು ತಾನಾಗಿಯೇ ತನಗೆ ಸಹಾಯ ಮಾಡಿಕೊಳ್ಳದಾಯಿತು. ಯಾರಾರೂ ಯಾವ ರೀತಿಯಲ್ಲಿಯೂ ತನ್ನ ಸಹೋದರರನ್ನು ವಿಮೋಚಿಸಲು ಅಥವಾ ಆತನಿಗಾಗಿ ತಮ್ಮನ್ನು ಈಡುಬಲಿಯನ್ನಾಗಿ ಅರ್ಪಿಸಲು ಸಾಧ್ಯವಾಗಲಿಲ್ಲ (ಕೀರ್ತನೆ 49:7.15); ದೇವರು ತನ್ನ ಪ್ರೀತಿಯ ನಿಮಿತ್ತ, ಅನುಕಂಪದ ಕಾರಣ ಇದಕ್ಕಾಗಿ ಒಂದು ವ್ಯವಸ್ಥೆಯನ್ನು ಒದಗಿಸಿದನು, ಆ ಪ್ರಕಾರವಾಗಿ ದೇವಕುಮಾರನು ಮನುಷ್ಯನಾದನು ಮತ್ತು ಮಾನವರ ಈಡುಬಲಿ ಕ್ರಯವನ್ನು ತಾನೇ ಕೊಟ್ಟನು, ಈ ಸಮರ್ಪಣೆಯ ಬಹುಮಾನವಾಗಿ, ಪುನಃಸಂಧಾನದ ಕಾರ್ಯವನ್ನು ಮುಕ್ತಾಯ ಮಾಡುವುದಕ್ಕಾಗಿ ಆತನು ಅತ್ಯುನ್ನತೆಗೆ, ದೇವರ ಸ್ವಭಾವಕ್ಕೆ ಸಹಾ ಏರಿಸಲ್ಪಟ್ಟನು. ಸೂಕ್ತಸಮಯದಲ್ಲಿ ಅವನು ಜನಾಂಗದ ಪುನರ್‌ವಶವನ್ನು ಮೂಲ ಪರಿಪೂರ್ಣತೆಗೆ ಮತ್ತು ಪ್ರತಿ ಆಶೀರ್ವಾದಗಳಿಗೆ ಒಡೆಯನಾಗಿರಲು ಇಚ್ಛಿಸುತ್ತಾನೆ. ಈ ಸಂಗತಿಗಳು ಪರಿಶುದ್ಧ ಗ್ರಂಥದಲ್ಲಿ ಮೊದಲಿನಿಂದ ಕಡೆಯವರೆಗೆ ಸ್ಪಷ್ಟವಾಗಿ ಬೋಧಿಸಲಾಗಿದೆ. ಇವುಗಳು ವಿಕಾಸವಾದಕ್ಕೆ ನೇರವಾಗಿ ವಿರುದ್ಧವಾಗಿವೆ ಅಥವಾ ಅಂತಹ "ಬೊಬ್ಬೆ ಹೊಡೆಯುವ" (ಹಾಗೆಂದು ತಪ್ಪಾಗಿ ಕರೆಯಲ್ಪಡುವ), ವಿಜ್ಞಾನವು ಅಂತಹ ದೇವರ ವಾಕ್ಯದೊಡನೆ ಉಗ್ರವಾದ, ಪುನರ್‌ಸಂಧಾನ ಪಡಿಸಲಾಗದ ಘರ್ಷಣೆಯನ್ನು ಹೊಂದಿದೆ.

* * *

"Still o'er earth's sky the clouds of anger toll  
And God's revenge hangs heavy in her soul;  
Yet shall she raise – though first by God chastised -  
in glory and in beauty then baptized

" Yes,Earth , thou shalt arise; thy father's aid  
shall heal the wound his chastening hand hath made;  
shall judge the proud oppressor's ruthless sway  
And burst his bonds, and cast his cords away

"Then on your soil shall deathless verdure spring;  
Break forth, ye mountains, and ye valleys sing!  
No more your thirsty rocks shall frown forlorn,  
The unbeliever's jest, the heathen's scorn.

"The sultry sands shall tenfold harvest's yield  
And a new Eden deck the thorny field  
E'en now we see, wide-waving o'er the land  
The mighty angel lifts his golden wand,

"Courts the bright vision of descending power,  
Tells every gate and measures every tower;  
And chides the tardy seals that yet detain  
Thy Lion, Judah, from his destined reign"

- Heber

* * *

ಇನ್ನೂ ಸಹ ಭೂಮಿಯ ಆಕಾಶದ ಮೇಲೆ ರೌದ್ರದ ಮೋಡಗಳು ತೂಗುತ್ತಿವೆ  
ದೇವರ ಪ್ರತಿಕಾರ ಆಕೆಯ (ಭೂಮಿಯ) ಮೇಲೆ ಭಾರವಾಗಿ ತೂಗುತಿಹುದು  
ಹಾಗಿದ್ದರೂ ಆಕೆ ಮೇಲೇಳುವಳು, ಮೊದಲು ದೇವರಿಂದ  
ದಂಡನೆಯನ್ನು ಹೊಂದಿದರೂ – ನಂತರ

ಮಹಿಮೆಯಲ್ಲಿಯೂ
ಸೊಗಸಿನಲ್ಲಿಯೂ ದೀಕ್ಷೆ ಹೊಂದುವಳು

ಹೌದು, ಭೂಮಿಯೇ, ನೀ ಮೇಲೇಳುವೆ, ನಿನ್ನ
ತಂದೆಯು
ಶಿಕ್ಷಿಸಿ ಗಾಯಪಡಿಸಿರುವುದನ್ನು ತನ್ನ ನೆರವಿನಿಂದ
ವಾಸಿ ಮಾಡುವನು
ಹಾಗೂ ಹೆಮ್ಮೆಯಿಂದ ದಬ್ಬಾಳಿಕೆಗಾರನ
ನಿರ್ದಯಿಗಳನ್ನು ಬದಿಗೆ ತಳ್ಳುವನು
ಅವನ ಬಂಧವನ್ನು ಒಡೆದುಹಾಕಿ, ಅವನ ಹಗ್ಗವನ್ನು
ಕಿತ್ತೊಗೆಯುವನು

ಆಗ ನಿನ್ನ ನೆಲದಲ್ಲಿ ಮರಣವಿಲ್ಲದ ಜೀವಬುಗ್ಗೆಗಳು
ವರ್ಜಿಸುವುದು
ಸಿಡಿದೇಳಿ ಪರ್ವತಗಳೇ, ಕಣಿವೆಗಳೇ ಹಾಡಿರಿ!
ಇನ್ನು ಮುಂದೆ ನಿನ್ನ ದಾಹಗೊಂಡ ಬಂಡೆಗಳು
ನಿರಾಶೆಯಿಂದ ಅನಾಥವಾಗುವುದಿಲ್ಲ
ನಂಬಿಕೆಯಿಲ್ಲದವರ ಕುಚೋದ್ಯಕ್ಕೆ, ಅನ್ಯರ
ತಿರಸ್ಕಾರಕ್ಕೆ.

ಉತ್ಸಾಹಭರಿತ ಮರಳು ಹತ್ತುಪಟ್ಟು ಕೊಯ್ಲನು
ಉತ್ಪಾದಿಸುವದು
ಮುಳ್ಳಿನ ಹೊಲದಲ್ಲಿ ಏದೇನ್ ಅಲಂಕರಿಸುವುದು
ಈಗಲೂ ನಾವು ಅದು ವ್ಯಾಪಕವಾಗಿ
ಬೀಸುತ್ತಿರುವದನ್ನು ಕಾಣುತ್ತೇವೆ
ಪರಾಕ್ರಮಿ ದೇವದೂತನ ತನ್ನ ಬಂಗಾರದ
ದಂಡವನ್ನು ಮೇಲೆತ್ತುತ್ತಿದ್ದಾನೆ.

ಕೆಳಗಿಳಿವ ಶಕ್ತಿಯ ಪ್ರಜ್ವಲ ದೃಶ್ಯವನ್ನು
ಒಲೈಸಿ/ಮೆಚ್ಚುಗೆ ತೋರಿ
ಪ್ರತಿ ಬಾಗಿಲಿಗೂ ಗೋಪುರದುದ್ದಕ್ಕೂ ತಿಳಿಸುವದು
ಗರ್ಜಿಸುತ್ತಾ ತಡೆಹಾಕಿದ ಆಲಸ್ಯದ ಮುದ್ರೆಯನ್ನು
ಒಡೆಯುವನು
ನಿನ್ನ ಸಿಂಹನು, ಯೂದನು, ತನ್ನ ಗಮ್ಯ ಸ್ಥಳದ
ಆಡಳಿತದಿಂದ.

– ಹೆಬರ್

* * * * * * *

# ಅಧ್ಯಯನ – 10 Study X

# ಆತ್ಮೀಕ ಮತ್ತು ಮಾನವ ಸ್ವಭಾವಗಳು ಪ್ರತ್ಯೇಕವಾದವುಗಳು ಮತ್ತು ವಿಶಿಷ್ಟವಾದವುಗಳು

## "SPIRITUAL AND HUMAN NATURES SEPARATE AND DISTINCT"

**ಸಾಮಾನ್ಯವಾದ ತಪ್ಪು ಗ್ರಹಿಕೆಗಳು – ಲೌಕಿಕ ಅಥವಾ ಮಾನವ ಸ್ವಭಾವಗಳು ಮತ್ತು ಪರಲೋಕದ ಅಥವಾ ಆತ್ಮೀಕ ಸ್ವಭಾವಗಳು – ಲೌಕಿಕ ಮಹಿಮೆ ಮತ್ತು ಪರಲೋಕದ ಮಹಿಮೆ – ಆತ್ಮೀಕ ಜೀವಿಗಳ ಬಗ್ಗೆ ಸತ್ಯವೇದದ ಸಾಕ್ಷ್ಯಗಳು – ಮರ್ತ್ಯತೆ ಮತ್ತು ಅಮರತ್ವ – ಮರ್ತ್ಯ ಜೀವಿಗಳು ನಿತ್ಯಜೀವವನ್ನು ಹೊಂದಲು ಸಾಧ್ಯವೋ? – ಅನುಗ್ರಹ ದಯಪಾಲಿಸುವಲ್ಲಿ ನ್ಯಾಯಪರತೆ – ಕಲ್ಪಿತ ಸಿದ್ಧಾಂತಗಳು ಪರೀಕ್ಷಿಸಲ್ಪಟ್ಟಿವೆ – ಪರಿಪೂರ್ಣತೆಯಲ್ಲಿ ವೈವಿಧ್ಯತೆ – ದೇವರ ಸಾರ್ವಭೌಮತ್ವ ಹಕ್ಕುಗಳು – ದೇವರ ಮುನ್ನೇರ್ಪಾಡು ಮಾನವರಿಗೆ ಒಂದು ತೃಪ್ತಿದಾಯಕ ಭಾಗವಾಗಿದೆ – ಕ್ರಿಸ್ತನ ದೇಹದ ಆಯ್ಕೆ – ಅವರ ಸ್ವರೂಪ ಬದಲಾವಣೆಯು ಹೇಗೆ ಪರಿಣಾಮಕಾರಿಯಾಗಿರುತ್ತದೆ.**

ದೇವರ ಯೋಜನೆಯು ಸಾಧಾರಣ ಮಾನವ ಕುಲವನ್ನು ತಮ್ಮ ಹಿಂದಿನ ಸ್ಥಿತಿಗೆ – ಏದೇನ್‌ನಲ್ಲಿ ಕಳೆದುಹೋದ ಮಾನವ ಪರಿಪೂರ್ಣತೆಗೆ ಪುನರ್‌ವಶಗೊಳ್ಳುವುದನ್ನು ಅವಲೋಕಿಸುವುದರಲ್ಲಿ ವಿಫಲವಾಗಿದೆ. ಕ್ರೈಸ್ತ ಸಭೆಯು ಈ ಸಾಮಾನ್ಯ ಯೋಜನೆಯ ಹೊರತಾಗಿ, ಮಾನವನಿಂದ ಆತ್ಮೀಕ ಸ್ವಭಾವವನ್ನು ಹೊಂದುವನೆಂದು ಊಹಿಸುತ್ತಾನೆ. ಕ್ರೈಸ್ತ ಜನರು ಸಾಮಾನ್ಯವಾಗಿ ಆಧ್ಯಾತ್ಮಿಕ ಸ್ವರೂಪವನ್ನು ತಲುಪುವವರನ್ನು ಹೊರತುಪಡಿಸಿ ಬೇರೆ ಯಾರೂ ರಕ್ಷಿಸಲ್ಪಡುವುದಿಲ್ಲ ಎಂದು ಭಾವಿಸುತ್ತಾರೆ. ಹೇಗಾದರೂ, ಪರಿಶುದ್ಧ ಗ್ರಂಥಗಳು ಲೋಕದ ಎಲ್ಲಾ ಕುಟುಂಬಗಳಿಗೆ ಜೀವ, ಆಶೀರ್ವಾದ ಮತ್ತು ಪುನರ್‌ವಶದ ವಾಗ್ದಾನಗಳನ್ನು ನಿರ್ಧರಿಸಿಕೊಂಡಿರುವಾಗ, ಸುವಾರ್ತಾ ಯುಗದಲ್ಲಿ ಆಯ್ಕೆಗೊಂಡ ಸಭೆಗೆ ಮಾತ್ರವೇ ಆತ್ಮೀಕ ಸ್ವಭಾವದ ಬದಲಾವಣೆಯನ್ನು ಪ್ರಸ್ತಾಪಿಸುತ್ತದೆ ಮತ್ತು ಅಂಥಾಃ ನಿರೀಕ್ಷೆಯನ್ನು ಬೇರೆ ಯಾರಿಗೂ ಎತ್ತಿಹಿಡಿಯುವ ಯಾವುದೇ ಏಕೈಕ ವಚನವೂ ಕಂಡುಬರುವುದಿಲ್ಲ.

ಮನುಕುಲದ ಸಮೂಹಗಳು ಪಾಪದ ಫಲವಾದ ಎಲ್ಲಾ ಅವನತಿಗಳಿಂದ, ಬಲಹೀನತೆಗಳಿಂದ, ನೋವು, ಸಂಕಟ ಮತ್ತು ಮರಣದಿಂದ ಪಾರುಮಾಡಿ, ಪತನದ ಮೊದಲು ಅನುಭವಿಸುತ್ತಿದ್ದ ಮಾನವ ಪರಿಪೂರ್ಣತೆಯ ಸ್ಥಿತಿಗೆ ಪುನರ್‌ವಶಪಡಿಸುವುದಾದರೆ, ಅವರುಗಳು ನಿಜವಾಗಿಯೂ ಮತ್ತು ಪೂರ್ಣವಾಗಿಯೂ ಆ ಪತನದಿಂದ ರಕ್ಷಣೆ ಹೊಂದುತ್ತಾರೆ, ಅಂತೆಯೇ ಸುವಾರ್ತಾ ಯುಗದ ವಿಶೇಷವಾದ "ಉನ್ನತ ಕರೆ" ಅಡಿಯಲ್ಲಿ ದೈವಿಕ ಸ್ವಭಾವದಲ್ಲಿ ಪಾಲುದಾರರಾಗುತ್ತಾರೆ.

ಸರ್ವಸಂಪೂರ್ಣನಾದ ಮನುಷ್ಯನು ಹೇಗೆ ರಚಿಸಲ್ಪಡುತ್ತಾನೆ ಎಂಬುದನ್ನು ಅರ್ಥಮಾಡಿಕೊಳ್ಳಲು ವಿಫಲರಾಗುವಾಗ, ಮರ್ತ್ಯ ಮತ್ತು ಅಮರತ್ವ ಎಂಬ ಪದಗಳ ತಪ್ಪುಗ್ರಹಿಕೆಗಳು, ನ್ಯಾಯದ ಬಗ್ಗೆ ತಪ್ಪು ಕಲ್ಪನೆಗಳು ಎಲ್ಲವೂ ಒಟ್ಟಾಗಿ ಈ ತಪ್ಪಿಗೆ ಹವಣಿಸುತ್ತದೆ, ಅಲ್ಲದಿದ್ದರೆ ಸುಲಭವಾಗಿ ಅರ್ಥವಾಗುವ ವೇದ ವಚನಗಳನ್ನು ಮಂಕುಮಾಡಿಬಿಡುತ್ತವೆ. ಒಂದು ಸಾಮಾನ್ಯ ದೃಷ್ಟಿಕೋನದಲ್ಲಿ ಹೇಳಬೇಕೆಂದರೆ, ಸತ್ಯವೇದದ ಯಾವುದೇ ಒಂದು ವಚನದಿಂದಲೂ ಬೆಂಬಲಿಸಲ್ಪಡದಿದ್ದರೂ ಸರ್ವಸಂಪೂರ್ಣನಾದ ವ್ಯಕ್ತಿಯು ಎಂದೂ ಈ ಲೋಕದ ಮೇಲೆ ಇರಲಿಲ್ಲ, ಕೇವಲ ಭಾಗಶಃವಾಗಿ ಅಭಿವೃದ್ಧಿಯಾದವರು ಮಾತ್ರವೇ ಇದ್ದಾರೆ, ಅವರು ಸರ್ವ ಸಂಪೂರ್ಣತೆಗೆ ಮುಟ್ಟಲು ಅತ್ಮೀಕರಾಗಲೇ ಬೇಕಾಗುತ್ತದೆ. ಸತ್ಯದ ವಚನವನ್ನು ಸರಿಯಾದ ರೀತಿಯಲ್ಲಿ ಉಪದೇಶಿಸುವುದರಿಂದ ಉಂಟಾಗುವ ಸಾಮರಸ್ಯ ಮತ್ತು ಸೌಂದರ್ಯವನ್ನು ವೃದ್ಧಿಸುವ ಬದಲು ಈ ದೃಷ್ಟಿಕೋನವು ಪರಿಶುದ್ಧ ಗ್ರಂಥದ ಬಗ್ಗೆ ಗೊಂದಲವನ್ನುಂಟುಮಾಡುತ್ತದೆ.

ಪರಿಶುದ್ಧ ಗ್ರಂಥಗಳು ಬೋಧಿಸುವಂತೆ ಇಬ್ಬರು, ಕೇವಲ ಇಬ್ಬರು ಪರಿಪೂರ್ಣ ವ್ಯಕ್ತಿಗಳಿದ್ದರು – ಆದಾಮ ಮತ್ತು ಯೇಸು. ಆದಾಮನು ದೇವರ ಸ್ವರೂಪದಲ್ಲಿ ಸೃಷ್ಟಿಸಲ್ಪಟ್ಟನು; ಅಂದರೆ ಅದೇ ರೀತಿಯು ವಿವೇಚನಾಪೂರ್ವಕವಾದ ಮಾನಸಿಕ ಶಕ್ತಿ, ಜ್ಞಾಪಕ ಶಕ್ತಿ, ನಿರ್ಣಯಾಶಕ್ತಿ ಮತ್ತು ಇಚ್ಛಾಶಕ್ತಿ, ಹಾಗೂ ನ್ಯಾಯದ ನೈತಿಕತೆ, ಪರೋಪಕಾರ ಮತ್ತು ಪ್ರೀತಿಯ ಗುಣ ಮುಂತಾದವುಗಳನ್ನುಳ್ಳವನಾಗಿ ಸೃಷ್ಟಿಸಲ್ಪಟ್ಟನು. ಆತನು "ಮಣ್ಣಿನಿಂದ ಹುಟ್ಟಿದವನು, ಮಣ್ಣಿಗೆ ಸಂಬಂಧಪಟ್ಟವನು". ಆತನು ಆತ್ಮೀಕ ಜೀವಿಯ ಲೌಕಿಕ

ಸ್ವರೂಪವುಳ್ಳವನಾಗಿದ್ದನು. ಅಂತಸ್ತು, ಶ್ರೇಣಿ ಮತ್ತು ವ್ಯಾಪ್ತಿಯ ಸ್ಥಾನವಾನದಲ್ಲಿ ವ್ಯಾಪಕವಾಗಿ ಭಿನ್ನತೆಗಳಿದ್ದರೂ ಆತನು ಅದೇ ರೀತಿಯ ಗುಣಲಕ್ಷಣ ಗಳನ್ನುಳ್ಳವನಾಗಿದ್ದನು. ಆ ಮಟ್ಟದವರೆಗೆ ಮಾನವನು ದೈವಸ್ವರೂಪಿಯಾಗಿದ್ದರಿಂದ ದೇವರು ಪತನಗೊಂಡ ಮಾನವನಿಗೂ "ಬಾ, ನಾವು ಒಟ್ಟಾಗಿ ವಿಚಾರ ಮಾಡೋಣ" ಎಂದು ಹೇಳುವವನಾಗಿದ್ದನು.

ಸಮಸ್ತ ಸಂಗತಿಗಳ ಮೇಲೆ ಯೆಹೋವನು ಅರಸನಾಗಿರುವಂತೆಯೇ, ಮಾನವನನ್ನು ಭೂಲೋಕದ ಎಲ್ಲಾ ಸಂಗತಿಗಳ ಅರಸನನ್ನಾಗಿ ಮಾಡಿದನು, "ನಮ್ಮ ಸ್ವರೂಪದಲ್ಲಿ, ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯರನ್ನು ಉಂಟುಮಾಡೋಣ ... ಅವರು ಪಶು, ಪಕ್ಷಿಗಳು, ಮೀನುಗಳು ಇತ್ಯಾದಿ ಎಲ್ಲಾ ಭೂಮಿಯ ಮೇಲೆಯೂ ದೊರೆತನ ಮಾಡಲಿ ಅಂದನು" (ಆದಿ. 1:26). ಮೋಶೆಯು ನಮಗೆ ಹೇಳುತ್ತಾನೆ, ದೇವರು ತಾನು ಉಂಟುಮಾಡಿದ್ದನ್ನೆಲ್ಲಾ ನೋಡಲಾಗಿ ಅದು ಬಹುಒಳ್ಳೆಯದಾಗಿತ್ತು ಎಂದು (ಆದಿಕಾಂಡ 1:31) ಮನುಷ್ಯನನ್ನು ಗುರುತಿಸಿದನು – ಕೇವಲ ಉಂಟುಮಾಡುವುದಕ್ಕಾಗಿ ಪ್ರಾರಂಭಿಸಲಿಲ್ಲ, ಆದರೆ ಪೂರ್ಣಗೊಳಿಸಿದನು. ಮತ್ತು ತನ್ನ ಸೃಷ್ಟಿಯನ್ನು "ತುಂಬಾ ಒಳ್ಳೆಯದು" ಎಂದು ಪರಿಗಣಿಸಿದನು (ಆದಿ. 1:31) ಎಂದು ಹೇಳಿದ್ದಾನೆ. ಅಂದರೆ ಪರಿಪೂರ್ಣವಾದದ್ದು, ದೇವರ ದೃಷ್ಟಿಯಲ್ಲಿ ಆತನು ಯಾವುದೇ ಪರಿಪೂರ್ಣತೆಗೆ ಕಡಿಮೆಯಾದದ್ದು, ಆತನ ಬುದ್ಧಿವಂತ ಸೃಷ್ಟಿಗಳಲ್ಲಿ "ತುಂಬಾ ಒಳ್ಳೆಯದು" ಅಲ್ಲ.

ಸೃಷ್ಟಿಯಲ್ಲಿ ಮಾನವನ ಸರ್ವಸಂಪೂರ್ಣತೆಯನ್ನು ಕೀರ್ತನೆ 8:5–8ರಲ್ಲಿ ಹೀಗೆ ಹೇಳಿಯದೆ – "ಅವನನ್ನು ದೇವದೂತರಿಗಿಂತ ಸ್ವಲ್ಪವೇ ಕಡಿಮೆಯಾಗಿ ಮಾಡಿದಿಯಲ್ಲಾ; ಪ್ರಭಾವವನ್ನೂ, ಮಾನವನ್ನೂ ಅವನಿಗೆ ಕಿರೀಟವಾಗಿ ಇಟ್ಟಿ, ನೀನು ಸೃಷ್ಟಿಸಿದ ಎಲ್ಲಾ ವಸ್ತುಗಳ ಮೇಲೆ ಪ್ರಭುತ್ವವನ್ನು ಅವನಿಗೆ ಅನುಗ್ರಹಿಸಿದಿ; ನೀನು ಎಲ್ಲಾ ಕುರಿ ದನಗಳನ್ನು ಮಾತ್ರವೇ ಅಲ್ಲದೆ ಕಾಡುಮೃಗಗಳು, ಆಕಾಶ ಪಕ್ಷಿಗಳು, ಸಮುದ್ರದ ಮೀನುಗಳು, ಅದರಲ್ಲಿ ಸಂಚರಿಸುವ ಸಕಲ ವಿಧವಾದ ಜೀವಜಂತುಗಳು ಇವೆಲ್ಲವನ್ನೂ ಅವನಿಗೆ ಅಧೀನ ಮಾಡಿದ್ದೀಯಲ್ಲವೇ". ಸತ್ಯವೇದವನ್ನು ವಿಕಾಸವಾದಕ್ಕೆ ಹೊಂದಿಕೆ ಮಾಡುವವರಿಗೆ ಸಲಹೆ ಮಾಡುವುದೇನೆಂದರೆ ಇಬ್ರಿಯ 2:7ರಲ್ಲಿನ 'ಸ್ವಲ್ಪವೇ' ಎಂಬ ಹೇಳಿಕೆಯನ್ನು "ಸ್ವಲ್ಪ ಕಡಿಮೆ ಆದರೆ ದೇವದೂತರುಗಳಿಗಿಂತ ಸ್ವಲ್ಪ ಕಡಿಮೆ" ಎಂದು ಅರ್ಥೈಸಬಹುದು. ಮತ್ತು ಸ್ವಲ್ಪ ಮಟ್ಟಿಗೆ ಕಡಿಮೆ ಪದವಿ ಅಲ್ಲ. ಏನೇ ಆಗಲಿ ಅಂಥಾಃ ಅರ್ಥವಿವರಣೆಗೆ ಯಾವುದೇ ಅಧಿಕಾರವಾಗಲೀ ಕಾರಣವಾಗಲೀ ಇರುವುದಿಲ್ಲ. ಇದು ಕೀರ್ತನೆ 8:5ರ ಉಕ್ತಿಯಿಂದ ಉಂಟಾಗುವ ಪ್ರಶ್ನೆಯಾಗಿದೆ ಮತ್ತು ಇಬ್ರಿಯ ಹಾಗೂ ಗ್ರೀಕ್ ವಾಕ್ಯಗಳ ವಿಮರ್ಶಾತ್ಮಕವಾದ ಹೋಲಿಕೆಯಾಗಿದ್ದು ಅರ್ಥಸೂಚನೆಗೆ ಯಾವುದೇ ಅನುಮಾನವನ್ನು ಬಿಟ್ಟುಕೊಡುವುದಿಲ್ಲ. ಇದರ ಉದ್ದೇಶ ಸ್ಪಷ್ಟವಾಗಿ ಹೇಳಿರುವಂತೆ ದೇವದೂತರುಗಳಿಗಿಂತ ಸ್ವಲ್ಪವೇ ಕಡಿಮೆ ಮಟ್ಟದ್ದು .

ದಾವೀದನು ತನ್ನ ಕೀರ್ತನೆಯಲ್ಲಿ, ಮಾನವನನ್ನು ತನ್ನ ಮೂಲ ಸ್ಥಿತಿಯಲ್ಲಿ ಉಲ್ಲೇಖಿಸುತ್ತಾನೆ ಮತ್ತು ದೇವರು ಮಾನವನನ್ನು ತನ್ನ ಸ್ವರೂಪದಲ್ಲಿ, ಭೂಲೋಕದ ಅರಸನನ್ನಾಗಿ ಉಂಟುಮಾಡುವ ತನ್ನ ಮೂಲ ಯೋಜನೆಯನ್ನು ಕೈಬಿಟ್ಟಿಲ್ಲ ಮತ್ತು ಆತನನ್ನು ನೆನಪು ಮಾಡಿಕೊಳ್ಳುತ್ತಾನೆ, ವಿಮೋಚಿಸುತ್ತಾನೆ ಮತ್ತು ಅದರ ಸ್ಥಿತಿಗೆ ಪುನರ್‌ವಶಗೊಳಿಸುತ್ತಾನೆ ಎಂದು ಪ್ರವಾದನೀಯವಾಗಿ ತಿಳಿಸುವವನಾಗಿದ್ದಾನೆ. ಅಪೋಸ್ತಲನು ಇಬ್ರಿಯ 2:7ರಲ್ಲಿ ಅದೇ ಸತ್ಯಕ್ಕೆ ಅಂದರೆ ದೇವರ ಮೂಲ ಉದ್ದೇಶವನ್ನು ಕೈಬಿಡಲಾಗಿಲ್ಲ ಎಂಬುದಕ್ಕೆ ಗಮನವನ್ನು ಸೆಳೆಯುತ್ತಾನೆ. ಮಾನವನು ಮೂಲತಃ ಭವ್ಯನೂ, ಸರ್ವಸಂಪೂರ್ಣನೂ, ಭೂಲೋಕದ ಅರಸನೂ ಆಗಿದ್ದನು ಎಂಬುದನ್ನು ನೆನಪುಮಾಡಿಕೊಳ್ಳಬೇಕು ಮತ್ತು ಸಂಧಿಸಬೇಕು ಮತ್ತು ಪುನರ್‌ವಶಪಡಿಸಬೇಕು. ನಂತರದಲ್ಲಿ ಆತನು – ನಾವು ಈ ವಾಗ್ದಾನಪಡಿಸಿದ ಪುನರ್‌ವಶವನ್ನು ಇನ್ನೂ ಕಂಡಿಲ್ಲ, ಆದರೆ ದೇವರು ಇದರ ನೆರವೇರಿಕೆಯ ದೆಸೆಯಲ್ಲಿ ತೆಗೆದುಕೊಂಡಿರುವ ಮೊದಲನೆಯ ಹೆಜ್ಜೆಯನ್ನು ಕಾಣುತ್ತೇವೆ, ಎಂದು ಮತ್ತೂ ಸೇರಿಸುತ್ತಾನೆ. ಯೇಸು ಸರ್ವಸಂಪೂರ್ಣ ಪುರುಷತ್ವದ ಮಹಿಮೆ, ಗೌರವಗಳಿಂದ ಕಿರೀಟ ಹೊಂದಿರುವುದನ್ನು ಮತ್ತು ಆತನು ಸಮರ್ಪಕವಾದ ಬದಲಿ ಅಥವಾ ಈಡುಬಲಿಯಾಗಿದ್ದಾನೆ ಎಂಬುದನ್ನು, ದೇವರ ದಯೆಯಿಂದ ಎಲ್ಲಾ ಮನುಷ್ಯರಿಗೋಸ್ಕರ ಮರಣವನ್ನು ಅನುಭವಿಸಿದ್ದಾನೆ ಮತ್ತು ಆ ರೀತಿಯಲ್ಲಿ ಎಲ್ಲವನ್ನೂ ಕಳೆದುಕೊಂಡ ಮಾನವರಿಗೆಲ್ಲಾ ಪುನರ್‌ವಶದ ಮಾರ್ಗವನ್ನು ಸಿದ್ಧಪಡಿಸಿದ್ದಾನೆ ಎಂಬುದನ್ನು ನಾವು ನೋಡುತ್ತೇವೆ. ಅತ್ಯಂತ ನಿಷ್ಠಾವಂತ ಭಾಷಾಂತರಕಾರರಾದ ರೋಥರ್‌ಹ್ಯಾಮ್ (Rotherham) ಎಂಬುವವರು ಈ ವಾಕ್ಯಭಾಗವನ್ನು ಈ ರೀತಿಯಾಗಿ ಭಾಷಾಂತರಿಸಿದ್ದಾರೆ:–

" What is man, that thou rememberest him ;
or man's son, that though visitest him?
Thou madest him less some little than messengers :
With glory and honor thou crownedest him,
And didst appoint him over the works of thy hands"

ಮನುಷ್ಯನು ಅಥವಾ ಮನುಷ್ಯ ಪುತ್ರನು ಎಷ್ಟು ಮಾತ್ರದವನು, ಅವನನ್ನು ನೀನು ಏಕೆ ನೆನೆಸಬೇಕು?
ಮಾನವನು ಎಷ್ಟರವನು, ಅವನಲ್ಲಿ ಯಾಕೆ ಲಕ್ಷ್ಯವಿಡಬೇಕು ?
ಅವನನ್ನು ದೇವದೂತರಿಗಿಂತ ಸ್ವಲ್ಪವೇ ಕಡಿಮೆಯಾಗಿ ಮಾಡಿದೆಯಲ್ಲಾ;
ಪ್ರಭಾವವನ್ನು ಮಾನವನ್ನೂ ಅವನಿಗೆ ಕಿರೀಟವಾಗಿ ಇಟ್ಟಿ.

ಅಲ್ಲದೆ ಶ್ರೇಣಿಯಲ್ಲಿ ಸ್ವಲ್ಪವೇ ಕಡಿಮೆಯೆಂದರೆ ಸ್ವಲ್ಪ ಕಡಿಮೆ ಪರಿಪೂರ್ಣವಾಗಿರುವುದು ಎಂದು ಭಾವಿಸಬಾರದು. ಒಂದು ಸೃಷ್ಟಿಯು ಪರಿಪೂರ್ಣವಾಗಿ ದ್ದಿರಬಹುದು, ಆದಾಗ್ಯೂ ಮತ್ತೊಂದಕ್ಕಿಂತ ಸ್ವಲ್ಪ ಕೆಳಮಟ್ಟದಲ್ಲಿರುವುದು ಎಂದರ್ಥ. ಹೀಗಾಗಿ, ಒಂದು ಪರಿಪೂರ್ಣವಾದ ಕುದುರೆಯು ಪರಿಪೂರ್ಣವಾದ ಮನುಷ್ಯನಿಗಿಂದ ಕೆಳಮಟ್ಟದ್ದಾಗಿದೆ ಮುಂತಾಗಿ. ಸಜೀವ ಮತ್ತು ನಿರ್ಜೀವವಾದವುಗಳಲ್ಲೂ ಹಲವಾರು ರೀತಿಯ ಸ್ವಭಾವಗಳಿರುತ್ತವೆ. ಇದನ್ನು ವಿಶದಗೊಳಿಸುವಂತೆ ನಾವು ಕೆಳಗಣ ಪಟ್ಟಿಯನ್ನು ನೀಡುತ್ತಿದ್ದೇವೆ :–

| ಪರಲೋಕ ದರ್ಜೆಯ ಆತ್ಮೀಕ ಜೀವಿಗಳು | ಭೂಲೋಕದ ಶ್ರೇಣಿಗಳು ಅಥವಾ ಪ್ರಾಣಿ ಸಂಕುಲ | ಸಸ್ಯ ಸಾಮ್ರಾಜ್ಯದ ಶ್ರೇಣಿಗಳು | ಖನಿಜ ಸಾಮ್ರಾಜ್ಯದ ಶ್ರೇಣಿಗಳು |
|---|---|---|---|
| ದೈವಿಕ | ಮಾನವಜೀವಿ | ಮರಗಳು | ಬಂಗಾರ |
| –––– | ಪಶುಗಳು | ಪೊದೆಗಳು | ಬೆಳ್ಳಿ |
| –––– | ಪಕ್ಷಿಗಳು | ಹುಲ್ಲುಗಳು | ತಾಮ್ರ |
| ದೇವದೂತ ವರ್ಗ | ಮೀನುಗಳು | ಪಾಚಿಗಳು | ಕಬ್ಬಿಣ |

ಮೇಲೆ ಪ್ರಸ್ತಾಪಿಸಿರುವ ಪ್ರತಿಯೊಂದು ಖನಿಜವೂ ಶುದ್ಧವಾಗಿರಬಹುದು, ಆದಾಗ್ಯೂ ಬಂಗಾರವು ಅತ್ಯುನ್ನತ ಸ್ಥಾನದಲ್ಲಿದೆ. ಸಸ್ಯಗಳ ಪ್ರತಿಯೊಂದು ವರ್ಗವನ್ನೂ ಪರಿಪೂರ್ಣತೆಗೆ ತರಬೇಕಾಗಿರುವುದಾದರೂ ಅವುಗಳು ತಮ್ಮ ಸ್ವಭಾವ ಮತ್ತು ಶ್ರೇಣಿಯಲ್ಲಿ ಇನ್ನೂ ವಿಭಿನ್ನವಾಗಿವೆ. ಅದರಂತೆ ಪ್ರಾಣಿವರ್ಗದಲ್ಲಿಯೂ ಪ್ರತಿಯೊಂದು ಜಾತಿಯದನ್ನು ಪರಿಪೂರ್ಣತೆಗೆ ತರಬೇಕಾಗಿದೆಯಾದರೂ ಆಗಲೂ ಇನ್ನೂ ವೈವಿಧ್ಯಗಳಿರುತ್ತವೆ; ಸ್ವಭಾವವನ್ನು ಪರಿಪೂರ್ಣ ಗೊಳಿಸುವುದರಿಂದ ಆ ಸ್ವಭಾವವು ಬದಲಾಗದು*, ಆತ್ಮೀಕ ಜೀವಿಗಳ ಶ್ರೇಣಿಯಲ್ಲಿಯೂ ಸಹ, ಪರಿಪೂರ್ಣತೆ ಯುಳ್ಳವರಾಗಿದ್ದರೂ ಒಂದಕ್ಕೊಂದು ಉತ್ತಮ ಮತ್ತು ಕೆಳಗಿನ ಸ್ವಭಾವ ಅಥವಾ ಪ್ರಕೃತಿಯಾಗಿರುತ್ತದೆ. ಅವು ಸಮರ್ಪಕವಾಗಿದ್ದರೂ, ಸ್ವಭಾವದಲ್ಲಿ, ಜಾತಿಯಲ್ಲಿ ಒಂದಕ್ಕೊಂದು ಹೆಚ್ಚು ಕಡಿಮೆಯಾಗಿ ಕಂಡುಬರುತ್ತವೆ. ದೈವಿಕ ಸ್ವಭಾವವು ಎಲ್ಲಾ ಆತ್ಮೀಕ ಜೀವಿಗಳ ಅತ್ಯಂತ ಶ್ರೇಷ್ಟ ಮತ್ತು ಉನ್ನತವಾದುದು. ಕ್ರಿಸ್ತನು ತನ್ನ ಪುನರುತ್ಥಾನದಲ್ಲಿ ಎಲ್ಲಾ ಪರಿಪೂರ್ಣ ದೇವದೂತರುಗಳಿಗಿಂತಲೂ ಬಹಳ ಹೆಚ್ಚಾಗಿ ದೇವದೂತರ ಸ್ವಭಾವಕ್ಕಿಂತಲೂ ಶ್ರೇಷ್ಟ ಸ್ವಭಾವವುಳ್ಳ ವನಾಗಿ ಮಾಡಲ್ಪಟ್ಟನು (ಇಬ್ರಿಯ 1:3–5).

ಮೇಲಿನ ಪಟ್ಟಿಯಲ್ಲಿ ಹೆಸರಿಸಲಾದ ವರ್ಗಗಳು ಅವುಗಳು ವಿಭಿನ್ನ ಹಾಗೂ ಪ್ರತ್ಯೇಕವಾದವುಗಳೂ ಆಗಿವೆ ಎಂಬುದನ್ನು ಜಾಗರೂಕತೆಯಿಂದ ಗಮನಿಸಿರಿ. ಆದಾಗ್ಯೂ ಅವುಗಳ ನಡುವೆ ಹೋಲಿಕೆಯನ್ನು ಆ ರೀತಿಯಾಗಿ ಸ್ಥಾಪಿಸಲಾಗಿದೆ. ಖನಿಜಗಳ ಅತ್ಯುನ್ನತ ಮಟ್ಟವು ಕನಿಷ್ಟ ಮಟ್ಟದ ತರಕಾರಿಗಳಿಗಿಂತ (ಸಸ್ಯಕ್ಕಿಂತ) ಸ್ವಲ್ಪ ಕೆಳಮಟ್ಟದ್ದು ಯಾಕೆಂದರೆ ಸಸ್ಯಗಳಲ್ಲಿ ಜೀವವಿದೆ. ಅದರಂತೆ ಸಸ್ಯಗಳಲ್ಲಿನ ಶ್ರೇಷ್ಟ ಮಟ್ಟವು ಸಹ ಕೆಳಮಟ್ಟದ ಪ್ರಾಣಿ ಜೀವಿಗಳಿಗೆ ಸ್ವಲ್ಪ ಕಡಿಮೆಯದಾಗಿದೆ, ಯಾಕೆಂದರೆ ಪ್ರಾಣಿ ಜೀವಿಗಳು ಅದರ ಕೆಳಮಟ್ಟದಲ್ಲಿಯೂ ತನ್ನ ಅಸ್ಥಿತ್ವದ ಬಗ್ಗೆ ಸಾಕಷ್ಟು ಪರಿಜ್ಞಾನವುಳ್ಳದ್ದಾಗಿದೆ. ಅದೇ ರೀತಿಯಲ್ಲಿ ಮಾನವನು ಲೋಕದ ಎಲ್ಲಾ ಪ್ರಾಣಿಗಳಲ್ಲಿ ಅತ್ಯುನ್ನತನಾಗಿದ್ದರೂ, ದೇವದೂತರುಗಳಿಗಿಂತ ಸ್ವಲ್ಪ ಕೆಳಮಟ್ಟದವನಾಗಿದ್ದಾನೆ, ಯಾಕೆಂದರೆ ದೇವದೂತನು ಅತ್ಮೀಕವೂ, ಪರಲೋಕದ ಜೀವಿಗಳೂ ಆಗಿವೆ.

ಈಗ ನಾವು ನೋಡುವ ಮನುಷ್ಯನು ಪಾಪದಿಂದ ಬಿದ್ದುಹೋಗಿರುವವನಾಗಿದ್ದು ದೇವರು ತನ್ನ ಸ್ವರೂಪದಲ್ಲಿ ಉಂಟು ಮಾಡಿದ ಪರಿಪೂರ್ಣ ಮನುಷ್ಯ ಆಶ್ಚರ್ಯಕರವಾದ ಭಿನ್ನತೆಯುಳ್ಳವನಾಗಿದ್ದಾನೆ. ಪಾಪವು ಕ್ರಮೇಣವಾಗಿ ಆತನ ಲಕ್ಷಣಗಳನ್ನು, ಮಾತ್ರವಲ್ಲದೆ ಆತನ

* ಸ್ವಭಾವ ಎಂಬುದನ್ನು ಕೆಲವೊಮ್ಮೆ ಹೊಂದಾಣಿಕೆಯ ಅರ್ಥದಲ್ಲಿ ಉಪಯೋಗಿಸಲಾಗುತ್ತದೆ. ಉದಾಹರಣೆಗೆ, ನಾಯಿಯು ಅನಾಗರೀಕ ಸ್ವಭಾವವನ್ನು ಹೊಂದಿದೆ ಎಂಬ ಅರ್ಥದಲ್ಲಿ, ಅಥವಾ ಕುದುರೆಯು ಸೌಮ್ಯ ಸ್ವಭಾವವುಳ್ಳದ್ದಾಗಿದೆ ಅಥವಾ ಕೆಟ್ಟ ಸ್ವಭಾವ ಹೊಂದಿದೆ ಎಂದು ಹೇಳುವಾಗ, ಆದರೆ ಈ ಶಬ್ದದ ಬಳಕೆಯಲ್ಲಿ ಅದು ಇತರೆ ಒಂದಕ್ಕೊಂದನ್ನು ಹೋಲಿಸಿ ವಿವರಿಸುವಾಗ ಕೇವಲ ಪ್ರಾಕೃತಿಕ ಸ್ವಭಾವವನ್ನು ಸೂಚಿಸುತ್ತದೆ ಮತ್ತು ಪ್ರಕೃತಿಯ ಬಗ್ಗೆ ಸಂಬಂಧಿಸುವುದಿಲ್ಲ ಎಂದು ಕಟ್ಟುನಿಟ್ಟಾಗಿ ಹೇಳಬಹುದು

ಗುಣ ನಡತೆಗಳನ್ನು ಬದಲಾಯಿಸಿದೆ. ಬಹುಸಂಖ್ಯೆಯಾಗಿರುವ ತಲೆಮಾರುಗಳು ತನ್ನ ತಿಳಿಗೇಡಿತನದಿಂದಲೂ, ಸ್ವೇಚ್ಛಾಚಾರ ಮತ್ತು ಸಾಮಾನ್ಯವಾದ ನೀತಿಭ್ರಷ್ಟತೆಯ ಕಾರಣದಿಂದಲೂ ಮಾನವೀಯತೆಯನ್ನು ಎಷ್ಟು ಮಂಕುಗೊಳಿಸಿದೆಯೆಂದರೆ ಹೆಚ್ಚಿನ ಜನಾಂಗಗಳಲ್ಲಿ ದೇವರ ಹೋಲಿಕೆಯು ಬಹುತೇಕ ಅಳಿಸಿಹೋಗಿದೆ ಮತ್ತು ಬಹುಮಟ್ಟಿಗೆ ನಿರ್ನಾಮಗೊಳಿಸಿದೆ. ನೈತಿಕ ಮತ್ತು ಬೌದ್ಧಿಕ ಸ್ವಭಾವಗಳು ಕುಬ್ಜವಾಗಿವೆ ಮತ್ತು ಪ್ರಾಣಿ ಸಹಜ ಪ್ರವೃತ್ತಿಗಳು ಅನಗತ್ಯವಾಗಿ ಬೆಳೆಯುತ್ತಿವೆ. ಅದನ್ನು ಉತ್ತಮವಾದವುಗಳೊಂದಿಗೆ ಸಮತೂಗಿಸಲು ಇನ್ನು ಮುಂದೆ ಸಾಧ್ಯವಾಗದು. ಎಲ್ಲಾ ವೈದ್ಯಕೀಯ ವಿಜ್ಞಾನದ ಸಹಾಯದ ಹೊರತಾಗಿಯೂ ಮಾನವರ ಸರಾಸರಿ ಆಯಸ್ಸು ಈಗ ಮೂವತ್ತೈದು ಮಾತ್ರವೇ ಆಗಿದೆ. ಮನುಷ್ಯನು ತನ್ನ ದೈಹಿಕ ಶಕ್ತಿಯನ್ನು ಅಷ್ಟರಮಟ್ಟಿಗೆ ಕಳಕೊಂಡಿದ್ದಾನೆ. ಆದರೆ ಮೊದಲಿಗೆ ಆತನು ಅದೇ ದಂಡನೆಯಲ್ಲಿರುವಾಗಲೂ ಒಂಬೈನೂರಾ ಮೂವತ್ತು ವರ್ಷಗಳ ಕಾಲ ಬದುಕಿದ್ದನು.

ಈ ರೀತಿಯಲ್ಲಿ ಪಾಪದಿಂದ ಮತ್ತು ಅದರ ದಂಡನೆಯಿಂದ ಆತನು ಕಲುಷಿತನೂ, ಹೀನೈಸಲ್ಪಟ್ಟವನೂ ಆಗಿ ಆತನಲ್ಲಿ ಮರಣವು ತನ್ನ ಕಾರ್ಯವನ್ನು ಎಸಗುತ್ತಿದ್ದರೂ, ಆತನನ್ನು ಪೂರ್ವದ ಮಾನಸಿಕ ಮತ್ತು ದೈಹಿಕ ಪರಿಪೂರ್ಣತೆಗೆ ಮತ್ತು ಮಹಿಮೆಯ, ಗೌರವದ, ದೊರೆತನಕ್ಕೆ ಕ್ರಿಸ್ತನ ಸಹಸ್ರವರ್ಷದ ಆಳ್ವಿಕೆಯಲ್ಲಿ ಆತನಿಂದ ಪುನರ್ ವಶಪಡಿಸಬೇಕಾಗಿದೆ. ಕ್ರಿಸ್ತನಿಂದ ಮತ್ತು ಆತನ ಮೂಲಕವಾಗಿ ಪುನರ್‌ಸ್ಥಾಪಿಸಬೇಕಾದ ಸಂಗತಿಗಳು ಆದಾಮನು ತನ್ನ ಅವಿಧೇಯತೆಯಿಂದ ಕಳಕೊಂಡ ಸಂಗತಿಗಳೇ ಆಗಿವೆ (ರೋಮಾ. 5:18,19). ಮಾನವನು ಪರಲೋಕದ ಪರದೈಸನ್ನಲ್ಲ, ಭೂಲೋಕದ ಪರದೈಸನ್ನು ಕಳಕೊಂಡನು. ಮರಣವೆಂಬ ದಂಡನೆಯಲ್ಲಿ, ಆತನು ಆತ್ಮೀಕ ಅಸ್ತಿತ್ವನ್ನು ಕಳಕೊಳ್ಳದೆ ಮಾನವ ಅಸ್ತಿತ್ವವನ್ನು ಮಾತ್ರವೇ ಕಳಕೊಂಡನು; ಆತನು ಕಳಕೊಂಡದ್ದೆಲ್ಲವನ್ನೂ ವಿಮೋಚಕನು ಪುನಃ ಕೊಂಡುಕೊಂಡನು, ಮತ್ತು ಮನುಷ್ಯಕುಮಾರನು ಕೆಟ್ಟುಹೋಗಿರುವುದನ್ನು ಹುಡುಕಿ ರಕ್ಷಿಸುವುದಕ್ಕೆ ಬಂದವನು ಎಂದು ಸಾರಿ ತಿಳಿಸಿದನು (ಲೂಕ 19:10).

ಮೇಲಿನವುಗಳೊಂದಿಗೆ, ಸರ್ವಸಮರ್ಪಕನಾದ ಮನುಷ್ಯನೆಂದರೆ ಆತ್ಮೀಕ ಮನುಷ್ಯನಲ್ಲ ಎಂಬುದಕ್ಕೆ ನಮ್ಮ ಬಳಿ ಸಾಕ್ಷಿಗಳಿವೆ. ನಮ್ಮ ಕರ್ತನು ತನ್ನ ಮಹಿಮೆಯನ್ನು ಬಿಟ್ಟು ಮಾನವನಾಗುವ ಮೊದಲು, "ದೈವ ಸ್ವರೂಪ"ದಲ್ಲಿ ಅಂದರೆ ಆತ್ಮೀಕ ಸ್ವರೂಪದಲ್ಲಿ ಆತ್ಮೀಕ ಜೀವಿಯಾಗಿ ಇದ್ದನು ಎಂದು ನಮಗೆ ತಿಳಿಸಲ್ಪಟ್ಟಿದೆ. ಆದರೆ ಆತನು ಮನುಷ್ಯರ ಕುಲಕ್ಕೆ ಈಡುಬಲಿಯಾಗಬೇಕಾದುದರಿಂದ ಮನುಷ್ಯನಾಗಬೇಕಾಗಿತ್ತು. ಸಾವಿಗೆ ಬದಲಿಯಾಗುವಂತೆ ಪಾಪಿಯಂಥಾಃ ಸ್ವಭಾವವನ್ನು ಆತನು ಬದಲಾಯಿಸಿಕೊಳ್ಳಬೇಕಾದ ಅಗತ್ಯತೆಯುಂಟಾಯಿತು. ಪೌಲನು ಹೇಳುವಂತೆ ಆತನು ತನ್ನ ಸ್ಥಿತಿಗಿಂತ ಒಂದು ಹಂತದ ಕೆಳಗಿನ ದೇವದೂತರ ಸ್ವಭಾವವನ್ನ ತೆಗೆದುಕೊಳ್ಳಲಿಲ್ಲ. ಆದರೆ ಆತನು ಎರಡು ಹಂತಗಳನ್ನು ಇಳಿದು ಮಾನವ ಸ್ವಭಾವವನ್ನು ಧರಿಸಿಕೊಂಡನು – ಮಾನವನಾದನು; ಆತನು ಮಾಂಸಧಾರಿಯಾದನು – (ಇಬ್ರಿಯ 2:15; ಫಿಲಿಪ್ಪಿ 2:7,8; ಯೋಹಾನ 1:14)

ದೇವದೂತರ ಸ್ವಭಾವವು ಮಾತ್ರವೇ ಆತ್ಮೀಕ ಜೀವಿಯ ಕ್ರಮವಲ್ಲ, ಆದರೆ ಅದು ನಮ್ಮ ಕರ್ತನು ಮಾನವನಾಗುವ ಮೊದಲು ಇದ್ದ ಸ್ಥಿತಿಗಿಂತಲೂ ಕೆಳಗಿನ ಸ್ಥಿತಿಯಾಗಿದೆ ಎಂಬುದನ್ನು ಬೋಧಿಸುತ್ತದೆ ಎಂದು ನಾವು ಗಮನಿಸಬೇಕಾಗುತ್ತದೆ. ಆಗ ಆತನು ಈಗಿರುವದಕ್ಕಿಂತ ಉತ್ತಮನಾಗಿರಲಿಲ್ಲ, ಆದರೆ ಆತನು "ತನ್ನನ್ನು ತಗ್ಗಿಸಿಕೊಂಡು ಮರಣವನ್ನು ಅಂದರೆ ಶಿಲುಬೆಯ ಮರಣವನ್ನಾದರೂ ಹೊಂದುವಷ್ಟು ವಿಧೇಯನಾದನು. ಈ ಕಾರಣದಿಂದ ದೇವರು ಆತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿ ಹೆಸರುಗಳಿಗಿಂತ ಶ್ರೇಷ್ಟವಾದ ಹೆಸರನ್ನು ಆತನಿಗೆ ದಯಪಾಲಿಸಿದ್ದಾನೆ" (ಫಿಲಿಪ್ಪಿ 2:8,9). ಈಗ ಆತನು ಆತ್ಮೀಕ ಸ್ವಭಾವದ ಅತ್ಯುನ್ನತ ಕ್ರಮದಲ್ಲಿದ್ದಾನೆ, ಯೆಹೋವನ ದೈವಿಕ ಸ್ವಭಾವದಲ್ಲಿ ಪಾಲುದಾರನಾಗಿದ್ದಾನೆ.

ಆದರೆ ದೈವಿಕ ಎಂಬುದು ದೇವದೂತರ ಮತ್ತು ಮಾನವರ ಸ್ವಭಾವಗಳು ಪ್ರತ್ಯೇಕ ಮತ್ತು ವಿಶಿಷ್ಟವಾದವುಗಳು ಎಂಬುದಾಗಿ ನಮಗೆ ಈ ರೀತಿಯಲ್ಲಿ ರುಜುವಾತಾಗುವುದು ಮಾತ್ರವಲ್ಲದೆ ಒಬ್ಬನು ಪರಿಪೂರ್ಣ ಮಾನವನಾಗಬೇಕಾದರೆ ದೇವದೂತನಂತಾಗಬೇಕಾಗಿಲ್ಲ. ಹೇಗೆಂದರೆ ದೇವದೂತರ ಪರಿಪೂರ್ಣವಾದ ಸ್ವಭಾವದಿಂದಾಗಿ ದೇವದೂತರು ದೈವಿಕರೂ ಮತ್ತು ಯೆಹೋವನ ಸಮಾನವಾದ ಸ್ವಭಾವವನ್ನು ಹೊಂದಿದವರು ಎಂಬ ಅಭಿಪ್ರಾಯವನ್ನುಂಟುಮಾಡುತ್ತದೆ. ಹೀಗಾಗಿ ಯೇಸು ದೇವದೂತರ ಸ್ವಭಾವವನ್ನು ತೆಗೆದುಕೊಳ್ಳದೇ, ಪ್ರತ್ಯೇಕವಾದ ಸ್ವಭಾವವನ್ನು, ಮಾನವ ಸ್ವಭಾವವನ್ನು ಹೊಂದಿಕೊಂಡನು. ಆದರೆ ನಾವು ಹೊಂದಿರುವ ಅಪರಿಪೂರ್ಣ ಮಾನವ ಸ್ವಭಾವವನ್ನಲ್ಲ, ಆದರೆ

ಸಂಪೂರ್ಣ ಪರಿಪೂರ್ಣನಾದ ಮಾನವ ಸ್ವಭಾವವನ್ನು ಪಡೆದನು. ಆತನು ಮನುಷ್ಯನಾದನು; ಮನುಷ್ಯನು ಈಗ ಇರುವಂತ ಭ್ರಷ್ಟ ಮತ್ತು ಬಹುತೇಕ ಸತ್ತವರಿಗೆ ಸಮಾನವಾಗಿರುವ ಸ್ಥಿತಿಯಲ್ಲಿ ಅಲ್ಲ. ಆದರೆ ಸರ್ವಸಂಪೂರ್ಣತೆಯು ಪರಿಪೂರ್ಣ ಓಜಸ್ಸುಳ್ಳವನಾಗಿರುವ ವ್ಯಕ್ತಿಯಾಗಿ.

ಪುನಃ, ಯೇಸು ಒಬ್ಬ ಸರ್ವಸಂಪೂರ್ಣನಾಗಿದ್ದಿರ ಬೇಕು. ಇಲ್ಲವಾಗಿದ್ದರೆ ಆತನು ನಿಬಂಧನೆಗಳನ್ನು ಅಷ್ಟು ಸಮರ್ಪಕವಾಗಿ ಪಾಲಿಸಲು ಆಗುತ್ತಿದ್ದಿಲ್ಲ. ಅದು ಸಮರ್ಪಖ ವ್ಯಕ್ತಿಯ ಪೂರ್ಣ ಸಾಮರ್ಥ್ಯದ ಪ್ರವಾಣದ್ದಾಗಿರುತ್ತದೆ. ಮತ್ತು ಆತನೊಬ್ಬ ಪರಿಪೂರ್ಣನಾದ ವ್ಯಕ್ತಿಯಾಗಿದ್ದಿರಬೇಕು. ಇಲ್ಲವಾಗಿದ್ದರೆ ಆತನು ಈಡುಬಲಿಯನ್ನು ಕೊಡಲಾಗುತ್ತಿರಲಿಲ್ಲ (ಅಂದರೆ ಅನುರೂಪವಾದ ಬೆಲೆ) (1 ತಿಮೋಥಿ 2:6). ಆದಾನು ಮುಟ್ಟುಗೋಲು ಹಾಕಿಕೊಂಡಿದ್ದ ಜೀವದ ವಿಮೋಚನಾರ್ಥ ನೀಡಬೇಕಾಗಿದ್ದನ್ನು ನೀಡಲು ಸಾಧ್ಯವಾಗುತ್ತಿದ್ದಿಲ್ಲ. "ಯಾವ ಪ್ರಕಾರ ಆದಾಮನ ಸಂಬಂಧದಿಂದ ಎಲ್ಲರೂ ಸಾಯುವವರಾದರೋ ಅದೇ ಪ್ರಕಾರ ಕ್ರಿಸ್ತನ ಸಂಬಂಧದಿಂಧ ಎಲ್ಲರೂ ಜೀವಿತರಾಗುವರು" (1 ಕೊರಿಂಥ 15:20). ಆತನು ಯಾವುದೋ ಅಲ್ಪ ಪ್ರಮಾಣದಲ್ಲಿ ಅಪರಿಪೂರ್ಣ ನಾಗಿದ್ದರೂ, ಅದು ಆತನ ಸಹ ದಂಡನೆಯಲ್ಲಿದ್ದಾನೆಂದು ಸಾಬೀತುಪಡಿಸುತ್ತಿತ್ತು ಮತ್ತು ಆತನದು ಅಂಗೀಕಾರಾರ್ಹ ಸಮರ್ಪಣೆ ಯಾಗುತ್ತಿರಲಿಲ್ಲ. ಅಲ್ಲದೇ ಆತನು ನಿಬಂಧನೆಗಳನ್ನು ಸಹಾ ಪರಿಪೂರ್ಣವಾಗಿ ಪಾಲಿಸಲು ಸಾಧ್ಯವಾಗುತ್ತಿದ್ದಿಲ್ಲ. ಒಬ್ಬ ಸರ್ವಸಂಪೂರ್ಣ ಮಾನವನನ್ನು ಪರೀಕ್ಷಿಸಲಾಯಿತು, ಆತನು ಸೋತು ಹೋದನು, ದಂಡನೆಗೊಳಗಾದನು. ಅದಕ್ಕೆ ಪ್ರತಿಯಾಗಿ ಮತ್ತೊಬ್ಬ ಪರಿಪೂರ್ಣ ವ್ಯಕ್ತಿಯು ಮಾತ್ರವೇ ವಿಮೋಚಕನಾಗಿ ಅನುಗುಣವಾದ ಕ್ರಯವನ್ನು ತೆರಲು ಸಾಧ್ಯ.

ಈಗ ನಮ್ಮ ಮುಂದೆ ಬೇರೆ ರೂಪದಲ್ಲಿ ಒಂದು ಸೊಗಸಾದ ಪ್ರಶ್ನೆ ಇದೆ; ಪವಿತ್ರ ಗ್ರಂಥವು ತೋರಿಸುವಂತೆ ಯೇಸು ಮಾಂಸಧಾರಿಯಾಗಿ ದೇವದೂತರಿಗಿಂತ ಸ್ವಲ್ಪವೇ ಕಡಿಮೆಯಾಗಿ ಒಬ್ಬ ಪರಿಪೂರ್ಣ ವ್ಯಕ್ತಿಯಾಗುವುದಾದರೆ, ಪರಿಪೂರ್ಣ ವ್ಯಕ್ತಿಯು ಒಬ್ಬ ಮಾಂಸಧಾರಿ ಮನುಷ್ಯನು – ಒಬ್ಬ ದೇವದೂತನಲ್ಲ ದೇವದೂತರಿಗಿಂತ ಸ್ವಲ್ಪವೇ ಕಡಿಮೆಯಾಗಿ ಎಂದು ಸಾಬೀತುಪಡಿಸುವುದಿಲ್ಲವೋ? ಈ ತಾರ್ಕಿಕ ಊಹನೆಯು ತಪ್ಪಲ್ಲ ಮತ್ತು ಇದರೊಂದಿಗೆ ನಮಗೆ ಕೀರ್ತನೆಯ (ಕೀರ್ತನೆ 8:5–8) ಮತ್ತು ಇಬ್ರಿಯ ಪತ್ರಿಕೆ 2:7–9ರಲ್ಲಿ ಅದಕ್ಕೆ ಪೌಲನ ಉಲ್ಲೇಖವಾದ ಸ್ಫೂರ್ತಿದಾಯಕ ಹೇಳಿಕೆಗಳಿವೆ.

ಯೇಸು ಮಾನವ ಮತ್ತು ದೈವಿಕ ಈ ಎರಡೂ ಸ್ವಭಾವಗಳ ಒಟ್ಟುಗೂಡುವಿಕೆಯಲ್ಲ. ಈ ಎರಡೂ ಸ್ವಭಾವಗಳ ಮಿಶ್ರಣವು ಒಂದನ್ನಾಗಲೀ ಅಥವಾ ಮತ್ತೊಂದನ್ನಾಗಲೀ ಉತ್ಪಾಧಿಸುವುದಿಲ್ಲ, ಆದರೆ ಅಸಮರ್ಪಕವಾದ ಅಥವಾ ಅಸಂಪೂರ್ಣವಾದ ಬೆರಿಕೆಯೊಂದನ್ನು ಉತ್ಪಾದಿಸುತ್ತದೆ ಮತ್ತು ಅದು ದೈವಿಕ ವ್ಯವಸ್ಥೆಗಳಿಗೆ ಅಸಹ್ಯಕರ ಆಕ್ಷೇಪಣೀಯವಾಗಿರುತ್ತದೆ. ಯೇಸುಕ್ರಿಸ್ತನು ಮಾಂಸಧಾರಿಯಾಗಿದ್ದಾಗ, ಆತನು ಸರ್ವಸಂಪೂರ್ಣನಾದ ಮನುಷ್ಯನಾಗಿದ್ದನು. ಅದಕ್ಕಿಂತ ಮೊದಲು ಆತನು ಪರಿಪೂರ್ಣ ಆತ್ಮೀಕ ಜೀವಿಯಾ ಗಿದ್ದನು. ಮತ್ತು ಆತನ ಪುನರುತ್ಥಾನದಿಂದೀಚೆಗೆ ಆತನು ಅತ್ಯಂತ ಶ್ರೇಷ್ಠ ಅಥವಾ ದೈವಿಕ ಶ್ರೇಣಿಯ ಆತ್ಮೀಕ ಜೀವಿಯಾಗಿದ್ದಾನೆ. ಆತನ ದೀಕ್ಷಾಸ್ನಾನದ ಸಮಯದವರೆಗೆ ಮಾತ್ರವಲ್ಲ ಆತನ ಮರಣದವರೆಗೆ, – ಮೂವತ್ತು ವರ್ಷ ವಯಸ್ಸಿನಲ್ಲಿ (ಪುರುಷತ್ವ, ಧರ್ಮಶಾಸ್ತ್ರದ ಪ್ರಕಾರ, ಮತ್ತು ಆದ್ದರಿಂದ ತನ್ನನ್ನು ತಾನು ಮನುಷ್ಯನಾಗಿ ಪ್ರತಿಷ್ಠೆಗೊಳಿಸಲು ಸರಿಯಾದ ಸಮಯ) ನಡೆದ ಆತನ ದೀಕ್ಷಾಸ್ನಾನದಲ್ಲಿ ಸೂಚಿಸಿದಂತೆ ಆತನು ಮಾನವನಾಗಿಯೇ ಇದ್ದು ಆತನು ಅವನು ದೈವಿಕ ಸ್ವಭಾವದ ಆನುವಂಶಿಕತೆಯ ಶ್ರದ್ಧೆಯನ್ನು ಪಡೆದನು (ಮತ್ತಾಯ 3:16,17). ದೈವಿಕ ಸ್ವಭಾವದ ಪ್ರತಿಜ್ಞೆಯನ್ನು ಸಹ ಸ್ವೀಕರಿಸುವ ಮೊದಲು ಆತನು ತನ್ನ ಮಾನವ ಸ್ವಭಾವವನ್ನು ಮರಣಕ್ಕೆ ಪ್ರತಿಷ್ಠೆಗೊಳಿಸಬೇಕಿತ್ತು. ಆ ಪವಿತ್ರ ಪ್ರತಿಷ್ಠೆಯು ಪಾಲಿಸುವವರೆಗೆ ಮಾತ್ರ ಅವನು ನಿಜವಾಗಿಯೂ ತನ್ನ ಮಾನವ ಸ್ವಭಾವವನ್ನು ತ್ಯಾಗ ಮಾಡಿದ್ದಲ್ಲ, ಸಾವಿನವರೆಗೂ, ನಮ್ಮ ಕರ್ತನಾದ ಯೇಸು ಅದನ್ನು ತ್ಯಾಗಮಾಡಿ ದೈವಿಕ ಸ್ವಭಾವದ ಪೂರ್ಣ ಪಾಲುದಾರನಾದನು. ಆತನು ಮಾನವನಾಗಿ ಮರಣಪರ್ಯಂತ ವಿಧೇಯನಾಗಿದ್ದನು, ಆದುದರಿಂದ ದೇವರು ಆತನನ್ನು ತನ್ನ ಅತ್ಯುನ್ನತವಾದ ದೈವಿಕ ಸ್ಥಾನಕ್ಕೆ ಏರಿಸಿದನು (ಫಿಲಿಪ್ಪಿ 2:8,9). ಈ ಪರಿಶುದ್ಧ ವಚನವು ಸತ್ಯವಾಗಿದ್ದರೆ, ಆತನು ತನ್ನ ಮಾನವ ಸ್ವಭಾವವನ್ನು ತ್ಯಾಗಮಾಡುವವರೆಗೆ, ಅಂದರೆ ಮರಣದವರೆಗೆ ಆತನು ದೈವಿಕ ಸ್ಥಿತಿಗೆ ಏರಿಸಲ್ಪಡಲಿಲ್ಲ.

ಈ ರೀತಿಯಲ್ಲಿ ನಾವು ಕ್ರಿಸ್ತನಲ್ಲಿ ಪ್ರವೃತ್ತಿ/ಸ್ವಭಾವಗಳ ಮಿಶ್ರಣವಿರಲಿಲ್ಲ ಎಂಬುದನ್ನು ನೋಡುತ್ತೇವೆ. ಆದರೆ ಎರಡು ಬಾರಿ ಆತನು ಪ್ರವೃತ್ತಿ/ಸ್ವಭಾವದ ಬದಲಾವಣೆಯನ್ನು ಅನುಭವಿಸಿದನು. ಮೊದಲಿಗೆ ಆತ್ಮೀಕಜೀವಿಯಿಂದ ಮಾನವನಾಗಿ ಅನಂತರದಲ್ಲಿ

ಮಾನವನಿಂದ ದೈವೀಕ ಕರೆಯ ಅತ್ಯುನ್ನತ ಸ್ಥಾನಕ್ಕೇರಿದರು. ಪ್ರತಿಯೊಂದರಲ್ಲಿಯೂ ಒಂದನ್ನು ಮತ್ತೊಂದಕ್ಕೆ ಬಿಟ್ಟು ಕೊಡಬೇಕಾಯಿತು.

ಲೋಕದ ವಿಮೋಚನಾರ್ಥವಾಗಿ ತ್ಯಾಗವನ್ನರ್ಪಿಸು ವವರೆಗೂ ಈ ಲೋಕದ ಮುಂದೆ ನಿಷ್ಕಳಂಕವಾಗಿ ನಿಂತ ಸರ್ವಸಂಪೂರ್ಣವಾದ ಮಾನವತೆಯ ಈ ಭವ್ಯವಾದ ಉದಾಹರಣೆಯಲ್ಲಿ, ನಮ್ಮ ಸಂತತಿಯು ಆದಾಮನಲ್ಲಿ ಬಿದ್ದುಹೋದದ್ದರಿಂದ ಅದು ಪುನರ್‌ಸ್ಥಾಪನೆ ಗೊಳ್ಳುವವರೆಗೂ ಪರಿಪೂರ್ಣಗೊಳ್ಳುವುದನ್ನು ನಾವು ನೋಡುತ್ತೇವೆ. ಮಾನವನಿಗಾಗಿ ಈಡುಬಲಿಯಾಗಿ ಮಾನವನು ಕಳಕೊಂಡದ್ದನ್ನು ನಮ್ಮ ಕರ್ತನಾದ ಯೇಸುವು ಸರಿಸಮವಾದದ್ದನ್ನು ಕೊಟ್ಟನು. ಆದುದರಿಂದ ಕ್ರಿಸ್ತನ ಮೇಲಣ ನಂಬಿಕೆಯಿಂದ ಮತ್ತು ಆತನ ಅವಶ್ಯಕತೆಗಿರುವಷ್ಟು ವಿಧೇಯತೆಯಿಂದ ಆತ್ಮೀಕವಾದ ಸ್ವಭಾವವಲ್ಲ, ಆದರೆ ಕಳೆದುಕೊಂಡಿದ್ದ ಭವ್ಯವಾದ, ಪರಿಪೂರ್ಣವಾದ ಮಾನವ ಸ್ವಭಾವವನ್ನು ಎಲ್ಲಾ ಮಾನವರೂ "ಕಳಕೊಂಡದ್ದನ್ನು ಮತ್ತೆ ಪಡೆಯುವರು".

ಪರಿಪೂರ್ಣ ಮಾನವ ಜೀವಿಯ ಪರಿಪೂರ್ಣ ವಾದ ಸಾಮರ್ಥ್ಯಗಳು ಶಕ್ತಿ ಮತ್ತು ಬಲವನ್ನು ಅನಿರ್ದಿಷ್ಟವಾಗಿ ಹೊಸ ಮತ್ತು ಆಸಕ್ತಿಕರ ವಿವಿಧ ಸಂಗತಿಗಳ ಮೇಲೆ ಉಪಯೋಗಿಸಬಹುದು ಮತ್ತು ಜ್ಞಾನ ಮತ್ತು ಕೌಶಲ್ಯತೆಯನ್ನು ವ್ಯಾಪಕವಾಗಿ ಹೆಚ್ಚಿಸಬಹುದು. ಆದರೆ ಅಂಥಾಃ ಜ್ಞಾನ ಮತ್ತು ಶಕ್ತಿಯ ಹೆಚ್ಚಳವು ಪ್ರಕೃತಿ ಸ್ವಭಾವದ ಬದಲಾವಣೆಯ ಮೇಲೆ ಪರಿಣಾಮ ಬೀರುವುದಿಲ್ಲ ಅಥವಾ ಅದನ್ನು ಪರಿಪೂರ್ಣತೆಗಿಂತ ಹೆಚ್ಚಾಗಿ ಮಾಡುವುದಿಲ್ಲ. ಅದು ಸರ್ವಸಂಪೂರ್ಣವಾದ ಮಾನವ ಶಕ್ತಿಯ ವಿಸ್ತರಣೆ ಮಾತ್ರವೇ ಆಗಿರುತ್ತದೆ. ಜ್ಞಾನ ಮತ್ತು ಕೌಶಲ್ಯವು ನಿಸ್ಸಂದೇಹವಾಗಿ ಮಾನವನಿಗೆ ಎಲ್ಲಾ ನಿತ್ಯನಿರಂತತೆಗೂ ಆಶೀರ್ವಾದದ ಸವಲತ್ತು; ಆದಾಗ್ಯೂ ಆತನು ಇನ್ನೂ ಮಾನವನಾಗಿಯೇ ಇರುತ್ತಾನೆ. ಮತ್ತು ಈಗಾಗಲೇ ಹೊಂದಿರುವ ಮಾನವ ಸ್ವಭಾವದ ಶಕ್ತಿಯನ್ನು ಹೆಚ್ಚು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಲು ಮಾತ್ರ ಕಲಿಯುವವನಾಗಿದ್ದಾನೆ. ಆತನ ವಿಶಾಲವಾದ ಮಿತಿಯನ್ನು ಮೀರಿ ಆತನು ಮುಂದುವರೆಯಲು ಬಯಸುವಂತಿಲ್ಲ, ಅಥವಾ ಆತನು ಅಪೇಕ್ಷಿಸುವುದಿಲ್ಲ ಮತ್ತು ಆತನ ಆಕಾಂಕ್ಷೆಗಳನ್ನು ತನ್ನ ಶಕ್ತಿಯ ವ್ಯಾಪ್ತಿಗೆ ಸೀಮಿತಗೊಂಡಿರುತ್ತದೆ.

ಯೇಸುವು ಒಬ್ಬ ಮನುಷ್ಯನಾಗಿ ಸರ್ವ ಸಂಪೂರ್ಣವಾದ ಮಾನವ ಸ್ವಭಾವಕ್ಕೆ ಉತ್ತಮವಾದ ಉದಾಹರಣೆಯಾಗಿದ್ದನು, ಮತ್ತು ಆ ಸ್ವಭಾವಕ್ಕೆ ಮನುಕುಲದ ಜನಸಮೂಹವನ್ನು ಪುನರ್ ವಶಪಡಿಸಲಾಗುತ್ತದೆ, ಆದಾಗ್ಯೂ ಆತನ ಪುನರುತ್ಥಾನದ ನಂತರ ಆತನು ಭವ್ಯವಾದ ದೈವಿಕ ಸ್ವಭಾವದ ಉದಾಹರಣೆಯಾಗಿದ್ದಾನೆ ಮತ್ತು ಇದನ್ನು ಪುನರುತ್ಥಾನದಲ್ಲಿ ಜಯಹೊಂದುವ ಸಭೆಯು ಆತನೊಂದಿಗೆ ಭಾಗಿಯಾಗುತ್ತದೆ.

ಪ್ರಸ್ತುತ ಯುಗವು ಮುಖ್ಯವಾಗಿ ಈ ವರ್ಗದವರ ಅಭಿವೃದ್ಧಿಗೆ ಮೀಸಲಾಗಿರುವುದರಿಂದ ಸ್ವಭಾವದ ಬದಲಾವಣೆಯನ್ನು ನೀಡಿರುವುದರಿಂದ ಮತ್ತು ಅಪೋಸ್ತಲರ ಪತ್ರಿಕೆಗಳು ಈ 'ಚಿಕ್ಕಹಿಂಡಿ'ನ ದೃಷ್ಟಾಂತವಾಗಿ ನಿವೇದಿಸಲ್ಪಟ್ಟಿರುವುದರಿಂದ, ಈ ಆಯ್ಕೆಯಾದ ತಂಡವು ಪೂರ್ಣಗೊಳ್ಳುವುದರೊಂದಿಗೆ ದೇವರ ಯೋಜನೆಯು ಮುಕ್ತಾಯಗೊಳ್ಳುತ್ತದೆಂದು ನಿರ್ಣಯಿಸಲಾಗದು. ಮತ್ತೊಂದೆಡೆ ನಾವು ವಿರುದ್ಧವಾದ ತೀವ್ರತೆಗೆ ಹೋಗಬಾರದು ಮತ್ತು ದೈವಸ್ವಭಾವದ, ಆತ್ಮೀಕ ದೇಹಗಳು ಮುಂತಾದವುಗಳಿಗೆ ಮಾಡಿರುವ ವಿಶೇಷ ವಾಗ್ದಾನಗಳು ಮನುಕುಲದ ಎಲ್ಲರಿಗೂ ದೇವರ ಸಂಕಲ್ಪವಾಗಿದೆ ಎಂದು ಭಾವಿಸಬಾರದು. ಇವರುಗಳಿಗೆ (ಚಿಕ್ಕಹಿಂಡಿಗೆ) ಮನುಕುಲದ ಎಲ್ಲಾ ಮಾನವ ಜಾತಿಯವರಿಗೆ ಮಾಡಿರುವ ಅಮೂಲ್ಯವಾದ ವಾಗ್ದಾನಗಳಿಗಿಂತ "ಹೆಚ್ಚಿನ ಮತ್ತು ಉತ್ಕೃಷ್ಟ ವಾಗ್ದಾನಗಳಿವೆ". ಸತ್ಯವಾಕ್ಯವನ್ನು ಸರಿಯಾಗಿ ಬೋಧಿಸುವಂತೆ ಪರಿಶುದ್ಧ ಗ್ರಂಥಗಳು 'ಚಿಕ್ಕಹಿಂಡಿ'ನವರ ದೈವಿಕ ಸ್ವಭಾವದ ಸರ್ವಸಂಪೂರ್ಣತೆಯನ್ನು ಮತ್ತೂ ಪುನರ್‌ಸ್ಥಾಪಿಸಲಾದ ಲೋಕದಲ್ಲಿ ಮಾನವ ಸ್ವಭಾವದ ಪರಿಪೂರ್ಣತೆಯನ್ನು ಗ್ರಹಿಸುತ್ತದೆ ಎಂಬುದು ಎರಡೂ ಪ್ರತ್ಯೇಕವಾದ ಸಂಗತಿಗಳು ಎಂಬುದನ್ನು ನಾವು ಗುರುತಿಸಬೇಕು.

ನಾವೀಗ ಹೆಚ್ಚು ವಿಶಿಷ್ಟವಾಗಿ "ಆತ್ಮೀಕ ಜೀವಿಗಳೆಂದರೇನು?" "ಅವುಗಳ ಶಕ್ತಿಗಳೇನು" ಮತ್ತು "ಅವುಗಳು ಯಾವ ಕಟ್ಟಳೆಗಳಿಗೆ ಒಳಪಟ್ಟಿದೆ?" ಎಂಬುದನ್ನು ವಿಚಾರಿಸಬೇಕು. ಅನೇಕರಿಗೆ ಆತ್ಮೀಕ ಜೀವಿಗಳ ಸ್ವಭಾವವು ಅರ್ಥವಾಗದ ಕಾರಣ ಅವುಗಳ ಕಟ್ಟುಕಥೆಗಳೆಂದು ಭಾವಿಸುತ್ತಾರೆ. ಮತ್ತು ಈ ಪ್ರಸ್ತಾಪದ ಬಗ್ಗೆ ಮೂಢನಂಬಿಕೆಗಳು ಬಳಕೆಯಲ್ಲಿವೆ. ಆದರೆ ಪೌಲನಿಗೆ ಅಂಥಾಃ ಆಲೋಚನೆಗಳಿದ್ದಂತೆ ಕಂಡುಬರುವುದಿಲ್ಲ. ಆತನು ಮಾನವಜೀವಿಗಳು ಶ್ರೇಷ್ಟವಾದ ಆತ್ಮೀಕ ಸಂಗತಿಗಳನ್ನು ಅರ್ಥ ಮಾಡಿಕೊಳ್ಳಲಾರರು ಎಂಬುದಾಗಿ ತಿಳಿಸಿದಾಗ್ಯೂ (1 ಕೊರಿಂಥ 2:14) ಯಾವುದೇ ಕಟ್ಟುಕಥೆಯ ಅಥವಾ

ಮೂಢನಂಬಿಕೆಯ ಅಭಿಪ್ರಾಯಗಳ ವಿರುದ್ಧ ರಕ್ಷಿಸುವುದಕ್ಕಾಗಿ ಆತನು ಸರಳವಾಗಿ ಆತ್ಮೀಕ ದೇಹಗಳೂ ಮಾತ್ರವಲ್ಲದೆ ಸ್ವಾಭಾವಿಕ (ಮಾನವ) ದೇಹಗಳೂ, ಪರಲೋಕದ ಮತ್ತು ಭೂಮಿಯ ದೇಹಗಳು ಮತ್ತು ಭೂಲೋಕದ ಮತ್ತು ಪರಲೋಕದ ಮಹಿಮಾ ದೇಹಗಳು ಅವೆ ಎಂದು ಸ್ಪಷ್ಟವಾಗಿ ಹೇಳಿದ್ದಾನೆ. ಭೂಲೋಕದ ಮಹಿಮೆ, ನಾವು ಕಂಡುಕೊಂಡಂತೆ ಮೊದಲ ಆದಾಮನ ಪಾಪದ ನಿಮಿತ್ತ ಕಳೆದು ಹೋಯಿತು ಮತ್ತು ಅದು ಮಾನವಕುಲಕ್ಕೆ ಕರ್ತನಾದ ಯೇಸು ಮತ್ತು ಆತನ ಮದಲಗಿತ್ತಿಯ (ಶಿರಸ್ಸಾದ ಕ್ರಿಸ್ತನು ಮತ್ತು ಆತನ ದೇಹದ) ಮೂಲಕ ಸಹಸ್ರಮಾನ ಯುಗದಲ್ಲಿ ಪುನರ್‌ವಶಗೊಳ್ಳಬೇಕಾಗಿದೆ. ಪರಲೋಕದ ಮಹಿಮೆಯನ್ನು ಆತ್ಮನಿಂದ ವಾಕ್ಯದ ಮೂಲಕ ನಂಬಿಕೆಯ ಕಣ್ಣುಗಳಿಗೆ ಶೃತಪಡಿಸ ಲಾಗಿರುವುದನ್ನು ಹೊರತುಪಡಿಸಿ ಇನ್ನೂ ಕಾಣಲಾಗಿಲ್ಲ. ಈ ಮಹಿಮೆಗಳು ನಿಶ್ಚಿತವಾದವುಗಳು ಮತ್ತು ವಿಭಿನ್ನವಾದವುಗಳು (1 ಕೊರಿಂಥ 15: 38–49). ಸ್ವಾಭಾವಿಕವಾದ, ಲೌಕಿಕವಾದ, ಭೂಲೋಕದ ದೇಹಗಳು ಯಾವುವೆಂದು ನಮಗೆ ಸ್ವಲ್ಪ ಮಟ್ಟಿಗೆ ತಿಳಿದದೆ, ಯಾಕೆಂದರೆ ಈಗ ಅಂಥಹದನ್ನು ನಾವು ಹೊಂದಿದ್ದೇವೆ, ಆದರೂ ಅವುಗಳ ಪರಿಪೂರ್ಣ ಮಹಿಮೆಯನ್ನು ಅಂದಾಜಿಸಬಹುದು. ಅವು ಮಾಂಸ, ರಕ್ತ ಮತ್ತು ಮೂಳೆಗಳಿಂದ ಕೂಡಿದ್ದಾಗಿದೆ. "ಯಾಕೆಂದರೆ ದೇಹದಿಂದ ಹುಟ್ಟಿದ್ದು ದೇಹವೇ". ಅವುಗಳು ಎರಡು ವಿಭಿನ್ನ ರೀತಿಯ ದೇಹಗಳಾಗಿರುವುದರಿಂದ, ಆತ್ಮೀಕ ದೇಹ ಅದು ಏನೇ ಆಗಿರಲಿ ಅದು ಮಾಂಸ, ರಕ್ತ ಮತ್ತು ಮೂಳೆಗಳಿಂದ ಮಾಡಲ್ಪಟ್ಟದ್ದಲ್ಲ, ಅವುಗಳು ಪರಲೋಕಕ್ಕೆ ಸಂಬಂಧಪಟ್ಟಂತಹ ಆತ್ಮೀಕ ಶರೀರಗಳು – "ಆತ್ಮನಿಂದ ಹುಟ್ಟಿದ್ದು ಆತ್ಮವೇ". ಆದರೆ ಆತ್ಮೀಕ ದೇಹವೆಂದರೇನು ಎಂಬುದು ನಮಗೆ ತಿಳಿದಿಲ್ಲ, "ಈಗ ನಾವು ದೇವರ ಮಕ್ಕಳಾಗಿದ್ದೇವೆ; ಮುಂದೆ ನಾವು ಏನಾಗುವೆವೋ ಅದು ನಮಗೆ ಇನ್ನೂ ಪ್ರತ್ಯಕ್ಷ್ಯವಾಗಲಿಲ್ಲ. ಕ್ರಿಸ್ತನು ಪ್ರತ್ಯಕ್ಷನಾದರೆ ನಾವು ಆತನ ಹಾಗಿರುವೆಂದು ಬಲ್ಲೆವು" (ಯೋಹಾನ 3:6 ; 1 ಯೋಹಾನ 3:2).

ದೇವಕುಮಾರನನ್ನು ಹೊರತುಪಡಿಸಿ ಯಾವುದೇ ಆತ್ಮೀಕ ಅಥವಾ ಮಾನವ ಜೀವಿಯು, ಯಾವಾಗ ಲಾದರೂ ಒಂದು ಸ್ವಭಾವದಿಂದ ಮತ್ತೊಂದು ಸ್ವಭಾವಕ್ಕೆ ಬದಲಾದ ಬಗ್ಗೆ, ನಮಗೆ ಬೇರೆ ಯಾವುದೇ ದಾಖಲೆಗಳಿಲ್ಲ. ಮತ್ತು ಇದೊಂದು ಅಸಾಧಾರಣ ಉದ್ದೇಶದಿಂದ ಕೂಡಿದ ವಿಶೇಷ ಪ್ರಕರಣವಾಗಿದೆ. ದೇವರು ದೇವದೂತರುಗಳನ್ನು ಉಂಟುಮಾಡಿದಾಗ ಆತನು ನಿಸ್ಸಂದೇಹವಾಗಿ ಅವರುಗಳು ಶಾಶ್ವತವಾಗಿ ದೇವದೂತರುಗಳಾಗಿಯೇ ಇರುವಂತೆ ಉಂಟು ಮಾಡಿದನು. ಅದರಂತೆ ಮಾನವರನ್ನು ಸಹಾ. ಪ್ರತಿಯೊಬ್ಬರೂ ತಮ್ಮ ಸ್ವಂತ ನೆಲೆಯಲ್ಲಿ ಪರಿಪೂರ್ಣನಾಗಿರುವಂತೆ ಉಂಟುಮಾಡಿದನು. ಕನಿಷ್ಠಪಕ್ಷ ವೇದಗ್ರಂಥವೂ ಬೇರೆ ಯಾವುದೇ ವಿಭಿನ್ನ ಉದ್ದೇಶದ ಸೂಚನೆಯನ್ನು ನೀಡುವುದಿಲ್ಲ. ನಿರ್ಜೀವ ಸೃಷ್ಟಿಯಲ್ಲಿ ಇರುವಂತೆ ಬಹುಮಟ್ಟಿಗೆ ಅಂತ್ಯವಿಲ್ಲದ ಹಿತವಾದ ವೈವಿಧ್ಯಗಳಿವೆ. ಅದರಂತೆ ಜೀವಂತ ಮತ್ತು ಬೌದ್ಧಿಕತೆಯುಳ್ಳವರ ಸೃಷ್ಟಿಯಲ್ಲಿ ಪರಿಪೂರ್ಣತೆಯಲ್ಲಿ ವಿವಿಧ ರೀತಿಗಳು ಇರುವ ಸಾಧ್ಯತೆಗಳಿವೆ. ಪ್ರತಿಯೊಂದು ಸೃಷ್ಟಿಯೂ ಅದರ ಪರಿಪೂರ್ಣತೆಯಲ್ಲಿ ಮಹಿಮೆ ಯುಳ್ಳದ್ದಾಗಿದೆ; ಆದರೆ ಪೌಲನು ಹೇಳುವಂತೆ ಪರಲೋಕದವುಗಳ ಮಹಿಮೆಯು ಒಂದು ವಿಧವಾದ ಮಹಿಮೆ, ಭೂಲೋಕದವುಗಳ ಮಹಿಮೆಯು (ಭೂಲೋಕಕ್ಕೆ ಸಂಬಂಧಪಟ್ಟಂತೆ) ಮತ್ತೊಂದು ಪ್ರತ್ಯೇಕ ವಿಧವಾದ ಮಹಿಮೆಯಾಗಿದೆ.

ನಮ್ಮ ಕರ್ತನಾದ ಯೇಸುಕ್ರಿಸ್ತನ ಪುನರುತ್ಥಾನದ ನಂತರ ದಾಖಲಾದ ಸತ್ಯಗಳನ್ನು ಮತ್ತು ಆತ್ಮೀಕ ಜೀವಿಗಳಾದ ದೇವದೂತರನ್ನು ಪರೀಕ್ಷಿಸುವಾಗ ಮತ್ತು ಈ ರೀತಿಯಾಗಿ "ಆತ್ಮೀಕ ಸಂಗತಿಗಳನ್ನು ಆತ್ಮೀಕ ಸಂಗತಿಗಳೊಂದಿಗೆ ಪರೀಕ್ಷಿಸುವಾಗ (1 ಕೊರಿಂಥ 2:13) ನಾವು ಆತ್ಮೀಕ ಜೀವಿಗಳ ಬಗ್ಗೆ ಕೆಲವೊಂದು ಸಾಮಾನ್ಯ ಮಾಹಿತಿಗಳನ್ನು ಪಡೆದುಕೊಳ್ಳಬಹುದು. ಮೊದಲನೆಯದು, ಆಗ ದೇವದೂತರುಗಳು ಆಗಾಗ ಪ್ರಸ್ತುತಿಗೊಳ್ಳಬಹುದು, ಆದಾಗ್ಯೂ, ಕಣ್ಣಿಗೆ ಕಾಣಿಸಿಕೊಳ್ಳುವುದಿಲ್ಲ, ಅಗೋಚರರಾಗಿರುತ್ತಾರೆ. "ಯೆಹೋವನ ಭಯಭಕ್ತಿ ಯುಳ್ಳವರ ಸುತ್ತಲೂ ಆತನ ದೂತನು ದಂಡಿಳಿಸಿ ಕಾಪಾಡುತ್ತಾನೆ" (ಕೀರ್ತನೆ 34:7). "ಇವರೆಲ್ಲರೂ ರಕ್ಷಣೆಯನ್ನು ಬಾಧ್ಯವಾಗಿ ಹೊಂದಬೇಕಾಗಿರುವವರ ಸೇವೆಗೋಸ್ಕರ ಕಳುಹಿಸಲ್ಪಡುವ ಊಳಿಗದ ಆತ್ಮಗಳಲ್ಲವೋ?" (ಇಬ್ರಿಯ 1:14). ಅವರುಗಳು ಪ್ರತ್ಯಕ್ಷರಾಗಿ ಅಥವಾ ಅದೃಶ್ಯರಾಗಿ ಸೇವೆ ಮಾಡಿದರೋ? ನಿಸ್ಸಂದೇಹವಾಗಿ, ಎರಡನೆಯ ರೀತಿಯಲ್ಲಿ. ಎಲೀಷನು ಅಶ್ಯೂರರ ಸೈನ್ಯದಿಂದ ಸುತ್ತುವರೆಯಲ್ಪಟ್ಟನು; ಆತನ ಸೇವಕನು ಬಹಳವಾಗಿ ಅಂಜಿದನು. ಎಲೀಷನು ದೇವರಿಗೆ ಪ್ರಾರ್ಥಿಸಿದನು, ಮತ್ತು ಯುವಕನ ಕಣ್ಣುಗಳು ತೆರೆಯಲ್ಪಟ್ಟವು, ಆತನು ಅವರ ಸುತ್ತಲ ಬೆಟ್ಟ ಪ್ರದೇಶದಲ್ಲಿ ಅಗ್ನಿರಥ ಗಳಿರುವುದನ್ನೂ, ಅಗ್ನಿ (ಅಥವಾ ಬೆಂಕಿಯಂತಹ) ಅಶ್ವಾರೂಢರುಗಳು ಇರುವುದನ್ನೂ ಕಂಡನು, ಮತ್ತೆ ಬಿಳಾಮನಿಗೆ ದೇವದೂತನು ಅದೃಶ್ಯವಾಗಿದ್ದನು. ಕತ್ತೆಯ

ಕಣ್ಣುಗಳು ತೆರೆದವು. ಆಗ ದೇವದೂತನು ಅದಕ್ಕೆ ಕಾಣಿಸಿದನು.

ಎರಡನೆಯದಾಗಿ, ದೇವದೂತರುಗಳು ಮಾನವ ಶರೀರವನ್ನು ಧರಿಸುತ್ತಾರೆ ಮತ್ತು ಮಾನವರಾಗಿ ಕಾಣಿಸಿಕೊಳ್ಳುತ್ತಾರೆ. ಕರ್ತನು ಮತ್ತು ಇಬ್ಬರು ದೇವದೂತರುಗಳು ಅಬ್ರಹಾಮನಿಗೆ ಹಾಗೆಯೇ ಕಾಣಿಸಿಕೊಂಡರು. ಅವರಿಗಾಗಿ ಆತನು ರಾತ್ರಿಯ ಭೋಜನವನ್ನು ಸಿದ್ಧಪಡಿಸಿದನು, ಅದನ್ನು ಅವರು ಊಟ ಮಾಡಿದರು. ಮೊದಲಿಗೆ ಅಬ್ರಹಾಮನು ಅವರು ಮೂರು ವ್ಯಕ್ತಿಗಳೆಂದು ಭಾವಿಸಿದ್ದನು, ಅವರು ಇನ್ನೇನೂ ಹಿಂತಿರುಗಿ ಹೋಗುವಾಗ ಅಬ್ರಹಾಮನಿಗೆ ಅವರಲ್ಲಿ ಒಬ್ಬನು ಕರ್ತನು, ಉಳಿದವರಿಬ್ಬರು ದೇವದೂತರುಗಳೆಂದು ಕಂಡುಕೊಂಡನು. ಅವರುಗಳು ನಂತರದಲ್ಲಿ ಸೊದೋಮಿನ ಕಡೆಗೆ ಇಳಿದು ಹೋಗಿ ಅಲ್ಲಿ ಲೋಟನನ್ನು ತಪ್ಪಿಸಿ ಕಾಪಾಡಿದರು (ಆದಿ. 18: 1,2). ಒಬ್ಬ ದೇವದೂತನು ಗಿದ್ಯೋನನಿಗೆ ಮನುಷ್ಯನಾಗಿ ಕಾಣಿಸಿಕೊಂಡನು. ನಂತರದಲ್ಲಿ ಆತನು ತನ್ನನ್ನು ಅವನಿಗೆ ತಿಳಿಯಪಡಿಸಿದನು. ಸಂಸೋನನ ತಂದೆತಾಯಿಗಳಿಗೆ ಒಬ್ಬ ದೇವದೂತನು ಕಾಣಿಸಿಕೊಂಡನು. ಆತನು ಯಜ್ಞವೇಧಿಯ ಜ್ವಾಲೆಯ ಮೂಲಕ ಪರಲೋಕಕ್ಕೆ ಏರಿಹೋಗುವವರೆಗೂ ಅವರು ಆತನನ್ನು ಒಬ್ಬ ಮನುಷ್ಯನೆಂದೇ ತಿಳಿದಿದ್ದರು (ನ್ಯಾಯಸ್ಥಾಪಕರು 6:11–22; 13:20).

ಮೂರನೆಯದಾಗಿ, ಆತ್ಮೀಕ ಜೀವಿಗಳು ತಮ್ಮ ಸಹಜಸ್ಥಿತಿಯಲ್ಲಿ ವೈಭವಪೂರಿತವಾಗಿರುತ್ತಾರೆ. ಮತ್ತು ಹಲವೊಮ್ಮೆ ಮಹಿಮೆಯುಳ್ಳವರೂ, ಪ್ರಕಾಶಿಸುವವರೂ ಎಂದು ಉಲ್ಲೇಖಿಸಲ್ಪಟ್ಟಿರುತ್ತಾರೆ. ಯೇಸುವಿನ ಸಮಾಧಿಯ ಕಲ್ಲನ್ನು ಉರುಳಿಸಿದ "ದೇವದೂತನ ಮುಖಭಾವವು ಮಿಂಚಿನಂತೆ ಇತ್ತು, ಅವನ ಉಡುಪು ಹಿಮದಂತೆ ಬೆಳ್ಳಗಿತ್ತು" (ಮತ್ತಾಯ 28:3) ಎಂದು ನೋಡುತ್ತೇವೆ. ದಾನಿಯೇಲನು ಆತ್ಮೀಕ ದೇಹದ ಕ್ಷಣದರ್ಶನವನ್ನು ಮಾಡಿದನು. ಅದನ್ನು ಆತನು ವಿವರಿಸುವವನಾಗಿ "ಅವನ ಶರೀರವು ಪೀತರತ್ನದ ಹಾಗೆ ಕಂಗೊಳಿಸಿತು, ಅವನ ಮುಖವು ಮಿಂಚಿನಂತೆ ಹೊಳೆಯಿತು, ಅವನ ಕಣ್ಣುಗಳು ಉರಿಯುವ ಪಂಜುಗಳೋಪಾದಿಯಲ್ಲಿ ನಿಗಿನಿಗಿಸಿದವು, ಅವನ ಕೈಕಾಲುಗಳು ಬೆಳಗಿದ ತಾಮ್ರದ ಹಾಗೆ ಥಳಥಳಿಸಿದವು. ಅವನ ಮಾತಿನ ಶಬ್ದವು ಸಂದಣಿಯ ಕೋಲಾಹಲದಂತೆ ಕೇಳಿಸಿತು. ಅವನು ಅಡಿಮೊಗವಾಗಿ ಅಡ್ಡಬಿದ್ದಿದ್ದನು" (ದಾನಿ 10:6,10,15,17) ಎಂದಿದ್ದಾನೆ. ತಾರ್ಸದ ಸೌಲನು ಅದೇ ರೀತಿಯಲ್ಲಿ ಕ್ರಿಸ್ತನ ಮಹಿಮಾಯುತ ದೇಹದ ಕ್ಷಣದರ್ಶನ ಮಾಡಿದಾಗ "ಫಕ್ಕನೆ ಆಕಾಶದೊಳಗಿಂದ ಒಂದು ಬೆಳಕು ಆತನ ಸುತ್ತಲೂ ಪ್ರಕಾಶಿಸಿತು, ಅವನು ನೆಲಕ್ಕೆ ಬಿದ್ದನು. ನೆಲದಿಂದ ಎದ್ದು ಕಣ್ಣು ತೆರೆದಾಗ ಏನೂ ಕಾಣಿಸಲಿಲ್ಲ" (ಅ.ಕೃ. 9:4,9) ಎಂದು ಓದುತ್ತೇವೆ.

ಇದುವರೆಗೆ ಆತ್ಮೀಕ ಜೀವಿಗಳು ಮಹಿಮೆಯುಳ್ಳವುಗಳಾಗಿರುತ್ತವೆ ಎಂದು ಕಂಡುಕೊಂಡಿದ್ದೇವೆ. ಆದಾಗ್ಯೂ ಮಾನವರ ಕಣ್ಣುಗಳು ಅವರನ್ನು ನೋಡುವಂತೆ ತೆರೆಯಲ್ಪಡುವುದನ್ನು ಅಥವಾ ಅವರು ಮನುಷ್ಯರಂತೆ ದೇಹಧಾರಿಗಳಾಗಿ ಕಾಣಿಸಿಕೊಳ್ಳುವುದನ್ನು ಹೊರತುಪಡಿಸಿ ಅವರು ಮಾನವರಿಗೆ ಅದೃಶ್ಯರಾಗಿಯೇ ಇರುತ್ತಾರೆ. ಈ ತೀರ್ಮಾನವು ಮುಂದೆ ಈ ಪ್ರಕಟನೆಗಳ ನಿರ್ದಿಷ್ಟವಾದ ವಿವರಗಳನ್ನು ಪರಿಶೀಲಿಸುವಾಗ ದೃಢವಾಗುತ್ತವೆ. ಕರ್ತನು ತಾರ್ಸದ ಸೌಲನಿಗೆ ಮಾತ್ರವೇ ಕಾಣಿಸಿಕೊಂಡನು, "ಅವನ ಜೊತೆಯಲ್ಲಿ ಪ್ರಯಾಣ ಮಾಡುತ್ತಿದ್ದವರು ಧ್ವನಿಯನ್ನು ಮಾತ್ರ ಕೇಳಿಸಿಕೊಂಡರು. ಯಾರನ್ನೂ ಕಾಣದೆ ಮೂಕರಂತೆ ನಿಂತರು" (ಅ.ಕೃ. 9:7). ದಾನಿಯೇಲನ ಸಂಗಡ ಇದ್ದವರು ಆತನ ವಿವರಿಸಿದಂತ ಮಹಿಮಾಸ್ಥಿತಿಯನ್ನು ಕಾಣಲಿಲ್ಲ. ಅದರೂ ಬಹಳ ದೊಡ್ಡ ಭಯ ಅವರಿಗೆ ಹಿಡಿಯಿತು. ಅವರು ಓಡಿಹೋಗಿ ಅವಿತುಕೊಂಡರು. ಪುನಃ ಈ ಭವ್ಯವಾದ ಜೀವಿಯು ಪ್ರಕಟಿಸಲ್ಪಟ್ಟಿತು; "ಪಾರಸಿಯ ರಾಜ್ಯದ ದಿವ್ಯಪಾಲಕನು ಇಪ್ಪತ್ತೊಂದು ದಿನ ನನ್ನನ್ನು ತಡೆಯಲು ಮಿಕಾಯೇಲನು ನನ್ನ ಸಹಾಯಕ್ಕೆ ಬಂದನು" (ದಾನಿ. 10: 13) ಎಂದು ಬರೆದದೆ. ಕರ್ತನ ಅತಿ ಪ್ರಿಯನಾದ ದಾನಿಯೇಲನು ಪಾರಸೀಯ ಅರಸನು ಅವನನ್ನು ಇಪ್ಪತ್ತೊಂದು ದಿನ ತಡೆಯಲು ಆತನು ಸತ್ತಂತೆ ಬಿದ್ದುಕೊಂಡಿದ್ದನೋ? ಇದು ಹೇಗೆ? ಖಂಡಿತವಾಗಿಯೂ ಆತನು ಅರಸನಿಗೆ ಮಹಿಮೆಯುಳ್ಳವನಾಗಿ ಕಾಣಿಸಿಕೊಳ್ಳಲಿಲ್ಲ! ಒಂದೋ, ಆತನು ಅವನೊಂದಿಗೆ ಅದೃಶ್ಯನಾಗಿ ಇದ್ದನು, ಇಲ್ಲವೇ ಆತನು ಒಬ್ಬ ಮನುಷ್ಯನಾಗಿಯೇ ಕಾಣಿಸಿಕೊಂಡನು.

ನಮ್ಮ ಕರ್ತನು ಆತನ ಪುನರುತ್ಥಾನದಿಂದೀಚೆಗೆ ಒಬ್ಬ ಆತ್ಮೀಕ ಜೀವಿಯಾಗಿದ್ದಾನೆ, ಆದ ಕಾರಣ ದೇವದೂತರಲ್ಲಿ (ಆತ್ಮೀಕ ಜೀವಿಗಳಲ್ಲಿ) ನಿದರ್ಶನಗೊಂಡಿರುವ ಅದೇ ಶಕ್ತಿಯನ್ನು ಆತನು ಹೊಂದಿರುವುದನ್ನು ನಾವು ಕಾಣುತ್ತೇವೆ. ಪ್ರಕರಣವು ಇಂತಿರಲು ನಾವು ಇದನ್ನು ಮುಂದಿನ ಅಧ್ಯಾಯದಲ್ಲಿ ಇನ್ನೂ ಪೂರ್ಣವಾಗಿ ನೋಡುತ್ತೇವೆ.

ಈ ರೀತಿಯಲ್ಲಿ ವೇದ ವಚನಗಳು ಆತ್ಮೀಕ ಮತ್ತು ಮಾನವ ಸ್ವಭಾವಗಳ ಪ್ರತ್ಯೇಕವಾದವುಗಳು ಮತ್ತು

ನಿರ್ದಿಷ್ಟವಾದವುಗಳು ಮತ್ತು ಅವುಗಳು ಒಂದು ಮತ್ತೊಂದಾಗಿ ವಿಕಸನಗೊಳ್ಳುವುದು ಅಥವಾ ಒಂದು ಇನ್ನೊಂದಕ್ಕೆ ಅಭಿವೃದ್ಧಿಗೊಳ್ಳುವುದು ಎಂಬುದಕ್ಕೆ ಯಾವುದೇ ಪುರಾವೆಗಳನ್ನು ಒದಗಿಸುವುದಿಲ್ಲ ವೆಂಬುದನ್ನು ನಾವು ಕಂಡುಕೊಳ್ಳುತ್ತೇವೆ. ಆದರೆ ಇದಕ್ಕೆ ವ್ಯತಿರಿಕ್ತವಾಗಿ, ಅವರುಗಳಲ್ಲಿ ಕೆಲವರು ಮಾತ್ರವೇ ಮಾನವರಿಂದ ದೈವಿಕ ಸ್ವಭಾವಕ್ಕೆ ಬದಲಾಗುತ್ತಾರೆ, ಮತ್ತು ಅದಕ್ಕೆ ಅವರ ಶಿರಸ್ಸಾದ ಯೇಸುಕ್ರಿಸ್ತನು ಈಗಾಗಲೇ ಎತ್ತಲ್ಪಟ್ಟಿದ್ದಾನೆ ಎಂದು ಅವರು ತೋರಿಸುತ್ತಾರೆ. ಯೆಹೋವನ ಯೋಜನೆಯಲ್ಲಿ ಈ ಗಣನೀಯವಾದ ಮತ್ತು ವಿಶೇಷ ಲಕ್ಷಣವು ಅವರುಗಳನ್ನು ಎಲ್ಲವುಗಳ ಪುನಃವಶಕ್ಕಾಗಿ ದೇವರ ನಿಯೋಗಿಗಳೆಂದು ಸಿದ್ಧಪಡಿಸುವ ದೇವರ' ವಿಶೇಷ ಉದ್ದೇಶವಾಗಿದೆ.

ನಾವೀಗ ಈ ಕೆಳಕಂಡ ಶಬ್ದಗಳನ್ನು ಪರೀಕ್ಷಿಸೋಣ :–

## ಮರ್ತ್ಯತೆ ಮತ್ತು ಅಮರತ್ವ
## Mortality and Immortality

ನಾವು ಮನುಷ್ಯ ಮತ್ತು ಆತ್ಮೀಕ ಜೀವಿಗಳನ್ನು ಕುರಿತು, ಮತ್ತು ಭೂಲೋಕದ ಮತ್ತು ಪರಲೋಕದ ವಾಗ್ದಾನಗಳ ಬಗ್ಗೆ ಸತ್ಯವೇದದ ಹೋಲಿಕೆಯಿಂದ ನಾವು ಕಲಿತಿರುವ ನಿಖರವಾದ ಸಾಮರಸ್ಯದೊಂದಿಗೆ ಅವುಗಳ ನಿಜವಾದ ಮಹತ್ವವನ್ನು ಕಂಡುಕೊಳ್ಳೋಣ. ಈ ಪದಗಳು ಸಾಮಾನ್ಯವಾಗಿ ಬಹಳ ಅನಿಶ್ಚಿತವಾದ ಅರ್ಥಗಳನ್ನು ನೀಡುತ್ತವೆ ಮತ್ತು ಆ ಅರ್ಥಗಳ ತಪ್ಪಾದ ಅಭಿಪ್ರಾಯವು ಅವು ಸಂಬಂಧಿಸಿದ ಸಾಮಾನ್ಯವಾದ ಮತ್ತು ಪರಿಶುದ್ಧ ಗ್ರಂಥದ ಉಪಯೋಗದಲ್ಲಿರುವ ಪ್ರಸ್ತಾಪದ ಬಗ್ಗೆ ತಪ್ಪಾದ ಅರ್ಥಗಳನ್ನು ಉಂಟು ಮಾಡುತ್ತದೆ.

''ಮರ್ತ್ಯತೆ'' ಎನ್ನುವುದು ಮರಣಕ್ಕೆ ಒಳಗಾಗಬಹುದಾದ ಸ್ಥಿತಿ ಅಥವಾ ಅವಸ್ಥೆಯನ್ನು ಸೂಚಿಸುತ್ತದೆ; ಮರಣದ ಸ್ಥಿತಿಯನ್ನಲ್ಲ, ಮರಣವು ಸಾಧ್ಯವಾಗಬಹುದಾದ ಪರಿಸ್ಥಿತಿಯಾಗಿದೆ.

"ಅಮರ್ತ್ಯತೆ" ಅಥವಾ ಅಮರತ್ವ ಎನ್ನುವುದು ಮರಣಕ್ಕೆ ಒಳಗಾಗದ ಸ್ಥಿತಿ ಅಥವಾ ಪರಿಸ್ಥಿತಿಯನ್ನು ಸೂಚಿಸುತ್ತದೆ, ಕೇವಲ ಮರಣದಿಂದ ಬಿಡುಗಡೆ ಹೊಂದುವ ಪರಿಸ್ಥಿತಿಯನ್ನು ಮಾತ್ರವಲ್ಲ, ಆದರೆ ಮರಣವು ಅಸಾಧ್ಯವಾದ ಪರಿಸ್ಥಿತಿಯನ್ನು ಸೂಚಿಸುತ್ತದೆ.

ಮರ್ತ್ಯತೆಯ ಬಗ್ಗೆ ಇರುವ ಸಾಮಾನ್ಯವಾದ ಆದರೆ ತಪ್ಪಾದ ಅಭಿಪ್ರಾಯವೆಂದರೆ ಮರಣವು ಅನಿವಾರ್ಯವಾದ ಸ್ಥಿತಿ ಅಥವಾ ಪರಿಸ್ಥಿತಿ. ಅದೇ ಸಮಯದಲ್ಲಿ ಅಮರ್ತ್ಯತೆಯ ಬಗ್ಗೆ ಇರುವ ಸಾಮಾನ್ಯ ಕಲ್ಪನೆಯು ಹೆಚ್ಚು ನಿಕಟವಾಗಿ ಸರಿಯಾಗಿದೆ.

ಅಮರ್ತ್ಯ ಎಂಬ ಪದವು ಮರ್ತ್ಯವಲ್ಲ ಎಂದು ಸೂಚಿಸುತ್ತದೆ; ಹೀಗಾಗಿ ಈ ಪದಗಳ ರಚನೆಯು ಅವುಗಳ ನಿಜವಾದ ಅರ್ಥವಿವರಣೆಗಳನ್ನು ನೀಡುತ್ತವೆ. ಏಕೆಂದರೆ, ಮರ್ತ್ಯ ಎಂಬ ಪದದ ತಪ್ಪಾದ ಕಲ್ಪನೆಯ ಪ್ರಚಲಿತೆಯಿಂದ ಆದಾಮನು ತನ್ನ ಅವಿಧೇಯತೆಯ ಪೂರ್ವದಲ್ಲಿ ಮರ್ತ್ಯನಾಗಿದ್ದನೋ, ಅಮರ್ತ್ಯ ನಾಗಿದ್ದನೋ ಎಂದು ಕಂಡುಹಿಡಿಯುವ ಪ್ರಯತ್ನದಲ್ಲಿ ಅನೇಕರು ಗೊಂದಲಕ್ಕೀಡಾಗಿದ್ದಾರೆ. ಅವರ ತರ್ಕವೇನೆಂದರೆ, ಆತನು ಅಮರ್ತ್ಯನಾಗಿದ್ದರೆ ದೇವರು ಅವನಿಗೆ "ನೀನು ಆ ಹಣ್ಣನ್ನು ತಿಂದ ದಿನದಲ್ಲೇ ಖಂಡಿತವಾಗಿಯೂ ಸಾಯುವಿ" ಎಂದು ಹೇಳುತ್ತಿದ್ದಿಲ್ಲ. ಯಾಕೆಂದರೆ ಅಮರ್ತ್ಯನಾದವನು ಸಾಯುವುದು ಅಸಾಧ್ಯ. ಇದೊಂದು ತಾರ್ಕಿಕವಾದ ತೀರ್ಮಾನವಾಗಿದೆ. ಇನ್ನೊಂದು ರೀತಿಯಲ್ಲಿ, ಆತನು ಮರ್ತ್ಯನೆಂದು ಹೇಳುವುದಾದರೆ, "ನೀನು ಖಂಡಿತವಾಗಿಯೂ ಸತ್ತೇ ಹೋಗುವಿ'' ಎಂಬ ಹೇಳಿಕೆಯು ಬೆದರಿಕೆ ಅಥವಾ ದಂಡಕ್ಕೆ ಒಳಗಾಗುವವನಾದರೆ, ಆತನು ಮರ್ತ್ಯನಾಗಿರುವುದರಿಂದ (ಅವರ ತಪ್ಪಾದ ವ್ಯಾಖ್ಯಾನದ ಪ್ರಕಾರ) ಹೇಗಾದರೂ ಮರಣವನ್ನು ತಪ್ಪಿಸಿಕೊಳ್ಳಲಾ ಗುತ್ತಿರಲಿಲ್ಲ ಅಲ್ಲವೇ?

ಮರ್ತ್ಯ ಎಂಬ ಪದಕ್ಕೆ ನೀಡಿರುವ ತಪ್ಪು ಅರ್ಥದ ಕಾರಣ ತೊಂದರೆಯಾಗುತ್ತಿದೆ ಎಂದು ಗ್ರಹಿಸಬಹುದು. ಸರಿಯಾದ ಅರ್ಥವಿವರಣೆಯನ್ನು ಅನ್ವಯಿಸುವುದಾದರೆ ಎಲ್ಲವೂ ಸ್ಪಷ್ಟವಾಗುವುದು. ಆದಾಮನು ಮರ್ತ್ಯ ನಾಗಿದ್ದನು – ಅಂದರೆ ಸಾವಿನ ಸಾಧ್ಯತೆಯಿರುವ ಸ್ಥಿತಿಯಲ್ಲಿದ್ದನು. ಆತನಿಗೆ ಪೂರ್ಣವಾದ ಜೀವಿತವು ಸರ್ವಸಂಪೂರ್ಣವಾದ ಅಳತೆಯಲ್ಲಿತ್ತು. ಆದರೆ ಅಂತರ್ಗತವಾದ ಜೀವವಲ್ಲ (inherent life) ಆತನದು "ತೋಟದ ನಿಷಿದ್ಧಪಡಿಸಿದ್ದ ಒಂದು ಮರವನ್ನು ಬಿಟ್ಟು" "ಎಲ್ಲಾ ಮರದ ಹಣ್ಣುಗಳನ್ನು ತಿನ್ನಬಹುದಾಗಿತ್ತು" ಅದರಿಂದ ಜೀವಂತವಾಗಿರುಬಹುದಿತ್ತು, ತನ್ನ ಸೃಷ್ಟಿಕರ್ತನೊಡನೆ ವಿಧೇಯತೆಯಿಂದ ಮತ್ತು ಸಾಮರಸ್ಯದಿಂದ ಇರುವವರೆಗೆ ಆತನ ಜೀವವು ಸುರಕ್ಷಿತವಾಗಿತ್ತು – ಸಮರ್ಥಿಸುವ ಅಂಶಗಳನ್ನು ನಿರಾಕರಿಸಲಾಗುವುದಿಲ್ಲ. ಈ ರೀತಿಯ ಜೀವವನ್ನು ಆದಾಮನು ಹೊಂದಿದ್ದನು ಎಂದು ನೋಡುತ್ತೇವೆ. ಮತ್ತು ಮರಣವು ಪೂರ್ಣವಾಗಿ ತಪ್ಪಿಸಬಹುದಾಗಿತ್ತು, ಆದಾಗ್ಯೂ ಆತನು ಮರಣವು ಸಾಧ್ಯವಾಗುವ ಸ್ಥಿತಿಯಲ್ಲಿದ್ದನು – ಆತನು ಮರ್ತ್ಯನಾಗಿದ್ದನು.

ಆದಾಮನು ಮರ್ತ್ಯನಾಗಿದ್ದು ಅಮರ್ತ್ಯನಾಗುವ ಪರೀಕ್ಷೆಗೆ ಒಳಗಾದನೋ ಎಂಬ ಪ್ರಶ್ನೆಯು ಉದ್ಭವಿಸುತ್ತದೆ. ಸಾಮಾನ್ಯವಾದ ಉತ್ತರ 'ಹೌದು' ಎಂದಾದರೆ ನಾವು 'ಇಲ್ಲ' ಎನ್ನುತ್ತೇವೆ. ಆತನ ಪರೀಕ್ಷೆಯು ಆತನು ಈಗಾಗಲೇ ಹೊಂದಿಕೊಂಡಿರುವ ಜೀವ ಮತ್ತು ಆಶೀರ್ವಾದಗಳನ್ನು ಮುಂದುವರೆಸಿಕೊಂಡು ಹೋಗಲು ಅರ್ಹನೋ ಅಥವಾ ಅನರ್ಹನೋ ಎಂಬುದಕ್ಕಾಗಿತ್ತು. ಆತನು ವಿಧೇಯನಾದರೆ ಅಮರ್ತ್ಯನಾಗುತ್ತಾನೆಂದು ಎಲ್ಲಿಯೂ ವಾಗ್ದಾನ ನೀಡದಿರುವುದರಿಂದ ನಾವು ಅಂಥಃ ಎಲ್ಲಾ ಊಹನೆಗಳನ್ನು ಈ ಪ್ರಶ್ನೆಯಿಂದ ಕೈಬಿಡಲೇ ಬೇಕಾಗುತ್ತದೆ. ಆತನು ವಿಧೇಯನಾಗಿರುವವರೆಗೆ ಆತನಿಗೆ ನೀಡಲ್ಪಟ್ಟ ಎಲ್ಲಾ ಆಶೀರ್ವಾದಗಳನ್ನು ಅನುಭವಿಸುವನೆಂಬ ವಾಗ್ದಾನವನ್ನು ಆತನಿಗೆ ನೀಡಲಾಗಿತ್ತು. ಆದರೆ ಅವಿಧೇಯನಾದಲ್ಲಿ ಎಲ್ಲವನ್ನು ಕಳೆದುಕೊಳ್ಳುವ – ಮರಣದ ಭೀತಿಯನ್ನು ನೀಡಲಾಗಿತ್ತು. 'ಮರ್ತ್ಯ' ಎಂಬ ಪದದ ತಪ್ಪಾದ ಅರ್ಥವು ಸಾಯದೇ ಇರುವವರೆಲ್ಲರೂ ಅಮರ್ತ್ಯರು ಎಂಬ ಊಹನೆಗೆ ತರುತ್ತದೆ. ಆದುದರಿಂದ ಅವರ ಪರಲೋಕದ ತಂದೆಯನ್ನು, ನಮ್ಮ ಕರ್ತನಾದ ಯೇಸುವನ್ನು ದೇವದೂತರುಗಳು ಮತ್ತು ಎಲ್ಲಾ ಮಾನವಜಾತಿಯವರನ್ನು ಈ ವರ್ಗಕ್ಕೆ ಸೇರಿಸುತ್ತಾರೆ. ಹೇಗೂ ಇದು ತಪ್ಪಾದುದು. ಮನುಕುಲದ ಅಧಿಕ ಜನಸಮೂಹವು ಪತನದಿಂದ ರಕ್ಷಿಸಲ್ಪಟ್ಟಿದ್ದಾರೆ, ಪರಲೋಕದ ದೇವದೂತರುಗಳು ಸಹಾ. ಇವರುಗಳೆಲ್ಲರೂ ಯಾವಾಗಲೂ ಮರ್ತ್ಯರೇ ಸರಿ. ಸರ್ವಸಂಪೂರ್ಣತೆ ಮತ್ತು ಆಶೀರ್ವಾದದ ಸ್ಥಿತಿಯಲ್ಲಿದ್ದರೂ ಅವರುಗಳು ಪಾಪ ಮಾಡುವವ ರಾದರೆ, ಯಾವಾಗಲೂ ಪಾಪದ ಸಂಬಳವಾದ ಮರಣನ್ನು ಅನುಭವಿಸಲಿರುವ ಮರ್ತ್ಯ ಸ್ವಭಾವ ದಲ್ಲಿಯೇ ಇರುತ್ತಾರೆ. ಅವರ ಅಸ್ಥಿತ್ವದ ಭದ್ರತೆಯು ಆದಾಮನಿಗಿದ್ದಂತೆ ನ್ಯಾಯ, ಪ್ರೀತಿ ಮತ್ತು ಜ್ಞಾನವಿರುವ ಸರ್ವಜ್ಞಾನಿಯಾದ ದೇವರಿಗೆ ಸದಾ ವಿಧೇಯ ನಾಗಿರುವುದು ಶರತ್ತುಬದ್ಧವಾದುದು, ಆತನನ್ನು ಪ್ರೀತಿಸಿ ಸೇವೆ ಮಾಡುವವರ ಹಿತಕ್ಕಾಗಿ ಆತನ ನ್ಯಾಯ, ಪ್ರೀತಿ ಮತ್ತು ವಿವೇಕವು, ಒಟ್ಟಾಗಿ ಕಾರ್ಯಮಾಡುವುದೆಂದು ಪ್ರಸ್ತುತ ಸಮಯದಲ್ಲಿನ ಪಾಪದೊಂದಿಗಿನ ಆತನ (ದೇವರ) ವ್ಯವಹಾರದಲ್ಲಿ ಸಂಪೂರ್ಣವಾಗಿ ಪ್ರದರ್ಶಿಸಲ್ಪಟ್ಟಿದೆ.

ದೇವದೂತರುಗಳು ಅಮರತ್ವವುಳ್ಳವರು ಅಥವಾ ಮನುಕುಲವು ಪುನರ್‌ವಶಗೊಂಡ ನಂತರ, ಅಮರ್ತ್ಯರಾಗುವರು ಎಂಬುದಾಗಿ ಪರಿಶುದ್ಧ ಗ್ರಂಥದಲ್ಲಿ ಎಲ್ಲಿಯೂ ಹೇಳಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ಅಮರ್ತ್ಯತೆಯನ್ನು ದೈವಿಕ ಸ್ವಭಾವಕ್ಕೆ ಮಾತ್ರವೇ ಹೊರಿಸಲಾಗಿದೆ – ಮೂಲತಃ ಯೆಹೋವನಿಗೆ ಮಾತ್ರವೇ; ತರುವಾಯ ನಮ್ಮ ಕರ್ತನಾದ ಯೇಸುಕ್ರಿಸ್ತನಿಗೆ ಆತನ ಪ್ರಸ್ತುತವಾದ ಘನತೆಗೇರಿಸಲ್ಪಟ್ಟ ಸ್ಥಿತಿಯಲ್ಲಿ ಹೊರಿಸಲಾಯಿತು. ಅಂತ್ಯದಲ್ಲಿ ಕ್ರಿಸ್ತನ ದೇಹವಾದ ಸಭೆಗೆ ಅದು ವಾಗ್ದಾನದ ಮೂಲಕ ಆತನೊಂದಿಗೆ ಮಹಿಮೆ ಹೊಂದಿಕೊಂಡಾಗ ಹೊರಿಸಲಾಗುವುದು (1 ತಿಮೋ. 6:16; ಯೋಹಾನ 5:26; 2 ಪೇತ್ರ 1:4; 1 ಕೊರಿಂಥ 15: 53,54).

ಅಮರತ್ವವು ಅಥವಾ ಅಮರ್ತ್ಯತೆಯು ದೈವಿಕ ಸ್ವಭಾವಕ್ಕೆ ಮಾತ್ರವೇ ಸೇರಿದ್ದೆಂಬುದಕ್ಕೆ ನಮಗೆ ಆಧಾರ ಇದೆ ಎಂಬುದು ಮಾತ್ರವಲ್ಲ, ದೇವದೂತರೂ ಕೂಡ ಮರ್ತ್ಯರೇ ಎಂಬುದಕ್ಕೆ ನಮ್ಮ ಬಳಿ ಪುರಾವೆಗಳಿವೆ, ವಾಸ್ತವವಾಗಿ ಸೈತಾನನು ಒಂದು ಕಾಲದಲ್ಲಿ ಆ ಸಮುದಾಯದ ಮುಖ್ಯಸ್ತ ನಾಗಿದ್ದವನು, ನಾಶಗೊಳ್ಳಬೇಕಾಗಿದೆ (ಇಬ್ರಿಯ 2:14). ಆತನನ್ನು ನಾಶಗೊಳಿಸಬಹುದೆಂಬ ವಾಸ್ತವಾಂಶವು ದೇವದೂತರುಗಳು ಒಂದು ವರ್ಗವಾಗಿ ಮರ್ತ್ಯ ರಾಗಿದ್ದಾರೆ ಎಂಬುದನ್ನು ಸಾಬೀತುಪಡಿಸುತ್ತದೆ.

ಈ ರೀತಿಯಾಗಿ ಪರಿಗಣಿಸಲ್ಪಟ್ಟು, ಸರಿಪಡಿಸಲಾಗದ ಪಾಪಿಗಳನ್ನು ಅಳಿಸಿಹಾಕುವಾಗ, ಅಮರ್ತ್ಯ ಮತ್ತು ಮರ್ತ್ಯ ಜೀವಿಗಳಿಬ್ಬರೂ ಒಟ್ಟಾಗಿ ಸಂತೋಷ, ಉಲ್ಲಾಸ ಮತ್ತು ಪ್ರೀತಿಯಿಂದ ಪ್ರಥಮವರ್ಗದವರು ಮರಣ ಹೊಂದಲು ಅಸಮರ್ಥವಾದ, ಸ್ವಭಾವವನ್ನು ಹೊಂದಿರುವ ಅಂತರ್ಜಾತವಾದ ಜೀವವುಳ್ಳವರಾಗಿ – ಸದಾಕಾಲ ಜೀವಿಸುವರು (ಯೋಹಾನ 5:26); ಎರಡನೆಯ ಜೀವಿಗಳು (ಮರ್ತ್ಯರು) ಮರಣಕ್ಕೆ ಒಳಗಾಗುವ ಸ್ವಭಾವವುಳ್ಳವರಾಗಿದ್ದಾಗ್ಯೂ, ಪರಿಪೂರ್ಣ ವಾದ ಜೀವಿಯಾಗಿ, ಪಾಪದ ಮತ್ತು ಕೆಡುಕುತನದ ಜ್ಞಾನವುಳ್ಳವರಾದ ಕಾರಣ, ಮರಣಹೊಂದಲು ಯಾವುದೇ ಕಾರಣವಿಲ್ಲ. ಅವರುಗಳು ದೇವರ ನಿಯಮಗಳನ್ನು ಒಪ್ಪಿ ಕೊಂಡವರಾಗಿದ್ದು, ನಿರಂತರವಾಗಿ ಅವರ ಪರಿಪೂರ್ಣತೆಯನ್ನು ಸಂರಕ್ಷಿಸಲು ಅಗತ್ಯವಾದ ಅಂಶಗಳನ್ನು ಹೊಂದಿದ್ದು ಶಾಶ್ವತವಾಗಿ ಪೂರೈಸಲ್ಪ ಡುತ್ತಾರೆ ಮತ್ತು ಎಂದಿಗೂ ಸಾಯುವುದಿಲ್ಲ.

ಮರ್ತ್ಯ ಮತ್ತು ಅಮರ ಎಂಬ ಪದಗಳ ಅರ್ಥವನ್ನು ಸರಿಯಾಗಿ ಗುರುತಿಸುವುದು ಮತ್ತು

ಪರಿಶುದ್ಧ ಗ್ರಂಥದಲ್ಲಿ ಅವುಗಳ ಬಳಕೆಯು, ನಿತ್ಯ ನರಕ ಯಾತನೆಯ ಸಿದ್ಧಾಂತದ ತಳಹದಿಯನ್ನೇ ಸಂಪೂರ್ಣವಾಗಿ ನಾಶಮಾಡುತ್ತದೆ. ಅದು ದೇವರು ಮನುಷ್ಯನನ್ನು ಅಮರ್ತ್ಯನನ್ನಾಗಿ (ಅಮರನನ್ನಾಗಿ) ಉಂಟುಮಾಡಿದನು, ಆತನ ಇರುವಿಕೆಯನ್ನು ರದ್ದುಪಡಿಸಲು ಸಾಧ್ಯವಿಲ್ಲ ಮತ್ತು ದೇವರು ಆತನನ್ನು ನಾಶಪಡಿಸಲಾಗದು ಎಂಬ ಪರಿಶುದ್ಧಗ್ರಂಥದಲ್ಲಿ ಇಲ್ಲದ ವಿಚಾರ ಸರಣಿ ಅಥವಾ ಸಿದ್ಧಾಂತದ (Unscriptural Theory) ಆಧಾರಗೊಂಡಿದೆ. ಆದುದರಿಂದ ವಾದವೇನೆಂದರೆ, ಸರಿಪಡಿಸಲಾಗದಷ್ಟು ಕೆಟ್ಟು ಹೋಗಿರುವವರು ಹೇಗಾದರೂ, ಎಲ್ಲಿಯಾದರೂ ಜೀವಿಸಲೇ ಬೇಕು ಎಂಬ ವಾದವಾಗಿದೆ. ತೀರ್ಮಾನ ಏನೆಂದರೆ, ಅವರುಗಳಿಗೆ ದೇವರೊಂದಿಗೆ ಸಾಮರಸ್ಯವಿಲ್ಲದೇ ಇರುವುದರಿಂದ ತೀರ್ಮಾನವೆಂದರೆ ಅವರ ನಿರಂತತೆಯು ದುರ್ದೆಸೆಯಿಂದ ಕೂಡಿದೆ. ಆದರೆ, ದೇವರ ವಾಕ್ಯಗಳು ಆತನು ಅಂಥಾಃ ಪಾಪ ಮತ್ತು ಪಾಪಿಗಳ ಶಾಶ್ವತಗೊಳಿಸುವಿಕೆಯ ವಿರುದ್ಧವಾಗಿ ಸಿದ್ಧತೆಪಡಿಸಿದ್ದಾನೆ; ಅಂದರೆ ಮಾನವನು ಮರ್ತ್ಯನು, ಪೂರ್ಣ ಪ್ರಕಾಶ ಮತ್ತು ಜ್ಞಾನದ ವಿರುದ್ಧವಾದ ಇಚ್ಛಾಪೂರ್ವಕವಾದ ಪಾಪದ ಪೂರ್ಣ ದಂಡನೆಯು ಯಾತನೆಯಲ್ಲಿನ ಜೀವಿತವಲ್ಲ, ಅದು ಎರಡನೆಯ ಮರಣ. "ಪಾಪಮಾಡುವವನೇ ಸಾಯುವನು" (ಯೆಹೆಜ್ಕೇಲ 18:20).

## "ದೇವರಿಗೆ ಎದುರು ಮಾತನಾಡುವುದಕ್ಕೆ ನೀನು ಎಷ್ಟರವನು?" (ರೋಮಾ. 9:20)

## ``Who Art Thou that Repliest Against God?'' Romans 9:20

ದೇವರು ತನ್ನ ಪ್ರೀತಿಪಾತ್ರರ, ತನ್ನ ಸೃಷ್ಟಿಗಳ ಕೃಪೆಯ ದಯಪಾಲಿಸುವಿಕೆಯಲ್ಲಿ ಯಾವುದೇ ಬೇಧವನ್ನುಂಟು ಮಾಡಬಾರದು, ಆತನು ಒಬ್ಬರನ್ನು ಉನ್ನತಕ್ಕೇರಿಸಿದರೆ, ನ್ಯಾಯವಾಗಿ ಅದನ್ನು ಆತನು ಎಲ್ಲರಿಗೂ ಮಾಡಬೇಕು, ಕೆಲವರು ತಮ್ಮ ಹಕ್ಕನ್ನು ಕಳಕೊಂಡಿದ್ದಾರೆ ಎಂದು ಕಂಡು ಬಂದರೆ ಅಂಥವರಿಗೆ ಕೆಳಗಿನ ಸ್ಥಾನವನ್ನು ನೀಡಬೇಕು ಎಂದು ನ್ಯಾಯವು ಬಯಸುತ್ತದೆ ಎಂಬುದು ಕೆಲವರ ತಪ್ಪಾದ ಅಭಿಪ್ರಾಯವಾಗಿದೆ.

ಈ ಸಿದ್ಧಾಂತವು ಸರಿಯಾದುದಾಗಿದ್ದರೆ, ಅದು ದೇವರಿಗೆ ಯೇಸುವನ್ನು ದೇವದೂತರುಗಳಿಂದ ಶ್ರೇಷ್ಠನನ್ನಾಗಿ ಉಂಟುಮಾಡುವ, ನಂತರದಲ್ಲಿ ಆತನನ್ನು ದೈವಿಕ ಸ್ಥಿತಿಗೆ ಏರಿಸುವುದನ್ನು, ಆತನು ಅದೇ ರೀತಿಯಾಗಿ ಎಲ್ಲಾ ದೇವದೂತರುಗಳಿಗೂ ಮತ್ತು ಮಾನವರಿಗೂ ಮಾಡದ ಹೊರತು ಆತನಿಗೆ ಅಂಥಾಃ ಅಧಿಕಾರವಿಲ್ಲ ಎಂದು ತೋರಿಸುತ್ತದೆ. ಈ ವಿಚಾರಸರಣಿಯನ್ನು ಇನ್ನೂ ಮುಂದುವರಿಸುವಂತೆ, ಇನ್ನೂ ಕೆಲವು ಜನರನ್ನು ಉನ್ನತ ಸ್ಥಿತಿಗೆ ಏರಿಸಿ ಅವರನ್ನು ದೈವಿಕ ಸ್ವಭಾವದಲ್ಲಿ ಪಾಲುಗಾರರನ್ನಾಗಿ ಮಾಡಬೇಕಾದರೆ, ಎಲ್ಲಾ ಜನರನ್ನೂ ಸಂಭವನೀಯ ವಾಗಿ ಅದೇ ಸ್ಥಾನಕ್ಕೆ ಏರಿಸಬೇಕು. ಈ ವಿಚಾರಸರಣಿಯನ್ನು ಯಾಕೆ ಅದರ ಉತ್ಕಟ ಮಿತಿಗೆ ತೆಗೆದುಕೊಂಡು ಹೋಗಬಾರದು? ಮತ್ತು ಪ್ರಗತಿಯ ಅದೇ ನಿಯಮವನ್ನು ಕಾಡುಮೃಗಗಳಿಗೂ, ಕ್ರಿಮಿಗಳಿಗೂ ಅನ್ವಯಿಸಬಾರದು? ಅವುಗಳೂ ಸಹಾ ದೇವರ ಸೃಷ್ಟಿಯೇ ಅಲ್ಲವೇ? ಹೀಗಾಗಿ ಸಂಭವನೀಯವಾಗಿ ಅವುಗಳೂ ದೈವಿಕ ಅಸ್ಥಿತ್ವದ ಉನ್ನತ ನೆಲೆಯನ್ನು ದೈವಿಕ ಸ್ವಭಾವವನ್ನು ಯಾಕೆ ಪಡಕೊಳ್ಳಬಾರದು? ಇದು ಊಹಿಸುವ ಈ ತತ್ವದಿಂದ ನಿರ್ಣಯಿಸುವದು ಎಷ್ಟು ತಾರ್ಕಿಕವಾಗಿವೆಯೋ ಅಷ್ಟೇ ಸ್ಪಷ್ಟವಾಗಿ ಅಸಂಬದ್ಧವಾಗಿದೆ.

ಬಹುಶಃ ಇದುವರೆಗೆ ಯಾರೂ ಈ ತಪ್ಪಾದ ಊಹನೆಗಳನ್ನು ಅನುಸರಿಸುವಂತೆ ಆಸಕ್ತರಾಗಿಲ್ಲ. ಆದರೂ ಅದು ಸರಳ ನ್ಯಾಯದಲ್ಲಿ ಸ್ಥಾಪಿತವಾದ ತತ್ವವಾಗಿದ್ದರೆ, ಅದು ಎಲ್ಲಿ ಸ್ಥಗಿತಗೊಳ್ಳುತ್ತಿತ್ತು ಹಾಗೂ ನ್ಯಾಯಸಮ್ಮತವಾಗುತ್ತಿತ್ತು? ಅದು ದೇವರ ಯೋಜನೆಯಾಗಿದ್ದರೆ, ಆತನ ಎಲ್ಲಾ ಕಾರ್ಯದಲ್ಲಿ ಸಂತುಷ್ಟಕರ ವೈವಿಧ್ಯತೆ ಎಲ್ಲಿರುತ್ತಿತ್ತು? ಅದರೆ, ದೇವರ ಯೋಜನೆ ಅಂಥಃವುಗಳಲ್ಲ. ಸಜೀವಿಗಳು ಹಾಗೂ ನಿರ್ಜೀವಿಗಳಿಗೆ ಸೇರಿದ ಎಲ್ಲಾ ಜೀವಿಗಳ ಪ್ರಾಕೃತ ಗುಣವು ದೇವರ ಶಕ್ತಿಯ ಮತ್ತು ಜ್ಞಾನದ ಮಹಿಮೆ ಮತ್ತು ವೈವಿಧ್ಯತೆಗಳನ್ನು ಪ್ರದರ್ಶಿಸುತ್ತವೆ. ಅದ್ಭುತ ವೈವಿಧ್ಯತೆ ಮತ್ತು ಸೌಂದರ್ಯವಿರುವ "ಆಕಾಶವು ದೇವರ ಪ್ರಭಾವವನ್ನು ಪ್ರಚುರಪಡಿಸುತ್ತದೆ. ಗಗನವು ಆತನ ಕೈಕೆಲಸವನ್ನು ತಿಳಿಸುತ್ತದೆ". ಹೀಗಿರುವಾಗ ಆತನ ಬುದ್ದಿವಂತ ಸೃಷ್ಟಿಯು ಇನ್ನೂ ಹೆಚ್ಚಾಗಿ ವಿವಿಧ ರೀತಿಯಲ್ಲಿ ಆತನ ಶಕ್ತಿಯ ಉನ್ನತವಾದ ಮಹಿಮೆಯನ್ನು ಪ್ರದರ್ಶಿಸುತ್ತದೆ, ಹಾಗಾಗಿ ದೇವರ ವಾಕ್ಯದ ತ್ವರಿತವಾದ ಬೋಧನೆಯಿಂದ, ವಿವೇಚನೆಯಿಂದ ಮತ್ತು ಸ್ವಭಾವದ ಸಾಮ್ಯತೆಗಳಿಂದ ಇದನ್ನು ನಾವು ನಿರ್ಧರಿಸುತ್ತೇವೆ.

ನಮಗೆ ನ್ಯಾಯದ ಸರಿಯಾದ ಆಲೋಚನೆ ಗಳಿರುವುದು ಬಹಳ ಮುಖ್ಯ. ಒಂದು ದಯೆಯನ್ನು ಎಂದಿಗೂ ನ್ಯಾಯಯುತವಾದ ಅರ್ಹತೆಯ ಪ್ರತಿಫಲವೆಂದು ಪರಿಗಣಿಸಬಾರದು. ಸರಳವಾದ

ನ್ಯಾಯದ ಕಾರ್ಯವು ಕೃತಜ್ಞತೆಯ ಸಂದರ್ಭವಲ್ಲ, ಅಥವಾ ಅದು ಪ್ರೀತಿಯ ರುಜುವಾತೂ ಅಲ್ಲ. ಆದರೆ ದೇವರು ತನ್ನ ಜೀವಿಗಳಿಗೆ ತನ್ನ ಅಪಾರ ಪ್ರೀತಿಯನ್ನು ಅನರ್ಹರಾದವರಿಗೂ ತನ್ನ ಅನುಗ್ರಹಗಳನ್ನು ಅಂತ್ಯವಿಲ್ಲದೆ ಸಾಲುಸಾಲಾಗಿ ವ್ಯಕ್ತಗೊಳಿಸುತ್ತಾನೆ. ಅದು ಅವರ ಪ್ರೀತಿ ಮತ್ತು ಮೆಚ್ಚುಗೆಯನ್ನು ಕೋರುತ್ತದೆ.

ನಾವು ಎಂದಿಗೂ ಪಾಪ ಮಾಡದಿದ್ದರೂ ಸಹ, ನಮ್ಮನ್ನು ಕೇವಲ ಅಲ್ಪಾವಧಿಯ ಸೃಷ್ಟಿಯನ್ನಾಗಿ ಮಾಡಲು ಆರಿಸುವ ಹಕ್ಕು ದೇವರಿಗಿದೆ. ಈ ರೀತಿಯಾಗಿ ಆತನು ತನ್ನ ಕೆಲವು ಕೆಳಮಟ್ಟದ ಸೃಷ್ಟಿಗಳನ್ನು ಮಾಡಿದ್ದಾನೆ. ಆತನು ಒಂದು ಕಾಲಕ್ಕೆ ಮಾತ್ರ ಆತನ ಆಶೀರ್ವಾದಗಳಲ್ಲಿ ಆನಂದಿಸುವಂತೆ ನಮ್ಮನ್ನು ಅನುಮತಿ ಮಾಡಿರಬಹುದು, ಮಾಡಿದ್ದನು. ನಂತರದಲ್ಲಿ, ಅನ್ಯಾಯವಿಲ್ಲದೆ, ನಮ್ಮೆಲ್ಲರನ್ನೂ ಇರುವಿಕೆಯಿಂದ ತೊಡೆದು ಹಾಕಬಹುದಿತ್ತು. ವಾಸ್ತವವಾಗಿ ಅಂಥಃ ಸಂಕ್ಷಿಪ್ತವಾದ ಅಸ್ಥಿತ್ವವು ಸಹಾ ದಯೆಯಾಗಿರುತ್ತಿತ್ತು. ಆತನ ಕೃಪೆಯಿಂದ ಮಾತ್ರವೇ ನಮಗೆ ಒಂದು ಅಸ್ತಿತ್ವವಿದೆ. ಪಾಪದ ಕಾರಣ ಮುಟ್ಟುಗೋಲಾದ ಅಸ್ತಿತ್ವವನ್ನು ಪುನರ್‌ವಶಪಡಿಸುವುದು ಎಷ್ಟೋ ಹೆಚ್ಚಾದ ಕೃಪೆಯಲ್ಲವೆ?. ಅಲ್ಲದೇ ನಾವು ಮಾನವರಾಗಿದ್ದೇವೆ ಪಶುಗಳಲ್ಲ ಎಂಬುದೂ ದೇವರ ಕೃಪೆಯೇ ಆಗಿದೆ. ದೇವದೂತರುಗಳು ಮಾನವರಿಗಿಂತ ಸ್ವಭಾವದಲ್ಲಿ ಸ್ವಲ್ಪವೇ ಹೆಚ್ಚಾಗಿರುವುದೂ ಶುದ್ಧವಾಗಿ ದೇವರ ಕೃಪೆಯಿಂದಲೇ. ಕರ್ತನಾದ ಯೇಸು ಮತ್ತು ಆತನ ಮದಲಗಿತ್ತಿಯು ದೈವ ಸ್ವಭಾವದಲ್ಲಿ ಪಾಲುದಾರ ರಾಗಿರುವುದು ಸಹಾದೇವರ ಕೃಪೆಯಿಂದಲೇ. ಆದುದರಿಂದ ಆತನ ಎಲ್ಲಾ ಬುದ್ಧಿವಂತ ಸೃಷ್ಟಿಗಳೂ ಆತನು ದಯಪಾಲಿಸಿದ್ದೆಲ್ಲವನ್ನೂ ಕೃತಜ್ಞತೆಯಿಂದ ಸ್ವೀಕರಿಸಬೇಕು. ಯಾವುದೇ ಇತರ ಚೇತನವು ನ್ಯಾಯವಾಗಿ ಖಂಡನೆಗೆ ಅರ್ಹವಾಗಿದೆ, ಹಾಗೂ ತೊಡಗಿಸಿಕೊಂಡರೆ, ಅವಮಾನ ಮತ್ತು ನಾಶನದಲ್ಲಿ ಅಂತ್ಯಗೊಳ್ಳುವುದು. ಮಾನವರಿಗೆ ದೇವದೂತರಾಗಲು ಹಂಬಲಿಸುವ ಹಕ್ಕಿಲ್ಲ. ಆತನು ಎಂದಿಗೂ ಆ ಸ್ಥಾನಕ್ಕಾಗಿ ಆಹ್ವಾನಿಸಲಾಗಿಲ್ಲ ಅಥವಾ ದೇವದೂತರು ದೈವಿಕ ಸ್ವಭಾವವನ್ನು ಹಂಬಲಿಸಲೂ ಹಕ್ಕಿಲ್ಲ. ಅದು ಅವರಿಗೆ ಎಂದಿಗೂ ಆ ಸ್ಥಾನವನ್ನು ನೀಡಲ್ಪಟ್ಟಿಲ್ಲ.

ಸೈತಾನನ ಹೆಮ್ಮೆಯ ಆಕಾಂಕ್ಷೆಯೇ ಆತನನ್ನು ತಗ್ಗಿಸಿತು ಮತ್ತು ಇದು ಆತನ ವಿನಾಶದಲ್ಲಿ ಕೊನೆಗೊಳ್ಳುತ್ತದೆ (ಯೆಶಾಯ 14:14–15). "ತನ್ನನ್ನು ಹೆಚ್ಚಿಸಿಕೊಳ್ಳುವ ಪ್ರತಿಯೊಬ್ಬನೂ ತಗ್ಗಿಸಲ್ಪಡುವನು; ತನ್ನನ್ನು ತಗ್ಗಿಸಿಕೊಳ್ಳುವವನು ಹೆಚ್ಚಿಸಲ್ಪಡುವನು" (ಲೂಕ 14:11), ಆದರೆ ಅನಿವಾರ್ಯವಾಗಿ ಅತ್ಯಂತ ಉನ್ನತ ಸ್ಥಾನಕ್ಕೆ ಅಲ್ಲ.

ಭಾಗಶಃವಾಗಿ ನ್ಯಾಯದ ಬಗ್ಗೆ ತಪ್ಪು ಕಲ್ಪನೆಗಳಿಂದ ಮತ್ತು ಭಾಗಶಃವಾಗಿ ಇತರ ಕಾರಣಗಳಿಂದ, ವೇದದಲ್ಲಿ ಬೋಧಿಸಿರುವ ಆಯ್ಕೆಯ ವಿಷಯವಾಗಿ ಬಹಳ ವಿವಾದ ಮತ್ತು ತಪ್ಪು ತಿಳುವಳಿಕೆಗೆ ಸಂದರ್ಭವೊದಗಿದೆ. ವೇದವು ಬೋಧಿಸುವ ಆಯ್ಕೆಯನ್ನು ಕೆಲವರು ನಿರಾಕರಿಸುತ್ತಾರೆ. ಆಯ್ಕೆಯು ಯಾವ ತತ್ವವನ್ನು ಆಧರಿಸಿದೆ ಎಂಬುದು ಪರಿಗಣಿಸಬಹುದಾದ ಭಿನ್ನಾಭಿಪ್ರಾಯದ ವಿಷಯವಾಗಿದೆ, ಕೆಲವರು ಅದು ನಿರಂಕುಶ, ಬೇಷರತ್ತಾದ ಆಯ್ಕೆ ಎನ್ನುತ್ತಾರೆ ಮತ್ತು ಇತರರು ಷರತ್ತು ಬದ್ಧವಾದುದು ಎಂದು ಹೇಳುತ್ತಾರೆ. ಈ ಎರಡೂ ದೃಷ್ಟಿಯಲ್ಲಿ ಕೆಲವು ಮಟ್ಟದ ಸತ್ಯವಿದೆ ಎಂದು ನಾವು ನಂಬುತ್ತೇವೆ. ದೇವರ ಕಡೆಯಿಂದ ಒಂದು ಆಯ್ಕೆಯು ಕೆಲವೊಂದು ನಿರ್ದಿಷ್ಟವಾದ ಉದ್ದೇಶಗಳಿಗಾಗಿ, ಅಧಿಕಾರ ಸ್ಥಾನಕ್ಕಾಗಿ ಅಥವಾ ಪರಿಸ್ಥಿತಿಗಾಗಿ ಆತನ ಆಯ್ಕೆಯ ಹೇಳಿಕೆಯಾಗಿದೆ. ದೇವರು ಆತನ ಸೃಷ್ಟಿಗಳಲ್ಲಿ ಕೆಲವರು ದೇವದೂತರಾಗಬೇಕೆಂದೂ, ಕೆಲವರು ಮಾನವರಾಗ ಬೇಕೆಂದೂ, ಮತ್ತೆ ಕೆಲವು ಪ್ರಾಣಿಗಳೂ, ಹಕ್ಕಿಗಳೂ, ಕ್ರಿಮಿ ಮುಂತಾದವುಗಳು ಮತ್ತು ಕೆಲವು ಆತನ ಸ್ವಂತ ದೈವಿಕ ಸೃಷ್ಟಿಗಳಾಗಬೇಕೆಂದು ಆಯ್ಕೆಮಾಡಿದ್ದಾನೆ ಅಥವಾ ಆಯ್ದುಕೊಂಡಿದ್ದಾನೆ. ದೇವರು ಯಾರು ದೈವಿಕ ಸ್ವಭಾವಕ್ಕೆ ಸೇರಬೇಕೆಂದು ಕೆಲವೊಂದು ಷರತ್ತುಗಳ ಮೇರೆಗೆ ಆಯ್ಕೆ ಮಾಡುವವನಾದರೂ ಅವರು ಇತರರಿಗಿಂತ ಹೆಚ್ಚು ಅರ್ಹರಾಗಿರುತ್ತಾರೆಂದು ಹೇಳಲಾಗದು. ಯಾಕೆಂದರೆ ಯಾವುದೇ ಸೃಷ್ಟಿಯು ಯಾವ ಸಮತಲದಲ್ಲಿರ ಬೇಕೆಂಬುದು ಕೇವಲ ಕೃಪೆಯಾಗಿದೆ.

"ಆದುದರಿಂದ ದೇವರ ದಯವು ಮನುಷ್ಯರಿಗೆ ಇಚ್ಛೈಸುವುದರಿಂದಾಗಲೀ, ಪ್ರಯತ್ನಿಸಿವುದರಿಂದಾಗಲೀ ದೊರೆಯದೆ ದೇವರು ಕರುಣಿಸುವುದರಿಂದಲೇ ದೊರೆಯುತ್ತದೆ" (ರೋಮಾ. 9:16) – ಕರುಣೆ ಮತ್ತು ಅನುಗ್ರಹ. ಆಯ್ದುಕೊಂಡವರಿಗೆ ದೇವರು ಆಹ್ವಾನ ನೀಡುವುದು ಅವರು ಇತರರಿಗಿಂತ ಉತ್ತಮರೆಂದಲ್ಲ. ಯಾಕೆಂದರೆ, ಆತನು ಪಾಪ ಮಾಡದ ದೇವದೂತರನ್ನು ದಾಟಿ ಮುಂದೆ ಹೋಗಿ ಕೆಲವು ವಿಮೋಚನೆಗೊಂಡ ಪಾಪಿಗಳನ್ನು ದೈವಿಕ ಗೌರವ ಹೊಂದಿಕೊಳ್ಳುವಂತೆ ಕರೆದಿದ್ದಾನೆ. ದೇವರಿಗೆ ತನ್ನ ಇಚ್ಛಾನುಸಾರ ಮಾಡುವ ಅಧಿಕಾರವಿದೆ. ಆತನು ತನ್ನ ಯೋಜನೆಯ ನೆರವೇರಿಕೆಗಾಗಿ ಈ ಅಧಿಕಾರವನ್ನು ಕಾರ್ಯಗತ ಗೊಳಿಸುವಂತೆ ಆಯ್ದುಕೊಳ್ಳುತ್ತಾನೆ. ಆದುದರಿಂದ

ನಮಗಿರುದೆಲ್ಲವೂ ದೇವರ ದಯೆಯಿಂದಲೇ, "ದೇವರಿಗೆ ಎದುರು ಮಾತನಾಡುವುದಕ್ಕೆ ನೀನು ಎಷ್ಟರವನು? ರೂಪಿಸಲ್ಪಟ್ಟದ್ದು ರೂಪಿಸಿದವನಿಗೆ – ನನ್ನನ್ನು ಹೀಗೇಕೆ ಮಾಡಿದೆ ಎಂದು ಕೇಳುವುದುಂಟೇ? ಉತ್ತಮವಾದ ಬಳಕೆಗೆ – ಅಥವಾ ಕಡಿಮೆ ಬಳಕೆಗೆ ಒಂದು ಪಾತ್ರೆಯನ್ನೂ, ಹೀನವಾದ ಬಳಕೆಗೆ ಮತ್ತೊಂದು ಪಾತ್ರೆಯನ್ನೂ ಒಂದೇ ಮುದ್ದೆಯಿಂದ ಮಾಡುವುದಕ್ಕೆ ಕುಂಬಾರನಿಗೆ ಮಣ್ಣಿನ ಮೇಲೆ ಅಧಿಕಾರವಿಲ್ಲವೋ? (ರೋಮಾ. 9:20,21). ಎಲ್ಲರೂ ಅದೇ ದೈವಿಕ ಶಕ್ತಿಯಿಂದ ಸೃಷ್ಟಿಸಲ್ಪಟ್ಟಿದ್ದಾರೆ – ಕೆಲವರು ಉನ್ನತ ಸ್ವಭಾವದವರಾಗಿ ಹೆಚ್ಚಿನ ಗೌರವಕ್ಕೆ, ಮತ್ತೆ ಕೆಲವರು ಕೆಳಮಟ್ಟದ ಸ್ವಭಾವವುಳ್ಳವರಾಗಿ ಕಡಿಮೆ ಗೌರವಕ್ಕೆ ಸೃಷ್ಟಿಸಲ್ಪಟ್ಟಿದ್ದಾರೆ.

"ಇಸ್ರಾಯೇಲ್ಯರ ಪರಿಶುದ್ಧನೂ, ಸೃಷ್ಟಿಕರ್ತನೂ ಆದ ಯೆಹೋವನ ಮಾತನ್ನು ಕೇಳಿರಿ – ಭವಿಷ್ಯತ್ತುಗಳ ವಿಷಯವಾಗಿ ನನ್ನನ್ನು ವಿಚಾರಿಸಿರಿ. ನಾನೇ ನಿರ್ಮಿಸಿದ ನನ್ನ ಮಕ್ಕಳ ವಿಷಯದಲ್ಲಿ ನನಗೆ ಏನನ್ನು ವಿಧಿಸಿದರೂ ವಿಧಿಸಿರಿ. ಭೂಲೋಕವನ್ನುಂಟುಮಾಡಿ ಅದರಲ್ಲಿನ ಮನುಷ್ಯರನ್ನು ಸೃಷ್ಟಿಸಿದವನು ನಾನೇ. ನನ್ನ ಕೈಗಳೇ ಆಕಾಶ ಮಂಡಲವನ್ನು ಹರಡಿದವು, ನಕ್ಷತ್ರ ಸೈನ್ಯಕ್ಕೆ ಅಪ್ಪಣೆ ಕೊಟ್ಟವನೂ ನಾನೇ" (ಯೆಶಾಯ 45 :11,12). "ಆಕಾಶ ಮಂಡಲವನ್ನು ಸೃಷ್ಟಿಸಿದ ಯೆಹೋವನ ಮಾತನ್ನು ಕೇಳಿರಿ; ಆತನೇ ದೇವರು, ಭೂಲೋಕವನ್ನು ನಿರ್ಮಿಸಿ, ರೂಪಿಸಿ ಸ್ಥಾಪಿಸಿದವನು. ಅದನ್ನು ಶೂನ್ಯ ಸ್ಥಾನವಾಗಿರಲೆಂದು ಸೃಷ್ಟಿಸದೇ ಜನನಿವಾಸಕ್ಕಾಗಿಯೇ ಸೃಷ್ಟಿಸಿದನು, ಈತನು ಹೀಗನ್ನುತ್ತಾನೆ – ನಾನೇ ಯೆಹೋವನು, ಇನ್ನು ಯಾವನೂ ಅಲ್ಲ" (ಯೆಶಾಯ 45:18). ದೇವರಿಗೆ ಆದೇಶ ಕೊಡುವ ಅಧಿಕಾರ ಯಾರಿಗೂ ಇರುವುದಿಲ್ಲ. ಆತನು ಭೂಲೋಕವನ್ನು ಸ್ಥಾಪನೆ ಮಾಡಿದರೆ, ಆತನು ಅದನ್ನು ಶೂನ್ಯವಾಗಿರಲೆಂದು ಸೃಷ್ಟಿಸದೆ ಜನನಿವಾಸಕ್ಕಾಗಿಯೇ ರೂಪಿಸಿದನು, ಅದರಲ್ಲಿ ಪುನಃವಶಗೊಂಡವರು, ಪರಿಪೂರ್ಣ ಮಾನವರು ವಾಸಿಸುವಂತೆ ಮಾಡಿದರೆ, ದೇವರಿಗೆ ಎದುರಾಗಿ ಮಾತನಾಡುವದಕ್ಕೆ ನೀನು ಎಷ್ಟರವರನು?. ಅವರ ಪ್ರಕೃತಿಯನ್ನು ಬದಲಾಯಿಸಿ ಅವರೆಲ್ಲರನ್ನು ಆತ್ಮೀಕ ಪ್ರವೃತ್ತಿಗೆ ಅಥವಾ ದೇವದೂತರಂತೆ ಅಥವಾ ಆತನ ಸ್ವಂತ ದೈವಿಕ ಪ್ರವೃತ್ತಿಗೆ ಬದಲಾಯಿಸದೆ ಇರುವುದು ನ್ಯಾಯವಲ್ಲವೆಂದು ದೇವರಿಗೆ ಉತ್ತರಿಸಲು ನಾವು ಯಾರು? ದೇವರ ವಾಕ್ಯಕ್ಕೆ ಉಚಿತವಾದ ನಮ್ರತೆಯಿಂದ ಬರಲಿರುವ ವಿಷಯಗಳ ಬಗ್ಗೆ "ಕೇಳು"ವುದನ್ನು ಹೊರತುಪಡಿಸಿ, ಆತನಿಗೆ "ಆಜ್ಞಾಪಿಸಿ" ಅಥವಾ ಖಂಡಿತವಾಗಿ ನಮ್ಮ ಆಲೋಚನೆಗಳನ್ನು ಅವನು ಕೊಂಡೊಯ್ಯಬೇಕು ಎಂದು ಕೇಳುವುದು ಎಷ್ಟು ಸರಿ? ಕರ್ತನೇ, ನಿನ್ನ ಸೇವಕರನ್ನು ದುರಹಂಕಾರದ ಪಾಪದಿಂದ ಹಿಂದಕ್ಕೆ ತಳ್ಳು; ಅವರು ನಮ್ಮ ಮೇಲೆ ದೊರೆತನ ಮಾಡದಿರಲಿ. ದೇವರ ಮಕ್ಕಳು ಯಾರೂ ದೇವರಿಗೆ ಉದ್ದೇಶಪೂರ್ವಕವಾಗಿ ಆದೇಶಕೊಡಲಾರರು ಎಂಬುದಾಗಿ ನಾವು ನಂಬುತ್ತೇವೆ. ಆದಾಗ್ಯೂ ಎಷ್ಟು ಸುಲಭವಾಗಿ, ಬಹುತೇಕ ಅರಿವಿಲ್ಲದೆ ಅನೇಕರು ಈ ತಪ್ಪಿನಲ್ಲಿ ಬೀಳುವರಲ್ಲವೆ?

ಮಾನವ ಕುಲವು ಸೃಷ್ಟಿಯಿಂದ ದೇವರ ಮಕ್ಕಳು – ಆತನ ಕೈಕೆಲಸ – ಮತ್ತು ಅವರ ಬಗ್ಗೆ ಆತನ ಯೋಜನೆಯು ಆತನ ವಾಕ್ಯದಲ್ಲಿ ಸ್ಪಷ್ಟವಾಗಿ ಬಹಿರಂಗಗೊಂಡಿದೆ. ಪೌಲನು ಹೇಳುವಂತೆ ಮೊದಲ ಮನುಷ್ಯನು (ಸಂತತಿಯು ಪರಿಪೂರ್ಣಗೊಂಡಾಗ ಹೇಗಿರುತ್ತದೆಂಬುದಕ್ಕೆ ಆತನು ನಮೂನೆಯಾಗಿದ್ದಾನೆ) ಮಣ್ಣಿನಿಂದ ಹುಟ್ಟಿದವನು, ಮಣ್ಣಿಗೆ ಸಂಬಂಧಪಟ್ಟವನು; ಮತ್ತು ಆತನ ಸಂತಾನವು, ಸುವಾರ್ತಾ ಸಭೆಯನ್ನು ಹೊರತುಪಡಿಸಿ ಪುನರುತ್ಥಾನದಲ್ಲಿ ಇನ್ನೂ ಭೂಲೋಕದ್ದಾಗಿರುತ್ತದೆ, ಭೂಲೋಕಕ್ಕೆ ಹೊಂದಿಕೆಯಾಗುತ್ತದೆ (1 ಕೊರಿಂಥ 15:38,44.) ಮಾನವನು ದೇವದೂತರುಗಳಿಗಿಂತ ಸ್ವಲ್ಪವೇ ಕಡಿಮೆಯಾಗಿ ಸೃಷ್ಟಿಸಲ್ಪಟ್ಟಿದ್ದಾನೆ. ಪ್ರಭಾವವನ್ನೂ, ಮಾನವನ್ನೂ ಕಿರೀಟವಾಗಿ ಧರಿಸಿದವನಾಗಿದ್ದಾನೆ, ಎಲ್ಲವುಗಳ ಮೇಲೆ ಪ್ರಭುತ್ವವನ್ನು ಪಡೆದಿದ್ದಾನೆ ಎಂದು ದಾವೀದನು ಪ್ರಕಟಿಸುತ್ತಾನೆ (ಕೀರ್ತನೆ 8:4–8). ಪೇತ್ರನು ಮತ್ತು ನಮ್ಮ ಕರ್ತನು ಮತ್ತು ಲೋಕದ ಆದಿಯಿಂದ ಇದ್ದ ಎಲ್ಲಾ ಪ್ರವಾದಿಗಳೂ, ಲೋಕವು ಉಂಟಾದಂದಿನಿಂದ ಮನುಕುಲವು ಮಹಿಮಾಪೂರ್ಣತೆಗೆ ಪುನರ್ವಶಹೊಂದಿಕೊಂಡು ಭೂಲೋಕದ ಮೇಲೆ ಅದರ ಪ್ರತಿನಿಧಿಯಾದ ಆದಾಮನಿಗಿದ್ದ ಪ್ರಭುತ್ವವನ್ನು ಪುನಃ ಪಡಕೊಳ್ಳ ಬೇಕಾಗಿದೆ ಎಂದು ಪ್ರಕಟಿಸಿದ್ದಾರೆ (ಅ.ಕೃ 3: 19–21).

ಈ ಭಾಗವನ್ನು ದೇವರು ಮಾನವ ಕುಲಕ್ಕೆ ನೀಡಲು ಆರಿಸಿಕೊಂಡಿದ್ದಾನೆ! ಎಂತಹ ಮಹಿಮಾಯುತ ಹಂಚಿಕೆ! ಪಾಪದ ನಿಮಿತ್ತ ಇನ್ನೂ ಪ್ರಚಲಿತವಾಗಿರುವ ಬವಣೆ, ದುಃಖ, ತೊಳಲಾಟ, ಅಪಮಾನ, ಪತನ, ಕಷ್ಟ ಸಂಕಟ ಮತ್ತು ವಿಪತ್ತುಗಳ ದೃಶ್ಯಗಳಿಗೆ ನಿಮ್ಮ ಕಣ್ಣುಗಳನ್ನು ಕ್ಷಣಕಾಲ ಮುಚ್ಚಿ ವೀಕ್ಷಿಸಿರಿ ಮತ್ತು ನಿಮ್ಮ ಮಾನಸಿಕ ದೃಷ್ಟಿಯಲ್ಲಿ ಪರಿಪೂರ್ಣವಾದ ಭೂಲೋಕದ ಮಹಿಮೆಯನ್ನೂ ಚಿತ್ರಿಸಿಕೊಳ್ಳಿ. ಪಾಪದ ಯಾವುದೇ ಕಳಂಕವು ಪರಿಪೂರ್ಣ ಸಮಾಜದ ಸಾಮರಸ್ಯ

ಮತ್ತು ಶಾಂತಿಯನ್ನು ಮಹಿಮೆಯನ್ನು ಮಾರ್ಪಾಟುಗೊಳಿಸಲಾರರು. ಯಾವುದೇ ಕಹಿ ಆಲೋಚನೆಯಲ್ಲ, ಯಾವುದೇ ನಿಷ್ಕರುಣಾ ನೋಟ ಅಥವಾ ಮಾತು ಇರಲಾರದು. ಪ್ರೀತಿಯು ಪ್ರತಿ ಹೃದಯದಲ್ಲಿ ಉಕ್ಕಿ ಹರಿಯುವದು, ಪ್ರತಿಯೊಂದು ಹೃದಯದಲ್ಲಿಯೂ ಆಪ್ತತ್ವದ ಪ್ರತಿಕ್ರಿಯೆಯನ್ನುಂಟು ಮಾಡುತ್ತದೆ. ಮತ್ತು ಪ್ರತಿಯೊಂದು ಕ್ರಿಯೆಯೂ ಪರೋಪಕಾರವನ್ನು ಗುರುತಿಸುತ್ತದೆ. ಅನಾರೋಗ್ಯವೆಂಬುದು ಇನ್ನು ಮೇಲೆ ಇರುವುದಿಲ್ಲ. ಯಾವುದೇ ನೋವೂ, ಬೇನೆಯೂ ಇರುವುದಿಲ್ಲ. ಕೊಳೆಯುವ ಯಾವ ಕುರುಹೂ ಇರುವುದಿಲ್ಲ – ಅಂಥಾಃ ಸಂಗತಿಗಳ ಭಯವೂ ಸಹಾ ಇರುವುದಿಲ್ಲ. ನೀವು ಇದುವರೆಗೆ ನೋಡಿರುವ ಮಾನವ ರೂಪದ ಲಕ್ಷಣದ ತುಲನಾತ್ಮಕವಾದ ಆರೋಗ್ಯ ಮತ್ತು ಸೌಂದರ್ಯದ ಎಲ್ಲಾ ಚಿತ್ರದ ಬಗ್ಗೆ ಆಲೋಚಿಸಿರಿ ಮತ್ತು ಪರಿಪೂರ್ಣವಾದ ಮಾನವತ್ವವು ಇನ್ನೂ ಎಲ್ಲಾ ಸೌಂದರ್ಯತೆಯನ್ನು ಮೀರುವುದಾಗಿದೆ ಎಂಬುದನ್ನು ತಿಳಿದುಕೊಳ್ಳಿರಿ. ಅಂತರಂಗ ಶುದ್ಧತೆ ಮತ್ತು ಮಾನಸಿಕ ಮತ್ತು ನೈತಿಕ ಪರಿಪೂರ್ಣತೆಯು ಪ್ರತಿಯೊಂದು ಪ್ರಜ್ವಲಿಸುವ ಚಹರೆಯನ್ನು ಮುದ್ರಿಸುತ್ತದೆ. ಭೂಲೋಕದ ಸಮಾಜವು ಈ ರೀತಿಯಾಗಿರುತ್ತದೆ; ದುಃಖಿಸುವ ವಿಯೋಗಿಗಳ ಎಲ್ಲಾ ಕಣ್ಣೀರುಗಳೂ ಒರೆಸಿ ಹಾಕಲ್ಪಡುವುವು, ಈ ರೀತಿಯಲ್ಲಿ ಅವರ ಪುನರುತ್ಥಾನ ಕಾರ್ಯವು ಸಂಪೂರ್ಣಗೊಂಡಿದೆ ಎಂಬುದನ್ನು ಗ್ರಹಿಸಿಕೊಳ್ಳುವರು (ಪ್ರಕಟನೆ 21:4).

ಇದು ಮಾನವ ಸಮಾಜದಲ್ಲಿ ಮಾತ್ರವೇ ಆಗುವ ಬದಲಾವಣೆಯಾಗಿದೆ. ಅಂಥಾಃ ಸಂತತಿಯ ಜೀವಿಗಳು ಜನನಿವಾಸಕ್ಕಾಗಿಯೇ ಸೃಷ್ಟಿಸಿ ಈ ಭೂಲೋಕವು ಅವರಿಗೆ ಸೂಕ್ತವಾದ ಮತ್ತು ಯೋಗ್ಯವಾದ ನಿವಾಸಸ್ಥಾನವಾಗಿದೆ. ಮಾನವರ ಪ್ರತಿನಿಧಿಯು ಮೊದಲಿಗೆ ಇಡಲ್ಪಟ್ಟ ಏದೇನಿನ ಪರದೈಸಿನಲ್ಲಿ ಪ್ರತಿನಿಧಿಸಲ್ಪಟ್ಟಿದೆ ಎಂಬುದನ್ನು ಸಹಾ ನಾವು ನಮ್ಮ ಮನಸ್ಸಿಗೆ ತಂದುಕೊಳ್ಳುತ್ತೇವೆ. ಇದು ಪರದೈಸನ್ನು ಪುನಃಸ್ಥಾಪಿಸಲ್ಪಡುತ್ತದೆ. ಭೂಮಿಯು ಇನ್ನು ಮುಂದೆ ಮುಳ್ಳುಗಿಡಗಳನ್ನು, ಪೊದೆಗಳನ್ನು ಬೆಳೆಸುವುದಿಲ್ಲ ಮತ್ತು ಅವನು ತನ್ನ ಆಹಾರವನ್ನು ಉತ್ಪಾದಿಸಲು ಮಾನವನ ಮುಖದ ಬೆವರನ್ನು ಸುರಿಸಬೇಕಾಗಿಲ್ಲ. ಆದರೆ ಭೂಮಿಯು ಸುಲಭವಾಗಿಯೂ, ಸ್ವಾಭಾವಿಕವಾಗಿಯೂ ಒಳ್ಳೆಯ ಫಸಲನ್ನು ಉತ್ಪಾದಿಸುತ್ತದೆ. ಮರುಭೂಮಿಯು ಗುಲಾಬಿಯಂತೆ ಅರಳುತ್ತದೆ. ಕೆಳವರ್ಗದ ಪ್ರಾಣಿಗಳ ಸೃಷ್ಟಿಯು ಪರಿಪೂರ್ಣವಾದ ಇಚ್ಛೆಯುಳ್ಳ ಮತ್ತು ವಿಧೇಯ ಸೇವಕರಾಗಿರುತ್ತವೆ. ಪ್ರಕೃತಿಯು ಅದರ ಎಲ್ಲಾ ಆಹ್ಲಾದಕರ ವೈವಿಧ್ಯತೆಗಳೊಂದಿಗೆ ಮಾನವನನ್ನು ದೇವರ ಮಹಿಮೆ, ಶಕ್ತಿ ಮತ್ತು ಪ್ರೀತಿಯನ್ನು ಅರಸುವಂತೆ ಮತ್ತು ತಿಳುಕೊಳ್ಳುವಂತೆ ಎಲ್ಲಾ ದಿಕ್ಕುಗಳಿಂದಲೂ ಆಹ್ವಾನಿಸುತ್ತದೆ. ಮನಸ್ಸು ಮತ್ತು ಹೃದಯವು ಆತನಲ್ಲಿ ಆನಂದಿಸುತ್ತವೆ, ಯಾವುದಾದರೂ ಈಗ ಪ್ರಚಲಿತವಾಗಿರುವ ಹೊಸತನಕ್ಕೆ ಚಡಪಡಿಸುವ ಆಶೆಯು ಸ್ವಾಭಾವಿಕವಾದುದಲ್ಲ. ಅದು ಅಸಹಜ ಸ್ಥಿತಿಯಾಗಿದೆ. ನಮ್ಮ ಅಪರಿಪೂರ್ಣತೆಯ ಕಾರಣ ಮತ್ತು ನಮ್ಮ ಪ್ರಸ್ತುತವಾದ ಅತೃಪ್ತಿಕರ ಪರಿಸರದ ಸಲುವಾಗಿ ಇದು ಒಂದು ಅಸಾಮಾನ್ಯ ಸ್ಥಿತಯಾಗಿದೆ. ಯಾವುದೇ ಹೊಸತನಕ್ಕೆ ಚಡಪಡಿಸುವುದು ದೇವರ ಹೋಲಿಕೆಯಲ್ಲ. ಹೆಚ್ಚಿನ ವಿಷಯಗಳು ದೇವರಿಗೆ ಹಳೆಯದಾಗಿವೆ ಮತ್ತು ಆತನು ಹಳೆಯ ಮತ್ತು ಪರಿಪೂರ್ಣವಾದ ಸಂಗತಿಗಳಲ್ಲಿ ಆನಂದಿಸುತ್ತಾನೆ. ಅದೇ ರೀತಿಯು ಮಾನವರು ದೈವಸ್ವರೂಪಕ್ಕೆ ಪುನರ್‌ವಶಗೊಳ್ಳುವಾಗ ಸಹ ಇರುತ್ತದೆ. ಪರಿಪೂರ್ಣ ಮಾನವನಿಗೆ ಇದು ಗೊತ್ತಿರುವುದಿಲ್ಲ ಮತ್ತು ಆತನು ಇದನ್ನು ಪೂರ್ಣವಾಗಿ ಮೆಚ್ಚಿಕೊಳ್ಳುವುದಿಲ್ಲ ವಾದುದರಿಂದ, ಆತ್ಮೀಕ ಜೀವಿಯ ಮಹಿಮೆಯನ್ನು ಅದು ಮೀನುಗಳು ಮತ್ತು ಪಕ್ಷಿಗಳಂತೆ ವಿಭಿನ್ನ ಸ್ವಭಾವವುಳ್ಳದ್ದಾಗಿರುವುದರಿಂದ ಇಷ್ಟಪಡುವುದಿಲ್ಲ. ಅದೇ ಕಾರಣದಿಂದ ಆತನು ತನ್ನ ಸ್ವಂತ ಸ್ವಭಾವವನ್ನು ಮತ್ತು ಮೂಲವಸ್ತುವನ್ನು ಮೆಚ್ಚಿಕೊಂಡು ಅದರಲ್ಲೇ ಆನಂದಿಸುತ್ತಾನೆ. ಮಾನವನು ತನ್ನನ್ನು ಮಾನವನ ನೆಲೆಯಲ್ಲಿ ಸುತ್ತುವರೆದಿರುವ ಮಹಿಮೆಯೊಂದಿಗೆ ಮಗ್ನನಾಗಿ ಮತ್ತು ಪುಳಕಿತನಾಗಿ ರುವನೆಂದರೆ ಆತನಿಗೆ ತಾನು ಹೊಂದಿರುವುದಕ್ಕಿಂತ ಬೇರೆ ಯಾವ ಸ್ಥಿಯ ಬಗ್ಗೆಯೂ ಯಾವುದೇ ಹೆಬ್ಬಯಕೆಗಳಾಗಲೀ, ಆದ್ಯತೆಯಾಗಲೀ ಇರುವುದಿಲ್ಲ. ಸಭೆಯೊಂದಿಗಿನ ಪ್ರಸ್ತುತ ಅನುಭವಗಳ ಬಗ್ಗೆ ಕ್ಷಣದರ್ಶನ ಮಾಡುವಾಗ ಇದು ಸ್ಪಷ್ಟಗೊಳ್ಳುತ್ತದೆ. ಈ ಪ್ರಪಂಚದ ಸರಕುಗಳಲ್ಲಿ ಶ್ರೀಮಂತರಾಗಿರುವವರು ದೇವರ ರಾಜ್ಯದಲ್ಲಿ ಪ್ರವೇಶಿಸುವುದು ಎಷ್ಟೋ ಕಷ್ಟವೂ ತೊಡಕೂ ಆಗಿವೆ. ಪ್ರಸ್ತುತವಾದ ಕೆಡುಕನ ಆಳ್ವಿಕೆಯಲ್ಲಿಯೂ ಮರಣದ ಅಡಿಯಲ್ಲಿಯೂ ಹೊಂದಿಕೊಂಡಿರುವ ಕೆಲವು ಒಳ್ಳೇ ಸಂಗತಿಗಳು/ವಸ್ತುಗಳು ಸಹ ಮಾನವ ಸ್ವಭಾವವನ್ನು ವಶಪಡಿಸಿಕೊಳ್ಳುತ್ತದೆ. ಆದ್ದರಿಂದ ಆತ್ಮೀಕ ವಾಗ್ದಾನಗಳ ಮೇಲೆ ನಾವು ನಮ್ಮ ಲಕ್ಷ್ಯ ಮತ್ತು ಉದ್ದೇಶವಿಡುವಂತೆ ನಮಗೆ ದೇವರ ವಿಶೇಷ ಸಹಾಯವು ಬೇಕಾಗುತ್ತದೆ.

ಕ್ರಿಸ್ತನ ದೇಹವಾಗಿರುವ ಸಭೆಯು, ಮಾನವ ಜಾತಿಯವರ ಬಗ್ಗೆ ದೇವರ ಸಾಮಾನ್ಯ ಯೋಜನೆಗೆ

ಹೊರತುಪಡಿಸಿದೆ ಎಂಬುದು ಅದರ ಆಯ್ಕೆಯು ದೈವಿಕ ಯೋಜನೆಯಲ್ಲಿ ಈ ಲೋಕಕ್ಕೆ ಅಸ್ತಿವಾರ ಹಾಕುವ ಮೊದಲೇ ನಿರ್ಣಯವಾಗಿದೆ (ಎಫೆಸ 1:4,5) ಎಂಬುದರಿಂದ ವಿಶದವಾಗುತ್ತದೆ. ಆ ಸಮಯದಲ್ಲಿ ದೇವರು ಮಾನವ ಜಾತಿಯ ಪತನವನ್ನು ಮುಂಗಂಡದ್ದಲ್ಲದೆ, ಅದರ ನೀತಿನಿರ್ಣಯವನ್ನು, ಪವಿತ್ರಗೊಳಿಸುವಿಕೆಯನ್ನು ಮತ್ತು ಆ ವರ್ಗದವರ ಮಹಿಮೆಯನ್ನು ಪೂರ್ವನಿರ್ಧಾರಗೊಳಿಸಿದ್ದನು. ಸುವಾರ್ತಾ ಯುಗದಲ್ಲಿ ಅವರು ತಮ್ಮ ಮಗನ ಸ್ವಾರೂಪ್ಯಕ್ಕೆ ಅನುಗುಣವಾಗಿರಲು, ದೈವಿಕ ಸ್ವಭಾವದ ಪಾಲುದಾರರಾಗಲು ಮತ್ತು ಸಾರ್ವತ್ರಿಕ ನೀತಿಯನ್ನು ಮತ್ತು ಶಾಂತಿಯನ್ನು ಸ್ಥಾಪಿಸಲು ಸಹಸ್ರಮಾನದ ಅರಸನಾದ ಕ್ರಿಸ್ತ ಯೇಸುವಿನೊಂದಿಗೆ ಸಹ ಬಾಧ್ಯಸ್ತರಾಗಿರಲು ಆತನು ಅವರನ್ನು ಜಗತ್ತಿನೊಳಗಿಂದ ಕರೆಯುತ್ತಿದ್ದಾನೆ (ರೋಮಾ. 8:28–31).

ಸಭೆಯ ಆಯ್ಕೆ ಮತ್ತು ಆರಿಸಿಕೊಳ್ಳುವಿಕೆ ದೇವರ ಪಾತ್ರದಲ್ಲಿ ಪೂರ್ವನಿರ್ಧಾರಿತವಾದ ಸಂಗತಿಯಾಗಿದೆ ಎಂಬುದನ್ನು ತೋರಿಸುತ್ತದೆ. ಆದರೆ ಅದು ಸಭೆಯ ವ್ಯಕ್ತಿಗತ ಸದಸ್ಯರ ಬೇಷರತ್ತುಳ್ಳ ಆಯ್ಕೆಯಲ್ಲವೆಂಬುದನ್ನು ಗುರುತಿಸಿ. ಈ ಲೋಕದ ಅಸ್ತಿವಾರ ಹಾಕುವ ಮೊದಲೇ ದೇವರು ಅಂಥಾಃ ತಂಡವನ್ನು ಅಂಥಾಃ ಉದ್ದೇಶಕ್ಕಾಗಿ ನಿಗದಿತ ಸಮಯದೊಳಗೆ – ಸುವಾರ್ತಾ ಯುಗದಲ್ಲಿ ಆಯ್ಕೆಯಾಗಬೇಕೆಂದು ನಿರ್ಧರಿಸಿದ್ದಾನೆ. ದೇವರು ಸಭೆಯ ಪ್ರತಿಯೊಬ್ಬ ಸದಸ್ಯನ ಕೃತ್ಯವನ್ನು ಮುಂಗಾಣುವವನಾಗಿದ್ದಾನೆ ಎಂಬ ಬಗ್ಗೆ ನಮಗೆ ಯಾವುದೇ ಅನುಮಾನಗಳು ಇಲ್ಲದಿರುವಾಗ, ಆತನು ಯಾರು ಆ ಕಾರಣದಿಂದ ಆ 'ಚಿಕ್ಕ ಹಿಂಡಿನ' ಸದಸ್ಯರಾಗಲು ಅರ್ಹರಾಗಿದ್ದಾರೆ ಎಂಬುದನ್ನೂ ಮೊದಲೇ ತಿಳಿದಿರುತ್ತಾನೆಯಾದರೂ, ದೇವರ ವಾಕ್ಯಗಳೂ ಆಯ್ಕೆಯ ಸಿದ್ಧಾಂತವನ್ನು ಈ ರೀತಿಯಾಗಿ ಪ್ರಸ್ತುತಪಡಿಸುವುದಿಲ್ಲ. ಅಪೋಸ್ತಲರುಗಳು ಬೋಧಿಸಲು ಬಯಸಿದಂತೆ ಅದು ಓರ್ವ ವ್ಯಕ್ತಿಯ ಪೂರ್ವಭಾವಿ ನಿರ್ಧಾರವಾಗಿರುವುದಿಲ್ಲ. ಆದರೆ ಒಂದು ವರ್ಗವು ಆ ಗೌರವಾನ್ವಿತ ಸ್ಥಾನವನ್ನು ಹೊಂದಿಕೊಳ್ಳಲು ದೇವರ ಉದ್ದೇಶದಲ್ಲಿ ಪೂರ್ವನಿರ್ಧಾರಿತವಾಗಿದೆ. ಅದರ ಆಯ್ಕೆಯು ಮರಣಪರ್ಯಂತರವಾದ ವಿಶ್ವಾಸದ, ವಿಧೇಯತೆಯ, ಮತ್ತು ಭೂಲೋಕದ ಸವಲತ್ತುಗಳ ತ್ಯಾಗ ಮುಂತಾದವುಗಳ ಅನೇಕ ಕಠಿಣ ಪರೀಕ್ಷೆಗಳ ಮೇಲೆ ಆತುಕೊಂಡಿದೆ. ಈ ರೀತಿಯಾಗಿ ವ್ಯಕ್ತಿಗತ ಪರೀಕ್ಷೆಯಿಂದ ಮತ್ತು ವ್ಯಕ್ತಿಗತವಾಗಿ ಪೂರ್ವನಿರ್ಧಾರಿತ ವರ್ಗದ ವ್ಯಕ್ತಿಗತವಾಗಿ 'ಜಯ ಹೊಂದುವ', ವ್ಯಕ್ತಿಗತ ಸದಸ್ಯರನ್ನು ದೇವರು ಈ ವರ್ಗದವರಿಗೆ ಪೂರ್ವನಿರ್ಧಾರಪಡಿಸಿರುವ ಎಲ್ಲಾ ಆಶೀರ್ವಾದಗಳಿಗೆ ಮತ್ತು ಅನುಕೂಲತೆಗಳಿಗೆ ಆಯ್ಕೆಗೊಳ್ಳುತ್ತಾರೆ.

ರೋಮಾಪುರ 8:30ರಲ್ಲಿ "ಮಹಿಮಾ ಪದವಿ" ಎಂಬ ಶಬ್ದವು ಗ್ರೀಕ್ ಭಾಷೆಯ (ಡೋಕ್ಸಾಜೊ ಎಂಬ) ಧಾರ್ಮಿಕ ವಿಷಯವಾದ ಅಭಿಪ್ರಾಯದಲ್ಲಿ "ಮಹಿಮೆ ಹೊಂದಿಕೊಳ್ಳಲಾಗಿದೆ" (honored) ಎಂಬುದನ್ನು ಸೂಚಿಸುತ್ತದೆ. ಸಭೆಯ ಆಯ್ಕೆಗೊಂಡಿರುವ ಸ್ಥಾನವು ಒಂದು ಮಹಾಮಹಿಮಾ ಪದವಿಯಾಗಿದೆ. ಯಾವ ಮಾನವನೂ ಅಂಥಾಃ ಗೌರವದ ಬಗ್ಗೆ ಹಂಬಲಿಸುವ ಯೋಚನೆ ಮಾಡಲಾರನು. ನಮ್ಮ ಕರ್ತನಾದ ಯೇಸುವು ಸಹಾ ಆತನು ಹಂಬಲಿಸುವ ಮುನ್ನವೇ ಅದನ್ನು ಅದಕ್ಕೆ ಆಹ್ವಾನಿಸಲ್ಪಟ್ಟಿದ್ದನು ಎಂಬುದಾಗಿ 'ಕ್ರಿಸ್ತನು ಸಹ ತನ್ನನ್ನು ತಾನೇ ಘನಪಡಿಸಿಕೊಂಡು ತಾನೇ ಮಹಾ ಯಾಜಕನನ್ನಾಗಿ ಮಾಡಿಕೊಳ್ಳಲಿಲ್ಲ. ಆದರೆ – ನನಗೆ ನೀನು ಮಗನು; ನಾನೇ ಈ ಹೊತ್ತು ನಿನ್ನನ್ನು ಪಡೆದಿದ್ದೇನೆ' (ಇಬ್ರಿಯ 5:5, ಕೀರ್ತನೆ 2:7) ಎಂದು ದೇವರು ಆತನಿಗೆ ತಾನೇ ಹೇಳಿದ್ದಾನೆ. ಪರಲೋಕದ ತಂದೆಯು ಈ ರೀತಿಯಾಗಿ ನಮ್ಮ ಕರ್ತನಾದ ಯೇಸುವನ್ನು ಗೌರವಿಸಿದ್ದಾನೆ. ಮತ್ತು ಆತನೊಂದಿಗೆ ಜೊತೆ ಬಾಧ್ಯಸ್ಥರಾಗಲು ಆರಿಸಿಕೊಂಡಿರುವವರೆಲ್ಲರೂ ಸಹಾ ಅದೇ ರೀತಿಯಾಗಿ ಯೆಹೋವನ ಅನುಗ್ರಹದಿಂದ ಘನತೆ ಹೊಂದುತ್ತಾರೆ. ದೇವರಿಂದ ಪಡೆದು ಕೊಂಡವರಾಗಿ ಸತ್ಯದ ವಾಕ್ಯದಿಂದ ಆತ್ಮೀಕ ಸ್ವಭಾವಕ್ಕೆ ಸೇರುವಾಗ ಸಭೆಯು ಅದರ ಶಿರಸ್ಸಿನಂತೆ ಘನತೆಯ ಆರಂಭವಾಗುವದನ್ನು ಅನುಭವಿಸುವರು (ಯಾಕೋಬ 1: 18) ಮತ್ತು ಆತ್ಮನಿಂದ, ಆತ್ಮೀಕ ಜೀವಿಯಾಗಿ ಮಹಿಮೆ ಹೊಂದಿದ ಶಿರಸ್ಸಿನ ಸ್ವರೂಪದಲ್ಲಿ ಹುಟ್ಟುವಾಗ ಈ ಘನತೆಗೆ ಸಂಪೂರ್ಣವಾಗಿ ನಡೆಸಲ್ಪಡುವರು. ಆ ರೀತಿಯಾಗಿ ದೇವರಿಂದ ಗೌರವ ಹೊಂದಿಕೊಳ್ಳುವವರು ಪರಿಪೂರ್ಣರೂ ಮತ್ತು ಶುದ್ಧರೂ ಆಗಿರತಕ್ಕದ್ದು; ನಾವು ಪಾರಂಪರ್ಯವಾಗಿ ಪಾಪಿಗಳಾಗಿರುವುದರಿಂದ, ಆತನು ನಮ್ಮನ್ನು ಗೌರವಕ್ಕಾಗಿ (honored) ಕರೆದಿರುವುದು ಅಥವಾ ಆಹ್ವಾನಿಸಿರುವುದು ಮಾತ್ರವಲ್ಲ, ಆತನು ನಮ್ಮನ್ನು ಕರೆದಿರುವ ಗೌರವವನ್ನು ಸ್ವೀಕರಿಸಲು ಶಕ್ತರಾಗುವಂತೆ ಆತನ ಮಗನ ಮರಣದ ಮೂಲಕ ಪಾಪದಿಂದ ನೀತಿನಿರ್ಣಯವನ್ನು ಸಹಾ ಒದಗಿಸಿದ್ದಾನೆ.

"ಚಿಕ್ಕಹಿಂಡನ್ನು" ಆಯ್ಕೆ ಮಾಡುವಲ್ಲಿ, ದೇವರು "ಕರೆಯಲ್ಪಟ್ಟವರು ಬಹುಜನ" (ಮತ್ತಾಯ 22:14) ಎಂಬ ಸಾಮಾನ್ಯವಾದ ಕರೆಯನ್ನು ಮಾಡುತ್ತಾನೆ. ಆದರೆ ಎಲ್ಲರನ್ನೂ ಕರೆದಿಲ್ಲ. ಕರೆಯು ಮೊದಲಿಗೆ, ನಮ್ಮ ಕರ್ತನ

ಸೇವಾ ಅವಧಿಯಲ್ಲಿ ಶಾರೀರಿಕ ಇಸ್ರಾಲಯೇಲ್ಯರಿಗೆ ಮಾತ್ರವೇ ಸೀಮಿತಗೊಂಡಿತ್ತು, ಆದರೆ ಈಗ ಸಾಧ್ಯವಾದಷ್ಟು ದೇವರ ಸೇವಕರುಗಳು ಸೇರುತ್ತಾರೆ ಮತ್ತು ಅವರನ್ನು ಕೃಪೆಯ ವಿಶೇಷ ಭೋಜನಕ್ಕೆ ಬರುವಂತೆ ಒತ್ತಾಯಿಸಲಾಗುವುದು, ಅಥವಾ ಕಡ್ಡಾಯಪಡಿಸಲಾಗುವುದು (ಲೂಕ 14:23). ಆದರೆ ಬಲವಂತಪಡಿಸಲಾಗುವುದಿಲ್ಲ. ಆದರೆ ಈ ಮಾತನ್ನು ಕೇಳಿ ಬಂದವರಲ್ಲಿ ಎಲ್ಲರೂ ಯೋಗ್ಯರಾಗಿರುವುದಿಲ್ಲ. ಕ್ರಿಸ್ತನ ನೀತಿವಂತಿಕೆಯನ್ನು ಹೊರಿಸಿರುವ ಮದುವೆಯ ವಸ್ತ್ರಗಳನ್ನು ಒದಗಿಸಲಾಗುವುದು. ಆದರೆ ಕೆಲವರು ಅದನ್ನು ಧರಿಸಿಕೊಳ್ಳುವುದಿಲ್ಲ, ಅಂಥವರನ್ನು ತಿರಸ್ಕರಿಲೇ ಬೇಕಾಗುತ್ತದೆ. ಮತ್ತು ನೀತಿನಿರ್ಣಯ ಉಡುಪುಗಳನ್ನು ಧರಿಸಿಕೊಂಡವರಲ್ಲಿ, ಮತ್ತು ನೂತನ ಸ್ವಭಾವಕ್ಕೆ ಹುಟ್ಟಿದವರಾಗಿ ಗೌರವ ಹೊಂದಿದವರಲ್ಲಿ, ಕೆಲವರು ತಮ್ಮ ಒಡಂಬಡಿಕೆಗೆ ಪ್ರಾಮಾಣಿಕರಾಗಿದ್ದು ತಮ್ಮ ಕರೆಯನ್ನು ಖಚಿತಪಡಿಸಿಕೊಳ್ಳುವಲ್ಲಿ ಸೋತು ಹೋಗುತ್ತಾರೆ. ಕುರಿಮರಿಯೊಡನೆ ಮಹಿಮೆಯಲ್ಲಿ ಕಾಣಿಸಿಕೊಳ್ಳಲು ಅರ್ಹರಾದವರನ್ನು ಕರೆದವರೂ, ದೇವರಾದುಕೊಂಡವರೂ, ನಂಬಿಗಸ್ತರೂ ಆಗಿರುವ ಆತನ ಕಡೆಯವರು ಆ ಜಯದಲ್ಲಿ ಪಾಲುಗಾರ ರಾಗುವರು" (ಪ್ರಕಟನೆ 14:1; 17:14) ಎಂದು ಪ್ರಕಟಿಸಲಾಗುವುದು.

ಕರೆಯು ಸತ್ಯವಾದುದು; ಒಂದು ಸಭೆಯನ್ನು ಆರಿಸಿಕೊಂಡು ಅದನ್ನು ಉನ್ನತ ಸ್ಥಿತಿಗೇರಿಸುವ ದೇವರ ನಿರ್ಧಾರವನ್ನು ಬದಲಾಯಿಸಲಾಗದು; ಆದರೆ ಈ ಆಯ್ಕೆಗೊಂಡ ವರ್ಗದವರು ಯಾರಾಗಿರುತ್ತಾರೆ ಎಂಬುದು ಷರತ್ತು ಬದ್ಧವಾದುದು. ಪೂರ್ವ ನಿರ್ಧಾರಿತವಾದ ಗೌರವಗಳಲ್ಲಿ ಪಾಲುದಾರ ರಾಗುವವರು ಕರೆಯ ಷರತ್ತುಗಳನ್ನು ನೆರವೇರಿಸ ಬೇಕಾಗುತ್ತದೆ. "ಹೀಗಿರಲಾಗಿ ದೇವರ ವಿಶ್ರಾಂತಿಯಲ್ಲಿ ಸೇರಬಹುದೆಂಬ ವಾಗ್ದಾನವು ಇನ್ನೂ ಇರುವಲ್ಲಿ ನಿಮ್ಮೊಳಗೆ ಯಾವನಾದರೂ ಆ ವಾಗ್ದಾನದ ಫಲವನ್ನು ಹೊಂದದೆ ತಪ್ಪುವವನಾದಾನೋ ಎಂದು ನಾವು ಭಯಪಡೋಣ" (ಇಬ್ರಿಯ 4:1). ಮಹಾ ಕೃಪೆಯು ಇಚ್ಛೆಪಡುವವನಿಗೆ, ಅಥವಾ ಓಡುವವನಿಗೆ ಅಲ್ಲದಿದ್ದರೂ, ಕರೆಯುವಾಗ ಅದನ್ನು ಇಚ್ಛೆಪಡುವವನಿಗೆ ಮತ್ತು ಓಡುವವನಿಗೇ ದೊರೆಯುತ್ತವೆ.

ಈ ರೀತಿಯಾಗಿ, ನಾವು ಸ್ಪಷ್ಟವಾಗಿ ದೃಢವಾಗಿರುವ ದೇವರ ಪರಿಪೂರ್ಣ ಹಕ್ಕು ಮತ್ತು ಉದ್ದೇಶವನ್ನು, ಆತನ ಸ್ವಂತ ಚಿತ್ತವನ್ನು ನಡೆಸುವದು ಎಂದು ನಂಬುತ್ತೇವೆ, ದೇವರ ಎಲ್ಲಾ ಅನುಗ್ರಹಗಳ ಶ್ರೇಷ್ಠತೆಯನ್ನು ನಿರೂಪಿಸುವ ವಿಚಾರವು ಸಾಮಾನ್ಯವಾಗಿ ಎಲ್ಲರ ಒಳಿತಿಗಾಗಿ ಇದೆ ಎಂಬ ಅಂಶಕ್ಕೆ ನಮ್ಮ ಗಮನ ಹರಿಸುತ್ತೇವೆ.

ಹಾಗಿದ್ದರೆ, ಪರಿಶುದ್ಧ ಗ್ರಂಥಗಳ ಆಧಾರದ ಮೇಲೆ. ಮಾನವ ಮತ್ತು ಆತ್ಮೀಕ ಸ್ವಭಾವಗಳು ಪ್ರತ್ಯೇಕವಾಗಿ ಮತ್ತು ನಿರ್ದಿಷ್ಟವಾಗಿ ಸ್ಥಾಪಿಸಲ್ಪಟ್ಟ ಸತ್ಯವೆಂಬುದಾಗಿ ನಾವು ಪರಿಗಣಿಸುತ್ತೇವೆ. ಎರಡೂ ಸ್ವಭಾವಗಳು ಬೆಸೆಯುವುದು ದೇವರ ಸಂಕಲ್ಪದ ಭಾಗವಲ್ಲ, ಆದರೆ ಅದು ಅಪರಿಪೂರ್ಣವಾದುದು ಮತ್ತು ಒಂದು ಸ್ವಭಾವದಿಂದ ಮತ್ತೊಂದು ಸ್ವಭಾವಕ್ಕೆ ಬದಲಾಗುವುದು ನಿಯಮವಲ್ಲ, ಆದರೆ ಕ್ರಿಸ್ತನ ಒಂದು ನಿದರ್ಶನವನ್ನು ಹೊರತುಪಡಿಸಿ, ಹಾಗೂ ಬದಲಾವಣೆಯು ನೆರವೇರಿದ ಬಗೆಯನ್ನು ತಿಳಿಯವದು, ಯಾವ ಪರಿಸ್ಥಿತಿಯಲ್ಲಿ ಪ್ರಾಪ್ತಿಸುವದು ಹಾಗೂ ಯಾವ ವಿಧಾನದಲ್ಲಿ ಪರಿಣಾಮ ಬೀರಬಲ್ಲದು ಎಂಬುದು ಒಂದು ಆಳವಾದ ಆಸಕ್ತಿ ಮೂಡಿಸುವ ವಿಷಯವಾಗಿದೆ.

ಸಭೆಯು ಕರ್ತನೊಂದಿಗೆ ದೈವಿಕ ಸ್ವಭಾವದ ಘನತೆಗೇರಿಸಲ್ಪಪಡಬೇಕು ಎಂಬುದರ ಷರತ್ತುಗಳು (2 ಪೇತ್ರ 1:4) ನಿಶ್ಚಯವಾಗಿಯೂ ಆತನು (ಕ್ರಿಸ್ತನು) ಅದನ್ನು ಪಡಕೊಂಡ ಷರತ್ತಿನಂತೆಯೇ ಇದೆ; ಆತನ ಹೆಜ್ಜೆಜಾಡನ್ನು ಅನುಸರಿಸಿದರೂ (1 ಪೇತ್ರ 2:21) ಆತನು ಮಾಡಿದಂತೆ, ಆಕೆಯು (ಸಭೆಯು) ತನ್ನನ್ನು ಒಂದು ಜೀವಂತ ಸಮರ್ಪಣೆಯಾಗಿ ಪ್ರಸ್ತುತಿಪಡಿಸುತ್ತಾಳೆ ಮತ್ತು ನಂತರ ತ್ಯಾಗವು ಮರಣದಲ್ಲಿ ಕೊನೆಗೊಳ್ಳುವವರೆಗೂ ಆ ಪವಿತ್ರ ಪ್ರತಿಜ್ಞೆಯನ್ನು ನಿಷ್ಠೆಯಿಂದ ನಿರ್ವಹಿಸುತ್ತಾಳೆ. ಸುವಾರ್ತಾ ಯುಗದೊಳಗೆ, ನಮ್ಮ ಕರ್ತನು ಮಾಡಿದಂತೆ, ಮಾನವ ಸ್ವಭಾವವನ್ನು ಅದರ ಪ್ರಸ್ತುತ ಮತ್ತು ಮುಂದಿನ ಎಲ್ಲಾ ಹಿತಗಳು, ನಿರೀಕ್ಷೆಗಳು ಮತ್ತು ಗುರಿಗಳೊಂದಿಗೆ ಯಾರು ಮರಣ ಪರ್ಯಂತರ ತ್ಯಾಗಮಾಡುತ್ತಾರೋ ಅಂಥವರಿಗೆ ಮಾನವತೆಯಿಂದ ದೈವಿಕತೆಯ ಸ್ವಭಾವದ ಈ ಬದಲಾವಣೆಯನ್ನು ಪ್ರತಿಫಲವಾಗಿ ನೀಡಲಾಗುವುದು. ಪುನರುತ್ಥಾನದಲ್ಲಿ ಅಂಥವರು ಎಚ್ಚರಗೊಳ್ಳುವರು, ಮಾನವ ಪರಿಪೂರ್ಣತೆಗೆ ಪುನರ್‌ವಶಗೊಳ್ಳುವ ಈ ಆಶೀರ್ವಾದಕರ ಪುನಃವಶದಲ್ಲಿ ಮತ್ತು ಅದರೊಂದಿಗಿನ ಎಲ್ಲಾ ಆಶೀರ್ವಾದಗಳಲ್ಲಿ ಪಾಲುಗೊಳ್ಳುವುದಕ್ಕೆ ಅಲ್ಲ, ಬದಲಾಗಿ, ಕರ್ತನ ಹೋಲಿಕೆ, ಮಹಿಮೆ ಮತ್ತು ಸಂತೋಷದಲ್ಲಿನ ದೈವ ಸ್ವಭಾವದಲ್ಲಿ ಪಾಲುದಾರರಾಗಲು ಎಚ್ಚರಗೊಳ್ಳುವರು (ರೋಮಾ. 8:17; 2 ತಿಮೋ. 2:12).

ನೂತನ ಸ್ವಭಾವದ ಪ್ರಾರಂಭ ಮತ್ತು ಅಭಿವೃದ್ಧಿಯು ಮಾನವ ಜೀವಿತದ ಪ್ರಾರಂಭ ಮತ್ತು ಅಭಿವೃದ್ಧಿಯ ಹೋಲಿಕೆಯಲ್ಲಿಯೇ ಇರುತ್ತದೆ. ಒಂದು ಪ್ರಕರಣದಲ್ಲಿ ಪ್ರಾರಂಭ ಮತ್ತು ನಂತರದಲ್ಲಿ ಹುಟ್ಟು ಇರುವಂತೆಯೇ ಮತ್ತೊಂದರಲ್ಲಿಯೂ ಇರುತ್ತದೆ. ಸಂತರುಗಳು ಸತ್ಯದ ವಾಕ್ಯಗಳ ಮೂಲಕ ದೇವರಿಂದ ಹುಟ್ಟುವವರಾಗುತ್ತಾರೆ (1 ಪೇತ್ರ 1:3; 1 ಯೋಹಾನ 5:18; ಯಾಕೋಬ 1:18) ಅಂದರೆ ಅವರು ದೈವಿಕ ಜೀವಿತದಲ್ಲಿ ಮೊದಲನೆಯ ಸ್ಫೂರ್ತಿಯನ್ನು ದೇವರಿಂದ ಆತನ ವಾಕ್ಯಗಳ ಮೂಲಕ ಹೊಂದಿಕೊಳ್ಳುತ್ತಾರೆ. ಈಡುಬಲಿಯಲ್ಲಿ ನಂಬಿಕೆಯಿಡುವುದರ ಮೂಲಕ ಉಚಿತವಾಗಿ ನೀತಿನಿರ್ಣಯ ಹೊಂದಿದವರಾಗಿ ಅವರು "ನೀವು ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚುಗೆಯಾಗಿಯೂ ಇರುವ ಸಜೀವ ಯಜ್ಞವಾಗಿ ಸಮರ್ಪಿಸಿರಿ. ಇದೇ ನಿಮ್ಮ ವಿವೇಕಪೂರ್ವವಾದ ಆರಾಧನೆಯು" (ರೋಮಾ. 12:1) ಎಂಬ ಕರೆಯನ್ನು ಕೇಳಿಸಿಕೊಳ್ಳುವರು. ಅವರು ಆ ಕರೆಗೆ ವಿಧೇಯರಾಗಿ, ನೀತಿನಿರ್ಣಯ ಹೊಂದಿದವರಾಗಿ ತಮ್ಮ ಮಾನವತೆಯನ್ನು ದೇವರಿಗೆ ಸಜೀವವಾದ ಯಜ್ಞವಾಗಿ, ಕ್ರಿಸ್ತನೊಂದಿಗೆ ಜೊತೆಜೊತೆಯಾಗಿ ಸಂಪೂರ್ಣವಾಗಿ ಪ್ರತಿಷ್ಠೆಪಡಿಸುವಾಗ, ಅದು ದೇವರಿಂದ ಸ್ವೀಕೃತಿಗೊಳ್ಳುತ್ತದೆ. ಮತ್ತು ಆ ಕ್ರಿಯೆ ಯಲ್ಲಿಯೇ ಆತ್ಮೀಕ ಜೀವಿತವು ಪ್ರಾರಂಭಗೊಳ್ಳುತ್ತದೆ. ಅಂಥವರು ತಮ್ಮನ್ನು ಮಾನವನ ಬಯಕೆಯನ್ನು ಶಿಲುಬೆಗೇರಿಸುವಿಕೆಯಲ್ಲೂ ಸಹ, ಹೊಸ ಪುನರುಜ್ಜೀವಿತ ಮನಸ್ಸು ಪ್ರೇರೇಪಿಸಿದಂತೆ ಆಲೋಚನೆ ಮತ್ತು ಪರಿವರ್ತನೆಯನ್ನು ತಮ್ಮಲ್ಲಿ ತಾವು ಕಂಡುಕೊಳ್ಳುತ್ತಾರೆ. ಇವರು ಪ್ರತಿಷ್ಠೆಗೊಂಡ ಕ್ಷಣವೇ ದೇವರಿಂದ 'ನೂತನ ಸೃಷ್ಟಿ'ಗಳಾಗಿ ಎಣಿಸಲ್ಪಡುತ್ತಾರೆ.

ಈ ರೀತಿಯಲ್ಲಿ ಭ್ರೂಣಾವಸ್ಥೆಯಲ್ಲಿರುವ 'ನೂತನ ಸೃಷ್ಟಿ'ಗಳಲ್ಲಿ ಹಳೆಯ ಸಂಗತಿಗಳು (ಮಾನವ ಬಯಕೆಗಳು, ನಿರೀಕ್ಷೆಗಳು, ಯೋಜನೆ ಇತ್ಯಾದಿಗಳು) ಇಲ್ಲವಾಗುವುವು. ಮತ್ತು ಎಲ್ಲಾ ಸಂಗತಿಗಳೂ ಹೊಸದಾಗುವುವು. 'ನೂತನ ಸೃಷ್ಟಿ'ಯ ಭ್ರೂಣವು ಅಭಿವೃದ್ಧಿ ಹೊಂದುತ್ತಾ ಬೆಳೆಯುವುದನ್ನು ಮುಂದುವರೆಸುವಾಗ, ಅದರ ಹಳೆಯ ಮಾನವ ಸ್ವಭಾವದಲ್ಲಿನ ಅದರ ನಿರೀಕ್ಷೆಗಳು ಗುರಿಗಳು, ಬಯಕೆಗಳು ಶಿಲುಬೆಗೆ ಹಾಕಲ್ಪಡುತ್ತವೆ. ಈ ಎರಡು ಪ್ರಕ್ರಿಯೆಗಳು ಪ್ರತಿಷ್ಠೆಯು ಪ್ರಾರಂಭವಾಗುವ ಸಮಯದಿಂದ ಮಾನವತೆಯು ಮರಣಹೊಂದಿ ದೈವಿಕತೆಯು ಫಲಿಸುವವರೆಗೆ ಏಕಕಾಲದಲ್ಲಿ ಪ್ರಗತಿಯಲ್ಲಿರುತ್ತವೆ. ದೇವರ ಆತ್ಮನು, ಆತನ ವಾಕ್ಯದ ಮೂಲಕವಾಗಿ ಆತನ ಹೆಚ್ಚು ಹೆಚ್ಚಾದ ಯೋಜನೆಗಳು ಪ್ರಕಟಗೊಳ್ಳಲು ಮುಂದುವರೆಯುವಾಗ, ಆತನು ನಮ್ಮ ಮರ್ತ್ಯಶರೀರಗಳನ್ನೂ ಚುರುಕುಗೊಳಿಸುವನು (ರೋಮಾ. 8:11) ಮತ್ತು ಈ ಮರ್ತ್ಯ ಶರೀರಗಳು ಆತನ ಸೇವೆಮಾಡುವಂತೆ ಸಮರ್ಥಗೊಳಿಸುತ್ತಾನೆ; ಆದರೆ ಸೂಕ್ತ ಸಮಯದಲ್ಲಿ ನಾವು ನೂತನ ಶರೀರಗಳನ್ನು ಹೊಂದಿಕೊಳ್ಳುತ್ತೇವೆ – ಆತ್ಮೀಕ, ಪರಲೋಕ ಸಂಗತಿಗಳಿಗೆ, ನೂತನ ದೈವಿಕ ಮನಸ್ಸಿಗೆ ಎಲ್ಲಾ ರೀತಿಯಲ್ಲಿಯೂ ಹೊಂದಿಕೊಂಡ ನೂತನ ಶರೀರವನ್ನು ಪಡಕೊಳ್ಳುತ್ತೇವೆ.

ನೂತನ ಸೃಷ್ಟಿಯ ಈ ಹುಟ್ಟು ಪುನರುತ್ಥಾನದಲ್ಲಿದೆ (ಕೊಲೊಸ್ಸೆ 1:18) ಮತ್ತು ಈ ವರ್ಗದವರ ಪುನರುತ್ಥಾನವು ಪ್ರಥಮ (ಅಥವಾ ಆಯ್ಕೆಯ) ಪುನರುತ್ಥಾನವನ್ನು ನಿಶ್ಚಯಿಸುತ್ತದೆ (ಪ್ರಕಟನೆ 20:6) ಪುನರುತ್ಥಾನದವರೆಗೆ ವಾಸ್ತವವಾಗಿ ನಾವು ಆತ್ಮೀಕ ಜೀವಿಗಳಲ್ಲ, ನಾವು ರಕ್ಷಣೆ ಹೊಂದಿದವರಾದರೂ ಇನ್ನೂ ಎದುರು ನೋಡುವವರಾಗಿದ್ದೇವೆ ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು (ರೋಮಾ. 8:23–25; ಎಫೆಸ 1:13,14; ರೋಮಾ. 6:10,11). ನಾವು ನಿಜವಾಗಿಯೂ ಆತ್ಮೀಕ ಜೀವಿಗಳಾಗುವಾಗ ಅಂದರೆ ನಾವು ಆತ್ಮನಿಂದ ಹುಟ್ಟುವಾಗ, ನಾವು ಮುಂದೆಂದೂ ಮಾಂಸಧೇಹಧಾರಿಗಳಾಗಿರುವುದಿಲ್ಲ; ಯಾಕೆಂದರೆ "ಆತ್ಮನಿಂದ ಹುಟ್ಟಿದ್ದು ಆತ್ಮನೇ" (ಯೋಹಾನ 3:6).

ಆತ್ಮೀಕ ಸ್ವಭಾವಕ್ಕೆ ಪುನರುತ್ಥಾನದ ಈ ಹುಟ್ಟು ಪ್ರತಿಷ್ಠೆಯ ಕಾಲದಲ್ಲಿ ಆತ್ಮನಿಂದ ಜನಿಸುವ ಮುಂಚೆಯೇ ಸಂಭವಿಸಬೇಕಾಗುತ್ತದೆ, ಹೇಗೆಂದರೆ ದೇಹದಿಂದ ಹುಟ್ಟುವುದು ದೇಹದಿಂದ ಪಡಕೊಳ್ಳುವ ಮೊದಲೇ ಸಂಭವಿಸುವಂತಿರುತ್ತದೆ. ಎನ್ನುವಷ್ಟೇ ಖಚಿತವಾಗಿದೆ. ಆದಾಮನ ಹೋಲಿಕೆಯಲ್ಲಿ ಮಾಂಸಧಾರಿಗಳಾಗಿ, ಮಣ್ಣಿಗೆ ಸಂಬಂಧಪಟ್ಟವರಾಗಿ ಹುಟ್ಟುವವರೆಲ್ಲರೂ ಮೊದಲಿಗೆ ದೇಹದಿಂದ ಪಡಕೊಂಡವರಾಗಿರುತ್ತಾರೆ; ಅದರಲ್ಲಿ ಕೆಲವರು ಸತ್ಯವಾಕ್ಯದ ಮೂಲಕ ದೇವರಾತ್ಮನಿಂದ ಮತ್ತೆ ಹುಟ್ಟಿದವರಾಗಿ, ಯುಕ್ತ ಕಾಲವು ಪ್ರಾಪ್ತವಾದಾಗ ಪ್ರಥಮ ಪುನರುತ್ಥಾನದಲ್ಲಿ, ಪರಲೋಕದವರ ಸಾರೂಪ್ಯದಲ್ಲಿ ಆತ್ಮನಿಂದ ಹುಟ್ಟುತ್ತಾರೆ. "ನಾವು (ಸಭೆ) ಮಣ್ಣಿನಿಂದ ಹುಟ್ಟಿದವನ ಸಾರೂಪ್ಯವನ್ನು ಧರಿಸಿಕೊಂಡಿರುವ ಪ್ರಕಾರ ಪರಲೋಕದಿಂದ ಬಂದಾತನ ಸಾರೂಪ್ಯವನ್ನು ಧರಿಸಿಕೊಳ್ಳಬೇಕು" – ಬಿದ್ದುಹೋಗದ ಹೊರತೂ (1 ಕೊರಿಂಥ 15:49; ಇಬ್ರಿಯ 6:6).

ಪರಲೋಕದ ಕರೆಯ ಅಂಗೀಕಾರ ಮತ್ತು ಅದಕ್ಕೆ ವಿಧೇಯತೆಯಲ್ಲಿ ನಮ್ಮ ಪ್ರತಿಷ್ಠೆಯನ್ನು ಒಂದು ನಿರ್ದಿಷ್ಟ ಕ್ಷಣದಲ್ಲಿ ನಿರ್ಧರಿಸಬೇಕಾಗಿರುವುದರಿಂದ, ಪ್ರತಿಯೊಂದು ಆಲೋಚನೆಗಳನ್ನು ದೇವರ ಮನಸ್ಸಿನೊಂದಿಗೆ ಸಾಮರಸ್ಯಕ್ಕೆ ತರುವುದು ಕ್ರಮೇಣವಾದ ಕಾರ್ಯವಾಗಿದೆ. ಅದು ಸ್ವಾಭಾವಿಕವಾಗಿ ಭೂಮಿಯ ಕಡೆ ಬಾಗುವದನ್ನು ಕ್ರಮೇಣವಾಗಿ ಪರಲೋಕದೆಡೆಗೆ ಬಾಗಿಸುವುದಾಗಿದೆ. ಅಪೋಸ್ತಲನು "ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನ ಮನಸ್ಸನ್ನು ಹೊಂದಿಕೊಂಡು ಪರಲೋಕಭಾವದವರಾಗಿರಿ. ಹೀಗಾದರೆ ದೇವರ ಚಿತ್ತಕ್ಕನುಸಾರವಾದದ್ದು ಅಂದರೆ ಉತ್ತಮವಾದದ್ದೂ, ಮೆಚ್ಚಿಗೆಯಾದದ್ದೂ, ದೋಷವಿಲ್ಲದ್ದೂ ಯಾವ ಯಾವದೆಂದು ವಿವೇಚಿಸಿ ತಿಳುಕೊಳ್ಳುವಿರಿ" (ರೋಮಾ. 12:2) ಎಂದು ಹೇಳುವುದರ ಮೂಲಕ ಈ ಪ್ರಕ್ರಿಯೆಯನ್ನು ಸುಧಾರಣಾ ಕಾರ್ಯ ಎಂಬುದಾಗಿ ಹೇಳುತ್ತಾನೆ.

ಅಪೋಸ್ತಲನ ಈ ಮಾತುಗಳು ನಂಬಿಕೆಯಿಲ್ಲದ ಪ್ರಪಂಚದವರಿಗಾಗಿ ಸಂಬೋಧಿಸಿದವುಗಳಲ್ಲ, ಬದಲಾಗಿ ಹಿಂದಿನ ವಾಕ್ಯದಲ್ಲಿ "ಆದುದರಿಂದ ಸಹೋದರರೇ, ದೇವರ ಕನಿಕರವನ್ನು ನಿಮ್ಮ ನೆನಪಿಗೆ ತಂದುಕೊಂಡು ನಿಮ್ಮನ್ನು ಬೇಡಿಕೊಳ್ಳುವುದೇನೆಂದರೆ – ನೀವು ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ, ಮೆಚ್ಚುಗೆಯಾಗಿಯೂ ಇರುವ ಸಜೀವ ಯಜ್ಞವನ್ನಾಗಿ ಸಮರ್ಪಿಸಿರಿ" ಎಂಬ ಮಾತಿಗೆ ಅನುಸಾರವಾಗಿ ಆತನು ತನ್ನ ಸಹೋದರರೆಂದು ಮಾನ್ಯಮಾಡಿದವರಿಗೆ ಸಂಬೋಧಿಸಿದನು ಎಂಬುದನ್ನು ಗಮನಿಸಬೇಕು.

ಸಾಮಾನ್ಯವಾಗಿ, ಒಬ್ಬ ಮನುಷ್ಯನು ಪರಿವರ್ತನೆ ಗೊಂಡಾಗ ಅಥವಾ ಪಾಪದಿಂದ ನೀತಿವಂತಿಕೆಗೆ ಹಿಂತಿರುಗಿಕೊಳ್ಳುವಾಗ, ಅಪನಂಬಿಕೆಯಿಂದ ಮತ್ತು ದೇವರ ಮೇಲೆ ಅವಲಂಬಿಸುವದನ್ನು ವಿರೋಧಿಸು ವದರಿಂದ ನೀತಿಗೆ, ನಂಬಿಕೆಗೆ ಮತ್ತು ದೇವರನ್ನು ಅವಲಂಬಿಸಲು ಹಿಂತಿರುಗುವದನ್ನು ಅದುವೇ 'ಪರಿವರ್ತನೆ' ಎಂಬುದು ಪೌಲನ ಅರ್ಥವಾಗಿದೆ. ನಿಜವಾಗಿಯೂ ಇದು ಒಂದು ದೊಡ್ಡ ಬದಲಾವಣೆ ಅಥವಾ ಪರಿವರ್ತನೆಯಾಗಿದೆ. ಆದರೆ ಪೌಲನು ಈ ಬದಲಾವಣೆಯನ್ನು ಕುರಿತು ತಿಳಿಸುತ್ತಿಲ್ಲ. ಅದು ಗುಣದ ಬದಲಾವಣೆ; ಆದರೆ ಇಲ್ಲಿ ಪೌಲನು ಉಲ್ಲೇಖಿಸುವುದು ಸುವಾರ್ತಾಯುಗದಲ್ಲಿ ಕೆಲವೊಂದು ಶರತ್ತುಗಳಿಗನು ಸಾರವಾಗಿ ನಂಬಿಗಸ್ತರಿಗೆ ವಾಗ್ದಾನಪಡಿಸಿದ ಸ್ವಭಾವದ ಪರಿವರ್ತನೆಯಾಗಿದೆ ಮತ್ತು ಆತನು ನಂಬಿಗಸ್ತರಿಗೆ ಈ ಷರತ್ತುಗಳನ್ನು ಪೂರೈಸಬೇಕೆಂದು ಒತ್ತಾಯಿಸುತ್ತಾನೆ. ಆತನು ಸಂಭೋದಿಸಿದವರಿಗೆ ಇಂಥಾಃ ಗುಣಲಕ್ಷಣ ದಲ್ಲಿನ ಬದಲಾವಣೆಯು ಈಗಾಗಲೇ ಆಗದೇ ಹೋಗಿದ್ದರೆ ಆತನು ಅವರನ್ನು 'ಸಹೋದರರೇ' ಎಂದು ಕರೆಯುತ್ತಿರಲಿಲ್ಲ – ಸಹೋದರರು ಸಹಾ ದೇವರಿಗೆ ಸಮರ್ಪಣೆ ಮಾಡಲು ಆತನಿಗೆ ಒಪ್ಪುವ ಮೀಸಲಾಗಿಯೂ, ಮೆಚ್ಚುಗೆಯಾಗಿಯೂ ಇರುವ ಏನನ್ನಾದರೂ ಹೊಂದಿರುತ್ತಾರೆ. ಈಡುಬಲಿಯ ಬಗ್ಗೆ ನಂಬಿಕೆಯಿಂದ ನೀತಿನಿರ್ಣಯ ಹೊಂದಿದವರು ಮಾತ್ರವೇ ದೇವರಿಂದ ಪವಿತ್ರರೂ ಅಂಗೀಕಾರಾರ್ಹರೂ ಎಂದು ಎಣಿಸಲ್ಪಟ್ಟಿದ್ದಾರೆ. ಸ್ವಭಾವದ ಪರಿವರ್ತನೆಯು ಸುವಾರ್ತಾ ಯುಗದಲ್ಲಿ ನೀತಿನಿರ್ಣಯಗೊಂಡ ತಮ್ಮ ಮಾನವತೆಯನ್ನು ಸಜೀವ ಯಜ್ಞವಾಗಿ ಅರ್ಪಿಸುವವರಿಗೆ, ಹೇಗೆ ಯೇಸುವು ತನ್ನ ಪರಿಪೂರ್ಣ ಮಾನವತ್ವವನ್ನು ಬಲಿಯಾಗಿ ಸಮರ್ಪಿಸುವಂತೆ ಮುಂದಣ ಮಾನವ ಅಸ್ತಿತ್ವದಲ್ಲಿ ಹೊಂದಿಕೊಳ್ಳುವ ಎಲ್ಲಾ ಹಕ್ಕನ್ನೂ, ಹಕ್ಕೇಳಿಕೆಯನ್ನೂ ಬಿಟ್ಟುಕೊಟ್ಟು, ಪ್ರಸ್ತುತ ಮಾನವ ಆನಂದವನ್ನು, ಅನುಕೂಲತೆಗಳನ್ನೂ ಹಕ್ಕು ಮುಂತಾದವನ್ನು ಕಡೆಗಣಿಸಿ ಯೇಸು ತನ್ನ ಪರಿಪೂರ್ಣ ಮಾನವತೆಯನ್ನು ಅರ್ಪಿಸಿದಂತೆ ಸಮರ್ಪಿಸುವುದರ ಫಲನೀಡುತ್ತದೆ. ಮೊದಲನೆಯದಾಗಿ ಸಮರ್ಪಿಸಿದ ಸಂಗತಿಯು ಮಾನವ ಚಿತ್ತವಾಗಿದೆ; ಅಂದಿನಿಂದ ನಾವು ನಮ್ಮ ಅಥವಾ ಬೇರೆ ಯಾವುದೇ ಮಾನವ ಚಿತ್ತದಿಂದ ಮಾರ್ಗದರ್ಶನ ಹೊಂದುವುದಿಲ್ಲ. ಆದರೆ ದೇವರ ಚಿತ್ತದಿಂದ ಮಾತ್ರವೇ ಮಾರ್ಗದರ್ಶನ ಹೊಂದುತ್ತೇವೆ. ದೈವಿಕ ಚಿತ್ತವು ನಮ್ಮ ಚಿತ್ತವಾಗುತ್ತದೆ, ನಾವು ಮಾನವ ಚಿತ್ತವನ್ನು ನಮ್ಮದನ್ನಾಗಿ ಎಣಿಸಿಕೊಳ್ಳುವುದಿಲ್ಲ, ಮತ್ತೊಬ್ಬನ ಚಿತ್ತವಾಗಿ ಅದನ್ನು ನಿರ್ಲಕ್ಷಿಸಿ ಸಮರ್ಪಿಸಬೇಕು ಎಂದು ಎಣಿಸಿಕೊಳ್ಳುತ್ತೇವೆ. ದೈವಿಕ ಚಿತ್ತವು ನಮ್ಮದಾಗಿರುವಾಗ, ನಾವು ದೇವರ ದೃಷ್ಟಿಕೋನದಲ್ಲಿ ಆಲೋಚಿಸಲು, ವಿವೇಚಿಸಲು ಮತ್ತು ತೀರ್ಮಾನಿಸಲು ಪ್ರಾರಂಭಿಸುತ್ತೇವೆ. ದೇವರ ಯೋಜನೆಯು ನಮ್ಮ ಯೋಜನೆಯಾಗುತ್ತದೆ, ದೇವರ ಮಾರ್ಗವು ನಮ್ಮ ಮಾರ್ಗವಾಗುತ್ತದೆ. ತಮ್ಮನ್ನು ತ್ಯಾಗವಾಗಿ ಸಮರ್ಪಿಸಿಕೊಳ್ಳಲು ಉತ್ತಮ ನಂಬಿಕೆಯಿಲ್ಲದ ಯಾರೂ ಈ ರೂಪಾಂತರವನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ, ಇದರ ಪರಿಣಾಮವಾಗಿ ಅದರ ಅನುಭವಕ್ಕೆ ಬರುತ್ತಾರೆ. ಈ ಹಿಂದೆ ನಾವು ವಾಸ್ತವವಾಗಿ ಪಾಪವಲ್ಲದ ಯಾವುದರಲ್ಲಾದರೂ ಆನಂದಿಸಿದ್ದಿರಬಹುದು; ಏಕೆಂದರೆ ಈ ಲೋಕವು, ಅದರ ಎಲ್ಲಾ ಒಳ್ಳೇ ಸಂಗತಿಗಳೂ ಮಾನವರ ಆನಂದಕ್ಕಾಗಿಯೇ ಮಾಡಲ್ಪಟ್ಟಿವೆ, ಆದರೆ ಇರುವ ತೊಂದರೆ ಏನೆಂದರೆ,

ಪಾಪದ ಪ್ರವೃತ್ತಿಗಳನ್ನು ನಿಗ್ರಹಿಸುವುದು. ಆದರೆ, ಪ್ರತಿಷ್ಠೆ ಹೊಂದಿಕೊಂಡವರು, ಪರಿವರ್ತನೆ ಹೊಂದಿದವರು, ಪಾಪವನ್ನು ನಿಗ್ರಹಿಸುವ ಪ್ರಯತ್ನದೊಂದಿಗೆ, ಪ್ರಸ್ತುತ ಒಳ್ಳೇ ಸಂಗತಿಗಳನ್ನು ತ್ಯಾಗ ಮಾಡಬೇಕು ಮತ್ತು ತಮ್ಮೆಲ್ಲಾ ಚೈತನ್ಯವನ್ನೂ ದೇವರಸೇವೆಗೆ ನಿವೇದಿಸಬೇಕು. ಮತ್ತು ಸೇವೆಯಲ್ಲಿ ಮತ್ತು ಸಮರ್ಪಣೆಯಲ್ಲಿ ಪ್ರಾಮಾಣಿಕ ರಾಗಿರುವವರು ನಿಜವಾಗಿಯೂ ಪ್ರತಿನಿತ್ಯವೂ ಈ ಲೋಕವು ತಮ್ಮ ವಿಶ್ರಾಂತಿಯ ಸ್ಥಳವಲ್ಲ, ಇದು ಅವರಿಗೆ ಮುಂದುವರೆಯುವ ಶಾಶ್ವತವಾದ ಪಟ್ಟಣವಲ್ಲವೆಂಬುದನ್ನು ಗ್ರಹಿಸಿಕೊಳ್ಳುತ್ತಾರೆ. ಆದರೆ, ಅವರ ಹೃದಯಗಳೂ, ನಿರೀಕ್ಷೆಗಳೂ "ದೇವಜನರು ಅನುಭವಿಸುವುದಕ್ಕಿರುವ ಸಬ್ಬತ್ತೆಂಬ ವಿಶ್ರಾಂತಿಯ ಕಡೆಗೆ ತಿರುಗುತ್ತವೆ" ಮತ್ತು ಆ ಆಶೀರ್ವದಿತ ನಿರೀಕ್ಷೆಯು ಪ್ರತಿಯಾಗಿ ನಿರಂತರವಾದ ಸಮರ್ಪಣೆಯನ್ನು ಚುರುಕುಗೊಳಿಸುತ್ತದೆ ಮತ್ತು ಸ್ಫೂರ್ತಿಗೊಳಿಸುತ್ತದೆ.

ಈ ರೀತಿಯಲ್ಲಿ ಪ್ರತಿಷ್ಠೆಗೊಳಿಸುವಿಕೆಯ ಮೂಲಕ ಮನಸ್ಸು ನವೀಕರಿಸಲ್ಪಡುತ್ತದೆ ಅಥವಾ ಪರಿವರ್ತನೆ ಗೊಳ್ಳುತ್ತದೆ ಮತ್ತು ಆಶೆಗಳು, ನಿರೀಕ್ಷೆಗಳು ಮತ್ತು ಧ್ಯೇಯಗಳು ವಾಗ್ದಾನಪಡಿಸಿದ ಆತ್ಮೀಕ ಮತ್ತು ಕಾಣದ ಸಂಗತಿಗಳ ಕಡೆಗೆ ಮೇಲೇಳುತ್ತವೆ. ಅದೇ ವೇಳೆಯಲ್ಲಿ ಮಾನವ ನಿರೀಕ್ಷೆಗಳು ಸತ್ತುಹೋಗುತ್ತವೆ. ಆ ರೀತಿಯಲ್ಲಿ ಪರಿವರ್ತನೆ ಹೊಂದಿದವರು ಅಥವಾ ಬದಲಾವಣೆಯ ಪ್ರಕ್ರಿಯೆಯಲ್ಲಿರುವವರು ದೇವರಿಂದ ಹುಟ್ಟಿದ 'ನೂತನ ಸೃಷ್ಟಿ'ಗಳೆಂದು, ಆ ಮಟ್ಟಿಗೆ ದೈವಸ್ವಭಾವದಲ್ಲಿ ಭಾಗಿಗಳು ಎಂದು ಎಣಿಸಲ್ಪಡುವರು. ಆ ನೂತನ ಸೃಷ್ಟಿಗಳಿಗೂ ಮತ್ತು ನೀತಿನಿರ್ಣಯ ಹೊಂದಿದ ವಿಶ್ವಾಸಿಗಳೂ, ಮತ್ತು ಸಹೋದರರುಗಳಿಗೂ ಇರುವ ವ್ಯತ್ಯಾಸವನ್ನು ಚೆನ್ನಾಗಿ ಗುರುತಿಸಿರಿ. ಎರಡನೆಯ ವರ್ಗದವರು ಇನ್ನೂ ಈ ಲೋಕದವರೂ, ಲೌಕಿಕರು ಮತ್ತು ಪಾಪಮಯ ಬಯಕೆಗಳಲ್ಲದೆ, ಅವರ ನಿರೀಕ್ಷೆಗಳು, ಆಕಾಂಕ್ಷೆಗಳು ಮತ್ತು ಧ್ಯೇಯುಗಳು ಎಲ್ಲಾ ಸಂಗತಿಗಳ ವಾಗ್ದತ್ತ ಪುನರ್‌ವಶದಲ್ಲಿ ಸಂಪೂರ್ಣವಾಗಿ ತೃಪ್ತಿಪಡುವಂಥಃವುಗಳಾಗಿವೆ. ಆದರೆ ಕ್ರಿಸ್ತನು ಈ ಲೋಕದವನಲ್ಲದವನಾಗಿರುವಂತೆ ಮೊದಲನೆಯ ವರ್ಗದವರು ಸಹ ಈ ಲೋಕದವರಲ್ಲ. ಅವರ ನಿರೀಕ್ಷೆಗಳು ಕಾಣದ ಸಂಗತಿಗಳ ಮೇಲೆ ಕೇಂದ್ರೀಕರಿಸಿವೆ. ಅಲ್ಲಿ ಕ್ರಿಸ್ತನು ದೇವರ ಬಲಗಡೆಯಲ್ಲಿ ಆಸೀನನಾಗಿದ್ದಾನೆ ಎಂಬ ಸ್ವಾಭಾವಿಕ ಮನುಷ್ಯನಿಗೆ ಎಷ್ಟೋ ಮರಳುಗೊಳಿಸಿರುವ ಈ ಭೂಲೋಕದ ಮಹಿಮೆಯ ಪ್ರತೀಕ್ಷೆಯು, ಪರಲೋಕದ ನಿರೀಕ್ಷೆಯಲ್ಲಿ ಹುಟ್ಟಿದವರಿಗೆ (begotten), ಪರಲೋಕದ ಆಶೀರ್ವಾದಗಳ ಮಹಿಮೆಯನ್ನು ನೋಡುವವರಿಗೆ, ಮತ್ತು ದೈವಿಕ ಯೋಜನೆಯಲ್ಲಿ ತಮಗೆ ನಿಗದಿಪಡಿಸಿದ ಭಾಗವನ್ನು ಮೆಚ್ಚಿಕೊಳ್ಳುವವರಿಗೆ ಇನ್ನು ಮುಂದೆ ತೃಪ್ತಿಕರ ಭಾಗವಾಗಿರುವುದಿಲ್ಲ. ಈ ನೂತನ ದೈವಿಕ ಮನಸ್ಸು ಸಂಪೂರ್ಣ ದೈವಿಕ ಸ್ವಭಾವದ, ಮನಸ್ಸು ಮತ್ತು ದೇಹದ ನಮ್ಮ ಶ್ರದ್ಧಾಪೂರ್ವಕ ಬಾಧ್ಯಸ್ಥಿಕೆಯಾಗಿದೆ. ಕೆಲವರು ದೈವಿಕ ಶರೀರ ಎಂಬ ಈ ಹೇಳಿಕೆಯಿಂದ ಸ್ವಲ್ಪಮಟ್ಟಿಗೆ ಗಾಬರಿಗೊಳ್ಳಬಹುದು. ಆದರೆ ನಮಗೆ ಯೇಸು ಕ್ರಿಸ್ತನು ತನ್ನ ತಂದೆಯ ಪ್ರಭಾವದ ಪ್ರಕಾಶವೂ, ಆತನ ತತ್ವದ ಮೂರ್ತಿಯೂ ಆಗಿದ್ದಾನೆ (ಇಬ್ರಿಯ 1:3) ಎಂಬ ಚಿತ್ರಣವನ್ನು ಹೊಂದಿದ್ದಾನೆ ಮತ್ತು ಜಯ ಹೊಂದುವವರು ಆತನಂತಿರುತ್ತಾರೆ ಮತ್ತು ಆತನನ್ನು ಇರುವಂತೆಯೇ ನೋಡುವರು (1 ಯೋಹಾನ 3:2) ಎಂದು ನಮಗೆ ಹೇಳಲಾಗಿದೆ. "ಪ್ರಾಕೃತ ದೇಹವು ಇರುವುದಾದರೆ ಆತ್ಮೀಕ ದೇಹವೂ ಇರುವುದು" (1 ಕೊರಿಂಥ 15:44). ನಮ್ಮ ದೈವಿಕ ತಂದೆಯು ಅಥವಾ ನಮ್ಮ ಕರ್ತನಾದ ಯೇಸುವು ದೇಹವಿಲ್ಲದೇ, ಕೇವಲ ಮಹಾ ಮನಸ್ಸುಳ್ಳವರು ಎಂಬುದಾಗಿ ನಾವು ಊಹಿಸಬಾರದು. ಅವರದು ಮಹೋನ್ನತ ಆತ್ಮೀಕ ಶರೀರಗಳು. ಅದರ ಮಹಿಮೆಯು ಎಷ್ಟೆಂದು ಇನ್ನೂ ಕಂಡುಬಂದಿಲ್ಲ ಮತ್ತು ನಾವು ದೈವಿಕ ಸ್ವಭಾವದಲ್ಲಿ ಪಾಲುದಾರರಾಗುವವರೆಗೂ ಅದು ಕಂಡುಬರುವುದಿಲ್ಲ.

ಮಾನವ ಮನಸ್ಸಿನಿಂದ ಆತ್ಮೀಕ ಮನಸ್ಸಿಗೆ ಆಗುವ ಪರಿವರ್ತನೆಯು ಕ್ರಮೇಣವಾದ ಕಾರ್ಯವಾಗಿರುವಾಗ, ಮಾನವ ಶರೀರದಿಂದ ಅತ್ಮೀಕ ಶರೀರಕ್ಕೆ ಆಗುವ ಬದಲಾವಣೆಯು ಕ್ರಮೇಣವಾದುದಲ್ಲ, ತತ್‌ಕ್ಷಣದಲ್ಲಿ ಆಗುವುದಾಗಿದೆ (1 ಕೊರಿಂಥ 15:52). ಈಗ ಪೌಲನು ಹೇಳುವುದೇನೆಂದರೆ – "ಈ ನಿಕ್ಷೇಪವು ಮಣ್ಣಿನ ಘಟಗಳಲ್ಲಿ ನಮಗುಂಟು" (ದೈವಿಕ ಮನಸ್ಸು), ಆದರೆ ಸೂಕ್ತ ಸಮಯದಲ್ಲಿ ಈ ನಿಕ್ಷೇಪವು ಅದಕ್ಕೆ ಸೂಕ್ತವಾದ ಅದ್ಭುತ ಪಾತ್ರೆಯಾದ ಆತ್ಮೀಕ ಶರೀರದಲ್ಲಿರುವುದು.

ಮಾನವ ಸ್ವಭಾವವು ಆತ್ಮೀಕ ಹೋಲಿಕೆ ಎಂಬುದನ್ನು ನಾವು ನೋಡಿದ್ದೇವೆ (ಆದಿ. 5:1). ಉದಾಹರಣೆಗೆ, ದೇವರಿಗೆ ಒಂದು ಚಿತ್ತ ಉಂಟು, ಅದರಂತೆ ಮಾನವರಿಗೂ, ದೇವದೂತರಿಗೂ ಇಚ್ಛೆಯುಂಟು; ದೇವರಿಗೆ ವಿವೇಚನೆ ಮತ್ತು ಜ್ಞಾಪಕ ಶಕ್ತಿಯುಂಟು. ಅದರಂತೆ ಬುದ್ಧಿವಂತ ಜೀವಿಗಳಾದ ಮಾನವರಿಗೂ, ದೇವದೂತರುಗಳಿಗೂ ಉಂಟು. ಮಾನಸಿಕ ಕಾರ್ಯಾಚರಣೆಯ ಗುಣಲಕ್ಷಣವು ಒಂದೇ ರೀತಿಯದ್ದಾಗಿರುತ್ತದೆ. ವಿವೇಚಿಸಲು ಅದೇ ಸ್ಥಿತಿಗತಿಯಲ್ಲಿ ಮತ್ತು ಅದೇ ಮಾಹಿತಿಯೊಂದಿಗೆ ಈ ವಿಭಿನ್ನ

ಸ್ವಭಾವಗಳು ಒಂದೇ ರೀತಿಯ ತೀರ್ಮಾನಗಳಿಗೆ ಬರಲು ಸಾಧ್ಯವಾಗುತ್ತದೆ. ದೈವಿಕವಾದ, ದೇವದೂತರುಗಳ ಮತ್ತು ಮಾನವ ಸ್ವಭಾವಗಳ ಮಾನಸಿಕ ಸಾಮರ್ಥ್ಯವು ಒಂದೇ ಆಗಿದ್ದರೂ, ಆತ್ಮೀಕ ಸ್ವಭಾವಗಳೀಗೆ ಮಾನವ ಶಕ್ತಿಗಳಿಗೂ ಮೀರಿದ ಹೆಚ್ಚಿನ ಶಕ್ತಿಯಿದೆ ಎಂಬುದು ನಮಗೆ ತಿಳಿದದೆ. ಫಲವಾಗಿ, ನಾವು ಯೋಚಿಸುವಂತೆ, ವಿವಿಧ ಸಾಮರ್ಥ್ಯಗಳಿಂದಲ್ಲ, ಬದಲಾಗಿ ಅದೇ ಸಾಮರ್ಥ್ಯದ ವ್ಯಾಪ್ತಿಯಿಂದ ವ್ಯಾಪಕತೆಯಿಂದಾಗಿ ಹಾಗೂ ಅವು ಕಾರ್ಯನಿರ್ವಹಿಸುವ ವಿವಿಧ ಸನ್ನಿವೇಶಗಳಿಂದಾಗಿದೆ ಎಂದು ನಾವು ಯೋಚಿಸುತ್ತೇವೆ. ಮಾನವ ಸ್ವಭಾವವು ದೈವಸ್ವರೂಪದ ಪರಿಪೂರ್ಣ ಐಹಿಕ ಸ್ವಭಾವದ ಸ್ವರೂಪವಾಗಿದೆ. ಅದೇ ಶಾರೀರಿಕ ಸಾಮರ್ಥ್ಯವನ್ನು ಹೊಂದಿದೆ. ಆದರೆ ಐಹಿಕ ಕಾರ್ಯಕ್ಷೇತ್ರಕ್ಕೆ ಸೀಮಿತಗೊಂಡಿದೆ ಮತ್ತು ಮನುಷ್ಯನ ಪ್ರಯೋಜನ ಮತ್ತು ಸಂತೋಷಕ್ಕಾಗಿ ದೇವರು ಬಹಿರಂಗಪಡಿಸಲು ಸೂಕ್ತವೆಂದು ತೋರುವಷ್ಟು ಮಾತ್ರ ವಿವೇಚಿಸುವ ಸಾಮರ್ಥ್ಯ ಮತ್ತು ಸ್ವಭಾವವನ್ನು ಹೊಂದಿದೆ.

ದೈವಿಕತೆಯು ಆತ್ಮೀಕ ಸ್ವಭಾವದ ಅತ್ಯುನ್ನತವಾದ ವರ್ಗವಾಗಿದೆ. ದೇವರ ಮತ್ತು ಆತನ ಸೃಷ್ಟಿಗಳ ನಡುವಿನ ಅಂತರ ಎಷ್ಟೆಂದು ಅಳೆಯಲಾರದಷ್ಟಿದೆ! ನಾವು ದೈವಿಕ ಜ್ಞಾನದ, ಶಕ್ತಿಯ ಮತ್ತು ಒಳ್ಳೇತನದ ಮಹಿಮೆಯ ಕ್ಷಣದರ್ಶನಗಳನ್ನು ಮಾತ್ರವೇ ಗ್ರಹಿಸಲು ಸಮರ್ಥರಾಗಿದ್ದೇವೆ. ಆತನು ತನ್ನ ಕೆಲವೊಂದು ಪ್ರಬಲ ಕಾರ್ಯಗಳನ್ನು ನಮ್ಮ ಮುಂದೆ ಹಾದುಹೋಗುವಂತೆ ಮಾಡುವ ನಿಮಿತ್ತ ಆ ವಿಹಂಗಮ ನೋಟವನ್ನು ಸೆರೆಹಿಡಿಯುತ್ತೇವೆ. ಅದರೆ ನಾವು ಪರಿಪೂರ್ಣ ಮಾನವತೆಯ ಮಹಿಮೆಯನ್ನು ಅಳೆಯಬಹುದು ಮತ್ತು ಗ್ರಹಿಸಿಕೊಳ್ಳಬಹುದು.

ಈ ಆಲೋಚನೆಗಳನ್ನು ಸ್ಪಷ್ಟವಾಗಿ ಮನಸ್ಸಿನಲ್ಲಿಟ್ಟು ಕೊಂಡು ನಾವು ಮಾನವ ಸ್ವಭಾವದಿಂದ ಆತ್ಮೀಕ ಸ್ವಭಾವಕ್ಕೆ ಯಾವ ರೀತಿಯಲ್ಲಿ ಬದಲಾವಣೆಗಳು ಉಂಟಾದವೆಂಬುದನ್ನು ಮೆಚ್ಚಿಕೊಳ್ಳುತ್ತೇವೆ. ಅಂದರೆ ಅದೇ ಮಾನಸಿಕ ಶಕ್ತಿಗಳನ್ನು ಉನ್ನತ ಸ್ಥಿತಿಗೆ ಸಾಗಿಸುವುದಾಗಿದೆ. ಪರಲೋಕದ ದೇಹಗಳನ್ನು ಧರಿಸಿಕೊಳ್ಳುವಾಗ ನಮಗೆ ಆ ಮಹಿಮಾ ಶರೀರಕ್ಕೆ ಸೇರಿದ ಪರಲೋಕದ ಶಕ್ತಿಗಳು ದೊರೆಯತ್ತವೆ; ಮತ್ತು ನಾವು ಅದಕ್ಕೆ ಸೇರಿದ ಆಲೋಚನೆ ಮತ್ತು ಅಧಿಕಾರದ ವ್ಯಾಪ್ತಿಯನ್ನು ಹೊಂದಿಕೊಳ್ಳುತ್ತೇವೆ.

ಐಹಿಕದಿಂದ ಪಾರಮಾರ್ಥಿಕತೆಗೆ ಮನಸ್ಸಿನ ಪರಿವರ್ತನೆಯ ಬದಲಾವಣೆಯು, ಇಲ್ಲಿ ಪ್ರತಿಷ್ಠಿತರ ಅನುಭವವಾಗಿದ್ದು ಅದು ಸ್ವಭಾವದ ಬದಲಾವಣೆಯ ಪ್ರಾರಂಭವಾಗಿದೆ. ಅದು ಮೆದುಳಿನ ಬದಲಾವಣೆಯಲ್ಲ, ಅಥವಾ ಅದರ ಕಾರ್ಯಾಚರಣೆಯಲ್ಲಿನ ಅದ್ಭುತವೂ ಅಲ್ಲ. ಆದರೆ ಅದು ಚಿತ್ತ ಮತ್ತು ಮನಸ್ಸಿನ ಬಾಗುವಿಕೆಯಾಗಿದೆ. ನಮ್ಮ ಚಿತ್ತ ಮತ್ತು ಭಾವನೆಗಳು ನಮ್ಮ ವ್ಯಕ್ತಿತ್ವವನ್ನು ಪ್ರತಿನಿಧಿಸುತ್ತವೆ; ಆದುದರಿಂದ ನಾವು ಪರಿವರ್ತನೆ ಹೊಂದಿಕೊಳ್ಳುತ್ತೇವೆ, ಮತ್ತು ಚಿತ್ತ ಮತ್ತು ಭಾವನೆಗಳು ಆ ರೀತಿಯ ಬದಲಾವಣೆಗಳನ್ನು ಹೊಂದುವಾಗ ವಾಸ್ತವವಾಗಿಯೂ ದೈವಿಕ ಸ್ವಭಾವವನ್ನು ಹೊಂದಿದವರೆಂದು ಪರಿಗಣಿಸಲ್ಪಡುತ್ತೇವೆ. ನಿಜ, ಇದು ಒಂದು ಬಹಳ ಸಣ್ಣ ಪ್ರಾರಂಭವಾಗಿದೆ; ಆದರೆ ಹುಟ್ಟುವಿಕೆ, ಎಂದು ಇದನ್ನು ಹೇಳಲಾಗಿದ್ದು ಇದು ಯಾವಾಗಲೂ ಒಂದು ಸಣ್ಣ ಆರಂಭವೇ ಆಗಿರುತ್ತದೆ. ಆದರೂ ಇದು ಪೂರ್ಣಗೊಂಡ ಕಾರ್ಯದ ಲಕ್ಷಣ ಅಥವಾ ಭರವಸೆಯಾಗಿದೆ (ಎಫೆಸ 1:13,14).

ಕೆಲವರು ಮಾರ್ಪಟ್ಟಾಗ ನಮ್ಮನ್ನು ನಾವು ಹೇಗೆ ತಿಳಿದುಕೊಳ್ಳುವುದು? ಎಂದು ಕೇಳುತ್ತಾರೆ. ನಾವು ಮಹಿಮೆಯಲ್ಲಿ ಪಾಲುದಾರರಾಗುವಂತೆ ಆಗ ಜೀವಿಸುತ್ತಾ, ಶ್ರಮೆಪಡುತ್ತಾ, ಸಮರ್ಪಿಸಿಕೊಂಡವ ರಾಗಿದ್ದ ಅದೇ ವ್ಯಕ್ತಿಗಳು ನಾವು ಎಂಬದನ್ನು ತಿಳಿಯುವುದು ಹೇಗೆ? ಎಂದು ಕೇಳಿದ್ದಾರೆ. ನಾವು ಅದೇ ಪ್ರಜ್ಞೆಯುಳ್ಳ ಜೀವಿಗಳೋ? ಅದಕ್ಕಿಂತ ನಿಶ್ಚಯವಾಗಿ ಹೌದು. ನಾವು ಕ್ರಿಸ್ತನೊಂದಿಗೆ ಸಾಯುವ ಪಕ್ಷದಲ್ಲಿ, ನಾವು ಆತನೊಂದಿಗೆ ಜೀವಿಸುವವರೂ ಆಗಿದ್ದೇವೆ (ರೋಮಾ. 6:8). ನಮ್ಮ ಮಾನವ ಶರೀರದಲ್ಲಿ ಪ್ರತಿದಿನ ಕಾಣಿಸಿಕೊಳ್ಳುವ ಬದಲಾವಣೆಗಳು ನಾವು ಹಿಂದಿನದನ್ನು ಮರೆಯುವಂತೆ ಮಾಡುವುದಿಲ್ಲ ಅಥವಾ ನಮ್ಮ ನಮ್ಮ ಗುರುತನ್ನೂ ನಾವು ಕಳಕೊಳ್ಳುವುದಿಲ್ಲ.*

* ನಮ್ಮ ಮಾನವ ಶರೀರವು ನಿರಂತರವಾಗಿ ಬದಲಾಗುತ್ತಿರುತ್ತವೆ. ವಿಜ್ಞಾನವು ಹೇಳುವಂತೆ ಪ್ರತಿ ಏಳುವರ್ಷಗಳಲ್ಲಿ ನಮ್ಮ ಅಂಗಾಂಗಗಳ ಕಣದಲ್ಲಿ ಸಂಪೂರ್ಣವಾದ ಬದಲಾವಣೆಗಳುಂಟಾಗುತ್ತವೆ. ಹೀಗಾಗಿ ಮಾನವ ಶರೀರದಿಂದ ಆತ್ಮೀಕ ಶರೀರಕ್ಕೆ ವಾಗ್ದಾನಪಡಿಸಿದ ಬದಲಾವಣೆಗಳು ಉಂಟಾಗುವಾಗ ಅದು ಜ್ಞಾಪಕ ಶಕ್ತಿಯನ್ನಾಗಲೀ ಅಥವಾ ಅನ್ಯನತೆಯನ್ನಾಗಲೀ (ಗುರುತು) ನಾಶಪಡಿಸುವುದಿಲ್ಲ, ಆದರೆ ಅದರ ಶಕ್ತಿ ಮತ್ತು ಶ್ರೇಣಿಯನ್ನು ಹೆಚ್ಚಿಸುತ್ತದೆ, ಈಗ ನಮ್ಮದಾಗಿರುವ ಅದೇ ದೈವಿಕ ಮನಸ್ಸು, ಅದೇ ಜ್ಞಾಪಕಶಕ್ತಿಯಿಂದ, ವಿವೇಚನಾ ಶಕ್ತಿ ಮುಂತಾದವುಗಳಿಂದ ಕೂಡಿದ್ದಾಗಿರುತ್ತದೆ ಮತ್ತು ನಂತರದಲ್ಲಿ ಅದರ ಶಕ್ತಿಯು ಆತ್ಮೀಕ ಶರೀರದ ಸಾಮರಸ್ಯದೊಡನೆ ಅಳೆಯಲಾಗದ ಎತ್ತರಕ್ಕೆ, ಆಳವಾದ ವಿಚಾರಕ್ಕೆ ವ್ಯಾಪಿಸಿರುವುದನ್ನು ಕಂಡುಕೊಳ್ಳುತ್ತದೆ; ಜ್ಞಾಪಕಶಕ್ತಿಯು ಬಹಳ ಮುಂಚಿನ ನಮ್ಮ ಮಾನವ ಬಾಲ್ಯಾವಸ್ಥೆಯಿಂದ ನಮ್ಮೆಲ್ಲಾ ಜೀವನೋಪಾಯ ಕ್ರಮಗಳನ್ನು ಪತ್ತೆ ಹಚ್ಚುತ್ತದೆ. ನಾವು ಭಿನ್ನತೆಯಿಂದ ನಮ್ಮ ತ್ಯಾಗದ ಭವ್ಯವಾದ ಬಹುಮಾನವನ್ನು ಸಂಪೂರ್ಣವಾಗಿ ಗ್ರಹಿಸಿಕೊಳ್ಳಲು ಸಾಧ್ಯವಾಗುತ್ತದೆ. ಆದರೆ ಮಾನವರು ಆತ್ಮೀಕತೆಯ ಸ್ವರೂಪಿಯಾಗಿರದಿದ್ದರೆ ಇದು ಸಾಧ್ಯವಾಗುತ್ತಿರಲಿಲ್ಲ.

ಈ ಆಲೋಚನೆಗಳು ನಮಗೆ ಯಾವ ರೀತಿಯಲ್ಲಿ ಮಗನು (ಕ್ರಿಸ್ತನು) ಆತ್ಮೀಕ ಸ್ಥಿತಿಯಿಂದ ಮಾನವ ಸ್ಥಿತಿಗೆ – ಮಾನವ ಸ್ವಭಾವಕ್ಕೆ – ಭೂಲೋಕದ ಪರಿಸ್ಥಿತಿಗಳಿಗೆ ಬದಲಾದಾಗ – ಯಾವ ರೀತಿಯಲ್ಲಿ ಮನುಷ್ಯನಾದನು ಎಂಬುದನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗ ಬಹುದು. ಎರಡೂ ಪ್ರಕರಣದಲ್ಲಿಯೂ ಒಬ್ಬನೇ ಜೀವಿಯಾಗಿದ್ದರೂ, ಮೊದಲನೆಯ ಪರಿಸ್ಥಿತಿಯಲ್ಲಿ ಆತನು ಆತ್ಮೀಕನಾಗಿದ್ದನು ಮತ್ತು ಎರಡನೆಯ ಪರಿಸ್ಥಿತಿಯಲ್ಲಿ ಆತನು ಮಾನವನಾಗಿದ್ದನು. ಯಾಕೆಂದರೆ, ಈ ಎರಡೂ ಸ್ವಭಾವಗಳೂ ಪ್ರತ್ಯೇಕವಾದವುಗಳೂ ಮತ್ತು ನಿರ್ದಿಷ್ಟವಾದವುಗಳೂ ಆಗಿರುವುದಾದಾಗ್ಯೂ, ಒಂದು ಮತ್ತೊಂದರ ಹೋಲಿಕೆಯಾಗಿರುವುದರಿಂದ ಅದೇ ಮಾನಸಿಕ ಸಾಮರ್ಥ್ಯಗಳಿರುತ್ತವೆ (ಜ್ಞಾಪಕ ಶಕ್ತಿ ಮುಂತಾದವುಗಳು) ಅವು ಎರಡಕ್ಕೂ ಸಾಮಾನ್ಯವಾಗಿರುತ್ತದೆ. ಯೇಸುವು ತಾನು ಮಾನವನಾಗುವುದಕ್ಕಿಂತ ಮುಂಚೆ ತನಗಿದ್ದ ಮಹಿಮೆ, ಆದರೆ ಆತನು ಮಾನವನಾಗಿ ಬಂದಾಗ ಆ ಮಹಿಮೆ ಇರಲಿಲ್ಲ ಎಂಬುದನ್ನು ಗ್ರಹಿಸುವವನಾಗಿದ್ದನು. ಆತನ ಮಾತುಗಳಲ್ಲೇ ದೃಢಪಡಿಸುವಂತೆ – "ಈಗ ತಂದೆಯೇ, ನೀನು ನಿನ್ನ ಬಳಿಯಲ್ಲಿ ನನ್ನನ್ನು ಮಹಿಮೆಪಡಿಸು" "ಲೋಕ ಉಂಟಾಗುವುದಕ್ಕೆ ಮುಂಚೆ ನಿನ್ನ ಬಳಿಯಲ್ಲಿ ನನಗಿದ್ದ ಮಹಿಮೆಯಿಂದಲೇ ನನ್ನನ್ನು ಮಹಿಮೆಪಡಿಸು" (ಯೋಹಾನ 17:5). ಆತನ ಆತ್ಮೀಕ ಸ್ವಭಾವದ ಮಹಿಮೆಯು ಇದರಿಂದ ಸಾಬೀತಾಗುತ್ತದೆ ಮತ್ತು ಈ ಪ್ರಾರ್ಥನೆಯು ಆತನ ಪ್ರಸ್ತುತ ಆತ್ಮನ ಅತ್ಯಂತ ಶ್ರೇಷ್ಟವಾದ ರೂಪದ ಆತ್ಮೀಕ ಜೀವಿಯೂ ದೈವಿಕ ಸ್ವಭಾವಕ್ಕೆ ಏರಿಸಲ್ಪಟ್ಟದ್ದಕ್ಕಿಂತಲೂ ಹೆಚ್ಚಾದ ರೀತಿಯಲ್ಲಿ ಈ ಪ್ರಾರ್ಥನೆಗೆ ಉತ್ತರಿಸಲ್ಪಟ್ಟಿದೆ. ಪುನಃ ಪೌಲನ ಮಾತುಗಳನ್ನು ನೋಡುವಾಗ, ಆತನು "ಇಹಲೋಕದ ನಡವಳಿಕೆಯನ್ನು ಅನುಸರಿಸದೆ ಬದಲಿಗೆ ದೈವಿಕ ಸ್ವರೂಪಕ್ಕೆ ಬದಲಾಯಿಸಿಕೊಳ್ಳಿರಿ" ಎಂದು ಹೇಳದೆ "ಇಹಲೋಕದ ನಡತೆಯನ್ನು ಅನುಸರಿಸದೆ ನೂತನ ಮನಸ್ಸನ್ನು ಹೊಂದಿಕೊಂಡು ಪರಲೋಕದ ಭಾವದವರಾಗಿರ್ರಿ" (ರೋಮಾ. 12:2) ಎಂದು ಹೇಳಿದ್ದಾನೆ. ಆತನು ಇಲ್ಲಿ "ಹೊಂದಿಕೊಳ್ಳಿರಿ... ಆದರೆ ನೀವು ಪರಿವರ್ತನೆ ಹೊಂದಿಕೊಳ್ಳಿರಿ" ಎಂದು ಹೇಳುವವನಾಗಿದ್ದಾನೆ. ಇದು ಚೆನ್ನಾಗಿ ಹೇಳಲ್ಪಟ್ಟಿದೆ. ಯಾಕೆಂದರೆ ನಾವಾಗಿಯೇ ಹೊಂದಿಕೊಳ್ಳುವುದೂ ಇಲ್ಲ, ಪರಿವರ್ತಿಸುವುದೂ ಇಲ್ಲ, ಆದರೆ ಒಂದು ನಾವು ಈ ಲೋಕದ ಪ್ರಭಾವಗಳಿಂದ ನಮ್ಮನ್ನು ಈ ಲೋಕಕ್ಕೆ ಹೊಂದಿಸಿಕೊಳ್ಳುತ್ತೇವೆ, ಈ ಲೋಕದ ಆತ್ಮವು ನಮ್ಮ ಸುತ್ತಲೂ ಇದೆ. ಅಥವಾ ನಮ್ಮನ್ನು ದೇವರ ಚಿತ್ತಕ್ಕೆ ಒಪ್ಪಿಸಿಕೊಡಬೇಕು, ಪವಿತ್ರವಾದ ಚಿತ್ತ ಅಥವಾ ಆತ್ಮನು, ದೇವರ ವಾಕ್ಯದ ಮೂಲಕ ಕಾರ್ಯಾಚರಣೆ ಮಾಡುವ ಪ್ರಭಾವದಿಂದ ನಮ್ಮನ್ನು ನಾವು ಪರಿವರ್ತಿಸಿಕೊಳ್ಳಬೇಕು. ಪ್ರತಿಷ್ಠೆಗೊಂಡಿರುವ ನೀವು ಯಾವ ಪ್ರಭಾವಕ್ಕೆ ನಿಮ್ಮನ್ನು ಒಪ್ಪಿಸಿಕೊಡುತ್ತೀರಿ? ಪರಿವರ್ತನಾ ಪ್ರಭಾವವು ಪ್ರಸ್ತುತ ಸಮರ್ಪಣೆಗೆ, ಶ್ರಮೆಗೆ ನಡೆಸುತ್ತದೆ. ಆದರೆ ಅಂತ್ಯವು ಮಹಿಮೆಯುಳ್ಳದ್ದಾಗಿರುತ್ತದೆ. ನೀವು ಈ ಪರಿವರ್ತನಾ ಪ್ರಭಾವದಿಂದ ಅಭಿವೃದ್ಧಿಗೊಳ್ಳುತ್ತಿರುವ ವರಾದರೆ, ಪ್ರತಿನಿತ್ಯವೂ ಯಾವುದು ಒಳ್ಳೇಯದೂ, ಅಂಗೀಕಾರಾರ್ಹವೂ, ಮತ್ತು ದೇವರ ಪರಿಪೂರ್ಣ ಚಿತ್ತವೂ ಆಗಿದೆ ಎಂಬುದನ್ನು ಸಾಬೀತುಪಡಿಸುತ್ತೀರಿ.

ಯಾರು ತ್ಯಾಗದ ಬಲಿಪೀಠದಲ್ಲಿ ಸಮರ್ಪಿಸಿ ದ್ದರೋ ಅಂಥವರು ದೇವರ ವಾಕ್ಯವು ಭೂಲೋಕದ ಮತ್ತು ಪರಲೋಕದ ವಾಗ್ದಾನಗಳನ್ನು ಹೊಂದಿರುವಾಗ, ಎರಡನೆಯದು ಮಾತ್ರವೇ ನಮ್ಮದಾಗಿರುತ್ತದೆ ಎಂಬುದು ನಿರಂತರವಾಗಿ ತನ್ನ ಮನಸ್ಸಿನಲ್ಲಿ ಇರಲಿ. ನಮ್ಮ ನಿಧಿಯು ಪರಲೋಕದಲ್ಲಿದೆ; ನಮ್ಮ ಹೃದಯಗಳೂ ಅಲ್ಲೇ ಮುಂದುವರೆಯಲಿ. ನಮ್ಮ ಕರೆಯು ಆತ್ಮೀಕ ಸ್ವಭಾವಗಳಿಗೆ ಮಾತ್ರವೇ ಅಲ್ಲ. ಆದರೆ ಅದು ಅತ್ಯಂತ ಶ್ರೇಷ್ಟಮಟ್ಟದ ಆತ್ಮೀಕ, ದೈವಿಕ ಸ್ವಭಾವಕ್ಕಾಗಿದೆ. – "ದೇವದೂತರಿಗಿಂತಲೂ ಉತ್ತಮವಾದುದು" (2 ಪೇತ್ರ 1:4; ಇಬ್ರಿಯ 1:4). ದೈವಸ್ವಭಾವಕ್ಕೆ ಈ ಪರಲೋಕದ ಕರೆಯು ಸುವಾರ್ತಾಯುಗಕ್ಕೆ ಸೀಮಿತವಾಗಿದೆ. ಅದು ಈ ಹಿಂದೆ ಎಂದೂ ಆಗಿರಲಿಲ್ಲ, ಮತ್ತು ಸುವಾರ್ತಾಯುಗದ ಮುಕ್ತಾಯವಾಗುವಾಗ ಅದು ಮುಗಿದುಹೋಗುತ್ತದೆ. ಭೂಲೋಕದ ಕರೆಯನ್ನೂ ಮಾಡಲಾಗಿದ್ದು ಅದನ್ನು ಪರಲೋಕದ ಕರೆಯ ಮುಂದೆ ಅಪರಿಪೂರ್ಣವಾಗಿ ಅರ್ಥಮಾಡಿಕೊಳ್ಳಲಾಗಿದೆ ಮತ್ತು ಅದು ಸುವಾರ್ತಾಯುಗದ ನಂತರವೂ ಮುಂದುವರೆಯುತ್ತದೆ ಎಂದು ನಮಗೆ ತಿಳಿಸಲಾಗಿದೆ. ಜೀವನ (ಮಾನವ ಜೀವಿಗಳಾಗಿ ಪುನರ್‌ವಶ ಗೊಂಡವರಿಗೆ) ಮತ್ತು ಅಮರತ್ವದ (ಈ ಬಹುಮಾನಕ್ಕಾಗಿ ಕ್ರಿಸ್ತನ ದೇಹವು ಓಡುತ್ತಿದೆ). ಇವೆರಡೂ ಈ ಯುಗದಲ್ಲಿ ಬೆಳಕಿಗೆ ತರಲ್ಪಟ್ಟವು (2 ತಿಮೋ. 1:10). ಮಾನವ ಮತ್ತು ಆತ್ಮೀಕ ಸ್ವಭಾವಗಳೆರಡೂ ಅದರ ಪರಿಪೂರ್ಣತೆಯಲ್ಲಿ ಮಹಿಮೆಯುಳ್ಳದ್ದಾಗಿರುತ್ತದೆ. ಆದಾಗ್ಯೂ ಅದು ನಿಶ್ಚಿತವೂ, ಪ್ರತ್ಯೇಕವಾದುದೂ ಆಗಿರುತ್ತದೆ. ದೇವರು ಮುಗಿಸಿದ ಕಾರ್ಯಗಳ ಮಹಿಮೆಯಲ್ಲಿ ಸುಂದರವಾದ ಬಗೆಯಲ್ಲಿರುತ್ತದೆ, ಹಾಗೂ ಅದ್ಭುತವಾದ ಸಾಮರಸ್ಯವು ಎಲ್ಲಾ

ಸಂಗತಿಗಳಲ್ಲೂ, ಜೀವವುಳ್ಳವುಗಳಲ್ಲೂ ಮತ್ತು ನಿರ್ಜೀವಗಳಲ್ಲೂ ಕಂಡುಬರುತ್ತದೆ. ಒಂದರೊಡನೆ ಒಂದು ಸಾಮರಸ್ಯದಿಂದಲೂ ಮತ್ತು ದೇವರೊಡನೆ ಸಾಮರಸ್ಯದಿಂದಲೂ ಇರುತ್ತದೆ. ಯಾವುದೇ ನಿಕೃಷ್ಟವಾದ ಲಕ್ಷಣವೂ ಇರುವುದಿಲ್ಲ.

## THE CHURCH OF GOD

"Zion arise, breakforth in Songs
Of everlasting joy;
To God eternal praise belongs
who doth thy foes destroy.
Thou Church of God, aswake! awake!
For light beams from on high;
From earth and dust thy garments shake,
Thy glory's drawing nigh.

To raise thee high above the Church
God will his his power employ;
He will turn the mourning into mirth,
Thy sorrow into joy.
In shining robes thyself array
Put on thy garments pure ;
Thy king shall lead thee in the way
That's holy, safe and sure

## ದೇವರ ಸಭೆಯು

ಚಿಯೋನೇ ಎದ್ದೇಳು, ಗಾಯನಗಳಲ್ಲಿ ಭೇಧಿಸಿಕೊಂಡು
ಶಾಶ್ವತ ಸಂತೋಷದ ಗೀತೆಗಳಲ್ಲಿ ಉದಯಿಸು;
ನಿರಂತರ ಸ್ತುತಿಯು ದೇವರಿಗೆ ಸೇರಿದೆ,
ನಿನ್ನ ವೈರಿಗಳನ್ನು ನಾಶಗೊಳಿಸುವವನು ಆತನೇ,
ದೇವರ ಸಭೆಯೇ! ಎಚ್ಚರಗೊಳ್ಳು!
ಮೇಲಿನಿಂದ ಬೆಳಕು ಬೀರುತಿದೆ;
ಭೂಮಿಯು ದೂಳನ್ನು ನಿನ್ನ ವಸ್ತ್ರದಿಂದ ಒದರಿಕೋ,
ನಿನ್ನ ಮಹಿಮೆಯು ಸಮೀಪಿಸುತ್ತಿದೆ.

ನಿನ್ನನ್ನು ಭೂಮಿಯ ಉನ್ನತಕ್ಕೇರಿಸಲು
ದೇವರು ತನ್ನ ಬಲವನ್ನು ಉಪಯೋಗಿಸುವನು;
ಆತನು ನಿನ್ನ ಶೋಕವನ್ನು ಉಲ್ಲಾಸವಾಗಿ
ಮಾರ್ಪಡಿಸುವನು,
ನಿನ್ನ ದುಃಖವನ್ನು ಸಂತೋಷವನ್ನಾಗಿ ಬದಲಿಸುವನು,
ಹೊಳೆಯುವ ವಸ್ತ್ರಗಳಿಂದ ನಿನ್ನನ್ನು ಶೃಂಗರಿಸುವನು,
ಶುದ್ಧವಾದ ನನ್ನ ಉಡುಪನ್ನು ಧರಿಸಿಕೊ;
ನಿನ್ನ ಅರಸನು ನಿನಗೆ ಮಾರ್ಗದರ್ಶನ ನೀಡುವನು,
ಅದು ಪರಿಶುದ್ಧವು, ಸುರಕ್ಷವು ಮತ್ತು ಖಚಿತವಾದದ್ದು.

* * * * * * *

# ಅಧ್ಯಯನ – 11 Study XI

# ಮೂರು ಮಾರ್ಗಗಳು – ಅಗಲವಾದ ಮಾರ್ಗ, ಇಕ್ಕಟ್ಟಾದ ಮಾರ್ಗ ಮತ್ತು ರಾಜಮಾರ್ಗ

## THE THREE WAYS - THE BROAD WAY, THE NARROW WAY & THE HIGHWAY

**ನಾಶನಕ್ಕೆ ಹೋಗುವ ಅಗಲವಾದ ಮಾರ್ಗ – ಜೀವಕ್ಕೆ ಹೋಗುವ ಇಕ್ಕಟ್ಟಾದ ಮಾರ್ಗ – ಜೀವವೆಂದರೇನು? – ದೈವಿಕ ಸ್ವಭಾವ – ದೈವಿಕ ಸ್ವಭಾವಕ್ಕೂ ಮಾನವ ಸ್ವಭಾವಕ್ಕೂ ಇರುವ ಸಂಬಂಧ – ಇಕ್ಕಟ್ಟಾದ ಮಾರ್ಗದ ಕೊನೆಯಲ್ಲಿ ದೊರೆಯುವ ಪ್ರತಿಫಲ – ಮಹಾ ಕರೆಯು ಸುವಾರ್ತಾಯುಗಕ್ಕೆ ಸೀಮಿತವಾಗಿದೆ – ಇಕ್ಕಟ್ಟಾದ ಮಾರ್ಗದಲ್ಲಿರುವ ಕಷ್ಟಗಳು ಮತ್ತು ಗಂಡಾಂತರಗಳು – ಪರಿಶುದ್ಧ ಮಾರ್ಗ.**

"ಇಕ್ಕಟ್ಟಾದ ಬಾಗಿಲಿನಿಂದ ಒಳಕ್ಕೆ ಹೋಗಿರಿ ನಾಶನಕ್ಕೆ ಹೋಗುವ ಬಾಗಿಲು ದೊಡ್ಡದು, ದಾರಿ ಅಗಲವು; ಅದರಲ್ಲಿ ಹೋಗುವವರು ಬಹಳ ಜನ, ನಿತ್ಯ ಜೀವಕ್ಕೆ ಹೋಗುವ ಬಾಗಿಲು ಇಕ್ಕಟ್ಟು, ದಾರಿ ಬಿಕ್ಕಟ್ಟು, ಅದನ್ನು ಕಂಡುಹಿಡಿಯುವವರು ಸ್ವಲ್ಪ ಜನ" (ಮತ್ತಾಯ 7 : 13–14) – ಡಯಾಗ್ಲೋಟ್ ಅನುವಾದ.

"ಅಲ್ಲಿ ರಾಜಮಾರ್ಗವಿರುವುದು, ಹೌದು [ಹೋಗಿ ಬರುವ] ದಾರಿ; ಯಾವ ಅಶುದ್ಧನೂ ಅಲ್ಲಿ ನಡೆಯನು, ಅದು ದೇವಜನರಿಗಾಗಿಯೇ ಇರುವುದು, ಅಲ್ಲಿ ಹೋಗುವ ಮೂಢನೂ ದಾರಿ ತಪ್ಪನು. ಸಿಂಹವು ಅಲ್ಲಿರದು, ಕ್ರೂರ ಜಂತು ಅಲ್ಲಿ ಸೇರದು; ಕಾಣುವುದೇ ಇಲ್ಲ; ಬಿಡುಗಡೆಯಾದವರೇ ಅಲ್ಲಿ ನಡೆಯುವರು" (ಯೆಶಾಯ 35 : 8–9).

ಮೂರು ಮಾರ್ಗಗಳು, "ಅಗಲವಾದ ಮಾರ್ಗ", "ಇಕ್ಕಟ್ಟಾದ ಮಾರ್ಗ" ಮತ್ತು "ರಾಜ ಮಾರ್ಗ" – ಇವುಗಳನ್ನು ವೇದವಚನಗಳು ನಮ್ಮ ಗಮನಕ್ಕೆ ತಂದಿವೆ.

### ನಾಶನಕ್ಕೆ ಹೋಗುವ ಅಗಲವಾದ ಮಾರ್ಗ
### The Broad Road to Destruction

ಈ ಮಾರ್ಗವನ್ನು ಹಾಗೆಂದು ಕರೆಯುವ ಕಾರಣವೇನೆಂದರೆ, ಅಧೋಗತಿಗಿಳಿದ ಮಾನವ ಜನಾಂಗಕ್ಕೆ ಇದು ಅತ್ಯಂತ ಸುಲಭ ಎಂಬ ಕಾರಣಕ್ಕೆ ಈ ಮಾರ್ಗಕ್ಕೆ ಹೀಗೆ ಹೆಸರಿಸಲಾಗಿದೆ. ಆರು ಸಾವಿರ ವರ್ಷಗಳ ಹಿಂದೆ ಪಾಪಿಯಾಗಿ ನಾಶನದ ದಂಡನೆಗೊಳಗಾದ ಆದಾಮನು (ಸಂತತಿಯು ಆತನಲ್ಲಿ ಪ್ರತಿನಿಧಿಸಿದೆ) ಈ ಮಾರ್ಗದಲ್ಲಿ ತನ್ನ ಪಯಣವನ್ನು ಪ್ರಾರಂಭಿಸಿದನು. ಒಂಬೈನೂರ ಮೂವತ್ತು ವರ್ಷಗಳ ನಂತರ ಅದರ ತುದಿಯನ್ನು ಅಂದರೆ ನಾಶನವನ್ನು ತಲುಪಿದನು. ವರ್ಷಗಳೂ, ಶತಮಾನಗಳೂ ಉರುಳಿಹೋಗುವಾಗ, ಕೆಳಗಣ ಮಾರ್ಗವು ಹೆಚ್ಚು ಹೆಚ್ಚು ಸರಾಗವಾಗಿ ಸವೆದುಹೋಗಿತ್ತು. ಮತ್ತು ಮಾನವ ಕುಲವು ಹೆಚ್ಚು ಹೆಚ್ಚು ವೇಗದಿಂದ ನಾಶನದ ಕಡೆಗೆ ಧಾವಿಸತೊಡಗಿತು. ಮಾರ್ಗವು ಪ್ರತಿನಿತ್ಯವೂ ಪಾಪದಿಂದ ಹೆಚ್ಚು ಹೊಳಪುಳ್ಳದ್ದೂ, ಜಿಗುಟುಳ್ಳದ್ದೂ, ಜಾರುವಂತದ್ದೂ ಆಯಿತು. ಮಾರ್ಗವು ಹೆಚ್ಚು ಜಾರುವಂತಾದ್ದಾಗಿ ಮಾತ್ರ ಬೆಳೆಯದೆ, ಮಾನವ ಜಾತಿಯು ಪ್ರತಿನಿತ್ಯ ತನ್ನ ಪ್ರತಿರೋಧ ಶಕ್ತಿಯನ್ನು ಕಳಕೊಳ್ಳತೊಡಗಿತು. ಹೀಗಾಗಿ ಈಗ ಮಾನವ ಕುಲದ ಜೀವನದ ಸರಾಸರಿ ಆಯಸ್ಸು ಸುಮಾರು ಮೂವತ್ತೈದು ವರ್ಷಗಳು ಮಾತ್ರವೇ ಆಗಿದೆ. ಮಾನವರು ಈಗ ಮೊದಲನೆಯ ಮಾನವನಿಗಿಂತ ಒಂಬೈನೂರು ವರ್ಷಗಳ ಮೊದಲೇ ತ್ವರಿತವಾಗಿ ಮಾರ್ಗದ ತುದಿ ಅಂದರೆ ನಾಶನವನ್ನು ತಲುಪಿದ್ದಾರೆ.

ಆರು ಸಾವಿರ ವರ್ಷಗಳ ಕಾಲ ಮಾನವ ಜನಾಂಗವು ವಿಶಾಲವಾದ, ಕೆಳಮುಖವಾದ ಮಾರ್ಗವನ್ನು ಸ್ಥಿರವಾಗಿ ಅನುಸರಿಸಿದೆ. ತುಲನಾತ್ಮಕವಾಗಿ ಕೆಲವರು ಮಾತ್ರವೇ ತಮ್ಮ ಮಾರ್ಗವನ್ನು ಬದಲಾಯಿಸಿ ತಮ್ಮ ಹೆಜ್ಜೆಜಾಡನ್ನು ಬದಲಿಸಿ ಮೂಲಕ್ಕೆ ಹೋಗುವ ಪ್ರಯತ್ನವಮಾಡಿದ್ದಾರೆ. ವಾಸ್ತವವಾಗಿ ಎಲ್ಲಾ ಹೆಜ್ಜೆಗಳನ್ನು ಬದಲಿಸಿ, ಮೂಲದ ಪರಿಪೂರ್ಣತೆಯನ್ನು ತಲುಪುವುದು ಅಸಾಧ್ಯವಾಗಿದೆ. ಆದಾಗ್ಯೂ ಹಾಗೆ ಪ್ರಯತ್ನಿಸಿದ ಕೆಲವರನ್ನು ಮೆಚ್ಚಿಕೊಳ್ಳಲೇ ಬೇಕು, ಆದರೆ ಅವರಿಗೆ ಲಾಭಕರ ಫಲವು ಸಿಕ್ಕದೇ ಏನಿಲ್ಲ. ಆರು ಸಾವಿರ ವರ್ಷಗಳಿಂದ ಮಾನವ ಜಾತಿಯವರ ಮೇಲೆ ಪಾಪ ಮತ್ತು ಮರಣವು ತನ್ನ ಆಳ್ವಿಕೆಯನ್ನು ಪಟ್ಟುಬಿಡದೆ ನಡೆಸಿದೆ ಮತ್ತು ಅವರನ್ನು ಈ ಅಗಲವಾದ ನಾಶನದ ಮಾರ್ಗಕ್ಕೆ ತಳ್ಳಿದೆ ಮತ್ತು ಸುವಾರ್ತಾ ಯುಗದವರೆಗೆ ಇದರಿಂದ ಪಾರಾಗುವ ಮಾರ್ಗವು ಬೆಳಕಿಗೆ

ಬಂದಿರಲಿಲ್ಲ. ಹಿಂದಿನ ಯುಗಗಳಲ್ಲಿ ನಿರೀಕ್ಷೆಯ ಕಿರಣಗಳು ಮಂದವಾಗಿ ವಿವಿಧ ಮಾದರಿಗಳಲ್ಲಿ ಮತ್ತು ಛಾಯೆಗಳಲ್ಲಿ ಕಂಡುಬಂದಾಗ ಅವುಗಳನ್ನು ಕೆಲವರು ಸಂತೋಷವಾಗಿ ಸ್ವಾಗತಿಸಿ ಅವುಗಳ ಮೇಲೆ ಕಾರ್ಯವೆಸಗಿದರು, ಆದಾಗ್ಯೂ ನಮ್ಮ ಕರ್ತನಾದ ಯೇಸುಕ್ರಿಸ್ತನು ಕಾಣಿಸಿಕೊಳ್ಳುವವರೆಗೂ, ಅಪೋಸ್ತಲರು ಪಾಪ ವಿಮೋಚನೆಯ ಸುವಾರ್ತೆಯನ್ನು ಅದರ ಪರಿಣಾಮವಾಗಿ ನಾಶನದಿಂದ ಪುನರುತ್ಥಾನವನ್ನು (2 ತಿಮೋ. 1:10) ಸಾರುವತನಕ ಜೀವ ಮತ್ತು ಅಮರತ್ವವು ಬೆಳಕಿಗೆ ಬರಲಿಲ್ಲ. ಯೇಸುಕ್ರಿಸ್ತನ ಮತ್ತು ಅಪೋಸ್ತಲರ ಬೋಧನೆಗಳು ವಿಮೋಚಕನ ತ್ಯಾಗ ಮತ್ತು ಅರ್ಹತೆಯ ಮೇಲೆ ಆತುಕೊಂಡ ಬೆಳಕಿನ ಜೀವನಕ್ಕೆ – ಪುನರ್‌ವಶ ಮತ್ತು ಪುನಃಸ್ಥಾಪನೆಗೆ ಎಲ್ಲಾ ಮಾನವ ಜಾತಿಯವರನ್ನೂ ನಡೆಸಿದವು. ಅವರು ಇದನ್ನು ಹಳೆಒಡಂಬಡಿಕೆಯ ಅನೇಕ ಸಂಕೇತಗಳಲ್ಲಿ ಮಹತ್ವವಾದವುಗಳೆಂದು ತೋರಿಸುತ್ತಾರೆ. ಅವು ಸುವಾರ್ತಾ ಸಭೆಯ ಮಹಾಕರೆಯ ಬಹುಮಾನವಾದ ಅಮರತ್ವವನ್ನು ಸಹ ಬೆಳಕಿಗೆ ತರುತ್ತದೆ.

ಆಗಲವಾದ ಮಾರ್ಗದಿಂದ ನಾಶನವಾಗುವುದನ್ನು ತಪ್ಪಿಸಿಕೊಳ್ಳುವ ರೀತಿಯನ್ನು ಸುವಾರ್ತೆಯ ಮೂಲಕ ಬೆಳಕಿಗೆ ತರಲಾಗಿದ್ದರೂ, ಮಾನವ ಕುಲದ ಮಹಾ ಜನಸಮೂಹವು ಈ ಸುಸಮಾಚಾರಕ್ಕೆ ಗಮನಕೊಟ್ಟಿಲ್ಲ. ಯಾಕೆಂದರೆ ಅವರು ಪಾಪದಿಂದ ನೀತಿಭ್ರಷ್ಟರಾಗಿದ್ದಾರೆ ಮತ್ತು ಕೆಡುಕನಿಂದ ಕುರುಡರಾಗಿದ್ದಾರೆ. ಕ್ರಿಸ್ತನ ಮೂಲಕ ಮಾನವ ಅಸ್ಥಿತ್ವದ ಪುನರ್‌ಸ್ಥಾಪನೆಯ ಜೀವದ ವಾಗ್ದಾನವನ್ನು ಈಗ ಯಾರು ಕೃತಜ್ಞತೆಯಿಂದ ಸ್ವೀಕರಿಸುವರೋ, ಅವರಿಗೆ ತೆರೆದಿರುವ ನೂತನ ಮಾರ್ಗವನ್ನು ಸೂಚಿಸಲಾಗಿದೆ, ಹಾಗೂ ಅದರ ಮೂಲಕ ಪ್ರತಿಷ್ಠೆಗೊಂಡ ವಿಶ್ವಾಸಿಗಳು ಮಾನವ ಸ್ವಭಾವನ್ನು ಮೀರಿದ ಉನ್ನತ ಸ್ವಭಾವದ ಆತ್ಮೀಕತೆಗೆ ಬದಲಾಗಬಹುದಾಗಿದೆ. ಇದು ನಮಗಾಗಿ ಪ್ರತಿಷ್ಠಿಸಿದ ಜೀವವುಳ್ಳ ಹೊಸ ದಾರಿಯಾಗಿದೆ "ರಾಜವಂಶಸ್ಥ ಯಾಜಕರು) (ಇಬ್ರಿಯ10:20) – ನಮ್ಮ ಕರ್ತನು ಇದನ್ನು ಹೀಗೆ ಕರೆದಿದ್ದಾನೆ –

## "ಜೀವಕ್ಕೆ ಹೋಗುವ ಇಕ್ಕಟ್ಟಾದ ಮಾರ್ಗ"
## The Narrow Way to Life

ಈ ಮಾರ್ಗವು ಇಕ್ಕಟ್ಟಾಗಿರುವ ಕಾರಣದಿಂದ ಅನೇಕರು ನಾಶನಕ್ಕೆ ಹೋಗುವ ವಿಶಾಲವಾದ ಮಾರ್ಗದಲ್ಲಿಯೇ ಉಳಿಯಲು ಬಯಸುತ್ತಾರೆ ಎಂದು ನಮ್ಮ ಪ್ರಭುವು ಹೇಳುತ್ತಾ – "ಇಕ್ಕಟ್ಟಾದ ಬಾಗಿಲಿನಿಂದ ಒಳಕ್ಕೆ ಹೋಗಿರಿ. ನಾಶಕ್ಕೆ ಹೋಗುವ ಬಾಗಿಲು ದೊಡ್ಡದು. ದಾರಿ ಅಗಲವು ಅದರಲ್ಲಿ ಹೋಗುವವರು ಬಹಳ ಜನ ನಿತ್ಯಜೀವಕ್ಕೆ ಹೋಗುವ ಬಾಗಿಲು ಇಕ್ಕಟ್ಟು. ದಾರಿ ಬಿಕ್ಕಟ್ಟು. ಅದನ್ನು ಕಂಡುಹಿಡಿಯುವವರು ಸ್ವಲ್ಪ ಜನ" (ಮತ್ತಾಯ 7:13–14) ಎಂದಿದ್ದಾನೆ.

ಈ ಮಾರ್ಗದ ಅಪಾಯಗಳು ಮತ್ತು ಕಷ್ಟಗಳನ್ನು ಪರಿಗಣಿಸುವ ಮುನ್ನ, ಅದು ತಲುಪುವ ತುದಿ ಅಂದರೆ 'ಜೀವ'ವನ್ನು ನಾವು ಗಮನಿಸೋಣ. ಈಗಾಗಲೇ ನೋಡಿರುವಂತೆ ಜೀವನವನ್ನು ನಾವು ಮಾನವನಿಗಿಂತ ಎತ್ತರದ ಮಟ್ಟದಲ್ಲಿ ಅಥವಾ ಕೆಳಗಿನ ಮಟ್ಟದಲ್ಲಿಯೂ ಅನುಭವಿಸಬಹುದು. ಜೀವ ಎಂಬುದು ಒಂದು ವಿಶಾಲವಾದ ಮತ್ತು ಸಮಗ್ರವಾಗಿ ಎಲ್ಲವನ್ನೂ ಒಳಗೊಂಡಿರುವ ಶಬ್ದವಾಗಿದೆ. ಆದರೆ ಇಲ್ಲಿ ನಮ್ಮ ಕರ್ತನು ದೈವಿಕ ಸ್ವಭಾವಕ್ಕೆ – ಅಮರತ್ವಕ್ಕೆ ಸಂಬಂಧಿಸಿದ ಅತ್ಯಂತ ಶ್ರೇಷ್ಟ ರೂಪದ ಜೀವವೆಂಬುದಾಗಿ ಉಪಯೋಗಿಸುತ್ತಾನೆ. ಈ ಬಹುಮಾನಕ್ಕಾಗಿ ಓಡುವಂತೆ ಆತನು ನಮ್ಮನ್ನು ಅಹ್ವಾನಿಸಿದ್ದಾನೆ. ಜೀವವೆಂದರೇನು? ನಾವು ಅದನ್ನು ನಮ್ಮಲ್ಲಿ ಮಾತ್ರವೇ ಗ್ರಹಿಸುವುದಿಲ್ಲ, ನಾವು ಅದು ಕೆಳಮಟ್ಟದ ಪ್ರಾಣಿಗಳಲ್ಲಿಯೂ, ಸಸ್ಯಗಳಲ್ಲಿಯೂ ಕಾರ್ಯವೆಸಗುವುದನ್ನು ನೋಡುತ್ತೇವೆ. ಮೇಲ್ಮಟ್ಟದ ರೂಪಗಳಲ್ಲಿಯೂ ಅಂದರೆ ದೇವದೂತರುಗಳಲ್ಲಿಯೂ, ದೈವಿಕತೆಯಲ್ಲಿಯೂ ಅದರ ಅಸ್ತಿತ್ವವಿದೆಯೆಂದು ನಮಗೆ ಹೇಳಲಾಗಿದೆ. ಇಷ್ಟೊಂದು ವ್ಯಾಪಕವಾಗಿರುವ ಈ ಶಬ್ದದ ಅರ್ಥವಿವರಣೆಯನ್ನು ನಾವು ನೀಡುವುದಾದರೂ ಹೇಗೆ?

ಎಲ್ಲರಲ್ಲಿರುವ ಜೀವದ ರಹಸ್ಯ ಬುಗ್ಗೆಗಳನ್ನು ಕಂಡುಹಿಡಿಯಲು ನಮಗೆ ಸಾಧ್ಯವಾಗದಿದ್ದರೂ, ನಾವು ದೈವಿಕ ಜೀವಿಯಾದ ಯೆಹೋವನೇ ಎಲ್ಲಾ ಜೀವಗಳ ಮಹಾ ಕಾರಂಜಿಯಾಗಿದ್ದಾನೆ, ಮತ್ತು ಅಲ್ಲಿಂದಲೇ ಈ ಎಲ್ಲಾ ಬುಗ್ಗೆಗಳು ಸರಬರಾಜಾಗುತ್ತದೆ ಎಂದು ನಾವು ಸುರಕ್ಷಿತವಾಗಿ ಭಾವಿಸಿಕೊಳ್ಳಬಹುದು. ಎಲ್ಲಾ ಜೀವಿಗಳೂ ಆತನಿಂದ ಉತ್ಪತ್ತಿಯಾಗಿ ಮತ್ತು ಜೀವಕ್ಕಾಗಿ ಆತನ ಮೇಲೆ ಆತುಕೊಂಡು ಅದರಿಂದ ಫಲಿಸುತ್ತಿವೆ. ಎಲ್ಲಾ ಜೀವಗಳೂ ಅವು ದೇವರಲ್ಲಿರಲಿ, ಆತನ ಜೀವ ಸೃಷ್ಟಿಗಳಲ್ಲಿರಲಿ ಎಲ್ಲವೂ ಒಂದೇ ಆಗಿವೆ. ಇದೊಂದು ತ್ರಾಣವುಳ್ಳ ವಿಚಾರ ತತ್ವವಿಧಿಯಾಗಿದೆಯೇ ಹೊರತು ಒಂದು ಪದಾರ್ಥವಲ್ಲ. ಇದು ದೇವರಲ್ಲಿ ಅಂತರ್ಜಾತಗೊಂಡಿದೆ. ಆದರೆ ಆತನ ಸೃಷ್ಟಿಗಳಲ್ಲಿ ಕೆಲವು ದೇವರು ವಿಧಿಸಿದ ಕೆಲವೊಂದು ಕಾರಣಗಳ ನಿಮಿತ್ತ ಫಲಿಸುತ್ತದೆ. ಹೀಗಾಗಿ ಇದಕ್ಕೆ ಆತನೇ ಕಾರಣನೂ, ಕರ್ತೃವೂ ಅಥವಾ ಕಾರಂಜಿಯೂ ಆಗಿದ್ದಾನೆ. ಹೀಗಾಗಿ

ಜೀವಿಯು ಯಾವುದೇ ಅರ್ಥದಲ್ಲಿ ಕೆಲವರು ಆಲೋಚಿಸುವಂತೆ ಸೃಷ್ಟಿಕರ್ತನ ಸಾರದ ಅಥವಾ ಸ್ವಭಾವದ ಭಾಗ ಅಥವಾ ಸಂತತಿಯಲ್ಲ. ಆತನು ಜೀವದಿಂದ ತುಂಬಿಸಲ್ಪಟ್ಟ ದೇವರ ಕೈಕೆಲಸವಾಗಿದ್ದಾನೆ.

ದೈವಿಕ ಸ್ವಭಾವದಲ್ಲಿ ಮಾತ್ರವೇ ಜೀವವು ಅನಿರ್ಬಂಧಿತ, ಮಿತಿಯಿಲ್ಲದ್ದಾಗಿದೆ, ಮುಗಿಯದ್ದಾಗಿದೆ, ಹಾಗೂ ಸದಾ ಮುಂದುವರೆಯುವುದಾಗಿದೆ, ಹಾಗೂ ಪರಿಸ್ಥಿತಿಗಳಿಂದ ಉತ್ಪತ್ತಿಯಾಗಿಲ್ಲ ಅಥವಾ ನಿಯಂತ್ರಿಸಲ್ಪಟ್ಟಿಲ್ಲ ಎಂಬ ಸತ್ಯವನ್ನು ಗ್ರಹಿಸಿ, ನಾವು ಅವಶ್ಯವಾಗಿ ನೋಡುವುದೇನೆಂದರೆ, ತನ್ನ ಜೀವಿಗಳ ಉಳಿವಿಗಾಗಿ ಅವನು ನಿಗದಿಪಡಿಸಿದ ಭೌತಿಕ ಕಾನೂನುಗಳು ಮತ್ತು ಸರಬರಾಜುಗಳಿಗಿಂತ ಯೆಹೋವನೇ ಮಹೋನ್ನತನು ಎಂದು ನಾವು ನೋಡುತ್ತೇವೆ. ದೈವಿಕ ಸ್ವಭಾವಕ್ಕೆ ಮಾತ್ರವೇ ಅನ್ವಯಿಸುವದಾಗಿದ್ದು, ಈ ಗುಣಧರ್ಮವು ಅಮರತ್ವವೆಂಬ ಶಬ್ದದಿಂದ ವರ್ಣಿಸಲ್ಪಟ್ಟಿದೆ. ಹಿಂದಿನ ಅಧ್ಯಾಯದಲ್ಲಿ ಕಂಡುಬಂದಂತೆ ಅಮರತ್ವವು ಮರಣವಿಲ್ಲದ್ದನ್ನು ಸೂಚಿಸುತ್ತದೆ. ಅದರ ಪರಿಣಾಮವಾಗಿ ಅದು ರೋಗವಾಗಲೀ, ನೋವಾಗಲೀ ಇಲ್ಲದ್ದು. ನಿಜವಾಗಿಯೂ ಅಮರತ್ವವನ್ನು ದೈವತ್ವದ ಪರ್ಯಾಯ ಪದವನ್ನಾಗಿ ಉಪಯೋಗಿಸಬಹುದು. ಹೇಗೆ ಸೂರ್ಯನಿಂದ ಭೂಮಿಯು ತನ್ನ ಬೆಳಕು ಮತ್ತು ಚೈತನ್ಯವನ್ನು ಪಡಕೊಳ್ಳುವಂತೆ, ದೈವಿಕತೆಯಿಂದ, ಅಮರ ಕಾರಂಜಿಯಿಂದ ಜೀವನದ ಎಲ್ಲಾ ಆಶೀರ್ವಾದಗಳೂ, ಪ್ರತಿ ಒಳ್ಳೆಯ ಮತ್ತು ಪರಿಪೂರ್ಣ ಉಡುಗೊರೆಗಳೂ ಹೊರಡುತ್ತವೆ.

ಸೂರ್ಯನು ಭೂಮಿಗೆ ಬೆಳಕಿನ ಮಹಾ ಕಾರಂಜಿಯಾಗಿದ್ದಾನೆ, ಎಲ್ಲಾ ವಸ್ತುಗಳನ್ನೂ ಪ್ರಕಾಶಿಸುತ್ತಾನೆ, ಪ್ರಕಾಶ ಬೀರುವ ವಸ್ತುಗಳ ಸ್ವಭಾವಕ್ಕನುಸಾರವಾಗಿ ವಿವಿಧ ವರ್ಣಗಳನ್ನೂ, ಬೆಳಕಿನ ವಿವಿಧ ಛಾಯೆಗಳನ್ನೂ ಅದು ಬೆಳಗುವ ವಸ್ತುವಿನ ಸ್ವಭಾವಕ್ಕನುಸಾರವಾಗಿ ಉತ್ಪತ್ತಿಮಾಡುತ್ತಾನೆ. ಒಂದು ವಜ್ರದ ಮೇಲೆ, ಇಟ್ಟಿಗೆಯ ಮೇಲೆ, ವಿವಿಧ ರೀತಿಯ ಗಾಜುಗಳ ಮೇಲೆ ಪ್ರಕಾಶಿಸುವ ಸೂರ್ಯನ ಅದೇ ಬೆಳಕು ಎದ್ದು ಕಾಣುವಂತೆ ವಿವಿಧ ಪರಿಣಾಮಗಳನ್ನು ನೀಡುತ್ತದೆ. ಬೆಳಕು ಒಂದೇ ಆಗಿದೆ, ಆದರೆ ಅದು ಯಾವ ವಸ್ತುವಿನ ಮೇಲೆ ಪ್ರಕಾಶಿಸುತ್ತದೆಯೋ ಅವು ಅದನ್ನು ಸ್ವೀಕರಿಸಿ ಬಿತ್ತರಿಸುವ ಸಾಮರ್ಥ್ಯದಲ್ಲಿ ಬದಲಾವಣೆಗಳು ಕಂಡುಬರುತ್ತವೆ. ಅದರಂತೆ ಜೀವದೊಂದಿಗೆ ಸಹಾ. ಅದೆಲ್ಲವೂ ಎಂದಿಗೂ ಬರಿದಾಗದ ಒಂದೇ ಕಾರಂಜಿಯಿಂದ ಹರಿದುಬರುತ್ತದೆ. ಕಪ್ಪೆಚಿಪ್ಪಿಗೂ ಜೀವವುಂಟು, ಆದರೆ ಅದರ ಸೂಕ್ಷ್ಮ ಶರೀರ ರಚನೆಯ ಕಾರಣ ಜೀವವನ್ನು ಹೆಚ್ಚು ಉಪಯೋಗಿಸಲು ಅದಕ್ಕೆ ಸಾಧ್ಯವಾಗದು. ಅದರಂತೆ ಇಟ್ಟಿಗೆಯು ಸಹಾ ಸೂರ್ಯನ ಬೆಳಕನ್ನು ಹೆಚ್ಚಾಗಿ ಪ್ರತಿಫಲಿಸಲು ಸಾಧ್ಯವಿಲ್ಲ. ಅದರಂತೆ ಜೀವದ ಪ್ರತಿಯೊಂದು ಉತ್ತಮ ಅಭಿವ್ಯಕ್ತಿಗಳೊಂದಿಗೂ, ಮೀನು ಮತ್ತು ಕೋಳಿ ಮತ್ತು ಪಶುಗಳೊಂದಿಗೂ ಆಗುತ್ತದೆ. ಸೂರ್ಯನ ಬೆಳಕಿನಡಿಯಲ್ಲಿ ವಿವಿಧ ರೀತಿಯ ಗಾಜುಗಳಿರುವಂತೆಯೇ, ಈ ವಿವಿಧ ಸೃಷ್ಟಿಗಳು ಜೀವವು ಅವುಗಳ ಶರೀರ ರಚನೆಯನ್ನು ಉತ್ತೇಜಿಸುವಾಗ ಅವುಗಳು ಹೊಂದಿರುವ ವಿವಿಧ ರೀತಿಯ ಸಾವಯವ ಶಕ್ತಿಯನ್ನು (Organic Powers) ವಿವಿಧ ರೀತಿಯಲ್ಲಿ ತೋರಿಸುತ್ತವೆ.

ಹೊಳಪಿಸಿದ ವಜ್ರವು ಬೆಳಕಿಗೆ ಎಷ್ಟರಮಟ್ಟಿಗೆ ಹೊಂದಿಕೊಂಡಿದೆಯೆಂದರೆ, ಅದನ್ನು ತನ್ನಲ್ಲಿಯೇ ಬೆಳಕನ್ನು ಹುದುಗಿಸಿಕೊಂಡಿದೆಯೇನೋ ಎಂಬಂತೆ ಕಂಡುಬರುತ್ತದೆ. ತಾನೇ ಸೂರ್ಯನ ಸಣ್ಣ ಸೂಕ್ಷ್ಮಾಕಾರವೋ ಎನ್ನುವಷ್ಟರಮಟ್ಟಿಗೆ ಅದು ಕಂಡುಬರುತ್ತದೆ. ಅದರಂತೆಯೇ ಮಾನವನು ದೇವರ ಸೃಷ್ಟಿಗಳಲ್ಲಿ ಒಂದು ಅತ್ಯುತ್ತಮ ರಚನೆ. ಆತನು ದೇವದೂತರುಗಳಿಗಿಂತ ಸ್ವಲ್ಪವೇ ಕಡಿಮೆಯಾಗಿ ಸೃಷ್ಟಿಸಲ್ಪಟ್ಟನು. ಅವನು ಎಷ್ಟೋ ಭವ್ಯವಾಗಿ ರೂಪುಗೊಂಡನು ಎಂದರೆ ದೇವರು ಒದಗಿಸಿರುವ ಸಾಧನಗಳ ಬಳಕೆಯಿಂದ ಜೀವನವನ್ನು ಸ್ವೀಕರಿಸಲು ಮತ್ತು ಉಳಿಸಿಕೊಳ್ಳಲು ಹಾಗೂ ಎಂದೂ ನಿಸ್ತೇಜನಗೊಳ್ಳ ಬೇಕಿರುತ್ತಿರಲಿಲ್ಲ. ಆ ರೀತಿಯಲ್ಲಿ ಆದಾಮನು ಬಿದ್ದುಹೋಗುವ ಮುನ್ನ ಈ ಭೂಲೋಕದ ಯಾವುದೇ ಸೃಷ್ಟಿಗಿಂತ ಇತರ ಯಾವುದೇ ಐಹಿಕ ಜೀವಿಗಳಿಗಿಂತ ಭವ್ಯವಾಗಿರುವುದಕ್ಕೆ ಅಳವಡಿಸಲಾಗಿರುವ ಜೀವನ ತತ್ವದಲ್ಲಿ ಯಾವುದೇ ವ್ಯತ್ಯಾಸ ಕಾರಣದಿಂದಲ್ಲ, ಆದರೆ ಭವ್ಯವಾದ ಶರೀರ ರಚನೆಯಿಂದಾಗಿ ಸೃಷ್ಟಿಸಲ್ಪಟ್ಟನು. ವಜ್ರವು ಸೂರ್ಯನ ಬೆಳಕು ಬಿದ್ದಾಗಲೇ ಹೊಳೆಯುವುದನ್ನು ಹೊರತುಪಡಿಸಿ ಯಾವುದೇ ಬೆಳಕನ್ನು ಪ್ರತಿಫಲನಗೊಳಿಸುವುದಿಲ್ಲ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳೋಣ, ಅದರಂತೆ ಮಾನವನು ತನ್ನ ಮಾತ್ರ ಜೀವವನ್ನು ಹೊಂದಿಕೊಂಡು ಆನಂದಿಸುವುದು. ಜೀವಕ್ಕೆ ಬೇಕಾದದ್ದು ಪೂರೈಕೆಯು ಮುಂದುವರೆದರೆ ಮಾತ್ರ. ಮಾನವನಲ್ಲಿ ಅಂತರ್ಗತವಾದ ಜೀವ ಇಲ್ಲ; ಹೇಗೆ ವಜ್ರವು ಬೆಳಕಿನ ಬುಗ್ಗೆಯಾಗಿರುವುದಿಲ್ಲವೋ ಅಂತೆಯೇ, ಮಾನವನಲ್ಲಿ ಜೀವದ ಬುಗ್ಗೆಯಿರುವುದಿಲ್ಲ. ನಮಗಿರುವ ಪ್ರಬಲವಾದ ಸಾಕ್ಷಿಯೆಂದರೆ, ನಮ್ಮಲ್ಲಿ ಮುಗಿದುಹೋಗದ ಜೀವದ

ಸರಬರಾಜಿಲ್ಲ, ಅಥವಾ ಮತ್ತೊಂದು ಮಾತಿನಲ್ಲಿ ಹೇಳುವುದಾದರೆ, ಮರಣವು ಪ್ರವೇಶಿಸಿ, ನಮ್ಮ ಸಂತತಿಯ ಮೇಲೆ ಸಾಗಿ ಬಂದಿರುವುದರಿಂದ ನಾವು ಅಮರರಲ್ಲ.

ಏದೇನ್ ತೋಟದಲ್ಲಿದ್ದ ಮಾನವನಿಗೆ ಜೀವಕ್ಕೆ ಆಧಾರವಾಗುವ ಸಸ್ಯಗಳು ಎಟಕುವಂತಿರಬೇಕೆಂಬ ವ್ಯವಸ್ಥೆಯನ್ನು ದೇವರು ಮಾಡಿದ್ದನು ಮತ್ತು ಆತನನ್ನು ಇರಿಸಿದ ಪರದೈಸಿನಲ್ಲಿ ಇದನ್ನು ಹೇರಳವಾಗಿ ಒದಗಿಸಿ, "ನೋಟಕ್ಕೆ ರಮ್ಯವಾಗಿಯೂ, ಊಟಕ್ಕೆ ಅನುಕೂಲವಾಗಿಯೂ ಇರುವ ಎಲ್ಲಾ ತರವಾದ ಗಿಡ ಮರಗಳನ್ನು ಆ ಭೂಮಿಯಲ್ಲಿ ಬೆಳೆಯಮಾಡಿದನು" (ಆದಿ. 2:9,16,17). ಅವುಗಳಲ್ಲಿ ಒಂದರ ಹಣ್ಣನ್ನು ಮಾತ್ರ ತಿನ್ನಲು ನಿಷೇಧಿಸಲಾಗಿತ್ತು. ಜ್ಞಾನವೃಕ್ಷದ ಹಣ್ಣನ್ನು ತಿನ್ನಲು ಸ್ವಲ್ಪ ಸಮಯದವರೆಗೆ ನಿಷೇಧಿಸಿದಾಗಲೂ, ಜೀವನವನ್ನು ಸಂಪೂರ್ಣವಾಗಿ ಉಳಿಸುವ ಇನ್ನಿತರ ಮರಗಳ ಹಣ್ಣುಗಳನ್ನು ಮುಕ್ತವಾಗಿ ತಿನ್ನಲು ಅವನಿಗೆ ಅನುಮತಿ ನೀಡಲಾಗಿತ್ತು. ಆದರೆ ಆತನು ದೇವರ ಮಾತಿಗೆ ಅವಿಧೇಯನಾಗಿ ಪಾಪ ಮಾಡಿದ ಮೇಲೆ ದೇವರು ಆತನನ್ನು ಅವುಗಳಿಂದ ದೂರಮಾಡಿದನು, ಹೀಗಾಗಿ ಮರಣದಂಡನೆಯು ನೆರವೇರಲು ಅವಕಾಶವಾಯಿತು (ಆದಿ. 3:22).

ಹೀಗಾಗಿ ವಜ್ರದ ಸೌಂದರ್ಯವು ಸೂರ್ಯನ ಬೆಳಕಿನ ನಿರಂತರ ಪೂರೈಕೆಯ ಮೇಲೆ ಅವಲಂಬಿತವಾಗಿರುವಂತೆ ಮಾನವತೆಯ ಮಹಿಮೆ ಮತ್ತು ಸೌಂದರ್ಯವು ನಿರಂತರವಾದ ಜೀವದ ಸರಬರಾಜಿನ ಮೇಲೆ ಆತುಕೊಂಡಿದೆ ಎಂಬುದು ಕಂಡುಬರುತ್ತದೆ. ಪಾಪವು ಮಾನವರಿಂದ ಜೀವಿಸುವ ಹಕ್ಕನ್ನು ಕಸಿದುಕೊಂಡಾಗ, ಮತ್ತು ನಿರಂತರ ಜೀವವನ್ನು ತಡೆಹಿಡಿದಾಗ, ಒಡವೆಯು ಅದರ ತೇಜಸ್ಸನ್ನೂ ಮತ್ತು ಸೌಂದರ್ಯವನ್ನೂ ಕೂಡಲೇ ಕಳಕೊಳ್ಳತೊಡಗಿತು. ಅಂತ್ಯದಲ್ಲಿ ಅದು ಸಮಾಧಿಯಲ್ಲಿ ಅದರ ಅಂತಿಮ ಕುರುಹನ್ನು ಕಳೆದುಕೊಂಡಿತು. "ಆತನ ಚೆಲುವಿಕೆಯು ನುಸಿಹತ್ತಿತೋ ಎಂಬಂತೆ ಹಾಳಾಗಿ ಹೋಗುತ್ತದೆ" (ಕೀರ್ತನೆ 39:11). ಬೆಳಕನ್ನು ಹಿಂತೆಗೆದುಕೊಂಡಾಗ ವಜ್ರವು ತನ್ನ ಸೌಂದರ್ಯವನ್ನು, ತೇಜಸ್ಸನ್ನು ಕಳಕೊಳ್ಳುವಂತೆ, ದೇವರು ಆತನಿಂದ ಸರಬರಾಜುಗಳನ್ನು ತಡೆಹಿಡಿದಾಗ ಮಾನವನು ತನ್ನ ಜೀವವನ್ನು ಕಳಕೊಳ್ಳುತ್ತಾನೆ. "ಮನುಷ್ಯನಾದರೋ ಸತ್ತು ಬೋರಲ ಬೀಳುವನು, ಪ್ರಾಣ ಹೋಗಲು ಅವನು ಎಲ್ಲಿಯೋ!" (ಯೋಬ. 14:10). "ಅವನ ಮಕ್ಕಳು ಘನತೆಯನ್ನು ಹೊಂದುವುದು ಅವನಿಗೆ ತಿಳಿಯುವುದಿಲ್ಲ. ಅವರು ಕುಂದಿಹೋಗುವಾಗಲೂ ಅವರ ಸ್ಥಿತಿಯು ಅವನಿಗೆ ಗೋಚರವಾಗುವುದಿಲ್ಲ" (ಯೋಬ. 14:21). "ನೀನು ಸೇರಬೇಕಾದ ಪಾತಾಳದಲ್ಲಿ ಯಾವ ಯುಕ್ತಿಯೂ, ತಿಳುವಳಿಕೆಯೂ, ಜ್ಞಾನವೂ ಇರುವುದಿಲ್ಲ'' (ಪ್ರಸಂಗಿ 9:10). ಆದರೆ ಈಡುಬಲಿಯು ಏರ್ಪಡಿಸಿದ್ದರಿಂದ, ಪಾಪದ ದಂಡನೆಯನ್ನು ವಿಮೋಚಕನು ಒದಗಿಸಿದ್ದರಿಂದ, ಒಡವೆ ತನ್ನ ಸೌಂದರ್ಯನ್ನು ಪುನರ್‌ವಶಪಡಿಸಿಕೊಳ್ಳುತ್ತದೆ ಮತ್ತು ದೇವರ ಧರ್ಮವೆಂಬ ಸೂರ್ಯನು ಸ್ವಸ್ಥತೆಯನ್ನುಂಟು ಮಾಡುವ ಕಿರಣಗಳುಳ್ಳವನಾಗಿ ಮೂಡುವಾಗ" (ಮಲಾಕಿ 4:2) ಪುನಃ ಅದರ ಸೃಷ್ಟಿಕರ್ತನ ಸ್ವರೂಪವನ್ನು ಸಮರ್ಪಕವಾಗಿ ಪ್ರತಿಫಲಿಸುತ್ತದೆ. ಪಾಪನಿವಾರಣಾರ್ಥವಾಗಿ ಕ್ರಿಸ್ತನು ಸಮರ್ಪಿಸಿದ ಯಜ್ಞದ ಕಾರಣ "ಸಮಾಧಿಗಳಲ್ಲಿರುವವರೆಲ್ಲರೂ ಆತನ ಧ್ವನಿಯನ್ನು ಕೇಳಿ ಹೊರಗೆ ಬರುವರು" (ಯೋಹಾನ 5:28). ಎಲ್ಲವುಗಳ ಪುನರ್‌ಸ್ಥಾಪನೆಉಂಟಾಗುವುದು; ಮೊದಲು ಎಲ್ಲರಿಗೂ ಪುನರ್‌ವಶದ ಕೊಡುಗೆ, ಅಂತಿಮವಾಗಿ ವಿಮೋಚಕನನ್ನು ನಂಬಿ ವಿಧೇಯರಾಗುವವರೆಲ್ಲರೂ ಮಾನವ ಪರಿಪೂರ್ಣತೆಯನ್ನು ಗಳಿಸಿಕೊಳ್ಳುವರು.

ಆದಾಗ್ಯೂ, ಇದು ಇಕ್ಕಟ್ಟಾದ ಮಾರ್ಗದ ಅಂತ್ಯದಲ್ಲಿ ದೊರೆಯುವ ಪ್ರತಿಫಲವೆಂದು ಯೇಸುಕ್ರಿಸ್ತನು ಉಲ್ಲೇಖಿಸುವುದಿಲ್ಲ. ಪರಿಶುದ್ಧ ಗ್ರಂಥದ ಇತರೆ ವೇದವಚನಗಳಿಂದ ನಾವು ಇಕ್ಕಟ್ಟಾದ ಹಾದಿಯಲ್ಲಿ ನಡೆಯುವವರಿಗೆ ದೇವರು ವಾಗ್ದಾನಪಡಿಸಿರುವ ಬಹುಮಾನವು "ದೈವಿಕ ಸ್ವಭಾವ" – ಅಂತರ್ಗತವಾದ ಜೀವವಾಗಿದೆ. ಅದು ದೈವಿಕ ಸ್ವಭಾವದವರು ಮಾತ್ರವೇ ಹೊಂದಿಕೊಳ್ಳಬಹುದಾದ ಸರ್ವೋತ್ಕೃಷ್ಟ ಮಟ್ಟದ ಜೀವನ – ಅಮರತ್ವವಾಗಿದೆ. ಎಂಥಾಃ ನಿರೀಕ್ಷೆ! ಅಂಥಾಃ ಉನ್ನತವಾದ ಮಹಿಮೆಯನ್ನು ಬಯಸುವ ಎದೆಗಾರಿಕೆ ನಮಗಿದೆಯೋ? ಸಕಾರಾತ್ಮಕ ಧೋರಣೆಯಿಂದ (positive) ಮತ್ತು ಸ್ಪಷ್ಟವಾಗಿ ತಿಳಿಸಿದ ಕರೆ (invitation) ಇಲ್ಲದೇ ಯಾರೂ ಕೂಡ ಹಕ್ಕಿನಿಂದ ಬಯಸಲಾರರು.

1 ತಿಮೋಥೆ 6:14–16ರಲ್ಲಿ ನಾವು ಕಲಿಯುವುದೇನೆಂದರೆ ಅಮರತ್ವ ಅಥವಾ ದೈವಿಕ ಸ್ವಭಾವ ಮೂಲತಃ ದಿವ್ಯಶಕ್ತಿಯನ್ನು ಹೊಂದಿರು ವದಾಗಿದೆ. ಯೇಸು ಮಾತ್ರವೇ (ದೇವರನ್ನು ಹೊರತುಪಡಿಸಿ) "ಅಮರತ್ವವುಳ್ಳವನೂ, ಆಗಿದ್ದಾನೆ" ಎಂಬುದನ್ನು ಕಲಿತುಕೊಳ್ಳುತ್ತೇವೆ. – ''ಭಾಗ್ಯವಂತನಾದ ಏಕಾಧಿಪತಿಯೂ, ರಾಜಧಿರಾಜನೂ, ಕರ್ತರ ಕರ್ತನೂ ತಾನೊಬ್ಬನೇ ಅಮರತ್ವವುಳ್ಳವನೂ, ಅಗಮ್ಯ ಬೆಳಕಿನಲ್ಲಿ

ವಾಸಮಾಡುವವನೂ ಆಗಿದ್ದಾನೆ. ಮನುಷ್ಯರಲ್ಲಿ ಯಾರೂ ಆತನನ್ನು ಕಾಣಲಿಲ್ಲ, ಯಾರೂ ಕಾಣಲಾರರು. ಆತನಿಗೆ ಮಾನವೂ ನಿತ್ಯಾಧಿಪತ್ಯವೂ ಇರಲಿ. ಆಮೆನ್" ಎಂದು ನಾವು ಓದುತ್ತೇವೆ. ಉಳಿದೆಲ್ಲಾ ಜೀವಿಗಳು, ದೇವದೂತರುಗಳು, ಮಾನವರು, ಪಶುಗಳು, ಪಕ್ಷಿಗಳು, ಮೀನುಗಳು ಮುಂತಾದವುಗಳು ಪ್ರತಿಯೊಂದು ತನ್ನ ತನ್ನ ಅಳತೆಗೆ ತಕ್ಕ ಜೀವವನ್ನು ಹೊಂದಿವೆ, ಪ್ರತಿಯೊಂದಕ್ಕೂ ಸೃಷ್ಟಿಕರ್ತನು ಒದಗಿಸಿದ ಶರೀರ ರಚನೆಯ ಪ್ರಕಾರ ತನ್ನ ಗುಣದಲ್ಲಿ, ಸಾಮರ್ಥ್ಯದಲ್ಲಿ, ಗುಣಮಟ್ಟದಲ್ಲಿ ಭಿನ್ನವಾಗಿವೆ.

ಮೂಲತಃ ಅಮರತ್ವವನ್ನು ತಾನೊಬ್ಬನೇ ಹೊಂದಿದ್ದ ಯೆಹೋವ ದೇವರು ತನ್ನ ಮಗನಾದ, ನಮ್ಮ ಕರ್ತನಾದ ಯೇಸುವನ್ನು ಅತ್ಯುನ್ನತ ಸ್ಥಾನಕ್ಕೆ ಅಂದರೆ ಅದೇ ಅಮರತ್ವಕ್ಕೆ ಏರಿಸಿದನೆಂದು ಮುಂದೆ ನಾವು ಕಲಿತುಕೊಳ್ಳುತ್ತೇವೆ; ಹೀಗಾಗಿ ಆತನು ಈಗ "ದೇವರ ತತ್ವದ ಮೂರ್ತಿ"ಯಾಗಿದ್ದಾನೆ (ಇಬ್ರಿಯ 1;3). ನಾವು ಹೀಗೆ ಓದುತ್ತೇವೆ – "ತಂದೆಯು ತಾನು ಹೇಗೆ ಸ್ವಂತ ಜೀವವುಳ್ಳವನಾಗಿದ್ದಾನೋ ಹಾಗೆಯೇ ಮಗನೂ ಸ್ವಂತ ಜೀವವುಳ್ಳವನಾಗಿರುವಂತೆ ಮಾಡಿದನು" (ದೇವರ ವಿವರಣೆಯಲ್ಲಿ ಅಮರತ್ವವೆಂದರೆ – ತನ್ನಲ್ಲಿಯೇ ಜೀವವಿರುವದು – ಬೇರೆ ಮೂಲಗಳಿಂದ ಸೆಳೆಯುವದಲ್ಲ, ಅಥವಾ ಸ್ಥಿತಿ/ಸನ್ನಿವೇಶಗಳ ಮೇಲೆ ಅವಲಂಬಿಸಿರುವದಲ್ಲ ಬದಲಾಗಿ ಸ್ವಾಧಿಪತ್ಯದ ಅಂತರ್ಗತ ಜೀವ) (ಯೋಹಾನ 5:26). ಕರ್ತನಾದ ಯೇಸುವು ಪುನರುತ್ಥಾನಗೊಂಡಾಗಿನಿಂದ ಇಬ್ಬರು ಜೀವಿಗಳು ಅಮರರು ಎಂಥಾಃ ವಿಸ್ಮಯಕರ ಕೃಪೆ ಅಲ್ಲವೆ! ಇದೇ ಕೊಡುಗೆಯನ್ನು ಸುವಾರ್ತಾಯುಗದಲ್ಲಿ ಆಯ್ಕೆಗೊಳ್ಳುವ ಕುರಿಮರಿಯ ವಧುವಿಗೂ ನೀಡಲಾಗಿದೆ. ಆದಾಗ್ಯೂ ಸಭೆಯ ಹೆಸರುಮಾತ್ರದವರಾದ ಮಹಾ ಸಮೂಹದವರಲ್ಲಿ ಎಲ್ಲರೂ ಈ ಮಹಾ ಬಹುಮಾನವನ್ನು ಪಡಕೊಳ್ಳುವುದಿಲ್ಲ, ಆದರೆ "ಚಿಕ್ಕಹಿಂಡು" ಮಾತ್ರವೇ ಓಡಿ ಜಯಶಾಲಿಗಳಾದವರು, ನಿಕಟವಾಗಿ ಕರ್ತನ ಹೆಜ್ಜೆಜಾಡನ್ನು ಅನುಸರಿಸುವವರು ಮಾತ್ರವೇ ಅದನ್ನು ಹೊಂದಿಕೊಳ್ಳುತ್ತಾರೆ. ಅವರು ಆತನಂತೆ ತ್ಯಾಗದ ಇಕ್ಕಟ್ಟಿನ ಮಾರ್ಗದಲ್ಲಿ ಮರಣಪರ್ಯಂತ ನಡೆಯುತ್ತಾರೆ. ಇವರುಗಳು ಮರಣದಿಂದ ಜೀವ ಹೊಂದಿ ಹುಟ್ಟುವಾಗ, ದೈವಿಕ ಸ್ವಭಾವ ಮತ್ತು ರೂಪವನ್ನು ಹೊಂದಿರುತ್ತಾರೆ. ಈ ಅಮರತ್ವವುಳ್ಳದ್ದೂ, ಸ್ವತಂತ್ರವಾದುದೂ, ಸ್ವಯಂ ಅಸ್ತಿತ್ವವುಳ್ಳದ್ದೂ, ದೈವಿಕ ಸ್ವಭಾವವೂ ಆದ ಜೀವಿತಕ್ಕೆ ಇಕ್ಕಟ್ಟಾದ ಮಾರ್ಗವು ನಡೆಸುತ್ತದೆ.

ಈ ವರ್ಗವನ್ನು ಸಮಾಧಿಯಿಂದ ಮಾನವ ಜೀವಿಗಳಾಗಿ ಎಬ್ಬಿಸಲ್ಪಡುವುದಿಲ್ಲ ಎಂದು ನಾವು ಅಪೋಸ್ತಲರ ಮೂಲಕ ಭರವಸೆ ಹೊಂದಿದ್ದೇವೆ. ಯಾಕೆಂದರೆ ಸಮಾಧಿಯಲ್ಲಿ ಪ್ರಾಕೃತ ದೇಹವಾಗಿ ಬಿತ್ತಲ್ಪಟ್ಟರೂ ಆತ್ಮೀಕ ಶರೀರಗಳಾಗಿ ಎಬ್ಬಿಸಲ್ಪಡುತ್ತಾರೆ. ಎಂಬುದಾಗಿ ಭರವಸೆ ನೀಡಿದ್ದಾರೆ, ಇವರುಗಳು ಮಾರ್ಪಡುತ್ತಾರೆ ಮತ್ತು ಅವರು ಒಮ್ಮೆ ಈ ಲೋಕದಲ್ಲಿ ಮಾನವ ಸ್ವಭಾವದ ಸ್ವರೂಪವನ್ನು ಹೊಂದಿದ್ದರೂ ಅವರು ಪರಲೋಕದ ಸ್ವರೂಪವನ್ನು ಧರಿಸುತ್ತಾರೆ. "ಈಗ ದೇವರ ಮಕ್ಕಳಾಗಿದ್ದೇವೆ. ಮುಂದೆ ನಾವೇನಾಗುವೆವೋ ಅದು ಇನ್ನೂ ಪ್ರತ್ಯಕ್ಷವಾಗಲಿಲ್ಲ. ಕ್ರಿಸ್ತನು ಪ್ರತ್ಯಕ್ಷನಾದರೆ ನಾವೂ ಆತನ ಹಾಗಿರುವೆವೆಂದು ಬಲ್ಲೆವು" ಮತ್ತು "ಪ್ರಕಟಗೊಳ್ಳಲಿರುವ ಮಹಿಮೆ"ಯಲ್ಲಿ ಪಾಲುಗಾರರಾಗುವೆವು (1 ಯೋಹಾನ 3:2; ಕೊಲೊಸ್ಸೆ 1:27; 2 ಕೊರಿಂಥ 4:17; ಯೋಹಾನ 17:22; 1 ಪೇತ್ರ 5:10; 2 ಥೆಸ. 2:14).

ಸ್ವಭಾವದ ಬದಲಾವಣೆಗಾಗಿರುವ ಈ ಮಹಾ ಕರೆಯು ಪ್ರತ್ಯೇಕವಾಗಿ ಸುವಾರ್ತಾ ಯುಗಕ್ಕೆ ಸೀಮಿತವಾದದು ಮಾತ್ರವಲ್ಲ, ಆದರೆ ಇದು ಆ ಯುಗದ ಏಕೈಕ ಕೊಡುಗೆಯಾಗಿದೆ. ಆದುದರಿಂದ ಈ ಅಧ್ಯಾಯದ ಪ್ರಾರಂಭದಲ್ಲಿ ಉಲ್ಲೇಖಿಸಿ ನಮ್ಮ ಕರ್ತನ ಮಾತುಗಳು ಪವಿತ್ರ ಬಹುಮಾನ ದೊರೆಯುವ ಮಾರ್ಗದಲ್ಲಿರ ದವರನ್ನು ಅಗಲವಾದ ಮಾರ್ಗವು ಸೇರಿ ನಾಶಪಡಿಸುತ್ತದೆ. ಉಳಿದವರೆಲ್ಲರೂ ಇನ್ನೂ ಅಗಲವಾದ ಮಾರ್ಗದಲ್ಲಿದ್ದಾರೆ – ಇವರು ಮಾತ್ರವೇ ಪ್ರಪಂಚದ ಮೇಲಿನ ಖಂಡನೆಯನ್ನು ತಪ್ಪಿಸಿಕೊಂಡಿದ್ದಾರೆ. ಇದೊಂದೇ ಜೀವಕ್ಕಾಗಿ ತೆರೆದಿರುವ ಮಾರ್ಗವಾಗಿದೆ. ಅದರ ಕಷ್ಟಗಳ ಕಾರಣ, ಅದರಲ್ಲಿ ನಡೆಯಲು ಕಾಳಜಿ ವಹಿಸುವ ಸ್ವಲ್ಪ ಮಂದಿ ಕಂಡುಕೊಳ್ಳುತ್ತಾರೆ. ಮಾನವ ಕುಲದ ಸಮೂಹವು ತಮ್ಮ ಬಲಹೀನತೆಯ ಕಾರಣ ಅಗಲವಾದ, ಸುಲಭವಾದ ಮಾರ್ಗವನ್ನು ತಮ್ಮ ಸ್ವಂತ ತೃಪ್ತಿಗಾಗಿ ಕಂಡುಕೊಳ್ಳುತ್ತಾರೆ.

ಇಕ್ಕಟ್ಟಾದ ಮಾರ್ಗದಲ್ಲಿ ಜೀವವು, ಅಮರತ್ವದಲ್ಲಿ ಕೊನೆಗೊಳ್ಳುವಾಗ, ಅದನ್ನು ಮರಣದ ಮಾರ್ಗವೆಂದು ಕರೆಯಬಹುದು. ಯಾಕೆಂದರೆ ಮರಣ ಪರ್ಯಂತರವಾದ ಮಾನವ ಸ್ವಭಾವದ ತ್ಯಾಗದಿಂದ ಅದರ ಬಹುಮಾನವನ್ನು ಪಡಕೊಳ್ಳಬೇಕಾಗುತ್ತದೆ. ಅದು ಜೀವಕ್ಕೆ ಹೋಗುವ ಇಕ್ಕಟ್ಟಾದ ಮರಣದ ಮಾರ್ಗವಾಗಿದೆ. ಆದಾಮನ ಅಪರಾಧದಿಂದ, ಮರಣ ಮತ್ತು ಅದರ ದಂಡನೆಯಿಂದ ಮುಕ್ತವೆಂದು ಎಣಿಸಲ್ಪಟ್ಟು, ಪ್ರತಿಷ್ಠೆ ಹೊಂದಿದವರು ಸ್ವಯಂ

ಪ್ರೇರಿತರಾಗಿ ಅವರದೆಂದು ಎಣಿಸಿರುವ ಆ ಮಾನವ ಹಕ್ಕುಗಳನ್ನು ಒಪ್ಪಿಸಿಬಿಡುತ್ತಾರೆ ಅಥವಾ ತ್ಯಾಗಮಾಡುತ್ತಾರೆ. ಅದನ್ನು ನಿಜವಾಗಿಯೂ ಅವರು ಸೂಕ್ತಸಮಯದಲ್ಲಿ, ಲೋಕದೊಂದಿಗೆ ಸರ್ವ ಸಾಮಾನ್ಯವಾಗಿ ಪಡೆದದ್ದಾಗಿತ್ತು. "ಮನುಷ್ಯನಾದ ಕ್ರಿಸ್ತ ಯೇಸು" ತನ್ನ ಜೀವವನ್ನು ಈ ಲೋಕಕ್ಕಾಗಿ ಅರ್ಪಿಸಿದಂತೆ, ಇವರುಗಳು ಆತನೊಂದಿಗೆ ಸಹ ತ್ಯಾಗಿಗಳಾಗುತ್ತಾರೆ. ಆತನ ಬಲಿದಾನವು ಸಾಕಷ್ಟಲ್ಲದ್ದರಿಂದ ಇತರರಿಂದ ಅವಶ್ಯಕತೆ ಇತ್ತು ಎಂಬರ್ಥವಲ್ಲ. ಆದರೆ ಆತನದು ಸಾಲುವಷ್ಟಿತ್ತಾದರೂ. ಇವರುಗಳಿಗೆ ಆತನ ವಧುವೂ, ಜೊತೆ ಬಾಧ್ಯಸ್ತರೂ ಆಗುವಂತೆ ಆತನೊಂದಿಗೆ ಸೇವೆಮಾಡಲು, ಶ್ರಮೆಯನ್ನನುಭವಿಸಲು ಅನುಮತಿಯನ್ನು ನೀಡಲಾಗಿದೆ. ಹಾಗಾಗಿ, ಈ ಲೋಕವು ಮರಣದ ದಂಡನೆಯಲ್ಲಿರುವಾಗ, ಆದಾಮನೊಂದಿಗೆ ಸಾಯುವಾಗ, ಈ 'ಚಿಕ್ಕ ಹಿಂಡು' ಈಗಾಗಲೇ ವಿವರಿಸಿರುವಂತೆ ನಂಬಿಕೆಯ ಎಣಿಕೆಯ ಮತ್ತು ತ್ಯಾಗದ ಪ್ರಕ್ರಿಯೆಯ ಮೂಲಕ ಕ್ರಿಸ್ತನೊಂದಿಗೆ ಸಾಯುವರೆಂದು ಹೇಳಲಾಗುತ್ತದೆ. ಅವರು ದೈವಿಕ ಸ್ವಭಾವದಲ್ಲಿ, ಆತನ ಮಹಿಮೆಯಲ್ಲಿ ಪಾಲುಗಾರರಾಗುವಂತೆ ತಮ್ಮನ್ನು ತ್ಯಾಗಮಾಡಿ ಆತನೊಂದಿಗೆ ಮಾನವಜೀವಿಗಳಾಗಿಯೇ ಮರಣವನ್ನಪ್ಪುತ್ತಾರೆ. ಯಾಕೆಂದರೆ ನಾವು ಆತನೊಂದಿಗೆ ಸಾಯುವವರಾದರೆ, ನಾವು ಆತನೊಂದಿಗೆ ಜೀವಿಸುವವರೂ ಕೂಡಾ ಆಗಿದ್ದೇವೆಂದು ನಾವು ನಂಬುತ್ತೇವೆ. ಆತನೊಂದಿಗೆ ನಾವು ಶ್ರಮೆಯನ್ನು ಅನುಭವಿಸುವವರಾದರೆ, ನಾವು ಒಟ್ಟಾಗಿ ಮಹಿಮೆ ಹೊಂದಿಕೊಳ್ಳುವೆವು (ರೋಮಾ. 8:17 ಮತ್ತು 2 ತಿಮೋಥೆ 2: 11,12).

ಸಹಸ್ರಮಾನದ ಪ್ರಾರಂಭದಲ್ಲಿ, ಈಗ ಇಕ್ಕಟ್ಟಾದ ಮಾರ್ಗದಲ್ಲಿ ನಡೆಯುವವರು ಅವರು ಓಡಿದ ಓಟಕ್ಕೆ ಅಮರತ್ವವೆಂಬ ಮಹಾ ಬಹುಮಾನವನ್ನು ಪಡೆದಿದ್ದಾರೆ; ಆ ರೀತಿಯಾಗಿ ದೈವಿಕ ಸ್ವಭಾವ ಮತ್ತು ಶಕ್ತಿಗಳೆಂಬ ವಸ್ತ್ರ ಧರಿಸಿದವರು, ಅವರುಗಳು ಈ ಲೋಕವನ್ನು ಪುನರ್ವಶಪಡಿಸುವ ಮತ್ತು ಆಶೀರ್ವದಿಸುವ ಮಹಾ ಕಾರ್ಯವನ್ನು ಆ ಯುಗದಲ್ಲಿ ಮಾಡುತ್ತಾರೆ. ಸುವಾರ್ತಾ ಯುಗದ ಅಂತ್ಯದೊಡನೆ, ಅಮರತ್ವಕ್ಕೆ ಹೋಗುವ ಇಕ್ಕಟ್ಟಾದ ಹಾದಿಯು ಮುಚ್ಚಲ್ಪಡುತ್ತದೆ. ಯಾಕೆಂದರೆ, ಪರೀಕ್ಷಿಸಲ್ಪಟ್ಟು ರುಜುವಾತುಗೊಳ್ಳುವಂತೆ ವಿನ್ಯಾಸ ಪಡಿಸಿದ್ದ ಆಯ್ಕೆಗೊಂಡ "ಚಿಕ್ಕ ಹಿಂಡು" ಪೂರ್ಣಗೊಂಡಿರುತ್ತದೆ. ಈಗ ಅಂಗೀಕರಿಸಿದ ಡೆಕ್ಟೋಸ್ (ಗ್ರೀಕಿನಲ್ಲಿ Dectos), ಅಂಗೀಕಾರಾರ್ಹ ಅಥವಾ ಸ್ವೀಕಾರಾರ್ಹ ಸಮಯವಾಗಿದೆ – ಈ ಸಮಯದಲ್ಲಿ ಯೇಸುವಿನ ಅರ್ಹತೆಯಲ್ಲಿ ಬರುವ ತ್ಯಾಗಿಗಳು, ಆತನೊಂದಿಗೆ ಸತ್ತರೆ ಮಧುರವಾದ ಸುವಾಸನೆಯುಳ್ಳ ತ್ಯಾಗವಾಗಿ ದೇವರಿಗೆ ಸ್ವೀಕಾರಾರ್ಹರಾಗಿರುತ್ತಾರೆ. ಆದಾಮನ ದಂಡನೆಯಾಗಿ ಮರಣವನ್ನು ಶಾಶ್ವತವಾಗಿ ಅನುಮತಿಸಲ್ಪಡುವುದಿಲ್ಲ. ಅದು ಸಹಸ್ರಮಾನ ಯುಗದಲ್ಲಿ ರದ್ದುಮಾಡಲ್ಪಡುತ್ತದೆ; ಒಂದು ಸಮರ್ಪಣೆಯಾಗಿ ಅದು ಸುವಾರ್ತಾಯುಗದಲ್ಲಿ ಮಾತ್ರವೇ ಅಂಗೀಕರಿಸಲ್ಪಡುವುದು ಮತ್ತು ಪ್ರತಿಫಲ ಹೊಂದುವುದು.

ನೂತನ ಸೃಷ್ಟಿಯಾಗಿ ಮಾತ್ರವೇ ಈ ಕಾಲದ ಸಂತರುಗಳು ಜೀವದ ಮಾರ್ಗದಲ್ಲಿರುವರು; ಕೇವಲ ಮಾನವ ಜೀವಿಗಳಾಗಿ ಮಾತ್ರವೇ ನಾವು ಸಮರ್ಪಣೆಗೊಂಡು ನಾಶಹೊಂದುವಂತೆ ಪ್ರತಿಷ್ಠಿಸಲ್ಪಟ್ಟಿದ್ದೇವೆ. ಮಾನವ ಜೀವಿಗಳಾಗಿ, ನಾವು ಕ್ರಿಸ್ತನೊಂದಿಗೆ ಸತ್ತ ಪಕ್ಷದಲ್ಲಿ, ನೂತನ, ಆತ್ಮೀಕ ಜೀವಿಗಳಾಗಿ, ನಾವು ಆತನೊಂದಿಗೆ ಜೀವಿಸುತ್ತೇವೆ (ರೋಮಾ. 6:8). ದೇವರ ಮನಸ್ಸು ನಮ್ಮಲ್ಲಿರುತ್ತದೆ, ರೂಪಾಂತರ ಹೊಂದಿದ ಮನಸ್ಸು, ನೂತನ ಸ್ವಭಾವದ ಜೀವಾಣುವಾಗಿದೆ.

ನೂತನ ಜೀವಿತವನ್ನು ಸುಲಭವಾಗಿ ಉಸಿರು ಕಟ್ಟಿಸಬಹುದು; ಮತ್ತು ಪೌಲನು ಆಶ್ವಾಸಿಸುತ್ತಾನೆ, ಪವಿತ್ರಾತ್ಮನಿಂದ ಸತ್ಯದ ಮೂಲಕ ಹುಟ್ಟಿರುವಾಗ ನಾವು ಶಾರೀರಿಕ ಇಚ್ಛಾಶೆಯುಳ್ಳವರಾಗಿದ್ದರೆ, ನಾವು ಸತ್ತುಹೋಗುತ್ತೇವೆ (ನಮ್ಮ ಜೀವವನ್ನು ಕಳಕೊಳ್ಳುತ್ತೇವೆ), ಆದರೆ ನಾವು ಆತ್ಮನ ಮೂಲಕ ದೇಹದ ಕಾರ್ಯಗಳನ್ನು (ಮಾನವ ಸ್ವಭಾವದ ಪ್ರವೃತ್ತಿಯನ್ನು) ನಿಗ್ರಹಿಸುವುದಾದರೆ (ಮರಣಕ್ಕೆ ಒಪ್ಪಿಸಿಕೊಡುವವರಾದರೆ) ನಾವು (ನೂತನ ಸೃಷ್ಟಿಗಳಾಗಿ) ಜೀವಿಸುತ್ತೇವೆ. "ಯಾರಾರು ದೇವರ ಆತ್ಮನಿಂದ ನಡಿಸಿಕೊಳ್ಳುತ್ತಾರೋ ಅವರು ದೇವರ ಮಕ್ಕಳು" (ರೋಮಾ. 8:13,14). ಈ ಆಲೋಚನೆಯು ಪ್ರತಿಷ್ಠೆ ಹೊಂದಿದವರಿಗೆ ಅತ್ಯಂತ ಪ್ರಮುಖವಾದುದಾಗಿದೆ; ಯಾಕೆಂದರೆ, ನಾವು ನಮ್ಮ ಮಾನವ ಸ್ವಭಾವವನ್ನು ತ್ಯಾಗ ಮಾಡುವಂತೆ ದೇವರೊಂದಿಗೆ ಒಡಂಬಡಿಕೆ ಮಾಡಿಕೊಂಡಿರುವುದಾದರೆ, ಮತ್ತು ಆ ತ್ಯಾಗವು ಆತನಿಂದ ಅಂಗೀಕಾರವಾಗಿರುವುದಾದರೆ, ಅದನ್ನು ಹಿಂತೆಗೆದುಕೊಳ್ಳುವ ಪ್ರಯತ್ನವು ವ್ಯರ್ಥ. ಮನುಷ್ಯನನ್ನು ದೇವರು ಈಗ ಸತ್ತನೆಂದು ಪರಿಗಣಿಸುತ್ತಾನೆ ಮತ್ತು ನಿಜವಾಗಿಯೂ ಸಾಯಬೇಕಾಗುತ್ತದೆ, ಇನ್ನು ಮುಂದೆ ಎಂದಿಗೂ ಮನುಷ್ಯ ಸ್ವಭಾವವನ್ನು ಪುನಃವಶಪಡಕೊಳ್ಳುವುದಿಲ್ಲ.

ಎಲ್ಲವನ್ನು ಪಡಕೊಳ್ಳಬೇಕಾಗಿರುವಾಗ ಶರೀರಾಧೀನ ಸ್ವಭಾವಕ್ಕೆ ಪುನಃ ಮರಳುವದಾದರೆ, ಆತ್ಮೀಕ ಸ್ವಭಾವವನ್ನು ತ್ಯಜಿಸಿ ಮನುಷ್ಯ ಸ್ವಭಾವದ ತೃಪ್ತಿಯಾಗಿದೆ. ನಂತರ ಶಾರೀರಿಕ ಇಚ್ಛೆಯಂತೆ ಜೀವಿಸಲು ಹಿಂದಿರುಗುವಾಗ, ನೂತನ ಆತ್ಮೀಕ ಸ್ವಭಾವದ ವಿನಿಯೋಗದಲ್ಲಿ ಸ್ವಲ್ಪ ಮಾನವ ತೃಪ್ತಿಯನ್ನು ಪಡೆಯಬಹುದು.

ಆದಾಗ್ಯೂ ಅನೇಕ ಪ್ರತಿಷ್ಠಿತರು ಬಹುಮಾನಾ ಕಾಂಕ್ಷಿಗಳಾಗಿರುತ್ತಾರೆ. ಆತ್ಮನಿಂದ ಹುಟ್ಟಿದವರು ಈ ಲೋಕದ ಆಕರ್ಷಣೆಗಳು, ಶಾರೀರಿಕ ಇಚ್ಛೆಗಳು ಅಥವಾ ದುಷ್ಟತ್ವದ ಮೋಡಿಗಳಿಂದ ಭಾಗಶಃ ಜಯಿಸಿರುತ್ತಾರೆ. ಅವುಗಳು ನಮ್ಮ ಮುಂದೆ ಇಟ್ಟಿರುವ ಬಹುಮಾನವನ್ನು ಭಾಗಶಃ ಮರೆತುಬಿಟ್ಟಿದ್ದಾರೆ. ದೇವರ ಕೃಪೆಯನ್ನೂ, ಲೋಕದ ದಯೆಯನ್ನೂ ಕಾಪಾಡಿಕೊಳ್ಳುವಂತೆ ಮಧ್ಯ ಮಾರ್ಗದಲ್ಲಿ ನಡೆಯಲು ಪ್ರಯತ್ನಿಸುತ್ತಾರೆ ಮತ್ತು "ಲೋಕಕ್ಕೆ ಸ್ನೇಹಿತನಾಗಬೇಕೆಂದಿರುವವನು ತನ್ನನ್ನು ದೇವರಿಗೆ ವಿರೋಧಿಯನ್ನಾಗಿ ಮಾಡಿಕೊಳ್ಳುತ್ತಾನೆ" (ಯಾಕೊಬ 4:4) ಎಂಬ ಮಾತನ್ನು ಮರೆತು ಹೋಗಿದ್ದಾರೆ. ಮತ್ತು ಬಹುಮಾನಕ್ಕಾಗಿ ಓಡುವವರಿಗೆ ಇರುವ ಸೂಚನೆ ಏನೆಂದರೆ "ಲೋಕವನ್ನಾಗಲೀ, ಲೋಕದಲ್ಲಿರುವವುಗಳನ್ನಾಗಲೀ ಪ್ರೀತಿಸಬೇಡಿರಿ" (1 ಯೋಹಾನ 2:15–17) ಮತ್ತು "ಒಬ್ಬನೇ ದೇವರಿಂದ ಬರುವಂಥ ಮಾನವನ್ನು ಅಪೇಕ್ಷಿಸದೆ ಒಬ್ಬರಿಂದೊಬ್ಬರು ಮಾನವನ್ನು ಅಂಗೀಕರಿಸುವವರಾದ ನೀವು ಹೇಗೆ ನಂಬೀರಿ?" (ಯೋಹಾನ 5:44) ಎಂಬುದನ್ನು ಮರೆತು ಹೋಗಿದ್ದಾರೆ.

ಪ್ರಸ್ತುತ ಲೋಕವನ್ನು ಪ್ರೀತಿಸುವವರು, ಆದರೆ ದೇವರನ್ನು ಸಂಪೂರ್ಣವಾಗಿ ತ್ಯಜಿಸದೇ ಇರುವವರು ತಮ್ಮ ಒಡಂಬಡಿಕೆಯನ್ನು ಕಡೆಗಣಿಸುವವರು, ವ್ಯಥೆಯ ಮತ್ತು ದೈವಕೋಪದ ಬೆಂಕಿಯಿಂದ ಶುದ್ಧೀಕರಣವನ್ನು ಹೊಂದಿಕೊಳ್ಳುವರು. ಅಪೋಸ್ತಲನು ಇದನ್ನು ಹೇಳುವಂತೆ, ಅವರುಗಳ ಶರೀರ ಭಾವವು ನಾಶವಾಗುವಂತೆ ಅವರ ಆತ್ಮಗಳು (ನೂತನವಾಗಿ ಹುಟ್ಟಿದ ಸ್ವಭಾವವು) ಕರ್ತನ ದಿನಕ್ಕಾಗಿ ಕಾಪಾಡಲ್ಪಡುವಂತೆ (1 ಕೊರಿಂಥ 5:5) ಅವರನ್ನು ಸೈತಾನನಿಗೆ ಒಪ್ಪಿಸಲ್ಪಡುತ್ತಾರೆ ಮತ್ತು ಶಿಸ್ತಿನಿಂದ ಸರಿಯಾದ ರೀತಿಯಲ್ಲಿ ಕಾರ್ಯಗತ ಮಾಡಿದರೆ, ಅವರುಗಳು ಅಂತಿಮವಾಗಿ ಆತ್ಮೀಕ ಸ್ಥಿತಿಗೆ ಸ್ವೀಕರಿಸಲ್ಪಡುತ್ತಾರೆ. ಅವರುಗಳು ದೇವದೂತರು ಗಳಿಗಿರುವಂತೆ ಸದಾಕಾಲ ಇರುವ ಆತ್ಮೀಕ ಜೀವನವನ್ನು ಹೊಂದಿಕೊಳ್ಳುತ್ತಾರೆ, ಆದರೆ ಅಮರತ್ವದ ಬಹುಮಾನವನ್ನು ಕಳಕೊಳ್ಳುತ್ತಾರೆ. ಅವರುಗಳು ದೇವಾಲಯದಲ್ಲಿ ದೇವರ ಸೇವೆಮಾಡುತ್ತಾರೆ ಮತ್ತು ಆತನ ಸಿಂಹಾಸನದ ಮುಂದೆ ತಮ್ಮ ಕೈಗಳಲ್ಲಿ ಖರ್ಜೂರದ ಗರಿಗಳನ್ನು ಹಿಡಿದುಕೊಂಡಿರುತ್ತಾರೆ. (ಪ್ರಕಟನೆ 7:9–17); ಆದರೆ, ಅದು ಮಹಿಮೆ ಯುಳ್ಳದ್ದಾದರೂ, ಅರಸರೂ, ದೇವರ ಯಾಜಕರೂ ಆಗಿರುವ ಜಯ ಹೊಂದಿದ 'ಚಿಕ್ಕಹಿಂಡಿನ' ಸ್ಥಾನದಷ್ಟು ಮಹಿಮೆಯುಳ್ಳದ್ದಾಗಿರುವುದಿಲ್ಲ, ಯಾಕೆಂದರೆ, ಅವರುಗಳು (ಚಿಕ್ಕಹಿಂಡು) ಯೇಸುವಿನೊಡನೆ ಆತನ ಮದುವಣಗಿತ್ತಿಯಂತೆಯೂ, ಜೊತೆ ಬಾಧ್ಯಸ್ಥರಂತೆಯೂ, ಅಮರತ್ವವೆಂಬ ಕಿರೀಟವನ್ನು ಧರಿಸಿದವರಾಗಿ ಕುಳಿತುಕೊಳ್ಳುತ್ತಾರೆ.

ನಮ್ಮದು ಒರಟಾದ, ಕಡಿದಾದ ಇಕ್ಕಟ್ಟಾದ ಮಾರ್ಗವಾಗಿದೆ ಮತ್ತು ಪಯಣದ ಪ್ರತಿಯೊಂದು ಮುಂದಿನ ಹೆಜ್ಜೆಗೂ ಸಾಕಷ್ಟು ಬಲವನ್ನು ಒದಗಿಸದೇ ಹೋದಲ್ಲಿ, ನಾವು ಗುರಿಯನ್ನು ಎಂದಿಗೂ ಮುಟ್ಟಲಾಗುವುದಿಲ್ಲ. ಆದರೆ, ನಮ್ಮ ನಾಯಕನ ನುಡಿಗಳು ಪ್ರೋತ್ಸಾಹದಾಯಕವಾಗಿವೆ – "ನೀವು ನನ್ನಲ್ಲಿದ್ದು ಮನಶ್ಯಾಂತಿಯನ್ನು ಹೊಂದಿದವರಾಗಿರ ಬೇಕೆಂದು ಇದನ್ನೆಲ್ಲಾ ನಿಮಗೆ ಹೇಳಿದ್ದೇನೆ. ನಾನು ಲೋಕವನ್ನು ಜಯಿಸಿದ್ದೇನೆ" (ಯೋಹಾನ 16:33). "ನನ್ನ ಕೃಪೆಯೇ ನಿನಗೆ ಸಾಕು; ಬಲಹೀನತೆಯಲ್ಲಿಯೇ ಬಲವು ಪೂರ್ಣ ಸಾಧಕ ವಾಗುತ್ತದೆ" (1 ಕೊರಿಂಥ 12:9). ಈ ಮಾರ್ಗದ ತೊಂದರೆಗಳು "ದೇವರ ಉತ್ತರಾಧಿಕಾರಿಗಳು ಮತ್ತು ಕ್ರಿಸ್ತನೊಂದಿಗೆ ಜೊತೆ ಬಾಧ್ಯಸ್ಥರಾಗಲು ವಿಶಿಷ್ಟ ಜನರನ್ನು" ಪವಿತ್ರಗೊಳಿಸಲು ಮತ್ತು ಪರಿಷ್ಕರಿಸಲು ಪ್ರತ್ಯೇಕಿಸುವ ತತ್ವವಾಗಿ ಕಾರ್ಯನಿರ್ವಹಿಸುವುದು. ಈ ಸಂಗತಿಗಳ ದೃಷ್ಟಿಯಲ್ಲಿ, ನಾವು ಧೈರ್ಯದಿಂದ ಕೃಪಾಸನದ ಮುಂದೆ ಬರೋಣ, ನಾವು ಒಳ್ಳೆಯ ನಂಬಿಕೆಯ ಹೋರಾಟವನ್ನು ಮಾಡುವಾಗ ಮತ್ತು ಮಹಿಮಾ ಕಿರೀಟದ ಮೇಲೆ – ಅಮರತ್ವ, ದೈವಿಕ ಸ್ವಭಾವದ ಮೇಲೆ ನಮ್ಮ ನಿರೀಕ್ಷೆಗಳನ್ನು ಇಡುವಾಗ ನಾವು ಕರುಣೆಯನ್ನು ಹೊಂದಿಕೊಂಡು ಮತ್ತು ಕಷ್ಟಕಾಲದಲ್ಲಿ ಸಹಾಯವಾಗುವಂತೆ ದೇವರ ಕೃಪೆಯನ್ನು ಕಂಡುಕೊಳ್ಳೋಣ (2 ತಿಮೋ. 4:8; 1 ಪೇತ್ರ 5:4).

## ಪರಿಶುದ್ಧ ರಾಜಮಾರ್ಗ
## The Highway of Holiness

ಸುವಾರ್ತಾ ಯುಗದ ವಿಶೇಷ ನಿರೀಕ್ಷೆಯು ಅತಿಶಯವಾಗಿ ಭವ್ಯವಾಗಿರುವಾಗ, ಮತ್ತು ಅದಕ್ಕನು

ಸಾರವಾಗಿ ಅದರ ಮಾರ್ಗವು ಕಷ್ಟಕರವಾದುದೂ, ಇಕ್ಕಟ್ಟಾದ ಪ್ರತಿಹಂತದಲ್ಲಿಯೂ ಕಾಠಿಣ್ಯ ಮತ್ತು ಗಂಡಾಂತರಗಳೆಂಬ ಗಿಡಕಂಟಿಗಳಿಂದ ಕೂಡಿದ್ದಾಗಿದೆ – ಹೀಗಾಗಿ ಕೆಲವರು ಮಾತ್ರ ಅದನ್ನು ಕಂಡುಕೊಳ್ಳುತ್ತಾರೆ ಮತ್ತು ಅಂತ್ಯದಲ್ಲಿ ಮಹಾ ಬಹುಮಾನವನ್ನು ಪಡಕೊಳ್ಳುತ್ತಾರೆ, ಮುಂಬರಲಿರುವ ಯುಗದ ಸಂಗತಿಗಳ ನೂತನ ಕ್ರಮವು ಸಂಪೂರ್ಣವಾಗಿ ಬೇರೆಯೇ ಆಗಿರುತ್ತದೆ. ಅದು ವಿವಿಧ ನಿರೀಕ್ಷೆಗಳನ್ನು ಹೊತ್ತಿರುವಾಗ, ವಿವಿಧ ಮಾರ್ಗವು ಸಹಾ ನಮ್ಮನ್ನು ಅದಕ್ಕೆ ನಡಿಸುತ್ತದೆ. ಅಮರತ್ವದ ಮಾರ್ಗವು ಕಾನೂನುಬದ್ಧ ಮತ್ತು ಸರಿಯಾದ ಭರವಸೆಗಳು, ಮಹತ್ವಾಕಾಂಕ್ಷೆಗಳು ಮತ್ತು ಆಸೆಗಳನ್ನು ತ್ಯಾಗ ಮಾಡುವ ಒಂದು ಮಾರ್ಗವಾಗಿದೆ, ಮಾನವ ಸ್ವಭಾವದ ಶಾಶ್ವತ ತ್ಯಾಗವಾಗಿದೆ. ಆದರೆ ಮಾನವ ಪರಿಪೂರ್ಣತೆಗೆ, ಪುನರ್‌ವಶಕ್ಕೆ, ಈ ಲೋಕದ ನಿರೀಕ್ಷೆಗೆ ಹೋಗುವ ಮಾರ್ಗಕ್ಕೆ ಪಾಪವನ್ನು ದೂರೀಕರಿಸುವುದು ಮಾತ್ರವೇ ಬೇಕಾಗುತ್ತದೆಯೇ ಹೊರತು ಮಾನವ ಹಕ್ಕುಗಳ ಮತ್ತು ಸವಲತ್ತುಗಳನ್ನು ತ್ಯಾಗ ಮಾಡುವದಲ್ಲ. ಆದರೆ ಅದರ ಸರಿಯಾದ ಆನಂದಪಡುವಿಕೆಯ ತ್ಯಾಗ. ಅದು ಪಾಪವು ಈ ಲೋಕದೊಳಗೆ ಪ್ರವೇಶ ಮಾಡುವ ಮೊದಲಿಗೆ ಆದಾಮನು ಅನುಭವಿಸುತ್ತಿದ್ದ ವ್ಯಕ್ತಿಗತ ಶುದ್ಧೀಕರಣಕ್ಕೆ ಮತ್ತು ದೇವರ ಸ್ವರೂಪದ ಪುನರ್‌ವಶಪಡಿಸುವಿಕೆಗೆ ನಡೆಸುತ್ತದೆ.

ನಿಜವಾದ ಮಾನವ ಪರಿಪೂರ್ಣತೆಗೆ ಹಿಂದಿರುಗುವ ಮಾರ್ಗವನ್ನು ಸರಳವನ್ನಾಗಿಯೂ, ಸುಲಭವನ್ನಾಗಿಯೂ ಮಾಡಬೇಕಾಗಿದೆ. ಎಷ್ಟರ ಮಟ್ಟಿಗೆಂದರೆ, ಯಾರೂ ಆ ಮಾರ್ಗವನ್ನು ತಪ್ಪಾಗಿ ತಿಳಿಯದಂತೆ ಅದು ಸರಳವಾದ ಮಾರ್ಗವಾಗಿರಬೇಕು – "ಅದು ಪರಿಶುದ್ಧ ಮಾರ್ಗ ಎನಿಸಿಕೊಳ್ಳುವುದು; ಯಾವ ಅಶುದ್ಧನೂ ಅಲ್ಲಿ ನಡೆಯನು. ಅದು ದೇವಜನರಿಗಾಗಿಯೇ ಇರುವುದು. ಅಲ್ಲಿ ಹೋಗುವ ಮೂಢನೂ ದಾರಿ ತಪ್ಪನು" (ಯೆಶಾಯ 35:8–*Lesser*); ಅದು ಎಷ್ಟು ಸರಳವಾಗಿರುತ್ತದೆ ಎಂದರೆ, ಯಾರೂ ತಮ್ಮ ನೆರೆಯವನಿಗೆ ಈ ಬಗ್ಗೆ "ಯೆಹೋವನ ಜ್ಞಾನವನ್ನು ಪಡೆಯಿರಿ ಎಂದು ಇನ್ನು ಮೇಲೆ ಬೋಧಿಸಬೇಕಾಗಿರುವುದಿಲ್ಲ; ಚಿಕ್ಕವರು ಮೊದಲು ಗೊಂಡು ದೊಡ್ಡವರತನಕ ಎಲ್ಲರೂ ನನ್ನ ಜ್ಞಾನವನ್ನು ಪಡೆದಿರುವರು" (ಯೆರೆಮೀಯ 31:34) ಎಂದು ಬರೆದದೆ. ಕೆಲವರು ಕಂಡುಕೊಳ್ಳುವ ಇಕ್ಕಟ್ಟಾದ ಮಾರ್ಗದ ಬದಲಾಗಿ, ಅದನ್ನು 'ರಾಜಮಾರ್ಗ', ಸಾರ್ವಜನಿಕ ಮಾರ್ಗ ಎಂದು ಕರೆಯಲಾಗುತ್ತದೆ – ಇಕ್ಕಟ್ಟಾದ, ಕಡಿದಾದ, ಕೊರಕಲಾದ, ಗಿಡಗೆಂಟೆಗಳಿಂದ ಕೂಡಿದ ಕಷ್ಟಕರವಾದ ಮಾರ್ಗವಲ್ಲ, ಆದರೆ ಅದು ಸುಲಭವಾದ ಪ್ರಯಾಣಕ್ಕೆ ವಿಶೇಷವಾಗಿ ಸಿದ್ಧಪಡಿಸಿದ ಮಾರ್ಗ – ಪ್ರಯಾಣಿಕರ ಅನುಕೂಲಕರ, ಸುಖಕರಪ್ರಯಾಣ ಕ್ಕಾಗಿಯೇ ವ್ಯವಸ್ಥೆಪಡಿಸಿದ ಮಾರ್ಗವಾಗಿದೆ. 8 ಮತ್ತು 9ನೇ ವಚನಗಳು ಅದು ಬಿಡುಗಡೆ ಹೊಂದಿದ ಎಲ್ಲಾ ಮಾನವರಿಗಾಗಿ ಮರಣ ಹೊಂದಿದ ಕ್ರಿಸ್ತನನ್ನು ಯಾರು ಗುರುತಿಸಿ, ಆತನ ಅಮೂಲ್ಯ ರಕ್ತದಿಂದ ಖರೀದಿಸಿದ ಅವಕಾಶಗಳನ್ನು ಮತ್ತು ಆಶೀರ್ವಾದಗಳನ್ನು ಯಾರು ಪಡೆಯುತ್ತಾರೋ ಅಂಥವರು ಈ ಪರಿಶುದ್ಧ ರಾಜಮಾರ್ಗದಲ್ಲಿ ಮಾನವ ಪರಿಪೂರ್ಣತೆ ಮತ್ತು ಪ್ರೀತಿಗೆ ಮರುಸ್ಥಾಪಿಸುವ ಗುರಿಯತ್ತ ಹೋಗಬಹುದು.

ಇವರಗಳು ನೀತಿನಿರ್ಣಯಗೊಂಡವರೂ, ದೇವರ ದೃಷ್ಟಿಯಲ್ಲಿ ಪವಿತ್ರರಾಗಿ ನಿಲ್ಲುವವರೂ ಪರಿಪೂರ್ಣರೂ ಎಂದು ಎಣಿಸಲ್ಪಡುವುದಿಲ್ಲ: ಈ ಪರಿಶುದ್ಧ ರಾಜಮಾರ್ಗವನ್ನು ಪ್ರಾರಂಭಿಸಿದಾಗ ಅವರು ತಮ್ಮ ಪ್ರಯತ್ನ ಮತ್ತು ವಿಧೇಯತೆಯ ಫಲವಾಗಿ ಅಲ್ಲಿ ನಿಜವಾದ ಪರಿಪೂರ್ಣತೆಗೆ ಹೋಗಬಹುದು. ಇವುಗಳಿಗೆ ಎಲ್ಲಾ ಸಂಗತಿಗಳೂ ಆಗ ಅಧಿಕಾರದಿಂದ ಆಳುವ ವಿಮೋಚಕನಿಂದ ಅನುಕೂಲವನ್ನಾಗಿ ಮಾಡಲಾಗುತ್ತವೆ. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಅಗತ್ಯತೆಗನುಸಾರವಾಗಿ ನೂತನ ರಾಜ್ಯದ ವಿವೇಕವುಳ್ಳ ಮತ್ತು ಸಮರ್ಪಕವಾದ ಆಡಳಿತದಿಂದ ಸಹಾಯ ಹೊಂದುತ್ತಾರೆ. ಇದು ಕೆಲವರಿಗೆ ಕಂಡುಬರುವಂತೆ, ಈಡುಬಲಿಯ ನ್ಯಾಯಯುತವಾದ ಫಲವಾಗಿದೆ. ನಮ್ಮ ಕರ್ತನಾದ ಮಾನವ ಯೇಸು ಕ್ರಿಸ್ತನು, ಎಲ್ಲರಿಗಾಗಿ ತನ್ನನ್ನೇ ಈಡುಬಲಿಯಾಗಿ ಸಮರ್ಪಿಸಿಕೊಂಡನು ಮತ್ತು ಎಲ್ಲರೂ ಸತ್ಯದ ಜ್ಞಾನಕ್ಕೆ ಬರಬೇಕೆಂದು ಬಯಸುತ್ತಾನೆ. ಆ ಮೂಲಕ ನೈಜವಾದ ಪರಿಪೂರ್ಣತೆಗೆ ಬರಬೇಕೆಂದು ಅಪೇಕ್ಷಿಸಿರುವಾಗ, ಯಾಕೆ ಆತನು ಒಮ್ಮೆಲೇ ಎಲ್ಲರಿಗೂ ವಿಶಾಲವಾದ ಉತ್ತಮ ಮಾರ್ಗವನ್ನು ಒದಗಿಸಿ ಕೊಡಲಿಲ್ಲ? ಆತನು ಎಲ್ಲಾ ಅಡೆತಡೆಗಳನ್ನೂ, ಮುಗ್ಗರಿಸುವ ಕಲ್ಲುಗಳನ್ನೂ, ಮುಚ್ಚಿದ ಗುಂಡಿಗಳನ್ನೂ, ಎಲ್ಲಾ ಪಾಶಗಳನ್ನೂ ಯಾಕೆ ತೆಗೆದುಹಾಕಲಿಲ್ಲ? ಯಾಕೆ ಪಾಪಿಗಳನ್ನು ದೇವರೊಂದಿಗೆ ಪೂರ್ಣ ಸಾಮರಸ್ಯ ಹೊಂದಿಕೊಳ್ಳಲು ಸಹಾಯಮಾಡಬಾರದು? ಮಾರ್ಗವನ್ನು ಕಡಿದಾಗಿ, ಮುಳ್ಳುಗಳಿಂದ ಕೂಡಿದ್ದಾಗಿ, ಕಂಡುಕೊಳ್ಳಲು ಕಠಿಣವಾಗಿರುವಂತೆ, ನಡೆಯಲು ಇನ್ನೂ ಕಠಿಣವಾಗುವಂತೆ ಮಾಡುವ ಬದಲಾಗಿ ಅದನ್ನು ಪಾಪಿಗಳು ದೇವರೊಂದಿಗೆ ಪೂರ್ಣ ಸಾಮರಸ್ಯಕ್ಕೆ

ಮರಳಲು ಸುಲಭ ಮಾರ್ಗವನ್ನಾಗಿ ಯಾಕೆ ಮಾಡಬಾರದಿತ್ತು? ಇದು ಸತ್ಯದ ವಾಕ್ಯವನ್ನು ಸರಿಯಾಗಿ ಬೋಧಿಸುವ ವಿಫಲತೆಯಾಗಿದೆ ಮತ್ತು ಪ್ರಸ್ತುತ ಇಕ್ಕಟ್ಟಾದ ಮಾರ್ಗವು ವಿಶೇಷ ಬಹುಮಾನಕ್ಕೆ ನಡೆಸುತ್ತದೆ ಮತ್ತು ಇದು ಜೊತೆ ಬಾಧ್ಯಸ್ಥರೂ, ಕ್ರಿಸ್ತನ ದೇಹವೂ ಆದ "ಚಿಕ್ಕಹಿಂಡಿನ" ಪರೀಕ್ಷೆ ಮತ್ತು ಆಯ್ಕೆಗಾಗಿದೆ ಎಂಬುದನ್ನು ನೋಡುವಂತೆ ಮಾಡುತ್ತದೆ. ಇದು ಆಯ್ಕೆಗೊಂಡು ಅದರ ಶಿರಸ್ಸಿನೊಂದಿಗೆ ಉನ್ನತಿಗೇರುವಾಗ, ಎಲ್ಲಾ ಜನಾಂಗಗಳನ್ನೂ ಆಶೀರ್ವದಿಸುವುದು ಎಂಬುದು ಕೆಲವರಿಗೆ ಈ ಪ್ರಸ್ತಾಪದ ಬಗ್ಗೆ ಗೊಂದಲಮಯ ವಿಚಾರಣೆಗಳಿಗೆ ಕಾರಣವಾಗಿದೆ. ದೇವರ ಯೋಜನೆಯನ್ನು ಕಾಣುವಲ್ಲಿ ವಿಫಲವಾಗಿ, ಅನೇಕರು ಜೀವನಕ್ಕೆ ಸುಲಭ ಮಾರ್ಗವಾದ ಪರಿಶುದ್ಧ ರಾಜಮಾರ್ಗದ ಬಗ್ಗೆ ಬೋಧಿಸುತ್ತಾರೆ. ಆದರೆ ಪ್ರಸ್ತುತ ಯುಗದಲ್ಲಿ ಅಂಥಾಃ ಮಾರ್ಗವು ಇರುವುದಿಲ್ಲವಾದ್ದರಿಂದ, ಅವರು ಗಲಿಬಿಲಿಗೊಂಡು ದೇವರವಾಕ್ಯವನ್ನು ತಮ್ಮ ತಪ್ಪಾದ ಸಿದ್ಧಾಂತಗಳೊಂದಿಗೆ ಸಾಮರಸ್ಯಗೊಳ್ಳಿಸುವ ಪ್ರಯತ್ನ ಮಾಡುತ್ತಾರೆ. ಸದ್ಯದಲ್ಲಿಯೇ ತೆರಯಲ್ಪಡುವ ರಾಜಮಾರ್ಗದಲ್ಲಿ, ಪಾಪದ ಸಂಗತಿಗಳನ್ನು ಮಾತ್ರವೇ ನಿಷೇಧಿಸಲಾಗಿದೆ, ಅದೇ ಸಮಯದಲ್ಲಿ, ಇಕ್ಕಟ್ಟಾದ ಮಾರ್ಗದಲ್ಲಿ ಪಯಣಿಸುವವರು ತಮ್ಮನ್ನು ನಿರಾಕರಿಸಿಕೊಂಡು ಪಾಪಮಯವಲ್ಲದ ಅನೇಕ ಸಂಗತಿಗಳನ್ನು ತ್ಯಾಗಮಾಡಬೇಕಾಗುತ್ತದೆ. ಮಾತ್ರವಲ್ಲದೆ ಸುತ್ತಿಕೊಳ್ಳುವ ಪಾಪಗಳ ವಿರುದ್ಧ ನಿರಂತರವಾಗಿ ಯುದ್ಧ ಮಾಡಬೇಕಾಗುತ್ತದೆ. ಬರಲಿರುವ ಯುಗವು ರಾಜಮಾರ್ಗವಾಗಿರುವಂತೆ ಇದು ತ್ಯಾಗದ ಮಾರ್ಗವಾಗಿದೆ.

ಆ ರಾಜಮಾರ್ಗದ ಬಗ್ಗೆ ಮಹತ್ವಪೂರ್ಣವಾದ ಸಾಂಕೇತಿಕ ಭಾಷೆಯಲ್ಲಿ ಹೇಳಿರುವಂತೆ : "ಯಾವುದೇ ಸಿಂಹವು ಅಲ್ಲಿರದು, ಕ್ರೂರ ಜಂತು ಅಲ್ಲಿ ಸೇರದು, ಕಾಣುವುದೇ ಇಲ್ಲ, ಬಿಡುಗಡೆ ಆದವರೇ ಅಲ್ಲಿ ನಡೆಯುವರು" (ಯೆಶಾಯ 35:9). ಪಾಪಮಯ ಮಾರ್ಗವನ್ನು ತೊರೆದು ನೀತಿಮಾರ್ಗವನ್ನು ಅನುಸರಿಸುವವರ ಮಾರ್ಗದಲ್ಲಿ ಎಷ್ಟೋ ಭಯಾನಕ ಸಿಂಹಗಳಿವೆ! ಅವನತಿಗೊಂಡ ಸಾರ್ವಜನಿಕ ಮನೋಭಾವದ ಸಿಂಹವಿದೆ, ಇದು ದೈನಂದಿನ ಜೀವನ–ಉಡುಗೆ, ಮನೆ ಮತ್ತು ವ್ಯವಹಾರ ವ್ಯವಸ್ಥೆ ಇತ್ಯಾದಿಗಳಲ್ಲಿ ಆತ್ಮಸಾಕ್ಷಿಯ ಆಜ್ಞೆಗಳನ್ನು ಪಾಲಿಸುವ ಸಾಹಸದಿಂದ ಅನೇಕರನ್ನು ತಡೆಯುತ್ತದೆ. ಬಲವಾದ ಪಾನೀಯದ ಪ್ರಲೋಭನೆಯ ಸಿಂಹವು ಅದನ್ನು ತೆಗೆದುಹಾಕುವುದನ್ನು ನೋಡಿ ಸಂತೋಷಪಡುವ ಸಾವಿರಾರು ಜನರನ್ನು ತಡೆಗಟ್ಟುತ್ತದೆ. ನಿಷೇಧಕಾರರು ಮತ್ತು ಆತ್ಮಸಂಯಮದ ಕೆಲಸಗಾರರು ಈಗ ತಮ್ಮ ಕೈಯಲ್ಲಿ ಕಠಿಣ ಕಾರ್ಯವಿದೆ ಎಂದು ಕಂಡುಕೊಂಡಿದ್ದಾರೆ, ಅದನ್ನೂ ಮುಂದಿನ ಯುಗದ ಅಧಿಕಾರ ಮತ್ತು ಶಕ್ತಿಯನ್ನು ಮಾತ್ರವೇ ತೆಗೆದುಹಾಕುತ್ತದೆ; ಮತ್ತು ಇತರ ನೈತಿಕ ಸುಧಾರಣೆಯ ಬೇರೆ ಅರ್ಹ ಪ್ರಯತ್ನಗಳ ಬಗ್ಗೆಯೂ ಇದನ್ನೇ ಹೇಳಬಹುದು. "ಕ್ರೂರ ಜಂತು ಅಲ್ಲಿ ಸೇರದು" ಎಂದು ಹೇಳಬಹುದಾಗಿದೆ. ಸಾಮಾನ್ಯ ಹಿತದೃಷ್ಟಿಯನ್ನು ಮುಂದಿಟ್ಟುಕೊಂಡು ಸ್ವಾರ್ಥ, ವೈಯಕ್ತಿಕ ಹಿತಾಸಕ್ತಿಗಳನ್ನು ಮುನ್ನಡೆಸಲು ಆಯೋಜಿಸಲಾಗಿರುವ ಯಾವುದೇ ದೈತ್ಯ ನಿಗಮಗಳನ್ನು (giant corporation) ಇನ್ನು ಮುಂದೆ ಸಹಿಸುವುದಿಲ್ಲ. "ನನ್ನ ಪರಿಶುದ್ಧ ಪರ್ವತದಲ್ಲಿ (ರಾಜ್ಯದಲ್ಲಿ) ಯಾರೂ ಕೇಡುಮಾಡುವುದಿಲ್ಲ, ಯಾರೂ ಹಾಳು ಮಾಡುವುದಿಲ್ಲ" (ಯೆಶಾಯ 11:9) ಎಂದು ಕರ್ತನು ಹೇಳಿದ್ದಾನೆ. ದುಷ್ಟತನ ಇತ್ಯಾದಿಗಳಿಗೆ ಒಲವು ತೋರುವ ಮನೋಭಾವವನ್ನು ಜಯಿಸುವವರಲ್ಲಿ ಕೆಲವು ತೊಂದರೆಗಳಿದ್ದರೂ, ಈ ಯುಗದ ಇಕ್ಕಟ್ಟಾದ ಮಾರ್ಗಕ್ಕೆ ಹೋಲಿಸಿದರೆ ಅದು ಸುಲಭವಾದ ಮಾರ್ಗವಾಗಿದೆ. ಕಲ್ಲುಗಳನ್ನು (ಮುಗ್ಗರಿಸುವ ಕಲ್ಲುಗಳನ್ನು) ಹೊರಗೆ ತೆಗೆದುಹಾಕಲಾಗುವುದು ಮತ್ತು ಸತ್ಯದ ಮಟ್ಟವನ್ನು ಜನರಿಗೆ ಎತ್ತಿಹಿಡಿಯಲಾಗುವುದು (ಯೆಶಾಯ 62;10). ಅಜ್ಞಾನ ಮತ್ತು ಮೂಢನಂಬಿಕೆಗಳು ಗತಕಾಲದ ಸಂಗತಿಗಳಾಗುತ್ತವೆ, ನೀತಿವಂತಿಕೆಗೆ ತಕ್ಕ ಬಹುಮಾನವು ದೊರೆಯುತ್ತದೆ, ಅದೇ ಸಮಯದಲ್ಲಿ ಕೇಡನ್ನು ಹೊರಹಾಕಲಾಗುವುದು (ಮಲಾಕಿ 3:15,18). ಉದ್ಧಾರಕರಾಗಿದ್ದವರು ಹಿಂತಿರುಗಿ ಬಂದವರಂತೆ, ಮನುಕುಲಕ್ಕೆ ದೊರೆತ ಆರೋಗ್ಯಕರ ಶಿಕ್ಷೆ, ಸೂಕ್ತವಾದ ಪ್ರೋತ್ಸಾಹಗಳು ಮತ್ತು ಸರಳ ಸೂಚನೆಗಳಿಂದ, ತಂದೆ ಅದಾಮನು ಬಿದ್ದುಹೋಗುವ ಮೊದಲು ಅನುಭವಿಸಿದ ಭವ್ಯವಾದ ಪರಿಪೂರ್ಣತೆಗೆ ಮರಳಲು ಮಾನವಕುಲಕ್ಕೆ ತರಬೇತಿ ಮತ್ತು ಶಿಸ್ತನ್ನು ಕಲಿಸಿಕೊಡಲಾಗುವುದು. ಈ ರೀತಿಯಲ್ಲಿ "ಕರ್ತನು ವಿಮೋಚಿಸಿದವರು ಹಿಂತಿರುಗಿ (ನಾಶನದಿಂದ, ಭವ್ಯವಾದ ಪರಿಶುದ್ಧ ಮಾರ್ಗದಲ್ಲಿ ನಡೆದು) ಶಾಶ್ವತ ಸಂತೋಷವೆಂಬ ಕಿರೀಟವನ್ನು ಧರಿಸಿಕೊಂಡು ಉತ್ಸಾಹದೊಡನೆ ಚೀಯೋನಿಗೆ ಸೇರುವರು, ಹರ್ಷಾನಂದಗಳನ್ನು ಅನುಭವಿಸುವರು, ಮೊರೆಯೂ ಕರಕರೆಯೂ ತೊಲಗಿಹೋಗುವುವು" (ಯೆಶಾಯ 35:10). ನಮ್ಮ ಕರ್ತನು ಎರಡು ಮಾರ್ಗಗಳನ್ನು ಸೂಚಿಸಿದ್ದಾನೆ. ಯಾಕೆಂದರೆ ಮೂರನೆಯ ಮಾರ್ಗವು ತೆರೆದುಕೊಳ್ಳುವ ಸೂಕ್ತ ಸಮಯವು ಇನ್ನೂ ಬಂದಿಲ್ಲ. – ಶುಭ ಸಮಾಚಾರವನ್ನು

ಪ್ರಕಟಿಸುವಾಗ ಆತನು "ದೇವ ವಾಕ್ಯವು ನಿಮ್ಮ ಕಿವಿಗಳಲ್ಲಿ ನೆರವೇರಿದೆ" ಎಂದಿದ್ದಾನೆ. ಆದರೆ "ಮುಯ್ಯಿ ತೀರಿಸುವ ದಿನ" ಎಂಬುದನ್ನು ಬಿಟ್ಟುಬಿಟ್ಟಿದ್ದಾನೆ. ಯಾಕೆಂದರೆ, ಆಗ ಅದರ ಕಾಲವಿನ್ನೂ ಬಂದಿರಲಿಲ್ಲ (ಲೂಕ 4:19 ಮತ್ತು ಯೆಶಾಯ 61:2ರೊಡನೆ ಹೋಲಿಸಿರಿ). ಹೇಗೂ, ಈಗ ಇಕ್ಕಟ್ಟಾದ ಮಾರ್ಗವು ಅಂತ್ಯಗೊಳ್ಳುವ ಸಮಯವು ಹತ್ತಿರ ಬಂದಿರುವಾಗ, ನೀತಿವಂತಿಕೆ ಎಂಬ ಭವ್ಯವಾದ ರಾಜಮಾರ್ಗದ ಉದಯವಾಗುವ ದಿನದ ಬೆಳಕಿನಲ್ಲಿ ಹೆಚ್ಚು ಹೆಚ್ಚು ಸ್ಪಷ್ಟವಾಗಿ ಕಾಣಲು ಪ್ರಾರಂಭಿಸಿದೆ.

ಈ ರೀತಿಯಾಗಿ ನಾವು 'ಅಗಲವಾದ ಮಾರ್ಗ'ವನ್ನು ಕಂಡುಕೊಂಡಿದ್ದೇವೆ, ಅದರ ಮೇಲೆ ಪ್ರಸ್ತುತ ಮಾನವಕುಲದ ಜನಸಮೂಹವು ಈ ಲೋಕದ ಅಧಿಪತಿಯಿಂದ ಮೋಸಗೊಂಡವರಾಗಿ ಮತ್ತು ದುರ್ಮಾಗಕ್ಕೆ ಒಯ್ಯುವ ಇಚ್ಛೆಗಳಿಗೊಳಗಾಗಿ ಪ್ರಯಾಣಿಸುತ್ತಿದ್ದಾರೆ. ಅದು ತೆರೆದುಕೊಂಡಿದೆ, ಒಬ್ಬನ ಅವಿಧೇಯತೆಯ ನಿಮಿತ್ತ, ಅಗಲವಾದ ಮಾರ್ಗವು ತೆರೆಯಲ್ಪಟ್ಟಿದ್ದು, ಅದರಲ್ಲಿ ನಮ್ಮ ಜನಾಂಗವು ಅವಿವೇಕತನದ ಪಥದಲ್ಲಿ ಸಾಗಿತು ಎಂಬುದನ್ನು ನಾವು ಕಂಡುಕೊಂಡಿದ್ದೇವೆ. "ಪರಿಶುದ್ಧ ರಾಜಮಾರ್ಗ"ವು ತನ್ನನ್ನೇ ಎಲ್ಲರಿಗಾಗಿ ಈಡುಬಲಿಯಾಗಿಸಿಕೊಂಡ ಮತ್ತು ಅಗಲವಾದ ಮಾರ್ಗವು ಕೊಂಡೊಯ್ಯುವ ನಾಶನದಿಂದ ಎಲ್ಲರನ್ನೂ ವಿಮೋಚಿಸಿದ ನಮ್ಮ ಕರ್ತನಿಂದ ತೆರೆಯಲ್ಪಡಲಿದೆ ಎಂಬುದನ್ನು ನಾವು ಕಂಡುಕೊಂಡಿದ್ದೇವೆ. "ಯುಕ್ತ ಸಮಯ"ದಲ್ಲಿ ಅದು ಆತನು ತನ್ನ ಅಮೂಲ್ಯವಾದ ರಕ್ತದ ಬೆಲೆತೆತ್ತು ಕೊಂಡುಕೊಂಡ ವಿಮೋಚನೆ ಗೊಂಡವರೆಲ್ಲರಿಗೂ ಸುಲಭವಾಗಿ ಲಭ್ಯವಾಗಲಿದೆ. ಇನ್ನೂ ಮುಂದುವರೆದು ಅದೇ ಅಮೂಲ್ಯ ರಕ್ತದ ಅರ್ಹತೆಯಿಂದ ತೆರೆಯಲ್ಪಟ್ಟಿರುವ ಪ್ರಸ್ತುತವಾದ 'ಇಕ್ಕಟ್ಟಾದ ಮಾರ್ಗ'ವು ವಿಶೇಷ ಬಹುಮಾನಕ್ಕೆ ಕಾರಣವಾಗುವ ವಿಶೇಷವಾದ ಮಾರ್ಗವಾಗಿದೆ ಮತ್ತು ಅದನ್ನು ವಿಶೇಷವಾಗಿ ಇಕ್ಕಟ್ಟಾಗಿಯೂ ಮತ್ತು ಕಷ್ಟಕರವಾಗಿಯೂ ಮಾಡಲ್ಪಟ್ಟಿದೆ ಎಂಬುದನ್ನು ನಾವು ಕಂಡುಕೊಂಡಿದ್ದೇವೆ. ಅದು ಈಗ ದೈವಿಕ ಸ್ವಭಾವದಲ್ಲಿ ಪಾಲುದಾರರಾಗಲು ಮತ್ತು ಎಲ್ಲರ ಆಶೀರ್ವಾದಕ್ಕಾಗಿ ಸಧ್ಯದಲ್ಲೇ ಬಹಿರಂಗಗೊಳ್ಳುವ ಮಹಿಮಾ ರಾಜ್ಯದಲ್ಲಿ ಕರ್ತನಾದ ಯೇಸುವಿನೊಂದಿಗೆ ಜೊತೆ ಬಾಧ್ಯಸ್ಥರಾಗಲು ಆಯ್ಕೆಗೊಂಡವರಿಗೆ ಒಂದು ಕಠಿಣವಾದ ಪರೀಕ್ಷೆಯೂ, ಶಿಸ್ತೂ ಆಗಿದೆ. ಇಂಥಾಃ ನಿರೀಕ್ಷೆಯುಳ್ಳವರು ಬಹುಮಾನವನ್ನು ಕಾಣುವವರಾಗಿದ್ದು – ಇತರೆ ಎಲ್ಲಾ ನಿರೀಕ್ಷೆಗಳೂ ಅದರ ಹೋಲಿಕೆಯಲ್ಲಿ ನಷ್ಟವೂ, ಕಸವೂ ಆಗಿವೆ ಎಂದು ಪರಿಗಣಿಸಬಹುದು (ಫಿಲಿಪ್ಪಿ 3:8–15).

* * * * * * *

# ಅಧ್ಯಯನ – 12 Study XII

# ಯುಗಗಳ ಯೋಜನೆಯನ್ನು ಪ್ರತಿನಿಧಿಸುವ ನಕ್ಷೆಯ ವಿವರಣೆ

## EXPLANATION OF CHART REPRESENTING THE PLAN OF THE AGE'S

**ಯುಗಗಳು – ಸುಗ್ಗಿಗಳು – ನಿಜವಾದ ಮತ್ತು ಲೆಕ್ಕಿಸಲ್ಪಟ್ಟ ಸ್ಥಿರತೆಯ ಸಮಕ್ಷೇತ್ರಗಳು – ನಮ್ಮ ಕರ್ತನಾದ ಯೇಸುವಿನ ಓಟದ ಕ್ರಮ – ಆತನ ಅನುಯಾಯಿಗಳ ಓಟದ ಕ್ರಮ, ಹೆಸರು ಮಾತ್ರ ಸಭೆಯ ಮೂರು ವರ್ಗಗಳು – ಸುಗ್ಗಿಯಲ್ಲಿ ಪ್ರತ್ಯೇಕತೆ – ಅಭಿಷೇಕಿಸಲ್ಪಟ್ಟ ವರ್ಗವು ಮಹಿಮೆಹೊಂದಿಕೊಂಡಿದೆ – ಮಹಾಯಾತನೆಯ ವರ್ಗ – ಹಣಜಿಯನ್ನು ಸುಟ್ಟುಹಾಕಲಾಗಿದೆ – ಲೋಕವು ಆಶೀರ್ವದಿಸಲ್ಪಟ್ಟಿದೆ – ಪರಿಣಾಮ ಮಹಿಮೆಯುಳ್ಳದ್ದಾಗಿದೆ.**

ಈ ಸಂಪುಟದ ಕೊನೆಯಲ್ಲಿ ಈ ಲೋಕದ ರಕ್ಷಣೆಗಾಗಿರುವ ದೇವರ ಯೋಜನೆಯನ್ನು ಪ್ರತಿನಿಧಿಸುವ ಒಂದು ನಕ್ಷೆಯನ್ನು ಲಗತ್ತಿಸಲಾಗಿದೆ. ಅದರಿಂದ ನಾವು ಮಾನವ ಸ್ವಭಾವದಿಂದ ದೈವಿಕ ಸ್ವಭಾವಕ್ಕೆ ಸಂಪೂರ್ಣವಾದ ಬದಲಾವಣೆಯನ್ನು ಹೊಂದಿದವರಿಗೆ ದೇವರ ಯೋಜನೆಯ ಪ್ರಗತಿಪರ ಗುಣಲಕ್ಷಣಗಳ ಬಗ್ಗೆ ಮತ್ತು ಪ್ರಗತಿಪರ ಹಂತಗಳ ಬಗ್ಗೆ ಕಣ್ಣಿನ ಮೂಲಕ ಮನಸ್ಸಿಗೆ ಅರ್ಥ ಮಾಡಿಕೊಳ್ಳುವ ನೆರವು ನೀಡಬಯಸುತ್ತೇವೆ.

ಮೊದಲಿಗೆ ನಾವು ಮೂರು ಮಹಾ ಹಂಚಿಕೆಗಳ ಬಗ್ಗೆ A, B ಮತ್ತು C ಎಂಬ ಮೂರು ರೂಪರೇಖೆಗಳನ್ನು ಹೊಂದಿದ್ದೇವೆ. ಮೊದಲನೆಯದಾಗಿ 'A'ಯು ಮಾನವನ ಸೃಷ್ಟಿ ಕಾಲದಿಂದ ಜಲಪ್ರಳಯದವರೆಗೆ ಇರುವಂತಾದ್ದು, ಎರಡನೆಯದಾದ 'B' ಯು ಜಲಪ್ರಳಯದಿಂದ ಕ್ರಿಸ್ತನ ದ್ವಿತಿಯಾಗಮನ ದಲ್ಲಿನ ಸಹಸ್ರಮಾನಯುಗದ ಕ್ರಿಸ್ತನ ಆಳ್ವಿಕೆಯು ಪ್ರಾರಂಭವಾಗುವವರೆಗೆ. ಮತ್ತು 'C'ಯು ಮೂರನೆಯದು ಅಥವಾ ಕಾಲದ ಪರಿಪೂರ್ಣತೆಯ ಹಂಚಿಕೆಯ ಕಾಲವಾಗಿದ್ದು ಅದು ಮುಂಬರುವ ಕ್ರಿಸ್ತನ ಆಳ್ವಿಕೆಯ ಆರಂಭದಿಂದ ಮುಂದಣ ಯುಗಗಳವರೆಗಿನ ಬರುವ ಕಾಲವಾಗಿದೆ (ಎಫೆಸ 1:10; 2:7). ಈ ಮೂರು ಮಹಾ ಹಂಚಿಕೆಗಳನ್ನು ಸತ್ಯವೇದ ಭಾಗಗಳಲ್ಲಿ ಆಗಾಗ್ಗೆ ಉಲ್ಲೇಖಿಸಲಾಗಿದೆ. 'A' ಅನ್ನು "ಈ ಹಿಂದೆ ಇದ್ದ ಲೋಕ"ವೆಂತಲೂ; 'B' ಅನ್ನು ನಮ್ಮ ಕರ್ತನಾದ ಯೇಸುವಿನಿಂದ "ಈ ಲೋಕ"ವೆಂತಲೂ, ಪೌಲನಿಂದ "ಕೆಟ್ಟದ್ದಾಗಿರುವ ಈಗಿನ ದುಷ್ಟಯುಗ"ವೆಂತಲೂ ಮತ್ತು ಪೇತ್ರನಿಂದ "ಈಗಿರುವ ಲೋಕ"ವೆಂತಲೂ ಕರೆಯಲಾಗುತ್ತದೆ. 'C' ಅನ್ನು "ಬರಲಿರುವ ಲೋಕ, ಅದರಲ್ಲಿ ಈಗ ಇರುವ ಕೆಡುಕಿನ ಲೋಕಕ್ಕಿಂತ ಭಿನ್ನವಾಗಿ ನೀತಿವಂತಿಕೆಯು ವಾಸಿಸುತ್ತದೆ" ಎಂದು ಹೇಳಲಾಗುತ್ತದೆ. ಈಗ ಕೇಡು ಆಳುತ್ತಿದೆ, ನೀತಿವಂತರು ಕಷ್ಟವನ್ನನುಭವಿಸುತ್ತಿದ್ದಾರೆ. ಆದರೆ, ಬರಲಿರುವ ಲೋಕವು ಪ್ರಸ್ತುತ ಜಗತ್ತಿಗೆ ವ್ಯತಿರಿಕ್ತವಾಗಿ ನೀತಿವಂತಿಕೆಯು ಆಳುತ್ತದೆ ಮತ್ತು ಕೇಡು ಮಾಡುವ ದುಷ್ಟರು ತೊಂದರೆಯನ್ನು ಅನುಭವಿಸುವರು, ಅಂತಿಮವಾಗಿ ಎಲ್ಲಾ ಕೆಡುಕುತನವೂ ನಾಶವಾಗುವುದು.

ಈ ಮೂರು ಮಹಾ ಅವಧಿಗಳಲ್ಲಿ ಪ್ರತಿಯೊಂದರ "ಯುಗಗಳು" ಅಥವಾ "ಲೋಕಗಳು" ಮಾನವರ ಬಗ್ಗೆ ದೇವರ ಯೋಜನೆಗೆ ಸಂಬಂಧಿಸಿದ ವಿಭಿನ್ನ ಮತ್ತು ಪ್ರತ್ಯೇಕ ರೂಪರೇಖೆಯನ್ನು ಹೊಂದಿದೆ. ಆದಾಗ್ಯೂ, ಪ್ರತಿಯೊಂದೂ ಒಂದು ಮಹಾ ಯೋಜನೆಯ ಒಂದು ಭಾಗವಾಗಿದೆ ಮತ್ತು ಅದು ಅಂತ್ಯಗೊಳ್ಳುವಾಗ, ದೇವರ ಜ್ಞಾನವನ್ನು ಪ್ರದರ್ಶಿಸುತ್ತದೆ – ಈ ಯೋಜನೆಗಳನ್ನು ಪ್ರತ್ಯೇಕವಾಗಿ ಪರಿಗಣಿಸಿದರೂ ಅವು ಅದರ ಆಳವಾದ ವಿನ್ಯಾಸವನ್ನು ತೋರಿಸುವುದರಲ್ಲಿ ವಿಫಲವಾಗಿವೆ. "ಮೊದಲನೆಯ ಪ್ರಪಂಚ"ವು (ಪರಲೋಕ ಭೂಲೋಕಗಳು ಅಥವಾ ಅಂಥಾಃ ಕ್ರಮ ಸಂಗತಿಗಳು) ಪ್ರಳಯದ ಸಮಯದಲ್ಲಿ ಗತಿಸಿಹೋಯಿತು, ಅದು ಪ್ರಸ್ತುತ ಲೋಕಕ್ಕಿಂತ ಭಿನ್ನವಾಗಿದ್ದಿರಬಹುದೆಂಬುದನ್ನು ಗ್ರಹಿಸುವಂತಿವೆ. ಈ ಲೋಕಕ್ಕೆ ಸೈತಾನನು ಅರಸನಾಗಿದ್ದಾನೆಂದು ನಮ್ಮ ಕರ್ತನು ಹೇಳಿದ್ದಾನೆ; ಆದ್ದರಿಂದ ಈಗಿನ ದುಷ್ಟ ಪ್ರಪಂಚದ ಅರಸನು ಪ್ರಳಯಕ್ಕೆ ಮುಂಚಿನ ವಿಶ್ವದ ಅರಸನಾಗಿರುವುದಿಲ್ಲವಾದರೂ, ಅವನು ಆಗ ಪ್ರಭಾವವಿಲ್ಲದೆ ಇರಲಿಲ್ಲ. ಅನೇಕ ವೇದ ವಚನಗಳು ಆ ಸಮಯದಲ್ಲಿನ ದೇವರ ವ್ಯವಹಾರಗಳ ಬಗ್ಗೆ ಬೆಳಕನ್ನು ಚೆಲ್ಲುತ್ತವೆ, ಮತ್ತು ಈ ರೀತಿಯಲ್ಲಿ ಯೋಜನೆಯ ಒಟ್ಟಾರೆಯಾದ ಸ್ಪಷ್ಟವಾದ ಒಳನೋಟವನ್ನು ನೀಡುತ್ತದೆ. ಇವುಗಳಿಂದ ಸಲಹೆ ಮಾಡಲ್ಪಡುವ ಆಲೋಚನೆ ಏನೆಂದರೆ, 'ಮೊದಲ ಪ್ರಪಂಚ'ವು ಅಥವಾ ಪ್ರಳಯದ ಮುಂಚಿನ ಹಂಚಿಕೆಯು

ದೇವದೂತರುಗಳ ಮೇಲ್ವಿಚಾರಿಕೆ ಅಥವಾ ಅವರ ವಿಶೇಷವಾದ ಆಡಳಿತದ ಅಧೀನದಲ್ಲಿತ್ತು ಮತ್ತು ಅವರುಗಳು ಅದನ್ನು ಪತನಗೊಂಡ ಅಥವಾ ನಶಿಸಿ ಹೋಗುತ್ತಿರುವ ಜನಾಂಗವನ್ನು ಸುಧಾರಿಸಲು ಪ್ರಯತ್ನಿಸುವ ಅನುಮತಿಯಿತ್ತು. ನಿಸ್ಸಂದೇಹವಾಗಿ, ದೇವರ ಅನುಮತಿಯೊಡನೆ, ಅವರು ಅದನ್ನು ಪ್ರಯತ್ನಿಸಲು ತವಕವುಳ್ಳವರಾಗಿದ್ದರು. ಆ ಕಾರಣ ಅವರ ಆಸಕ್ತಿಯು ಈ ಲೋಕದ ಸೃಷ್ಟಿ ಕಾರ್ಯಗಳ ಬಗ್ಗೆ ಹಾಡುವುದೂ, ನಲಿಯುವದರಲ್ಲಿ ಪ್ರಕಟವಾಯಿತು (ಯೋಬ 38:7). ಆ ಮೊದಲ ಯುಗದ ವಿಫಲ ಆಡಳಿತಗಾರರು ಎಂದು ಆ ದೇವದೂತರುಗಳು ಅನುಮತಿಸಲ್ಪಟ್ಟವರಾಗಿದ್ದರು, ಆ ಕಾಲದ ಎಲ್ಲಾ ಉಲ್ಲೇಖಗಳಿಂದ ಸೂಚಿಸಲ್ಪಟ್ಟಿದೆಯಾದರೂ, ಅಲ್ಲದೇ ಇದನ್ನು ವಿವೇಚನಾಪೂರ್ವಕವಾಗಿ ಅಪೋಸ್ತಲರ ಟೀಕೆಯ ಅಭಿಪ್ರಾಯದಿಂದ, ಪ್ರಸ್ತುತ ಹಂಚಿಕೆಯು ಹಿಂದಿನದಕ್ಕಿಂತಲೂ, ಮುಂದಿನದಕ್ಕಿಂತಲೂ ವ್ಯತಿರಿಕ್ತ ವಾಗಿದೆ ಎಂದು ಸಮಂಜಸವಾಗಿ ಊಹಿಸಬಹುದಾಗಿದ್ದು ಆಗ ಆತನು "ನಾವು ಪ್ರಸ್ತಾಪಿಸುವ ಮುಂದಣ ಸಾಮ್ರಾಜ್ಯವನ್ನು ದೇವದೂತರಿಗೆ ಅಧೀನ ಮಾಡಲಿಲ್ಲವಲ್ಲಾ ?" (ಇಬ್ರಿಯ 2:5). ಇಲ್ಲ, ಈ ಲೋಕವು ಕರ್ತನಾದ ಯೇಸುವಿನ ಮತ್ತು ಆತನ ಜೊತೆಬಾಧ್ಯಸ್ಥರ ಅಧೀನದಲ್ಲಿರಬೇಕಾಗಿದೆ. ಆಗ ಅದು ಪ್ರಸ್ತುತ ಕೆಟ್ಟ ಲೋಕಕ್ಕಿಂತ ಉತ್ತಮವಾದ ನೀತಿಯುತ ಆಳ್ವಿಕೆಯನ್ನು ಪಡಕೊಳ್ಳುತ್ತದೆ. ಮಾತ್ರವಲ್ಲದೆ ಅದು ದೇವದೂತರ ಆಡಳಿತದ ಹಂಚಿಕೆಯಲ್ಲಿರುವ "ಮೊದಲ ಲೋಕ"ದಕ್ಕಿಂತ ಉತ್ತಮವಾಗಿರುತ್ತದೆ. ಸಂತತಿಯನ್ನು ಉದ್ಧರಿಸುವಲ್ಲಿ ಅವರು ಅಸಮರ್ಥ್ಯರಾದರೊ ಎಂಬ ವಾಸ್ತವಾಂಶವು ಮಾನವ ಕೆಟ್ಟತನವು ವಿಪರೀತ ವಾಗಿದ್ದರಿಂದ ದೇವರು ಕೋಪಗೊಂಡು ಆ ಲೋಕವನ್ನು ಎಂಟು ಜನರನ್ನು ಹೊರತುಪಡಿಸಿ ಪ್ರಳಯದಿಂದ ಸಂಪೂರ್ಣವಾಗಿ ನಾಶಪಡಿಸಿದನು ಎಂಬುದರಲ್ಲಿ ಪ್ರಕಟವಾಗುತ್ತದೆ (ಆದಿ. 7:'13).

"ಪ್ರಸ್ತುತ ದುಷ್ಟ ಪ್ರಪಂಚ"ದ ಸಮಯದಲ್ಲಿ, ಮಾನವನು ತನ್ನನ್ನೇ ತಾನೇ ಆಳಿಕೊಳ್ಳುವ ಪ್ರಯೋಗಕ್ಕೆ ಅನುಮತಿಸಲಾಗಿದೆ. ಆದರೆ ಪತನದ ಕಾರಣದಿಂದ ಆತನು ಇಹಲೋಕಾಧಿಪತಿಯಾದ ಸೈತಾನನ ಅಧೀನದಲ್ಲಿದ್ದಾನೆ. ಆತನ ಗುಪ್ತ ಕುತಂತ್ರಗಳು ಮತ್ತು ಒಳಸಂಚಿನ ವಿರುದ್ಧ, ಆತನು ಪ್ರಳಯದಿಂದ ಪ್ರಸ್ತುತಕಾಲದವರೆಗಿನ ದೀರ್ಘಾವಧಿಯಲ್ಲಿ ಸ್ವಯಂ ಆಡಳಿತದ ತನ್ನ ಪ್ರಯತ್ನಗಳಲ್ಲಿ ವ್ಯರ್ಥವಾಗಿ ಹೆಣಗುವನಾಗಿದ್ದಾನೆ. ಸೈತಾನನ ಅಧೀನದಲ್ಲಿ ಈ ಪ್ರಯತ್ನಿಸಿದ ಮಾನವನ ಆಡಳಿತವು ಈ ಜಗತ್ತು ಎಂದೂ ಅರಿಯದ ಮಹಾ ಸಂಕಟದ ಕಾಲದಲ್ಲಿ ಮುಕ್ತಾಯಗೊಳ್ಳಲಿದೆ. ಈ ರೀತಿಯಲ್ಲಿ ಆತನು ದೇವದೂತರುಗಳ ಅಧಿಕಾರದಲ್ಲಿ ಮಾತ್ರವಲ್ಲ, ತೃಪ್ತಿಕರ ಸ್ಥಿತಿಯನ್ನು ಪಡೆಯಲು ಮಾನವನ ಸ್ವಂತ ಪ್ರಯತ್ನದಲ್ಲಿಯೂ ತನ್ನ ನಿಷ್ಪ್ರಯೋಜಕತೆಯನ್ನು ಸಾಬೀತುಪಡಿಸುವವನಾಗಿದ್ದಾನೆ.

ಈ ಮಹಾ ಹಂಚಿಕೆಗಳಲ್ಲಿ ಎರಡನೆಯದಾದ 'B'ಯು ಮೂರು ನಿರ್ದಿಷ್ಟವಾದ ಯುಗಗಳನ್ನು ಹೊಂದಿದೆ. ಪ್ರತಿಯೊಂದೂ ಪ್ರಗತಿಪರ ಹಂತವಾಗಿ, ದೇವರ ಯೋಜನೆಯಲ್ಲಿ ಮೇಲ್ಮುಖವಾಗಿಯೂ, ಮುಂದಕ್ಕೂ ಸಾಗುವುದಾಗಿದೆ.

'D' ಯುಗವು ನಮ್ಮ ಪಿತೃಗಳಾದ ಅಬ್ರಹಾಮ, ಇಸಾಕ, ಯಾಕೋಬರೊಂದಿಗೆ ದೇವರು ವಿಶೇಷವಾಗಿ ವ್ಯವಹರಿಸಿದ ಕಾಲವಾಗಿದೆ.

'E' ಯುಗವು ಯೆಹೂದ್ಯರ ಕಾಲವಾಗಿದೆ ಅಥವಾ ಯಾಕೋಬನ ಮರಣದ ನಂತರದ ಅವಧಿಯಾಗಿದೆ. ಆ ಕಾಲದಲ್ಲಿ ಆತನ ಸಂತತಿಯವರೆಲ್ಲರನ್ನು ದೇವರು ತನ್ನ ವಿಶೇಷ ನಿಯೋಗ "ನನ್ನ ಜನರು" ಎಂಬುದಾಗಿ ಪರಿಗಣಿಸಿದನು. ಅವರುಗಳಿಗೆ ಆತನು ವಿಶೇಷ ಕೃಪೆಯನ್ನು ತೋರಿಸಿ "ಭೂಮಿಯ ಸಕಲ ಕುಲಗಳೊಳಗೆ ನಿಮ್ಮನ್ನು ಮಾತ್ರ ನನ್ನವರೆಂದು ಅರಿತುಕೊಂಡಿದ್ದೇನೆ" (ಮಹಾ ಕೃಪೆಯಿಂದ ಗ್ರಹಿಸಿಕೊಂಡಿದ್ದೇನೆ) (ಆಮೋಸ 3:2) ಎಂದಿದ್ದಾನೆ. ಇವರುಗಳು ಒಂದು ರಾಷ್ಟ್ರವಾಗಿ ಕ್ರೈಸ್ತ ಸಭೆಯ ನಮೂನೆಯೂ – ಮೀಸಲಾದ ಜನವೂ, ಸ್ವಕೀಯ ಪ್ರಜೆಯೂ ಆಗಿದ್ದಾರೆ. ಅವರಿಗೆ ಮಾಡಿದ ವಾಗ್ದಾನಗಳು ನಮಗೆ ಮಾಡಿದ 'ಉತ್ತಮ ವಾಗ್ದಾನ'ಗಳ ನಮೂನೆಯಾಗಿದೆ. ಅರಣ್ಯ ಮಾರ್ಗದ ಮೂಲಕ ವಾಗ್ದತ್ತ ದೇಶಕ್ಕೆ ಮಾಡಿದ ಅವರ ಪ್ರಯಾಣವು ನಾವು ಪಾಪವೆಂಬ ಅರಣ್ಯದ ಮೂಲಕವಾಗಿ ಪರಲೋಕದ ಕಾನಾನಿಗೆ ಮಾಡುವ ಪ್ರಯಾಣದ ಸಂಕೇತವಾಗಿದೆ. ಅವರ ಯಜ್ಞಗಳು ಅವರನ್ನು ಸಾಂಕೇತಿಕವಾಗಿ ಸಮರ್ಥಿಸಿವೆಯೇ ಹೊರತು ವಾಸ್ತವವಾಗಿ ಅಲ್ಲ. ಯಾಕೆಂದರೆ ಹೋರಿಗಳ ಮತ್ತು ಹೋತಗಳ ರಕ್ತವು ಪಾಪವನ್ನು ಎಂದಿಗೂ ನಿವಾರಿಸುವುದಿಲ್ಲ (ಇಬ್ರಿಯ 10:4). ಆದರೆ, ಸುವಾರ್ತಾ ಯುಗವಾದ 'F' ನಲ್ಲಿ ನಮಗೆ "ಉತ್ತಮವಾದ ಯಜ್ಞಗಳಿವೆ". ಅವು ಸಮಸ್ತ ಲೋಕದ ಪಾಪಗಳಿಗೆ ಪ್ರಾಯಶ್ಚಿತ್ತ ಯಜ್ಞಗಳಾಗಿವೆ. ನಮಗೆ ರಾಜವಂಶಕ್ಕೆ ಯಾಜಕತ್ವವಿದೆ. ಅದು ದೇವರಿಗೆ

ತಮ್ಮನ್ನು ಮೀಸಲಾಗಿಯೂ, ಮೆಚ್ಚಿಗೆಯಾಗಿಯೂ ಸಜೀವ ಯಜ್ಞವನ್ನಾಗಿ ಅರ್ಪಿಸುವವರೆಲ್ಲರನ್ನೊಳಗೊಂಡಿದೆ. ಅವು ಪ್ರಧಾನನೂ, ದೇವಪ್ರೇಷಿತನೂ, ಮಹಾಯಾಜಕನೂ ಆಗಿರುವ ಯೇಸು ಕ್ರಿಸ್ತನ ಮೂಲಕ ಸ್ವೀಕಾರಗೊಳ್ಳುವ ಪವಿತ್ರವಾದ ಯಜ್ಞವಾಗಿವೆ (ಇಬ್ರಿಯ 3:1). ಸುವಾರ್ತಾ ಯುಗದಲ್ಲಿ ನಾವು ಕಾಣುವ ಸತ್ಯತೆಗಳು ಯೆಹೂದ್ಯರ ಕಾಲ ಮತ್ತು ಅವರ ಸೇವೆಗಳು ಮತ್ತು ಧಾರ್ಮಿಕ ವಿಧಿಗಳು ಛಾಯೆಗಳಾಗಿದ್ದವು ಎಂದು ಕಂಡುಕೊಳ್ಳುತ್ತೇವೆ (ಇಬ್ರಿಯ 10:1)

ಸುವಾರ್ತಾ ಯುಗವಾದ 'F' ನಲ್ಲಿ ಕ್ರಿಸ್ತನ ದೇಹವನ್ನು ಲೋಕದೊಳಗಿಂದ ಕರೆಯಲ್ಪಡುವ ಅವಧಿಯಾಗಿದ್ದು, ಜೀವ ಮುಕುಟದ ನಂಬಿಕೆಯನ್ನು ತೋರ್ಪಡಿಸುವ ಮೂಲಕ, ಮತ್ತು ಅಮೂಲ್ಯವಾದ ಮತ್ತು ಉತ್ಕೃಷ್ಟವಾದ ವಾಗ್ದಾನಗಳಿಂದ (ಕರೆಗೆ ಮತ್ತು ಅದರ ಅಗತ್ಯತೆಗಳಿಗೆ ವಿಧೇಯವಾಗುವುದರಿಂದ) ಅವರುಗಳು ದೈವಿಕ ಸ್ವಭಾವದ ಪಾಲುದಾರರಾಗ ಬಹುದು. (2 ಪೇತ್ರ 1:4). ಕೆಡುಕು ಇನ್ನೂ ಕೂಡ ಲೋಕವನ್ನು ಆಳ್ವಿಕೆಮಾಡಲು ಅನುಮತಿಸಲಾಗುವುದು. ಯಾಕೆಂದರೆ ಇವುಗಳ ಸಂಪರ್ಕದಿಂದ ಅವರುಗಳು ಮಾನವ ಸ್ವಭಾವಗಳನ್ನು ಅದರ ಅನುಕೂಲ ಗಳೊಂದಿಗೆ, ಆಶೀರ್ವಾದಗಳೊಂದಿಗೆ, ಬಿಟ್ಟುಕೊಡಲು ಮನಸ್ಸುಳ್ಳವರಾಗಿದ್ದಾರೋ ಯೇಸುವಿನ ಮರಣಕ್ಕೆ ಅನುರೂಪವಾದ ಸಮರ್ಪಣೆಯನ್ನು ಮಾಡುವುದಾದರೆ, ಸಜೀವ ಯಜ್ಞವಾಗಿ, ಅವರುಗಳು ಪುನರುತ್ಥಾನದಲ್ಲಿ ಆತನ ಹೋಲಿಕೆಗೆ ಸರಿಯಾಗಿ ಇರುವಂತೆ ಎಣಿಸಲ್ಪಡುತ್ತಾರೆ (ಕೀರ್ತನೆ 17:15).

ಮೂರನೆಯ ಮಹಾ ಹಂಚಿಕೆಯು 'C' ಯಾಗಿದ್ದು ಅದು ಅನೇಕ ಯುಗಗಳಿಂದ ಸಂಯೋಜಿತವಾಗಿದೆ – "ಮುಂದಣ ಯುಗಗಳು", ಅದರಲ್ಲಿ ಮೊದಲನೆಯದು ಸಹಸ್ರಮಾನ ಯುಗ, 'G'ಯ ಕುರಿತಾಗಿ ನಮಗೆ ನಿಶ್ಚಿತವಾದ ಮಾಹಿತಿ ಇದೆ. "ಈ ಸಾವಿರ ವರ್ಷಗಳಲ್ಲಿ ಕ್ರಿಸ್ತನು ಆಳ್ವಿಕೆ ಮಾಡುತ್ತಾನೆ ಮತ್ತು ಆಗ ಲೋಕದ ಎಲ್ಲಾ ಕುಟುಂಬಗಳನ್ನೂ ಆಶೀರ್ವದಿಸುತ್ತಾನೆ, ಸಮಸ್ತವನ್ನು ಸರಿಮಾಡುವ ಆ ಕಾಲದ ವಿಷಯವಾಗಿ ದೇವರು ತನ್ನ ಪರಿಶುದ್ಧ ಪ್ರವಾದಿಗಳ ಬಾಯಿಂದ ಹೇಳಿಸಿದ್ದಾನೆ" (ಅ.ಕೃ. 3:19–21). ಆ ಯುಗದಲ್ಲಿ ಪಾಪ ಮತ್ತು ಮರಣವು ಶಾಶ್ವತವಾಗಿ ಅಳಿಸಿ ಹಾಕಲ್ಪಡುವುದು. "ತಾನು ಎಲ್ಲಾ ವಿರೋಧಿಗಳನ್ನು ತನ್ನ ಪಾದಗಳ ಕೆಳಗೆ ಹಾಕಿಕೊಳ್ಳುವ ತನಕ (ಕ್ರಿಸ್ತನು) ರಾಜ್ಯವನ್ನಾಳುವುದು ಅವಶ್ಯ. ಮರಣವು ಕಡೇ ಶತ್ರುವಾಗಿ ನಿವೃತ್ತಿ ಯಾಗುವುದು" (1 ಕೊರಿಂಥ 15 : 25–26). ಅದು ಮಹಾಪುನರ್‌ನಿರ್ಮಾಣ ಕಾಲವಾಗಿದೆ. ಕ್ರಿಸ್ತ ಯೇಸುವಿನೊಂದಿಗೆ ಆ ಆಳ್ವಿಕೆಯಲ್ಲಿ ಸೇರಿಕೊಂಡು ಆತನು ವಾಗ್ದಾನಪಡಿಸಿದಂತೆ ತನ್ನ ಮದಲಗಿತ್ತಿಯೂ. ದೇಹವೂ ಆದ ಸಭೆಗೆ – "ಆತನು ಜಯಹೊಂದಿ ತನ್ನ ತಂದೆಯೊಡನೆ ಸಿಂಹಾಸನದಲ್ಲಿ ಕೂತುಕೊಂಡನು. ಹಾಗೆಯೇ, ಜಯಹೊಂದುವವನನ್ನು ತನ್ನೊಡನೆ ಸಿಂಹಾಸನದಲ್ಲಿ ಕುಳಿತುಕೊಳ್ಳುವಂತೆ ಮಾಡುವನು" (ಪ್ರಕಟನೆ 3:21).

"ಮುಂಬರಲಿರುವ ಯುಗಗಳು" 'H' ಎಂಬುದು ಮಹಾ ಪುನರ್ನಿರ್ಮಾಣದ ಅವಧಿಯನ್ನನುಸರಿಸಿದ್ದು ಅವುಗಳು ಸರ್ವಸಂಪೂರ್ಣತೆಯ, ಆಶೀರ್ವಾದ ಭರಿತವಾದ ಮತ್ತು ಸಂತೋಷಗಳಿಂದ ಕೂಡಿದ ಕಾಲಗಳಾಗಿವೆ. ಈ ಕಾಲಗಳ ಕಾರ್ಯದ ಬಗ್ಗೆ ನಮ್ಮ ವೇದಗ್ರಂಥಗಳು ಮೌನವಾಗಿವೆ. ಈ ಅಂತರದಿಂದ ಅವುಗಳು ದೇವರ ಕೃಪೆಯ ಅಡಿಯಲ್ಲಿರುವ ಮಹಿಮೆಯ ಮತ್ತು ಆಶೀರ್ವಾದದ ಯುಗಗಳಾಗಿವೆ ಎಂದು ತಿಳಿದುಕೊಂಡರಷ್ಟೇ ಸಾಕು.

ಈ ಪ್ರತಿಯೊಂದು ಹಂಚಿಕೆಗಳಿಗೂ ಅದರ ಕಾರ್ಯದ ಅಭಿವೃದ್ಧಿಗಾಗಿ ಅದರದೇ ಆದ ನಿರ್ದಿಷ್ಟವಾದ ಕಾಲಗಳಿವೆ ಮತ್ತು ಪ್ರತಿಯೊಂದೂ ಸುಗ್ಗಿಯಲ್ಲಿ ತನ್ನ ಫಲವನ್ನು ಪ್ರಕಟಿಸುವುದರ ಮೂಲಕ ಅಂತ್ಯಗೊಳ್ಳುತ್ತದೆ. ಯೆಹೂದ್ಯ ಯುಗದ ಅಂತ್ಯದಲ್ಲಿನ ಸುಗ್ಗಿಯು ನಾಲ್ವತ್ತು ವರ್ಷಗಳ ಅವಧಿಯುಳ್ಳದ್ದು. ಅದು ಯೇಸುವು ದೇವರಾತ್ಮನಿಂದ ಪ್ರತಿಷ್ಠಿಸಲ್ಪಟ್ಟು ತನ್ನ ಸೇವೆಯನ್ನು ಪ್ರಾರಂಭಿಸಿದ ದಿನದಿಂದ ಪ್ರಾರಂಭಗೊಂಡು (ಅ.ಕೃ. 10: 37,38) ಅಂದರೆ ಕ್ರಿ.ಶ. 29 ರಿಂದ ಕ್ರಿ.ಶ. 69 ರವರೆಗೆ ಯೆರೂಸಲೇಮ್ ಹೂಡಿಕೆಯವರೆಗೆ ನಾಲ್ವತ್ತು ವರ್ಷಗಳವರೆಗೆ ಇತ್ತು. ಈ ಸುಗ್ಗಿಯಲ್ಲಿ ಯೆಹೂದ್ಯರ ಕಾಲವು ಮುಕ್ತಾಯಗೊಂಡಿತು ಮತ್ತು ಸುವಾರ್ತಾ ಯುಗವು ಪ್ರಾರಂಭವಾಯಿತು. ರೇಖಾ ಚಿತ್ರದಲ್ಲಿ ಪ್ರತಿನಿಧಿಸಿರುವಂತೆ ಈ ಹಂಚಿಕೆಗಳು ಒಂದಕ್ಕೊಂದು ಆವರಿಸಿಕೊಂಡು ಬರುತ್ತವೆ.

ಯೆಹೂದ್ಯ ಕಾಲವು ಒಂದು ಅಳತೆಯಲ್ಲಿ ಕ್ರಿಸ್ತನ ಮೂರುವರೆ ವರ್ಷಗಳ ಸೇವಾಕಾಲದ ಅಂತ್ಯದಲ್ಲಿ ಮುಕ್ತಾಯಗೊಂಡಿತು, ಕರ್ತನು ಆ ಜನಾಂಗವನ್ನು ತಿರಸ್ಕರಿಸುವವನಾಗಿ "ನಿಮ್ಮ ಆಲಯವು ಬರಿದಾಗಿ ಬಿಟ್ಟಿದೆ" (ಮತ್ತಾಯ 23:38) ಎಂದು ಹೇಳಿದನು. ನಂತರದಲ್ಲಿಯೂ ಪ್ರವಾದಿಯ ಎಪ್ಪತ್ತು ವಾರಗಳ (ವರ್ಷಗಳ) ಅವರ ಮೇಲಿನ ದಯೆಯ ಪ್ರಕಟನೆಗೆ (ದಾನಿ. 9:24–27) ಸಾಮರಸ್ಯವಾಗಿ ಅವರನ್ನು

ಸುವಾರ್ತಾಕರೆಗೆ ಸೀಮಿತಗೊಳಿಸುವುದರ ಮೂಲಕವಾಗಿ ಅವರಿಗೆ ಮೂರೂವರೆ ವರ್ಷಗಳ ಕಾಲ ದಯೆಯನ್ನು ತೋರಿಸಲಾಯಿತು. ಇದರ ಅಂತ್ಯದ ಮಧ್ಯದಲ್ಲಿ ಮೆಸ್ಸೀಯನು ಮರಣಹೊಂದುತ್ತಾನೆ, ಆದರೆ ಆತನಿಗಾಗಿ ಅಲ್ಲ, ನಮ್ಮ ಪಾಪಗಳ ನಿಮಿತ್ತವಾಗಿ. ಆ ರೀತಿಯಲ್ಲಿ ಕರ್ತನು ಯೆಹೂದ್ಯರ ಒಡಂಬಡಿಕೆಯ ದಯೆಯ ಎಪ್ಪತ್ತನೆಯ ವಾರದ ಮಧ್ಯದಲ್ಲಿ ತನ್ನನ್ನು ದೇವರಿಗೆ ಕಾಣಿಕೆಯಾಗಿ ಸಮರ್ಪಿಸಿಕೊಂಡನು. ಈ ನಿಜವಾದ ಯಜ್ಞವು ಸಮರ್ಪಣೆಗೊಂಡ ಮೇಲೆ, ಖಂಡಿತವಾಗಿ ಸಾಂಕೇತಿಕವಾದವುಗಳು ಇನ್ನು ಮುಂದೆ ಯೆಹೋವನಿಂದ ಮಾನ್ಯ ಮಾಡಲ್ಪಡಲಿಲ್ಲ.

ಆಗ ಯೆಹೂದ್ಯರ ಯುಗವು ಎಪ್ಪತ್ತನೆಯ ವಾರಾಂತ್ಯದಲ್ಲಿ. ಅಥವಾ ಶಿಲುಬೆಯ ಮೂರೂವರೆ ವರ್ಷಗಳ ನಂತರದಲ್ಲಿ ಮುಕ್ತಾಯವಾಯಿತೆಂಬ ಸಂಪೂರ್ಣವಾದ ತಿಳುವಳಿಕೆ ಇತ್ತು. – ನಂತರದಲ್ಲಿ ಕೊರ್ನೇಲ್ಯನಿಂದ ಪ್ರಾರಂಭಗೊಂಡು ಸುವಾರ್ತೆಯು ಅನ್ಯಜನರಿಗೂ ಬೋಧಿಸಲ್ಪಟ್ಟಿತು (ಅ.ಕೃ. 10:45). ಇದು ಅವರ ಬಗ್ಗೆ ಇದ್ದ ಇದು ದೇವರ ಕೃಪೆ ಮತ್ತು ಯೆಹೂದ್ಯ ಸಭೆಯ ಮಾನ್ಯತೆಯು ಯೆಹೂದ್ಯಯುಗವನ್ನು ಮುಕ್ತಾಯಗೊಳಿಸಿತು; ಅವರ ರಾಷ್ಟ್ರೀಯ ಅಸ್ತಿತ್ವವು ಮುಂದೊದಗಿದ ಅವರ ಮಹಾ ಸಂಕಟದ ಸಮಯದಲ್ಲಿ ಕೊನೆಗೊಂಡಿತು.

ಯೆಹೂದ್ಯ ಸುಗ್ಗಿಯ ಆ ಅವಧಿಯಲ್ಲಿ ಸುವಾರ್ತಾ ಯುಗವು ಪ್ರಾರಂಭಗೊಂಡಿತು. ಈ ಯುಗದ ವಿನ್ಯಾಸವು ಏನೆಂದರೆ, 'ದೇವರ ಕ್ರಿಸ್ತ'ನ, ಶಿರಸ್ಸು ಮತ್ತು ದೇಹದ ಕರೆ, ಅಭಿವೃದ್ಧಿ ಮತ್ತು ಪರೀಕ್ಷೆಯಾಗಿತ್ತು. ಇದು ಆತ್ಮನ ಹಂಚಿಕೆಯಾಗಿದೆ. ಆದುದರಿಂದ ಸುವಾರ್ತಾ ಯುಗವು ಯೇಸುಕ್ರಿಸ್ತನನ್ನು ಆತನ ಸ್ನಾನದೀಕ್ಷೆಯ ಸಮಯದಲ್ಲಿ, ಪವಿತ್ರಾತ್ಮದಿಂದಲೂ, ಬಲದಿಂದಲೂ ಅಭಿಷೇಕಿಸಿ ದಂದಿನಿಂದ ಪ್ರಾರಂಭಗೊಂಡಿತೆಂದು ಹೇಳುವುದು ಸೂಕ್ತವಾಗಿದೆ (ಅ.ಕೃ. 10:38; ಲೂಕ 3:22; 4:41,18). ಆತನ ದೇಹವಾದ ಸಭೆಗೆ, ಸಂಬಂಧಪಟ್ಟಂತೆ ಅದು ಮೂರೂವರೆ ವರ್ಷಗಳ ನಂತರ ಪ್ರಾರಂಭಗೊಂಡಿತು.

'ಸುಗ್ಗಿಯು' ಸುವಾರ್ತಾ ಯುಗದ ಮುಕ್ತಾಯದ ಅವಧಿಯೂ ಆಗಿದೆ, ಅಲ್ಲಿಯೂ ಕೂಡ ಪುನಃ ಎರಡು ಯುಗಗಳ ಪರಸ್ಪರ ಆವರಿಸುವಿಕೆಯು ಕಂಡುಬರುತ್ತದೆ – ಸುವಾರ್ತಾ ಯುಗದ ಮುಕ್ತಾಯ ಮತ್ತು ಪುನರ್‌ವಶ ಅಥವಾ ಸಹಸ್ರಮಾನ ಯುಗದ ಪ್ರಾರಂಭ. ಸುವಾರ್ತಾ ಯುಗವು ಹಂತ ಹಂತವಾಗಿ ಕೊನೆಗೊಳ್ಳುತ್ತದೆ. ಯೆಹೂದ್ಯ ಯುಗದಲ್ಲಿ ಕಂಡುಬಂದ ಮಾದರಿಯಂತೆ ಅಥವಾ "ಛಾಯೆ"ಯಂತೆ ಇರುವುದು. ಸುಗ್ಗಿಯ ಕಾಲದ ಮೊದಲ ಏಳು ವರ್ಷಗಳು ವಿಶೇಷವಾದ ರೀತಿಯಲ್ಲಿ ಶಾರೀರಿಕ ಇಸ್ರಾಯೇಲ್ಯರಲ್ಲಿ ಮತ್ತು ಅವರಿಗಾಗಿ ಇರುವ ಕಾರ್ಯಕ್ಕೆ ನಿವೇದಿಸಲ್ಪಟ್ಟಂತೆ, ಮತ್ತು ಅವು ಕೃಪಾಕಾಲದ ವರ್ಷಗಳಾಗಿರುವಂತೆ, ಇಲ್ಲಿಯೂ ನಾವು ಅದೇ ರೀತಿಯ ಏಳು ವರ್ಷಗಳು ಸುವಾರ್ತಾ ಸಭೆಯ ಮೇಲೆ ಅದೇ ರೀತಿಯ ವರ್ತನೆಯನ್ನು ಕಾಣಬಹುದಾಗಿದೆ ಹಾಗೂ ಲೋಕದ ಮೇಲೆ ಅವರ ದುಷ್ಟತನದ ನಿಮಿತ್ತವಾಗಿ ಶಿಕ್ಷಿಸುವ 'ಸಂಕಟದ ಕಾಲ' (ಬೆಂಕಿ) ಅದನ್ನು ಅನುಸರಿಸುವವರನ್ನು ಹಾಗೂ ಅದು ನೀತಿವಂತಿಕೆ ಆಳ್ವಿಕೆಗಾಗಿರುವ ಇನ್ನೂ ಹೆಚ್ಚಿನ ಸಿದ್ಧತೆಯೂ ಆಗಿದೆ.

## ಮಹಿಮೆಯ ಹಾದಿ

## The Path to glory

K, L, M, N, P, R, ಇವು ಪ್ರತಿಯೊಂದೂ ವಿವಿಧ ಸಮಕ್ಷೇತ್ರವನ್ನು ಪ್ರತಿನಿಧಿಸುತ್ತದೆ. 'N'ಎಂಬುದು ಪರಿಪೂರ್ಣ ಮಾನವ ಸ್ವಭಾವದ ಸಮತಲವಾಗಿದೆ. ಆದಾಮನು ಪಾಪ ಮಾಡುವ ಮೊದಲು ಈ ಸಮಕ್ಷೇತ್ರದಲ್ಲಿದ್ದನು; ಆದರೆ ಅವಿಧೇಯತೆಯ ಕ್ಷಣದಿಂದ ಆತನು ನೀತಿಭ್ರಷ್ಟತೆಯ ಇಲ್ಲವೇ ಪಾಪಭರಿತ ಸಮಕ್ಷೇತ್ರವಾದ 'R' ಕ್ಕೆ ಬಿದ್ದುಹೋದನು ಮತ್ತು ಆತನ ಪೀಳಿಗೆಯವರೆಲ್ಲಾ ಅದರಲ್ಲಿಯೇ ಜನಿಸಿದರು. ಇದು 'ಅಗಲವಾದ ಮಾರ್ಗ'ಕ್ಕೆ ಅನುಗುಣವಾಗಿದ್ದು ನಾಶನಕ್ಕೆ ನಡೆಸುವುದಾಗಿದೆ. 'P' ಎಂಬುದು ಸಾಂಕೇತಿಕ ನೀತಿನಿರ್ಣಯವನ್ನು ಪ್ರತಿನಿಧಿಸುತ್ತದೆ. ಧರ್ಮಶಾಸ್ತ್ರ ಯಜ್ಞಗಳ ಪರಿಣಾಮವೆಂದು ಎಣಿಸಲಾಗಿದೆ. ಅದು ನಿಜವಾದ ನೀತಿನಿರ್ಣಯವಲ್ಲ. ಯಾಕೆಂದರೆ "ಧರ್ಮಶಾಸ್ತ್ರವು ಯಾವುದನ್ನೂ ಸಿದ್ಧಿಗೆ ತರಲಾರದು" (ಇಬ್ರಿಯ 7:19).

'N' ಎಂಬುದು ಒಮ್ಮೆ ಪರಿಪೂರ್ಣ ಮಾನವ, ಆದಾಮನು ಹೊಂದಿದ್ದ ಪರಿಪೂರ್ಣ ಮಾನವ ಸಮಕ್ಷೇತ್ರವನ್ನು ಪ್ರತಿನಿಧಿಸುವುದು ಮಾತ್ರವಲ್ಲ, ಅದು ಎಲ್ಲಾ ನೀತಿನಿರ್ಣಯ ಹೊಂದಿದ ವ್ಯಕ್ತಿಗಳ ಸ್ಥಿರತೆಯಾಗಿದೆ. ವೇದವು ಹೇಳುವ ಪ್ರಕಾರ "ಕ್ರಿಸ್ತನು ನಮ್ಮ ಪಾಪಗಳ ನಿಮಿತ್ತ ಮರಣಹೊಂದಿದನು". ಇದರ ಪರಿಣಾಮವಾಗಿ ಎಲ್ಲಾ ವಿಶ್ವಾಸಿಗಳೂ – ಆತನ ಪರಿಪೂರ್ಣವಾದ ಮತ್ತು ಸಂಪೂರ್ಣಗೊಂಡ ಕಾರ್ಯದ ನಿಮಿತ್ತ ಆತನನ್ನು ನೀತಿನಿರ್ಣಯಕಾರನೆಂದು ಅಂಗೀಕರಿಸಿದವರೆಲ್ಲರೂ, ನಂಬಿಕೆಯ ಮೂಲಕ ದೇವರಿಂದ ನೀತಿನಿರ್ಣಯ ಹೊಂದಿದವರೆಂದು, ಸರ್ವಸಂಪೂರ್ಣರೋ ಎಂಬಂತೆ, ಅವರು ಎಂದೂ

ಪಾಪಿಗಳಾಗಿರಲಿಲ್ಲವೇನೋ ಎಂಬಂತೆ ಎಣಿಸಲ್ಪಟ್ಟರು. ಹಾಗಿದ್ದರೆ, ದೇವರ ದೃಷ್ಟಿಯಲ್ಲಿ, ಯಾರು ಕ್ರಿಸ್ತನನ್ನು ತಮ್ಮ ವಿಮೋಚಕನೆಂದು ಅಂಗೀಕರಿಸಿರುವರೋ ಅವರೆಲ್ಲರೂ ಮಾನವ ಪರಿಪೂರ್ಣತೆಯ ಸಮಕ್ಷೇತ್ರದಲ್ಲಿ ಅಂದರೆ 'N'ನಲ್ಲಿ ಇರುವರು ಎಂಬಂತೆ ಎಣಿಸಲ್ಪಡುವರು. ಇದೊಂದು ದೃಷ್ಟಿಕೋನದಿಂದ ಮಾತ್ರವೇ ಇದರ ಮೂಲಕವಾಗಿ ಮಾನವನು ದೇವರನ್ನು ಸಮೀಪಿಸಬಹುದು, ಅಥವಾ ಆತನೊಂದಿಗೆ ಯಾವುದೇ ಸಾಮರಸ್ಯವನ್ನು ಹೊಂದಿಕೊಳ್ಳಬಹುದಾಗಿದೆ. ಈ ಸಮಕ್ಷೇತ್ರದಲ್ಲಿರುವವರೆಲ್ಲರನ್ನೂ ದೇವರು ಪುತ್ರರೆಂದು ಕರೆಯುತ್ತಾನೆ – ಮನುಷ್ಯ ಪುತ್ರರು. ಹೀಗಾಗಿ ಆದಾಮನು "ದೇವರ ಮಗನು" (ಲೂಕ 3:38) ಮತ್ತು ಆತನು ಅವಿಧೇಯನಾಗುವ ಮೊದಲು ದೇವರ ಸಂಪರ್ಕ ದಲ್ಲಿದ್ದನು. ನಮ್ಮ ಕರ್ತನು ಮಾಡಿ ಮುಗಿಸಿದ 'ಈಡುಬಲಿ'ಯ ಕಾರ್ಯವನ್ನು ಒಪ್ಪುವವರೆಲ್ಲರೂ ಮೂಲರೂಪದ ಪರಿಶುದ್ಧತೆಯನ್ನು ಪುನರ್‌ವಶಪಡಿಸಿ ಕೊಂಡವರೆಂದು ಎಣಿಸಲಾಗುವುದು. ಮತ್ತು ಇದರ ಪರಿಣಾಮವಾಗಿ ಅವರಿಗೆ ದೇವರ ಸಾಂಗತ್ಯ ಅಥವಾ ಸಂಪರ್ಕವು ದೊರೆಯುವುದು.

ಸುವಾರ್ತಾ ಯುಗದಲ್ಲಿ ದೇವರು ನೀತಿನಿರ್ಣಯ ಹೊಂದಿದ ಮಾನವನಿಗೆ, ವಿಶೇಷವಾದ ಕೊಡುಗೆಗಳನ್ನು ನೀಡುವವನಾಗಿದ್ದಾನೆ. ಅವರುಗಳು ಕೆಲವೊಂದು ಷರತ್ತುಗಳ ಮೇರೆಗೆ ಸ್ವರೂಪದ ಬದಲಾವಣೆಯನ್ನು ಅನುಭವಿಸಬಹುದು, ಅವರು ಐಹಿಕ ಮನುಷ್ಯರಾಗಿರು ವುದನ್ನು ಸ್ಥಗಿತಗೊಳಿಸಬಹುದು ಮತ್ತು, ಅವರ ವಿಮೋಚಕನಾದ ಕ್ರಿಸ್ತನಂತೆ ಪರಲೋಕದ ಜೀವಿಗಳಾಗಬಹುದು. ಕೆಲವು ನಂಬಿಗಸ್ಥರು – ನೀತಿನಿರ್ಣಯ ಹೊಂದಿದ ವ್ಯಕ್ತಿಗಳು – ತಮ್ಮ ಪಾಪಗಳ ಕ್ಷಮಾಪಣೆಯಲ್ಲಿ ನಂಬಿಕೆ ಇಡುವುದರ ಮೂಲಕ ಹೊಂದಿರುವ ಸಂತೋಷ ಸಮಾಧಾನಗಳಿಗಷ್ಟೇ ತೃಪ್ತರಾಗುತ್ತಾರೆ. ಹೀಗಾಗಿ ಅವರುಗಳನ್ನು ಮೇಲಕ್ಕೆ ಬನ್ನಿರಿ ಎಂಬ ಕರೆಯ ಮಾತಿಗೆ ಗಮನಕೊಡದೇ ಹೋಗುತ್ತಾರೆ. ಇತರೆ ಕೆಲವರು ಈಡುಬಲಿಯ ವಿಮೋಚನಾ ಮೌಲ್ಯದಲ್ಲಿ ತೋರಿಸಲ್ಪಟ್ಟಿರುವ ದೇವರ ಪ್ರೀತಿಯಿಂದ ಪ್ರೇರಿತರಾಗಿ, ತಾವುಗಳು ತಮ್ಮ ಸ್ವಂತದವರಲ್ಲವೆಂದು, ಕ್ರಯಕ್ಕೆ ಕೊಳ್ಳಲ್ಪಟ್ಟವರೆಂದು ಭಾವಿಸುವವರಾಗಿ "ಕರ್ತನೇ, ನಾನು ಏನು ಮಾಡಬೇಕೆಂದು ಬಯಸುತ್ತೀ?" ಎಂದು ಹೇಳುತ್ತಾರೆ. ಅಂಥವರಿಗೆ ಪೌಲನ ಮೂಲಕ ದೊರೆಯುವ ಉತ್ತರವೇನೆಂದರೆ – "ಸಹೋದರರೇ, ದೇವರ ಕನಿಕರವನ್ನು ನಿಮ್ಮ ನೆನಪಿಗೆ ತಂದು ನಿಮ್ಮನ್ನು ಬೇಡಿಕೊಳ್ಳುವುದೇನೆಂದರೆ, ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಗೆಯಾಗಿಯೂ ಇರುವ ಸಜೀವಯಜ್ಞವಾಗಿ ಅರ್ಪಿಸಿರಿ; ಇದೇ ನಿಮ್ಮ ವಿವೇಕಪೂರ್ವಕವಾದ ಆರಾಧನೆಯು" (ರೋಮಾ. 12:1) ಎಂಬುದೇ. ನಮ್ಮನ್ನು ಸಜೀವ ಯಜ್ಞವಾಗಿ ಅರ್ಪಿಸಬೇಕೆಂದು ಅಪೋಸ್ತಲನು ಹೇಳುವುದರ ಅರ್ಥವೇನು? ಆತನ ಅರ್ಥವೇನೆಂದರೆ ನಾವು ಹೊಂದಿರುವ ನಮ್ಮ ಎಲ್ಲಾ ಬಲ ಮತ್ತು ತಲಾಂತುಗಳನ್ನು ದೇವರ ಸೇವೆಗೆ ಪ್ರತಿಷ್ಠೆಪಡಿಸಿಕೊಳ್ಳಬೇಕು. ಇನ್ನು ಮುಂದೆ ನಾವು ನಮಗಾಗಿ, ನಮ್ಮ ಸ್ನೇಹಿತರಿಗಾಗಿ, ನಮ್ಮ ಕುಟುಂಬಕ್ಕಾಗಿ. ಅಥವಾ ಈ ಲೋಕಕ್ಕಾಗಿ, ಬೇರೆ ಯಾವುದಕ್ಕಾಗಲೀ ಜೀವಿಸುವವರಾಗಿರದೆ, ನಮ್ಮನ್ನು ತನ್ನ ಸ್ವಂತ ರಕ್ತದಿಂದ ಕೊಂಡುಕೊಂಡವನಿಗಾಗಿ ಮಾತ್ರವೇ ವಿಧೇಯತೆಯ ಸೇವೆ ಸಲ್ಲಿಸುತ್ತಾ ಜೀವಿಸುವವರಾಗಬೇಕು.

ದೇವರು ದೋಷಪೂರಿತ ಅಥವಾ ಅಸಂಪೂರ್ಣ ವಾದ ಸಾಂಕೇತಿಕ ಯಜ್ಞಗಳನ್ನು ಸ್ವೀಕರಿಸದವನಾದ ಕಾರಣ, ನಾವೆಲ್ಲರೂ ಆದಾಮನ ಮೂಲಕ ಪಾಪಿಗಳಾಗಿರುವುದರಿಂದ, ನಾವು ಸ್ವೀಕಾರಾರ್ಹ ತ್ಯಾಗಿಗಳಾಗಬಹುದೋ? ನಾವು ಪವಿತ್ರರಾಗಿ ರುವುದರಿಂದ ಮಾತ್ರವೇ ಅಂಗೀಕಾರ್ಹ ಸಜೀವಯಜ್ಞ ವಾಗಿದ್ದೇವೆಂದು ಪೌಲನು ತೋರಿಸಿಕೊಡುತ್ತಾನೆ. ನಾವು ಪಾಪವನ್ನರಿಯದ ಯೇಸುವಿನಂತೆ ಪವಿತ್ರರಲ್ಲ, ಯಾಕೆಂದರೆ, ನಾವು ಖಂಡನೆಗೊಳಗಾದ ಜನಾಂಗದವರಾಗಿದ್ದೇವೆ. ಅಥವಾ ನಡವಳಿಕೆಯನ್ನು ಪರಿಪೂರ್ಣತೆಗೆ ತಲುಪಲು ಇನ್ನೂ ಸಮಗ್ರವಾಗಿ ಯಶಸ್ವಿಗೊಂಡಿಲ್ಲ. ಹೀಗಾಗಿ ನಾವು ಕರೆಯಲ್ಪಡುವ ಪರಿಪೂರ್ಣತೆಯನ್ನು ಸಾಧಿಸಲಾಗದವರು ಎಂದು ಎಣಿಸಲ್ಪಟ್ಟಿದ್ದೇವೆ. ಆದರೆ ನಮಗೆ ಈ ನಿಕ್ಷೇಪವು ಮಣ್ಣಿನ ಘಟಗಳಲ್ಲಿ ಉಂಟು (ದುರ್ಬಲವಾದದ್ದು, ಸೋರಿಹೋಗುವಂಥದ್ದು). ನಮ್ಮ ಅಂತಿಮ ಪರಿಪೂರ್ಣತೆಯ ಮಹಿಮೆಯುನ್ನು ದೇವರ ಅನುಗ್ರಹವೆಂದು ನೋಡಬಹುದೇ ಹೊರತು ಅದು ನಮ್ಮ ಸ್ವಂತ ಸಾಮರ್ಥ್ಯದಿಂದಲ್ಲ. ಆದರೆ ನಮ್ಮ ಪವಿತ್ರತೆಯು, ದೇವರಿಗೆ ನಮ್ಮ ಸಮರ್ಪಣೆಯಂತೆ ಅಂಗೀಕಾರ್ಹತೆಯು ನಮ್ಮ ಪರವಾಗಿ ಕ್ರಿಸ್ತನು ಮಾಡಿದ ತ್ಯಾಗಬಲಿದಾನದಲ್ಲಿ ನಂಬಿಕೆಯಿಡುವ ಮೂಲಕ ದೇವರು ನಮ್ಮನ್ನು ಎಲ್ಲಾ ಪಾಪಗಳಿಂದ ಮುಕ್ತಗೊಳಿಸಿ ನೀತಿವಂತನೆಂದು ನಿರ್ಣಯಿಸುವದರಿಂದ ದೊರೆಯುವುದಾಗಿದೆ.

ಈ ಕರೆಯನ್ನು ಎಷ್ಟು ಮಂದಿ ಮೆಚ್ಚಿಕೊಂಡು ಅದಕ್ಕೆ ವಿಧೇಯರಾಗುತ್ತಾರೋ ಅವರೆಲ್ಲರೂ ಕ್ರಿಸ್ತನ ನಾಮದ ನಿಮಿತ್ತವಾಗಿ ಉಂಟಾಗುವ ನಿಂದನೆಗಳನ್ನೂ, ಶ್ರಮೆಯನ್ನೂ ಅನುಭವಿಸುವಲ್ಲಿ ಸಂತೋಷಿಸಲು ಅರ್ಹರೆಂದು ಎಣಿಸಲ್ಪಡುತ್ತಾರೆ ಮತ್ತು ಕಾಣುವ ಸಂಗತಿಗಳಲ್ಲಿ ಅಲ್ಲ, ಕಾಣದಿರುವ ಸಂಗತಿಗಳಲ್ಲಿ – "ಜೀವದ ಕಿರೀಟದಲ್ಲಿ (ಜೀವವೆಂಬ ಜಯಮಾಲೆ), 'ಕ್ರಿಸ್ತನ ಮೂಲಕವಾಗಿ ನಮ್ಮ ಮುಂದೆ ಇಟ್ಟಿರುವ ಬಿರುದನ್ನು ಗುರಿಮಾಡಿಕೊಂಡು ಓಡುತ್ತಾ' ಮತ್ತು 'ಮುಂದಿನ ಕಾಲದಲ್ಲಿ ಪ್ರತ್ಯಕ್ಷವಾಗುವ ಮಹಿಮಾ ಪದವಿಯಲ್ಲ' ಹೆಚ್ಚಳಪಡುತ್ತಾರೆ. ಇವುಗಳು, ಕ್ರಿಸ್ತನಿಗೆ ಪ್ರತಿಷ್ಠೆಪಡಿಸಿಕೊಂಡ ಕ್ಷಣದಿಂದಲೂ ಮಾನವರೆಂದು ಎಣಿಸಲ್ಪಡುವುದಿಲ್ಲ. ಆದರೆ ಸತ್ಯದ ವಾಕ್ಯದ ಮೂಲಕ ದೇವರಿಂದ ಹುಟ್ಟಿದವರು ಎಂದೂ – ಇನ್ನು ಅವರು ಮಾನವರಲ್ಲ, ಇನ್ನು ಮುಂದೆ ಆತ್ಮೀಕ ಮಕ್ಕಳು ಎಂದು ಎಣಿಸಲ್ಪಡುತ್ತಾರೆ. ಅವರು ಮೊದಲು ನಂಬಿದಕ್ಕಿಂತ ಈಗ ಬಹುಮಾನಕ್ಕೆ ಒಂದು ಹೆಜ್ಜೆ ಹತ್ತಿರವಾಗಿದ್ದಾರೆ. ಆದರೆ ಅವರ ಆತ್ಮೀಕ ಅಸ್ತಿತ್ವ ಇನ್ನೂ ಅಪರಿಪೂರ್ಣವಾಗಿದೆ. ಅವರು ಕೇವಲ ಪಡೆಯಲ್ಪಟ್ಟವರು ಮಾತ್ರವೇ. ಆದರೆ ಆತ್ಮನಿಂದ ಇನ್ನೂ ಹುಟ್ಟಿದವರಲ್ಲ. ಅವರು 'M' ಸಮತಲದಲ್ಲಿ ಆತ್ಮೀಕ ಭ್ರೂಣದಂತಿದ್ದಾರೆ. ಆ ಸಮತಲವು ಆತ್ಮೀಕ ಪಡಕೊಳ್ಳುವಿಕೆಯದ್ದಾಗಿದೆ. ಆತ್ಮನಿಂದ ಪಡಕೊಂಡವರಾದ ಕಾರಣ ಅವರನ್ನು ಇನ್ನು ಮುಂದೆ ಮಾನವರೆಂದು ಎಣಿಸದೆ, ಆತ್ಮೀಕರೆಂದು ಎಣಿಸಲಾಗುವುದು. ಯಾಕೆಂದರೆ, ಮಾನವ ಸ್ವಭಾವವು ಒಮ್ಮೆ ಅವರದ್ದಾಗಿತ್ತು, ಒಮ್ಮೆ ನೀತಿನಿರ್ಣಯ ಹೊಂದಿಕೊಂಡು, ಈಗ ಅವರು ಅದನ್ನು ಬಿಟ್ಟುಕೊಟ್ಟಿದ್ದಾರೆ, (ಮಾನವ ಸ್ವಭಾವವನ್ನು) ಸತ್ತದ್ದೆಂದು ಎಣಿಸಿದ್ದಾರೆ – ಅದು ಜೀವಂತ ತ್ಯಾಗವೂ, ಪವಿತ್ರವೂ, ದೇವರಿಗೆ ಸ್ವೀಕಾರಾರ್ಹವಾದುದೂ ಆಗಿದ್ದು ಅದು ದೇವರಿಂದ ಅಂಗೀಕರಿಸಲ್ಪಟ್ಟಿದೆ. ಅವರೀಗ ಕ್ರಿಸ್ತ ಯೇಸುವಿನಲ್ಲಿ ನೂತನ ಜೀವಿಗಳಾಗಿದ್ದಾರೆ: ಪೂರ್ವ ಸ್ಥಿತಿ ಹೋಗಿ (ಮಾನವ ನಿರೀಕ್ಷೆಗಳು, ಚಿತ್ತ ಮತ್ತು ಆಕಾಂಕ್ಷೆಗಳು) ಎಲ್ಲವೂ ನೂತನವಾಗಿದೆ; ಯಾಕೆಂದರೆ "ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು. ಇಗೋ ಪೂರ್ವ ಸ್ಥಿತಿ ಹೋಗಿ ಎಲ್ಲವೂ ನೂತನವಾಯಿತು" (2 ಕೊರಿಂಥ 5:17, ರೋಮಾ. 8:9). "ನಿಮ್ಮಲ್ಲಿ ದೇವರಾತ್ಮನು ವಾಸವಾಗಿರುವುದಾದರೆ ಶರೀರ ಭಾವಾಧೀನರಲ್ಲ, ದೇವರಾತ್ಮರಿಗೆ ಅಧೀನ ರಾಗಿದ್ದೀರಿ". ನೀವು ಆತ್ಮನಿಂದ ಹುಟ್ಟಿದವರಾಗಿದ್ದರೆ, ನೀವು ಸತ್ತವರಾಗಿದ್ದೀರಿ ಮತ್ತು ನಿಮ್ಮ ಜೀವವು ಕ್ರಿಸ್ತನೊಂದಿಗೆ ದೇವರಲ್ಲಿ ಅಡಗಿಸಲ್ಪಟ್ಟಿದೆ.

'L' ಎಂಬ ಸಮತಲವು ಪರಿಪೂರ್ಣವಾದ ಆತ್ಮೀಕ ಜೀವಿಗಳ ಸ್ಥಿತಿಯನ್ನು ಪ್ರತಿನಿಧಿಸುತ್ತದೆ. ಅದರೆ 'L' ಸಮತಲವನ್ನು ತಲುಪುವ ಮೊದಲು ನಮ್ಮ ಒಡಂಬಡಿಕೆಯ ಷರತ್ತುಗಳನ್ನು ಪಾಲಿಸಬೇಕಾಗುತ್ತದೆ. ದೇವರೊಂದಿಗಿನ ಒಡಂಬಡಿಕೆಯ ಒಂದು ಸಂಗತಿ ಏನೆಂದರೆ, ನಾವು ಎಲ್ಲಾ ಮಾನವ ಸಂಬಂಧಿತ ವಸ್ತು ವಿಷಯಗಳಿಗೆ ಸಾಯುವವರಾಗುತ್ತೇವೆ ಎಂದು ಮತ್ತು ನಮ್ಮ ಈ ಭೂಲೋಕದ ಜೀವನ ಯಾತ್ರೆಯಲ್ಲೆಲ್ಲಾ ನಿರ್ವಹಿಸಬೇಕದ ಮುಂದಿನ ಸಂಗತಿಯೆಂದರೆ ದೇಹವನ್ನು ಲೋಕದ ಪಾಲಿಗೆ ಸಾಯಿಸುವುದು, ಸ್ವಾಧೀನಪಡಿಸಿಕೊಳ್ಳುವುದು ಹಾಗೂ ನಮ್ಮ ಸ್ವಂತ ಚಿತ್ತವನ್ನು ದೃಷ್ಟಿ ನೋಟಕ್ಕೆ ದೂರಮಾಡುವುದು, ಮತ್ತು ದೇವರ ಚಿತ್ತವನ್ನು ಮಾತ್ರವೇ ನೆರವೇರಿಸುವುದು. 'L' ಸಮತಲದ ಪ್ರವೇಶವನ್ನು "ಹುಟ್ಟುವಿಕೆ" ಎಂದು ಕರೆಯುತ್ತಾರೆ ಅಥವಾ ಇದು ಆತ್ಮೀಕ ಜೀವಿತಕ್ಕೆ ಪೂರ್ಣವಾಗಿ ಪ್ರವೇಶ ಮಾಡುವುದಾಗಿದೆ. ಸುಗ್ಗಿಯಲ್ಲಿ ಅಥವಾ ಸುವಾರ್ತಾಯುಗದ ಅಂತ್ಯದಲ್ಲಿ ಸಭೆಯನ್ನು ಈ ಲೋಕದಿಂದ ಆಯ್ಕೆಮಾಡಿ ಒಟ್ಟುಗೂಡಿಸುವಾಗ ಆ ಸಮಸ್ತ ಸಭೆಯು ಈ ಸಮತಲವನ್ನು ಪ್ರವೇಶಿಸುತ್ತದೆ. "ಆಗ ಕ್ರಿಸ್ತನಲ್ಲಿರುವ ಸತ್ತವರು ಮೊದಲು ಎದ್ದು ಬರುವರು. ಆಮೇಲೆ ಜೀವದಿಂದುಳಿದಿರುವ ನಾವು ಅಂತರಿಕ್ಷದಲ್ಲಿ ಕರ್ತನನ್ನು ಎದುರುಗೊಳ್ಳುವುದಕ್ಕಾಗಿ ಅವರ ಸಂಗಡಲೇ ಮೇಘವಾಹನರಾಗಿ ಫಕ್ಕನೇ ಒಯ್ಯಲ್ಪಡುವೆವು" (1 ಥೆಸ. 4:16–17). ನಮ್ಮ ದೇಹಗಳು ಕ್ರಿಸ್ತನೊಂದಿಗೆ ಸರ್ವಸಂಪೂರ್ಣವಾದ ದೇಹಗಳಾಗಿ ಮಾರ್ಪಡುವವು (ಈ ಮರ್ತ್ಯವಾದ ದೇಹವು ಅಮರ್ತ್ಯ ದೇಹವನ್ನು ಧರಿಸಿಕೊಳ್ಳುವುದು). ಆಗ ಸರ್ವಸಂಪೂರ್ಣವಾದದ್ದು ಬರುವಾಗ ನಾವು ಈಗಿರುವ ಮಾಂಸಿಕ ಶರೀರದ ವಿವಿಧ ಅಡಚಣೆಗಳಿಗೆ ಅಧೀನವಾಗಿರುವ ಸ್ಥಿತಿಯು ಹೊರಟು ಹೋಗುತ್ತದೆ.

ಆದರೆ, ಆತ್ಮೀಕ ಜೀವಿಗಳಾಗಿ ಪರಿಪೂರ್ಣ ರಾಗಿರುವುದನ್ನು ಮೀರಿದ ಮುಂದಿನ ಹೆಜ್ಜೆಯೊಂದನ್ನು ತೆಗೆದುಕೊಳ್ಳಬೇಕಾಗಿದೆ. ಅದೇನೆಂದರೆ, "ಅವುಗಳ ತರುವಾಯ ಉಂಟಾಗುವ ಪ್ರಭಾವ" – 'K' ಸಮತಲಕ್ಕೆ. ನಾವಿಲ್ಲಿ ಒಬ್ಬ ವ್ಯಕ್ತಿಯ ಮಹಿಮೆಯನ್ನು ಸೂಚಿಸುತ್ತಿಲ್ಲ, ಅಧಿಕಾರದ ಮಹಿಮೆ ಅಥವಾ ಕಾರ್ಯಭಾರಿ. 'L' ಸಮತಲವನ್ನು ತಲುಪುವುದು ಪೂರ್ಣವಾದ ವೈಯುಕ್ತಿಕ ಮಹಿಮೆಯನ್ನು ತರುತ್ತದೆ. ಅದೇನೆಂದರೆ, ಕ್ರಿಸ್ತನಂತೆ ಮಹಿಮಾ ಜೀವಿಯಾಗಿರುವುದು. ನಾವು ಈ ರೀತಿಯಲ್ಲಿ ಪರಿಪೂರ್ಣರಾದ ಮೇಲೆ ಮತ್ತು ಸಂಪೂರ್ಣವಾಗಿ ನಮ್ಮ ಕರ್ತನಂತೆ, ನಮ್ಮ ಶಿರಸ್ಸಿನಂತೆ

ಆದ ಮೇಲೆ ನಾವು ಆತನೊಂದಿಗೆ ಅಧಿಕಾರ ಮತ್ತು ಕಾರ್ಯಭಾರಿಯ ಸ್ಥಾನದ ಮಹಿಮೆಯಲ್ಲಿ ಸಂಯೋಗ ಹೊಂದಬೇಕು – ಆತನೊಂದಿಗೆ ಸಿಂಹಾಸದಲ್ಲಿ ಕೂತುಕೊಳ್ಳುವವ ರಾಗಬೇಕು. ಆತನು ಸಹಾ ತನ್ನ ಪುನರುತ್ಥಾನದಲ್ಲಿ ಪರಿಪೂರ್ಣಗೊಂಡ ಮೇಲೆ ದೇವರ ಬಲಪಾರ್ಶ್ವಕ್ಕೆ ಏರಿಸಲ್ಪಟ್ಟನು. ಈ ರೀತಿಯಲ್ಲಿ ನಾವು ಸಹಾ ಶಾಶ್ವತವಾದ ಮಹಿಮೆಗೆ ಅಂದರೆ 'K' ಸಮತಲಕ್ಕೆ ಪ್ರವೇಶಿಸುತ್ತೇವೆ.

ನಾವೀಗ ನಕ್ಷೆಯನ್ನು ಜಾಗರೂಕತೆಯಿಂದ ಅಧ್ಯಯನ ಮಾಡೋಣ ಮತ್ತು ದೇವರ ಯೋಜನೆಯ ವಿವಿಧ ವೈಶಿಷ್ಟ್ಯಗಳ ವಿವರಣೆಗಳನ್ನು ಗಮನಿಸೋಣ. ಈ ವಿವರಣೆಗಳಲ್ಲಿ ನಾವು ಪರಿಪೂರ್ಣತೆಯನ್ನು ಪ್ರತಿನಿಧಿಸಲು ಪಿರಮಿಡ್ಡಿನ ಚಿತ್ರವನ್ನು ಉಪಯೋಗಿಸುತ್ತೇವೆ. ಏಕೆಂದರೆ ಅದರ ಯುಕ್ತತೆಯ ಸೂಕ್ತತೆ ಕಾರಣ ಮತ್ತು ವೇದಗ್ರಂಥದಲ್ಲಿ ಅದರ ಬಗ್ಗೆ ಸ್ಪಷ್ಟ ಆಧಾರವಾದ ಉಲ್ಲೇಖವಿದೆ.

ಆದಾಮನು ಒಬ್ಬ ಪರಿಪೂರ್ಣ ವ್ಯಕ್ತಿಯಾಗಿದ್ದನು – ಪಿರಮಿಡ್ 'a'. ಅದರ ಸ್ಥಾನವನ್ನು ಗಮನಿಸಿರಿ– ಸಮತಲ 'N'ನ ಮೇಲೆ. ಇದು ಮಾನವ ಪರಿಪೂರ್ಣತೆಯನ್ನು ಪ್ರತಿನಿಧಿಸುತ್ತದೆ. 'R' ಸಮತಲದ ಮೇಲೆ ಪಾಪದ ಮತ್ತು ಅಸಂಪೂರ್ಣತೆಯು ಇದ್ದು ಅದು ನೀತಿಭ್ರಷ್ಟವಾದ ಸಮತಲವಾಗಿದೆ - ತುದಿ ಅಥವಾ ಮೇಲ್ಭಾಗವಿಲ್ಲದ ಪಿರಮಿಡ್ 'b' ಆಗಿದೆ. ಇದೊಂದು ಅಸಂಪೂರ್ಣ ಚಿತ್ರವಾಗಿದೆ, ಪತನ ಹೊಂದಿದ ಆದಾಮನನ್ನು ಆತನ ನೀತಿಭ್ರಷ್ಟವಾದ, ಪಾಪ ಮಯವಾದ ಮತ್ತು ದಂಡಿಸಲ್ಪಟ್ಟ ಪೀಳಿಗೆಯವರನ್ನು ಪ್ರತಿನಿಧಿಸುತ್ತದೆ.

ಆ ದಿನಮಾನಗಳಲ್ಲಿ ಅಬ್ರಹಾಮ ಮತ್ತಿತರರು ಅವರ ನಂಬಿಕೆಯ ನಿಮಿತ್ತ ದೇವರ ಅನ್ಯೋನ್ಯತೆಗೆ ನೀತಿನಿರ್ಣಯ ಹೊಂದಿದರು ಮತ್ತು ಇವರುಗಳು ಸಮತಲ 'N'ನಲ್ಲಿ ಪಿರಮಿಡ್ (c) ಯನ್ನು ಪ್ರತಿನಿಧಿಸುತ್ತಾರೆ. ಅಬ್ರಹಾಮನು ನೀತಿಭ್ರಷ್ಟ ಮಾನವ ಕುಟುಂಬದ ಸದಸ್ಯನಾಗಿದ್ದನು. ಮತ್ತು ಸ್ವಭಾವತಃ 'R' ಸಮತಲದಲ್ಲಿರುವ ಉಳಿದವರಿಗೆ ಸೇರಿದವನಾಗಿದ್ದನು. ಆದರೆ, ಪೌಲನು ಹೇಳುವಂತೆ ಅಬ್ರಹಾಮನು ನಂಬಿಕೆಯ ಮೂಲಕ ನೀತಿವಂತನೆಂದು ನಿರ್ಣಯಿಸಲ್ಪಟ್ಟನು; ಅಂದರೆ, ಆತನು ಆ ನಂಬಿಕೆಯ ನಿಮಿತ್ತ ಪಾಪರಹಿತನು ಮತ್ತು ಪರಿಪೂರ್ಣನಾದ ಮನುಷ್ಯನೆಂದು ದೇವರಿಂದ ಎಣಿಸಲ್ಪಟ್ಟನು. ಇದು ದೇವರ ಅಂದಾಜಿನ ಪ್ರಕಾರ ಅತನು ನೀತಿಭ್ರಷ್ಟ ಪಾಪಿ ಮಾನವರಿಂದ ಮೇಲಕ್ಕೆ – 'N' ಸಮತಲಕ್ಕೆ ಎತ್ತಲ್ಪಟ್ಟನು. ಇನ್ನೂ ಅಸಂಪೂರ್ಣನಾದರೂ, ಆತನು ಆದಾಮನು ಕಳಕೊಂಡಿರುವ ದಯೆಯನ್ನು ಅಂದರೆ ಒಬ್ಬ "ಸ್ನೇಹಿತ"ನಂತೆ ದೇವರೊಂದಿಗಿನ ಸಾಂಗತ್ಯವನ್ನು ಹೊಂದಿಕೊಂಡನು (ಯಾಕೋಬ 2:23). ಪರಿಪೂರ್ಣ (ಪಾಪರಹಿತ) ಸಮತಲವಾದ 'N' ಮೇಲೆ ಇರುವವರೆಲ್ಲರೂ ದೇವರ ಸ್ನೇಹಿತರು, ಮತ್ತು ಆತನು ಅವರ ಸ್ನೇಹಿತನು; ಆದರೆ ಪಾಪಿಗಳು (ಸಮತಲ 'R' ನಲ್ಲಿರುವವರು) ದೇವರ ಶತ್ರುತ್ವದಲ್ಲಿರುವವರು – "ಅವರ ದುಷ್ಟ ಕಾರ್ಯಗಳ ಮೂಲಕ ಶತ್ರುಗಳಾಗಿದ್ದಾರೆ". ಪ್ರಳಯದ ನಂತರ ಮನುಕುಲದ ಜಗತ್ತು, ಚಿತ್ರ 'd' ಇಂದ ಪ್ರತಿನಿಧಿಸಲ್ಪಟ್ಟಿದ್ದು ಇನ್ನೂ 'R' ಸಮತಲದಲ್ಲಿಯೇ – ಶತ್ರುತ್ವದಲ್ಲಿಯೇ ಇತ್ತು. ಅಲ್ಲಿಯೇ ಅದು ಸುವಾರ್ತಾಸಭೆಯು ಆಯ್ಕೆಗೊಳ್ಳುವವರೆಗೂ ಮತ್ತು ಸಹಸ್ರಮಾನ ಯುಗವು ಪ್ರಾರಂಭವಾಗುವವರೆಗೂ ಮುಂದುವರೆಯುತ್ತದೆ.

ಯೆಹೂದ್ಯ ಯುಗದಲ್ಲಿ ಶಾರೀರಿಕ ಇಸ್ರಾಯೇಲ್ಯರು, ಹೋರಿ ಮತ್ತು ಹೋತಗಳ ಯಜ್ಞವು ಅವರನ್ನು ಶುದ್ಧಿಪಡಿಸುವಾಗ [ನಿಜವಾಗಿಯೂ ಅಲ್ಲ, ಆದರೆ ಸಾಂಕೇತಿಕವಾಗಿ – ಧರ್ಮಶಾಸ್ತ್ರವು ಯಾವುದನ್ನೂ ಸಿದ್ಧಿಗೆ ತರದೇ ಇರುವುದರಿಂದ (ಇಬ್ರಿಯ 7:19)] ಸಾಂಕೇತಿಕವಾಗಿ ನೀತಿನಿರ್ಣಯ ಹೊಂದಿದರು. ಆದುದರಿಂದ, ಅವರುಗಳು 'P' ಸಮತಲದ (e)ಯಲ್ಲಿಯೇ ಇದ್ದರು ಮತ್ತು ಆ ಸಮತಲವು ಸಾಂಕೇತಿಕ ನೀತಿನಿರ್ಣಯವಾಗಿದೆ, ಅದು ಸಿನಾಯ್ ಪರ್ವತದಲ್ಲಿ ಧರ್ಮಶಾಸ್ತ್ರವು ಕೊಡಲ್ಪಡುವುದರಿಂದ, ಹಿಡಿದು ಯೇಸು ಧರ್ಮಶಾಸ್ತ್ರವನ್ನು ಮುಗಿಸುವವರೆಗೆ, ಅದನ್ನು ತನ್ನ ಕ್ರೂಜೆಯಲ್ಲಿ ಜಡಿಯುವವರೆಗೂ ಇತ್ತು. ಆಲ್ಲಿಗೆ ಸಾಂಕೇತಿಕ ನೀತಿನಿರ್ಣಯವು ಯೆಹೂದಿ ಸಂಕೇತಗಳಿಗಿಂತ ಉತ್ತಮ ಯಜ್ಞಗಳ ಸ್ಥಾಪನೆಯ ಮೂಲಕ ಮುಕ್ತಾಯಗೊಂಡಿತು, ಅವುಗಳು ನಿಜವಾಗಿಯೂ ಈ ಲೋಕದ ಪಾಪವನ್ನು ಹೊತ್ತುಕೊಂಡು ಹೋಗುವವುಗಳಾಗಿದ್ದವು. ಮತ್ತು ದೇವರ ಸಮೀಪಕ್ಕೆ ಬರುವವರನ್ನು (ನಿಜವಾಗಿಯೂ) ಸಿದ್ಧಿಗೆ ತರುವುದಾಗಿತ್ತು (ಇಬ್ರಿಯ 10:1).

ಯೇಸು ಉಪಸ್ಥಿತನಾಗಿದ್ದಾಗ ಶಾರೀರಿಕ ಇಸ್ರಾಯೇಲ್ಯರು ಪರೀಕ್ಷೆ ಮತ್ತು ಸಂಕಷ್ಟಗಳೆಂಬ ಬೆಂಕಿಯ ಮೂಲಕ ಹಾದುಹೋದರು. ಅದು ಅವರನ್ನು ಪರಿಶೋಧಿಸಿ ಅವರ ಹೆಸರುಮಾತ್ರದ ಸಭೆಯಿಂದ – "ನಿಜವಾಗಿಯೂ ಇಸ್ರಾಯೇಲ್ಯರಾದ" ಗೋಧಿಯನ್ನು ವಿಶೇಷವಾಗಿ ಪ್ರತ್ಯೇಕಗೊಳಿಸಿದ ನಂತರ, ಆತನು

ಹೊಟ್ಟನ್ನು (ಆ ವ್ಯವಸ್ಥೆಯ ತಿರಸ್ಕೃತ ಭಾಗವನ್ನು) ಆರದ ಬೆಂಕಿಯಲ್ಲಿ ಹಾಕಿ ಸುಟ್ಟುಬಿಟ್ಟದ್ದನ್ನು ಚಿತ್ರ 'f' ರಲ್ಲಿ ವಿವರಿಸಲಾಗಿದೆ. ಅದು ಸಂಕಟದ ಸಮಯವಾಗಿದ್ದು ಅದನ್ನು ತಡೆಯುವ ಶಕ್ತಿ ಅವರಲ್ಲಿರಲಿಲ್ಲ (ಲೂಕ 3:17, 21, 22: 1 ಥೆಸ. 2:16 ನೋಡಿರಿ).

ಯೇಸು ತನ್ನ ಮೂವತ್ತನೆಯ ವಯಸ್ಸಿನಲ್ಲಿ, ಒಬ್ಬ ಪರಿಪೂರ್ಣನಾದ, ಪರಿಪಕ್ವತೆ ಹೊಂದಿದ ಮನುಷ್ಯನಾಗಿದ್ದನು (g). ಆತ್ಮೀಕ ಸ್ಥಿತಿಯನ್ನು ತನ್ನ ಮಹಿಮೆಯನ್ನು ಬಿಟ್ಟುಕೊಟ್ಟು ಎಲ್ಲಾ ಮಾನವರ ಸಲುವಾಗಿ (ದೇವರ ಅನುಗ್ರಹದಿಂದ) ಮರಣವನ್ನು ಅನುಭವಿಸುವುದಕ್ಕಾಗಿ ಮನುಷ್ಯನಾದನು. "ಕಣ್ಣಿಗೆ ಕಣ್ಣು" "ಹಲ್ಲಿಗೆ ಹಲ್ಲು;; "ಜೀವಕ್ಕೆ ಜೀವ" ಎಂಬದು ದೇವರ ನಿಯಮದ ಸಮಗ್ರ ನ್ಯಾಯವಾಗಿದೆ. ಹೀಗಾಗಿ ಒಬ್ಬ ಪರಿಪೂರ್ಣ ವ್ಯಕ್ತಿ ಮಾನವ ಕುಲಕ್ಕಾಗಿ ಮರಣಹೊಂದುವ ಅಗತ್ಯತೆ ಉಂಟಾಯಿತು. ಯಾಕೆಂದರೆ ನ್ಯಾಯದ ಹಕ್ಕೇಳಿಕೆಗಳನ್ನು ಬೇರೆ ರೀತಿಯಲ್ಲಿ ಭರಿಸಲಾಗುತ್ತಿದ್ದಿಲ್ಲ. ಹೋರಿ ಹೋತಗಳು ಎಂದೂ ಮಾನವರ ಪಾಪವನ್ನು ತೆಗೆದು ಹಾಕಲಾಗುತ್ತಿದ್ದಿಲ್ಲ, ಅಂತೆಯೇ ಒಬ್ಬ ದೇವದೂತನ ಮರಣವು ಈ ದಂಡನೆಯನ್ನು ಒಪ್ಪಿಸಲಾಗುತ್ತಿದ್ದಿಲ್ಲ ಮತ್ತು ಮಾನವನನ್ನು ಬಿಡಿಸಲಾಗುತ್ತಿದ್ದಿಲ್ಲ, ಆದುದರಿಂದ, ದೇವರ ಸೃಷ್ಟಿಯ ಮೂಲನು ಆಗಿರುವಾತನು ಈಡುಬಲಿಯನ್ನು (ಅನುಗುಣವಾದ ಕ್ರಯವನ್ನು) ನೀಡುವಂತೆ ಮಾನವನಾದನು, ಮಾಂಸಧಾರಿಯಾದನು. ಅದು ಮಾನವ ಜಾತಿಯನ್ನು ಪಾಪದಿಂದ ವಿಮೋಚನೆ ಗೊಳಿಸಿತು. ಆತನು ಪರಿಪೂರ್ಣನಾದ ವ್ಯಕ್ತಿಯೇ ಆಗಬೇಕಾಗಿತ್ತು, ಇಲ್ಲವಾದಲ್ಲಿ, ಈ ಕ್ರಯವನ್ನು ನೀಡುವಲ್ಲಿ ಆತನು ಪತನಗೊಂಡ ಬೇರೆ ಯಾವ ವ್ಯಕ್ತಿಗಿಂತಲೂ ಹೆಚ್ಚಿನದ್ದೇನನ್ನೂ ಮಾಡಲಾಗುತ್ತಿದ್ದಿಲ್ಲ. ಆತನು 'ಪವಿತ್ರನೂ' 'ನಿರುಪದ್ರವಿ'ಯೂ, 'ನಿಷ್ಕಳಂಕನೂ' ಆಗಿದ್ದು ಪಾಪಿಷ್ಟರಿಂದ ಪ್ರತ್ಯೇಕವಾಗಿದ್ದವನು. ಆದರೂ ಆತನು ಪಾಪಿಗಳ ಅದೇ ಹೋಲಿಕೆಯನ್ನು ಅದರ ಸ್ವರೂಪವನ್ನು ತೆಗೆದುಕೊಂಡನು. – ಪಾಪಾಧೀನನಾದ ನರಭಾವದಲ್ಲಿ – ಮನುಷ್ಯನ ಹೋಲಿಕೆಯಲ್ಲಿ. ಆದರೆ, ಆತನು ಆ ಸ್ವರೂಪವನ್ನು ಪರಿಪೂರ್ಣತೆಯಿಂದ ತೆಗೆದುಕೊಂಡನು; ಆತನು ಅವರ ಪಾಪದಲ್ಲಿ ಪಾಲ್ಗೊಳ್ಳಲಿಲ್ಲ ಅಥವಾ ಅದರ ಅಪರಿಪೂರ್ಣತೆಯನ್ನು ಹಂಚಿಕೊಳ್ಳಲಿಲ್ಲ. ಕೇವಲ ಆತನು ತನ್ನ ಸೇವಾಕಾಲದಲ್ಲಿ ಸ್ವಯಂಪ್ರೇರಣೆಯಿಂದ ಕೆಲವರ ದುಃಖ ಮತ್ತು ನೋವುಗಳಲ್ಲಿ ಪಾಲ್ಗೊಂಡನು. ಅವರ ನೋವು ಮತ್ತು ದುರ್ಬಲತೆಗಳನ್ನು ತನ್ನ ಮೇಲೆ ತೆಗೆದುಕೊಂಡು ಬದಲಾಗಿ ಅವರಿಗೆ ತನ್ನ ಚೈತನ್ಯ, ಆರೋಗ್ಯ ಮತ್ತು ಶಕ್ತಿಯನ್ನು ನೀಡಿದನು. "ನಿಜವಾಗಿಯೂ ನಮ್ಮ ಸಂಕಷ್ಟಗಳನ್ನು ಆತನು ಅನುಭವಿಸಿದನು, ಅವನು ಹೊತ್ತ ಹೊರೆಯು ನಮ್ಮ ಸಂಕಟವೇ" (ಯೆಶಾಯ 53:4) ಎಂದೂ "ಆತನಿಂದ ಶಕ್ತಿ ಹೊರಟು ಎಲ್ಲರನ್ನೂ ಗುಣಪಡಿಸಿತು" ಎಂದು ಬರೆದದೆ (ಮಾರ್ಕ 5:30; ಲೂಕ 6:19 ಮತ್ತು ಮತ್ತಾಯ 8:16–17 ನೋಡಿರಿ).

ಆತನು ಆಕಾರದಲ್ಲಿ ಪರಿಪೂರ್ಣ ಮನುಷ್ಯನಾಗಿ ಕಾಣಿಸಿಕೊಂಡನು, ಆತನು ತನ್ನನ್ನು ತಗ್ಗಿಸಿಕೊಂಡು, ಮರಣವನ್ನು ಹೊಂದುವಷ್ಟು ವಿಧೇಯನಾದನು. ಆತನು "ಇಗೋ, ನಿನ್ನ ಚಿತ್ತವನ್ನು ನೆರವೇರಿಸುವುದಕ್ಕೆ ಬಂದಿದ್ದೇನೆ" (ಇಬ್ರಿಯ 10:7) (ಗ್ರಂಥದ ಸುರುಳಿಯಲ್ಲಿ ನನ್ನನ್ನು ಕುರಿತು ಬರೆದದೆ) – ಮತ್ತು ಈ ಪ್ರತಿಷ್ಠೆಯನ್ನು ನೀರಿನಲ್ಲಿ ಸ್ನಾನದೀಕ್ಷೆ ತೆಗೆದುಕೊಳ್ಳುವುದರ ಮೂಲಕ ಸಾಂಕೇತಿಸಿದನು. ಆತನು ತನ್ನನ್ನು ಈ ರೀತಿಯಾಗಿ ಪ್ರಸ್ತುತಿಪಡಿಸಿಕೊಂಡಾಗ, ಆತನ ಅಸ್ತಿತ್ವವೇ ಪ್ರತಿಷ್ಠೆಗೊಂಡು ಪವಿತ್ರ(ಶುದ್ಧ)ವಾಗಿತ್ತು ಮತ್ತು ದೇವರಿಗೆ ಸ್ವೀಕಾರಾರ್ಹವಾಗಿತ್ತು, ಮತ್ತು ಪವಿತ್ರಾತ್ಮವು ಆತನ ಮೇಲೆ ಬಂದು ಹೀಗೆ ಆತನನ್ನು ಅಭಿಷೇಕಿಸುವಾಗ ಆತನನ್ನು ತನ್ನಾತ್ಮದಿಂದ ಮತ್ತು ಶಕ್ತಿಯಿಂದ ತುಂಬಿಸುವ ಮೂಲಕ ದೇವರು ತನ್ನ ಅಂಗೀಕಾರವನ್ನು ತೋರಿಸಿದನು.

ಆತ್ಮನಿಂದ ತುಂಬಿಕೊಳ್ಳುವುದೆಂದರೆ ನೂತನ ಸ್ವಭಾವವನ್ನು – ದೈವಿಕ ಸ್ವಭಾವವನ್ನು ಪಡಕೊಳ್ಳುವುದಾಗಿದೆ. ಇದು ಪೂರ್ಣವಾಗಿ ಅಭಿವೃದ್ಧಿ ಹೊಂದಬೇಕು ಅಥವಾ ಆತನು ಸಮರ್ಪಣೆಯನ್ನು ಮಾನವ ಸ್ವಭಾವದ ಸಮರ್ಪಣೆಯನ್ನು ಪೂರ್ಣವಾಗಿ ನೆರವೇರಿಸಿದಾಗ ಹುಟ್ಟಬೇಕು. ಈ ಹುಟ್ಟುವಿಕೆಯು 'M' ಸಮತಲದಲ್ಲಿನ ಪಿರಮಿಡ್ 'h'ನಲ್ಲಿ ತೋರಿಸಿದಂತೆ ಮಾನವ ಸ್ಥಿತಿಗಿಂತ ಒಂದು ಹಂತ ಹೆಚ್ಚಿನದಾಗಿದೆ. 'M' ಸಮತಲದಲ್ಲಿ ಯೇಸುವು ತನ್ನ ಜೀವಿತದ ಮೂರೂವರೆ ವರ್ಷಗಳವರೆಗೆ ಅಂದರೆ ಆತನ ಮಾನವ ಅಸ್ಥಿತ್ವವು ಶಿಲುಬೆಯಲ್ಲಿ ಕೊನೆಗಾಣುವವರೆಗೆ ಕಳೆದನು. ನಂತರ ಆತನು ಮರಣ ಹೊಂದಿದ ಮೂರನೆಯ ದಿನದಲ್ಲಿ ಸತ್ತವರೊಳಗಿಂದ ಜೀವಿತನಾಗಿ ಪರಿಪೂರ್ಣ ಆತ್ಮಿಕ ವ್ಯಕ್ತಿಯಾಗಿ ಆತ್ಮನಿಂದ ಹುಟ್ಟಿದವನಾಗಿ ಎದ್ದು ಬಂದನು, ('L' ಸಮತಲ 'i' ನಲ್ಲಿ ತೋರಿಸಲಾಗಿದೆ). "ಸತ್ತವರೊಳಗಿಂದ ಮೊದಲು ಹುಟ್ಟಿದವನು". "ಆತ್ಮನಿಂದ ಹುಟ್ಟಿದ್ದು ಆತ್ಮವೇ" (ಯೋಹಾನ 3:6). ಆದುದರಿಂದ ಯೇಸು ಪುನರುತ್ಥಾನಹೊಂದಿದ ಮೇಲೆ

ಆತ್ಮೀಕ ಜೀವಿಯಾಗಿದ್ದನು. ಯಾವ ಅರ್ಥದಲ್ಲಿಯೂ ಮಾನವನಾಗಿರಲಿಲ್ಲ.

ನಿಜವಾಗಿ, ಆತನ ಪುನರುತ್ಥಾನದ ನಂತರ ಆತನಿಗೆ ಕಾಣಿಸಿಕೊಳ್ಳುವ ಶಕ್ತಿ ಇತ್ತು ಮತ್ತು ತನ್ನ ಶಿಷ್ಯರಿಗೆ ತಾನು ಇನ್ನು ಮುಂದೆ ಸತ್ತವನಲ್ಲ ಎಂದು ರುಜುವಾತುಪಡಿಸಲು ಆತನು ಅವರಿಗೆ ಒಬ್ಬ ಮನುಷ್ಯನಂತೆ ಕಾಣಿಸಿಕೊಂಡನು. ಆದರೆ ಆತನು ಮಾನವನಾಗಿರಲಿಲ್ಲ, ಇನ್ನು ಮುಂದೆ ಮಾನವ ಪರಿಸ್ಥಿತಿಯಿಂದ ನಿಯಂತ್ರಣಗೊಳ್ಳುವವನಾಗಿರಲಿಲ್ಲ. ಆತನು ಗಾಳಿಯಂತೆ ಹೋಗುವವನೂ, ಬರುವವನೂ ಆಗಿದ್ದನು (ಬಾಗಿಲು ಮುಚ್ಚಿದ್ದರೂ ಸಹಾ) ಆತನು ಯಾವಾಗ ಬರುತ್ತಾನೆ ಎಲ್ಲಿಗೆ ಹೋಗುತ್ತಾನೆಂದು ಯಾರಿಗೂ ಹೇಳಲಾಗಲಿಲ್ಲ. "ಆತ್ಮನಿಂದ ಹುಟ್ಟಿದ ಪ್ರತಿಯೊಬ್ಬರೂ ಅದರಂತೆಯೇ" (ಯೋಹಾನ 3:8, ಇದನ್ನು 20:19,26ರೊಂದಿಗೆ ಹೋಲಿಸಿರಿ).

ಆತನು ದೀಕ್ಷಾಸ್ನಾನದ ಸಮಯದಲ್ಲಿ, ತನ್ನನ್ನು ಬಲಿದಾನಕ್ಕಾಗಿ ಪ್ರತಿಷ್ಠಿಸಿಕೊಂಡ ಕ್ಷಣದಿಂದ, ಆತನ ಮಾನವ ಸ್ವಭಾವವು ಸತ್ತದೆಂದು ಪರಿಗಣಿಸಲ್ಪಟ್ಟಿತು – ಮತ್ತು ನೂತನ ಸ್ವಭಾವದ ಪ್ರಾರಂಭವು ಎಣಿಕೆಯಾಯಿತು ಮತ್ತು ಅದು ಪುನರುತ್ಥಾನದಲ್ಲಿ ಆತನ ಪರಿಪೂರ್ಣತೆ (ಸೂಚಿಸುವ) ಸಮತಲವಾದ 'L' ನ್ನು ತಲುಪಿದಾಗ ಸಂಪೂರ್ಣಗೊಂಡಿತು. – ಆತನು ಆತ್ಮಿಕ ದೇಹದವನಾಗಿ ಎದ್ದು ಬಂದನು.

ಪುನರುತ್ಥಾನ ಹೊಂದಿದ ನಾಲ್ವತ್ತು ದಿವಸಗಳ ನಂತರ, ಯೇಸುವು ಪ್ರಭಾವಕ್ಕೆ ಏರಿಸಲ್ಪಟ್ಟನು – ಮೇಲಿರುವ ದೈವಿಕ ಸಮತಲ 'K'ಗೆ (ಪಿರಮಿಡ್ 'k'). ಸುವಾರ್ತಾ ಯುಗದಲ್ಲಿ ಆತನು ಮಹಿಮೆಯಲ್ಲಿದ್ದಾನೆ ('l')' ತನ್ನ ತಂದೆಯೊಡನೆ ಆತನ ಸಿಂಹಾಸನದಲ್ಲಿ ಕುಳಿತುಕೊಂಡಿದ್ದಾನೆ ಮತ್ತು ಭೂಲೋಕದಲ್ಲಿರುವ ತನ್ನಸಭೆಯ ಶಿರಸ್ಸಾಗಿದ್ದಾನೆ – ಅದರ ನಿರ್ದೇಶಕನೂ, ಮಾರ್ಗದರ್ಶಿಯೂ ಆಗಿದ್ದಾನೆ. ಈ ಸಮಗ್ರ ಸುವಾರ್ತಾ ಯುಗದಲ್ಲಿ ಸಭೆಯು ಅಭಿವೃದ್ಧಿಯ, ಶಿಸ್ತಿನ ಮತ್ತು ಪರೀಕ್ಷೆಯ ಪ್ರಕ್ರಿಯೆಯಲ್ಲಿದ್ದು, ಅಂತ್ಯದಲ್ಲಿ ಅಥವಾ ಯುಗದ ಸುಗ್ಗಿಯಲ್ಲಿ ಆಕೆಯು ಆತನ ಮದಲಗಿತ್ತಿ ಮತ್ತು ಜೊತೆ ಬಾಧ್ಯಸ್ಥೆಯಾಗಬಹುದು ಎಂಬ ಆಶಯದಲ್ಲಿದೆ. ಆದುದರಿಂದ ಆಕೆಯೂ ಸಹ ಆತನೊಂದಿಗೆ ಸೂಕ್ತ ಸಮಯ ಬರುವಾಗ ಮಹಿಮೆ ಹೊಂದಿಕೊಳ್ಳುವಂತೆ ಆತನ ಬಾಧೆಗಳಲ್ಲಿ ಆತನೊಂದಿಗೆ ಪಾಲುದಾರಳಾಗಿದ್ದಾಳೆ (ಸಮತಲ 'K').

ಮಹಿಮೆಗಾಗಿ ಸಭೆಯ ಹೆಜ್ಜೆಗಳು ಆಕೆಯ ನಾಯಕನೂ ಮತ್ತು ಕರ್ತನೂ ಆಗಿರುವಾತನ ಹೆಜ್ಜೆಗಳಂತೆಯೇ ಇವೆ. ಯಾಕೆಂದರೆ ನಾವುಗಳು ಆತನ ಹೆಜ್ಜೆಜಾಡಿನಲ್ಲಿ ನಡೆಯಬೇಕೆಂಬ ಮಾದರಿಯನ್ನು ಆತನು ನಮಗೆ ತೋರಿಸಿಕೊಟ್ಟಿದ್ದಾನೆ. – ಸಭೆಯು ಕೆಳಗಣ ಸಮತಲದಿಂದ ಪ್ರಾರಂಭಿಸಬೇಕೆಂಬುದನ್ನು ಹೊರತುಪಡಿಸಿ. ನಾವು ನೋಡಿದಂತೆ, ನಮ್ಮ ಕರ್ತನು ಲೋಕಕ್ಕೆ ಮಾನವ ಪರಿಪೂರ್ಣತೆಯ ಸಮತಲದ 'N'ರ ಮೇಲೆ ಬಂದನು. ಆದರೆ, ಆದಾಮನ ಸಂತಾನದವರಾದ ನಾವೆಲ್ಲರೂ ಕೆಳಗಣ ಸಮತಲವಾದ 'R' ರಿಂದ ಬಂದವರು. – ಅದು ಪಾಪದ, ಅಸಮರ್ಪಕತೆಯ ಮತ್ತು ದೇವರ ವಿರುದ್ಧ ಶತ್ರುತ್ವವುಳ್ಳ ಸಮತಲವಾಗಿದೆ. ಆದುದರಿಂದ, ನಮಗೆ ಅಗತ್ಯವಾದ ಮೊದಲನೆಯ ಸಂಗತಿಯನ್ನು ಅಂದರೆ ಸಮತಲ 'N'ಗೆ ತಲುಪಲು ನೀತಿನಿರ್ಣಯ ಹೊಂದಬೇಕು. ಇದನ್ನು ನೆರವೇರಿಸುವುದು ಹೇಗೆ? ಅದು ಒಳ್ಳೆಯ ಕ್ರಿಯೆಗಳಿಂದಲೋ? ಇಲ್ಲ; ಪಾಪಿಗಳು ಒಳ್ಳೆಯ ಕ್ರಿಯೆಗಳನ್ನು ಮಾಡಲಾರರು. ನಮ್ಮನ್ನು ನಾವೇ ದೇವರ ಮೆಚ್ಚುಗೆಗೆ ಒಪ್ಪಿಸಲಾರೆವು. ಆದ್ದರಿಂದ "ನಾವು ಪಾಪಿಗಳಾಗಿದ್ದಾಗ್ಯೂ ಕ್ರಿಸ್ತನು ನಮಗೋಸ್ಕರ ಪ್ರಾಣ ಕೊಟ್ಟದ್ದರಲ್ಲಿ ದೇವರು ನಮ್ಮ ಮೇಲೆ ಇರುವ ಪ್ರೀತಿಯನ್ನು ಸಿದ್ಧಾಂತಪಡಿಸಿದ್ದಾನೆ" (ರೋಮಾ. 5:8). ಅನಂತರ, ನಾವು ನೀತಿನಿರ್ಣಯ ಹೊಂದಿದವರ ಅಥವಾ ಪರಿಪೂರ್ಣ ಮಾನವ ಸಮತಲಕ್ಕೆ ಬರುವ ಪರಿಸ್ಥಿತಿಯೆಂದರೆ ಕ್ರಿಸ್ತನು ನಮ್ಮ ಪಾಪದ ನಿಮಿತ್ತ ಮರಣಪಟ್ಟನು, ನಮ್ಮನ್ನು ವಿಮೋಚಿಸಿದನು ಮತ್ತು ಆತನ ರಕ್ತದ ಮೇಲಣ ನಂಬಿಕೆಯ ಮೂಲಕ ಪರಿಪೂರ್ಣತೆಯ ಸಮತಲಕ್ಕೆ ಆದಾಮನಲ್ಲಿದ್ದ ನಮ್ಮನ್ನು ಬಿದ್ದುಹೋದಲ್ಲಿನಿಂದ ಮೇಲಕ್ಕೆ ಎತ್ತಿದನು. "ನಾವು ನಂಬಿಕೆಯಿಂದ ನೀತಿವಂತರಾದ ಕಾರಣ ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ದೇವರೊಂದಿಗೆ ಉಂಟಾದ ಸಮಾಧಾನದಲ್ಲಿ ಇರೋಣ" (ರೋಮಾ. 5:1) (ಸಮತಲ 'N'ಗೆ ಎತ್ತಲ್ಪಟ್ಟಿದ್ದೇವೆ) ಮತ್ತು ಇನ್ನು ಮುಂದೆ ಎಂದಿಗೂ ದೇವರಿಂದ ಶತ್ರುಗಳೆಂದು ಎಣಿಸಲ್ಪಡದೆ, ಆತನ ನೀತಿವಂತರೆಂದು ನಿರ್ಣಯಿಸಲ್ಪಟ್ಟ ಮಾನವ ಪುತ್ರರಾಗಿ ಆದಾಮನೂ ನಮ್ಮ ಕರ್ತನಾದ ಯೇಸುವೂ ಒಂದೇ ಸಮತಲದಲ್ಲಿದ್ದಂತೆ ಇರೋಣ. ಅವರುಗಳು ನಿಜವಾಗಿಯೂ ಪರಿಪೂರ್ಣರಾಗಿದ್ದರು, ಆದರೆ ನಾವುಗಳು ಹಾಗೆಂದು ದೇವರಿಂದ ಎಣಿಸಲ್ಪಟ್ಟಿದ್ದೇವೆ. ಹಾಗೆಂದು ನೀತಿವಂತರೆಂದು ನಿರ್ಣಯಿಸಲ್ಪಟ್ಟಿರುವುದು ಲೆಕ್ಕಕ್ಕೆ ಎಣಿಸಲ್ಪಟ್ಟರು. ದೇವರ ವಾಕ್ಯದ ಮೇಲಿನ ನಂಬಿಕೆಯಿಂದ ಎಂಬುದಾಗಿ ಗ್ರಹಿಸಿಕೊಳ್ಳುತ್ತೇವೆ. ಆ ವಾಕ್ಯವು "ನೀವು ಕ್ರಯಕ್ಕೆ ಕೊಳ್ಳಲ್ಪಟ್ಟವರು" "ವಿಮೋಚಿಸಲ್ಪಟ್ಟವರು" "ಉಚಿತವಾಗಿ

ಎಲ್ಲವುಗಳಿಂದ ನೀತಿನಿರ್ಣಯ ಹೊಂದಿದವರು" ಎಂದು ಹೇಳುತ್ತದೆ. ನಾವು ದೇವರ ದೃಷ್ಟಿಯಲ್ಲಿ ದೋಷವಿಲ್ಲದವರಾಗಿ, ಕಳಂಕವಿಲ್ಲದವರಾಗಿ, ನಂಬಿಕೆಯ ನಿಮಿತ್ತ ನಮಗೆ ಹೊದಿಸಿದ ಕ್ರಿಸ್ತನ ನೀತಿಯೆಂಬ ವಸ್ತ್ರಗಳನ್ನು ಧರಿಸಿದ ಪವಿತ್ರರಾಗಿ ಕಾಣಿಸಿಕೊಳ್ಳುತ್ತೇವೆ. ನಮ್ಮ ದಂಡನೆಯನ್ನು ತೆರುವ ಸಲುವಾಗಿ ಆತನು ಪಾಪಗಳನ್ನು ತನ್ನ ಮೇಲೆ ಹೊರಿಸಿಕೊಂಡಿದ್ದಾನೆ ಮತ್ತು ಆತನು ತಾನೇ ಪಾಪಿಯೋ ಎಂಬಂತೆ ನಮಗಾಗಿ ಮರಣಪಟ್ಟಿದ್ದಾನೆ. ಆತನ ವಿಮೋಚನೆಯನ್ನು ಒಪ್ಪಿಕೊಂಡವರೆಲ್ಲರ ಮೇಲೆ ಆತನ ನೀತಿವಂತಿಕೆಯು ಈ ರೀತಿಯಲ್ಲಿ ಹೊರಿಸಲ್ಪಟ್ಟಿದೆ ಮತ್ತು ಅದರೊಂದಿಗೆ ಪಾಪವು ಪ್ರವೇಶಿಸುವ ಮೊದಲು ಇದ್ದ ಹಕ್ಕುಗಳನ್ನೂ, ಆಶೀರ್ವಾದಗಳನ್ನೂ ಅದು ತರುವುದಾಗಿದೆ. ಅದು ನಮ್ಮನ್ನು ಜೀವಕ್ಕೆ ಮತ್ತು ದೇವರ ಸಾಂಗತ್ಯಕ್ಕೆ ಪುನಃವಶಪಡಿಸುತ್ತದೆ. ಈ ಸಾಂಗತ್ಯವನ್ನು ನಮ್ಮ ನಂಬಿಕೆಯನ್ನು ಕಾರ್ಯಗತಗೊಳಿಸಿದ ಕೂಡಲೆ ಹೊಂದಬಹುದಾಗಿದೆ ಮತ್ತು ಜೀವ ಮತ್ತು ಇನ್ನೂ ಹೆಚ್ಚಿನ ಸಾಂಗತ್ಯವು ಮತ್ತು ಸಂತೋಷವೂ ದೇವರ 'ಉಚಿತವಾದ ಸಮಯ'ದಲ್ಲಿ ನಿಶ್ಚಿತಗೊಳ್ಳುತ್ತದೆ.

ನೀತಿನಿರ್ಣಯವು ಒಂದು ಆಶೀರ್ವಾದಕರ ಸಂಗತಿಯಾಗಿದೆ ಎಂಬುದನ್ನು ನೆನಪಿನಲ್ಲಿಡಿ, ಅದು ನಮ್ಮ ಸ್ವಭಾವವನ್ನು ಬದಲಾಯಿಸುವುದಿಲ್ಲ*: ನಾವು ಇನ್ನೂ ಮಾನವ ಜೀವಿಗಳೇ. ನಾವು ಪಾಪದ ಅನಿಷ್ಟಕರ ಸ್ಥಿತಿಯಿಂದ ಮತ್ತು ದೇವರೊಂದಿಗಿನ ವಿಮುಖತೆಯಿಂದ ರಕ್ಷಿಸಲ್ಪಟ್ಟಿದ್ದೇವೆ. ಮಾನವ ಪಾಪಿಗಳಾಗುವ ಬದಲಾಗಿ ನಾವು ಮಾನವ ಪುತ್ರರಾಗಿದ್ದೇವೆ, ಹಾಗೆ ನಾವು ಪುತ್ರರಾಗಿರುವದರಿಂದ, ದೇವರು ಹಾಗೆಂದು ನಮ್ಮ ಸಂಗಡ ಮಾತನಾಡುತ್ತಾನೆ. ಸುವಾರ್ತಾ ಯುಗದಲ್ಲಿ ಆತನು "ಚಿಕ್ಕ ಹಿಂಡಿಗಾಗಿ" ಜೊತೆ ಬಾಧ್ಯಸ್ಥರಿಗಾಗಿ – "ಕಂದಾ, ನನ್ನ ಕಡೆಗೆ ಮನಸ್ಸು ಕೊಡು": ಎಂದು ಹೇಳಿ ಕರೆಯುತ್ತಿದ್ದನು. ಅಂದರೆ ನಿಮ್ಮನ್ನೇ. ನಿಮ್ಮೆಲ್ಲಾ ಲೌಕಿಕ ಅಧಿಕಾರವನ್ನು, ನಿಮ್ಮ ಚಿತ್ತವನ್ನು, ನಿಮ್ಮ ತಲಾಂತುಗಳನ್ನೂ, ನಿಮ್ಮದೆಲ್ಲವನ್ನೂ ನನಗೆ ಕೊಡಿರಿ; ಕ್ರಿಸ್ತನು ಸಹಾ ನಿಮಗೆ ಈ ಮಾದರಿಯನ್ನು ಹಾಕಿಕೊಟ್ಟಿದ್ದಾನೆ. ನಾನು ನಿಮ್ಮನ್ನು ಮಾನವರಿಗಿಂತ ಎತ್ತರದ ಸಮತಲದಲ್ಲಿ ನನ್ನ ಪುತ್ರರನ್ನಾಗಿ ಮಾಡುತ್ತೇನೆ, ನಾನು ನಿಮ್ಮನ್ನು ಆತ್ಮೀಕ ಪುತ್ರರನ್ನಾಗಿ ಕ್ರಿಸ್ತನಂತ ಆತ್ಮೀಕ ಶರೀರ ಧರಿಸಿದವರನ್ನಾಗಿ, ಪುನರುತ್ಥಾನಗೊಂಡ ಯೇಸುವಿನಂತೆ ಆತ್ಮೀಕ ದೇಹವುಳ್ಳವರನ್ನಾಗಿ ದೇವರ ತತ್ವದ ಮೂರ್ತಿಯನ್ನಾಗಿ ಮಾಡುತ್ತೇನೆ, – ನೀವು ಲೋಕದ ನಿರೀಕ್ಷೆಗಳನ್ನು, ಆಕಾಂಕ್ಷೆಗಳನ್ನು ಗುರಿಯನ್ನು ಸಂಪೂರ್ಣವಾಗಿ ತೊರೆದುಬಿಡುವುದಾದರೆ, ಮಾನವ ಸ್ವಭಾವವನ್ನು ಸಂಪೂರ್ಣವಾಗಿ ಪ್ರತಿಷ್ಠೆಪಡಿಸಿಕೊಳ್ಳುವ ವರಾದರೆ, ಮತ್ತು ಅದನ್ನು ನನ್ನ ಸೇವೆಯಲ್ಲಿ ಉಪಯೋಗಿಸುವವರಾದರೆ, ನಾನು ನಿಮಗೆ ನಿಮ್ಮ ಜನಾಂಗದವರಿಗಿಂತ ಇನ್ನೂ ಉತ್ತಮವಾದ ಸ್ವಭಾವವನ್ನು ನೀಡುತ್ತೇನೆ, ನಾನು ನಿಮ್ಮನ್ನು ದೈವಿಕ ಸ್ವಭಾವದ ಪಾಲುದಾರರನ್ನಾಗಿ ಮಾಡುತ್ತೇನೆ – ದೇವರ ಬಾಧ್ಯಸ್ತರೂ ಮತ್ತು ಕ್ರಿಸ್ತನೊಂದಿಗೆ ಜೊತೆಬಾಧ್ಯಸ್ತರೂ ಆಗಿ ಮಾಡುತ್ತೇನೆ. ನೀವು ಆತನೊಂದಿಗೆ ಶ್ರಮೆಹೊಂದಿದವರಾದರೆ ನೀವು ಆತನೊಂದಿಗೆ ಮಹಿಮೆಯನ್ನು ಹೊಂದುವವರೂ ಆಗಬೇಕು" ಎಂದು ದೇವರು ಹೇಳುತ್ತಾನೆ.

ಸುವಾರ್ತೆಯಲ್ಲಿ ತಮ್ಮ ಮುಂದೆ ಇಟ್ಟಿರುವ ಈ ಬಹುಮಾನವನ್ನು ಸರಿಯಾಗಿ ಗೌರವಿಸಿ, ಸಂತೋಷದಿಂದ ಎಲ್ಲಾ ಭಾರವನ್ನು ಬದಿಗಿರಿಸಿ, ನೇಮಕವಾದ ಓಟವನ್ನು ಗೆಲ್ಲುವಂತೆ ತಾಳ್ಮೆಯಿಂದ ಓಡುವರಾಗಿರಿ. ನಮ್ಮ ನೀತಿನಿರ್ಣಯವನ್ನು ಭದ್ರಪಡಿಸಿಕೊಳ್ಳಲು ನಮ್ಮ ಕಾರ್ಯಗಳಿಗೆ ಕರೆ ನೀಡಲಾಗಿಲ್ಲ. ಈ ದೆಸೆಯಲ್ಲಿ ಮಾಡಬೇಕಾದ ಎಲ್ಲಾ ಕಾರ್ಯಗಳನ್ನೂ ನಮ್ಮ ಕರ್ತನಾದ ಯೇಸುವೇ ಮಾಡಿದ್ದಾನೆ. ನಾವು ನಂಬಿಕೆಯಿಂದ ಆತನು ಪೂರ್ಣಗೊಳಿಸಿದ ಕಾರ್ಯಗಳನ್ನು ಒಪ್ಪಿಕೊಳ್ಳುವಾಗ, ನಾವು ನೀತಿನಿರ್ಣಯವನ್ನು ಹೊಂದಿಕೊಳ್ಳುತ್ತೇವೆ ಮತ್ತು ಸಮತಲ 'N'ಗೆ ಎತ್ತಲ್ಪಡುತ್ತೇವೆ. ಆದರೆ, ಈಗ ನಾವು ಮುಂದುವರೆಯುವವರಾದರೆ, ನಾವು ಕ್ರಿಯೆಗಳಿಲ್ಲದೆ ಹೋಗಲಾರೆವು. ನಿಜವಾಗಿ, ನಾವು ನಮ್ಮ ನಂಬಿಕೆಯನ್ನು ಕಳಕೊಳ್ಳಬಾರದು. ಇಲ್ಲವಾದರೆ, ಅದರೊಂದಿಗೆ ನಮ್ಮ ನೀತಿನಿರ್ಣಯವನ್ನು ಕಳಕೊಳ್ಳುತ್ತೇವೆ; ಆದರೆ ನೀತಿನಿರ್ಣಯ ಹೊಂದಿದ ಮೇಲೆ, ಮತ್ತು ನಂಬಿಕೆಯಲ್ಲಿ ಮುಂದುವರೆಯುವಾಗ, ಆತನಿಂದ ಹುಟ್ಟಿದವರಾದಾಗ ನಮಗೆ ಕೊಡಲ್ಪಟ್ಟ ಕೃಪೆಯ ನಿಮಿತ್ತ ದೇವರಿಗೆ

* ಮಾನವನು ಕೆಟ್ಟ–ಸ್ವಭಾವವನ್ನು ಹೊಂದಿರುವಾಗ 'ಸ್ವಭಾವ' ಎಂಬ ಪದವು ಇಲ್ಲಿ ಹೊಂದಾಣಿಕೆಯ ಅರ್ಥದಲ್ಲಿ ಉಪಯೋಗಿಸಲಾಗಿದೆ. ಕರಾರುವಕ್ಕಾಗಿ ಹೇಳುವುದಾದರೆ, ಯಾವ ಮನುಷ್ಯನೂ ಸ್ವಭಾವತಃ ಕೆಟ್ಟವನಲ್ಲ. ಮಾನವು ಸ್ವಭಾವವು ಬಹಳ ಒಳ್ಳೆಯದು ಮತ್ತು ಅದು ದೈವಿಕ ಸ್ವಭಾವದ ಭೂಲೋಕದ ಪ್ರತೀಕವಾಗಿದೆ. ಆದುದರಿಂದ, ಎಲ್ಲಾ ಮಾನವರೂ ಒಳ್ಳೆಯ ಸ್ವಭಾವದವರೇ. ಕಷ್ಟವೇನೆಂದರೆ, ಈ ಒಳ್ಳೆಯ ಸ್ವಭಾವವು ನೀತಿಭ್ರಷ್ಟತೆಗೊಂಡಿದೆ. ನಂತರದಲ್ಲಿ ಮಾನವನು ದುಷ್ಟನೂ, ಕ್ರೂರಿಯೂ ಮುಂತಾಗಿ ಆಗಿರುವುದು ಅಸ್ವಭಾವಿಕ. ಆತನಿಗೆ ದೇವರಂತಿರುವುದು ಸ್ವಾಭಾವಿಕವಾಗಿರುವುದು. ಇದರಲ್ಲಿ, ಮೂಲ ಅರ್ಥದಲ್ಲಿ ನಾವು ""ಸ್ವಭಾವ" ಎಂಬ ಪದವನ್ನು ಮೇಲೆ ಬಳಸಿದ್ದೇವೆ. ಮಾನವ ಸ್ವಭಾವದ ಎಲ್ಲಾ ಸವಲತ್ತುಗಳು ಆಶೀರ್ವಾದಗಳಿಗೆ ಸಂಪೂರ್ಣವಾಗಿ ಮರಳಲು ದೇವರ ಭೂಲೋಕದ ಪ್ರತಿರೂಪವನ್ನು ಹೊಂದಿಕೊಳ್ಳುವಂತೆ ನಾವು ಕ್ರಿಸ್ತನಿಂದ ನೀತಿನಿರ್ಣಯ ಹೊಂದಿದ್ದೇವೆ.

ಅಂಗೀಕಾರಾರ್ಹವಾಗುವ ಕಾರ್ಯಗಳನ್ನು ಮಾಡಲು (ಫಲವನ್ನು ಕೊಡಲು) ಶಕ್ತರಾಗುತ್ತೇವೆ ಮತ್ತು ದೇವರು ಇದನ್ನು ಬಯಸುತ್ತಾನೆ. ಯಾಕೆಂದರೆ ಇದನ್ನು ನಾವು ಮಾಡಲು ಒಡಂಬಡಿಕೆ ಮಾಡಿಕೊಂಡ ತ್ಯಾಗವಾಗಿದೆ. ನಾವು ನಮಗಿರುವುದೆಲ್ಲವನ್ನೂ ನೀಡುವುದರ ಮೂಲಕ ಮಹಾ ಬಹುಮಾನವನ್ನು ಮೆಚ್ಚಿಕೊಳ್ಳುವುದನ್ನು ತೋರಿಸಬೇಕೆಂದು ದೇವರು ಬಯಸುತ್ತಾನೆ. ಮನುಷ್ಯರಿಗಾಗಿ ಅಲ್ಲ, ಆದರೆ, ದೇವರಿಗೆ – ಕ್ರಿಸ್ತನ ಮೂಲಕ ಪವಿತ್ರವಾದ, ಆತನಿಗೆ ಅಂಗೀಕರಾರ್ಹವಾದ ತ್ಯಾಗ ಅರ್ಪಿಸಬೇಕು. ಇದು ನಮ್ಮ ವಿವೇಕ ಪೂರ್ವಕವಾದ ಆರಾಧನೆ.

ಈ ಎಲ್ಲಾ ಸಂಗತಿಗಳನ್ನೂ ಒಪ್ಪಿಸಿಕೊಡುವಾಗ ನಾವು “ಕರ್ತನೇ ನನ್ನ ತ್ಯಾಗ, ನನ್ನ ಸಮಯ, ಪ್ರತಿಭೆ, ಪ್ರಭಾವ ಇತ್ಯಾದಿಗಳನ್ನು ನಿನಗೆ ಹೇಗೆ ತಲುಪಿಸಲಿ?” ಎಂದು ಕೇಳುತ್ತೇವೆ. ನಂತರದಲ್ಲಿ ದೇವರ ಉತ್ತರವನ್ನು ಪರೀಕ್ಷಿಸುವಾಗ, ಆತನ ಸ್ವರವು ಬೋಧಿಸುವುದೇನೆಂದರೆ ಕರ್ತನಾದ ಯೇಸು ಒಪ್ಪಿಸಿದಂತೆ ನಮ್ಮದೆಲ್ಲವನ್ನೂ ಆತನಿಗೆ ಒಪ್ಪಿಸಿರಿ, ಅವಕಾಶವಿರುವಾಗ, ಎಲ್ಲರಿಗೂ, ಮುಖ್ಯವಾಗಿ ನಂಬಿಗಸ್ಥ ಮನೆಯವರಿಗೆ ಒಳ್ಳೇದನ್ನು ಮಾಡುವುದರ ಮೂಲಕ – ಅವರಿಗೆ ಆತ್ಮೀಕ ಅಥವಾ ಸ್ವಾಭಾವಿಕ ಆಹಾರವನ್ನು ಕೊಡುವುದರ ಮೂಲಕ, ಕ್ರಿಸ್ತನ ನೀತಿವಂತಿಕೆಯೆಂಬ ಉಡುಪನ್ನು ಅಥವಾ ಭೂಲೋಕದ ಉಡುಪುಗಳನ್ನು ನಮ್ಮ ಸಾಮರ್ಥ್ಯಕ್ಕನುಸಾರವಾಗಿ ಅಥವಾ ಅವರ ಅಗತ್ಯತೆಗೆ ತಕ್ಕಂತೆ ನೀಡಬೇಕೆಂಬದಾಗಿ ಆತನ ಸ್ವರವನ್ನು ನಾವು ಕೇಳಿಕೊಳ್ಳುತ್ತೇವೆ. ನಮ್ಮ ಎಲ್ಲವನ್ನೂ ಪ್ರತಿಷ್ಠೆಪಡಿಸಿಕೊಂಡಾಗ, ನಾವೆಲ್ಲರೂ ಆತ್ಮನಿಂದ ಹುಟ್ಟಿದವರಾಗಿದ್ದೇವೆ ಮತ್ತು ಸಮತಲ ‘M’ನ್ನು ತಲುಪುತ್ತೇವೆ. ಮತ್ತು ಈಗ, ನಮಗೆ ಕೊಡಲ್ಪಟ್ಟಿರುವ ಅಧಿಕಾರದ ಮೂಲಕ, ನಾವು ಅದನ್ನು ಉಪಯೋಗಿಸುವವರಾದರೆ, ಮತ್ತು ನಮ್ಮನ್ನು ಅಧಿಕವಾಗಿ ಪ್ರೀತಿಸಿ ತನ್ನ ಸ್ವಂತ ಅಮೂಲ್ಯ ರಕ್ತದ ಬೆಲೆತೆತ್ತು ನಮ್ಮನ್ನು ಕೊಂಡುಕೊಂಡ ಆತನ (ಶಕ್ತಿ ಅಥವಾ ಆತ್ಮನ) ಮೂಲಕವಾಗಿ ನಾವು ನಮ್ಮೆಲ್ಲಾ ಒಡಂಬಡಿಕೆಗಳನ್ನು ನಿರ್ವಹಿಸಲು ಶಕ್ತರಾಗುತ್ತೇವೆ ಮತ್ತು ಜಯಶಾಲಿಗಳಾಗಿ ಹೊರಬರುತ್ತೇವೆ. ಜಯಶಾಲಿಗಳಿಗಿಂತ ಹೆಚ್ಚಾಗಿ ಯೇಸುವಿನ ಹೆಜ್ಜೆಜಾಡಿನಲ್ಲಿ ನಡೆಯಲು ಶಕ್ತರಾಗುತ್ತೇವೆ.

"Ne'er think the victory won
Nor once at ease sit down.
Thine arduous work will not be done
Till thou hast gained thy crown".

“ಜಯಗಳಿಸಿದ್ದೇನೆಂದು ಯೋಚಿಸದಿರಿ,
ಒಮ್ಮೆಯಾದರೂ ಹಾಯಾಗಿ ಕುಳಿತುಕೊಳ್ಳದಿರಿ.
ನಿನ್ನ ಪ್ರಯಾಸಕರ ಕಾರ್ಯವು ಮುಗಿಯುವುದಿಲ್ಲ
ನೀನು ನಿನ್ನ ಕಿರೀಟವನ್ನು ಜಯಿಸುವ ತನಕ”.

ನಮ್ಮ ನಿಷ್ಠಾವಂತನಾದ ಸಹೋದರ ಪೌಲನಂತೆ ಶ್ರೇಷ್ಠ ಹೋರಾಟವನ್ನು ಮಾಡಿ ಓಟವನ್ನು ಕೊನೆಗೊಳಿಸಿದಂತೆ ನಾವು ಕಿರೀಟವನ್ನು (ಜಯಮಾಲೆ) ಗೆದ್ದುಕೊಳ್ಳಬಹುದು. ಆದರೆ ಕೂಡಲೇ ಅಲ್ಲ. ಅದುವರೆಗೆ, ನಮ್ಮ ಶ್ರಮೆ ಮತ್ತು ಸೇವೆಯ ತ್ಯಾಗದ ಜ್ವಾಲೆ ಮತ್ತು ಸುಗಂಧ ಧೂಪ ಪ್ರತಿನಿತ್ಯವೂ ಮೇಲೇರಬೇಕು – ನಮ್ಮ ಕರ್ತನಾದ ಕ್ರಿಸ್ತನ ಮೂಲಕ ಅಂಗೀಕಾರಾರ್ಹವಾದ ಸುಗಂಧ ವಾಸನೆಯಾಗಿ ದೇವರ ಬಳಿಗೆ ಏರಿಹೋಗಬೇಕು.

ಜಯಹೊಂದುವ ಈ ವರ್ಗದಲ್ಲಿ ಯಾರು ‘ನಿದ್ರೆ’ಹೋಗಿರುತ್ತಾರೋ ಅಂಥವರು ಆತ್ಮೀಕ ಜೀವಿಗಳಾಗಿ ಸಮತಲ ‘L’ ನಲ್ಲಿ ಎದ್ದು ಬರುತ್ತಾರೆ ಮತ್ತು ಅದೇ ವರ್ಗದ ಜೀವಂತವಾಗಿರುವವರು ಬರಲಿರುವ ಕರ್ತನ ಆಗಮನದವರೆಗೆ ಉಳುಕೊಳ್ಳುತ್ತಾರೆ ಮತ್ತು ಅದೇ ಆತ್ಮೀಕ ಸಮತಲಕ್ಕೆ ಮಾರ್ಪಾಟಾಗುತ್ತಾರೆ ಮತ್ತು ಈ ಮಾರ್ಪಾಟು ಮಣ್ಣಿನ ಘಟಕದ ಪಾತ್ರೆಯನ್ನು ಅಳಿಸುವ (ವಿಸರ್ಜಿಸುವ) ಅಗತ್ಯವಿದ್ದಾಗ್ಯೂ ಒಂದು ಕ್ಷಣವೂ ನಿದ್ರೆ ಹೋಗುವುದಿಲ್ಲ. ಇವರುಗಳು ಇನ್ನು ಮುಂದೆ ಬಲಹೀನ, ಲೌಕಿಕ, ಮರ್ತ್ಯ, ಮತ್ತು ಲಯವಾಗುವ ಜೀವಿಗಳಲ್ಲ. ಇವರುಗಳು ಪೂರ್ಣವಾಗಿ ಆತ್ಮನಿಂದ ಹುಟ್ಟಿದವರು – ಪರಲೋಕದವರೂ, ಆತ್ಮೀಕರೂ, ಲಯವಾಗದವರೂ ಮತ್ತು ಅಮರ್ತ್ಯರೂ ಆಗಿದ್ದಾರೆ (1 ಕೊರಿಂಥ 15:44,52).

ಸರ್ವ ಸಂಪೂರ್ಣರಾದ ಆತ್ಮೀಕ ಜೀವಿಗಳಾಗಿ ಅವರ “ಬದಲಾವಣೆಯ” ನಂತರ (ಸಮತಲ ‘L’) ಅಥವಾ ಆತ್ಮೀಕ ಜೀವಿಗಳಾಗಿ ಪರಿಪೂರ್ಣವಾದ ನಂತರ, ಅವರಿಗೆ ದೇವರೊಂದಿಗೆ ಪೂರ್ಣ ಮತ್ತು ಸಂಪೂರ್ಣ ಸಹಭಾಗಿಗಳಾಗಿ ವೈಭವೀಕರಿಸಲ್ಪಡಲು (ಸಮತಲ ‘K’) ಮತ್ತು, ಆತನೊಂದಿಗೆ ಸಂಪೂರ್ಣ ಜೊತೆಗಾರರಾಗಿ ಅಧಿಕಾರ ಮತ್ತು ಮಹಿಮೆಯನ್ನು ಹಂಚಿಕೊಳ್ಳಲು ಎಷ್ಟು ಸಮಯ ತೆಗೆದುಕೊಳ್ಳುತ್ತದೆ ಎಂಬುದು ನಮಗೆ ತಿಳಿದಿಲ್ಲ. ಒಂದುಗೂಡುವಿಕೆ ಹಾಗೂ ಕ್ರಿಸ್ತನ ಇಡೀ ದೇಹವನ್ನು ತಲೆಯೊಂದಿಗೆ ಏಕೀಕರಿಸುವ ಪೂರ್ಣ ವೈಭವೀಕರಣವು ಆತನ ವಧುವಿಗೆ “ಯಜ್ಞದ ಕುರಿಮರಿಯ ವಿವಾಹ” ಎಂದು ನಾವು ಅರ್ಥಮಾಡಿಕೊಂಡಾಗ ಅವಳು ಕರ್ತನ ಸಂತೋಷದಲ್ಲಿ ಸಂಪೂರ್ಣವಾಗಿ ಪ್ರವೇಶಿಸಿಸುತ್ತಾಳೆ.

ನಕ್ಷೆಯನ್ನು ಪುನಃ ನೋಡಿರಿ – n, m, p, q ಇವುಗಳು ನಾಲ್ಕು ವಿಭಿನ್ನ ವರ್ಗಗಳಾಗಿವೆ ಮತ್ತು ಅವುಗಳು ಒಟ್ಟಾಗಿ ನಾಮಾಂಕಿತ ಸುವಾರ್ತಾ ಸಭೆಯನ್ನು ಪ್ರತಿನಿಧಿಸುತ್ತದೆ ಮತ್ತು ಅದು ಕ್ರಿಸ್ತನ ದೇಹವೆಂದು ಹೇಳಿಕೊಳ್ಳುತ್ತದೆ. n ಮತ್ತು m ವರ್ಗಗಳೆರಡೂ ಆತ್ಮನಿಂದ ಹುಟ್ಟಿದ M ಸಮತಲದಲ್ಲಿವೆ. ಈ ಎರಡೂ ವರ್ಗಗಳು ಸುವಾರ್ತಾ ಯುಗದುದ್ದಕ್ಕೂ ಒಟ್ಟಿಗೆ ಅಸ್ಥಿತ್ವದಲ್ಲಿದ್ದವು. ಎರಡೂ ಜೀವಂತ ಸಮರ್ಪಣೆಯಾಗುವಂತೆ ದೇವರೊಂದಿಗೆ ಒಡಂಬಡಿಕೆಗೆ ಬದ್ಧವಾಗಿದ್ದವು. ಎರಡೂ ಆತನ ಪ್ರಿಯನಲ್ಲಿ ಅಂಗೀಕರಿಸಲ್ಪಟ್ಟಿದ್ದವು. ಮತ್ತು ಆತ್ಮನಿಂದ ನೂತನ ಸೃಷ್ಟಿಗಳಾಗಿ ಹುಟ್ಟಲ್ಪಟ್ಟಿದ್ದವು. ಅವುಗಳ ಮಧ್ಯೆ ಇರುವ ವ್ಯತ್ಯಾಸವೆಂದರೆ – 'n' ಎಂಬುದು ತಮ್ಮ ಒಡಂಬಡಿಕೆಯನ್ನು ನೆರವೇರಿಸುವವರನ್ನು ಮತ್ತು ಕ್ರಿಸ್ತನೊಂದಿಗೆ ಲೌಕಿಕ ಇಚ್ಛೆಗೆ, ಗುರಿಗೆ ಮತ್ತು ಆಕಾಂಕ್ಷೆಗಳಿಗೆ ಸತ್ತವರನ್ನು ಪ್ರತಿನಿಧಿಸುತ್ತದೆ, ಅದೇ ಸಮಯದಲ್ಲಿ 'm' ಎಂಬುದು ಒಡಂಬಡಿಕೆಗೆ ಬದ್ಧರಾದ ಆತ್ಮನಿಂದ ಹುಟ್ಟಿದ ಮಕ್ಕಳ ದೊಡ್ಡದಾದ ಸಮೂಹವನ್ನು ಪ್ರತಿನಿಧಿಸುತ್ತದೆ. ಅದರೆ, ಅಯ್ಯೋ! ಅವರು ತಮ್ಮ ಒಡಂಬಡಿಕೆಯ ನಿರ್ವಹಣೆಯಲ್ಲಿ ಹಿಂದೆ ಸರಿದವರಾಗಿದ್ದಾರೆ. 'n' ವರ್ಗವು ಕ್ರಿಸ್ತನ ವಧುಗಳಾಗುವ ಜಯಶಾಲಿಗಳನ್ನೊಳಗೊಂಡಿದೆ. ಅವರು ಕ್ರಿಸ್ತನೊಡನೆ ಆತನ ವೈಭವಯುತವಾದ ಸಿಂಹಾಸನದಲ್ಲಿ ಕುಳಿತುಕೊಳ್ಳುತ್ತಾರೆ – ಇದು ಸಮತಲ 'K'ಆಗಿದೆ. ಇದು 'ಚಿಕ್ಕಹಿಂಡು' ಆಗಿದ್ದು ಅದಕ್ಕೆ ದೇವರು ತನ್ನ ರಾಜ್ಯವನ್ನು ನೀಡಲು ಬಹಳ ಸಂತೋಷಿಸುವವನಾಗಿದ್ದಾನೆ (ಲೂಕ 12–32). 'm' ವರ್ಗದವರು ಮಾನವ ಇಚ್ಛೆಯನ್ನು ಸಾಯಿಸುವಲ್ಲಿ ಕುಗ್ಗಿಹೋಗಿದ್ದಾರೆ, ಆದರೂ ದೇವರು ಅವರನ್ನು ಇನ್ನೂ ಪ್ರೀತಿಸುತ್ತಾನೆ. ಆದುದರಿಂದ ಅವರಿಗೆ ವಿಪತ್ತು ಮತ್ತು ತೊಂದರೆಯ ಮಾರ್ಗದಲ್ಲಿ ಪರಿಪೂರ್ಣವಾದ ಆತ್ಮೀಕ ಸಮತಲವಾದ 'L' ಸಮತಲಕ್ಕೆ ತರುತ್ತಾನೆ. ಆದರೆ ಅವರುಗಳು 'K' ಸಮತಲದ ತಮ್ಮ ಹಕ್ಕನ್ನು–ಸಿಂಹಾಸನದ ವೈಭವವನ್ನು ಕಳಕೊಳ್ಳುತ್ತಾರೆ. ಯಾಕೆಂದರೆ ಅವರು ಜಯಶಾಲಿಗಳಲ್ಲ. ನಾವು ನಮ್ಮ ತಂದೆಯ ಪ್ರೀತಿಯನ್ನು ಗೌರವಿಸುವವರಾದರೆ, ನಾವು ಕರ್ತನ ಅಂಗೀಕಾರವನ್ನು ಬಯಸುವವರಾದರೆ, ನಾವು ಆತನ ದೇಹದ ಸದಸ್ಯರಾಗಿ, ಆತನ ಮದಲಗಿತ್ತಿಯಾಗಿ, ಆತನ ಸಿಂಹಾಸನದಲ್ಲಿ ಕುಳಿತುಕೊಳ್ಳಲು ಬಯಸುವವರಾದರೆ, ನಾವು ತಮ್ಮ ತ್ಯಾಗದ ಒಡಂಬಡಿಕೆಯುನ್ನು ನಂಬಿಕೆಯಿಂದಲೂ ಮತ್ತು ಇಚ್ಛಾಪೂರ್ವಕ ವಾಗಿಯೂ ನೆರವೇರಿಸಬೇಕಾಗುತ್ತದೆ.

ಹೆಸರು ಮಾತ್ರ ಸಭೆಯ ಬಹುಪಾಲು ಸಂಖ್ಯೆಯವರು 'p' ವಿಭಾಗದಲ್ಲಿ ಪ್ರತಿನಿಧಿಸಲ್ಪಡುತ್ತಾರೆ. ಅವರುಗಳು ಸಮತಲ 'M'ನಲ್ಲಿಲ್ಲ, ಆದರೆ ಸಮತಲ 'N' ನಲ್ಲಿದ್ದಾರೆಂಬುದನ್ನು ಗಮನಿಸಿರಿ. ಅವರುಗಳು ನೀತಿನಿರ್ಣಯ ಹೊಂದಿದ್ದಾರೆ, ಆದರೆ ಶುದ್ಧೀಕರಿ ಸಲ್ಪಟ್ಟಿಲ್ಲ. ಅದುದರಿಂದ ಅವರುಗಳು ಪೂರ್ತಿಯಾಗಿ ದೇವರಿಗೆ ಪ್ರತಿಷ್ಠೆಪಡಿಸಿಕೊಂಡಿಲ್ಲ, ಮತ್ತು ಆತನಿಂದ ಆತ್ಮೀಕ ಜೀವಿಗಳಾಗಿ ಹುಟ್ಟಿಲ್ಲ. ಹೇಗಾದರೂ ಅವರುಗಳು ಪಾಪಕ್ಕಾಗಿ ಕ್ರಿಸ್ತನು ಅರ್ಪಿಸಿದ ಈಡುಬಲಿಯನ್ನು ಒಪ್ಪಿಕೊಂಡಿರುವುದರಿಂದ ಲೋಕದವರಿಗಿಂತ ಹೆಚ್ಚಿನವರಾಗಿದ್ದಾರೆ. ಆದರೆ ಅವರು ದೇವರ ಕುಟುಂಬದ ಆತ್ಮೀಕ ಭಾಗವಾಗುವಂತೆ ಈ ಯುಗದ ಮಹಾ ಕರೆಯನ್ನು ಅಂಗೀಕರಿಸಿರುವುದಿಲ್ಲ. ಅವರು ನಂಬಿಕೆಯಲ್ಲಿ ಮುಂದುವರೆದು, ಕ್ರಿಸ್ತನ ರಾಜ್ಯದ ನೀತಿಯ ನಿಯಮಗಳಿಗೆ ಪೂರ್ತಿಯಾಗಿ ಒಪ್ಪಿಸಿಕೊಡುವ ವರಾದರೆ, ಪುನರ್‌ವಶದ ಸಮಯದಲ್ಲಿ ಅವರು ಪರಿಪೂರ್ಣ ಮಾನವನಾದ ಆದಾಮನಂತೆ ಇರುತ್ತಾರೆ. ಅವರುಗಳು ಆತನಿಂದ ಕಳಕೊಳ್ಳಲ್ಪಟ್ಟವುಗಳನ್ನೆಲ್ಲಾ ಪುನರ್‌ವಶಪಡಿಸಿಕೊಳ್ಳುವರು. ಅವರು ಮಾನಸಿಕ, ನೈತಿಕ ಮತ್ತು ಭೌತಿಕವಾದ ಅದೇ ಮಾನವ ಪರಿಪೂರ್ಣತೆಯನ್ನು ಪಡಕೊಳ್ಳುತ್ತಾರೆ ಮತ್ತು ಪುನಃ ಆದಾಮನಿದ್ದಂತಹ ದೈವಸ್ವರೂಪವನ್ನು ಹೊಂದಿ ಕೊಳ್ಳುತ್ತಾರೆ. ಇವುಗಳಿಗಾಗಿಯೇ ಅವರು ವಿಮೋಚಿಸಲ್ಪಟ್ಟಿದ್ದಾರೆ ಮತ್ತು ಸಮತಲ 'N'ನಲ್ಲಿ ಅವರ ನೀತಿನಿರ್ಣಯದ ಸ್ಥಾನವು, ಕ್ರಿಸ್ತನ ಮೂಲಕ ಉಂಟಾದ ರಕ್ಷಣೆಯನ್ನು ಕೇಳಿ ನಂಬಿದವರಂತೆ ಒಂದು ವಿಶೇಷವಾದ ಆಶೀರ್ವಾದವನ್ನು ಹೊಂದಿದ್ದು, ಅದನ್ನು ಅವರು ನಂಬಿಕೆಯಿಂದ ಸಾಮಾನ್ಯ ಲೋಕದವರಿಗಿಂತ ಬೇಗನೇ ಸಂತೋಷದಿಂದ ಅನುಭವಿಸುತ್ತಾರೆ. (ಯಾಕೆಂದರೆ ಎಲ್ಲರೂ ಸಹಸ್ರಮಾನ ಯುಗದಲ್ಲಿ ಸತ್ಯದ ನಿಷ್ಕೃಷ್ಟವಾದ ತಿಳುವಳಿಕೆಗೆ ಬರಲಿರುವರು). ಆದಾಗ್ಯೂ, ಇವರುಗಳು ಮೊದಲಿಗೆ ಪ್ರಾರಂಭವಾಗುವ ಅನುಕೂಲತೆಯನ್ನು ಮತ್ತು ಸರಿಯಾದ ದಿಕ್ಕಿನಲ್ಲಿ ಸ್ವಲ್ಪ ಮಟ್ಟಿನ ಪ್ರಗತಿಯನ್ನು ಹೊಂದಿರುತ್ತಾರೆ. ಆದರೆ 'p' ವರ್ಗವು ಪ್ರಸ್ತುತ ಸಮಯದಲ್ಲಿ ನಂಬಿಕೆಯ ಮೂಲಕ ನೀತಿನಿರ್ಣಯವನ್ನು ಹೊಂದಿಕೊಂಡು ಅಭಿವೃದ್ಧಿ ಪಡಿಸಿಕೊಳ್ಳುವಲ್ಲಿ ವಿಫಲರಾಗಿದ್ದಾರೆ. ವಿಶೇಷ ಉದ್ದೇಶಕ್ಕಾಗಿ ಕೆಲವರಿಗೆ ಅಂಗೀಕಾರಾರ್ಹ ಸಮರ್ಪಣೆಯನ್ನು ಶಕ್ತಗೊಳಿಸಲು ಮತ್ತು ಕ್ರಿಸ್ತನ ದೇಹದ 'n' ವರ್ಗದ ಸದಸ್ಯರಾಗುವಂತೆ ದಯಪಾಲಿಸಲಾಗುತ್ತದೆ. ವರ್ಗ 'p' ಯಲ್ಲಿರುವವರು ದೇವರ ನೀತಿನಿರ್ಣಯದ

ದಯೆಯನ್ನು ವ್ಯರ್ಥ್ಯವಾಗಿ ಪಡಕೊಳ್ಳುತ್ತಾರೆ (2 ಕೊರಿ. 6:1); ದೇವರಿಗೆ ಸಮರ್ಪಣೆಗಳು ಅಂಗೀಕಾರಾರ್ಹವಾಗುವ ಸಮಯದಲ್ಲಿ, ಅವುಗಳು ಮುಂದುವರೆದು ತಮ್ಮನ್ನು ಅಂಗೀಕಾರಾರ್ಹವಾದ ಸಮರ್ಪಣೆಗಳಾಗಿ ಅರ್ಪಿಸಿಕೊಳ್ಳಲು ವಿಫಲರಾಗುತ್ತಾರೆ. ಈ ವರ್ಗದವರು, ಸಂತರಲ್ಲದಿದ್ದರೂ, ಪ್ರತಿಷ್ಠೆ ಹೊಂದಿದ ದೇಹದ ಸದಸ್ಯರಲ್ಲದಿದ್ದರೂ, ಅಪೋಸ್ತಲರುಗಳು ಅವರನ್ನು "ಸಹೋದರರೇ" ಎಂದು ಸಂಬೋಧಿಸಿದ್ದಾನೆ (ರೋಮಾ. 12:1). ಅದೇ ಅರ್ಥದಲ್ಲಿ ಇಡೀ ಜನಾಂಗವು ಪುನರ್‌ವಶಗೊಂಡಾಗ ವಿಭಿನ್ನ ಸ್ವಭಾವಗಳನ್ನು ಹೊಂದಿದ್ದರೂ, ಸದಾಕಾಲಕ್ಕೂ ಕ್ರಿಸ್ತನ ಸಹೋದರರುಗಳಾಗಿ, ದೇವರ ಮಕ್ಕಳಾಗಿ ಇರುತ್ತಾರೆ. ದೇವರು ಪ್ರತಿ ಸಮತಲದಲ್ಲಿ, ಪ್ರತಿ ಸ್ವರೂಪದಲ್ಲಿ ತನ್ನೊಂದಿಗೆ ಸಾಮರಸ್ಯದಲ್ಲಿರುವರೆಲ್ಲರ ತಂದೆಯಾಗಿದ್ದಾನೆ.

ನಾಮಾಂಕಿತ ಸಭೆಯೊಂದಿಗೆ ಸಂಪರ್ಕ ಹೊಂದಿದ ಮತ್ತೊಂದು ವರ್ಗವು, ಯೇಸುಕ್ರಿಸ್ತನು ನಮ್ಮ ಪಾಪಗಳ ಈಡುಬಲಿಯನ್ನಾಗಿ ತನ್ನನ್ನು ಸಮರ್ಪಿಸಿಕೊಂಡನು ಎಂಬುದನ್ನು ಎಂದಿಗೂ ನಂಬದೇ ಇರುವ ಪರಿಣಾಮವಾಗಿ ನೀತಿನಿರ್ಣಯ ಹೊಂದಲಿಲ್ಲ – 'N' ಸಮತಲದಲ್ಲಿಲ್ಲ. ಇದು 'N' ಸಮತಲದ ಕೆಳಗೆ ವಿಭಾಗ 'q'ನಲ್ಲಿ ಪ್ರತಿನಿಧಿಸಲ್ಪಟ್ಟಿದೆ. ಇವರುಗಳು 'ಕುರಿಯ ವೇಷದಲ್ಲಿರುವ ತೋಳ'ಗಳಾಗಿದ್ದಾರೆ, ಆದಾಗ್ಯೂ ಅವರು ತಮ್ಮನ್ನು ಕ್ರೈಸ್ತರೆಂದು ಹೇಳಿಕೊಳ್ಳುತ್ತಾರೆ ಮತ್ತು ಹೆಸರುಮಾತ್ರ ಸಭೆಯ ಸದಸ್ಯರಾಗಿ ಗುರುತಿಸಿಕೊಳ್ಳುತ್ತಾರೆ. ಅವರು ಕ್ರಿಸ್ತನನ್ನು ತಮ್ಮ ವಿಮೋಚಕನೆಂದು ನಿಜವಾಗಿಯೂ ನಂಬುವುದಿಲ್ಲ, ಅವರು 'R' ಸಮತಲಕ್ಕೆ ಸೇರಿದವರಾಗಿದ್ದಾರೆ. ಅವರು ಈ ಲೋಕದ ಭಾಗವಾಗಿದ್ದಾರೆ. ಮತ್ತು ಸಭೆಯಲ್ಲಿ ಸ್ಥಳವಿಲ್ಲದವರಾಗಿದ್ದು ಅದಕ್ಕೆ ಹಾನಿಕಾರಕವಾಗಿದ್ದಾರೆ. ಈ ಮಿಶ್ರ ಸ್ಥಿತಿಯಲ್ಲಿ ಈ ವಿವಿಧ ವರ್ಗಗಳಲ್ಲಿ n,m,p ಮತ್ತು q ಇವುಗಳು ಒಟ್ಟಾಗಿ ಸೇರಿಕೊಂಡು ಎಲ್ಲರೂ ತಮ್ಮನ್ನು ಕ್ರೈಸ್ತರೆಂದು ಹೇಳಿಕೊಳ್ಳುತ್ತಾರೆ, ಇಂಥಾಃ ಸಭೆಯು ಸುವಾರ್ತಾ ಯುಗದಲ್ಲೆಲ್ಲಾ ಕಂಡು ಬರುತ್ತವೆ. ನಮ್ಮ ಕರ್ತನು ಮುಂತಿಳಿಸಿರುವಂತೆ, ಹೆಸರುಮಾತ್ರದ ಪರಲೋಕ ರಾಜ್ಯವು (ಹೆಸರು ಮಾತ್ರದ ಸಭೆಯು) ಗೋಧಿ ಮತ್ತು ಹಣಜಿಯನ್ನು ಬಿತ್ತಿದ ಹೊಲದಂತಿದೆ. ಆತನು ಹೇಳಿದಂತೆ ಇವೆರಡನ್ನೂ ಯುಗದ ಅಂತ್ಯದ ಸುಗ್ಗಿಯ ಕಾಲದವರೆಗೆ ಒಟ್ಟಾಗಿ ಬೆಳೆಯಲು ಬಿಡುತ್ತಾನೆ. ಸುಗ್ಗಿಯ ಸಮಯದಲ್ಲಿ ಆತನು ಕೊಯ್ಲುಗಾರರಿಗೆ (ದೇವದೂತರುಗಳಿಗೆ – ಸಂದೇಶವಾಹಕರುಗಳಿಗೆ) "ಹಣಜಿಗಳನ್ನು ಒಟ್ಟಾಗಿ ಕೂಡಿಸಿ ಅವುಗಳನ್ನು ಹೊರೆಯಾಗಿ ಕಟ್ಟಿರಿ ಮತ್ತು ಅವುಗಳನ್ನು ಸುಟ್ಟುಹಾಕಿರಿ", "ಆದರೆ ಗೋಧಿಯನ್ನು ನನ್ನ ಕಣಜಕ್ಕೆ ತುಂಬಿರಿ" (ಮತ್ತಾಯ 13:38, 41,49) ಎಂದು ಹೇಳುತ್ತಾನೆ.

ಕರ್ತನ ಈ ಮಾತುಗಳು ನಮಗೆ ತೋರಿಸುವುದೇನೆಂದರೆ, ಈ ಯುಗದಲ್ಲಿ ಇವೆರಡೂ ಒಟ್ಟಿಗೆ ಬೆಳೆಯಬೇಕು, ಮತ್ತು ಹೆಸರು ಮಾತ್ರ ಸಭೆಯ ಸದಸ್ಯರೆಂಬ ಗ್ರಹಿಕೆ ಪಡೆಯಲಿ ಎಂದು ಸೂಚಿಸಿದಾಗ, ಆತನು ಈ ಎರಡು ಸಂಗತಿಗಳನ್ನು ಪ್ರತ್ಯೇಕಿಸುವ ಕಾಲವೊಂದು ಬರುತ್ತದೆ ಎಂಬ ಉದ್ದೇಶ ಹೊಂದಿದ್ದನು. ಆಗ ಸಭೆಯಲ್ಲಿ ನಿಜವಾದ ಭಕ್ತರಾದವರು (n) ಅಂಗೀಕರಿಸಲ್ಪಟ್ಟು ದೇವರ ಸ್ವಂತದವರಾಗುತ್ತಾರೆ ಮತ್ತು ಮಹಿಮೆ ಹೊಂದುತ್ತಾರೆ (ಮತ್ತಾಯ 13:39).

ಸುವಾರ್ತಾ ಯುಗದಲ್ಲಿ ಒಳ್ಳೆಯ ಬೀಜವು ಬೆಳೆಯುತ್ತಿದೆ, ಅದರಂತೆಯೇ ಹಣಜಿಗಳೂ ಅಥವಾ ನಕಲಿಯಾದವುಗಳೂ ಬೆಳೆಯುತ್ತಿವೆ. "ಒಳ್ಳೆಯ ಬೀಜಗಳು ದೇವರ ರಾಜ್ಯದ ಮಕ್ಕಳು, ಆತ್ಮೀಕತೆಯುಳ್ಳ ಮಕ್ಕಳು, (n and m) ವರ್ಗದವರು. ಅದೇ ಸಮಯದಲ್ಲಿ ಹಣಜಿಗಳು ಕೆಡುಕನ ಮಕ್ಕಳು. ಆದ್ದರಿಂದ, 'q' ವರ್ಗಕ್ಕೆ ಸೇರಿದವರೆಲ್ಲರೂ, ಮತ್ತು ವರ್ಗ 'p' ಯ ಅನೇಕರು ಹಣಜಿಗಳು; ಏಕೆಂದರೆ "ಯಾವನೂ ಇಬ್ಬರು ಯಜಮಾನರ ಸೇವೆ ಮಾಡಲಾರನು" (ಮತ್ತಾಯ 6:24). "ಮತ್ತು ನೀವು ಯಾರಿಗೆ ಸೇವೆ ಸಲ್ಲಿಸುತ್ತೀರೋ ನೀವು ಅವರ ಸೇವಕರು". 'p' ವರ್ಗದಲ್ಲಿವವರು ಎಲ್ಲರೂ ತಮ್ಮನ್ನು ಕೊಂಡುಕೊಂಡ ಕರ್ತನಿಗೆ ತಮ್ಮ ಸೇವೆಯನ್ನೂ, ತಲಾಂತುಗಳನ್ನೂ ಪ್ರತಿಷ್ಠೆ ಮಾಡದಿರುವಾಗ – ವಿವೇಕಪೂರ್ವಕವಾದ ಆರಾಧನೆ – ನಿಸ್ಸಂದೇಹವಾಗಿ ಅವರು ತಮ್ಮ ಹೆಚ್ಚಿನ ಸಮಯವನ್ನು ಮತ್ತು ತಲಾಂತುಗಳನ್ನೂ ನಿಜವಾಗಿಯೂ ದೇವರಿಗೆ ವಿರುದ್ಧವಾಗಿ ಮತ್ತು ವೈರಿಯ ಸೇವೆಯಲ್ಲಿ ನೀಡುವವರಾಗಿದ್ದಾರೆ.

ಈಗ ನಕ್ಷೆಯಲ್ಲಿ ಸುಗ್ಗಿ ಅಥವಾ ಸುವಾರ್ತಾ ಯುಗದ ಅಂತ್ಯವನ್ನು ಗಮನಿಸಿರಿ – ಅದು ವಿಭಾಗವಾಗಿರುವ ಎರಡೂ ಭಾಗಗಳನ್ನು ಗಮನಿಸಿರಿ – ಏಳು ವರ್ಷ ಮತ್ತು ಮೂವತ್ತಮೂರು ವರ್ಷಗಳು, ಯೆಹೂದ್ಯರ ಸುಗ್ಗಿಯ ಕಾಲಕ್ಕೆ ಸರಿಯಾದ ಸಮರೇಖೆಯಲ್ಲಿದೆ. ಈ ಸುಗ್ಗಿಯು, ಯೆಹೂದ್ಯ ಸುಗ್ಗಿಯಂತೆ, ಮೊದಲಿಗೆ ಸಭೆಯ ಪರೀಕ್ಷೆ ಮತ್ತು ಅದನ್ನು ಸೂಕ್ಷವಾಗಿ ಸೋಸುವ ಮತ್ತು ನಂತರದಲ್ಲಿ ಕಡೆಯ ಏಳು ಉಪದ್ರವಗಳನ್ನು ನಾಮಾಂಕಿತ ಸಭೆಯೂ

ಸೇರಿದಂತೆ ಲೋಕದ ಮೇಲೆ ಸುರಿಸುವ ರೌದ್ರದ ಸಮಯವಾಗಿರುತ್ತದೆ. ಯೆಹೂದ್ಯ ಸಭೆಯು ಐಹಿಕ ಸಮತಲದ ಮೇಲೆ 'ಛಾಯೆ' ಅಥವಾ ಮಾದರಿಯಾಗಿದ್ದು ಸುವಾರ್ತಾ ಸಭೆಯು ಆತ್ಮೀಕ ಸಮತಲದಲ್ಲಿ ಆನಂದಿಸುತ್ತಿರುತ್ತದೆ. ಯಾವದು ಶಾರೀರಿಕ ಇಸ್ರಾಯೇಲ್ಯರನ್ನು ಅವರ ಯುಗದ ಸುಗ್ಗಿಯಲ್ಲಿ ಪರೀಕ್ಷಿಸಿತೋ ಅದು ಅವರಿಗೆ ಪ್ರಸ್ತುತಪಡಿಸಿದ ಸತ್ಯವಾಗಿದೆ. ಆಗ ಉಚಿತವಾದ ಸತ್ಯವು ಕುಡುಗೋಲಾಗಿ ಅದು "ನಿಜವಾದ ಇಸ್ರಾಯೇಲ್ಯರನ್ನ" ಹೆಸರು ಮಾತ್ರದ ಯೆಹೂದ್ಯ ಸಭೆಯಿಂದ ಪ್ರತ್ಯೇಕಿಸಿತು, ಮತ್ತು ನಿಜವಾದ ಗೋಧಿಯನ್ನು ತೋರಿಕೆಯವರಿಗೆ/ಸೋಗು ಹಾಕುವರಿಗೆ ಹೋಲಿಸಿದರೆ ಕೇವಲ ತುಣುಕುಗಳಾಗಿದ್ದವು. ಅದರಂತೆಯೇ ಈ ಯುಗದ ಸುಗ್ಗಿಯೂ ಸಹಾ ಯೆಹೂದ್ಯ ಕಾಲದ ಸುಗ್ಗಿಯಂತೆ ಸುವಾರ್ತಾ ಯುಗದ ಸುಗ್ಗಿಯು, ಮುಖ್ಯ ಕೊಯ್ಲುಗಾರನಾದ, ನಮ್ಮ ಕರ್ತನಾದ ಯೇಸುವಿನ ಮೇಲ್ವಿಚಾರಣೆಯಲ್ಲಿರುತ್ತದೆ. ಆತನು ಆಗ ಉಪಸ್ಥಿತ ನಿರುತ್ತಾನೆ (ಪ್ರಕಟನೆ 14:14). ಈ ಯುಗದ ಸುಗ್ಗಿಯಲ್ಲಿ ನಮ್ಮ ಕರ್ತನ ಮೊದಲನೆಯ ಕಾರ್ಯವು ಸುಳ್ಳಾದವುಗಳಿಂದ ಸತ್ಯವಾದುದ್ದನ್ನು ಪ್ರತ್ಯೇಕಿಸುವುದಾಗಿದೆ. ಹೆಸರು ಮಾತ್ರದ ಸಭೆಯನ್ನು ಅದರ ಮಿಶ್ರಣ ಸ್ಥಿತಿಯ ಕಾರಣ ಕರ್ತನು 'ಬಾಬೇಲ್' (ಗಲಿಬಿಲಿ) ಎಂದು ಕರೆಯುತ್ತಾನೆ ಮತ್ತು ಸುಗ್ಗಿಯು ನಾಮಾಂಕಿತ ಸಭೆಯಲ್ಲಿನ ವಿವಿಧ ವರ್ಗಗಳನ್ನು ಪ್ರತ್ಯೇಕಿಸುವ, ಮತ್ತು 'n' ವರ್ಗದವರನ್ನು ಮಾಗಿಸುವ ಮತ್ತು ಪರಿಪೂರ್ಣಗೊಳಿಸುವ ಕಾಲವಾಗಿದೆ. ಗೋಧಿಯನ್ನು ಹಣಜಿಯಿಂದ, ಮಾಗಿದ ಗೋಧಿಯನ್ನು ಮಾಗದ ಗೋಧಿಯಿಂದ ಮುಂತಾಗಿ ಪ್ರತ್ಯೇಕಗೊಳಿಸ ಲಾಗುವುದು. ಈ 'n' ವರ್ಗದಲ್ಲಿರುವವರು ಗೋಧಿಯ 'ಪ್ರಥಮ ಫಲ' ವಾಗಿರುವರು. ಅವರು ಪ್ರತ್ಯೇಕಿಸಲ್ಪಟ್ಟ ಮೇಲೆ, ಸೂಕ್ತ ಸಮಯದಲ್ಲಿ, ಕ್ರಿಸ್ತನ ಮದಲಗಿತ್ತಿಯಾಗುತ್ತಾರೆ, ಮತ್ತು ಆಕೆಯು ಸದಾಕಾಲ ಕರ್ತನಂತೆಯೇ ಆತನೊಂದಿಗೇ ಆತನಂತೆ ಇರುತ್ತಾಳೆ.

ಬಾಬೇಲಿನಿಂದ ಈ ಚಿಕ್ಕಹಿಂಡಿನ ಪ್ರತ್ಯೇಕತೆಯನ್ನು ಚಿತ್ರ 's' ನಲ್ಲಿ ತೋರಿಸಲಾಗಿದೆ. ಆಕೆಯು ಕರ್ತನೊಂದಿಗೆ ಒಂದಾಗುವ ಆತನ ಹೆಸರನ್ನು ಧರಿಸುವ ಮತ್ತು ಆತನ ಮಹಿಮೆಯಲ್ಲಿ ಪಾಲ್ಗೊಳ್ಳುವ ಮಾರ್ಗದಲ್ಲಿದ್ದಾಳೆ. ಮಹಿಮೆಹೊಂದಿದ ಕ್ರಿಸ್ತನು, ಶಿರಸ್ಸು ಮತ್ತು ದೇಹವನ್ನು ಚಿತ್ರ 'w' ನಲ್ಲಿ ತೋರಿಸಲಾಗಿದೆ. ಚಿತ್ರಗಳಾದ 't' 'u' ಮತ್ತು 'v' ಇವುಗಳು ಬಾಬೇಲನ್ನು – ಹೆಸರುಮಾತ್ರದ ಸಭೆಯನ್ನು ಪ್ರತಿನಿಧಿಸುತ್ತವೆ. ಇದು ಪತನಗೊಂಡು ನಮ್ಮ ಕರ್ತನ ದಿನದಲ್ಲಿ, "ಸಂಕಟದ ಸಮಯ"ದಲ್ಲಿ ತುಂಡು ತುಂಡಾಗಿ ಹೋಗುತ್ತದೆ. ಇದೊಂದು ಭಯಂಕರವಾದ ಸಂಗತಿ ಎಂದು ಕಂಡುಬಂದಾಗ್ಯೂ, ಎಲ್ಲಾ ನಿಜವಾದ ಗೋಧಿಗೆ ಇದೊಂದು ಹೆಚ್ಚಿನ ಪ್ರಯೋಜನಕರವಾದ ಸಮಯವಾಗಿದೆ. ಬಾಬೇಲ್ ಪತನಗೊಳ್ಳುತ್ತದೆ, ಯಾಕೆಂದರೆ ಅದು ತಾನು ಹೇಳಿಕೊಳ್ಳುವಂತೆ ಇಲ್ಲ. ಹೆಸರು ಮಾತ್ರದ ಸಭೆಯು ಅನೇಕ ಕಪಟಿಗಳನ್ನು ಒಳಗೊಂಡಿದೆ, ಆಕೆಯು ಲೋಕದ ದೃಷ್ಟಿಯಲ್ಲಿ ಗೌರವದ ಸ್ಥಿರತೆಯಲ್ಲಿರುವುದರಿಂದಾಗಿ, ಅವರುಗಳು ಆಕೆಯ ಸಹವಾಸದಲ್ಲಿದ್ದಾರೆ. ಅವರುಗಳು ತಮ್ಮ ನಡವಳಿಕೆಗಳಿಂದ ಬಾಬೇಲನ್ನು ಪ್ರಪಂಚದ ಮೂಗಿನ ಹೊಳ್ಳೆಗಳಲ್ಲಿ ದುರ್ಗಂಧವನ್ನಾಗಿ ಮಾಡುವವರಾಗಿದ್ದಾರೆ. ಕರ್ತನಿಗೆ ಅವರ ನಿಜವಾದ ಗುಣಲಕ್ಷಣಗಳು ಯಾವಾಗಲೂ ತಿಳಿದಿದೆ. ಆದರೆ ಆತನ ಉದ್ದೇಶಾನು ಸಾರವಾಗಿ ಆತನು ಅವರನ್ನು ಸುಗ್ಗಿಯವರೆಗೆ ಇರಲು ಒಂಟಿಯಾಗಿ ಬಿಡುತ್ತಾನೆ, ಮತ್ತು ಆಗ ಆತನು ಅವರನ್ನು ತನ್ನ ರಾಜ್ಯದಿಂದ ನಿಜವಾದ ಸಭೆಯಿಂದ ಹೊರಗೆ ಒಟ್ಟುಗೂಡಿಸುತ್ತಾನೆ (ಹೊರೆಯಾಗಿ ಕಟ್ಟಲ್ಪಡುತ್ತದೆ). ಮನನೋಯಿಸುವವರನ್ನು, ಅನ್ಯಾಯ ಮಾಡುವವರನ್ನು, ಎಲ್ಲಾ ಸಂಗತಿಗಳನ್ನು ಬೆಂಕಿಯ ಕುಲುಮೆಗೆ ಹಾಕಲಾಗುವುದು.... ನಂತರದಲ್ಲಿ ನೀತಿವಂತರು ('n' ವರ್ಗದವರು) ತಮ್ಮ "ತಂದೆಯ ರಾಜ್ಯದಲ್ಲಿ ಸೂರ್ಯನಂತೆ ಪ್ರಕಾಶಿಸುವರು" (ಮತ್ತಾಯ 13:41–43). ಸಭೆಗಳಲ್ಲಿ ವಿವಿಧ ರೀತಿಯಲ್ಲಿ ನಿಷ್ಠೆ ಮತ್ತು ಉತ್ಸಾಹವಿಲ್ಲದಿರುವಿಕೆಗಳು ಹೆಚ್ಚಾಗುತ್ತಿರುವ ಕಾರಣದಿಂದ ಅದರ ಮೇಲೆ ಬರುವ ತೊಂದರೆಗಳಿಗೆ ಹೆಚ್ಚಿನ ಮಟ್ಟದಲ್ಲಿ ಪರಿಶೋಧನೆಗಳಿರುವುದು. ಯಾಕೆಂದರೆ, ಬಾಬೇಲ್ ದೇವರ ವಾಕ್ಯಕ್ಕೆ ವಿರುದ್ಧವಾದ ವಿಭಿನ್ನ ಸಿದ್ಧಾಂತಗಳನ್ನು ಹೊಂದಿರುವುದರಿಂದ ಇವುಗಳಿಗೆ ಕಠಿಣವಾದ ಪರೀಕ್ಷೆಗಳಾಗುತ್ತವೆ. ಯೆಹೂದ್ಯರ ಯುಗದಲ್ಲಿನ ಕ್ರಿಸ್ತನ ಶಿಲುಬೆಯು ಯೆಹೂದ್ಯನಿಗೆ, ಎದುರು ನೋಡುವ ಮಹಿಮೆ ಮತ್ತು ಶಕ್ತಿಯನ್ನೂ, ಮುಗ್ಗರಿಸುವ ಬಂಡೆಯೂ ಮತ್ತು ಲೋಕದ ರೀತಿಯಲ್ಲಿ ಜ್ಞಾನಿಗಳಾದ ಗ್ರೀಕರು (ಅನ್ಯರಿಗೆ) ಮೂರ್ಖತನವಾಗಿದೆ. ಅದರಂತೆಯೇ ಸುವಾರ್ತಾ ಯುಗದ ಸುಗ್ಗಿಯಲ್ಲಿಯೂ ಮತ್ತೆ ಅದು ಮುಗ್ಗರಿಸುವ ಕಲ್ಲೂ, ಅಪರಾಧದ ಬಂಡೆಯೂ ಆಗಿರುತ್ತದೆ.

ಪ್ರತಿಯೊಬ್ಬರೂ ಕ್ರಿಸ್ತನಲ್ಲಿ ದೈವಿಕ ಸತ್ಯದ ಚಿನ್ನ ಅಥವಾ ಬೆಳ್ಳಿಯನ್ನು ಮತ್ತು ಅಮೂಲ್ಯವಾದ ರತ್ನಗಳನ್ನು ಹೊರತುಪಡಿಸಿ ಬೇರೆ ಯಾವುದರಿಂದಲಾದರೂ ಕಟ್ಟಿದ್ದರೆ, ಮತ್ತು ಆ ಗುಣಲಕ್ಷಣಗಳು ಅದರೊಂದಿಗೆ ಹೊಂದಿಕೆಯಾಗಿದ್ದರೆ, ಅವು ಖಂಡಿತವಾಗಿಯೂ ಕ್ರೋಧದ (ಬೆಂಕಿಯ) ಸಮಯದಲ್ಲಿ ತೀವ್ರವಾಗಿ ಅವರನ್ನು ಸುತ್ತಿಕೊಳ್ಳುತ್ತದೆ. ಏಕೆಂದರೆ ಸಿದ್ಧಾಂತಗಳೆಂಬ ಮರ, ಒಣ ಹುಲ್ಲು ಕೂಳೆ ಮತ್ತು ಅವರ ಎಲ್ಲಾ ಅಭ್ಯಾಸಗಳು ಇವುಗಳು ಬೆಂಕಿಯಿಂದ ನಾಶವಾಗುತ್ತವೆ. ಯಾರು ಸರಿಯಾದ ರೀತಿಯಲ್ಲಿ ಕಟ್ಟಿರುತ್ತಾರೋ, ಮತ್ತು ಅದರ ಪರಿಣಾಮವಾಗಿ ಅಂಗೀಕೃತ ಗುಣಲಕ್ಷಣಗಳನ್ನು ಹೊಂದಿರುತ್ತಾರೋ ಅವರುಗಳು ಅದೇ ಸಮಯದಲ್ಲಿ 't' ಯು ಆತ್ಮನಿಂದ ಪಡಕೊಂಡ 'ಮಹಾ ಸಮೂಹ'ವನ್ನು ಪ್ರತಿನಿಧಿಸುತ್ತದೆ. ಅವರು ಆತ್ಮನಿಂದ ಹುಟ್ಟಿದವರಾದರೂ, ಅವರು ಮರ, ಒಣ ಹುಲ್ಲು ಮತ್ತು ಕೂಳೆಯನ್ನು ಕಟ್ಟಿದವರು – ಗೋಧಿ, ಆದರೆ ಪ್ರಥಮ ಫಲವನ್ನು (s) ಒಂದುಗೂಡಿಸುವ ಸಮಯದಲ್ಲಿ ಅವುಗಳು ಸರಿಯಾಗಿ ಬಲಿತಿರುವುದಿಲ್ಲ. ಅವರುಗಳು (t) ಸಿಂಹಾಸನದ ಮತ್ತು ದೈವಿಕ ಸ್ವಭಾವದ ಬಹುಮಾನವನ್ನು ಕಳಕೊಳ್ಳುವರು. ಆದರೆ, ಅಂತಿಮವಾಗಿ ಅವರು ದೈವಿಕ ಸ್ವಭಾವದ ಕೆಳಗಿನ ಕ್ರಮದ ಆತ್ಮೀಕ ಜೀವಿಗಳ ಹುಟ್ಟನ್ನು ತಲುಪುವರು. ಇವರುಗಳು ನಿಜವಾಗಿಯೂ ಪ್ರತಿಷ್ಟೆಗೊಂಡಿದ್ದರೂ ಲೌಕಿಕ ಸ್ಫೂರ್ತಿಯನ್ನು ಜಯಿಸಲಾರದೆ, ಎಷ್ಟರ ಮಟ್ಟಿಗೆಂದರೆ ತಮ್ಮ ಜೀವವನ್ನು ಸಜೀವ ಯಜ್ಞವಾಗಿ ಅರ್ಪಿಸುವದರಲ್ಲಿ ವಿಫಲರಾದರು. "ಸುಗ್ಗಿ"ಯಲ್ಲಿಯೂ ಸಹಾ ಮದಲಗಿತ್ತಿಯ ಜೀವಂತ ಸದಸ್ಯರುಗಳು ಸತ್ಯದ ಸಲುವಾಗಿ ಇತರರಿಂದ ಪ್ರತ್ಯೇಕಿಸಲ್ಪಡುತ್ತಿರುವಾಗ, ವರ್ಗ 't'ಯನ್ನೊಳ ಗೊಂಡಂತೆ ಇತರರ ಕಿವಿಗಳು ಕೇಳಲು ಮಂದವಾಗುತ್ತವೆ. ಅವರುಗಳು ಆ ಪ್ರತ್ಯೇಕತೆಯ ಸಮಯದಲ್ಲಿ ನಂಬುವುದರಲ್ಲಿಯೂ, ಕ್ರಿಯೆ ಮಾಡುವುದರಲ್ಲಿಯೂ ನಿಧಾನರಾಗಿರುತ್ತಾರೆ. ಮದಲಗಿತ್ತಿಯು ಸಂಪೂರ್ಣಗೊಂಡು ಮದಲಿಂಗನ ಅನ್ಯೋನ್ಯತೆಗೆ ಸೇರಿದ್ದಾಳೆಂದು ಗ್ರಹಿಸಿಕೊಳ್ಳುವಾಗ ಅವರುಗಳಿಗೆ ನಿಸ್ಸಂದೇಹವಾಗಿ ಹೆಚ್ಚಿನ ಗಾಬರಿಯುಂಟಾಗುತ್ತದೆ. ಅವರುಗಳು ಈ ರೀತಿಯಾಗಿ ನಿರಾಸಕ್ತಿಯಿಂದ ಮತ್ತು ವಿಪರೀತ ಹೊರೆಹೊತ್ತವರಾಗಿ ಆ ಬಹುಮಾನವನ್ನು ಕಳಕೊಳ್ಳುತ್ತಾರೆ. ಆದರೆ, ದೇವರ ಯೋಜನೆಯ ಸೌಂದರ್ಯವನ್ನು ಅದು ಅವರಿಗಾಗಿಯೂ ಮತ್ತು ಲೋಕದ ಮಾನವಜಾತಿ ಯವರಿಗಾಗಿಯೂ ಇರುವ ಪ್ರೀತಿಯಲ್ಲಿ ಒಂದಾಗಿದೆ ಎಂಬುದನ್ನು ಅವರು ನಂತರದಲ್ಲಿ ತಿಳುಕೊಳ್ಳಲು ಪ್ರಾರಂಭಿಸುತ್ತಾರೆ, ತಮ್ಮ ದುಃಖವನ್ನು ನಿಧಾನವಾಗಿ ಗೆಲ್ಲುತ್ತಾರೆ, ಮತ್ತು ಅವರುಗಳು "ಸದಾ ಜೀವಿಸಿ ಆಳುವಾತನಿಗೆ ಹಲ್ಲೆಲೂಯಾ!" ಎಂದು ಕೂಗಿ ಹೇಳುತ್ತಾರೆ. ನಾವುಗಳು "ಸಂತೋಷಪಡೋಣ, ಹರ್ಷಗೊಳ್ಳೋಣ, ಆತನನ್ನು ಘನಪಡಿಸೋಣ" (ಪ್ರಕಟನೆ 19:7). ದೇವರ ಹೇರಳವಾದ ಸವಲತ್ತುಗಳನ್ನೂ ಗಮನಿಸಿರಿ ; – ನೀವು ಕರ್ತನ ಮದಲಗಿತ್ತಿಯಲ್ಲವಾದರೂ ನೀವುಗಳು ಮದುವೆಯ ಭೋಜನದಲ್ಲಿ ಪಾಲುಗಾರರಾಗಬಹುದು" ಎಂಬ ಸಂದೇಶವು ಅವರಿಗೆ ಕಳುಹಿಸಲ್ಪಟ್ಟಿದೆ – "ಯಜ್ಞದ ಕುರಿಯಾದಾತನ ವಿವಾಹದ ಔತಣಕ್ಕೆ ಕರಿಸಿಕೊಂಡವರು ಧನ್ಯರು" (ವಚನ 19:9). ಈ ಸಮೂಹವು, ಸೂಕ್ತಸಮಯದಲ್ಲಿ, ದೇವರ ದಂಡನೆಗಳ ಮೂಲಕ, ಆತನೊಂದಿಗೆ, ಆತನ ಯೋಜನೆಯೊಂದಿಗೆ ಪೂರ್ಣವಾದ ಸಾಮರಸ್ಯಕ್ಕೆ ಬರುತ್ತಾರೆ, ಅಂತಿಮವಾಗಿ ಅವರು ಮದಲಗಿತ್ತಿಯ ಪಕ್ಕದ ಸ್ಥಾನದಲ್ಲಿರುವಂತೆ – 'L' ಎಂಬ ಆತ್ಮೀಕ ಸಮತಲದಲ್ಲಿನ 'y' ಆಗಿ ಅವರು ತಮ್ಮ ನಿಲುವಂಗಿಗಳನ್ನು ತೊಳೆದುಕೊಳ್ಳುತ್ತಾರೆ (ಪ್ರಕಟನೆ 7:14,15).

'ಸಂಕಟದ ಸಮಯ'ವು ಲೋಕವನ್ನು ಬಾಧಿಸುವಾಗ, ಬಾಬೇಲ್ ಪತನಗೊಳ್ಳಲು ಮತ್ತು ನಾಶಗೊಳ್ಳಲು ಪ್ರಾರಂಭಿಸುತ್ತದೆ. ಎಲ್ಲಾ ಮಾನವ ಸಮಾಜಗಳ, ಸರ್ಕಾರಗಳ ಉರುಳುವಿಕೆಯಾಗಿ ಪ್ರಪಂಚವನ್ನು ನೈತಿಕ ಆಳ್ವಿಕೆಗೆ ಸಿದ್ಧತೆಮಾಡುತ್ತದೆ. ಉಪದ್ರವದ ಕಾಲದಲ್ಲಿ, ಅನ್ಯಜನರ ಕಾಲ ಪೂರ್ಣವಾಗುವವರೆಗೆ ಬಹಿಷ್ಕರಿಸಲ್ಪಟ್ಟಿದ್ದ ಶಾರೀರಿಕ ಇಸ್ರಾಯೇಲ್ಯರು, (e) ದೇವರ ದಯೆಗೆ ಪುನರ್ವಶಗೊಳ್ಳುವರು, ಮತ್ತು ಸುವಾರ್ತಾ ಸಭೆ ಅಥವಾ ಆತ್ಮೀಕರಾದ ಇಸ್ರಾಯೇಲ್ಯರು ಪೂರ್ಣಗೊಂಡು ಮಹಿಮೆ ಹೊಂದಿಕೊಳ್ಳುವರು. ಸಹಸ್ರಮಾನ ಯುಗದಲ್ಲಿ ಇಸ್ರಾಯೇಲ್ ಈ ಲೋಕದ ಪ್ರಧಾನ ರಾಷ್ಟ್ರವಾಗಿರುತ್ತದೆ. ಭೂಲೋಕದ ಸಮತಲದಲ್ಲಿರುವವರೆಲ್ಲರ ಮೇಲೆ ಮುಖ್ಯಸ್ಥರಾಗಿ ಎಲ್ಲಾ ವಿಧೇಯರೂ ಏಕತೆಗೆ ಮತ್ತು ಸಾಮರಸ್ಯಕ್ಕೆ ಕ್ರಮೇಣವಾಗಿ ಸೆಳೆಯಲ್ಪಡುತ್ತಾರೆ.

ಪರಿಪೂರ್ಣವಾದ ಮಾನವ ಸ್ವಭಾವಕ್ಕೆ ಅವರ ಪುನರ್ವಶವು, ಮಾತ್ರವಲ್ಲದೆ ಸಾಮಾನ್ಯವಾಗಿ ಲೋಕದವರೆಲ್ಲರ ಪುನರ್ವಶಕ್ಕೆ ತರುವದು ಒಂದು ಕ್ರಮೇಣವಾದ ಕಾರ್ಯವಾಗಿರುತ್ತದೆ. ಅದು

ಪೂರ್ಣಗೊಳ್ಳಲು ಸಹಸ್ರಮಾನ ಪೂರ್ತಿ ಅಗತ್ಯವಾಗಿದೆ. ಆ ಸಹಸ್ರ ವರ್ಷದ ಕ್ರಿಸ್ತನ ಆಳ್ವಿಕೆಯಲ್ಲಿ ಆದಾಮನ ಮರಣದ ಫಲಿತಾಂಶಗಳು ಕ್ರಮೇಣವಾಗಿ ನುಂಗಲ್ಪಡುವುದು ಅಥವಾ ನಾಶವಾಗುವುದು. ಅದರ ವಿವಿಧ ಹಂತಗಳು – ಅನಾರೋಗ್ಯ, ನೋವು ಮತ್ತು ಬಲಹೀನತೆ ಮತ್ತು ಸಮಾಧಿಯು ಸಹಾ – ಅವುಗಳು ಮಹಾ ಪುನರ್‌ವಶಕಾರನ ಶಕ್ತಿಗೆ ವಿಧೇಯವಾಗುತ್ತವೆ. ಆ ಯುಗದ ಅಂತ್ಯದಲ್ಲಿ ನಮ್ಮ ನಕ್ಷೆಯ ಮಹಾ ಪಿರಮಿಡ್ ಪೂರ್ಣಗೊಳ್ಳುತ್ತದೆ. ಕ್ರಿಸ್ತನು ಶಿರ ಮತ್ತು ಶರೀರದ ('x') ದೇವದೂತರುಗಳು ಮತ್ತು ಮಾನವರ ಮಹಾ ಸಮೂಹದ ಎಲ್ಲಾ ಸಂಗತಿಗಳಲ್ಲಿ ತಂದೆಯ ನಂತರದ (ಮುಖ್ಯಸ್ಥ) ಶಿರಸ್ಸಾಗಿರುತ್ತಾನೆ. ನಂತರದ ಕಾಲಕ್ರಮದಲ್ಲಿ ಮತ್ತು ಶ್ರೇಣಿಯಲ್ಲಿ ಮಹಾ ಸಮೂಹ, ಆತ್ಮೀಕ ಜೀವಿಗಳಿರುತ್ತವೆ ('y'). ನಂತರದಲ್ಲಿ ದೇವದೂತರುಗಳು; ನಂತರ ಶಾರೀರಿಕ ಇಸ್ರಾಯೇಲ್ಯರು ('z') ನಿಜವಾದ ಇಸ್ರಾಯೇಲ್ಯರು ಮಾತ್ರವೇ ಈ ಲೋಕದ ರಾಷ್ಟ್ರಗಳ ಶಿರಸ್ಸಾಗಿ (ಮುಖ್ಯಸ್ಥನಾಗಿ); ನಂತರದಲ್ಲಿ, ಪುನರ್‌ವಶಗೊಂಡಿರುವ ಈ ಲೋಕದ ಜನರು ('w') – ಮಾನವಕುಲದ ಶಿರಸ್ಸಾಗಿರುವ ಆದಾಮನು ಪಾಪಮಾಡುವ ಮೊದಲು ಇದ್ದಂತೆ ಪರಿಪೂರ್ಣರಾಗುವರು. ಈ ಪುನರ್‌ವಶವು ಸಹಸ್ರಮಾನ ಯುಗದಲ್ಲಿ – ಸಮಸ್ತವನ್ನು ಸರಿಮಾಡುವ ಕ್ರಮೇಣವಾಗಿ ನೆರವೇರುವುದು (ಅ.ಕೃ. 3:21). ಕೆಲವರು, ಹೇಗೂ, ನಮ್ಮ ಜನಾಂಗದೊಳಗಿಂದ ನಾಶಗೊಳ್ಳುವರು. ಮೊದಲಿಗೆ, ಪೂರ್ಣ ಬೆಳಕಿನಡಿಯಲ್ಲಿರುವವರು, ಮತ್ತು ನೂರು ವರ್ಷಗಳ ಅವಕಾಶ ಹೊಂದಿದವರು ನೀತಿವಂತಿಕೆ ಮತ್ತು ಪರಿಪೂರ್ಣತೆಯ ಪ್ರಗತಿ ಹೊಂದಲು ನಿರಾಕರಿಸುವವರು (ಯೆಶಾಯ 65:20), ಮತ್ತು ಎರಡನೆಯದಾಗಿ, ಸಹಸ್ರಮಾನದ ಅಂತ್ಯದಲ್ಲಿ ಪರಿಪೂರ್ಣತೆಯ ಹಾದಿಯಲ್ಲಿ ಪ್ರಗತಿ ಹೊಂದುತ್ತಿರುವವರು ಅಂತಿಮ ಪರೀಕ್ಷೆಯಲ್ಲಿ ಅಪ್ರಮಾಣಿಕರಾಗುವವರು (ಪ್ರಕಟನೆ 20:9). ಅಂಥವರೆಲ್ಲ ಎರಡನೆಯ ಮರಣವನ್ನಪ್ಪುತ್ತಾರೆ, ಇದರಿಂದ ಯಾವುದೇ ಪುನರುತ್ಥಾನವಾಗಲೀ, ಪುನರ್‌ವಶದ ವಾಗ್ದಾನವಾಗಲೀ ಇಲ್ಲ. ಆದರೆ ಪ್ರತಿಯೊಬ್ಬರಿಗೂ ಒಂದು ಪೂರ್ಣ ವೈಯಕ್ತಿಕ ಪರೀಕ್ಷೆಯನ್ನು ಒದಗಿಸಲಾಗುವುದು. ಆದರೆ ಒಂದು ಈಡುಬಲಿಯನ್ನು ಸದಾಕಾಲಕ್ಕೂ ನೀಡಲಾಗಿದೆ. ಕ್ರಿಸ್ತನು ಇನ್ನು ಮುಂದೆ ಮರಣಹೊಂದುವವನಲ್ಲ.

ಸಭೆಯ ಉತ್ಕೃಷ್ಟತೆ ಮತ್ತು ಆ ಎಲ್ಲಾ ಸಂಗತಿಗಳ ಪುನರ್‌ವಶದ ಮೂಲಕ ಇಸ್ರಾಯೇಲ್ಯರ ಮತ್ತು ಲೋಕದ ಎಲ್ಲಾ ಕುಟುಂಬಗಳನ್ನು ಆಶೀರ್ವದಿಸುವ ಬಗ್ಗೆ ನಾವು ನಮ್ಮ ತಂದೆಯ ಮಹಾ ಯೋಜನೆಯನ್ನು ನೋಡುವಾಗ "ಮೇಲಣ ಲೋಕಗಳಲ್ಲಿ ದೇವರಿಗೆ ಮಹಿಮೆ, ಭೂಲೋಕದಲ್ಲಿ ಮನುಷ್ಯರೊಳಗೆ ಸಮಾಧಾನ. ದೇವರು ಅವರಿಗೆ ಒಲಿಯುತ್ತಾನೆ" (ಲೂಕ 2:14) ಎಂಬ ದೇವದೂತರುಗಳ ಗಾಯನವು ನಮ್ಮ ನೆನಪಿಗೆ ಬರುತ್ತದೆ. ಅದು "ಕ್ರಿಸ್ತನಲ್ಲಿ ಎಲ್ಲವನ್ನೂ ಒಂದುಗೂಡಿಸುವುದು" ಎಂಬ ದೇವರ ಯೋಜನೆಯ ನೆರವೇರಿಕೆಯಾಗುತ್ತದೆ. ಹಾಗಾದರೆ ಯಾರು ದೇವರ ಯೋಜನೆಯು ವಿಫಲವಾಗಿದೆ ಎಂದು ಹೇಳಬಲ್ಲರು? "ಆತನು ಒಳ್ಳೆಯದಕ್ಕಾಗಿ ಕೆಟ್ಟದ್ದನ್ನು ತಳ್ಳಿಹಾಕಲಿಲ್ಲ ಮತ್ತು ಆತನು ಮನುಷ್ಯರ ಮತ್ತು ದೆವ್ವಗಳ ಕ್ರೋಧವು ಆತನ ಸ್ತೋತ್ರಿಸುವವರನ್ನಾಗಿ ಮಾಡಿದನು" ಎಂದು ಆಗ ಯಾರು ಹೇಳಿಯಾರು?

ಪಿರಮಿಡ್‌ನ ಆಕೃತಿಯು ಪರಿಪೂರ್ಣ ಜೀವಿಗಳನ್ನು ವಿವರಿಸುವ ಉದ್ದೇಶವನ್ನು ಉತ್ತಮವಾಗಿ ನಿರ್ವಹಿಸುತ್ತದೆ, ಮಾತ್ರವಲ್ಲದೇ ಇಡೀ ಸೃಷ್ಟಿಯ ಏಕತೆಯನ್ನು ಪ್ರತಿನಿಧಿಸುವ ವಿವರಣೆಯ ಉದ್ದೇಶಕ್ಕೆ ಇದು ಉತ್ತರಿಸುತ್ತಲೇ ಇರುತ್ತದೆ, ಯಾವಾಗ ಸಾಮರಸ್ಯ ಮತ್ತು ಎಲ್ಲಾದರ ಪರಿಪೂರ್ಣತೆಯು ಕ್ರಿಸ್ತನ ಪ್ರಧಾನತೆಯಡಿಯಲ್ಲಿ ಸೇರಿಕೊಳ್ಳುತ್ತದೋ, ಆಗ ಅದರ ಶಿರಸ್ಸಾದ ಅವನ ದೇಹವಾದ ಸಭೆಯು ಮಾತ್ರವಲ್ಲ, ಪರಲೋಕ ಭೂಲೋಕಗಳ ಎಲ್ಲಾ ವಿಷಯಗಳೂ ಸಹ ದೇವರ ಯೋಜನೆಯ ನೆರವೇರಿಕೆಯಲ್ಲಿ ಒಂದೇ ಆಗಿರುತ್ತದೆ (ಎಫೆಸ 1:10).

ಕ್ರಿಸ್ತ ಯೇಸುವು ಈ ಭವ್ಯವಾದ ರಚನೆಯ "ಪ್ರಾರಂಭ", "ಶಿರಸ್ಸು", "ಮೇಲ್ಭಾಗದ ಕಲ್ಲು", "ಮುಖ್ಯವಾದ (ಮೇಲಿನ) ಮೂಲೆಗಲ್ಲು", ಮೇಲ್ಭಾಗದ ಕಲ್ಲಿನ ಸಾಲುಗಳು ಮತ್ತು ಕೋನಗಳೊಂದಿಗಿನ ಸಾಮರಸ್ಯವನ್ನು ಹೊಂದುವಂತೆ ಪ್ರತಿ ಅಡಿಕಲ್ಲುಗಳನ್ನೂ ಕಟ್ಟಬೇಕಾಗಿದೆ. ಈ ರಚನೆಯಲ್ಲಿ ಎಷ್ಟೋ ವಿಧವಾದ ಕಲ್ಲುಗಳಿದ್ದರೂ ದೇವಪುತ್ರರಲ್ಲಿ ಅವರು ಭೂಲೋಕದವರಾಗಿರಲೀ ಹಾಗೂ ಪರಲೋಕದವರೇ ಆಗಿರಲಿ ಅವರುಗಳಲ್ಲಿ ಎಷ್ಟೇ ವಿಭಿನ್ನ ಸ್ವಭಾವಗಳಿದ್ದರೂ ಅವರೆಲ್ಲರೂ ಸದಾಕಾಲಕ್ಕೂ ಆತನಿಗೆ ಒಪ್ಪಿಗೆಯಾಗಬೇಕು, ಆತನ ಮಗನ ಸ್ವರೂಪಕ್ಕೆ ಹೊಂದಿಕೆಯಾಗಬೇಕು. ಈ ಕಟ್ಟಡದವರೆಲ್ಲರೂ

ದೇವರಿಗೆ ವಿಧೇಯತೆಯ ಸ್ಫೂರ್ತಿಯಲ್ಲಿ ಮತ್ತು ಆತನೆಡೆಗೆ ಮತ್ತು ಆತನ ಎಲ್ಲಾ ಸೃಷ್ಟಿಯೆಡೆಗೆ ಪ್ರೀತಿಯಲ್ಲಿ (ಕ್ರಿಸ್ತನಲ್ಲಿ ಧಾರಾಳವಾಗಿ ವಿಶದಗೊಂಡಿರುವಂತೆ) ಭಾಗವಹಿಸಬೇಕು. ಇದು – "ನೀನು ನಿನ್ನ ದೇವರಾದ ಕರ್ತನನ್ನು ಪೂರ್ಣಹೃದಯದಿಂದಲೂ, ನಿನ್ನ ಪೂರ್ಣ ಪ್ರಾಣದಿಂದಲೂ, ನಿನ್ನ ಪೂರ್ಣ ಬುದ್ಧಿಯಿಂದಲೂ, ನಿನ್ನ ಪೂರ್ಣ ಶಕ್ತಿಯಿಂದಲೂ ಪ್ರೀತಿಸಬೇಕು" ಮತ್ತು "ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು" ಎಂಬ ದೇವರಾಜ್ಞೆಗಳ ಪಾಲನೆಯಾಗಿದೆ.

ಮತ್ತು ನೀತಿವಂತಿಕೆಗಾಗಿ ಅಡಿಪಾಯವೂ ಇಹಲೋಕದ ಮೇಲೆ ಅಲ್ಲ, ಪರಲೋಕದಲ್ಲಿ ಇಡಲ್ಪಟ್ಟಿದೆ ಎಂಬ ಸತ್ಯವು ವಿಶದವಾಗುತ್ತದೆ. ಅದರ ಕೆಳಗೆ ಕಟ್ಟಲ್ಪಡುವವರು ಮತ್ತು ಈ ಪರಲೋಕದ ಅಡಿಪಾಯದೊಂದಿಗೆ ಸೇರಿಸಲ್ಪಟ್ಟವರು ಅವುಗಳನ್ನು ಪರಲೋಕದ ಆಕರ್ಷಣೆಗಳೊಂದಿಗೆ ಮತ್ತು ನಿಯಮಗಳೊಂದಿಗೆ ಆತುಕೊಂಡಿರುತ್ತಾರೆ. ಈ ಕ್ರಮವು ಭೂಲೋಕದ ಕಟ್ಟಡಕ್ಕೆ ಬಹಳವಾಗಿ ವಿರುದ್ಧವಾಗಿದ್ದರೂ, ಇಡೀ ರಚನೆಯನ್ನು ಯಾರ ಹೋಲಿಕೆಯಲ್ಲಿ ಮೊದಲು ಹಾಕಬೇಕಾಗಿದೆ




**The VISION . . . Shall Speak . . . at the Time of the End . . . Habakkuk 2:3**

"A Plan of the Ages, which he formed for the ANOINTED Jesus our Lord;"—Ephesians 3:11 [Emphatic Diaglott]
"Write down the vision and make it plain upon tables that everyone may read it fluently."—Habakkuk 2:2 [Leeser's Translation]

ಈ ಪ್ರಕ್ರಿಯೆಯಲ್ಲಿ (ದೇವರ ವಾಕ್ಯವು ಒಂದೇ ಶಿರಸ್ಸಿನಡಿಯಲ್ಲಿ ಪರಲೋಕ ಮತ್ತೂ ಭೂಲೋಕ ಇವೆರಡರ ಎಲ್ಲಾ ಸಂಗತಿಗಳ ಒಟ್ಟಾಗುವಿಕೆಯನ್ನು ವಿವರಿಸುತ್ತವೆ). ಶಿರಸ್ಸಾದ ಕ್ರಿಸ್ತ ಯೇಸುವನ್ನು ಮೊದಲು ಆಯ್ಕೆಮಾಡಿಕೊಳ್ಳಲಾಗಿದೆ. ಎರಡನೆಯದಾಗಿ, ಆತನ ದೇಹವಾದ ಸಭೆ. ದೇವದೂತರುಗಳು ಮತ್ತು ಇತರೆ ಆತ್ಮೀಕ ವರ್ಗದವರು ನಂತರದ ಶ್ರೇಣಿಯಲ್ಲಿರುತ್ತಾರೆ; ತದನಂತರದಲ್ಲಿ ಇಸ್ರಾಯೇಲ್ಯರ ಮತ್ತು ಈ ಲೋಕದ ಅರ್ಹರುಗಳು. ಅತ್ಯುನ್ನತ ಸ್ಥಾನದಿಂದ ಪ್ರಾರಂಭಿಸಿ ಎಲ್ಲರನ್ನೂ ಸಾಮರಸ್ಯ ಮತ್ತು ಏಕತೆಗೆ ತರುವವರೆಗೆ ಈ ಕ್ರಮವು ಮುಂದುವರಿಯುತ್ತದೆ.

ಒಂದು ವಿಶಿಷ್ಟ ಸಂಗತಿಯೆಂದರೆ, ಈ ಪರೀಕ್ಷಿಸಿದ, ಮುಖ್ಯವಾದ ಮೇಲಿನ ಮೂಲೆಗಲ್ಲನ್ನು ಮೊದಲಾಗಿ ಇಡಲ್ಪಟ್ಟು ಅದನ್ನು "ಅಡಿಪಾಯದ ಕಲ್ಲು" ಎಂದು ಕರೆಯಲಾಗಿದೆ. ಈ ರೀತಿಯಲ್ಲಿ ದೇವರಿಗೆ ಎಂದು ಕಂಡುಕೊಳ್ಳುವುದು ಎಷ್ಟೋ ಸೂಕ್ತವಾಗಿದೆ. ನಮ್ಮ ಈ ಅಡಿಪಾಯವು ಮೇಲ್ಮುಖವಾಗಿ ಕಟ್ಟಲ್ಪಡುತ್ತಿದೆಯೇ ಹೊರತು ಕೆಳಮುಖವಾಗಿ ಅಲ್ಲ ಎಂದು ಕಂಡುಕೊಳ್ಳುವದೂ ಅಷ್ಟೇ ಸೂಕ್ತವಾಗಿದೆ. ಮತ್ತು ನಾವು ಜೀವಂತ ಕಲ್ಲುಗಳಾಗಿ "ಎಲ್ಲಾ ವಿಷಯಗಳಲ್ಲಿ ಆತನಿಗಾಗಿ ಕಟ್ಟಲ್ಪಡುತ್ತಿದ್ದೇವೆ''. ಅದುವರೆಗೆ ಭೂಪರಲೋಕಗಳಲ್ಲಿರುವ ಎಲ್ಲಾ ಸೃಷ್ಟಿಗಳೂ ಎಲ್ಲಾ ಪ್ರಕೃತಿಗಳೂ ದೇವರನ್ನು ಪರಿಪೂರ್ಣ ವಿಧೇಯತೆಯ ಪಥಕ್ಕೆ ಅನುಗುಣವಾಗಿ ಸ್ತುತಿಸುತ್ತಾ ಸೇವೆಮಾಡುವವರೆಗೆ ಈ ರೀತಿಯಲ್ಲಿ ಕಾರ್ಯವು ಸಹಸ್ರಮಾನ ಯುಗದಲ್ಲಿ ಪ್ರಗತಿಗೊಳ್ಳುತ್ತಾ ಇರುತ್ತದೆ, ವಿಶ್ವವು ಆಗ ಶುದ್ಧಿಯಾಗುತ್ತದೆ; ಯಾಕೆಂದರೆ, ಆ ದಿನದಲ್ಲಿ "ಆ ಪ್ರವಾದಿಯ ಮಾತನ್ನು ಕೇಳದಿರುವ ಪ್ರತಿಯೊಬ್ಬನೂ ನಮ್ಮ ಜನರೊಳಗಿಂದ ಸಂಪೂರ್ಣ ವಾಗಿ ನಾಶವಾಗುವನು" (ಅ.ಕೃ. 3:22,23). ಇದು ಎರಡನೆಯ ಮರಣವು.

## ಅರಣ್ಯದಲ್ಲಿ ದೇವದರ್ಶನ ಗುಡಾರ

## The Tabernacle of the Wilderness

ಯುಗಗಳ ನಕ್ಷೆಯಲ್ಲಿ ತೋರಿಸಿದ ಅದೇ ಪಾಠವನ್ನು ಇಲ್ಲಿ ದೈವಿಕವಾಗಿ ಅಣಿಮಾಡಿದ ನಮೂನೆಯಲ್ಲಿ ತೋರಿಸಲಾಗಿದೆ, ಇದರ ಪಾಠಗಳನ್ನು ಅನಂತರದಲ್ಲಿ ಇನ್ನೂ ಹೆಚ್ಚು ಸಂಪೂರ್ಣವಾಗಿ ಪರಿಶೀಲಿಸಲಾಗುವುದು. ನಾವು ಅದನ್ನು ಒಂದರ ಪಕ್ಕದಲ್ಲಿ ಒಂದಾಗಿ ಇಡುತ್ತೇವೆ. ಮಹಾಪವಿತ್ರ ಸ್ಥಾನಕ್ಕೆ ಹೋಗುವ ವಿವಿಧವಾದ ಸಮತಲಗಳು ಅಥವಾ ಹಂತಗಳನ್ನು ಸರಿಯಾಗಿ ಗಮನಿಸಬಹುದು ಅಥವಾ ಪ್ರಶಂಶಿಸಿಕೊಳ್ಳಬಹುದು. ದೇವದರ್ಶನ ಗುಡಾರದ ಅಂಗಳದ ಹೊರಗಡೆ ನೀತಿಭ್ರಷ್ಟ ಸಮತಲ – 'ಖ' ಮೇಲೆ ಪಾಪಭರಿತವಾದ ಸಮಗ್ರ ಲೋಕವನ್ನೇ ನೋಡಬಹುದು. "ದ್ವಾರ"ದ ಮೂಲಕ ಅಂಗಳಕ್ಕೆ ಪ್ರವೇಶಿಸಿದರೆ ನಾವು 'ಓ' ಸಮತಲದಲ್ಲಿ ನಂಬಿಗಸ್ತರೂ ಅಥವಾ ನೀತಿನಿರ್ಣಯಗೊಂಡ ವ್ಯಕ್ತಿಗಳೂ ಆಗುತ್ತೇವೆ. ಪ್ರತಿಷ್ಠೆಯಲ್ಲಿ ಮುಂದುವರೆಯುವವರು, ದೇವದರ್ಶನ ಗುಡಾರದ ಬಾಗಿಲನ್ನು ನೂಕಿಕೊಂಡು ಒಳಗೆ 'ಓ' ಸಮತಲಕ್ಕೆ ಪ್ರವೇಶಿಸಿ ಯಾಜಕರಾಗುತ್ತಾರೆ. ಅವರುಗಳು "ನೈವೇದ್ಯದ ರೊಟ್ಟಿ"ಯಿಂದ ಬಲಹೊಂದುತ್ತಾರೆ. ದೀಪಸ್ಥಂಭಗಳಿಂದ ಜ್ಞಾನೋದಯ ಪಡಕೊಳ್ಳುತ್ತಾರೆ ಮತ್ತು ಯೇಸು ಕ್ರಿಸ್ತನಿಂದ ದೇವರಿಗೆ ಮೆಚ್ಚಿಗೆಯಾಗುವ ಸುಗಂಧ ದ್ರವ್ಯವನ್ನು ಬಂಗಾರದ ಧೂಪವೇದಿಯಲ್ಲಿ ಸಮರ್ಪಿಸಲು ಶಕ್ತರಾಗುತ್ತಾರೆ. ಅಂತಿಮವಾಗಿ, ಮೊದಲನೆಯ ಪುನರುತ್ಥಾನದಲ್ಲಿ, ಅವರುಗಳು ಪರಿಪೂರ್ಣವಾದ ಅಥವಾ ಅತಿ ಪರಿಶುದ್ಧವಾದ (ಸಮತಲ 'ಏ') ಆತ್ಮೀಕ ಸ್ಥಿತಿಯನ್ನು ಪ್ರವೇಶಿಸುತ್ತಾರೆ. ಆಗ ಅವರುಗಳು ಕ್ರಿಸ್ತನೊಂದಿಗೆ 'ಏ' ಸಮತಲದಲ್ಲಿ ದೇವರ ರಾಜ್ಯದ ಮಹಿಮೆಯಲ್ಲಿ ಅನ್ಯೋನ್ಯತೆಯನ್ನು ಹೊಂದಿಕೊಳ್ಳುತ್ತಾರೆ.

## The Blessed Hope

"A little while, earth's fightings will be over;
A little while, her tears be wiped away;
A little while, the power of Jehovah
Shall turn this darkness to Millennial day"

"A little while. the ills that now o'erwhelm men
Shall to the memories of the past belong ;
"A little while, the love that once redeemed them
Shall change their weeping into grateful song"

"A little while! 'Tis ever drawing nearer –
The brighter dawning of that gorious day.
Praise God, the light is hourly growing clearer,
Shining more and more unto the perfect day"

## ಆಶೀರ್ವಾದಕರ ನಿರೀಕ್ಷೆ

ಸ್ವಲ್ಪ ಕಾಲ ಮಾತ್ರ, ಭೂಮಿಯ ಯುದ್ಧವು ಕೊನೆಗಾಣುವದು;
ಸ್ವಲ್ಪಕಾಲ ಮಾತ್ರ, ಆಕೆಯ ಕಣ್ಣೀರು ಒರೆಸಲ್ಪಡುವುದು;
ಸ್ವಲ್ಪಕಾಲ ಮಾತ್ರ, ಯೆಹೋವನ ಶಕ್ತಿಯು
ಈ ಕತ್ತಲೆಯನ್ನು ಮಿಲಿಯಾಂತರ ದಿನವನ್ನಾಗಿಸುವುದು.

ಸ್ವಲ್ಪಕಾಲ ಮಾತ್ರ, ಮನುಷ್ಯರನ್ನು ಧ್ವಂಸ ಮಾಡು ಕಾಯಿಲೆಗಳು
ಹಿಂದಿನ ನೆನಪಾಗಿ ಸರಿಯುವುದು;
ಸ್ವಲ್ಪಕಾಲ ಮಾತ್ರ, ಅವರನ್ನು ವಿಮೋಚಿಸುವ ಪ್ರೀತಿಯು
ಅವರ ಕಣ್ಣೀರನ್ನು ಮಾರ್ಪಡಿಸಿ ಕೃತಜ್ಞತೆಯ ಗೀತೆಯನ್ನಾಗಿಸುವುದು.

ಸ್ವಲ್ಪಕಾಲ ಮಾತ್ರ, ಅದು ಎಂದೆಂದಿಗೂ ಸಮೀಪಿಸುತ್ತದೆ –
ಮಹಿಮಾದಿನದ ಪ್ರಕಾಶಮಯ ಉದಯ
ದೇವರನ್ನು ಸ್ತುತಿಸು, ಪ್ರತಿ ಗಳಿಗೆಗೂ ಬೆಳಕು ಸ್ಫುಟವಾಗಿ ಹೊಳೆಯುತ್ತಿದೆ
ಪರಿಪೂರ್ಣ ದಿನಕ್ಕಾಗಿ ಹೆಚ್ಚು ಹೆಚ್ಚಾಗಿ ಹೊಳೆಯುತ್ತಿದೆ"

* * * * * * *

# ಅಧ್ಯಯನ – 13 Study XIII

# ಈ ಲೋಕದ ಸಾಮ್ರಾಜ್ಯಗಳು

## THE KINGDOMS OF THIS WORLD

**ಮೊದಲ ಸಾಮ್ರಾಜ್ಯ – ಅದರ ಮುಟ್ಟುಗೋಲು – ಅದರ ಉದ್ಧಾರ ಮತ್ತು ಅದರ ಪುನರ್‌ಸ್ಥಾಪನೆ – ದೇವರ ಸಾಂಕೇತಿಕ ರಾಜ್ಯ – ಅಪಹರಣಕಾರ – ಪ್ರಸ್ತುತ ರಾಜ್ಯದ ಎರಡು ಹಂತಗಳು – ದೇವರಿಂದ ನೇಮಿಸಲ್ಪಟ್ಟ ಅಧಿಕಾರಗಳು – ಅವುಗಳ ಬಗ್ಗೆ ನೆಬೂಕದ್ನೇಚರನ ದೃಷ್ಟಿಕೋನ – ದಾನಿಯೇಲನ ದೃಷ್ಟಿಕೋನ ಮತ್ತು ಅರ್ಥವಿವರಣೆ – ಮತ್ತೊಂದು ದೃಷ್ಟಿಕೋನದಿಂದ ಈ ಲೋಕದ ರಾಜ್ಯಗಳು – ಪ್ರಸ್ತುತ ಸರ್ಕಾರಗಳೊಂದಿಗೆ ಸಭೆಯ ಯುಕ್ತವಾದ ಸಂಬಂಧ – ರಾಜರ ದೈವದತ್ತವಾದ ಹಕ್ಕನ್ನು ಸಂಕ್ಷಿಪ್ತವಾಗಿ ಪರೀಕ್ಷಿಸಲಾಗಿದೆ – ಕ್ರೈಸ್ತ ಪ್ರಪಂಚದ ಹಕ್ಕೇಳಿಕೆಯು ತಪ್ಪಾದುದು – ಐದನೆಯ ವಿಶ್ವ ಸಾಮ್ರಾಜ್ಯದಲ್ಲಿ ಉತ್ತಮವಾದ ನಿರೀಕ್ಷೆ.**

ದೈವಿಕ ಪ್ರಕಟನೆಯ ಮೊದಲನೆಯ ಅಧ್ಯಾಯದಲ್ಲಿಯೇ, ದೇವರು ತನ್ನ ಭೂಲೋಕದ ಸೃಷ್ಟಿಯ ಮತ್ತು ಅದರ ಆಡಳಿತದ ಬಗ್ಗೆ ಪ್ರಕಟಿಸುವವನಾಗಿ – "ನಮ್ಮ ಸ್ವರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯರನ್ನು ಉಂಟು ಮಾಡೋಣ; ಅವರು ಸಮುದ್ರದಲ್ಲಿರುವ ಮೀನುಗಳ ಮೇಲೆಯೂ, ಅಂತರಿಕ್ಷದಲ್ಲಿ ಹಾರಾಡುವ ಪಕ್ಷಿಗಳ ಮೇಲೆಯೂ, ಪಶುಗಳ ಮೇಲೆಯೂ, ನೆಲದ ಮೇಲೆ ಹರಿದಾಡುವ ಎಲ್ಲಾ ಕ್ರಿಮಿಕೀಟಗಳ ಮೇಲೆಯೂ, ಎಲ್ಲಾ ಭೂಮಿಯ ಮೇಲೆಯೂ ದೊರೆತನ ಮಾಡಲಿ" (ಆದಿ. 1:26) ಎಂದು ಹೇಳುತ್ತಾನೆ. ಈ ರೀತಿಯಲ್ಲಿ ದೇವರು ತನ್ನ ಸ್ವರೂಪದಲ್ಲಿ ಮಾನವರನ್ನು ಉಂಟುಮಾಡಿದನು. ದೇವ ಸ್ವರೂಪದಲ್ಲಿ ಅವನನ್ನು ಉಂಟುಮಾಡಿದನು, ಅವರನ್ನು ಗಂಡು ಹೆಣ್ಣಾಗಿ ನಿರ್ಮಿಸಿದನು ಮತ್ತು ಅವರನ್ನು ಆಶೀರ್ವದಿಸಿದನು. ದೇವರು ಅವರಿಗೆ – "ನೀವು ಬಹುಸಂತಾನವುಳ್ಳವರಾಗಿ ಹೆಚ್ಚಿರಿ; ಭೂಮಿಯಲ್ಲಿ ತುಂಬಿಕೊಂಡು ಅದನ್ನು ವಶಮಾಡಿಕೊಳ್ಳಿರಿ, ಸಮುದ್ರದ ಮೀನುಗಳ ಮೇಲೆಯೂ, ಆಕಾಶದ ಪಕ್ಷಿಗಳ ಮೇಲೆಯೂ, ಭೂಮಿಯಲ್ಲಿ ಚಲಿಸುವ ಎಲ್ಲಾ ಜೀವಿಗಳ ಮೇಲೆಯೂ ದೊರೆತನಮಾಡಿರಿ" (ವಚನ 28) ಅಂದನು.

ಈ ರೀತಿಯಲ್ಲಿ ದೇವರು ಈ ಭೂಮಿಯ ಅಧಿಪತ್ಯವನ್ನು ಮೊದಲ ಮಾನವನಾದ ಆದಾಮನಿಂದ ಪ್ರತಿನಿಧಿತವಾದ ಮಾನವ ಕುಲದ ಕೈಯಲ್ಲಿಟ್ಟನು. ಆತನು ಪರಿಪೂರ್ಣನೂ ಆಗಿದ್ದರಿಂದ ಈ ಲೋಕದ ಪ್ರಭುವಾಗಲೂ, ಒಡೆಯನಾಗಲು, ಅರಸನಾಗಲು ಅರ್ಹನಾಗಿದ್ದನು. ಭೂಮಿಯ ಮೇಲೆ ಹೆಚ್ಚುತ್ತಾ ತುಂಬಲು ಮತ್ತು ವಶಪಡಿಸಿಕೊಳ್ಳಲು ಮತ್ತು ಪ್ರಾಬಲ್ಯ ಹೊಂದಿಕೊಳ್ಳಲು ನೀಡಿರುವ "ಅವರುಗಳು ದೊರೆತನ ಮಾಡಲಿ" ಮುಂತಾಗಿ ನೀಡಿದ ಆದೇಶಾಧಿಕಾರವು ಆದಾಮನಿಗೆ ಮಾತ್ರವಲ್ಲ, ಎಲ್ಲಾ ಮಾನವಕುಲಕ್ಕೂ ಅನ್ವಯಿಸು ವುದಾಗಿದೆ. ಮಾನವ ಕುಲವು ಪರಿಪೂರ್ಣ ಹಾಗೂ ಪಾಪರಹಿತವಾಗಿಯೇ ಉಳಿದುಕೊಳ್ಳುತ್ತಿದ್ದರೆ ದೊರೆತನವು ಎಂದಿಗೂ ಅದರ ಕೈತಪ್ಪಿ ಹೋಗುತ್ತಿರಲಿಲ್ಲ.

ಈ ಆದೇಶಾಧಿಕಾರದಲ್ಲಿ ಯಾವ ಮನುಷ್ಯನಿಗೂ ತನ್ನ ಸಹಜೀವಿಯ ಮೇಲೆ ಪ್ರಭುತ್ವ ಅಥವಾ ಅಧಿಕಾರವನ್ನು ನೀಡಲಾಗಿಲ್ಲ, ಆದರೆ ಸಮಗ್ರ ಜನಾಂಗಕ್ಕೆ ಲೋಕದ ಮೇಲೆ ಅದನ್ನು ಸಾಗುವಳಿ ಮಾಡಿ ಅದರ ಉತ್ಪನ್ನಗಳನ್ನು ಎಲ್ಲರ ಒಳಿತಿಗಾಗಿ ಉಪಯೋಗಿಸುವಂತೆ ಪ್ರಭುತ್ವ ನೀಡಲಾಗಿತ್ತು ಎಂಬುದನ್ನು ಗಮನಿಸಬಹುದು. ಈ ರೀತಿಯಾಗಿ ಭೂಲೋಕದ ಎಲ್ಲಾ ಸಸ್ಯ ಮತ್ತು ಖನಿಜ ಸಂಪತ್ತನ್ನು ಮಾನವನ ಅಧೀನತೆಗೆ ಕೊಟ್ಟಿರುವುದು ಮಾತ್ರವಲ್ಲ, ಎಲ್ಲಾ ವಿಧವಾದ ಪ್ರಾಣಿ ಜೀವಿಗಳೂ ಆತನ ನಿರ್ವಹಣೆಗೆ ಮತ್ತು ಆತನ ಸೇವೆಗೆ ಕೊಡಲಾಯಿತು. ಮಾನವ ಕುಲದವರು ಪರಿಪೂರ್ಣ ರಾಗಿಯೇ ಇದ್ದು ಸೃಷ್ಟಿಕರ್ತನ ಈ ಮೂಲ ಸಂಕಲ್ಪವನ್ನು ಮುಂದುವರಿಸುತ್ತಿದ್ದರೆ, ಅದು ಸಂಖ್ಯೆಯಲ್ಲಿ ಬೆಳೆದಂತೆಲ್ಲಾ ಮಾನವರು ಪರಸ್ಪರ ವಿಚಾರ ವಿನಿಮಯ ಮಾಡುವ, ಮತ್ತು ತಮ್ಮ ಪ್ರಯತ್ನಗಳನ್ನು ವ್ಯವಸ್ಥೆಗೊಳಿಸುವ, ಹಾಗೂ ನ್ಯಾಯಯುತ ಆಶೀರ್ವಾದಗಳನ್ನು ವಿವೇಕಯುತವಾಗಿ ಹಂಚುವ ಮಾರ್ಗವನ್ನು ಆಲೋಚಿಸುವ ಅಗತ್ಯತೆ ಯುಂಟಾಗುತ್ತಿತ್ತು. ಆದರೆ, ಕಾಲಾನುಕ್ರಮದಲ್ಲಿ, ಅವರ ಬೃಹತ್ ಸಂಖ್ಯೆಯ ನಿಮಿತ್ತ ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳುವುದು ಅಸಾಧ್ಯವಾಯಿತು. ಹೀಗಾಗಿ ವಿವಿಧ ವರ್ಗದ ಜನರು ತಮ್ಮ ಪರವಾಗಿ ಸಾಮಾನ್ಯ ಭಾವನೆಗಳ ಧ್ವನಿ ಎತ್ತಲು, ಮತ್ತು ಕಾರ್ಯವೆಸಗಲು ಕೆಲವರನ್ನು ಪ್ರತಿನಿಧಿಗಳನ್ನಾಗಿ ಆರಿಸಿಕೊಳ್ಳಬೇಕಾದ ಅಗತ್ಯತೆಯುಂಟಾಯಿತು. ಎಲ್ಲಾ ಮಾನವರೂ ಮಾನಸಿಕವಾಗಿ, ದೈಹಿಕವಾಗಿ ಮತ್ತು ನೈತಿಕವಾಗಿ

ಪರಿಪೂರ್ಣರಾಗಿಯೇ ಇರುತ್ತಿದ್ದರೆ; ಎಲ್ಲಾ ಮಾನವರೂ ದೇವರನ್ನು ಮತ್ತು ಆತನ ವಿಧಿನಿಯಮಗಳನ್ನು ಮಹತ್ವವಾಗಿ ಪ್ರೀತಿಸುತ್ತಿದ್ದರೆ, ತನ್ನ ನೆರೆಯವನನ್ನು ತನ್ನಂತೆಯೇ ಪ್ರೀತಿಸುತ್ತಿದ್ದರೆ, ಆ ವ್ಯವಸ್ಥೆಯಲ್ಲಿ ಯಾವುದೇ ಘರ್ಷಣೆಗಳುಂಟಾಗುತ್ತಿರಲಿಲ್ಲ.

ಈ ರೀತಿಯಲ್ಲಿ ಭೂಲೋಕದ ಆಡಳಿತದ ಬಗ್ಗೆ ಸೃಷ್ಟಿಕರ್ತನ ಮೂಲ ಸಂಕಲ್ಪವು ಪ್ರಜಾಧಿಪತ್ಯದ ಮಾದರಿಯದಾಗಿತ್ತು ಎಂದು ನಾವು ನೋಡಬಹುದು. ಈ ಆಡಳಿತದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಪಾಲುಗಾರನಾಗುತ್ತಾನೆ. ಇದರಲ್ಲಿ ಪ್ರತಿಯೊಬ್ಬನೂ ಪರಮಾಧಿಕಾರವುಳ್ಳವನೂ, ತನ್ನ ಕರ್ತವ್ಯಗಳನ್ನು ತನ್ನ ಮತ್ತು ಎಲ್ಲರ ಹಿತಕ್ಕಾಗಿ ನಿಭಾಯಿಸುವಲ್ಲಿ ಸಾಕಷ್ಟು ಅರ್ಹತೆಯುಳ್ಳವನೂ ಆಗಿರುತ್ತಾನೆ.

ಮನುಷ್ಯನಿಗೆ ನೀಡಲಾದ ಭೂಮಿಯ ಈ ಪ್ರಭುತ್ವವು ಒಂದು ಆಕಸ್ಮಿಕತೆಯನ್ನು ಹೊಂದಿದ್ದು ಅದು ಶಾಶ್ವತ ನಿರಂತರತೆಯನ್ನು ಅವಲಂಬಿಸಿತ್ತು; ಅಂದರೆ ಈ ದೈವದತ್ತವಾದ ಒಡೆತನವನ್ನು ಯಾವಾಗಲೂ ವಿಶ್ವದ ಪ್ರಧಾನ ಆಡಳಿತಗಾರನಾದ ದೇವರ ಸಾಮರಸ್ಯದಲ್ಲಿ ಕಾರ್ಯಗತಗೊಳಿಸಬೇಕು, ಆತನ ಒಂದೇ ನಿಯಮವನ್ನು ಪ್ರೀತಿ, ಎಂಬುದಾಗಿ ಸಂಕ್ಷಿಪ್ತವಾಗಿ ಹೇಳಲಾಗಿದೆ. "ಪ್ರೀತಿಯು ಧರ್ಮಶಾಸ್ತ್ರದ ನೆರವೇರಿಕೆಯಾಗಿದೆ" – "ನಿನ್ನ ದೇವರಾದ ಕರ್ತನನ್ನು ನಿನ್ನ ಪೂರ್ಣ ಹೃದಯದಿಂದಲೂ, ನಿನ್ನ ಪೂರ್ಣ ಪ್ರಾಣದಿಂದಲೂ, ನಿನ್ನ ಪೂರ್ಣ ಬುದ್ಧಿಯಿಂದಲೂ ಪ್ರೀತಿಸಬೇಕು... ಇದಕ್ಕೆ ಸಮಾನವಾದ ಎರಡನೆ ಆಜ್ಞೆ ಯಾವುದೆಂದರೆ "ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು" (ಮತ್ತಾಯ 22:37–40; ರೋಮಾ. 13:10) ಎಂಬುದೇ.

ಮಾನವನಿಗೆ ದಯಪಾಲಿಸಿದ ಈ ಮಹಾ ಕೃಪೆಯ ಕುರಿತಾಗಿ, ದಾವೀದನು ದೇವರನ್ನು ಸ್ತುತಿಸುತ್ತಾ – "ಅವನನ್ನು ದೇವದೂತರಿಗಿಂತ ಸ್ವಲ್ಪವೇ ಕಡಿಮೆಯಾಗಿ ಮಾಡಿದಿಯಲ್ಲಾ; ಪ್ರಭಾವವನ್ನೂ, ಮಾನವನ್ನೂ ಅವನಿಗೆ ಕಿರೀಟವಾಗಿ ಇಟ್ಟೆ. ನೀನು ಸೃಷ್ಟಿಸಿದ ಎಲ್ಲಾ ವಸ್ತುಗಳ ಮೇಲೆ ಪ್ರಭುತ್ವವನ್ನು ಅವನಿಗೆ ಅನುಗ್ರಹಿಸಿದಿ" (ಕೀರ್ತನೆ 8: 5–6) ಎಂದು ಹೇಳಿದ್ದಾನೆ. ಮಾನವ ಜಾತಿಯುವರಿಗೆ ಆದಾಮನೆಂಬ ವ್ಯಕ್ತಿಯಲ್ಲಿ ನೀಡಲ್ಪಟ್ಟಿರುವ ಈ ಪ್ರಭುತ್ವವು ಈ ಭೂಲೋಕದ ಮೇಲೆ ದೇವರ ರಾಜ್ಯದ ಮೊಟ್ಟಮೊದಲ ಸ್ಥಾಪನೆಯಾಗಿತ್ತು. ಹೀಗಾಗಿ ಮಾನವನು ದೇವರ ಪ್ರತಿನಿಧಿಯಾಗಿ ಈ ಪ್ರಭುತ್ವವನ್ನು ನಿರ್ವಹಿಸಿದನು. ಆದರೆ ಸರ್ವೋಚ್ಚ ಆಡಳಿತಗಾರನಿಗೆ ಮಾನವನು ತೋರಿದ ಅವಿಧೇಯತೆಯು ಆತನ ಜೀವವನ್ನು ಮುಟ್ಟುಗೋಲು ಹಾಕಿಕೊಳ್ಳುವುದು ಮಾತ್ರವಲ್ಲದೆ, ದೇವರ ಪ್ರತಿನಿಧಿಯಾಗಿ ಭೂಲೋಕದಲ್ಲಿ ಆಳ್ವಿಕೆಮಾಡುವ ಆತನ ಎಲ್ಲಾ ಹಕ್ಕುಗಳನ್ನೂ, ಸವಲತ್ತುಗಳನ್ನೂ ಸಹಾ ಮುಟ್ಟುಗೋಲು ಹಾಕಿಕೊಂಡಿತು. ಅಂದಿನಿಂದ ಆತನೊಬ್ಬ ಬಂಡಾಯ ಗಾರನಂತಾದನು, ಸಿಂಹಾಸನದಿಂದ ಪದಚ್ಯುತಿಗೊಂಡು ಮರಣದ ದಂಡನೆಯನ್ನು ಹೊಂದಿದನು. ನಂತರ ಈ ಭೂಲೋಕದ ಮೇಲಿನ ದೇವರ ಆಡಳಿತ ಶೀಘ್ರವಾಗಿ ಸ್ಥಗಿತಗೊಂಡಿತು, ಅಂದಿನಿಂದ ಇಸ್ರೇಲಿನಲ್ಲಿ, ಸಾಂಕೇತಿಕ ರೀತಿಯಲ್ಲಿ ಹೊರತುಪಡಿಸಿ, ಇದುವರೆಗೂ ಪುನಃಸ್ಥಾಪಿತಗೊಂಡಿಲ್ಲ. ಏದೇನಿನಲ್ಲಿ ಮಾನವನು ತನ್ನ ಜೀವದ ಮತ್ತು ಪ್ರಭುತ್ವದ ಹಕ್ಕನ್ನು ಕಳಕೊಂಡನಾದರೂ, ಅದರಲ್ಲಿ ಒಂದನ್ನೂ ಆ ಕೂಡಲೇ ಹಠಾತ್ತಾಗಿ ತೆಗೆದುಕೊಳ್ಳಲ್ಪಡಲಿಲ್ಲ. ದಂಡನೆಹೊಂದಿದ ಜೀವಿತವು ಇರುವಾಗಲೂ ಮಾನವನು ಭೂಲೋಕದ ಮೇಲೆ ತನ್ನ ಪ್ರಭುತ್ವವನ್ನು ದೇವರು ತಾನು ಸಂಪಾದಿಸಿದ ಆ ಪ್ರಭುತ್ವದ ಹಕ್ಕನ್ನು ವಾಪಸ್ಸು ಪಡೆಯುವ ಉಚಿತ ಸಮಯ ಬರುವವರಿಗೆ, ಮಾನವನು ತನ್ನ ಸಾಮರ್ಥ್ಯಕ್ಕನುಸಾರವಾಗಿ ಅದನ್ನು ನಿರ್ವಹಿಸುವಂತೆ ಅನುಮತಿಸಲಾಯಿತು.

ನಮ್ಮ ಕರ್ತನ ಮರಣವು ಮಾನವರನ್ನು ಮಾತ್ರವಲ್ಲದೆ ಭೂಮಿಯ ಪ್ರಭುತ್ವವನ್ನು ಒಳಗೊಂಡಂತೆ ಆತನ ಎಲ್ಲಾ ಮೂಲ ಬಾಧ್ಯಸ್ಥಿಕೆಗಳನ್ನು ಸಹಾ ವಿಮೋಚನೆಗೊಳಿಸಿತು ಅಥವಾ ಕೊಂಡುಕೊಂಡಂತಾಯಿತು. ಅದನ್ನು ಕೊಂಡುಕೊಂಡ ನಂತರ ಅದರ ಹಕ್ಕು ಆತನ ಬಳಿಯೇ ಇದೆ. ಆತನೇ ಈಗ ಹಕ್ಕುಳ್ಳ ಬಾಧ್ಯಸ್ಥನಾಗಿದ್ದಾನೆ, ಮತ್ತು ಸೂಕ್ತ ಸಮಯದಲ್ಲಿ ಮತ್ತು ಸಧ್ಯದಲ್ಲಿಯೇ ಆತನು ತಾನು ಸಂಪಾದಿಸಿಕೊಂಡದ್ದನ್ನು ಸ್ವಾಧೀನಪಡಿಸಿಕೊಳ್ಳುತ್ತಾನೆ (ಎಫೆಸ 1:14). ಆದರೆ ಆತನು ಮಾನವರನ್ನು ತನ್ನ ಗುಲಾಮರನ್ನಾಗಿ ಮಾಡಿಕೊಳ್ಳುವ ಸಲುವಾಗಿ ಸಂಪಾದಿಸದೇ, ಅವರನ್ನು ಅವರ ಪೂರ್ವ ಸ್ಥಿತಿಗೆ ಪುನರ್‌ವಶಪಡಿಸಲು ಸಂಪಾದಿಸಿದಂತೆಯೇ, ಭೂಮಿಯ ಮೇಲಣ ಪ್ರಭುತ್ವವು ಸಹಾ ಇರುವುದಾಗಿದೆ. ಅದರೊಡನೆ ಮಾನವರ ಎಲ್ಲಾ ಮೂಲ ಆಶೀರ್ವಾದಗಳನ್ನೂ ಸಂಪಾದಿಸಿಕೊಂಡನು. ಹಾಗಾಗಿ ದೇವರ ಚಿತ್ತಕ್ಕೆ ಸಾಮರಸ್ಯವಾಗಿ ಅವುಗಳನ್ನು ನಿರ್ವಹಿಸಲು ಮಾನವನು ಪುನಃ ಸಮರ್ಥನಾಗಿ ಮಾಡಲ್ಪಟ್ಟಾಗ ಅವುಗಳನ್ನು ಪುನರ್‌ಸ್ಥಾಪಿಸುವ ಉದ್ದೇಶಕ್ಕಾಗಿ ಕೊಂಡುಕೊಂಡನು. ಹೀಗಾಗಿ ಲೋಕದ

ಮೇಲಿನ ಮೆಸ್ಸೀಯ ಆಡಳಿತವು ಶಾಶ್ವತವಾಗಿರುವಂತದ್ದಲ್ಲ. ಅದು ಆತನ ಬಲವಾದ ಕಬ್ಬಿಣದ ಆಡಳಿತದಿಂದ ಆತನು ಎಲ್ಲಾ ದಂಗೆಕೋರರನ್ನು ಎದುರು ಬೀಳುವವರನ್ನೂ ಅಡಗಿಸಿ ಮತ್ತು ಪತನಗೊಂಡ ಜನಾಂಗದವರನ್ನು ಮೂಲ ಪರಿಪೂರ್ಣತೆಗೆ ಪುನರ್‌ವಶಪಡಿಸುವವರೆಗೆ ಮಾತ್ರ ಮುಂದುವರೆಯುತ್ತದೆ. ಭೂಲೋಕದ ಪ್ರಭುತ್ವವನ್ನು ಮೂಲತಃ ಸಂಕಲ್ಪದಂತೆ ಸರಿಯಾಗಿ ನಿರ್ವಹಿಸಲು ಸಂಪೂರ್ಣವಾಗಿ ಸಮರ್ಥರಾಗುವಾಗ ಹೀಗೆ ಪುನರ್‌ವಶಗೊಂಡು ಅದು ಮತ್ತೆ ಭೂಮಿಯ ಮೇಲೆ ದೇವರ ಪ್ರತಿನಿಧಿಯಾದ ಮಾನವನ ಅಡಿಯಲ್ಲಿ ದೇವರ ರಾಜ್ಯವಾಗುವುದು.

ಯೆಹೂದ್ಯರ ಯುಗದಲ್ಲಿ ದೇವರು ಇಸ್ರಾಯೇಲ್ಯ ಜನರನ್ನು ಮೋಶೆ ಮತ್ತು ನ್ಯಾಯಸ್ಥಾಪಕರ ಅಧೀನದಲ್ಲಿ ತನ್ನ ರಾಜ್ಯವನ್ನಾಗಿ ಸಂಘಟಿಸಿದನು – ಅದೊಂದು ರೀತಿಯ ಪ್ರಜಾಪ್ರಭುತ್ವವಾಗಿತ್ತು – ಅದರೆ ಅದು ಕೇವಲ ಸಾಂಕೇತಿಕವಾಗಿತ್ತು. ಮತ್ತು ನಂತರ ಹೆಚ್ಚು ನಿರಂಕುಶ ಆಡಳಿತವು ವಿಶೇಷವಾಗಿ ದಾವೀದ ಮತ್ತು ಸೊಲೊಮೋನನ ಆಡಳಿತಾವಧಿಯಲ್ಲಿ ಸ್ಥಾಪಿತಗೊಂಡಿತು. ಇದು ಸ್ವಲ್ಪಮಟ್ಟಿಗೆ ಮೆಸ್ಸೀಯನು ಆಳಲಿರುವ ವಾಗ್ದತ್ತ ರಾಜ್ಯದ ನಮೂನೆಯಾಗಿತ್ತು. ಸುತ್ತಮುತ್ತಲಿನ ದೇಶಗಳಿಗಿಂತ ಭಿನ್ನವಾಗಿ, ಇಸ್ರಾಯೇಲ್ಯರಿಗೆ ಯೆಹೋವನೇ ಅರಸನಾಗಿದ್ದನು ಮತ್ತು ಅವರ ಆಡಳಿತಗಾರರು ಹೆಸರಿಗೆವಾತ್ರವಾಗಿ ಆತನಡಿಯಲ್ಲಿ ಸೇವೆಮಾಡುವವರಾಗಿದ್ದರು ಎಂಬುದನ್ನು ನಾವು ಕೀರ್ತನೆ 78:71,72ರಲ್ಲಿ ತಿಳಿದುಕೊಳ್ಳುತ್ತೇವೆ. ಇದನ್ನು ಸುನಿಶ್ಚಯವಾಗಿ 2 ಪೂರ್ವ 13:8 ಮತ್ತು 1 ಪೂರ್ವ 29:23ರಲ್ಲಿ ಹೇಳಲಾಗಿದೆ. ಅಲ್ಲಿ ಇಸ್ರಾಯೇಲನ್ನು “ದೇವರ ರಾಜ್ಯ”ವೆಂದು ಕರೆಯಲಾಗಿದೆ ಮತ್ತು ಮೊದಲನೆಯ ಅರಸನಾದ ಸೌಲನ ನಂತರ ನಾಲ್ವತ್ತು ವರ್ಷಗಳ ಕಾಲ ಅದೇ ಸಿಂಹಾಸನದ ಮೇಲೆ ಕೂತು ಆಡಳಿತ ಮಾಡಿದ ತನ್ನ ತಂದೆಯಾದ ದಾವೀದನ ಬದಲಾಗಿ ಸೊಲೊಮೋನನು ಅರಸನಾಗಿ ಯೆಹೋವನ ಸಿಂಹಾಸನದಲ್ಲಿ ಕುಳಿತುಕೊಂಡನು (1 ಪೂರ್ವ 29:23) ಎಂದು ಬರೆಯಲಾಗಿದೆ.

ಇಸ್ರಾಯೇಲ್ಯ ಜನರು ಕರ್ತನಿಗೆ ವಿರುದ್ಧವಾಗಿ ಅಪರಾಧ ಮಾಡಿದಾಗ, ಆತನು ಅವರನ್ನು ಅನೇಕ ಸಾರಿ ಶಿಕ್ಷಿಸಿದನು, ಅಂತ್ಯದಲ್ಲಿ ಅವರಿಂದ ಅವರ ರಾಜ್ಯವನ್ನು ಸಂಪೂರ್ಣವಾಗಿ ಕಿತ್ತುಕೊಂಡನು. ದಾವೀದನ ಸಾಲಿನಲ್ಲಿ ಕೊನೆಯವನಾದ ಚಿದ್ಕೀಯನ ದಿನಗಳಲ್ಲಿ ರಾಜ್ಯಧಿಕಾರವುಳ್ಳ ರಾಜದಂಡವನ್ನು ತೆಗೆದುಹಾಕಲಾಯಿತು. ಆಗ ದೇವರ ಸಾಂಕೇತಿಕ ರಾಜ್ಯವನ್ನು ಉರುಳಿಸಲಾಯಿತು.

ಈ ಸಂಗತಿಯ ಬಗ್ಗೆ ದೇವರ ನಿರ್ಧಾರವನ್ನು “ಇಸ್ರಾಯೇಲಿನ ದೊರೆಯೇ, ದುಷ್ಟನೇ, ಭ್ರಷ್ಟನೇ! ನಿನಗೆ ಸಮಯವು ಹತ್ತಿರಿಸಿದೆ; ಇದೇ ನಿನ್ನ ಅಪರಾಧದ ಕಡೇಗಾಲ. ಕರ್ತನಾದ ಯೆಹೋವನು – ಮುಂಡಾಸನ್ನು ಕಿತ್ತು ಬಿಡು! ಕಿರೀಟವನ್ನು ಎತ್ತಿಹಾಕು! ಎಲ್ಲವೂ ವ್ಯತ್ಯಸ್ತವಾಗಲಿ; ಕೆಳಗಿನದನ್ನು ಮೇಲೆ ಮಾಡು, ಮೇಲಿನದನ್ನು ಕೆಳಗೆ ಮಾಡು; ನಾನು ದೊಬ್ಬಿ ಬಿಡುವೆನು; ದೊಬ್ಬಿ ಬಿಡುವೆನು; ದೊಬ್ಬಿ ಬಿಡುವೆನು; (ರಾಜ್ಯಕ್ಕೆ) ಬಾಧ್ಯನು ಬರುವುದರೊಳಗೆ ಒಂದೂ ಇದ್ದಂತಿರದು; ಅವನಿಗೇ ರಾಜ್ಯವನ್ನು ವಹಿಸುವೆನು” (ಯೆಹೆಜ್ಕೇಲ 21:25–27) ಎಂದಿದ್ದಾನೆ. ಈ ಪ್ರವಾದನೆಯು ನೆರವೇರುವಂತೆ ಬಾಬೇಲಿನ ಅರಸನು ಇಸ್ರೇಲಿನ ವಿರುದ್ಧವಾಗಿ ಬಂದನು, ಜನರನ್ನು ಸೆರೆಯಾಳುಗಳನ್ನಾಗಿ ತೆಗೆದುಕೊಂಡು ಹೋದನು ಮತ್ತು ಅರಸನನ್ನು ತೆಗೆದುಹಾಕಿದನು. ನಂತರದಲ್ಲಿ ಪರ್ಷಿಯಾದ ಕೋರೇಷನು ಅದನ್ನು ರಾಷ್ಟ್ರೀಯ ಅಸ್ಥಿತ್ವಕ್ಕೆ ಪುನರ್‌ವಶಪಡಿಸಿದರೂ ಅವರು ಮೆಡೋ–ಪರ್ಷಿಯಾ, ಗ್ರೀಸ್ ಮತ್ತು ರೋಮಿನ ಚಕ್ರವರ್ತಿಗಳಿಗೆ ಕ್ರಿ.ಶ. 70ರಲ್ಲಿನ ತಮ್ಮ ಅಂತಿಮ ನಾಶನದವರೆಗೆ ಸತತವಾಗಿ ಅಧೀನರೂ ಮತ್ತು ಕಪ್ಪ ಕಾಣಿಕೆಗಳನ್ನು ಕಟ್ಟುವವರಾದರು. ಅಂದಿನಿಂದ ಅವರು ಎಲ್ಲಾ ರಾಷ್ಟ್ರಗಳಿಗೆ ಚದುರಿ ಹೋದರು.

ಪತನದ ನಂತರ, ತನ್ನ ಸರ್ಕಾರದ ಕಾನೂನು ಮುಂತಾದವುಗಳನ್ನು ಯಾವುದೇ ರೀತಿಯಲ್ಲಿ ಪ್ರತಿನಿಧಿಸುವುದು ಇಸ್ರಾಯೇಲ್ ಸಾಮ್ರಾಜ್ಯವು ಒಂದೇ ಮಾತ್ರವಾಗಿರುತ್ತದೆ ಎಂದು ದೇವರು ಗುರುತಿಸಿದ್ದಾನೆ. ಅವರುಗಳಿಗಿಂತ ಮೊದಲು ಅನೇಕ ದೇಶಗಳು ಇದ್ದವು, ಆದರೆ ಯಾರೂ ನ್ಯಾಯಸಮ್ಮತವಾಗಿ ದೇವರು ಅದರ ಸ್ಥಾಪಕನು ಅಥವಾ ಅದರ ಅರಸರುಗಳು ದೇವರ ಪ್ರತಿನಿಧಿಗಳು ಎಂಬುದಾಗಿ ಹಕ್ಕಿನಿಂದ ಹೇಳಿಕೊಳ್ಳಲಿಲ್ಲ. ಕಿರೀಟವನ್ನು ಚಿದ್ಕೀಯನಿಂದ ತೆಗೆದುಬಿಟ್ಟಾಗ, ಮತ್ತು ಇಸ್ರಾಯೇಲ್ ರಾಜ್ಯವನ್ನು ಪರಾಭವಗೊಳಿಸಿದಾಗ, ಅದು ಈ ಲೋಕದ ಅಧಿಕಾರಯುತ ಬಾಧ್ಯಸ್ಥನಾದ ಕ್ರಿಸ್ತನು ಬಂದು ಅದರ ಹಕ್ಕೇಳಿಕೆ ಮಾಡುವವರೆಗೆ ಅದು ಪ್ರರಾಭವಗೊಂಡೇ ಉಳಿಯಬೇಕೆಂಬ ನಿರ್ಣಯ ಯವಾಗಿತ್ತು. ಈ ರೀತಿಯಲ್ಲಿ, ತಾರ್ಕಿಕವಾಗಿ, ಅಧಿಕಾರದಲ್ಲಿರುವ ಇತರೆ ರಾಜ್ಯಗಳೆಲ್ಲವೂ, ದೇವರ ರಾಜ್ಯವು ಪುನರ್‌ಸ್ಥಾಪಿತವಾಗುವವರೆಗೆ ಇಹಲೋಕದ

ಅರಸನ ಅಧೀನದಲ್ಲಿರುವ 'ಈ ಲೋಕದ ರಾಜ್ಯಗಳು'; ಎಂದು ಗುರುತಿಸಲ್ಪಟ್ಟಿದ್ದವು. ಆದುದರಿಂದ ಅವರು 'ದೇವರರಾಜ್ಯ'ವೆಂದು ಮುಂದಿಡುವ ಯಾವುದೇ ಹಕ್ಕೇಳಿಕೆಯೂ ಕೃತಕವಾಗಿದ್ದವು. ದೇವರ ಈ ರಾಜ್ಯವು ಕ್ರಿಸ್ತನ ಪ್ರಥಮ ಆಗಮನದಲ್ಲಿ ಸ್ಥಾಪಿಸಲ್ಪಡಲಿಲ್ಲ (ಲೂಕ 19:12). ಆಗ ಮತ್ತು ಅಂದಿನಿಂದ ದೇವರು ಈ ಲೋಕದಿಂದ ಕ್ರಿಸ್ತನೊಂದಿಗೆ ಆತನ ಸಿಂಹಾಸನದ ಜೊತೆಬಾಧ್ಯಸ್ಥರಾಗಿ ಆಳಲು ಅರ್ಹರಾದವರನ್ನು ಆರಿಸಿಕೊಳ್ಳುತ್ತಾ ಇದ್ದಾನೆ. ಆತನ ಎರಡನೆಯ ಆಗಮನವಾಗುವವರೆಗೂ ಕ್ರಿಸ್ತನು ಆ ರಾಜ್ಯವನ್ನೂ, ಅಧಿಕಾರವನ್ನೂ, ಮಹಿಮೆಯನ್ನೂ ವಹಿಸಿಕೊಂಡು ಎಲ್ಲರ ಕರ್ತನಾಗಿ ಆಳುವುದಿಲ್ಲ.

ಇಸ್ರಾಯೇಲ್‌ನ್ನು ಹೊರತುಪಡಿಸಿ ಇತರೆ ಎಲ್ಲಾ ರಾಜ್ಯಗಳನ್ನು ಧರ್ಮಗ್ರಂಥಾನುಸಾರವಾಗಿ ಅನ್ಯ ಜನಾಂಗದವರು ಅಥವಾ ಅನ್ಯಧರ್ಮೀಯರು – ಇಹಲೋಕಾಧಿಪತಿಯಾದ ಸೈತಾನನ ಅಧೀನದಲ್ಲಿರುವ ಈ ಲೋಕದ ರಾಜ್ಯಗಳೆಂದು ಕರೆಯಲಾಗುತ್ತದೆ. ಚಿದ್ಕೀಯನ ಕಾಲದಲ್ಲಿ ತೆಗೆಯಲ್ಪಟ್ಟ ದೇವರ ರಾಜ್ಯವು ದೇವರು ಅನುಮೋದಿಸಬಹುದಾದ ಯಾವುದೇ ಸರ್ಕಾರಗಳಿಲ್ಲದೆ, ಅಥವಾ ಆತನು ವಿಶೇಷವಾಗಿ ಮೇಲ್ವಿಚಾರಣೆ ಮಾಡುತ್ತಿದ್ದ ನಿಯಮ ಮತ್ತು ವ್ಯವಹಾರಗಳಿಲ್ಲದೆ ಲೋಕವನ್ನು ಬಿಟ್ಟುಹೋಯಿತು. ಅನ್ಯಜನರ ರಾಜ್ಯಗಳನ್ನು ದೇವರು ಪರೋಕ್ಷವಾಗಿ ಗುರುತಿಸುವವನಾಗಿ, ಆತನ ತೀರ್ಪನ್ನು ಸಾರ್ವಜನಿಕ ವಾಗಿ ಪ್ರಕಟಿಸುತ್ತಾನೆ (ಲೂಕ 21:24). ಆ ರಾಜರುಗಳ ಆಳ್ವಿಕೆಯ ಮಧ್ಯಕಾಲದಲ್ಲಿ ಯೆರೂಸಲೇಮಿನ ಮತ್ತು ಲೋಕದ ನಿಯಂತ್ರಣವನ್ನು ಅನ್ಯಜನರ ಸರ್ಕಾರಗಳು ಕಾರ್ಯಗತಗೊಳಿಸಬೇಕೆಂದು ಹೇಳುತ್ತಾನೆ.

ಈ ಮಧ್ಯಕಾಲ ಅಥವಾ ದೇವರ ರಾಜದಂಡವನ್ನು ತೆಗೆದುಬಿಡುವ ಮತ್ತು ಕ್ರಿಸ್ತನು ಹೆಚ್ಚಾದ ಅಧಿಕಾರ ಮತ್ತು ಮಹಿಮೆಯೊಡನೆ ಆಳುವ ಹಾಗೂ ಪುನರ್‌ಸ್ಥಾಪಿಸುವ ನಡುವೆ ಬರುವ ಕಾಲಾವಧಿಯನ್ನು ದೇವರ ವಾಕ್ಯದಲ್ಲಿ "ಅನ್ಯಜನರ ಕಾಲವೆಂದು" ಕರೆಯಲಾಗಿದೆ. 'ಈ ಲೋಕದ ರಾಜ್ಯಗಳು' ಆಳುವ ಅನುಮತಿ ಪಡೆದಿರುವ ಈ 'ಸಮುಯುಗಳು' ಅಥವಾ ವರ್ಷಗಳು ಗೊತ್ತುಪಡಿಸಲಾಗಿವೆ ಮತ್ತು ಮಿತಿಯುಳ್ಳದ್ದಾಗಿವೆ ಮತ್ತು ದೇವರ ರಾಜ್ಯವು ಮೆಸ್ಸೀಯನ ಅಧೀನದಲ್ಲಿ ಪುನರ್‌ಸ್ಥಾಪಿತವಾಗುವ ಕಾಲವು ಸಹಾ ಸಮಾನವಾಗಿ ನಿಗದಿಪಡಿಸಲಾಗಿದ್ದು ಪರಿಶುದ್ಧ ಗ್ರಂಥಗಳಲ್ಲಿ ಗುರುತಿಸಲಾಗಿದೆ.

ಈ ಅನ್ಯರ ರಾಜ್ಯಗಳು ಕೆಟ್ಟವುಗಳಾಗಿದ್ದರೂ ಅವುಗಳು ದೇವರ ವಿವೇಕಯುತ ಉದ್ದೇಶಕ್ಕಾಗಿ ಅನುಮತಿಸಿ ಅಭಿಷೇಕಿಸಲಾಗಿದೆ (ರೋಮಾ. 13:1), ಅವರುಗಳ ಅಪರಿಪೂರ್ಣತೆ ಮತ್ತು ದುರಾಡಳಿತವು ಹೆಚ್ಚುತ್ತಿರುವ ಪಾಪದ ಸಾಮಾನ್ಯ ಪಾತದ ಭಾಗವಾಗಿದೆ ಮತ್ತು ಪತನ ಹೊಂದಿದ ಮಾನವನು ತನ್ನನ್ನು ತಾನು ಆಳಲಾಗದವನು ತನ್ನ ಸ್ವಯಂ ತೃಪ್ತಿಗೆ ತಕ್ಕಂತೆಯೂ ಅಸಮರ್ಥನೆಂದು ಸಾಬೀತುಪಡಿಸುತ್ತದೆ. ದೇವರು ಮುಖ್ಯವಾಗಿ ಅವರು ಅವುಗಳನ್ನು ಕೈಗೊಳ್ಳಲು ಶಕ್ತವಾಗಿರುವ ಸ್ವಯಂ ಉದ್ದೇಶಗಳಿಗಾಗಿ ಅನುಮತಿಸು ತ್ತಾನೆ. ಆದರೆ ಅವರು ಆತನ ಯೋಜನೆಗಳಿಗೆ ಅಡ್ಡಿಪಡಿಸುವಾಗ ತಳ್ಳಿಹಾಕುತ್ತಾನೆ. ಕಟ್ಟಕಡೆಗೆ ಎಲ್ಲವೂ ಒಳ್ಳೇದಕ್ಕಾಗಿ ಕೆಲಸ ಮಾಡಬೇಕೆಂದು ಆತನು ಉದ್ದೇಶಿಸುತ್ತಾನೆ. ಕಡೆಯಲ್ಲಿ "ಮನುಷ್ಯರ ಕೋಪವೂ ತನ್ನ ಘನಕ್ಕೇ ಸಾಧಕವಾಗಬೇಕು" (ಕೀರ್ತನೆ 76:10) ಎಂದು ಆತನು ಬಯಸುತ್ತಾನೆ. ಉಳಿದವುಗಳು ಯಾವುದೇ ಒಳ್ಳೇ ಕಾರ್ಯವನ್ನು ಮಾಡುವುದಿಲ್ಲ, ಯಾವುದೇ ಉದ್ದೇಶವನ್ನು ನೆರವೇರಿಸುವುದಿಲ್ಲ, ಯಾವುದೇ ಪಾಠವನ್ನು ಕಲಿಸುವುದಿಲ್ಲ. ಆತನು ಅವುಗಳನ್ನು ನಿಗ್ರಹಿಸುತ್ತಾನೆ.

ಮಾನವನು ಒಂದು ಪರಿಪೂರ್ಣವಾದ ಸರ್ಕಾರವನ್ನು ಸ್ಥಾಪಿಸಲಾಗದ ಅಸಮರ್ಪಕತೆಯು ಆತನು ಪತನಗೊಂಡ, ನೀತಿಭ್ರಷ್ಟ ಸ್ಥಿತಿಯಲ್ಲಿನ ಆತನ ಸ್ವಂತ ಬಲಹೀನತೆಗಳಿಗೆ ಕಾರಣವಾಗಿದೆ. ಈ ಬಲಹೀನತೆಗಳು ತಮ್ಮಷ್ಟಕ್ಕೇ ಒಳ್ಳೆಯ ಸರ್ಕಾರವನ್ನು ರಚಿಸುವ ಮಾನವ ಪ್ರಯತ್ನಗಳನ್ನು ನಿಷ್ಫಲಗೊಳಿಸುತ್ತವೆ. ಇದರ ಪ್ರಯೋಜನವನ್ನು ಸೈತಾನನು ಬಳಸಿಕೊಳ್ಳುತ್ತಾನೆ. ಆತನೇ ಮೊದಲಿಗೆ ಮಾನವನನ್ನು ಸರ್ವೋಚ್ಚ ಆಡಳಿತಗಾರನಿಗೆ ನಿಷ್ಠೆ ತೋರಿಸದಿರುವಂತೆ ಪ್ರಲೋಭಿಸಿದಾತನು. ಸೈತಾನನು ಮಾನವರ ಬಲಹೀನತೆಯ ಸಂಪೂರ್ಣ ಪ್ರಯೋಜನಗಳನ್ನು ನಿರಂತರವಾಗಿ ತೆಗೆದುಕೊಳ್ಳುತ್ತಾನೆ. ಕೆಟ್ಟವುಗಳನ್ನು ಒಳ್ಳೆಯುವುಗಳನ್ನಾಗಿಯೂ, ಒಳ್ಳೆಯುವುಗಳನ್ನು ಕೆಟ್ಟವುಗಳನ್ನಾಗಿ ಕಾಣಿಸುವಂತೆ ಮಾಡುತ್ತಾನೆ. ಮತ್ತು ಆತನು ದೇವರ ಗುಣಲಕ್ಷಣಗಳನ್ನು, ಯೋಜನೆಗಳನ್ನು ತಪ್ಪಾಗಿ ನಿರೂಪಿಸುತ್ತಾನೆ ಮತ್ತು ಮಾನವರನ್ನು ಸತ್ಯಕ್ಕೆ ಕುರುಡರನ್ನಾಗಿ ಮಾಡುತ್ತಾನೆ. ಈ ರೀತಿಯಾಗಿ ಆತನು ಅವಿಧೇಯ ಮಕ್ಕಳ ಹೃದಯದಲ್ಲಿ ತನ್ನ ಕಾರ್ಯವನ್ನು ನೆರವೇರಿಸುತ್ತಾನೆ (ಎಫೆಸ 2:2) ಮತ್ತು ಅವರನ್ನು ತನ್ನ ಚಿತ್ತಾನುಸಾರ ಸೆರೆಯಲ್ಲಿರಿಸಿಕೊಂಡು ನಮ್ಮ ಕರ್ತನೂ ಮತ್ತು ಅಪೊಸ್ತಲರೂ ಕರೆಯುವಂತೆ ತನ್ನನ್ನು ತಾನೇ ಇಹಲೋಕಾಧಿಪತಿಯನ್ನಾಗಿ ಮಾಡಿಕೊಂಡಿದ್ದಾನೆ

(ಯೋಹಾನ 14:30; 12:31). ಆತನು ಯುಕ್ತವಾಗಿ ಇಹಲೋಕಾಧಿಪತಿಯಲ್ಲ, ಆದರೆ ವಂಚನೆ ಮತ್ತು ಕಪಟದ ಮೂಲಕ ಪತನಗೊಂಡ ಮನುಷ್ಯನನ್ನು ನಿಯಂತ್ರಿಸುವುದರ ಮೂಲಕ ಆ ಸ್ಥಾನವನ್ನು ಕಸಿದುಕೊಂಡಿದ್ದಾನೆ. ಆತನು ಈ ರೀತಿಯಾಗಿ ದರೋಡೆಕಾರನಾಗಿರುವುದರಿಂದ ಆತನನ್ನು ಕ್ಷಿಪ್ರವಾಗಿ ಪದಚ್ಯುತಿಗೊಳಿಸಲಾಗುವುದು. ಆತನಿಗೆ ಈ ಲೋಕದ ಅರಸನೆಂಬ ನಿಜವಾದ ಪದವಿ ಇರುತ್ತಿದ್ದರೆ, ಆತನೊಂದಿಗೆ ಆ ರೀತಿಯಾಗಿ ವ್ಯವಹರಿಸಲಾಗುತ್ತಿದ್ದಿಲ್ಲ.

ಹೀಗೆ ಈ ಲೋಕದ ರಾಜ್ಯವು ಪ್ರಸ್ತುತದಲ್ಲಿ ದೃಶ್ಯ ಮತ್ತು ಅದೃಶ್ಯ ಇವೆರಡೂ ಹಂತದಲ್ಲಿ ಕಾರ್ಯರ್ವೆಸಗುತ್ತಿದೆ ಎಂಬುದನ್ನು ನಾವು ಕಾಣಬಹುದಾಗಿದೆ. ಮೊದಲನೆಯದು ಆತ್ಮೀಕ ಹಂತವೂ, ಮತ್ತು ಎರಡನೆಯದು ಮಾನವ ಹಂತವೂ ಆಗಿದೆ. – ಕಣ್ಣಿಗೆ ಕಾಣುವ ಭೂಲೋಕದ ರಾಜ್ಯಗಳು ಬಹಳಮಟ್ಟಿಗೆ ಆತ್ಮೀಕ ಅರಸನಾದ ಸೈತಾನನ ವಶದಲ್ಲಿದೆ. ಸೈತಾನನು ಅಂಥಾಃ ನಿಯಂತ್ರಣವನ್ನು ಹೊಂದಿರುವುದರಿಂದಲೇ ಆತನು ನಮ್ಮ ಕರ್ತನನ್ನು ಕಣ್ಣಿಗೆ ಕಾಣುವ ಈ ಭೂಲೋಕದ ಅರಸನನ್ನಾಗಿ ಮಾಡುವನೆಂಬ ಪ್ರಲೋಭನೆಯೊಡ್ಡಿದನು (ಮತ್ತಾಯ 4:9). ಅನ್ಯಜನರ ಕಾಲಾವಧಿಯು ಮುಕ್ತಾಯ ಗೊಳ್ಳುವಾಗ, ಪ್ರಸ್ತುತ ರಾಜ್ಯದ ಎರಡೂ ಹಂತಗಳೂ ಕೊನೆಗಾಣುತ್ತವೆ. ಸೈತಾನನು ಬಂಧಿಸಲ್ಪಡುವನು, ಈ ಲೋಕದ ರಾಜ್ಯಗಳನ್ನು ಪರಾಭವಗೊಳಿಸಲಾಗುವುದು.

ಪತನಗೊಂಡು, ಕುರುಡಾಗಿ, ನರಳುತ್ತಿರುವ ಸೃಷ್ಟಿಗಳು ಶತಶತಮಾನಗಳಿಂದ ತಮ್ಮ ದಣಿದ ಹಾದಿಯಲ್ಲಿ ನಿಧಾನವಾಗಿ ಸಾಗುತ್ತಾ, ಪ್ರತಿಯೊಂದು ಹಂತದಲ್ಲಿಯೂ ಸೋತಿದೆ. ಅದರ ಅತ್ಯುತ್ತಮ ಪ್ರಯತ್ನಗಳೂ ಸಹ ನಿಷ್ಫಲವೆಂದು ಸಾಬೀತಾಯಿತು. ಆದಾಗ್ಯೂ ಅದರ ತತ್ವಜ್ಞಾನಿಗಳು ಕನಸು ಕಾಣುತ್ತಿದ್ದ ಸುವರ್ಣಯುಗವು ಸಮೀಪದಲ್ಲಿಯೇ ಇದೆ ಎಂಬ ನಿರೀಕ್ಷೆಯಲ್ಲಿ ಸದಾ ಇದೆ. ಅದು ನಿರೀಕ್ಷಿಸುವುದಕ್ಕಿಂತಲೂ, ನರಳುತ್ತಿರುವುದಕ್ಕಿಂತಲೂ ಇನ್ನೂ ಹೆಚ್ಚಿನ ಬಿಡುಗಡೆಯು ತಿರಸ್ಕಾರಕ್ಕೊಳಗಾದ ನಜರಾಯನ ಮತ್ತು ಅವನ ಅನುಯಾಯಿಗಳ ಮೂಲಕ ಬರಲಿದೆ ಎಂಬುದು ಅವರಿಗೆ ತಿಳಿದಿಲ್ಲ. ಆ ಅನುಯಾಯಿಗಳು ದೇವರ ಪುತ್ರರಾಗಿ ರಾಜ್ಯದ ಅಧಿಕಾರದಲ್ಲಿ ಅದರ ವಿಮೋಚನೆಗಾಗಿ ಸ್ಪಷ್ಟವಾಗಿ ಪ್ರಕಟಗೊಳ್ಳುತ್ತಾರೆ (ರೋಮಾ. 8:22,19).

ಪ್ರಸ್ತುತ ದುಷ್ಟಸರ್ಕಾರಗಳ ಅನುಮತಿಗೆ ಸಂಬಂಧಿಸಿದಂತೆ ದೇವರು ತನ್ನ ಮಕ್ಕಳು ಕತ್ತಲಿನಲ್ಲಿ ಇರಬಾರದೆಂದು ಮತ್ತು ದುಷ್ಟ ರಾಷ್ಟ್ರಗಳಿಗೆ ಅನುಮತಿಸಿದ ಉದ್ದೇಶವು ಪೂರೈಸಿದಾಗ, ಆತನು ತನ್ನ ಅನುಗ್ರಹದ ಅಡಿಯಲ್ಲಿ ವಿನ್ಯಾಸಪಡಿಸಿರುವ ತನ್ನ ಉತ್ತಮ ರಾಜ್ಯದ ಬಗ್ಗೆ ದೇವರು ನಮಗೆ ತನ್ನ ಪ್ರವಾದಿಗಳ ಮೂಲಕ, ಪ್ರತಿ ಬಾರಿಯೂ 'ಈ ಪ್ರಪಂಚದ ಸಾಮ್ರಾಜ್ಯಗಳ' ಹಲವಾರು ಭವ್ಯವಾದ ದೃಶ್ಯಾವಳಿಗಳನ್ನು ನಮ್ಮ ಪ್ರೋತ್ಸಾಹಕ್ಕಾಗಿ, ಕೊಟ್ಟಿದ್ದಾನೆ. ಶಾಂತಿಯ ರಾಜಕುಮಾರನಾದ ಮೆಸ್ಸೀಯನ ಅಡಿಯಲ್ಲಿ ತನ್ನದೇ ಆದ ನೀತಿಯುಳ್ಳ ಮತ್ತು ಶಾಶ್ವತ ರಾಜ್ಯವನ್ನು ಸ್ಥಾಪಿಸುವ ಮೂಲಕ ಅವುಗಳನ್ನು ಉರುಳಿಸುತ್ತಾನೆ.

ಪ್ರಭುತ್ವವನ್ನು ಚಲಾಯಿಸುವ ಮಾನವನ ಪ್ರಸ್ತುತ ಪ್ರಯತ್ನವು ಯೆಹೋವನ ಚಿತ್ತ ಮತ್ತು ಶಕ್ತಿಯನ್ನು ಯಶಸ್ವಿಯಾಗಿ ಉಲ್ಲಂಘನೆಯಾಗಿಲ್ಲ. ಆದರೆ, ಆತನ ಅನುಮತಿಯೊಂದಿಗೆ ಎಂಬದನ್ನು ದೇವರು ನೆಬೂಕದ್ನೇಚ್ಚರಿಗೆ ನೀಡಿದ ಸಂದೇಶದಿಂದ ತೋರಿಬರುವಂತೆ, ಆತನು ಕ್ರಿಸ್ತನ ರಾಜ್ಯವು ಸ್ಥಾಪಿತವಾಗುವವರೆಗೆ ಬಾಬೇಲ್, ಮೆಡೋ ಪರ್ಸಿಯಾ, ಗ್ರೀಸ್ ಮತ್ತು ರೋಮ್ ಈ ನಾಲ್ಕು ರಾಜ್ಯಗಳನ್ನು ರಾಜ್ಯಭಾರ ಮಾಡುವಂತೆ ಅನುಮತಿಸುತ್ತಾನೆ (ದಾನಿ. 2:37–43). ಈ ರಾಜ್ಯಭಾರದ ಗುತ್ತಿಗೆಯು ಯಾವಾಗ ಕೊನೆಗೊಳ್ಳುವುದು ಎಂದು ಇದು ತೋರಿಸುತ್ತದೆ.

ನಾವೀಗ ಈ ಪ್ರವಾದನೀಯ ದೃಷ್ಟಿಕೋನಗಳ ಬಗ್ಗೆ ಕ್ಷಣದೃಷ್ಟಿಯನ್ನು ಹಾಯಿಸುವಾಗ, ಅವುಗಳು ದೇವರ ಸಾಂಕೇತಿಕ ರಾಜ್ಯವಾಗಿದ್ದ ಇಸ್ರಾಯೇಲನ್ನು ಪರಾಭವಗೊಳಿಸುವ ಸಮಯದಲ್ಲಿ ಬಾಬೇಲಿನಿಂದ ಪ್ರಾರಂಭವಾಯಿತೆಂಬುದನ್ನು ನಾವು ನೆನಪು ಮಾಡಿಕೊಳ್ಳೋಣ.

## ಈ ಭೂರಾಜ್ಯಗಳ ಬಗ್ಗೆ ನೆಬೂಕದ್ನೇಚ್ಚರನ ದರ್ಶನ

## Nebuchadnezzar's Vision of Earth's Governments

ಹಿಂದಿನ ಕಾಲದಲ್ಲಿ ನಮ್ಮ ಆತ್ಮೋನ್ನತಿಗಾಗಿ ಬರೆದಿರುವ ಈ ವಿಷಯಗಳಲ್ಲಿ, ಅಧಿಕಾರಗಳಿಗೆ ಒಳಪಟ್ಟಿರಬೇಕೆಂದು ಆಜ್ಞಾಪಿಸಲ್ಪಟ್ಟಿರುವ ನಾವು, ತಾಳ್ಮೆ ಮತ್ತು ಧರ್ಮಗ್ರಂಥಗಳ ಸಮಾಲೋಚನೆಯ ಮೂಲಕ ಭರವಸೆಯನ್ನು ಹೊಂದಿರಬಹುದು, (ರೋಮಾ. 15:4; 13;1). ಇದು ನೆಬೂಕದ್ನೇಚ್ಚರನ ಕನಸು ಮತ್ತು ಪ್ರವಾದಿಯ ಮೂಲಕ ಅದರ ದೈವೀಕ ವ್ಯಾಖ್ಯಾನವೂ ಆಗಿದೆ (ದಾನಿ 2:31–45). –

ದಾನಿಯೇಲನು ತನ್ನ ಕನಸನ್ನು ಹೀಗೆ ವಿವರಿಸಿದನು

– "ರಾಜನೇ, ನೀನು ಕಂಡದ್ದು ಅಹಾ ಅದ್ಭುತ ಪ್ರತಿಮೆ; ಥಳಥಳನೆ ಹೊಳೆಯುವ ಆ ದೊಡ್ಡ ಪ್ರತಿಮೆಯು ನಿನ್ನೆದುರಿಗೆ ನಿಂತಿತ್ತು; ಭಯಂಕರವಾಗಿ ಕಾಣಿಸಿತು. ಆ ಪ್ರತಿಮೆಯ ತಲೆಯು ಅಪರಂಜಿ, ಎದೆ ತೋಳುಗಳು ಬೆಳ್ಳಿ, ಹೊಟ್ಟೆ ಸೊಂಟಗಳು ತಾಮ್ರ, ಕಾಲುಗಳು ಕಬ್ಬಿಣ ಮತ್ತು ಮಣ್ಣು. ನೀನು ನೋಡುತ್ತಿರಲಾಗಿ [ಬೆಟ್ಟದೊಳಗಿಂದ] ಒಂದು ಗುಂಡು ಬಂಡೆಯು ಕೈಯಿಲ್ಲದೆ ಒಡೆಯಲ್ಪಟ್ಟು [ಸಿಡಿದು ಬಂದು] ಆ ಪ್ರತಿಮೆಯ ಕಬ್ಬಿಣ ಮಣ್ಣಿನ ಹೆಜ್ಜೆಗಳಿಗೆ ಬಡಿದು ಚೂರು ಚೂರು ಮಾಡಿತು"

"ಆಗ ಕಬ್ಬಿಣ, ಮಣ್ಣು, ತಾಮ್ರ, ಬೆಳ್ಳಿ ಬಂಗಾರಗಳೆಲ್ಲವೂ ಪುಡಿಪುಡಿಯಾಗಿ ಸುಗ್ಗಿಯ ಕಣಗಳ ಹೊಟ್ಟಿನಂತಾದವು; ಗಾಳಿಯು ತೂರಿಕೊಂಡು ಹೋಗಲು ಅವುಗಳಿಗೆ ನೆಲೆಯೇ ಇಲ್ಲವಾಯಿತು; ಪ್ರತಿಮೆ ಬಡಿದ ಆ ಬಂಡೆಯು ಮಹಾಪರ್ವತವಾಗಿ ಲೋಕದಲ್ಲೆಲ್ಲಾ ತುಂಬಿಕೊಂಡಿತು"

"ಕನಸು ಇದೇ; ಇದರ ಅರ್ಥವನ್ನೂ ಸನ್ನಿಧಿಯಲ್ಲಿ ಅರಿಕೆಮಾಡುವೆವು. ಅರಸೇ, ನೀನು ರಾಜಾಧಿರಾಜ, ಪರಲೋಕದ ದೇವರು ನಿನಗೆ ರಾಜ್ಯ, ಬಲಪರಾಕ್ರಮ ವೈಭವಗಳನ್ನು ದಯಪಾಲಿಸಿದ್ದಾನೆ; (ಅಲ್ಲಿ ಅನ್ಯಜನಾಂಗಗಳ ರಾಜ್ಯಗಳು ಅಥವಾ ಅಧಿಕಾರಗಳು ದೇವರಿಂದ ನಿಯಮಿಸಿದವು) ನರಜಾತಿಯವರು ವಾಸಿಸುವ ಸಕಲ ಪ್ರಾಂತಗಳಲ್ಲಿ ಆಕಾಶಪಕ್ಷಿಗಳನ್ನೂ ಭೂಜಂತುಗಳನ್ನೂ ನಿನ್ನ ಕೈಗೆ ಒಪ್ಪಿಸಿ ನೀನು ಅವುಗಳನ್ನೆಲ್ಲಾ ಆಳುವಂತೆ ಮಾಡಿದ್ದಾನೆ. ನೀನೇ ಆ ಬಂಗಾರದ ತಲೆ"

"ನಿನ್ನ ಕಾಲವಾದ ಮೇಲೆ ನಿನಗಿಂತ ಕನಿಷ್ಟವಾದ ಮತ್ತೊಂದು ರಾಜ್ಯವುಂಟಾಗುವುದು; (ಬೆಳ್ಳಿ) ಅನಂತರ ಬೇರೊಂದು ಮೂರನೆಯ ರಾಜ್ಯವು ತಾಮ್ರದ್ದಾಗಿ ವಹಿಸಿಕೊಂಡು ಭೂಮಂಡಲವನ್ನೆಲ್ಲಾ ಆಳುವುದು. ನಾಲ್ಕನೆಯ ರಾಜ್ಯವು ಕಬ್ಬಿಣದಷ್ಟು ಗಟ್ಟಿ; ಕಬ್ಬಿಣವು ಎಲ್ಲಾ ವಸ್ತುಗಳನ್ನೂ ಚೂರುಚೂರಾಗಿ ಒಡೆದು ಹಾಕುತ್ತದಷ್ಟೆ; ಸಕಲವನ್ನೂ ಧ್ವಂಸಮಾಡುವ ಕಬ್ಬಿಣದಂತೆಯೇ ಅದು ಚೂರುಚೂರಾಗಿ ಧ್ವಂಸವಾಗುವುದು. ಹೆಜ್ಜೆಗಳಲ್ಲಿ ಮತ್ತು ಬೆರಳುಗಳಲ್ಲಿ ಒಂದಂಶವು ಕುಂಬಾರನ ಮಣ್ಣೂ ಒಂದಂಶವು ಕಬ್ಬಿಣವೂ ಆಗಿದ್ದನ್ನು ನೀನು ನೋಡಿದ ಪ್ರಕಾರ ಆ ರಾಜ್ಯವು ಭಿನ್ನಭಿನ್ನವಾಗಿರುವುದು; ಜೇಡಿ ಮಣ್ಣಿನೊಂದಿಗೆ ಕಬ್ಬಿಣವು ಮಿಶ್ರವಾಗಿದ್ದದ್ದನ್ನು ನೀನು ನೋಡಿದಂತೆ ಆ ರಾಜ್ಯದಲ್ಲಿ ಕಬ್ಬಿಣದ ಬಲವು ಸೇರಿರುವುದು. ಕಾಲ್ಬೆರಳುಗಳು ಒಂದಂಶವು ಕಬ್ಬಿಣ ಒಂದಂಶವು ಮಣ್ಣು ಆಗಿದ್ದ ಹಾಗೆ ಆ ರಾಜ್ಯದ ಒಂದಂಶವು ಗಟ್ಟಿ ಒಂದಂಶವು ಬೆಂಡು".

ಭೂಲೋಕದ ಹಲವಾರು ಚಿಕ್ಕ ಸಾಮ್ರಾಜ್ಯಗಳಲ್ಲಿ ದಾನಿಯೇಲನು ಮೇಲೆ ವಿವರಿಸಿದ ನಾಲ್ಕು ಬಗೆಯ ಸಾಮ್ರಾಜ್ಯಗಳು ಎದ್ದಿವೆ ಎಂದು ಐತಿಹಾಸಿಕ ವಿದ್ಯಾರ್ಥಿಯು ಕೂಡಲೇ ಕಂಡುಕೊಳ್ಳುತ್ತಾನೆ. ಅವುಗಳನ್ನು 'ವಿಶ್ವ ಸಾಮ್ರಾಜ್ಯಗಳು' ಎಂದು ಕರೆಯುತ್ತಾರೆ – ಮೊದಲನೆಯದು ಬಾಬೇಲ್, ಬಂಗಾರದ ಶಿರವುಳ್ಳದ್ದು (ವ. 38), ಬಾಬೇಲನ್ನು ಗೆದ್ದುಕೊಂಡ ಮೇಡೋ ಪರ್ಷಿಯಾವು ಎರಡನೆಯದು – ಅದರ ಎದೆ ಬೆಳ್ಳಿಯದು; ಮೇಡೋ ಪರ್ಷಿಯಾವನ್ನು ಗೆದ್ದುಕೊಂಡ ಗ್ರೀಸ್ ಮೂರನೆಯದು, ಅದರ ಹೊಟ್ಟೆಯು ತಾಮ್ರದ್ದು; ನಾಲ್ಕನೆಯ ಬಲಶಾಲಿ ರಾಜ್ಯವಾದ ರೋಮ್, ಅದರ ಕಾಲುಗಳು ಕಬ್ಬಿಣ ಮತ್ತು ಜೇಡಿಮಣ್ಣಿನಿಂದ ಮಿಶ್ರಗೊಂಡಿದೆ. ಮೊದಲ ಮೂರು ಸಾಮ್ರಾಜ್ಯಗಳು ಮುಗಿದುಹೋಗಿವೆ. ನಾಲ್ಕನೆಯದಾದ ರೋಮ್ ನಮ್ಮ ಕರ್ತನ ಜನನದ ಸಮಯದಲ್ಲಿ ವಿಶ್ವದ ಪ್ರಭುತ್ವ ಹೊಂದಿತ್ತು ಎಂಬುದಾಗಿ ನಾವು ಓದುತ್ತೇವೆ – "ಆ ಕಾಲದಲ್ಲಿ ರಾಜ್ಯವೆಲ್ಲಾ ಖಾನೇಷುಮಾರಿ ಬರೆಸಿಕೊಳ್ಳಬೇಕೆಂಬ ಆಜ್ಞೆಯು ಚಕ್ರವರ್ತಿಯಾದ ಔಗುಸ್ತನಿಂದ ಹೊರಟಿತು" (ಲೂಕ 2:1).

ಕಬ್ಬಿಣದ ಸಾಮ್ರಾಜ್ಯವಾದ ಅದು ಬಹಳಷ್ಟು ಬಲಶಾಲಿಯಾಗಿದ್ದು, ಅದರ ಹಿಂದಿನ ರಾಜ್ಯಗಳಿಗಿಂತ ಬಹಳ ಕಾಲ ಉಳಿಯಿತು. ವಾಸ್ತವವಾಗಿ ರೋಮ್ ಸಾಮ್ರಾಜ್ಯವು ಇನ್ನೂ ಯೂರೋಪಿನ ರಾಜ್ಯಗಳಲ್ಲಿ ಒಂದಾಗಿ ಪ್ರತಿನಿಧಿಸುತ್ತಿದೆ. ಈ ಭಾಗವು ಪ್ರತಿಮೆಯ ಹತ್ತು ಕಾಲ್ಬೆರಳುಗಳಲ್ಲಿ ಪ್ರತಿನಿಧಿತವಾಗಿದೆ. ಪಾದಗಳಲ್ಲಿ ಜೇಡಿ ಮಣ್ಣು–ಕಬ್ಬಿಣದೊಂದಿಗೆ ಬೆರಿಕೆಯಾಗಿದ್ದು ರಾಜ್ಯ ಮತ್ತು ಸಭೆಯ ಬೆರಕೆಯನ್ನು ಪ್ರತಿನಿಧಿಸುತ್ತದೆ. ಈ ಮಿಶ್ರಣವೇ ದೇವರ ವಾಕ್ಯದಲ್ಲಿನ 'ಬಾಬೇಲ್' ಅಥವಾ 'ಗಲಿಬಿಲಿ'ಯಾಗಿದೆ. ನಾವು ಪ್ರಸ್ತುತದಲ್ಲಿ ನೋಡುವಂತೆ, ಬಂಡೆಯು ದೇವರ ನಿಜವಾದ ರಾಜ್ಯದ ಸಂಕೇತವಾಗಿದೆ. ಬಾಬೇಲ್ ಕಲ್ಲಿನ ಬದಲಿಯಾಗಿ ಅನುಕರಣವನ್ನು ಪ್ರತಿನಿಧಿಸಿದೆ – ಅದು (ಕಬ್ಬಿಣದ) ತುಣುಕು ತುಣುಕಾದ ರೋಮ್ ಸಾಮ್ರಾಜ್ಯದೊಂದಿಗೆ ಅನ್ಯೋನ್ಯಗೊಂಡಿದೆ – ಸಭೆ ಮತ್ತು ರಾಜ್ಯದ ಈ ಮಿಶ್ರ ಪದ್ಧತಿಯು – ಹೆಸರು ಮಾತ್ರದ ಸಭೆಯು ಈ ಲೋಕದ ರಾಜ್ಯದೊಂದಿಗೆ ವಿವಾಹವಾಗಿದೆ ಮತ್ತು ಇದನ್ನು ಕರ್ತನು ಬಾಬೇಲ್ ಎಂದು ಕರೆಯುತ್ತಾನೆ. ತನ್ನನ್ನು ಗಲಿಬಿಲಿ ಎಂದು

ಗ್ರಹಿಸುವಂತೆ ಕರೆಯಲ್ಪಡುವ ಕ್ರೈಸ್ತ ಪ್ರಪಂಚ – ಕ್ರಿಸ್ತನ ರಾಜ್ಯವಾಗಿದೆ. ದಾನಿಯೇಲನು ಅದನ್ನು ಹೀಗೆ ವಿವರಿಸಿದ್ದಾನೆ – "ಕಬ್ಬಿಣವು ಜೇಡಿಮಣ್ಣಿನೊಂದಿಗೆ ಬೆರೆತಿರುವುದನ್ನು ನೀನು ನೋಡಿದ ಮೇರೆಗೆ ಆ ರಾಜ್ಯಾಂಶಗಳು ಮಾನವ ಸಂತತಿ ಸಂಬಂಧದಿಂದ ಬೆರೆತುಕೊಳ್ಳುವುವು (ಸಭೆ ಮತ್ತು ಲೋಕದೊಡನೆ ಬೆರಕೆ – ಬಾಬಿಲೋನ್); ಆದರೆ ಕಬ್ಬಿಣವು ಮಣ್ಣಿನೊಂದಿಗೆ ಹೇಗೆ ಕಲೆಯುವುದಿಲ್ಲವೋ ಹಾಗೆ ಅವು ಒಂದೊಕ್ಕೊಂದು ಅಂಟಿಕೊಳ್ಳುವುದಿಲ್ಲ. ಅವು ಸಂಪೂರ್ಣವಾಗಿ ಸಮ್ಮಿಲನವಾಗುವದಿಲ್ಲ. ಆ ರಾಜರ ಕಾಲದಲ್ಲಿ (ಕಾಲ್ಬೆರಳಿನಿಂದ ಪ್ರತಿನಿಧಿತವಾದ ರಾಜ್ಯಗಳು, ಕ್ರೈಸ್ತ ರಾಜ್ಯವೆಂದೆನಿಸಿಕೊಳ್ಳುವದು ಅಥವಾ ಕ್ರೈಸ್ತ ಜಗತ್ತು) ಪರಲೋಕ ದೇವರು ಒಂದು ರಾಜ್ಯವನ್ನು ಸ್ಥಾಪಿಸುವನು; ಅದು ಎಂದಿಗೂ ಅಳಿಯದು. ಅದರ ಪ್ರಾಬಲ್ಯವು ಬೇರೆ ಜನಾಂಗಕ್ಕೆ ಕದಲಿಹೋಗದು. ಆ ರಾಜ್ಯಗಳನ್ನೆಲ್ಲಾ ಭಂಗಪಡಿಸಿ ನಿರ್ನಾಮಮಾಡಿ ಶಾಶ್ವತವಾಗಿ ನಿಲ್ಲುವುದು" (ದಾನಿ. 2: 43,44).

ದಾನಿಯೇಲನು ಇಲ್ಲಿ ಈ ಅನ್ಯಜನಗಳ ಸರ್ಕಾರಗಳು ಅಂತ್ಯಗೊಳ್ಳುವ ಸಮಯದ ಬಗ್ಗೆ ಏನನ್ನೂ ಹೇಳುವುದಿಲ್ಲ; ಅದನ್ನು ನಾವು ಬೇರೆ ಕಡೆಯಲ್ಲಿ ನೋಡುತ್ತೇವೆ; ಆದರೆ ಮುಂತಿಳಿಸಿದ ಪ್ರತಿಯೊಂದು ಸಂದರ್ಭವೂ ಆ ದಿನವೂ ಅದು ಹತ್ತಿರದಲ್ಲಿಯೇ ಇದೆ, ಬಾಗಿಲಿನಲ್ಲಿಯೇ ಇದೆ ಎಂದು ಸೂಚಿಸುತ್ತದೆ. ಪೋಪರ ವ್ಯವಸ್ಥೆಯು, ತಮ್ಮ ಸರ್ಕಾರವೇ ಪರಲೋಕದ ದೇವರು ಸ್ಥಾಪಿಸಲು ವಾಗ್ದಾನ ಮಾಡಿದ್ದು ಮತ್ತು ಅದರಲ್ಲಿ ಈ ಪ್ರವಾದನೆಯು ನೆರವೇರಿದೆ ಮತ್ತು ಇದು ಎಲ್ಲಾ ರಾಜ್ಯಗಳನ್ನು ತುಂಡು ತುಂಡು ಮಾಡಿ ನಾಶಪಡಿಸುತ್ತದೆ ಎಂಬ ಹಕ್ಕೇಳಿಕೆಯನ್ನು ಬಹಳ ಹಿಂದಿನಿಂದಲೂ ನೀಡುತ್ತಲೇ ಇದೆ. ಆದಾಗ್ಯೂ, ಸತ್ಯವೇನೆಂದರೆ, ಹೆಸರು ಮಾತ್ರದ ಸಭೆಯು ಕೇವಲ ಈ ಲೋಕದ ರಾಜ್ಯಗಳೊಂದಿಗೆ ಜೇಡಿಮಣ್ಣು ಕಬ್ಬಿಣದೊಂದಿಗೆ ಮಿಶ್ರವಾಗಿ ಸೇರಿಕೊಂಡಿದೆ, ಮತ್ತು ಪೋಪನ ಅಧಿಕಾರವು ಎಂದಿಗೂ ನಿಜವಾದ ದೇವರ ರಾಜ್ಯವಾಗಿರಲಿಲ್ಲ. ಆದರೆ ಕೇವಲ ಅದರ 'ನಕಲಿಯಾಗಿದೆ'. ಪೋಪನ ಅಧಿಕಾರವು ಈ ಭೂಲೋಕದ ರಾಜ್ಯಗಳನ್ನು ನಾಶಪಡಿಸಿಲ್ಲ ಎಂಬುದಕ್ಕೆ ಉತ್ತಮವಾದ ನಿದರ್ಶನವೆಂದರೆ ಅವುಗಳು ಇನ್ನೂ ಅಸ್ತಿತ್ವದಲ್ಲಿರುವುದು. ಈಗ ಕೆಸರಿನಿಂದ ಕೂಡಿದ ಜೇಡಿಮಣ್ಣು ಒಣಗಿಹೋಗಿದೆ ಮತ್ತು ಸುಲಭವಾಗಿ ಒಡೆದುಹೋಗುವುದಾಗಿದೆ. ಅದು ತನ್ನ ಅಂಟಿಕೊಳ್ಳುವ ಶಕ್ತಿಯನ್ನು ಕಳಕೊಳ್ಳುತ್ತಿದೆ. ಕಬ್ಬಿಣ ಮತ್ತು ಜೇಡಿಮಣ್ಣು ಕರಗುವ ಲಕ್ಷಣವನ್ನು ನೀಡುತ್ತಿದೆ. ಮತ್ತು ನಿಜವಾದ ರಾಜ್ಯವೆಂಬ ಕಲ್ಲಿನಿಂದ ಬಡಿಯುವಾಗ ಬಲುಬೇಗ ಪುಡಿಪುಡಿಯಾಗಿಬಿಡುತ್ತದೆ.

ತನ್ನ ಅರ್ಥವಿವರಣೆಯನ್ನು ಮುಂದುವರೆಸುತ್ತಾ ದಾನಿಯೇಲನು – "ಒಂದು ಗುಂಡು ಬಂಡೆಯು ಕೈಯಿಲ್ಲದೆ ಒಡೆಯಲ್ಪಟ್ಟು ಕಬ್ಬಿಣ, ತಾಮ್ರ, ಮಣ್ಣು, ಬೆಳ್ಳಿ ಬಂಗಾರಗಳನ್ನು ಚೂರು ಚೂರು ಮಾಡಿದ್ದು ನಿನ್ನ ಕಣ್ಣಿಗೆ ಬಿತ್ತಲ್ಲಾ. ಇದರಿಂದ ಪರಲೋಕ ದೇವರು ಮುಂದೆ ನಡೆಯುವ ವಿಷಯಗಳನ್ನು ರಾಜನಿಗೆ ತಿಳಿಯಪಡಿಸಿದ್ದಾನೆ; ಕನಸು ನಿಜ, ಅದರ ಅರ್ಥವು ನಂಬತಕ್ಕದ್ದು" (ದಾನಿ 2:45) ಎಂದು ಹೇಳಿದನು.

ಕೈಯಿಲ್ಲದೆ ಪರ್ವತದಿಂದ ಒಡೆಯಲ್ಪಟ್ಟ ಬಂಡೆಯು ಅನ್ಯಜನರ ಅಧಿಕಾರಗಳನ್ನು ಬಡಿದು ಚೂರು ಚೂರುಮಾಡಿ ಚದುರಿಸುವುದು ನಿಜವಾದ ಸಭೆಯನ್ನು, ದೇವರ ರಾಜ್ಯವನ್ನು ಪ್ರತಿನಿಧಿಸುತ್ತದೆ. ಸುವಾರ್ತಾ ಯುಗದಲ್ಲಿ 'ಈ ಬಂಡೆಯು' ರಾಜ್ಯವನ್ನು ರಚಿಸಲಾಯಿತು, ಕೊರೆದು ಕೆತ್ತಿ ಹೊರತೆಗೆಯಲ್ಪಟ್ಟಿತು ಮತ್ತು ಅದರ ಮುಂದಿನ ಸ್ಥಾನಕ್ಕೆ ಮತ್ತು ಶ್ರೇಷ್ಟತೆಗೆ ರೂಪಿಸಲಾಯಿತು. – ಇದು ಮಾನವ ಕೈಗಳಿಂದ ಅಲ್ಲ, ಆದರೆ ಸತ್ಯದ ಶಕ್ತಿ ಮತ್ತು ಸ್ಫೂರ್ತಿಯಿಂದ, ಕಣ್ಣಿಗೆ ಕಾಣದ ಯೆಹೋವನ ಶಕ್ತಿಯಿಂದ ಆದದ್ದು. ಅದು ಸಂಪೂರ್ಣಗೊಂಡಾಗ, ಪೂರ್ಣವಾಗಿ ಕತ್ತರಿಸಲ್ಪಟ್ಟು ಹೊರತೆಗೆದಾಗ, ಅದು ಈ ಲೋಕದ ರಾಜ್ಯಗಳನ್ನು ಬಡಿದು ನಾಶಪಡಿಸುವುದು. ಜನರನ್ನಲ್ಲ, ಆದರೆ ಸರ್ಕಾರಗಳನ್ನು ಈ ಪ್ರತಿಮೆಯು ಇದರಿಂದ ಪ್ರತೀಕಗೊಂಡಿವೆ. ಇವುಗಳು ನಾಶಗೊಳ್ಳಬೇಕಾಗಿದೆ, ಜನರು ಬಿಡುಗಡೆಗೊಳ್ಳಬೇಕಾಗಿದೆ. ನಮ್ಮ ಕರ್ತನಾದ ಯೇಸು ಜನರ ಜೀವವನ್ನು ನಾಶಮಾಡುವುದಕ್ಕೆ ಬಂದವನಲ್ಲ ಅವರನ್ನು ರಕ್ಷಿಸುವುದಕ್ಕಾಗಿ ಬಂದನು (ಯೋಹಾನ 3:17).

ಕಲ್ಲನ್ನು, ಅದರ ತಯಾರಿಯ ಸಮಯದಲ್ಲಿ, ಅದನ್ನು ಕೊರೆದು ಹೊರತೆಗೆಯುವಾಗ, ಅದರ ಮುಂದಿನ ದೈವನಿಯಮದ ದೃಷ್ಟಿಯಲ್ಲಿ ಅದನ್ನು "ಭ್ರೂಣ ಪರ್ವತ" ಎಂದು ಕರೆಯಬಹುದು. ಅದರಂತೆ, ಸಭೆಯು ಸಹಾ ಆಗಿದ್ದಿರಬಹುದು. ಕೆಲವೊಮ್ಮೆ ಹೌದು, ಅದನ್ನು 'ದೇವರ ರಾಜ್ಯ' ಎಂದು ಕರೆಯುವರು. ವಾಸ್ತವದಲ್ಲಿ, ಕಲ್ಲು ಪ್ರತಿಮೆಯನ್ನು ಒಡೆಯದ ಹೊರತು ಪರ್ವತವಾಗಲಾರದು; ಅದರಂತೆ ಸಭೆಯು ಸಹಾ, ಪೂರ್ಣ ಅರ್ಥದಲ್ಲಿ "ಯೆಹೋವನ ದಿನ"ವು

"ಜನಾಂಗಗಳ ಮೇಲೆ ದೇವರ ರೌದ್ರದ ದಿನ" ಅಥವಾ "ಮಹಾಸಂಕಟದ ಕಾಲ" ಇವುಗಳು ಮುಗಿಯುವಾಗ, ಮತ್ತು ಅದು ಸ್ಥಾಪಿತಗೊಂಡು ಇತರ ಎಲ್ಲಾ ರಾಜ್ಯಗಳೂ ಅದಕ್ಕೆ ಅಧೀನವಾಗುವಾಗ, ಭೂಲೋಕವನ್ನೆಲ್ಲಾ ಆವರಿಸಿಕೊಳ್ಳುವಂತೆ ಒಂದು ರಾಜ್ಯವಾಗುವುದು.

ಕ್ರೈಸ್ತ ಸಭೆಯ ಜಯಶಾಲಿಗಳಿಗೆ ಕರ್ತನು ಮಾಡಿದ ವಾಗ್ದಾನಗಳನ್ನು ಈಗ ನಿಮ್ಮ ಮನಸ್ಸಿಗೆ ತಂದುಕೊಳ್ಳಿರಿ – "ಜಯ ಹೊಂದುವವನನ್ನು ನನ್ನೊಡನೆ ಸಿಂಹಾಸನದಲ್ಲಿ ಕೂತುಕೊಳ್ಳವಂತೆ ಮಾಡುವೆನು" (ಪ್ರಕಟನೆ 3:21). "ಯಾವನು ಜಯಶಾಲಿಯಾಗಿದ್ದು ನನಗೆ ಮೆಚ್ಚಿಗೆಯಾದ ಕೃತ್ಯಗಳನ್ನು ಕಡೇವರೆಗೂ ನಡೆಸುತ್ತಾನೋ ಅವನಿಗೆ ನಾನು ನನ್ನ ತಂದೆಯಿಂದ ಹೊಂದಿದ ಅಧಿಕಾರದಂತೆ ಜನಾಂಗಗಳ ಮೇಲೆ ಅಧಿಕಾರವನ್ನು ಕೊಡುವೆನು. ಅವನು ಕಬ್ಬಿಣದ ಕೋಲಿನಿಂದ ಅವರನ್ನು ಆಳುವನು. ಮಣ್ಣಿನ ಮಡಿಕೆಗಳು ಒಡೆಯುವಂತೆ ಅವರ ಬಲ ಮುರಿದುಹೋಗುವುದು" (ಪ್ರಕಟನೆ 2:26,27). "ನೀನು ಕೇಳಿಕೊಂಡರೆ ನಾನು ಅನ್ಯಜನಗಳನ್ನೆಲ್ಲಾ ನಿನಗೆ ಅಧೀನಮಾಡುವೆನು. ಭೂಮಿಯ ಕಟ್ಟಕಡೆಯವರೆಗೂ ಇರುವ ಎಲ್ಲಾ ದೇಶಗಳನ್ನೂ ನಿನಗೆ ಸ್ವಾಸ್ತ್ಯವಾಗಿ ಕೊಡುವೆನು, ಕಬ್ಬಿಣದ ಗದೆಯಿಂದ ಅವರನ್ನು ನಾಶಮಾಡುವಿ. ಮಣ್ಣಿನ ಮಡಿಕೆಗಳೋ ಎಂಬಂತೆ ಅವರನ್ನು ಒಡೆದು ಹಾಕುವಿ ಎಂದು ಹೇಳಿದನು. ಆದುದರಿಂದ, ಅರಸರುಗಳಿರಾ, ವಿವೇಕಿಗಳಾಗಿರ್ರಿ; ದೇಶಾಧಿಪತಿಗಳಿರಾ, ಬುದ್ಧಿ ಮಾತುಗಳಿಗೆ ಕಿವಿಗೊಡಿರಿ. ಯೆಹೋವನನ್ನು ಭಯಭಕ್ತಿಯಿಂದ ಸೇವಿಸಿರಿ; ನಡುಗುತ್ತಾ ಉಲ್ಲಾಸಪಡಿರಿ. ಆತನ ಮಗನಿಗೆ ಮುದ್ದಿಡಿರಿ; ಇಲ್ಲವಾದರೆ ಆತನ ಕೋಪವು ಬೇಗನೇ ಪ್ರಜ್ವಲಿಸಲು ನೀವು ದಾರಿಯಲ್ಲೇ ನಾಶವಾದೀರಿ. ಆತನ ಮೊರೆಹೊಕ್ಕವರೆಲ್ಲರೂ ಧನ್ಯರು" (ಕೀರ್ತನೆ 2: 8–12). ಕಬ್ಬಿಣದ ದಂಡವು ತನ್ನ ಕಾರ್ಯವನ್ನು ಮಾಡಿ ಮುಗಿಸುವಾಗ ಅಂದರೆ "ಯೆಹೋವನು ಐಗುಪ್ತರನ್ನು ಹೊಡೆಯುವನು, ಗಾಯಮಾಡಿ ವಾಸಿಮಾಡುವವನಾಗಿಯೇ ಹೊಡೆಯುವನು. ಅವರು ಯೆಹೋವನ ಕಡೆಗೆ ತಿರುಗಿಕೊಳ್ಳುವರು. ಆತನು ಅವರ ವಿಜ್ಞಾಪನೆಗಳನ್ನು ಲಾಲಿಸಿ ಅವರನ್ನು ಗುಣಪಡಿಸುವನು" (ಯೆಶಾಯ 19:22, ಯೆರೆಮೀಯ 3:22,23 ;ಹೋಶೇಯ 6:1; 14:4, ಯೆಶಾಯ 2:3). ಅವರಿಗೆ ಬೂದಿಯ ಬದಲಾಗಿ ಶಿರೋಭೂಷಣ, ದುಃಖವಿದ್ದಲ್ಲಿ ಆನಂದ ತೈಲ, ಕುಂದಿದ ಮನಕ್ಕೆ ಪ್ರತಿಯಾಗಿ ಉತ್ಸಾಹ ಸ್ತೋತ್ರದ ವಸ್ತ್ರವನ್ನು ನೀಡುವನು.

## ಭೂಲೋಕದ ಸರ್ಕಾರಗಳ ಬಗ್ಗೆ ದಾನಿಯೇಲನ ದರ್ಶನ
## Daniel's Vision of Earthly Government

ನೆಬೂಕದ್ನೇಚ್ಚರ ದರ್ಶನಗಳನ್ನು ಭೂಲೋಕದ ದೃಷ್ಟಿಕೋನದಿಂದ ನೋಡುವಾಗ, ಅವುಗಳು ಈ ಭೂಲೋಕದ ಸಾಮ್ರಾಜ್ಯಗಳಾಗಿದ್ದವೆಂಬುದಾಗಿ ನಮಗೆ ತೋರಿಬರುತ್ತವೆ. ಇದು ಮಾನವನ ವೈಭವದ, ದೊಡ್ಡಸ್ತಿಕೆಯ ಮತ್ತು ಅಧಿಕಾರ ಇವುಗಳ ಪ್ರದರ್ಶನವಾಗಿದೆ. ಇದರಲ್ಲಿ ನಾವು ಬಂಗಾರದಿಂದ ಕಬ್ಬಿಣಕ್ಕೆ ಮತ್ತು ಅಂತಿಮವಾಗಿ ಜೇಡಿಮಣ್ಣಿಗೆ ಕ್ಷೀಣಿಸುವ ದೆಸೆಯಲ್ಲಿ ಯುಕ್ತವಾಗುವಂತೆ ಅದರ ಕ್ಷಯಿಸುವಿಕೆಯ ಮತ್ತು ಅಂತಿಮ ನಾಶನದ ಸೂಚನೆಯನ್ನೂ ನೋಡುತ್ತೇವೆ.

ಕಲ್ಲಿನ ವರ್ಗ ಅಂದರೆ ನಿಜವಾದ ಕ್ರೈಸ್ತ ಸಭೆಯು, ಅದರ ಆಯ್ಕೆಯ ಸಮಯದಲ್ಲಿ ಅಥವಾ ಬೆಟ್ಟದಿಂದ ಹೊರತೆಗೆಯುವ ಸಮಯದಲ್ಲಿ, ಅದಕ್ಕೆ ಈ ಲೋಕದಲ್ಲಿ ಯಾವುದೇ ಬೆಲೆಯಿಲ್ಲದ್ದೆಂದು ಅಭಿಪ್ರಾಯಪಡುತ್ತದೆ. ಅದು ಜನರಿಂದ ಹೀನೈಸಲ್ಪಟ್ಟು ಮತ್ತು ತಿರಸ್ಕರಿಸಲ್ಪಟ್ಟಿದೆ. ಅವರು ಅದನ್ನು ಬಯಸುವಂತೆ ಅದರಲ್ಲಿ ಯಾವ ಸೌಂದರ್ಯವನ್ನೂ ಕಾಣುವುದಿಲ್ಲ. ಈ ಲೋಕವು ಮಹಾ ಪ್ರತಿಮೆಯಲ್ಲಿ ಪ್ರತಿನಿಧಿತರಾದ ಅರಸರುಗಳನ್ನೂ, ಸರ್ಕಾರಗಳನ್ನೂ ಅವರುಗಳು ನಿರಂತರವಾಗಿ ಅವರನ್ನು ನಿರಾಶೆಗೊಳಿಸಿದರೂ, ಮೋಸಪಡಿಸಿದರೂ, ಗಾಯಗೊಳಿಸಿದರೂ ಮತ್ತು ದಬ್ಬಾಳಿಕೆ ನಡೆಸಿದರೂ ಅವರನ್ನು ಪ್ರೀತಿಸುತ್ತಾರೆ, ಮೆಚ್ಚಿಕೊಳ್ಳುತ್ತಾರೆ ಮತ್ತು ಕಾಪಾಡುತ್ತಾರೆ. ಈ ಪ್ರತಿಮೆಯಲ್ಲಿ ಪ್ರತಿನಿಧಿಸುವ ಮಹಾ ಆಡಳಿತಗಾರರು ಮತ್ತು ಸರ್ಕಾರಗಳನ್ನು ಅದರ ಅಲೆಗ್ಸಾಂಡರ್‌ಗಳನ್ನು, ಸೀಸರಗಳನ್ನು, ಬೋನಾಪಾರ್ಟೆಗಳನ್ನು ಮತ್ತಿತರರನ್ನು ಅವರ ಹಿರಿಮೆಯನ್ನು ತಮ್ಮ ಜೊತೆಮಾನವರ ಹತ್ಯೆಮಾಡುವುದರಲ್ಲಿ ಎತ್ತಿ ತೋರಿಸಿದರು, ಮತ್ತು ಅವರು ತಮ್ಮ ಅಧಿಕಾರ ದಾಹದಲ್ಲಿ ಮಿಲಿಯಾಂತರ ಜನರನ್ನು ವಿಧವೆಗಳನ್ನಾಗಿಯೂ, ಅನಾಥರನ್ನಾಗಿಯೂ ಮಾಡಿದ್ದರೂ ಅಂಥವರನ್ನು ಈ ಜಗತ್ತು ತನ್ನ ಗದ್ಯ ಮತ್ತು ಪದ್ಯಗಳಿಂದ ಶ್ಲಾಘಿಸುತ್ತದೆ. ಅಂಥಹುದೇ ಸ್ಫೂರ್ತಿಯು ಇನ್ನೂ ಸಹ ಆ 'ಹತ್ತು ಕಾಲ್ಬೆರಳು'ಗಳಲ್ಲಿ ಅಸ್ತಿತ್ವದಲ್ಲಿದೆ. ನಾವು ಇದು ಪ್ರದರ್ಶನಗೊಳ್ಳುವುದನ್ನು ಪೈಶಾಚಿಕವಾದ ಚಾತುರ್ಯವುಳ್ಳ ಆಧುನಿಕ ತಂತ್ರಗಳನ್ನು ಹೊಂದಿದ ಹನ್ನೆರಡು ಮಿಲಿಯನ್ ಜನರುಳ್ಳ ಶಸ್ತ್ರಸಜ್ಜಿತ ಸೈನ್ಯಾಧಿಕಾರಿ ಸಮೂಹದಲ್ಲಿ ಇಂದಿಗೂ

ಕಾಣಬಹುದಾಗಿದೆ ಮತ್ತು ಅವುಗಳಿಂದ ಅವರು ನೇಮಿಸಲ್ಪಟ್ಟ ಅಧಿಕಾರಗಳ ಆಜ್ಞೆಯ ಮೇರೆಗೆ ಮತ್ತೊಬ್ಬರನ್ನು ಹತ್ಯೆಗೈಯಬಹುದಾಗಿದೆ.

"ಈಗ ಅಹಂಕಾರಿಗಳನ್ನು ಧನ್ಯರೆಂದು ಕೊಂಡಾಡ ಬೇಕಾಗಿ ಬಂತು, ಹೌದು ದುಷ್ಕರ್ಮಿಗಳು ಏಳಿಗೆಗೆ ಬಂದಿದ್ದಾರೆ" (ಮಲಾಕಿ 3:15). ಹೌದು, ದುಷ್ಟತನ ನಡಿಸುವವರು ಅಧಿಕಾರದಲ್ಲಿ ಸ್ಥಾಪಿತವಾಗಿದ್ದಾರೆ. ಹಾಗಾದರೆ, ಕಲ್ಲಿನ ಬಡಿತದಿಂದ ಈ ಮಹಾ ಪ್ರತಿಮೆಯ ನಾಶನ, ಮತ್ತು ದೇವರ ರಾಜ್ಯದ ಸ್ಥಾಪನೆಯೆಂದರೆ, ಶೋಷಣೆಗೊಳಗಾದವರ ಬಿಡುಗಡೆ ಮತ್ತು ಎಲ್ಲರ ಆಶೀರ್ವಾದವೆಂಬುದನ್ನು ನಾವು ನೋಡುತ್ತೇವಲ್ಲವೆ? ಸ್ವಲ್ಪ ಸಮಯದವರೆಗೆ ಈ ಬದಲಾವಣೆಯು ವಿಪತ್ತನ್ನು ಮತ್ತು ತೊಂದರೆಯನ್ನು ಉಂಟುಮಾಡಬಹುದಾದರೂ, ಅಂತಿಮವಾಗಿ ಅದು ನೀತಿಯ ಫಲಗಳನ್ನು ನೀಡುತ್ತವೆ.

ಆದರೆ, ಈಗ ಈ ದೃಷ್ಟಿಕೋನಗಳ ವ್ಯತ್ಯಾಸಗಳನ್ನು ನಮ್ಮ ಮನಸ್ಸಿಗೆ ತಂದುಕೊಂಡು, ಪ್ರೀತಿಯ ಪ್ರವಾದಿ ದಾನಿಯೇಲನಿಗೆ ದರ್ಶನದಲ್ಲಿ ಚಿತ್ರಿಸಲ್ಪಟ್ಟಂತೆ, ದೇವರ ದೃಷ್ಟಿಕೋನದಿಂದ ಮತ್ತು ಆತನೊಂದಿಗೆ ಸಾಮರಸ್ಯದಿಂದ ಇರುವ ಭೂಲೋಕದ ಅದೇ ನಾಲ್ಕು ವಿಶ್ವಚಕ್ರಾಧಿಪತ್ಯಗಳನ್ನು ನೋಡೋಣ. ನಮಗೆ ಈ ರಾಜ್ಯಗಳು ಅಗೌರವವಾದ ಮತ್ತು ಮೃಗೀಯ ಲಕ್ಷಣದಲ್ಲಿ ಕಂಡು ಬರುವುದಾದರೂ, ಹಾಗಾಗಿ ಆತನಿಗೆ ಈ ನಾಲ್ಕು ಚಕ್ರಾಧಿಪತ್ಯಗಳು ನಾಲ್ಕು ಮಹಾ ಮತ್ತು ಅತಿ ಹಸಿದ ಕ್ರೂರ ಮೃಗಗಳಾಗಿ ತೋರಿಸಲ್ಪಟ್ಟವು. ಮತ್ತು ಆತನ ದೃಷ್ಟಿಗೆ ಬರಲಿರುವ ದೇವರ ರಾಜ್ಯವು (ಕಲ್ಲು) ಪ್ರಮಾಣದಲ್ಲಿ ನೆಬೂಕದ್ನೇಚರನು ನೋಡಿದಕ್ಕಿಂತ ಭವ್ಯವಾಗಿದ್ದವು. ದಾನಿಯೇಲನು – "ನಾನು ರಾತ್ರಿ ಕಂಡ ಕನಸಿನಲ್ಲಿ ಅಹಾ!, ಚತುರ್ದಿಕ್ಕಿನ ಗಾಳಿಗಳು ಮಹಾ ಸಾಗರದ ಮೇಲೆ ರಭಸವಾಗಿ ಬೀಸಿ ಬಡಿಯುತ್ತಿದ್ದವು. ಒಂದಕ್ಕೊಂದು ವಿಲಕ್ಷಣವಾದ ನಾಲ್ಕು ದೊಡ್ಡ ಮೃಗಗಳು ಸಾಗರದೊಳಗಿಂದ ಬಂದವು. ಮೊದಲು ಕಾಣಿಸಿದ ಮೃಗವು ಸಿಂಹದ ಹಾಗಿತ್ತು. ಅದಕ್ಕೆ ಹದ್ದಿನಂತೆ ರೆಕ್ಕೆಗಳಿದ್ದವು.... ಆಹಾ, ಇನ್ನೊಂದು ಮೃಗ, ಎರಡನೇದು; ಅದು ಕರಡಿಯ ಹಾಗಿತ್ತು... ಇಗೋ ಚಿರತೆಯ ಹಾಗಿರುವ ಮತ್ತೊಂದು ಮೃಗವು ಕಾಣಿಸಿತು .... ನಾನು ರಾತ್ರಿ ಕಂಡ ಕನಸಿನಲ್ಲಿ ಸ್ವಲ್ಪ ಹೊತ್ತಿನ ಮೇಲೆ ಆಹಾ, ನಾಲ್ಕನೆಯ ಮೃಗವು ಕಾಣಿಸಿತು. ಆ ಮೃಗಕ್ಕೆ ನಾಲ್ಕು ತಲೆಗಳಿದ್ದವು; ಅದು ಭಯಂಕರ, ಹೆದರಿಸುವಂಥದ್ದು, ಅಧಿಕ ಬಲವುಳ್ಳದ್ದು, ಅದಕ್ಕೆ ಕಬ್ಬಿಣದ ದೊಡ್ಡ ಹಲ್ಲುಗಳಿದ್ದವು; ಅದು ನುಂಗುತ್ತಾ ಚೂರು ಚೂರು ಮಾಡುತ್ತಾ ಮಿಕ್ಕದ್ದನ್ನು ಕಾಲಿನಿಂದ ತುಳಿಯುತ್ತಾ ಇತ್ತು; ಅದು ಮುಂಚಿನ ಎಲ್ಲಾ ಮೃಗಗಳಿಗಿಂತ ವಿಲಕ್ಷಣವಾಗಿತ್ತು. ಅದಕ್ಕೆ ಹತ್ತು ಕೊಂಬುಗಳಿದ್ದವು" (ದಾನಿ. 7:2–7) ಎಂದು ವಿವರಿಸುತ್ತಾನೆ.

ಮೊದಲ ಮೂರು ಮೃಗಗಳಿಗೆ ಸಂಬಂಧಿಸಿದ ವಿವರಣೆಗಳು (ಬಾಬೇಲೆಂಬ ಸಿಂಹ, ಮೆಡೋ–ಪರ್ಷಿಯಾ ಎಂಬ ಕರಡಿ, ಗ್ರೀಕ್ ಎಂಬ ಚಿರತೆ) ಅವುಗಳ ತಲೆಗಳು, ಕಾಲುಗಳು, ರೆಕ್ಕೆಗಳು ಮುಂತಾದವುಗಳು ಇವುಗಳೆಲ್ಲವೂ ಸಾಂಕೇತಿಕ ವಾದವುಗಳು. ನಮ್ಮ ಪ್ರಸ್ತುತ ಪರೀಕ್ಷೆಗೆ ಅವು ಕಡಿಮೆ ಪ್ರಾಮುಖ್ಯತೆಯುಳ್ಳವುಗಳಾದ ಕಾರಣ, ನಾವು ನಾಲ್ಕನೆಯ ಮೃಗವಾದ ರೋಮಿನ ವಿವರಗಳಿಗೆ ಸಾಗುತ್ತಿದ್ದೇವೆ.

ನಾಲ್ಕನೆಯ ಮೃಗವಾದ ರೋಮಿನ ಬಗ್ಗೆ ದಾನಿಯೇಲನು – "ನಾನು ರಾತ್ರಿ ಕಂಡ ಕನಸಿನಲ್ಲಿ ಸ್ವಲ್ಪ ಹೊತ್ತಿನ ಮೇಲೆ ಆಹಾ, ನಾಲ್ಕನೆಯ ಮೃಗವು ಕಾಣಿಸಿತು. ಆ ಮೃಗಕ್ಕೆ ನಾಲ್ಕು ತಲೆಗಳಿದ್ದವು; ಅದು ಭಯಂಕರ, ಹೆದರಿಸುವಂಥದ್ದು, ಅಧಿಕ ಬಲವುಳ್ಳದ್ದು, ಅದಕ್ಕೆ ಕಬ್ಬಿಣದ ದೊಡ್ಡ ಹಲ್ಲುಗಳಿದ್ದವು; ಅದು ನುಂಗುತ್ತಾ ಚೂರು ಚೂರು ಮಾಡುತ್ತಾ ಮಿಕ್ಕದ್ದನ್ನು ಕಾಲಿನಿಂದ ತುಳಿಯುತ್ತಾ ಇತ್ತು; ಅದು ಮುಂಚಿನ ಎಲ್ಲಾ ಮೃಗಗಳಿಗಿಂತ ವಿಲಕ್ಷಣವಾಗಿತ್ತು. ಅದಕ್ಕೆ ಹತ್ತು ಕೊಂಬುಗಳಿದ್ದವು. ನಾನು ಆ ಕೊಂಬುಗಳನ್ನು ಗಮನಿಸುತ್ತಿರುವಲ್ಲಿ ಇಗೋ, ಅವುಗಳ ನಡುವೆ ಇನ್ನೊಂದು ಚಿಕ್ಕ ಕೊಂಬು ಮೊಳೆಯಿತು; ಅದರ ದೆಸೆಯಿಂದ ಮುಂಚಿನ ಕೊಂಬುಗಳಲ್ಲಿ ಮನುಷ್ಯನ ಕಣ್ಣುಗಳಂತಿರುವ ಕಣ್ಣುಗಳೂ, ಬಡಾಯಿ ಕೊಚ್ಚಿಕೊಳ್ಳುವ ಬಾಯಿಯೂ ಇದ್ದವು" (ದಾನಿ. 7:7–8) ಎಂದು ವಿವರಿಸುತ್ತಾನೆ.

ಇಲ್ಲಿ ರೋಮನ್ ಚಕ್ರಾಧಿಪತ್ಯವನ್ನು ತೋರಿಸಲಾಗಿದೆ; ಹತ್ತು ಕೊಂಬುಗಳಲ್ಲಿ ಅದರ ಅಧಿಕಾರದ ವಿಭಜನೆಯನ್ನೂ ತೋರಿಸಲಾಗಿದೆ. ಕೊಂಬು ಅಧಿಕಾರದ ಚಿಹ್ನೆಯಾಗಿದೆ. ಇವುಗಳ ಮಧ್ಯದಿಂದ ಚಿಗುರಿ ಬಂದ ಚಿಕ್ಕ ಕೊಂಬು ಅವುಗಳಲ್ಲಿನ ಮೂರರ ಶಕ್ತಿಯನ್ನು ತನ್ನ ಸ್ವಂತಕ್ಕೆ ಬಳಸಿಕೊಂಡು, ಇತರರೊಂದಿಗೆ ಆಳ್ವಿಕೆಮಾಡುತ್ತಾ, ರೋಮಿನ ಸಭೆಯ ಸಣ್ಣ ಪ್ರಾರಂಭದಿಂದ ಕ್ರಮೇಣವಾಗಿ ಅಧಿಕಾರಕ್ಕೇರಿದ್ದನ್ನು, ಪೋಪನ ಅಧಿಕಾರ ಅಥವಾ ಕೊಂಬನ್ನು ಪ್ರತಿನಿಧಿಸುತ್ತದೆ. ಅದು ಪ್ರಭಾವದಿಂದ ಹೆಚ್ಚಿಕೊಂಡಾಗ, ಮೂರು ವಿಭಾಗಗಳನ್ನು, ಕೊಂಬುಗಳನ್ನು ಅಥವಾ ರೋಮ್ ಚಕ್ರಾಧಿಪತ್ಯದ ಅಧಿಕಾರಗಳನ್ನು (ಹೆರುಲಿ, ಪೂರ್ವ

ಎಕ್ಸಾರ್ಕೇಟ್ ಮತ್ತು ಆಸ್ಟ್ರೋಗೋತ್ಸ್) ಕಿತ್ತು ತಾನು ನಾಗರೀಕ ಶಕ್ತಿಯಾಗಿ ಸ್ಥಾಪಿತಗೊಳ್ಳಲು ಮಾರ್ಗ ಮಾಡಿಕೊಂಡಿತು. ಈ ಕೊನೆಯ ವಿಶೇಷವಾದ ಗಮನಾರ್ಹವಾದ ಕೊಂಬು, ಪೋಪನ ಅಧಿಪತ್ಯವು ಅದರ ಕಣ್ಣುಗಳು ಬುದ್ಧಿವಂತಿಕೆಗೂ ಮತ್ತು ಬಾಯಿಯು ಅದರ ನುಡಿಯುವಿಕೆ ಮತ್ತು ಹಕ್ಕೇಳಿಕೆ, ಮುಂತಾದವುಗಳಿಗೂ ಪ್ರತಿನಿಧಿಸುತ್ತವೆ.

ರೋಮನ್ನು ಪ್ರತಿನಿಧಿಸುವ ಈ ನಾಲ್ಕನೆಯ ಮೃಗಕ್ಕೆ, ದಾನಿಯೇಲನು ಯಾವುದೇ ವಿವರವಾದ ಹೆಸರನ್ನು ನೀಡುವುದಿಲ್ಲ. ಆದರೆ ಉಳಿದವುಗಳನ್ನು ಸಿಂಹದಂತೆ, ಕರಡಿಯಂತೆ, ಚಿರತೆಯಂತೆ ಎಂದಿದ್ದಾನೆ, ನಾಲ್ಕನೆಯದು ಎಷ್ಟೋ ಭಯಂಕರವೂ, ಭೀಕರವೂ ಆಗಿದ್ದು ಈ ಲೋಕದ ಯಾವ ಮೃಗವನ್ನೂ ಅದರೊಂದಿಗೆ ಹೋಲಿಸಲು ಸಾಧ್ಯವಾಗದು. ಪ್ರಕಟಣೆಗಾರನಾದ ಯೋಹಾನನು, ತನ್ನ ದರ್ಶನದಲ್ಲಿ ಇದೇ ಸಾಂಕೇತಿಕ ಮೃಗವನ್ನು (ಸರ್ಕಾರವನ್ನು) ನೋಡಿ, ಅದನ್ನು ವಿವರಿಸಲು ಹೆಸರೊಂದಿಲ್ಲದಂತಾದನು ಮತ್ತು ಕಡೆಗೆ ಅನೇಕ ಹೆಸರುಗಳನ್ನು ಅದಕ್ಕೆ ನೀಡುತ್ತಾನೆ. ಬೇರೆಯವುಗಳೊಂದಿಗೆ ಆತನು ಅದನ್ನು "ಪಿಶಾಚಿ" ಎಂದು ಕರೆಯುತ್ತಾನೆ (ಪ್ರಕಟನೆ 12:9). ಆತನು ಖಂಡಿತವಾಗಿಯೂ ಒಂದು ಸೂಕ್ತವಾದ ಹೆಸರನ್ನು ಆರಿಸಿಕೊಂಡಿದ್ದಾನೆ. ರೋಮನ್ನು ಅದರ ರಕ್ತಮಯವಾದ ಪೀಡನೆಗಳ ಬೆಳಕಿನಲ್ಲಿ ನೋಡುವಾಗ ನಿಶ್ಚಯವಾಗಿಯೂ ಅದು ಭೂಲೋಕದ ಎಲ್ಲಾ ಸರ್ಕಾರಗಳಿಗಿಂತ ಹೆಚ್ಚು ಪೈಶಾಚಿಕವಾಗಿತ್ತು. ವಿಗ್ರಹಾರಾಧಕ ರೋಮಿನಿಂದ ಪೋಪನ ಆಡಳಿತಕ್ಕೆ ಬದಲಾಗುವುದರಲ್ಲಿಯೂ ಅದು ಸೈತಾನನ ಒಂದು ಮುಖ್ಯ ಗುಣಲಕ್ಷಣವನ್ನು ವಿಶದಗೊಳಿಸುತ್ತದೆ.

ಕ್ರೈಸ್ತಧರ್ಮದಲ್ಲದ ರೋಮ್ ತನ್ನನ್ನು ಕ್ರೈಸ್ತರೆಂದು – ಕ್ರೈಸ್ತ ರಾಜ್ಯವೆಂದು ಹೇಳಿಕೊಳ್ಳುವಾಗ* ಆತನು ಸಹಾ ಪ್ರಕಾಶಮಯ ದೂತನಂತೆ ತನ್ನನ್ನು ರೂಪಾಂತರಿಸಿಕೊಳ್ಳುತ್ತಾನೆ (2 ಕೊರಿಂಥ 11:14).

ಈ ಕೊನೆಯ ಅಥವಾ ರೋಮ್ ಎಂಬ ಮೃಗದ ಬಗ್ಗೆ ವಿಶೇಷವಾಗಿ ಅದರ ವಿಚಿತ್ರವಾದ ಪೋಪನ ಕೊಂಬಿನ ಬಗ್ಗೆ ಕೆಲವೊಂದು ವಿವರಗಳನ್ನು ಕೊಟ್ಟ ಮೇಲೆ, ಪ್ರವಾದಿಯು ಈ ಕೊಂಬಿನ ಬಗ್ಗೆ ತೀರ್ಪನ್ನು ನೀಡಲಾಗುವುದು ಮತ್ತು ಅದು ತನ್ನ ಪ್ರಭುತ್ವವನ್ನು ಕಳಕೊಳ್ಳಲು ಪ್ರಾರಂಭಿಸುವುದು ಎಂದು ಹೇಳುತ್ತಾನೆ. ಅದು ಕ್ರಮೇಣವಾದ ಪ್ರಕ್ರಿಯೆಯಲ್ಲಿ ಮೃಗವು ನಾಶವಾಗುವವರೆಗೆ ವ್ಯಯವಾಗುವುದು.

ಈ ಮೃಗ ಅಥವಾ ರೋಮ್ ಸಾಮ್ರಾಜ್ಯವು ಅದರ ಕೊಂಬುಗಳು ಅಥವಾ ವಿಭಾಗಗಳಲ್ಲಿ ಇನ್ನೂ ಅಸ್ಥಿತ್ವದಲ್ಲಿದೆ, ಮತ್ತು "ಕರ್ತನ ದಿನ"ದಲ್ಲಿ ಅದು ಜನರ ಸಮೂಹವು ಎದ್ದು ಬರುವಾಗ, ಮತ್ತು ಸರ್ಕಾರಗಳು ಉರುಳಿ ಬೀಳುವಾಗ ಹತ್ಯೆಗೊಳ್ಳುವುದು. ಇದು ಪರಲೋಕ ಆಡಳಿತದ ಪೂರ್ವ ಸಿದ್ಧತೆಯಾಗಿದೆ. ಇದನ್ನು ಇನ್ನೂ ಪರೀಕ್ಷೆ ಮಾಡಬೇಕಾಗಿರುವ ಇತರೆ ವೇದಭಾಗಗಳಲ್ಲಿ ಸ್ಪಷ್ಟವಾಗಿ ತೋರಿಸಲಾಗಿದೆ. ಹೇಗಿದ್ದರೂ, ಪೋಪ್ ಅಧಿಕಾರದ ಕೊಂಬಿನ ನಾಶನವು ಮೊದಲಿಗೆ ಬರುತ್ತದೆ. ಅದರ ಶಕ್ತಿ ಮತ್ತು ಪ್ರಭಾವವು ನೆಪೋಲಿಯನ್ನನು ಪೋಪನನ್ನು ಫ್ರಾನ್ಸಿಗೆ ಕೈದಿಯಾಗಿ ಕರಕೊಂಡು ಹೋದಾಗ ನಾಶವಾಗತೊಡಗಿತು. ಆಗ ಪೋಪನ ಶಾಪಗಳಾಗಲೀ, ಅಥವಾ ಅವರ ಪ್ರಾರ್ಥನೆಗಳಾಗಲೀ ಅವರನ್ನು ಬೋನಾಪಾರ್ಟೆಯ ಬಲಾಧಿಕಾರವಾಗಲೀ ಬಿಡುಗಡೆಗೊಳಿಸಲಿಲ್ಲ, ಪೋಪನು ಹೇಳಿಕೊಳ್ಳುತ್ತಿದ್ದ ತನ್ನ ದೈವಿಕ ಅಧಿಕಾರವು ಮತ್ತು ಶಕ್ತಿಯು ಆಧಾರವಿಲ್ಲದ್ದು ಎಂಬುದು ರಾಷ್ಟ್ರಗಳಿಗೆ ಸ್ಪಷ್ಟವಾಯಿತು. ನಂತರದಲ್ಲಿ, ಪೋಪನ ಐಹಿಕ ಶಕ್ತಿಯು ಸೆಪ್ಟೆಂಬರ್ 1870ರವರೆಗೆ ತ್ವರಿತವಾಗಿ ಕ್ಷೀಣಿಸುತ್ತಾ ಬಂತು, ಅದು ತನ್ನ ಐಹಿಕ ಅಧಿಕಾರದ ಕಡೆಯ ಕುರುಹನ್ನು ವಿಕ್ಟರ್ ಇಮ್ಮಾನುವೇಲ್ ಎಂಬಾತನ ಕೈಯಲ್ಲಿ ಕಳಕೊಂಡಿತು.

ಆದಾಗ್ಯೂ, ನಾಶವಾಗುತ್ತಿರುವ ಸಮಯದಲ್ಲೆಲ್ಲಾ ಅದು 1870ರಲ್ಲಿದ್ದ ತನ್ನ ಕಡೆಯ ಮಹಾ ಹೇಳಿಕೆಗಳಾದ ದೇವದೂಷಣೆಯ ಕೊಬ್ಬಿದ ಮಾತುಗಳನ್ನು ಆಡುತ್ತಲೇ ಇತ್ತು. ತನ್ನ ಉರುಳುವಿಕೆಯ ಕೆಲವು ತಿಂಗಳು ಹಿಂದೆ ಅದು ಪೋಪರುಗಳ ದೋಷರಹಿತತೆಯನ್ನು ಸಾರಿ ತಿಳಿಸಿತ್ತು. ಇವೆಲ್ಲವುಗಳನ್ನೂ ಪ್ರವಾದನೆಯಲ್ಲಿ ಹೀಗೆ ಬರೆಯಲಾಗಿದೆ – "ಆಗ ನಾನು ನೋಡುತ್ತಿರಲು, ಅವರ ನಾಶವು ಪ್ರಾರಂಭವಾದಾಗ (ಕೊಂಬಿನ ವಿರುದ್ಧ ತೀರ್ಪನ್ನು ನೀಡಿದಾಗ) ಇಗೋ, ಕೊಂಬು ಬಡಾಯಿ ಕೊಚ್ಚಿಕೊಂಡ ನಿಮಿತ್ತ ಆ ಕೊಂಬಿನ ಮೃಗವನ್ನು ಕೊಂದು, ಅದರ ಹೆಣವನ್ನು ಉರಿಯುವ ಬೆಂಕಿಗೆ ಹಾಕಿ ನಾಶಪಡಿಸಿದರು" (ದಾನಿಯೇಲ 7:11).

---

* ರೋಮನ್ನು 'ಪಿಶಾಚಿ'ಯೆಂದು ಕರೆಯುವ ಸತ್ಯವು ಯಾವುದೇ ರೀತಿಯಲ್ಲಿ ಒಬ್ಬ ವೈಯಕ್ತಿಕ ಪಿಶಾಚಿಯನ್ನು ನಿರಾಕರಿಸುವುದಿಲ್ಲ, ಬದಲಾಗಿ ಅದಕ್ಕೆ ವ್ಯತಿರಿಕ್ತವಾದುದನ್ನು ಮಾಡುತ್ತದೆ. ಯಾಕೆಂದರೆ ಸಿಂಹಗಳಂಥಾಃ, ಕರಡಿಗಳಂಥಾಃ, ಚಿರತೆಗಳಂಥಾಃ ಭಯಂಕರವಾದವುಗಳು ಅವುಗಳ ತಿಳಿದ ಗುಣಲಕ್ಷಣಗಳೊಂದಿಗಿವೆ, ಆ ಸರ್ಕಾರಗಳೂ ಅವುಗಳಂತೆಯೇ ಅವೆ ಮತ್ತು ಹಾಗಾಗಿ, ಪಿಶಾಚಿಯು ತನ್ನ ತಿಳಿದ ಗುಣಲಕ್ಷಣಗಳೊಂದಿಗೆ ಇರುವುದರಿಂದ, ನಾಲ್ಕನೆಯ ಸಾಮ್ರಾಜ್ಯವು ಆತನಂತೆಯೇ ಅವೆ.

ಹೀಗೆ ನಾವು ಇತಿಹಾಸವನ್ನು ನಮ್ಮದೇ ದಿನದವರೆಗೆ ತಂದಿದ್ದೇವೆ ಮತ್ತು ಈ ಲೋಕದ ಸಾಮ್ರಾಜ್ಯಗಳ ಕುರಿತಾಗಿ ನಿರೀಕ್ಷಿಸಬೇಕಾದ ಸಂಗತಿಗಳು ಅವರ ಸಂಪೂರ್ಣ ನಾಶನವಾಗಿದೆ ಎಂದು ನೋಡುವಂತೆ ಮಾಡಲಾಗಿದೆ. ಮುಂದಿನ ಕ್ರಮದ ಸಂಗತಿಯನ್ನು ಮೇಲಿನ ವಚನದಲ್ಲಿ ವಿವರಿಸಿರುವಂತೆ ಮೃಗವನ್ನು ಕೊಂದು ಅದರ ದೇಹವನ್ನು ಉರಿಯುತ್ತಿರುವ ಜ್ವಾಲೆಗೆ ಒಪ್ಪಿಸುವವರೆಗೂ ನಾನು ನೋಡಿದೆ ಎಂದು ವಿವರಿಸಿರುವಂತೆ ವಧೆ ಮತ್ತು ದಹನವು ಸಂಕೇತಗಳಾಗಿವೆ. ಮಾತ್ರವಲ್ಲದೆ, ಮೃಗವೂ ಸಹಾ, ಇದು ಪ್ರಸ್ತುತ ಸಂಘಟಿತ ಸರ್ಕಾರದ ಸಂಪೂರ್ಣ ಹತಾಶ ವಿನಾಶವನ್ನು ಸೂಚಿಸುತ್ತದೆ. 12ನೇ ವಚನದಲ್ಲಿ ಪ್ರವಾದಿಯು ನಾಲ್ಕನೆಯ ಮೃಗದ ಮತ್ತು ಅದರ ಹಿಂದಿನ ಮೃಗಗಳ ವ್ಯತ್ಯಾಸವನ್ನು ಗಮನಿಸುವವ ನಾಗಿದ್ದಾನೆ. ಅವು ಮೂರೂ (ಬಾಬೇಲ್, ಪರ್ಷಿಯಾ ಮತ್ತು ಗ್ರೀಸ್) ಸಾಮ್ರಾಜ್ಯಗಳ ತೆಗೆಯೋಣವು ಅನುಕ್ರಮವಾಗಿದ್ದವು ಮತ್ತು ಈ ಲೋಕದ ಮೇಲಿನ ಅವುಗಳ ಅಧಿಕಾರವು ಮುಕ್ತಾಯಗೊಂಡಿತು. ಆದರೆ ರಾಷ್ಟ್ರವಾಗಿ ಅವುಗಳ ಜೀವನ ತಕ್ಷಣವೇ ಮುಕ್ತಾಯಗೊಳ್ಳಲಿಲ್ಲ. ವಿಶ್ವ ಪ್ರಭುತ್ವವು ಅವರ ಹಿಡಿತದಿಂದ ತಪ್ಪಿಹೋದರೂ ಗ್ರೀಸ್ ಮತ್ತು ಪರ್ಷಿಯಾಗಳು ಇನ್ನೂ ಸ್ವಲ್ಪ ಜೀವದಿಂದಿವೆ. ಆದಾಗ್ಯೂ, ಈ ಮೃಗಗಳಲ್ಲಿ ನಾಲ್ಕನೆಯದೂ ಕಡೆಯದೂ ಆದ ರೋಮ್ ಚಕ್ರಾಧಿಪತ್ಯದ ಬಗ್ಗೆ ಹಾಗಾಗಲಿಲ್ಲ. ಅದು ತನ್ನ ಸಾಮ್ರಾಜ್ಯವನ್ನೂ, ಜೀವವನ್ನೂ ಒಮ್ಮೆಲೇ ಕಳೆದುಕೊಳ್ಳುತ್ತದೆ ಮತ್ತು ತೀವ್ರವಾಗಿ ನಾಶಗೊಳ್ಳುತ್ತದೆ; ಅದರೊಂದಿಗೆ ಇತರೆ ಸಾಮ್ರಾಜ್ಯಗಳೂ ಸಹಾ ಇಲ್ಲ ದಂತಾಗುವುವು (ದಾನಿ. 2:35). ಉಪಯೋಗಿಸಲ್ಪಡುವ ರೀತಿ ಅಥವಾ ಸಾಧನತೆಗಳು ಹೇಗೇ ಇರಲಿ, ಈ ಪತನದ ಕಾರಣವು ಕ್ರಿಸ್ತನ ಅಧೀನದಲ್ಲಿ ದೇವರ ರಾಜ್ಯವಾದ ಐದನೆಯ ವಿಶ್ವ ಸಾಮ್ರಾಜ್ಯದ ಸ್ಥಾಪನೆಗೆ ಕಾರಣವಾಗುತ್ತದೆ. ಆ ರಾಜ್ಯವನ್ನು ತೆಗೆದುಕೊಳ್ಳುವುದು ಆತನ ಹಕ್ಕಾಗಿದೆ. ನಾಲ್ಕನೆಯ ಮೃಗದಿಂದ ಸಾಮ್ರಾಜ್ಯದ ವರ್ಗಾವಣೆಯು ಅದರ ನೇಮಿತ ಸಮಯದಲ್ಲಿ 'ದೇವರಿಂದ ಗೊತ್ತುಪಡಿಸಲ್ಪಟ್ಟದ್ದು'. ಮೆಸ್ಸೀಯನ ಅಧೀನದಲ್ಲಿ ಐದನೆಯ ರಾಜ್ಯದ ನೇಮಿತ ಕಾಲವು ಬರುವುದನ್ನು ಪ್ರವಾದಿಯು ಹೀಗೆ ವರ್ಣಿಸಿದ್ದಾನೆ – "ಇಗೋ, ಮನುಷ್ಯಕುಮಾರನಂತಿರುವವನು ಆಕಾಶದ ಮೇಘಗಳೊಂದಿಗೆ ಬಂದು ಆ ಮಹಾ ವೃದ್ಧನನ್ನು ಸಮೀಪಿಸಿದನು. ಅವನನ್ನು ಆತನ ಸನ್ನಿಧಿಗೆ ತಂದರು. ಸಕಲ ಜನಾಂಗ ಕುಲಭಾಷೆಗಳವರು ಅವನನ್ನು ಸೇವಿಸಲೆಂದು ಅವನಿಗೆ ದೊರೆತನವೂ, ಘನತೆಯೂ ರಾಜ್ಯವೂ ಕೊಡೋಣವಾದವು. (ಕ್ರಿಸ್ತನು – ತಲೆ ಮತ್ತು ದೇಹ ಪೂರ್ತಿಯಾಗಿ) ಅವನ ಆಳ್ವಿಕೆಯು ಅಂತ್ಯವಿಲ್ಲದ್ದು, ಶಾಶ್ವತವಾದದ್ದು; ಅವನ ರಾಜ್ಯವು ಎಂದಿಗೂ ಅಳಿಯದು" (ದಾನಿ. 7 :13,14). "ಆಗ ಅವನ ರಾಜ್ಯ ಪ್ರಭುತ್ವಗಳೂ ಸಮಸ್ತ ಭೂಮಂಡಲದಲ್ಲಿನ ರಾಜ್ಯಗಳ ಮಹಿಮೆಯೂ ಪರಾತ್ಪರನ ಭಕ್ತಜನರಿಗೆ ಕೊಡೋಣವಾಗುವುವು; ಆತನ ರಾಜ್ಯವು ಶಾಶ್ವತ ರಾಜ್ಯ" (ವಚನ 27).

ಈ ರೀತಿಯಾಗಿ ನಾವು ಈ ಲೋಕದ ಪ್ರಭುತ್ವವನ್ನು ಮಹಾವೃದ್ಧನು (ಯೆಹೋವನು) ಕ್ರಿಸ್ತನ ಕೈಯಲ್ಲಿಡ ಬೇಕೆಂಬುದು ಕಂಡುಬರುತ್ತದೆ. "ಆತನು ಸಮಸ್ತವನ್ನು ಆತನ ಪಾದಗಳ ಕೆಳಗೆ ಹಾಕಿ ಆತನಿಗೆ ಅಧೀನಮಾಡಿದ್ದಾನೆ" (1 ಕೊರಿಂಥ 15:27). ಈ ರೀತಿಯಾಗಿ ಆತನನ್ನು ದೇವರ ರಾಜ್ಯದ ಸಿಂಹಾಸನದಲ್ಲಿ ಕುಳ್ಳಿರಿಸಿದ್ದಾನೆ. ಅವನು ಯೆಹೋವನ ಚಿತ್ತ ಮತ್ತು ಕಾನೂನಿಗೆ ವಿರುದ್ಧವಾಗಿರುವ ಎಲ್ಲಾ ಅಧಿಕಾರ ಮತ್ತು ಶಕ್ತಿಯನ್ನು ಕೆಳಗಿಳಿಸುವತನಕ ಆತನೇ ಆಳಬೇಕು. ಈ ಮಹಾ ನಿಯೋಗವನ್ನು ಪೂರೈಸುವಂತೆ ಈ ಅನ್ಯಜನಗಳ ರಾಜ್ಯವನ್ನು ತೆಗೆದು ಹಾಕುವುದು ಮೊದಲು ಅವಶ್ಯಕ; ಯಾಕೆಂದರೆ "ಈ ಲೋಕದ ರಾಜ್ಯಗಳು" "ಇಹಲೋಕಾಧಿಪತಿ"ಯಂತೆ ಶಾಂತಿಯುತವಾಗಿ ಶರಣಾಗುವುದಿಲ್ಲ, ಆದರೆ ಅವರನ್ನು ಬಲಾತ್ಕಾರದಿಂದ ಕಟ್ಟಿಹಾಕಿ ಹತೋಟಿಯಲ್ಲಿಡಬೇಕಾಗುತ್ತದೆ. ಹೀಗಾಗಿ, – "ಅವರ ರಾಜರನ್ನು ಸಂಕೋಲೆಯಿಂದ ಬಂಧಿಸುವರು; ಪ್ರಭುಗಳಿಗೆ ಕಬ್ಬಿಣದ ಬೇಡಿಗಳನ್ನು ಹಾಕುವರು. ಲಿಖಿತದಂತೆ ಅವರಿಗೆ ಶಿಕ್ಷೆಯನ್ನು ವಿಧಿಸುವರು; ಇದು ಅವನ ಭಕ್ತರೆಲ್ಲರಿಗೆ ಗೌರವವಾಗಿರುವುದು" (ಕೀರ್ತನೆ 149:8–9). ಎಂದು ಬರೆದದೆ.

ಈ ರೀತಿಯಾಗಿ ನಾವು ಪ್ರಸ್ತುತ ಸರ್ಕಾರಗಳನ್ನು ನಮ್ಮ ಕರ್ತನ ಮತ್ತು ದಾನಿಯೇಲನ ದೃಷ್ಟಿಕೋನದಲ್ಲಿ ನೋಡುತ್ತೇವೆ. ಮತ್ತು ಅವರ ಕ್ರೂರವಾದ, ನಾಶನಕರವಾದ, ಮೃಗೀಯ ಮತ್ತು ಸ್ವಾರ್ಥ ಗುಣಗಳನ್ನು ಅರಿತುಕೊಂಡಾಗ, ನಮ್ಮ ಹೃದಯಗಳು ಅನ್ಯಜನರ ಸರ್ಕಾರಗಳ ಅಂತ್ಯಕ್ಕಾಗಿ ಹಂಬಲಿಸುತ್ತವೆ ಮತ್ತು ಪ್ರಸ್ತುತ ಯುಗದ ಜಯಶಾಲಿಗಳು ಅವರ ಶಿರಸ್ಸಿನೊಡನೆ ಸಿಂಹಾಸನಾರೂಢರಾಗುವುದನ್ನು ಎದುರು ನೋಡುವ ಮತ್ತು ಗೋಳಾಡುವ ಸೃಷ್ಟಿಗಳನ್ನು ಆಳುವ, ಆಶೀರ್ವದಿಸುವ ಮತ್ತು ಪುನಃವಶಪಡಿಸುವ ಆಶೀರ್ವಾದಕರ ಸುಸಮಯಕ್ಕಾಗಿ ಸಂತೋಷಕರವಾಗಿ ಎದುರು ನೋಡುತ್ತವೆ. ದೇವರ ಮಕ್ಕಳೆಲ್ಲರೂ ತಮ್ಮ ಕರ್ತನೊಡನೆ "ನಿನ್ನ ಚಿತ್ತವು ಪರಲೋಕದಲ್ಲಿ

ನೆರವೇರುವಂತೆ ಭೂಲೋಕದಲ್ಲಿಯೂ ನೆರವೇರಲಿ" ಎಂದು ಹೃತ್ಪೂರ್ವಕವಾಗಿ ಪ್ರಾರ್ಥಿಸಬಹುದು.

ಪ್ರತಿಮೆಯಲ್ಲಿ ಮೃಗಗಳಿಂದ ಪ್ರತಿನಿಧಿಸಲ್ಪಟ್ಟ ಈ ಪ್ರತಿಯೊಂದೂ ಸರ್ಕಾರಗಳು ವಿಶ್ವ ಸರ್ಕಾರಗಳಾಗಿ ಅಧಿಕಾರಕ್ಕೆ ಬರುವ ಮೊದಲು ಅವು ಅಸ್ತಿತ್ವದಲ್ಲಿದ್ದವು. ಹಾಗೆಯೇ ದೇವರ ನಿಜವಾದ ರಾಜ್ಯಗಳ ಬಗ್ಗೆ ಅದು ಈ ಲೋಕದಿಂದ ಪ್ರತ್ಯೇಕವಾಗಿ ಬಹಳ ಕಾಲದಿಂದಲೂ ಅಸ್ಥಿತ್ವದಲ್ಲಿತ್ತು. ಆಡಳಿತಕ್ಕಾಗಿ ಪ್ರಯತ್ನಿಸುತ್ತಿರಲಿಲ್ಲ, ಆದರೆ ಅದು ತನ್ನ ಸಮಯಕ್ಕಾಗಿ ಪುರಾತನ ಕಾಲದಲ್ಲಿ ನೇಮಿತವಾದ ಸಮಯಕ್ಕಾಗಿ ಕಾಯುತ್ತಿತ್ತು. ಅದು ಮೃಗವನ್ನು ಅಥವಾ ತನ್ನ ಹಿಂದಿನ ಸರ್ಕಾರವನ್ನು ಬಡಿದುಹಾಕಿ ಹತ್ಯೆಗೈಯುವ ಮುನ್ನ ತನ್ನ ಅಧಿಕಾರವನ್ನು ಚಲಾಯಿಸುವ ಮೊದಲು ಇತರರಂತೆ ಅದು ತನ್ನ ನೇಮಕಾತಿಯನ್ನು ಪಡಕೊಳ್ಳಬೇಕು ಮತ್ತು ಅಧಿಕಾರದೊಳಗೆ ಬರಬೇಕು ಅಥವಾ ಸ್ಥಾಪನೆ ಯಾಗಬೇಕು. ಹೀಗಾಗಿ ಈ ಹೇಳಿಕೆಯ ಸೂಕ್ತತೆಯು "ಆ ರಾಜರ ಕಾಲದಲ್ಲಿ ಪರಲೋಕದ ದೇವರು ಒಂದು ರಾಜ್ಯವನ್ನು ಸ್ಥಾಪಿಸುವನು; ಅದು ಎಂದಿಗೂ ಅಳಿಯದು. ಅದರ ಪ್ರಾಬಲ್ಯವು ಬೇರೆ ಜನಾಂಗಕ್ಕೆ ಕದಲಿಹೋಗದು. ಆ ರಾಜ್ಯಗಳನ್ನೆಲ್ಲಾ ನಿರ್ನಾಮಮಾಡಿ ಶಾಶ್ವತವಾಗಿ ನಿಲ್ಲುವುದು" (ದಾನಿ. 2:44) ಎಂಬುದು. ಆದುದರಿಂದ ನಾವು ಹೇಗೆ ನೋಡಿದರೂ, ಭೂಲೋಕದ ರಾಜ್ಯಗಳು ಪತನಗೊಳ್ಳುವ ಮೊದಲೇ ದೇವರ ರಾಜ್ಯವು ಉದ್ಘಾಟನೆಗೊಳ್ಳುವುದನ್ನು ನಾವು ನಿರೀಕ್ಷಿಸಬಹುದು. ಅದರ ಶಕ್ತಿ ಮತ್ತು ಹೊಡೆಯುವಿಕೆಯು ಅವುಗಳಿಗೆ ಪರಾಭವವನ್ನುಂಟು ಮಾಡುವುದು.

## ಮತ್ತೊಂದು ದೃಷ್ಟಿಕೋನದಿಂದ ಪ್ರಸ್ತುತ ಸರ್ಕಾರಗಳು

## Present Governments from Another Stand Point

ಜಗತ್ತನ್ನು ಆಳುವ ಸರ್ವೋಚ್ಚ ಹಕ್ಕು ಮತ್ತು ಅಧಿಕಾರವು ಎಂದೆಂದಿಗೂ ಸೃಷ್ಠಿಕರ್ತನಾದ ಯೆಹೋವನಿಗೆ ಇರುತ್ತದೆ. ಅಧೀನ ನಿಯಂತ್ರಣವನ್ನು ಹೊಂದಲು ಯಾರಿಗಾದರೂ ಅನುಮತಿ ಅಥವಾ ಅಧಿಕಾರ ನೀಡಬಹುದು ಅಥವಾ ನೀಡದಿರಬಹುದು. ಅಪರಿಪೂರ್ಣತೆ ಮತ್ತು ಬಲಹೀನತೆಯ ಕಾರಣ ರಾಜಾಧಿರಾಜನಿಗೆ ನಿಷ್ಠೆ ತೋರದ ಪರಿಣಾಮವಾಗಿ ಆದಾಮನು ಬಲುಬೇಗನೇ ಬಲಹೀನನೂ ಮತ್ತು ನಿಸ್ಸಹಾಯಕನೂ ಆದನು. ಒಬ್ಬ ರಾಜನಾಗಿ ಅವನು ಮೊದಲಿಗೆ ಆತನಿಗಿದ್ದ ಇಚ್ಛೆಯ ಬಲದಿಂದ, ಕೆಳ ಪ್ರಾಣಿಗಳ ವಿಧೇಯತೆಯನ್ನು ಅದರ ಮೇಲೆ ಹೊಂದಿದ್ದ ಹಿಡಿತವನ್ನೂ, ತನ್ನ ಅಧಿಕಾರವನ್ನೂ ಕಳೆದುಕೊಳ್ಳಲು ಪ್ರಾರಂಭಿಸಿದನು. ಆತನು ತನ್ನ ಮೇಲಿನ ನಿಯಂತ್ರಣವನ್ನು ಸಹಾ ಕಳಕೊಂಡನು. ಹೀಗಾಗಿ ಆತನು ಒಳ್ಳೇದನ್ನು ಮಾಡುವಾಗ ಆತನ ಬಲಹೀನತೆಗಳು ಮಧ್ಯೆ ಪ್ರವೇಶಿಸುತ್ತಿತ್ತು ಮತ್ತು ಕೇಡು ಆತನೊಂದಿಗೇ ಇರುತ್ತಿತ್ತು. ಆತನು ಒಳ್ಳೇದನ್ನು ಮಾಡಬಯಸಿದರೂ ಅದನ್ನು ಮಾಡಲಾಗುತ್ತಿರಲಿಲ್ಲ, ಆತನು ಕೇಡನ್ನು ಮಾಡಬಾರದೆಂದರೂ ಅದನ್ನೇ ಮಾಡುತ್ತಿದ್ದನು.

ಆದುದರಿಂದ, ಬಂಡಾಯವೆದ್ದ ನಮ್ಮ ಸಂತತಿಯವರನ್ನು ಕ್ಷಮಿಸುವ ಯಾವ ಪ್ರಯತ್ನವನ್ನೂ ನಾವು ಮಾಡದೇ, ಸ್ವತಃ ಆಡಳಿತ ನಡೆಸಲು ಮತ್ತು ಅವರ ಸ್ವಯಂ ಯೋಗಕ್ಷೇಮಕ್ಕೆ ವ್ಯವಸ್ಥೆ ಮಾಡುವ ಅವರ ವ್ಯರ್ಥ ಪ್ರಯತ್ನಗಳಿಗೆ ನಾವು ಸಹಾನುಭೂತಿ ತೋರಬಹುದು. ಈ ದೆಸೆಯಲ್ಲಿ ಈ ಲೋಕದ ಜಯದ ಬಗ್ಗೆ ಸ್ವಲ್ಪವಾಗಿ ಹೇಳಬಹುದು; ಈ ಮೃಗೀಯ ಸರ್ಕಾರಗಳ ನಿಜವಾದ ಗುಣಲಕ್ಷಣಗಳನ್ನು ಗ್ರಹಿಸುವಾಗ, ಅವರು ಭ್ರಷ್ಟಾಚಾರಿಗಳಾಗಿದ್ದಾಗ್ಯೂ, ಅವರು ಅಪಾರವಾಗಿ ಯಾವುದೇ ರೀತಿಯಲ್ಲಿ ಉತ್ತಮರಲ್ಲದಿದ್ದರೂ–ಕಾನೂನುಬಾಹಿರತೆ/ಸ್ವೇಚ್ಛಾಚಾರ, ಅರಾಜಕತೆ ಇವುಗಳಿಗಿಂತ ಬಹಳ ಉತ್ತಮರಾಗಿದ್ದಾರೆ. 'ಇಹಲೋಕಾಧಿಪತಿ'ಗೆ ಅರಾಜಕತೆಯು ಬಹಳವಾಗಿ ಅಂಗೀಕಾರವಾದಾಗ್ಯೂ, ಆತನ ಪ್ರಜೆಗಳಿಗೆ ಹಾಗಲ್ಲ, ಆತನ ಅಧಿಕಾರವು ಸಂಪೂರ್ಣವಾದುದಲ್ಲ; ಅದು ಮಾನವ ಕುಲದ ಮೂಲಕ ಕಾರ್ಯನಿರ್ವಹಿಸುವ ಆತನ ಸಾಮರ್ಥ್ಯದ ಮಟ್ಟಿಗೆ ಸೀಮಿತವಾಗಿದೆ. ಮತ್ತು ಆತನ ಕಾರ್ಯ ನೀತಿಯು ಜನರ ಯೋಜನೆಗಳು, ಭಾವೋದ್ರೇಕಗಳು ಮತ್ತು ಪೂರ್ವಕಲ್ಪಿತ ಅಭಿಪ್ರಾಯಗಳಿಗೆ ಹೆಚ್ಚಿನಮಟ್ಟಿಗೆ ಹೊಂದಾಣಿಕೆಯಾಗಿದೆ.

ಮಾನವನ ಆಲೋಚನೆಯೆಂದರೆ ದೇವರ ಅವಲಂಬನವಿಲ್ಲದ ಸ್ವಯಂ ಆಡಳಿತ; ದೇವರು ಈ ಬಗ್ಗೆ ಪ್ರಯೋಗ ನಡೆಸಲು ಅತನಿಗೆ ಅನುಮತಿಸಿದಾಗ, ಸೈತಾನನು ತನ್ನ ಪ್ರಭಾವವನ್ನೂ, ಪ್ರಭುತ್ವವನ್ನು ವಿಸ್ತರಿಸಿಕೊಳ್ಳುವಂತೆ ಅದನ್ನು ಆಲಂಗಿಸಿದನು. ಈ ರೀತಿಯಾಗಿ ದೇವರು ಅವರನ್ನು ಅನಿಷ್ಟಭಾವಕ್ಕೆ ಒಪ್ಪಿಸಿದನು (ರೋಮಾ. 1:28), ಅಂದರೆ ಮಾನವನು ತನ್ನನ್ನು ಈ ಕುಯುಕ್ತಿಯುಳ್ಳ ಮತ್ತು ಶಕ್ತಿಯುಳ್ಳ ಆದರೆ ಕಾಣದ ವೈರಿಯ ಪ್ರಭಾವಕ್ಕೆ ತನ್ನನ್ನು ಒಡ್ಡಿಕೊಂಡನು. ಆದ್ದರಿಂದ ಸೈತಾನನ ಕುತಂತ್ರಗಳಿಗೆ ಮತ್ತು ಅವನ ಸ್ವಂತ

ದೌರ್ಬಲ್ಯಗಳಿಗೆ ವಿರುದ್ಧವಾಗಿ ಕೆಲಸ ಮಾಡಲು ಅವನು ಎಂದೆಂದಿಗೂ ನಿರ್ಬಂಧಿತನಾಗಿರುತ್ತಾನೆ.

ಪ್ರಕರಣವು ಹೀಗಿರುವಾಗ, ನಾವು ಪುನಃ ಈ ಲೋಕದ ರಾಜ್ಯಗಳನ್ನು, ಅವುಗಳು ದೇವರ ಅವಲಂಬನವಿಲ್ಲದ ಪತನಗೊಂಡ ಮಾನವ ಜಾತಿಯ ಆಳುವ ಪ್ರಯತ್ನವಾಗಿದೆ ಎಂಬ ದೃಷ್ಟಿಕೋನದಲ್ಲಿ ಕ್ಷಣಿಕ ದೃಷ್ಟಿ ಹಾಯಿಸೋಣ. ವ್ಯಕ್ತಿಗತ ಭ್ರಷ್ಟತೆ ಮತ್ತು ಸ್ವಾರ್ಥಗಳು ನ್ಯಾಯದ ಕ್ರಮವನ್ನು ಪಕ್ಕಕ್ಕಿಟ್ಟಿರುವುದಾಗ್ಯೂ ಪೂರ್ಣವಾದ ನ್ಯಾಯವು ಈ ಲೋಕದ ರಾಜ್ಯದಲ್ಲಿರುವ ಯಾರಿಗೂ ಕ್ವಚಿತ್ತಾಗಿಯೂ ಸಿಕ್ಕದಂತೆ ಆಗಿದ್ದರೂ, ಎಲ್ಲಾ ಸರ್ಕಾರಗಳು ಇದುವರೆಗೆ ಯಾವಾಗಲೂ ಮಾನವರಲ್ಲಿ ಸಂಘಟಿಸಿರುವ ತೋರಿಕೆಯ ಉದ್ದೇಶವು ಜನರ ನ್ಯಾಯಕ್ಕೂ ಹಿತರಕ್ಷಣೆಗೂ ಒತ್ತುಕೊಡುವುವುದಾಗಿದೆ.

ಆ ಉದ್ದೇಶವು ಎಷ್ಟರವರೆಗೆ ಸಾಧಿಸಲಾಗಿದೆ ಎಂಬುದು ಮತ್ತೊಂದು ಪ್ರಶ್ನೆಯಾಗಿದೆ. ಆದರೆ ಎಲ್ಲಾ ಸರ್ಕಾರಗಳ ಹಕ್ಕೊಳಿಕೆಯು ಇದೇ ಆಗಿದೆ. ಮತ್ತು ಜನರ ಅಧೀನತೆಯು ಅವರಿಗೆ ಸಲ್ಲಿಸುವ ಮತ್ತು ಬೆಂಬಲಿಸುವ ಆಡಳಿತವನ್ನು ಅವುಗಳು ನಡೆಸುತ್ತವೆ. ನ್ಯಾಯದ ಉದ್ದೇಶವು ಎಲ್ಲಿ ಅಲಕ್ಷಿಸಲ್ಪಡುತ್ತದೆಯೋ ಅಲ್ಲಿ ಸಮೂಹಗಳು ಕುರುಡಾಗಿರುತ್ತವೆ ಮತ್ತು ಅವರಿಗೆ ಅನ್ವಯಿಸುವಂತೆ ಮೋಸಹೊಂದಿರುತ್ತದೆ ಅಥವಾ ಯುದ್ಧಗಳು, ಗಲಭೆಗಳು ಮತ್ತು ದಂಗೆಗಳು ಅದರ ಫಲಿತಾಂಶವಾಗುತ್ತವೆ.

ಈ ಲೋಕದ ಸರ್ಕಾರಗಳಲ್ಲಿ ಅಧಿಕಾರವನ್ನು ಹೊಂದಿರುವ ಕೀಳುಮಟ್ಟದ ಪ್ರಜಾಪೀಡಕರ (ನಿರಂಕುಶಾಧಿಕಾರಿಗಳು) ಕಾರ್ಯಗಳು ಆ ಸರ್ಕಾರದ ನಿಯಮಗಳನ್ನು ಮತ್ತು ಸಂಸ್ಥೆಗಳನ್ನು ಪ್ರತಿನಿಧಿಸುವುದಿಲ್ಲ. ಆದರೆ ಅಧಿಕಾರವನ್ನು ಕಿತ್ತುಕೊಳ್ಳುವ ಮತ್ತು ಅದನ್ನು ಮೂಲ ಉದ್ದೇಶವನ್ನಾಗಿ ತಿರುಗಿಸಿಕೊಳ್ಳುವಲ್ಲಿ ಅವು ಆ ಸರ್ಕಾರಗಳಿಗೆ ಮೃಗೀಯ ಗುಣಲಕ್ಷಣಗಳನ್ನು ನೀಡುತ್ತವೆ. ಪ್ರತಿಯೊಂದು ಸರ್ಕಾರದಲ್ಲಿಯೂ ಬಹಳಷ್ಟು ವಿವೇಕಯುತವಾದ, ನ್ಯಾಯಯುತವಾದ ಉತ್ತಮ ನಿಯಮಗಳು – ಜೀವ ಮತ್ತು ಆಸ್ತಿಪಾಸ್ತಿಗಳನ್ನು ಸಂರಕ್ಷಿಸುವ, ಗೃಹಕೃತ್ಯದ ಮತ್ತು ವಾಣಿಜ್ಯ ಹಿತರಕ್ಷಣೆಗಳನ್ನು ಕಾಪಾಡುವ ಕಾನೂನುಗಳು, ಅಪರಾಧ ಮುಂತಾದವುಗಳಿಗೆ ಶಿಕ್ಷೆ ವಿಧಿಸುವ ಕಾನೂನುಗಳು ಇದ್ದೇ ಇರುತ್ತವೆ. ವ್ಯಾಜ್ಯಗಳು ಉಂಟಾಗುವಾಗ ಅವುಗಳನ್ನು ಪರಿಹರಿಸುವಂತೆ, ನ್ಯಾಯವನ್ನು ಸ್ವಲ್ಪಮಟ್ಟಿಗಾದರೂ ಒದಗಿಸುವಂತೆ ನ್ಯಾಯಾಲಯಗಳು ಇರುತ್ತವೆ. ಸರ್ಕಾರದ ಕಾರ್ಯಾಚರಣೆ ಎಷ್ಟೇ ಅಪರಿಪೂರ್ಣ ವಾಗಿದ್ದರೂ, ಯಾವುದೇ ರೀತಿಯ ಸರ್ಕಾರವಿರುವುದು ಅವಶ್ಯವಾಗಿದೆ. ಅವುಗಳಿಲ್ಲದಿದ್ದರೆ, ಸಮಾಜದ ಕೆಳವರ್ಗದ ಜನರು, ನ್ಯಾಯವಂತರನ್ನು, ನೀತಿವಂತರನ್ನು, ತಮ್ಮ ಸಂಖ್ಯಾಬಲ ಮತ್ತು ಅರಾಜಕತೆಯಿಂದ ಸೋಲಿಸಿಬಿಡುತ್ತಿದ್ದರು.

ಆದುದರಿಂದ, ನಾವು ಈ ಸರ್ಕಾರಗಳ ಮೃಗೀಯ ಸ್ವಭಾವವನ್ನು ಗುರುತಿಸುತ್ತೇವೆ. ಸೈತಾನನ ಒಳಸಂಚುಗಳು ಮತ್ತು ವಂಚನೆಯ ಮೂಲಕ ಹಾಗೂ ಮಾನವರ ಬಲಹೀನತೆಯ ಮೂಲಕ ಮತ್ತು ಕೆಟ್ಟ ಅಭಿರುಚಿಯೊಡನೆ, ಮನೋಭಾವನೆಗಳೊಂದಿಗೆ ಕಾರ್ಯವೆಸಗುವ ಬಹುಪಾಲು ಅನ್ಯಾಯದ ಆಡಳಿತಗಾರರು ಉನ್ನತ ಅಧಿಕಾರಕ್ಕೆ ಏರಿರುವದನ್ನು ನಿರೂಪಿಸಲಾಗಿದೆ. ಆದಾಗ್ಯೂ ನಾವು ಇದನ್ನು ತಮ್ಮನ್ನು ತಾವು ಆಳುವಲ್ಲಿ ಬಡ, ಪತನಗೊಂಡ ಮಾನವಕುಲದ ಉತ್ತಮ ಪ್ರಯತ್ನವೆಂದು ಮಾನ್ಯಮಾಡುತ್ತೇವೆ. ಶತಮಾನಗಳ ನಂತರ ಶತಮಾನಗಳಲ್ಲಿ ದೇವರು ಅವರಿಗೆ ಪ್ರಯತ್ನ ಮಾಡಲು ಮತ್ತು ಅದರ ಫಲಿತಾಂಶಗಳನ್ನು ನೋಡಲು ಬಿಟ್ಟಿದ್ದಾನೆ. ಆದರೆ ಶತಮಾನಗಳ ಪ್ರಯೋಗದ ನಂತರ, ಫಲಿತಾಂಶಗಳು ಇಂದು ಪ್ರಪಂಚದ ಇತಿಹಾಸದ ಯಾವುದೇ ಅವಧಿಯಲ್ಲೂ ಅದು ತೃಪ್ತಿಕರವಾಗಿಲ್ಲ. ವಾಸ್ತವವಾಗಿ ಹಿಂದಿಗಿಂತ ಹೆಚ್ಚಾಗಿ ಇಂದು ಅತೃಪ್ತಿಯು ಹೆಚ್ಚು ಸಾಮಾನ್ಯವಾಗಿದ್ದು, ವಿಶಾಲವಾಗಿ ವ್ಯಾಪಿಸಿದೆ. ಅಂದರೆ ಎಂದಿಗಿಂತ ಹೆಚ್ಚು ದಬ್ಬಾಳಿಕೆ ಮತ್ತು ಅನ್ಯಾಯಗಳು ಇವೆ ಎಂಬ ಕಾರಣದಿಂದಲ್ಲ, ಬದಲಾಗಿ ದೇವರ ವ್ಯವಸ್ಥೆಯಲ್ಲಿ ಜ್ಞಾನದ ಹೆಚ್ಚಳ ಕಾರಣ ಮಾನವರ ಕಣ್ಣುಗಳು ತೆರೆಯಲ್ಪಡುತ್ತಿವೆ.

ಕಾಲದಿಂದ ಕಾಲಕ್ಕೆ ಸ್ಥಾಪನೆಗೊಂಡ ವಿವಿಧ ಸರ್ಕಾರಗಳು ತಮ್ಮನ್ನು ತಾವು ಆಳಿಕೊಳ್ಳುವಂತೆ ಪ್ರತಿನಿಧಿಸಿದವರಿಂದ ಸರಾಸರಿ ಸಾಮರ್ಥ್ಯವನ್ನು ಪ್ರದರ್ಶಿಸಿವೆ. ನಿರಂಕುಶ ಸರ್ಕಾರದಲ್ಲಿಯೂ ಅಸ್ತಿತ್ವದಲ್ಲಿರುವಾಗಲೂ ಸಹ, ಅವುಗಳನ್ನು ಜನಸಾಮಾನ್ಯರು ಸಹಿಸಿಕೊಂಡಿದ್ದಾರೆ ಎಂಬ ಸತ್ಯದಿಂದ, ಅವರುಗಳಲ್ಲಿ ಅನೇಕ ವ್ಯಕ್ತಿಗಳು ಯಾವಾಗಲೂ ನಿಸ್ಸಂದೇಹವಾಗಿ, ಸರಾಸರಿ ನಿಲುವು ಸ್ಥಾನಮಾನಕ್ಕಿಂತ ಬಹಳ ಮುಂದೆ ಇದ್ದರೂ, ಒಂದು ಜನಾಂಗವಾಗಿ ಅವರುಗಳುಉತ್ತಮ ಸರ್ಕಾರವನ್ನು ಸ್ಥಾಪಿಸಲು ಮತ್ತು ಬೆಂಬಲಿಸಲು ಅಸಮರ್ಥರಾಗಿದ್ದಾರೆ ಎಂಬುದನ್ನು ಸಾಬೀತುಪಡಿಸುತ್ತದೆ.

ನಾವು ಪ್ರಪಂಚದ ಇಂದಿನ ಸ್ಥಿತಿಗತಿಗಳನ್ನು ಹಿಂದಿನ ಯಾವುದೇ ಅವಧಿಯೊಂದಿಗೆ ಹೋಲಿಸಿದಾಗ, ಜನಸಮೂಹದ ಭಾವನೆಗಳಲ್ಲಿ ಗುರುತರವಾದ

ಬದಲಾವಣೆಯನ್ನು ಕಾಣಬಹುದು. ಸ್ವಾತಂತ್ರ್ಯದ ಮನೋಭಾವವು ಈಗ ಬಲು ವ್ಯಾಪಕವಾಗಿದೆ, ಮಾನವರನ್ನು ಅಷ್ಟು ಸುಲಭವಾಗಿ ಕಣ್ಣುಕಟ್ಟಲಾಗದು, ಮೋಸಗೊಳಿಸಲಾಗದು, ಆಡಳಿತಗಾರರಿಂದ ಮತ್ತು ರಾಜಕೀಯ ನಾಯಕರುಗಳಿಂದ ಮುನ್ನಡೆಸಲಾಗದು. ಹೀಗಾಗಿ ಅವರುಗಳು ಹಿಂದಿನ ದಿನಗಳ ನೊಗಗಳಿಗೆ ಸಿಲುಕುವವರಲ್ಲ. ಸಾರ್ವಜನಿಕ ಭಾವನೆಗಳ ಈ ಬದಲಾವಣೆಯು ಮಾನವನು ತನ್ನನ್ನು ತಾನೇ ಆಳಿಕೊಳ್ಳಲು ಶುರು ಮಾಡಿದ ಆರಂಭದಿಂದಲೂ ಕ್ರಮೇಣವಾಗಿ ಆಗಿರಲಿಲ್ಲ, ಆದರೆ ಅದನ್ನು ಹದಿನಾರನೆಯ ಶತಮಾನದಷ್ಟು ಹಿಂದೆ ಅಷ್ಟೇ ಸ್ಪಷ್ಟವಾಗಿ ಗುರುತಿಸಲ್ಪಟ್ಟಿದೆ ಮತ್ತು ಅದರ ಪ್ರಗತಿಯು ಕಳೆದ ಐವತ್ತು ವರ್ಷಗಳಲ್ಲಿ ಅತ್ಯಂತ ವೇಗವಾಗಿದೆ. ಆದುದರಿಂದ, ಈ ಬದಲಾವಣೆಯು ಕಳೆದ ಯುಗಗಳಲ್ಲಾದ ಅನುಭವಗಳ ಫಲಿತಾಂಶವಲ್ಲ, ಆದರೆ ಜ್ಞಾನದ ಇತ್ತೀಚಿನ ಹೆಚ್ಚಳ ಮತ್ತು ಮಾನವಕುಲದ ಮಧ್ಯೆ ಅದರ ಸ್ವಾಭಾವಿಕ ಹರಡುವಿಕೆಯಿಂದಾಗಿದೆ. ಜ್ಞಾನದ ಈ ಸಾಮಾನ್ಯವಾದ ಹರಡುವಿಕೆಯ ಸಿದ್ಧತೆಯು ಸುಮಾರು ಕ್ರಿ.ಶ. 1440ರಲ್ಲಿ ಮುದ್ರಣವನ್ನು ಕಂಡುಹಿಡಿಯುವುದರೊಂದಿಗೆ ಪ್ರಾರಂಭವಾಯಿತು. ಮತ್ತು ಅದರ ಪರಿಣಾಮವಾಗಿ ಪುಸ್ತಕಗಳ ಮತ್ತು ವೃತ್ತ ಪತ್ರಿಕೆಗಳ ಹೆಚ್ಚಳವು ಉಂಟಾಗಿದೆ. ಸಾಮಾನ್ಯ ಜನರ ಜ್ಞಾನೋದಯದಲ್ಲಿ ಈ ಶೋಧನೆಯ ಪ್ರಭಾವವು ಸುಮಾರು ಹದಿನಾರನೆಯ ಶತಮಾನದಲ್ಲಿ ಪ್ರಾರಂಭಗೊಂಡಿತು. ಆ ಸಮಯದಿಂದ ಪ್ರಗತಿಪರ ಹೆಜ್ಜೆಗಳೆಲ್ಲವೂ ಅದರೊಂದಿಗೆ ಪರಿಚಿತವಾಗಿವೆ. ಜನಸಮೂಹದ ಸಾಮಾನ್ಯ ಶಿಕ್ಷಣವು ಜನಪ್ರಿಯವಾಗಿದೆ, ಶೋಧನೆಗಳು, ಅನ್ವೇಷಣೆಗಳು ಪ್ರತಿನಿತ್ಯವೂ ಸಂಭವಿಸುವಂಥವುಗಳಾಗಿವೆ. ಜನರಲ್ಲಿ ಜ್ಞಾನದ ಹೆಚ್ಚಳವು, ದೇವರಿಂದ ನಿಶ್ಚಯಿಸಲ್ಪಟ್ಟದ್ದಾಗಿದ್ದು, ಆತನ ಸ್ವಂತವಾದ ಉಚಿತ ಸಮಯದಲ್ಲಿಯೇ ಮುಂದೆ ಸಾಗುವುದು ಒಂದು ಪ್ರಬಲವಾದ ಪ್ರಭಾವವಾಗಿದ್ದು ಈಗ ಸೈತಾನನನ್ನು ಬಂಧಿಸುವ ಕಾರ್ಯವಾಗಿದೆ – ಆತನ ಪ್ರಭಾವವನ್ನು ಮೊಟಕುಗೊಳಿಸುತ್ತದೆ ಮತ್ತು ದೇವರ ರಾಜ್ಯವನ್ನು ಭೂಲೋಕದಲ್ಲಿ ಸಿದ್ಧಪಡಿಸುವುದಕ್ಕಾಗಿ "ಈ ಸಿದ್ಧತೆಯ ದಿನ"ದಲ್ಲಿ ಆತನ ಅಧಿಕಾರವನ್ನು ಹತೋಟಿಯಲ್ಲಿಡುತ್ತದೆ.

ಪ್ರತಿಯೊಂದು ದಿಕ್ಕಿನಲ್ಲೂ ಉಂಟಾಗುತ್ತಿರುವ ಜ್ಞಾನದ ಹೆಚ್ಚಳವು ಜನರಲ್ಲಿ ಸ್ವಯಂಗೌರವದ ಭಾವನೆಯನ್ನು ಮತ್ತು ಅವರ ಸ್ವಾಭಾವಿಕವಾದ ಮತ್ತು ಬೇರೊಬ್ಬರಿಗೆ ವರ್ಗಾಯಿಸಲಾಗದ ಹಕ್ಕುಗಳ ಬಗ್ಗೆ ಮನವರಿಕೆ ಮಾಡುತ್ತದೆ. ಅವುಗಳ ಬಗ್ಗೆ ಅವರು ದೀರ್ಘಕಾಲ ನಿರ್ಲಕ್ಷಿಸಲು ಅಥವಾ ಹೀನೈಸಲು ಅನುಮತಿ ಇಲ್ಲ. ಇದಕ್ಕೆ ಬದಲಾಗಿ ಅವರು ವಿರೋಧವಾದ ಅತಿರೇಕಕ್ಕೆ ಹೋಗುತ್ತಾರೆ. ಶತಮಾನಗಳ ಕಡೆಗೆ ದೃಷ್ಟಿ ಹಾಯಿಸಿ ರಾಷ್ಟ್ರಗಳು ಯಾವ ರೀತಿಯಲ್ಲಿ ತಮ್ಮ ಅಸಮಾಧಾನದ ಚರಿತ್ರೆಯನ್ನು ರಕ್ತದಲ್ಲಿ ಹೇಗೆ ಬರೆದಿದ್ದಾರೆ ಎಂದು ನೋಡಿರಿ, ಮತ್ತು ಜ್ಞಾನದ ಹೆಚ್ಚಳದ ಕಾರಣ ಇನ್ನೂ ಹೆಚ್ಚಿನ ಸಾಮಾನ್ಯ ಮತ್ತು ವಿಶಾಲವಾಗಿ ಹರಡಿರುವ ಅತೃಪ್ತಿಯು ಅಂತ್ಯದಲ್ಲಿ ತಾನಾಗಿಯೇ ಎಲ್ಲಾ ನೀತಿ ನಿಯಮವನ್ನು ಎತ್ತೊಗೆಯುವ ಲೋಕವ್ಯಾಪಿ ಕ್ರಾಂತಿಯನ್ನು ವ್ಯಕ್ತಪಡಿಸುತ್ತದೆಂದು ಪ್ರವಾದಿಗಳು ಪ್ರಕಟಿಸಿದ್ದಾರೆ. ಎಲ್ಲಾ ವರ್ಗಗಳ ಮೇಲೆ ಉಂಟಾಗುವ ಅರಾಜಕತೆ ಮತ್ತು ದುರಾವಸ್ಥೆಯು ಅದರ ಫಲಿತಾಂಶವಾಗಿವೆ. ಆದರೆ, ಈ ಗೊಂದಲಗಳ ನಡುವೆ ಪರಲೋಕದ ದೇವರು ತನ್ನ ರಾಜ್ಯವನ್ನು ವ್ಯವಸ್ಥೆಗೊಳಿಸುತ್ತಾನೆ ಮತ್ತು ಅದು ಎಲ್ಲಾ ರಾಷ್ಟ್ರಗಳ ಆಕಾಂಕ್ಷೆಗಳನ್ನು ಪೂರೈಸುತ್ತದೆ. ತಮ್ಮ ಸ್ವಂತ ವಿಫಲತೆಗಳಿಂದ ಮನಗುಂದಿದವರು ಮತ್ತು ಆಯಾಸಪಟ್ಟವರು ಮತ್ತು ತಮ್ಮ ಕಡೆಯ ಮಹಾ ಪ್ರಯತ್ನವು ಅರಾಜಕತೆಗೆ ಕಾರಣವಾಯಿತೆಂದು ಕಂಡು, ಮಾನವರು ಸಂತೋಷವಾಗಿ ದೇವರ ಅಧಿಕಾರವನ್ನು ಸ್ವಾಗತಿಸುತ್ತಾ ಆತನ ಮುಂದೆ ತಲೆಬಾಗುತ್ತಾರೆ ಮತ್ತು ಆತನ ಪ್ರಬಲವಾದ ನ್ಯಾಯಯುತ ಆಡಳಿತವನ್ನು ಗ್ರಹಿಸಿಕೊಳ್ಳುತ್ತಾರೆ. ಈ ರೀತಿಯಲ್ಲಿ ಮಾನವರ ಅತಿರೇಕವು ದೇವರ ಅವಕಾಶವಾಗುತ್ತದೆ ಮತ್ತು "ಸಮಸ್ತ ಜನಾಂಗಗಳ ಇಷ್ಟವಸ್ತುಗಳು ಬಂದು ಒದಗಲು ಆ ಆಲಯವನ್ನು ವೈಭವದಿಂದ ತುಂಬಿಸುವೆನು" (ಹಗ್ಗಾಯ 2:7) ಎಂಬ ಮಾತು ನೆರವೇರುವುದು.

ಇದು ದೇವರ ಉದ್ದೇಶವಾಗಿತ್ತೆಂದು ತಿಳಿದಿದ್ದರೂ, ಯೇಸುವಾಗಲೀ, ಅಪೋಸ್ತಲರುಗಳಾಗಲೀ ಭೂಲೋಕದ ಅರಸರುಗಳ ಮಧ್ಯೆ ಯಾವದೇ ರೀತಿಯಲ್ಲಿ ಹಸ್ತಕ್ಷೇಪ ಮಾಡಲಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ಅವರುಗಳು ಸಭೆಯವರಿಗೆ ನೀವು ಒಂದು ವೇಳೆ ಅವರ ಅಧಿಕಾರದ ದುರುಪಯೋಗದಿಂದ ಕೆಲವೊಮ್ಮೆ ತೊಂದರೆಗೊಳಗಾದರೂ ಅವರಿಗೆ ಅವರ ಅಧಿಕಾರ ಸ್ಥಾನದ ನಿಮಿತ್ತ ಈ ಅಧಿಕಾರಿಗಳಿಗೆ ಅಧೀನರಾಗಿರ್ರಿ ಎಂದು ಕಲಿಸಿಕೊಟ್ಟರು. ಸರ್ಕಾರದ ಕಾನೂನುಗಳಿಗೆ ಅವುಗಳು ದೇವರಾಜ್ಞೆಗಳೊಂದಿಗೆ ಘರ್ಷಣೆಗೊಳ್ಳದೇ ಹೋದಲ್ಲಿ, (ಅ.ಕೃ.4:19, 5:29). ಅವುಗಳಿಗೆ ಯಾವುದೇ ವಿರೋಧವನ್ನು ವ್ಯಕ್ತಪಡಿಸದೆ ವಿಧೇಯರಾಗಿರ ಬೇಕೆಂತಲೂ, ಮತ್ತು ಅಧಿಕಾರಿಗಳು ವೈಯಕ್ತಿಕವಾಗಿ ಸದಭಿಪ್ರಾಯಕ್ಕೆ ಅರ್ಹರಲ್ಲದಿದ್ದರೂ ಅವರನ್ನು

ಗೌರವಿಸಬೇಕೆಂತಲೂ, ಅವರು ನೇಮಿಸಿದ ತೆರಿಗೆಯನ್ನು ನೀಡುವಂತೆಯೂ ಕಲಿಸಿದರು (ರೋಮಾ. 13:1–7; ಮತ್ತಾಯ 22:21). ಕರ್ತನಾದ ಯೇಸು ಮತ್ತು ಅಪೋಸ್ತಲರುಗಳು ಮತ್ತು ಆದಿ ಸಭೆಯವರೆಲ್ಲರೂ ಸರ್ಕಾರಗಳಿಂದ ಪ್ರತ್ಯೇಕವಾಗಿದ್ದು ಅದರಲ್ಲಿ ಪಾಲು ತೆಗೆದುಕೊಳ್ಳದೆ ಇದ್ದರೂ ಅದರ ಕಾನೂನುಗಳಿಗೆ ಬದ್ಧರಾಗಿದ್ದರು.

ಈ ಪ್ರಪಂಚದ ಅಧಿಕಾರಗಳು, ಈ ಲೋಕದ ಸರ್ಕಾರಗಳು ದೇವರಿಂದ ನೇಮಿಸಲ್ಪಟ್ಟಿದ್ದರೂ ಅಥವಾ ವ್ಯವಸ್ಥೆಗೊಳಿಸಲ್ಪಟ್ಟಿದ್ದರೂ ಮಾನವಕುಲವು ಅವುಗಳ ಅಧೀನದಲ್ಲಿ ಅಗತ್ಯವಾದ ಅನುಭವಪಡಕೊಳ್ಳ ಬಹುದಾಗಿದೆ, ಆದಾಗ್ಯೂ, ಸಭೆಯವರು, ದೇವರಿಂದ ಪ್ರತಿಷ್ಠೆ ಹೊಂದಿದವರು, ಬರಲಿರುವ ದೇವರ ರಾಜ್ಯದಲ್ಲಿ ಅಧಿಕಾರಸ್ಥಾನ ಬಯಸುವವರೂ, ಈ ಲೋಕದ ಸರ್ಕಾರಗಳಿಂದ ಯಾವುದೇ ಅಧಿಕಾರಸ್ಥಾನದ ಗೌರವಕ್ಕಾಗಲೀ, ವೇತನಕ್ಕಾಗಲೀ ದುರಾಸೆಪಡಬಾರದು, ಅಥವಾ ಈ ಅಧಿಕಾರವನ್ನು ವಿರೋಧಿಸಲೂ ಬಾರದು. ಅವರುಗಳು "ದೇವಜನರೊಂದಿಗೆ ಒಂದೇ ಸಂಸ್ಥಾನದವರೂ, ದೇವರ ಮನೆಯವರೂ ಆಗಿದ್ದಾರೆ" (ಎಫೆಸ 2:19). ಹೀಗಿರುವುದರಿಂದ ಅವರುಗಳು ಈ ಲೋಕದ ಸರ್ಕಾರಗಳಿಂದ ಅನ್ಯರಿಗೆ, ವಿದೇಶಿಯರಿಗೆ ನೀಡಲಾದ ಅಂಥಾಃ ಹಕ್ಕುಗಳನ್ನೂ, ಸವಲತ್ತುಗಳನ್ನು ಮಾತ್ರವೇ ಪಡಕೊಳ್ಳಬೇಕು. ಅವರ ಗುರಿಯು ಜಗತ್ತನ್ನು, ಅದರ ಪ್ರಸ್ತುತ ಸ್ಥಿತಿಯನ್ನು ಸುಧಾರಿಸಲು ಸಹಾಯ ಮಾಡುವುದು ಅಥವಾ ಪ್ರಸ್ತುತ ಅದರ ವ್ಯವಹಾರ ಗಳೊಂದಿಗೆ ಯಾವುದೇ ಸಂಬಂಧವನ್ನು ಹೊಂದಿರ ಬಾರದು ಎಂಬುದು ಅವರ ಉದ್ದೇಶವಾಗಿದೆ. ಹಾಗೆ ಮಾಡಲು ಪ್ರಯತ್ನಿಸುವುದು ಶ್ರಮ ವ್ಯರ್ಥವಾಗುತ್ತದೆ. ಯಾಕೆಂದರೆ, ಈ ಲೋಕದ ಕ್ರಮ ಮತ್ತು ಮುಕ್ತಾಯ ಎರಡನ್ನೂ ದೇವರವಾಕ್ಯಗಳಲ್ಲಿ ಸ್ಪಷ್ಟವಾಗಿ ನಿರೂಪಿಸಲಾಗಿದೆ ಮತ್ತು ಇವುಗಳು ಸಂಪೂರ್ಣವಾಗಿ ತನ್ನ ಸ್ವಂತ ಸಮಯದಲ್ಲಿ ನಮಗೆ ರಾಜ್ಯವನ್ನು ನೀಡಲಿರುವಾತನ ನಿಯಂತ್ರಣದಲ್ಲಿದೆ. ನಿಜವಾದ ಸಭೆಯ ಪ್ರಭಾವವು ಈಗಲೂ ಮತ್ತು ಯಾವಾಗಲೂ ಚಿಕ್ಕದ್ದಾಗಿದೆ – ರಾಜಕೀಯವಾಗಿ, ಪ್ರಾಯೋಗಿಕವಾಗಿ ಏನನ್ನೂ ಲೆಕ್ಕಿಸದಷ್ಟು ಸಣ್ಣದಾಗಿದೆ. ಆದಾಗ್ಯೂ ಇದು ಎಷ್ಟೇ ದೊಡ್ಡದಾಗಿ ಕಂಡುಬಂದರೂ, ನಾವು ಕ್ರಿಸ್ತನ ಮತ್ತು ಅಪೋಸ್ತಲರುಗಳ ಮಾದರಿ ಮತ್ತು ಭೋಧನೆಗಳನ್ನು ಅನುಸರಿಸುವವರಾಗಬೇಕು. ತನ್ನನ್ನು ತಾನು ಆಳುವ ತನ್ನದೇ ಆದ ಸಾಮರ್ಥ್ಯವನ್ನು ಜಗತ್ತು ಸಂಪೂರ್ಣವಾಗಿ ಪರೀಕ್ಷಿಸಲು ಅವಕಾಶ ನೀಡುವುದು ದೇವರ ಉದ್ದೇಶ ಎಂದು ತಿಳಿದುಕೊಂಡ ನಿಜವಾದ ಸಭೆಯು, ಈ ಲೋಕದಲ್ಲಿದ್ದರೂ, ಈ ಲೋಕದ್ದಾಗಿರ ಬಾರದು. ಸಂತರುಗಳು ತಾವು ಅದರಿಂದ ಪ್ರತ್ಯೇಕವಾಗಿರುವುದರ ಮೂಲಕ ಮಾತ್ರವೇ ಅವರ ಬೆಳಕು ಪ್ರಕಾಶಿಸುವಂತೆ ಮಾಡಿ, ಆ ಮೂಲಕ ಈ ಲೋಕವನ್ನು ಪ್ರಭಾವಗೊಳಿಸಬಹುದು. ಈ ರೀತಿಯಾಗಿ ಅವರ ಜೀವಿತಗಳ ಮೂಲಕ ಸತ್ಯದ ಆತ್ಮವು ಈ ಲೋಕವನ್ನು ಖಂಡಿಸುತ್ತದೆ. ಹೀಗೆ – ಸಮಾಧಾನಕರವಾದ, ಕ್ರಮಬದ್ಧವಾದ ವಿಧೇಯರನ್ನು ಮತ್ತು ಪ್ರತಿಯೊಂದು ನೀತಿಯುತವಾದ ನಿಬಂಧನೆಗಳನ್ನು ಮೆಚ್ಚಿಕೊಂಡು ಪಾಲಿಸುವವರೂ, ಕಾನೂನುಗಳು ಇಲ್ಲದಿರುವುದನ್ನೂ, ಪಾಪಗಳನ್ನೂ ಖಂಡಿಸುವವರೂ, ದೇವರ ವಾಗ್ದತ್ತ ರಾಜ್ಯದ ಕಡೆಗೆ ಮತ್ತು ಅದರಿಂದ ಲಭಿಸುವ ಆಶೀರ್ವಾದಗಳ ಮುಂದಾಗಿ ಸೂಚಿಸುವವರೂ ಆಗಿದ್ದಾರೆ. ಆದರೆ ಸಾಮಾನ್ಯವಾಗಿ ರಾಜಕೀಯದೊಡದೆ ಬೆರತು ಮತ್ತು ಅಧಿಕಾರಕ್ಕಾಗಿ ಒಳಸಂಚು ಮಾಡುವ ಮತ್ತು ಆ ರೀತಿಯಲ್ಲಿ ಯುದ್ಧ ಮತ್ತು ಪಾಪಗಳಿಗೆ ಸಾಮಾನ್ಯ ಅವನತಿಗೆ ಸೆಳೆಯಲ್ಪಡುವ ಹಾಗೂ ಕೀಳುದರ್ಜೆಗೆ ಇಳಿಯುವ ಸಾಮಾನ್ಯ ಪದ್ಧತಿಯಂತೆ ಇರುವವರಲ್ಲ – ಅಂಥವರು ಭವ್ಯವಾದ ಪರಿಶುದ್ಧತೆಯೊಡನೆ ಸಮಾಧಾನದ ಪ್ರಭುವಿನ ನಿರೀಕ್ಷಿತ ಮದಲಗಿತ್ತಿಯು ಒಳ್ಳೆಯವುಗಳ ಶಕ್ತಿಯಾಗಿ ಈ ಲೋಕದಲ್ಲಿ ಕರ್ತನ ಪ್ರತಿನಿಧಿಯಾಗಿರಬೇಕು.

ದೇವರ ಸಭೆಯು ಅದರ ಸಂಪೂರ್ಣ ಗಮನವನ್ನು ದೇವರ ರಾಜ್ಯದ ಬಗ್ಗೆ ಬೋಧಿಸುವ ಪ್ರಯತ್ನವನ್ನು ಹಾಗೂ ರಾಜ್ಯದ ಅಭಿವೃದ್ಧಿಯ ಕಡೆ ತೋರಬೇಕಾದ ಆಸಕ್ತಿಯನ್ನು, ದೇವರ ವಾಕ್ಯದಲ್ಲಿ ಬರೆದಿರುವ ಪ್ರಕಾರ ನೀಡಬೇಕು. ಇದನ್ನು ಪ್ರಾಮಾಣಿಕವಾಗಿ ಮಾಡುವುದಾದರೆ, ಪ್ರಸ್ತುತ ಸರ್ಕಾರಗಳೊಂದಿಗೆ ಕೈ ಹಾಕುವ ಮನೋಭಾವ ಅಥವಾ ಸಮಯವಿರುವುದಿಲ್ಲ. ಕರ್ತನಿಗೆ ಸಮಯವಿರಲಿಲ್ಲ, ಅಪೋಸ್ತಲರಿಗೆ ಸಮಯವಿರಲಿಲ್ಲ ಅಥವಾ ಅವರ ಮಾದರಿಯನ್ನು ಅನುಸರಿಸುವ ಯಾವ ಭಕ್ತರಿಗಾಗಲೀ ಅವುಗಳಿಗೆ ಸಮಯವಿರುವುದಿಲ್ಲ.

ಆದಿ ಸಭೆಯು, ಅಪೋಸ್ತಲರುಗಳ ಮರಣದ ಸ್ವಲ್ಪ ಕಾಲದ ನಂತರ, ಈ ಪ್ರಲೋಭನೆಗೆ ಬಲಿಯಾಯಿತು. ಈ ಲೋಕದ ಎಲ್ಲಾ ರಾಜ್ಯಗಳನ್ನು ಸ್ಥಳಾಂತರಗೊಳಿಸಲು ಹಾಗೂ ಕ್ರಿಸ್ತನನ್ನು ಆ ರಾಜ್ಯದ ಉತ್ತರಾಧಿಕಾರಿಯಾಗಿ ಮಾಡುವ ದೇವರ ಸಾಮ್ರಾಜ್ಯದ ಉಪದೇಶವು ಜನಪ್ರಿಯವಾಗಲಿಲ್ಲ ಮತ್ತು ಅದರೊಂದಿಗೆ

ಹಿಂಸೆಗಳನ್ನೂ, ತಿರಸ್ಕಾರವನ್ನೂ ಮತ್ತು ಅವಿಧೇಯತೆ ಯನ್ನೂ ಉಂಟುಮಾಡಿತು. ಆದರೆ ಹಿಂಸೆಗಳನ್ನನು ಭವಿಸುವದರ ಬದಲಾಗಿ, ಸಭೆಯನ್ನು ಲೋಕದೊಂದಿಗೆ ಒಲವಿನ ಸ್ಥಾನಕ್ಕೆ ತರುವಂತೆ ದೇವರ ಯೋಜನೆಯನ್ನು ಸುಧಾರಿಸುವ ಬಗ್ಗೆ ಕೆಲವರು ಆಲೋಚಿಸಿದರು. ಈ ಲೋಕದ ಅಧಿಕಾರದೊಂದಿಗಿನ ಸಂಯೋಜನೆ ಯೊಂದಿಗೆ ಅವರು ಯಶಸ್ವಿಯಾದರು. ಇದರ ಫಲವಾಗಿ ಪೋಪನ ಅಧಿಕಾರವು ವಿಕಾಸಗೊಂಡಿತು, ಮತ್ತು ಕಾಲಾಂತರದಲ್ಲಿ ಅದು ದೇಶಗಳ ಒಡತಿ ಮತ್ತು ರಾಣಿಯಾಯಿತು (ಪ್ರಕಟನೆ 17:3 –5; 18:7).

ಈ ಕಾರ್ಯನೀತಿಯಿಂದ ಎಲ್ಲವೂ ಬದಲಾಯಿತು: ಕಷ್ಟಪಡುವ ಬದಲು, ಗೌರವವು ಬಂತು; ನಮ್ರತೆಯ ಬದಲು, ಹೆಮ್ಮೆಯುಂಟಾಯಿತು, ಸತ್ಯದ ಬದಲು ದೋಷಗಳುಂಟಾದವು. ಹಿಂಸೆ ಹೊಂದುವ ಬದಲಾಗಿ ಆಕೆಯ ನೂತನ ಮತ್ತು ಅಕ್ರಮದ ಗೌರವಗಳನ್ನು ಖಂಡಿಸಿದವರನ್ನೆಲ್ಲಾ ಆಕೆಯು ಹಿಂಸಿಸುವವಳಾದಳು. ಕೂಡಲೇ ಆಕೆಯು ತನ್ನ ಕ್ರಮಗಳನ್ನು ಸಮರ್ಥಿಸಿಕೊಳ್ಳುವಂತೆ ನೂತನ ವಿಚಾರಸರಣಿಗಳನ್ನು ಮತ್ತು ಕುತರ್ಕವಾಗ್ವಾದಗಳನ್ನು ಕಂಡುಕೊಳ್ಳಲು ಪ್ರಾರಂಭಿಸಿದಳು. ಮೊದಲಿಗೆ ತನ್ನನ್ನೇ ಮೋಸ ಪಡಿಸಿಕೊಂಡಳು, ನಂತರದಲ್ಲಿ ರಾಷ್ಟ್ರಗಳನ್ನು, ವಾಗ್ದಾನಪಡಿಸಿರುವ ಕರ್ತನ ಆಳ್ವಿಕೆಯು ಬಂದಿದೆ ಎಂಬ ನಂಬಿಕೆಗೆ ಮೋಸಗೊಳಿಸಿಕೊಂಡಳು. ಅರಸನಾದ ಕ್ರಿಸ್ತನು ಅವರ ಪೋಪರುಗಳಲ್ಲಿ ಪ್ರತಿನಿಧಿತನಾಗಿ ಈ ಲೋಕದ ಅರಸರುಗಳ ಮೇಲೆ ಆತನ ಪ್ರತಿಹಸ್ತಕನಾಗಿ ಆಳ್ವಿಕೆಮಾಡತೊಡಗಿದನು ಎಂದು ನಂಬಿಸಿದಳು. ಸಮಗ್ರ ಲೋಕವನ್ನು ಮೋಸಗೊಳಿಸುವ ಆಕೆಯ ಹಕ್ಕೇಳಿಕೆಗಳಿಗೆ ಜಯ ದೊರಕಿತು. ಆಕೆಯು ಎಲ್ಲಾ ದೇಶಗಳವರನ್ನು ಆಕೆಯ ದೋಷಪೂರಿತ ಸಿದ್ಧಾಂತಗಳನ್ನು ಕುಡಿದು ಮತ್ತರಾಗುವಂತೆ ಮಾಡಿದಳು (ಪ್ರಕಟನೆ 17:2). ಆಕೆಯ ಹಕ್ಕೇಳಿಕೆಗಳನ್ನು ಪ್ರತಿಭಟಿಸುವವರಿಗೆ ಕಾದಿರುವ ನಿತ್ಯ ಹಿಂಸೆಯ ಬಗ್ಗೆ ಬೋಧಿಸಿ ಅವರಿಗೆ ಬೆದರಿಕೆಯನ್ನುಂಟು ಮಾಡಿದಳು. ಕೂಡಲೇ ಯೂರೋಪಿನ ಅರಸರುಗಳಿಗೆ ಕಿರೀಟಧಾರಣೆ ಮಾಡಿದಳು ಅಥವಾ ಅವರನ್ನು ಆಕೆಯ ರಾಜಾಜ್ಞೆಯಿಂದ ಅಥವಾ ಆಕೆಯ ಊಹಿಸಿಕೊಂಡ ಅಧಿಕಾರದ ಬಲದಿಂದ ತೆಗೆದುಹಾಕಿದಳು.

ಈ ರೀತಿಯಲ್ಲಿ ಯೂರೋಪಿನ ರಾಜ್ಯಗಳು ಮತ್ತು ಅವರ ಸಾರ್ವಭೌಮ ಆಳ್ವಿಕೆಯು 'ದೇವರ ಕೃಪೆಯಿಂದ' ಅಂದರೆ ಪೋಪನ ಮೂಲಕ ಅಥವಾ ಯಾವುದಾದರೂ ಪ್ರೊತಸ್ತಾಂತ ಪಂಗಡದ ಮೂಲಕ ನೇಮಕ ಗೊಂಡಿರುವುದರಿಂದ ಈ ದಿನಗಳಲ್ಲಿ ತಾವುಗಳು ಕ್ರೈಸ್ತ ರಾಜ್ಯಗಳೆಂದು ಹೇಳಿಕೊಳ್ಳುತ್ತವೆ. ಸಾಲದೆಂಬಂತೆ, ಸುಧಾರಕರುಗಳು ಕ್ರೈಸ್ತಧರ್ಮದ ಅಧಿಕಾರವ್ಯಾಪ್ತಿ ಮುಂತಾದ ಪೋಪರ ಅನೇಕ ಹಕ್ಕೇಳಿಕೆಗಳನ್ನು ತೊಡೆದುಹಾಕಿದರೂ ಸಹ, ಅವರು ಈ ಲೋಕದ ಅರಸರುಗಳು ಕ್ರೈಸ್ತ ಧರ್ಮಕ್ಕೆ ಅಂಟಿಸಿದ್ದ ಈ ಗೌರವವನ್ನು ಹಿಡಿದಿಟ್ಟುಕೊಂಡಿದ್ದರು. ಮತ್ತು ಇದೇ ರೀತಿಯಲ್ಲಿ ಸುಧಾರಕರುಗಳು ಸಹಾ ಅದೇ ತಪ್ಪಿನಲ್ಲಿ ಬಿದ್ದರು, ಅರಸರುಗಳ ಅಧಿಕಾರವನ್ನು ಸರ್ಕಾರಗಳನ್ನು ನೇಮಿಸುವುದಕ್ಕೂ ಮತ್ತು ಅವುಗಳಿಗೆ ಮಂಜೂರಾತಿ ಗಳನ್ನು ನೀಡುವುದಕ್ಕೂ ಮತ್ತು ಅವುಗಳಿಗೆ 'ಕ್ರೈಸ್ತ ರಾಜ್ಯಗಳು' ಅಥವಾ 'ಕ್ರಿಸ್ತನ ರಾಜ್ಯಗಳು' ಎಂಬ ಹೆಸರಿಡುವುದಕ್ಕೂ ಬಳಸಿಕೊಂಡರು. ಹೀಗಾಗಿ ನಾವು ಈ ದಿನಗಳಲ್ಲಿ 'ಕ್ರೈಸ್ತ ಪ್ರಪಂಚ' ಎಂಬ ತೊಡಕಾದ ವಿಷಯದ ಬಗ್ಗೆ ಹೆಚ್ಚಾಗಿ ಕೇಳಿಸಿಕೊಳ್ಳುತ್ತೇವೆ. – ನಿಜವಾದ ಸುವಾರ್ತೆಯ ಬೆಳಕಿನಲ್ಲಿ ನೋಡುವಾಗ ನಿಜವಾಗಿಯೂ ಅದೊಂದು ತೊಡಕಾದ ವಿಷಯವೇ ಸರಿ. ಕರ್ತನು ತನ್ನ ಶಿಷ್ಯರ ಬಗ್ಗೆ "ನಾನು ಈ ಲೋಕದವನಲ್ಲದೆ ಇರುವ ಪ್ರಕಾರ ಇವರೂ ಈ ಲೋಕದವರಲ್ಲ" (ಯೋಹಾನ 17:16) ಎಂದಿದ್ದಾನೆ. ಪೌಲನು "ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನ ಮನಸ್ಸನ್ನು ಹೊಂದಿಕೊಂಡು ಪರಲೋಕ ಭಾವದವರಾಗಿರ್ರಿ" (ರೋಮಾ. 12:2) ಎಂದು ಬರೆದಿದ್ದಾನೆ.

ಈ ರಾಜ್ಯಗಳನ್ನು ಕ್ರಿಸ್ತನ ಹೆಸರಿಟ್ಟು ಕರೆಯುವುದನ್ನು ದೇವರು ಎಂದೂ ಅನುಮೋದಿಸಿಲ್ಲ. ನಾಮಾಂಕಿತ ಸಭೆಯಿಂದ ಮೋಸಹೋಗಿ, ಈ ದೇಶಗಳು ವಂಚನೆಯ ಅಡಿಯಲ್ಲಿ ತೇಲುತ್ತಿವೆ ಮತ್ತು ತಾವು ಯಾವುದಲ್ಲವೋ ಅದನ್ನು ಹಕ್ಕಿನಿಂದ ಹೇಳಿಕೊಳ್ಳುತ್ತವೆ. ಜನರ ಮತವನ್ನು ಹೊರತುಪಡಿಸಿ, ಅವರ ಏಕೈಕ ಶೀರ್ಷಿಕೆಯು ದೇವರ ಸೀಮಿತ ಅನುದಾನದಲ್ಲಿದೆ, ಈ ಬಗ್ಗೆ ನೆಬೂಕದ್ನೆಚ್ಚರನಿಗೆ "ಬಾಧ್ಯನು ಬರುವದರೊಳಗೆ" ಎಂದಿದ್ದಾನೆ (ಯೆಹೆಜ್ಕೇಲ 21 : 27 KJV).

ಈ ಅಪರಿಪೂರ್ಣವಾದ ರಾಜ್ಯಗಳು ತಮ್ಮ ಅಪರಿಪೂರ್ಣವಾದ ಕಾನೂನುಗಳೊಂದಿಗೆ, ಹಲವೊಮ್ಮೆ ಸ್ವಾರ್ಥಪರವಾದ ದುಷ್ಟ ಆಡಳಿತಗಾರರೊಂದಿಗೆ ಹಕ್ಕೇಳಿಕೆಯಿಂದ – ನಮ್ಮ ಕರ್ತನ ಮತ್ತು ಆತನಿಂದ ಪ್ರತಿಷ್ಟೆಗೊಂಡವರ ಸರ್ಕಾರಗಳು ಎಂದು ಹೇಳಿಕೊಳ್ಳುವದು. ಇದು ಒಟ್ಟಾರೆಯಾಗಿ ಕ್ರಿಸ್ತನ ನಿಜವಾದ ರಾಜ್ಯವನ್ನು ಮಾನ ಹಾನಿಮಾಡುವುದಾಗಿದೆ. ಅದಕ್ಕೂ ಮೊದಲೇ ಅವರು ಸಧ್ಯದಲ್ಲೇ ಬಿದ್ದುಹೋಗುವರು. ಅವರ ಮೇಲೆ ಸಮಾಧಾನದ

ಪ್ರಭುವು ನೀತಿಗನುಸಾರವಾಗಿ ಆಳುವನು (ಯೆಶಾಯ 32:1).

ಆ ತಪ್ಪಿನಿಂದ ಉಂಟಾಗುವ ಗಂಭೀರವಾದ ಮತ್ತೊಂದು ಹಾನಿಯೆಂದರೆ, ದೇವರ ಮಕ್ಕಳ ಗಮನವು ವಾಗ್ದತ್ತವಾದ ಪರಲೋಕ ರಾಜ್ಯದಿಂದ ದೂರಕ್ಕೆ ಸೆಳೆಯಲ್ಪಟ್ಟಿದೆ ಮತ್ತು ಪ್ರಾಪಂಚಿಕವಾದ ರಾಜ್ಯಗಳಿಗೆ ಇವರು ಒಂದು ತಪ್ಪಾದ ಮಹತ್ವವನ್ನು ಕೊಡುವುದಲ್ಲದೆ, ಇದರೊಡನೆ ಅನ್ಯೋನ್ಯತೆಯಿಂದ ಇರಬೇಕೆಂಬ ಆಸಕ್ತಿಯುಳ್ಳವರಾಗಿದ್ದಾರೆ. ಈ ಒಂದು ಲೌಕಿಕವಾದ ಸ್ವೇಚ್ಛಾಚಾರದ ಅಂಶಗಳಿಗೆ ಕ್ರೈಸ್ತತ್ವದ ಕೃಪಾಗುಣಗಳು ಮತ್ತು ನೈತಿಕತೆಯನ್ನು ಬೇರೂರಿಸಲು (ingraft) ಬಹುತೇಕ ನಿಷ್ಫಲ ಪ್ರಯತ್ನಕ್ಕೆ ಒಳಗಾಗಿದ್ದಾರೆ. ಎಷ್ಟರಮಟ್ಟಿಗೆ ಎಂದರೆ ದೈವಿಕ ಆಡಳಿತದ ರಾಜ್ಯಭಾರದ ಸುವಾರ್ತೆಯ ವಿಷಯವನ್ನು ಮತ್ತು ಅದರ ಮೇಲಿಟ್ಟಿರಬೇಕಾದ ಆ ನಿರೀಕ್ಷೆಯನ್ನು ಕಡೆಗಣಿಸಿದ್ದಾರೆ. ಈ ವಂಚನೆಯ ಅಡಿಯಲ್ಲಿ ಕೆಲವರು ಪ್ರಸ್ತುತದಲ್ಲಿ ದೇವರ ಹೆಸರು ಸಂಯುಕ್ತ ಸಂಸ್ಥಾನದ ಸಂವಿಧಾನದಲ್ಲಿ ಸೇರಿಸುವುದರಿಂದ ಅದು ಕ್ರೈಸ್ತ ರಾಷ್ಟ್ರವಾಗಿ ಬಿಡುತ್ತದೆ ಎಂದು ಬಹಳಷ್ಟು ಒತ್ತಾಯಪಡಿಸುತ್ತಿದ್ದಾರೆ. ಸುಧಾರಿತ ಪ್ರೆಸ್ಬಿಟೀರಿಯನ್‌ಗಳು ಹಲವಾರು ವರ್ಷಗಳ ಕಾಲ ಈ ಸರ್ಕಾರಕ್ಕೆ ಮತ ಕೊಡುವುದಕ್ಕಾಗಲೀ ಅಥವಾ ಅದರ ಅಧಿಕಾರದಲ್ಲಿ ಪಾಲು ತೆಗೆದುಕೊಳ್ಳುವುದಕ್ಕಾಗಲೀ ಅದು ಕ್ರೈಸ್ತ ಸರ್ಕಾರವಲ್ಲ ಎಂಬ ಕಾರಣದಿಂದ ನಿರಾಕರಿಸಿದ್ದಾರೆ. ಈ ರೀತಿಯಲ್ಲಿ ಅವರು ಕ್ರೈಸ್ತರು ಬೇರೆ ಯಾವುದರೊಂದಿಗೂ ಪಾಲುತೆಗೆದುಕೊಳ್ಳುವುದರ ಅನೌಚಿತ್ಯವನ್ನು ಗ್ರಹಿಸಿದರು. ನಾವು ಈ ಭಾವನೆಗೆ ಬಹಳ ಅನುಕುಂಪವುಳ್ಳವರಾಗಿದ್ದೇವೆ, ಆದರೆ. ದೇವರ ಹೆಸರು ಸಂವಿಧಾನದಲ್ಲಿ ಸೇರಿಸುವುದಾದರೆ ಆ ಸತ್ಯವು ಸರ್ಕಾರವನ್ನು ಈ ಲೋಕದ ರಾಜ್ಯದಿಂದ ಕ್ರಿಸ್ತನ ರಾಜ್ಯಕ್ಕೆ ಪರಿವರ್ತಿಸುತ್ತದೆ ಮತ್ತು ಮತನೀಡಲು ಹಾಗೂ ಅವರಿಗೆ ಆ ಸರ್ಕಾರದಲ್ಲಿ ಅಧಿಕಾರ ಸ್ಥಾನವನ್ನು ಹಂಚಿಕೊಳ್ಳುವ ಅವಕಾಶ ಕೊಡುತ್ತದೆ ಎಂಬ ಅದರ ತೀರ್ಮಾನದ ಬಗ್ಗೆ ನಮಗೆ ಅನುಕಂಪವಿಲ್ಲ. ಹೋ! ಎಂಥಾಃ ಮೂರ್ಖತನ! “ಅವಳೊಂದಿಗೆ ಭೂರಾಜರು ಜಾರತ್ವ ಮಾಡಿದ್ದು, ಮತ್ತು ಭೂನಿವಾಸಿಗಳು ಅವಳ ಜಾರತ್ವವೆಂಬ ದ್ರಾಕ್ಷಾರಸವನ್ನು ಕುಡಿದದ್ದು (ಪ್ರಕಟನೆ 17:2) ಎಂಥಾಃ ದೊಡ್ಡ ವಂಚನೆಯಾಗಿದೆಯಲ್ಲವೆ? ಯಾಕೆಂದರೆ, ಅದೇ ರೀತಿಯಲ್ಲಿ ಯೂರೋಪಿನ ರಾಜ್ಯಗಳು ಸೈತಾನನಿಂದ ಕ್ರಿಸ್ತನಿಗೆ ವರ್ಗಾಯಿಸಲ್ಪಟ್ಟವು ಮತ್ತು “ಕ್ರೈಸ್ತ ರಾಷ್ಟ್ರ”ಗಳಾದವು ಎಂದು ಹೇಳಿಕೊಳ್ಳಲಾಗುತ್ತಿದೆ.

ಭೂಲೋಕದ ರಾಷ್ಟ್ರಗಳಲ್ಲಿ ಅತ್ಯುತ್ತಮವಾದ ಮತ್ತು ಅತ್ಯಂತ ಕೆಟ್ಟದಾದ ರಾಷ್ಟ್ರಗಳೂ ಇವೆ ಎಂಬುದನ್ನು ನಾವು ನೋಡಬೇಕು. ಅವರಿಗೆ ನೀಡಿರುವ ಅಧಿಕಾರದ ಗುತ್ತಿಗೆಯು ಈಗ ಮುಗಿಯಲಿದೆ, ಅವರುಗಳು ತಮ್ಮ ಅಭಿಷಕ್ತ ಉತ್ತರಾಧಿಕಾರಿಗೆ, ಭೂಲೋಕದ ಐದನೆಯ ವಿಶ್ವರಾಜ್ಯವಾದ ಮೆಸ್ಸೀಯನ ರಾಜ್ಯಕ್ಕೆ ಸ್ಥಾನವನ್ನು ಬಿಟ್ಟುಕೊಡಬಹುದು (ದಾನಿ. 2:44; 7:14, 17,27). ಈ ದೃಷ್ಟಿಕೋನವು ಸತ್ಯವನ್ನು ಸ್ಥಾಪಿಸಲಿಕ್ಕೂ, ತಪ್ಪನ್ನು ತೊಡೆದುಹಾಕುವುದಕ್ಕೂ ಬಹಳಷ್ಟು ಮಾಡುತ್ತದೆ.

ಆದರೆ, ಪ್ರೊಟೆಸ್ಟಂಟ್ ಸುಧಾರಕರು ಈ ವಿಷಯದಲ್ಲಿ ಪೋಪನ ಅಧಿಕಾರ ಕೃತ್ಯಗಳ ಬಗ್ಗೆ ಕ್ರೈಸ್ತ ಜನರಲ್ಲಿ ಪ್ರಶ್ನಿಸಲ್ಪಟ್ಟಿಲ್ಲ. ಅವರುಗಳು ಕ್ರಿಸ್ತನ ರಾಜ್ಯವನ್ನು ಎತ್ತಿಹಿಡಿಯಬೇಕಾಗಿರುವಾಗ, ಕ್ರೈಸ್ತ ಪ್ರಪಂಚದ ಪ್ರಸ್ತುತ ಬೀಳುವ ಸಾಮ್ರಾಜ್ಯಗಳನ್ನು ಬೆಂಬಲಿಸಲು ಅವರು ಬದ್ಧರಾಗಿದ್ದಾರೆಂದು ಭಾವಿಸುತ್ತಾರೆ, ಆದರೆ, ಅವರ ಸಮಯವು ಶೀಘ್ರವಾಗಿ ಮುಕ್ತಾಯಗೊಳ್ಳುತ್ತಿದೆ. ಹೀಗಾಗಿ ಅವರ ಅನುಕಂಪಗಳನ್ನು ಕೆಲವೊಮ್ಮೆ ಸರಿಯಾದುದರ ಮತ್ತು ಸ್ವಾತಂತ್ರದ ಕಡೆಗೆ ಇರುವುದರ ಬದಲಾಗಿ ದಬ್ಬಾಳಿಕೆಯ ಕಡೆಗೆ – ಈ ಲೋಕದ ರಾಜ್ಯಗಳ ಕಡೆಗೆ, ಮತ್ತು ಇಹಲೋಕಾಧಿ ಪತಿಯ ಕಡೆಗೆ ಒತ್ತಾಯಪಡಿಸಲಾಗುತ್ತದೆ (ಪ್ರಕಟನೆ 17:14; 19:11–19).

ಈ ಲೋಕದ ರಾಜ್ಯಗಳು ಕ್ರಿಸ್ತನವುಗಳಂತಿಲ್ಲ ಮತ್ತು ಕ್ರಿಸ್ತನಿಂದ ನೇಮಿತವಾದವು ಎಂಬ ಅವರ ಹಕ್ಕೊಳಿಕೆಯು ಪ್ರಶ್ನಾತೀತವಾದುದಲ್ಲ ಎಂಬುದನ್ನು ಈ ಲೋಕವು ತ್ವರಿತವಾಗಿ ಗ್ರಹಿಸಿಕೊಳ್ಳುತ್ತದೆ. ಮಾನವರು ಇದರ ಮೇಲೆ ಮತ್ತು ಇದೇ ರೀತಿಯ ಪ್ರಶ್ನೆಗಳ ಮೇಲೆ ತಮ್ಮ ವಿವೇಚನಾಶಾಲಿ ಶಕ್ತಿಯನ್ನು ಉಪಯೋಗಿಸಲು ಪ್ರಾರಂಭಿಸಿರುವರು. ಅವರು ತಮ್ಮ ನಿಶ್ಚಿತಾಭಿಪ್ರಾಯ ಗಳನ್ನು ಬಹಳ ಹಿಂಸಾತ್ಮಕವಾಗಿ ಕಾರ್ಯಗತ ಗೊಳಿಸುವರು, ಹೇಗೆಂದರೆ, ನ್ಯಾಯಾಧಿಪತಿ ದೇವರ ಮತ್ತು ಸಮಾಧಾನ ಪ್ರಭುವಿನ ಹೆಸರಿನಲ್ಲಿ ವಂಚನೆಯು ತಮ್ಮ ಮೇಲೆ ಪ್ರಯೋಗಿಸಲ್ಪಟ್ಟಿದೆ ಎಂಬುದನ್ನು ಅವರು ಗ್ರಹಿಸಿಕೊಳ್ಳುವರು. ನಿಜವಾಗಿಯೂ ಕ್ರೈಸ್ತತ್ವವು ತಾನೇ ಆಧಾರವಿಲ್ಲದ ಹೇರುವಿಕೆಯ ಸಂಗತಿಯಾಗಿದೆ, ಮತ್ತು ಅದು ನಾಗರೀಕ ಆಡಳಿತಗಾರರೊಂದಿಗೆ ಸಂಘಟಿಸಲ್ಪಟ್ಟಿದೆ ಎಂಬುದು ಅನೇಕರ ಧೋರಣೆ ಯಾಗಿದೆ ಮತ್ತು ಅದರ ಗುರಿಯು ಕೇವಲ ಸಮೂಹಗಳ ಸ್ವಾತಂತ್ರವನ್ನು ನಿಗ್ರಹಿಸುವುದು ಎಂಬ ತೀರ್ಮಾನಕ್ಕೆ ಬರುತ್ತಾರೆ.

ಓ!, ಆ ಮನುಷ್ಯರು ಬುದ್ಧಿವಂತರಾಗಿದ್ದರೆ, ಅವರು ತಮ್ಮ ಹೃದಯವನ್ನು ಕರ್ತನ ಕಾರ್ಯಗಳನ್ನು ಮತ್ತು ಯೋಜನೆಗಳನ್ನು ಅರ್ಥಮಾಡಿಕೊಳ್ಳಲು ಬಳಸುತ್ತಿದ್ದರು! ಆಗ ಪ್ರಸ್ತುತ ರಾಜ್ಯಗಳು ಕ್ರಮೇಣವಾಗಿ ಕರಗುತ್ತಿದ್ದವು – ಸುಧಾರಣೆಗಳು ತ್ವರಿತವಾಗಿ ಸುಧಾರಣೆಗಳನ್ನು ಅನುಸರಿಸುತ್ತಿದ್ದವು; ಬಿಡುಗಡೆಯು ಬಿಡುಗಡೆಯನ್ನು ಅನುಸರಿಸುತ್ತಿದ್ದವು ಮತ್ತು ನ್ಯಾಯ ಮತ್ತು ಸತ್ಯವು ನೀತಿವಂತಿಕೆಯು ಈ ಭೂಮಿಯಲ್ಲಿ ಸ್ಥಾಪನೆಯಾಗುವವರೆಗೆ ಪ್ರಚಲಿತವಾಗುತ್ತಿದ್ದವು. ಆದರೆ ಅವರುಗಳು ಈ ಪ್ರಸ್ತುತ ಬಿದ್ದುಹೋದ ಪರಿಸ್ಥಿತಿಯಲ್ಲಿ ಇದನ್ನು ಮಾಡುವುದಿಲ್ಲ: ಹೀಗೆ ಸ್ವಾರ್ಥತೆಯೆಂಬ ಆಯುಧ ಧರಿಸಿದವರಾಗಿ, ಪ್ರತಿಯೊಬ್ಬರೂ ಮೇಲುಗೈಗಾಗಿ ಶ್ರಮಿಸುತ್ತಾರೆ ಮತ್ತು ಈ ರಾಷ್ಟ್ರವು ಉಂಟಾದಂದಿನಿಂದ ಸಂಭವಿಸದ ಮಹಾಸಂಕಟದ ಸಮಯದಲ್ಲಿ ಲೋಕದ ರಾಜ್ಯಗಳು ಗತಿಸಿಹೋಗುವುವು. ಗತಿಸಿಹೋದ ಪ್ರಭುತ್ವವನ್ನು ಹಿಡಿದಿಟ್ಟುಕೊಳ್ಳಲು ವ್ಯರ್ಥವಾಗಿ ಪ್ರಯತ್ನಿಸುತ್ತಿರುವವರ ಬಗ್ಗೆ ಕರ್ತನು ಒತ್ತಾಯಪೂರ್ವಕವಾಗಿ ಹೇಳುತ್ತಾನೆ – ಈ ಯುದ್ಧದಲ್ಲಿ ಅವರುಗಳು ಖಚಿತವಾಗಿಯೂ ಸೋತುಹೋಗುತ್ತಾರೆ ಎಂದು ಆತನು ಹೀಗೆ ಹೇಳುತ್ತಾನೆ:–

"ಅನ್ಯಜನಗಳು ದೊಂಬಿಮಾಡುವುದೂ, ಜನಾಂಗಗಳು ವ್ಯರ್ಥಕಾರ್ಯಗಳನ್ನು ಯೋಚಿಸುವುದೂ ಯಾಕೆ? ಯೆಹೋವನಿಗೂ ಆವನು ಅಭಿಷೇಕಿಸಿದವನಿಗೂ ವಿರೋಧವಾಗಿ ಭೂಪತಿಗಳು ಸನ್ನದ್ಧರಾಗಿ ನಿಂತಿದ್ದಾರೆ, ಅಧಿಕಾರಿಗಳು ಒಟ್ಟಾಗಿ ಸೇರಿ ಆಲೋಚಿಸುತ್ತಿದ್ದಾರೆ. ನಮಗೆ ಅವರು ಹಾಕಿದ ಬಂಧನಗಳನ್ನು ಕಿತ್ತು ಬೇಡಿಗಳನ್ನು ಮುರಿದು ಬಿಸಾಡೋಣ ಎಂದು ಮಾತಾಡಿಕೊಳ್ಳುತ್ತಾರಲ್ಲಾ".

ಪರಲೋಕದಲ್ಲಿ ಆಸನಾರೂಢನಾಗಿರುವಾತನು ಅದಕ್ಕೆ ನಗುವನು; ಕರ್ತನು ಅವರನ್ನು ಪರಿಹಾಸ್ಯ ಮಾಡುವನು. ಅನಂತರ ಆತನು ಸಿಟ್ಟಾಗಿ – ನಾನು ನೇಮಿಸಿದ ಅರಸನನ್ನು ಪರಿಶುದ್ಧ ಪರ್ವತದಲ್ಲಿಯೇ ಸ್ಥಾಪಿಸಿದ್ದಾಯಿತು ಎಂದು ಹೇಳಿ ಕೋಪಾವೇಶದಿಂದ ಅವರನ್ನು ಕಳವಳಗೊಳಿಸುವನು" (ಕೀರ್ತನೆ 2:1–6)..... "ಆದುದರಿಂದ ಅರಸರುಗಳಿರಾ ವಿವೇಕಿಗಳಾಗಿರ್ರಿ, ದೇಶಾಧಿಪತಿಗಳಿರಾ, ಬುದ್ಧಿಮಾತಿಗೆ ಕಿವಿಗೊಡಿರಿ. ಯೆಹೋವನನ್ನು ಭಯಭಕ್ತಿಯಿಂದ ಸೇವಿಸಿರಿ; ನಡಗುತ್ತಾ ಉಲ್ಲಾಸಪಡಿರಿ. ಆತನ ಮಗನಿಗೆ ಮುದ್ದಿಡಿರಿ; ಇಲ್ಲವಾದರೆ ಆತನ ಕೋಪವು ಬೇಗನೇ ಪ್ರಜ್ವಲಿಸಲು ನೀವು ದಾರಿಯಲ್ಲೇ ನಾಶವಾದೀರಿ. ಆತನ ಮೊರೆಹೊಕ್ಕವರೆಲ್ಲರೂ ಧನ್ಯರು (ಕೀರ್ತನೆ 2:1–6, 10–12).

## THE KINGDOM NEAR

"Watchman, tell us of the night–
what it signs of promise are.
Traveler, over yon mountain's height,
see that glory-beaming star!
Watchman, does its beauteous ray
Aught of hope or joy foretell?
Traveler, yes it brings the day –
Promised day of Israel.

"Watchman, tell us of the night –
Higher yet that star ascends.
Traveler, blessedness and light,
Peace and truth its course portends,
Watchman, will its beams alone
Gild the spot that gave them birth?
Traveler, ages are its own;
See, its glory fills the earth.

Watchman, tell us, does the morning
of fair zion's glory dawn?
Have the signs that mark its coming
Yet upon thy pathway shone?
Traveler, yes: arise! look round thee!
Light is breaking in the skies!
Gird thy bridal robes around thee!
Morning dawns! arise! arise!

## ದೇವರ ರಾಜ್ಯವು ಹತ್ತಿರದಲ್ಲಿದೆ

ಕಾವಲುಗಾರನೇ, ರಾತ್ರಿಯ ಬಗ್ಗೆ ನಮಗೆ ತಿಳಿಸು –
ಅದರ ವಾಗ್ದಾನದ ಗುರುತುಗಳೇನೇಂದು.
ಯಾತ್ರಿಕನೇ, ಪರ್ವತದ ಎತ್ತರ ಆಚೆ ಕಡೆ,
ಮಹಿಮೆಯ ಕಿರಣದ ನಕ್ಷತ್ರವನ್ನು ನೋಡು !
ಕಾವಲುಗಾರನೇ, ಸುಂದರವಾಗಿ ಮಾಡಲ್ಪಟ್ಟಿರುವ
ಕಿರಣವು
ನಿರೀಕ್ಷೆ ಮತ್ತು ಹರ್ಷವನ್ನೇನಾದರೂ
ಮುಂತಿಳಿಸುವುದೇ ?
ಯಾತ್ರಿಕನೇ, ಹೌದು ಇದು ದಿನವನ್ನು ತರುತ್ತಿದೆ –
ಇಸ್ರಾಯೇಲಿನ ವಾಗ್ದಾನದ ದಿನ.

‘‘ಕಾವಲುಗಾರನೇ, ರಾತ್ರಿಯ ಬಗ್ಗೆ ನಮಗೆ ತಿಳಿಸು –
ಆ ನಕ್ಷತ್ರವು ಮತ್ತೂ ಮೇಲೇರುತ್ತವೆ.
ಯಾತ್ರಿಕನೇ, ದೈವಕೃಪೆ ಹಾಗೂ ಬೆಳಕು
ಶಾಂತಿ ಮತ್ತು ಸತ್ಯ ಅವರ ಚಲನೆಯ ಭವಿಷ್ಯ
ಸೂಚಿಸುತ್ತದೆ.
ಕಾವಲುಗಾರನೇ, ಅದರ ಕಿರಣವು ಮಾತ್ರವೇ
ಅದು ಜನಿಸಿದ ಸ್ಥಳಕ್ಕೆ ಚಿನ್ನದ ಹೊದಿಕೆ ನೀಡುವದೇ?
ಯಾತ್ರಿಕನೇ, ಯುಗಗಳು ಅದರ ಸ್ವಂತದ್ದು
ಅದರ ಮಹಿಮೆ ಭೂಮಿಯನ್ನು ತುಂಬುವದನ್ನು
ನೋಡು.

‘‘ಕಾವಲುಗಾರನೇ, ನಮಗೆ ಹೇಳು, ಬೆಳಗಾಗಿದ್ದನ್ನು
ಹೊಂಬಣ್ಣದ ಚಿಯೋನಿನ ಮಹಿಮೆಯ ಉದಯವೇ?
ಅದರ ಬರುವಿಕೆಯನ್ನು ಸೂಚಿಸುವ ಗುರುತನ್ನು
ಹೊಂದಿಕೊ
ಈಗಲೂ ನಿನ್ನ ಹಾದಿಯಲ್ಲಿ ಪ್ರಕಾಶಿಸುತ್ತಿದೆಯೇ?
ಪ್ರಯಾಣಿಕನೇ, ಹೌದು, ಎದ್ದೇಳು, ನಿನ್ನ ಸುತ್ತಲೂ
ನೋಡು!
ಆಕಾಶದಲ್ಲಿ ಬೆಳಕು ಭೇಧಿಸಿಕೊಂಡು ಬರುತ್ತಿದೆ.
ನಿನ್ನ ವಿವಾಹದ ನಿಲುವಂಗಿಯ ಪಟ್ಟಿಯನ್ನು ಕಟ್ಟಿಕೋ
(ಬಿಗಿದುಕೋ)
ಮುಂಜಾನೆಯ ಸೂರ್ಯೋದಯ ! ಏಳು ! ಎದ್ದೇಳು.

* * * * * * *

# ಅಧ್ಯಯನ – 14 Study XIV

# ದೇವರ ರಾಜ್ಯ

## THE KINGDOM OF GOD

**ಪ್ರಸ್ತಾಪದ ಪ್ರಧಾನ್ಯತೆ – ರಾಜ್ಯದ ಗುಣಲಕ್ಷಣಗಳು – ಸುವಾರ್ತಾ ಯುಗದಲ್ಲಿ ರಾಜ್ಯ – ತಪ್ಪು ದೃಷ್ಟಿಕೋನವನ್ನು ಸರಿಪಡಿಸಿದ ಪೌಲನು – ರಾಜ್ಯದ ತಪ್ಪು ಭಾವನೆಗಳ ಫಲಿತಾಂಶ – ದೇವರ ರಾಜ್ಯದ ಎರಡು ಹಂತಗಳು – ಆತ್ಮೀಕ ಹಂತ ಮತ್ತು ಅದರ ಕಾರ್ಯ – ಭೂಲೋಕದ ಹಂತ ಮತ್ತು ಅದರ ಕಾರ್ಯ – ಅವುಗಳ ಸಾಮರಸ್ಯ ಕಾರ್ಯವು – ಭೂಲೋಕದ ಹಂತದ ಮಹಿಮೆ – ಪರಲೋಕದ ಹಂತದ ಮಹಿಮೆ – ಒಡಂಬಡಿಕೆಯ ಬೇರಿನಿಂದ ಬೆಳೆಯುವ ಕೊಂಬೆಗಳು – ರಾಜ್ಯದ ಭೂಲೋಕದ ಹಂತಗಳು – ಇಸ್ರಾಯೇಲ್ಯತನ – ಕಳೆದು ಹೋದ ಗೋತ್ರಗಳು – ಪರಲೋಕದ ಯೆರೂಸಲೇಮ್– ಇಸ್ರಾಯೇಲ್ಯರು ಒಂದು ಸಾಂಕೇತಿಕ ಜನರು – ಇಸ್ರಾಯೇಲಿನ ನಷ್ಟ ಮತ್ತು ಪುನರುದ್ಧಾರ – ಆಯ್ದ ವರ್ಗಗಳು – ರಾಜ್ಯದ ಬಾಧ್ಯಸ್ಥರು – ಕಬ್ಬಿಣದ ಆಡಳಿತ – ಸಹಸ್ರಮಾನದ ಆಡಳಿತ ಉದ್ದೇಶದ ನಿದರ್ಶನ – ತಂದೆಯಾದ ದೇವರಿಗೆ ರಾಜ್ಯವನ್ನು ಒಪ್ಪಿಸಿಕೊಡುವದು – ದೇವರ ಮೂಲ ಸಂಕಲ್ಪವು ಸಂಪೂರ್ಣವಾಗಿ ಈಡೇರಿತು.**

ಈ ಪ್ರಸ್ತಾಪವನ್ನು ಅನುಕ್ರಮಣಿಕೆ ಮತ್ತು ಸತ್ಯವೇದವನ್ನು ಕೈಯಲ್ಲಿ ಹಿಡಿದು ಜಾಗರೂಕತೆಯಿಂದ ಪರೀಕ್ಷಿಸದೆ ಇರುವ ಯಾರೇ ಆಗಲಿ. ಹಾಗೆ ಮಾಡುವಾಗ ದೇವರ ವಾಕ್ಯದಲ್ಲಿರುವ ಅದರ ಪ್ರಧಾನ್ಯತೆಯನ್ನು ಕಂಡು ಆಶ್ಚರ್ಯಪಡುವರು. ಹಳೆ ಒಡಂಬಡಿಕೆಯಲ್ಲಿ ಬಹಳಷ್ಟು ವಾಗ್ದಾನಗಳೂ ಮತ್ತು ಪ್ರವಾದನೆಗಳು ಸಮೃದ್ಧವಾಗಿದ್ದು ಅದರಲ್ಲಿ ದೇವರ ರಾಜ್ಯ ಮತ್ತು ಅದರ ಅರಸನಾದ ಮೆಸ್ಸೀಯನು ಅದರಲ್ಲಿನ ಕೇಂದ್ರೀಯ ವ್ಯಕ್ತಿಯಾಗಿ ಚಿತ್ರಿತನಾಗಿದ್ದಾನೆ. ಪ್ರತಿಯೊಬ್ಬ ಇಸ್ರಾಯೇಲ್ಯನ ನಿರೀಕ್ಷೆಯು ದೇವರು ತಮ್ಮ ದೇಶವನ್ನು ಮೆಸ್ಸೀಯನ ಅಧೀನದಲ್ಲಿ ಉನ್ನತ ಸ್ಥಿತಿಗೆ ಏರಿಸುತ್ತಾನೆಂಬುದೇ ಆಗಿತ್ತು (ಲೂಕ 3:15); ಕರ್ತನು ಅವರ ಅರಸನಾಗಿ ಅವರ ಬಳಿಗೆ ಬರುವಾಗ, ಅದು ದೀರ್ಘಕಾಲದಿಂದ ವಾಗ್ದಾನಪಡಿಸಿದ ಈ ಲೋಕದ ಮೇಲಿನ ರಾಜ್ಯವನ್ನು ಸ್ಥಾಪಿಸುವುದಕ್ಕಾಗಿಯೇ ಎಂಬುದೇ ಆ ನಿರೀಕ್ಷೆ.

ನಮ್ಮ ಕರ್ತನಾದ ಯೇಸುವಿನ ಮುಂದೂತನೂ, ಮತ್ತು ಮುನ್ಸೂಚಕನೂ ಆದ ಯೋಹಾನನು "ಪರಲೋಕ ರಾಜ್ಯವು ಸಮೀಪವಾಯಿತು, ದೇವರ ಕಡೆಗೆ ತಿರುಗಿಕೊಳ್ಳಿರಿ" (ಮತ್ತಾಯ 3:2) ಎಂಬ ಎಚ್ಚರಿಕೆಯನ್ನು ಸಾರಿ ತಿಳಿಸುತ್ತಾನೆ. ಕರ್ತನು ಸಹಾ ತನ್ನ ಸೇವೆಯನ್ನು ಅದೇ ಪ್ರಕಟನೆಯ ಮೂಲಕ ಪ್ರಾರಂಭಿಸುತ್ತಾನೆ (ಮತ್ತಾಯ 4:17); ಅಪೋಸ್ತಲರುಗಳನ್ನು ಸಹಾ ಅದೇ ಸಂದೇಶವನ್ನು ಬೋಧಿಸಲು ಕಳುಹಿಸಲಾಯಿತು (ಮತ್ತಾಯ 10:7 ಮತ್ತು ಲೂಕ 9:2). ನಮ್ಮ ಕರ್ತನು ತನ್ನ ಸಾರ್ವಜನಿಕ ಸೇವೆಯನ್ನು ರಾಜ್ಯದ ಪ್ರಸ್ತಾಪದ ಬಗ್ಗೆ ಪ್ರಾರಂಭಿಸಿದ್ದು ಮಾತ್ರವಲ್ಲ, ಆದರೆ ಅದು ನಿಜವಾಗಿಯೂ ಆತನ ಎಲ್ಲಾ ಬೋಧನೆಗಳ ಮುಖ್ಯ ಪ್ರಸ್ತಾಪವಾಗಿತ್ತು (ಲೂಕ 8:1; 4:43; 19:11). ಇತರೆ ವಿಷಯಗಳು ಕೇವಲ ಇದರ ಸಂಬಂಧವಾಗಿ ಇಲ್ಲವೇ ಇದನ್ನು ವಿವರಿಸುವುದಕ್ಕಾಗಿಯೇ ಹೇಳಲಾದವು. ಆತನ ಬಹುಪಾಲು ಸಾಮ್ಯಗಳು ವಿವಿಧ ದೃಷ್ಟಿಕೋನದಲ್ಲಿ ಮತ್ತು ಬೇರೆ ಬೇರೆ ಲಕ್ಷಣಗಳೊಂದಿಗೆ ಆ ರಾಜ್ಯದ ದೃಷ್ಟಾಂತಗಳಾಗಿದ್ದವು ಅಥವಾ ರಾಜ್ಯದಲ್ಲಿ ಭಾಗಿಗಳಾಗುವಂತೆ ದೇವರಿಗೆ ಸಮಗ್ರವಾಗಿ ಪ್ರತಿಷ್ಟೆ ಹೊಂದಿಕೊಳ್ಳುವ ಅಗತ್ಯವನ್ನು ಸೂಚಿಸುವವು ಗಳಾಗಿದ್ದವು ಮತ್ತು ಯೆಹೂದಿಗಳು ತಾವು ಅಬ್ರಹಾಮನ ಸ್ವಾಭಾವಿಕ ಮಕ್ಕಳಾಗಿರುವುದರಿಂದ ಆ ರಾಜ್ಯಕ್ಕೆ ಸ್ವಾಭಾವಿಕ ಬಾಧ್ಯಸ್ತರು ಎಂಬ ತಪ್ಪು ಕಲ್ಪನೆಯುಳ್ಳವ ರಾಗಿದ್ದ ಅವರನ್ನು ಸರಿಪಡಿಸುವದಾಗಿತ್ತು.

ನಮ್ಮ ಕರ್ತನಾದ ಯೇಸುಕ್ರಿಸ್ತನು ತನ್ನ ಅನುಯಾಯಿಗಳೊಂದಿಗೆ ಮಾತನಾಡುವಾಗ, ಬರಲಿರುವ ರಾಜ್ಯದಲ್ಲಿ ಅವರಿಗೆ – "ನನ್ನ ತಂದೆಯು ನನಗೆ ರಾಜ್ಯವನ್ನು ನೇಮಿಸಿದ ಪ್ರಕಾರ ನಾನು ನಿಮಗೂ ನೇಮಿಸುತ್ತೇನೆ; ನನ್ನ ರಾಜ್ಯದಲ್ಲಿ ನೀವು ನನ್ನ ಮೇಜಿನ ಮೇಲೆ ಊಟಮಾಡುವಿರಿ, ಕುಡಿಯುವಿರಿ ಮತ್ತು ಸಿಂಹಾಸನಗಳ ಮೇಲೆ ಕೂತುಕೊಂಡು ಇಸ್ರಾಯೇಲಿನ ಹನ್ನೆರಡು ಕುಲಗಳವರಿಗೆ ನ್ಯಾಯತೀರಿಸುವಿರಿ" (ಲೂಕ 22: 29–30) ಎಂದು ಹೇಳುವುದರ ಮೂಲಕ ಅವರ ಹಾರೈಕೆಗಳನ್ನು ಬಲಪಡಿಸುತ್ತಿದ್ದನು ಮತ್ತು ಪ್ರೋತ್ಸಾಹಿಸುತ್ತಿದ್ದನು. ಮಾತ್ರವಲ್ಲದೆ ಅವರಿಗೆ – "ಚಿಕ್ಕ ಹಿಂಡೇ, ಹೆದರಬೇಡ; ಆ ರಾಜ್ಯವನ್ನು ನಿಮಗೆ ದಯಪಾಲಿಸುವುದಕ್ಕೆ ನಿಮ್ಮ ತಂದೆಯು ಸಂತೋಷವುಳ್ಳವನಾಗಿದ್ದಾನೆ" (ಲೂಕ 12: 32) ಎಂಬ ಅಭಯ ವಚನಗಳನ್ನೂ ನೀಡುತ್ತಿದ್ದನು. ಆದರೆ, ನಂತರದಲ್ಲಿ ಕಿರೀಟಧಾರಣೆ ಮಾಡಿ

ಸಿಂಹಾಸನರೋಹಣಾ ಮಾಡುವ ಬದಲು ಅವರು ಮಾನ್ಯ ಮಾಡುತ್ತಿದ್ದ ಅರಸನನ್ನು ಶಿಲುಬೆಗೆ ಹಾಕಿದಾಗ ಆತನ ಶಿಷ್ಯರುಗಳು ದುಃಖದಾಯಕವಾಗಿ ನಿರಾಶೆಗೊಳಗಾದರು. ಆತನ ಪುನರುತ್ಥಾನವಾದ ಮೇಲೆ ಅವರಲ್ಲಿ ಇಬ್ಬರು ಎಮ್ಮಾಹುವಿಗೆ ಹೋಗುವ ದಾರಿಯಲ್ಲಿ ಭೇಟಿಯಾದ ಅಪರಿಚಿತನಿಗೆ ಅದನ್ನು ವ್ಯಕ್ತಪಡಿಸಿದಂತೆ – "ನಾವಾದರೋ ಇಸ್ರಾಯೇಲ್ ಜನರನ್ನು ಬಿಡಿಸತಕ್ಕವನು ಆತನೇ, ಇಸ್ರೇಲನ್ನು ಶಕ್ತಿಯುಲ್ಲಿಯೂ, ಮಹಿಮೆಯಲ್ಲಿಯೂ ದೇವರ ರಾಜ್ಯವನ್ನಾಗಿ ಮಾಡುವನು ಎಂದು ನಿರೀಕ್ಷಿಸಿಕೊಂಡಿದ್ದೆವು" ಎಂದು ಅವರು ಇಸ್ರಾಯೇಲ್‌ನ್ನು ವಿಮೋಚಿಸಬೇಕಾದವನು ಆತನೇ ಎಂದೂ ಹಾಗೂ ಅವರನ್ನು ರೋಮನ್ ನೊಗದಿಂದ ಬಿಡಿಸಿ ಇಸ್ರಾಯೇಲ್‌ನ್ನು ದೇವರ ಮಹಿಮಾ ಪ್ರಭಾವದ ರಾಜ್ಯವನ್ನಾಗಿ ಮಾಡುವನು ಎಂದು ನಂಬಿದ್ದರು; ಆದರೆ ಕೆಲವು ದಿನಗಳ ಹಿಂದಿನ ಬದಲಾವಣೆಗಳಿಂದ ಶೋಚನೀಯವಾಗಿ ನಿರಾಶೆಗೊಂಡಿದ್ದರು. ನಂತರ ಯೇಸು, ಮೋಶೆ ಮತ್ತು ಪ್ರವಾದಿಗಳ ಗ್ರಂಥಗಳು ಮೊದಲುಗೊಂಡು ಸಮಸ್ತ ಗಂಥಗಳಲ್ಲಿ ತನ್ನ ವಿಷಯವಾಗಿರುವ ಸೂಚನೆಗಳನ್ನು ಅವರಿಗೆ ವಿವರಿಸಿ ಅವರ ತಿಳುವಳಿಕೆಯನ್ನು ತೆರೆದನು (ಲೂಕ. 24:21,25–27).

ದೇವರು ಯೇಸುವಿಗೆ ಆತನು ಮಾನವರನ್ನು ವಿಮೋಚಿಸದೆಯೂ ಭೂಲೋಕದ ಪ್ರಭುತ್ವವನ್ನು ನೀಡಬಹುದಿತ್ತು.; ಯಾಕೆಂದರೆ, "ಪರಾತ್ಪರನು ಮನುಷ್ಯರ ರಾಜ್ಯದಲ್ಲಿ ರಾಜನಾಗಿ ಅದನ್ನು ತನಗೆ ಬೇಕಾದವರಿಗೆ ಒಪ್ಪಿಸುತ್ತಾನೆ" (ದಾನಿ. 4:32) ಎಂದು ಬರೆದದೆ. ಆದರೆ ಆ ಯೋಜನೆಯ ನೆರವೇರಿಕೆಗಿಂತ ಇನ್ನೂ ಉತ್ತಮವಾದ ಯೋಜನೆ ದೇವರ ಬಳಿಯಲ್ಲಿದೆ. ಅಂಥಾಃ ರಾಜ್ಯವು ಆಶೀರ್ವಾದಗಳನ್ನು ತರಬಹುದಿತ್ತು. ಅವು ಎಷ್ಟೇ ಒಳ್ಳೆಯವುಗಳಿದ್ದರೂ ಅವು ತಾತ್ಕಾಲಿಕ ಗುಣವುಳ್ಳದ್ದಾಗಿರುತಿತ್ತು. ಯಾಕೆಂದರೆ ಮಾನವ ಕುಲವೆಲ್ಲವೂ ಮರಣದ ದಂಡನೆಯುಲ್ಲಿತ್ತು. ಆತನ ರಾಜ್ಯದ ಅಶೀರ್ವಾದಗಳನ್ನು ನಿತ್ಯನಿರಂತರವೂ ಸಂಪೂರ್ಣವೂ ಆಗುವಂತೆ ಮಾಡಲು ಮಾನವಕುಲಕ್ಕೆ ಈಡುಬಲಿಯೊಂದನ್ನು ಅರ್ಪಿಸಬೇಕಾಗುತ್ತಿತ್ತು. ಈ ರೀತಿಯಲ್ಲಿ ಆದಾಮನಲ್ಲಿರುವವರೆಲ್ಲರಿಗೂ ನ್ಯಾಯಯುತವಾಗಿ ಆ ದಂಡನೆಯಿಂದ ಬಿಡುಗಡೆ ದೊರೆಯುತ್ತದೆ.

ಈ ರೀತಿಯಲ್ಲಿ ಯೇಸು ಪ್ರವಾದನೆಗಳನ್ನು ವಿವರಿಸುತ್ತಾ ಶಿಷ್ಯರ ನಿರೀಕ್ಷೆಗಳನ್ನು ಪುನರುಜ್ಜೀವಿತಗೊಳಿಸಿದನು ಎಂಬುದು ವ್ಯಕ್ತವಾಗಿದೆ. ಅನಂತರದಲ್ಲಿ ಆತನು ಅವರನ್ನು ಬಿಟ್ಟುಹೋಗಲಿರುವ ಸಂದರ್ಭದಲ್ಲಿ ಅವರು ಯೇಸುವನ್ನು "ಸ್ವಾಮೀ, ನೀನು ಇದೇ ಕಾಲದಲ್ಲಿ ಇಸ್ರಾಯೇಲ್ ಜನರಿಗೆ ರಾಜ್ಯವನ್ನು ಸ್ಥಾಪಿಸಿ ಕೊಡುವಿಯೋ?" ಎಂದು ಕೇಳಿದಾಗ ಆತನು ನೀಡಿದ ಉತ್ತರವು ಸ್ಪಷ್ಟವಾಗಿಲ್ಲದಿದ್ದರೂ, ಆ ಉತ್ತರವು ಅವರ ನಿರೀಕ್ಷೆಗೆ ವಿರೋಧವಾದುದಾಗಿರಲಿಲ್ಲ. ಆತನು ಅವರಿಗೆ – ತಂದೆಯು ಸ್ವಂತ ಅಧಿಕಾರದಲ್ಲಿಟ್ಟುಕೊಂಡಿರುವ ಕಾಲಗಳನ್ನೂ ಸಮಯಗಳನ್ನೂ ತಿಳುಕೊಳ್ಳುವುದು ನಿಮ್ಮ ಕೆಲಸವಲ್ಲ" ಎಂದು ಉತ್ತರಿಸುತ್ತಾನೆ (ಅ.ಕೃ. 1:6,7).

ನಿಜವೇ, ಮೊದಲಿಗೆ ಶಿಷ್ಯರು ಇಡೀ ಯೆಹೂದಿ ರಾಷ್ಟ್ರದೊಂದಿಗೆ ಸಾಮಾನ್ಯವಾಗಿ ದೇವರ ರಾಜ್ಯವನ್ನು ಪ್ರತ್ಯೇಕವಾಗಿ ಐಹಿಕ ರಾಜ್ಯವೆಂದು ಭಾವಿಸುವಲ್ಲಿ ಅಪೂರ್ಣ ಪರಿಕಲ್ಪನೆಯನ್ನು ಹೊಂದಿದ್ದನು. ಅದೊಂದು ಪ್ರತ್ಯೇಕವಾದ ಭೂಲೋಕದ ರಾಜ್ಯವೆಂಬ ಊಹನೆಯಲ್ಲಿದ್ದರು ಮತ್ತು ಈ ದಿನಗಳಲ್ಲಿಯೂ ಕೆಲವರು ವಿರೋಧ ದಿಕ್ಕಿನಲ್ಲಿ ಆಲೋಚಿಸುವವರಾಗಿ ಅದೊಂದು ಪ್ರತ್ಯೇಕವಾದ ಪರಲೋಕದ ರಾಜ್ಯವಾಗಿದೆ ಎಂದು ತಪ್ಪಾಗಿ ಭಾವಿಸುತ್ತಾರೆ. ನಮ್ಮ ಕರ್ತನಾದ ಯೇಸುವಿನ ಅನೇಕ ಸಾಮ್ಯಗಳು ಮತ್ತು ಗೂಢಾರ್ಥದ ಹೇಳಿಕೆಗಳು ಉಚಿತ ಸಮಯದಲ್ಲಿ ಈ ತಪ್ಪು ತಿಳುವಳಿಕೆಗಳನ್ನು ಸರಿಪಡಿಸುವ ಉದ್ದೇಶವುಳ್ಳವುಗಳಾಗಿದ್ದವು. ಆದರೆ ಆತನು ಸದಾ ಈ ಲೋಕದಲ್ಲಿ ಸ್ಥಾಪಿತವಾಗುವ ಒಂದು ರಾಜ್ಯದ, ಮಾನವರನ್ನು ಆಳುವ ಒಂದು ಸರ್ಕಾರದ ಕಲ್ಪನೆಯುಳ್ಳವನಾಗಿದ್ದನು. ಆತನು ಅವರನ್ನು ಈ ರಾಜ್ಯದಲ್ಲಿ ಪಾಲುದಾರರಾಗುವಂತೆ ಪ್ರೇರೇಪಿಸಿದ್ದಲ್ಲದೆ ಅದರ ಸ್ಥಾಪನೆಗಾಗಿ ಪ್ರಾರ್ಥಿಸಬೇಕೆಂದು – ನಿನ್ನ ರಾಜ್ಯವು ಬರಲಿ, ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ, ಭೂಲೋಕದಲ್ಲಿಯೂ ನೆರವೇರಲಿ" (ಮತ್ತಾಯ 6:10) ಎಂಬ ಪ್ರಾರ್ಥನೆಯನ್ನು ಅವರಿಗೆ ಕಲಿಸಿಕೊಟ್ಟನು.

ಯೆಹೂದ್ಯರಲ್ಲಿ ಲೌಕಿಕ ಜ್ಞಾನಿಗಳಿಗೆ, ನಮ್ಮ ಕರ್ತನು ಒಬ್ಬ ಮೋಸಗಾರ ಮತ್ತು ಮತಾಂಧನು ಎಂಬುದಾಗಿ ಕಂಡುಬಂದಿತು ಮತ್ತು ಅವರು ಆತನ ಶಿಷ್ಯರನ್ನು ಕೇವಲ ಮೋಸಹೋದವರೆಂದು ಪರಿಗಣಿಸಿದರು. ಆತನ ಜ್ಞಾನ, ಕಾರ್ಯದಕ್ಷತೆ ಮತ್ತು ಆತನು ಮಾಡಿದ ಅದ್ಭುತ ಕಾರ್ಯಗಳನ್ನು ಅವರು ಸರಿಯಾಗಿ ಅಲ್ಲಗೆಳೆಯಲಾರದೇ ಹೋದರು, ಅಲ್ಲದೇ ಅದನ್ನು ಅವರಿಗೆ ಸಮಂಜಸವಾಗಿ ಲೆಕ್ಕಿಸಲಾಗಲಿಲ್ಲ. ಆದಾಗ್ಯೂ, ಅವರ ಅಪನಂಬಿಕೆಯ ದೃಷ್ಟಿಯಲ್ಲಿ, ತಾನೇ ಈ ಲೋಕದ ವಾರಸುದಾರನು ಮತ್ತು ಈ ಲೋಕವನ್ನೇ ಆಳುವ

ವಾಗ್ದತ್ತ ರಾಜ್ಯವನ್ನು ನಾನು ಸ್ಥಾಪಿಸುತ್ತೇನೆ ಮತ್ತು ದೀನತೆಯೊಡನೆ ಜೀವಿಸಿದಂತಹ ಆತನ ಅನುಯಾಯಿಗಳು ಆ ರಾಜ್ಯದಲ್ಲಿ ಆತನೊಂದಿಗೆ ಆಳ್ವಿಕೆ ಮಾಡುವರು ಎಂಬ ಆತನ ಹಕ್ಕೇಳಿಕೆ ಇವುಗಳನ್ನು ಪರಿಗಣಿಸುವುದು ಅವರಿಗೆ ಬಹಳಷ್ಟು ಅಸಂಬದ್ಧವಾಗಿ ಕಂಡುಬಂದವು. ಶಿಸ್ತಿನ ಯೋಧರನ್ನೂ, ಸಮರ್ಥ ಸೇನಾ ನಾಯಕರುಗಳನ್ನೂ ಹೊಂದಿದ್ದ ರೋಮ್ ತನ್ನ ಅಪರಿಮಿತವಾದ ಐಶ್ವರ್ಯದೊಂದಿಗೆ ಈ ಪ್ರಪಂಚದ ಯಜಮಾನನಾಗಿತ್ತು ಮತ್ತು ಪ್ರತಿನಿತ್ಯ ಇನ್ನೂ ಪ್ರಬಲವಾಗಿ ಬೆಳೆಯುತ್ತಾ ಇತ್ತು. ಹಾಗಾದರೆ ಈ ನಜರಾಯನು ಯಾರು? ಯಾವುದೇ ಹಣ ಅಥವಾ ಪ್ರಭಾವವಿಲ್ಲದ ಆದರೆ ಕೇವಲ ಆತನ ಹಿಂಬಾಲಕರಾಗಿದ್ದ ಆ ಸಾಮಾನ್ಯ ಬೆಸ್ತರುಗಳು ಯಾರು? ದೀರ್ಘಕಾಲದ ಹಿಂದೆ ವಾಗ್ದಾನಪಡಿಸಿದ ಈ ಲೋಕವು ಎಂದೂ ಅರಿಯದ ಭವ್ಯವಾದ ಮತ್ತು ಬಲಶಾಲಿಯಾದ ರಾಜ್ಯದ ಸ್ಥಾಪನೆಯ ಬಗ್ಗೆ ಮಾತನಾಡುವ ಇವರುಗಳು ಯಾರು?

ಫರಿಸಾಯರುಗಳು, ಕರ್ತನ ಹಕ್ಕೇಳಿಕೆಗಳ ಬಲಹೀನತೆಗಳನ್ನು ಬಯಲಿಗೆ ತರುವ ಆಶಯದೊಂದಿಗೆ ಆ ಮೂಲಕ ಆತನ ಅನುಯಾಯಿಗಳು ಮೋಸ ಹೋಗದಂತೆ ತಪ್ಪಿಸಲು ಆತನನ್ನು – ನೀನು ಬೋಧಿಸುವ ಆ ರಾಜ್ಯವು ಯಾವಾಗ ಕಾಣಿಸಿಕೊಳ್ಳುತ್ತದೆ ನಿನ್ನ ಸೈನಿಕರು ಯಾವಾಗ ಬರುತ್ತಾರೆ? ದೇವರ ರಾಜ್ಯವು ಯಾವಾಗ ಕಾಣಬರುವದು? ಎಂದು ಆತನೊಡನೆ ತಗಾದೆ ತೆಗೆದಾಗ ಅವರು ಆತನ ವಿರುದ್ಧ ದುರಭಿಪ್ರಾಯದವರಾಗಿಲ್ಲದಿದ್ದರೆ, ತಮಗಿದೆ ಎಂದು ಭಾವಿಸಿಕೊಂಡಿರುವ ಅವರ ಸ್ವಂತ ಬುದ್ಧಿವಂತಿಕೆಯಿಂದ ಕುರುಡಾಗದೇ ಇದ್ದಿದ್ದರೆ ನಮ್ಮ ಕರ್ತನು ನೀಡಿದ ಉತ್ತರವು (ಲೂಕ 17:20–30) ಅವರಿಗೆ ಒಂದು ನೂತನ ಆಲೋಚನೆಯನ್ನು ನೀಡುತ್ತಿತ್ತು. ಆತನು ಉತ್ತರಿಸಿ ಆತನ ರಾಜ್ಯವು ಅವರು ನಿರೀಕ್ಷಿಸುತ್ತಿದ್ದ ರೀತಿಯಲ್ಲಿ ಎಂದಿಗೂ ಬರುವಂಥಾದಲ್ಲ. ಆತನು ಬೋಧಿಸುತ್ತಿದ್ದ ಮತ್ತು ಆತನ ಅನುಯಾಯಿಗಳನ್ನು ಜೊತೆ ಬಾಧ್ಯಸ್ಥರಾಗುವಂತೆ ಆಹ್ವಾನಿಸುತ್ತಿದ್ದ ರಾಜ್ಯವು ಒಂದು ಅದೃಶ್ಯವಾದ ರಾಜ್ಯವಾಗಿದೆ. ಅವರು ಅದನ್ನು ನೋಡುತ್ತೇವೆಂದು ಅಪೇಕ್ಷಿಸಕೂಡದು ಎಂದು ಹೇಳಿದನು. ಆತನು ಅವರಿಗೆ – "ದೇವರ ರಾಜ್ಯವು ಪ್ರತ್ಯಕ್ಷವಾಗಿ ಬರುವಂಥದಲ್ಲ (ಬಾಹ್ಯ ನೋಟಕ್ಕೆ ಪ್ರಕಟವಾಗುವದಿಲ್ಲ). ಇಗೋ ಇಲ್ಲಿ ಇದೆ, ಅಗೋ ಅಲ್ಲಿ ಅದೆ ಹೇಳುವುದಕ್ಕಾಗದು. ದೇವರ ರಾಜ್ಯವು ನಿಮ್ಮಲ್ಲಿಯೇ ಅದೆ* ಎಂದು ತಿಳಿದುಕೊಳ್ಳಿರಿ ಎಂದು ಉತ್ತರಕೊಟ್ಟನು" (ಲೂಕ 17: 20–21). ಈ ಒಂದು ಮಾತಿನಲ್ಲಿ ಆತನ ಆ ರಾಜ್ಯವು ಬರುವಾಗ, ಅದು ಎಲ್ಲಾ ಕಡೆಗಳಲ್ಲಿಯೂ ಇರುತ್ತದೆ ಮತ್ತು ಎಲ್ಲೆಡೆ ಪ್ರಭಾವಶಾಲಿಯಾಗಿರುತ್ತದೆ.

ಆದಾಗ್ಯೂ ಅದು ಎಲ್ಲಿಯೂ ಕಾಣಿಸಿಕೊಳ್ಳುವುದಿಲ್ಲ ಎಂದು ತೋರಿಸಿದನು. ಈ ರೀತಿಯಲ್ಲಿ ಆತನು ಅವರಿಗೆ ತಾನು ಬೋಧಿಸಿದ ಆತ್ಮೀಕ ರಾಜ್ಯದ ಕಲ್ಪನೆಯನ್ನು ನೀಡಿದನು. ಆದರೆ ಅವರು ಅದಕ್ಕೆ ಸಿದ್ಧರಿರಲಿಲ್ಲ ಮತ್ತು ಅದನ್ನು ಸ್ವೀಕರಿಸಲಿಲ್ಲ. ಯೆಹೂದ್ಯರ ನಿರೀಕ್ಷೆಯಲ್ಲಿ ವಾಗ್ದತ್ತ ರಾಜ್ಯದ ಬಗ್ಗೆ ಅದು ಸೂಕ್ತಸಮಯದಲ್ಲಿ ಕಂಡು ಬರುತ್ತದೆ ಮತ್ತು ಕಾಣಬರುತ್ತದೆ ಎಂಬ ಒಂದು ರೀತಿಯ ನಿರೀಕ್ಷಣೆಯಲ್ಲಿ ಒಂದಂಶ ಸತ್ಯತೆ ಇತ್ತು. ಆದರೆ ನಮ್ಮ ಕರ್ತನು ಇಲ್ಲಿ ಆ ರಾಜ್ಯದ ಆತ್ಮೀಕ ಹಂತವನ್ನು ಉಲ್ಲೇಖಿಸುವವನಾಗಿದ್ದಾನೆ ಮತ್ತು ಅದು ಅದೃಶ್ಯವಾದುದು. ಈ ರೀತಿಯ ರಾಜ್ಯವು ಮೊದಲಿಗೆ ಸಿದ್ಧಗೊಳ್ಳುವುದಾಗಿದ್ದು ಅದರ ಪ್ರಸನ್ನತೆಯು ಅಗೋಚರವಾದದ್ದು ಮತ್ತು ಕೆಲವು ಸಮಯದವರೆಗೆ ಅದನ್ನು ಗ್ರಹಿಸಲಾಗದು. ಈ ಆತ್ಮೀಕ ಹಂತದ ದೇವರ ರಾಜ್ಯದಲ್ಲಿ ಬಾಧ್ಯಸ್ಥಿಕೆಯ ಸವಲತ್ತು ಕೇವಲ ಒಂದು ಅವಕಾಶ ಮಾತ್ರವೇ ಆಗಿತ್ತು ಮತ್ತು ಆಗ ಪ್ರಾರಂಭವಾಗಲಿರುವ ಸಮಗ್ರ ಸುವಾರ್ತಾ ಯುಗದಲ್ಲಿನ ನಮ್ಮ ಮಹಾಕರೆಗೆ ಒಂದು ನಿರೀಕ್ಷೆಯಾಗಿದೆ. ಆದುದರಿಂದ ಯೇಸು ಪ್ರತ್ಯೇಕವಾಗಿ ಈ ಬಗ್ಗೆ ಉಲ್ಲೇಖಿಸಿದ್ದಾನೆ (ಲೂಕ 16:16). ನಾವು ಮುಂದುವರೆಸಿದಂತೆ ಇದು ಇನ್ನೂ ಹೆಚ್ಚು ಸ್ಪಷ್ಟವಾಗಿ ಕಂಡುಬರುತ್ತದೆ.

ಬಹುಶಃ ಇದು ಬಲು ವಿಶೇಷವಾಗಿ ಫರಿಸಾಯರಲ್ಲಿರುವ ಈ ವಿರೋಧಾತ್ಮಕ ಸಾರ್ವಜನಿಕ ಭಾವನೆಗಳ ನಿಮಿತ್ತ, ನಿಕೊದೇಮನು ರಾತ್ರಿಯ ವೇಳೆಯಲ್ಲಿ ಯೇಸುವಿನ ಬಳಿಗೆ ಬಂದನು. ಆತನು ಒಂದು ಧರ್ಮರಹಸ್ಯವನ್ನು ಬೇಧಿಸುವ ಕಾತರದಲ್ಲಿದ್ದ ನಾದರೂ ಸಾರ್ವಜನಿಕವಾಗಿ ಅಂಥಾಃ ಹೇಳಿಕೆಗಳು ತನ್ನ ಮನಸ್ಸಿನ ಮೇಲೆ ಒತ್ತಡ ಹಾಕುತ್ತಿದೆ ಎಂಬುದನ್ನು ಒಪ್ಪಿಕೊಳ್ಳಲು ನಾಚಿಕೆಪಡುವವನಾಗಿದ್ದನು. ಕರ್ತನ ಮತ್ತು ನಿಕೊದೇಮನ ನಡುವೆ ಸಂಭಾಷಣೆಯು

* The Diaglott ಮತ್ತು Rotherham's translation ಇವುಗಳು 'Among you' (ನಿಮ್ಮಲ್ಲಿಯೇ) ಎಂಬ ಪದವನ್ನು "In your midst" (ನಿಮ್ಮ ಮಧ್ಯದಲ್ಲಿಯೇ) ಎಂದು ಭಾಷಾಂತರಿಸುತ್ತದೆ. ಅದು ಖಂಡಿತವಾಗಿಯೂ ಯೇಸು ಇಷ್ಟರಲ್ಲಿಯೇ ಸ್ಥಾಪಿಸಲಿದ್ದೇನೆಂದು ಹೇಳುತ್ತಿರುವ ರಾಜ್ಯವು ಫರಿಸಾಯರ ಹೃದಯದಲ್ಲಿದೆ ಎಂದು ಒತ್ತಾಯಿಸುವ ಯಾವುದೇ ವಿಚಾರಸರಣಿಯನ್ನು ಆತನು ಖಂಡಿತವಾಗಿಯೂ ಒಪ್ಪುವುದಿಲ್ಲ, ಯಾಕೆಂದರೆ ಅವರುಗಳು ಕಪಟಿಗಳು ಮತ್ತು ಸುಣ್ಣಾ ಬಳಿದ ಸಮಾಧಿಗಳಂತಿದ್ದಾರೆ ಎಂದು ಆತನೇ ಅವರ ಬಗ್ಗೆ ವಾಗ್ಧೋರಣೆ ಮಾಡಿದ್ದಾನೆ. ಆದರೆ ಈ ರಾಜ್ಯವು ಸ್ಥಾಪನೆಗೊಂಡಾಗ ಎಲ್ಲರನ್ನೂ ಆಳುವ ಮತ್ತು ನ್ಯಾಯನೀಡುವ ಎಲ್ಲಾ ವರ್ಗಗಳ ಮಧ್ಯದಲ್ಲಿರುತ್ತದೆ.

(ಯೋಹಾನ 3), ಭಾಗಶಃ ದಾಖಲಾಗಿದೆಯಾದರೂ, ಒಂದು ರೀತಿಯಲ್ಲಿ ದೇವರ ರಾಜ್ಯದ ಲಕ್ಷಣಗಳ ಇನ್ನಷ್ಟು ಒಳನೋಟವನ್ನು ನೀಡುವುದಾಗಿದೆ. ಈ ಸಂಭಾಷಣೆಯ ಮುಖ್ಯಾಂಶಗಳನ್ನು ಸ್ಪಷ್ಟವಾಗಿ ಉಲ್ಲೇಖಿಸಲಾಗಿದ್ದು ಇದರಿಂದ ನಾವು ಅದನ್ನು ಮನಃಪೂರ್ವಕವಾಗಿ ಒಟ್ಟುಗೂಡಿಸಿ ಅದನ್ನು ಈ ಕೆಳಕಂಡಂತೆ ಯುಕ್ತವಾಗಿ ಭಾವಾರ್ಥಿಸಬಹುದು :–

**ನಿಕೋದೇಮನು** – "ಗುರುವೇ, ನೀನು ದೇವರ ಕಡೆಯಿಂದ ಬಂದಿರುವ ಬೋಧಕನೆಂದು ನಮಗೆ ತಿಳಿದದೆ; ಯಾಕೆಂದರೆ, ನೀನು ಮಾಡುವಂತ ಅದ್ಭುತ ಕಾರ್ಯಗಳನ್ನು ದೇವರು ಆತನ ಸಂಗಡ ಇರದ ಹೊರತು ಯಾರೂ ಮಾಡಲಾರರು. "ಆದಾಗ್ಯೂ ನಿನ್ನ ಕೆಲವು ಹೇಳಿಕೆಗಳು ನನಗೆ ಬಹಳ ಅಸಂಬದ್ಧವಾಗಿ ಕಂಡುಬರುತ್ತಿವೆಯಾದುದರಿಂದ, ಆ ಬಗ್ಗೆ ನಿನ್ನಿಂದ ವಿವರಣೆ ಪಡಕೊಳ್ಳಲು ಬಂದಿದ್ದೇನೆ. ಉದಾಹರಣೆಗೆ, ನೀನು ಮತ್ತು ನಿನ್ನ ಶಿಷ್ಯರು 'ದೇವರ ರಾಜ್ಯವು ಸಮೀಪದಲ್ಲಿಯೇ ಇದೆ' ಎಂದು ಸಾರುತ್ತಿದ್ದೀರಿ. ಆದರೆ ನಿಮ್ಮ ಬಳಿ ಯಾವುದೇ ಸೈನ್ಯವಿಲ್ಲ, ಅಥವಾ ಸಂಪತ್ತಿಲ್ಲ, ಪ್ರಭಾವವಿಲ್ಲ, ಮತ್ತು ಎಲ್ಲಾ ರೀತಿಯಲ್ಲಿಯೂ ಇದು ಅಸತ್ಯವಾದುದೆಂದು ಮತ್ತು ಇದರಿಂದ ನೀವು ಜನರನ್ನು ಮೋಸಗೊಳಿಸುತ್ತೀರೆಂದು ಕಂಡುಬರುತ್ತಿದೆ. ಫರಿಸಾಯರು ಸಾಮಾನ್ಯವಾಗಿ ನಿಮ್ಮನ್ನು ಮೋಸಗಾರರೆಂದು ಪರಿಗಣಿಸುತ್ತಾರೆ, ಆದರೂ ನಿನ್ನ ಬೋಧನೆಗಳಲ್ಲಿ ಸ್ವಲ್ಪವಾದರೂ ಸತ್ಯವಿದೆಯೆಂದು ನನಗೆ ಖಾತ್ರಿಯಿದೆ. ಯಾಕೆಂದರೆ, ನೀನು ಮಾಡುವ ಅದ್ಭುತ ಕೃತ್ಯಗಳನ್ನು "ದೇವರು ಆತನ ಸಂಗಡ ಇರದ ಹೊರತು ಬೇರೆ ಯಾವ ಮನುಷ್ಯನೂ ಮಾಡಲಾರನು". ನನ್ನ ಈ ಭೇಟಿಯ ಉದ್ದೇಶವು ಯಾವ ರೀತಿಯಲ್ಲಿ ಮತ್ತು ಯಾವಾಗ ಮತ್ತು ದೇವರ ರಾಜ್ಯವು ಹೇಗೆ ಸ್ಥಾಪನೆಯಾಗುತ್ತದೆ ಎಂದು ತಿಳುಕೊಳ್ಳುವುದಾಗಿದೆ ಎಂದನು.

**ಯೇಸು** – ದೇವರ ರಾಜ್ಯದ ಬಗ್ಗೆ ಸಂಪೂರ್ಣವಾಗಿ ಅರಿತುಕೊಳ್ಳಬೇಕೆಂದಿರುವ ನಿನ್ನ ಮನವಿಗೆ ಈಗಲೇ ನಿನಗೆ ತೃಪ್ತಿಯಾಗುವಂತೆ ಉತ್ತರಿಸಲಾಗದು. ನನಗೆ ಆ ಬಗ್ಗೆ ಪೂರ್ಣವಾಗಿ ತಿಳಿದಿಲ್ಲವೆಂದಲ್ಲ, ಆದರೆ ನಿನ್ನ ಪ್ರಸ್ತುತ ಪರಿಸ್ಥಿತಿಯಲ್ಲಿ ನಾನು ಆ ಬಗ್ಗೆ ನಿನಗೆ ಪೂರ್ಣವಾಗಿ ವಿವರಿಸಿದರೂ ನೀನು ಅವುಗಳನ್ನು ಅರ್ಥಮಾಡಿಕೊಳ್ಳುವುದು ಅಥವಾ ಮೆಚ್ಚಿಕೊಳ್ಳಲು ಸಾಧ್ಯವಿಲ್ಲ. "ಮನುಷ್ಯನು ಮೇಲಿನಿಂದ ಹುಟ್ಟದ* ಹೊರತು ಅದನ್ನು ನೋಡಲಾರನು (ಗ್ರೀಕ್ 'eidon'†), ತಿಳುಕೊಳ್ಳಲಾರನು ಅಥವಾ ದೇವರ ರಾಜ್ಯದೊಂದಿಗೆ ಪರಿಚಯಹೊಂದಲಾರನು.

ನನ್ನ ಶಿಷ್ಯರುಗಳು ಸಹಾ ಇದುವರೆಗೆ ತಾವು ಸಾರುತ್ತಿರುವ ದೇವರ ರಾಜ್ಯದ ಗುಣಲಕ್ಷಣಗಳ ಬಗ್ಗೆ ಅಸ್ಪಷ್ಟವಾದ ಕಲ್ಪನೆಗಳನ್ನು ಹೊಂದಿದ್ದಾರೆ. ನಾನು ಅವನ್ನು ನಿನಗೆ ಹೇಳದೇ ಇರುವಂತೆ ಅವರಿಗೂ ಹೇಳಲಾರೆನು. ಅವರುಗಳು ಸಹಾ ಅದೇ ಕಾರಣಕ್ಕೆ ಅವನ್ನು ಈಗಲೇ ಅರ್ಥಮಾಡಿಕೊಳ್ಳಲಾರರು. ಆದರೆ, ನಿಕೊದೇಮನೇ, ದೇವರ ನಿರ್ವಹಣೆಯಲ್ಲಿರುವ ಒಂದು ವಿಶಿಷ್ಟತೆಯೆಂದರೆ, ಅವರಿಗೆ ಇನ್ನೂ ಹೆಚ್ಚು ಬೆಳಕು ನೀಡುವ ಮೊದಲೇ ಅವರುಗಳು ಈಗಾಗಲೇ ಹೊಂದಿರುವ ಬೆಳಕಿಗೆ ವಿಧೇಯತೆಯನ್ನು ಬಯಸುತ್ತಾನೆ ಮತ್ತು ದೇವರ ರಾಜ್ಯದಲ್ಲಿ ಪಾಲುದಾರರಾಗಲು

---

* gennao ಎಂಬ ಗ್ರೀಕ್ ಪದವು ಮತ್ತು ಅದರ ಮೂಲಉತ್ಪತ್ತಿ ಶಬ್ದಗಳು ಕೆಲವೊಮ್ಮೆ 'begotten' ಎಂಬುದಾಗಿಯೂ, ಕೆಲವೊಮ್ಮೆ 'Born' ಎಂಬುದಾಗಿಯೂ ತರ್ಜುಮೆಗೊಂಡಿದೆ. ಇದು ನಿಜವಾಗಿಯೂ ಇವೆರಡರ ಕಲ್ಪನೆಯನ್ನೂ ಹೊಂದಿದೆ ಮತ್ತು ಈ ಎರಡೂ ಆಂಗ್ಲಪದಗಳಿಂದಲೂ ಅದು ಕಂಡು ಬರುವ ವಾಕ್ಯವೃಂದದ ಅರ್ಥದಲ್ಲಿಯೂ ಅದನ್ನು ಭಾಷಾಂತರಗೊಳಿಸಬಹುದಾಗಿದೆ. ಪಡೆದುಕೋ 'begetting' ಮತ್ತು ಹುಟ್ಟು 'birth' ಎಂಬುವವುಗಳ ಎರಡು ವಿಚಾರಗಳು ಯಾವಾಗಲೂ ಆ ಪದದಲ್ಲಿರುತ್ತದೆ. ಹೀಗಾಗಿ ಒಂದನ್ನು ಹೇಳಿದರೆ, ಮತ್ತೊಂದು ಯಾವಾಗಲೂ ಸೂಚಿತವಾಗುತ್ತದೆ. ಯಾಕೆಂದರೆ 'birth' (ಹುಟ್ಟು) ಎಂಬುದು 'begetting' (ಪಡೆದುಕೊಳ್ಳುವುದರ) ಸ್ವಾಭಾವಿಕ ಪರಿಣಾಮವಾಗಿದೆ ಮತ್ತು 'begetting' (ಪಡಕೊಳ್ಳುವುದು) ಎಂಬುದು 'birth' (ಹುಟ್ಟು) ಎಂಬುದರ ಸ್ವಾಭಾವಿಕ ಪರಿಣಾಮ ಮತ್ತು ಜನ್ಮಕ್ಕೆ ಸಹಜವಾದ ಪೂರ್ವಭಾವಿಯಾಗಿರುತ್ತದೆ. ಚುರುಕಾದ ನಿಯೋಗಿಯು 'gennao' ದ ಜೊತೆಯಾಗಿರುವ ಸಕ್ರಿಯ ಕಾರ್ಯಸ್ಥ ಪುರುಷನಾಗಿದ್ದರೆ ಅದನ್ನು 'begotten' ಎಂಬುದಾಗಿಯೂ ಅದು ಸ್ತ್ರೀಯಾಗಿದ್ದಾಗ 'born' ಎಂಬುದಾಗಿಯೂ ಭಾಷಾಂತರಿಸಬೇಕು. ಹೀಗಾಗಿ 1 ಯೋಹಾನ 2:29; 3:9; 4:7; 5:1. 18 ರಲ್ಲಿ, 'gennao' ಎಂಬುದು 'begotten' ಆಗಬೇಕು. ಯಾಕೆಂದರೆ ಪುರುಷನಾದ (ಪುಲ್ಲಿಂಗ) ದೇವರೇ ಆ ಸಕ್ರಿಯ ಕಾರ್ಯಸ್ಥನಾಗಿದ್ದಾನೆ.

ಕೆಲವೊಮ್ಮೆ, ಹೇಗೂ ಭಾಷಾಂತರವು ಪುಲ್ಲಿಂಗವಾಗಲೀ ಅಥವಾ ಸ್ತ್ರೀಲಿಂಗವಾಗಲೀ ಕಾರ್ಯದ ಸ್ವಭಾವದ ಮೇಲೆ ಆತುಕೊಂಡಿರುತ್ತದೆ. ಹೀಗಾಗಿ ಅದು ek- 'Out of water' 'out of flesh' 'out of spirit' (appendix p 366) ಸೂಚಿತವಾಗಿದೆ.

† ಇದೇ ಗ್ರೀಕ್ ಪದವನ್ನು ಅ.ಕೃ 15:6 ರಲ್ಲಿ 'ಪರಿಗಣಿಸುವುದಕ್ಕೆ' (know or understand) ಎಂದು ಭಾಷಾಂತರಿಸಲಾಗಿದೆ (ಅಂದರೆ ತಿಳಿದುಕೊಳ್ಳಲು ಅಥವಾ ಅರ್ಥ ಮಾಡಿಕೊಳ್ಳಲು). ಇದೇ ಪದವು ರೋಮಾ. 11:22 ರಲ್ಲಿ ಮತ್ತು 1 ಯೋಹಾನ 3:1 ರಲ್ಲಿ 'ಇಗೋ' (Behold) (consider, understand) ಎಂಬುದಾಗಿ ತರ್ಜುಮೆಗೊಂಡಿದೆ. ಅಪೋಸ್ತಲರುಗಳು ಮತ್ತು ಹಿರಿಯರು ಈ ವಿಷಯದ ಬಗ್ಗೆ 'ಆಲೋಚಿಸಲು' (ತಿಳಿಯಲು ಅಥವಾ ಅರ್ಥಮಾಡಿಕೊಳ್ಳಲು) ಒಟ್ಟಾಗಿ ಕೂಡಿಬಂದರು. ಇದೇ ಪದವನ್ನು ಆದುದರಿಂದ ದೇವರ ದಯೆಯನ್ನೂ ಕಾಠಿಣ್ಯವನ್ನೂ 'ನೋಡು' (ರೋಮಾ. 11:22) (ಆಲೋಚಿಸು, ತಿಳಿದುಕೋ, ಅರ್ಥಮಾಡಿಕೋ) ಎಂದಿದೆ. 1 ಯೋಹಾನ 3:1 ರಲ್ಲಿ "ದೇವರ ಮಕ್ಕಳೆಂಬ ಹೆಸರನ್ನು ನಮಗೆ ಕೊಡುವುದರಲ್ಲಿ ತಂದೆಯು ಎಂಥಾಃ ಪ್ರೀತಿಯನ್ನು ನಮ್ಮ ಮೇಲೆ ಇಟ್ಟಿದ್ದಾನೆ, ನೋಡಿರಿ" ಎಂದಿದೆ.

ಅರ್ಹರಾದವರೆಂದು ಎಣಿಸುವವರನ್ನು ಆಯ್ಕೆ ಮಾಡುವಲ್ಲಿ ನಂಬಿಕೆಯ ಅವಿರ್ಭಾವದ ಅಗತ್ಯವಿದೆ. ಅವರುಗಳು ದೇವರ ನಡೆಸುವಿಕೆಯನ್ನು ಹಂತ ಹಂತವಾಗಿ ಅನುಸರಿಸಲು ಸಿದ್ಧರಿರಬೇಕು. ಹಲವೊಮ್ಮೆ ಮುಂದಿನ ಒಂದು ಹೆಜ್ಜೆಯನ್ನು ಮಾತ್ರವೇ ಸ್ಪಷ್ಟವಾಗಿ ನೋಡಲು ಇಷ್ಟವುಳ್ಳವರಾಗಿರಬೇಕು. ಅವರು ನೋಡುವವರಾಗಿ ನಡೆಯದೆ ನಂಬುವವರಾಗಿಯೇ ನಡೆಯಬೇಕು.

**ನಿಕೊದೇಮ** – ಆದರೆ, ನಾನು ನಿನ್ನನ್ನು ಅರ್ಥಮಾಡಿಕೊಳ್ಳಲಾಗುತ್ತಿಲ್ಲ. ನಿನ್ನ ಮಾತಿನ ಅರ್ಥವೇನು? “ಮನುಷ್ಯನು ಮುದುಕನಾದ ಮೇಲೆ ಹುಟ್ಟುವುದು ಹೇಗೆ? ಅವನು ತನ್ನ ತಾಯಿಯ ಗರ್ಭದಲ್ಲಿ ತಿರುಗಿ ಸೇರಿ ಹುಟ್ಟುವುದಾದೀತೇ?” ಅಥವಾ ಸ್ನಾನಿಕನಾದ ಯೋಹಾನನು ಬೋಧಿಸಿದ, ನೀರಿನ ಸ್ನಾನದಲ್ಲಿ ಸೂಚಿಸಿದಂತೆ ಅದು ಸಾಂಕೇತಿಕವಾದ ಹುಟ್ಟುವಿಕೆಯಾಗಿದೆಯಾ?. ನಿನ್ನ ಶಿಷ್ಯರು ಬೋಧಿಸುತ್ತಾರೆ ಮತ್ತು ಅದೇ ಸಮಯದಲ್ಲಿ ದೀಕ್ಷಾಸ್ನಾನ ಮಾಡಿಸುತ್ತಾರೆಂಬುದನ್ನು ನಾನು ಗಮನಿಸಿದ್ದೇನೆ. ಈ ನೂತನ ಹುಟ್ಟುವಿಕೆಯು ನಿನ್ನ ರಾಜ್ಯವನ್ನು ನೋಡುವ ಅಥವಾ ಪ್ರವೇಶಿಸುವವರಿಗೆ ಅಗತ್ಯವಾಗಿದೆಯೋ?

**ಯೇಸು** – ನಮ್ಮ ದೇಶವು ಒಂದು ಪ್ರತಿಷ್ಠಪಟ್ಟ ದೇಶವಾಗಿದೆ, ಒಡಂಬಡಿಕೆಯ ಜನರಿದ್ದಾರೆ. ಅವರೆಲ್ಲರೂ ಐಗುಪ್ತವನ್ನು ಬಿಟ್ಟುಬರುವಾಗ ಸಮುದ್ರದಲ್ಲಿ ಮತ್ತು ಮೋಡದಲ್ಲಿ ದೀಕ್ಷಾಸ್ನಾನ ಹೊಂದಿದ್ದಾರೆ. ದೇವರು ಅವರನ್ನು ಸಿನಾಯ್‌ನಲ್ಲಿನ ಒಡಂಬಡಿಕೆಗೆ ಮಧ್ಯಸ್ಥಗಾರನಾದ ಮೋಶೆಯಲ್ಲಿ ಅಂಗೀಕರಿಸಿದ್ದಾನೆ; ಆದರೆ ಅವರು ತಮ್ಮ ಒಡಂಬಡಿಕೆಯನ್ನು ಮರೆತುಬಿಟ್ಟಿದ್ದಾರೆ, ಕೆಲವರು ಬಹಿರಂಗವಾಗಿ ಸುಂಕದವರಂತೆ ಮತ್ತು ಪಾಪಿಗಳಂತೆ ಜೀವಿಸುತ್ತಿದ್ದಾರೆ. ಇತರ ಅನೇಕರು ಸ್ವಯಂ ನೀತಿಯ ಕಪಟಿಗಳೂ ಆಗಿದ್ದಾರೆ. ಆದುದರಿಂದ ಯೋಹಾನನ ಬೋಧನೆಗಳೂ ಮತ್ತು ನನ್ನ ಶಿಷ್ಯರ ಬೋಧನೆಗಳೂ ‘ಪಶ್ಚಾತ್ತಾಪ’ದ ಬಗ್ಗೆ – ದೇವರ ಬಳಿಗೆ ಹಿಂತಿರುಗುವ ಮತ್ತು ಮಾಡಿಕೊಂಡಿರುವ ಒಡಂಬಡಿಕೆಯನ್ನು ಮಾನ್ಯ ಮಾಡುವುದರ ಬಗ್ಗೆ ಆಗಿದೆ ಮತ್ತು ಯೋಹಾನನ ದೀಕ್ಷಾಸ್ನಾನವು ಈ ಪಶ್ಚಾತ್ತಾಪವನ್ನೂ ಮತ್ತು ಹೃದಯದ ಮತ್ತು ಜೀವನದ ಸುಧಾರಣೆಯನ್ನೂ ಸೂಚಿಸುವುದಾಗಿದೆಯೇ ಹೊರತು ನೂತನ ಹುಟ್ಟನ್ನಲ್ಲ. ಆದರೆ, ಇದಕ್ಕಿಂತ ಹೆಚ್ಚಾದುದನ್ನು ನೀವು ಹೊಂದಿಕೊಳ್ಳಲಾರದ ಹೊರತು ನೀವು ಎಂದೂ ದೇವರ ರಾಜ್ಯವನ್ನು ನೋಡಲಾರಿರಿ. ಯೋಹಾನನ ದೀಕ್ಷಾಸ್ನಾನದಲ್ಲಿ ಸೂಚಿತವಾಗಿರುವ ಸುಧಾರಣೆಯ ಜೊತೆಗೆ ನೀವು ಆತ್ಮನಿಂದ ಹುಟ್ಟುವುದನ್ನು ಪಡೆಕೊಳ್ಳದ ಹೊರತು ನೀವು ನನ್ನ ರಾಜ್ಯವನ್ನು ನೋಡಲಾರಿರಿ. ಪಶ್ಚಾತ್ತಾಪವು ನಿಮ್ಮನ್ನು ನೀತಿನಿರ್ಣಯದ ಸ್ಥಿತಿಗೆ ತರುತ್ತದೆ; ಆ ಸ್ಥಿತಿಯಲ್ಲಿ ನೀವು ನನ್ನನ್ನು ಮೋಶೆಯ ಪ್ರತಿರೂಪನಾದ ಮೆಸ್ಸೀಯನೆಂದು ಕೂಡಲೇ ಅಂಗೀಕರಿಸುವಿರಿ; ಆ ರೀತಿ ನೀವು ನನ್ನಲ್ಲಿ ಪ್ರತಿಷ್ಠೆ ಹೊಂದಿಕೊಂಡು ನೀವು ತಂದೆಯಿಂದ ನೂತನ ಜೀವನಕ್ಕೆ ಮತ್ತು ದೈವಿಕ ಸ್ವಭಾವಕ್ಕೆ ಜನಿಸಿ, ಅದು ಅಭಿವೃದ್ಧಿಹೊಂದಿ ಚೈತನ್ಯಗೊಂಡಲ್ಲಿ ನೀವು ಮೊದಲನೆಯ ಪುನರುತ್ಥಾನದಲ್ಲಿ ನೂತನ ಸ್ವಭಾವವುಳ್ಳವರಾಗಿ, ಆತ್ಮೀಕ ಜೀವಿಗಳಾಗಿ ಹುಟ್ಟಿದ್ದೀರೆಂಬುದನ್ನು ನಿಶ್ಚಿತಪಡಿಸುತ್ತದೆ; ಹೀಗಾಗಿ ನೀವು ಆ ರಾಜ್ಯವನ್ನು ನೋಡುವುದು ಮಾತ್ರವಲ್ಲ ಆ ರಾಜ್ಯದಲ್ಲಿ ಪಾಲುದಾರರಾಗುತ್ತೀರಿ.

ಆತ್ಮನ ಈ ನೂತನ ಹುಟ್ಟುವಿಕೆಯಿಂದ ಬದಲಾವಣೆಯು ರೂಪಿತವಾಗಬೇಕಾಗಿರುವುದು ನಿಜವಾಗಿಯೂ ಅದ್ಭುತವಾಗಿದೆ, ನಿಕೊದೇಮನೇ, ಯಾಕೆಂದರೆ “ದೇಹದಿಂದ ಹುಟ್ಟಿದ್ದು ದೇಹವೇ, ಆದರೆ ಆತ್ಮನಿಂದ ಹುಟ್ಟಿದ್ದು ಆತ್ಮನೇ”. ಹಾಗಾದರೆ, “ನೀನು ಮೇಲಿನಿಂದ ಹುಟ್ಟಬೇಕು, ಆಗ ಮಾತ್ರವೇ, ನೀನು ವಿಚಾರಿಸುತ್ತಿರುವ ಸಂಗತಿಗಳನ್ನು ನೀನು ಅರ್ಥಮಾಡಿ ಕೊಳ್ಳುವಿ, ಮೆಚ್ಚಿಕೊಳ್ಳುವಿ. ‘ನೀನು ಹೊಸದಾಗಿ ಹುಟ್ಟಬೇಕು’ ಎಂಬ ನನ್ನ ಹೇಳಿಕೆಗೆ ನೀನು ದಿಗ್ಭ್ರಮೆಗೊಳ್ಳದಿರು. ದೇಹದಿಂದ ಹುಟ್ಟಿರುವ ನಿನ್ನ ಪ್ರಸ್ತುತ ಪರಿಸ್ಥಿತಿಗೂ, ದೇವರ ರಾಜ್ಯವನ್ನು ಪ್ರವೇಶಿಸುವ ಅಥವಾ ನಾನು ಬೋಧಿಸುವ ರಾಜ್ಯವನ್ನು ರಚಿಸುವ ಆತ್ಮನಿಂದ ಹುಟ್ಟಿದವರ ಪರಿಸ್ಥಿತಿಗೂ ಬಹಳಷ್ಟು ವ್ಯತ್ಯಾಸಗಳಿವೆ, ಅದು ಬಹಳ ಮಹತ್ವವಾದದ್ದು. ನಾನು ನಿನಗೆ ಒಂದು ದೃಷ್ಟಾಂತವನ್ನು ನೀಡುತ್ತೇನೆ. ಆಗ ನಿನಗೆ ಆತ್ಮನಿಂದ ಹುಟ್ಟಿ ಈ ರಾಜ್ಯವನ್ನು ಸ್ಥಾಪಿಸುವ ಜೀವಿಗಳ ಬಗ್ಗೆ ಕೆಲವು ಕಲ್ಪನೆಯನ್ನು ಪಡೆಯಬಹುದು – “ಗಾಳಿಯು ಮನಸ್ಸು ಬಂದಕಡೆ ಬೀಸುತ್ತದೆ. ನೀನು ಅದರ ಸಪ್ಪಳವನ್ನು ಕೇಳುತ್ತೀ; ಆದರೆ ಅದು ಎಲ್ಲಿಂದ ಬರುತ್ತದೋ ಎಲ್ಲಿಗೆ ಹೋಗುತ್ತದೋ ನಿನಗೆ ತಿಳಿಯದು. ಆತ್ಮನಿಂದ ಹುಟ್ಟಿದವರೂ ಅದರಂತೆಯೇ”. ಗಾಳಿಯು ಅತ್ತಿತ್ತ ಬೀಸುತ್ತಿರುವಾಗ ನೀನು ಅದನ್ನು ನೋಡಲಾಗುವುದಿಲ್ಲ. ಆದರೂ ಅದು ನಿಮ್ಮ ಮೇಲೆ ಪ್ರಭಾವ ಬೀರುತ್ತದೆ. ಅದು ಯಾವಾಗ ಬರುತ್ತದೆ, ಎಲ್ಲಿಗೆ ಹೋಗುತ್ತೆಂಬುದೂ ನಿನಗೆ ತಿಳಿಯುವುದಿಲ್ಲ. ಪುನರುತ್ಥಾನದಲ್ಲಿ ಹುಟ್ಟುವವರ ಬಗ್ಗೆ ಇದು ನಾನು

ನಿನಗೆ ಕೊಡುವ ಒಳ್ಳೆಯ ದೃಷ್ಟಾಂತವೇ ಆಗಿದೆ. ಅಂಥವರು ನಾನು ಬೋಧಿಸುವ ರಾಜ್ಯವನ್ನು ಪ್ರವೇಶಿಸುತ್ತಾರೆ ಅಥವಾ ರಚಿಸುತ್ತಾರೆ. ಅವರೆಲ್ಲರೂ ಗಾಳಿಯಂತೆ ಕಣ್ಣಿಗೆ ಕಾಣಿಸುವುದಿಲ್ಲ, ಆತ್ಮನಿಂದ ಹುಟ್ಟದೇ ಇರುವವರು ಅವರು ಎಲ್ಲಿಂದ ಬಂದರು, ಎಲ್ಲಿಗೆ ಹೋದರು ಎಂಬುದನ್ನು ತಿಳಿಯಲಾರರು.

**ನಿಕೊದೇಮ** – ಇದು ಹೇಗೆ ಸಾಧ್ಯ? – ಅದೃಶ್ಯ ಜೀವಿಗಳು!

**ಯೇಸು** – ''ಇಸ್ರಾಯೇಲ್ ಜನಕ್ಕೆ ಬೋಧಕನಾಗಿರುವ ನಿನಗೆ ಇದು ತಿಳಿಯುವುದಿಲ್ಲವೋ?" ಆ ಆತ್ಮಜೀವಿಗಳು ಉಪಸ್ಥಿತರಿದ್ದರೂ ಅದೃಶ್ಯವಾಗಿರುತ್ತವೆ. ಇತರರಿಗೆ ಬೋಧಿಸುವ ಪ್ರಯತ್ನಮಾಡುವವನಾಗಿರುವ ನೀನು ಎಲೀಷ ಮತ್ತು ಆತನ ಸೇವಕನ ಬಗ್ಗೆ ಅಥವಾ ಬಿಳಾಮನ ಕತ್ತೆಯ ಬಗ್ಗೆ ಓದಲಿಲ್ಲವೋ? ಪರಿಶುದ್ಧ ಗ್ರಂಥದಲ್ಲಿನ ಅನೇಕ ಘಟನೆಗಳು ಈ ವಿಚಾರಸರಣಿಯನ್ನು, ಅಂದರೆ ಆ ಆತ್ಮೀಕ ಜೀವಿಗಳು ಮಾನವರ ಮಧ್ಯದಲ್ಲಿರುತ್ತವೆ ಆದರೂ ಅದೃಶ್ಯವಾಗಿರುತ್ತವೆ ಎಂಬುದನ್ನು ವಿಶದಗೊಳಿಸುತ್ತದಲ್ಲವೇ? ಇದಲ್ಲದೇ, ನೀನೊಬ್ಬ ಫರಿಸಾಯನು, ಅವರು ದೇವದೂತರುಗಳು ಆತ್ಮೀಕ ಜೀವಿಗಳೆಂದು ನಂಬುತ್ತಾರೆ. ಆದರೆ, ನಾನು ನಿನಗೆ ಮೊದಲು ಹೇಳಿದ್ದನ್ನು ಇದು ವಿವರಿಸುತ್ತದೆ: ಮಾನವನು ಮೇಲಿನಿಂದ ಹುಟ್ಟಿದವನಾಗದಿದ್ದರೆ ಆತನು ದೇವರ ರಾಜ್ಯವನ್ನು ಮತ್ತು ಅದಕ್ಕೆ ಸಂಬಂಧಿಸಿದ ಅನೇಕ ಸಂಗತಿಗಳನ್ನು ನೋಡಲು (ತಿಳಿದುಕೊಳ್ಳಲು ಅದರೊಂದಿಗೆ ಪರಿಚಯಹೊಂದಿಕೊಳ್ಳಲು ಅಥವಾ ಸಮಂಜಸವಾದುದೆಂದು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ).

ನೀನು ಅದರೊಳಗೆ ಪ್ರವೇಶಿಸಿ, ನಾನು ಪ್ರಕಟಿಸುವ ಆ ರಾಜ್ಯದಲ್ಲಿ ನನ್ನೊಂದಿಗೆ ಜೊತೆಬಾಧ್ಯಸ್ಥನಾದರೆ, ನೀನು ಬೆಳಕನ್ನು ಹಂತ ಹಂತವಾಗಿ ಅನುಸರಿಸಲೇ ಬೇಕು. ನೀನು ಹಾಗೆ ಮಾಡುವಾಗ, ಹೆಚ್ಚಾದ ಬೆಳಕು ಬರುತ್ತದೆ, ಮತ್ತು ಇದು ನೀನು ಎಷ್ಟು ಶೀಘ್ರವಾಗಿ ಅದಕ್ಕಾಗಿ ಸಿದ್ಧತೆ ಮಾಡಿಕೊಳ್ಳುತ್ತಿಯೋ ಅದಕ್ಕನುಸಾರವಾಗಿರುತ್ತದೆ. ಈಗ ಯುಕ್ತವಾಗಿರುವ ಸಂಗತಿಗಳನ್ನು ನಾನು ಬೋಧಿಸುತ್ತಿದ್ದೇನೆ ಮತ್ತು ಅದ್ಭುತ ಕಾರ್ಯಗಳನ್ನು ಮಾಡುತ್ತಿದ್ದೇನೆಂಬುದನ್ನು ನೀನು ಅರ್ಥಮಾಡಿಕೊಳ್ಳಬಹುದು. ಮತ್ತು ನೀನು ನನ್ನನ್ನು ದೇವರಿಂದ ಬಂದ ಒಬ್ಬ ಬೋಧಕನೆಂದು ನನ್ನನ್ನು ಅಂಗೀಕರಿಸುತ್ತೀ. ಆದರೂ ನೀನು ನಿನ್ನ ನಂಬಿಕೆಯನ್ನು ಕಾರ್ಯಗತಗೊಳಿಸಿರುವುದಿಲ್ಲ ಮತ್ತು ಮುಕ್ತವಾಗಿ ನನ್ನ ಶಿಷ್ಯನೆಂದು, ಅನುಯಾಯಿಯೆಂದು ಇನ್ನೂ ಪ್ರಕಟಿಸಿಕೊಂಡಿಲ್ಲ. ನೀನು ನೋಡುತ್ತಿರುವ ಎಲ್ಲಾ ಸಂಗತಿಗಳಿಗೆ ತಕ್ಕಂತೆ ಜೀವಿಸುವುದಿಲ್ಲವಾದರೆ ಇದಕ್ಕಿಂತ ಹೆಚ್ಚಾದುದನ್ನು ನೋಡಲು ನೀನು ನಿರೀಕ್ಷಿಸುವಂತಿಲ್ಲ; ಆಗ ದೇವರು ನಿನಗೆ ಮುಂದಿನ ಹೆಜ್ಜೆಗೆ ಬೇಕಾದ ಹೆಚ್ಚಿನ ಬೆಳಕನ್ನು ಮತ್ತು ನಿದರ್ಶನವನ್ನು ನೀಡುವನು. "ನಿಜ ನಿಜವಾಗಿ ನಿನಗೆ ಹೇಳುತ್ತೇನೆ, ನಾವು ತಿಳಿದ ಸಂಗತಿಗಳ ಬಗ್ಗೆಯೇ ನಾವು ಬೋಧಿಸುತ್ತೇವೆ. ನಾವು ಕಂಡವುಗಳನ್ನೇ ನಿಮಗೆ ಸಾಕ್ಷಿ ಹೇಳುತ್ತೇವೆ. ಆದರೆ, ಫರಿಸಾಯರಾದ ನೀವು ನಮ್ಮ ಸಾಕ್ಷಿಯನ್ನು ಒಪ್ಪುವುದಿಲ್ಲ. ನಾನು ನಿಮಗೆ ಹೇಳುವ ಲೌಕಿಕ ಸಂಗತಿಗಳನ್ನು ನೀವು ನಂಬದೇ ಹೋದರೆ ನಾನು ಪರಲೋಕದ ಸಂಗತಿಗಳನ್ನು ಹೇಳುವಾಗ ನೀವು ಅವನ್ನು ಹೇಗೆ ನಂಬುತ್ತೀರಿ?" ನಾನು ಪರಲೋಕದ ಸಂಗತಿಗಳನ್ನು ನಿಮಗೆ ಹೇಳಲು ಪ್ರಯತ್ನಿಸುವುದು ನಿಷ್ಪ್ರಯೋಜಕವಾಗಿದೆ. ಅವು ನಿಮಗೆ ಮನವರಿಕೆಯಾಗುವುದಿಲ್ಲ ಮತ್ತು ನನ್ನ ಬೋಧನೆಗಳು ನಿಮಗೆ ಹೆಚ್ಚು ಮೂರ್ಖತನದ್ದಾಗಿ ಕಂಡುಬರುತ್ತವೆ, ನಾವು ನಿಮಗೆ ಕಲಿಸಿದ ಭೂಲೋಕದ ಲಕ್ಷಣವುಳ್ಳ ಸಂಗತಿಗಳನ್ನು ಬೋಧಿಸಿದಾಗ ಅಥವಾ ಲೌಕಿಕ ದೃಷ್ಟಾಂತಗಳನ್ನು ನೀಡುವಾಗ ಅವುಗಳನ್ನು ನೀವು ಅರ್ಥ ಮಾಡಿಕೊಳ್ಳುತ್ತೀರಿ, ಆದರೂ ಅವುಗಳು ನೀವು ಮುಖ್ಯವಾಗಿ ನನ್ನ ಶಿಷ್ಯರಾಗಿ, ಅನುಯಾಯಿಗಳಾಗಿ ನಡೆದುಕೊಳ್ಳುವಂತೆ ನಿಮ್ಮ ಮನಸ್ಸಿಗೆ ಸಾಕಷ್ಟು ನಿಶ್ಚಿತಾಭಿಪ್ರಾಯಗಳನ್ನುಂಟು ಮಾಡುವುದಿಲ್ಲವಾದರೆ, ನೀವು ಏನೂ ತಿಳಿಯದ ಪಾರಮಾರ್ಥಿಕ ಸಂಗತಿಗಳನ್ನು ಹೇಳುವಾಗಲೂ ಅವುಗಳು ಇನ್ನೂ ಹೆಚ್ಚಾಗಿ ನಿಮಗೆ ಮನದಟ್ಟಾಗುವುದಿಲ್ಲ; ಯಾಕೆಂದರೆ ಯಾರೊಬ್ಬರೂ ಪರಲೋಕಕ್ಕೆ ಏರಿಹೋದವರಲ್ಲ, ಹೀಗಾಗಿ ಯಾರೂ ನನ್ನ ಸಾಕ್ಷ್ಯವನ್ನು ಸಮರ್ಥಿಸಲಾರರು. ಪರಲೋಕದಿಂದ ಇಳಿದು ಬಂದಿರುವ ನಾನು ಮಾತ್ರವೇ ಪರಲೋಕದ ಸಂಗತಿಗಳನ್ನು ಬಲ್ಲವನಾಗಿದ್ದೇನೆ. "ಪರಲೋಕದಿಂದ ಇಳಿದು ಬಂದವನೇ ಅಂದರೆ ಮನುಷ್ಯಕುಮಾರನೇ ಹೊರತು ಮತ್ತಾರೂ ಪರಲೋಕಕ್ಕೆ ಏರಿಹೋದವರಲ್ಲ*. ಪರಲೋಕದ ಸಂಗತಿಗಳ ಬಗ್ಗೆ ಜ್ಞಾನವು ನಾವು ಪವಿತ್ರಾತ್ಮನಿಂದ ಪಡಕೊಂಡವರಾದ ನಂತರವೇ ಉಂಟಾಗುವದು; ಮತ್ತು ಪರಲೋಕದ ಸಂಗತಿಗಳು ಆತ್ಮನಿಂದ ಹುಟ್ಟಿದವುಗಳಾಗಿವೆ, ಆತ್ಮೀಕ ಜೀವಿಗಳು".

ಆದುದರಿಂದ ರಾಜ್ಯದ ಸಂಗತಿಗಳ ಸ್ವಭಾವವನ್ನು ಪ್ರಕಟಿಸುವಾಗ, ದುರಾಗ್ರಹಪೀಡಿತರೂ ಮತ್ತು ಅವರಿಗೆ

ದೊರೆತ ಶಿಕ್ಷಣವು ಅವರ ದೃಷ್ಟಿಕೋನವನ್ನು ವಕ್ರಪಡಿಸುವದನ್ನು ಹೊರತುಪಡಿಸಿ ಬೇರೇನನ್ನು ಮಾಡದಿರುವದರಿಂದ ಅವರಿಗೆ ತಿಳಿಸಲು ಕರ್ತನಲ್ಲಿ ತಾಳ್ಮೆ ಇರಬೇಕಾಗಿತ್ತು. ಪರಂತು, ಮೆಸ್ಸೀಯನ ರಾಜ್ಯದಲ್ಲಿ ಸೇರುವವರ ಯುಕ್ತವಾದ ಆಯ್ಕೆಯು ಮುಂದುವರೆಯಿತು, ಅದರಲ್ಲಿ ಕೆಲವರು ಮಾತ್ರವೇ ಯೆಹೂದ್ಯರಲ್ಲಿ ಆಯ್ಕೆಗೊಂಡವರು ಮತ್ತು ಅದು ಅವರಿಗೆ ಪ್ರತ್ಯೇಕವಾಗಿ ಏಳು ವರ್ಷದ ಮಟ್ಟಿಗೆ ನೀಡಲಾಗಿತ್ತು. ದೇವರು ಅದನ್ನು ಅವರ ಸಿದ್ಧವಿಲ್ಲದಿರುವಿಕೆಯಿಂದ, ಮತ್ತು ಪ್ರಸ್ತುತಿಪಡಿಸಿದ ಷರತ್ತುಗಳನ್ನು ಅರ್ಥ ಮಾಡಿಕೊಳ್ಳಲು ಮತ್ತು ಅದನ್ನು ಅನುಸರಿಸಲು ವಿಫಲರಾಗುವರೆಂದು ಮುಂತಿಳಿದವನಾಗಿದ್ದು, ಮೆಸ್ಸೀಯನ ರಾಜ್ಯದಲ್ಲಿ ಪಾಲ್ಗೊಳ್ಳುವ ಸುಯೋಗವು ಒಂದು ಜನಾಂಗವಾದ ಅವರಿಂದ ತೆಗೆಯಲ್ಪಟ್ಟು, ಸ್ವೀಕರಿಸಿದ ಕೆಲವರನ್ನು ಹೊರತುಪಡಿಸಿ, ತನ್ನ ಹೆಸರಿಗಾಗಿ ಒಂದು ಪ್ರಜೆಯನ್ನು ಆರಿಸಿಕೊಳ್ಳಲು ಅನ್ಯಜನರಿಗೆ ಬರುವದಾಯಿತು. ಇದರಲ್ಲಿ ಸಹಾ ಶೇಷಮಾತ್ರದವರಾದ 'ಚಿಕ್ಕಹಿಂಡು' ಈ ಭಾಗ್ಯವನ್ನು ಮೆಚ್ಚಿಕೊಳ್ಳುವರು ಮತ್ತು ಆದರ ರಾಜ್ಯದಲ್ಲಿ ಮತ್ತು ಮಹಿಮೆಯಲ್ಲಿ ಜೊತೆ ಬಾಧ್ಯಸ್ಥರಾಗಲು ಅರ್ಹರೆಂದು ಎಣಿಸಲ್ಪಡುವರು.

ನಾಮಾಂಕಿತ ಕ್ರೈಸ್ತ ಸಭೆಗೆ ಗಂಭೀರವಾದ ತಪ್ಪು ವಿವರಣೆಯನ್ನು ಪರಿಚಯಿಸಲಾಗಿದೆ. ಅದೇನೆಂದರೆ ವಾಗ್ದಾನ ಮಾಡಲ್ಪಟ್ಟ ರಾಜ್ಯವು ಅದರ ಪ್ರಸ್ತುತ ಪರಿಸ್ಥಿತಿಯನ್ನು ನಾಮಾಂಕಿತ ಸಭೆ ಮತ್ತು ಅದರ ವಿಶ್ವಾಸಿಗಳ ಹೃದಯದಲ್ಲಿ ನಡೆದ ಕೃಪಾಕಾರ್ಯವೆಂದು, ಮತ್ತು ಎಷ್ಟರಮಟ್ಟಿಗೆ ಈ ತಪ್ಪಾದ ಅರ್ಥವು ಆಚರಣೆಯಲ್ಲಿದೆ ಎಂದರೆ ಪ್ರಸ್ತುತವಿರುವ ನಾಮಾಂಕಿತ ಸಭೆಯ ಲೋಕದೊಂದಿಗಿನ ಅಪವಿತ್ರ ಮೈತ್ರಿ ಮತ್ತು ಆಡಳಿತದ ದೆಸೆಯಿಂದ ಇದು ಭೂಲೋಕದ ಮೇಲೆ ದೇವರ ರಾಜ್ಯದ ಆಳ್ವಿಕೆಯಾಗಿದೆ ಎಂದು ತಪ್ಪಾಗಿ ನಂಬಲಾಗಿದೆ. ಕ್ರೈಸ್ತಸಭೆಯು ದೇವರ ಆಳ್ವಿಕೆಯಾಗಿದೆ ಎಂಬುದರಲ್ಲಿ ನಿಜವಾಗಿಯೂ ಒಂದು ಅರ್ಥವಿದೆ ಮತ್ತು ವಿಶ್ವಾಸಿಗಳ ಹೃದಯಗಳಲ್ಲಿ ಕೃಪಾಕಾರ್ಯವು ಜಾರಿಯಲ್ಲಿದೆ; ಆದರೆ ಇವೆಲ್ಲವನ್ನೂ ಪರಿಗಣಿಸಲು ಮತ್ತು ಭವಿಷ್ಯದಲ್ಲಿನ ಯಥಾರ್ಥವಾದ ದೇವರ ರಾಜ್ಯವು ಇನ್ನೂ ಸಮಸ್ತ ಪರಲೋಕದ ಅಡಿಯಲ್ಲಿ ಸ್ಥಾಪಿತವಾಗಬೇಕಾಗಿದೆ ಮತ್ತು ಅದರಲ್ಲಿ ದೇವರ ಚಿತ್ತವು ಪರಲೋಕದಲ್ಲಿ ನೆರವೇರುವಂತೆಯೇ ಭೂಲೋಕದಲ್ಲಿಯೂ ನೆರವೇರುವುದು ಎಂಬುದನ್ನು ನಿರಾಕರಿಸುವುದು ನಮ್ಮ ಕರ್ತನಿಂದ, ಅಪೋಸ್ತಲರಿಂದ ಮತ್ತು ಪ್ರವಾದಿಗಳಿಂದ ತಮ್ಮನ್ನು ಉತ್ತೇಜಿಸುವಂತೆ ಮತ್ತು ಈ ಲೋಕವನ್ನು ಜಯಿಸಲು ಸಹಾಯಮಾಡುವಂತೆ ಮಾಡಲ್ಪಟ್ಟಿರುವ ಪ್ರಬಲವಾದ ವಾಗ್ದಾನಗಳನ್ನು ವ್ಯರ್ಥಗೊಳಿಸುವ ಅರ್ಥಹೀನವನ್ನಾಗಿ ಮಾಡುವ ಹುಚ್ಚು ಪ್ರಯತ್ನವಾಗಿದೆ.

ನಮ್ಮ ಕರ್ತನ ಸಾಮ್ಯಗಳಲ್ಲಿ, ಸಭೆಯನ್ನು ಪದೇ ಪದೇ ರಾಜ್ಯವೆಂಬುದಾಗಿ ಕರೆಯಲಾಗಿದೆ; ಅಪೋಸ್ತಲರುಗಳು ಈ ಬಗ್ಗೆ ಅದು ಕ್ರಿಸ್ತನು ಈಗ ಆಳುತ್ತಿರುವ ರಾಜ್ಯವಾಗಿದೆ ಎಂದು ಮಾತನಾಡುತ್ತಾ, ದೇವರು ನಮ್ಮನ್ನು ಅಂಧಕಾರದ ರಾಜ್ಯದಿಂದ ಆತನ ಪ್ರಿಯ ಮಗನ ಬೆಳಕಿನ ರಾಜ್ಯಕ್ಕೆ ಮಾರ್ಪಡಿಸುವನೆಂದು ಹೇಳುತ್ತಾರೆ. ಕ್ರಿಸ್ತನನ್ನು ಈಗ ಅಂಗೀಕರಿಸಿರುವ ನಾವುಗಳು ಆತನು ಕೊಂಡುಕೊಂಡ ಸಾಮ್ರಾಜ್ಯದ ಹಕ್ಕನ್ನು ಗ್ರಹಿಸಿಕೊಳ್ಳುತ್ತೇವೆ, ಮತ್ತು ಆತನಿಗೆ ಆಭಾರಿಯಾಗಿದ್ದು ಆತನು ಅದನ್ನು ಒತ್ತಾಯದಿಂದ ಈ ಲೋಕದಲ್ಲಿ – ಸ್ಥಾಪಿಸುವ ಮುನ್ನವೇ ಸ್ವಯಂಪ್ರೇರಿತ ವಿಧೇಯತೆಯನ್ನು ಸಮರ್ಪಿಸುವವರಾಗಿದ್ದೇವೆ. ನಾವು ಆತನು ಜಾರಿಗೆ ತರುವ ನೀತಿಯ ನಿಯಮಗಳನ್ನು ಮತ್ತು ಪ್ರಸ್ತುತದಲ್ಲಿ ಲೋಕದ ಅರಸನಾದ ಅಪಹರಣಕಾರನು ಬೆಂಬಲಿಸುವ ಅಂಧಕಾರದ ರಾಜ್ಯದ ನಡುವಣ ವ್ಯತ್ಯಾಸವನ್ನು ಗ್ರಹಿಸುವವರಾಗಿದ್ದೇವೆ.

ದೇವರ ವಾಗ್ದಾನಗಳ ಮೇಲಣ ನಂಬಿಕೆಯು ಈ ರೀತಿಯಲ್ಲಿ ನಮ್ಮ ನಿಷ್ಠೆಯನ್ನು ಬದಲಾಯಿಸುತ್ತದೆ ಮತ್ತು ನಾವು ನಮ್ಮನ್ನು ನೂತನ ಅರಸ ಪ್ರಜೆಗಳು ಎಂದು ಎಣಿಕೆಮಾಡಿಕೊಳ್ಳುತ್ತೇವೆ ಮತ್ತು ಆತನ ಕೃಪೆಯಿಂದ, ಇನ್ನೂ ಅಧಿಕಾರ ಮತ್ತು ಮಹಾಮಹಿಮೆಯೊಂದಿಗೆ ಸಿದ್ಧಪಡಿಸಬೇಕಾಗಿರುವ ಆ ರಾಜ್ಯದಲ್ಲಿ ಆತನೊಂದಿಗೆ ಜೊತೆಬಾಧ್ಯಸ್ಥರಾಗುತ್ತೇವೆ.

ಆದರೆ ಈ ವಸ್ತುಸ್ಥಿತಿ ಅಂತಿಮವಾಗಿ "ಕ್ರಿಸ್ತನ ರಾಜ್ಯವು ಸಮುದ್ರದಿಂದ ಸಮುದ್ರದವರೆಗೂ, ನದಿಯಿಂದ ಭೂಮಿಯ ಕಟ್ಟಕಡೆಯವರೆಗೂ ಆಳಲಿ" (ಕೀರ್ತನೆ 72:8); ಎಂಬ ವಾಗ್ದಾನವನ್ನು ಯಾವುದೇ ರೀತಿಯಲ್ಲಿ "ರಾಜ್ಯವನ್ನು ರದ್ದುಪಡಿಸುವುದಿಲ್ಲ. ಆತನ ರಾಜ್ಯವು ಶಾಶ್ವತ ರಾಜ್ಯ; ಸಕಲ ದೇಶಾಧಿಪತಿಗಳು ಆತನಿಗೆ ಅಧೀನರಾಗಿ ಸೇವೆ ಮಾಡುವರು" (ದಾನಿಯೇಲ 7:27). "ಸ್ವರ್ಗ ಮರ್ತ್ಯ ಪಾತಾಳಗಳಲ್ಲಿರುವವರೆಲ್ಲರೂ ಯೇಸುವಿನ ಹೆಸರಿನಲ್ಲಿ ಅಡ್ಡಬಿದ್ದು ಯೇಸುಕ್ರಿಸ್ತನು ಒಡೆಯನೆಂದು ಪ್ರತಿಜ್ಞೆಮಾಡಿ ತಂದೆಯಾದ ದೇವರಿಗೆ

* ಅಂಗ್ಲ ಭಾಷೆಯಲ್ಲಿರುವ "which is in heaven" (Verse 13) ಪುರಾತನ ಗ್ರಂಥಗಳಲ್ಲಿ ಮತ್ತು ನಂಬಲರ್ಹವಾದ MSS ನಲ್ಲಿ ಕಂಡುಬರುವುದಿಲ್ಲ

ಘನವನ್ನು ಸಲ್ಲಿಸುವರು" (ಫಿಲಿಪ್ಪಿ 2:10). ನಿಜವಾಗಿ ಹೇಳುವುದಾದರೆ, ಈಗ "ಚಿಕ್ಕ ಹಿಂಡಿನ" ಆಯ್ಕೆಯು ಆ ವಾಗ್ದಾನಗಳನ್ನು ದೃಢೀಕರಿಸುತ್ತದೆ.

ನಮ್ಮ ಕರ್ತನ ಸಾಮ್ಯಗಳನ್ನು ಜಾಗರೂಕತೆಯಿಂದ ಪರಿಶೀಲಿಸಿದಾಗ, ಅವುಗಳು ನಮಗೆ ಬರಲಿರುವ ಅಥವಾ ಸಿದ್ಧಪಡಿಸಲಿರುವ ದೇವರ ರಾಜ್ಯವು ಭವಿಷ್ಯದಲ್ಲಿರುವಂತಾದ್ದು; ಮತ್ತು ಅದು ಸಹಜವಾಗಿ ರಾಜನು ಬರುವವರೆಗೂ ಆಗದ ಸಂಗತಿಯಾಗಿದೆ. ಈ ರೀತಿಯಲ್ಲಿ ಯುವ ಶ್ರೀಮಂತನ ಸಾಮ್ಯದಲ್ಲಿ ತಾನು ರಾಜ್ಯಾಧಿಕಾರವನ್ನು ಪಡಕೊಂಡು ಹಿಂತಿರುಗಿ ಬರಬೇಕೆಂದು ದೂರದ ದೇಶಕ್ಕೆ ಹೋಗುತ್ತಾನೆ (ಲೂಕ 19: 11–15) ಮುಂತಾದವುಗಳು ಸ್ಪಷ್ಟವಾಗಿ ರಾಜ್ಯದ ಸ್ಥಾಪನೆಯನ್ನು ಕ್ರಿಸ್ತನ ಹಿಂತಿರುಗಿ ಬರೋಣದಲ್ಲಿ ಕಂಡುಕೊಳ್ಳುತ್ತದೆ. ಬಹಳ ವರ್ಷಗಳ ನಂತರ ಕರ್ತನು ಸಭೆಗೆ ಕಳುಹಿಸಿದ ಸಂದೇಶದಲ್ಲಿ "ನೀನು ಸಾಯಬೇಕಾದರೂ ನಂಬಿಗಸ್ತನಾಗಿರು. ನಾನು ನಿನಗೆ ಜೀವವೆಂಬ ಜಯಮಾಲೆಯನ್ನು ಕೊಡುವೆನು" (ಪ್ರಕಟನೆ 2:10) ಎಂದು ಹೇಳುವವನಾಗಿದ್ದಾನೆ. ಆದುದರಿಂದ ಆತನೊಂದಿಗೆ ಆಳ್ವಿಕೆಮಾಡುವವರು ಅರಸರುಗಳು ಈ ಜೀವಿತದಲ್ಲಿ ಕಿರೀಟಧಾರಣೆ ಗೊಳ್ಳುವುದಿಲ್ಲ ಅಥವಾ ಅರಸರಾಗಿ ಆಳುವುದಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಆದುದರಿಂದ, ಪ್ರಸ್ತುತದಲ್ಲಿನ ಸತ್ಯಸಭೆಯು ಪ್ರಭಾವ ಮತ್ತು ಮಹಿಮೆಯಲ್ಲಿ ಸಿದ್ಧಗೊಂಡ ದೇವರ ರಾಜ್ಯವಲ್ಲ, ಆದರೆ ಅದರ ಆರಂಭಾವಸ್ಥೆಯಲ್ಲಿ, ಭ್ರೂಣಾವಸ್ಥೆಯಲ್ಲಿ ಇರುವಂತದ್ದು. ಮತ್ತು ಅದರಂತೆ, ಖಂಡಿತವಾಗಿ, ಹೊಸ ಒಡಂಬಡಿಕೆಯ ಎಲ್ಲಾ ಉಲ್ಲೇಖಗಳು ಇದನ್ನೇ ಬೋಧಿಸುತ್ತವೆ. ದೇವರ ರಾಜ್ಯವು ಈಗ ಭೂಲೋಕದಲ್ಲಿ ಕೈಯಲ್ಲಿ ಹಿಂಸೆಯನ್ನು ಅನುಭವಿಸುತ್ತಿದೆ; ಅರಸನನ್ನು ಕ್ರೂರವಾಗಿ ನಡಿಸಿಕೊಂಡು ಶಿಲುಬೆಗೆ ಹಾಕಲಾಯಿತು; ಆತನ ಹೆಜ್ಜೆಜಾಡಿನಲ್ಲಿ ಯಾರಾರು ನಡೆಯುತ್ತಾರೋ ಅವರು ಅದೇ ರೀತಿಯ ಉಪದ್ರವಗಳನ್ನೂ, ಹಿಂಸೆಗಳನ್ನೂ ಅನುಭವಿಸುತ್ತಾರೆ. ಇದು ಸತ್ಯ ಸಭೆಯ ವಿಷಯದಲ್ಲಿ ಮಾತ್ರವೇ ನಿಜವಾಗಿದೆ, ಹೆಸರು ಮಾತ್ರದ ಸಭೆಗಳಿಗೆ ಅಲ್ಲ ಎಂಬುದನ್ನು ಗಮನಿಸಲಾಗುವುದು. ಆದರೆ, ಈಗ ನಾವು, (ಸಭೆ, ಭ್ರೂಣಾವಸ್ಥೆಯ ರಾಜ್ಯ) ಕ್ರಿಸ್ತನೊಡನೆ ಶ್ರಮೆ ಅನುಭವಿಸುವವರಾದರೆ, ತಕ್ಕ ಸಮಯದಲ್ಲಿ, ಆತನು ತನ್ನ ಮಹಾ ಅಧಿಕಾರವನ್ನು ತೆಗೆದುಕೊಂಡು ಆಡಳಿತ ಮಾಡುವಾಗ, ನಾವು ಸಹ ಆತನೊಂದಿಗೆ ಮಹಿಮೆಹೊಂದಿದವರಾಗಿ ಆಳ್ವಿಕೆ ಮಾಡುವವರಾಗಿದ್ದೇವೆ ಎಂಬ ವಾಗ್ದಾನವು ಅನ್ವಯಿಸುತ್ತದೆ.

ಯಾಕೋಬ 2:5ರಲ್ಲಿನ ನಮ್ಮ ಕರ್ತನ ಬೋಧನೆಗೆ ಸಾಮರಸ್ಯವಾಗಿ ದೇವರು ಲೌಕಿಕ ವಿಷಯದಲ್ಲಿ ಬಡವರಾಗಿರುವವರನ್ನು ಆದುಕೊಂಡು ಅವರನ್ನು ಈಗ ಆಳ್ವಿಕೆಮಾಡದಂತೆ ಆದರೆ ತಾನು ವಾಗ್ದಾನ ಮಾಡಿದ ರಾಜ್ಯಕ್ಕೆ ಬಾಧ್ಯರಾಗಿ ಇರಬೇಕೆಂಬ ವಾಗ್ದಾನಕ್ಕನುಸಾರ ನಡೆಸುತ್ತಾನೆ. ಕರ್ತನು ತನ್ನ ಶಿಷ್ಯರಿಗೆ – ಧನವಂತನು ದೇವರರಾಜ್ಯದಲ್ಲಿ ಸೇರುವುದು ಎಷ್ಟೋ ಕಷ್ಟ" (ಮಾರ್ಕ 10:23) ಎಂದಿದ್ದಾನೆ. ಆತನು ಈಗ ಪ್ರಪಂಚದೊಂದಿಗೆ ಆಳ್ವಿಕೆಮಾಡುತ್ತಿರುವ ಹೆಸರು ಮಾತ್ರದ ಸಭೆಯ ಕುರಿತಾಗಿ ಹೇಳಿರುವುದಿಲ್ಲ ಎಂಬುದು ವಿಶದವಾಗುತ್ತದೆ. ಯಾಕೆಂದರೆ, ಐಶ್ವರ್ಯವಂತರು ಅದಕ್ಕೆ ಅಂಟಿಕೊಂಡಿದ್ದಾರೆ. ಪೇತ್ರನು ರಾಜ್ಯದ ಬಾಧ್ಯಸ್ತರಿಗೆ ತಾಳ್ಮೆಯಿಂದಲೂ, ದೃಢ ಹಾಗೂ ಅವಿರತ ಯತ್ನಮಾಡುವವರಾಗಿಯೂ, ನೈತಿಕತೆ ಮತ್ತು ವಿಶ್ವಾಸದಿಂದಿರುವಂತೆ ಎಚ್ಚರಿಸುವವನಾಗಿ – "ಆದುದರಿಂದ, ಸಹೋದರರೇ, ದೇವರು ನಿಮ್ಮನ್ನು ಕರೆದದ್ದನ್ನೂ, ಆದುಕೊಂಡದ್ದನ್ನೂ, ದೃಢಪಡಿಸಿ ಕೊಳ್ಳುವುದಕ್ಕೆ ಮತ್ತಷ್ಟು ಪ್ರಯಾಸಪಡಿರಿ. ಹೀಗೆ ಮಾಡಿದರೆ ಎಂದಿಗೂ ಎಡಹುವುದಿಲ್ಲ ಮತ್ತು ನಮ್ಮ ಕರ್ತನೂ ರಕ್ಷಕನೂ ಆಗಿರುವ ಯೇಸುಕ್ರಿಸ್ತನ ನಿತ್ಯರಾಜ್ಯದಲ್ಲಿ ಪ್ರವೇಶಿಸುವ ಹಾಗೆ ದೇವರು ನಿಮಗೆ ಧಾರಾಳವಾಗಿ ಅನುಗ್ರಹಿಸುವನು" (2 ಪೇತ್ರ 1 10–11) ಎಂದು ಹೇಳುವವನಾಗಿದ್ದಾನೆ.

ರೋಮಾ. 14:17ರಲ್ಲಿ ಪೌಲನ ಹೇಳಿಕೆಯು ಸಾಂಕೇತಿಕ ದೇವರ ರಾಜ್ಯವನ್ನು ಉಲ್ಲೇಖಿಸುತ್ತದೆ ಎಂದು ಕೆಲವರು ಭಾವಿಸುತ್ತಾರೆ; ಆದರೆ ಸನ್ನಿವೇಶದ ಬೆಳಕಿನಲ್ಲಿ ಪರಿಶೀಲಿಸಿದಾಗ, ಆ ವಾಕ್ಯವೃಂದವು ಸರಳವಾಗಿ ಈ ಅರ್ಥವನ್ನು ನೀಡುತ್ತದೆಂಬುದು ಸ್ಪಷ್ಟವಾಗುತ್ತದೆ: ಸಹೋದರರಾದ, ನಾವು ಈಗ ದೇವರ ಪ್ರಿಯಕುಮಾರನ ರಾಜ್ಯದೊಳಗೆ ಮಾರ್ಪಟ್ಟಿರುವುದರಿಂದ ನಮ್ಮ ಆಹಾರ ಇತ್ಯಾದಿಗಳ ಬಗ್ಗೆ ಕೆಲವು ಸ್ವಾತಂತ್ರ್ಯಗಳನ್ನು ಹೊಂದಿದ್ದೇವೆ. ಆದರೆ, ಧರ್ಮಶಾಸ್ತ್ರದಡಿಯಲ್ಲಿರುವ ಯೆಹೂದಿಗಳಾಗಿದ್ದಾಗ ಈ ಸ್ವಾತಂತ್ರ್ಯವಿರಲಿಲ್ಲ. ಆದರೂ ಈ ಸ್ವಾತಂತ್ರ್ಯವನ್ನು ಇನ್ನೂ ಅರಿಯದ ಸಹೋದರರು ಎಡವಿಬಿದ್ದು ಅವರ ಆತ್ಮಸಾಕ್ಷಿಯನ್ನು ಉಲ್ಲಂಘಿಸಲು ಕಾರಣವಾಗುವುದಾದರೆ ಈ ಸ್ವಾತಂತ್ರ್ಯವನ್ನು ಉಪಯೋಗಿಸಿ ಕೊಳ್ಳದೆ ಇರೋಣ. ಆಹಾರದ ಬಗೆಗಿನ ನಮ್ಮ ಸ್ವಾತಂತ್ರ್ಯದಿಂದಾಗಿ, ನಾವು ಕ್ರಿಸ್ತನು ಅವರಿಗಾಗಿ ಮರಣಿಸಿದ ಸಹೋದರರನ್ನು ಹಾಳುಮಾಡದೇ

ಇರೋಣ. ಆದರೆ ನಾವು ಆ ರಾಜ್ಯದ ಈಗಿನ ಮತ್ತು ಮುಂದಿನ ಸವಲತ್ತುಗಳು ಆಹಾರದ ಅನಿರ್ಬಂಧತೆಗಿಂತ ಹೆಚ್ಚಾದ ಆಶೀರ್ವಾದಗಳನ್ನು ಹೊಂದಿದ್ದೇವೆ ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳೋಣ; ಅವುಗಳೆಂದರೆ, ಸರಿಯಾದುದನ್ನು ಮಾಡುವ ನಮ್ಮ ಸ್ವಾತಂತ್ರ್ಯದಲ್ಲಿ ಕ್ರಿಸ್ತನ ಮೂಲಕ ದೇವರ ಬಗೆಗಿನ ನಮ್ಮ ಶಾಂತಿಯು ಮತ್ತು ಪವಿತ್ರಾತ್ಮದಲ್ಲಿ ಪಾಲುಹೊಂದುವಲ್ಲಿ ನಮ್ಮ ಸಂತೋಷವಾಗಿದೆ. ದೇವರ ರಾಜ್ಯದ ಈ ಸ್ವಾತಂತ್ರ್ಯಗಳು (ಈಗ ಮತ್ತು ಯಾವಾಗಲೂ) ಎಷ್ಟು ದೊಡ್ಡದಾಗಿವೆ ಅಂದರೆ ಆಹಾರದ ಬಗೆಯ ಚಿಕ್ಕ ಸ್ವಾತಂತ್ರ್ಯವನ್ನು ನಮ್ಮ ಸಹೋದರರನ ಸಲುವಾಗಿ ತ್ಯಾಗಮಾಡಬಹುದಾಗಿದೆ.

ಹೀಗೆ ನಾವು ದೇವರ ವಾಕ್ಯದ ಯಾವ ದೃಷ್ಟಿಕೋನದಿಂದ ನೋಡಿದರೂ, ಆ ರಾಜ್ಯದ ವಾಗ್ದಾನಗಳು ಪೌರಾಣಿಕ ವಂಚನೆಗಳಾಗಿವೆ ಅಥವಾ ನಮ್ಮ ಪ್ರಸ್ತುತ ಪರಿಸ್ಥಿತಿಗಳು ಈ ವಾಗ್ದಾನಗಳನ್ನು ಪೂರೈಸಿವೆ ಎಂಬ ಆಲೋಚನೆಯು ವಿರೋಧಾತ್ಮಕ ವಾಗಿವೆ.

ಆದಿಸಭೆಯಲ್ಲಿ, ದೇವರ ರಾಜ್ಯದ ಗೌರವದ ಬಗ್ಗೆ ವಾಗ್ದಾನಗಳು ಮತ್ತು ಪ್ರಭುವಿನೊಡನೆ ಜೊತೆ ಬಾಧ್ಯಸ್ಥಿಕೆಯು, ಪ್ರಸ್ತುತ ಶೋಧನೆಗಳು ಮತ್ತು ಉಪದ್ರವಗಳ ಅಡಿಯಲ್ಲಿಯೂ ಸಹ ನಂಬಿಗಸ್ತಿಕೆಗೆ ದೊರೆಯುವ ಪ್ರಬಲವಾದ ಪ್ರೋತ್ಸಾಹಗಳಾಗಿದ್ದವು ಮತ್ತು ಇವುಗಳನ್ನು ನಿರೀಕ್ಷಿಸುವ ಮೊದಲೇ ಅವರಿಗೆ ಮುನ್ನೆಚ್ಚರಿಕೆಯನ್ನು ನೀಡಲಾಗಿತ್ತು; ಈ ಬಗ್ಗೆ ಏಳು ಸಭೆಗಳಿಗೆ ನೀಡಲಾಗಿರುವ ಭವಿಷ್ಯ ದರ್ಶನ ಗ್ರಂಥ (ಪ್ರಕಟನೆ)ದಲ್ಲಿರುವ ಸಾಂತ್ವನ ಮತ್ತು ಉತ್ತೇಜನಕರವಾದ ಎಲ್ಲಾ ಮಾತುಗಳಲ್ಲಿ "ನಾನು ಜಯಹೊಂದಿ ನನ್ನ ತಂದೆಯೊಡನೆ ಸಿಂಹಾಸನದಲ್ಲಿ ಕೂತುಕೊಂಡೆನು. ಹಾಗೆಯೇ, ಜಯಹೊಂದುವವನನ್ನು ನನ್ನೊಡನೆ ಸಿಂಹಾಸದಲ್ಲಿ ಕುಳಿತುಕೊಳ್ಳುವಂತೆ ಮಾಡುವೆನು" (ಪ್ರಕಟನೆ 3:21) ಮತ್ತು "ಯಾವನು ಜಯಶಾಲಿ ಯಾಗಿದ್ದು ನನಗೆ ಮೆಚ್ಚಿಗೆಯಾದ ಕೃತ್ಯಗಳನ್ನು ಕಡೇವರೆಗೂ ನಡೆಸುತ್ತಾನೋ ಅವನಿಗೆ ನಾನು ನನ್ನ ತಂದೆಯಿಂದ ಹೊಂದಿದ ಅಧಿಕಾರದಂತೆ ಜನಾಂಗಗಳ ಮೇಲೆ ಅಧಿಕಾರವನ್ನು ಕೊಡುವೆನು" (ಪ್ರಕಟನೆ 2:26) ಎಂಬ ಮಾತುಗಳಿಗಿಂತ ಬೇರೆ ಯಾವುದೂ ಹೆಚ್ಚು ಸ್ಪಷ್ಟವಾಗಿ ಮತ್ತು ಪ್ರಭಾವಯುಕ್ತವಾಗಿ ಪ್ರಕಾಶಿಸಲಿಲ್ಲ.

ಈ ವಾಗ್ದಾನಗಳನ್ನು ಹೃದಯದಲ್ಲಿನ ಪ್ರಸ್ತುತ ಕೃಪಾಕಾರ್ಯಕ್ಕೆ ಅನ್ವಯಮಾಡುವಂತೆಯಾಗಲಿ ಇಲ್ಲವೆ ಪ್ರಸ್ತುತ ಜೀವಮಾನದಲ್ಲಿ ಜನಾಂಗಗಳ ಮೇಲೆ ಇನ್ನೂ ಆಳ್ವಿಕೆ ಮಾಡುವಂತೆ ಸಮಂಜಸವಾದ ರೀತಿಯಲ್ಲಿ ತಪ್ಪಾಗಿ ಅನ್ವಯಿಸಲಾಗದು. ಯಾಕೆಂದರೆ, ಯಾರು ಜಯಹೊಂದುವವರೋ ಅವರು ತಮ್ಮ ಸೇವೆಯಲ್ಲಿ ಮರಣಹೊಂದುವುದರ ಮತ್ತು ರಾಜ್ಯದ ಗೌರವಗಳನ್ನು ಪಡಕೊಳ್ಳಬೇಕು (ಪ್ರಕಟನೆ 20:6).

ಆದರೆ ಮಾನವ ಸ್ವಭಾವವು ಶ್ರಮೆಯನ್ನು ತಪ್ಪಿಸಿಕೊಳ್ಳ ಬಯಸುತ್ತದೆ ಮತ್ತು ಗೌರವ ಮತ್ತು ಅಧಿಕಾರಗಳನ್ನು ಪಡಕೊಳ್ಳಲು ಸದಾ ಸಿದ್ಧವಾಗಿರುತ್ತದೆ. ಆದುದರಿಂದ ಅಪೋಸ್ತಲರ ದಿನಗಳಲ್ಲಿಯೂ ಸಹ ಸಭೆಯಲ್ಲಿ ಕೆಲವರು ಮುಂದಣ ವಾಗ್ದಾನಗಳನ್ನು ಮತ್ತು ಅಧಿಕಾರವನ್ನು ಪ್ರಸ್ತುತ ಜೀವನಕ್ಕೆ ಅನ್ವಯಿಸಿಕೊಂಡು ಸ್ವಂತಕ್ಕೆ ವಿನಿಯೋಗಿಸುವಂತೆ ಒಲವು ತೋರಿದರು ಮತ್ತು ಸಭೆಯನ್ನು ಗೌರವಿಸುವ ಮತ್ತು ಅದಕ್ಕೆ ವಿಧೇಯರಾಗುವ ಸಮಯವು ಆಗಲೇ ಬಂದಿದೆಯೋ ಎಂಬಂತೆ ವರ್ತಿಸಲು ಪ್ರಾರಂಭಿಸಿದರು. ಅಪೋಸ್ತಲನಾದ ಪೌಲನು ಈ ದೋಷವನ್ನು ಸರಿಪಡಿಸುತ್ತಾ ಬರೆಯುತ್ತಾನೆ. ಹೆಮ್ಮೆಯನ್ನು ಬೆಳಸಿಕೊಳ್ಳುವ ಮತ್ತು ತ್ಯಾಗದಿಂದ ದೂರಸರಿಯುವ ಇಂಥಾಃ ಆಲೋಚನೆಗಳು ಸಭೆಯನ್ನು ಹಾನಿಗೊಳಿಸುವ ಪರಿಣಾಮಗಳನ್ನು ಬೀರುತ್ತವೆ ಎಂಬುದನ್ನು ತಿಳಿದು ವ್ಯಂಗ್ಯವಾಗಿ – "ಈಗಾಗಲೇ ನೀವು ತೃಪ್ತರಾದಿರಿ, ಈಗಾಗಲೇ ನೀವು ಐಶ್ವರ್ಯವಂತರಾದಿರಿ" "ನಮ್ಮ ಸಹಾಯವಿಲ್ಲದೆ ಅರಸರಾದಿರಿ'' ಎಂತಲೂ... ನಂತರದಲ್ಲಿ ಆತನು (ಹಿಂಸೆಪಟ್ಟ ಅಪೋಸ್ತಲರಾದ) ''ನೀವು ಅರಸರಾಗಿದ್ದರೆ ನನಗೆ ಎಷ್ಟೋ ಆನಂದವಾಗುತ್ತಿತ್ತು, ನಾವು ಸಹ ನಿಮ್ಮೊಂದಿಗೆ ಅರಸರಾಗಿರುತ್ತಿದ್ದೆವು" (1 ಕೊರಿಂಥ 4:8) ಎಂದು ಸೇರಿಸುತ್ತಾನೆ. ಅವರುಗಳು ತಮ್ಮ ಕ್ರೈಸ್ತತ್ವವನ್ನು ಅದರಿಂದಲೂ ಮತ್ತು ಅದರ ಹೊರಗೂ ಸಾಧ್ಯವಾದಷ್ಟು ಹೆಚ್ಚು ಹೆಚ್ಚು ಗೌರವವನ್ನು ಪಡೆಯಲು ಪ್ರಯತ್ನಿಸುತ್ತಿದ್ದರು. ಅವರುಗಳ ಕರ್ತನ ಅನುಯಾಯಿಗಳಾಗಿ ಪ್ರಾಮಾಣಿಕರಾಗಿರುತ್ತಿದ್ದರೆ ಅವರು ಅಂಥಾಃ ಸ್ಥಿತಿಯಲ್ಲಿರುತ್ತಿದ್ದಿಲ್ಲ ಎಂಬುದನ್ನು ಅಪೋಸ್ತಲನು ಚೆನ್ನಾಗಿ ತಿಳಿದಿದ್ದನು. ಆದುದರಿಂದ, ಖಂಡಿತವಾಗಿಯೂ, ಬಹಳ ಕಾಲದಿಂದ ಅಪೇಕ್ಷಿಸಿದ ಆಳ್ವಿಕೆಯು ಪ್ರಾರಂಭವಾಗಿದ್ದರೆ, ಆತನು ಸಹಾ ಅವರಿಗಿಂಥ ಕಡಿಮೆಯಿಲ್ಲದಂತೆ ಆಳ್ವಿಕೆ ಮಾಡುತ್ತಿದ್ದನು ಮತ್ತು ಆತನು ತನ್ನ ಪ್ರಾಮಾಣಿಕತೆಯಿಂದ ಸತ್ಯದ ಸಲುವಾಗಿ ಹಿಂಸೆ ಅನುಭವಿಸಿದವನು ಎಂಬುದನ್ನು ಆತನು ಅವರಿಗೆ ನೆನಪು ಮಾಡಿಕೊಟ್ಟನು. ಹಾಗಿದ್ದರೆ

ಅವರ ಆಳ್ವಿಕೆಯು ಅಪಕ್ವವಾದುದು ಮತ್ತು ಮಹಿಮೆಗಿಂತ ಹೆಚ್ಚಾಗಿ ಅದು ಉರುಲಾಗಿದೆ ಎಂಬುದನ್ನು ಸಾಬೀತುಪಡಿಸುವುದಾಗಿದೆ. ನಂತರದಲ್ಲಿ, ವ್ಯಂಗ್ಯದ ಸ್ಪರ್ಶದೊಡನೆ ಆತನು "ನಾವಂತೂ ಕ್ರಿಸ್ತನ ನಿಮಿತ್ತ ಹುಚ್ಚರಾಗಿದ್ದೇವೆ, ನೀವೋ ಕ್ರಿಸ್ತನಲ್ಲಿ ಬುದ್ಧಿವಂತ ರಾಗಿದ್ದೀರಿ; ನಾವು ಬಲಹೀನರು, ನೀವು ಬಲಿಷ್ಠರು, ನೀವು ಮಾನಶಾಲಿಗಳು, ನಾವು ಮಾನಹೀನರು, ಈ ಘಳಿಗೆಯವರೆಗೂ ನಾವು ಹೀನೈಸಲ್ಪಡುವವರೂ ಆಗಿದ್ದೇವೆ" (ವ. 10–11) ಎಂದು ಬರೆಯುತ್ತಾನೆ. "ನಾನು ಇವುಗಳನ್ನು ನಿಮ್ಮನ್ನು ನಾಚಿಕೆಪಡಿಸುವುದಕ್ಕಾಗಿ ಬರೆಯಲಿಲ್ಲ, ನನ್ನ ಪ್ರಿಯ ಮಕ್ಕಳೆಂದು ಭಾವಿಸಿ ನಿಮಗೆ ಬುದ್ದಿಹೇಳುವುದಕ್ಕಾಗಿಯೇ ಈ ಮಾತುಗಳನ್ನು ಬರೆದಿದ್ದೇನೆ" (ವ. :45). ನಿಮ್ಮನ್ನು ಎಚ್ಚರಿಸುವುದಕ್ಕೆ ನನಗೆ ಉತ್ತಮವಾದ ಮತ್ತು ಉದಾತ್ತವಾದ ಉದ್ದೇಶವಿದೆ. ಪ್ರಸ್ತುತ ಗೌರವದ ಮಾರ್ಗವು ಪ್ರಕಟಗೊಳಿಸಲಿರುವ ಮಹಿಮೆಗೂ ಗೌರವಕ್ಕೂ ನಡಿಸುವುದಿಲ್ಲ; ಆದರೆ ಪ್ರಸ್ತುತ ಶ್ರಮೆಗಳು ಮತ್ತು ಸ್ವಾರ್ಥತ್ಯಾಗವು ಮಹಿಮೆಗೆ ಅಮರತ್ವಕ್ಕೆ ಮತ್ತು ದೇವರ ರಾಜ್ಯದಲ್ಲಿ ಸಹಭಾಗಿತ್ವ ಪಡೆದುಕೊಳ್ಳಲು ಹೋಗುವ ಇಕ್ಕಟ್ಟಾದ ಮಾರ್ಗವಾಗಿದೆ. ಆ ಕಾರಣದಿಂದ ನಾನು ನಿಮ್ಮನ್ನು "ನನ್ನನ್ನು ಅನುಸರಿಸಬೇಕೆಂದು ನಿಮ್ಮನ್ನು ಬೇಡಿಕೊಳ್ಳುತ್ತೇನೆ". ಆ ದಿನದಲ್ಲಿ ಕರ್ತನು, ನೀತಿವಂತ ನ್ಯಾಯಾಧಿಪತಿಯು ನನಗೆ ಕೊಡಲಿರುವ ಜೀವದ ಜಯಮಾಲೆಯಲ್ಲಿ ಪಾಲುದಾರರಾಗುವಂತೆ ನೀವು ಈಗ ಶ್ರಮೆಹೊಂದಿರಿ, ನಿಂದನೆ ಮತ್ತು ಉಪದ್ರವಗಳನ್ನು ಅನುಭವಿಸಿರಿ ನನಗೆ ಮಾತ್ರವಲ್ಲದೆ ತನ್ನ ಪ್ರತ್ಯಕ್ಷತೆಯನ್ನು ಪ್ರೀತಿಸುವವರೆಲ್ಲರಿಗೂ ಕೊಡುವನು (1 ಕೊರಿಂಥ; 4:10–17; 2 ತಿಮೋ. 4:8).

ಆದರೆ ಆದಿಸಭೆಯು ಹೆಚ್ಚಿನ ಹಿಂಸೆಯನ್ನು ನಂಬಿಕೆಯಿಂದ ಸಹಿಸಿಕೊಂಡ ನಂತರ, ಸಭೆಯ ನಿಯೋಗವು ಈ ಲೋಕವನ್ನು ಜಯಿಸುವುದೂ, ಭೂಲೋಕದಲ್ಲಿ ಪರಲೋಕದ ರಾಜ್ಯವನ್ನು ಸ್ಥಾಪಿಸುವುದೂ, ಕ್ರಿಸ್ತನ ಎರಡನೆಯ ಬರೋಣಕ್ಕೆ ಮುಂಚೆಯೇ ರಾಷ್ಟ್ರಗಳ ಮೇಲೆ ಆಳ್ವಿಕೆ ನಡೆಸುವುದೂ ಆಗಿದೆ ಎಂಬ ಸಂದೇಶವು ಹರಡಲು ಪ್ರಾರಂಭ ವಾಯಿತು. ಇದು ಲೌಕಿಕ ಒಳಸಂಚಿಗೆ, ಆಡಂಬರಕ್ಕೆ ಮತ್ತು ಜಂಭಕ್ಕೆ, ತೋರಿಕೆಯ ಪ್ರದರ್ಶನಕ್ಕೆ ಮತ್ತು ಸಭೆಯಲ್ಲಿನ ಆಚಾರವಿಧಿಗಳಿಗೆ ಬುನಾದಿಯನ್ನು ಹಾಕಿತು. ಇದು ಲೋಕದ ಮೇಲೆ ಪ್ರಭಾವ ಬೀರಲು ಮತ್ತು ಅದನ್ನು ಮರಳುಗೊಳಿಸಲು ಮತ್ತು ಬೆದರಿಸಲು ವಿನ್ಯಾಸಗೊಳಿಸಲಾಗಿತ್ತು. ಇದು ಭೂಲೋಕದ ಮೇಲೆ ದೇವರ ರಾಜ್ಯವಾಗಿ ಅದರ ನಿಯಮಗಳಿಗೆ ಈ ಲೋಕದ ಎಲ್ಲಾ ಅಧಿಕಾರಿಗಳಿಂದ, ಬಂಧುಬಳಗಗಳಿಂದ, ರಾಷ್ಟ್ರಗಳಿಂದ, ಅದರ ಪ್ರಜೆಗಳಿಂದ ಗೌರವ ಮತ್ತು ವಿಧೇಯತೆಯನ್ನು ಪಡೆಯುವ ಹಕ್ಕಿದೆ ಎಂಬ ಪೋಪನ ಅಧಿಕಾರದ ಮಹಾ ಹಕ್ಕೇಳಿಕೆಗಳಿಗೆ ಹಂತ ಹಂತವಾಗಿ ನಡೆಸುವುದಾಯಿತು. ಈ ತಪ್ಪಾದ ಹಕ್ಕೇಳಿಕೆಯ ಅಡಿಯಲ್ಲಿ (ಅವರು ತಮ್ಮನ್ನೂ, ಅಲ್ಲದೇ ಇತರರನ್ನೂ ಮೋಸಗೊಳಿಸುವಂತೆ ಕಂಡುಬರುತ್ತದೆ) ಪೋಪನ ಅಧಿಕಾರವು ಕೆಲವು ಸಮಯದವರೆಗೆ ಯೂರೋಪಿನ ಹಲವು ಅರಸರಿಗೆ ಕಿರೀಟಧಾರಣೆ ಮಾಡಿತು, ಹಲವರನ್ನು ಪದಚ್ಯುತಿಗೊಳಿಸಿತು. ಈಗಲೂ ಈ ಅಧಿಕಾರವನ್ನು ಕೇಳುತ್ತರಾದರೂ ಅದನ್ನು ಜಾರಿಗೆ ತರಲು ಆಗುತ್ತಿಲ್ಲ.

ಇದೇ ಆಲೋಚನೆಯು ಪೋಪನ (ಪಾಪಸಿ) ಅಧಿಕಾರದಿಂದ ಪ್ರೊಟೆಸ್ಟೆಂಟರಿಗೂ ಬಂದಿದೆ. ಅದು ಸಹಾ ಹೆಚ್ಚು ಅಸ್ಪಷ್ಟವಾಗಿಯಾದರೂ ಹೇಗೋ ಸಭೆಯ ಆಳ್ವಿಕೆಯು ಪ್ರಗತಿಯಲ್ಲಿದೆ ಎಂದು ಹೇಳುತ್ತದೆ; ಕೊರಿಂಥದವರಂತೆ ಅದರ ಅನುಯಾಯಿಗಳು ಕೊರತೆಯಿಲ್ಲದವರೂ, ಐಶ್ವರ್ಯವಂತರಾಗಿಯೂ ಇದ್ದು ನಮ್ಮ ಕರ್ತನು ಸಚಿತ್ರವಾಗಿ ವರ್ಣಿಸಿದಂತೆ ಅರಸರುಗಳಂತೆ ಅಧಿಕಾರ ನಡೆಸುತ್ತಾರೆ (ಪ್ರಕಟನೆ 3:17–18). ಈ ರೀತಿಯಲ್ಲಿ ನಾಮ ಮಾತ್ರದ ಸಭಾಸದಸ್ಯರು, ನಿಜವಾಗಿಯೂ ಪರಿವರ್ತನೆ ಹೊಂದದೇ ಇರುವವರು, ನಿಜವಾದ ಗೋಧಿಯಲ್ಲ, ಆದರೆ ಅನುಕರಣ ಮಾಡುವ ಹಣಜಿಗಳು – ಕ್ರಿಸ್ತನ ನಿಜವಾದ ಶಿಷ್ಯರುಗಳಿಗಿಂತ ಅಧಿಕ ಸಂಖ್ಯೆಯವರಾಗಿದ್ದಾರೆ. ಇವರುಗಳು ಪ್ರತಿಯೊಂದು ನಿಜವಾದ ಸಮರ್ಪಣೆಯನ್ನು ಮತ್ತು ಸ್ವಾರ್ಥತ್ಯಾಗವನ್ನು ಹೆಚ್ಚು ವಿರೋಧಿಸುವವರಾಗಿದ್ದಾರೆ, ಸತ್ಯದ ಸಲುವಾಗಿ, ನೀತಿವಂತಿಕೆಗಾಗಿ ಉಪದ್ರವವನ್ನು ಅನುಭವಿಸುವುದಿಲ್ಲ. ಅದಕ್ಕೆ ಬದಲಾಗಿ, ಹೆಚ್ಚೆಂದರೆ ಒಂದು ವಿಧವಾದ ಉಪವಾಸ ಮುಂತಾದವುಗಳನ್ನು ಹಿಡಿದು ಕೊಂಡಿರುತ್ತಾರೆ. ಅವರುಗಳು ನಿಜವಾಗಿಯೂ ಈ ಲೋಕದೊಂದಿಗೆ ಆಳ್ವಿಕೆ ಮಾಡುತ್ತಾರೆ ಮತ್ತು ನಮ್ಮ ಕರ್ತನು ತನ್ನ ಎರಡನೆಯ ಪ್ರತ್ಯಕ್ಷತೆಯಲ್ಲಿ ಸಿದ್ಧಪಡಿಸುವ ನಿಜವಾದ ದೇವರ ರಾಜ್ಯದ ಪಾಲುಗಾರಿಕೆಗೆ ಸಿದ್ಧತೆ ಮಾಡುವವರ ಸಾಲಿನಲ್ಲಿಲ್ಲ.

ಜಾಗರೂಕವಾಗಿ ಗಮನಿಸುವ ಯಾರಿಗಾದರೂ, ಈ ದೃಷ್ಟಿಕೋನಕ್ಕೂ ಮತ್ತು ಕ್ರಿಸ್ತನ ಮತ್ತು ಅಪೊಸ್ತಲರುಗಳ ಬೋಧನೆಗೂ ಅಸಮಂಜಸತೆಯು ವ್ಯಕ್ತವಾಗುವದು ಕಂಡುಬರುತ್ತದೆ. ಅವರುಗಳು ಅರಸನು

ಬರುವವರೆಗೆ ಯಾವುದೇ ರಾಜ್ಯವಿಲ್ಲ ಎಂದು ಬೋಧಿಸಿದರು (ಪ್ರಕಟನೆ 20:6; 3:21; 2 ತಿಮೋ. 2:12). ತತ್ಪರಿಣಾಮವಾಗಿ ಪರಲೋಕ ರಾಜ್ಯವು ಅದು ಬರುವವರೆಗೆ ಮಹಿಮೆಯಲ್ಲಿಯೂ, ಅಧಿಕಾರದಲ್ಲಿಯೂ ಸಿದ್ಧಗೊಳ್ಳುವ ವರೆಗೆ ಹಿಂಸೆಯನ್ನು ಅನುಭವಿಸಬೇಕಾಗಿದೆ.

## ದೇವರ ರಾಜ್ಯದ ಎರಡು ಹಂತಗಳು
## Two Phases of Kingdom of God

ನಮ್ಮ ಕರ್ತನು ಹೇಳಿದಂತೆ 'ದೇವರ ರಾಜ್ಯವು ಪ್ರತ್ಯಕ್ಷವಾಗಿ ಬರುವುದಿಲ್ಲ – ಅದರ ಮೊದಲನೆಯ ತೋರಿಕೆಯನ್ನು ಬಾಹ್ಯ ಪ್ರದರ್ಶನ ಮಾಡುವುದಿಲ್ಲ. ಎಂಬುದು ನಿಜವಾದರೂ, ಉಚಿತ ಸಮಯದಲ್ಲಿ ಅದು ಅದರ ತನ್ನ ಬಾಹ್ಯ, ಗೋಚರ, ಮತ್ತು ಸ್ಪಷ್ಟವಾದ ಸಂಕೇತಗಳೊಡನೆ ಪ್ರಕಟಗೊಳ್ಳುವುದು. ಪೂರ್ಣವಾಗಿ ಸಿದ್ಧಗೊಂಡಾಗ, ದೇವರ ರಾಜ್ಯವು ಎರಡು ಭಾಗಗಳದ್ದಾಗಿರುತ್ತದೆ. ಒಂದು ಆತ್ಮೀಕ ಅಥವಾ ಪರಲೋಕದ ಹಂತ ಮತ್ತೊಂದು ಭೂಲೋಕದ ಅಥವಾ ಮಾನವ ಹಂತ. ಆತ್ಮೀಕ ಹಂತವು ಮಾನವನಿಗೆ ಎಂದಿಗೂ ಕಣ್ಣಿಗೆ ಕಾಣುವುದಿಲ್ಲ. ಯಾಕೆಂದರೆ, ಅದನ್ನು ಕಟ್ಟುವವರು ದೈವಿಕ ಅಥವಾ ಆತ್ಮೀಕ ಸ್ವಭಾವವುಳ್ಳವರಾಗಿರುತ್ತಾರೆ. "ಮನುಷ್ಯರಲ್ಲಿ ಯಾರೂ ಆತನನ್ನು ಕಾಣಲಿಲ್ಲ, ಯಾರೂ ಕಾಣಲಾರನು" (1 ತಿಮೋ. 6:16; ಯೋಹಾನ 1:18). ಆದಾಗ್ಯೂ ಅದರ ಶಕ್ತಿ ಮತ್ತು ಪ್ರತ್ಯಕ್ಷತೆಯು ಮುಖ್ಯವಾಗಿ ದೇವರ ರಾಜ್ಯದ ಭೂಲೋಕದ ಹಂತವಾಗಿ ರಚಿಸಲ್ಪಟ್ಟಿರುವ ಅದರ ಮಾನವ ಪ್ರತಿನಿಧಿಗಳ ಮೂಲಕ ಪ್ರಬಲವಾಗಿ ಪ್ರಕಟಗೊಳ್ಳುವುದು.

ದೇವರ ರಾಜ್ಯದ ಆತ್ಮೀಕ ಹಂತವಾಗಿ ರಚಿಸಲ್ಪಟ್ಟವರು ಸುವಾರ್ತಾ ಯುಗದ ಜಯಶಾಲಿಗಳಾದ ದೇವರ ಭಕ್ತರು (ಸಂತರು) – ಕ್ರಿಸ್ತನ ಶಿರಸ್ಸು ಮತ್ತು ದೇಹ ಇವುಗಳು ಮಹಿಮೆ ಹೊಂದಿಕೊಳ್ಳುತ್ತವೆ. ಅವರ ಪುನರುತ್ಥಾನ ಮತ್ತು ಅಧಿಕಾರಕ್ಕೆ ಉನ್ನತೀಕರಣವು ಇತರರಿಗಿಂತ ಮುಂದಾಗಿರುತ್ತದೆ. ಯಾಕೆಂದರೆ, ಈ ವರ್ಗದ ಮೂಲಕವೇ ಉಳಿದವರೆಲ್ಲರೂ ಆಶೀರ್ವಾದ ಹೊಂದಿಕೊಳ್ಳುವರು (ಇಬ್ರಿಯ 11:39,40), ಅವರದು ಪ್ರಥಮ ಪುನರುತ್ಥಾನ (ಪ್ರಕಟನೆ 20:5*). ಈ ಭವ್ಯವಾದ ಪ್ರತಿಷ್ಠಿಸಲ್ಪಟ್ಟ ಜೊತೆಗಾರ ತಂಡ – ಕ್ರಿಸ್ತನು – ದೇವರ ಸ್ವಭಾವಕ್ಕೆ ಅವರ ಉನ್ನತೀಕರಣವನ್ನು ಅಗತ್ಯಗೊಳಿಸುತ್ತಾನೆ; ದೈವಿಕ ಶಕ್ತಿಯ ಹೊರತಾಗಿ ಬೇರೆ ಯಾವುದೂ ಇದನ್ನು ನೆರವೇರಿಸಲಾಗದು. ಅವರದು ಈ ಲೋಕದ ಸಂಬಂಧವಾದ ಸಂಗತಿಗಳಿಗೆ ಮಾತ್ರವಲ್ಲ, ಆದರೆ, ಭೂಲೋಕ ಮತ್ತು ಪರಲೋಕಗಳಲ್ಲಿರುವ ಎಲ್ಲಾ ಆತ್ಮೀಕ

---

* ಈ ವಾಕ್ಯದಲ್ಲಿ "ಮಿಕ್ಕ ಸತ್ತವರು ಆ ಸಾವಿರ ವರ್ಷಗಳು ತೀರುವ ತನಕ ಜೀವಿತರಾಗಿ ಏಳಲಿಲ್ಲ" ಎಂಬ ಮಾತುಗಳು ಕೃತಕವಾದವುಗಳು. ಅವುಗಳು ಪ್ರಾಚೀನ ಮತ್ತು ಹೆಚ್ಚು ನಂಬತಕ್ಕ ಗ್ರೀಕ್ MSS ನಲ್ಲಿ, Sinaitic Vatican numbers 1209 ಮತ್ತು 1160ರಲ್ಲಿಯಾಗಲೀ, ಗ್ರೀಕ್ MSS ನಲ್ಲಿಯಾಗಲೀ ಕಂಡುಬರುವುದಿಲ್ಲ. ಆಧುನಿಕ ಪ್ರತಿಗಳಲ್ಲಿ ಕಂಡುಬರುವ ಅನೇಕ ಸೇರ್ಪಡೆಗಳು ಯುಕ್ತವಾಗಿ ಸತ್ಯವೇದಕ್ಕೆ ಸೂಕ್ತವಾಗಿ ಸಂಬಂಧಿಸಿರದ ಸೇರ್ಪಡೆಗಳಾಗಿವೆ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ದೇವರ ವಾಕ್ಯಗಳಿಗೆ ಯಾವುದನ್ನೂ ಕೂಡಿಸಬಾರದು ಎಂಬ ಆಜ್ಞೆಯಿರುವುದರಿಂದ, ಅಂಥಾಃ ಸೇರ್ಪಡೆಗಳನ್ನು ಅದರ ಕೃತಿಮತೆಯ (ಖೋಟಾ) ಲಕ್ಷಣಗಳು ಸ್ಥಿರಪಟ್ಟ ಕೂಡಲೇ ಅವುಗಳನ್ನು ನಿರಾಕರಿಸುವುದು ನಮ್ಮ ಕರ್ತವ್ಯವಾಗಿದೆ. ಸೂಚಿಸಿರುವ ಮಾತುಗಳು ಬಹುಶಃ ಐದನೆಯ ಶತಮಾನದಲ್ಲಿ ಹಿಂದಿನ ದಿನಗಳ ಗ್ರೀಕ್ ಇಲ್ಲವೇ ಸಿರಿಯಾಕ್ MS ಗಳಲ್ಲಿ ಈ ವಾಕ್ಯಾಂಗ ಇಲ್ಲದ ಕಾರಣ ಆಕಸ್ಮಿಕವಾಗಿ ಈ ವಾಕ್ಯಭಾಗದಲ್ಲಿ ಇವುಗಳು ನುಸುಳಿದ್ದಿರಬಹುದು. ಇದು ಬಹುಶಃ ಮೊದಲಲ್ಲಿ ಒಂದು ಅಂಚಿನಲ್ಲಿ ಓದುಗರೊಬ್ಬರು ಈ ಬಗ್ಗೆ ತಮ್ಮ ವಿಮರ್ಶೆಯನ್ನು ವ್ಯಕ್ತಪಡಿಸುವಂತೆ ಬರೆದ ವಾಖ್ಯಾನವಾಗಿದ್ದಿರಬಹುದು. ಇದನ್ನು ವಾಕ್ಯಭಾಗಕ್ಕೆ ನಂತರದ ಭಾಷಾಂತರಕಾರನು ವಾಕ್ಯಭಾಗ ಮತ್ತು ವಿಮರ್ಶೆಯ ವ್ಯತ್ಯಾಸ ಕಾಣದೆ ಇದನ್ನು ಸೇರಿಸಿದ್ದಿರಬಹುದು.

ಏನೇ ಆದರೂ ಈ ವಾಕ್ಯಭಾಗದ ಕೃತಿಮತೆಯು ಇಲ್ಲಿ ತಿಳಿಸಿರುವ ವಾಕ್ಯಾಂಗ "ಯೋಜನೆಗೆ" ಅಗತ್ಯವಿಲ್ಲ; ಯಾಕೆಂದರೆ, ಈ ದೊಡ್ಡ ಪ್ರಪಂಚದಲ್ಲಿ ಸತ್ತವರಲ್ಲಿ ಉಳಿದವರು ಪುನಃ ಪೂರ್ಣ ಅಥವಾ ಪರಿಪೂರ್ಣ ಅರ್ಥದಲ್ಲಿ ಪಾಪ ಮಾಡುವ ಮೊದಲು, 'ನೀನು ಸತ್ತೇ ಹೋಗುವಿ' ಎಂಬ ಶಾಪವನ್ನು ಹೊಂದುವವರೆಗೆ ಆದಾಮನು ಜೀವಿಸಿದಂತೆ ಜೀವಿಸುವುದಿಲ್ಲ. ಯಾವುದೇ ಬಲಹೀನತೆಗಳಿಲ್ಲದ, ಸಾವಿಲ್ಲದ ಪರಿಪೂರ್ಣ ಜೀವನವನ್ನು ಮಾತ್ರವೇ ದೇವರು 'ಜೀವ' ಎಂಬ ಪದವನ್ನು ಮಾನ್ಯಮಾಡುವ ಏಕೈಕ ಅರ್ಥವುಳ್ಳದ್ದಾಗಿದೆ. ಆತನ ದೃಷ್ಟಿಕೋನದಿಂದ ಸಮಸ್ತ ಲೋಕವು ಈಗಾಗಲೇ ಜೀವವನ್ನು ಕಳಕೊಂಡಿದ್ದು ಸಾಯುವುದಾಗಿದೆ ಮತ್ತು ಇದನ್ನು ಹೆಚ್ಚು ಸರಿಯಾದ ರೀತಿಯಲ್ಲಿ ಜೀವಂತರು ಎಂಬುದಕ್ಕಿಂತ ಸತ್ತವರು ಎಂಬದಾಗಿ ವಿವರಿಸಬಹುದು (2 ಕೊರಿಂಥ 5:14, ಮತ್ತಾಯ 8:22).

'ಪುನರುತ್ಥಾನ' ಎಂಬ ಪದವು (ಗ್ರೀಕ್‌ನಲ್ಲಿ ಅನಾಸ್ಟಾಸಿಸ್ (anastasis)) ಎದ್ದುಬರುವುದನ್ನು ಸೂಚಿಸುತ್ತದೆ. ಮಾನವನಿಗೆ ಸಂಬಂಧಿಸಿದಂತೆ, ತಾನು ಬಿದ್ದು ಹೋದ ಸ್ಥಿತಿಯಿಂದ ಆದಾಮನ ಮೂಲಕ ಕಳೆದುಹೋಗಿದ್ದ ಸಂಪೂರ್ಣವಾದ ಮಾನವತ್ವಕ್ಕೆ ಪುನಃ ಏರುವುದನ್ನು ಸೂಚಿಸುತ್ತದೆ. ನಮ್ಮ ಜನಾಂಗವು ಪರಿಪೂರ್ಣ ಸ್ಥಿತಿಯಿಂದ ಬಿದ್ದುಹೋಗಿದ್ದು ಪುನಃ ಅಂಥಾಃ ಪರಿಪೂರ್ಣಸ್ಥಿತಿಯಲ್ಲಿ ಕ್ರಮೇಣವಾಗಿ ಸಹಸ್ರಮಾನಯುಗದ ಪುನರಃವಶದಲ್ಲಿ ಅಥವಾ ಪುನರುತ್ಥಾನದಲ್ಲಿ ಎದ್ದುಬರುವುದು. ಸಹಸ್ರಮಾನ ಯುಗವು ವಿಚಾರಣೆಯ ಕಾಲ ಮಾತ್ರವಲ್ಲ, ಅದು ಆಶೀರ್ವಾದದ ಕಾಲವೂ ಆಗಿದೆ ಮತ್ತು ಪುನರುತ್ಥಾನದ ಮೂಲಕ ಅಥವಾ ಜೀವಕ್ಕೆ ಪುನಃಸ್ಥಾಪಿತವಾಗುವ ಮೂಲಕ ಅವಕಾಶವಿರುವಾಗ ಸಂತೋಷದಿಂದ ವಿಧೇಯರಾದವರಿಗೆ ಅವರು ಕಳೆದುಕೊಂಡವುಗಳೆಲ್ಲವೂ ಹಿಂದಕ್ಕೆ ಕೊಡಲ್ಪಡುವುದು. ಪುನರುತ್ಥಾನದ ಪ್ರಕ್ರಿಯೆಯು ಕ್ರಮೇಣವಾದುದು, ಜೀವದ ಮತ್ತು ಈಗ ಅನುಭವಿಸುತ್ತಿರುವ ಪ್ರಜ್ಞಾಸ್ಥಿತಿಯ ಮಟ್ಟಿಗೆ ಕೇವಲ ಎಚ್ಚರಗೊಳ್ಳುವುದು ಕೇವಲ ಕ್ಷಣದ ಕಾರ್ಯವಾದರೂ ಅದರ ಪೂರ್ಣ ನೆರವೇರಿಕೆಗೆ ಸಮಗ್ರ ಯುಗವು ಬೇಕಾಗುತ್ತದೆ. ಈ ಕಾರಣದಿಂದ ಸಾವಿರ ವರ್ಷಗಳು ಮುಕ್ತಾಯವಾಗುವವರೆಗೆ ಅಂದರೆ ಜನಾಂಗವು ಆದಾಮನಲ್ಲಿ ಕಳಕೊಂಡ ಪೂರ್ಣಮಟ್ಟದ ಜೀವನ ಪಡೆಯುವವರೆಗೂ ಇದು ಮುಗಿಯುವಂಥಾದ್ದಲ್ಲ. ಪರಿಪೂರ್ಣ ಜೀವಿತಕ್ಕಿಂಥ ಯಾವುದೇ ಕಡಿಮೆಯಾದುದು ಒಂದು ಭಾಗಶಃ ಮರಣವಾಗಿರುವುದರಿಂದ, ಮೇಲಿನ ಮಾತುಗಳು ಸ್ಫೂರ್ತಿದಾಯಕ ದಾಖಲೆಯ ಭಾಗವಲ್ಲವಾದರೂ ಅದು ಅದನ್ನು ಅನುಸರಿಸುತ್ತದೆ ಮತ್ತು ಸತ್ತವರಲ್ಲಿ ಉಳಿದವರು ಪುನಃ ಜೀವಿಸುವುದಿಲ್ಲ ಎಂಬದು ಕಠಿಣವಾದ ಸತ್ಯವಾಗಿದೆ. ಅವರು ಕಳೆದುಕೊಂಡ ಪುನರ್‌ವಶದ ಮತ್ತು ಆಶೀರ್ವದಿಸಿದ ಜೀವವನ್ನು ಸಹಸ್ರ ವರ್ಷಗಳು ಸಂಪೂರ್ಣವಾಗಿ ಮುಗಿಯುವವರೆಗೆ ಪುನಃ ಪೂರ್ಣವಾಗಿ ಪಡೆಯುವುದಿಲ್ಲ.

ಮಾನವಜೀವಿಗಳ ಎಲ್ಲಾ ಸಂಗತಿಗಳಿಗೆ ಸಂಬಂಧಿಸಿದ್ದು (ಮತ್ತಾಯ 28:18; ಕೊಲೊಸ್ಸೆ 1:20; ಎಫೆಸ 1:10; ಫಿಲಿಪ್ಪ 2:10; 1 ಕೊರಿಂಥ 6:3).

ದೇವರ ರಾಜ್ಯದ ಭೂಲೋಕ ಹಂತದ ಕಾರ್ಯವು ಈ ಲೋಕಕ್ಕೂ, ಮಾನವ ಕುಲಕ್ಕೂ ಸೀಮಿತವಾಗಿದೆ. ಅದರಲ್ಲಿ ಭಾಗವಹಿಸುವ ಗೌರವಾನ್ವಿತರೂ ಜನರ ಮಧ್ಯದಲ್ಲಿದ್ದು, ದೇವರಿಂದ ಹೆಚ್ಚು ಉನ್ನತಿ ಹೊಂದಿದವರು ಮತ್ತು ಗೌರವ ಹೊಂದಿದವರೂ ಆಗಿರುತ್ತಾರೆ. ಈ ವರ್ಗದವರನ್ನು 8ನೇ ಅಧ್ಯಾಯದ ಪುಟ 95ರಲ್ಲಿ ಸೂಚಿಸಲಾಗಿದೆ. ಅವರ ನ್ಯಾಯ ತೀರ್ವಿಕೆಯ ದಿನವು ಸುವಾರ್ತಾಯುಗದ ಮುಂಚಿನದಾಗಿದೆ. ಪರೀಕ್ಷಿಸಲ್ಪಟ್ಟು, ಪ್ರಾಮಾಣಿಕರೆಂದು ಕಂಡುಬಂದು, ಎಚ್ಚರಗೊಳ್ಳುವಾಗ ಅವರನ್ನು ಪುನಃ ನ್ಯಾಯವಿಚಾರಣೆಯ ಮುಂದೆ ತರಲಾಗುವುದಿಲ್ಲ, ಆದರೆ ಆ ಕೂಡಲೇ ಅವರು ತಮ್ಮ ನಿಷ್ಠಾವಂತಿಕೆಯ ಬಹುಮಾನವನ್ನು ಹೊಂದಿಕೊಳ್ಳುವರು – ತಕ್ಷಣದಲ್ಲಿ ಮಾನವರ ಪರಿಪೂರ್ಣತೆಗಾಗುವ ಪುನರುತ್ಥಾನ. (ಇವರುಗಳಿಗಿಂತ ಬೇರೆಯವರು ಮತ್ತು ಆತ್ಮೀಕ ವರ್ಗದವರು ಸಹಸ್ರಮಾನ ಯುಗದಲ್ಲಿ ಪರಿಪೂರ್ಣತೆಗೆ ಕ್ರಮೇಣವಾಗಿ ಏರಿಸಲ್ಪಡುವರು). ಈ ರೀತಿಯಲ್ಲಿ ಈ ವರ್ಗವು ಉಳಿದ ಮನುಕುಲದವರಿಗೆ ಪುನರ್‌ವಶ ಮತ್ತು ಆಶೀರ್ವಾದದಲ್ಲಿ ಕ್ರಿಸ್ತನ ಮಾನವ ನಿಯೋಗಿಗಳಾಗಿ ತನ್ನ ಮುಂದಿನ ಕಾರ್ಯಕ್ಕೆ ಒಮ್ಮೆಗೇ ಸಿದ್ಧವಾಗುವುದು. ಕ್ರಿಸ್ತನ ಕಾರ್ಯವನ್ನು ನೆರವೇರಿಸಲು ಆತ್ಮೀಕ ಸ್ವಭಾವದ, ಅಗತ್ಯತೆ ಇರುವುದರಿಂದ, ಅಂಥಃ ಪರಿಪೂರ್ಣವಾದ ಮಾನವ ಸ್ವಭಾವವು ಮಾನವರ ಮಧ್ಯದಲ್ಲಿ ಮಾಡುವ ಕಾರ್ಯಕ್ಕೆ ಅಗತ್ಯವಾಗುತ್ತದೆ. ಇವರುಗಳು ಮಾನವರ ಮಧ್ಯೆ ಸೇವೆ ಮಾಡುವವರಾಗಿದ್ದು ಅವರಿಗೆ ಕಾಣಿಸಿಕೊಳ್ಳುವರು. ಇವರು ಜನರಲ್ಲಿ ಸೇವೆ ಸಲ್ಲಿಸುತ್ತಾರೆ ಮತ್ತು ಜನರ ಮಧ್ಯೆ ಕಂಡುಬರುವರು. ಆದರೆ ಅವರ ಪರಿಪೂರ್ಣತೆಯ ವೈಭವವು ಇತರರಿಗೆ ನಿರಂತರ ಉದಾಹರಣೆಯಾಗಿದೆ ಮತ್ತು ಅದೇ ಪರಿಪೂರ್ಣತೆಯನ್ನು ಸಾಧಿಸುವಂತೆ ಹೆಣಗಲು ಇತರ ಜನರಿಗೆ ಉತ್ತೇಜನ ನೀಡುತ್ತದೆ. ಈ ಪುರಾತನ ಪಿತೃಗಳು ರಾಜ್ಯದ ಮಾನವ ಹಂತದಲ್ಲಿರುತ್ತಾರೆ. ಮನು ಕುಲದವರಿಗೆ ಕಾಣಿಸಿಕೊಂಡು ನಂಬಿಕೆ ಇಲ್ಲದ ಯೆಹೂದ್ಯರಿಗೆ ಅವರಿಂದ ತಿರಸ್ಕರಿಸಲ್ಪಟ್ಟ ಯೇಸು ಹೇಳಿದ ಮಾತುಗಳಿಂದ ಪೂರ್ಣವಾಗಿ ಪ್ರಮಾಣೀಕರಿಸ ಲ್ಪಟ್ಟಿರುತ್ತಾರೆ. ಆತನು ಹೇಳಿದ್ದೇನೆಂದರೆ “ಅಬ್ರಹಾಮ, ಇಸಾಕ, ಯಾಕೋಬ ಮತ್ತು ಎಲ್ಲಾ ಪ್ರವಾದಿಗಳೂ ದೇವರ ರಾಜ್ಯದಲ್ಲಿರುವುದನ್ನು ನೀವು ನೋಡುವಿರಿ” (ಲೂಕ 13:28). ಪ್ರಭುವು ಆತನು ಮತ್ತು ಅಪೋಸ್ತಲರು ಅಬ್ರಹಾಮನೊಡನೆ ಕಾಣಿಸಿಕೊಳ್ಳುತ್ತೇವೆ ಎಂಬುದಾಗಿ ಹೇಳಿಲ್ಲದಿರುವುದನ್ನು ನೀವು ಗಮನಿಸಬೇಕು. ವಾಸ್ತವವಾಗಿ ಹೇಳುವುದಾದರೆ ಮಾನವರು ಭೂಲೋಕದ ಹಂತದ ರಾಜ್ಯವನ್ನು ಕಂಡು ಅದರೊಂದಿಗೆ ಬೆರೆಯುವುದನ್ನು ಕಾಣುವರು, ಆದರೆ ಆತ್ಮೀಕರೊಂದಿಗೆ ಅಲ್ಲವೆಂಬುದನ್ನು ಕಾಣಬಹುದು. ಮತ್ತೆ ಕೆಲವರು ನಿಸ್ಸಂದೇಹವಾಗಿ ತಾವು ಅಂಥಃ ದೊಡ್ಡ ಗೌರವವನ್ನು ತಿರಸ್ಕರಿಸಿದ್ದೇವೆಂದು ಎಷ್ಟೋ ಬಾಧೆಪಡುವರು.

ಪರಲೋಕದ ರಾಜ್ಯದ ಈ ಎರಡು ಹಂತಗಳು ಹೇಗೆ ಸಾಮರಸ್ಯದಿಂದ ಕಾರ್ಯವೆಸಗುತ್ತವೆ ಎಂಬುದರ ಬಗ್ಗೆ ನಮಗೆ ಸ್ಪಷ್ಟವಾದ ಮಾಹಿತಿ ಕೊಡಲ್ಪಟ್ಟಿರುವುದಿಲ್ಲ. ಆದರೆ, ದೇವರ ಶಕ್ತಿಯ ಬರಲಿರುವ ಪ್ರಕಟನೆಗಳು ಆ ಸಾಂಕೇತಿಕ ಯುಗಗಳಿಗಿಂತ ಎಷ್ಟೋ ಹೆಚ್ಚಾಗಿದ್ದರೂ ಅವರುಗಳು ಇಸ್ರಾಯೇಲ್ಯರೊಡನೆ ತಮ್ಮ ಪ್ರತಿನಿಧಿಗಳಾದ ಮೋಶೆ, ಆರೋನ, ಯೆಹೋಶುವ ಮತ್ತು ಪ್ರವಾದಿಗಳು ಇತ್ಯಾದಿಗಳ ಮೂಲಕ ದೇವರ ವ್ಯವಹಾರದಲ್ಲಿ ಹೇಗೆ ಕಾರ್ಯನಿರ್ವಹಿಸಬಹುದು ಎಂಬುದಕ್ಕೆ ನಮ್ಮಲ್ಲಿ ಒಂದು ದೃಷ್ಟಾಂತವಿದೆ; ಯಾಕೆಂದರೆ, ಬರಲಿರುವ ಯುಗದ ಕಾರ್ಯವು ಸತ್ತವರೆಲ್ಲರನ್ನೂ ಎಚ್ಚರಗೊಳಿಸುವುದನ್ನು, ವಿಧೇಯರನ್ನು ಪರಿಪೂರ್ಣತೆಗೆ ಪುನರ್‌ವಶ ಪಡಿಸುವುದನ್ನು ಒಳಗೊಂಡಿದೆ. ಈ ಕಾರ್ಯವು ಮಾನವರ ಮಧ್ಯೆ ನಿಯಂತ್ರಿಸುವ ಸ್ಥಾನದಲ್ಲಿ ಸಮರ್ಪಕ ವ್ಯಕ್ತಿಗಳುಳ್ಳ ಒಂದು ಸಮರ್ಪಕವಾದ ಸರ್ಕಾರದ ಸ್ಥಾಪನೆಯನ್ನು ಅಗತ್ಯಗೊಳಿಸುತ್ತದೆ. ಅವರುಗಳು ರಾಜ್ಯದ ವ್ಯವಹಾರಗಳ ಬಗ್ಗೆ ಸರಿಯಾದ ಆಜ್ಞೆಗಳನ್ನು ಹೊರಡಿಸಬಹುದಾಗಿದೆ. ಎಲ್ಲಾ ಲಕ್ಷಣಗಳುಳ್ಳ ಯೋಗ್ಯವಾದ ಶಿಕ್ಷಣ ಅನುಕೂಲತೆಗಳನ್ನು ಮತ್ತು ವಿವಿಧ ರೀತಿಯ ಪರೋಪಕಾರಿ ಕಾರ್ಯಕ್ರಮಗಳನ್ನು ಒದಗಿಸುವ ಅಗತ್ಯತೆ ಇದೆ. ಮಾನವ ಕುಲವನ್ನು ಈ ರೀತಿಯಲ್ಲಿ ಖಚಿತವಾದ ಮತ್ತು ಸ್ಥಿರವಾದ ಹೆಜ್ಜೆಗಳಿಂದ (ಅದೇ ರಾಜ್ಯದ ಅದೃಶ್ಯರಾದ ಆತ್ಮೀಕ ಸದಸ್ಯರ ನಿರ್ದೇಶನದಲ್ಲಿ) ಉನ್ನತಿಗೆ ತರುವ ಉಧಾತ್ತಕಾರ್ಯಕ್ಕೆ ಪುರಾತನ ಪಿತೃಗಳು ನೇಮಕಗೊಂಡದ್ದು ಗೌರವಯುತವಾಗಿದೆ ಮತ್ತು ಇದಕ್ಕೆ ಅವರು ಸಿದ್ಧರಾಗಿ ಈ ಲೋಕದ ರಾಜ್ಯಗಳು ಭಗ್ನವಾಗಿ ಹೋದ ಮೇಲೆ ಮತ್ತು ಅವರ ಅರಸನಾದ ಸೈತಾನನು ಬಂಧಿತನಾದ ಕೂಡಲೇ, ಶೀಘ್ರದಲ್ಲಿಯೇ ಬರಲಿದ್ದಾರೆ ಮತ್ತು ದೈವೀಕವಾಗಿ ಗೌರವಿಸಲ್ಪಟ್ಟ ದೇವರರಾಜ್ಯದ ಪ್ರತಿನಿಧಿಗಳಾಗಿ ಕೂಡಲೇ ಎಲ್ಲಾ ಜನರ ಗೌರವವನ್ನು

ಮತ್ತು ಸಹಕಾರವನ್ನು ಪಡಕೊಳ್ಳುವರು.

ದೇವರ ರಾಜ್ಯದ ಭೂಲೋಕದ ಹಂತದಲ್ಲಿ ಸ್ಥಳವನ್ನು ಪಡಕೊಳ್ಳುವುದು ಪರಿಪೂರ್ಣ ಹೃದಯದ ಎಲ್ಲಾ ಬಯಕೆಗಳ ಮತ್ತು ಆಕಾಂಕ್ಷೆಗಳ ತೃಪ್ತಿಯಾಗಿದೆ. ಅದರ ಮೊದಲ ಪ್ರವೇಶಕ್ಕೆ ಅದೊಂದು ಮಹಿಮೆ ಮತ್ತು ತೃಪ್ತಿಕರ ಭಾಗವಾಗಿದ್ದು, ಹಾಗೂ ಮಹಿಮೆಯು ಕಾಲವು ಇನ್ನೂ ಮುಂದುವರೆದಂತೆಲ್ಲಾ ಅದು ಕೂಡುತ್ತಾ ಹೋಗುವುದು ಮತ್ತು ಆಶೀರ್ವದಿತ ಕಾರ್ಯವು ಪ್ರಗತಿಹೊಂದಿಕೊಳ್ಳುವುದು. ಮತ್ತು ಆಗ, ಸಾವಿರ ವರ್ಷಗಳ ಅಂತ್ಯದಲ್ಲಿ ಪುನರ್‌ವಶದ ಮಹಾ ಕಾರ್ಯವು ಕ್ರಿಸ್ತನಿಂದ (ಹೆಚ್ಚಾಗಿ ಈ ಶ್ರೇಷ್ಠ ಮಾನವ ಸಹೋದ್ಯೋಗಿಗಳ ನಿಯೋಗದ ಮೂಲಕ) ನೆರವೇರುವುದು; ಸಮಸ್ತ ಮಾನವ ಕುಲವು (ತಿದ್ದಲಾಗದವರನ್ನು ಹೊರತುಪಡಿಸಿ – ಮತ್ತಾಯ 25:46; ಪ್ರಕಟನೆ 20:9). ಯಾವುದೇ ಕಳಂಕ, ಸುಕ್ಕು ಅಥವಾ ದೋಷ ಯಾವುದೂ ಇಲ್ಲದೇ ಯೆಹೋವನ ಸನ್ನಿಧಿಯಲ್ಲಿ ಸಮ್ಮತಿ ಪಡೆದು ನಿಂತುಕೊಳ್ಳುವುದು. ಇವರುಗಳು ಕಾರ್ಯದಲ್ಲಿನ ಸಾಧನಗಳಾಗಿದ್ದು ಅವರ ಜೊತೆ– ಮಾನವರಲ್ಲಿ, ದೇವರ ಮತ್ತು ಕ್ರಿಸ್ತನ ಹಾಗೆಯೇ ದೇವದೂತರುಗಳ ಮುಂದೆ "ತೇಜೋಮಯವಾದ ಆಕಾಶಮಂಡಲದಂತೆ ಪ್ರಕಾಶಿಸಿಸುವರು" (ದಾನಿಯೇಲ 12:3). ಅವರ ಕಾರ್ಯ ಮತ್ತು ಪ್ರೀತಿಯ ಶ್ರಮ ಅವರ ಆಭಾರಿಯಾಗಿರುವ ಜೊತೆ–ಮನುಷ್ಯರಿಂದ ಎಂದೂ ಮರೆಯಲ್ಪಡುವುದಿಲ್ಲ. "ನೀತಿವಂತರನ್ನು ಯಾವಾಗಲೂ ನೆನಸುವರು" (ಕೀರ್ತನೆ 112:6).

ಆದರೆ, ಹೆಚ್ಚಿನದು ರಾಜ್ಯದ ಭೂಲೋಕದ ಹಂತವನ್ನು ಒಳಗೊಂಡ ಆ ಪರಿಪೂರ್ಣ ವ್ಯಕ್ತಿಗಳ ಮಹಿಮಾ ರಾಶಿಯಾಗಿರುತ್ತದೆ. ಪರಲೋಕದ ಮಹಿಮೆಯು ಶ್ರೇಷ್ಠತೆಯ ಮಹಿಮೆಯಾಗಿದೆ. ಮೊದಲಿನವರು ಪರಲೋಕದ ನಿತ್ಯನಿರಂತರವಾದ ನಕ್ಷತ್ರಗಳಂತೆ ಶೋಭಿಸುವಾಗ, ಎರಡನೆಯವರು ಸೂರ್ಯನಂತೆ – ಅಂತರಿಕ್ಷದ ಪ್ರಕಾಶದಂತೆ ಶೋಭಿಸುವರು (ದಾನಿಯೇಲ 12:3). ಪರಲೋಕದ ಮತ್ತು ಭೂಲೋಕದ ಗೌರವಗಳು ಕ್ರಿಸ್ತನ ಪಾದಗಳಲ್ಲಿ ಇಡಲ್ಪಡುವುದು. ಮಾನವ ಮನಸ್ಸು ನಿರಂತರವಾದ ಲೆಕ್ಕಿಸಲಾಗದ ಯುಗಗಳಲ್ಲಿ ಕ್ರಿಸ್ತನ ಮೂಲಕ ಹೊರಪಡುವ ಮಹಿಮೆಯನ್ನು ಅಂದಾಜಿಸಬಹುದೇ ಹೊರತು ಅದನ್ನು ಸ್ಪಷ್ಟವಾಗಿ ಊಹಿಸಲಾಗುವುದಿಲ್ಲ. (ರೋಮಾ. 8:18; ಎಫೆಸ 2:7–12).

ಈ ಎರಡೂ ಹಂತಗಳ ಮೂಲಕ "ನಿನ್ನ ಸಂತತಿಯನ್ನು ಹೆಚ್ಚಿಸೇ ಹೆಚ್ಚಿಸುವೆನು, ಅದನ್ನು ಆಕಾಶದ ನಕ್ಷತ್ರಗಳಂತೆಯೂ, ಸಮುದ್ರ ತೀರದಲ್ಲಿರುವ ಉಸುಬಿನಂತೆಯೂ ಅಸಂಖ್ಯವಾಗಿ ಮಾಡುವೆನು" (ಆದಿ. 22:17) ಮತ್ತು "ಭೂಮಿಯ ಎಲ್ಲಾ ಜನಾಂಗಗಳಿಗೂ ನಿನ್ನ ಸಂತತಿಯ ಮೂಲಕ ಆಶೀರ್ವಾದ ಉಂಟಾಗುವುದು" (ಆದಿ. 22:18) ಎಂಬ ಅಬ್ರಹಾಮನಿಗೆ ನೀಡಲ್ಪಟ್ಟ ವಾಗ್ದಾನಗಳನ್ನು ಪರಿಶೀಲಿಸಬೇಕಾಗುತ್ತದೆ. ಭೂಲೋಕದ ಮತ್ತು ಪರಲೋಕದ ಸಂತಾನ ಇವೆರಡೂ ಈ ಲೋಕಕ್ಕೆ ಆಶೀರ್ವಾದ ನೀಡುವ ದೇವರ ಸಾಧನಗಳಾಗಿವೆ. ವಾಗ್ದಾನಗಳ ಎರಡೂ ಹಂತಗಳು ದೇವರಿಂದ ಸ್ಪಷ್ಟವಾಗಿ ಕಂಡುಬಂದು, ಆದಿಯಿಂದಲೇ ದೇವರಿಂದ ಉದ್ದೇಶಿಸಲಾಗಿವೆ, ಆದರೆ ಭೂಲೋಕದವು ಮಾತ್ರವೇ ಅಬ್ರಹಾಮನಲ್ಲಿ ಗೋಚರಿಸಿದವು. ದೇವರು ಆತ್ಮೀಕ ವರ್ಗದ (ಅಪೋಸ್ತಲರು ಮತ್ತು ಇತರರ) ಮುಖ್ಯಸ್ಥನನ್ನು ಸ್ವಾಭಾವಿಕ ಸಂತಾನದಿಂದ ಆರಿಸಿಕೊಂಡು ಅವರಿಗೆ ಮುಖ್ಯವಾದ ಆತ್ಮೀಕ ಆಶೀರ್ವಾದವನ್ನು, ಉಚಿತ ಸಮಯದಲ್ಲಿ ಪರಲೋಕದ ಕರೆಯನ್ನು ಜೀವಿಸಿದ ಎಲ್ಲಾ ಜನಾಂಗಗಳಿಗೂ ನೀಡಿಕೊಟ್ಟನಾದರೂ ಇದು ಅಬ್ರಹಾಮನು ಎಂದೂ ಕಾಣದ ಅತ್ಯುತ್ತಮ ಅನುಗ್ರಹವಾಗಿದೆ.

ಪೌಲನು ರೋಮಾ. 11:17ರಲ್ಲಿ ಅಬ್ರಹಾಮನ ಒಡಂಬಡಿಕೆಯನ್ನು ಕುರಿತು ಮಾತನಾಡುತ್ತಾ ಅದೊಂದು ಬೇರಿದ್ದಂತೆ ಮತ್ತು ಆ ಬೇರಿನ ಮೂಲಕವಾಗಿ ಐಹಿಕ ಇಸ್ರಾಯೇಲ್ಯರು ಸ್ವಾಭಾವಿಕವಾಗಿ ಬೆಳೆಯುತ್ತಾರೆ. ಆದರೆ ಈ ಸ್ವಾಭಾವಿಕ ಕೊಂಬೆಗಳಲ್ಲಿ ನಂಬಿಕೆ ಇಲ್ಲದಿರುವಾಗ ಅವುಗಳನ್ನು ಕಡಿದುಹಾಕಿ, ಅವುಗಳ ಜಾಗದಲ್ಲಿ ಅನ್ಯಜನರ ವಿಶ್ವಾಸಿಗಳನ್ನು ಕಸಿಮಾಡಲಾಯಿತು. ಇದು ಎರಡು ಸಂತತಿಗಳ ಅಂದರೆ ರಾಜ್ಯದ ಎರಡೂ ಹಂತಗಳನ್ನೊಳಗೊಂಡ ಭೂಲೋಕ (ಮಾನವ), ಪರಲೋಕ (ಆತ್ಮೀಕ) ಸಂತತಿಗಳ ಉದ್ಧಾರವು ವಾಗ್ದಾನದ ದುಪ್ಪಟ್ಟು ನೆರವೇರಿಕೆಯನ್ನು ಸಾಬೀತುಪಡಿಸುತ್ತದೆ. ಮೂಲ (ಬೇರು) ಒಡಂಬಡಿಕೆಯು ಎರಡು ವಿಭಿನ್ನ ಶಾಖೆ ಅಂದರೆ ಕೊಂಬೆಗಳನ್ನೊಳಗೊಂಡಿದೆ. ಪುನರುತ್ಥಾನದಲ್ಲಿ ಇದರ ಪ್ರತಿಯೊಂದೂ ತನ್ನದೇ ಆದ ರೀತಿಯಲ್ಲಿ ಸಂಪೂರ್ಣವಾದ ಫಲಗಳನ್ನು ಹೊಂದಿರುತ್ತದೆ. ಅಂದರೆ ರಾಜ್ಯದ ಅಧಿಕಾರದಲ್ಲಿ ಮಾನವ ಮತ್ತು ಆತ್ಮೀಕ ವರ್ಗಗಳನ್ನೊಳಗೊಂಡಿರುತ್ತದೆ. ವಿಭಿನ್ನ ಅಭಿವೃದ್ಧಿ ಕ್ರಮದಲ್ಲಿ ಮೊದಲನೆಯದು ಸ್ವಾಭಾವಿಕ ಅಥವಾ ಪಾಕೃತಿಕವಾಗಿದ್ದು ನಂತರದಲ್ಲಿ ಪರಲೋಕದ ಅರಸರುಗಳು; ಆದರೆ, ಸ್ಥಾನದ ಮಹಿಮೆ ಮತ್ತು

ಸ್ಥಾಪನೆಯ ಕ್ರಮದಲ್ಲಿ ಮೊದಲು ಆತ್ಮೀಕವಾದದ್ದು, ನಂತರ ಪ್ರಾಕೃತಿಕವಾದದ್ದು; ಹೀಗಾಗಿ ಕಡೆಯವರು ಮೊದಲನೆಯವರಾಗುವರು ಮತ್ತು ಮೊದಲಿನವರು ಕಡೆಯವರಾಗುವರು (ಮತ್ತಾಯ 19:30; ಲೂಕ 13:30).

ಸ್ತೆಫನನು ಅ.ಕೃ. 7:5ರಲ್ಲಿ ಪ್ರಸ್ತಾಪಿಸಿರುವಂತೆ ಅಬ್ರಹಾಮನಿಗೆ ಮಾಡಿದ ವಾಗ್ದಾನವನ್ನು ಇಸ್ರಾಯೇಲ್ಯರು ಅದನ್ನು ಭೂಲೋಕದ್ದು, ಭೂಮಿಗೆ ಸಂಬಂದಿಸಿದ್ದು ಎಂದು ನಂಬಿದರು. ದೇವರು ಅಬ್ರಹಾಮನಿಗೆ "ಈ ದೇಶವನ್ನು ನಿನಗೂ ನಿನ್ನ ಹಿಂದೆ ಬರುವ ಸಂತತಿಗೂ ಸ್ವಾಸ್ಥ್ಯವಾಗಿ ಕೊಡುವೆನು" ಎಂದು ವಾಗ್ದಾನ ಮಾಡಿದನು ಎಂದು ಸ್ತೆಫನನು ಹೇಳುತ್ತಾನೆ. ದೇವರು ಅಬ್ರಹಾಮನಿಗೆ "ನೀನಿರುವ ಸ್ಥಳದಿಂದ ದಕ್ಷಿಣೋತ್ತರ ಪೂರ್ವಪಶ್ಚಿಮಗಳಿಗೆ ಕಣ್ಣೆತ್ತಿ ನೋಡು. ನೀನು ನೋಡುವ ಈ ದೇಶವೆಲ್ಲಾ ನಿನಗೂ, ನಿನ್ನ ಸಂತತಿಗೂ ಶಾಶ್ವತವಾಗಿ ಕೊಡುವೆನು. ನಿನ್ನ ಸಂತಾನದವರನ್ನು ಭೂಮಿಯ ಧೂಳಿನಷ್ಟು ಅಸಂಖ್ಯವಾಗಿ ಮಾಡುವೆನು. ಭೂಮಿಯಲ್ಲಿರುವ ಧೂಳನ್ನು ಲೆಕ್ಕಮಾಡುವವದಾದರೆ ನಿನ್ನ ಸಂತಾನವನ್ನೂ ಲೆಕ್ಕಿಸಲಾದೀತು. ನೀನೆದ್ದು ಈ ದೇಶದ ಎಲ್ಲಾ ಕಡೆಗೂ ತಿರುಗಾಡು; ಇದನ್ನು ನಿನಗೆ ಕೊಡುವೆನು" (ಆದಿ. 13 :14–27) ಎಂದು ಹೇಳಿದನು. ಈ ವಾಗ್ದಾನವು ಇನ್ನೂ ನೆರವೇರಬೇಕಾಗಿದೆ ಎಂದು ಸ್ತೆಫನನು ಹೇಳುತ್ತಾ, ಆತನು "ದೇವರು ಅಬ್ರಹಾಮನಿಗೆ ಇದರಲ್ಲಿ ಅವನಿಗೆ ಕಾಲಿಡುವಷ್ಟು ಭೂಮಿಯನ್ನೂ ಸ್ವಾಸ್ಥ್ಯವಾಗಿ ಕೊಡದೆ, ಅವನಿಗೆ ಮಕ್ಕಳು ಇನ್ನೂ ಇಲ್ಲದಿರುವಾಗ ಈ ದೇಶವನ್ನು ನಿನಗೂ ನಿನ್ನ ಹಿಂದೆ ಬರುವ ಸಂತತಿಗೂ ಸ್ವಾಸ್ಥ್ಯವಾಗಿ ಕೊಡುವೆನು ಎಂದು ವಾಗ್ದಾನ ಮಾಡಿದನು" ಎಂದು ಪ್ರಕಟಿಸುತ್ತಾನೆ.

ಅಪೋಸ್ತಲನು, ಇದೇ ವರ್ಗದ ಪುರಾತನ ಪಿತೃಗಳ ಬಗ್ಗೆ ಬರೆಯುವವನಾಗಿ ಅಬ್ರಹಾಮನಿಗೆ ಮಾಡಲ್ಪಟ್ಟ ವಾಗ್ದಾನವು ಇನ್ನೂ ನೆರವೇರಿರುವುದಿಲ್ಲ ಎಂಬ ಸ್ತೆಫನನ ಹೇಳಿಕೆಯನ್ನು ಒಪ್ಪಿಕೊಳ್ಳುತ್ತಾನೆ; ಮತ್ತು ಮುಂದುವರೆದು ಆತನು ಶಿರಸ್ಸೂ ದೇಹವೂ ಆಗಿರುವ ಕ್ರಿಸ್ತನ ಬಗ್ಗೆ ಇರುವ ಇನ್ನೂ ಉನ್ನತವಾದ ಪರಲೋಕದ ವಾಗ್ದಾನಗಳು ನೆರವೇರುವ ತನಕ ಈ ಭೂಲೋಕದ ವಾಗ್ದಾನಗಳು ನೆರವೇರಲಾಗದು ಮತ್ತು ನೆರವೇರುವುದೇ ಇಲ್ಲ ಎಂಬುದಾಗಿ ತೋರಿಸಿಕೊಡುತ್ತಾನೆ, ಅವರ ಬಗ್ಗೆ ಆತನು – "ಇವರೆಲ್ಲರೂ ವಾಗ್ದಾನದ ಫಲವನ್ನು ಹೊಂದದೆ ಅವುಗಳನ್ನು ದೂರದಿಂದ ನೋಡಿ ಉಲ್ಲಾಸದೊಡನೆ ವಂದಿಸಿ ನಂಬಿಕೆಯುಳ್ಳವರಾಗಿ ಮೃತರಾದರು" (ಇಬ್ರಿಯ 11:13). "ಇವರೆಲ್ಲರೂ ನಂಬಿಕೆಯ ಮೂಲಕ ಒಳ್ಳೇ ಹೆಸರನ್ನು ಸಂಪಾದಿಸಿಕೊಂಡಿದ್ದರೂ ವಾಗ್ದಾನದ ಫಲವನ್ನು ಹೊಂದಲಿಲ್ಲ; ದೇವರು ನಮಗೋಸ್ಕರ ಶ್ರೇಷ್ಟವಾದ ಭಾಗ್ಯವನ್ನು ಏರ್ಪಡಿಸಿ ನಾವಿಲ್ಲದೆ ಅವರು ಸಿದ್ಧಿಗೆ ಬರಬಾರದೆಂದು ಸಂಕಲ್ಪಿಸಿದನು" (ಇಬ್ರಿಯ 11:39–40) ಎಂದು ಹೇಳುತ್ತಾನೆ. ಈ ರೀತಿಯಾಗಿ ವಿಮೋಚಕನೂ ಮತ್ತು ಪುನರ್‌ಸ್ಥಾಪಕನೂ ಆದ ಆತ್ಮೀಕ ಸ್ವರೂಪನು ಎಲ್ಲರಿಗಾಗಿ ತನ್ನ ಮಾನವ ಜೀವವನ್ನು ತ್ಯಾಗ ಮಾಡಿದ ನಂತರ, ಮತ್ತು ಉನ್ನತಕೇರಿಸಲ್ಪಟ್ಟ ಈ ಆಧ್ಯಾತ್ಮಿಕ ವರ್ಗದಿಂದ ಯಾರು ನಿಯೋಗಿಗಳಾಗಿ ಗೌರವಿಸಲ್ಪಡುತ್ತಾರೋ ಅವರಿಂದ ಎಲ್ಲಾ ಆಶೀರ್ವಾದಗಳು ಹೊರಡುತ್ತವೆ (ರೋಮಾ. 12:1; ಗಲಾತ್ಯ 3:29).

ರಾಜ್ಯದ ಭೂಲೋಕದ ಹಂತವು ಈ ರೀತಿಯಾಗಿ ಇಸ್ರಾಯೇಲ್ಯರದೆಂದು ತೋರಿಬರುತ್ತದೆ; ಈ ವರ್ಗದ ಸುತ್ತ ಆ ಅನೇಕ ಪ್ರವಾದನೆಗಳು ಗುಂಪುಗೂಡುತ್ತವೆ, ಇವುಗಳು ಆ ದೇಶದ ಪ್ರಾಮುಖ್ಯತೆಯ ಬಗ್ಗೆ ಲೋಕಕ್ಕೆ ಭವಿಷ್ಯದಲ್ಲಿ ಉಂಟಾಗಲಿರುವ ವಾಗ್ದಾನಗಳಿಗೆ ಸಂಬಂಧಿಸಿವೆ, ದೂಳಿನಲ್ಲಿ ಬಿದ್ದುಹೋಗಿರುವ ಅವರ ದೇವದರ್ಶನ ಗುಡಾರವು ಪುನರ್‌ಸ್ಥಾಪಿತವಾಗುವುದು ಮತ್ತು ಯೆರೂಸಲೇಮು ಇಡೀ ಭೂಲೋಕದಲ್ಲಿ ಕೊಂಡಾಡಲ್ಪಡುವುದು. ನಾವು ಪ್ರವಾದಿಗಳ ಮತ್ತು ಅಪೋಸ್ತಲರ ಎರಡೂ ಹೇಳಿಕೆಗಳನ್ನು ನೋಡುವಾಗ ಅವುಗಳು ಸ್ಪಷ್ಟವಾಗಿ ಪುನರ್‌ವಶಗೊಳ್ಳುವ ಸಮಯದಲ್ಲಿ ಇಸ್ರಾಯೇಲ್ ಒಂದು ರಾಷ್ಟ್ರವಾಗಿ ಅದು ಎಲ್ಲಾ ರಾಷ್ಟ್ರಗಳಲ್ಲಿ ನೂತನ ಕ್ರಮದೊಂದಿಗೆ ಸಾಮರಸ್ಯಕ್ಕೆ ಬರುವುದರಲ್ಲಿ ಮೊದಲನೆಯದಾಗಿರುವುದು; ಭೂಲೋಕದ ಯೆರೂಸಲೇಮ್ ಹಳೆಯ ಪುರಾತನ ಕುಪ್ಪೆಗಳ ಮೇಲೆ ಪುನಃ ಕಟ್ಟಲ್ಪಡುವುದು. ಅದರ ರಾಜ್ಯಾಡಳಿತವು ಪ್ರಾರಂಭದಲ್ಲಿ ಅರಸರುಗಳು ಅಥವಾ ನ್ಯಾಯಸ್ಥಾಪಕರ ಕಾಲದಲ್ಲಿದ್ದಂತೆ ಪುನರ್‌ಸ್ಥಾಪಿತ ಗೊಳ್ಳುವುದು (ಯೆಶಾಯ 1:26; ಕೀರ್ತನೆ 45:16; ಯೆರೆಮೀಯ 30:18). ಇಸ್ರಾಯೇಲ್ ಮೊಟ್ಟಮೊದಲಿಗೆ ಪ್ರವಾದಿಗಳನ್ನೂ, ಪಿತೃಗಳನ್ನು ಗುರುತಿಸುವಲ್ಲಿ ಸಂತೋಷಪಡುವುದು ಮತ್ತು ಧರ್ಮಶಾಸ್ತ್ರದ ಅಡಿಯಲ್ಲಿ ಅದರ ಪರಿಚಯವು ದೀರ್ಘವಾದ ಶಿಸ್ತಿನೊಡನೆ ಪರಿಚಯಹೊಂದಿದ್ದು ಅದು ಅವರನ್ನು ನಮ್ರತೆಗೆ ಮತ್ತು ವಿಧೇಯತ್ವಕ್ಕೆ ಸಿದ್ಧತೆಮಾಡಬಹುದಾಗಿದೆ ಎಂಬುದಕ್ಕಿಂತ ಹೆಚ್ಚಾಗಿ ಮತ್ತೇನನ್ನು ಅಪೇಕ್ಷಿಸಬಹುದು? ಇಸ್ರಾಯೇಲ್ ಮಾನ್ಯತೆ ಹೊಂದಿ ಆಶೀರ್ವಾದಿಸಲ್ಪಡತಕ್ಕ

ಪ್ರಥಮ ರಾಷ್ಟ್ರವಾಗುವಾಗ, ಇಸ್ರಾಯೇಲಿನ ಬಗ್ಗೆ "ಯೆಹೋವನು ಯೆಹೂದದ ಪಾಳಯಗಳಿಗೆ ಮೊದಲು ಜಯವನ್ನುಂಟು ಮಾಡುವನು" (ಜೆಕರ್ಯ 12:7) ಎಂದು ಬರೆದದೆ.

ಇಸ್ರಾಯೇಲ್ಯರ ಕಳೆದುಹೋದ ಕುಲಗಳನ್ನು ಎಲ್ಲಿ ಹುಡುಕಬೇಕೆಂಬುದರ ಬಗ್ಗೆ ಚರ್ಚೆಗೆ ಪ್ರವೇಶಿಸುವುದನ್ನು ನಾವು ಮುಖ್ಯವೆಂದು ಪರಿಗಣಿಸುವುದಿಲ್ಲ. "ಆ ಕಳೆದು ಹೋದ ಕುಲಗಳು ಪ್ರಸ್ತುತ ದಿನದಲ್ಲಿನ ಕೆಲವೊಂದು ನಾಗರೀಕ ರಾಷ್ಟ್ರಗಳಿಂದ ಗುರುತಿಸಲ್ಪಡುವುದು ಎಂದು ಕೆಲವರು ಹೇಳುವಂತೆ ಅದು ಸತ್ಯವೂ ಅಥವಾ ಅಸತ್ಯವೂ ಆಗಿರಬಹುದು. ಆದರೆ ಸೂಚಿಸಲಾದ ಕೆಲವೊಂದು ರುಜುವಾತುಗಳು ಇನ್ನೂ ಅಸಮಂಜಸವಾಗಿಲ್ಲವಾದರೂ, ಒಟ್ಟಾಗಿ ಅದು ಹೆಚ್ಚಾದ ಅನುಮಾನಾಸ್ಪದವೂ ಮತ್ತು ಊಹೆಯ ಕಾರ್ಯವೂ ಆಗಿದೆ. ಆದರೆ ಕೆಲವೊಂದು ನಾಗರೀಕ ರಾಷ್ಟ್ರಗಳು ಕಳೆದು ಹೋದ ಕುಲಗಳ ಸಂತತಿಯವರು ಎಂದು ಇನ್ನೂ ಸ್ಪಷ್ಟವಾಗಿ ತೋರಿಸಬೇಕಾದರೆ 'ಪರಲೋಕದ' 'ಉನ್ನತ ಕರೆ' ಅಡಿಯಲ್ಲಿ ಅವರಿಗೆ ಯಾವುದೇ ಪ್ರಯೋಜನವಿಲ್ಲ ಎಂದು ಸಾಬೀತುಪಡಿಸುತ್ತದೆ. ಇದು ಅವರ ರಾಷ್ಟ್ರೀಯವಾದ ನಿರಾಕರಣೆಯ ನಂತರ ಯೆಹೂದಿ ಮತ್ತು ಗ್ರೀಕರ ನಡುವೆ ಬಂಧನ ಮತ್ತು ಬಿಡುಗಡೆ ಮಧ್ಯೆ ಯಾವುದೇ ವ್ಯತ್ಯಾಸ ತಿಳಿದಿಲ್ಲ. ಅಂಥಾಃ ಪುರಾವೆಗಳು ಎಂದಾದರೂ ಸ್ಪಷ್ಟವಾಗಿ ಬರುವುದಾದರೆ (ಇದು ಇನ್ನೂ ಆಗಿಲ್ಲ) ಅದು ಪ್ರವಾದನೆಯೊಂದಿಗೆ ಮತ್ತು ಆ ದೇಶಕ್ಕೆ ಸಂಬಂಧಿಸಿದ ಆದರೆ ಇನ್ನೂ ರಾಜ್ಯದ ಭೂಲೋಕದ ಹಂತದಲ್ಲಿ ಇನ್ನೂ ನೆರವೇರಲು ಕಾದಿರುವ ವಾಗ್ದಾನಗಳೊಂದಿಗೆ ಸಮರ್ಪಕವಾದ ಸಾಮರಸ್ಯವನ್ನು ಹೊಂದಿದೆ.

ಸ್ವಾಭಾವಿಕವಾದ ಬಾಂಧವ್ಯ, ಮಾತ್ರವಲ್ಲದೆ ದೀರ್ಘಕಾಲದಿಂದ ನೆರವೇರದಿರುವ ವಾಗ್ದಾನಗಳಲ್ಲಿ ಇನ್ನೂ ಬದುಕುಳಿದಿರುವ ನಂಬಿಕೆಯ ಮಟ್ಟವು, ಮತ್ತು ಅವುಗಳ ಎಲ್ಲಾ ಸ್ವಾಭಾವಿಕ ಪೂರ್ವಕಲ್ಪಿತ ಅಭಿಪ್ರಾಯಗಳು, ಇಸ್ರಾಯೇಲ್ಯರು ನೂತನ ಅರಸರನ್ನು ಅಂಗೀಕರಿಸುವ ಸಾಮಾನ್ಯ ಮತ್ತು ತ್ವರಿತವಾದ ಒಪ್ಪಿಕೊಳ್ಳುವಿಕೆಗೆ ಅನುಕೂಲಕರವಾಗಿವೆ; ಅದೇ ಸಮಯದಲ್ಲಿ ಅಳತೆಮಾಡಬಹುದಾದ ನಿಬಂಧನೆಗಳ ಬಗ್ಗೆ ಅವರ ವಿಧೇಯತೆಯ ಸ್ವಭಾವವು ಸಹಾ ಹೊಸ ಸರ್ಕಾರದ ವಿಚಾರಧಾರೆಯೊಂದಿಗೆ ಅವರ ತ್ವರಿತವಾದ ಸಾಮರಸ್ಯಕ್ಕೆ ಅನುಕೂಲಕರವಾಗಿರುವುದು.

ದೇವರ ಸಾಂಕೇತಿಕ ರಾಜ್ಯದ ಅಧೀನದಲ್ಲಿ ಯೆರೂಸಲೇಮ್ ಎಂಬುದು ಪ್ರಭುತ್ವದ ಸ್ಥಾನವಾಗಿರುವುದರಿಂದ ಅದು ಪುನಃ ಅದೇ ಸ್ಥಾನವನ್ನು ಆಕ್ರಮಿಸಿಕೊಳ್ಳುವುದು ಮತ್ತು ಅದು "ರಾಜಾಧಿರಾಜನ ಪಟ್ಟಣ" ವಾಗಿದೆ (ಕೀರ್ತನೆ 48:2 ; ಮತ್ತಾಯ 5:35). ಒಂದು ನಗರವು ರಾಜ್ಯದ ಅಥವಾ ಪ್ರಭುತ್ವದ ಸಂಕೇತವಾಗಿದೆ. ಅದರಂತೆ ದೇವರ ರಾಜ್ಯವು ನೂತನ ಯೆರೂಸಲೇಮಿನಿಂದ ಸಂಕೇತಗೊಂಡಿದೆ ಮತ್ತು ಅದು ಪರಲೋಕದಿಂದ ಭೂಲೋಕಕ್ಕೆ ಇಳಿದು ಬರುವ ನೂತನ ಪ್ರಭುತ್ವವಾಗಿದೆ. ಮೊದಲಿಗೆ ಅದು ಆತ್ಮೀಕ ವರ್ಗದವರನ್ನು ಅಂದರೆ ದೇವರ ಮದಲಗಿತ್ತಿಯನ್ನು ಮಾತ್ರವೇ ಹೊಂದಿದ್ದು ಕ್ರಮೇಣವಾಗಿ ಭೂಲೋಕಕ್ಕೆ ಇಳಿದುಬಂದಿದೆಯೆಂದು ಯೋಹಾನನು ನೋಡಿದ್ದಾನೆ. ಅಂದರೆ, ಪ್ರಸ್ತುತ ಇರುವ ರಾಜ್ಯಗಳು ಚೂರುಚೂರಾಗಿ ಹೋಗುವಾಗ, ಕರ್ತನ ದಿನದಲ್ಲಿ ಅದು ಕ್ರಮೇಣವಾಗಿ ಅಧಿಕಾರಕ್ಕೆ ಬರುವುದು. ಹೀಗೆ ಸೂಕ್ತ ಸಮಯದಲ್ಲಿ, ಈ ಪಟ್ಟಣವು ಭೂಲೋಕದ ಹಂತದ ಸರ್ಕಾರವು ಸ್ಥಾಪಿತಗೊಳ್ಳುತ್ತದೆ, ಅದರ ಭಾಗಗಳು ಅಥವಾ ಸದಸ್ಯರುಗಳು ಪುರಾತನ ಪಿತೃಗಳಾಗಿರುತ್ತಾರೆ. ಎರಡು ಪಟ್ಟಣಗಳು (ಸರ್ಕಾರಗಳು) ಇರುವುದಿಲ್ಲ, ಆದರೆ ಒಂದೇ ಪಟ್ಟಣ, ಒಂದೇ ಪರಲೋಕದ ಸರ್ಕಾರ, ಅಬ್ರಹಾಮನು ಇದನ್ನು "ಶಾಶ್ವತವಾದ ಅಸ್ತಿವಾರವುಳ್ಳ ಪಟ್ಟಣ" ಎಂಬುದಾಗಿ ನೋಡಿದನು – ಇದು ನೀತಿವಂತಿಕೆಯಲ್ಲಿ ಸ್ಥಾಪಿತವಾದ ಸರ್ಕಾರ, ವಿಮೋಚಕನಾದ ಯೇಸುವಿನ ನೀತಿವಂತಿಕೆಯೆಂಬ ಬಂಡೆಯ ಅಸ್ತಿವಾರದ ಮೇಲೆ ಸ್ಥಾಪಿತವಾದ ಸರ್ಕಾರವಾಗಿದೆ. ಆತನು ಸಮರ್ಪಿಸಿದ ಮಾನವನ ಈಡುಬಲಿಯು, ದೈವಿಕ ನ್ಯಾಯದ ದೃಢತೆಯು ಈ ಹಿಂದೆ ತಪ್ಪಿತಸ್ಥರನ್ನು ಕ್ಷಮಿಸುವುದಕ್ಕಿಂತ ಹೆಚ್ಚಾಗಿ ವಿಮೋಚನೆಗೊಂಡವರನ್ನು ಇನ್ನು ಮುಂದೆ ಖಂಡಿಸಲಾಗದು (ರೋಮಾ. 8: 31–34; 1 ಕೊರಿಂಥ 3:11).

ಶಾಂತಿಯ ಭವ್ಯವಾದ ನಗರ; ಅದರ ಗೋಡೆಗಳು ರಕ್ಷಣೆಯನ್ನು, ಸುರಕ್ಷತೆಯನ್ನು, ಅದರಲ್ಲಿ ಪ್ರವೇಶಿಸುವವರಿಗೆಲ್ಲಾ ಆಶೀರ್ವಾದವನ್ನು ಸಂಕೇತಿಸುತ್ತದೆ. ಅದರ ಬುನಾದಿಯು ನ್ಯಾಯದ ಮೇಲೆ ಸ್ಥಾಪಿಸಲ್ಪಟ್ಟಿದ್ದು ಅದು ಎಂದಿಗೂ ಅಲ್ಲಾಡುವುದಿಲ್ಲ, ಅದನ್ನು ಕಟ್ಟಿದವನು ಮತ್ತು ವಿನ್ಯಾಸಗೊಳಿಸಿದವನು ದೇವರೇ ಆಗಿದ್ದಾನೆ! ಇದರ ಭವ್ಯವಾದ ದೇವನಗರಿಯ ಬೆಳಕಿನಲ್ಲಿ (ರಾಜ್ಯದಲ್ಲಿ) ರಾಷ್ಟ್ರಗಳು

ಪ್ರಕಾಶಿಸುತ್ತಾ (ಜನಾಂಗಗಳು) ಪರಿಶುದ್ಧ ಪವಿತ್ರತೆಯ ರಾಜಮಾರ್ಗದಲ್ಲಿ ಪರಿಪೂರ್ಣತೆಯತ್ತ ದೇವರೊಂದಿಗೆ ಪೂರ್ಣ ಸಾಮರಸ್ಯದಲ್ಲಿ ನಡೆಯುತ್ತಾರೆ (ಪ್ರಕಟನೆ 21:24)*

ಮಾನವರು ಸಹಸ್ರಮಾನ ಯುಗದ ಅಂತ್ಯದಲ್ಲಿ ಪರಿಪೂರ್ಣತೆಯನ್ನು ತಲಪುವಾಗ, ಈಗಾಗಲೇ ತೋರಿಸಿರುವಂತೆ, ಅವರು ದೇವರ ರಾಜ್ಯದ ಸದಸ್ಯರಾಗಿ ಪ್ರವೇಶಪಡಕೊಳ್ಳುತ್ತಾರೆ. ಪ್ರತಿಯೊಬ್ಬ ಮನುಷ್ಯನೂ ಸಾರ್ವಭೌಮನೂ, ಅರಸನೂ ಆಗಿ ಮೊದಲೇ ಸಂಕಲ್ಪಿಸಿದಂತೆ ಭೂಲೋಕದ ಸಮಗ್ರ ನಿಯಂತ್ರಣವನ್ನು ಅವರಿಗೆ ನೀಡಲಾಗುವುದು. ಇದನ್ನು ಯೋಹಾನನ ಸಾಂಕೇತಿಕ ಪ್ರವಾದನೆಯಲ್ಲಿ ಸ್ಪಷ್ಟವಾಗಿ ತೋರಿಸಲಾಗಿದೆ (ಪ್ರಕಟನೆ 21:24–26); ಆತನು ತನ್ನ ದರ್ಶನದಲ್ಲಿ ಜನರು ಅದರ ಬೆಳಕಿನಲ್ಲಿ ನಡೆಯುವುದನ್ನು ನೋಡಿದ್ದು ಮಾತ್ರವಲ್ಲದೆ, ಆತನು ಅರಸರುಗಳು ಮಹಿಮೆಗೆ ಪ್ರವೇಶಿಸುವುದನ್ನೂ ನೋಡಿದನು. ಆದಾಗ್ಯೂ ಅದನ್ನು ಕಲುಷಿತಗೊಳಿಸುವ ಯಾರೂ ಹಾಗೆ ಪ್ರವೇಶಿಸಲಾರರು. ಮೊದಲೇ ಸಂಪೂರ್ಣವಾಗಿ ಪರೀಕ್ಷಿಸಲ್ಪಡದ, ಕೆಲಸ ಮಾಡದ ಅಥವಾ ಕೆಲಸವನ್ನು ಪ್ರೀತಿಸದ ವಂಚನೆ ಮಾಡುವ ಅಥವಾ ಅನೀತಿವಂತರಾದ ಯಾರೂ ಆ ನಗರದೊಂದಿಗೆ (ರಾಜ್ಯದೊಂದಿಗೆ) ಗುರುತಿಸಲ್ಪಡು ವುದಿಲ್ಲ. ನಿತ್ಯ ಜೀವಕ್ಕೆ ಅರ್ಹರು ಎಂದು ಯಜ್ಞದ ಕುರಿಮರಿಯು ಯಾರಿಗೆ – "ನನ್ನ ಆಶೀರ್ವಾದ ಹೊಂದಿದವರೇ ಬನ್ನಿರಿ, ಲೋಕಾದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ಥ್ಯವಾಗಿ ತೆಗೆದುಕೊಳ್ಳಿರಿ" (ಮತ್ತಾಯ 25:34) ಎಂದು ಬರೆಯುತ್ತಾನೋ ಮತ್ತು ಹೇಳುತ್ತಾನೋ ಅವರು ಮಾತ್ರವೇ ಗುರುತಿಸಲ್ಪಡುವರು.

ಆದುದರಿಂದ, ನಿಸ್ಸಂದೇಹವಾಗಿ ಅಕ್ಷರಶಃವಾದ ಯೆರೂಸಲೇಮ್ ನಗರವು ಪುನಃ ಕಟ್ಟಲ್ಪಡುವು ದಾದರೂ, ಬಹುಶಃ ಅದು ಭೂಲೋಕದ ರಾಜಧಾನಿ ಆಗುವುದಾದರೂ ಸಹ, ಯೆರೂಸಲೇಮ್ ಮತ್ತು ಅದರ ಭವಿಷ್ಯದ ಮಹಿಮೆಯನ್ನು ಉಲ್ಲೇಖಿಸುವ ಇನ್ನೂ ಅನೇಕ ಪ್ರವಾದನೆಗಳು, ಅದರಡಿಯಲ್ಲಿ ಸಾಂಕೇತವಾಗಿ, ದೇವರ ರಾಜ್ಯವು ಇನ್ನೂ ಹೆಚ್ಚಿನ ವೈಭವದೊಡನೆ ಸ್ಥಾಪಿತವಾಗುವುದನ್ನು ಸೂಚಿಸುತ್ತದೆ ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು.

ಯೆರೂಸಲೇಮಿನಲ್ಲಿ ಪ್ರತಿನಿಧಿಸುವ ರಾಜ್ಯದ ಭೂಲೋಕದ ಹಂತದ ಭವಿಷ್ಯದಲ್ಲಿನ ಮಹಿಮೆಯನ್ನು ಕುರಿತು, ಪ್ರವಾದಿಗಳು ಕಾಂತಿಯುಕ್ತ ಶಬ್ದಗಳಲ್ಲಿ ರೀತಿಯಾಗಿ ಮಾತನಾಡುತ್ತಾನೆ – "ಯೆರೂಸಲೇಮಿನ ಹಾಳು ಪ್ರದೇಶಗಳೇ, ತಟ್ಟನೇ ಜಯಘೋಷಮಾಡಿ, ಒಟ್ಟಿಗೆ ಹರ್ಷಧ್ವನಿ ಗೈಯಿರಿ! ಯೆಹೋವನು ಯೆರೂಸಲೇಮನ್ನು ವಿಮೋಚಿಸಿ ತನ್ನ ಜನರನ್ನು ಸಂತೈಸಿದ್ದಾನೆ" (ಯೆಶಾಯ 52:9); "ಇಗೋ! ನಾನು ಯೆರೂಸಲೇಮನ್ನು ಉಲ್ಲಾಸದ ನಿವಾಸವನ್ನಾಗಿಯೂ ಅದರ ಜನರನ್ನು ಹರ್ಷಭರಿತರನ್ನಾಗಿಯೂ ಮಾಡುವೆನು" (ಯೆಶಾಯ 65:18); "ಯೆರೂಸಲೇಮ್ ಪುರಿಯನ್ನು ಪ್ರೀತಿಸುವವರೇ, ನೀವೆಲ್ಲರೂ ಆಕೆಯೊಂದಿಗೆ ಆನಂದಿಸಿರಿ, ಆಕೆಯ ವಿಷಯದಲ್ಲಿ ಹರ್ಷಗೊಳ್ಳಿರಿ!... ಆಕೆಯ ವೈಭವವನ್ನು ಹೀರುತ್ತಾ ಹಿಗ್ಗುವೆವು ಎಂದು ಆಕೆಯೊಂದಿಗೆ ಉತ್ಸಾಹದಿಂದ ಉಲ್ಲಾಸಿಸಿರಿ. ಯೆಹೋವನು ಹೀಗೆನ್ನುತ್ತಾನೆ – "ಇಗೋ, ನಾನು ಆಕೆಯ ಸುಖವನ್ನು ನದಿಯಂತೆ ದಯಪಾಲಿಸಿ ತುಂಬಿ ತುಳುಕುವ ತೊರೆಯನ್ನೋ ಎಂಬಂತೆ ಜನಾಂಗಗಳ ವೈಭವವನ್ನು ನೀಡುವೆನು" (ಯೆಶಾಯ 66:11). "ಆ ಕಾಲದಲ್ಲಿ ಯೆರೂಸಲೇಮನ್ನು ಯೆಹೋವನ ಸಿಂಹಾಸನವೆಂದು ಕರೆಯುವರು" "ಯೆಹೋವನ ನಾಮಮಹತ್ವದ ಸ್ಥಾನವಾದ ಯೆರೂಸಲೇಮಿಗೆ ಸಕಲ ಜನಾಂಗಗಳವರು ನೆರೆದುಬರುವರು" (ಯೆರೆಮೀಯ 3:17); "ಬನ್ನಿರಿ ಯೆಹೋವನ ಪರ್ವತಕ್ಕೆ, ಯಾಕೋಬ್ಯರ ದೇವರ ಮಂದಿರಕ್ಕೆ ಹೋಗೋಣ! ಆತನು ತನ್ನ ಮಾರ್ಗಗಳ ವಿಷಯವಾಗಿ ನಮಗೆ ಬೋಧನೆಮಾಡುವನು. ನಾವು ಆತನ ದಾರಿಯಲ್ಲಿ ನಡೆಯುವೆವು ಎಂದು ಹೇಳುವರು. ಏಕೆಂದರೆ, ಚಿಯೋನಿನಿಂದ ಧರ್ಮೋಪದೇಶವೂ, ಯೆರೂಸಲೇಮಿನಿಂದ (ಭೂಲೋಕದ ಹಂತ) ಯೆಹೋವನ ವಾಕ್ಯವೂ ಹೊರಡುವವು" (ಯೆಶಾಯ 52:9; 65:18; 65:18; 66:10–12; ಯೆರೆಮೀಯ 3:17; ಯೆಶಾಯ 2:3).

ಇಸ್ರಾಯೇಲ್ಯರಿಗೆ ಮಾಡಲಾಗುವ ಮುಂದಣ ಆಶೀರ್ವಾದದಲ್ಲಿನ ಅಮೂಲ್ಯವಾದ ಅನೇಕ ವಾಗ್ದಾನಗಳನ್ನು ಪರಿಶೀಲಿಸುವಾಗ, ಮತ್ತು ಆ ಜನರಿಗೆ ಅವುಗಳ ನಿಖರವಾದ ನೆರವೇರಿಕೆಯನ್ನು ಎದುರು ನೋಡುತ್ತಿರುವಾಗ, ಅವರು ಸಾಂಕೇತಿಕ ಮತ್ತು ವಾಸ್ತವಿಕ ಜನರಾಗಿದ್ದಾರೆ ಎಂದು ನಾವು ನೆನೆಪಿನಲ್ಲಿ

* ಈ ಕೆಳಗಿನ ಪದಗಳಾದ "of them which are saved" ಮತ್ತು "and honour" ಎಂಬ ಪದಗಳನ್ನು ಅತ್ಯಂತ ಅಧಿಕೃತವಾದ ಪುರಾತನ ಹಸ್ತಪ್ರತಿಗಳಲ್ಲಿ ವಾಕ್ಯಗಳಿಂದ ಬಿಟ್ಟುಬಿಡಲಾಗಿದೆ.

ಇಟ್ಟುಕೊಳ್ಳುವುದು ಸೂಕ್ತವಾಗಿದೆ. ಒಂದು ರೂಪದಲ್ಲಿ ಅವರು ಮಾನವ ಸಂತತಿಯ ಇಡೀ ಪ್ರಪಂಚದ ನಮೂನೆಯಾಗಿದ್ದಾರೆ ಮತ್ತು ಅವರ ವಿಧೇಯತೆ ಹಾಗೂ ಅವರ ಧರ್ಮಶಾಸ್ತ್ರ ಒಡಂಬಡಿಕೆಯ ಜೀವಿತವು ಸಹಸ್ರಮಾನ ಯುಗದಲ್ಲಿ ಮತ್ತು ಮುಂದಿನ ಕಾಲದಲ್ಲಿ ಲೋಕದವರೊಂದಿಗೆ ಸ್ಥಾಪಿತವಾಗುವ ನೂತನ ಒಡಂಬಡಿಕೆಯ ನಮೂನೆಯೂ ಆಗಿದೆ.

ಅವರ ಸಾಂಕೇತಿಕ ಒಡಂಬಡಿಕೆಯ ಅಡಿಯಲ್ಲಿ ಪಾಪ ನಿವೃತ್ತಿ ಪ್ರಾಯಶ್ಚಿತ್ತದ ರಕ್ತವು, ಮತ್ತು ಅದನ್ನು ಆ ಜನಾಂಗಕ್ಕೆ ಅನ್ವಯಿಸಿದ ಯಾಜಕತ್ವವು ನೂತನ ಒಡಂಬಡಿಕೆಯ ರಕ್ತವನ್ನು ಮತ್ತು ರಾಜವಂಶಸ್ಥ ಯಾಜಕತ್ವವನ್ನು ಸಾಂಕೇತಿಸುತ್ತದೆ, ಹಾಗೂ ಅದು, ಸಹಸ್ರಮಾನಯುಗದಲ್ಲಿ ಅದರ ಶುದ್ಧೀಕರಣಗಳನ್ನು ಮತ್ತು ಆಶೀರ್ವಾದಗಳನ್ನು ಸಮಗ್ರ ಪ್ರಪಂಚಕ್ಕೆ ಅನ್ವಯಿಸುತ್ತದೆ. ಈ ರೀತಿಯಲ್ಲಿ ಅದರ ಯಾಜಕತ್ವವು ಕ್ರಿಸ್ತನನ್ನು ಸಂಕೇತಿಸುತ್ತದೆ, ಮತ್ತು ಆ ರಾಷ್ಟ್ರವು ನಿಜವಾದ ತ್ಯಾಗವನ್ನು ಯಾರಿಗಾಗಿ ಮಾಡಲಾಯಿತೋ, ಯಾರಿಗೆ ನಿಜವಾದ ಆಶೀರ್ವಾದವು ಬರುವುದಾಗಿದೆಯೋ ಅವರುಗಳನ್ನು – (ಇಡೀ ಜಗತ್ತಿನ ಪ್ರತಿಯೊಬ್ಬ ಮಾನವನಿಗೂ) ಸಾಂಕೇತಿಸುತ್ತದೆ.

ಗತಿಸಿಹೋದ ಕಾಲದಂತೆಯೇ ಮುಂದಣ ಭವಿಷ್ಯದ ಆಶೀರ್ವಾದಗಳು, ಮೊದಲು ಯೆಹೂದ್ಯರಿಗೆ, ನಂತರದಲ್ಲಿ ಅನ್ಯಜನಗಳಿಗೆ ಸಹಾ ಇರುವುದಾದರೂ, ಕಾಲದ ಪ್ರಾಮುಖ್ಯತೆಗನುಗುಣವಾಗಿ ಯೆಹೂದ್ಯರು ಮಾತ್ರವೇ ದೇವರ ದಯೆಗೆ ಆದ್ಯತೆಯುಳ್ಳವರಾಗಿದ್ದಾರೆ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು; ನಾವು ತೋರಿಸುತ್ತಿರುವ ಇದು ಅವರು ಧರ್ಮಶಾಸ್ತ್ರದ ಅಡಿಯಲ್ಲಿ ಹೊಂದಿರುವ ತರಬೇತಿಯ ಸ್ವಾಭಾವಿಕ ಪರಿಣಾಮವಾಗಿದೆ. ಅದು ಸೂಕ್ತಸಮಯದಲ್ಲಿ ಅವರನ್ನು ಕ್ರಿಸ್ತನೆಡೆಗೆ ತರುವ ಅದರ ಉದ್ದೇಶವನ್ನು ನೆರವೇರಿಸುತ್ತದೆ. ಅದು ಪ್ರಥಮ ಆಗಮನದಲ್ಲಿ, ಅವರ ಜನಶೇಷವನ್ನು ತರುವುದಾದರೂ, ಅದು ಎರಡನೆಯ ಆಗಮನದಲ್ಲಿ ಅವರನ್ನು ಒಂದು ಜನಾಂಗವಾಗಿ ತರುವುದು ಹಾಗೂ ಅವರು ಒಂದು ಜನಾಂಗವಾಗಿ ಪ್ರಥಮಫಲವಾಗುವರು. ಅಂತಿಮವಾಗಿ ಇಸ್ರಾಯೇಲ್ಯರಿಗೆ ವಾಗ್ದಾನ ಮಾಡಲಾದ ಪ್ರತಿಯೊಂದು ಆಶೀರ್ವಾದವೂ, ಆಯ್ದು ವರ್ಗಗಳವರಿಗೆ ಸಂಬಂಧಿಸಿದ್ದನ್ನು ಹೊರತುಪಡಿಸಿ, ಆ ಜನರಲ್ಲಿ ಅದರ ಸ್ವಾಭಾವಿಕ ನೆರವೇರಿಕೆಯನ್ನು ಹೊಂದಿರುವುದು ಮಾತ್ರವಲ್ಲದೆ, ಲೋಕದ ಎಲ್ಲಾ ಕುಟುಂಬಗಳಲ್ಲಿಯೂ ಅದರ ಪ್ರತಿಸಂಕೇತಿಕ ನೆರವೇರಿಕೆಯುನ್ನು ಹೊಂದಿರುವುದು. ಆ ನಿಯಮದಡಿಯಲ್ಲಿ ದೇವರು ಮೊದಲಿಗೆ ಯೆಹೂದ್ಯರಿಗೂ, ನಂತರ ಎಲ್ಲಾ ಮನುಷ್ಯರಿಗೂ ಅವರ ಕೃತ್ಯಗಳಿಗೆ ತಕ್ಕ ಪ್ರತಿಫಲವನ್ನು ಕೊಡುವೆನು. ಒಳ್ಳೆಯದನ್ನು ನಡೆಸುವ ಪ್ರತಿಯೊಬ್ಬನಿಗೆ ಪ್ರಭಾವವೂ, ಮಾನವೂ, ಮನಶ್ಯಾಂತಿಯೂ ಉಂಟಾಗುವುದು – ಯೆಹೂದ್ಯರಿಗೆ ಮೊದಲು ಅನಂತರ ಗ್ರೀಕರಿಗೆ ಸಹ; ದೇವರಿಗೆ ಪಕ್ಷಪಾತವಿಲ್ಲ (ರೋಮಾ. 2:6,10.11).

ಅಪೋಸ್ತಲನಾದ ಪೌಲನು ನಮ್ಮ ಗಮನವನ್ನು ವಿಶೇಷವಾಗಿ ದೇವರು ಇಸ್ರಾಯೇಲ್ಯರಿಗೆ ಭವಿಷ್ಯದಲ್ಲಿ ಮಾಡಲಿರುವ ವಾಗ್ದಾನಗಳ ಖಚಿತತೆಯ ಬಗ್ಗೆ ಸೆಳೆಯುವವನಾಗಿದ್ದು, ಅವರು ತಮ್ಮ ಅಪನಂಬಿಕೆಯ ಫಲವಾಗಿ ಯಾವ ಕೃಪೆಗಳನ್ನು ಕಳಕೊಂಡರೆಂದೂ, ಮತ್ತು ಯಾವ ಅನುಗ್ರಹವು ಇನ್ನೂ ಖಚಿತವಾಗಿದೆ ಎಂಬುದನ್ನು ಆತನು ಹೇಳುವವನಾಗಿದ್ದಾನೆ. ಹೆಮ್ಮೆ, ಮತ್ತು ಹೃದಯ ಕಾಠಿಣ್ಯತೆ ಮತ್ತು ಅಪನಂಬಿಕೆಯ ನಿಮಿತ್ತ ಇಸ್ರಾಯೇಲ್ಯರು ಒಂದು ಜನವಾಗಿ ಅವರು ಬಯಸಿದ್ದನ್ನು – ದೇವರ ಅನುಗ್ರಹದಲ್ಲಿ ಮತ್ತು ಸೇವೆಯಲ್ಲಿ ಮುಖ್ಯ ಸ್ಥಾನವನ್ನು ಹೊಂದಿ ಕೊಳ್ಳಲಿಲ್ಲವೆಂದೂ ಆತನು ಹೇಳುತ್ತಾನೆ. ಪೌಲನು ಇಲ್ಲಿ ಮಾಡುವ ಉಲ್ಲೇಖವು ಅಬ್ರಹಾಮನಿಂದ ಹಿಡಿದು ಇದುವರೆಗಿನ ಇಸ್ರಾಯೇಲ್ಯರ ಎಲ್ಲಾ ತಲೆಮಾರುಗಳ ಬಗ್ಗೆ ಅಲ್ಲ, ಆದರೆ ಮೊದಲನೆಯ ಆಗಮನದ ಸಮಯದಲ್ಲಿ ಜೀವಿಸಿದ್ದ ಜನರಿಗೆ ಮತ್ತು ಆತನ ಮಾತುಗಳು ಸುವಾರ್ತಾ ಯುಗದಲ್ಲಿ ಜೀವಿಸಿದ ಅವರ ಎಲ್ಲಾ ಪೀಳಿಗೆಯವರಿಗೆ ಅನ್ವಯವಾಗುತ್ತದೆ. ಈ ಯುಗದಲ್ಲಿ ದೈವಿಕ ಸ್ವಭಾವಕ್ಕೆ ಉನ್ನತಕರೆ ಮತ್ತು ಯೇಸುವಿನೊಂದಿಗೆ ಜೊತೆ ಬಾಧ್ಯಸ್ಥಿಕೆ ಮುಂತಾದ ಮುಖ್ಯ ಭಾಗ್ಯಗಳು ನೀಡಲಟ್ಟಿದ್ದವು. ಈ ಭಾಗ್ಯವನ್ನು ಇಸ್ರಾಯೇಲ್ಯರು ಒಂದು ಜನಾಂಗವಾಗಿ ಗುರುತಿಸಲು ಮತ್ತು ಹೊಂದಿಕೊಳ್ಳಲು ವಿಫಲರಾಗಿದ್ದಾರೆ. ದೇವರು ಅನ್ಯಜನರನ್ನು ಸಂಧಿಸಿದರೂ, ಅವರಲ್ಲಿ ಅನೇಕರನ್ನು ಸುವಾರ್ತೆಯ ಮೂಲಕ ಕರೆದನು, ಅವರು ಐಹಿಕ ಇಸ್ರಾಯೇಲ್ಯರಂತೆ ಪರಲೋಕದ ಬಹುಮಾನವನ್ನು ಪಡೆಯಲು ಸೋತುಹೋಗಿದ್ದಾರೆ. ಪರಂತು, ಒಂದು ವರ್ಗ, ಎಲ್ಲಾ ಕರೆಯಲ್ಪಟ್ಟವರಲ್ಲಿ ಶೇಷಭಾಗವಾದ ಚಿಕ್ಕಹಿಂಡು ತನ್ನ ಕರೆಯನ್ನು ಕೇಳಿಸಿಕೊಳ್ಳುತ್ತದೆ ಮತ್ತು ವಿಧೇಯತೆಯಿಂದ, ಸ್ವಾರ್ಥ ತ್ಯಾಗದಿಂದ ತನ್ನ ಕರೆಯನ್ನು ಮತ್ತು ಆಯ್ಕೆಯನ್ನು ಖಚಿತಪಡಿಸಿಕೊಳ್ಳುತ್ತದೆ. ಈ ರೀತಿಯಾಗಿ ಇಸ್ರಾಯೇಲ್ಯರು ಒಂದು ಜನರಾಗಿ ಪಡೆದುಕೊಳ್ಳಲು ಸೋತುಹೋದದ್ದನ್ನು, ಹೆಸರು ಮಾತ್ರದ ಸಭೆಯವರೂ

ಸಹ ಪಡಕೊಳ್ಳಲು ಸೋತುಹೋದದ್ದನ್ನು ಆರಿಸಿಕೊಂಡವರಿಗೆ ಅಥವಾ ಚುನಾಯಿತ ನಿಷ್ಠಾವಂತ ವರ್ಗದವರಿಗೆ, "ಕ್ರಿಸ್ತನ ದೇಹಕ್ಕೆ" – ಆಯ್ಕೆಗೊಂಡ ಅಥವಾ ಆರಿಸಿಕೊಂಡ (ದೇವರ ಭವಿಷ್ಯತ್ ಜ್ಞಾನಾನುಸಾರವಾಗಿ) ಆತ್ಮನಿಂದ ಶುದ್ಧೀಕರಣ ಮತ್ತು ಸತ್ಯದ ನಂಬಿಕೆಯ ಮೂಲಕ ನೀಡಲ್ಪಡುತ್ತದೆ (2 ಥೆಸ. 2:13; 1 ಪೇತ್ರ 1:2).

ಇಸ್ರಾಯೇಲ್ಯರು ಮೆಸ್ಸೀಯನನ್ನು ನಿರಾಕರಿಸುವುದರ ಮೂಲಕ ಅವರ ವಿಶೇಷ ಅನುಗ್ರಹವನ್ನು ಕಳೆದುಕೊಳ್ಳಲಿಲ್ಲ, ಹಾಗಿದ್ದರೂ ಪೌಲನು ತೋರಿಸುವಂತೆ, ಅವರು ಅನುಗ್ರಹದಿಂದ ಸಂಪೂರ್ಣವಾಗಿ ಕಡಿದುಹಾಕಲ್ಪಟ್ಟರು ಎಂದು ರುಜುವಾತುಪಡಿಸುವುದಿಲ್ಲ. ಯಾಕೆಂದರೆ, ಅವರು ಇನ್ನೂ ಕ್ರಿಸ್ತನೊಳಗೆ ಕಸಿಮಾಡಲ್ಪಟ್ಟಿರುವ ಅದೇ ಸವಲತ್ತು ಉಳಿದ ಮನುಕುಲ ಆನಂದಿಸಲಿರುವ ಆತ್ಮೀಕ ಅನುಗ್ರಹವನ್ನು ಹೊಂದಿದ್ದರು. ಆ ಕರೆಯನ್ನು ಮಾಡಲಾಗುವ ಸಮಯದಲ್ಲೇ ಅವರೂ ನಂಬಿಕೆಯಿಂದ ಅಂಗೀಕರಿಸುವುದಾದರೆ, ಅವರೂ ಆ ಕೃಪೆಯನ್ನು ಹೊಂದಿಕೊಳ್ಳುವರು ಎಂದು ಪೌಲನು ವಾದಿಸುತ್ತಾನೆ. ಕಾಡು ಮರದ ಕೊಂಬೆಗಳಲ್ಲಿ ಕಸಿ ಮಾಡುವಂತೆ ದೇವರು ಅವರನ್ನು ಮತ್ತೆ ಕಸಿ ಕಟ್ಟಲು ಸಮರ್ಥನಾಗಿದ್ದಾನೆ. ಅವರು ಅಪನಂಬಿಕೆಯನ್ನು ಮುಂದುವರೆಸದಿದ್ದರೆ ಮಾತ್ರ (ರೋಮಾ. 11:23,24).

ಪೌಲನು ಮತ್ತೂ ವಾದಿಸುತ್ತಾ ಇಸ್ರಾಯೇಲ್ ಮುಖ್ಯ ಆಶೀರ್ವಾದಗಳನ್ನು ಕಳೆದುಕೊಂಡಿದ್ದಾಗ್ಯೂ "ಅವರು ಹುಡುಕಿದ್ದು ಅವರೆಲ್ಲರಿಗೆ ದೊರೆಯಲಿಲ್ಲ" ದೇವರ ರಾಜ್ಯದಲ್ಲಿ ಮುಖ್ಯ ಸ್ಥಾನ ಆ ಜನರ ಪರವಾಗಿ ಇನ್ನೂ ಉಳಿದುಕೊಂಡಿರುವ ಮಹಾವಾಗ್ದಾನಗಳನ್ನು ಪೂರೈಸಬೇಕಾಗಿದೆ. ಇದಕ್ಕೋಸ್ಕರ, ದೇವರ ಕೊಡುಗೆಗಳು, ಕರೆಗಳು, ಒಡಂಬಡಿಕೆಗಳು ಮತ್ತು ವಾಗ್ದಾನಗಳನ್ನು ನೆರವೇರಿಸದ ಹೊರತು ಪಕಕ್ಕೆ ತಿರುಗುವಂತಿಲ್ಲ ಎಂದು ಆತನು ವೈಚಾರಿಕತೆಯನ್ನು ಮಂಡಿಸುತ್ತಾನೆ. ದೇವರಿಗೆ ಅಂತ್ಯವು ಪ್ರಾರಂಭದಲ್ಲೇ ಗೊತ್ತಿತ್ತು. ಇಸ್ರಾಯೇಲ್ಯರು ಮೆಸ್ಸೀಯನನ್ನು ತಿರಸ್ಕರಿಸುತ್ತಾರೆ ಎಂದು ತಿಳಿದಿತ್ತು; ಈ ಜ್ಞಾನದ ದೃಷ್ಟಿಯಿಂದ ಅವರಿಗೆ ನಿಸ್ಸಂದಿಗ್ಧವಾದ ವಾಗ್ದಾನಗಳು ಇಸ್ರೇಲ್‌ನ್ನು ಇನ್ನೂ ಕರ್ತನ ಸೇವೆಯಲ್ಲಿ ಉಪಯೋಗಿಸಬೇಕಾಗಿದೆ ಎಂದು ನಮಗೆ ಭರವಸೆ ನೀಡುತ್ತವೆ. ಆದರೂ ಜಗತ್ತನ್ನು ಆಶೀರ್ವದಿಸುವಲ್ಲಿ ಅವರ ಕಾರ್ಯಭಾರಿಯಾದ ಇಸ್ರೇಲ್ ತಾನು ಬಯಸಿದ್ದ ಮುಖ್ಯ ಅನುಗ್ರಹವನ್ನು ಪಡೆಯಲಿಲ್ಲ. ನಂತರದಲ್ಲಿ, ಇಸ್ರಾಯೇಲಿಗೆ ದೇವರ ಒಡಂಬಡಿಕೆಯ ವಾಗ್ದಾನಗಳು ಎಂತಹ ಸ್ವರೂಪದವುಗಳಾಗಿದ್ದವೆಂದರೆ, ಅದನ್ನು ಮುಕ್ತವಾಗಿ ಮತ್ತು ಅನಿರ್ದಿಷ್ಟವಾಗಿ ಇರಿಸಲಾಗಿತ್ತು. ಅವರು ಒಂದು ಜನಾಂಗವಾಗಿ ಪರಲೋಕದ ಅಥವಾ ಭೂಲೋಕದ ಸಂತಾನವಾಗಿರಬಹುದು – ಅವನು ವಾಗ್ದಾನದಲ್ಲಿ ಪ್ರಸ್ತಾಪಿಸಿರುವ ಸೇವೆಯು ಉನ್ನತ ಅಥವಾ ಕೆಳಮಟ್ಟದ ಸೇವೆಯನ್ನು ವಾರಸುದಾರರಾಗಿ ಪೂರೈಸುತ್ತಾರೋ ಎಂಬುದನ್ನು ತೋರಿಸಲು ಪೌಲನು ಮುಂದುವರೆಯುತ್ತಾನೆ. ದೇವರು ಉನ್ನತವಾದ ಆತ್ಮೀಕ ಭಾಗ್ಯಗಳನ್ನು ಯುಕ್ತ ಸಮಯದವರೆಗೆ ಗುಪ್ತವಾಗಿ ಇಟ್ಟಿದ್ದನು. ಮತ್ತು ಆತನು ಅವರಿಗೆ ಆತ್ಮೀಕ ಅನುಗ್ರಹಗಳ ಮೊದಲ ಕೊಡುಗೆಯನ್ನು ಸಹಾ ನೀಡುವವನಾದರೂ ಮತ್ತು ಈ ರೀತಿಯಾಗಿ ತಾನು ಎಂದೂ ವಾಗ್ದಾನಪಡಿಸಿದಕ್ಕಿಂತ ಹೆಚ್ಚಾದುದನ್ನು ನೀಡುವವನಾಗಿದ್ದರೂ ದೇವರು ಅವರಿಗೆ ಮಾಡಿದ ವಾಗ್ದಾನಗಳಲ್ಲಿ ಭೂಲೋಕದ ಭಾಗ್ಯಗಳನ್ನು ಮಾತ್ರವೇ ಹೇಳುವವನಾಗಿದ್ದನು. ಒಂದು ಮಾತಿನಲ್ಲಿ ಹೇಳುವುದಾದರೆ, ಪರಲೋಕದ ವಾಗ್ದಾನಗಳು ಭೂಲೋಕದ ವಾಗ್ದಾನಗಳಲ್ಲಿ ಅಡಗಿಸಲ್ಪಟ್ಟಿದ್ದವು. ಈ ವಾಗ್ದಾನಗಳು ವಿಫಲವಾಗುವುದೇ ಇಲ್ಲ ಎಂದು ಪೌಲನು ಹೇಳುತ್ತಾನೆ. ಮತ್ತು ಅಡಗಿರುವ ಭಾಗ್ಯಗಳ ಕೊಡುವಿಕೆ ಮೊದಲಿಗೆ, ಮತ್ತು ಇಸ್ರಾಯೇಲ್ಯರಿಂದ ಅದರ ಬುದ್ಧಿಗೇಡಿ ತಿರಸ್ಕಾರ ಇವುಗಳನ್ನು ಯಾವ ರೀತಿಯಲ್ಲಿಯೂ ವಾಗ್ದಾನಗಳ ಇತರೆ ವೈಶಿಷ್ಟ್ಯವನ್ನು ಅಮಾನ್ಯಗೊಳಿಸುವುದಿಲ್ಲ ಅಥವಾ ರದ್ದುಪಡಿಸುವುದಿಲ್ಲ. ಆದುದರಿಂದ ಇಸ್ರಾಯೇಲ್ಯರು ಒಂದು ರಾಷ್ಟ್ರವಾಗಿ ಆ ರಾಷ್ಟ್ರದಲ್ಲಿ ಆ ಕೃಪೆಯಿಂದ ಹೊರಹಾಕಲ್ಪಟ್ಟರೂ, ಕ್ರಿಸ್ತನ ವಧುವನ್ನು ಆಯ್ಕೆ ಮಾಡುವ ಸಮಯದಲ್ಲಿ ಯೆಹೂದ್ಯ ಮತ್ತು ಅನ್ಯಜನ ಇವುಗಳೆರಡರಿಂದಲೂ ಆಯ್ಕೆಗೊಳ್ಳುತ್ತದೆ, ಆದಾಗ್ಯೂ, ವಿಮೋಚಕನು (ಕ್ರಿಸ್ತನು ಶಿರಸ್ಸು ಮತ್ತು ದೇಹ) ಸಂಪೂರ್ಣಗೊಂಡಾಗ, ದೈವೀಕ ಕೃಪೆಯು ಐಹಿಕ ಇಸ್ರಾಯೇಲ್ಯರಿಗೆ ಹಿಂತಿರುಗುವುದು ಮತ್ತು ಭವ್ಯನಾದ ವಿಮೋಚಕನು ಯಾಕೋಬಿನಿಂದ* ಭಕ್ತಿಹೀನತೆಯನ್ನು ನಿವಾರಣೆ ಮಾಡುವನು. ಹೀಗೆ ಎಲ್ಲಾ ಇಸ್ರಾಯೇಲ್ಯರೂ ಪ್ರವಾದಿಯು ಬರೆದಿರುವಂತೆ ರಕ್ಷಣೆ ಹೊಂದಿಕೊಳ್ಳುವರು (ಕೃಪೆಯನ್ನು ತಿರುಗಿ ಹೊಂದುವರು). ಅಪೋಸ್ತಲನ ಮಾತುಗಳು ಇಂತಿವೆ:–

"ಸಹೋದರರೇ, ನಿಮ್ಮನ್ನು ನೀವೇ ಬುದ್ಧಿವಂತರೆಂಬುದಾಗಿ ಎನಿಸಿಕೊಳ್ಳದಂತೆ ಇದುವರೆಗೆ ಗುಪ್ತವಾಗಿದ್ದ ಒಂದು ಸಂಗತಿ ನಿಮಗೆ ತಿಳಿದಿರಬೇಕೆಂದು

* ಇಲ್ಲಿ ಯಾಕೋಬ ಎಂಬುದು ಶಾರೀರಿಕ ಇಸ್ರಾಯೇಲ್ಯರನ್ನು ಉಲ್ಲೇಖಿಸುತ್ತದೆ.

ಅಪೇಕ್ಷಿಸುತ್ತೇನೆ; ಅದೇನೆಂದರೆ, ಇಸ್ರಾಯೇಲ್ಯರಲ್ಲಿ ಒಂದು ಪಾಲು ಜನರಿಗೆ ಉಂಟಾದ ಮೊಂಡತನವು ಯಾವಾಗಲೂ ಇರದೆ ಅನ್ಯಜನಗಳ ಸಮುದಾಯವು ದೇವರ ರಾಜ್ಯದಲ್ಲಿ ಸೇರುವ ತನಕ ಮಾತ್ರ ಇರುವುದು; ಆ ಮೇಲೆ ಇಸ್ರಾಯೇಲ್ ಜನವೆಲ್ಲಾ ರಕ್ಷಣೆ ಹೊಂದುವುದು. ಇದಕ್ಕೆ ಆಧಾರವಾಗಿ ಶಾಸ್ತ್ರದಲ್ಲಿ – ಬಿಡಿಸುವವನು ಚಿಯೋನಿನಿಂದ ಹೊರಟುಬಂದು ಯಾಕೋಬನಲ್ಲಿರುವ ಭಕ್ತಿಹೀನತೆಯನ್ನು ನಿವಾರಣೆ ಮಾಡುವನು. ನಾನು ಅವರ ಸಂಗಡ ಮಾಡಿಕೊಂಡ ಈ ಒಡಂಬಡಿಕೆಯು ನಾನು ಅವರ ಪಾಪಗಳನ್ನು ಪರಿಹರಿಸುವಾಗ ನೆರವೇರುವುದು" ಎಂದು ಬರೆದದೆ. ಅವರು ಸುವಾರ್ತೆಯನ್ನು ಬೇಡವೆಂದದ್ದರಿಂದ ದೇವರು ನಿಮಗೆ ಹಿತವನ್ನುಂಟು ಮಾಡಿ ಅವರನ್ನು ಶತ್ರುಗಳೆಂದೆಣಿಸಿದ್ದಾನೆ. ಆದರೂ ಅವರು ತಾನು ಆರಿಸಿಕೊಂಡ ಅಬ್ರಹಾಮ, ಇಸಾಕ, ಯಾಕೋಬರೆಂಬ ಪಿತೃಗಳ ವಂಶಸ್ಥರಾಗಿರುವುದರಿಂದ ಅವರನ್ನು ಪ್ರಿಯರೆಂದು ಎಣಿಸಿದ್ದಾನೆ. ದೇವರು ವರಗಳನ್ನು ಅನುಗ್ರಹಿಸಿದ್ದಕ್ಕೂ ಜನರನ್ನು ಕರೆದದ್ದಕ್ಕೂ ಪಶ್ಚಾತ್ತಾಪಪಡುವವನಲ್ಲ. ಯಾವ ಪ್ರಕಾರ ನೀವು (ಅನ್ಯಜನರು) ಪೂರ್ವದಲ್ಲಿ ಅವಿಧೇಯರಾಗಿದ್ದರೂ ಈಗ ಅವರ ಅವಿಧೇಯತೆಯ ದೆಸೆಯಿಂದ ಕರುಣೆಹೊಂದಿದ್ದೀರೋ, ಅದೇ ಪ್ರಕಾರವಾಗಿ, ಅವರು ಈಗ ಅವಿಧೇಯರಾಗಿದ್ದರೂ ನಿಮಗೆ ದೊರಕಿದ ಕರುಣೆಯನ್ನು ಹೊಂದುವರು (ಮಹಿಮೆ ಹೊಂದಿದ ಸಭೆಯಿಂದ). ಯಾಕೆಂದರೆ, ದೇವರು ಎಲ್ಲರಿಗೂ ಕರುಣೆಯನ್ನು ತೋರಿಸಬೇಕೆಂಬ ಉದ್ದೇಶವುಳ್ಳವನಾಗಿದ್ದು ಎಲ್ಲರನ್ನೂ ಅವಿಧೇಯತೆಯೆಂಬ ದುಃಸ್ಥಿತಿಯಲ್ಲಿ ಕಟ್ಟಿಹಾಕಿದ್ದಾನೆ. ಆಹಾ! ದೇವರ ಐಶ್ವರ್ಯವೂ ಜ್ಞಾನವೂ ವಿವೇಕವೂ ಎಷ್ಟೋ ಅಗಾಧ! ಆತನ ತೀರ್ಮಾನಗಳು ಪರಿಶೋಧನೆಗೆ ಎಷ್ಟೋ ಅಗಮ್ಯ! (ರೋಮಾ. 11:25–33)

## ರಾಜ್ಯದ ವಾರಸುದಾರರು
## Heirs of the Kingdom

**"ಯೆಹೋವನ ಪರ್ವತವನ್ನು (ಪರ್ವತವು ರಾಜ್ಯವನು ಸಂಕೇತಿಸುತ್ತದೆ) ಹತ್ತತಕ್ಕವನು ಯಾರು? ಆತನ ಪವಿತ್ರ ಸ್ಥಾನದಲ್ಲಿ (ಆಲಯದಲ್ಲಿ) ನಿಲ್ಲುವುದಕ್ಕೆ ಎಂಥವನು ಯೋಗ್ಯನು? ಯಾವನು ಅಯೋಗ್ಯ ಕಾರ್ಯದಲ್ಲಿ ಮನಸ್ಸಿಡದೆ ಮೋಸ ಪ್ರಮಾಣ ಮಾಡದೆ ಶುದ್ಧ ಹಸ್ತವೂ ನಿರ್ಮಲ ಮನಸ್ಸೂ ಉಳ್ಳವನಾಗಿದ್ದಾನೋ ಅವನೇ ಯೆಹೋವನಿಂದ ಶುಭವನ್ನು ಹೊಂದುವನು" (ಕೀರ್ತನೆ 24:3–4).**

ಯೆರೂಸಲೇಮ್ ನಗರವು ಪರ್ವತದ ಎರಡು ಶಿಖರದ ಮೇಲೆ ಕಟ್ಟಲ್ಪಟ್ಟಿತ್ತು. ಯಾಕೆಂದರೆ, ಅದು ಟೈರೋಪಿಯನ್ ಕಣಿವೆಯಿಂದ ಎರಡು ಭಾಗಗಳಾಗಿ ವಿಭಜಿಸಲ್ಪಟ್ಟಿತ್ತು. ಆದಾಗ್ಯೂ ಅದು ಒಂದೇ ನಗರವಾಗಿತ್ತು, ಒಂದೇ ಗೋಡೆಯಿಂದ ಆವೃತ್ತವಾಗಿತ್ತು, ಎರಡು ಭಾಗಗಳನ್ನು ಸೇತುವೆಗಳು ಕೂಡಿಸಿದ್ದವು. ಈ ಪರ್ವತದ ಒಂದು ಮೇಲ್ಭಾಗದಲ್ಲಿ ದೇವಾಲಯವನ್ನು ನಿರ್ಮಿಸಲಾಗಿತ್ತು. ಇದು ಮಹಿಮೆಯುಳ್ಳ ದೇವಾಲಯದಲ್ಲಿ ಅರಸರ ಮತ್ತು ಯಾಜಕರ ಗುಣಲಕ್ಷಣಗಳು ಸಂಯೋಗ ಹೊಂದುವುದನ್ನು ಸಂಕೇತಿಸುತ್ತದೆ ಅಥವಾ ದೇವರ ರಾಜ್ಯದ ಎರಡು ಹಂತಗಳನ್ನು ಹೊಂದಿದೆ. ಆತ್ಮೀಕ ದೇವಾಲಯ – ಭೂಲೋಕದ ಮೂಲವಿಲ್ಲದ, ಆದರೆ ನೂತನವಾದ ಪರಲೋಕ ಸ್ವಭಾವದ ಆತ್ಮೀಕ ಹಂತ (ಇಬ್ರಿಯ 9:11). ಆದರೆ ಇನ್ನೂ ಐಹಿಕ ಹಂತದಿಂದ ಪ್ರತ್ಯೇಕವಾಗ ಬೇಕಾಗಿದೆ. ಆದರೆ ಅದರೊಂದಿಗೆ ಒಂದುಗೂಡಿರುವ ಭೂಲೋಕದ ಹಂತ ಇವುಗಳುಳ್ಳ ದೇವರ ಒಂದು ರಾಜ್ಯವೆಂದು ಅರ್ಥಮಾಡಿಕೊಳ್ಳಬೇಕು.

ದಾವೀದನು ಈ ಎರಡು ಹಂತಗಳನ್ನು ಉಲ್ಲೇಖಿಸುವಂತೆ ಕಂಡುಬರುತ್ತದೆ. ಇದು ನಗರಕ್ಕೆ ಸೇರಿರುವುದು ಒಂದು ಗೌರವವಾಗಿದೆ ಮತ್ತು ಪವಿತ್ರ ದೇವಾಲಯಕ್ಕೆ, ಯಾಜಕರು ಮಾತ್ರವೇ ಪ್ರವೇಶಿಸಲು ಅನುಮತಿ ಹೊಂದಿದ್ದ ಪವಿತ್ರ ಆವರಣಕ್ಕೆ ಏರುವುದು ಇನ್ನೂ ಹೆಚ್ಚಿನ ಗೌರವವಾಗಿದೆ. ಜೀವನದ ಪವಿತ್ರತೆ ಮತ್ತು ಹೃದಯದ ಪ್ರಾಮಾಣಿಕತೆ ಇವುಗಳೆರಡೂ ಯಾರಿಗಾದರೂ ಸರಿ ಗೌರವವನ್ನು ಪಡೆಯಲು ಅವಶ್ಯವಾಗಿದೆ ಎಂದು ದಾವೀದನು ತೋರಿಸುತ್ತಾನೆ. ಅವರು ಆತನೊಂದಿಗೆ ಜೊತೆ ಬಾಧ್ಯಸ್ಥರಾಗಲು ಅರ್ಹರಾಗಬೇಕಾದಲ್ಲಿ ಪರಲೋಕ ಸ್ವಾಸ್ಥ್ಯಕ್ಕೆ ಕರೆಯಲ್ಪಟ್ಟವರು ದೇವಪ್ರೇಷಿತನೂ ಮಹಾಯಾಜಕನೂ ಆಗಿರುವ ಯೇಸು ಪರಿಶುದ್ಧನಾಗಿರುವಂತೆ ರಾಜವಂಶಸ್ಥ ಯಾಜಕವರ್ಗದವರೂ ಪವಿತ್ರರಾಗಬೇಕೆಂದು ಎಚ್ಚರಿಸಲ್ಪಡುತ್ತಾರೆ. ಯಾರು ಈ ನಿರೀಕ್ಷೆಯುಳ್ಳವರೋ ಅವರು ಆತನು ಪವಿತ್ರನಾಗಿರುವಂತೆಯೇ ತಮ್ಮನ್ನು ತಾವು ಪವಿತ್ರಗೊಳಿಸಿಕೊಳ್ಳುತ್ತಾರೆ. ಇದನ್ನು ಈಗಾಗಲೇ ಉದ್ದೇಶಪೂರ್ವಕವಾದ ಪವಿತ್ರತೆಯೆಂದು ತೋರಿಸಲಾಗಿದೆ. ಇದು ನಮಗೆ ಸಮಗ್ರವಾದ ಅಥವಾ ವಾಸ್ತವವಾದ ಪವಿತ್ರತೆ, ನಾವು ಐಹಿಕತೆಯನ್ನು ಬಿಟ್ಟು ಆತ್ಮೀಕತೆಯತ್ತ ನಡೆಯುವಾಗ ನಮ್ಮ ಅನಿವಾರ್ಯವಾದ ಕೊರತೆಯನ್ನು ಒದಗಿಸುವ ಮತ್ತು ನಮ್ಮ ತಪ್ಪಿಸಿಕೊಳ್ಳಲಾಗದ ಶಾರೀರಿಕ ಬಲಹೀನತೆಗಳನ್ನು

ಪರಿಹರಿಸುವ ಕ್ರಿಸ್ತನು ಹೊದಿಸಿದ ಪವಿತ್ರತೆ ಎಂದು ಪರಿಗಣಿಸಲಾಗುವುದು.

ಆ ಪವಿತ್ರತೆ, ಯಥಾರ್ಥತೆ ಮತ್ತು ಸಮಗ್ರವಾಗಿ ದೇವರಿಗೆ ಮಾಡಿಕೊಳ್ಳುವ ಸಂಪ್ರೋಕ್ಷಣೆ ದೇವರ ರಾಜ್ಯವನ್ನು ಎರಡರಲ್ಲಿ ಯಾವುದಾದರೂ ಒಂದು ಹಂತದ ಮೂಲಕ ಪ್ರವೇಶಿಸುವವರೆಲ್ಲರಿಗೂ ಅವಶ್ಯವಾಗಿದೆ ಎಂಬುದನ್ನು ಮರೆಯಬಾರದು. ಈ ರೀತಿಯಲ್ಲಿ ಕ್ರಿಸ್ತನೊಂದಿಗೆ ರಾಜ್ಯದ ಭೂಲೋಕದ ಹಂತದಲ್ಲಿ ಆ ಪುರಾತನ ಪಿತೃಗಳು ಬಾಧ್ಯರಾಗುವರು. ಅವರು ನೀತಿವಂತಿಕೆಯನ್ನು ಪ್ರೀತಿಸಿದವರು ಮತ್ತು ದುಷ್ಟತನವನ್ನು ದ್ವೇಷಿಸಿದವರು ಮತ್ತು ತಪ್ಪುಗಳು ಹಠಾತ್ತಾಗಿ ಉಂಟಾಗುವಾಗ, ಬಲಹೀನತೆ ಅಥವಾ ಅಕ್ರಮಣಗಳಿಂದ ಮುಗ್ಗರಿಸುವಾಗ ಅವರು ಆಳವಾಗಿ ಶೋಕಿಸಿದರು. ಸುವಾರ್ತಾಯುಗದ ಪ್ರಾಮಾಣಿಕರಿಗೂ ಹೀಗೆ ಆಯಿತು. ಸಹಸ್ರಮಾನ ಯುಗದಲ್ಲಿ ದೇವರ ಆತ್ಮ ಮತ್ತು ಸತ್ಯದ ಆತ್ಮವು ಎಲ್ಲಾ ಮಾಂಸಧಾರಿಗಳ ಮೇಲೆ ಸುರಿಯಲ್ಪಡುವಾಗ ಇದರಂತೆಯೇ ಆಗುವುದು. ಆ ಯುಗದ ಜಯಶಾಲಿಗಳಿಗೆ ಅವರಿಗಾಗಿ ದೇವರು ಸಿದ್ಧಪಡಿಸಿದ ನಗರ ಪ್ರವೇಶಿಸಲು ಹಕ್ಕು ಇರುವುದಾದರೆ ಅವರೂ ಸಹಾ ಹೃದಯದ ಮತ್ತು ಜೀವನದ ಪವಿತ್ರತೆಗಾಗಿ ಹೆಣಗುವ ಅಗತ್ಯವಿದೆ. ಲೋಕಾದಿಯಿಂದಲೂ ಅವರಿಗೋಸ್ಕರ ಸಿದ್ಧಪಡಿಸಿದ ರಾಜ್ಯ – ಮೂಲದಲ್ಲಿದ್ದ ಪ್ರಭುತ್ವವು ಪುನಃಸ್ಥಾಪಿತವಾಗುವದು.

## ಕಬ್ಬಿಣದ ನಿಯಮ
## The Iron Rule

ಕ್ರಿಸ್ತನ ಸಹಸ್ರಮಾನ ಯುಗದ ರಾಜ್ಯವು ಉದ್ಘಾಟನೆ ಮಾಡಿದಾಗ, ಪ್ರತಿಯೊಬ್ಬರೂ ಅದರ ಆಳ್ವಿಕೆಯಿಂದ ಸಂತೋಷಪಡುತ್ತಾರೆ ಎಂಬ ತಪ್ಪು ಭಾವನೆ ಅನೇಕರಲ್ಲಿ ಉಂಟು. ಆದರೆ, ಹಾಗಲ್ಲ. ಅದರ ಕಾಯಿದೆಗಳು ಹಿಂದಿನ ಸರ್ಕಾರದವುಗಳಿಗಿಂತ ಎಷ್ಟೋ ಹೆಚ್ಚು ನಿರ್ಬಂಧಕರವಾಗಿರುತ್ತದೆ, ಮತ್ತು ಜನರ ಸ್ವಾತಂತ್ರ್ಯಗಳು ಒಂದು ಮಟ್ಟಕ್ಕೆ ನಿರ್ಬಂಧಿಸಲ್ಪಡುತ್ತವೆ. ಅವುಗಳು ನಿಜವಾಗಿಯೂ ಈಗ ಸ್ವಾತಂತ್ರ್ಯಕ್ಕಾಗಿ ಒದರಾಡುವ ಅನೇಕರನ್ನು ಪೀಡಿಸುವುದನ್ನು, ಮೋಸಮಾಡುವುದನ್ನು, ತಪ್ಪಾಗಿ ನಿರೂಪಿಸುವುದನ್ನು, ಅತಿಕ್ರಮಿಸುವುದನ್ನು ಮತ್ತು ಇತರರನ್ನು ವಂಚಿಸುವುದನ್ನು ಸಂಪೂರ್ಣವಾಗಿ ತೊಡೆದುಹಾಕುವುದು. ಆಹಾರ ಅಥವಾ ಪಾನೀಯದಲ್ಲಿ ತಮ್ಮನ್ನು ಅಥವಾ ಇತರರನ್ನು ದುರುಪಯೋಗ ಪಡಿಸುವುದನ್ನು, ಅಥವಾ ಒಳ್ಳೆಯ ನಡವಳಿಕೆಯ ಭ್ರಷ್ಟಗೊಳಿಸುವಿಕೆಯನ್ನು ಎಲ್ಲರಿಗೂ ಸಂಪೂರ್ಣವಾಗಿ ನಿಷೇಧಿಸಲಾಗುವುದು. ಯಾವುದೇ ರೀತಿಯ ತಪ್ಪನ್ನು ಮಾಡುವ ಸ್ವಾತಂತ್ರ್ಯ ಅಥವಾ ಅನುಮತಿಯನ್ನು ಯಾರಿಗೂ ನೀಡಲಾಗದು. ನೀಡಲಾಗುವ ಒಂದೇ ಒಂದು ಸ್ವಾತಂತ್ರ್ಯವೆಂದರೆ ಸತ್ಯವಾದ, ಮಹಿಮೆಯುಳ್ಳ ದೇವರ ಪುತ್ರರ ಸ್ವಾತಂತ್ರ್ಯವಾಗಿದೆ. – ತಮಗೆ ಮತ್ತು ಇತರರಿಗೆ ಯಾವುದೇ ವಿಧದಲ್ಲಿ ಮತ್ತು ಎಲ್ಲಾ ವಿಧದಲ್ಲಿ ಒಳ್ಳೆಯದನ್ನು ಮಾಡುವ ಸ್ವಾತಂತ್ರ್ಯ. ಆದರೆ, ಆ ಪವಿತ್ರ ರಾಜ್ಯದಲ್ಲಿ ಯಾವುದನ್ನಾದರೂ ಹಾನಿಗೊಳಿಸುವುದಕ್ಕೆ ಅಥವಾ ನಾಶಮಾಡುವುದಕ್ಕೆ ಅನುಮತಿಸುವುದಿಲ್ಲ (ಯೆಶಾಯ 11:9 : ರೋಮಾ. 8:21). ಆ ಕಾರಣದಿಂದ ಆ ನಿಯಮವು ಅನೇಕರಿಗೆ ಕಠಿಣದ್ದಾಗಿದೆ ಎಂದು ಅನಿಸಬಹುದು. ಅವರ ಹಿಂದಿನ ಅಭ್ಯಾಸಗಳನ್ನೆಲ್ಲಾ, ಪದ್ಧತಿಗಳನ್ನೆಲ್ಲಾ ರದ್ದುಗೊಳಿಸಲಾಗುವುದು. ಮತ್ತು ಈ ತಪ್ಪಾದ ನಡವಳಿಕೆಗಳಿಂದ, ಸ್ವಾತಂತ್ರ್ಯದ ಕಲ್ಪನೆಯಿಂದ ಉಂಟಾಗಿರುವ ಎಲ್ಲಾ ಪ್ರಸ್ತುತವಿರುವ ಸಂಸ್ಥೆಗಳನ್ನು ತೊಡೆದು ಹಾಕುವುದು, ಆಚಾರ ವಿಚಾರಗಳನ್ನೂ ಮುರಿದುಹಾಕುವುದು. ಅದರ ದೃಢತೆ ಮತ್ತು ಓಜಸ್ಸಿನಿಂದ, ಅದನ್ನು ಸಾಂಕೇತಿಕವಾಗಿ "ಕಬ್ಬಿಣದ ನಿಯಮ" ಎಂದು ಕರೆಯಲಾಗುವುದು – "ಅವನು ಕಬ್ಬಿಣದ ಕೋಲಿನಿಂದ ಅವರನ್ನು ಆಳುವನು" (ಪ್ರಕಟನೆ 2:27 ; ಕೀರ್ತನೆ 2:8–12, 49:14 ರೊಂದಿಗೆ ಹೋಲಿಸಿರಿ). ಈ ರೀತಿಯಾಗಿ "ನಾನು ನ್ಯಾಯವನ್ನು ನೂಲನ್ನಾಗಿಯೂ, ಧರ್ಮವನ್ನು ಮಟ್ಟಗೋಲನ್ನಾಗಿಯೂ ಮಾಡುವೆನು, ಕಲ್ಮಳೆಯು ಅಸತ್ಯದ ಆಶ್ರಯವನ್ನು ಬಡಿದುಕೊಂಡು ಹೋಗುವುದು" "ಜಲಪ್ರವಾಹವು (ಮೋಸದ) ಮರೆಯನ್ನು ಮುಳುಗಿಸುವದು, ಮರೆಯಾಗಿರುವ ಯಾವುದೂ ವ್ಯಕ್ತವಾಗದೆ ಇರುವುದಿಲ್ಲ; ಹೊರಪಡದ ರಹಸ್ಯವೂ ಇಲ್ಲ" (ಯೆಶಾಯ 28:17 ; ಮತ್ತಾಯ 10:26) ಎಂಬ ಹೇಳಿಕೆಗಳು ನೆರವೇರುವುವು.

ಅನೇಕರು ಆ ಪರಿಪೂರ್ಣ ಮತ್ತು ನ್ಯಾಯ ಸಮ್ಮತವಾದ ಆಡಳಿತದ ವಿರುದ್ಧ ದಂಗೆಯೇಳುವರು. ಯಾಕೆಂದರೆ ಅವರು ಹಿಂದೆ ಈಗಿನ ಅಧಿಪತಿಯ ಆಳ್ವಿಕೆಯಲ್ಲಿ ಹೊಂದಿಕೊಂಡು ಅವರ ಸಂಗಡಿಗ ಮರ್ತ್ಯರ ಮೇಲೆ ಒಡೆತನ ಮಾಡುವವರಾಗಿದ್ದು ಯಾವುದೇ ಪರಿಹಾರ, ಸೇವೆ ನೀಡದೇ ಇತರರ ವೆಚ್ಚದಲ್ಲಿ ಜೀವಿಸುವವರಾಗಿದ್ದರು. ಪ್ರಸ್ತುತ ಜೀವನದಲ್ಲಿ ಸ್ವಯಂ ಭೋಗ ಮತ್ತು ಸಂತೃಪ್ತಿಯ ಜೀವನ ನಡೆಸಿದವರು, ಕರ್ತನ ರಾಜ್ಯದ ಆಡಳಿತದಲ್ಲಿ ಸರ್ವಸಮಾನತೆ, ನ್ಯಾಯ, ನೀತಿವಂತಿಕೆಯ ಪಾಠಗಳನ್ನು ಕಲಿತುಕೊಳ್ಳದಿದ್ದರೆ ಸ್ವಾಭಾವಿಕವಾಗಿ ಬಹಳವಾಗಿ ತೀವ್ರವಾದ ಪೆಟ್ಟುಗಳನ್ನು

ಸ್ವೀಕರಿಸುವರು (ಕೀರ್ತನೆ 89:32; ಲೂಕ 12:47,48). ಈ ಪ್ರಸ್ತಾಪದಲ್ಲಿ ಬರುವ ಪಾಠವು, ಮೊದಲಿಗೆ ಈಗ ಜೀವಿಸುತ್ತಿರುವ ಪೀಳಿಗೆಯವರಿಗೆ ಬರುವುದು ಮತ್ತು ಅದು ಸಮೀಪದಲ್ಲಿಯೇ ಇದೆ (ಯಾಕೋಬ 5).

ಆದರೆ ಆಶೀರ್ವಾದಕರ ಆಲೋಚನೆ! ಜೀವ ನಾಯಕನು ತನ್ನ ನೀತಿವಂತಿಕೆ ಮತ್ತು ನ್ಯಾಯ ಸಮ್ಮತೆಯ ನಿಯಮವನ್ನು ಕಬ್ಬಿಣದ ಕೋಲೆಂಬ ಕಾನೂನಿನೊಂದಿಗೆ ಆಳುವಾಗ ಮಾನವ ಜೀವಿಗಳ ಸಮೂಹವು "ಪ್ರಜೆಗೆ ಧರ್ಮವು ಉನ್ನತಿ, ಅಧರ್ಮವು ಅವಮಾನ" ಎಂಬುದನ್ನು ಕಲಿತುಕೊಳ್ಳುತ್ತಾರೆ. ದೇವರ ನಿಯಮಗಳು ಮತ್ತು ಯೋಜನೆಗಳು ಎಲ್ಲರಿಗೂ ಸಂಬಂಧಪಟ್ಟಂತೆ ಅಂತ್ಯದಲ್ಲಿ ಅತ್ಯುತ್ತಮವಾಗಿವೆ ಎಂದು ಕಲಿತುಕೊಳ್ಳುತ್ತಾರೆ ಮತ್ತು ಅಂತಿಮವಾಗಿ ಅವರು ನೀತಿವಂತಿಕೆಯನ್ನು ಪ್ರೀತಿಸಿ, ದುಷ್ಟತನವನ್ನು ದ್ವೇಷಿಸಲು ಕಲಿತುಕೊಳ್ಳುತ್ತಾರೆ (ಕೀರ್ತನೆ 45:7; ಇಬ್ರಿಯ 1:9). ಆ ಆಳ್ವಿಕೆಯ ಅಧೀನದಲ್ಲಿರುವವರೆಲ್ಲರೂ ಸರಿಯಾದದ್ದನ್ನು ಪ್ರೀತಿಸಲು ಕಲಿಯದೇ ಹೋದಲ್ಲಿ ಅವರನ್ನು ನಿತ್ಯ ಜೀವಕ್ಕೆ ಅನರ್ಹರು ಎಂದು ಲೆಕ್ಕಿಸಲಾಗುವುದು ಮತ್ತು ಅವರು ಜನರೊಳಗಿಂದ ಸಂಪೂರ್ಣವಾಗಿ ತೆಗೆದುಹಾಕಲ್ಪಡುವರು (ಅ.ಕೃ. 3:23; ಪ್ರಕಟನೆ 20:9; ಕೀರ್ತನೆ 11:5–7).

## ಶಾಶ್ವತವಾದ ರಾಜ್ಯ
## The Kingdom Everlasting

"ಯೆಹೋವನು ಭೂಲೋಕಕ್ಕೆಲ್ಲಾ ರಾಜ ನಾಗಿರುವನು" (ಜೆಕರ್ಯ 14:9). ಸಹಸ್ರಮಾನ ಯುಗದಲ್ಲಿ ಯೆಹೋವನು ಕ್ರಿಸ್ತನ ಕೈಯಿಂದ ಸ್ಥಾಪಿಸುವ ರಾಜ್ಯವು ಯೆಹೋವನ ರಾಜ್ಯವಾಗಿರುವದು. ಆದರೆ ಅದು ಆತನ ಪ್ರತಿನಿಧಿಯಾದ ಕ್ರಿಸ್ತನ ನೇರವಾದ ನಿಯಂತ್ರಣದಲ್ಲಿರುತ್ತದೆ. ಸಂಯುಕ್ತ ಸಂಸ್ಥಾನದ ಸರ್ಕಾರದ ಬಂಡಾಯದ ನಂತರ ದಕ್ಷಿಣ ರಾಜ್ಯಗಳೊಂದಿಗೆ ವ್ಯವಹರಿಸಿದಂತೆಯೇ ಇರುವುದು. ದಕ್ಷಿಣ ರಾಜ್ಯಗಳಿಗೆ ಕೆಲವು ಕಾಲದವರೆಗೆ ತಮ್ಮ ಸ್ವಂತ ಅಧಿಕಾರಿಗಳನ್ನು ಅಯ್ಕೆಮಾಡಿಕೊಂಡು ತಮ್ಮನ್ನು ಆಳಿಕೊಳ್ಳುವಂತೆ ಅನುಮತಿ ನೀಡಲಾಗಿರಲಿಲ್ಲ. ಹಾಗೆ ಆಗಿದ್ದರೆ ಅವರು ಒಕ್ಕೂಟದ ಸಂವಿಧಾನ ನಿಯಮಗಳನ್ನು ಪಾಲಿಸುತ್ತಿದ್ದಿಲ್ಲ; ಆದರೆ ಆ ರಾಜ್ಯಗಳನ್ನು ಪುನರ್‌ರಚಿಸುವಂತೆ ರಾಜ್ಯಪಾಲರುಗಳು ಸಂಪೂರ್ಣ ಅಧಿಕಾರದೊಂದಿಗೆ ಕಾರ್ಯಮಾಡುವಂತೆ ಮತ್ತು ಕೇಂದ್ರ ಸರ್ಕಾರದೊಂದಿಗೆ ಸಂಪೂರ್ಣ ಸಾಮರಸ್ಯಕ್ಕೆ ಹಿಂತಿರುಗುವಂತೆ ನಿಯಂತ್ರಣ ದಲ್ಲಿರಿಸಲಾಗಿತ್ತು. ಈ ರೀತಿಯಲ್ಲಿ ಲೋಕದ ಸಂಗತಿಗಳ ಮೇಲೆ ಕ್ರಿಸ್ತನ ವಿಶೇಷ ಆಳ್ವಿಕೆಯು ನಿರ್ದಿಷ್ಟ ಉದ್ದೇಶಕ್ಕಾಗಿ ಮಿತಿಯುಳ್ಳ ಸಮಯಕ್ಕಷ್ಟೇ ಆಗಿತ್ತು. ಮತ್ತು ಆ ಉದ್ದೇಶದ ನೆರವೇರಿಕೆಯ ನಂತರ ಅದು ಅಂತ್ಯವಾಗುತ್ತದೆ. ಮಾನವನು ದಂಗೆಯೆದ್ದ ಕಾರಣ, ಆತನ ದೈವದತ್ತವಾದ ಹಕ್ಕುಗಳನ್ನು, ಯೆಹೋವನ ನಿಯಮದೊಂದಿಗೆ ಸಾಮರಸ್ಯದಲ್ಲಿರುವ ಸ್ವಯಂ ಸರ್ಕಾರವನ್ನು ಇತರ ಹಕ್ಕುಗಳೊಂದಿಗೆ ಕಳೆದುಕೊಂಡನು. ದೇವರು, ಕ್ರಿಸ್ತನ ಮೂಲಕ, ಆ ಎಲ್ಲಾ ಹಕ್ಕುಗಳನ್ನೂ ಪುನಃಪಡೆದುಕೊಳ್ಳುವಂತೆ, ಮಾನವನು ತನ್ನ ಹಿಂದಿನ ಸ್ಥಿತಿಗೆ ಹಿಂತಿರುಗುವಂತೆಯೂ ಮಾಡುವನಲ್ಲದೇ, ಆತನು ಪುನಃ ಭೂಲೋಕದ ರಾಜನಾಗಿ ತನ್ನ ಹಿಂದಿನ ಅಧಿಕಾರಕ್ಕೆ ಹಿಂತಿರುಗುವಂತೆಯೂ ಮಾಡುತ್ತಾನೆ. ಆದರೆ, ದೇವರು ವಿನ್ಯಾಸಗೊಳಿಸಿರುವಂತೆ ಮಾನವನನ್ನು ಪ್ರಸ್ತುತ ಅನುಭವಗಳಿಗೆ ಪ್ರಭಾವಗೊಳಿಸುವಂತೆ ಹೊಂದಿಕೊಳ್ಳಲು ಹಿಂದಕ್ಕೆ ತರುವುದಕ್ಕಾಗಿ, ಅಂದರೆ ತನ್ನದೇ ಆದ ಚೇತರಿಕೆಯ ಪ್ರಯತ್ನವನ್ನು ಮಾಡುವಂತೆ ಅವನಿಗೆ ಒತ್ತಾಯಿಸುವ ಪ್ರಬಲವಾದ ಪರಿಪೂರ್ಣ ಸರ್ಕಾರದ ಅಗತ್ಯವಿರುತ್ತದೆ. ಮಾನವನ ಚೇತರಿಕೆಯನ್ನು ಪೂರ್ಣಗೊಳಿಸುವ ಈ ಗೌರವದ ಹಕ್ಕನ್ನು ಪಡಕೊಳ್ಳುವಂತೆ ಮರಣಹೊಂದಿದ ಕ್ರಿಸ್ತನಿಗೆ ಅನುಗ್ರಹಿಸಲಾಯಿತು. "ಯಾಕೆಂದರೆ, ತಾನು ಎಲ್ಲಾ ವಿರೋಧಿಗಳನ್ನು ತನ್ನ ಪಾದಗಳ ಕೆಳಗೆ ಹಾಕಿಕೊಳ್ಳುವ ತನಕ ರಾಜ್ಯವನ್ನಾಳುವುದು ಅವಶ್ಯ" (1 ಕೊರಿಂಥ 15:25), – ಆತನನ್ನು ಗ್ರಹಿಸದೇ, ಗೌರವಿಸದೇ, ಆತನಿಗೆ ವಿಧೇಯನಾಗದೇ ಇರುವ ಯಾರೊಬ್ಬರೂ ಇರದ ತನಕ ಮಾತ್ರ. ನಂತರದಲ್ಲಿ ಆತನು ಮಾನವ ಜಾತಿಯ ಪುನರ್‌ರಚನೆ ಅಥವಾ ಪುನರ್‌ವಶದ ತನ್ನ ನಿಯೋಗವನ್ನು ಪೂರೈಸಿ ತನ್ನನ್ನು ದೇವರಿಗೆ ಒಪ್ಪಿಸಿಕೊಡುವನು. ಮೊದಲು ತಂದೆಯಾದ ಯೆಹೋವನೊಂದಿಗೆ ಇದ್ದಂತೆ ಮಾನವ ಜಾತಿಯವರು ನೇರವಾಗಿ ವ್ಯವಹರಿಸುವರು – ಮಾನವನಾದ ಯೇಸುವಿನ ಮಧ್ಯಸ್ಥಿಕೆಯು ಪುನರ್‌ಸಂಧಾನದ ಮಹತ್ತರವಾದ ಕೆಲಸವನ್ನು ಸಂಪೂರ್ಣವಾಗಿ ಮತ್ತು ಸಮಗ್ರವಾಗಿ ನೆರವೇರಿಸುತ್ತದೆ (1 ಕೊರಿಂಥ 15:25–28).

ರಾಜ್ಯವು ತಂದೆಗೆ ಒಪ್ಪಿಸಲ್ಪಟ್ಟಾಗ, ಅದು ಇನ್ನೂ ದೇವರ ರಾಜ್ಯವಾಗಿರುತ್ತದೆ ಮತ್ತು ಕಾನೂನುಗಳು ಯಾವಾಗಲೂ ಅವೇ ಆಗಿರುತ್ತವೆ. ಎಲ್ಲಾ ಮನುಷ್ಯ ಕುಲದವರು ಪರಿಪೂರ್ಣವಾಗಿ ಪುನರ್‌ವಶಗೊಳ್ಳುವರು, ಅಕ್ಷರಶಃವಾಗಿ ಮತ್ತು ಆತ್ಮೀಕವಾಗಿ ಸಮರ್ಪಕವಾದ ವಿಧೇಯತೆಯನ್ನು ತೋರಿಸಲು ಶಕ್ತರಾಗುವರು, ಈಗಲಾದರೂ ವಿಧೇಯತೆಯ ಮನೋಭಾವ ಅಥವಾ

ದೇವರ ನಿಯಮಗಳನ್ನು ಪಾಲಿಸುವ ಪ್ರಯತ್ನ ಇವುಗಳೆಲ್ಲದರಲ್ಲೂ ಮಾನವನು ಸಮರ್ಥನಾಗಿರುತ್ತಾನೆ. ಲಿಖಿತ ರೂಪವಾದ ಒಡಂಬಡಿಕೆಯು ಮರಣವನ್ನುಂಟು ಮಾಡುತ್ತದೆ (2 ಕೊರಿಂಥ 3:6). ಈಗ ನಮ್ಮ ಸ್ವೀಕಾರಾರ್ಹತೆಯು ಕ್ರಿಸ್ತನ ಈಡುಬಲಿಯ ಮೂಲಕ ಮಾತ್ರವೇ.

ನಿಜವಾಗಿಯೂ ಪರಿಪೂರ್ಣವಾಗುವವರೆಗೆ "ಜೀವಸ್ವರೂಪನಾದ ದೇವರ ಕೈಯಲ್ಲಿ ಸಿಕ್ಕಿಬೀಳುವುದು ಭಯಂಕರವಾದದ್ದು" (ಇಬ್ರಿಯ 10:31). ಈಗ ಮತ್ತು ನಿಜವಾಗಿ ಪರಿಪೂರ್ಣವಾಗುವವರೆಗೆ, ಯಾರೂ ಕೂಡಾ ನಿಖರವಾದ ನ್ಯಾಯದ ಕಾನೂನಿನ ಮುಂದೆ ನಿಲ್ಲಲಾರರು; ಎಲ್ಲರಿಗೂ ಕ್ರಿಸ್ತನ ಅರ್ಹತೆ ಮತ್ತು ತ್ಯಾಗದ ಅಡಿಯಲ್ಲಿ ಉಚಿತವಾಗಿ ದೊರೆಯುವ ಕರುಣೆಯ ಅವಶ್ಯಕತೆ ಇದೆ. ಆದರೆ, ಕ್ರಿಸ್ತನು ರಾಜ್ಯವನ್ನು ತಂದೆಗೆ ಒಪ್ಪಿಸಿಕೊಡುವಾಗ, ಆತನು ಅದನ್ನು ದೋಷರಹಿತವಾಗಿ ಪ್ರಸ್ತುತಿಪಡಿಸುತ್ತಾನೆ ಮತ್ತು ಯೆಹೋವನ ಸಮರ್ಪಕವಾದ ಕಾನೂನಿನ ಅಡಿಯಲ್ಲಿ ದೊರೆಯುವ ನಿತ್ಯವಾದ ಆಶೀರ್ವಾದವನ್ನು ಆನಂದಿಸಲು ಸಾಧ್ಯವಾಗುತ್ತದೆ. ಆಗ ಎಲ್ಲಾ ಭಯಗಳೂ ಇಲ್ಲವಾಗುವವು ಮತ್ತು ಯೆಹೋವನು ಮತ್ತು ಆತನ ಪುನರ್‌ವಶ ಪಡೆದ ಸೃಷ್ಟಿಗಳು ಮೊದಲಿನಂತೆ ಪರಿಪೂರ್ಣ ಸಾಮರಸ್ಯದಲ್ಲಿರುವರು.

ಸಹಸ್ರಮಾನ ಯುಗದ ಅಂತ್ಯದಲ್ಲಿ, ಕ್ರಿಸ್ತನು ಭೂಲೋಕದ ಪ್ರಭುತ್ವವನ್ನು ತನ್ನ ತಂದೆಗೆ ಒಪ್ಪಿಸಿಕೊಡುವಾಗ, ಆತನು ಅದನ್ನು ತಂದೆಯ ಪ್ರತಿನಿಧಿಗಳಾದ ಮಾನವ ಜಾತಿಯವರಿಗೆ ಒಪ್ಪಿಸಿಕೊಡುವನು. ಅವರುಗಳು ಈ ಗೌರವವನ್ನು ಪಡೆಯಲು ದೇವರಿಂದ ಮೊದಲಿನಿಂದಲೇ ಸಂಕಲ್ಪಿಸಲ್ಪಟ್ಟಿದ್ದರು (1 ಕೊರಿಂಥ 15:24; ಮತ್ತಾಯ 25:34). ಈ ರೀತಿಯಲ್ಲಿ ದೇವರ ರಾಜ್ಯವು ಶಾಶ್ವತವಾಗಿರುವುದು. ನಾವು ನಮ್ಮ ಕರ್ತನ ಮಾತಿನಲ್ಲಿ ಹೀಗೆಂದು ಓದುತ್ತೇವೆ: – "ಆಗ ಅರಸನು ತನ್ನ ಬಲಗಡೆಯಲ್ಲಿರುವವರಿಗೆ" – (ಸಹಸ್ರಮಾನ ಯುಗದಲ್ಲಿ ಸಾಮರಸ್ಯ ಮತ್ತು ವಿಧೇಯತೆಯ ದೆಸೆಯಿಂದ ಆ ಸ್ಥಾನವನ್ನು ಪಡೆದವರಿಗೆ) "ತಂದೆಯ ಆಶೀರ್ವಾದ ಹೊಂದಿದವರೇ, ಲೋಕಾದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ಥ್ಯವಾಗಿ ತೆಗೆದುಕೊಳ್ಳಿರಿ" (ಮತ್ತಾಯ 25:34) ಎಂದು ಹೇಳುವನು.

ಮಾನವನಿಗಾಗಿ ಸಿದ್ಧಪಡಿಸಲಾದ ಈ ರಾಜ್ಯ ಮತ್ತು ಗೌರವವು ಕ್ರಿಸ್ತನಿಗಾಗಿ ಸಿದ್ಧಪಡಿಸಲಾದ ಇನ್ನೂ ಉನ್ನತ ರಾಜ್ಯ ಮತ್ತು ಗೌರವದೊಂದಿಗೆ ಗೊಂದಲಕ್ಕೊಳಗಾಗ ಬಾರದು. ಯಾಕೆಂದರೆ ಅವರುಗಳು ನಮ್ಮ ಮಹಿಮೆಗಾಗಿ ಲೋಕದ ಮೊದಲೇ ಪ್ರತಿಷ್ಠೆಹೊಂದಿದವರು (1 ಕೊರಿಂಥ 2:7). ಅದಕ್ಕಾಗಿ ನಾವು ಲೋಕದ ಅಸ್ತಿವಾರವನ್ನು ಹಾಕುವ ಮೊದಲೇ ಕ್ರಿಸ್ತನಲ್ಲಿ ಆಯ್ಕೆಗೊಂಡವರಾಗಿದ್ದೇವೆ. ಕ್ರಿಸ್ತನ ವಿಶೇಷ ಮಧ್ಯಸ್ಥಿಕೆ ಮತ್ತು ಲೋಕದ ಮೇಲಣ ಆಳ್ವಿಕೆಯು ಮುಗಿಯುವುದಾದರೂ, ಮುನ್ಸೂಚಿಸಿದಂತೆ, ಕ್ರಿಸ್ತನ ಮಹಿಮೆ ಮತ್ತು ಪ್ರಭುತ್ವವು ಮುಗಿದು ಹೋಗುವುದೆಂದು ನಾವು ತೀರ್ಮಾನಿಸಬಾರದು. ಅಷ್ಟೇ ಏಕೆ, ಕ್ರಿಸ್ತನು ಯೆಹೋವನ ಬಲಗಡೆಯಲ್ಲಿರುವ ಕೃಪೆಯಲ್ಲಿದ್ದುಕೊಂಡು ಸದಾ ಕಾಲಕ್ಕೂ ಎಲ್ಲಾ ದೈವಿಕ ಮಹಿಮೆ ಮತ್ತು ಅಧಿಕಾರಗಳಲ್ಲಿ ಭಾಗಿಯಾಗಿದ್ದಾನೆ; ಆತನ ಮದಲಗಿತ್ತಿ ಮತ್ತು ಜೊತೆಬಾಧ್ಯಸ್ಥಳು ಸದಾಕಾಲ ಆತನ ಹೆಚ್ಚುತ್ತಿರುವ ಮಹಿಮೆಯಲ್ಲಿ ಪಾಲುದಾರಳಾಗಿರುತ್ತಾಳೆ. ಅತ್ಯಂತ ಉನ್ನತಕ್ಕೇರಿರುವ ದೇವರ ಈ ನಿಯೋಗಿಯಿಂದ ಇತರೆ ಲೋಕದಲ್ಲಿ ಎಂಥಾಃ ಅದ್ಭುತವಾದ ಕಾರ್ಯಗಳು ಕಾಯುತ್ತಿದೆ ಎಂಬುದನ್ನು ದೈವಿಕ ಶಕ್ತಿಯ ಅನಂತತೆ ಮತ್ತು ಚಟುವಟಿಕೆ ಮತ್ತು ಬ್ರಹ್ಮಾಂಡದ ಅನಂತತೆಯನ್ನು ಸೂಚಿಸುವುದಕ್ಕಿಂತ ಹೆಚ್ಚಾಗಿ ನಾವಿಲ್ಲಿ ಊಹಿಸುವದಿಲ್ಲ.

ಹಾಗಾದರೆ, ನಿಜವಾಗಿಯೂ ನಮ್ಮ ಆಸಕ್ತಿಯು ರಾಜ್ಯದ ಯಾವುದೇ ಹಂತದಲ್ಲಿ ಕೇಂದೀಕೃತ ವಾಗಿರುವುದಾದರೂ "ಸಮಸ್ತ ಜನಾಂಗದ ಇಷ್ಟ ವಸ್ತುಗಳು ಬಂದೊದಗುವದು". ಅದರಡಿಯಲ್ಲಿ ಅದು ಆಶೀರ್ವಾದ ಹೊಂದಿಕೊಳ್ಳುವುದು; ಆದುದರಿಂದ ಎಲ್ಲರೂ ಆ ಸಮಯಕ್ಕಾಗಿ ಶ್ರದ್ಧೆಯಿಂದ ಹಂಬಲಿಸ ಬಹುದು ಮತ್ತು ಎಲ್ಲರೂ "ನಿನ್ನ ರಾಜ್ಯವು ಬರಲಿ, ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವಂತೆ ಭೂಲೋಕದಲ್ಲಿಯೂ ನೆರವೇರಲಿ" (ಮತ್ತಾಯ 6:10) ಎಂದು ಪ್ರಾರ್ಥಿಸಬಹುದು. ಇದಕ್ಕಾಗಿಯೇ ಇಡೀ ಸೃಷ್ಟಿಯು ಅಜ್ಞಾನದಿಂದ ದೀರ್ಘಕಾಲ ನರಳುತ್ತಲೂ, ಕಾಯುತ್ತಲೂ ಇದ್ದಾರೆ – ದೇವರ ಪುತ್ರರ ಪ್ರಕಟನೆಗಾಗಿ. ಕೆಟ್ಟದ್ದನ್ನು ಮುರಿದು ಹಾಕಿ ಎಲ್ಲಾ ರಾಷ್ಟ್ರಗಳನ್ನೂ ಆಶೀರ್ವದಿಸುವ, ಗುಣಪಡಿಸುವ ರಾಜ್ಯಕ್ಕಾಗಿ ಕಾಯುತ್ತಿದ್ದಾರೆ – "ದೇವಪುತ್ರರ ಮಹಿಮೆಯು ಯಾವಾಗ ಪ್ರತ್ಯಕ್ಷವಾದೀತೆಂದು ಜಗತ್ತು ಲವಲವಿಕೆಯಿಂದ ಎದುರು ನೋಡುತ್ತಿರುವುದು" ಶಾಂತಿದಾಯಕನಾದ ದೇವರು ಶೀಘ್ರವಾಗಿ ಸೈತಾನನನ್ನು ನಿಮ್ಮ ಕಾಲುಗಳ ಕೆಳಗೆ ಹಾಕಿ ತುಳಿಸಿಬಿಡುವನು. (ರೋಮಾ. 8:19; 16:20).

* * * * * * *

# ಅಧ್ಯಯನ – 15 Study XV

# ಯೆಹೋವನ ದಿನ

## THE DAY OF JEHOVAH

**"ಯೆಹೋವನ ದಿನ", "ಮುಯ್ಯಿ ತೀರಿಸುವ ದಿನ", "ರೌದ್ರದ ದಿನ" – ಮಹಾ ಸಂಕಟದ ಕಾಲ – ಅದರ ಕಾರಣಗಳು – ಅದರ ಬಗ್ಗೆ ಸತ್ಯವೇದದ ಸಾಕ್ಷ್ಯಗಳು – ಅದರ ಬೆಂಕಿ ಮತ್ತು ಬಿರುಗಾಳಿ, ಅದರ ನಡುಗುವಿಕೆ ಮತ್ತು ಕರಗುವಿಕೆ, ಸಾಂಕೇತಿಕವಾಗಿ ತೋರಿಸಲ್ಪಟ್ಟಿದೆ – ದಾವೀದನ ಸಾಕ್ಷ್ಯ – ಪ್ರಕಟನೆಗಾರನ ಸಾಕ್ಷ್ಯ – ಎದುರಾಳಿ ಪಂಗಡಗಳ, ಬಂಡವಾಳಶಾಹಿಗಳ ಹಾಗೂ ಕೂಲಿಕಾರ್ಮಿಕರ ದೃಷ್ಟಿಯಲ್ಲಿ ವೀಕ್ಷಿಸಲ್ಪಟ್ಟ ಪ್ರಸ್ತುತ ಪರಿಸ್ಥಿತಿ ಮತ್ತು ಭವಿಷ್ಯದ ಹೊರನೋಟ – ಯಶಸ್ವಿಯಾಗದ ಪರಿಹಾರ – ತಕ್ಕಸಮಯದಲ್ಲಿ ಪರದೆಯು ಎತ್ತಲ್ಪಟ್ಟು ಬೆಳಕಿನ ಪ್ರವೇಶವಾಗಿದೆ – ಇದರ ರುಜುವಾತು – ಸಂಕಟದ ಸಮಯದಲ್ಲಿ ಸಂತರುಗಳ ಪರಿಸ್ಥಿತಿ ಮತ್ತು ಅದರ ಬಗ್ಗೆ ಅವರ ಯುಕ್ತವಾದ ಮನೋವೃತ್ತಿ.**

"ಯೆಹೋವನ ದಿನ" ಎಂಬುದು ದೇವರ ರಾಜ್ಯದ ಕಾಲದಲ್ಲಿನ ಅವಧಿಯ ಹೆಸರು, ಇದನ್ನು ಕ್ರಿಸ್ತನ ಅಧೀನದಲ್ಲಿ ಈ ಪ್ರಪಂಚದ ರಾಜ್ಯಗಳು ನಾಶವಾಗುತ್ತಾ, ಸೈತಾನನ ಅಧಿಕಾರ ಮತ್ತು ಮಾನವರ ಮೇಲಿನ ಆತನ ಪ್ರಭಾವ ನಿಗ್ರಹವಾಗುತ್ತಿರುವಾಗ ಕ್ರಮೇಣವಾಗಿ ಈ ಭೂಮಿಯಲ್ಲಿ ದೇವರ ರಾಜ್ಯ ಸ್ಥಾಪಿಸಲಾಗುವುದು. ಇದನ್ನು ಎಲ್ಲೆಡೆಯಲ್ಲಿ ತೀಕ್ಷ್ಣವಾದ ತೊಂದರೆ ಮತ್ತು ದುರವಸ್ಥೆಗಳುಳ್ಳ ಹಾಗೂ ಮಾನವ ಜಾತಿಯವರ ಮೇಲೆ ಸಂಕಟ ಮತ್ತು ಕಳವಳವನ್ನುಂಟುಮಾಡುವ ಕರಾಳ ದಿನವೆಂದು ವರ್ಣಿಸಲಾಗಿದೆ. ಬದಲಾವಣೆಗಳನ್ನು ಅಗತ್ಯಗೊಳಿಸುವ ಅಂಥಾಃ ಅನುಪಾತದ ಕ್ರಾಂತಿಯು ಅಂಥಾಃ ಸಂಕಟವನ್ನುಂಟುಮಾಡುವುದು ಎಷ್ಟೋ ಆಶ್ಚರ್ಯವಾದುದು. ಸಣ್ಣ ಪುಟ್ಟ ಕ್ರಾಂತಿಗಳು ಪ್ರತಿ ಯುಗದಲ್ಲಿಯೂ ತೊಂದರೆಯನ್ನುಂಟು ಮಾಡುತ್ತವೆ; ಆದರೆ "ಜನಾಂಗವು ಉಂಟಾದಂದಿನಿಂದ ಅಂದಿನವರೆಗೆ ಸಂಕಟವನ್ನುಂಟುಮಾಡುವ ಈ ಕ್ರಾಂತಿಯು ಹಿಂದಿನದಕ್ಕಿಂತ ದೊಡ್ಡದಾಗಿದ್ದು ಇಂದಿನವರೆಗೂ ಆಗಲಿಲ್ಲ, ಇನ್ನು ಮೇಲೆಯೂ ಆಗುವುದಿಲ್ಲ. (ದಾನಿಯೇಲ 12:1; ಮತ್ತಾಯ 24:21,22).

ಇದನ್ನು "ಯೆಹೋವನ ದಿನ" ಎಂದು ಕರೆಯುತ್ತಾರೆ. ಯಾಕೆಂದರೆ, ಕ್ರಿಸ್ತನು ರಾಜ್ಯವೈಭವ ಬಿರುದು ಮತ್ತು ಅಧಿಕಾರದೊಂದಿಗೆ ಯೆಹೋವನ ಪ್ರತಿನಿಧಿಯಾಗಿ ಉಪಸ್ಥಿತನಿರುವನು, ಈ ಸಂಕಟದ ಸಮಯದ ಎಲ್ಲಾ ಕಾರ್ಯಗಳ ಜವಾಬ್ದಾರಿ ವಹಿಸಿಕೊಳ್ಳುತ್ತಾನೆ. ಇನ್ನೂ ಹೆಚ್ಚಾಗಿ ಯೆಹೋವನ ಮುಖ್ಯ ಸೇನಾಪತಿಯಂತೆ ಎಲ್ಲವನ್ನೂ ತನ್ನ ವಶಕ್ಕೆ ತೆಗೆದುಕೊಳ್ಳುವುದಾಗಿದೆ. ಆತನು ಸಮಾಧಾನದ ಪ್ರಭುವಾಗಿ, ಎಲ್ಲರನ್ನೂ ಅಶೀರ್ವದಿಸುವನು. ಈ ಸಮಯದಲ್ಲಿ, ಸುಳ್ಳು ಮತ್ತು ಅಪೂರ್ಣ ಭಾವಾಭಿಪ್ರಾಯಗಳು ಮತ್ತು ವ್ಯವಸ್ಥೆಗಳು ಕುಸಿಯುತ್ತಿದ್ದಂತೆ, ನೂತನ ರಾಜನ ಪತಾಕೆಯು ಮೇಲೇರುತ್ತದೆ, ಮತ್ತು ಅಂತಿಮವಾಗಿ ಅವನು ರಾಜಾಧಿರಾಜನಾಗಿ ಎಲ್ಲರಿಂದಲೂ ಗುರುತಿಸಲ್ಪಟ್ಟು ಎಲ್ಲರಿಗೂ ಒಡೆಯನಾಗಿರುತ್ತಾನೆ. ಈ ರೀತಿಯಾಗಿ ಅದು "ಕ್ರಿಸ್ತನ ಪ್ರಭುತ್ವ"ವನ್ನು ಸ್ಥಾಪಿಸುವ ಯೆಹೋವನ ಕಾರ್ಯವಾಗಿದೆ ಎಂಬುದಾಗಿ ಪ್ರವಾದಿಗಳು ಪ್ರಸ್ತುತಿಪಡಿಸುತ್ತಾರೆ. "ನಾನು ಅನ್ಯಜನಗಳನ್ನೆಲ್ಲಾ ನಿನಗೆ ಅಧೀನಮಾಡುವೆನು; ಭೂಮಿಯ ಕಟ್ಟಕಡೆಯವರೆಗೂ ಇರುವ ಎಲ್ಲಾ ದೇಶಗಳನ್ನು ನಿನಗೆ ಸ್ವಾಸ್ಥ್ಯವಾಗಿ ಕೊಡುವೆನು" (ಕೀರ್ತನೆ 2:8). "ಆ ರಾಜರ ಕಾಲದಲ್ಲಿ ಪರಲೋಕ ದೇವರು ಒಂದು ರಾಜ್ಯವನ್ನು ಸ್ಥಾಪಿಸುವನು" (ದಾನಿಯೇಲ 2:44). "ಮಹಾ ವೃದ್ಧನೊಬ್ಬನು ಆಸೀನನಾದನು; ಮನುಷ್ಯಕುಮಾರ ನಂತಿರುವವನು ಆಕಾಶದ ಮೇಘದೊಳಗಿಂದ ಬಂದು ಆ ಮಹಾ ವೃದ್ಧನನ್ನು ಸಮೀಪಿಸಿದನು; ಆಗ ಅವನ ರಾಜಪ್ರಭುತ್ವಗಳು ಸಮಸ್ತ ಭೂಮಂಡಲದಲ್ಲಿರುವ ರಾಜ್ಯಗಳ ಮಹಿಮೆಯೂ ಪರಾತ್ಪರ ಭಕ್ತರಿಗೆ ಕೊಡೋಣವಾಗುವುದು. ಆತನ ರಾಜ್ಯವು ಶಾಶ್ವತ ರಾಜ್ಯ. ಅವನ ರಾಜ್ಯವು ಎಂದಿಗೂ ಅಳಿಯದು; ಸಕಲ ಸೇನಾಧಿಪತಿಗಳೂ ಆತನಿಗೆ ಅಧೀನರಾಗಿ ಸೇವೆ ಮಾಡುವರು" (ದಾನಿಯೇಲ 7:9;13, 14, 22,27). ಇದರೊಡನೆ ಪೌಲನ ಹೇಳಿಕೆಯನ್ನು ಕೂಡಿಸುತ್ತಾ ಕ್ರಿಸ್ತನು ತನ್ನ ಆಡಳಿತದ ಗುರಿಯನ್ನು ನೆರವೇರಿಸಿದ ನಂತರ "ಸಮಸ್ತವೂ ಆತನಿಗೆ ಅಧೀನವಾದ ಮೇಲೆ ಮಗನು ಸಮಸ್ತವನ್ನೂ ತನಗೆ ಅಧೀನ ಮಾಡಿಕೊಟ್ಟಾತನಿಗೆ ತಾನೇ ಅಧೀನನಾಗುವನು; ಹೀಗೆ ದೇವರು ಸಮಸ್ತರಲ್ಲಿಯೂ ಸಮಸ್ತವಾಗುವನು" (1 ಕೊರಿಂಥ 15:28).

ಈ ಅವಧಿಯನ್ನು ನಮ್ಮ ದೇವರ "ಪ್ರತೀಕಾರದ ದಿನ" ಮತ್ತು "ರೌದ್ರದ ದಿನ"ವೆಂಬುದಾಗಿಯೂ ಕರೆಯಲಾಗುತ್ತದೆ (ಯೆಶಾಯ 61:2; 63:1–4;

ಕೀರ್ತನೆ 110:5). ಆದಾಗ್ಯೂ ಕೋಪದ ವಿಚಾರವನ್ನು ಮಾತ್ರವೇ ಗ್ರಹಿಸುವ ಅಥವಾ ದೈವಿಕ ಮತ್ಸರವೆಂದು ಮನಸ್ಸಿನಲ್ಲಿ ಊಹಿಸುವುದಾದರೆ ಗಂಭೀರವಾದ ತಪ್ಪಾಗುತ್ತದೆ. ದೇವರು ಕೆಲವೊಂದು ನಿಯಮಗಳನ್ನು ಸ್ಥಾಪಿಸಿದ್ದಾನೆ. ಅದರ ಸಾಮರಸ್ಯದೊಂದಿಗೆ ಆತನು ಕಾರ್ಯನಿರ್ವಹಿಸುತ್ತಾನೆ, ಯಾವುದೇ ಕಾರಣದಿಂದಾಗಿ ಯಾರಾದರೂ ಇದರೊಡನೆ ಘರ್ಷಣೆಗೊಳ್ಳುವುದಾದರೆ ದಂಡನೆ ಅಥವಾ ತಮ್ಮ ಸ್ವಯಂ ಮಾರ್ಗದಿಂದಾಗಿ ರೌದ್ರದ ಫಲವನ್ನು ಅನುಭವಿಸಬೇಕಾಗುತ್ತದೆ. ಮಾನವ ಜಾತಿಯವರಿಗೆ ದೇವರು ನೀಡುವ ಸಮಾಲೋಚನೆಯನ್ನು ಕೆಲವರನ್ನು ಹೊರತುಪಡಿಸಿ ಎಲ್ಲರೂ ನಿರಂತರವಾಗಿ ತಿರಸ್ಕರಿಸಿದ್ದಾರೆ. ನಮಗೆ ತಿಳಿಸಿದಂತೆ, ದೇವರು ಅವರಿಗೆ ಸ್ವಂತ ಮಾರ್ಗದಲ್ಲಿ ನಡೆಯಲು ಅನುಮತಿಸಿದ್ದಾನೆ ಮತ್ತು ಅವರ ಮನಸ್ಸಿನಿಂದ ದೇವರನ್ನು ಮತ್ತು ಆತನು ನೀಡುವ ಸಮಾಲೋಚನೆಯನ್ನು ತೆಗೆದುಬಿಡುವಂತೆ ಅವರನ್ನು ಅನಿಷ್ಟಭಾವಕ್ಕೆ ಒಪ್ಪಿಸಿಬಿಟ್ಟಿದ್ದಾನೆ (ರೋಮಾ. 1:28). ನಂತರದಲ್ಲಿ ಆತನು ಅಬ್ರಹಾಮನಿಗೆ ಮತ್ತು ಆತನ ಪೀಳಿಗೆಯವರಿಗೆ ಆತನ ಮಾರ್ಗವನ್ನು ಸೇವೆಯನ್ನು ಬಯಸುತ್ತೇವೆಂದು ಹೇಳಿಕೊಂಡವರಿಗೆ ತನ್ನ ವಿಶೇಷ ಲಕ್ಷ್ಯವನ್ನು ನೀಡುವವನಾಗಿದ್ದಾನೆ. ಒಂದು ಜನಾಂಗವಾಗಿ, ದೇವರ ಬಗ್ಗೆ ಅವರ ಹೃದಯ ಕಾಠಿಣ್ಯವು ಮತ್ತು ಅವರ ಹೃದಯದ ಕಪಟಾಚರಣೆಯು ಅವರು ಮೆಸ್ಸೀಯನನ್ನು ಸ್ವಾಭಾವಿಕವಾಗಿ ಸ್ವೀಕರಿಸಲು ಅಡ್ಡಿಪಡಿಸಿತಲ್ಲದೆ, ಅವರನ್ನು ತೊಂದರೆಗೆ ಸಿದ್ಧಪಡಿಸಿ ಅವರ ರಾಷ್ಟ್ರೀಯ ಅಸ್ತಿತ್ವವನ್ನು ಮೊಟಕುಗೊಳಿಸಿತು.

ಹೀಗೆ ಸುವಾರ್ತಾ ಯುಗದಲ್ಲಿ, ಈ ಲೋಕದಲ್ಲಿ ಕ್ರಿಸ್ತನ ನಿಜವಾದ ಸಭೆಯು (ಪರಲೋಕದಲ್ಲಿ ಹೆಸರು ಬರೆದಿರುವ ವರ್ಗದವರು) ಹೊಂದಿದ್ದ ಬೆಳಕು ನಾಗರೀಕ ಪ್ರಪಂಚಕ್ಕೆ ತಪ್ಪು ಮತ್ತು ಸರಿ, ಒಳ್ಳೆಯದು ಮತ್ತು ಕೆಟ್ಟದ್ದು ಇವುಗಳ ಬಗ್ಗೆ ಮತ್ತು ಮುಂಬರುವ ಕಾಲದಲ್ಲಿ ಪ್ರತಿಫಲ ಪಡಕೊಳ್ಳುವವರ ಬಗ್ಗೆ, ಶಿಕ್ಷೆ ಹೊಂದುವವರ ಬಗ್ಗೆ ಸಾಕ್ಷಿ ನೀಡುವುದಾಗಿತ್ತು (ಯೋಹಾನ 16;8–11; ಅ.ಕೃ. 24:25). ಅವರು ಕರ್ತನ ಸೂಚನೆಗಳಿಗೆ ಕಿವಿಗೊಡುವವರಾಗಿದ್ದರೆ ಇದು ಜನರ ಮೇಲೆ ವಿಶಾಲವಾದ ಪ್ರಭಾವವನ್ನು ಬೀರಬಹುದಾಗಿತ್ತು. ಆದರೆ ಎಂದಿನಂತೆ ಉದ್ದೇಶಪೂರ್ವಕವುಳ್ಳವರಾಗಿದ್ದು, ಅವರುಗಳು ಧರ್ಮಗ್ರಂಥಗಳ ಸಲಹೆಯಿಂದ ಅಲ್ಪ ಲಾಭವನ್ನಷ್ಟೇ ಗಳಿಸಿದ್ದಾರೆ. ಮತ್ತು ಕರ್ತನ ದಿನದ ವಿಪತ್ತುಗಳು ನಿರ್ಲಕ್ಷ್ಯದ ಪರಿಣಾಮವಾಗಿ ಉಂಟಾಗುವುವು. ಪುನಃ ಇದನ್ನು ಆತನ ಸಮಾಲೋಚನೆಗಳನ್ನು ಗೌರವಿಸದ ಕಾರಣ, ಅನೀತಿವಂತಿಕೆಯ ಬಹುಮಾನವಾಗಿ ಬರುವ ದೇವರ ರೌದ್ರ ಎಂಬುದಾಗಿ ಹೇಳಬಹುದು. ಪರಂತು, ಮತ್ತೊಂದು ಬೆಳಕಿನಲ್ಲಿ ನೋಡುವಾಗ, ಲೋಕದ ಮೇಲೆ ಬರುವ ವಿಪತ್ತುಗಳು ಸ್ವಾಭಾವಿಕವಾದವುಗಳು ಅಥವಾ ಪಾಪದ ನ್ಯಾಯಸಮ್ಮತವಾದ ಫಲವೂ ಆಗಿದೆ. ಇದನ್ನು ದೇವರು ಮುಂದಾಗಿ ತಿಳಿದು, ಆತನ ಸಮಾಲೋಚನೆಗಳನ್ನು ಅನುಸರಿಸಿದ್ದರೆ, ಇದರ ವಿರುದ್ಧವಾಗಿ ಅವರನ್ನು ರಕ್ಷಿಸಬಹುದಿತ್ತು.

ಸಭೆಗೆ ದೇವರ ಸಂದೇಶವು "ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ, ಮೆಚ್ಚುಗೆಯಾಗಿಯೂ ಇರುವ ಸಜೀವ ಯಜ್ಞವಾಗಿ ಅರ್ಪಿಸಿರಿ" (ರೋಮಾ. 12:1) ಎಂಬುದಾಗಿರುವಾಗ, ಲೋಕದವರಿಗೆ ಆತನ ಸಂದೇಶವು "ಕೆಟ್ಟದ್ದಕ್ಕೆ ಹೋಗದಂತೆ ನಾಲಿಗೆಯನ್ನು ಕಾದುಕೋ; ವಂಚನೆಯ ಮಾತುಗಳಗೆ ಬಿಡದೆ ತುಟಿಗಳನ್ನು ಇಟ್ಟುಕೋ. ಕೆಟ್ಟದ್ದನ್ನು ಬಿಟ್ಟು ಒಳ್ಳೇದನ್ನೇ ಮಾಡು; ಸಮಾಧಾನವನ್ನು ಹಾರೈಸಿ ಅದಕ್ಕಾಗಿ ಪ್ರಯತ್ನಪಡು" (ಕೀರ್ತನೆ 34: 13–14) ಎಂಬುದಾಗಿದೆ. ಕೆಲವರು ಮಾತ್ರವೇ ಈ ಎರಡೂ ಸಂದೇಶಗಳಲ್ಲಿ ಒಂದಕ್ಕೆ ಕಿವಿಗೊಟ್ಟಿದ್ದಾರೆ. ಚಿಕ್ಕಹಿಂಡು ಮಾತ್ರವೇ ತ್ಯಾಗಮಾಡಿದೆ. ಆದರೆ ಲೋಕವು "ಪ್ರಾಮಾಣಿಕತೆಯೇ ಅತ್ಯುತ್ತಮ ನೀತಿ" (Honesty is the best Policy) ಎಂಬ ಧ್ಯೇಯವಾಕ್ಯಕ್ಕೆ ಅಂಟಿಕೊಂಡಿದ್ದರೂ ಅದನ್ನು ಅಭ್ಯಾಸಮಾಡುವಲ್ಲಿ ಒಟ್ಟಾರೆಯಾಗಿ ನಿರ್ಲಕ್ಷಿಸಿದ್ದಾರೆ. ನಿಜವಾಗಿ ಹೇಳುವುದಾದರೆ ಅವರು – ಈ ಲೋಕದ ಐಶ್ವರ್ಯವಂತಿಕೆಯ, ಗೌರವ ಮತ್ತು ಅಧಿಕಾರದ ಎಲ್ಲವನ್ನೂ ನೀವು ಹೊಂದಿಕೊಳ್ಳುವ ಮಾರ್ಗ ಯಾವುದೇ ಇರಲಿ ಅವುಗಳನ್ನು ಹೊಂದಿಕೊಳ್ಳಿರಿ, ನೀನು ಪಡೆದ ಲಾಭದಿಂದ ಬೇರೆ ಯಾರಿಗಾದರೂ ನಷ್ಟವಾಗಲಿ, ಎಂಬ ಅತ್ಯಾಶೆಯ ಮಾತುಗಳಿಗೆ ಕಿವಿಗೊಟ್ಟಿದ್ದಾರೆ. ಒಂದೇ ಮಾತಿನಲ್ಲಿ ಹೇಳುವುದಾದರೆ, ದೇವರ ಆಜ್ಞೆಗಳ ನೀತಿಸೂತ್ರಗಳನ್ನು ಯಾವುದೇ ಅಂಶದಲ್ಲಿ ಗಣನೀಯವಾಗಿ ಅನುಸರಿಸಿದ್ದರೆ ಕರ್ತನ ದಿನದ ಈ ತೊಂದರೆಯು ಬರುವುದಿಲ್ಲ, ಬರಲಾಗುತ್ತಿರಲಿಲ್ಲ. ಆ ನಿಯಮದ ಸಂಕ್ಷಿಪ್ತ ಸಾರಾಂಶವೆಂದರೆ – "ನಿನ್ನ ದೇವರಾಗಿರುವ ಕರ್ತನನ್ನು ನಿನ್ನ ಪೂರ್ಣ ಹೃದಯದಿಂದಲೂ, ನಿನ್ನ ಪೂರ್ಣ ಪ್ರಾಣದಿಂದಲೂ ನಿನ್ನ ಪೂರ್ಣ ಬುದ್ಧಿಯಿಂದಲೂ ಪ್ರೀತಿಸಬೇಕು... ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು" (ಮತ್ತಾಯ 22:37–38) ಎಂಬುದೇ. ನೀತಿಭ್ರಷ್ಟರೂ,

ವಿಷಯಲಂಪಟ ಮನಸ್ಸಿನವರೂ ದೇವರ ಈ ನಿಯಮವನ್ನು ವಿರೋಧಿಸುವ ಕಾರಣ, ಅದಕ್ಕೆ ಅಧೀನರಾಗದಿರುವುದರಿಂದ, ಸ್ವಾಭಾವಿಕ ಪರಿಣಾಮ ವಾಗಿ ಬಿತ್ತಿದ್ದನ್ನು ಕೊಯ್ಯಿ ಎಂಬಂತೆ ಈ ತೊಂದರೆಯು ಬರುತ್ತದೆ.

ವಿಷಯಲೋಲುಪ್ತ ಅಥವಾ ನೀತಿಭ್ರಷ್ಟ ಮನಸ್ಸು, ತನ್ನ ನೆರೆಯವರನ್ನು ತನ್ನಂತೆಯೇ ಪ್ರೀತಿಸದೇ ಸದಾ ಸ್ವಾರ್ಥಿಗಳೂ, ಸುಲುಕೊಳ್ಳುವವರೂ ಆಗಿದ್ದು ಹಲವೊಮ್ಮೆ ಬೇರೆಯವರ ವಸ್ತುಗಳನ್ನು ತನಗಾಗಿ ಪಡಕೊಳ್ಳಲು ಹಿಂಸೆಗೂ, ಕೊಲೆಗೂ ಸಹ ಕಾರಣರಾಗುತ್ತಾರೆ. ಹೇಗೆ ಅನ್ವಯಿಸಿಕೊಂಡರೂ, ಸ್ವಾರ್ಥದ ತತ್ವವು ಯಾವಾಗಲೂ ಒಂದೇ ಹುಟ್ಟಿನ, ವಿದ್ಯಾಭ್ಯಾಸ ಮತ್ತು ಆಸುಪಾಸಿನ ಸಂದರ್ಭಗಳಲ್ಲಿ ನಿಯಂತ್ರಿಸದ ಹೊರತು ಸ್ವಾರ್ಥಿ ತತ್ವವು ಯಾವಾಗಲೂ ಒಂದೇ ಸಮನಾಗಿರುತ್ತವೆ. ಪ್ರಪಂಚದ ಪ್ರತಿಯೊಂದು ಯುಗದಲ್ಲಿಯೂ ಹಾಗೆಯೇ ಇದೆ, ಹಾಗೆಯೇ ಇರುತ್ತದೆ, ಅದು ಮೆಸ್ಸೀಯನ ಕಬ್ಬಿಣದ ಆಡಳಿತದಲ್ಲಿ, ಶಕ್ತಿಯಿಂದಲ್ಲ, ಅಥವಾ ಅತ್ಯಾಶೆಯಿಂದಲ್ಲ, ಪ್ರೀತಿಯಿಂದ ಮತ್ತು ಯಾವುದು ಸರಿಯೆಂದು ನಿರ್ಧರಿಸುವತನಕ ಹಾಗೆಯೇ ಇರುತ್ತದೆ, ನಂತರ ಮತ್ತು ಎಲ್ಲರೂ ನೀತಿವಂತಿಕೆಯ ಮತ್ತು ಪ್ರೀತಿಯ ನಿಯಮದ ಉನ್ನತ ಪ್ರಯೋಜನಗಳನ್ನು, ಆ ಸ್ವಾರ್ಥ ಮತ್ತು ಬಲದೊಂದಿಗೆ ಹೋಲಿಸುವವರಾಗಿ ಕಲಿಯುವ ಅವಕಾಶಗಳನ್ನು ಜಾರಿಗೊಳಿಸುತ್ತದೆ. ಸತ್ಯದ, ನೀತಿವಂತಿಕೆಯ ಸೂರ್ಯ ಪ್ರಕಾಶದ ಪ್ರಭಾವದಲ್ಲಿ, ಮಾನವನ ಸ್ವಾರ್ಥ, ಕಲ್ಲು ಹೃದಯವು ಪುನಃ ದೇವರು “ತುಂಬಾ ಒಳ್ಳೆಯದು ಎಂಬಂತೆ – ನಾನು ನಿಮಗೆ ಹೊಸ ಮನಸ್ಸನ್ನು ಕೊಟ್ಟು, ನಿಮ್ಮಲ್ಲಿ ನೂತನ ಸ್ವಭಾವನ್ನು ಹುಟ್ಟಿಸುವೆನು. ಕಲ್ಲಾದ ಹೃದಯವನ್ನು ನಿಮ್ಮೊಳಗಿಂದ ತೆಗೆದು ಮೃದುವಾದ ಹೃದಯವನ್ನು ದಯಪಾಲಿಸುವೆನು” (ಯೆಹೆಜ್ಕೇಲ 36: 26) ಎಂದು ಉಚ್ಚರಿಸಿದಂತೆ ಮತ್ತೊಮ್ಮೆ ಆಗುತ್ತದೆ.

ಹಿಂದಿರುಗಿ ನೋಡುವಾಗ, ದೇವರಂತಹ ಪ್ರೀತಿ ಮತ್ತು ಕರುಣೆಯು ಹೇಗೆ ಕಠಿಣವಾದ ಸ್ವಾರ್ಥಸ್ವಭಾವಕ್ಕೆ ಬದಲಾವಣೆಯಾಯಿತೆಂಬುದನ್ನು ನಾವು ಯಾವ ಕಷ್ಟವೂ ಇಲ್ಲದೆ ನೋಡಬಹುದು. ಮಾನವನು ಅವಿಧೇಯತೆಯ ದೆಸೆಯಿಂದ ಆತ್ಮೀಕ ದೈವಿಕ ಅನುಗ್ರಹವನ್ನು ಕಳೆದುಕೊಂಡು, ತನ್ನ ಏದೇನ ಜನ್ಮಭೂಮಿಯಿಂದ ಗಡಿಪಾರು ಮಾಡಿದ ತಕ್ಷಣ ಸ್ವಾರ್ಥತೆಯನ್ನು ಉತ್ತೇಜಿಸುವ ಸಂದರ್ಭಗಳು ಎದುರಾದವು. ಅಲ್ಲಿ (ಏದೇನಿನಲ್ಲಿ) ಅವನ ಪ್ರತಿಯೊಂದು ಅಗತ್ಯತೆಗಳನ್ನೂ ಉದಾರವಾಗಿ ಪೂರೈಸಲಾಗುತ್ತಿತ್ತು. ದಂಡನೆಗೆ ಒಳಗಾದ ನಮ್ಮ ಆದಿ ಪೋಷಕರು ಆಚೆ ಹೋಗಿ ಜೀವನದ ಹೋರಾಟವನ್ನು ಪ್ರಾರಂಭಿಸಿದಾಗ, ತಮ್ಮ ಅಸ್ಥಿತ್ವವನ್ನು ಮುಂದುವರೆಸಲು ಬಯಸಿದಾಗ, ಅವರುಗಳು ಆ ಕ್ಷಣದಲ್ಲಿ ಮುಳ್ಳು ಮತ್ತು ಕಾಡುಗಿಡಗಳನ್ನೂ, ದತ್ತೂರಿಯನ್ನೂ ಮತ್ತು ಬಂಜರು ಭೂಮಿಯನ್ನು ಸಂಧಿಸಬೇಕಾಯಿತು. ಇದರೊಂದಿಗೆ ಕಾದಾಡುತ್ತಾ ಅವರು ದೇವರು ತಿಳಿಸಿದಂತೆ ಆಯಾಸವನ್ನು ಅನುಭವಿಸುವಾಗ ದಣಿವು ಮತ್ತು ಮುಖದ ಬೆವರುವಿಕೆಯನ್ನು ಉಂಟುಮಾಡಿತು. ಕ್ರಮೇಣವಾಗಿ ಮಾನಸಿಕ ಮತ್ತು ನೈತಿಕ ಗುಣಗಳು ಅಭ್ಯಾಸದ ಕೊರತೆಯಿಂದ ಕುಂಠಿತಗೊಳ್ಳಲು ಪ್ರಾರಂಭಿಸಿದವು. ಅದೇ ಸಮಯದಲ್ಲಿ ಕ್ಷೀಣ ಸ್ವಭಾವಗಳು ನಿರಂತರವಾದ ಅಭ್ಯಾಸದಿಂದ ಹೆಚ್ಚಿನ ವ್ಯಾಪ್ತಿಯಲ್ಲಿ ಉಳುಕೊಂಡವು. ಪೋಷಣಶಕ್ತಿಯು ಜೀವನಾಧಾರದ ಪ್ರಧಾನ ಗುರಿಯೂ ಆಸಕ್ತಿಯೂ ಆಯಿತು. ಮತ್ತು ಅದರ ದುಡಿಮೆಯ ವೆಚ್ಚವು ಇತರ ಎಲ್ಲ ಆಸಕ್ತಿಗಳನ್ನು ಅಂದಾಜು ಮಾಡುವ ಮಾನದಂಡವಾಯಿತು ಮತ್ತು ಧನಪಿಶಾಚಿಯು ಮಾನವನ ಧಣಿ ಆಯಿತು. ಅಂಥಾಃ ಪರಿಸ್ಥಿತಿಯ ಅಡಿಯಲ್ಲಿ ಮಾನವ ಕುಲವು ಸ್ವಾರ್ಥಿಯೂ, ಆಗಿ ಪ್ರತಿಯೊಬ್ಬರೂ ಹೆಚ್ಚಿನದಕ್ಕಾಗಿ ಧನಲೋಭದ ಪ್ರವೃತ್ತಿಗೆ ಒಳಗಾಗಿದೆ ಎಂದು ಆಶ್ಚರ್ಯಪಡಬಹುದೇ? – ಮೊದಲು ಅಗತ್ಯತೆಗಳಿಗಾಗಿಯೂ, ಎರಡನೆಯದಾಗಿ ಧನಪಿಶಾಚಿಯ ಮೂಲಕ ಕೂಡಿಸಲಾದ ಐಶಾರಾಮಿ ಮತ್ತು ಗೌರವವೋ. ಇದೊಂದು ಸ್ವಾಭಾವಿಕ ಪ್ರವೃತ್ತಿಯಾಗಿದ್ದು ಸೈತಾನನು ಇದರ ಹೆಚ್ಚಿನ ಲಾಭವನ್ನು ಪಡಕೊಳ್ಳುವವನಾಗಿದ್ದಾನೆ.

ಹಿಂದಿನ ಯುಗಗಳಲ್ಲಿ, ವಿವಿಧ ಪ್ರಭಾವಗಳ ಅಡಿಯಲ್ಲಿ (ಬೇರೆಯವರೊಡನೆ, ಅಜ್ಞಾನ/ಜನಾಂಗಗಳ ಪೂರ್ವಾಗ್ರಹ ಮತ್ತು ರಾಷ್ಟ್ರೀಯ ಹೆಮ್ಮೆಯೊಡನೆ) ಲೋಕದ ಮಹಾ ಸಂಪತ್ತು ಸಾಮಾನ್ಯವಾಗಿ ಆಳ್ವಿಕೆ ಮಾಡುವ ಕೆಲವೇ ಕೆಲವರ ಕೈಯಲ್ಲಿ ಮಾತ್ರವೇ ಇರುತ್ತಿತ್ತು ಮತ್ತು ಯಾರಿಗೆ ಜನಸಾಮಾನ್ಯರು ಗುಲಾಮಿ ವಿಧೇಯತೆಯನ್ನು ತೋರುತ್ತಿದ್ದರೋ ಅವರ ರಾಷ್ಟ್ರೀಯ ಪ್ರತಿನಿಧಿಗಳಿಗೆ ತೋರಿಸುವಂತೆ ಐಶ್ವರ್ಯದಲ್ಲಿ ಅವರು ಗರ್ವಪಡುತ್ತಿದ್ದರು ಮತ್ತು ಪ್ರಾತಿನಿಧ್ಯವಾಗಿ ಅವರ ಸ್ವಂತದ್ದೋ ಎಂಬಂತೆ ಆಸಕ್ತಿಯುಳ್ಳವರಾಗಿದ್ದರು. ಆದರೆ ಯೆಹೋವನು ಲೋಕವನ್ನು ಮೆಸ್ಸೀಯನ ಕೈಯಿಂದ ಪುನರ್‌ವಶಗೊಳಿಸಿ ಜಗತ್ತನ್ನು ಆಶೀರ್ವದಿಸುವ ಮೂಲಕ ಕಾಲವು ಸಮೀಪವಾಗುತ್ತಿದ್ದಂತೆ ಆಧುನಿಕ ಸೌಲಭ್ಯಗಳಿಂದ ಮತ್ತು ಅನ್ವೇಷಣೆಗಳ ಮೂಲಕ ಅವರ

ಅಜ್ಞಾನದ ಮತ್ತು ಮೂಢನಂಬಿಕೆಯ ಮುಸುಕನ್ನು ಎತ್ತಲು ಪ್ರಾರಂಭಿಸಿದನು. ಇದರೊಂದಿಗೆ ಜನರ ಸಾಮಾನ್ಯ ಅಭ್ಯುದಯವು ಉಂಟಾಗಿ ಮೇಲೆತ್ತುವಿಕೆಯು ಮತ್ತು ಭೂಲೋಕದ ಅರಸರುಗಳ ಅಧಿಕಾರವು ಕುಂಠಿತವಾಗುವುದು ಪ್ರಾರಂಭವಾಯಿತು, ಇನ್ನು ಲೋಕದ ಐಶ್ವರ್ಯವು ಅದರ ಅರಸರುಗಳ ಕೈಯಲ್ಲಿ ಇಲ್ಲ, ಆದರೆ ಮುಖ್ಯವಾಗಿ ಜನರ ಬಳಿಯಲ್ಲಿದೆ.

ಐಶ್ವರ್ಯವು ಅನೇಕ ಕೇಡುಗಳನ್ನು ತರುವುದಾದರೂ, ಅದು ಕೆಲವು ಆಶೀರ್ವಾದಗಳನ್ನು ಸಹಾ ತರುವುದಾಗಿದೆ. ಐಶ್ವರ್ಯವಂತರು ಉತ್ತಮ ಶಿಕ್ಷಣಗಳನ್ನು ಪಡೆಯುತ್ತಾರೆ – ಈ ರೀತಿಯಲ್ಲಿ ಅವರು ಬಡವರಿಗಿಂತ ಉನ್ನತ ಸ್ಥಾನಕ್ಕೆ ಏರಿಸಲ್ಪಡುತ್ತಾರೆ ಮತ್ತು ಹೆಚ್ಚುಕಡಿಮೆ ರಾಜಮನೆತನದೊಂದಿಗೆ ಸಹವಾಸ ಹೊಂದಿಕೊಳ್ಳುತ್ತಾರೆ. ಆದುದರಿಂದ. ಶ್ರೀಮಂತವರ್ಗದ ಆಸ್ತಿತ್ವದಲ್ಲಿದೆ ಮತ್ತು ಅದು ಹಣ ಮತ್ತು ಶಿಕ್ಷಣ ಎರಡೂ ಅದನ್ನು ಬೆಂಬಲಿಸುತ್ತದೆ. ಮತ್ತು ಅದರ ಅತ್ಯಾಶೆಯ ಹೋರಾಟದಲ್ಲಿ ಅದು ಸಾಧ್ಯವಾದದನ್ನೆಲ್ಲಾ ಪಡಕೊಳ್ಳಲು ಮತ್ತು ಯಾವುದೇ ವೆಚ್ಚದಲ್ಲಿ ಪ್ರಥಮ ಶ್ರೇಣಿಯಲ್ಲಿರಲು ಸಹಾಯ ಮಾಡುತ್ತದೆ.

ಆದರೆ, ಬುದ್ಧಿವಂತಿಕೆಯು ಹರಡುತ್ತಿರುವಂತೆಯೇ, ಜನರು ಈಗ ಎಷ್ಟೋ ಸಮೃದ್ಧಿಯಾಗಿರುವ ಶೈಕ್ಷಣಿಕ ಸೌಲಭ್ಯಗಳ ಪ್ರಯೋಜನಗಳನ್ನು ಪಡೆದು ಕೊಳ್ಳುವಂತೆಯೇ ಅವರು ತಮ್ಮ ಬಗ್ಗೆ ಚಿಂತಿಸಲು ತೊಡಗುತ್ತಾರೆ; ಮತ್ತು ಅಲ್ಪ ವಿದ್ಯೆಯು ಸ್ವಯಂ ಗೌರವಕ್ಕೆ ಮತ್ತು ಅವರಲ್ಲಿರುವ ಸ್ವಾರ್ಥತೆಗೆ ನಡೆಸುತ್ತದೆ – ಕೆಲವೊಮ್ಮೆ ಅದು ಅಪಾಯಕಾರಿ ವಿಷಯ – ಕೆಲವೇ ಮಂದಿಯ ಕೈಯಲ್ಲಿರುವ ಸಂಪತ್ತಿನ ಮೂಲಕ ಜನರ ಆಸಕ್ತಿ ಮತ್ತು ಸಂದರ್ಭಗಳನ್ನು ಬಹು ವಿಶೇಷವಾಗಿ ತಮ್ಮ ಸ್ವಂತಿಕೆಯನ್ನು ಸಕ್ರಿಯಗೊಳಿಸಲು ಮಾರ್ಗೋಪಾಯಗಳನ್ನು ಹುಡುಕುತ್ತಾರೆ ಮತ್ತು ಬಯಸುತ್ತಾರೆ. ಇವರುಗಳಲ್ಲಿ ಅನೇಕರು, ನಿಸ್ಸಂದೇಹವಾಗಿ, ಧನಪಿಶಾಚಿ ಅರಾಧಕರ (ಒಂದು ಕಡೆ ಅವರುಗಳು, ಮತ್ತೊಂದೆಡೆ ಹಣವಂತರು) ಸಂಘರ್ಷದ ಹಿತಾಸಕ್ತಿಯು ಸುಲಭವಾಗಿ ಮತ್ತು ಸಾಕಷ್ಟು ಹೊಂದಿಸಬಹುದು ಎಂದು ನಂಬುತ್ತಾರೆ. ಮತ್ತು ನಿಸ್ಸಂದೇಹವಾಗಿ ಅವರುಗಳು ತಾವು ಹಣವಂತರಾದರೆ ಬಹಳ ಪರೋಪಕಾರಿಗಳಾಗಬಹುದು, ನೆರೆಯವರನ್ನು ತಮ್ಮಂತೆಯೇ ಪ್ರೀತಿಸುವ ಇಚ್ಚೆಹೊಂದಬಹುದು ಎಂದು ಭಾವಿಸುತ್ತಾರೆ. ಆದರೆ, ಅವರು ಸ್ಪಷ್ಟವಾಗಿ ತಮ್ಮನ್ನು ತಾವೇ ಮೋಸಗೊಳಿಸಿಕೊಳ್ಳುತ್ತಾರೆ. ಯಾಕೆಂದರೆ, ಅವರ ಪ್ರಸ್ತುತ ಪರಿಸ್ಥಿತಿಯಲ್ಲಿ, ಕೆಲವರು ಮಾತ್ರವೇ ನಿಜವಾಗಿ ಅಂಥಾಃ ಮನೋಭಾವವನ್ನು ವ್ಯಕ್ತಪಡಿಸಬಹುದು, ಈ ಲೋಕದ ಅಲ್ಪವಿಷಯಗಳ ಬಗ್ಗೆ ಪ್ರಾಮಾಣಿಕರಲ್ಲದವರು ಹೆಚ್ಚಿನ ಐಶ್ವರ್ಯ ಬಂದಾಗ ಪ್ರಾಮಾಣಿಕರಾಗಿರಲಾರರು. ವಾಸ್ತವ ಸಂದರ್ಭಗಳು ಇದನ್ನು ಸಾಬೀತುಗೊಳಿಸುತ್ತವೆ. ಯಾಕೆಂದರೆ ಶ್ರೀಮಂತರಲ್ಲಿ ಕೆಲವು ಕಠಿಣ ಹೃದಯಿಗಳು ಮತ್ತು ಹೆಚ್ಚು ಸ್ವಾರ್ಥಿಗಳು ಬಡತನದಿಂದ ಹಠಾತ್ತನೇ ಮೇಲೆ ಏರಿ ಬಂದವರೇ ಆಗಿರುತ್ತಾರೆ.

ಇದಕ್ಕೆ ವ್ಯತಿರಿಕ್ತವಾಗಿ, ಎಲ್ಲಾ ವರ್ಗದಲ್ಲಿರುವ ದುರಾಸೆ ಮತ್ತು ದೋಚಿಕೊಳ್ಳುವ ಸ್ವಾರ್ಥತೆಯನ್ನು ನಾವು ಯಾವುದೇ ರೀತಿಯಲ್ಲಿ ಸಮರ್ಥಿಸುವ ಬದಲು ಖಂಡಿಸುತ್ತಾ, ಸರಿಯಾಗಿ ಗಮನಿಸುವುದಾದರೆ, ಕಾಯಿಲೆಯುಳ್ಳವರಿಗೆ, ಬಡವರಿಗೆ, ನಿಸ್ಸಹಾಯಕರಿಗೆ ವ್ಯವಸ್ಥೆಯ ರೂಪದಲ್ಲಿ ಆಸ್ಪತ್ರೆಗಳನ್ನೂ, ಬಡವರ ಮನೆಗಳನ್ನೂ, ಅನಾಥಾಲಯಗಳನ್ನೂ, ಸಾರ್ವಜನಿಕ ಪುಸ್ತಕಾಲಯಗಳನ್ನೂ, ಶಾಲೆಗಳನ್ನೂ ಮತ್ತಿತರ ವಿವಿಧ ಸಾಹಸೋದ್ಯಮಗಳನ್ನು ಐಶ್ವರ್ಯವಂತರಿಗಿಂತ ಹೆಚ್ಚಾಗಿ ಬಡ ಸಮೂಹದ ಒಳಿತಿಗಾಗಿ, ಅನುಕೂಲತೆಗಾಗಿ ಏರ್ಪಡಿಸುವ ಸಿದ್ಧತೆಗಳು ಹಣವಂತರಿಂದ ಸಂಗ್ರಹಿಸಿದ ಕರ ಮತ್ತು ದೇಣಿಗೆಗಳಿಂದ ನಿರ್ವಹಿಸಲ್ಪಡುತ್ತವೆ. ಈ ಸಂಸ್ಥೆಗಳು ಬಹುತೇಕ ತಮ್ಮ ಅಸ್ತಿತ್ವವನ್ನು ಶ್ರೀಮಂತರಲ್ಲಿ ಸಹೃದಯ ಮತ್ತು ಪರೋಪಕಾರಿಗಳಿಗೆ ಋಣಿಯಾಗಿರುತ್ತವೆ ಮತ್ತು ಇಂತಹ ವಿಷಯಗಳು ಬಡ ವರ್ಗಗಳಿಗೆ ಯಶಸ್ವಿಯಾಗಿ ಕಾರ್ಯಾಚರಣೆಯನ್ನು ತರಲು ಅವರಿಗೆ ಸಮಯ ಅಥವಾ ಸಾಮಾನ್ಯವಾಗಿ ಅಗತ್ಯವಾದ ಶಿಕ್ಷಣ ಅಥವಾ ಆಸಕ್ತಿಯಿರುವುದಿಲ್ಲ.

ಅದೇನೇ ಇದ್ದರೂ, ಇಂದು ಶ್ರೀಮಂತರ ಮತ್ತು ಕಾರ್ಮಿಕ ವರ್ಗಗಳ ನಡುವೆ ಹೆಚ್ಚುತ್ತಿರುವ ವಿರೋಧವನ್ನು ನಾವು ನೋಡುತ್ತೇವೆ. ಕಾರ್ಮಿಕರ ಕಡೆಯಿಂದ ಬೆಳೆಯುತ್ತಿರುವ ಕಟುತ್ವ, ಮತ್ತು ಶ್ರೀಮಂತರಲ್ಲಿ ಬೆಳೆಯುತ್ತಿರುವ ಭಾವನೆಯೆಂದರೆ ಕಾನೂನಿನ ಬಲವಾದ ತೋಳನ್ನು ಹೊರತುಪಡಿಸಿ ಬೇರೇನೂ ತಮ್ಮ ಹಕ್ಕುಗಳೆಂದು ಅವರು ನಂಬುವದನ್ನು ರಕ್ಷಿಸುವುದಿಲ್ಲ. ಆದುದರಿಂದ ಶ್ರೀಮಂತರು ಸರ್ಕಾರಗಳಿಗೆ ಹತ್ತಿರವಾಗುತ್ತಿದ್ದಾರೆ. ಮತ್ತು ಕೂಲಿಗಾಗಿ ದುಡಿಯುವ ಸಮೂಹವು, ಕಾನೂನುಗಳು ಮತ್ತು ಸರ್ಕಾರಗಳು ಹಣವಂತರಿಗೆ ಸಹಾಯಮಾಡಲು ಮತ್ತು ಬಡವರನ್ನು ನಿಗ್ರಹಿಸಲು ರೂಪಿಸಲಾಗಿದೆ ಎಂದು ಭಾವಿಸುತ್ತಾ ತಮ್ಮ ಹಿತಾಸಕ್ತಿಯನ್ನು ಉತ್ತಮವಾಗಿ ನೋಡಿಕೊಳ್ಳಬಹುದು ಎಂಬ ಆಲೋಚನೆಯಿಂದ ಕಮ್ಯುನಿಸಂ ಮತ್ತು ಅರಾಜಕತೆಯತ್ತ ಸೆಳೆಯಲ್ಪಡುತ್ತಾರೆ. ಅತ್ಯಂತ ಕೆಟ್ಟ ಸರ್ಕಾರ ಮತ್ತು ಬಹಳ ದುಬಾರಿಯಾದ

ಸರ್ಕಾರವಿರಲಿ, ಸರ್ಕಾರವೇ ಇಲ್ಲದಿರುವುಕ್ಕಿಂತ ಎಷ್ಟೋ ಹೆಚ್ಚು ಉತ್ತಮವಾಗಿದೆ ಎಂಬುದನ್ನು ಅವರು ಗ್ರಹಿಸುವುದಿಲ್ಲ.

ಪ್ರಸ್ತುತ ನಾಗರಿಕ, ಸಾಮಾಜಿಕ ಮತ್ತು ಧಾರ್ಮಿಕ ವ್ಯವಸ್ಥೆಯು ಮುಗಿದು ಹೋಗುವವರೆಗೂ ಸಂಕಟದ ಗುಣಲಕ್ಷಣಗಳೂ ಹೀಗೆಯೇ ಇರುವದು ಎಂಬುದಾಗಿ ಅನೇಕ ವೇದವಾಕ್ಯಗಳು ಸ್ಪಷ್ಟವಾಗಿ ತೋರಿಸಿದೆ. ಮನುಷ್ಯನ ಅಪರಿಪೂರ್ಣತೆ, ಮಾನಸಿಕ, ನೈತಿಕ ಮತ್ತು ದೈಹಿಕ ಕಾರಣದಿಂದಾಗಿ ಜ್ಞಾನ ಮತ್ತು ಸ್ವಾತಂತ್ರ್ಯದ ಹೆಚ್ಚಳದಿಂದಾಗಿ ಈ ರೀತಿಯು ಪರಿಣಾಮ ಉಂಟಾಗುತ್ತದೆ. ಈ ವೇದವಾಕ್ಯಗಳನ್ನು ಸೂಕ್ತ ಸಮಯದಲ್ಲಿ ಉಲ್ಲೇಖಿಸಲಾಗುವುದು. ಆದರೆ ಇಲ್ಲಿ ನಾವು ಅನೇಕವಾದವುಗಳಲ್ಲಿ ಕೇವಲ ಕೆಲವನ್ನು ಮಾತ್ರ ಗಮನವನ್ನು ಸೆಳೆಯುತ್ತೇವೆ. ಅದೇ ಸಮಯದಲ್ಲಿ ಐಗುಪ್ತ, ಬಾಬೇಲ್ ಮತ್ತು ಇಸ್ರಾಯೇಲ್ ಬಹಳವಾಗಿ ಚಿತ್ರಿತವಾಗಿರುವ ಹಳೆ ಒಡಂಬಡಿಕೆಯ ಅನೇಕ ಪ್ರವಾದನೆಗಳಲ್ಲಿ ಅಕ್ಷರಶಃವಾದ ನೆರವೇರಿಕೆಯು ಉದ್ದೇಶಿಸಿರುವುದಲ್ಲದೆ ಅವು ಎರಡನೆಯ ಮತ್ತು ವಿಶಾಲವಾದುದುದೂ ಆಗಿವೆ ಎಂದು ನಮ್ಮ ಓದುಗರಿಗೆ ನಾವು ಬುದ್ಧಿವಾದವನ್ನು ಹೇಳುವವರಾಗಿದ್ದೇವೆ. ಈ ರೀತಿಯಲ್ಲಿ ಉದಾಹರಣೆಯಾಗಿ ಬಾಬೇಲಿನ ಪತನ ಮುಂತಾದವುಗಳ ಬಗ್ಗೆ ಭವಿಷ್ಯವಾಣಿಯು ಅಳತೆಗೂ ಮೀರಿದ ವಿಪರೀತವಾದವುಗಳು ಎಂದು ಪರಿಗಣಿಸಬೇಕು, ನಾವು ಸಾಂಕೇತಿಕ ಮತ್ತು ಪ್ರತಿಸಾಂಕೇತಿಕವಾದ ಹಾಗೂ ಅಕ್ಷರಶಃವಾದ ಬಾಬೇಲನ್ನು ಗುರುತಿಸಲಿಲ್ಲವೆ? ಪ್ರಕಟನೆಯ ಪುಸ್ತಕವು ಬಾಬೇಲಿನ ಅಕ್ಷರಶಃವಾದ ಪಾಳುಬೀಳುವಿಕೆಯ ಬಹಳ ನಂತರದ ದಾಖಲಾತಿಗಳನ್ನೊಳಗೊಂಡಿದೆ. ಆದುದರಿಂದ ಸ್ಪಷ್ಟವಾಗಿ ಸಾಂಕೇತಿಕ ಬಾಬೇಲಿಗೆ ಮಾತ್ರವೇ ಅನ್ವಯವಾಗುತ್ತದೆ. ಆದಾಗ್ಯೂ ಪ್ರವಾದಿಗಳ ಮಾತುಗಳ ಸಮೀಪ ಹೋಲಿಕೆಗಳು, ಸ್ಪಷ್ಟವಾಗಿಯೂ, ನೇರವಾಗಿಯೂ ಅಕ್ಷರಶಃವಾದ ಬಾಬೇಲಿಗೆ ಸಂಬೋಧಿಸಲಾಗಿವೆ ಮತ್ತು ಆ ರೀತಿಯಾಗಿ ಅವು ವಿಶೇಷವಾದ ಅರ್ಥದಲ್ಲಿ ಸಾಂಕೇತಿಕ ಬಾಬೇಲಿಗೆ ಸಂಬಂಧಿಸಿವೆ. ಈ ವಿಶಾಲವಾದ ನೆರವೇರಿಕೆಯಲ್ಲಿ, ಐಗುಪ್ತವು ಪ್ರಪಂಚವನ್ನು ಪ್ರತಿನಿಧಿಸುತ್ತದೆ. ಬಾಬೇಲ್ ಕ್ರೈಸ್ತ ಪ್ರಪಂಚ ಎಂದು ಕರೆಯಲ್ಪಡುವ ಹೆಸರುಮಾತ್ರದ ಕ್ರೈಸ್ತಸಭೆಯನ್ನು ಪ್ರತಿನಿಧಿಸುತ್ತದೆ. ಅದೇ ಸಮಯದಲ್ಲಿ, ಆಗಲೇ ತೋರಿಸಿರುವಂತೆ ಇಸ್ರಾಯೇಲ್ ಹಲವೊಮ್ಮೆ ತನ್ನ ಪ್ರತಿಪಾದಿಸಲ್ಪಟ್ಟ ಸ್ಥಿತಿಯಲ್ಲಿ ಸಮಗ್ರ ಲೋಕವನ್ನು ಪ್ರತಿನಿಧಿಸುತ್ತದೆ. ಅದು ಅದರ ಭವ್ಯವಾದ ರಾಜವಂಶಸ್ಥ ಯಾಜಕತ್ವದ್ದಾಗಿದೆ, ಅದರ ಪವಿತ್ರ ಲೇವಿಯರು ಮತ್ತು ಅದನ್ನು ನಂಬುವ ಮತ್ತು ಆರಾಧಿಸುವ ಜನರು, ಪ್ರಾಯಶ್ಚಿತ್ತ ಸಂಧಾನದ ಬಲಿದಾನಗಳಿಂದ ನೀತಿನಿರ್ಣಯಗೊಂಡು ದೇವರೊಂದಿಗೆ ಸಂಧಾನ ಸ್ಥಿತಿಗೆ ತರಲ್ಪಟ್ಟಿದ್ದಾರೆ. ಇಸ್ರಾಯೇಲ್ಯರಿಗೆ ಆಶೀರ್ವಾದಗಳು ವಾಗ್ದಾನ ಮಾಡಲ್ಪಟ್ಟಿವೆ. ಐಗುಪ್ತರಿಗೆ ಪಿಡುಗುಗಳು ಮತ್ತು ಬಲಿಷ್ಟ ಬಾಬೇಲಿಗೆ ದೊಡ್ಡ ಬೀಸುಕಲ್ಲನ್ನು ಸಮುದ್ರಕ್ಕೆ ಹಾಕಿದಂಥಾಃ (ಪ್ರಕಟನೆ 18:21) ಎಂದೂ ಸುಧಾರಿಸಲಾಗದ ಆದರೆ ನಿರಂತರವಾದ ದ್ವೇಷವುಳ್ಳ ಸಂಪೂರ್ಣವಾದ ಮತ್ತು ಎಂದಿಗೂ ಸುಸ್ತಿತಿಗೆ ಬರಲಾಗದ ಪರಾಭವವಾಗಿದೆ.

ಅಪೋಸ್ತಲನಾದ ಯಾಕೋಬನು ಈ ವಿಪತ್ತಿನ ದಿನಗಳ ಬಗ್ಗೆ ಗಮನ ಸೆಳೆಯುವವನಾಗಿದ್ದಾನೆ ಮತ್ತು ಅದರ ಬಗ್ಗೆ ಅದು ಬಂಡವಾಳಶಾಹಿ ಮತ್ತು ಕಾರ್ಮಿಕ ವರ್ಗದ ವ್ಯತ್ಯಾಸಗಳ ಫಲವೆಂದು ನಮಗೆ ಹೀಗೆ ಹೇಳುತ್ತಾನೆ – "ಧನಿಕರೇ, ಕೇಳಿರಿ! ನಿಮಗೆ ಬರುವ ದುರ್ದೆಶೆಗಳಿಗಾಗಿ ಕಣ್ಣೀರಿಡಿರಿ, ಗೋಳಾಡಿರಿ. ನಿಮ್ಮ ಧನವು ನಾಶವಾಗಿದೆ. ನಿಮ್ಮ ಬಟ್ಟೆಗಳಿಗೆ ನುಸಿಹಿಡಿದಿದೆ. ನಿಮ್ಮ ಚಿನ್ನ ಬೆಳ್ಳಿಗಳು ಮಣ್ಣು ಹಿಡಿದವೆ; ಆ ಮಣ್ಣೇ ನಿಮಗೆ ಸಾಕ್ಷಿಯಾಗಿದ್ದು ಬೆಂಕಿಯಂತೆ ನಿಮ್ಮ ಮಾಂಸವನ್ನು ನುಂಗಿಬಿಡುವುದು. ಅಂತ್ಯ ದಿವಸಗಳು ಬಂದರೂ ದ್ರವ್ಯವನ್ನು ಕೂಡಿಸಿ ಇಟ್ಟುಕೊಂಡಿದ್ದೀರಿ. ನಿಮ್ಮ ಹೊಲಗಳನ್ನು ಕೊಯಿದವರ ಕೂಲಿಯನ್ನು ನೀವು ಅನ್ಯಾಯವಾಗಿ ಹಿಡಿದುಕೊಂಡಿದ್ದೀರಿ. ಅಗೋ ಆ ಕೂಲಿ ನಿಮ್ಮ ಮೇಲೆ ಕೂಗಿಕೊಳ್ಳುತ್ತದೆ ಮತ್ತು ಕೊಯಿದವರ ಕೂಗು ಸಕಲ ಸೇನಾಪತಿಯಾಗಿರುವ ಕರ್ತನ ಕಿವಿಗಳಲ್ಲಿ ಬಿದ್ದಿವೆ" (ಯಾಕೋಬ 5:1–4). ತೊಂದರೆಗೊಳಗಾಗುವ ವರ್ಗದವರನ್ನು ಐಷಾರಾಮಿ ಜೀವನಕ್ಕೆ/ಸುಖಭೋಗಕ್ಕೆ ಒಗ್ಗಿಕೊಂಡಿದ್ದವರು ಇನ್ನೂ ಹೆಚ್ಚಾಗಿ ಇತರರ ವೆಚ್ಚದಲ್ಲಿ ಪಡೆದುಕೊಳ್ಳುವರು, ಅವರಲ್ಲಿ ಕೆಲವರು ನೀತಿವಂತರಾಗಿದ್ದರು. ಮತ್ತು ಅವರುಗಳಲ್ಲಿ, ಕೆಲವರನ್ನು ಅವರು ಪ್ರತಿಭಟಿಸದ ಕಾರಣ ಅವರ ಜೀವನವೇ ನುಜ್ಜುಗುಜ್ಜಾಗಿದೆ. ಅಪೋಸ್ತಲನು 'ಸಹೋದರರನ್ನು' ತಮ್ಮ ಪಾತ್ರವು ಏನೇ ಇರಲಿ ಅದನ್ನು ತಾಳ್ಮೆಯಿಂದ ಸಹಿಸಿಕೊಳ್ಳುವಂತೆ ಹೇಳುತ್ತಾನೆ, ಅದರಿಂದಾಚೆಗೆ ನೋಡುತ್ತಾ, ಕರ್ತನ ಮೂಲಕ ಬಿಡುಗಡೆಯನ್ನು ನಿರೀಕ್ಷಿಸಬೇಕು. ಸಂಗತಿಗಳ ಈ ಪರಿಸ್ಥಿತಿಯು ಈಗ ಸಮೀಪಿಸುವಂತೆ ಕಂಡುಬರುತ್ತಿದೆ; ಲೋಕದಲ್ಲಿ ಎಚ್ಚರವಾಗಿರುವವರಲ್ಲಿ "ಮನುಷ್ಯರು ಭಯ ಹಿಡಿದವರಾಗಿ ಲೋಕಕ್ಕೆ ಏನು ಬರುವುದೋ ಎಂದು ಎದುರುನೋಡುತ್ತಾ ಪ್ರಾಣಹೋದಂತಾಗುವರು" (ಲೂಕ 21: 26) ಎಂದೆನ್ನುತ್ತಾನೆ. ಎಲ್ಲರೂ ತಿಳಿದಿರುವಂತೆ ವಸ್ತುಗಳ ಕ್ರಯಗಳು ಕೃತಕವಾಗಿ

ಆಧಾರವಾಗದ ಹೊರತು ಅಥವಾ ಕಾರ್ಮಿಕರ ಒಟ್ಟುಗೂಡುವಿಕೆ, ಹರತಾಳ ಮುಂತಾದವುಗಳಿಂದ ಸುಧಾರಿಸಿದ ಹೊರತು ನಮ್ಮ ಕಾಲದ ಕೂಲಿಯಾಳು ಗಳಿಗೆ ಕಡಿಮೆ ಕೊಡುವ ಸ್ಥಿರವಾದ ಧೋರಣೆಗಳು ಇರುತ್ತದೆ. ಸಮೂಹಗಳಲ್ಲಿ ಈಗ ಇರುವ ಮನೋಭಾವವು, ಏನು ಸಂಭವಿಸುವದು ಎಂಬುದು ಸಮಯದ ಮೇಲೆ ಆಧಾರಿತವಾಗಿದೆ. ಅವರ ಸಂಯಮದ ಅಂತ್ಯವನ್ನು ಮುಟ್ಟುವಾಗ ತಿರುಗಿ ಬೀಳುವಿಕೆಯು ಖಂಡಿತವಾಗಿಯೂ ಸಂಭವಿಸುತ್ತದೆ. ಇದು ಬಂಡವಾಳಶಾಹಿಗಳನ್ನು ಎಚ್ಚರಿಸುತ್ತದೆ, ಅವರೂ ವ್ಯಾಪಾರ ಮತ್ತು ಉತ್ಪಾದನಾ ಕಾರ್ಯಗಳನ್ನು ಹಿಂತೆಗೆದುಕೊಳ್ಳುತ್ತಾರೆ ಮತ್ತು ಉತ್ಪಾದಕ ವಸ್ತುಗಳು ನೆಲಮಾಳಿಗೆ ಮತ್ತು ಖಜಾನೆಗಳಲ್ಲಿ ಸಂಗ್ರಹಿಸಲ್ಪಡುತ್ತದೆ ಮತ್ತು ಅದರ ರಕ್ಷಣೆಗಾಗಿ ವ್ಯರ್ಥವಾದ ಶುಲ್ಕಗಳೊಂದಿಗೆ ನಿರುಪಯುಕ್ತವಾಗಿ ಸ್ವತಃ ತಿನ್ನುವಂತೆ, ಅದರ ಮಾಲೀಕರಿಗೆ ದೊಡ್ಡ ಕಿರಿಕಿರಿಯನ್ನುಂಟುಮಾಡುತ್ತದೆ. ಇದು ಮುಂದೆ ದಿವಾಳಿಯನ್ನು, ಆರ್ಥಿಕ ದಿಗಿಲನ್ನು, ವ್ಯಾಪಾರವನ್ನು ನಿತ್ರಾಣಗೊಳಿಸುತ್ತದೆ. ಯಾಕೆಂದರೆ, ಎಲ್ಲಾ ವ್ಯಾಪಾರ ಪ್ರಮಾಣಗಳು ಹೆಚ್ಚಾಗಿ ಸಾಲದಿಂದ ನಡೆಸಲಾಗುತ್ತಿದೆ. ಇವುಗಳೆಲ್ಲಾದರ ಸ್ವಾಭಾವಿಕ ಫಲಿತಾಂಶವು ತಮ್ಮ ದಿನನಿತ್ಯದ ರೊಟ್ಟಿಗಾಗಿ ಕೂಲಿಯ ಮೇಲೆ ಆತುಕೊಂಡಿರುವ ಸಾವಿರಾರು ಜನರನ್ನು ಕೆಲಸದಿಂದ ಹೊರಹಾಕುತ್ತದೆ ಮತ್ತು ಲೋಕವನ್ನು ತಿರುಕರುಗಳಿಂದ ಮತ್ತು ಅವರ ಅಗತ್ಯತೆಗಳಿಗಾಗಿ ಎಲ್ಲಾ ಕಾನೂನುಗಳು ಉಲ್ಲಂಘಿಸುವ ಜನರಿಂದ ತುಂಬಿಸುತ್ತದೆ. ನಂತರದಲ್ಲಿ ಇದನ್ನು ಪ್ರವಾದಿಯಾದ ಯೆಹೆಜ್ಕೇಲ 7:10–19 ರಲ್ಲಿ ವಿವರಿಸಿದಂತೆ ನೆರವೇರುವುದು, ಕೊಂಡುಕೊಳ್ಳುವವರು ಸಂತೋಷಪಡದೇ ಇರುವನು ಮಾರುವವರು ಶೋಕಿಸುವರು; ಯಾಕೆಂದರೆ ವಿಪತ್ತು ಸಮಗ್ರ ಜನಸ್ತೋಮದ ಮೇಲೆ ಇರುವದು ಮತ್ತು ಆಸ್ತಿಗೆ ಯಾವ ಸುರಕ್ಷತೆಯೂ ಇರುವುದಿಲ್ಲ. ಆಗ ಎಲ್ಲಾ ಕೈಗಳೂ ಬಲಹೀನವಾಗುವವು ಮತ್ತು ತೊಂದರೆಯನ್ನು ಪಕ್ಕಕ್ಕೆ ಸರಿಸಲು ಅಸಹಾಯಕವಾಗುವುದು. ಅವರು ತಮ್ಮ ಬೆಳ್ಳಿಯನ್ನು ಬೀದಿಗಳಲ್ಲಿ ಬಿಸಾಡುವರು ಮತ್ತು ಅವರ ಚಿನ್ನವನ್ನು ತೆಗೆದುಬಿಡಲಾಗುವುದು. ಅವರ ಬಂಗಾರವಾಗಲೀ, ಬೆಳ್ಳಿಯಾಗಲೀ ಅವರನ್ನು ಕರ್ತನ ರೌದ್ರದ ದಿನದಲ್ಲಿ ರಕ್ಷಿಸಲಾರವು.

ಇಸ್ರಾಯೇಲ್ ಒಂದು ರಾಷ್ಟ್ರವಾಗಿ ಅಸ್ತಿತ್ವದ ಕಡೆಯ ನಾಲ್ವತ್ತು ವರ್ಷಗಳು ಸಂಕಟದ ಕಾಲವಾಗಿದ್ದರೂ, ಆ ಜನರ ಮೇಲೆ ಮುಯ್ಯಿ ತೀರಿಸುವ ದಿನವಾಗಿತ್ತು, ಅವರ ದೇಶವನ್ನು ಸಂಪೂರ್ಣವಾಗಿ ಉರುಳಿಸುವಲ್ಲಿ ಕೊನೆಗೊಂಡಿತೆಂಬುದನ್ನು ನಾವು ಮರೆಯಬಾರದು. ಆದಾಗ್ಯೂ ಅವರ "ರೌದ್ರದ ದಿನ"ವು ಹೆಸರುಮಾತ್ರದ ಕ್ರೈಸ್ತ ಪ್ರಪಂಚದವರಿಗೆ ಇನ್ನೂ ಹೆಚ್ಚಿನ ಮತ್ತು ವ್ಯಾಪಕವಾದ ತೊಂದರೆಯನ್ನು ಬರಮಾಡುವ ದಿನದ ಛಾಯೆಯಾಗಿದೆ. ಕೃಪೆಯ ಕಾಲದಲ್ಲಿ ಅವರ ಚರಿತ್ರೆಯು ಇನ್ನು ಮುಂದೆ ನಿರ್ಧಾರಾತ್ಮಕವಾಗಿ ತೋರಿಸುವಂತೆ ಸುವಾರ್ತಾಯುಗದ ಸಾಂಕೇತಿಕವಾಗಿತ್ತು. ಸಂಬಂಧ ಗಳಲ್ಲಿ ಎಲ್ಲಾ ಮಾನವ ಜಾತಿಯವರೂ ಇದರ ಪೂರ್ಣ ನೆರವೇರಿಕೆಯಲ್ಲಿ ಒಳಗೊಂಡಿರುತ್ತಾರೆ ಎಂದು ಸ್ಪಷ್ಟವಾಗಿ ತೋರಿಬಂದರೂ ಯಾಕೆ ಕರ್ತನ ದಿನದ ಕುರಿತಾದ ಈ ಪ್ರವಾದನೆಗಳು, ಅವುಗಳು ಹೆಚ್ಚು ಅಥವಾ ಕಡಿಮೆ ನೇರವಾಗಿ ಇಸ್ರಾಯೇಲ್ಯರಿಗೆ ಮತ್ತು ಯೆರೂಸಲೇಮಿಗೆ ಸಂಬೋಧಿಸಲಾಗಿದೆ ಎಂದು ಆಗ ಎಲ್ಲರೂ ನೋಡುವರು.

ಮತ್ತೊಂದು ಪ್ರವಾದನಾ ಸಾಕ್ಷ್ಯವನ್ನು ತೆಗೆದುಕೊಳ್ಳಿರಿ (ಚೆಫನ್ಯ 1:7–9, 14–18) – "ಯೆಹೋವನು ಯಜ್ಞದ ಔತಣವನ್ನು ಸಿದ್ಧ ಪಡಿಸಿದ್ದಾನೆ... ಕರೆದವರನ್ನು ಮಡಿಮಾಡಿದ್ದಾನೆ" ಎಂಬ ವಚನವನ್ನು ಪ್ರಕಟನೆ 19:17ರ ವಚನದೊಂದಿಗೆ ಹೋಲಿಸಿರಿ. ಮತ್ತು ಯೆಹೋವನ ಆ ಯಜ್ಞದ ದಿನದಲ್ಲಿ ನಾನು ದೇಶಾಧಿಪತಿಗಳನ್ನೂ ವಿದೇಶಿ ವಸ್ತ್ರಧಾರಿಗಳೆಲ್ಲರನ್ನೂ ದಂಡಿಸುವೆನು. ಹೊಸ್ತಿಲ ಹಾರಿ ನುಗ್ಗಿ ಮೋಸ ಹಿಂಸೆಗಳಿಂದ ದೋಚಿದ್ದನ್ನು ತಮ್ಮ ಒಡೆಯನ ಮನೆಯೊಳಗೆ ತುಂಬಿಸುವವರೆಲ್ಲವನ್ನೂ (ಲೂಟಿಕೋರನ್ನು ಸಹಾ) ಆ ದಿನದಲ್ಲಿ ದಂಡಿಸುವೆನು" (ಚೆಫನ್ಯ 1:7–9) ಎಂಬುದು ಆ ದಿನದಲ್ಲಿ ಜಾರಿಗೆ ಬರುತ್ತದೆ. (ಈ ಸಂಕಟದ ಸಮಯದಲ್ಲಿ ಐಶ್ವರ್ಯ ಮತ್ತು ಅಧಿಕಾರದ ಮಹಾ ಪರಾಭವವು ಉಂಟಾಗುವುದೆಂಬುದನ್ನು ಇದು ತೋರಿಸುತ್ತದೆ, ಮಾತ್ರವಲ್ಲದೇ ಆ ಸಮಯದಲ್ಲಿ ಪ್ರಸ್ತುತ ವ್ಯವಸ್ಥೆಯನ್ನು ಮುರಿಯಲು ಪರಲೋಕದ ಸಾಧನಗಳಾಗಿರುವವರನ್ನು ಸಹಾ ಅವರ ಸರಿಸಮಾನವಾದ ಅನ್ಯಾಯ ಮತ್ತು ಅನೀತಿವಂತಿಕೆಯ ಪ್ರವೃತ್ತಿಗಾಗಿ ಶಿಕ್ಷಿಸಲಾಗುವುದು. ಏಕೆಂದರೆ, ಸಂಕಟದ ಸಮಯವು ಎಲ್ಲಾ ವರ್ಗಗಳನ್ನೂ ಒಳಗೊಂಡಿರುತ್ತದೆ, ಹಾಗೂ ಎಲ್ಲಾ ಸಮೂಹಗಳ ಮೇಲೆಯೂ ಯಾತನೆಯನ್ನು ತರುತ್ತದೆ). "ಯೆಹೋವನ ಮಹಾ ದಿನವು ಹತ್ತಿರವಾಯಿತು, ಸಮೀಪಿಸಿತು, ಬಹು ತ್ವರೆಯಾಗಿ ಬರುತ್ತಿದೆ. ಆಹಾ, ಕಿವಿಗೊಡಿರಿ, ಯೆಹೋವನ ದಿನವೇ ಬಂದಿತು; ಇಗೋ ಅಲ್ಲಿ ಒಬ್ಬ ಶೂರನು ಘೋರವಾಗಿ ಗೋಳಾಡುತ್ತಿದ್ದಾನೆ! ಆ ದಿನವು

ರೌದ್ರದ ದಿನ. ಕೋಟೆಗಳನ್ನೂ, ದೊಡ್ಡ ಕೊತ್ತಲುಗಳನ್ನೂ (ಅನಿಶ್ಚಿತತೆ ಮತ್ತು ಮುನ್ಸೂಚನೆ, ಅಲ್ಲದೇ ಈಗಿರುವ ಯಾತನೆ) ಹಿಡಿಯಲು ಆರ್ಭಟಿಸಿ ಕೊಂಬೂದುವ ದಿನ. (ಏಳನೆಯ ಸಾಂಕೇತಿಕ ಕೊಂಬು ಈ ವಿಪತ್ತಿನ ದಿನವೆಲ್ಲಾ ಸದ್ದುಮಾಡುವುದು. ಪ್ರಬಲವಾದ ಮತ್ತು ಉತ್ತಮವಾಗಿ ಭದ್ರಪಡಿಸದ ಸರ್ಕಾರಗಳ ಒದರಾಡುವ ಮತ್ತು ಬಡಿದಾಡುವ ನಿಂದನೆಗಳು – ಇದನ್ನು ದೇವರ 'ಕಹಳೆ' ಎಂದು ಸಹಾ ಕರೆಯುತ್ತಾರೆ. ಏಕೆಂದರೆ ಕರ್ತನ ದಿನದ ಘಟನೆಗಳಿಗೆ ಸಂಬಂಧಿಸಿದೆ). ಯೆಹೋವನಾದ ನನಗೆ ಜನರು ಪಾಪಮಾಡಿದ ಕಾರಣ ಕುರುಡರಂತೆ ನಡೆಯುವ ಹಾಗೆ ಅವರನ್ನು ಸಂಕಟಪಡಿಸುವೆನು (ಅನಿಶ್ಚಿತತೆಯಿಂದ ತಡಕಾಡುವರು, ಯಾವ ಕ್ರಮವನ್ನು ಅನುಸರಿಸಬೇಕೆಂಬುದನ್ನು ಅರಿಯರು) ಅವರ ರಕ್ತವು ದೂಳಿನಂತೆ ಚೆಲ್ಲಿಹೋಗುವುದು, ಅವರ ಮಾಂಸವು ಮಲದ ಹಾಗೆ ಬಿದ್ದಿರುವುದು. ಯೆಹೋವನ ರೌದ್ರದ ದಿನದಲ್ಲಿ (ಹಿಂದಿನ ದಿನಗಳಲ್ಲಿ ಅವರ ಐಶ್ವರ್ಯವು ಅವರಿಗೆ ಐಷಾರಾಮಿಯನ್ನು ಸುಖಭೋಗವನ್ನು ಒದಗಿಸಿತ್ತು) ಅವರ ಬೆಳ್ಳಿ ಬಂಗಾರಗಳು ಕೂಡಾ ಅವರನ್ನು ರಕ್ಷಿಸಲಾರವು; (ಹಿಂದಿನ ದಿನಗಳಲ್ಲಿ ಐಶ್ವರ್ಯವು ಎಲ್ಲಾ ನಿಶ್ಚಿಂತತೆ ಮತ್ತು ಪ್ರತಿಯೊಂದು ಸುಖಭೋಗಗಳನ್ನು ಒದಗಿಸುತ್ತಿತ್ತಾದರೂ) ಆತನ ರೋಷಾಗ್ನಿಯು ದೇಶವನ್ನೆಲ್ಲಾ ನುಂಗಿಬಿಡುವುದು; ಆತನು ದೇಶನಿವಾಸಿಗಳೆಲ್ಲರನ್ನೂ (ಧನಿಕರನ್ನು) ಕೊನೆಗಾಣಿಸುವನು, ಹೌದು ಘೋರವಾಗಿ ನಿರ್ಮೂಲಮಾಡುವನು" (ಚೆಫನ್ಯ 1: 14–18). ಈ ನಾಶಪಡಿಸುವಿಕೆಯು, ಅದು ಎಲ್ಲಾ ವರ್ಗಗಳ ಅನೇಕ ಜೀವಗಳ ನಷ್ಟವನ್ನೊಳಗೊಂಡಿದ್ದರೂ ಅನೇಕ ಶ್ರೀಮಂತರನ್ನು ನಾಶಪಡಿಸುವುದು, ಅಂದರೆ ಅವರು ಇನ್ನು ಶ್ರೀಮಂತರಾಗಿರುವುದಿಲ್ಲ.

ನಾವು ಪ್ರವಾದಿಗಳ ವಿವರಗಳನ್ನು ಆ ದಿನದ ತೊಂದರೆಗಳ ವಿವಿಧ ದೃಷ್ಟಿಕೋನಗಳಿಂದ ಅಮೂಲಾಗ್ರವಾಗಿ ಅನುಸರಿಸುವ ಪ್ರಯತ್ನ ಮಾಡಬಾರದು. ಆದರೆ ಮೇಲ್ಕಂಡ ಪ್ರವಾದಿಯವರು ಕೊನೆಯದಾಗಿ ಸೂಚಿಸಿದ ಆಲೋಚನೆಯನ್ನು ಸಂಕ್ಷಿಪ್ತವಾಗಿ ಅನುಸರಿಸಬೇಕು. ಅದೇನೆಂದರೆ – ಪ್ರವಾದಿಯು ಅದೇ ಬೆಂಕಿ ಮುಂತಾದವನ್ನು ಕುರಿತು ಮತ್ತೂ ಹೇಳುತ್ತಾನೆ (ಚೆಫನ್ಯ 3:8–9). "ಯೆಹೋವನು ಇಂತೆನ್ನುತ್ತಾನೆ – ಹೀಗಿರಲು ನನ್ನನ್ನು ಕಾದುಕೊಂಡಿರ್ರಿ, ನಾನು ಬೇಟೆ ಹಿಡಿಯಲಿಕ್ಕೆ ಏಳುವ ದಿನವನ್ನು ನೋಡಿರಿ; ಜನಾಂಗ ರಾಜ್ಯಗಳ ಮೇಲೆ ನನ್ನ ರೌದ್ರವನ್ನು, ಹೌದು ನನ್ನ ಉಗ್ರ ಕೋಪವನ್ನೆಲ್ಲಾ . [ಈಗಿನ ಸರ್ಕಾರಗಳಿಗೆ ವಿರುದ್ಧವಾಗಿ ಎಲ್ಲಾ ರಾಷ್ಟ್ರಗಳ ಜನ ಸಾಮಾನ್ಯ ಹಿತಾಸಕ್ತಿಯು ಕೂಡಿಕೊಳ್ಳುತ್ತಾ ಇದೆ]; ಮತ್ತು ಅದರ ಫಲಿತಾಂಶವು ಸಾಮಾನ್ಯ ಸುರಕ್ಷತೆಗಾಗಿ ರಾಜ್ಯಗಳ ಒಂದುಗೂಡುವಿಕೆಯಾಗಿದೆ, ಹೀಗಾಗಿ ಸಂಕಷ್ಟವು ಎಲ್ಲಾ ರಾಜ್ಯಗಳ ಮೇಲೆ, ಬಿದ್ದು ಎಲ್ಲರೂ ಪತನಗೊಳ್ಳುವರು) ಹೊಯ್ದುಬಿಡುವುದಕ್ಕಾಗಿ ಆ ಜನಾಂಗಗಳನ್ನು (ಜನರನ್ನು) ಸೇರಿಸಿ ಆ ರಾಜ್ಯಗಳನ್ನು ಕೂಡಿಸಬೇಕೆಂದು ತೀರ್ಮಾನಿಸಿದ್ದೇನೆ; ಲೋಕವೆಲ್ಲಾ ನನ್ನ ರೋಷಾಗ್ನಿಗೆ ತುತ್ತಾಗುವುದಷ್ಟೆ. ಹೌದು, ಆಗ ಎಲ್ಲರೂ ಒಂದೇ ಮನಸ್ಸಿನಿಂದ ಯೆಹೋವನನ್ನು ಸೇವಿಸಿ ಆತನ ಹೆಸರನ್ನೆತ್ತಿ ಪ್ರಾರ್ಥಿಸುವಂತೆ ಜನಾಂಗಗಳವರ ತುಟಿಗಳನ್ನು ಮಾರ್ಪಡಿಸಿ ಶುದ್ಧಿಮಾಡುವೆನು" – (ಚೆಫನ್ಯ 3:8–9).

ದೇವರ ಉತ್ಕಂಠತೆಯ ಈ ಬೆಂಕಿಯು ಒಂದು ಸಂಕೇತವಾಗಿದೆ ಮತ್ತು ಅದು ಪ್ರಭಾವಯುತ ವಾದದ್ದಾಗಿದೆ ಮತ್ತು ಸಮಗ್ರ ಪ್ರಪಂಚವನ್ನು ಕವಿಯುವ ಅದರ ತೊಂದರೆಯ ಮತ್ತು ನಾಶಪಡಿಸುವಿಕೆಯ ತೀಕ್ಷ್ಣತೆಯನ್ನು ಪ್ರತಿನಿಧಿಸುವುದಾಗಿದೆ. ಕೆಲವರು ಭಾವಿಸುವಂತೆ ಅದು ಅಕ್ಷರಶಃವಾದ ಬೆಂಕಿಯಲ್ಲ ಎಂಬುದು ಅದರ ನಂತರ ಜನರು ಜೀವಿಸುವರು ಮತ್ತು ಆಶೀರ್ವಾದ ಹೊಂದಿಕೊಳ್ಳುವರು ಎಂಬ ಸತ್ಯದಿಂದ ಸ್ಪಷ್ಟವಾಗುತ್ತದೆ. ಕೆಲವರು ಸಲಹೆ ಮಾಡುವಂತೆ ಉಳಿದುಕೊಳ್ಳುವರೆಲ್ಲರೂ ಸಂತರಲ್ಲ ಎಂಬುದು ಆಗ ಅವರು ದೇವರ ಸೇವೆ ಮಾಡಲು ಆತನ ಕಡೆ ತಿರುಗಿಕೊಳ್ಳುತ್ತಾರೆ ಎಂಬುದರಿಂದ ವೇದ್ಯವಾಗುತ್ತದೆ, ಆದರೆ, ಸಂತರುಗಳು ಈಗಾಗಲೇ ಬದಲಾವಣೆ ಯಾಗಿದ್ದಾರೆ (ಪರಿವರ್ತನೆಗೊಂಡಿದ್ದಾರೆ)*

* ಆ ಬೆಂಕಿಯು ಅಕ್ಷರಶಃವಾದುದು, ಇದರಿಂದ ಲೋಕವು ಕರಗಿಹೋಗುತ್ತದೆ ಮುಂತಾಗಿ ವಾದಿಸುವ ಕೆಲವರಿಗೆ ಪರಿಹಾರ ಹೇಳುವಂತೆ ನಾವಿದನ್ನು ಹೇಳುತ್ತಿದ್ದೇವೆ. ಇವುಗಳು ಅವರ ವಿಚಾರಣಾಸರಣಿಗೆ ಹೊಂದುವಂತೆ ಇಲ್ಲಿ ಹೇಳಿರುವ ಜನರು 'ಸಂತರುಗಳು' ಎಂದು ಮತ್ತು ಅವರುಗಳು ಈ ಭೂಲೋಕವು ಕರಗಿಹೋಗಿ ತಣ್ಣಗಾದ ನಂತರ, ಭೂಲೋಕಕ್ಕೆ ಹಿಂತಿರುಗಿ ಮನೆಗಳನ್ನು ಕಟ್ಟಿಕೊಳ್ಳುವರು ಮತ್ತು ಅವುಗಳಲ್ಲಿ ವಾಸಿಸುವರು, ದ್ರಾಕ್ಷೇಬಳ್ಳಿಗಳನ್ನು ನೆಡುವರು ಮತ್ತು ಅವುಗಳ ಫಲವನ್ನು ತಿನ್ನುವರು ಮತ್ತು ತಮ್ಮ ಕೈಕೆಲಸದಲ್ಲಿ ದೀರ್ಘ ಸಂತೋಷವನ್ನನುಭವಿಸುವರು. ಪ್ರಸ್ತುತ ಕೆಲವು ವರ್ಷಗಳು ಬಾಧ್ಯತೆಹೊಂದಲು ತರಬೇತಿ ಅಥವಾ ಸಿದ್ಧತಾ ದಿನಗಳೆಂದು ಅವರು ಪರಿಗಣಿಸುವರು ಮತ್ತು ಅವುಗಳು ಅವರ ವಿಚಾರಸರಣಿಯಂತೆ ತಣ್ಣಗಾಗಲು ಕಾಯಬೇಕಾದ ಸಾವಿರಕ್ಕೂ ಹೆಚ್ಚಿನ ವರ್ಷಗಳ ವಾಯುಮಂಡಲ ಅನುಭವದಲ್ಲಿ ಸಂಪೂರ್ಣವಾಗಿ ಕಳೆದುಹೋಗುವುದು ಎಂಬುದನ್ನು ಮರೆತುಹೋಗುವರು ಎಂಬುದು ಅವರ ಸಿದ್ಧಾಂತವಾಗಿದೆ. ಇದೊಂದು ಗುರುತರವಾದ ತಪ್ಪಾಗಿದೆ ಮತ್ತು ಸಂಖ್ಯೆಗಳ, ಸಾಮ್ಯಗಳ, ಸಂಕೇತಗಳ ಮತ್ತು ನಮ್ಮ ಕರ್ತನ ಮತ್ತು ಅಪೋಸ್ತಲರುಗಳ ಹಾಗೂ ಪ್ರವಾದಿಗಳ ಗೂಢಾರ್ಥಗಳ ಹೇಳಿಕೆಗಳಲ್ಲಿರುವ ಅತ್ಯಂತ ಅಕ್ಷರಶಃವಾದ ಅರ್ಥವಿವರಣೆಯ ಮೂಲಕ ಫಲಿತವಾಗುತ್ತದೆ. ಈ ತಪ್ಪನ್ನು ಅನುಸರಿಸಿ, ಅವರುಗಳು ಈ ಬೆಂಕಿಯ ನಂತರ ಬೆಟ್ಟಗಳಾಗಲೀ, ಸಮುದ್ರಗಳಾಗಲೀ ಇರುವುದಿಲ್ಲ ಎಂಬ ಹಕ್ಕೇಳಿಕೆ ನೀಡುತ್ತಾರೆ. ಹೀಗೆ ಅವರು ಇವುಗಳೆಲ್ಲವೂ, ಬೆಂಕಿಯೂ ಸಹಾ ಸಂಕೇತವಾಗಿವೆ ಎಂಬುದನ್ನು ಕಂಡುಕೊಳ್ಳುವಲ್ಲಿ ಸೋತುಹೋಗಿದ್ದಾರೆ.

ಪರಿಶುದ್ಧ ಗ್ರಂಥಗಳುದ್ದಕ್ಕೂ, ಭೂಲೋಕವನ್ನು ಸಾಂಕೇತಿಕವಾಗಿ ಉಪಯೋಗಿಸುವಾಗ ಅದು ಸಮಾಜವನ್ನು ಪ್ರತಿನಿಧಿಸಲ್ಪಟ್ಟಿದೆ, ಬೆಟ್ಟಗಳು ರಾಜ್ಯಗಳನ್ನು ಪ್ರತಿನಿಧಿಸುತ್ತದೆ. ಮೇಲಣ ಲೋಕಗಳನ್ನು, ಆತ್ಮೀಕ ನಿಯಂತ್ರಣದ ಶಕ್ತಿಗಳೆಂದು: ಸಮುದ್ರಗಳನ್ನು, ಅವಿಶ್ರಾಂತವಾದ ಪ್ರಕ್ಷುಬ್ಧ ದಂಗೆಕೋರರನ್ನು, ಲೋಕದ ಅತೃಪ್ತ ಸಮೂಹಗಳನ್ನು ಪ್ರತಿನಿಧಿಸುತ್ತವೆ. ಬೆಂಕಿಯು – ಹಣಜಿಗಳು, ಕೆಲಸಕ್ಕೆ ಬಾರದವುಗಳು, ಭೂಮಿ (ಸಾಮಾಜಿಕ ಸಂಘಟನೆಗಳು) ಇವುಗಳನ್ನು ಸುಟ್ಟುಹಾಕುವಂತ ಬೇರೆ ಯಾವುದನ್ನಾದರೂ ನಾಶಪಡಿಸುವುದನ್ನು ಪ್ರತಿನಿಧಿಸುತ್ತದೆ. ಸಂಕೇತದಲ್ಲಿ ಬೆಂಕಿಗೆ ಗಂಧಕ ಸೇರಿಸುವಾಗ ಅದು ನಾಶನದ ಅಭಿಪ್ರಾಯವನ್ನು ಹೆಚ್ಚು ತೀವ್ರಗೊಳಿಸುತ್ತದೆ; ಯಾಕೆಂದರೆ, ಎಲ್ಲಾ ತರಹದ ಜೀವಗಳಿಗೆ ಗಂಧಕದ ಧೂಮಕ್ಕಿಂತ ಹೆಚ್ಚು ಅಪಾಯಕಾರಿಯಾದುದು ಯಾವುದೂ ಇರುವುದಿಲ್ಲ.

ಈ ಆಲೋಚನೆಯನ್ನು ಮನಸ್ಸಿನಲ್ಲಿಟ್ಟುಕೊಂಡು ನಾವು ರೌದ್ರದ ದಿನದ ಬಗ್ಗೆ ಪೇತ್ರನ ಸಾಂಕೇತಿಕ ಪ್ರವಾದನೆಯ ಕಡೆಗೆ ತಿರುಗಿ ನೋಡುವುದಾದರೆ, ಅವು ಮೇಲಿನ ಪ್ರವಾದನೆಗಳೊಂದಿಗೆ ಸರಿಯಾಗಿ ತಾಳೆಯಾಗುವುದನ್ನು ನೋಡಬಹುದು. ಆತನು ಹೇಳುವುದೇನೆಂದರೆ – "ನೀರುಗಳಿಂದಲೇ ಆ ಕಾಲದಲ್ಲಿದ್ದ ಲೋಕವು ಜಲಪ್ರಳಯದಲ್ಲಿ ನಾಶವಾಯಿತು. (ಅಕ್ಷರಶಃವಾದ ಭೂಲೋಕವಾಗಲೀ ಮತ್ತು ಅಕ್ಷರಶಃವಾದ ಪರಲೋಕವಾಗಲೀ ಅಲ್ಲಿ ಕೊನೆಗೊಳ್ಳಲಿಲ್ಲ, ಆದರೆ, ಪ್ರಳಯದ ಮೊದಲು ಇದ್ದ ಯುಗ ಅಥವಾ ವಸ್ತುವಿಷಯಗಳ ವ್ಯವಸ್ಥೆಯೂ ತೀರಿಹೋದವು). ಆದರೆ ಈಗಿರುವ ಭೂಮ್ಯಾಕಾಶಗಳು (ಪ್ರಸ್ತುತ ಹಂಚಿಕೆಯು ಅಥವಾ ಯುಗವು) ಅದೇ ವಾಕ್ಯದ ಬಲದಿಂದ ಬೆಂಕಿಯ ಮೂಲಕ ನಾಶವಾಗುವುದಕ್ಕೆ ಇಡಲ್ಪಟ್ಟಿವೆ; ಮತ್ತು ಭಕ್ತಿಹೀನರ ಶಿಕ್ಷಾವಿಧಿಯೂ, ನಾಶವೂ ಉಂಟಾಗುವ ದಿನಕ್ಕಾಗಿ ಆ ಬೆಂಕಿ ಸಿದ್ಧವಾಗಿದೆ" (2 ಪೇತ್ರ 3:5–7). ನೀರು ಅಕ್ಷರಶಃವಾದುದು ಎಂಬ ಸತ್ಯವು ಕೆಲವರನ್ನು ಬೆಂಕಿಯು ಸಹ ಅಕ್ಷರಶಃವಾದುದು ಎಂದು ನಂಬುವಂತೆ ಮಾಡುತ್ತದೆ. ಆದರೆ ಇದೇ ಅರ್ಥವನ್ನು ಎಲ್ಲವೂ ಅನುಸರಿಸುವುದಿಲ್ಲ. ಒಮ್ಮೆ ದೇವರ ದೇವಸ್ಥಾನವು ಒಂದು ಕಾಲದಲ್ಲಿ ಕಲ್ಲಿನಿಂದ ಮಾಡಲ್ಪಟ್ಟು ಅಕ್ಷರಶಃವಾಗಿತ್ತು. ಆದರೆ ನಿಜವಾದ ದೇವಸ್ಥಾನವಾದ ಸಭೆಯು ಆತ್ಮೀಕ ಕಟ್ಟಡವಾಗಿ ನಿರ್ಮಾಣ ಮಾಡಲಾಗಿದೆ, ಐಹಿಕ ಸಂಗತಿಗಳಿಂದ ಮಾಡಲ್ಪಡದ ಪವಿತ್ರವಾದ ದೇವಾಲಯವಾಗಿದೆ ಎಂಬ ಸತ್ಯವನ್ನು ಬದಿಗೆ ಸರಿಸುವುದಿಲ್ಲ. ನೋಹನ ನಾವೆಯು ಸಹಾ ಅಕ್ಷರಶಃವಾಗಿತ್ತು. ಆದರೆ ಅದು ಕ್ರಿಸ್ತನನ್ನು ಮತ್ತು ಆತನಲ್ಲಿರುವ ಶಕ್ತಿಯನ್ನು ಸೂಚಿಸುವುದಾಗಿದ್ದು ಅದು ಸಮಾಜವನ್ನು ಪುನಃ ಭರ್ತಿಮಾಡುವಂತದ್ದು ಮತ್ತು ಮರುಸಂಘಟಿಸುವಂತಾದ್ದಾಗಿದೆ.

"ಕರ್ತನ ದಿನವು ಕಳ್ಳನು ಬರುವಂತೆ (ಯಾರೂ ಗಮನಿಸದಂತೆ) ಬರುತ್ತದೆ. ಆ ದಿನದಲ್ಲಿ ಆಕಾಶ ಮಂಡಲವು (ಗಾಳಿಯಲ್ಲಿನ ಪ್ರಸ್ತುತ ಶಕ್ತಿಯು ಮತ್ತು ಇದರಲ್ಲಿ ಸೈತಾನನೇ ಮುಖ್ಯಸ್ಥನೂ ಅಥವಾ ಅರಸನೂ ಆಗಿದ್ದಾನೆ) ಮಹಾ ಘೋಷದಿಂದ ಇಲ್ಲದೇ ಹೋಗುವುದು. ಸೂರ್ಯ ಚಂದ್ರ ನಕ್ಷತ್ರಗಳು ಉರಿದು ಲಯವಾಗಿ ಹೋಗುವವು. ಭೂಮಿಯೂ (ಸಾಮಾಜಿಕ ಸಂಸ್ಥೆಯು) ಅದರಲ್ಲಿರುವ ಕೆಲಸಗಳೂ (ಹೆಮ್ಮೆ, ಅಂತಸ್ತು, ಕುಲೀನತ್ವ, ದೊರೆತನ) ಸುಟ್ಟುಹೋಗುವವು" (2 ಪೇತ್ರ 3:10). ಆಕಾಶಮಂಡಲವು ಶಿಥಿಲವಾಗುವುದು. ಮೂಲವಸ್ತುಗಳು ಅಧಿಕವಾದ ಶಾಖದ ನಿಮಿತ್ತ ಕರಗಿಹೋಗುವುವು. ಪರಂತು ನಾವು ಆತನ ವಾಗ್ದಾನದ ಪ್ರಕಾರ ನೂತನ ಆಕಾಶವನ್ನು (ನೂತನ ಆತ್ಮೀಕ ಅಧಿಕಾರ – ಕ್ರಿಸ್ತನ ರಾಜ್ಯ), ಭೂಮಿಯನ್ನು (ನೂತನ ತಳಹದಿಯ ಮೇಲೆ – ಬಲ ಮತ್ತು ದಬ್ಬಾಳಿಕೆಗಳ ಬದಲಾಗಿ ಪ್ರೀತಿ ಮತ್ತು ನ್ಯಾಯ ಸ್ಥಾಪಿತಗೊಂಡ ಭೂಲೋಕದ ಸಮಾಜವನ್ನು) ಎದುರು ನೋಡುವವರಾಗುತ್ತೇವೆ (2 ಪೇತ್ರ 3:6,7, 10–13).

ಅಪೋಸ್ತಲರಲ್ಲಿ ಕೆಲವರು ಪ್ರವಾದಿಗಳು ಸಹಾ ಆಗಿದ್ದರು ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು ಗಮನಾರ್ಹವಾಗಿ ಪೇತ್ರ, ಯೋಹಾನ ಮತ್ತು ಪೌಲರು. ಸಭೆಯ ಪ್ರಯೋಜನಕ್ಕಾಗಿ ಹಿಂದಿನ ಪ್ರವಾದಿಗಳ ಮಾತುಗಳನ್ನು ವಿವರಿಸಲು ಅವರು ಅಪೋಸ್ತಲರಾಗಿ ದೇವರ ಮುಖವಾಣಿಗಳಾಗಿದ್ದರು, ಅಲ್ಲದೇ ಮುಂಬರುವ ವಿಷಯಗಳನ್ನು ಮುಂತಿಳಿಸಲು ದೇವರು ಅವರನ್ನು ಪ್ರವಾದಿಗಳಾಗಿ ಬಳಸಿದನು, ಅವುಗಳು ಈಡೇರಬೇಕಾದರೆ, ಸಮಯಕ್ಕೆ ತಕ್ಕ ಆಹಾರವಾಗುವಂತೆ ಮತ್ತು ನಂಬಿಕೆಯ ಮನೆಯವರಿಗೆ ಅದನ್ನು ವಿತರಿಸಲು, ದೇವರು ತನ್ನದೇ ಆದ ಸಮಯದಲ್ಲಿ ಸೂಕ್ತ ಸೇವಕರುಗಳನ್ನು ಅಥವಾ ವಿವರಣೆಕಾರರನ್ನು ಎಬ್ಬಿಸುತ್ತಾನೆ (ಈ ಬಗ್ಗೆ ನಮ್ಮ ಕರ್ತನ ಹೇಳಿಕೆಯನ್ನು ಮತ್ತಾಯ 24:45,46ರಲ್ಲಿ ನೋಡಬಹುದು). ಈ ಅಪೋಸ್ತಲರುಗಳು ಪ್ರವಾದಿಗಳಾಗಿ ಅವರ ಕಾಲದಲ್ಲಿ ಇನ್ನೂ ತಿಳಿಸಲು ತಕ್ಕಸಮಯವಲ್ಲದ

ಸಂಗತಿಗಳನ್ನು ಬರೆಯಲು ಮುಂದಾದರು. ಹಳೆಯ ಒಡಂಬಡಿಕೆಯ ಪ್ರವಾದಿಗಳಂತೆಯೇ ಅವರು ಅವನ್ನು ಅಪೂರ್ಣವಾಗಿ ಪ್ರಶಂಸಿದ್ದಿರಬಹುದು (1 ಪೇತ್ರ 12,13). ಆದರೂ ಅವರಂತೆಯೇ ಅವರ ವಾಕ್ಯಗಳು ವಿಶೇಷವಾಗಿ ಮಾರ್ಗದರ್ಶಿಸಲ್ಪಟ್ಟಿದ್ದವು ಮತ್ತು ನಿರ್ದೇಶಿಸಲ್ಪಟ್ಟಿದ್ದವು. ಆದ ಕಾರಣ ಅವುಗಳು ಆಳವಾದ ಅರ್ಥಗಳನ್ನು ಹೊಂದಿದ್ದವು. ಹಾಗೂ ಅವರು ಅವುಗಳನ್ನು ಉಪಯೋಗಿಸುತ್ತಿದ್ದಾಗ ಅವರಿಗೆ ಅದರ ಅರಿವು ಇದ್ದಿಲ್ಲ. ಈ ರೀತಿಯಲ್ಲಿ ಮಹತ್ವಪೂರ್ಣವಾಗಿ ಸಭೆಯಲ್ಲಿ ಯಾರೂ ದೇವರ ಮುಖವಾಣಿಯಾಗಿದ್ದರೂ ಅಥವಾ ಸಂಪರ್ಕದ ನಾಲೆಯಾಗಿದ್ದರೂ ಅವರು ಸದಾಕಾಲಕ್ಕೂ ದೇವರಿಂದಲೇ ಮಾರ್ಗದರ್ಶನಹೊಂದಿ, ಆತನಿಂದಲೇ ಉಣಬಡಿಸಿಕೊಳ್ಳುತ್ತಿತ್ತು. ಇಂತಹ ಗ್ರಹಿಕೆಯು ಆತನ (ದೇವರ) ಕೆಲವು ಮುಖವಾಣಿಗಳ ಅಪರಿಪೂರ್ಣತೆಯನ್ನು ತಡೆಹಿಡಿಯದೆ ಹೆಚ್ಚಾದ ಆತ್ಮವಿಶ್ವಾಸಕ್ಕೆ, ದೇವರ ವಾಕ್ಯದ ಮೇಲಣ ನಂಬಿಕೆಗೆ ನಡೆಸುತ್ತದೆ.

ಪ್ರವಾದಿಯಾದ ಮಲಾಕಿಯು 4:1 ರಲ್ಲಿ ಕರ್ತನ ದಿನವನ್ನು ಅದೇ ಸಂಕೇತದಲ್ಲಿ ಹೀಗೆ ಹೇಳಿರುವನು – "ಇಗೋ, ಆ ದಿನವು ಬರುತ್ತಿದೆ. ಒಲೆಯಂತೆ ಉರಿಯುತ್ತಿದೆ. ಸಕಲ ಅಹಂಕಾರಿಗಳೂ ದುಷ್ಕರ್ಮಿಗಳೂ ಹೊಟ್ಟಿನಂತಿರುವರು; ಬರುತ್ತಿರುವ ಆ ದಿನವು ಅವರಿಗೆ ಅಗ್ನಿಪ್ರಳಯವಾಗುವುದು; ಬುಡರೆಂಬೆಗಳಾವುದನ್ನೂ ಉಳಿಸದು". ಉದ್ಧಟತನ ಮತ್ತು ದಬ್ಬಾಳಿಕೆಗಳನ್ನುಂಟು ಮಾಡುವ ಅಹಂಕಾರ ಮತ್ತು ಇತರೆ ಯಾವುದೇ ಕಾರಣಗಳು ಮತ್ತೆ ಉದ್ಭವಿಸಿದರೆ, ಆಗ ಕರ್ತನ ದಿನವಾದ ಸಂಕಟದ ಕಾಲದಲ್ಲಿ ಮತ್ತು ಮಿಲಿಯಾಂತರ ಯುಗದ ಶಿಸ್ತಿನಲ್ಲಿ ಸಂಪೂರ್ಣವಾಗಿ ನಾಶಪಡಿಸಲಾಗುವುದು – ಇವುಗಳಲ್ಲಿ ಕೊನೆಯದನ್ನು ಪ್ರಕಟನೆ 20:9 ರಲ್ಲಿ ವಿವರಿಸಲಾಗಿದೆ – "ಆಗ ಪರಲೋಕದಿಂದ ಬೆಂಕಿ ಇಳಿದು ಬಂದು ಅವರನ್ನು ದಹಿಸಿಬಿಟ್ಟಿತು".

ಆದರೆ, ಅಹಂಕಾರವನ್ನು (ಪಾಪಮಯ ಮತ್ತು ಅಸಹ್ಯವನ್ನು ಹುಟ್ಟಿಸುವ ಅದರ ಎಲ್ಲಾ ರೂಪದಲ್ಲಿ) ಬೇರು ಸಮೇತವಾಗಿ ಕಿತ್ತೊಗೆಯಬೇಕು, ಮತ್ತು ಎಲ್ಲಾ ಅಹಂಕಾರಿಗಳೂ, ಕೇಡುಕರೂ ಸಂಪೂರ್ಣವಾಗಿ ನಾಶವಾಗಬೇಕು, ಆ ವರ್ಗದಲ್ಲಿರುವವರಿಗೆ ಸುಧಾರಣೆಯ ನಿರೀಕ್ಷೆ ಇಲ್ಲವೆಂಬುದು ಇದರ ಅರ್ಥವಲ್ಲ. ಇಲ್ಲ, ದೇವರಿಗೆ ಸ್ತೋತ್ರವಾಗಲಿ! ದೇವರ ಈ ನ್ಯಾಯವಾದ ಆಕ್ರೋಶವು ಉರಿಯುತ್ತಲೇ ಇರುತ್ತದೆ, ನ್ಯಾಯಾಧಿಪತಿಯು ಈ ಉರಿಯುತ್ತಿರುವ ಬೆಂಕಿಯಿಂದ ಕೆಲವರನ್ನು ಹೊರಕ್ಕೆ ಎಳೆಯುವ ಅವಕಾಶವನ್ನು ದಯಪಾಲಿಸುತ್ತಾನೆ (ಯೂದ :23). ಈ ಸಹಾಯವನ್ನು ತಿರಸ್ಕರಿಸುವವರು ಮಾತ್ರವೇ ಅವರ ಅಹಂಕಾರ ದೊಂದಿಗೆ ನಾಶವಾಗುವರು; ಯಾಕೆಂದರೆ ಅವರು ಅದನ್ನು ತಮ್ಮ ಗುಣಲಕ್ಷಣದ ಭಾಗವನ್ನಾಗಿ ಮಾಡಿಕೊಂಡಿದ್ದಾರೆ ಮತ್ತು ಸುಧಾರಣೆಯನ್ನು ಹೊಂದಲು ನಿರಾಕರಿಸುತ್ತಾರೆ.

ಅದೇ ಪ್ರವಾದಿಯು ಈ ದಿನದ ಬಗ್ಗೆ ಮತ್ತೊಂದು ವಿವರಣೆಯನ್ನು ನೀಡುತ್ತಾನೆ (ಮಲಾಕಿ 3:1–3). ಅದರಲ್ಲಿ ಪುನಃ ಬೆಂಕಿಯ ಚಿತ್ರಣದಡಿಯಲ್ಲಿ ಆತನು ದೇವರ ಮಕ್ಕಳು ಯಾವ ರೀತಿಯಲ್ಲಿ ಶುದ್ಧೀಕರಿಸಲ್ಪಡುತ್ತಾರೆ, ಆಶೀರ್ವದಿಸಲ್ಪಡುತ್ತಾರೆ ಮತ್ತು ಅವರಲ್ಲಿದ್ದ ಮಡ್ಡಿಗಟ್ಟಿದ ದುರ್ಭೋದನೆಗಳು ನಾಶಹೊಂದಿದ ನಂತರ ಆತನ ಬಳಿಗೆ ಹೇಗೆ ಬರುತ್ತಾರೆ ಎಂಬುದನ್ನು – "ಇಗೋ ನನ್ನ ದೂತನನ್ನು ಕಳುಹಿಸುತ್ತೇನೆ, ಆತನು ನನ್ನ ಮುಂದೆ ದಾರಿಯನ್ನು ಸರಿಮಾಡುವನು; ನೀವು ಹಂಬಲಿಸುವ ಕರ್ತನು ತನ್ನ ಆಲಯಕ್ಕೆ ಫಕ್ಕನೆ ಬರುವನು; ಆಹಾ, ನಿಮಗೆ ಇಷ್ಟನಾದ ಒಡಂಬಡಿಕೆಯ ದೂತನು ಐತರುತ್ತಾನೆ; ಇದು ಸೇನಾಧೀಶ್ವರ ಯೆಹೋವನ ನುಡಿ. ಆತನು ಬರುವ ದಿನವನ್ನು ಯಾರು ತಾಳಾರು? ಆತನು ಕಾಣಿಸಿಕೊಳ್ಳುವಾಗ ಯಾರು (ಪರೀಕ್ಷೆ) ನಿಂತಾರು? ಆತನು ಅಕ್ಕಸಾಲಿಗನ ಬೆಂಕಿಗೂ ಅಗಸನ ಚೌಳಿಗೂ ಸಮಾನನಾಗಿದ್ದಾನೆ; ಬೆಳ್ಳಿಯನ್ನು ಶೋಧಿಸುವ ಅಕ್ಕಸಾಲಿಗನಂತೆ ಕುಳಿತು ಲೇವಿ ವಂಶದವರನ್ನು (ಸಾಂಕೇತಿಕ ವಿಶ್ವಾಸಿಗಳು, ಮುಖ್ಯಸ್ಥರು, ರಾಜವಂಶಸ್ಥ ಯಾಜಕರು) ಶೋಧಿಸಿ ಬೆಳ್ಳಿ ಬಂಗಾರಗಳನ್ನೋ ಎಂಬಂತೆ ಶುದ್ಧೀಕರಿಸುವನು; ಅವರು ಸದ್ಧರ್ಮಿಗಳಾಗಿ ಯೆಹೋವನಿಗೆ ನೈವೇದ್ಯಗಳನ್ನು ತಂದೊಪ್ಪಿಸುವರು (ಮಲಾಕಿ 3:1–3).

ಪೌಲನು ಇದೇ ಬೆಂಕಿಯನ್ನು ಉಲ್ಲೇಖಿಸುತ್ತಾ ಈ ಪರಿಷ್ಕರಣೆಯ ಪ್ರಕ್ರಿಯೆಯು ಕರ್ತನ ದಿನದಲ್ಲಿ ವಿಶ್ವಾಸಿಗಳಿಗೆ ಪರಿಣಾಮ ಉಂಟುಮಾಡುತ್ತಾನೆ ಮತ್ತು ಅದು ಎಲ್ಲಾ ಪ್ರಶ್ನೆಗಳನ್ನು ಮೀರುವ ರೀತಿಯಲ್ಲಿ ಸಾಂಕೇತಿಕ ಬೆಂಕಿಯು ಎಲ್ಲಾ ತಪ್ಪುಗಳನ್ನೂ ನಾಶಪಡಿಸುತ್ತದೆಂದು, ಆ ರೀತಿಯಲ್ಲಿ ನಂಬಿಕೆಯ ಶುದ್ಧೀಕರಣವನ್ನು ಸಾಧಿಸುತ್ತದೆಂದು ಹೇಳುತ್ತಾನೆ. ಅದನ್ನು ಪ್ರಕಟಿಸಿದ ಮೇಲೆ ಆತನು ಏಕೈಕ ಮಾನ್ಯತೆ ಪಡೆದ ಬುನಾದಿಯ ಮೇಲೆ ಅವರ ನಂಬಿಕೆಯನ್ನು ಕಟ್ಟುವವರನ್ನು ಮಾತ್ರವೇ ಅಂದರೆ ಯೇಸುಕ್ರಿಸ್ತನು ಮಾಡಿ ಮುಗಿಸಿದ ರಕ್ಷಣಾಕಾರ್ಯವನ್ನು ಉಲ್ಲೇಖಿಸುತ್ತಾ

ಆತನು – "ಆ ಅಸ್ತಿವಾರದ ಮೇಲೆ ಚಿನ್ನ, ಬೆಳ್ಳಿ, ರತ್ನ, (ದೈವಿಕ ಸತ್ಯಗಳು ಮತ್ತು ಅನುಗುಣವಾದ ಗುಣಲಕ್ಷಣಗಳು) ಕಟ್ಟಿಗೆ, ಹುಲ್ಲು [ಸಾಂಪ್ರದಾಯಕ ತಪ್ಪುಗಳು ಮತ್ತು ಅದಕ್ಕೆ ಸಂಬಂಧಪಟ್ಟ ಅನಿಶ್ಚಿತ ಗುಣಗಳು] ಯಾವುದರಿಂದ ಕಟ್ಟಿದರೂ ಅವನವನ ಕೆಲಸವು (ಗುಣಗಳು) ವ್ಯಕ್ತವಾಗುವುದು." ಅದೂ ಹೇಗೇ ಇರಲಿ ಅದೇ ಬೆಂಕಿಯು ರುಜುವಾತುಪಡಿಸುತ್ತದೆ. ಅದರಂತೆ ಎಲ್ಲರ ಕಾರ್ಯಗಳು ಸಹಾ (2 ಪೇತ್ರ 1:5–11). "ಕ್ರಿಸ್ತನು ಬರುವ ದಿನವು ಬೆಂಕಿಯೊಡನೆ ಉದಯುವಾಗಿ ಆ ಕೆಲಸವನ್ನು ಸ್ಪಷ್ಟವಾಗಿ ತೋರಿಸುವುದು; ಅವನವನ ಕೆಲಸವೆಂಥದೋ ಆ ಬೆಂಕಿ ಶೋಧಿಸುವುದು". ಆತ್ಮೀಕ ಕಾರ್ಯವನ್ನು ಶೋಧಿಸುವ ಬೆಂಕಿಯು ಅಕ್ಷರಶಃವಾದ ಬೆಂಕಿ ಅಲ್ಲವೆಂದು ಅತ್ಯಂತ ದುರಭಿಪ್ರಾಯವುಳ್ಳವರೂ ಸಹಾ ಒಪ್ಪಿಕೊಳ್ಳುತ್ತಾರೆ; ಬೆಂಕಿ ಎಂಬುದು ಇಲ್ಲಿ ಮರ, ಹುಲ್ಲು ಮತ್ತು ಕಟ್ಟಿಗೆ ಮುಂತಾದವುಗಳ ಪರಿಸ್ಥಿತಿಯನ್ನು ಪ್ರತಿನಿಧಿಸುವ ತೀವ್ರ ನಾಶನವನ್ನು ನಿರೂಪಿಸುವ ಸೂಕ್ತ ಸಂಕೇತವಾಗಿದೆ. ಈ ಬೆಂಕಿಯು ಬಂಗಾರ, ಬೆಳ್ಳಿ ಮತ್ತು ಅಮೂಲ್ಯ ಹರಳುಗಳೆಂಬ ದೈವಿಕ ಸತ್ಯದಿಂದ ಮತ್ತು ಕ್ರಿಸ್ತನ ಈಡುಬಲಿ ಎಂಬ ಬಂಡೆಯ ಮೇಲೆ ಕಟ್ಟಿದ ನಂಬಿಕೆಯ ಕಟ್ಟಡದ ಮತ್ತು ಶಕ್ತಿಯ ಗುಣಲಕ್ಷಣಗಳನ್ನು ನಾಶಮಾಡುವ ಶಕ್ತಿಹೊಂದಿಲ್ಲ.

ಅಪೋಸ್ತಲನು ಇದನ್ನು ತೋರಿಸುವವನಾಗಿ "ಒಬ್ಬನು ಅಸ್ತಿವಾರದ ಮೇಲೆ ಕಟ್ಟಿದ್ದು ಉಳಿದರೆ ಅವನಿಗೆ ಸಂಬಳ ಬರುವುದು, (ಆತನ ಸಂಬಳವು ಕಟ್ಟೋಣದಲ್ಲಿ ಆತನ ಭರವಸೆಯನ್ನು ನಿಜವಾದ ಗುಣಲಕ್ಷಣಗಳ ಅಭಿವೃದ್ಧಿಗಾಗಿ ಸತ್ಯವನ್ನು ಉಪಯೋಗಿಸುವುದರಲ್ಲಿ ದೇವರ ರಕ್ಷಾ ಕವಚವನ್ನು ಧರಿಸಿಕೊಂಡು ಉಪಯೋಗಿಸುವುದರಲ್ಲಿ ಪ್ರಾಮಾಣಿಕತೆಗೆ ಅನುಗುಣವಾಗಿರುತ್ತದೆ). ಒಬ್ಬನು ಕಟ್ಟಿದ್ದು ಸುಟ್ಟುಹೋದರೆ ಸಂಬಳವು ನಷ್ಟವಾಗುವುದು; (ಸಂಬಳದ ನಷ್ಟವು ಅಪ್ರಮಾಣಿಕತೆಯಿಂದಾಗಿದೆ) ತಾನಾದರೋ ರಕ್ಷಣೆಹೊಂದುವನು, ಆದರೆ ಬೆಂಕಿಯೊಳಗಿಂದ ತಪ್ಪಿಸಿಕೊಂಡ ಹಾಗಿರುವನು" (1 ಕೊರಿಂಥ 3 : 12–15.). – ಸುಟ್ಟು ಕಮರಿ ಹೋಗಿ ಮತ್ತು ಎಚ್ಚೆತ್ತುಕೊಂಡವರು, ಕ್ರಿಸ್ತನ ಈಡುಬಲಿ ಎಂಬ ಬಂಡೆಯ ತಳಹದಿಯ ಮೇಲೆ ಕಟ್ಟಿದವರೆಲ್ಲರೂ ನಿಶ್ಚಿತವಾಗಿರುವರು: ಆತನ ನೀತಿವಂತಿಕೆಯನ್ನು ತಮ್ಮ ರಕ್ಷೆಯೆಂದು ನಂಬುವವರಲ್ಲಿ ಯಾರೂ ಎಂದಿಗೂ ಸಂಪೂರ್ಣವಾಗಿ ದಿಗ್ಭ್ರಮೆಗೊಳ್ಳಲಾರರು. ಆದರೆ ಇಚ್ಛಾಪೂರ್ವಕವಾಗಿ ಆತನನ್ನು ಮತ್ತು ಆತನ ಕಾರ್ಯವನ್ನು ಸ್ಪಷ್ಟವಾದ, ಪೂರ್ಣವಾದ ಜ್ಞಾನವನ್ನು ಹೊಂದಿದ ನಂತರವೂ ಆತನನ್ನು ಅಲ್ಲಗಳೆಯುವವರು ಎರಡನೆಯ ಮರಣಕ್ಕೆ ತುತ್ತಾಗುವರು (ಇಬ್ರಿಯ 6:4–8; 10:26–31).

ಇನ್ನೊಂದು ವಿಧದಲ್ಲಿ ಕರ್ತನ ವಿಪತ್ತಿನ ದಿನವನ್ನು ಸಾಂಕೇತಿಕವಾಗಿ ವರ್ಣಿಸಲಾಗಿದೆ. ಸಿನಾಯ್ ಪರ್ವತದಲ್ಲಿ ಕರ್ತನ ಒಡಂಬಡಿಕೆಯ ನಿಬಂಧನೆಯ ಅನಾವರಣವು ಲೋಕಕ್ಕೆ ಸಹಸ್ರಮಾನ ಯುಗದ ಅಥವಾ ಕ್ರಿಸ್ತನ ಆಳ್ವಿಕೆಯ ಪ್ರಾರಂಭದಲ್ಲಿ ನೂತನ ಒಡಂಬಡಿಕೆಯ ಅನಾವರಣದ ಸಂಕೇತವಾಗಿದೆ ಎಂದು ಅಪೋಸ್ತಲನು ಇಬ್ರಿಯ 12:26–29ರಲ್ಲಿ ವಿವರಿಸುತ್ತಾನೆ. ಅತನು ಹೀಗೆ ಹೇಳುತ್ತಾನೆ – "ಆತನ ಧ್ವನಿಯು ಆ ಕಾಲದಲ್ಲಿ ಭೂಮಿಯನ್ನು ಕದಲಿಸಿತು. ಈಗಲಾದರೋ – ಇನ್ನೊಂದೇ ಸಾರಿ ಅಂತಿಮವಾಗಿ ನಾನು ಭೂಮಿಯನ್ನು ಮಾತ್ರವಲ್ಲದೆ ಪರಲೋಕವನ್ನು ನಡಗಿಸುವೆನೆಂದು ವಾಗ್ದಾನಮಾಡಿದ್ದಾನೆ". ಇದರ ಬಗ್ಗೆ ಅಪೋಸ್ತಲನು "ಇನ್ನೊಂದೇ ಸಾರಿ ಎಂಬೀ ಮಾತನ್ನು ಯೋಚಿಸಿದರೆ ಕದಲಿಸಲಿರುವ ವಸ್ತುಗಳು ನಿರ್ಮಿತವಾದವು ಗಳಾದುದರಿಂದ (ಸುಳ್ಳಾದವುಗಳು, ಕಲ್ಪಿಸಿದವು, ಸತ್ಯವಲ್ಲದವು) ತೆಗೆದುಹಾಕಲ್ಪಡಬೇಕೆಂಬುದು ಸ್ಪಷ್ಟವಾಗುತ್ತದೆ. ಆಗ ಕದಲಿಸದೆ ಇರುವ ವಸ್ತುಗಳು ಸ್ಥಿರವಾಗಿ ನಿಲ್ಲುವವು (ಸ್ಪಷ್ಟವಾದವು, ನೀತಿಯುಳ್ಳವು ಮಾತ್ರ), ಆದಕಾರಣ ಯಾರೂ ಕದಲಿಸಲಾರದ ರಾಜ್ಯವನ್ನು ಹೊಂದುವವರಾದ ನಾವು ಕೃತಜ್ಞತೆಯುಳ್ಳವರಾಗಿದ್ದು ಆತನಿಗೆ ಸಮರ್ಪಕವಾದ ಆರಾಧನೆಯನ್ನು ಭಕ್ತಿಯಿಂದಲೂ ಭಯದಿಂದಲೂ ಮಾಡೋಣ. ಯಾಕೆಂದರೆ, ನಮ್ಮ ದೇವರು ದಹಿಸುವ ಅಗ್ನಿಯಾಗಿದ್ದಾನೆ" ಎಂದು ಹೇಳುವವನಾಗಿದ್ದಾನೆ. ಈ ರೀತಿಯಲ್ಲಿ ನಾವು ಈ ಅಪೋಸ್ತಲನು ಬಿರುಗಾಳಿಯನ್ನು ಕರ್ತನ ವಿಪತ್ತಿನ ದಿನಕ್ಕೆ ಸಂಕೇತಿಸುವುದನ್ನು ನೋಡುತ್ತೇವೆ. ಇದನ್ನು ಆತನು ಮತ್ತು ಇತರರು ಬೇರೆಡೆಗಳಲ್ಲಿ ಬೆಂಕಿ ಎಂಬುದಾಗಿ ಸೂಚಿಸಿರುತ್ತಾರೆ. ಅದೇ ಸಂಗತಿಗಳು ಇಲ್ಲಿ ಅವುಗಳು ಬೆಂಕಿಯ ಸಂಕೇತದಲ್ಲಿ ವಿವರಿಸಿರುವುದನ್ನು ಗಮನಿಸಬಹುದು. ಅವುಗಳೆಂದರೆ, ಎಲ್ಲಾ ಸುಳ್ಳುಗಳನ್ನು ವಿಶ್ವಾಸಿಗಳಿಂದ ಮತ್ತು ಲೋಕದಿಂದ – ಹಾಗೂ ದೇವರ ಯೋಜನೆ, ಆತನ ಗುಣ ಮತ್ತು ವಾಕ್ಯದ ಬಗ್ಗೆ ತಪ್ಪುಗಳು ಮತ್ತು ಸಾಮಾಜಿಕ ಮತ್ತು ನಾಗರಿಕ ವ್ಯವಹಾರಗಳಿಗೆ ಸಂಬಂಧಿಸಿದಂತೆ ದೋಷಗಳನ್ನು ಅಳಿಸಿಹಾಕುವುದು. ಈ ಕಟ್ಟುಕಥೆಯ ರಚನೆಯನ್ನು ತೊಲಗಿಸುವುದು ಎಲ್ಲರಿಗೂ ನಿಜವಾಗಿಯೂ ಒಳ್ಳೇದು. ಇದು ಹೆಚ್ಚಾಗಿ

ಆತನ ಸ್ವಂತ ನೀತಿಭ್ರಷ್ಟ ಬಯಕೆಗಳಿಂದ, ಮಾತ್ರವಲ್ಲದೆ. ನೀತಿವಂತಿಕೆಗೆ ವಿರೋಧಿಯಾದ ಸೈತಾನನ ಕುತಂತ್ರ ಕಪಟತೆಗಳಿಂದ ಮಾನವರಿಗೆ ಇದು ಬಂದಿದೆ. ಆದರೆ ಸಂಬಂಧಪಟ್ಟವರೆಲ್ಲರಿಗೂ ಹೆಚ್ಚಿನ ಬೆಲೆಯಲ್ಲಿ ಅವುಗಳನ್ನು ಗುಡಿಸಿಹಾಕಲಾಗುವುದು ದೊಡ್ಡ ನಷ್ಟವೆಂದಾಗುತ್ತದೆ. ಅದು ಭಯಂಕರವಾದ ದಹಿಸುವ ಅಗ್ನಿ, ಭಯಾನಕ ಬಿರುಗಾಳಿ, ವಿಪತ್ತಿನ ಕಗ್ಗತ್ತಲಿನ ರಾತ್ರಿಯಾಗಿದ್ದು, ಅದು ಎಂದಿಗೂ ಕದಲಿಸಲಾಗದ, ನೀತಿವಂತಿಕೆಯ ಭವ್ಯವಾದ ಸಾಮ್ರಾಜ್ಯದ ಪ್ರಕಾಶಕ್ಕೆ ಮುಂಚಿತವಾಗಿ ಸಂಭವಿಸುವುದು. ಸಹಸ್ರಮಾನ ದಿನದಲ್ಲಿ ನೀತಿಸೂರ್ಯನು ವೈಭವದೊಡನೆ ಮತ್ತು ಶಕ್ತಿಯೊಡನೆ, ಆಶೀರ್ವಾದದೊಂದಿಗೆ ಮತ್ತು ವಿಮೋಚಿಸಲ್ಪಟ್ಟ ಭೂಲೋಕವನ್ನು ವ್ಯಾಧಿಮರಣದಿಂದ ಗುಣಪಡಿಸುವಿಕೆಯೊಂದಿಗೆ ಪ್ರಕಾಶಿಸುವನು (ಮಲಾಕಿ 4:2 ಮತ್ತು ಮತ್ತಾಯ 13:43 ಇವುಗಳನ್ನು ಪರಸ್ಪರ ಹೋಲಿಸಿ ನೋಡಿರಿ).

ಪ್ರವಾದಿಯಾದ ದಾವೀದನ ಕೀರ್ತನೆಗಳಿಂದ ಸಂಪ್ರೀತನಾದ ದೇವರು ನಮ್ಮ ಕರ್ತನ ಪ್ರಥಮ ಆಗಮನದ ಬಗ್ಗೆ ಅನೇಕ ಸಂಗತಿಗಳನ್ನು ಮುಂತಿಳಿಸುತ್ತಾ, ಈ ವಿಪತ್ತಿನ ದಿನದ ಮೂಲಕವಾಗಿ ಆತನ ಮಹೋನ್ನತ ಆಳ್ವಿಕೆಯು ಪ್ರಾರಂಭವಾಗುವದು ಎಂಬುದರ ಬಗ್ಗೆ ಕೆಲವೊಂದು ಉಜ್ವಲವಾದ ವಿವರಣೆಗಳನ್ನು ನೀಡುತ್ತಾನೆ. ಆಗ ಆತನು ಬೆಂಕಿ, ಬಿರುಗಾಳಿ ಮತ್ತು ಕತ್ತಲೆ ಮುಂತಾದ ವಿವಿಧ ಸಂಕೇತಗಳನ್ನು ಪರ್ಯಾಯವಾಗಿ ಮತ್ತು ಅದಲು ಬದಲು ಮಾಡುವಂತೆ, ತನ್ನ ವಿವರಣೆಯಲ್ಲಿ ಉಪಯೋಗಿಸುತ್ತಾನೆ. ಈ ರೀತಿ, ಉದಾಹರಣೆಯಾಗಿ ಆತನು "ನಮ್ಮ ದೇವರು ಪ್ರತ್ಯಕ್ಷನಾಗುವನು. ಎಷ್ಟು ಮಾತ್ರವೂ ಸುಮ್ಮನಿರುವುದಿಲ್ಲ; ಆತನ ಮುಂಭಾಗದಲ್ಲಿ ಬೆಂಕಿಯು ಪ್ರಜ್ವಲಿಸುತ್ತದೆ. ಆತನ ಸುತ್ತಲೂ ಬಿರುಗಾಳಿ ಬೀಸುತ್ತದೆ" (ಕೀರ್ತನೆ 50:3) ಎಂತಲೂ. ಕೀರ್ತನೆ 97: 2–6ರಲ್ಲಿ "ಮುಗಿಲೂ, ಕಾರ್ಗತ್ತಲೆಯೂ ಆತನ ಸುತ್ತಲೂ ಇರುತ್ತವೆ; ನೀತಿನ್ಯಾಯಗಳು ಆತನ ಸಿಂಹಾಸನದ ಅಸ್ತಿವಾರ. ಬೆಂಕಿಯು ಆತನ ಮುಂಗಡೆಯಿಂದ ಹೋಗಿ ಸುತ್ತಲೂ ಆತನ ವೈರಿಗಳನ್ನು ದಹಿಸಿಬಿಡುತ್ತವೆ. ಆತನ ಮಿಂಚುಗಳು ಲೋಕವನ್ನು ಬೆಳಗಿಸಿದವು; ಭೂಮಿಯು ಅದನ್ನು ಕಂಡು ನಡುಗಿತು. ಸಾರ್ವಭೌಮನಾದ ಯೆಹೋವನ ಎದುರಿನಲ್ಲಿ ಪರ್ವತಗಳು ಮೇಣದಂತೆ ಕರಗಿಹೋದವು. ಆತ ನೂತನ ಆಕಾಶ ಮಂಡಲವು ಆತನ ನೀತಿಯನ್ನು ಪ್ರಸಿದ್ಧಿಪಡಿಸಿತು; ಎಲ್ಲಾ ಜನರು ಆತನ ಮಹಿಮೆಯನ್ನು ಕಂಡರು" ಎಂತಲೂ, ಕೀರ್ತನೆ 110:2–6ರಲ್ಲಿ "ಯೆಹೋವನು ನಿನ್ನ ರಾಜದಂಡದ ಆಳ್ವಿಕೆಯನ್ನು ಚಿಯೋನಿನ ಹೊರಗೂ ಹಬ್ಬಿಸುವನು; ನಿನ್ನ ವೈರಿಗಳ ಮಧ್ಯದಲ್ಲಿ ದೊರೆತನಮಾಡು..... ನಿನ್ನ ಬಲಗಡೆಯಲ್ಲಿ ಕರ್ತನು ತನ್ನ ಕೋಪದ ದಿನದಲ್ಲಿ ರಾಜರನ್ನು ಖಂಡಿಸುವನು. ಆತನು ಜನಾಂಗಗಳಲ್ಲಿ ನ್ಯಾಯ ಸ್ಥಾಪಿಸುವಾಗ ವಿಸ್ತಾರವಾದ ರಣರಂಗದಲ್ಲಿ ಶತ್ರುಗಳ ಶಿರಸ್ಸನ್ನು ಛೇದಿಸಿ ಹೆಣಗಳಿಂದ ಅದನ್ನು ತುಂಬಿಸುವನು" ಎಂದು ಬರೆದದೆ. ಪುನಃ ಕೀರ್ತನೆ 46:1–5ರಲ್ಲಿ "ದೇವರು ನಮಗೆ ಆಶ್ರಯದುರ್ಗವಾಗಿದ್ದಾನೆ... ಆದುದರಿಂದ ಭೂಮಿಯು (ಸಮಾಜವು) ಮಾರ್ಪಟ್ಟರೂ, ಬೆಟ್ಟಗಳು (ರಾಜ್ಯಗಳು) ಸಮುದ್ರದಲ್ಲಿ ಮುಣುಗಿದರೂ (ದಂಗೇಕೋರರ ಸಮೂಹದಿಂದ ಕಬಳಿಸಲ್ಪಟ್ಟರೂ) ನಮಗೇನೂ ಭಯವಿಲ್ಲ. ಸಮುದ್ರವು ಘೋಷಿಸುತ್ತಾ (ಕೆರಳಿ) ನೊರೆಯನ್ನು ಕಾರಿದರೇನು? ಅದರ ಅಲ್ಲಕಲ್ಲೋಲಗಳಿಂದ (ಕೆಣಕುವಿಕೆಯಿಂದ) ಪರ್ವತಗಳು ಚಲಿಸಿದರೇನು?... ಉದಯ ಕಾಲದಲ್ಲಿಯೇ ದೇವರು ಇದರ (ಆತನ ಮದಲಗಿತ್ತಿಯ, ಪ್ರಾಮಾಣಿಕವಾದ ಚಿಕ್ಕ ಹಿಂಡಿನ) ಸಹಾಯಕ್ಕೆ ಬರುವನು" ಎಂದು ಬರೆದದೆ. ಅದೇ ಕೀರ್ತನೆಯ ವಚನ 6–10ರಲ್ಲಿನ ಅದೇ ಚರಿತ್ರೆಯು ಮತ್ತೊಂದು ಸಂಕೇತಗಳಲ್ಲಿ ಪುನರುಚ್ಚರಿಸಲ್ಪಟ್ಟಿದೆ – "ಜನಾಂಗಗಳು ಕಳವಳಗೊಂಡವು; ರಾಜ್ಯಗಳು ತತ್ತರಿಸಿದವು. ಆತನು ಗರ್ಜಿಸಲು ಭೂಲೋಕವೆಲ್ಲಾ (ಸಮಾಜವೆಲ್ಲಾ) ಕರಗಿಹೋಯಿತು, ಸೇನಾಧೀಶ್ವರನಾದ ಯೆಹೋವನು ನಮ್ಮ ಸಂಗಡ ಇದ್ದಾನೆ; ಯಾಕೋಬ ವಂಶದ ದೇವರು ನಮಗೆ ಆಶ್ರಯದುರ್ಗವಾಗಿದ್ದಾನೆ", ನಂತರ ಆ ಸಂಕಟ ಕಾಲದ ಫಲಿತಾಂಶವನ್ನು ಕಂಡು ಆತನು ಹೀಗೆ ಕೂಡಿಸುತ್ತಾನೆ – "ಬನ್ನಿರಿ, ಯೆಹೋವನ ಕಾರ್ಯವನ್ನು ನೋಡಿರಿ; ಆತನು ಭೂಲೋಕದಲ್ಲಿ ಎಂಥಾಃ ಪ್ರಳಯವನ್ನು ನಡೆಸಿದ್ದಾನೆ. ಲೋಕದ ಎಲ್ಲಾ ಭಾಗದಲ್ಲೂ ಯುದ್ಧವನ್ನು ನಿಲ್ಲಿಸಿಬಿಟ್ಟಿದ್ದಾನೆ; ಬಿಲ್ಲುಗಳನ್ನೂ, ಭಲ್ಲೆಗಳನ್ನೂ ಮುರಿದುಹಾಕಿದ್ದಾನೆ; ರಥಗಳನ್ನು ದಹಿಸಿಬಿಟ್ಟಿದ್ದಾನೆ. ಬಿಡಿರಿ [ಓ ಜನರೇ, ನಿಮ್ಮ ಹಿಂದಿನ ಮಾರ್ಗಗಳನ್ನು], ನಾನೇ ದೇವರು; (ಎಂಬ ಜ್ಞಾನವನ್ನು ಪಡೆಯಿರಿ) ಲೋಕದ ಸಮಸ್ತ ಜನಗಳಿಗೂ ಸರ್ವಾಧಿಪತಿಯು ನಾನೇ ಎಂದು ತಿಳಿದುಕೊಳ್ಳಿರಿ. ಸೇನಾಧೀಶ್ವನಾದ ಯೆಹೋವನು ನಮ್ಮ ಸಂಗಡ ಇದ್ದಾನೆ" "ನೂತನ ಲೋಕವು" ಅಥವಾ ಸಮಾಜದ ನೂತನ ಕ್ರಮ ಅಥವಾ ವ್ಯವಸ್ಥೆಯು ದೇವರನ್ನು ಮತ್ತು ಆತನ ವಿಧಿಗಳನ್ನು ಎಲ್ಲವನ್ನೂ ನಿಯಂತ್ರಿಸುವಂತೆ ಉನ್ನತಕ್ಕೇರಿಸುವುದು.

ಕರ್ತನ ದಿನವು ಮಹಾ ಸಂಕಷ್ಟದ ಮತ್ತು ಎಲ್ಲಾ ದುಷ್ಟತ್ವವನ್ನು ನಾಶನಪಡಿಸುವ ದಿನವಾಗಿದೆ ಎಂದು ರುಜುವಾತುಪಡಿಸುವ ಮತ್ತೊಂದು ಸಾಕ್ಷ್ಯವನ್ನು (ಆದಾಗ್ಯೂ ಅದು ಅಕ್ಷರಶಃವಾದ ಲೋಕವನ್ನು ದಹಿಸುವ ಸಮಯವಲ್ಲ) ಸತ್ಯವೇದದ ಕೊನೆಯ ಸಾಂಕೇತಿಕ ಪ್ರವಾದನೆಯಲ್ಲಿ ಒದಗಿಸಲಾಗಿದೆ. ಕರ್ತನು ಆಳ್ವಿಕೆ ಮಾಡುವ ತನ್ನ ಮಹಾ ಅಧಿಕಾರವನ್ನು ವಹಿಸಿಕೊಳ್ಳುವ ಈ ಸಮಯವನ್ನು ಉಲ್ಲೇಖಿಸುತ್ತಾ, ಬಿರುಗಾಳಿ ಬೆಂಕಿಯನ್ನು ಈ ಪ್ರಕಾರವಾಗಿ ವಿವರಿಸಲಾಗಿದೆ – "ಜನಾಂಗಗಳು ಕೋಪಿಸಿಕೊಂಡವು, ನಿನ್ನ ಕೋಪವೂ ಪ್ರಕಟವಾಯಿತು" (ಪ್ರಕಟನೆ 11:18). ಮತ್ತು ಪುನಃ "ಜನಾಂಗಗಳನ್ನು ಹೊಡೆಯುವುದಕ್ಕಾಗಿ ಹದವಾದ ಕತ್ತಿಯು ಆತನ ಬಾಯಿಂದ ಬರುತ್ತದೆ ... ಆತನು ಅವರನ್ನು ಕಬ್ಬಿಣದ ಕೋಲಿನಿಂದ ಆಳುವನು. ಆತನು ಸರ್ವಶಕ್ತನಾದ ದೇವರ ಉಗ್ರ ಕೋಪವೆಂಬ ದ್ರಾಕ್ಷೆಯ ತೊಟ್ಟಿಯಲ್ಲಿರುವದನ್ನು ತುಳಿಯುತ್ತಾನೆ .... ತರುವಾಯ ಆ ಮೊದಲನೆಯ ಮೃಗವೂ (ಸಾಂಕೇತಿಕ) ಭೂರಾಜರೂ ಅವರ ಸೈನ್ಯಗಳವರೂ ಆ ಕುದುರೆಯ ಮೇಲೆ ಕೂತಿದ್ದವನ ಮೇಲೆಯೂ ಆತನ ಸೈನ್ಯದ ಮೇಲೆಯೂ ಯುದ್ಧ ಮಾಡುವದಕ್ಕಾಗಿ ಕೂಡಿಬಂದಿರುವುದನ್ನು ಕಂಡೆನು. ಆಗ ಮೃಗವು ಸೆರೆ ಸಿಕ್ಕಿತು. ಅವರು ಜೀವಸಹಿತವಾಗಿ ಗಂಧಕದಿಂದ ಉರಿಯುವ ಬೆಂಕಿಯ ಕೆರೆಯಲ್ಲಿ ಹಾಕಲ್ಪಟ್ಟರು" (ಪ್ರಕಟನೆ 19: 15,19).

ನಾವು ಇಲ್ಲಿ "ಪಶು", "ಸುಳ್ಳು ಪ್ರವಾದಿ", "ಪ್ರತಿಮೆ", "ಬೆಂಕಿಯ ಕೆರೆ", "ಕುದುರೆ" ಮುಂತಾದ ಈ ಸಂಕೇತಗಳನ್ನು ಪರೀಕ್ಷಿಸುವಂತೆ ವಿಷಯಾಂತರ ಮಾಡುವಂತಿಲ್ಲ. ಇದಕ್ಕಾಗಿ ಓದುಗರು ಅನುಸರಿಸಿ ಬರುವ ಮುಂದಿನ ಸಂಪುಟದಲ್ಲಿ [ಕಾಲವು ಸಮೀಪವಾಯಿತು] ನೋಡಬಹುದು. ಈಗ ನೀವುಗಳು ಈಗಿನ ಮಹಾನ್ ಸಾಂಕೇತಿಕ ಯುದ್ಧ ಮತ್ತು ಭೂಮಿಯ ದ್ರಾಕ್ಷೆಯ ಕೊಯ್ಲು ಪ್ರಸ್ತುತ ಯುಗವನ್ನು ಕೊನೆಗಾಣಿಸುವುದು ಮತ್ತು ಸಹಸ್ರಮಾನದ ಯುಗವನ್ನು ಪ್ರಾರಂಭಿಸ ಲಾಗುತ್ತದೆ ಎಂದು ವಿವರಿಸಲಾಗಿದೆ (ಪ್ರಕಟನೆ 20: 1–3) ಎಂಬುದನ್ನು ಗಮನಿಸುತ್ತೀರಿ, ಆದರೆ ಅದೇ ದೊಡ್ಡ ಮತ್ತು ಸಂಕಟಗಳ ಘಟನೆಗಳನ್ನು ಒಳಗೊಂಡಿರುವ ಇತರೆ ಚಿಹ್ನೆಗಳು ಬೇರೆಡೆ ಸಾಂಕೇತಿಕವಾಗಿ ಬೆಂಕಿ, ಚಂಡಮಾರುತ, ಕದಲಿಸುವಿಕೆ ಎಂದು ಇತ್ಯಾದಿಯಾಗಿ ಕರೆಯಲ್ಪಡುತ್ತವೆ. ಯುದ್ಧ ಮತ್ತು ದ್ರಾಕ್ಷೆಯನ್ನು ತುಳಿಯುವ ಪ್ರಕಟನೆಯ ಸಂಕೇತಗಳು ಅದೇ ಘಟನೆಗಳು ಅದೇ ಚಿತ್ರಣದೊಂದಿಗೆ ಇರುವ ಗಮನಾರ್ಹವಾದ ಸಾಮರಸ್ಯವನ್ನು ನೀವು ಯೋವೇಲ 2:9–16 ಮತ್ತು ಯೆಶಾಯ 13:1–11ರಲ್ಲಿ ಗಮನಿಸಬಹುದು. ಉಪಯೋಗಿಸಲ್ಪಟ್ಟಿರುವ ವಿವಿಧವಾದ ಸಾಂಕೇತಿಕ ಚಿತ್ರಣಗಳು ನಮಗೆ ಕರ್ತನ ಆ ಮಹಾನ್ ಮತ್ತು ಗಮನಾರ್ಹ ದಿನದ ಎಲ್ಲಾ ವೈಶಿಷ್ಟ್ಯಗಳನ್ನು ಹೆಚ್ಚು ಪೂರ್ಣವಾಗಿ ಮೆಚ್ಚಿಕೊಳ್ಳುವಂತೆ ಸಹಾಯಮಾಡುತ್ತವೆ.

## ಪ್ರಸ್ತುತ ಪರಿಸ್ಥಿತಿ
## The Present Situation

ನಾವು ಲೋಕದ ಪ್ರಸ್ತುತ ಸಂಗತಿಗಳನ್ನು ವಿಶಿಷ್ಟವಾಗಿ ಗುರುತಿಸುವಂತೆ ಆ ದಿನದ ಪ್ರವಾದನಾ ಹೇಳಿಕೆಗಳನ್ನು ಇಲ್ಲಿ ಬಿಡುತ್ತೇವೆ. ಯಾಕೆಂದರೆ, ಅವುಗಳು ಲೋಕದಲ್ಲಿ ತ್ವರಿತವಾಗಿ ಸಮೀಪಿಸುತ್ತಿರುವ ಘರ್ಷಣೆಗೆ ರೂಪುಗೊಳ್ಳುತ್ತಿರುವುದನ್ನು ನಾವು ಕಾಣುವವ ರಾಗಿದ್ದೇವೆ. ಈ ಘರ್ಷಣೆಯು – ಅದರ ಭಯಾನಕವಾದ ಪರಾಕಾಷ್ಠೆಯನ್ನು ತಲುಪಿದಾಗ ಅವುಗಳು ಅಗತ್ಯವಾಗಿ ಚಿಕ್ಕದ್ದಾಗಿರಬೇಕು. ಇಲ್ಲವಾದಲ್ಲಿ ಜನಾಂಗವು ನಿರ್ನಾಮವಾಗುತ್ತದೆ. ಈ ಕದನದ ಎರಡು ವಿರುದ್ಧ ಪಕ್ಷಗಳು ಈಗಾಗಲೇ ಗೋಚರಿಸುತ್ತಿವೆ. ಸಂಪತ್ತು, ಅಹಂಕಾರ ಮತ್ತು ಹೆಮ್ಮೆ ಇವುಗಳು ಒಂದೆಡೆಯಾದರೆ ವ್ಯಾಪಕವಾಗಿ ಚಾಲ್ತಿಯಲ್ಲಿರುವ ಬಡತನ, ಅಜ್ಞಾನ, ಧರ್ಮಾಂಧತೆ ಮತ್ತು ಅನ್ಯಾಯದ ತೀಕ್ಷ್ಣ ಪ್ರಜ್ಞೆ ಇವುಗಳು ಮತ್ತೊಂದು ಕಡೆ. ಎರಡೂ ಸ್ವಾರ್ಥ ಉದ್ದೇಶಗಳಿಂದ ಪ್ರೇರೇಪಿಸಲ್ಪಟ್ಟಿದ್ದು, ಈಗ ಅವುಗಳು ತಮ್ಮ ಬಲಗಳನ್ನು ಎಲ್ಲಾ ನಾಗರೀಕ ಪ್ರಪಂಚದ ಮೇಲೆ ಸಂಘಟಿಸುತ್ತಿವೆ. ಸತ್ಯದಿಂದ ಅಭಿಷೇಕಿಸಲ್ಪಟಿರುವ ನಮ್ಮ ಕಣ್ಣುಗಳು, ನಾವೆಲ್ಲೆಲ್ಲಿ ನೋಡುತ್ತೇವೋ ಅಲ್ಲಲ್ಲಿ, ಅರಾಜಕತಾವಾದಿಗಳ ಭಯ ಹುಟ್ಟಿಸುವ ಪ್ರಯತ್ನಗಳಲ್ಲಿ ಪ್ರತಿನಿಧಿಸುವಂತೆ ಸಮುದ್ರವು ಮತ್ತು ಅಲೆಗಳು ಈಗಾಗಲೇ ಭೋರ್ಗರೆಯುತ್ತಿರುವುದನ್ನು ಮತ್ತು ಅಪ್ಪಳಿಸುತ್ತಿರು ವುದನ್ನು ಮತ್ತು ಪರ್ವತಕ್ಕೆ ವಿರುದ್ಧವಾಗಿ ನೊರೆ ಕಾರುವುದನ್ನು ನಾವು ಕಾಣುತ್ತೇವೆ. ಅದರ ಅತೃಪ್ತಿಯ ಸಂಖ್ಯೆಯು ನಿರಂತರವಾಗಿ ಹೆಚ್ಚುತ್ತಿದೆ. ಸಮಾಜದ ವಿವಿಧ ಪಕ್ಷಗಳ ಅಥವಾ ಅಂಶಗಳ ನಡುವಣ ಘರ್ಷಣೆಯು ಪ್ರವಾದಿಗಳು ವಿವರಿಸಿದ ಹಂತಕ್ಕೆ ವೇಗವಾಗಿ ಸೇರುವುದನ್ನು ನಾವು ನೋಡಬಹುದು. ಭೂಮಿಯು (ಸಮಾಜ) ಬೆಂಕಿಯಲ್ಲಿ ಮೂಲವಸ್ತುಗಳು ಪರಸ್ಪರ ಉತ್ಪನ್ನವಾದ ಶಾಖದಿಂದ ಶಿಥಿಲಗೊಂಡು ಕರಗಿಹೋಗುತ್ತವೆ.

ಜನರು ಈ ವಿವಾದದ ಯಾವ ಕಡೆಗಿದ್ದರೂ ಅವರ ಸ್ವಂತ ಹಿತಾಸಕ್ತಿಗಳಿಗೆ, ಅಭ್ಯಾಸಗಳಿಗೆ, ವಿದ್ಯೆಗೆ ವಿರುದ್ಧವಾದುದನ್ನು ನೋಡಲು ಅವರಿಗೆ ನಿಜವಾಗಿಯೂ ಕಷ್ಟವೆನಿಸುತ್ತದೆ. ಹಣವಂತರು ಈ ಪ್ರಪಂಚದ ಸರಕುಗಳಲ್ಲಿ ತಮ್ಮ ಪಾಲಿನ ಅನುಪಾತಕ್ಕಿಂತ ಹೆಚ್ಚಾದದನ್ನು ಪಡಕೊಳ್ಳುವ ಹಕ್ಕು ಇದೆ ಎಂದುಕೊಳ್ಳುತ್ತಾರೆ ಮತ್ತು ಪ್ರತಿಯೊಂದು ಸರಕನ್ನು ಸಾಧ್ಯವಾದಷ್ಟು ಕಡಿಮೆ ದರದಲ್ಲಿ ಖರೀದಿಸುವ ಹಕ್ಕು ತಮಗಿದೆ ಎಂದು ಭಾವಿಸುತ್ತಾರೆ. ಅವರ ಪ್ರಯತ್ನಗಳ ಫಲದ ಹಕ್ಕು, ಅದು ತಮ್ಮ ಬುದ್ಧಿವಂತಿಕೆಯನ್ನು ಉಪಯೋಗಿಸಿ ತಮಗಾಗಿ ಹೆಚ್ಚು ಲಾಭವನ್ನು ಗಳಿಸುವ ವ್ಯಾಪಾರವನ್ನು ಜಾರಿಯಲ್ಲಿಡುವ, ಮತ್ತು ತಮ್ಮ ಸಂಗ್ರಹಿಸಿದ ಸಂಪತ್ತನ್ನು ಹೆಚ್ಚಿಸಿಕೊಳ್ಳುವ ಹಕ್ಕಾಗಿದೆ ಎಂದು ತಿಳಿದಿರುತ್ತಾರೆ. ಸನ್ನಿವೇಶಗಳ ಬಲದಿಂದ ಯಾರೇ ಒತ್ತಾಯಿಸಿದರೂ, ಅದರ ಎಲ್ಲಾ ಅಗತ್ಯತೆಗಳೊಂದಿಗೆ ಅದರ ಕೆಲವು ಸೌಕರ್ಯ ಗಳೊಂದಿಗೆ ಜೀವನವನ್ನು ಸೆಳೆಯಲು ಒತ್ತಾಯಿಸ ಬಹುದು ಎಂದು ಆಲೋಚಿಸುತ್ತಾರೆ. ಅವರು ಈ ರೀತಿಯಾಗಿ ತರ್ಕಿಸುವುದು ಅನಿವಾರ್ಯವಾದುದು; ಪೂರೈಕೆ ಒದಗಿಸುವ ಮತ್ತು ಬೇಡಿಕೆಯ ಕೇಳುವ ಕಾನೂನು ನಿಯಂತ್ರಿಸಬೇಕು; ಬಡವರು ಮತ್ತು ಶ್ರೀಮಂತರು ಯಾವಾಗಲೂ ಜಗತ್ತಿನಲ್ಲಿ ಇದ್ದೇ ಇರುತ್ತಾರೆ. ಶ್ರೀಮಂತರು ಬೆಳಿಗ್ಗೆ ಸಂಪತ್ತನ್ನು ಸಮನಾಗಿ ವಿಭಾಗ ಮಾಡಿದರೆ, ಮುಂದಾಲೋಚನೆಯಿಲ್ಲದ/ ದುಂದುಗಾರಿಕೆಯಿಂದಾಗಿ ಕೆಲವರು ರಾತ್ರಿಗೆ ಮೊದಲೇ ಬಡವರಾಗುತ್ತಾರೆ. ಹಾಗೆಯೇ ಕೆಲವರು ಹೆಚ್ಚು ಜಾಗರೂಕರೂ, ಲಕ್ಷ್ಯವುಳ್ಳವರೂ ಆಗಿದ್ದು ಹಣವಂತರಾಗುತ್ತಾರೆ. ಇದರೊಂದಿಗೆ, ಅವರು ಪರಿಣಾಮಗಳೊಂದಿಗೆ ವಾದಿಸುತ್ತಾರೆ. ಹೆಚ್ಚಿನ ಮೇಧಾಶಕ್ತಿಯುಳ್ಳ ಮನುಷ್ಯರು ಬೃಹತ್ ಉದ್ಯಮಗಳನ್ನು ಕೈಗೊಂಡು ದೊಡ್ಡ ನಷ್ಟದ ಅಪಾಯಗಳೊಂದಿಗೆ, ಲಾಭ ಮತ್ತು ಅನುಕೂಲತೆಯ ನಿರೀಕ್ಷೆಯಿಲ್ಲದೆ ಸಹಸ್ರಾರು ಜನರನ್ನು ಉದ್ಯೋಗಕ್ಕೆ ನೇಮಿಸಿಕೊಳ್ಳುತ್ತಾರೆಂದು ನಿರೀಕ್ಷಿಸಬಹುದೋ?

ಇದಕ್ಕೆ ವಿರುದ್ಧವಾಗಿ ಕುಶಲಕರ್ಮಿ ಮತ್ತು ಕಾರ್ಮಿಕ ಇವರುಗಳು ಹೇಳುತ್ತಾರೆ – ದುಡಿಮೆಯು ವಿವಿಧ ಅನುಕೂಲತೆಗಳನ್ನು ಬೇರೆ ಹಿಂದಿನ ಯಾವ ದಿನಕ್ಕಿಂತಲೂ ಹೆಚ್ಚಾಗಿ ಈ ದಿನದಲ್ಲಿ ಅನುಭವಿಸುತ್ತಿರುವಾಗ, ಅದಕ್ಕೆ ಉತ್ತಮ ವೇತನ ದೊರೆಯುತ್ತಿರುವಾಗ, ಆ ಕಾರಣದಿಂದ ಹೆಚ್ಚಿನ ಸೌಕರ್ಯಗಳನ್ನು ಹೊಂದಬಹುದು, ಆದಾಗ್ಯೂ ಅದು ಇದರಲ್ಲಿ ತನ್ನ ಹಕ್ಕನ್ನು ಮಾತ್ರವೇ ಅನುಭವಿಸುತ್ತಿದೆ, ಆದರೆ ದೀರ್ಘಕಾಲದವರೆಗೆ ಕೆಲವುಟ್ಟಿಗೆ ನಿಷೇಧಿಸಲ್ಪಟ್ಟಿತ್ತು. ಆದ ಕಾರಣ ಅದು ಶೋಧನೆಗಳ, ಅನ್ವೇಷಣೆಗಳ, ಅನುಕೂಲತೆಗಳ, ಮತ್ತು ನಮ್ಮ ಕಾಲದ ಹೆಚ್ಚಾದ ಜ್ಞಾನ ಮುಂತಾದವುಗಳ ಪಾಲನ್ನು ಯಥಾರ್ಥವಾಗಿ ಪಡೆದಿದೆ. ನಾವು ಶ್ರಮವನ್ನು ಗೌರವಾರ್ಹವೆಂದು ಗ್ರಹಿಸುತ್ತೇವೆ, ಮತ್ತು ಅದು ಒಳ್ಳೆಯ ವಿವೇಚನೆ, ಶಿಕ್ಷಣ, ಪ್ರಾಮಾಣಿಕತೆ ಮತ್ತು ವಿಚಾರಸರಣಿಗಳೊಂದಿಗೆ ಇರುವುದಾದರೆ ಅದು ಗೌರವಾರ್ಹವಾದುದು ಮತ್ತು ಯಾವುದೇ ಉದ್ಯೋಗದಂತೆ ಇದು ಕೂಡ ಹೆಚ್ಚಾಗಿ ಅನೇಕ ಹಕ್ಕುಗಳನ್ನೊಳಗೊಂಡಿದೆ. ಮತ್ತು ಇದಕ್ಕೆ ವ್ಯತಿರಿಕ್ತವಾಗಿ, ಎಲ್ಲಾ ಜನರಿಗೂ ಜೀವನದಲ್ಲಿ ಅವರ ತಲಾಂತು ಅಥವಾ ಅವರ ಕಸುಬು ಎಂಥಹುದೇ ಇರಲಿ, ನಾವು ಸೋಮಾರಿತನವನ್ನು ಕಳಂಕ ಮತ್ತು ಅವಮಾನ ಎಂಬುದಾಗಿ ಪರಿಗಣಿಸುತ್ತೇವೆ. ಎಲ್ಲವುಗಳಿಗೂ ಬೆಲೆ ಕೊಡಬೇಕು ಮತ್ತು ಅವುಗಳನ್ನು ಪ್ರಶಂಸಿಸಬೇಕು, ಅವುಗಳು ಯಾವುದಾದರೂ ರೀತಿಯಲ್ಲಿ ಬೇರೆಯವರಿಗೆ ಉಪಯುಕ್ತವಾಗಿರಬೇಕು. ಆದರೆ ನಮ್ಮ ಪ್ರಸ್ತುತ ಅಭಿವೃದ್ಧಿಯನ್ನು ಮತ್ತು ಸುಧಾರಣೆಯನ್ನು ಬುದ್ಧಿವಂತಿಕೆಯಿಂದಲೂ, ಸಾಮಾಜಿಕವಾಗಿಯೂ ಮತ್ತು ಆರ್ಥಿಕವಾಗಿಯೂ ಗ್ರಹಿಸಿದಾಗ್ಯೂ, ಇವುಗಳು ನಮ್ಮ ಅಥವಾ ನಮ್ಮ ಉದ್ಯೋಗದಾತರ ಪಾಲಿಗೆ ಮಾನವ ಸಂಕಲ್ಪಕ್ಕಿಂತ ಹೆಚ್ಚಾಗಿ ಪರಿಸ್ಥಿತಿಯ ಫಲವೆಂದು ತಿಳುಕೊಳ್ಳುತ್ತೇವೆ. ನಾವು ನಮ್ಮ ಮತ್ತು ಎಲ್ಲಾ ಮಾನವರ ಸುಧಾರಿತ ಸ್ಥಿತಿಯು ವಿಶಿಷ್ಟವಾಗಿ ಕಳೆದ ಐವತ್ತು ವರ್ಷಗಳಲ್ಲಿ ಬುದ್ಧಿವಂತಿಕೆ, ಶೋಧನೆ ಮುಂತಾದವುಗಳ ಪರಿಣಾಮ ಎಂಬುದಾಗಿ ನೋಡುತ್ತೇವೆ. ಇವುಗಳು ಎಷ್ಟು ತೀವ್ರವಾಗಿ ಕಾರ್ಯರೂಪಕ್ಕೆ ಬಂದವೆಂದರೆ, ದುಡಿಮೆ ಮತ್ತು ಬಂಡವಾಳವು ಉಬ್ಬರವಿಳಿತದ ಅಲೆಗಳಿಂದ ಮೇಲಕ್ಕೆ ಬಂದವು ಮತ್ತು ಇನ್ನೂ ಮೇಲಣ ಮಟ್ಟಕ್ಕೇರಿದವು. ನಾವು ಪ್ರವಾಹದ ಅಲೆಯು ಮೇಲೇರುವುದು ಮುಂದುವರೆಯುವ ಮತ್ತು ಎಲ್ಲರಿಗೂ ಲಾಭವನ್ನುಂಟುಮಾಡುವ ಪ್ರತೀಕ್ಷೆಯನ್ನು ನೋಡಿದಲ್ಲಿ ನಮಗೆ ತೃಪ್ತಿಯ ಅನುಭವವಾಗುತ್ತದೆ; ಆದರೆ ಸಂಗತಿಯು ಹಾಗಿಲ್ಲ ಎಂದು ನಾವು ನೋಡುವಾಗ ನಾವುಗಳು ತವಕವುಳ್ಳವರೂ, ಅವಿಶ್ರಾಂತರೂ ಆಗುತ್ತೇವೆ. ಪ್ರವಾಹದ ಅಲೆಯು ತಿರುಗುವುದನ್ನು ನಾವು ನೋಡುತ್ತೇವೆ. ಅದರಿಂದ ಅನೇಕರು ಸಂಪತ್ತನ್ನು ಹೆಚ್ಚಿಸಿದ್ದಾರೆ ಮತ್ತು ಆರಾಮವಾದ, ಐಷಾರಾಮಿ ಮತ್ತು ಸಮೃದ್ಧಿಯಾದ ತೀರದಲ್ಲಿ ದೃಢವಾಗಿ ಮತ್ತು ಸುರಕ್ಷಿತವಾಗಿ ನೆಲೆಗೊಂಡಿದ್ದಾರೆ. ಆದರೆ ಜನ

ಸಾಮಾನ್ಯರು ಆ ರೀತಿಯಾಗಿ ನೆಲೆಗೊಳ್ಳುವುದಿಲ್ಲ ಮತ್ತು ಸುರಕ್ಷಿತವಾಗಿರುವುದಿಲ್ಲ. ಆದರೆ ಎಷ್ಟು ಕೆಳಗೆ ಹೋಗಬಹುದೋ ಅಷ್ಟು ಕೆಳಮಟ್ಟಕ್ಕೆ ಹೋಗುವ ಗಂಡಾಂತರದಲ್ಲಿ ಅಥವಾ ಇಳಿತದ ಸೆಳತದಲ್ಲಿರುತ್ತವೆ. ಆದ್ದರಿಂದ ತಡವಾಗುವ ಮೊದಲು ನಮ್ಮ ಪ್ರಸ್ತುತ ಸ್ಥಿತಿಯನ್ನು ಮತ್ತು ನಮ್ಮ ಮುಂದಿನ ಪ್ರಗತಿಯನ್ನು ಭದ್ರಪಡಿಸಿಕೊಳ್ಳಲು ನಾವು ಏನನ್ನಾದರೂ ಹತೋಟಿಗೆ ತರಲು ವಿಲೇವಾರಿ ಮಾಡುತ್ತೇವೆ.

ಈ ಸಂಗತಿಯನ್ನು ಬೇರೊಂದು ರೀತಿಯಲ್ಲಿ ಹೇಳುವಂತೆ, ನಾವು (ಕುಶಲಕರ್ಮಿಗಳು ಮತ್ತು ಕಾರ್ಮಿಕರು) ಎಲ್ಲಾ ಮನುಕುಲದವರು ಹೆಚ್ಚಾಗಿ ಆ ದಿನದ ಆಶೀರ್ವಾದಗಳನ್ನು ಹಂಚಿಕೊಂಡಿರುವಾಗ, ಇನ್ನೂ ಕೆಲವರು ವ್ಯಾಪಾರದ ಮೇಧಾವಿತನವನ್ನು ಹೊಂದಿರುವ ಕಾರಣ, ಅಥವಾ ಭಾಧ್ಯವಾಗಿ, ಅಥವಾ ಕಪಟ ಮತ್ತು ಅಪ್ರಮಾಣಿಕತೆಯಿಂದ, ಹತ್ತು ಸಾವಿರ ಮಿಲಿಯಾಂತರ ಡಾಲರ್‌ಗಳನ್ನು ಹೊಂದಿದ್ದು, ಇತರರಿಗಿಂತ ಹೆಚ್ಚಿನ ಸೌಕರ್ಯ ಹೊಂದಿರುವುದು ಮಾತ್ರವಲ್ಲ, ಯಾಂತ್ರಿಕ ಅವಿಷ್ಕಾರಗಳು ಮುಂತಾದವುಗಳಿಂದಲೂ ಸಹಾಯಪಡೆದಿದ್ದಾರೆ. ಅವರು ತಮ್ಮ ಸಂಪತ್ತನ್ನು ಹೆಚ್ಚಳಮಾಡಿಕೊಳ್ಳುವ ಅನುಪಾತದಲ್ಲಿ ಕೆಲಸಗಾರರ ವೇತನವನ್ನು ಕಡಿಮೆ ಮಾಡುವ ಪ್ರಮಾಣವನ್ನು ಹೊಂದಿದ್ದಾರೆ. ಕುಶಲಕರ್ಮಿಗಳ ರಕ್ಷಣೆಗೆ ನಾವು ಕೆಲವು ಕ್ರಮಗಳನ್ನು ತೆಗೆದುಕೊಳ್ಳದ ಹೊರತು, ಹೆಚ್ಚುತ್ತಿರುವ ಏಕಸಾಮ್ಯವನ್ನು, ಕೂಲಿ ಉಳಿತಾಯ ಯಂತ್ರೋಪಕರಣಗಳೊಂದಿಗೆ ಸಂಯೋಜಿಸಿ, ಸರಬರಾಜು ಮತ್ತು ಬೇಡಿಕೆಯ ಯಾವುದೇ ಪರಿಗಣನೆಯಿಲ್ಲದ (ನಿರ್ದಯಿಯಾದ) ಕ್ರೂರ ಕಾನೂನು ನಮ್ಮನ್ನು ಸಂಪೂರ್ಣವಾಗಿ ನುಂಗುತ್ತದೆ ಎಂಬುದನ್ನು ನಾವು ನೋಡುತ್ತೇವೆ. ಪ್ರಸ್ತುತ ಪರಿಸ್ಥಿತಿಗಿಂತ ತೂಗುತ್ತಿರುವ ಈ ಆಪತ್ತಿನ ವಿರೋಧವಾಗಿ ನಾವು ಸುರಕ್ಷಾ ವ್ಯವಸ್ಥೆಯನ್ನು ಮಾಡಿಕೊಳ್ಳುತ್ತೇವೆ. ಪ್ರತಿದಿನವೂ ಸ್ವಾಭಾವಿಕ ಹೆಚ್ಚಳ ಮತ್ತು ವಲಸೆಯ ಸಂಖ್ಯೆಯು ನಮಗೆ ಸೇರುತ್ತಾಹೋಗುವುದು ಮತ್ತು ಪ್ರತಿದಿನವೂ ಕಾರ್ಮಿಕ ಕೂಲಿ ಉಳಿತಾಯ ಯಂತ್ರೋಪಕರಣಗಳೂ ಕೂಡುತ್ತಾ ಬರುವದು. ಆದುದರಿಂದ, ಪ್ರತಿದಿನವೂ ಉದ್ಯೋಗವನ್ನು ಅರಸುವವರ ಸಂಖ್ಯೆಯು ಹೆಚ್ಚುತ್ತಾ ಹೋಗುತ್ತದೆ ಮತ್ತು ಅವರ ಸೇವೆಯ ಅವಶ್ಯಕತೆಯು ಕಡಿಮೆಯಾಗುತ್ತಾ ಹೋಗುತ್ತದೆ. ಆದುದರಿಂದ, ಸರಬರಾಜು ಮತ್ತು ಅಗತ್ಯತೆಯ ಸ್ವಾಭಾವಿಕ ನಿಯಮವನ್ನು ಮಧ್ಯಪ್ರವೇಶವಿಲ್ಲದೆ ಅನುಮತಿಸುವುದಾದಲ್ಲಿ ದುಡಿತವನ್ನು ಬೇಗನೇ ಶತಮಾನಗಳ ಹಿಂದಿನ ಸ್ಥಾನಕ್ಕೆ ಮರಳಿಸುವುದು ಮತ್ತು ನಮ್ಮ ದಿನದ ಎಲ್ಲಾ ಸವಲತ್ತುಗಳನ್ನೂ ಬಂಡವಾಳಶಾಹಿಗಳ ಕೈಗೆ ಬಿಡುತ್ತದೆ. ಇದನ್ನು ನಾವು ನಿವಾರಿಸಲು ಬಯಸುತ್ತೇವೆ.

ಬುದ್ಧಿವಂತ ಮತ್ತು ನ್ಯಾಯಸಮ್ಮತವಾದ ಕಾನೂನುಗಳಿಂದ ನಿರ್ಬಂಧಿಸದ ಹೊರತು, ಕೆಲಸ ಮಾಡುವ ಅನೇಕ ನೈಜ ಆಶೀರ್ವಾದಗಳನ್ನು ಹಾನಿ ಮಾಡುವ ಈ ಅಂತಿಮ ಪ್ರವೃತ್ತಿ ಬಹಳ ಹಿಂದಿನಿಂದಲೂ ಕಂಡುಬಂದಿದೆ; ಆದರೆ ಒಂದು ಆವಿಷ್ಕಾರವು ಇನ್ನೊಂದನ್ನು ಅನುಸರಿಸಿದ ವೇಗ ಮತ್ತು ಇದರ ಪರಿಣಾಮವಾಗಿ ಈ ಕಾರ್ಮಿಕ ಕೂಲಿ – ಉಳಿಸುವ ಯಂತ್ರೋಪಕರಣಗಳನ್ನು ಒದಗಿಸುವಲ್ಲಿ ಕಾರ್ಮಿಕರ ಬೇಡಿಕೆಯು ಹೆಚ್ಚಾಗಿದ್ದು, ಅಂತಿಮ ಫಲಿತಾಂಶವು ವಿಳಂಬವಾಗಿದೆ, ಮತ್ತು ಬದಲಿಗೆ ಈ ಲೋಕವು ಉತ್ಕರ್ಷವನ್ನು (ಬೆಲೆಗಳ ಏರಿಕೆ) ಹೊಂದಿದೆ – ಮೌಲ್ಯಗಳ ಉಬ್ಬರ, ವೇತನಗಳು, ಸಂಪತ್ತು, ಸಾಲಗಳು (ಖರ್ಚುಗಳು) ಮತ್ತು ಆಲೋಚನೆಗಳು – ಅದರಿಂದ ಪ್ರತಿಕ್ರಿಯೆಯು ಈಗ ಕ್ರಮೇಣವಾಗಿ ಪ್ರಾರಂಭವಾಗುತ್ತಿದೆ.

ಕಳೆದ ಕೆಲವು ವರ್ಷಗಳಲ್ಲಿ ಪೂರ್ಣ ವಿವರಣೆಯ ಕೃಷಿ ಸಾಮಗ್ರಿಗಳನ್ನು ಬೃಹತ್ ಪ್ರಮಾಣದಲ್ಲಿ ಉತ್ಪಾದಿಸಲಾಗಿದೆ. ಇದು ಎರಡು ಪಟ್ಟು ಪರಿಣಾಮವನ್ನು ಹೊಂದಿದೆ. ಮೊದಲನೆಯದಾಗಿ ಅನೇಕ ಎಕರೆಗಳಲ್ಲಿ ಮೂರು ಸಲ ಕೆಲಸ ಮಾಡಲಾಗುತ್ತದೆ (ವರ್ಷಕ್ಕೆ ಮೂರು ಬೆಳೆ). 5 ಜನ ಕೂಲಿಯವರಲ್ಲಿ 3 ಜನಕ್ಕೆ ಕೆಲಸ ದೊರೆತು ಇಬ್ಬರು ಬೇರೆ ಕೂಲಿಗೆ ಸ್ಪರ್ಧಿಸುತ್ತಾ ಅಲೆಯುವಂತಾಗಿದೆ. ಎರಡನೆಯದಾಗಿ, ಉಳಿದ ಮೂವರು. ಈ ಯಂತ್ರವನ್ನು ಉಪಯೋಗಿಸುವುದರ ಮೂಲಕ ಹದಿನೈದು ಜನರು ಮಾಡುವಷ್ಟನ್ನು ಹೆಚ್ಚು ಬೆಳೆಯನ್ನು ಉತ್ಪಾದಿಸಬಹುದು. ಇದೇ ರೀತಿಯ ಹೆಚ್ಚಿನ ಬದಲಾವಣೆಗಳು ಇತರೆ ಇಲಾಖೆಗಳಲ್ಲಿ, ಇದೇ ರೀತಿಯ ಪಾರುಪತ್ಯಗಳ ಮೂಲಕ ರೂಪಿತಗೊಳ್ಳುತ್ತಿವೆ. ಉದಾಹರಣೆಗೆ, ಉಕ್ಕು ಮತ್ತು ಕಬ್ಬಿಣದ ತಯಾರಿಕೆ. ಅದರ ಬೆಳವಣಿಗೆಯು ತುಂಬಾ ಅಗಾಧವಾಗಿದ್ದು ಯಂತ್ರೋಪಕರಣಗಳು ಒಬ್ಬ ಮನುಷ್ಯನನ್ನು ಹನ್ನೆರಡು ಮಂದಿ ಹಿಂದೆ ಸಾಧಿಸಿದಷ್ಟು ಸಾಧಿಸಲು ಈಗ ಶಕ್ತಗೊಳಿಸಿದ್ದರೂ, ನೌಕರರ ಸಂಖ್ಯೆಯು ಬಹಳವಾದ ಹೆಚ್ಚಳ ಕಂಡಿದೆ. ಫಲಿತಾಂಶಗಳಲ್ಲಿ ಒಂದೆಂದರೆ, ಶೀಘ್ರದಲ್ಲೇ ಈ ವ್ಯಾಪಕ ಕಾರ್ಯಗಳ ಸಾಮರ್ಥ್ಯವು ಪ್ರಸ್ತುತ ಅಗಾಧವಾದ ಬೇಡಿಕೆಗಳನ್ನು ಪೂರೈಸುವುದಕ್ಕಿಂತ ಹೆಚ್ಚಾಗಿರುತ್ತದೆ ಮತ್ತು ಬೇಡಿಕೆಗಳನ್ನು ಹೆಚ್ಚಿಸುವ ಬದಲು ಬಹುಶಃ

ಕಡಿಮೆಯಾಗಬಹುದು. ಯಾಕೆಂದರೆ, ಪ್ರಪಂಚವು ರೈಲು ಹಾದಿಯನ್ನು ಪ್ರಸ್ತುತ ಅಗತ್ಯಕ್ಕೂ ಮೀರಿ ಒದಗಿಸುವಲ್ಲಿ ವೇಗವಾಗಿದೆ. ಮತ್ತು ಇವುಗಳ ವಾರ್ಷಿಕ ದುರಸ್ತಿಯನ್ನು ಬಹುಶಃ ಪ್ರಸ್ತುತ ಸಂಸ್ಥೆಗಳಿಂದ ಅರ್ಧ ಸಂಖ್ಯೆಯು ಒದಗಿಸುತ್ತವೆ.

ಈ ರೀತಿಯಲ್ಲಿ ನಾವು ಒಂದು ವಿಚಿತ್ರವಾದ ಪರಿಸ್ಥಿತಿಯ ಸಂಪರ್ಕಕ್ಕೆ ತರಲ್ಪಟ್ಟಿದ್ದೇವೆ. ಇದರಲ್ಲಿ ಅತಿಯಾದ ಉತ್ಪನ್ನವಿದ್ದು, ಸಾಂದರ್ಭಿಕವಾಗಿ ಕಸಬುದಾರರಿಗೂ, ಶ್ರಮಿಕರಿಗೂ ಸೋಮಾರಿತನವುಂಟು ಮಾಡುವುದಕ್ಕೆ ಕಾರಣವಾಗಿದೆ. ಅದೇ ಸಮಯದಲ್ಲಿ ಕೆಲವರಿಗೆ ಉದ್ಯೋಗದ ಕೊರತೆಯುಂಟಾಗಿ, ಅದು ಅಗತ್ಯತೆಗಳು ಮತ್ತು ಐಷಾರಾಮಿಗಳನ್ನು ಸಂಗ್ರಹಿಸಲು ಅನುವು ಮಾಡಿಕೊಡುತ್ತದೆ ಮತ್ತು ಇದರಿಂದಾಗಿ ಉತ್ಪಾದನೆಯನ್ನು ಕೆಲವು ಪ್ರಮಾಣದಲ್ಲಿ ಪರಿಹರಿಸುತ್ತದೆ. ಅಧಿಕ ಉತ್ಪನ್ನ ಮತ್ತು ಉದ್ಯೋಗಗಳ ಕೊರತೆಯ ಧೋರಣೆಯು ಹೆಚ್ಚಾಗಿರುತ್ತದೆ, ಮತ್ತು ಅದಕ್ಕೆ ಯಾವುದಾದರೂ ವಿಧದ ನಿವಾರಾಣೋಪಾಯದ ಕರೆಯುಂಟಾಗುತ್ತದೆ, ಅದನ್ನು ಸಮಾಜದ ವೈದ್ಯರು ಹುಡುಕುತ್ತಾರೆ, ಆದರೆ ಅವುಗಳ ಉಪಯೋಗವನ್ನು ರೋಗಿಗಳು ಪಡೆಯುವುದಿಲ್ಲ.

ಹಾಗಾಗಿ, ಅದೇ ಸಮಯದಲ್ಲಿ (ಕೂಲಿ ಕೆಲಸಗಾರನು ಹೀಗೆ ಮುಂದುವರೆಯುತ್ತಾನೆ) ಸರಬರಾಜು ಬೇಡಿಕೆಯನ್ನು ಮೀರಲು ಪ್ರಾರಂಭಿಸಿದಾಗ ಪೈಪೋಟಿಯು ಬಂಡವಾಳದ ಮತ್ತು ಯಂತ್ರೋಪಕರಣಗಳ ಲಾಭವನ್ನು ಬಹಳವಾಗಿ ಕಡಿಮೆಗೊಳಿಸುತ್ತದೆ ಎಂದು ನಾವು ಗ್ರಹಿಸುತ್ತೇವೆ ಮತ್ತು ಪ್ರಪಂಚದಾದ್ಯಂತ ಶ್ರೀಮಂತರು ತಮ್ಮ ಲಾಭವನ್ನು ಮೊಟಕುಗೊಳಿಸುವುದರ ಮೂಲಕ ಹೆಚ್ಚು ಕಷ್ಟಕ್ಕೀಡಾಗುತ್ತದೆ, ಮತ್ತು ಕೆಲವು ಸಂದರ್ಭಗಳಲ್ಲಿ ಅವರಿಗೆ ಲಾಭದ ಬದಲು ನಿಜವಾದ ನಷ್ಟವನ್ನು ಉಂಟುಮಾಡುತ್ತದೆ, ಆದರೆ ಜನಸಾಮಾನ್ಯರು ಅದರಿಂದ ಬಳಲುತ್ತಿದ್ದಾರೆ ಎನ್ನುವುದಕ್ಕಿಂತ ಹೆಚ್ಚಾಗಿ, ಉತ್ಕರ್ಷ (ಬೆಲೆ ಏರಿಕೆ) ಮತ್ತು ಹಣದುಬ್ಬರದಿಂದ ಹೆಚ್ಚಿನ ಲಾಭ ಪಡೆದ ವರ್ಗವು ಪ್ರತಿಕ್ರಿಯೆಯಲ್ಲಿ ಹೆಚ್ಚು ಬಳಲುತ್ತದೆ ಎಂದು ನಾವು ನಂಬುತ್ತೇವೆ. ಈ ಅಂತ್ಯಕ್ಕೆ, ಮತ್ತು ಈ ಕಾರಣಗಳಿಗಾಗಿ, ಕೂಲಿ ಕೆಲಸಗಾರರು ಮುಂದಣ ಫಲಿತಾಂಶವನ್ನು ಹೊಂದಿಕೊಳ್ಳಲು ಮುಂದುವರೆಯುತ್ತಾರೆ – ಸಾಧ್ಯವಾದರೆ ಶಾಸನದ ಮೂಲಕ ಅಥವಾ ದೇಶದಲ್ಲಿ ಬಲತ್ಕಾರ ಮತ್ತು ನ್ಯಾಯನಿರ್ಲಕ್ಷ್ಯದಿಂದ, ಅಲ್ಲಿ ಯಾವುದೇ ಕಾರಣಕ್ಕೂ ಜನ ಸಮೂಹಗಳ ಧ್ವನಿಯು ಕೇಳಿಸುವುದಿಲ್ಲ ಮತ್ತು ಅವರ ಹಿತಗಳನ್ನು ಸಂರಕ್ಷಿಸಲಾಗುವುದಿಲ್ಲ:

ಕಾರ್ಮಿಕರ ಕೌಶಲ್ಯ ಅಥವಾ ತೀವ್ರತೆಗೆ ಅನುಗುಣವಾಗಿ ಕೂಲಿಯನ್ನು ಕಡಿತಗೊಳಿಸದೆ, ಉತ್ಪನ್ನಗಳನ್ನು ಹೆಚ್ಚಿಸದೆ ಹಾಗೂ ಹೆಚ್ಚಿನ ಕಾರ್ಮಿಕರನ್ನು ನೇಮಿಸಿಕೊಳ್ಳಲು ಮತ್ತು ಮುಂಬರುವ ಉತ್ಪಾದನೆಯ ಮಿತಿಯನ್ನು ಸರಿದೂಗಿಸಲು ಕಾರ್ಮಿಕರ ಸಮಯವನ್ನು ಕಡಿಮೆ ಮಾಡಲು ಪ್ರಸ್ತಾಪಿಸಲಾಗಿದೆ ಮತ್ತು ಅದರಿಂದ ಖರೀದಿಯ ಸಾಧನಗಳೊಂದಿಗೆ ದೊಡ್ಡ ಸಂಖ್ಯೆಯಲ್ಲಿ ಒದಗಿಸುವ ಮೂಲಕ ಮುಂಬರುವ ಅಧಿಕ ಉತ್ಪಾದನೆಯನ್ನು ಹಣದ ಮೇಲಣ ಲಾಭದ ದರವನ್ನು ಮಿತಿಗೊಳಿಸಿ ಪ್ರಸ್ತುತ ಬೆಲೆಗಿಂತ ಅತಿ ಕಡಿಮೆಯಾಗಿ ನಿಗದಿಪಡಿಸುವಂತೆ ಪ್ರಸ್ತಾಪಿಸಲಾಗಿದೆ. ಹೀಗಾಗಿ, ಸಾಲದಾತರು ಮತ್ತು ಸಾಲಪಡೆದುಕೊಳ್ಳುವವರ ಅಥವಾ ಬಡವರ ಬಗ್ಗೆ ಮೃದುಧೋರಣೆಗೆ ಒತ್ತಾಯಿಸಬಹುದಾಗಿದೆ. ಇಲ್ಲವಾದಲ್ಲಿ ಅವರ ಬಂಡವಾಳದ ಆಲಸ್ಯತನ ಅಥವಾ ತುಕ್ಕು ಹಿಡಿಯುವಿಕೆ ಉಂಟಾಗಬಹುದು. ರೈಲು ಮಾರ್ಗಗಳು ಒಂದೋ ಅವರ ಸೇವಕರುಗಳಿಂದ, ಸರ್ಕಾರಿ ನೌಕರರುಗಳಿಂದ ಕಾರ್ಯನಿರ್ವಹಿಸುವ ಜನರ ಆಸ್ತಿಯಾಗಿರಬೇಕು, ಅಥವಾ ಆ ಶಾಸನವು ಅವರ ಸ್ವಾತಂತ್ರ್ಯವನ್ನು, ವೆಚ್ಚ ಮುಂತಾದವುಗಳನ್ನು ನಿರ್ಬಂಧಿಸಬೇಕು ಮತ್ತು ಉತ್ತಮವಾಗಿ ಸಾರ್ವಜನಿಕರ ಸೇವೆ ಮಾಡುವಂತೆ ಅವರ ಕಾರ್ಯನಿರ್ವಹಣೆಯನ್ನು ಒತ್ತಾಯಿಸಬೇಕು. ಈಗಿರುವಂತೆ, ಹಣದಬ್ಬರದ ಬೆಲೆಯಿರುವ ಕಾಲದಲ್ಲಿ ನಿರ್ಮಿಸಿದ ರೈಲುಮಾರ್ಗಗಳು ಅದರ ಬಂಡವಾಳವನ್ನು ಇತರೆ ವ್ಯಾಪಾರ ಇಲಾಖೆಗಳಲ್ಲಿ ಅನುಭವಿಸಿದ ಸಾಮಾನ್ಯ ಕುಂದುವಿಕೆಗೆ ಅನುಗುಣವಾಗಿ ಮೊಟಕುಗೊಳಿಸುವ ಬದಲು ಅದರ ಮೂಲದ ಹೆಚ್ಚಿನ ಬಂಡವಾಳದ ಷೇರುಗಳನ್ನು ಯಾವುದೇ ನಿಜವಾದ ಮೌಲ್ಯವನ್ನು ಕೂಡಿಸದೆ ಎರಡು ಅಥವಾ ಮೂರು ಪಾಲಿನಷ್ಟು ಹೆಚ್ಚಿಸದೆ (ಇದನ್ನು ಸಾಮಾನ್ಯವಾಗಿ ಷೇರುಗಳಿಗೆ ನೀರೆರೆಯುವುದು ಎನ್ನುತ್ತಾರೆ). ಈ ರೀತಿಯಾಗಿ ಮಹಾ ರೈಲು ಮಾರ್ಗ ವ್ಯವಸ್ಥೆಯು ಷೇರುಗಳು ಮತ್ತು ಕರಾರುಪತ್ರದ ಸಾಲಗಳ ಮೇಲೆ ಲಾಭಾಂಶವನ್ನು ನೀಡಲು ಪ್ರಯತ್ನಿಸುತ್ತಿವೆ. ಇವುಗಳು ಸರಾಸರಿ ರೈಲು ಮಾರ್ಗಗಳು ಇಂದು ನಿಜವಾಗಿ ಬೆಲೆಬಾಳುವುದಕ್ಕಿಂತ ಸರಾಸರಿ ನಾಲ್ಕು ಪಟ್ಟು ಹೆಚ್ಚಾಗಿದೆ. ಇದರ ಪರಿಣಾಮವಾಗಿ ಸಾರ್ವಜನಿಕರು ತೊಂದರೆಗೊಳಗಾಗುತ್ತಾರೆ. ರೈತರುಗಳ ಸರಕು ಸಾಗಣೆ ಬಾಡಿಗೆಯ ಮೇಲೆ ಹೆಚ್ಚಿನ ಹೊರೆಬೀಳುತ್ತದೆ, ಕೆಲವೊಮ್ಮೆ ಇದು

ಅವರ ಧಾನ್ಯಗಳನ್ನು ಸೌದೆಗಾಗಿ/ಇಂಧನಕ್ಕಾಗಿ ಸುಟ್ಟುಹಾಕುವುದು ಲಾಭಕರವಾಗಿ ಕಾಣಬಹುದು. ಈ ರೀತಿಯಾಗಿ ರೈತರಿಗೂ ಅನುಕೂಲವಿಲ್ಲದೆ ಜನರಿಗೆ ಆಹಾರದ ಬೆಲೆಯು ಹೆಚ್ಚಾಗಿರುತ್ತದೆ. ಈ ಸಂಗತಿಗೆ ನಿವಾರಣೆಯನ್ನು ಪ್ರಸ್ತಾಪಿಸಲಾಗಿದೆ. ಅದರಿಂದ ರೈಲು ಮಾರ್ಗಗಳು ಅವರ ಷೇರುದಾರರಿಗೆ ಅವರ ಪ್ರಸ್ತುತ ಈಗಾಗಲೇ ನೀಡಲಾಗುತ್ತಿರುವ ಶೇಕಡಾ ನಾಲ್ಕರಷ್ಟು ನೀಡುವಂತೆ, ಶೇಕಡಾ ನಾಲ್ಕರಿಂದ ಏಂಟರಷ್ಟಲ್ಲ. ಅವರ ಪ್ರಸ್ತುತ ಬೆಲೆಯ ಮೂರು ಅಥವಾ ನಾಲ್ಕುಪಟ್ಟು ಅಲ್ಲ, ಒಟ್ಟುಗೂಡಿಸುವ ವ್ಯವಸ್ಥೆಯ ಮೂಲಕ ಮಾಡುವುದರಿಂದ ಸ್ಪರ್ಧೆಯನ್ನು ತಡೆಹಿಡಿಯಬಹುದು.

ಕುಶಲಕರ್ಮಿಗಳು ಹೇಳುವಂತೆ ನೀರು ರೈಲು ಮಾರ್ಗದ ಷೇರುಗಳ (ಕೂಡುನಿಧಿ) ಮತ್ತಿತರ ಷೇರುಗಳುಳ್ಳವರು ಅವರು ತೊಡಗಿಸಿರುವ ಬಂಡವಾಳದ ಮೇಲಿನ ಲಾಭದ ಕಡಿತವು (reduction) ಭಯಾನಕವಾಗಿ ತೋರುತ್ತದೆ ಮತ್ತು ಅವುಗಳು ಸೆಳೆಯುವ ಹಲ್ಲುಗಳಂತೆ ಬರುತ್ತವೆ. ಮತ್ತು ಅವರುಗಳು ಜನರು ತಮಗೆ ಕೊಟ್ಟಿರುವ ಮತದಾನದ ಹಕ್ಕನ್ನು(?) ಉಪಯೋಗಿಸಲು ಮತ್ತು ಅವರಿಂದ ಕಾಲ್ಪನಿಕ ಮೌಲ್ಯಮಾಪಕಗಳ ಆಧಾರದ ಮೇಲೆ ವಿಫುಲವಾದ ಲಾಭವನ್ನು ಹಿಂಡುವದನ್ನು ತಡೆದರೆ ಮತ್ತು ಅವುಗಳಿಂದ ತೀವ್ರವಾಗಿ ಆಕ್ರೋಶಗೊಳ್ಳುವರು ಮತ್ತು ಅವರುಗಳು ಪ್ರತಿಭಟಿಸುವದು ಹೇಗೆಂದು ತಿಳಿದಿರುವರು. ಆದರೆ, ಸಾರ್ವಜನಿಕರು ಅಷ್ಟೊಂದು ದಯಾಪರ ರಾಗಿರುವುದಕ್ಕಾಗಿ ಮತ್ತು ಅವರುಗಳು ಈಗಾಗಲೇ ಪಡಕೊಂಡಿರುವ ಮಿಲಿಯಾಂತರ ಡಾಲರುಗಳನ್ನು ಪುನರ್‌ವಶಮಾಡಿಕೊಳ್ಳುವ ಅಗತ್ಯವಿಲ್ಲದಿರುವುದಕ್ಕಾಗಿ ಕೃತಜ್ಞತೆಯುಳ್ಳವರಾಗಬೇಕೆಂದು ನಾವು ಭಾವಿಸುತ್ತೇವೆ. ಸಮೂಹದ ಜನರಿಗೆ ಈ ಆಶೀರ್ವಾದದಾಯಕ ದಿನದ ಆಶೀರ್ವಾದಗಳನ್ನು ಹೆಚ್ಚು ಸಮನಾಗಿ ಹಂಚಿ ಕೊಳ್ಳಬೇಕೆಂದು ನಾವು ಭಾವಿಸುತ್ತೇವೆ ಮತ್ತು ಹಾಗೆ ಮಾಡುವಲ್ಲಿ ಜನರಿಂದ ಪಡೆದ ಹಣದಿಂದ ಕೊಬ್ಬಿರುವ, ಸಾರ್ವಜನಿಕರಿಂದ ಅಧಿಕಾರವನ್ನು ಪಡಕೊಂಡಿರುವ ಎಲ್ಲಾ ದುರಾಸೆಯ ನಿಗಮ/ಸಂಘ ಸಂಸ್ಥೆಗಳನ್ನು ಹತೋಟಿಯಲ್ಲಿಡಬೇಕು ಮತ್ತು ಕಾನೂನುಗಳ ಮೂಲಕ ಶಾಸನ ರಚಿಸಿ ಸಮಂಜಸವಾದ ದರದಲ್ಲಿ ಸಾರ್ವಜನಿಕ ಸೇವೆಮಾಡುವಂತೆ ಒತ್ತಾಯಿಸಬೇಕು. ಬೇರೆ ಯಾವುದೇ ರೀತಿಯಲ್ಲಿ ಸಮೂಹಗಳಿಗಿರುವ ಈ ಆಶೀರ್ವಾದಗಳನ್ನು ಹೊಂದಿಕೊಳ್ಳಲಾಗದು. ಆದುದರಿಂದ, ರಾಜಧಾನಿಯನ್ನು ಪ್ರತಿನಿಧಿಸುವ ಮಹಾ ಕಾರ್ಪೊರೇಶನ್‌ಗಳು ಹೆಚ್ಚಿನ ಮಟ್ಟದಲ್ಲಿ ಆಶೀರ್ವಾದಕರವೂ ಮತ್ತು ಲಾಭದಾಯಕವೂ ಆಗಿದೆ. ಅವುಗಳ ಲಾಭದ ಅಂಶವನ್ನ ದಾಟುವುದನ್ನು ಮತ್ತು ಜನರ ಮಾಲಿಕರಾಗುವುದನ್ನು ನಾವು ಪ್ರತಿದಿನವೂ ನೋಡುತ್ತೇವೆ ಮತ್ತು ಇವುಗಳನ್ನು ತಡೆಯದೇ ಹೋದಲ್ಲಿ ಅವರುಗಳು ಕೂಲಿ ಕಾರ್ಮಿಕರನ್ನು ದಾರಿದ್ರತೆಗೂ, ಗುಲಾಮತನಕ್ಕೂ ಇಳಿಯುತ್ತಾರೆ. ಹೆಚ್ಚು ಜನರಿಂದ ರಚಿತವಾದ ಕಾರ್ಪೊರೇಶನ್‌ಗಳು ಹೆಚ್ಚು ಕಡಿಮೆ ಸಿರಿವಂತಿಕೆ ಯುಳ್ಳದ್ದಾಗಿರುತ್ತವೆ ಮತ್ತು ತೀವ್ರವಾಗಿ ಅಮೇರಿಕಾದ ಸಾಮಾನ್ಯ ಜನರು, ಗ್ರೇಟ್ ಬ್ರಿಟನ್ ಮತ್ತು ಎಲ್ಲಾ ಯೂರೋಪಿನ ಲಾರ್ಡ್ಸ್‌ಗಳು ಜನಸಮೂಹದೊಡನೆ ಹೊಂದಿರು ವಂಥಾಃ ಸಂಬಂಧಗಳನ್ನೇ ಹೊಂದಿರುತ್ತಾರೆ. ಇಂಥಾಃ ಕಾರ್ಪೋರೇಶನ್‌ಗಳು ಮಾತ್ರವೇ ಹೆಚ್ಚು ಶಕ್ತಿಶಾಲಿ ಯಾಗಿವೆ.

ನಮ್ಮ ಗುರಿಗಳನ್ನು ಸಾಧಿಸಿಕೊಳ್ಳಲು ಕೂಲಿ ಕಾರ್ಮಿಕರನ್ನು ಮುಂದುವರಿಸಲು ನಮಗೆ ಸಂಘ–ಸಂಸ್ಥೆಗಳ ಅಗತ್ಯತೆ ಇದೆ. ನಮಗೆ ಜನಸಾಮಾನ್ಯರ ಸಹಕಾರ ಬೇಕು. ಇಲ್ಲವಾದಲ್ಲಿ ನಾವು ಎಂದಿಗೂ ಅಂಥಾಃ ಪ್ರಬಲ ಶಕ್ತಿಯವರ, ಪ್ರಭಾವಶಾಲಿಗಳ ಮುಂದೆ ಏನನ್ನೂ ಸಾಧಿಸಲಾಗದು. ನಾವು ಒಕ್ಕೂಟ ಮುಂತಾದ ಸಂಘಗಳನ್ನು ರಚಿಸಿಕೊಂಡಿರುವಾಗ, ನಮ್ಮ ಗುರಿಯು ಯಾವುದೇ ವರ್ಗದ ವಿರುದ್ಧವಾಗಿ ಅರಾಜಕತ್ವ ಅಥವಾ ಅನ್ಯಾಯವೆಂಬುದಾಗಿ ಅರ್ಥಮಾಡಿಕೊಳ್ಳಬಾರದು. ಜನಸಾಮಾನ್ಯರಾದ ನಾವು, ಕೇವಲ ನಮ್ಮ ಸ್ವಂತ ಹಕ್ಕುಗಳನ್ನು ಮತ್ತು ನಮ್ಮ ಮಕ್ಕಳ ಹಕ್ಕುಗಳನ್ನು ಕಾಪಾಡಿಕೊಳ್ಳಲು ಶ್ರೀಮಂತಿಕೆ ಮತ್ತು ಅಧಿಕಾರದಿಂದ ನಮ್ಮನ್ನು ತುಳಿಯಲಪೇಕ್ಷಿಸುವವರಿಗೆ ನ್ಯಾಯ ಸಮ್ಮತವಾದ ಎಲ್ಲೆಯನ್ನು ಹಾಕಲಿಚ್ಛಿಸುತ್ತೇವೆ. ಅದೇ ಸಂಪತ್ತು ಮತ್ತು ಶಕ್ತಿಯನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿದರೆ ಮತ್ತು ಮಿತಿಗೊಳಿಸಿದರೆ ಬಹುಶಃ ಎಲ್ಲರಿಗೂ ಸಾಮಾನ್ಯ ಆಶೀರ್ವಾದಗಳನ್ನುಂಟು ಮಾಡಬಹುದಾಗಿವೆ. ಒಂದೇ ಪದದಲ್ಲಿ ನಾವು "ಇತರರು ನಿಮಗೆ ಏನು ಮಾಡಬೇಕೆಂದು ಬಯಸುತ್ತೀರೋ, ಅದನ್ನೇ ನೀವು ಅವರಿಗೆ ಮಾಡಿರಿ" (Do unto others as you would that they should do it to you) ಎಂಬ ಸುವರ್ಣ ನಿಯಮವನ್ನು ನಾವು ಜಾರಿಗೊಳಿಸಬೇಕು ಎಂದು ತಿಳಿಸುತ್ತಾರೆ.

ಅಂಥಾಃ ಸೌಮ್ಯವಾದ ಮತ್ತು ಸಮಂಜಸವಾದ ವಿಧಾನಗಳು ಯಶಸ್ವಿಯಾದರೆ ಸಂಬಂಧಪಟ್ಟ ಎಲ್ಲರಿಗೂ ಸಂತೋಷವಾಗುತ್ತದೆ. ಶ್ರೀಮಂತರು ತಮ್ಮ ಪ್ರಸ್ತುತ ಗಳಿಕೆಯಲ್ಲಿ ತೃಪ್ತರಾದರೆ ಮತ್ತು ಜನಸಮೂಹದೊಡನೆ

ಸಾಮಾನ್ಯವಾಗಿ ಸಹಕರಿಸುವವರಾದರೆ, ಎಲ್ಲಾ ವರ್ಗಗಳ ಶಾಶ್ವತವಾದ ಅಭಿವೃದ್ಧಿಯುಂಟಾದರೆ, ಮತ್ತು ಕೂಲಿ ಕಾರ್ಮಿಕರು ತಮ್ಮ ನ್ಯಾಯಸಮ್ಮತವಾದ ಬೇಡಿಕೆಗಳೊಂದಿಗೆ ತೃಪ್ತಿಗೊಳ್ಳುವುದಾದರೆ: ಪ್ರೀತಿ ಮತ್ತು ನ್ಯಾಯದ ಸುವರ್ಣ ನಿಯಮವು ಈ ರೀತಿಯಲ್ಲಿ ಅನುಷ್ಠಾನದಲ್ಲಿ ತೊಡಗುವುದಾದರೆ ಸಂಬಂಧ ಪಟ್ಟವರಿಗೆಲ್ಲಾ ಸಂತೋಷವುಂಟಾಗುವುದು. ಆದರೆ ಜನರು ತಮ್ಮ ಪ್ರಸ್ತುತ ಪರಿಸ್ಥಿತಿಯಲ್ಲಿ ಈ ನಿಯಮವನ್ನು ಯಾವುದೇ ಒತ್ತಾಯವಿಲ್ಲದೆ ಪಾಲಿಸುವುದಿಲ್ಲ. ಲೋಕದ ಕಸುಬುದಾರರಲ್ಲಿ ಕೆಲವರು ಈ ರೀತಿಯಾಗಿ ಸೌಮ್ಯದಿಂದಿರಬಹುದಾದರೂ ಮತ್ತು, ತಮ್ಮ ಮನೋಭಾವನೆಗಳಲ್ಲಿ ನ್ಯಾಯದಿಂದಿರಬಹುದಾದರೂ ಹೆಚ್ಚಿನವರು ಹಾಗಿರುವುದಿಲ್ಲ, ಆದರೆ ಅತಿರೇಕವುಳ್ಳವರೂ, ಅನ್ಯಾಯಗಾರರೂ, ಮತ್ತು ತಮ್ಮ ಮನೋಭಾವಗಳಲ್ಲಿ, ಬೇಡಿಕೆಗಳಲ್ಲಿ ಯಾವ ವಿವೇಚನೆಯೂ ಇಲ್ಲದೆ ಸೊಕ್ಕಿನವರಾಗಿರುತ್ತಾರೆ. ಬಂಡವಾಳಶಾಹಿಗಳ ಪಾಲಿಗಿರುವ ಪ್ರತಿಯೊಂದು ರಿಯಾಯಿತಿಯೂ ಅಂಥಾಃ ಬೇಡಿಕೆಗಳನ್ನು, ಉದ್ದೇಶಗಳು ಸೇರಿಕೊಳ್ಳುತ್ತದೆ. ಮತ್ತು ಬಡವರಾದ ಅಜ್ಞಾನಿಗಳ ದುರಹಂಕಾರ ಮತ್ತು ನಿಯಮವು ದುಪ್ಪಟ್ಟು ತೀವ್ರವಾಗಿರುತ್ತವೆ ಎಂಬದನ್ನು ಅನುಭವವುಳ್ಳ ಎಲ್ಲರೂ ಬಲ್ಲವರಾಗಿದ್ದಾರೆ. ಸಂಪತ್ತುಳ್ಳವರಲ್ಲಿಯೂ ಕೆಲವರು ಕೂಲಿ ವರ್ಗದೊಂದಿಗೆ ಸಹಾನುಭೂತಿಯುಳ್ಳವರಾಗಿರುತ್ತಾರೆ. ಮತ್ತು ಅವರ ಈ ಸಹಾನುಭೂತಿಯನ್ನು ಕಾರ್ಯಗತಗೊಳಿಸುವ ಸಲುವಾಗಿ ಅಗತ್ಯ ಸುಧಾರಣೆಗಳು ಕ್ರಮೇಣವಾಗಿ ಉಂಟಾಗಲು ಬೇಕಾದ ಪರಿಣಾಮಕಾರಿ ವ್ಯವಸ್ಥೆಗಳನ್ನು ಮಾಡತೊಡಗಿದ್ದಾರೆ. ಆದರೆ ಅವರುಗಳು ಅಲ್ಪ ಸಂಖ್ಯೆಯಲ್ಲಿದ್ದಾರೆ ಮತ್ತು ಕಾರ್ಪೊರೇಶನ್‌ಗಳ ಮೇಲೆ ಮತ್ತು ಹೆಚ್ಚಾಗಿ ತಮ್ಮ ಖಾಸಗಿ ವ್ಯಾಪಾರದಲ್ಲಿ ಪ್ರಭಾವಬೀರುವಷ್ಟು ಬಲವಿಲ್ಲದವರಾಗಿದ್ದಾರೆ. ಅವರುಗಳು ವರ್ತಕರೂ ಅಥವಾ ಉತ್ಪಾದಿಸುವವರೂ ಆಗಿದ್ದರೆ, ಅವರುಗಳು ದುಡಿತದ ಸಮಯವನ್ನು ಕಡಿಮೆಗೊಳಿಸಲಾರರು ಅಥವಾ ಅವರ ನೌಕರರುಗಳ ವೇತನವನ್ನು ಹೆಚ್ಚಿಸಲಾರರು. ಏಕೆಂದರೆ ಪೈಪೋಟಿದಾರರು ಅವುಗಳನ್ನು ಅಗ್ಗವಾಗಿ (ಕಡಿಮೆ ಬೆಲೆಗೆ) ಮಾಡುತ್ತಾರೆ ಮತ್ತು ತಮಗೆ ತಾವೇ ಆರ್ಥಿಕ ವಿಪತ್ತನ್ನು ತಂದುಕೊಳ್ಳುತ್ತಾರೆ. ಅವರಿಗೆ ಸಾಲಕೊಟ್ಟವರು ಮತ್ತು ಅವರ ನೌಕರರುಗಳು ಇದನ್ನು ಅನುಸರಿಸುತ್ತಾರೆ.

ಹೀಗೆ ನಾವು "ಯೆಹೋವನ ದಿನ"ದ ಮಹಾ ವಿಪತ್ತಿನ ಸ್ವಾಭಾವಿಕ ಕಾರಣಗಳನ್ನು ಕಂಡು ಕೊಳ್ಳಬಹುದು. ಅವರ ಸ್ವಂತ ಹಿತಾಸಕ್ತಿಯನ್ನು ಹೊರತುಪಡಿಸಿ ಎಲ್ಲರಿಗೂ ಸ್ವಾರ್ಥತೆ ಮತ್ತು ಕುರುಡುತನ ಇವುಗಳು ಎರಡೂ ಕಡೆಗಳಲ್ಲಿ ಸಮಸ್ಯೆಯ ಬಹುಪಾಲು ಜನರನ್ನು ನಿಯಂತ್ರಿಸುತ್ತವೆ. ಕೂಲಿ ಕಾರ್ಮಿಕರು ಸಂಘಟಿತಗೊಂಡು ತಮ್ಮ ಹಿತಾಸಕ್ತಿಯನ್ನು ಕ್ರೋಢೀಕರಿಸಿಕೊಳ್ಳುತ್ತಾರೆ. ಆದರೆ, ಸ್ವಾರ್ಥತೆಯು ಈ ಅನ್ಯೋನ್ಯತೆಯನ್ನು ಹಾಳುಮಾಡುತ್ತದೆ. ಪ್ರತಿಯೊಬ್ಬರೂ ಮುಖ್ಯವಾಗಿ ಆ ವಿಚಾರಸರಣಿಯಿಂದ ಪ್ರಚೋದನೆ ಹೊಂದಿಕೊಂಡು, ಆ ದಿಕ್ಕಿನಲ್ಲಿ ಒಳಸಂಚು ಮತ್ತು ಪಿತೂರಿಗಳನ್ನು ಮಾಡುತ್ತಾರೆ. ಬಹುತೇಕ ಜನರು ತಿಳಿಗೇಡಿಗಳು ಮತ್ತು ಅಹಂಕಾರಿಗಳು ಆಗಿದ್ದು ನಿಯಂತ್ರಣವನ್ನು ಹೊಂದಿಕೊಳ್ಳುತ್ತಾರೆ ಮತ್ತು ಉತ್ತಮವರ್ಗವು ತಮ್ಮ ಬುದ್ಧಿವಂತಿಕೆಯು ಸಂಘಟಿಸಿದ್ದನ್ನು ನಿಗ್ರಹಿಸುವ ಶಕ್ತಿಯಿಲ್ಲದ್ದಾಗಿರುತ್ತದೆ. ಬಂಡವಾಳಶಾಹಿಗಳು ತಾವು ಎಷ್ಟು ಹೆಚ್ಚಾಗಿ ಉತ್ಪಾದಿಸುತ್ತದೆಯೋ ಅಷ್ಟರಮಟ್ಟಿಗೆ ಬೇಡಿಕೆ ಯುಂಟಾಗುತ್ತದೆ (demand) ಎಂದು ಮನವರಿಕೆ ಮಾಡಿಕೊಳ್ಳುತ್ತಾರೆ ಮತ್ತು ಎಲ್ಲಾ ಬೇಡಿಕೆಗಳನ್ನು ತಡೆಯಲು ನಿರ್ಧರಿಸುತ್ತಾರೆ, ಬಂಡಾಯವುಂಟಾಗುತ್ತದೆ; ಮತ್ತು ಹುದುವಾದ ಎಚ್ಚರಿಕೆ ಮತ್ತು ಅಪನಂಬಿಕೆಯಲ್ಲಿ ಸಾರ್ವಜನಿಕ ಮತ್ತು ಖಾಸಗಿ ಸಾಹಸೋದ್ಯಮಗಳಿಂದ ಬಂಡವಾಳವನ್ನು ಹಿಂಪಡೆಯಲಾಗುವುದು, ವ್ಯಾಪಾರದ ಖಿನ್ನತೆ ಮತ್ತು ಆರ್ಥಿಕ ಭೀತಿಯು ಇದನ್ನು ಅನುಸರಿಸುತ್ತದೆ. ಈ ರೀತಿಯಲ್ಲಿ ಸಹಸ್ರಾರು ಮಂದಿ ಉದ್ಯೋಗದಿಂದ ಹೊರಹಾಕಲ್ಪಡುವವರು ಈ ರೀತಿಯಲ್ಲಿ ಅಂತಿಮವಾಗಿ ಹತಾಶರಾಗುತ್ತಾರೆ. ಆಗ ಕಾನೂನು ಮತ್ತು ಕ್ರಮಗಳು ಅಳಿಸಿಹೋಗುತ್ತವೆ – ಆ ಬಿರುಗಾಳಿಯುಳ್ಳ ಸಮುದ್ರದಲ್ಲಿ ಪರ್ವತಗಳು ನುಂಗಲ್ಪಡುವುವು, ಈ ರೀತಿಯಾಗಿ ಸಾಮಾಜಿಕ ಭೂಮಿಯು ಕರಗಿಹೋಗುತ್ತದೆ ಮತ್ತು ಸರ್ಕಾರಿ ಸ್ವರ್ಗಗಳು (ಸಭೆ ಮತ್ತು ರಾಜ್ಯ) ಹಾದು ಹೋಗುವುವು. ಸಕಲ ಅಹಂಕಾರಿಗಳೂ, ದುಷ್ಕರ್ಮಿಗಳೂ ಕೊಳೆಯಂತಾಗುವರು. ಆಗ ಬಲಶಾಲಿಗಳು ಬಹಳವಾಗಿ ಅಳುವರು, ಐಶ್ವರ್ಯವಂತರು ಅರಚುವರು, ಎಲ್ಲಾ ಜನಸಮೂಹದ ಮೇಲೆ ಭೀತಿ ಮತ್ತು ಸಂಕಟವು ಎರಗುವುದು. ಈಗಲೂ ಸಹಾ, ಬುದ್ಧಿವಂತರು, ದೂರದೃಷ್ಟಿಯುಳ್ಳವರು ಲೋಕದ ಮೇಲೆ ಬರಲಿರುವ ಈ ಸಂಗತಿಗಳನ್ನು ನೋಡುವಾಗ ಕರ್ತನು ಹೇಳಿದಂತೆ (ಲೂಕ 21:26) ತಮ್ಮ ಹೃದಯವು ಸೋತುಹೋಗುವ ಅನುಭವಹೊಂದುವರು. ಪವಿತ್ರ ಗ್ರಂಥಗಳು ನಮಗೆ ತೋರಿಸುವುದನೇಂದರೆ, ಈ ಸಾಮಾನ್ಯ ಬಿರುಕಿನಲ್ಲಿ ಹೆಸರು ಮಾತ್ರದ ಸಭೆಯು (ಎಲ್ಲಾ ಪಂಗಡಗಳನ್ನೂ

ಒಳಗೊಂಡಂತೆ) ಹೆಚ್ಚು ಹೆಚ್ಚಾಗಿ ಸರ್ಕಾರಗಳ ಕಡೆಗೆ ಸೆಳೆಯಲ್ಪಡುವುವು ಮತ್ತು ಹಣವಂತರು ಜನರ ಮೇಲಿನ ತಮ್ಮ ಹೆಚ್ಚಿನ ಪ್ರಭಾವವನ್ನು ಕಳಕೊಳ್ಳುವರು ಮತ್ತು ಅಂತಿಮವಾಗಿ ಸರ್ಕಾರಗಳೊಂದಿಗೆ ಬಿದ್ದುಹೋಗುವರು. ಈ ರೀತಿಯಲ್ಲಿ ಬೆಂಕಿಯಲ್ಲಿ ಆಕಾಶದ ಶಕ್ತಿಗಳು (ಕ್ರೈಸ್ತರ ಧಾರ್ಮಿಕ ಆಡಳಿತ) ದೊಡ್ಡ ಘರ್ಜನೆಗಳೊಂದಿಗೆ ಇಲ್ಲದೆ ಹೋಗುವುವು.

ಈ ಎಲ್ಲಾ ತೊಂದರೆಗಳೂ, ಮಾನವರು ತಮ್ಮ ಯೋಜನೆಯನ್ನು ಹಾಕಿಕೊಂಡು ಎಲ್ಲವನ್ನು ಚೆಂದವಾದ ರೀತಿಯಲ್ಲಿ ಬುದ್ಧಿವಂತಿಕೆಯಿಂದ ವ್ಯವಸ್ಥೆಗೊಳಿಸಿದರೂ, ತಿಳಿಗೇಡಿತನ ಮತ್ತು ಸ್ವಾರ್ಥತೆಯು ಸವಾರಿಮಾಡುತ್ತಾ ನಿಯಂತ್ರಗೊಳಿಸುತ್ತಿರುವ ತನಕ, ಅವರ ಎಲ್ಲಾ ಯೋಜನೆಗಳು ವ್ಯರ್ಥವಾಗುತ್ತವೆ ಎಂಬುದನ್ನು ಜಗತ್ತು ಗ್ರಹಿಸಿಕೊಳ್ಳುವಂತೆ ಮಾಡುತ್ತವೆ. ಇದು ಕಷ್ಟವನ್ನು ಸರಿಪಡಿಸುವ ಸಂಭವನೀಯ ಮಾರ್ಗವು ಒಂದು ಬಲವಾದ ನೀತಿಯುತ ರಾಜ್ಯದ ಸ್ಥಾಪನೆ ಮಾತ್ರವೇ ಆಗಿದೆ ಎಂಬುದನ್ನು ಮನದಟ್ಟುಪಡಿಸುತ್ತದೆ. ಅದು ಎಲ್ಲಾ ವರ್ಗದವರನ್ನೂ ನಿಗ್ರಹಪಡಿಸುತ್ತದೆ ಮತ್ತು ನೀತಿವಂತಿಕೆಯ ವಿಚಾರಸರಣಿಯನ್ನು ಜಾರಿ ಗೊಳಿಸುತ್ತದೆ. ಕ್ರಮೇಣವಾಗಿ ಮಾನವರ ಕಠಿಣ ಹೃದಯಗಳು ಅನುಕೂಲಕರ ಪ್ರಭಾವದಲ್ಲಿ ದೇವರ ಮೂಲಸ್ವರೂಪಕ್ಕೆ ಸ್ಥಳಾವಕಾಶಮಾಡಿಕೊಡುತ್ತದೆ. ದೇವರು ತಾನೇ ಇದನ್ನೇ ಕ್ರಿಸ್ತನ ಸಹಸ್ರಮಾನದ ಆಳ್ವಿಕೆಯ ಮೂಲಕ ಎಲ್ಲರಿಗೂ ನೆರವೇರಿಸುತ್ತೇನೆಂದು ವಾಗ್ದಾನಮಾಡಿದ್ದಾನೆ, ಇದನ್ನು ಯೆಹೋವನು ಸಂಕಟದ ದಿನಗಳಲ್ಲಿ ಶಿಕ್ಷಿಸುವ ಮತ್ತು ಪಾಠ ಕಲಿಸುವುದರ ಮೂಲಕ ಪರಿಚಯಿಸುವವನಾಗಿದ್ದಾನೆ – (ಯೆಹೆಜ್ಕೇಲ 11:19; 36:25,46; ಯೆರೆಮೀಯ 31 :29–34; ಚೆಫನ್ಯ 3:9; ಕೀರ್ತನೆ 46:8–10).

ಈ ಸಂಕಟದ ದಿನವು ಸ್ವಾಭಾವಿಕವಾಗಿ ಮತ್ತು ನಿವಾರಿಸಲಾಗದ ಮಾನವನ ಪತನ, ಸ್ವಾರ್ಥದ ಪರಿಸ್ಥಿತಿಯ ಕಾರಣ ಅನಿವಾರ್ಯವಾಗಿ ಬರುವುದಾದರೂ, ಅದನ್ನು ಕರ್ತನು ಪೂರ್ಣವಾಗಿ ಮುಂಗಂಡವನಾಗಿ ಘೋಷಿಸಿದನು. ಆತನು ತನ್ನ ನಿಯಮಗಳು ಮತ್ತು ಸೂಚನೆಗಳನ್ನು ಎಲ್ಲರೂ ನಿರ್ಲಕ್ಷಿಸುತ್ತಾರೆ ಎಂದು ಮುಂದಾಗಿಯೇ ತಿಳಿದಿದ್ದನು. ಆದರೆ ಕೆಲವರು ಅದರ ಅನುಭವ ಮತ್ತು ಕಡ್ಡಾಯವು ವಿಧೇಯತೆಗೆ ಒತ್ತಾಯ ಮಾಡುವತನಕ ಮಾತ್ರ ಎಂದು ತಿಳಿದಿದ್ದನು. ಆದಾಗ್ಯೂ ಬರಲಿರುವ ಸಂಗತಿಯ ಪರಿಸ್ಥಿತಿಯನ್ನು ಗ್ರಹಿಸುವವರೆಲ್ಲರೂ ತಮ್ಮ ವ್ಯವಹಾರಗಳನ್ನು ಅದೇ ಪ್ರಕಾರವಾಗಿ ಕ್ರಮಪಡಿಸಿಕೊಳ್ಳುವರು ಎಂದು ಮುಂಗಂಡಿದ್ದಾನೆ. ಹೀಗಾಗಿ ಎಲ್ಲಾ ಸೌಮ್ಯಸ್ವಭಾವದವರಿಗೂ ಲೋಕದ ದೀನರೂ, ಮತ್ತು ಕ್ರಿಸ್ತನ ದೇಹವೂ ಆದವರಿಗೆ ನಾವು ಹೇಳುವುದೇನೆಂದರೆ :– "ಯೆಹೋವನ ನಿಯಮವನ್ನು ಕೈಕೊಂಡ ಲೋಕದ ದೀನರೇ, ನೀವೆಲ್ಲರೂ ಯೆಹೋವನನ್ನು ಆಶ್ರಯಿಸಿರಿ, ಸದ್ಧರ್ಮವನ್ನು ಅಭ್ಯಾಸಿಸಿರಿ, ದೈನ್ಯವನ್ನು ಹೊಂದಿಕೊಳ್ಳುವಿರಿ. ಯೆಹೋವನ ಸಿಟ್ಟಿನ ದಿನದಲ್ಲಿ ಒಂದುವೇಳೆ ಮರೆಯಾಗುವಿರಿ" (ಚೆಫನ್ಯ 2:3). ಯಾರೊಬ್ಬರೂ ಸಂಕಟದಿಂದ ಸಂಪೂರ್ಣವಾಗಿ ತಪ್ಪಿಸಿಕೊಳ್ಳಲಾರರು, ಆದರೆ ನೀತಿವಂತಿಕೆಯನ್ನು ಹುಡುಕುವವರು ಮತ್ತು ದೀನತೆಯಲ್ಲಿ ಸಂತೋಷಿಸುವವರು ಇತರರಿಗಿಂತ ಹೆಚ್ಚಿನ ಪ್ರಯೋಜನಗಳನ್ನು ಹೊಂದಿಕೊಳ್ಳುತ್ತಾರೆ. ಅವರ ಜೀವನ ಶೈಲಿ, ಅವರ ಆಲೋಚನೆಗಳ ಮತ್ತು ಕ್ರಿಯೆಗಳ ಪದ್ಧತಿಗಳು, ಮಾತ್ರವಲ್ಲದೆ ಸರಿಯಾದುದರ ಬಗ್ಗೆ ಅವರ ಸಹಾನುಭೂತಿಗಳು, ಅದು ಮಾತ್ರವಲ್ಲದೆ, ಈ ತೊಂದರೆಯ ಬಗ್ಗೆ ಮತ್ತು ಅದರ ಪರಿಣಾಮಗಳ ಬಗ್ಗೆ ಸತ್ಯವೇದದ ವಿವರಣೆಗಳನ್ನು ಗ್ರಹಿಸಿಕೊಳ್ಳುವಂತೆ ಮಾಡುತ್ತವೆ. ಅಲ್ಲದೇ ಸಂಕಟಗಳ ಬಗ್ಗೆ ಹಾಗೂ ಅದರ ಫಲಿತಾಂಶಗಳ ಬಗ್ಗೆ ಸತ್ಯವೇದದ ಹೇಳಿಕೆಯನ್ನು ತಿಳಿದುಕೊಂಡಿರುತ್ತಾರೆ. ಇವುಗಳೆಲ್ಲವೂ ಅವರು ಇತರರಿಗಿಂತ ವಿಶೇಷವಾಗಿ ಕಿರುಕುಳದ ಮತ್ತು ಅನಿಷ್ಟಗಳಿಂದ ಕಡಿಮೆ ಕಷ್ಟಪಡುವಂತೆ ಮಾಡುತ್ತವೆ.

ಕರ್ತನ ದಿನದ ಈ ಘಟನೆಗಳ ಧೋರಣೆಯು ಪರಿಶುದ್ಧ ಗ್ರಂಥಗಳ ಮುಖೇನ ಮಾಹಿತಿಯಿಲ್ಲದವರಿಗೆ ಬಹಳ ವಂಚನಕರವಾಗಿದೆ. ಅದು ಬಹಳ ಹಿಂದಿನದೀರ್ಘಕಾಲದ ಮತ್ತು ಅದರ ನಿಧಾನಗತಿಯ ಕಾರ್ಯಾಚರಣೆಗೆ ಹೋಲಿಸುವಾಗ ಬೆಂಕಿಯಲ್ಲಿ ಉರಿಯುವ ಹೊಟ್ಟಿನಂತೆ ಫಕ್ಕನೇ ಬರುವುದಾಗಿದೆ (ಚೆಫನ್ಯ 2:2). ಆದರೆ ಕೆಲವರು ತಪ್ಪಾಗಿ ಊಹಿಸುವಂತೆ ನಿರ್ಮಲವಾದ ಆಕಾಶದಲ್ಲಿ ಇದ್ದಕ್ಕಿದ್ದಂತೆ ಫಕ್ಕನೇ ಹೊಳೆಯುವ ಮಿಂಚಿನಂತಲ್ಲ. ಅವರುಗಳು ಕರ್ತನ ದಿನದ ಬಗ್ಗೆ ಬರೆದ ಎಲ್ಲಾ ಸಂಗತಿಗಳೂ 24 ಘಂಟೆಗಳ ದಿನದಲ್ಲಿ ನೆರವೇರುತ್ತದೆಂದು ಪೂರ್ವನಿರೀಕ್ಷೆ ಮಾಡುತ್ತಾರೆ. ಅದು "ರಾತ್ರಿಯಲ್ಲಿ ಕಳ್ಳನು ಬರುವಂತೆ ಬರುತ್ತದೆ" ಎಂಬುದರ ಅರ್ಥ ಅದರ ಬರುವಿಕೆಯ ವಿಧಾನವು ರಹಸ್ಯವಾಗಿರುತ್ತದೆ ಮತ್ತು ಸಾಮಾನ್ಯವಾಗಿ ಲೋಕದ ಗಮನಕ್ಕೆ ಬಾರದೇ ಇರುವುದು ಎಂಬುದಾಗಿದೆ. ಈ ದಿನದ ಉಪದ್ರವಗಳು ಕಟಿಬೇನೆಯಂತಿದೆ. ಅವುಗಳು ಪದೇ ಪದೇ ತೀವ್ರವಾದ

ಸೆಳೆತಗಳ ಸರಣಿಯನ್ನೊಳಗೊಂಡಿದ್ದು ದಿನವು ಹತ್ತಿರವಾದಂತೆ ಕಡೆಯುದರ ತನಕ ಹೆಚ್ಚು ಗಂಭೀರವಾಗುತ್ತಾ ಹೋಗುತ್ತವೆ. ಹಾಗೆಂದು ಅಪೋಸ್ತಲನು ಸೂಚಿಸುವವನಾಗಿ – ಅವರ ಮೇಲೆ ನಾಶನವು ಗರ್ಭಿಣಿಗೆ ಪ್ರಸವವೇದನೆ ಬರುವ ಪ್ರಕಾರ ಬರುವುದು" (1 ಥೆಸ. 5:3) ಎಂದಿದ್ದಾನೆ. ಉಪಶಮನವು ನೂತನ ಕ್ರಮದ ನೂತನ ಆಕಾಶಗಳ ಹುಟ್ಟುವಿಕೆಯಿಂದ (ಕ್ರಿಸ್ತನ ಆತ್ಮೀಕ ನಿಯಂತ್ರಣದಿಂದ) ಮತ್ತು ನೂತನ ಭೂಲೋಕದಿಂದ (ಮರು ಸಂಘಟಿತ ಸಮಾಜದಿಂದ) ಮಾತ್ರವೇ ಉಂಟಾಗುತ್ತದೆ. "ಅವುಗಳಲ್ಲಿ ನೀತಿಯು ವಾಸವಾಗಿರುವುದು" (2 ಪೇತ್ರ 3:10,13) – ಅದರಲ್ಲಿ ಅಧಿಕಾರ ಮತ್ತು ಸ್ವಾರ್ಥತೆಯ ಬದಲಾಗಿ ನ್ಯಾಯ ಮತ್ತು ಪ್ರೀತಿಯ ಕಾನೂನಾಗಿರುವುದು.

ಪ್ರತಿಯೊಂದು ಸಮಯದಲ್ಲಿಯೂ ಹೊಸ ಯುಗದ ಪ್ರಸವವೇದನೆಗಳು ಪ್ರಸ್ತುತವಿರುವ ರಾಜಕೀಯದ ಮೇಲೆ ಬಂದಾಗ, ಆಕೆಯ ಬಲ ಮತ್ತು ಧೈರ್ಯವು ಕಡಿಮೆಯಾಗಿಯೂ ಕಂಡುಬರುತ್ತದೆ ಮತ್ತು ನೋವು ತೀವ್ರತರವಾಗಿಯೂ ಕಂಡುಬರುತ್ತದೆ. ಸಮಾಜದ ಎಲ್ಲಾ ವೈದ್ಯರುಗಳೂ (ರಾಜಕೀಯ ಅರ್ಥಶಾಸ್ತ್ರಜ್ಞರು) ಆಕೆಯ ಬಿಡುಗಡೆಗೆ ಮತ್ತು ಬುದ್ಧಿವಂತಿಕೆಯಿಂದ ಅನಿವಾರ್ಯ ಹುಟ್ಟಿನ ಕ್ರಮವನ್ನು ನಿರ್ದೇಶಿಸುವಂತೆ – ಘಟನೆಯ ಮಾರ್ಗವನ್ನು ಕ್ರಮೇಣವಾಗಿ ಸಿದ್ಧಪಡಿಸಲು ಸಹಾಯ ಮಾಡುವರು. ಅವರು ಬಯಸಿದರೂ ಅದನ್ನು ತಪ್ಪಿಸಲು ಸಾಧ್ಯವಿಲ್ಲ. ಯಾಕೆಂದರೆ ದೇವರು ಅದು ಕಾರ್ಯರೂಪಕ್ಕೆ ಸಂಭವಿಸಬೇಕೆಂದು ನಿರ್ಣಯಿಸಿದ್ದಾನೆ. ಸಮಾಜದ ಅನೇಕ ವೈದ್ಯರುಗಳು ನಿಜವಾದ ಅನಾರೋಗ್ಯದ ಬಗ್ಗೆ, ಪ್ರಕರಣದ ಅಗತ್ಯತೆ ಮತ್ತು ತುರ್ತುಪರಿಸ್ಥಿತಿಯ ಬಗ್ಗೆ ತಿಳುವಳಿಕೆಯಿಲ್ಲದವರಾಗಿದ್ದಾರೆ. ಅವರುಗಳು ದಮನಕಾರಿ ಕ್ರಮಗಳನ್ನು ಕೈಗೊಳ್ಳುತ್ತಾರೆ. ತೊಂದರೆಯ ಪ್ರತಿಯೊಂದು ಸಂಕಟದ ಉಲ್ಬಣಾವಸ್ಥೆಯು ಹಾದುಹೋಗುವಾಗ, ಪ್ರತಿರೋಧಕ ಉಪಕರಣಗಳನ್ನು ಬಲಪಡಿಸಲು ಇವುಗಳು ಇದರ ಲಾಭವನ್ನು ಪಡೆದುಕೊಳ್ಳುತ್ತವೆ ಮತ್ತು ಅಲ್ಲಿ ಸಂಕಟವು ಹೆಚ್ಚುತ್ತದೆ. ಅವರುಗಳು ಜನನವನ್ನು ದೀರ್ಘಕಾಲ ವಿಳಂಬ ಮಾಡದೇ ಇರುವಾಗ, ಅವರ ದುಷ್ಕೃತ್ಯಗಳು ಅವರ ರೋಗಿಯ ಸಾವನ್ನು ತ್ವರಿತಗೊಳಿಸುತ್ತದೆ. ಯಾಕೆಂದರೆ ಹೊಸದನ್ನು ಹೊರ ತರುವ ಶ್ರಮದಲ್ಲಿ ಹಳೆಯ ಕ್ರಮವು ಸತ್ತುಹೋಗುತ್ತದೆ.

ಅಪೋಸ್ತಲನು ಸಲಹೆ ಮಾಡಿರುವ ಬಲತ್ಕಾರದ ಚಿತ್ರಣವನ್ನು ಬದಿಗಿರಿಸಿ ಸರಳವಾಗಿ ಹೇಳಬೇಕೆಂದರೆ – ಬಂಡವಾಳ ಮತ್ತು ಯಾಂತ್ರಿಕತೆಯ ಬಿಗಿಹಿಡಿತದಿಂದ ಸಮೂಹವನ್ನು ಬಿಡುಗಡೆ ಮಾಡುವ ಪ್ರಯತ್ನಗಳು ಅಪಕ್ವವಾಗಿದೆ; ಯೋಜನೆಗಳು ಮತ್ತು ವ್ಯವಸ್ಥೆಗಳು ಅಪೂರ್ಣವಾಗಿವೆ ಮತ್ತು ಸಾಕಷ್ಟಿಲ್ಲ, ಯಾಕೆಂದರೆ ಕಾಲದಿಂದ ಕಾಲಕ್ಕೆ ಅವರು ತಮ್ಮ ಮಾರ್ಗವನ್ನು ಬಲವಂತಪಡಿಸುವರು ಮತ್ತು ಅವರಿಗೆ ತುಂಬಾ ಚಿಕ್ಕದಾಗಿ ಬೆಳೆಯುತ್ತಿದೆ ಎಂದು ಕಂಡುಬರುವ "ಪೂರೈಕೆ ಮತ್ತು ಬೇಡಿಕೆಯ" ಪಟ್ಟಿಯನ್ನು ಮತ್ತು ಅದರ ಮಿತಿಯನ್ನು ಭೇಧಿಸುವರು. ಪ್ರತಿಯೊಂದು ನಿಷ್ಫಲವಾದ ಪ್ರಯತ್ನವೂ ಬಂಡವಾಳಶಾಹಿಯ ನೂತನ ಕ್ರಮ ಸಂಗತಿಗಳನ್ನು ಅದರ ಪ್ರಸ್ತುತ ಮಿತಿಯೊಳಗೆ ಇಟ್ಟುಕೊಳ್ಳುವ ಅದರ ಸಾಮರ್ಥ್ಯದ ಬಗ್ಗೆ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ. ಅದು ಸಂಘಟನೆಯ ಮತ್ತು ಆಡಳಿತಗಳ ಪ್ರಸ್ತುತ ನಿಗ್ರಹ ಶಕ್ತಿಯು ಅದರ ತೀವ್ರ ಮಿತಿಯನ್ನು ತಲುಪುವವರೆಗೆ, ಸಾಮಾಜಿಕ ಜೀವಿಗಳ ಬಳ್ಳಿಯು ಮುರಿದುಬೀಳುತ್ತದೆ, ಕಾನೂನು ಮತ್ತು ಸುವ್ಯವಸ್ಥೆ ಗತಿಸುತ್ತದೆ, ಮತ್ತು ವ್ಯಾಪಕ ಅರಾಜಕತೆಯು ಪ್ರವಾದಿಗಳು ಮುನ್ಸೂಚನೆ ನೀಡಿರುವ ಸಂಕಟಗಳನ್ನು ತರುತ್ತದೆ. "ಒಂದು ರಾಷ್ಟ್ರ ಉಂಟಾದಂದಿನಿಂದ ಇಂದಿನವರೆಗೆ ಆಗಿರಲಿಲ್ಲ" – "ಮುಂದೆಂದೂ ಆಗುವುದಿಲ್ಲ" ಎಂಬ ದೇವರ ಭರವಸೆಗಾಗಿ ಧನ್ಯವಾದಗಳು,

ಐಗುಪ್ತದಿಂದ ಇಸ್ರಾಯೇಲ್ಯರ ಬಿಡುಗಡೆ ಮತ್ತು ಐಗುಪ್ತರ ಮೇಲೆ ಬಂದೊದಗಿದ ಎಲ್ಲಾ ಪಿಡುಗುಗಳು ಇವುಗಳು, ಬರಲಿರುವ ಈ ಲೋಕದ ವಿಮೋಚನೆಯನ್ನು ಮೋಶೆಯ ಪ್ರತಿರೂಪನಾಗಿ ತೋರಿಬಂದ ಮೋಶೆಗಿಂತ ಶ್ರೇಷ್ಠನಾದವನ ಮೂಲಕ ನೆರವೇರುವುದನ್ನು ವಿವರಿಸುವಂತೆ ಕಂಡುಬರುತ್ತದೆ. ಅದು ಸೈತಾನನಿಂದ ಮತ್ತು ಆತನು ಮಾನವರನ್ನು ಪಾಪ ಮತ್ತಿತರ ದೋಷಗಳಿಂದ ಬಂಧಿಸಲು ರೂಪಿಸಿದ ಎಲ್ಲಾ ಸಂಸ್ಥೆಗಳಿಂದ ಬಿಡುಗಡೆಯಾಗಿದೆ. ಐಗುಪ್ತರಿಗೆ ಬಂದ ಬಾಧೆಗಳು ಅವುಗಳನ್ನು ತೆಗೆದುಹಾಕಿದ ನಂತರ ಕಠಿಣ ಪರಿಣಾಮಗಳನ್ನು ಉಂಟುಮಾಡಿದಂತೆಯೇ, ಈ ಕರ್ತನ ದಿನದ ನೋವುಗಳಿಂದ ದೊರೆಯುವ ತಾತ್ಕಾಲಿಕ ಬಿಡುಗಡೆಯು ಕೆಲವರನ್ನು ಕಠಿಣಗೊಳಿಸುವ ಉದ್ದೇಶ ಹೊಂದಿದೆ ಮತ್ತು ಐಗುಪ್ತರು ಇಸ್ರಾಯೇಲ್ಯರಿಗೆ ಹೇಳಿದಂತೆ ಅವರು ಬಡವರಿಗೆ "ನೀವು ಮೈಗಳ್ಳರು, ಆದುದರಿಂದ ಅತೃಪ್ತರಾಗಿದ್ದೀರಿ!, ಬಹುಶಃ ಅವರಂತೆ ಹೊರೆಯನ್ನು ಹೆಚ್ಚಿಸಲು ಪ್ರಯತ್ನ ಮಾಡುತಿದ್ದೀರಿ" (ವಿಮೋ. 5:4–23) ಎಂದು ಹೇಳುತ್ತಾರೆ. ಆದರೆ ಅಂತ್ಯದಲ್ಲಿ ಅಂಥವರು, ಕಡೇ ಬಾಧೆಯ ರಾತ್ರಿಯಲ್ಲಿ ಫರೋಹನು ಮಾಡಿದಂತೆ ಅವರುಗಳು ತಮ್ಮನ್ನು ಹೆಚ್ಚು

ವಿನಯಶೀಲರಾಗಿ ಮತ್ತು ಬುದ್ಧಿವಂತಿಕೆಯಿಂದ ನಡೆಸಿಕೊಳ್ಳಬಹುದು ಎಂದು ಇಚ್ಛಿಸುತ್ತಾರೆ (ವಿಮೋ. 12:30–33). ಈ ಸಾದೃಶ್ಯವನ್ನು ಮುಂದೆ ಗುರುತಿಸುವಂತೆ, ಇದರ ಕಡೆಯ ಮತ್ತು ನಂತರದಲ್ಲಿ ಮತ್ತಷ್ಟು ಹೋಲಿಕೆಯನ್ನು ಗುರುತಿಸಲು, ಸ್ವಾಮಿಯ ಈ ದಿನದ ಸಂಕಟಗಳು "ಕಡೇ ಏಳು ಉಪದ್ರವಗಳು" ಎಂದು ಕರೆಯಲಾಗುತ್ತದೆ ಮತ್ತು ಇವುಗಳಲ್ಲಿ ಕೊನೆಯವರೆಗೂ ದೊಡ್ಡ ಭೂಕಂಪ (ಕ್ರಾಂತಿ) ಉಂಟಾಗಿ ಇದರಲ್ಲಿ ಪ್ರತಿಯೊಂದು ಪರ್ವತಗಳು (ಸಾಮ್ರಾಜ್ಯಗಳು) ಕಣ್ಮರೆಯಾಗುತ್ತವೆ ಎಂಬುದನ್ನು ಮನಸ್ಸಿಗೆ ತಂದುಕೊಳ್ಳಬೇಕಾಗುತ್ತದೆ (ಪ್ರಕಟನೆ 16:17–20).

ಈ ಸಂಕಟದ ದಿನದ ಬಗ್ಗೆ ಉಲ್ಲೇಖಿಸುವ ಮತ್ತೊಂದು ಆಲೋಚನೆ ಏನೆಂದರೆ, ಅದು ಸೂಕ್ತ ಸಮಯದಲ್ಲಿ ಬಂದಿದೆ – ದೇವರ ಉಚಿತ ಸಮಯದಲ್ಲಿ. ಈ ಕಾರ್ಯದ ಬಗೆಗಿನ ಮುಂದಿನ ಸಂಪುಟದಲ್ಲಿ, ಹಳೆ ಒಡಂಬಡಿಕೆಯ ಪ್ರವಾದಿಗಳ ನ್ಯಾಯವಿಧಿಗಳ ಸಾಕ್ಷ್ಯಗಳನ್ನು ಆಧಾರದೊಡನೆ ಒದಗಿಸಿದೆ, ಮಾತ್ರವಲ್ಲದೆ ನೂತನ ಒಡಂಬಡಿಕೆಯ ಯೇಸು ಮತ್ತು ಅಪೋಸ್ತಲರ ಪ್ರವಾದನೆಗಳನ್ನು ಕೂಡಿಸಲಾಗಿದೆ. ಇವುಗಳು ಸ್ಪಷ್ಟವಾಗಿ ಮತ್ತು ತಪ್ಪಿಲ್ಲದೆ ಈ ವಿಪತ್ತಿನ ದಿನದ ಬಗ್ಗೆ ಕಾಲಗಣನೆಯ ಪ್ರಕಾರ ಮೆಸ್ಸೀಯನ ಭವ್ಯವಾದ ಸಹಸ್ರಮಾನ ಕಾಲದ ಆಳ್ವಿಕೆಯ ಪ್ರಾರಂಭದಲ್ಲಿ ನೇಮಿಸಲಾಗಿದೆ ಎಂದು ಸ್ಪಷ್ಟವಾಗಿ ತೋರಿಸುತ್ತದೆ. ಸಹಸ್ರಮಾನದ ಯುಗದಲ್ಲಿ ಬರಲಿರುವ ಮರುಸ್ಥಾಪನೆಯ ಕೆಲಸಕ್ಕೆ ಈ ಅಗತ್ಯವಾದ ಸಿದ್ಧತೆಗೆ ತ್ವರೆಗೊಳಿಸುತ್ತದೆ.

ಕೇಡಿನ ಆರು ಸಾವಿರ ವರ್ಷಗಳ ಮಧ್ಯಂತರದ ದುಷ್ಟ ಅವಧಿಯಲ್ಲಿ, ಮತ್ತು ಕ್ರಿಸ್ತನ ನೀತಿವಂತಿಕೆಯ ಮತ್ತು ಪ್ರಬಲವಾದ ಸರ್ಕಾರದ ಸ್ಥಾಪನೆ ನೇಮಿತ ಕಾಲವು ಬರುವವರೆಗೆ, ಪ್ರಸ್ತುತ ಕಾರ್ಮಿಕ ಉಳಿತಾಯ ಯಂತ್ರೋಪಕರಣಗಳ ಹಿಂದಿನ ಅಭಿವೃದ್ಧಿಯ ಮೂಲಕ ಅಥವಾ ಬೇರೆಯದಾಗಿ ಹೆಚ್ಚು ನಿಷ್ಕ್ರಿಯ ಸಮಯವನ್ನು ಅವರಿಗೆ ನೀಡಲಾಗಿದ್ದರೆ ಅದು ಪತನಗೊಂಡ ಮಾನವರಿಗೆ ಸಕಾರಾತ್ಮಕವಾದ ಹಾನಿಯ ಸಮಯವಾಗಿರುತ್ತಿತ್ತು. ಈ ಅನುಭವದಿಂದ "Idleness is the mother of vice" (ಆಲಸ್ಯವು ದುರ್ಗುಣದ ತಾಯಿಯಾಗಿದೆ) ಎಂಬ ಗಾದೆ ಹುಟ್ಟಿದೆ. ಈ ರೀತಿಯಲ್ಲಿ, "ನೀನು ಮಣ್ಣಿಗೆ ಸೇರುವ ತನಕ ಬೆವರಿಡುತ್ತಾ ಬೇಕಾದ ಆಹಾರವನ್ನು ಸಂಪಾದಿಸಬೇಕು" (ಆದಿ. 3:19) ಎಂಬುವ ದೇವರ ಆಜ್ಞೆಯನ್ನು ಒಪ್ಪಿಕೊಳ್ಳುವುದಾಗಿದೆ. ಎಲ್ಲವೂ ದೇವರ ವ್ಯವಸ್ಥೆಯಾಗಿರುವಂತೆ, ಅದು ಪರೋಪಕಾರವುಳ್ಳದ್ದೂ, ವಿವೇಕವಾದುದೂ ಆಗಿದ್ದು, ಸೃಷ್ಟಿಗಳ ಅಂತಿಮ ಒಳಿತಿಗಾಗಿಯೇ ಅದೆ. ನಮ್ಮ ಕರ್ತನ ದಿನದ ವಿಪತ್ತು, ನಾವೀಗಾಗಲೇ ನೋಡಿದಂತೆ ಕೂಡುತ್ತಾ ಬರುತ್ತಿದ್ದು ದೇವರ ವ್ಯವಸ್ಥೆಯ ಜ್ಞಾನವನ್ನು ದೃಢಪಡಿಸುವುದಾಗಿದೆ. ಯಾಕೆಂದರೆ, ನಾವೀಗಾಗಲೇ ನೋಡಿದಂತೆ, ಇದು ಕಾರ್ಮಿಕ – ಉಳಿತಾಯ ಯಾಂತ್ರಿಕತೆಯಿಂದ ಅತಿಯಾದ ಉತ್ಪನ್ನಗಳ ಫಲವಾಗಿದೆ ಮತ್ತು ಪ್ರತಿಯೊಬ್ಬರ ಕಡೆಯಿಂದ ಸ್ವಾರ್ಥದ ಕಾರಣದಿಂದಾಗಿ ಸಮಾಜದ ವಿವಿಧ ಅಂಶಗಳ ಹೊಸ ಅಸಮಾಧಾನಗಳಿಗೆ ಹೊಂದಿಕೊಳ್ಳಲು ಅಸಮರ್ಥತೆಯುಳ್ಳದ್ದಾಗಿದೆ.

ಸಂಗತಿಗಳ ನೂತನ ಸಮಯವನ್ನು ಪರಿಚಯಿಸಲು ಇದು ದೇವರ ಉಚಿತ ಸಮಯವಾಗಿದೆ ಎಂಬುದನ್ನು ಸಾಬೀತುಪಡಿಸುವಲ್ಲಿ ಉತ್ತರಿಸಲಾಗದ ಒಂದು ವಾದವೆಂದರೆ ಆತನು ಅಜ್ಞಾನದ ಪರದೆಯನ್ನು ಎತ್ತುತ್ತಿದ್ದಾನೆ ಮತ್ತು ಮುಂತಿಳಿಸಿದ್ದಕ್ಕೆ ಸರಿಯಾಗಿ ಮತ್ತು ಮುಂತಿಳಿಸಿದ ಫಲಿತಾಂಶಕ್ಕನುಸಾರವಾಗಿ ಜ್ಞಾನದ ಬೆಳಕನ್ನೂ ಅನ್ವೇಷಣೆಯನ್ನೂ ಮಾನವ ಜಾತಿಯ ಮೇಲೆ ಕ್ರಮೇಣವಾಗಿ ಅನುಮತಿಸುತ್ತಿದ್ದಾನೆ (ದಾನಿಯೇಲ 12:4,1). ಈ ಜ್ಞಾನವು ಬೇಗನೇ ಬರುವುದಾಗಿದ್ದರೆ, ತೊಂದರೆಯೂ ಬೇಗನೇ ಬರುತ್ತಿತ್ತು; ಸಮಾಜವು ಬಿರುಗಾಳಿ ಮತ್ತು ಕರಗುವಿಕೆಯ ನಂತರ ಪುನಃ ಸಂಘಟಿಸಲ್ಪಟ್ಟರೂ ಅದು ನೂತನ ಭೂಮಿ (ಸಾಮಾಜಿಕ ವ್ಯವಸ್ಥೆ)ಯಾಗುತ್ತಿರಲಿಲ್ಲ, ಯಾಕೆಂದರೆ ನೂತನ ಭೂಮಿಯಲ್ಲಿ ನೀತಿವಂತಿಕೆಯು ಮೇಲುಗೈ ಸಾಧಿಸುತ್ತದೆ ಮತ್ತು ವಾಸಿಸುತ್ತದೆ, ಆದರೆ ಸಂಘಟಿಸಲ್ಪಟ್ಟ ಈ ನೂತನ ಭೂಮಿ ಅಥವಾ ವ್ಯವಸ್ಥೆಯಲ್ಲಿ ಪಾಪ ಮತ್ತು ದುರ್ಗುಣವು ಇಂದಿಗಿಂತ ಹೆಚ್ಚಾಗಿ ಇರುತ್ತದೆ. ಕಾರ್ಮಿಕ–ಉಳಿತಾಯದ ಯಾಂತ್ರಿಕತೆಯ ಲಾಭಗಳ ಸರಿಸಮವಾದ ವಿಭಜನೆಯು ಆ ಸಮಯದಲ್ಲಿ ಕಡಿಮೆಯಾದ ದುಡಿತದ ತಾಸುಗಳನ್ನು ತರುತ್ತದೆ. ಈ ರೀತಿಯಾಗಿ ಮೂಲದ ರಕ್ಷಣೋಪಾಯದಿಂದ ಬಿಡುಗಡೆಗೊಳಿಸುತ್ತದೆ. ಆಗ ಪತನಗೊಂಡ ಮಾನವನು ಆತನ ವಿರೂಪಗೊಳಿಸಿದ ಇಚ್ಛೆಗಳಿಂದ, ತನ್ನ ಸ್ವಾತಂತ್ರ್ಯ ಮತ್ತು ಸಮಯವನ್ನು ಮಾನಸಿಕ, ನೈತಿಕ ಮತ್ತು ಭೌತಿಕ ಅಭಿವೃದ್ಧಿಗೆ ಉಪಯೋಗಿಸದೆ, ಬದಲಾಗಿ, ಹಿಂದಿನ ಚರಿತ್ರೆಯು ಸಾಬೀತುಪಡಿಸುವಂತೆ, ಧೋರಣೆಯು ವಿಷಯ ಲಂಪಟತೆ ಮತ್ತು ದುರ್ಗುಣಗಳ ಕಡೆಗೆ ಇರುತ್ತಿತ್ತು.

ಪರದೆಯನ್ನು ಭಾಗಶಃವಾಗಿ ಎತ್ತುವುದು ಈಗ ಮನುಕುಲಕ್ಕೆ ಸಾವಿರಾರು ಅನುಕೂಲತೆಗಳನ್ನು ಸಿದ್ಧಪಡಿಸುತ್ತದೆ ಮತ್ತು ಈ ರೀತಿಯಾಗಿ

ಪುನರ್‌ವಶಕಾಲದ ಆರಂಭದಿಂದಲೂ, ಶಿಕ್ಷಣಕ್ಕೆ ಮತ್ತು ನೈತಿಕ ಮತ್ತು ಭೌತಿಕ ಬೆಳವಣಿಗೆಗೆ ಸಮಯ ಒದಗಿಸುವುದು ಮಾತ್ರವಲ್ಲದೆ ಕಾಲಕಾಲಕ್ಕೆ ಸಮಾಧಿಯಿಂದ ಎಬ್ಬಿಸಲ್ಪಡುವ ತಂಡಗಳ ಆಹಾರ ಮತ್ತು ಬಟ್ಟೆ ನೀಡುವಿಕೆಯ ಸಿದ್ಧತೆಯು ಪ್ರಾರಂಭವಾಗುತ್ತದೆ. ಇದಕ್ಕೂ ಹೆಚ್ಚಾಗಿ, ಅದು ಸಂಕಟದ ಸಮಯವನ್ನು ಅದು ಮಾನವರ ಅನುಕೂಲತೆಗಾಗಿ ಜರುಗುವ ಸಮಯವನ್ನು ಗೊತ್ತುಪಡಿಸುತ್ತದೆ, ಅದರಲ್ಲಿ ಅದು ಅವರಿಗೆ ತಾವು ತಮ್ಮನ್ನು ಪಾಲಿಸಿಕೊಳ್ಳಲು ಅಸಮರ್ಥರು ಎಂಬ ಪಾಠವನ್ನು ನೀಡುತ್ತದೆ, ಸಹಸ್ರಮಾನದ ಉದಯದಲ್ಲಿ, ಕರ್ತನ ನೇಮಕದಂತೆ ಎಲ್ಲರನ್ನೂ ವಿಮೋಚಿಸಿದಾತನು ಅವರನ್ನು ಕಬ್ಬಿಣದ ದಂಡದ ಪ್ರಬಲವಾದ ನಿಯಮಗಳಿಂದ ಮತ್ತು ಪೂರ್ಣ ತಿಳುವಳಿಕೆ ಮತ್ತು ಸಹಾಯಕತೆಯಿಂದ ಆಶೀರ್ವದಿಸುವುದನ್ನು ಪ್ರಾರಂಭಿಸುವನು. ಅದರಿಂದ ಅವರು ಮೂಲ ಪರಿಪೂರ್ಣತೆಗೆ ಮತ್ತು ನಿತ್ಯ ಜೀವಕ್ಕೆ ಪುನರ್‌ವಶಗೊಳ್ಳುತ್ತಾರೆ.

## ಸಂತರುಗಳ ಕರ್ತವ್ಯ ಮತ್ತು ಸವಲತ್ತುಗಳು
## Duty and Privileges of the Saints

ಈ ಸಂಕಟದ ಸಮಯದಲ್ಲಿ ಸಂತರುಗಳ ಕರ್ತವ್ಯದ ಬಗ್ಗೆ ಮತ್ತು ಈಗ ಪ್ರಧಾನ್ಯತೆಗೆ ಬರುತ್ತಿರುವ ಎರಡು ವಿರೋಧಿ ವರ್ಗಗಳ ಬಗ್ಗೆ, ಅವರ ಸರಿಯಾದ ವರ್ತನೆಯ ಬಗ್ಗೆ ಒಂದು ಪ್ರಮುಖ ಪ್ರಶ್ನೆಯು ಉದ್ಭವಿಸುತ್ತದೆ. ಯಾಕೆಂದರೆ ಕೆಲವು ಸಂತರುಗಳು ಈ ಸುಡುವ ಸಮಯದಲ್ಲಿ ಕನಿಷ್ಠ ಭಾಗದಲ್ಲಿಯಾದರೂ ಇನ್ನೂ ಮಾಂಸದೇಹಧಾರಿಗಳಾಗಿರುವ ಸಾಧ್ಯತೆ ಇರುತ್ತದೆ ಎಂದು ತೋರುತ್ತದೆ. ಆದಾಗ್ಯೂ ಅವರ ಸ್ಥಾನವು ಹೇಗೂ ಇತರರುಗಳಿಗಿಂತ ಭಿನ್ನವಾಗಿರುತ್ತದೆ, ಅದರಲ್ಲಿ ಅವರು (ಅವರ ಆಹಾರ ಮತ್ತು ನೀರು ಖಚಿತವಾಗಿರುತ್ತವೆ ಎಂದು ವಾಗ್ದಾನಪಡಿಸಿದಾಗ್ಯೂ) ಏನೂ ಹಾನಿಯಾಗದು ಎಂಬಂತೆ ಅಷ್ಟು ಅದ್ಭುತವಾಗಿ ರಕ್ಷಿಸಲ್ಪಡುವುದಿಲ್ಲ. ಆದರೆ ವಾಸ್ತವವಾಗಿ, ಕರ್ತನ ವಾಕ್ಯದಿಂದ ಆದೇಶಿಸಲ್ಪಟ್ಟವರಾಗಿ, ಅವರುಗಳು ಅದೇ ಆತಂಕವನ್ನು ಮತ್ತು ಜಗತ್ತನ್ನು ಆವರಿಸಿರುವ ಆಶಾರಹಿತವಾದ ಅಂಜಿಕೆಯನ್ನು ಅನುಭವಿಸುವುದಿಲ್ಲ. ಸಂಕಟಗಳು, ಸಮಗ್ರ ಲೋಕದ ಆಶೀರ್ವಾದಕ್ಕಾಗಿರುವ ದೇವರ ಯೋಜನೆಗೆ ಅನುಸಾರವಾದ ಸಿದ್ಧತೆಯಾಗಿದೆ ಎಂದು ಅವರು ಗ್ರಹಿಸುತ್ತಾರೆ, ಅವರು ಅದರಲ್ಲೆಲ್ಲಾ ಸಂತೋಷವಾಗಿಯೂ, ಸಮಾಧಾನದಿಂದಲೂ ಇರುತ್ತಾರೆ. ಇದನ್ನು ಕೀರ್ತನೆ 91 ಮತ್ತು ಯೆಶಾಯ 33:2–14, 15–24ರಲ್ಲಿ ಬಲಯುಕ್ತವಾಗಿ ಹೇಳಲಾಗಿದೆ.

ಈ ರೀತಿಯಾಗಿ ದೈವೀಕ ಭರವಸೆಗಳಿಂದ ಸಾಂತ್ವನ ಮತ್ತು ಆಶೀರ್ವಾದ ಪಡೆದ ದೇವರ ಸಂತರುಗಳ ಮೊದಲನೆಯ ಕರ್ತವ್ಯವೆಂದರೆ, ಈ ಲೋಕದಲ್ಲಿ ಪ್ರಚಲಿತದಲ್ಲಿರುವ ಸಂಕಟ ಮತ್ತು ಅತೃಪ್ತಿಯ ಮಧ್ಯದಲ್ಲಿಯೂ, ಅವರು ಆ ಕಷ್ಟದಲ್ಲಿ ಪಾಲುತೆಗೆದುಕೊಂಡು ಅದನ್ನು ಅನುಭವಿಸುತ್ತಿರುವಾಗಲೂ ಅವರುಗಳು ಆಶಾಭಾವನೆಯುಳ್ಳವರೂ, ಸಂತೋಷಪಡುವವರೂ ಮತ್ತು ಸದಾಕಾಲದಲ್ಲಿಯೂ ದೇವರ ವಾಕ್ಯದಲ್ಲಿ ಮುಂತಿಳಿಸಲ್ಪಟ್ಟಿರುವ ಮಹಿಮಾಯುತ ಫಲಿತಾಂಶದ ದೃಷ್ಟಿಯಲ್ಲಿ ಉಲ್ಲಾಸದಿಂದಿರುವವರೂ ಆಗಿದ್ದಾರೆಂದು ಈ ಲೋಕದವರು ನೋಡುವಂತೆ ಮಾಡುವುದು.

ಅಪೋಸ್ತಲನು "ಸಂತುಷ್ಟಿಸಹಿತವಾದ ಭಕ್ತಿಯು ದೊಡ್ಡ ಲಾಭವೇ ಸರಿ" (1 ತಿಮೋ. 6:6) ಎಂದು ಬರೆದಿದ್ದಾನೆ. ಮತ್ತು ಇದು ಯಾವಾಗಲೂ ಸತ್ಯವಾಗಿದ್ದರೂ, ಕರ್ತನ ದಿನದಲ್ಲಿ ಅತೃಪ್ತಿಯು ಲೋಕದ ಎಲ್ಲಾ ವರ್ಗಗಳಲ್ಲಿ ಮುಖ್ಯವ್ಯಾಧಿಯಾಗಿರುವಾಗ ಇದಕ್ಕೆ ಎರಡರಷ್ಟು ಶಕ್ತಿಯಿರುತ್ತದೆ. ಇದಕ್ಕೆ ಸಂತರುಗಳು ಗಮನಾರ್ಹವಾಗಿ ಹೊರತಾಗಿರುತ್ತಾರೆ. ಅತೃಪ್ತಿ ಇಷ್ಟೊಂದು ವಿಶಾಲವಾಗಿ ಹರಡಿರುವ ಸಮಯವು ಹಿಂದೆಂದೂ ಇದ್ದಿಲ್ಲ; ಆದಾಗ್ಯೂ ಮಾನವರು ಇಷ್ಟೊಂದು ಅನುಗ್ರಹಗಳನ್ನೂ ಆಶೀರ್ವಾದಗಳನ್ನು ಅನುಭವಿಸಿದ ಕಾಲವೂ ಇದ್ದಿಲ್ಲ. ನಾವು ಎಲ್ಲಿ ನೋಡಿದರೂ, ಐಶ್ವರ್ಯವಂತರ ಅರಮನೆಗಳಲ್ಲಾಗಲೀ, ಅನುಕೂಲತೆಗಳು ಮತ್ತು ವೈಭವಗಳು ಪರಿಪೂರ್ಣವಾಗಿದೆ, ಈ ಬಗ್ಗೆ ಸೊಲೊಮೋನನು ಸಹಾ ತನ್ನೆಲ್ಲಾ ವೈಭವಗಳೊಡನೆಯೂ ಬಹುತೇಕ ಯಾವುದನ್ನೂ ಅರಿಯದವನಾಗಿದ್ದರೂ, ಅಥವಾ ನಾವು ಮಿತವ್ಯಯದ ಮತ್ತು ಮಿತ ಸಂಭಾವನೆಯುಳ್ಳ ಕಾರ್ಮಿಕನ ಅನುಕೂಲಕರ ಮನೆಯನ್ನು ಆತನ ಇಚ್ಛೆ, ಅನುಕೂಲತೆ, ಕಲೆ ಮತ್ತು ವೈಭವ ಇವುಗಳ ಸಾಕ್ಷ್ಯಗಳೊಡನೆ ನೋಡುವಾಗ, ನಾವು ಪ್ರಸ್ತುತವು ಎಲ್ಲಾ ವಿಧದಲ್ಲಿಯೂ ಸೃಷ್ಟಿಯಿಂದೀಚೆಗೆ ಬೇರೆ ಎಲ್ಲಾ ಉದಾರ

ಒದಗಿಸುವಿಕೆಯನ್ನು ಮೀರಿರುವುದನ್ನು ನೋಡಬಹುದು, ಎಷ್ಟೋ ಹೆಚ್ಚಾಗಿ; ಆದಾಗ್ಯೂ ಜನರು ಅಸಂತೋಷವುಳ್ಳವರೂ ಮತ್ತು ಅತೃಪ್ತಿಯುಳ್ಳವರೂ ಆಗಿರುತ್ತಾರೆ. ಸತ್ಯ ಸಂಗತಿ ಏನೆಂದರೆ, ಒಬ್ಬ ಸ್ವಾರ್ಥಿಯ ನೀತಿಭ್ರಷ್ಟ ಹೃದಯದ ಬಯಕೆಗಳಿಗೆ ಮಿತಿಯಿಲ್ಲ. ಸ್ವಾರ್ಥತೆಯು ಎಲ್ಲರನ್ನೂ ತನ್ನ ವಶಕ್ಕೆ ತೆಗೆದುಕೊಂಡಿದೆ. ನಾವು ನೋಡುವಂತೆ, ಸಮಗ್ರ ಪ್ರಪಂಚದವರು ಹುಚ್ಚುತನದಿಂದ ಪ್ರಚೋದಿತರಾಗಿ ಓಡುತ್ತಾ ಸಂಪತ್ತಿನ ಹಿಂದೆ ಆತುರತೆಯಿಂದ ಭದ್ರವಾಗಿ ಹಿಡಿಯುವುದನ್ನು ನಾವು ನೋಡುತ್ತೇವೆ. ಕೆಲವರು ಮಾತ್ರವೇ ಇದರಲ್ಲಿ ಜಯಶಾಲಿಗಳಾಗುತ್ತಾರೆ, ಉಳಿದವರು ತಾವು ಅದೃಷ್ಟಶಾಲಿಗಳಲ್ಲದ ಕಾರಣ ಅಸೂಯೆಪಡುವವರೂ, ಮುಂಗೋಪವುಳ್ಳವರೂ ಆಗುತ್ತಾರೆ ಮತ್ತು ಅವರೆಲ್ಲರೂ ಹಿಂದಿನ ಯಾವುದೇ ಸಮಯಕ್ಕಿಂತ ಹೆಚ್ಚು ಅತೃಪ್ತರೂ ಮತ್ತು ಸುಖವಿಲ್ಲದವರೂ ಆಗಿರುತ್ತಾರೆ – ಹಿಂದೆಂದೂ ಇಲ್ಲದಷ್ಟು ಹೆಚ್ಚಾಗಿ ಆದರೆ ಸಂತರುಗಳು ಈ ಹೋರಾಟದಲ್ಲಿ ಯಾವುದೇ ಪಾತ್ರವನ್ನೂ ವಹಿಸಬಾರದು.

ಆತನ ಪ್ರತಿಷ್ಠಿತ ಪ್ರತಿಜ್ಞೆಯು ಆತನ ಉನ್ನತವಾದ, ಪರಲೋಕದ ಪ್ರತಿಫಲಕ್ಕಾಗಿ ಹೋರಾಡಿ ಮತ್ತು ಗ್ರಹಿಸಲು ಓಡಬೇಕೆಂಬುದೇ. ಹಾಗಾಗಿ ಅವಶ್ಯವಾದವುಗಳನ್ನು ಮತ್ತು ಯೋಗ್ಯವಾದವುಗಳನ್ನು ಒದಗಿಸುವುದನ್ನು ಹೊರತುಪಡಿಸಿ ಆತನ ಲೌಕಿಕ ಆಶೆಗಳನ್ನು ತ್ಯಜಿಸಿ, ಲೋಕದ ವಸ್ತುಗಳಿಗಾಗಿ ಶ್ರಮಿಸದೆ, ನಮ್ಮ ಪ್ರಭುವು ಮತ್ತು ಅಪೋಸ್ತಲರು ತೋರಿದ ಮಾರ್ಗ ಮತ್ತು ಮಾದರಿಯಂತೆ ಆ ಕ್ರಮಗಳಿಗೆ ಲಕ್ಷ್ಯಕೊಡುತ್ತಾನೆ. ಅವರಲ್ಲಿ ಮಹತ್ವಾಕಾಂಕ್ಷೆ ಇಲ್ಲ ಎಂಬುದರಿಂದಲ್ಲ, ಆದರೆ ಅವರ ಮಹತ್ವಾಕಾಂಕ್ಷೆಯು ಪರಲೋಕದ ಕಡೆಗೆ ತಿರುಗಿರುತ್ತದೆ ಮತ್ತು ಪರಲೋಕದಲ್ಲಿ ತಮ್ಮ ನಿಧಿಯನ್ನು ಕೂಡಿಸಿ ದೇವ ದೃಷ್ಟಿಯಲ್ಲಿ ಸಿರಿವಂತರಾಗಿರಲು ಪ್ರಯತ್ನಿಸುತ್ತಾರೆ. ಈ ದೃಷ್ಟಿಯಲ್ಲಿ ಮತ್ತು ದೇವರವಾಕ್ಯದಲ್ಲಿ ಪ್ರಕಟಿಸಿರುವ ಆತನ ಯೋಜನೆಯ ಬಗ್ಗೆ ಅವರ ಜ್ಞಾನದಲ್ಲಿ ಅವರುಗಳು ದೇವರು ಒದಗಿಸುವ ಯಾವುದೇ ಐಹಿಕ ರೀತಿಯೊಂದಿಗೆ ಸಂತುಷ್ಟಿಯನ್ನು ಹೊಂದಿದ್ದಾರೆ. ಇವರುಗಳು ಸಂತೋಷವಾಗಿ ಹೀಗೆ ಹಾಡುತ್ತಾರೆ:–

*Content , whatever lot I see,*
*Since 'tis God's hand leadeth me"*

ನನ್ನ ಪಾಲು ಎಷ್ಟೇ ಇರಲಿ, ಸಂತೃಪ್ತಿಕರವಾಗಿದೆ
ಏಕೆಂದರೆ ದೇವರ ಕರವು ನನ್ನನ್ನು ನಡೆಸುತ್ತಿದೆ

ಆದರೆ ಅಯ್ಯೋ! ದೇವರ ಮಕ್ಕಳೆಲ್ಲರೂ ಈ ಸ್ಥಾನವನ್ನು ಅಲಂಕರಿಸುವುದಿಲ್ಲ. ಅನೇಕರು ಲೋಕದಲ್ಲಿ ಪ್ರಚಲಿತವಿರುವ ಅತೃಪ್ತಿಯಲ್ಲಿ ಬಿದ್ದುಹೋಗಿದ್ದಾರೆ, ಮತ್ತು ತಮ್ಮ ಜೀವನದ ಸಂತೋಷಗಳನ್ನು ಕಸಿದುಕೊಳ್ಳುತ್ತಿದ್ದಾರೆ. ಯಾಕೆಂದರೆ ಅವರು ಕರ್ತನ ಹೆಜ್ಜೆಜಾಡನ್ನು ಬಿಟ್ಟುಹೋಗಿದ್ದಾರೆ ಮತ್ತು ತಮ್ಮ ಭಾಗವನ್ನು ಬಿಟ್ಟು ಲೋಕದೊಂದಿಗೆ ತಮ್ಮ ಭಾಗವನ್ನು ತೆಗೆದುಕೊಳ್ಳುತ್ತಿದ್ದಾರೆ – ಭೂಲೋಕದ ಸಂಗತಿಗಳಿಗಾಗಿ ಅದನ್ನು ಪಡಕೊಳ್ಳುವುದೋ ಬೇಡವೋ ಎಂಬುದನ್ನು ಹುಡುಕುತ್ತಿದ್ದಾರೆ. ಲೋಕದ ಅತೃಪ್ತಿಯಲ್ಲಿ ಪಾಲು ತೆಗೆದುಕೊಳ್ಳುತ್ತಿದ್ದಾರೆ ಮತ್ತು ಲೋಕವು ನೀಡಲಾರದ ಅಥವಾ ತೆಗೆದುಕೊಳ್ಳಲಾರದ ತೃಪ್ತಿ ಮತ್ತು ಶಾಂತಿಯನ್ನು ಪಡಕೊಳ್ಳುವಲ್ಲಿ ಸೋತುಹೋಗಿದ್ದಾರೆ.

ಆದುದರಿಂದ ಅತ್ಯಾಶೆಯ ಮತ್ತು ವ್ಯರ್ಥವಾದ ವೈಭವ ಮತ್ತು ಅದರ ಅತೃಪ್ತಿಯ ಕಲಹವನ್ನು ತೊರೆದುಬಿಡುವಂತೆ ಮತ್ತು ಉನ್ನತ ಸಂಪತ್ತು ಮತ್ತು ಅವರು ಕೊಡುವ ಶಾಂತಿಗಾಗಿ ಶ್ರಮಿಸುವಂತೆ ನಾವು ಸಂತರನ್ನು ಒತ್ತಾಯಿಸುತ್ತೇವೆ. ನಾವು ಅವರಿಗೆ ಅಪೋಸ್ತಲನ ಮಾತುಗಳನ್ನು ನೆನಪಿಸುತ್ತೇವೆ:–

"ಸಂತುಷ್ಟಿ ಸಹಿತವಾದ ಭಕ್ತಿಯು ದೊಡ್ಡ ಲಾಭವೇ ಸರಿ. ನಾವು ಲೋಕದೊಳಕ್ಕೆ ಏನೂ ತಕ್ಕೊಂಡು ಬರಲಿಲ್ಲವಷ್ಟೆ; ಅದರೊಳಗಿಂದ ಏನೂ ತಕ್ಕೊಂಡು ಹೋಗಲಾರೆವು. ನಮಗೆ (ಅವಶ್ಯವಾದ) ಅನ್ನವಸ್ತ್ರಗಳಿದ್ದರೆ ಸಾಕು; ನಮಗಿರುವುದರಲ್ಲಿ ಸಂತೃಪ್ತಿಯಿಂದಿರೋಣ, ಆದರೆ ಐಶ್ವರ್ಯವಂತ ರಾಗಬೇಕೆಂದು ಮನಸ್ಸುಮಾಡುವವರು (ಅವರು ಸಫಲರಾಗುತ್ತಾರೆಯೋ ಇಲ್ಲವೋ) ದುಷ್ಪ್ರೇರಣೆ ಎಂಬ ಉರ್ಲಿನಲ್ಲಿ ಸಿಕ್ಕಿಕ್ಕೊಂಡು ಬುದ್ಧಿ ವಿರುದ್ಧವಾಗಿಯೂ ಹಾನಿಕರವಾಗಿಯೂ ಇರುವ ಅನೇಕ ಆಶೆಗಳಲ್ಲಿ ಬೀಳುತ್ತಾರೆ. ಇಂಥಃ ಆಶೆಗಳು ಮನುಷ್ಯರನ್ನು ಸಂಹಾರನಾಶನಗಳಲ್ಲಿ ಮುಳುಗಿಸುತ್ತವೆ. ಹಣದಾಸೆಯು ಸಕಲವಿಧವಾದ ಕೆಟ್ಟತನಕ್ಕೆ ಮೂಲವಾಗಿದೆ. ಕೆಲವರು

ಅದಕ್ಕಾಗಿ ಆತುರಪಟ್ಟು ಅದರಿಂದ ಕ್ರಿಸ್ತನಂಬಿಕೆಯನ್ನು ಬಿಟ್ಟು ಅಲೆದಾಡಿ ಅನೇಕ ವೇದನೆಗಳಿಂದ ತಮ್ಮನ್ನು ತಿವಿಸಿಕೊಳ್ಳುತ್ತಾರೆ. ಎಲೈ, ದೇವರ ಮನುಷ್ಯನೇ, ನೀನಾದರೋ ಇವುಗಳಿಂದ ದೂರವಾಗಿರು; ನೀತಿ, ಭಕ್ತಿ, ನಂಬಿಕೆ ಪ್ರೀತಿ, ಸ್ಥಿರಚಿತ್ತ, ಸಾತ್ವಿಕತ್ವ ಇವುಗಳನ್ನು ಸಂಪಾದಿಸಿಕೊಳ್ಳುವುದಕ್ಕೆ ಪ್ರಯಾಸಪಡು. ಕ್ರಿಸ್ತ ನಂಬಿಕೆಯುಳ್ಳವರು ಮಾಡತಕ್ಕ ಶ್ರೇಷ್ಠ ಹೋರಾಟವನ್ನು ಮಾಡು, ನಿತ್ಯಜೀವವನ್ನು ಹಿಡಿದುಕೋ. ಅದಕ್ಕಾಗಿ ದೇವರು ನಿನ್ನನ್ನು ಕರೆದನು ಮತ್ತು ನೀನು ಅನೇಕ ಸಾಕ್ಷಿಗಳ ಮುಂದೆ ಒಳ್ಳೇ ಪ್ರತಿಜ್ಞೆಯನ್ನು ಮಾಡಿದೆಯಲ್ಲಾ" (1 ತಿಮೋಥೆ 6: 6–12).

ಸಂತರುಗಳ ಉದಾಹರಣೆಯು ಈ ರೀತಿಯಲ್ಲಿ ಒಂದು ಸಂತೃಪ್ತಿ ಮತ್ತು ಸಂತೋಷದಾಯಕ ಪೂರ್ವನಿರೀಕ್ಷಣೆಯಾಗಿದ್ದರೆ ಮತ್ತು ಮುಂಬರುವ ಒಳ್ಳೆಯ ಸಮಯದ ಖಚಿತವಾದ ನಿರೀಕ್ಷೆಯಲ್ಲಿ ಪ್ರಸ್ತುತ ಪರೀಕ್ಷೆಗಳಿಗೆ ಆನಂದಕರವಾಗಿ ಒಳಗಾಗೋಣ. ಅಂಥಾಃ ಜೀವಂತ ಉದಾಹರಣೆಗಳು ಮಾತ್ರವೇ ಲೋಕಕ್ಕೆ ಅಮೂಲ್ಯವಾದ ಪಾಠಗಳಾಗಿರುತ್ತವೆ. ಉದಾಹರಣೆಯ ಜೊತೆಗೆ ಸಂತರುಗಳ ಅವರ ಬಗೆಗಿನ ಸಮಾಲೋಚನೆಗಳು ಅವರ ನಂಬಿಕೆಯೊಂದಿಗೆ ಸಾಮರಸ್ಯವುಳ್ಳದ್ದಾಗಿರಬೇಕು. ಅವುಗಳು ಮುಲಾಮು ಗಳು, ಗುಣಪಡಿಸುವ ಲೇಪನಗಳಂತಿರಬೇಕು. ಪರಿಸ್ಥಿತಿಗಳನ್ನು ತೆಗೆದುಕೊಂಡು ಬರಲಿರುವ ಒಳ್ಳೆಯ ಸಮಯವನ್ನು ಲೋಕಕ್ಕೆ ಸೂಚಿಸಲು ಅನುಕೂಲ ಮಾಡಿಕೊಳ್ಳಬೇಕು ಮತ್ತು ಅವರಿಗೆ ಬರಲಿರುವ ದೇವರ ರಾಜ್ಯದ ಬಗ್ಗೆ ಬೋಧಿಸಬೇಕು ಮತ್ತು ಪ್ರಸ್ತುತ ತೊಂದರೆಗಳ ನಿಜವಾದ ಕಾರಣಗಳನ್ನು ಮತ್ತು ಅದರ ಒಂದೇ ನಿವಾರಣೋಪಾಯವನ್ನು ತಿಳಿಸಬೇಕು (ಲೂಕ 3;14; ಇಬ್ರಿಯ:14:15; ಫಿಲಿಪ್ಪಿ4:11).

ಬಡ ಪ್ರಪಂಚವು ಅದರ ನೈಜತೆಯ ಅಡಿಯಲ್ಲಿ ಮಾತ್ರವಲ್ಲದೆ ಅದರ ಭ್ರಾಂತಿಯ ದುಷ್ಪರಿಣಾಮಗಳ ಅಡಿಯಲ್ಲಿಯೂ, ಮತ್ತು ವಿಶೇಷವಾಗಿ ಸ್ವಾರ್ಥ, ಹೆಮ್ಮೆ ಮತ್ತು ಮಹತ್ವಾಕಾಂಕ್ಷೆಗಳ ಅಸಮಾಧಾನದ ಅಡಿಯಲ್ಲಿಯೂ ನರಳುತ್ತದೆ, ಏಕೆಂದರೆ ಇದು ಮಾನವರನ್ನು ಸಂಪೂರ್ಣವಾಗಿ ತೃಪ್ತಿಪಡಿಸಲು ಸಾಧ್ಯವಿಲ್ಲ. ಆದುದರಿಂದ ನಾವು ಪ್ರಶ್ನೆಯ ಎರಡು ಬದಿಗಳನ್ನು ನೋಡುವಾಗ ಆ ಬಗ್ಗೆ ಕೇಳಲಿಚ್ಛಿಸುವವರಿಗೆ ನಾವು ಅವರಲ್ಲಿ ಇರುವುದರಲ್ಲೇ ಸಂತೃಪ್ತಿ ಕಂಡುಕೊಳ್ಳುವಂತೆ ಸಲಹೆ ಕೊಡೋಣ ಮತ್ತು ದೇವರು ತನ್ನ ಉಚಿತ ಸಮಯದಲ್ಲಿ ಮತ್ತು ಮಾರ್ಗದಲ್ಲಿ ಅವರಿಗೆ ಆತನ ಪ್ರೀತಿ ಮತ್ತು ಜ್ಞಾನವು ಒದಗಿಸುವ ಅನೇಕ ಆಶೀರ್ವಾದಗಳನ್ನು ತರುತ್ತಾನೆಂದು ತಾಳ್ಮೆಯಿಂದ ಕಾಯುವವರಿಗೆ ಸಮಾಲೋಚನೆ ನೀಡೋಣ.

ನಿಜವಾದ ಅಥವಾ ಭ್ರಮೆಯ ಗಾಯಗಳು ಮತ್ತು ತಪ್ಪುಗಳನ್ನು ಪರೀಕ್ಷಿಸುವುದರಿಂದ ಮತ್ತು ಕೆರಳಿಸುವುದರಿಂದ ನಾವು ಸಹಾಯುವಾಡ ಬೇಕಾದವರಿಗೆ ಮತ್ತು ಆಶೀರ್ವಾದ ನೀಡಬೇಕಾದವರಿಗೆ ಹಾನಿ ಮಾಡಬಹುದು ಮತ್ತು ಆ ರೀತಿಯಾಗಿ ಅವರ ಅತೃಪ್ತಿಯನ್ನು ಮತ್ತು ಆ ಕಾರಣದಿಂದ ಅವರ ತೊಂದರೆಗಳನ್ನು ಹರಡಿಸಬಹುದು. ಆದರೆ ನಮ್ಮ ನಿಯೋಗವನ್ನು ಪೂರೈಸುವುದರಿಂದ, ಎಲ್ಲರಿಗೂ ನೀಡಲ್ಪಟ್ಟ ಈಡುಬಲಿಯ ಬಗ್ಗೆ ಅದರ ಪರಿಣಾಮವಾಗಿ ಎಲ್ಲರಿಗೂ ದೊರೆಯುವ ಆಶೀರ್ವಾದದ ಬಗ್ಗೆ ಪ್ರಸಂಗಿಸುವುದರಿಂದ ನಾವು ದೇವರ ರಾಜ್ಯದ ನಿಜವಾದ ಪೂರ್ವಸೂಚಕ ದೂತರಂತೆ – ಶಾಂತಿಯ ರಾಯಭಾರಿಗಳಂತಾಗುತ್ತೇವೆ. ಆದುದರಿಂದ – "ಪರ್ವತಗಳ ಮೇಲೆ ತ್ವರೆಪಡುತ್ತಾ, ಶುಭ ಸಮಾಚಾರಗಳನ್ನು ತಂದು ಸಮಾಧಾನವನ್ನು ಸಾರುವ ದೂತರ ಪಾದಗಳು ಎಷ್ಟೋ ಅನಂದವಾಗಿವೆ! ಒಳ್ಳೆಯ ಶುಭವರ್ತಮಾನವನ್ನು, ಶುಭದ ಸುವಾರ್ತೆಯನ್ನು ತಂದು ರಕ್ಷಣೆಯನ್ನು ಪ್ರಕಟಿಸುತ್ತಾ – ನಿನ್ನ ದೇವರು ರಾಜ್ಯಭಾರವನ್ನು ವಹಿಸಿದ್ದಾನೆ ಎಂದು ಚಿಯೋನಿಗೆ ತಿಳಿಸುವವನಾಗಿದ್ದಾನೆ" (ಯೆಶಾಯ 52:7) ಎಂದು ಬರೆದದೆ.

'ಯೆಹೋವನ ದಿನ'ದ ಈ ಸಂಕಟಗಳು ಬರಲಿರುವ ಒಳ್ಳೆಯವುಗಳ ಬಗ್ಗೆ ಅಂದರೆ ಅಪರೂಪವಾಗಿ ಲಭ್ಯವಾಗುವ ಶುಭ ಸಮಾಚಾರಗಳನ್ನು ಬೋಧಿಸುವ ಅವಕಾಶಗಳನ್ನು ನೀಡುತ್ತವೆ. ಉದಾಹರಣೆಗೆ ಯಾರು ಯಜಮಾನನ ಹೆಜ್ಜೆಗಳನ್ನು ಅನುಸರಿಸುವವರು ಮತ್ತು ಗಾಯಗಳನ್ನು ಕಟ್ಟುವ ಮತ್ತು ಅದಕ್ಕೆ ಸಮಾಧಾನಕರವಾದ ಎಣ್ಣೆ ಮತ್ತು ದ್ರಾಕ್ಷಾರಸವನ್ನು ಸುರಿಯುವ ಒಳ್ಳೆಯ ಸಮಾರ್ಯದವರು ಧನ್ಯರು. ಅಂಥವರಿಗೆ ನೀಡಲಾದ ಭರವಸೆ ಏನೆಂದರೆ, ಅವರ ಶ್ರಮವು ವ್ಯರ್ಥವಾಗದು; ಲೋಕದಲ್ಲಿ ಕರ್ತನ

ನ್ಯಾಯವಿಚಾರಣೆ ಉಂಟಾಗುವಾಗ. ಲೋಕದ ನಿವಾಸಿಗಳು ನೀತಿವಂತಿಕೆಯನ್ನು ಕಲಿತುಕೊಳ್ಳುವರು – "ಲೋಕದಲ್ಲಿ ನ್ಯಾಯ ಕಾರ್ಯಗಳನ್ನು ನಡಿಸುವಾಗ ಭೂನಿವಾಸಿಗಳು ಧರ್ಮಜ್ಞಾನವನ್ನು ಪಡಕೊಳ್ಳುವರು" (ಯೆಶಾಯ 26:9).

ಯಾವುದೇ ಬಂಧನದಿಂದ ವಿಮೋಚನೆ ಹೊಂದುವಂತೆ ನರಳುವ ಸೃಷ್ಟಿಯ ಬಗ್ಗೆ ದೇವರ ಮಕ್ಕಳ ಸಹಾನುಭೂತಿಯು ಅವರ ಪರಲೋಕದ ತಂದೆಯ ಸಹನುಭೂತಿಯೊಂದಿಗೆ ಹೆಚ್ಚಾದ ಸಾಮರಸ್ಯದಲ್ಲಿರಬೇಕು. ಅವರು ಆತನಂತೆಯೇ, ವಿರೋಧಿಸುವ ವರ್ಗದವರನ್ನು ನೆನಪಿಟ್ಟುಕೊಳ್ಳಬೇಕು ಮತ್ತು ಸಹಾನುಭೂತಿ ಹೊಂದಿರಬೇಕು. ಯಾಕೆಂದರೆ ಅವರ ಬಯಕೆಗಳು ನ್ಯಾಯವಾದವುಗಳೂ, ಉದಾರವಾದವುಗಳೂ ಅಗಿವೆ. ಆದರೆ ಅವರ ಪ್ರಯತ್ನಗಳು ಅವರ ಪತನದ ಸ್ವಭಾವದ ದೌರ್ಬಲ್ಯದಿಂದ ಮಾತ್ರವಲ್ಲದೆ ಜೀವನದಲ್ಲಿ ಅವರ ಸುತ್ತಮುತ್ತಲಿನವರಿಂದ ಮತ್ತು ಇತರರೊಂದಿಗಿನ ಒಡನಾಟ ಮತ್ತು ಅವಲಂಬನೆಯಿಂದ ಆಕ್ರಮಿಸಿಕೊಂಡಿದೆ. ಆದರೆ ದೇವರ ಮಕ್ಕಳಿಗೆ ಯಾವುದೇ ವರ್ಗದ ಅಹಂಕಾರಿಗಳ ಬಗ್ಗೆ, ಅತೃಪ್ತವಾದ ಬಯಕೆಗಳು ಪ್ರಯತ್ನಗಳ ಬಗ್ಗೆ ಯಾವ ಸಹಾನುಭೂತಿ ಇರಕೂಡದು. ಅವರ ಮಾತುಗಳು ಶಾಂತವೂ, ಮಿತವಾದವುಗಳೂ ಆಗಿರಬೇಕು ಮತ್ತು ಯಾವಾಗಲೂ ವಿಚಾರಣಾಸರಣಿಗೆ ಯಾವುದೇ ಧಕ್ಕೆ ಇಲ್ಲದಂತಿರಬೇಕು. ಇದು ಕರ್ತನ ಯುದ್ಧವಾಗಿದೆ ಎಂಬುದನ್ನು ಅವರು ಸದಾ ನೆನಪಿನಲ್ಲಿಟ್ಟುಕೊಳ್ಳಬೇಕು ಮತ್ತು ರಾಜಕೀಯ ಹಾಗೂ ಸಾಮಾಜಿಕ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ದೇವರವಾಕ್ಯದಲ್ಲಿ ಮುಂತಿಳಿಸಿದವುಗಳನ್ನು ಬಿಟ್ಟು ಬೇರೆ ಯಾವುದೇ ನಿಜವಾದ ಪರಿಹಾರ ಅವರ ಬಳಿಯಲ್ಲಿಲ್ಲ. ಆದುದರಿಂದ, ಪ್ರತಿಷ್ಠೆ ಹೊಂದಿದವರ ಕರ್ತವ್ಯವು ಮೊಟ್ಟಮೊದಲಿಗೆ ಅವರುಗಳು ಯೆಹೋವನ ರಥದ ಮಾರ್ಗದಲ್ಲಿಲ್ಲ ಎಂಬುದನ್ನು ನೋಡಿಕೊಳ್ಳಬೇಕು ಮತ್ತು "ಸುಮ್ಮನೆ ನಿಂತು ಯೆಹೋವನ ರಕ್ಷಣಾಕಾರ್ಯವನ್ನು ನೋಡಿರಿ" ಅಂದರೆ ಈ ಹೋರಾಟದಲ್ಲಿ ತಮ್ಮ ಪಾತ್ರವೇನೂ ಇಲ್ಲವೆಂದು, ಅದು ಬೇರೆ ಪಾರುಪತ್ಯದ ಮೂಲಕ ದೇವರ ಕಾರ್ಯವಾಗಿದೆ ಎಂದು ಗ್ರಹಿಸಿಕೊಳ್ಳುವ ಅರ್ಥದಲ್ಲಿರುವಂತೆ ನೋಡಬೇಕು. ಅಂತಹ ಎಲ್ಲಾ ವಿಷಯಗಳ ಹೊರತಾಗಿಯೂ, ಅವರು ತಮ್ಮ ಸ್ವಂತ ಜೀವನ ಧ್ಯೇಯದ ಉದ್ದಕ್ಕೂ ಒತ್ತುಕೊಡಬೇಕು, ಎಲ್ಲಾ ವರ್ಗದವರಿಗೆ ಪರಲೋಕವು ಏಕೈಕ ಪರಿಹಾರ ಮತ್ತು ಏಕೈಕ ಭರವಸೆಯಾಗಿದ್ದು ಅದು ಹತ್ತಿರದಲ್ಲಿದೆ ಎಂದು ಘೋಷಿಸಬೇಕು.

* * * * * * *

# ಅಧ್ಯಯನ – 16 Study XVI

# ಮುಕ್ತಾಯದ ಆಲೋಚನೆಗಳು

# CONCLUDING THOUGHTS

## ಸತ್ಯದ ಬಗ್ಗೆ ನಮ್ಮ ಕರ್ತವ್ಯ – ಅದರ ವೆಚ್ಚ, ಮೌಲ್ಯ ಮತ್ತು ಅದರ ಲಾಭ

## Our Duty Toward the Truth - Its Cost, Its Value, Its Profit

ಹಿಂದಿನ ಅಧ್ಯಾಯಗಳಲ್ಲಿ ಪ್ರಾಕೃತಿಕ ಹಾಗೂ ಪ್ರಕಟನೆಯ ಬೆಳಕುಗಳೆರಡೂ ಒಬ್ಬ ಜ್ಞಾನವುಳ್ಳವನೂ, ಬುದ್ಧಿವಂತನೂ, ಸರ್ವಶಕ್ತನೂ, ನೀತಿವಂತನೂ ಆದ ದೇವರು ಎಲ್ಲವುಗಳ ಸೃಷ್ಟಿಕರ್ತನಾಗಿದ್ದಾನೆ ಎಂಬುದು ಸ್ಪಷ್ಟವಾಗಿ ನಿರೂಪಿಸಲಾಗಿದೆ, ಮತ್ತು ಆತನೇ ಸರ್ವೋತ್ಕೃಷ್ಟ ಮತ್ತು ನ್ಯಾಯಸಮ್ಮತ ಕರ್ತನಾಗಿದ್ದಾನೆ ಎಂಬುದನ್ನು ನಾವು ನೋಡಿದ್ದೇವೆ; ಸಜೀವವುಳ್ಳ ಹಾಗೂ ನಿರ್ಜೀವದ ಎಲ್ಲಾ ಸಂಗತಿಗಳೂ ಆತನ ನಿಯಂತ್ರಣಕ್ಕೆ ಒಳಪಟ್ಟಿವೆ. ಮತ್ತು ಸತ್ಯವೇದವು ಆತನ ಗುಣಲಕ್ಷಣ ಮತ್ತು ಆತನು ಜನರಿಗೆ ಪ್ರಕಟಿಸಲು ಇಷ್ಟಪಡುವ ಆತನ ಯೋಜನೆಗಳ ಪ್ರಕಟನೆಯಾಗಿದೆ. ಇದರಿಂದ ನಾವು ಈಗ ಕೆಡುಕು ಕೆಲವು ಸೃಷ್ಟಿಗಳಲ್ಲಿ ಪ್ರಧಾನತೆ ಹೊಂದಿದ್ದಾಗ್ಯೂ ಅದು ಕೇವಲ ಸೀಮಿತ ಕಾಲಾವಧಿಗೆ ಮತ್ತು ಸೀಮಿತ ಅಳತೆಗೆ ಮಾತ್ರ ಅಸ್ತಿತ್ವದಲ್ಲಿವೆ. ದೇವರು ಅನುಮತಿಯಿಂದ ಆತನ ದೃಷ್ಟಿಯಲ್ಲಿರುವ ಬುದ್ಧಿವಂತ ಉದ್ದೇಶ ಸಮಾಪ್ತಿವರೆಗೆ ಮಾತ್ರವೇ ಇರುತ್ತದೆ. ಮತ್ತು ಈಗ ಕತ್ತಲೆಯ ಭೂಮಿಯನ್ನು ಆವರಿಸಿದೆಯಾದರೂ, ಕಾರ್ಗತ್ತಲು ಜನಾಂಗಗಳನ್ನು ಮುಚ್ಚಿದೆಯಾದರೂ, ದೇವರ ಬೆಳಕು ಸೂಕ್ತಸಮಯದಲ್ಲಿ ಎಲ್ಲಾ ಅಂಧಕಾರವನ್ನೂ ತೊಲಗಿಸಿಬಿಡುವುದು ಮತ್ತು ಲೋಕವೆಲ್ಲವೂ ಆತನ ಮಹಿಮೆಯಿಂದ ತುಂಬಿಕೊಳ್ಳುವುದು ಎಂದು ತಿಳಿದುಕೊಳ್ಳುತ್ತೇವೆ.

ಆತನ ಮಹಾ ಯೋಜನೆಗಳು ನೆರವೇರುವುದಕ್ಕೆ ಇದುವರೆಗೆ ಹಲವು ಯುಗಗಳೇ ಹಿಡಿಯಿತೆಂದು ಮತ್ತು ಅವುಗಳು ಸಂಪೂರ್ಣಗೊಳ್ಳಲು ಮತ್ತೊಂದು ಯುಗವು ಬೇಕಾಗುತ್ತದೆಂದು ನಾವು ನೋಡುತ್ತೇವೆ. ಮತ್ತು ಕಳೆದ ಎಲ್ಲಾ ಕತ್ತಲಿನ ಯುಗಗಳಲ್ಲಿ, ದೇವರು ಹೆಚ್ಚುಕಡಿಮೆ ತನ್ನ ಸೃಷ್ಟಿಯನ್ನು ಮರೆತುಬಿಟ್ಟನೇನೋ ಎಂಬಂತೆ ತೋರುತಿದ್ದಾಗ, ಆ ಎಲ್ಲಾ ಯುಗಗಳಲ್ಲಿ ಆತನ ಯೋಜನೆಗಳ ಧರ್ಮರಹಸ್ಯವು ವಿವೇಕಪೂರ್ವಕವಾಗಿ ಮಾನವರಿಗೆ ಮರೆಮಾಡಲ್ಪಟ್ಟಿದ್ದರೂ ಅವರ ಭವಿಷ್ಯದ ಆಶೀರ್ವಾದಗಳ ಬಗ್ಗೆ ಆತನ ಯೋಜನೆಯು ಮೌನವಾಗಿ ಆದರೆ ಭವ್ಯವಾಗಿ ಕಾರ್ಯಗತಗೊಳ್ಳುತ್ತಿತ್ತು. ಈಗ ಉದಯಗೊಳ್ಳಲಿರುವ ದಿನ ಅಥವಾ ಯುಗವು ಲೋಕದ ಮೇಲಣ ನ್ಯಾಯತೀರ್ಪಿನ ಅಥವಾ ವಿಚಾರಣೆಯ ದಿನವಾಗಿದೆ ಮತ್ತು ಎಲ್ಲಾ ಹಿಂದಣ ಸಿದ್ಧತೆಗಳು ಮಾನವ ಜಾತಿಯವರಿಗೆ ಸರ್ವ ಸಾಮಾನ್ಯವಾಗಿ ಅನುಕೂಲಕರವಾದ ಅವಕಾಶವನ್ನು ನೀಡುವ ಉದ್ದೇಶದಿಂದ ಕೂಡಿದೆ ಎಂಬುದನ್ನು ಸಹಾ ನಾವು ನೋಡಿದ್ದೇವೆ. ಆಗ ಏಕ ವ್ಯಕ್ತಿಗಳಾಗಿ ವೈಯಕ್ತಿಕವಾಗಿ ನಿತ್ಯಜೀವದ ವಿಚಾರಣೆಗೆ ಒಳಪಡುತ್ತಾರೆ. ಆರು ಸಾವಿರ ದೀರ್ಘ ವರ್ಷಗಳ ದೀರ್ಘಾವಧಿಯಲ್ಲಿ ಜನಾಂಗಗಳು ಬಹಳಷ್ಟು ಹೆಚ್ಚಾಗಿವೆ. ಮತ್ತು ಕಷ್ಟಾನುಭವಗಳು ಅವರುಗಳನ್ನು ನ್ಯಾಯತೀರ್ಪಿಗೆ ಕರೆತರುವಾಗ ಅವರ ಕೆಡುಕಿನ ರಾಜ್ಯಭಾರದ ಕಷ್ಟಾನುಭವಗಳು ಅವರಿಗೆ ಹೆಚ್ಚಿನ ಅನುಕೂಲಕರ ವಾಗಿರುತ್ತದೆ. ಜನಾಂಗವು ಪೂರ್ಣವಾಗಿ ಆರು ಸಾವಿರ ವರ್ಷಗಳ ಕಾಲ ಬಾಧೆಯನ್ನು ಅನುಭವಿಸಲು ಅನುಮತಿಸಿರುವಾಗ, ವ್ಯಕ್ತಿಗಳಾಗಿ ಅವರು ಕೆಲವೇ ವರ್ಷಗಳಲ್ಲಿ ತಮ್ಮ ಜೀವನ ಕ್ರಮವನ್ನು ಓಡಬೇಕಾಗಿದೆ.

ಜನಾಂಗವು ಈ ಅಗತ್ಯವಾದ ಶಿಸ್ತಿಗೆ ಒಳಗಾಗುತ್ತಿರುವಾಗ, ಸೂಕ್ತಸಮಯದಲ್ಲಿ ದೇವರು ಅವರನ್ನು ವಿಮೋಚಿಸುವಂತೆ ತನ್ನ ಕುಮಾರನನ್ನು ಕಳುಹಿಸಿಕೊಟ್ಟಿದ್ದಾನೆ; ಮತ್ತು ಮಾನವ ಜಾತಿಯ ಸಮೂಹದವರು ದೀನಸ್ಥಿತಿಯಲ್ಲಿರುವ ಈ ವಿಮೋಚಕನನ್ನು ಗ್ರಹಿಸಲಿಲ್ಲ ಮತ್ತು ದೇವರ ಅಭಿಷಕ್ತನು ಈ ರೀತಿಯಲ್ಲಿ ತಮ್ಮ ರಕ್ಷಣೆಗೆ ಬರುತ್ತಾನೆಂಬುದನ್ನೂ ಅವರು ನಂಬಲಿಲ್ಲ. ಆದಾಗ್ಯೂ, ಯಾರ ಹೃದಯವು ದೇವರ ಕಡೆಗೆ ಇದ್ದು ಮತ್ತು ಆತನ ವಾಗ್ದಾನಗಳನ್ನು ನಂಬುವವರಲ್ಲಿ ಈ ಕಳೆದ ಯುಗಗಳಿಂದ ದೇವರು ತನ್ನ ರಾಜ್ಯದ ಗೌರವಗಳನ್ನು ಸ್ವೀಕರಿಸುವಂತೆ ಎರಡು ಜೊತೆಗಾರ ತಂಡವನ್ನು ಆಯ್ಕೆ ಮಾಡುವುದು – ಮತ್ತು ತನ್ನ ದೈವಿಕ ಯೋಜನೆಯನ್ನು ನೆರವೇರಿಸಲು ಪಾಲುದಾರರಾಗುವ ಗೌರವವನ್ನು ಹೊಂದಿಕೊಳ್ಳಲು ಆಯ್ದುಕೊಂಡಿದ್ದಾನೆ. ಈ ರೀತಿಯಾಗಿ ಆಯ್ದುಕೊಂಡ ಈ ಎರಡೂ ಜೊತೆಗಾರರು, ನಾವು ನೋಡುವಂತೆ

ದೇವರ ರಾಜ್ಯದ ಎರಡೂ ಹಂತಗಳನ್ನು ರಚಿಸುವವರಾಗಿದ್ದಾರೆ. ಪ್ರವಾದಿಗಳಿಂದ ನಾವು ಈ ರಾಜ್ಯವು ಸಧ್ಯದಲ್ಲಿಯೇ ಭೂಲೋಕದಲ್ಲಿ ಸ್ಥಾಪಿತಗೊಳ್ಳಲಿದೆ ಎಂದು ತಿಳಿದುಕೊಳ್ಳುತ್ತೇವೆ; ಅದರ ಬುದ್ಧಿವಂತ ಮತ್ತು ನ್ಯಾಯವಾದ ಆಡಳಿತದಲ್ಲಿ ಭೂಲೋಕದ ಎಲ್ಲಾ ಕುಟುಂಬಗಳೂ ತಮ್ಮನ್ನು ನಿತ್ಯಜೀವಕ್ಕೆ ಅರ್ಹರನ್ನಾಗಿ ಮಾಡುವ ಹೆಚ್ಚು ಅನುಕೂಲಕರ ಅವಕಾಶಗಳಿಂದ ಆಶೀರ್ವದಿಸಲ್ಪಡುತ್ತಾರೆ; ಕ್ರಿಸ್ತನ ಅಮೂಲ್ಯವಾದ ರಕ್ತದ ಮೂಲಕ ಅವರ ವಿಮೋಚನೆಯ ಫಲವಾಗಿ, ಪರಿಶುದ್ಧ ರಾಜಮಾರ್ಗವನ್ನು ನಿರ್ಮಿಸಲಾಗುವುದು; ಕರ್ತನ ಈಡುಬಲಿಯಿಂದ ವಿಮುಕ್ತಿಗೊಂಡವರು (ಎಲ್ಲಾ ಮಾನವ ಜಾತಿಯವರೂ – ಇಬ್ರಿಯ 2:9). ಅದರಲ್ಲಿ ನಡೆದು ಹೋಗಬಹುದು; ಅದೊಂದು ಸಾರ್ವಜನಿಕ ಹೆದ್ದಾರಿಯಾಗಿದ್ದು ಯಾರು ಪ್ರಾಮಾಣಿಕವಾಗಿ ಶುದ್ಧರೂ, ಪವಿತ್ರರೂ ಆಗ ಬಯಸುತ್ತಾರೋ ಅವರಿಗೆ ತುಲನಾತ್ಮವಾಗಿ ಸುಲಭವಾಗುವಂತೆ ಮಾಡಲ್ಪಟ್ಟಿದೆ. ಎಲ್ಲಾ ಮುಗ್ಗರಿಸುವ ಕಲ್ಲುಗಳನ್ನೂ ತೆಗೆದು ಹಾಕಲಾಗುವುದು, ಎಲ್ಲಾ ಪಾಶಗಳೂ, ಆಕರ್ಷಣೆಗಳು ಮತ್ತು ಮುಚ್ಚಿದ ಅಪಾಯದ ಗುಂಡಿಗಳನ್ನು ತೆಗೆದುಹಾಕಲಾಗುವುದು ಮತ್ತು ಅದರಲ್ಲಿ ಹೋಗುವವರೆಲ್ಲರೂ ಪರಿಪೂರ್ಣತೆ ಹಾಗೂ ನಿತ್ಯಜೀವದ ಆಶೀರ್ವಾದಗಳನ್ನು ಹೊಂದಿಕೊಳ್ಳುವರು.

ಈ ನ್ಯಾಯತೀರ್ಪು ಅಥವಾ ಆಳ್ವಿಕೆಯು ಯೆಹೋವನು ನೇಮಿಸಿರುವ ಲೋಕದ ನ್ಯಾಯಾಧೀಶ ಅಥವಾ ಆಡಳಿತಗಾರನಾದ ಯೇಸುಕ್ರಿಸ್ತನು ಪುನಃ ಬರುವವರೆಗೆ ಪ್ರಾರಂಭವಾಗುವುದಿಲ್ಲ – ಆತನು ಪುನಃ ದೀನನಾಗಿ ಬರುವುದಿಲ್ಲ, ಆದರೆ ಅಧಿಕಾರ ಮತ್ತು ಮಹಿಮೆಯೊಂದಿಗೆ ಬರುವನು ಎಂಬುದು ವಿಶದವಾಗಿದೆ. ಆತನು ಪುನಃ ಲೋಕವನ್ನು ವಿಮೋಚಿಸುವುದಕ್ಕಾಗಿ ಅಲ್ಲ, ಆದರೆ ಲೋಕಕ್ಕೆ ನ್ಯಾಯತೀರಿಸಲು, ಮತ್ತು ನೀತಿವಂತಿಕೆಯಿಂದ ಅದನ್ನು ಆಳಲು ಬರುವಾತನಾಗಿದ್ದಾನೆ. ಅದುವರೆಗೆ ಸಕಲ ಸಿದ್ಧತಾ ಸಮಯವು ಇರುವುದಾದರೂ ನ್ಯಾಯಾಧೀಶನು ತನ್ನೆಲ್ಲಾ ಮಹಿಮೆಯೊಂದಿಗೆ ಪೀಠಾರೋಹಣ ಮಾಡುವವರೆಗೆ. ನ್ಯಾಯಾಲಯ ಅಧಿವೇಶನವು ನೇಮಿತ ಕಾಲದಲ್ಲಿ ಪ್ರಾರಂಭವಾಗುವವರೆಗೆ, ವಿಚಾರಣೆಯು ಪ್ರಾರಂಭವಾಗುವುದಿಲ್ಲ. ನಂತರದಲ್ಲಿ ಅರಸನು ತನ್ನ ಮಹಿಮೆಯ ಸಿಂಹಾಸನದಲ್ಲಿ ಕುಳಿತುಕೊಳ್ಳುವನು. ಆತನ ಮುಂದೆ ಎಲ್ಲಾ ರಾಷ್ಟ್ರಗಳವರೂ ಕೂಡಿಬರುವರು. ಆ ಕಾಲದಲ್ಲಿ ಆತನು ಅವರನ್ನು ಅವರ ಕಾರ್ಯಗಳ ಆಧಾರದಲ್ಲಿ ವಿಚಾರಣೆ ಮಾಡುವನು. ಅವರ ಮುಂದೆ ಪರಿಶುದ್ಧಗ್ರಂಥದ ಪುಸ್ತಕಗಳನ್ನು ತೆರೆಯುತ್ತಾನೆ, ಈ ಲೋಕವನ್ನು ಕರ್ತನ ಜ್ಞಾನದಿಂದ ತುಂಬಿಸುವನು. ಎಲ್ಲಾ ಕೃಪೆ ಮತ್ತು ಸಹಾಯಗಳ ಅಡಿಯಲ್ಲಿ ಅವರ ನಡವಳಿಕೆಯಿಂದ ಅವರಲ್ಲಿ ಯಾರಾರು ಮಹಿಮೆಯ ಯುಗದಲ್ಲಿ ಮತ್ತು ಅದನ್ನು ಅನುಸರಿಸುವ ಸಂತೋಷಕಾಲದಲ್ಲಿ ನಿತ್ಯಜೀವಕ್ಕೆ ಅರ್ಹರು ಎಂಬುದನ್ನು ಆತನು ನಿರ್ಧರಿಸುತ್ತಾನೆ (ಮತ್ತಾಯ 25:31; ಪ್ರಕಟನೆ 20: 11 – 13).

ಈ ರೀತಿಯಲ್ಲಿ ಮೆಸ್ಸೀಯನ ದ್ವಿತೀಯಾಗಮನವು ಆತನ ರಾಜ್ಯವನ್ನು ಭೂಲೋಕದಲ್ಲಿ ಸಿದ್ಧಪಡಿಸುವ ಒಂದು ಘಟನೆಯಾಗಿದೆ ಎಂಬುದನ್ನು ನಾವು ನೋಡುತ್ತೇವೆ. ಇದರಿಂದ ಮಾನವರ ಎಲ್ಲಾ ವರ್ಗದವರೂ ನಿರೀಕ್ಷಿಸಬಹುದಾಗಿದೆ. ಈ ಘಟನೆಯನ್ನು ಪೂರ್ಣವಾಗಿ ಅರ್ಥಮಾಡಿಕೊಳ್ಳುವಾಗ ಎಲ್ಲಾ ಹೃದಯಗಳಿಗೆ ಸಂತೋಷ ಉಲ್ಲಾಸಗಳು ಉಂಟಾಗುವುವು, ದೇವರ ಅಭಿಷಕ್ತ ಭಕ್ತರುಗಳಿಂದ ಕೂಡಿದ ಚಿಕ್ಕ ಹಿಂಡಿಗೆ ಉಲ್ಲಾಸಪಡಲು ಬಲು ದೊಡ್ಡ ಕಾರಣವಿರುತ್ತದೆ. ಇದೊಂದು ಆನಂದಕರ ದಿನವಾಗಿದ್ದು ಅದರಲ್ಲಿ ಪರಿಗ್ರಹಿಸಲ್ಪಟ್ಟ ಕನ್ಯಾಸಭೆಯು ಬಹಳ ಸಂತೋಷದಿಂದ ಮದಲಗಿತ್ತಿಯಾಗಿ, ಕುರಿಮರಿಯ ವಧುವು ಆಕೆಯು ಅಡವಿಯಿಂದ ಹೊರಬಂದು ತನ್ನ ಪ್ರಿಯತಮನ ತೋಳುಗಳ ಮೇಲೊರಗಿಕೊಂಡು ಅಡವಿಯಿಂದ ಹೊರಬಂದು ಆತನ ಭವ್ಯವಾದ ಬಾಧ್ಯತೆಯನ್ನು ಪ್ರವೇಶಿಸುವಳು. ಸತ್ಯ ಸಭೆಯು ತನ್ನ ಶಿರಸ್ಸಿನೊಂದಿಗೆ ಮಹಿಮೆಗೊಳ್ಳುವ ಆ ದಿನದಲ್ಲಿ ಅದು ದೈವಿಕ ಅಧಿಕಾರವನ್ನು ಮತ್ತು ಶಕ್ತಿಯನ್ನು ಧಾರಣಮಾಡುವುದು ಮತ್ತು ಲೋಕಕ್ಕಾಗಿ ಮಹಾ ಕಾರ್ಯವನ್ನು ಪ್ರಾರಂಭಿಸುವುದು. ಅದರ ಫಲವೇ ಎಲ್ಲಾ ಸಂಗತಿಗಳ ಸಂಪೂರ್ಣ ಪುನರ್‌ವಶವಾಗಿದೆ. ಮಹಾ ವಿರೋಧಿಯು ಕಟ್ಟಿಹಾಕಲ್ಪಡುವ, ಆರು ಸಹಸ್ರ ವರ್ಷಗಳವರೆಗೆ ಸಂತತಿಗಳ ಬಂಧನವು ಮುರಿದುಬೀಳುವಾಗ, ಕರ್ತನ ಜ್ಞಾನವು ನೀರು ಸಮುದ್ರವನ್ನು ಆವರಿಸುವಂತೆ ಸಮಗ್ರ ಪ್ರಪಂಚವನ್ನು ಆವರಿಸುವ ಆ ದಿನವು ಮಹಾ ಸಂತೋಷದ ದಿನವಾಗಿದೆ.

ಈ ವಿಷಯ ಜ್ಞಾನವು, ಮತ್ತು ಅವುಗಳು ಹತ್ತಿರವಾಗಿಯೇ ಇವೆ, ಬಾಗಿಲಲ್ಲೇ ಇವೆ ಎಂಬದಕ್ಕೆ ಸಾಕ್ಷ್ಯಗಳು ಎಲ್ಲರ ಮೇಲೆ, ವಿಶೇಷವಾಗಿ ದೈವಿಕ ಸ್ವಭಾವದ ಬಹುಮಾನವನ್ನು ಬಯಸುತ್ತಿರುವ ಪ್ರತಿಷ್ಠಿತ ದೇವರ ಮಕ್ಕಳ ಮೇಲೆ ಪ್ರಬಲವಾದ ಪ್ರಭಾವವನ್ನು

ಬೀರಿದ್ದಿರಬಹುದು ಅಂಥವರಿಗೆ, ಅವರುಗಳು ತಮ್ಮ ವಿಮೋಚನೆಯು ಸಮೀಪವಾಗಿದೆ ಎಂದು ತಿಳಿದು ತಮ್ಮ ತಲೆಗಳನ್ನು ಎತ್ತಿ ಉಲ್ಲಾಸಪಡುವಾಗ, ತಮ್ಮ ಎಲ್ಲಾ ಭಾರಗಳನ್ನೂ, ಅಡಚಣೆಗಳನ್ನೂ, ಬದಿಗಿಟ್ಟು, ತಾವು ಪ್ರಾರಂಭಿಸಿದ ತಮ್ಮ ಓಟವನ್ನು ತಾಳ್ಮೆಯಿಂದ ಓಡುವಂತೆ ನಾವು ಒತ್ತಾಯಿಸುತ್ತೇವೆ. ತಮ್ಮ ಸ್ವಾರ್ಥ ಮತ್ತು ಅದರ ನಿವಾರಿಸಲಾಗದ ಬಲಹೀನತೆಗಳು ಅಸಮರ್ಪಕತೆಗಳು ನಮ್ಮ ಕರ್ತನಾದ ಯೇಸುಕ್ರಿಸ್ತನು ಅರ್ಪಿಸಿದ ಈಡುಬಲಿಯ ಮೂಲಕ ನಿವಾರಣೆಯಾಗುತ್ತ ದೆಂಬುದನ್ನು ತಿಳಿದು, ಅವುಗಳಿಂದ ವಿಮುಖನಾಗು. ಮತ್ತು ನಿಮ್ಮ ಸಮರ್ಪಣೆಗಳು ಮತ್ತು ಸ್ವಾರ್ಥತ್ಯಾಗಗಳು ನಮ್ಮ ವಿಮೋಚಕನೂ ರಕ್ಷಕನೂ ಆದ ಕರ್ತನ ಮೂಲಕ ಮಾತ್ರವೇ ದೇವರಿಗೆ ಸ್ವೀಕೃತವಾಗುತ್ತದೆಂದು ತಿಳಿಯಿರಿ. ಕರ್ತನು ವಾಗ್ದಾನ ಮಾಡಿರುವ ಬಲವು ಸಾಕೆಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳೋಣ, ಮತ್ತು ಅದರ ಉಪಯೋಗದಿಂದ ನಾವು ಜಯಶಾಲಿಗಳಾಗಬಹುದು ಎಂಬುದು ಆತನ ವಾಕ್ಯಗಳಲ್ಲಿ ಒದಗಿಸಲ್ಪಟ್ಟಿದೆ. ಆ ಶಕ್ತಿಯು ಆತನ ಗುಣಲಕ್ಷಣ ಮತ್ತು ಯೋಜನೆಗಳ ಮತ್ತು ನಾವು ಅದರಲ್ಲಿ ಪಾಲುದಾರರಾಗಬಹುದೆಂಬ ಷರತ್ತುಗಳ ಜ್ಞಾನದಿಂದ ಒದಗಿಸಲ್ಪಟ್ಟಿದೆ. ಈ ರೀತಿಯಲ್ಲಿ ಪೇತ್ರನು ಅದನ್ನು ವ್ಯಕ್ತಪಡಿಸುವಂತೆ "ದೇವರ ವಿಷಯವಾಗಿಯೂ, ನಮ್ಮ ಕರ್ತನಾದ ಯೇಸುವಿನ ವಿಷಯವಾಗಿಯೂ ಪರಿಜ್ಞಾನವು ನಿಮಗೆ ಉಂಟಾಗುವುದರಲ್ಲಿ ಕೃಪೆಯೂ ಶಾಂತಿಯೂ ನಿಮಗೆ ಹೆಚ್ಚೆಚ್ಚಾಗಿ ದೊರೆಯಲಿ. ನಮ್ಮನ್ನು ತನ್ನ ಪ್ರಭಾವದಿಂದಲೂ ಗುಣಾತಿಶಯದಿಂದಲೂ ಕರೆದ ದೇವರ ವಿಷಯವಾಗಿ ಯೇಸುವಿನ ದಿವ್ಯಶಕ್ತಿಯು ನಮಗೆ ಪರಿಜ್ಞಾನವನ್ನು ಕೊಟ್ಟದ್ದರಲ್ಲಿ ಜೀವಕ್ಕೂ ಭಕ್ತಿಗೂ ಬೇಕಾದುದ್ದೆಲ್ಲವೂ ದೊರೆಯಿತೆಂದು ಬಲ್ಲೆವಷ್ಟೆ. ನೀವು ಲೋಕದಲ್ಲಿ ದುರಾಶೆಯಿಂದುಂಟಾದ ಕೆಟ್ಟತನಕ್ಕೆ ತಪ್ಪಿಸಿಕೊಂಡು ದೈವ ಸ್ವಭಾವದಲ್ಲಿ ಪಾಲನ್ನು ಹೊಂದುವವರಾಗಬೇಕೆಂಬ ಉದ್ದೇಶದಿಂದ ದೇವರು ತನ್ನ ಪ್ರಭಾವ ಗುಣಾತಿಶಯಗಳಿಂದ ಅಮೂಲ್ಯವಾಗಿಯೂ ಉತ್ಕೃಷ್ಟವಾಗಿಯೂ ಇರುವ ವಾಗ್ದಾನಗಳನ್ನು ನಮಗೆ ದಯಪಾಲಿಸಿದ್ದಾನೆ" (2 ಪೇತ್ರ 1: 2–4) ಎಂದು ಹೇಳುವವನಾಗಿದ್ದಾನೆ.

ಆದರೆ ದೇವರು ಪ್ರತಿಯೊಬ್ಬ ಓಟಗಾರನಿಗೂ ಪರಲೋಕದ ಬಹುಮಾನವಾಗಿ ನೀಡಲು ಉದ್ದೇಶಿಸಿರುವ ಈ ಜ್ಞಾನವನ್ನು ಮತ್ತು ಈ ಬಲವನ್ನು ಹೊಂದಿಕೊಳ್ಳಲು ಖಂಡಿತವಾಗಿಯೂ ನಿಮ್ಮ ಪ್ರತಿಷ್ಠೆಪಡಿಸಿಕೊಳ್ಳುವಿಕೆಯ ಪ್ರತಿಜ್ಞೆಗಳು ಮತ್ತು ನಿಷ್ಠಾವಂತಿಕೆಗಳನ್ನು ಪರೀಕ್ಷಿಸುವವನಾಗಿದ್ದಾನೆ. ನೀವು ನಿಮ್ಮ ಎಲ್ಲಾ ಸಮಯವನ್ನು, ನಿಮ್ಮ ಎಲ್ಲಾ ತಲಾಂತುಗಳನ್ನು ಕರ್ತನಿಗೆ ಪ್ರತಿಷ್ಠಿಸಿದ್ದೀರಿ; ಈಗ ಪ್ರಶ್ನೆ ಏನೆಂದರೆ, ಅದರಲ್ಲಿ ಎಷ್ಟನ್ನು ನೀವು ನೀಡುತ್ತೀರಿ? ನಿಮ್ಮ ಒಡಂಬಡಿಕೆಯ ಪ್ರತಿಷ್ಠೆಯ ಪ್ರಕಾರ ನೀವು ನಿಮ್ಮ ಎಲ್ಲಾ ಪ್ರತಿಭೆಯನ್ನು ನಿಮ್ಮ ಸ್ವಂತ ಯೋಜನೆಯನ್ನು ಮತ್ತು ಪದ್ಧತಿಗಳನ್ನು ಮತ್ತು ನಿಮ್ಮ ಮತ್ತು ಇತರರ ವಿಚಾರಣಾ ಸರಣಿಗಳನ್ನು ದೇವರ ಯೋಜನೆ, ಮತ್ತು ಆತನು ಮಾಡುವ ಕಾರ್ಯದ ಹಾದಿ ಮತ್ತು ಸಮಯವನ್ನು ನೀಡಲು ಇನ್ನೂ ಇಷ್ಟವುಳ್ಳವರಾಗಿದ್ದೀರೋ? ಈ ಸಂಗತಿಗಳನ್ನು ನೀವು ಈ ಲೋಕದ ಸ್ನೇಹದ ಮತ್ತು ಸಾಮಾಜಿಕ ಕಟ್ಟುಪಾಡುಗಳನ್ನು ತ್ಯಜಿಸಲು ಇಚ್ಛೆಯುಳ್ಳವರಾಗಿದ್ದೀರೋ? ಪ್ರತಿಷ್ಠೆ ಹೊಂದಿದವರಿಗೆ ಹೃದಯ ಪ್ರಸನ್ನತೆಯನ್ನುಂಟು ಮಾಡುವ ಭವ್ಯವಾದ ವಸ್ತು ವಿಷಯಗಳ ತನಿಖೆಗಾಗಿ, ಮತ್ತೂ ಸ್ವಾರ್ಥತ್ಯಾಗ ಮಾಡುವೆವೆಂಬ ನಿರ್ದಿಷ್ಟ ಅರಿವಿನೊಂದಿಗೆ ಬೇರೆ ವಿಷಯಗಳಿಗೆ ಮೀಸಲಾದ ಸಮಯವನ್ನು ಬಿಟ್ಟು ಕೊಡಲು ನೀವು ನಿಜವಾಗಿಯೂ ಇಷ್ಟವುಳ್ಳವ ರಾಗಿದ್ದೀರೋ? ಎಲ್ಲವನ್ನೂ ಪ್ರತಿಷ್ಠೆ ಮಾಡದೆ ಹೋದಲ್ಲಿ, ನೀವು ದೇವರಿಗೆ ನೀಡಿದಾಗ ಅದನ್ನು ಅರ್ಧದಷ್ಟು ಮಾತ್ರವೇ ಅರ್ಥೈಸಿಕೊಂಡಿದ್ದರೆ, ಗುಪ್ತವಾದ ನಿಧಿಯಂತಿರುವ ಆತನ ವಾಕ್ಯವನ್ನು ಹುಡುಕುವುದು ಅಗತ್ಯವಾಗಿರುವಾಗ, ಹೀಗಾಗಿ ನಂಬಿಕೆಯ ಎಲ್ಲಾ ಶೋಧನೆಗಳಿಗೆ ಅಗತ್ಯವಾದ ಶಕ್ತಿಯನ್ನು ಪಡೆಯಲು ಪ್ರಸ್ತುತದಲ್ಲಿ (ಸಹಸ್ರಮಾನದ ಉದಯದಲ್ಲಿ) ನೀವು ಸಮಯವನ್ನು ಬೇಜವಾಬ್ದಾರಿ ಕಳೆದಂತಾಗುತ್ತದೆ.

ಆದರೆ ಅಗತ್ಯವಾದ ಸಮಯವನ್ನು ಮತ್ತು ಈ ಅಧ್ಯಯನಕ್ಕೆ ಬೇಕಾದ ಚೈತನ್ಯವನ್ನು ನೀಡುವುದರಿಂದ ಮಾತ್ರವೇ ಮುಗಿಯುವುದೆಂದು ನೆನಸಬೇಡಿರಿ. ಹಾಗಾಗದು. ನಿಮ್ಮ ಸ್ವಾರ್ಥ ತ್ಯಾಗದ ನಿಷ್ಠೆಯನ್ನು ಪೂರ್ಣವಾಗಿ ಪರೀಕ್ಷಿಸಲಾಗುವುದು. ನೀವು ಜಯಹೊಂದುವ ಮತ್ತು ಆ ರಾಜ್ಯದ ಗೌರವಗಳನ್ನು ಪಡೆಯಲಿರುವ ಆ ಚಿಕ್ಕಹಿಂಡಿನ ಸದಸ್ಯರಾಗಲು ಅರ್ಹರೋ ಅಥವಾ ಅನರ್ಹರೋ ಎಂಬುದನ್ನು ಸಾಬೀತುಪಡಿಸಲಾಗುವುದು. ನೀವು ದೇವರ ವಾಕ್ಯಕ್ಕೆ ಶ್ರದ್ಧೆ ತೋರಿಸುವವರಾದರೆ, ಮತ್ತು ಅದರ ಸತ್ಯವನ್ನು ಒಳ್ಳೆಯ, ಪ್ರಾಮಾಣಿಕವಾದ, ಪ್ರತಿಷ್ಠೆಪಡಿಸಿದ ಹೃದಯಕ್ಕೆ ಸ್ವೀಕರಿಸುವವರಾದರೆ, ಅದು ನಿಮ್ಮಲ್ಲಿ ದೇವರ ಮತ್ತು ಆತನ ಯೋಜನೆಯ ಮೇಲೆ ಅಂಥಾಃ ಪ್ರೀತಿಯನ್ನು ಮತ್ತು ಉತ್ತಮ ಸುವಾರ್ತೆಯನ್ನು ಸಾರುವ ಬಯಕೆಯನ್ನು ಹುಟ್ಟಿಸುವುದಲ್ಲದೆ, ನಂತರದ ದಿನಗಳಲ್ಲಿ

ಜೀವದ ಎಲ್ಲಾ ವಸ್ತು ವಿಷಯಗಳನ್ನು ಹೀರಿಕೊಳ್ಳುವಂತೆ ಮಾಡುವುದು. ಇದು ನಿಮ್ಮನ್ನು ಈ ಲೋಕದಿಂದ ಮತ್ತು ಅನೇಕ ಹೆಸರುಮಾತ್ರದ ಕ್ರೈಸ್ತರಿಂದ ಸ್ಫೂರ್ತಿಯಲ್ಲಿ ಪ್ರತ್ಯೇಕಿಸುವುದಲ್ಲದೆ, ಅದು ಅವರುಗಳಿಂದ ಸಂಪೂರ್ಣವಾಗಿ ಪ್ರತ್ಯೇಕಿಸುವಂತೆ ನಡೆಸುತ್ತದೆ. ಅವರು ನಿಮ್ಮನ್ನು ವಿಚಿತ್ರವಾದವರು ಎಂದು ನೆನಸಿ ಅವರು ತಮ್ಮ ಸಹವಾಸದಿಂದ ದೂರಮಾಡುವರು ಮತ್ತು ನಿಮ್ಮನ್ನು ಹೀನೈಸಲಾಗುವುದು ಮತ್ತು ಕ್ರಿಸ್ತನ ನಿಮಿತ್ತ ಮೂರ್ಖರೆಂದು ಪರಿಗಣಿಸಲಾಗುವುದು; ಯಾಕೆಂದರೆ ಅವರು ಕರ್ತನನ್ನೂ ತಿಳಿದಿಲ್ಲ, ಅಂತೆಯೇ ಅವರಿಗೆ ನಮ್ಮ ಬಗ್ಗೆ ತಿಳಿದಿಲ್ಲ (2 ಕೊರಿಂಥ 4:8–10; ಲೂಕ 6:22, 1 ಯೋಹಾನ 3:1 ಮತ್ತು 1 ಕೊರಿಂಥ 3:18).

ನೀವು ಕರ್ತನನ್ನು ಮಾನ ಅಪಮಾನ ಕೀರ್ತಿ ಅಪಕೀರ್ತಿಗಳ ಮೂಲಕವೂ ತಿಳಿಯಲು ಬಯಸುತ್ತೀರಾ? ನೀವು ಆತನನ್ನು ಅನುಸರಿಸುವಂತೆ ಮತ್ತು ಆತನು ನಿಮ್ಮನ್ನು ತನ್ನ ವಾಕ್ಯದ ಮೂಲಕ ಮುನ್ನಡೆಸುವಂತೆ ಎಲ್ಲವನ್ನೂ ತ್ಯಜಿಸಬಯಸುತ್ತೀರಾ? – ಸ್ನೇಹಿತರುಗಳ ಇಷ್ಟಗಳನ್ನು ಕಡೆಗಣಿಸಲು ಹಾಗೆಯೇ ನಿಮ್ಮ ಸ್ವಂತಬಯಕೆಗಳನ್ನು ಸಹಾ ಕಡೆಗಣಿಸಲು ಬಯಸುತ್ತೀರಾ? ಈ ಸಂಪುಟವನ್ನು ಓದುವ ಅನೇಕ ಪ್ರತಿಷ್ಠಿತರು ಅದರಿಂದ ನೂತನ ಹುಮ್ಮಸ್ಸು ಮತ್ತು ಆತ್ಮನ ಉತ್ಸುಕತೆಯೊಂದಿಗೆ ಸ್ಫೂರ್ತಿಗೊಳ್ಳುತ್ತಾರೆ. ದೈವಿಕ ಯೋಜನೆಯ ಇನ್ನೂ ಸ್ಪಷ್ಟವಾದ ಗ್ರಹಣಶಕ್ತಿಯೊಡನೆ ಅವರುಗಳು "ದೇವರ ಕೃಪೆಯಿಂದ, ನಾನು ಕರ್ತನನ್ನು ತಿಳಿದುಕೊಳ್ಳಲು ಮತ್ತು ಆತನ ಸೇವೆಮಾಡಲು ಯಾವುದೇ ತ್ಯಾಗ ಮಾಡಲೂ ಹಿಂಜರಿಯದೆ ಮುಂದುವರೆಯುತ್ತೇವೆ" ಎಂದು ಹೇಳಲು ಶಕ್ತರಾಗುತ್ತಾರೆ. ಶ್ರೇಷ್ಠರಾದ ಬೆರೋಯದವರಂತೆ (ಅ.ಕೃ. 17:11) ಅಂತಹ ಅಧ್ಯಯನಶೀಲರಾಗಿ ತಮ್ಮನ್ನು ತಾವು ಮೇಲ್ಕಂಡ ಪುಟಗಳಲ್ಲಿ ಏನನ್ನು ಪ್ರಸ್ತುತಿಗೊಳಿಸಲಾಗಿದೆ ಎಂಬುದನ್ನು ಸಾಬೀತುಪಡಿಸಲಿ. ಅದನ್ನು ಸಂಘರ್ಷಗಳುಳ್ಳ ಮಾನವರ ಸಂಪ್ರದಾಯಗಳಿಂದ ಮತ್ತು ಮತಾಭಿಪ್ರಾಯಗಳಿಂದಲ್ಲ, ಆದರೆ ಸರಿಯಾದ ಮತ್ತು ದೈವಿಕವಾಗಿ ಅಧಿಕಾರವುಳ್ಳ ನಿರ್ದಿಷ್ಟಮಾನವಾದ ದೇವರ ಸ್ವಂತ ವಾಕ್ಯದ ಮೂಲಕ ಸಾಬೀತುಪಡಿಸಲಿ. ಅಂತಹ ಪರಿಶೀಲನೆಯನ್ನು ಸುಗಮಗೊಳಿಸಲು ನಾವು ಸತ್ಯವೇದದ ಅನೇಕ ವಾಕ್ಯಗಳನ್ನು ಉಲ್ಲೇಖಿಸಿದ್ದೇವೆ.

ಇಲ್ಲಿ ಸೂಚಿಸಲಾದ ದೈವೀಕ ಯೋಜನೆಯನ್ನು ಈ ಹಿಂದೆ ಹೊಂದಿದ್ದ ಮತ್ತು ಶಾಸ್ತ್ರಾಧಾರವೆಂದು ಭಾವಿಸಲಾದ, ಆದರೂ ಸಾಬೀತುಪಡಿಸಲಾಗದ ಅನೇಕ ವಿಚಾರಗಳೊಂದಿಗೆ ಸಮನ್ವಯಗೊಳಿಸಲು ಪ್ರಯತ್ನಿಸುವುದು ನಿಷ್ಪ್ರಯೋಜಕವಾಗಿದೆ. ದೇವರ ಯೋಜನೆಯು ಪೂರ್ಣಗೊಂಡಿದೆ ಮತ್ತು ಅದುವೇ ಪ್ರತಿಯೊಂದು ಭಾಗಗಳಲ್ಲಿಯೂ ತನ್ನೊಂದಿಗೆ ಸಾಮರಸ್ಯಗೊಂಡದ್ದಾಗಿದೆ ಮತ್ತು ಅದು ಪರಿಶುದ್ಧ ಗ್ರಂಥಗಳ ಗುಣಲಕ್ಷಣಗಳೊಂದಿಗೆ ಸಾಮರಸ್ಯವುಳ್ಳದ್ದಾಗಿದ್ದು ಅದರ ಮಹಾ ಗ್ರಂಥಕರ್ತನಿಗೆ ಹೊಣೆ ಹೊರಿಸಲಾಗಿದೆ ಎಂಬುದನ್ನು ನಾವು ಗಮನಿಸಬಹುದು. ಇದು ಜ್ಞಾನದ, ನ್ಯಾಯದ, ಶಕ್ತಿಯ ಮತ್ತು ಪ್ರೀತಿಯ ಅದ್ಭುತವಾದ ಪ್ರದರ್ಶನವಾಗಿದೆ, ಇದು ಮಾನವನ ಆವಿಷ್ಕಾರದ ಶಕ್ತಿಯನ್ನು ಮೀರಿದ, ಮಾನವ ಗ್ರಹಿಕೆಯನ್ನು ಮೀರಿದ ದಿವ್ಯ ವಿನ್ಯಾಸದ ತನ್ನದೇ ಆದ ಪುರಾವೆಗಳನ್ನು ಹೊಂದಿದೆ.

ಇಲ್ಲಿ ಪ್ರಸ್ತುತಪಡಿಸಿದ ಯೋಜನೆಯ ಪ್ರಕಾರ, ಪರಿಹಾರಕ್ಕಾಗಿ ವಿಚಾರಿಸುವ ವಿವಿಧ ಅಂಶಗಳ ಮೇಲೆ ನಿಸ್ಸಂದೇಹವಾಗಿ ಪ್ರಶ್ನೆಗಳು ಉದ್ಭವಿಸುತ್ತವೆ. ಜಾಗರೂಕವಾದ, ಚಿಂತನಾಶೀಲ ಸತ್ಯವೇದ ಅಧ್ಯಯನವು ಇವುಗಳಲ್ಲಿ ಅನೇಕವುಗಳನ್ನು ಏಕಕಾಲದಲ್ಲಿ ಮತ್ತು ಎಲ್ಲರಿಗೂ ನಾವುಗಳು ಭರವಸೆಯಿಂದ ಹೇಳುವುದೇನೆಂದರೆ ಯಾವುದೇ ಪ್ರಶ್ನೆಯನ್ನು ಎತ್ತಿದರೂ ಅದು ಉತ್ತರವಿಲ್ಲದೇ ಹೋಗುವುದಿಲ್ಲವೆಂದು ಮತ್ತು ಅವುಗಳು ಇಲ್ಲಿ ಪ್ರಸ್ತುತಿಪಡಿಸಿರುವ ದೃಷ್ಟಿಕೋನದೊಂದಿಗೆ ಸಾಮರಸ್ಯವುಳ್ಳದ್ದಾಗಿರುತ್ತವೆ ಎಂಬುದನ್ನು ನಾವು ದೃಢವಾಗಿ ಹೇಳಬಹುದು. ಮುಂಬರುವ ಸಂಪುಟಗಳು ಈ ಒಂದು ಯೋಜನೆಯ ವಿವಿಧ ಶಾಖೆಗಳನ್ನು ವಿಸ್ತಾರಗೊಳಿಸುತ್ತದೆ ಮತ್ತು ಪ್ರತಿಯೊಂದು ಹಂತದಲ್ಲಿಯೂ ಸತ್ಯವು ಮಾತ್ರವೇ ಹೆಮ್ಮೆ ಪಡಬಹುದಾದ ಸರಿಸಾಟಿಯಿಲ್ಲದ ಸಾಮರಸ್ಯವನ್ನು ಬಹಿರಂಗಪಡಿಸುತ್ತದೆ. ಬೇರೆ ಯಾವ ವೇದಶಾಸ್ತ್ರದ ಪದ್ಧತಿಯವರೂ ತನ್ನಲ್ಲಿ ಸತ್ಯವೇದದ ಪ್ರತಿಯೊಂದು ಹೇಳಿಕೆಯನ್ನೂ ಸಾಮರಸ್ಯಗೊಳಿಸುವ ಪ್ರಯತ್ನವನ್ನು ಮಾಡಿದ್ದೇವೆಂಬ ಹಕ್ಕೇಳಿಕೆಯನ್ನು ಎಂದೂ ನೀಡಿಲ್ಲ. ಆದಾಗ್ಯೂ ಈ ದೃಷ್ಟಿಕೋನಕ್ಕಿಂತ ಕಡಿಮೆ ಇಲ್ಲದರ ಬಗ್ಗೆ ನಾವು ಹಕ್ಕೇಳಿಕೆ ನೀಡುತ್ತೇವೆ. ಈ ಸಾಮರಸ್ಯವು ಸತ್ಯವೇದದ ಬಗ್ಗೆ ಮಾತ್ರವಲ್ಲ, ಆದರೆ ದೈವಿಕ ಗುಣಲಕ್ಷಣಗಳ ಬಗ್ಗೆಯೂ, ಮತ್ತು ಪವಿತ್ರಗೊಳಿಸಿದ ಸಾಮಾನ್ಯ ಜ್ಞಾನದ ಬಗ್ಗೆಯೂ ಇದ್ದು, ಇದು ಪ್ರಾಮಾಣಿಕ ಓದುಗರ ಗಮನವನ್ನು ಈಗಾಗಲೇ ಸೆರೆಹಿಡಿದಿದೆ ಮತ್ತು ಅವರನ್ನು ವಿಸ್ಮಯ ಮಾತ್ರವಲ್ಲದೆ ನಿರೀಕ್ಷೆ ಮತ್ತು ಆತ್ಮವಿಶ್ವಾಸಗಳಿಂದ ತುಂಬಿಸಿದೆ. ಇದು ನಿಜವಾಗಿಯೂ ಅದ್ಭುತವಾಗಿದೆ. ಆದಾಗ್ಯೂ ನಾವು ಸತ್ಯವನ್ನು ಮತ್ತು

ದೇವರ ಅಪರಿಮಿತ ಜ್ಞಾನ ಮತ್ತು ಪ್ರಯೋಜನಕಾರಿ ಯೋಜನೆಯನ್ನು ನಿರೀಕ್ಷಿಸುವಷ್ಟನ್ನು ಹೊಂದಿದೆ.

ಸತ್ಯವೇದವು ಈ ರೀತಿಯ ದೃಷ್ಟಿಕೋನದಲ್ಲಿ ತೆರೆಯಲ್ಪಟ್ಟು ಅದ್ಭುತ ಸಂಗತಿಗಳನ್ನು ಬಹಿರಂಗ ಪಡಿಸುವಾಗ (ಕೀರ್ತನೆ 119:18) ಪ್ರಸ್ತುತ ದಿನಗಳಲ್ಲಿ ವಿವಿಧ ಮತಾಭಿಪ್ರಾಯದ ಮತ್ತು ಮಾನವ ಸಂಪ್ರದಾಯಗಳ ಮೇಲೆ ಬೀಳುವ ಬೆಳಕು ಅವರಿಗೆ ವಿರುದ್ಧವಾದ ಪರಿಣಾಮವನ್ನುಂಟು ಮಾಡುತ್ತದೆ. ಅವರುಗಳು ಅವರ ಆರಾಧಕರಿಂದಲೂ ಅಸಮರ್ಪ ಕರೂ ವಿಕಾರವುಳ್ಳವರೂ ಎಂಬುದಾಗಿ ಕಂಡುಬರುತ್ತಾರೆ. ಹೀಗಾಗಿ ಅವರನ್ನು ಸಾಕಷ್ಟುಮಟ್ಟಿಗೆ ಕಡೆಗಣಿಸ ಲಾಗುತ್ತಿದೆ. ಒಂದು ವೇಳೆ ಒಪ್ಪಿಕೊಂಡರೂ ಅವರುಗಳು ವಿರಳವಾಗಿ ವಿವರಿಸಲಾಗಿದೆ. ಲಜ್ಜಾಸ್ಪದವಾಗಿದೆ. ಈ ಮಾನವ ಮತಾಭಿಪ್ರಾಯ ಮತ್ತು ಸಂಪ್ರದಾಯಗಳಿಗೆ ಅಂಟಿಕೊಂಡಿರುವ ಈ ಲಜ್ಜೆಯು ಸತ್ಯವೇದಕ್ಕೂ ಹರಡುತ್ತಿದೆ, ಅದು ಈ ಆಲೋಚನಾ ವಿಕಾರತೆಯು ದೈವಿಕ ಮೂಲವುಳ್ಳದ್ದು ಎಂದು ಎತ್ತಿಹಿಡಿಯ ಬಹುದೆಂದು ಊಹಿಸಲಾಗಿದೆ. ಆದುದರಿಂದ ಅನೇಕ ಮುಂದುವರೆದ ಆಲೋಚನಾಕಾರರೆಂದು ಕರೆಯಲ್ಪಡುವವರು ಸ್ವತಂತ್ರವಾಗಿ ತಮ್ಮ ದೃಷ್ಟಿಕೋನಕ್ಕೆ ಅನುಗುಣವಲ್ಲದ ಸತ್ಯವೇದದ ವಿವಿಧ ಭಾಗಗಳನ್ನು ನಿರಾಕರಿಸಲು ಪ್ರಾರಂಭಿಸಿದ್ದಾರೆ. ಹೀಗೆ ದೇವಾನುಗ್ರಹವು ಎಷ್ಟೋ ಎದ್ದುಕಾಣುವಂತದ್ದಾಗಿದೆ ಮತ್ತು ಅದು ಈ ಸಮಯದಲ್ಲಿ ಆತನ ಮಕ್ಕಳ ಮುಂದಿದ್ದು ಅದು ನಿಜವಾಗಿಯೂ ಭವ್ಯವಾದ ಯೋಜನೆಯನ್ನು ಹೊರಹೊಮ್ಮಿಸುತ್ತದೆ. ಈ ಯೋಜನೆಯು ಒಂದನ್ನೂ ನಿರಾಕರಿಸುವುದಿಲ್ಲ, ಆದರೆ ಅದು ಆತನ ವಾಕ್ಯದ ಪ್ರತಿಯೊಂದು ಭಾಗವನ್ನೂ, ಸಂಗತಿಗಳನ್ನೂ ಸಮನ್ವಯಗೊಳಿಸುತ್ತದೆ. ಸತ್ಯವು ಯುಕ್ತವಾದಾಗ ನಂಬಿಗಸ್ತ ಮನೆಯವರಿಗೆ ಅವರು ಅದರಲ್ಲಿ ಬೆಳೆಯುವಂತೆ ಆಹಾರವಾಗುತ್ತದೆ (ಮತ್ತಾಯ 24:45). ಯಾರು ಸತ್ಯದೊಂದಿಗೆ ಸಂಪರ್ಕಕ್ಕೆ ಬರುತ್ತಾರೋ ಅವರು ತಮ್ಮ ಪಾತ್ರವನ್ನು ಅರಿತುಕೊಳ್ಳುವ ಮೂಲಕ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಅದು ಒಂದೋ ಸ್ವೀಕರಿಸಿ ಅದನ್ನು ಕಾರ್ಯಗತಗೊಳಿಸಬೇಕು ಅಥವಾ ತಿರಸ್ಕರಿಸಿ ಅದನ್ನು ಹೀನೈಸಬೇಕು. ಅದನ್ನು ಕಡೆಗಣಿಸುವುದರಿಂದ ಜವಾಬ್ದಾರಿಯಿಂದ ಬಿಡುಗಡೆ ಗೊಳ್ಳುವುದಿಲ್ಲ. ನಾವೇ ಅದನ್ನು ಅಂಗೀಕರಿಸುವ ವರಾದರೆ, ಅದರ ಬಗ್ಗೆ ನಮಗೆ ಜವಾಬ್ದಾರಿಯೂ ಇರುತ್ತದೆ. ಯಾಕೆಂದರೆ ಅದು ನಂಬಿಗಸ್ತ ಮನೆಯವರಿಗೆಲ್ಲರಿಗೂ ಇರುವುದಾಗಿದೆ. ಅದನ್ನು ಸ್ವೀಕರಿಸುವವರೆಲ್ಲರೂ ಅದಕ್ಕೆ ಋಣಿಯಾಗಿರುತ್ತಾರೆ ಮತ್ತು ಅವರು ನಂಬಿಗಸ್ತ ಮನೆವಾರ್ತೆಯವರಾದರೆ. ಅದನ್ನು ಅವರು ದೇವರ ಕುಟುಂಬದ ಇತರರಿಗೂ ಹಂಚಬೇಕಾಗುತ್ತದೆ. ನಿಮ್ಮ ಬೆಳಕು ಪ್ರಕಾಶಿಸಲಿ! ಅದು ಪುನಃ ಕತ್ತಲಾಗುವುದಾದರೆ, ಆ ಕತ್ತಲು ಎಷ್ಟೆನ್ನಬೇಕು. ಬೆಳಕನ್ನು ಎತ್ತಿ ಹಿಡಿಯಿರಿ! ಜನಾಂಗಗಳಿಗೆ ಧ್ವಜವೆನ್ನೆತ್ತಿರಿ!

* * * * * * *

## The Divine Weaving

"See the mystic Weaver sitting
High in heaven - His loom below.
Up and down the treadles go.
Takes, for web, the world's dark ages,
Takes, for woof, the kings and sages.
Takes the nobles and their pages,
Takes all stations and all stages.
Thrones are bobbins in His shuttle.
Armies make them scud and scuttle -
Web into the woof must flow;
up and down the nations go!
A the Weaver's will they go!

"Calmly see the mystic Weaver
Throw His shuttle to and fro;
'Mid the noise and wild confusion,
Well the Weaver seems to know
What each motion, and commotion,
What each fusion , and confusion,
In the grand result will show!

"Glorious wonder! What a weaving!
To the dull, beyond believing.
Such no fables ages know.
Only faith can see the mystery,
How, along the aisles of history,
Where the feet of sages go,
Loveliest to the fairest eyes,
Grand the mystic tapet lies!
Soft and smooth, and ever spreading,
as if made for angles' treading-
Tufted circles touching ever:
Every figure has its plaidings,
Brighter forms and softer shadings,
Each illumined - what a riddle!
From a cross that gems the middle.

" 'Tis a saying - some reject it -
That its light is all reflected;
That the tapet's lines are given
By a Sun that shines in heaven!
'Tis believed - by all believing-
That great God, Himself, is weaving,
Bringing out the world's dark mystery,
In the light of faith and history;
And, as web and woof diminish,
Comes the grand and glorious finish,
When begin the Golden Ages,
Long foretold by seers and sages."

## ದೈವೀಕ ನೇಯ್ಗೆ

ನಿಗೂಢವಾದ ನೇಕಾರನು ಕುಳಿತಿರುವುದನ್ನು ನೋಡಿರಿ
ಮೇಲೆ ಪರಲೋಕದಲ್ಲಿ ಕುಳಿತಿಹನು – ಆತನ ಮಗ್ಗ (Loom)
ಕೆಳಗಿದೆ;
ಮಗ್ಗವನ್ನು ಮೀಟುವ ಯಂತ್ರವು ಮೇಲೆ–ಕೆಳಗೆ ಚಲಿಸುತ್ತದೆ.
ನೇಯ್ಗೆಯನ್ನು ಹೆಣೆಯಲು ವಿಶಿಷ್ಟ ಕರಾಳಯುಗಗಳನ್ನು
ತೆಗೆದುಕೊಂಡನು
ಜಾಳಿಗೆ ಕಟ್ಟಲು, ರಾಜರನ್ನು, ಸಂತರನ್ನು,
ಕುಲೀನರನ್ನು ಮತ್ತು ಅವರ ಪ್ರಜೆಗಳನ್ನು ತೆಗೆದುಕೊಂಡನು
ಎಲ್ಲಾ ದೇಶಗಳನ್ನೂ ಎಲ್ಲಾ ಹಂತಗಳನ್ನು ತೆಗೆದುಕೊಂಡನು
ಸಿಂಹಾಸನಗಳು ಆತನ ಲೇಸಿನ ಕಂಬಿಗಳು (bobbins) ಆತನ
ಲಾಳದಲ್ಲಿ ವ್ಯೂಹಗಳು ಅವುಗಳನ್ನು ಚಲಿಸುವಂತೆ ಓಡುವಂತೆ
ಮಾಡುತ್ತದೆ (shuttle)
ನೇಯ್ಗೆಯು ಬಲೆಯಿಂದ ಕುಚ್ಚಿಗೆ ಹರಿಯಲೇ ಬೇಕು;
ರಾಷ್ಟ್ರಗಳು ಮೇಲೇರುವವು, ಕೆಳಗಿಳಿಯುವವು
ನೇಕಾರನ ಚಿತ್ತದಂತೆ ಅವು ಸಾಗಬೇಕು!

ತಾಳ್ಮೆಯಿಂದ ನಿಗೂಢವಾದ ನೇಕಾರನನ್ನು ನೋಡಿರಿ, ಆತನು
ಲಾಳಿಯನ್ನು (shuttle)
ಹಿಂದಕ್ಕೂ ಮುಂದಕ್ಕೂ ಎಸೆಯುವನು, ಗದ್ದಲ ಮತ್ತು ಒರಟು
ಗೊಂದಲದ
ನಡುವೆ, ನೇಕಾರನಿಗೆ ಗೊತ್ತಿರಲೇಬೇಕು. ಪ್ರತಿ ಚಲನೆ, ಗೊಂದಲವು
ಪ್ರತಿ ಒಕ್ಕೂಟ ಮತ್ತು ಗೊಂದಲ ಭವ್ಯವಾದ ಫಲಿತಾಂಶಗಳನ್ನು
ತೋರುವದು.

ಮಹೋನ್ನತ ಅದ್ಭುತ! ಎಂತಹ ನೇಯ್ಗೆ!
ಬುದ್ಧಿಹೀನರಿಗೆ ನಂಬಲಸಾಧ್ಯ, ಅಂತಹ ಕತೆಗಳು
ಯುಗಗಳಿಂದಲೂ ತಿಳಿದಿಲ್ಲ.
ನಂಬಿಕೆ ಮಾತ್ರವೇ ಈ ರಹಸ್ಯವನ್ನು ನೋಡಬಲ್ಲದು,
ಚರಿತ್ರೆಯ ಪಡಸಾಲೆಗಳಿಂದ
ಸಂತರ ಪಾದಗಳು ಎಲ್ಲಿಗೆ ನಡೆಸುವದೆಂದು
ಅರಿತುಕೊಳ್ಳುವ ಕಣ್ಣುಗಳಿಗೆ ಸುಂದರವಾಗಿದೆ,
ಗೂಢವಾದ ಮಗ್ಗವು ಭವ್ಯವಾಗಿ ಚಲಿಸುತ್ತಿದೆ.

ಕೋಮಲವಾಗಿ ಮೃದುವಾಗಿ, ಎಂದಿಗೂ ಹರಡುತ್ತಾ
ದೇವದೂತರು ನಡೆದಾಡಲಿ ಎಂಬಂತೆ –
ಗೊಂಚಲಾದ ಕುಚ್ಚುಗಳು ಒಂದಕ್ಕೊಂದು ತಾಗುತ್ತಾ –
ಪ್ರತಿ ಆಕಾರವು ತನ್ನ ಚೌಕುಳಿಯಲ್ಲಿದೆ (plaidings)
ಪ್ರಜ್ವಲಿಸುವ ಆಕಾರ ಕೋಮಲ ಬಣ್ಣಗಳಿಂದ
ಪ್ರತಿಯೊಂದೂ ಬೆಳಗುತ್ತಾ – ಎಂತಹ ಒಗಟು !
ಶಿಲುಬೆಯ ರತ್ನಗಳ ನಡುವೆ.

ಇದೊಂದು ನಾಣ್ನುಡಿ – ಕೆಲವರು ಅದನ್ನು ನಿರಾಕರಿಸುತ್ತಾರೆ.
ಅದು ಬೆಳಕನ್ನು ಮತ್ತೆ ಪ್ರತಿಬಿಂಬಿಸುತ್ತದೆ
ಮಗ್ಗದ ಸಾಲುಗಳನ್ನು ಆಕಾಶದಲ್ಲಿ ಬೆಳಗುವ ಸೂರ್ಯನು ಇತ್ತನು!
ನಂಬಿರುತ್ತಾರೆ – ಎಲ್ಲವನ್ನೂ ನಂಬುವವರು.

ಆ ಮಹೋನ್ನತನಾದ ದೇವರೇ, ಆತನೇ, ನೇಕಾರನು
ಲೋಕದ ಕತ್ತಲಿನ ರಹಸ್ಯವನ್ನು ಹೊರತರುವನು
ನಂಬಿಕೆಯ ಚರಿತ್ರೆಯ ಬೆಳಕಿನಲ್ಲಿ
ಬಲೆಯು, ಕುಚ್ಚು ಮರೆಯಾದಾಗ,
ಮಹೋನ್ನತನಾದ ಭವ್ಯವಾದ ಮೆರಗು ಬರುವದು,
ಸುವರ್ಣಯುಗ ಪ್ರಾರಂಭಿಸುವದು,
ಬಹಳ ಹಿಂದೆಯೇ ಪ್ರವಾದಿಗಳು ಭಕ್ತರೂ ಮುಂತಿಳಿಸಿದ್ದಾರೆ.

* * * * * * *

# ವೇದೋಕ್ತಿಗಳಲ್ಲಿ ಪಾಠಗಳು – ಮೊದಲನೆಯ ಭಾಗ
## ಆಧಾರ ಸತ್ಯವೇದ ವಚನಗಳ ಅನುಕ್ರಮಣಿಕೆ

**ಆದಿಕಾಂಡ**
1:26, 31
1:27
2:4
2:9, 16, 17
2:17
3:15
3:22
5
5:1
7:13
12:3
13:14–17
18:1,2
18:1, 2
18:18
19:24
19.36–38
22:18
26:4
38
49:10
29:28

**ವಿಮೋಚನಾಕಾಂಡ**
5:4–23
12:30–33
12:49
18:13–26
19:17–25
21:26, 27
22:21–24
22:25
23:4,5
23:9
23:12
24:12
26:30

**ಯಾಜಕಕಾಂಡ**
1:1
19:13
19:14
19:17
19:32
19:33, 34
24:22
25:9, 13–23, 27–30
25:36, 37
26:14–16

**ಅರಣ್ಯಕಾಂಡ**
11:16, 17, 24–30
26:52–56

**ಧರ್ಮೋಪದೇಶಕಾಂಡ**
1:15
1:16,17
1:17
5:1–5
9:9–11
12:19
14:27
18:15
18:15,19
22:10
24:14, 15
25:4
26:5
28:1–14
28:15 , 32
31:9–27
31:10–13

**ಯೆಹೋಶುವನು**
23:6–11, 12–16

**ನ್ಯಾಯಾಸ್ಥಾಪಕರು**
3:9–11
6:11–22
13:20

**1. ಸಮುವೇಲನು**
8:6–22
10:19
15:3

**1. ಅರಸುಗಳು**
18:4, 10,17,18
18:40
19:10

**1. ಪೂರ್ವಕಾಲ ವೃತ್ತಾಂತ**
16:16, 17
16:31–34
29:23

**2. ಪೂರ್ವಕಾಲ ವೃತ್ತಾಂತ**
13:8

**ನೆಹೆಮಿಯನು**
2:17
6:7

**ಯೋಬನು**
14:10, 21
38:7

**ಕೀರ್ತನೆಗಳು**
1:1
2:1–6, 10–12
2:8
2:8–12
5:4
8:4–8
8:5
8:5, 6
10:6
11:5–7
16:10
17:15
24:3, 4
25:14
27:5
30:5
34:7
34:13, 14
34:19
34:20
37:9
37:35
39:11
41:1
45:7
45:16
46:1–5
46:6
46;6–10
46:8–10
48:2
49:7, 15
49:14
50:3
72:7
72:8
76:10
77:18
78:70,71
88:3
89:32
91
94:13
97:2–6
97:11
107:26
107:39
110:1
110:2–6
110:5
112:6
119:18
119:105
141:5
149:8, 9

**ಜ್ಞಾನೋಕ್ತಿಗಳು**
4:18
15:3

**ಪ್ರಸಂಗಿ**
1:4
7:14
7:29
9:10
11:3
12:14

**ಯೆಶಾಯನು**
1:18

2:19
1:26
2:3
8:20
11:9
13:1–11
14:14
14:24–27
19:22
22:12
26:9
28:21
32:1
33:2–14, 15–24
35:1–6
35:8
35:8,9
35:9
35;10
40:5
42:1–7
42:7
45:7
45:11, 12,18
45:17
46:9–11
49:6
52:7
52:9
53:4
53:3–6
53:8,9,11
53:11
53:12
55:8,9
55:11
60:2,3
61:1
61:2
62:10
63:1–4
65:18
65:20
66:10–12

**ಯೆರೆಮಿಯನು**

3:17
3:22, 23
16:19
24:5–7
30:28
31:28
31–29, 30
31:29–34
31:34
32:40–42
33:6–16
38:6
48:16
51:2

**ಪ್ರಲಾಪಗಳು**

1:21

**ಯೆಹೆಜ್ಕೇಲನು**

7:10–19
11:19
16:48–54, 55
16:48–63
18:4
21:25–27
36:25, 36
36:26
37:11–14

**ದಾನಿಯೇಲನು**

2:31–45
2:35
2:37–43
2:44
2:43, 44,45
4:32
7:2–7
7:7,8
7:9, 13, 14, 22, 27
7:11
7:13–27
7:14, 17, 27
7:27
9:24–27
9:26
10:6, 10, 15,17
10:13
12:1
12:1, 4,10
12;3
12:4, 1

**ಹೋಶೇಯನು**

6:1
14:4

**ಯೋವೇಲನು**

2:9–16

**ಆಮೋಸನು**

3:2
3:6

**ಮೀಕನು**

5:2

**ಹಬಕ್ಕೂಕನು**

2:1–3,13,14
3:2–11

**ಚೆಫನ್ಯನು**

1:7–9, 14–18
2:2,3
2:2,3
3:8,9

**ಹಗ್ಗಾಯನು**

2:7

**ಜೆಕರ್ಯನು**

1:15
9:11
11:12
14:1,6,7
14:9

**ಮಲಾಕೀಯನು**

1:11
3:1–3
3:15
3:15,18
4:1
4:2

**ಮತ್ತಯನು**

1:2–16
1:21
3:2
3:16,17
4:9
4:17
5:35
7:13,14
7:15
8:16,17
8:22
10:5,6
10:7
10:26
11:23,24
12:40
13:43
13:38,39,41,29
13:41–43
13:52
14:5
15:29
15:24
16:27
19:30
22:21
22:37–39
22:37–40
23:38
24:14
24:21,22
24:39,39
24:45
24:45,46
25:31
25:31–46
23:34
25:46
26:64
28:18
28:20

**ಮಾರ್ಕನು**

3:22–27
5:30
10:23

12:30,31

**ಲೂಕನು**

2:1
2:10
2:10,11
2:32
3:14
3:15
3:17, 21,22
3:22
3:23, 31,33,34
3:38
4:1,18
4:19
4:43
6:19
6:22
8:1
8:10
9:2
10:27
12:32
12:42
12:47,48
14:11
14:23
16:16
17:20–30
17:26
17:29
19:10
19:11
19:11–15
19:12
19:44
21:24
21:26
21:34, 35
22:29,30
24:21
24:21, 25–27

**ಯೋಹಾನನು**

1:9
1:14
1:18
1:29
3
3:5,6
3:8
3:13
3:16
3:17
3:36
5:22
5:26
5:44
12:31
14:3
14:26
14:30
15:5
16:8–11
16:12,13
16:13
16:33
17:5
17:16
17:22
19:36
20:19,26

**ಅಪೋಸ್ತಲರ ಕೃತ್ಯಗಳು**

1:6
1:6,7
2;31
3:19
3:19–21
3:20,21
3:21
3:22
3:23
4:12
4:19
5:29
5:31
7:5
9:7
10:28
10:37,38
10:38
10:45
11:1–3
11:1–18
11:9
15:14
15:6
15:14–16
17:11
17:31
24:25
26:9

**ರೋಮಾಪುರದವರಿಗೆ**

1:28
2:6,10,11
2:14
3:10
3:10,19,20
5:1,8
5:10,12,17–19,21
5:12
5:14
5:17
5:17–19
5:18,19
6:8
6:10,11
6:23
8:9
8:11
8:13,14
8:17
8:18
8:19
8:19–22
8:21
8:21,22
8:22,19
8:23–25
8:24
8:28–31
8:30
8:31–34
8:33,34
9:16
9:20,21
9:20
10:13,14
11:2
11:17
11:22
11:23,24
11:25,26
11:25–33
11:26–29
11:28–33
12:1
12:2
13:1
13:1–7
13:10
14:9
14;14,17
15:4
16:20

**1 ಕೊರಿಂಥದವರಿಗೆ**

2:6–14
2:7
2:8
2:13
2:14
3:11
3:12–15
3:18
4:5
4:8
4:8–10
4:10–17
5:5
6:2
6:3
12:12–28
14:1–6
15:13–22
15:21
15:22
15:24
15:25

15:25,26
15:25–28
15:27
15:28
15:38,44
15:38–49
15:44,52
15:49
15:53,54

**2 ಕೊರಿಂಥದವರಿಗೆ**

1:21
3:6
4:17
5:14
5:17
6:1
6:2
8:12
11:3
11:14
12:2–4
12:4
12:7
12:9

**ಗಲಾತ್ಯದವರಿಗೆ**

1:4
2:2
2:2,12,14
2:11–14
3:15–18
3:16
3:27,29
3:28
3:29
4

**ಎಫೆಸದವರಿಗೆ**

1:4,5
1:9,10,17,18
1:10
1:11
1:13,14
1:14
1:20,21
1:22
2:2
2:7
2:7–12
2:8
2:19
3:4–6
3:9
4:11–16
5:25–30
6:12

**ಫಿಲಿಪ್ಪಿಯವರಿಗೆ**

2:7,8
2:8,9
2:10
3:8–15
3:21
4:11

**ಕೊಲೆಸ್ಸೆಯವರಿಗೆ**

1:18
1:20
1:26
1:27
3;4

**1 ಥೆಸಲೊನೀಕ**

2:16
5:2,3

**2 ಥೆಸಲೊನೀಕ**

2:13
2:14

**1 ತಿಮೊಥೆಯನಿಗೆ**

2:3–6
2:4
2:4–6
2:5,6
2:6
2:11,12
2:14
4:10
5:24
6:6–12
6:14–12
6:–16
6:15
6:16

**2 ತಿಮೊಥೆಯನಿಗೆ**

1:10
2:11,12
2:12
2:13
3:1–4
3:1,13
3:12
3:15
3:15–17
4:8

**ತೀತನಿಗೆ**

1:12

**ಇಬ್ರಿಯರಿಗೆ**

1:3
1:3–5
1:4
1:9
1:14
2:5
2:7
2:7–9
2:9
2:14
2:16
3:1
3:5,6
3:8,9
4:1
5:14
6:4–8
6:6
6:18
7:19
9:11
9:11–20
10:1
10:4
10:8–18
10:16,29
10:20
10:26–31
10:31
10:38,39
11:13,39,40
11:19
11:32–38
11:39,40
11:40
12:1
12:26–29
13:5

**ಯಾಕೋಬನು**

1:18
2:5
2:10
2:23
4:4
5:1–4
5

**1 ಪೇತ್ರನು**

1:2
1:3
1:10
1:10–13
1:11
1:12
1:12,13
1:19
2:2
2:4–6
2:9
2:21
3:15
3:18
3;20
5:4
5:5,6
5:10

**2 ಪೇತ್ರನು**

1:2–4
1:4
1:5–11
1:10,11

1:19
2:1
2:9
2:16
3:6
3:6,7
3:10–13
3:10–13
3:13

**1 ಯೋಹಾನನು**

1:9
2:1
2:2
2:15
2:27
2:29
3:1
3:2
3:9
4:7
4:8
5:1,18
5:18

**ಯೂದನು**

11
23

**ಪ್ರಕಟಣೆ**

1:3
1:7
2:10
2:2,27
3:17,18
3:21
4:11
5:12
7:9–17
7:14,15
10:7
11:15
11:17,18
11:18
12:9
14:1
14:14
16:17–20
17:2
17:3–5
17:14
18:7
5:18
18:21
19:6,7,9
19:7
19:11–19
19:15,19
19:17
20:1–3
20:2
20:3
20:4
20:5
20:6
20:9
20:11–13
20:15
21:1
21:3–5
21:4
21:8
21:24–26
22:12,20
22:17

# Studies in the Scripture



*The Most Comprehensive Bible Study Available!*

**THE DIVINE PLAN OF THE AGES -** Gives an outline of the Divine Plan revealed in the Bible, relating to man's redemption and restitution. Contains 358 pages. Cloth bound pocket edition.

**THE TIME IS AT HAND -** Deals with Bible chronology and time prophecies, identifies the Antichrist, and. points out the time and manner of our Lord's return. Contains 371 pages. Cloth bound pocket edition.

**THY KINGDOM COME -** Discusses time prophecies relating to the work of the church at this end of the age, the restoration of Israel, and the setting up of Christ's kingdom. One chapter pertains to the Great Pyramid of Egypt. Contains 384 pages. Cloth bound edition.

**THE BATTLE OF ARMAGEDDON -** Shows the dissolution of the present order. It discusses many prophecies relating to the end of the age, noting especially our Lord's great prophecy of Matt. 24. Contains 660 pages. Cloth bound pocket edition.

**THE ATONEMENT BETWEEN GOD AND MAN -** Contains 498 pages devoted to the fact and philosophy of Christ's atoning work; the nature of man, the divine punishment for sin, the truth about hell, and the operation of the Holy Spirit. Cloth bound pocket edition.

**THE NEW CREATION -** The first chapter deals with the Genesis account of creation. The remainder of the book discusses the laws, duties, privileges, and hopes of the consecrated followers of Jesus. Contains 738 pages. Cloth bound pocket edition.

Write publishers for further information.

**For Translated Kannada Publications :**

**BIBLE STUDENTS**